Estd. 1906

ಸ್ವದೇಶಾಭಿಮಾನಿ

SWADESHABHIMANI

ಜರ್ಮನಿಯಲ್ಲಿರುವ ಬ್ರಿಟಿಷ್ ಯುದ್ಧಕೈದಿಗಳಿಗೆ ಇವರು
ಕ್ರಿಸ್‌ಮಸ್ ಪಾರ್ಸೆಲುಗಳನ್ನು ಕಳುಹಿಸಿದರು

KANNADA ILLUSTRATED WEEKLY

ರಾಷ್ಟ್ರಭಾಷೆಯಾದ ಹಿಂದಿ

ಮಹಾತ್ಮರ ಮತ್ತು ಠಾಗೂರರ ಸಂದೇಶಗಳು

—ಹಿಂದೀ ಸಮ್ಮೇಳನ—

ಸಿಂಧ ಪ್ರಾಂತೀಯ ರಾಷ್ಟ್ರಭಾಷಾ ಸಮ್ಮೇಳನಕ್ಕೆ ತಮ್ಮ ಸಂದೇಶವನ್ನು ಕೊಡುತ್ತಾ ಮಹಾತ್ಮಾ ಗಾಂಧಿಯವರು ಹೀಗೆ ಬರೆದಿದ್ದಾರೆ—'ನಿಮ್ಮ ಸಮ್ಮೇಳನಕ್ಕೆ ನಾನು ಕಾಕಾ ಕಾಲೇಲಕರರನ್ನೇ ಅಧ್ಯಕ್ಷರನ್ನಾಗಿ ಕಳುಹಿಸಿದ್ದೇನೆ. ಇದಕ್ಕೂ ಹೆಚ್ಚಿನದಾದ ಯಾವ ಸಂದೇಶವನ್ನು ನಾನು ನಿಮಗೆ ಕೊಡಬಹುದು. ನೀವು ಕೈಕೊಂಡ ಕಾರ್ಯವು ಸಂಪೂರ್ಣ ಸಫಲವಾಗುವದೆಂಬುದರಲ್ಲಿ ನನಗೆ ದೃಢ ವಿಶ್ವಾಸವು ಇರುತ್ತದೆ.'

ಠಾಗೋರರ ಸಂದೇಶ

'ಮಾತೃ ಭಾಷೆಯ ಸ್ಥಾನದಲ್ಲಿ ಅಲ್ಲ, ಪರಂತು ಅದರ ಜೊತೆಗೆ ಒಂದು ರಾಷ್ಟ್ರಭಾಷೆಯೂ ನಮಗೆ ಅಗತ್ಯವಾಗಿದೆ. ಹಿಂದುಸ್ಥಾನದ ಬೇರೆ ಬೇರೆ ಭಾಷೆಗಳನ್ನಾಡುವ ವಿವಿಧ ಜನರೊಳಗೆ ವ್ಯವಹಾರ ಸಂಬಂಧದ ಮೂಲಕ ಸ್ನೇಹ ಪ್ರೇಮಗಳನ್ನು ಬೆಳೆಸಲಿಕ್ಕೂ, ಅಂತರ್‌ಪ್ರಾಂತೀಯ ವ್ಯವಹಾರಗಳಲ್ಲಿ ಈಗ ಇರುವ ಭಾಷಾ ಸಂಬಂಧವಾದ ಗುಲಾಮಗಿರಿಯನ್ನು ಒಡೆದು ದೂರ ಮಾಡಲಿಕ್ಕೂ ನಮಗೆ ಒಂದು ರಾಷ್ಟ್ರಭಾಷೆಯು ಬೇಕಾಗಿದೆ. ರಾಷ್ಟ್ರವಾದಿ, ಅಥವಾ ಸ್ವತಂತ್ರ ಹಿಂದುಸ್ಥಾನಕ್ಕೆ ರಾಷ್ಟ್ರಭಾಷೆಯು ಇಲ್ಲದೆ ನಿರ್ವಾಹವಿಲ್ಲ. ಆದುದರಿಂದ ರಾಷ್ಟ್ರಭಾಷಾ ಪ್ರಚಾರ ಕಾರ್ಯದಲ್ಲಿ ತೊಡಗಿರುವವರನ್ನು ಭಾರತೀಯ ಸಂತತಿ ಪರಂಪರೆಯು ಸದಾಕಾಲ ಸ್ಮರಿಸುವದು.' ಎಂದು ಕವಿವರ ರವೀಂದ್ರನಾಥ ಠಾಗೋರರವರು ಈ ಸಮ್ಮೇಳನಕ್ಕೆ ತಮ್ಮ ದಿವ್ಯ ಸಂದೇಶವನ್ನು ಕೊಟ್ಟಿದ್ದಾರೆ.

ಅಧ್ಯಕ್ಷ ಭಾಷಣ

ಈ ಸಮ್ಮೇಳನದಲ್ಲಿ ಭಾಷಣವನ್ನು ಕೊಡುತ್ತಾ ಕಾಕಾ ಕಾಲೇಲಕರರವರು ದೇಶದಲ್ಲೆಲ್ಲ ರಾಷ್ಟ್ರಭಾಷೆಯಾದ ಹಿಂದಿ ಹಿಂದುಸ್ಥಾನಿಯು ಪ್ರಚಾರವಾಗಬೇಕಾದ ಆವಶ್ಯಕತೆಯನ್ನು ಬಹು ಚೆನ್ನಾಗಿ ಮನಗಾಣಿಸಿದ್ದಾರೆ. ರಾಷ್ಟ್ರಭಾಷಾ ಆಂದೋಲನದ ಸಫಲತೆಯಿಂದ ಹಿಂದು ಮುಸಲ್ಮಾನ ಐಕ್ಯವು ಸ್ಥಾಪಿತವಾಗುವದೆಂದು ಅವರು ಅಂದಿರುವರು. ರಾಷ್ಟ್ರೀಯ ಜಾಗೃತಿಗೆ ರಾಷ್ಟ್ರಭಾಷಾ ಆಂದೋಲನವೂ ಮುಖ್ಯ ಕಾರಣವಾಗಿದೆ.

ವಿದ್ಯಾರ್ಥಿಗಳ ಕರ್ತವ್ಯ

ಆದುದರಿಂದ ರಾಷ್ಟ್ರಭಾಷೆಯಾದ ಹಿಂದಿ-ಹಿಂದುಸ್ಥಾನಿಯ ವ್ಯವಹಾರಿಕ ಜ್ಞಾನವನ್ನು ಸಂಪಾದಿಸುವದು ಪ್ರತಿಯೊಬ್ಬ ದೇಶಹಿತೈಷಿಯ ಕರ್ತವ್ಯವಾಗಿದೆ. ವಿದ್ಯಾರ್ಥಿಗಳಂತೂ ಈ ಕರ್ತವ್ಯದಿಂದ ಎಂದೂ ಚ್ಯುತರಾಗಬಾರದು. ಯಾಕಂದರೆ ಭಾರತದ ಭವಿಷ್ಯವು ಮುಂದೆ ಅವರಿಂದಲೇ ಉಜ್ವಲವಾಗಬೇಕು. ನವಭಾರತದ ನಿರ್ಮಾತರು ಅವರೇ ಆಗಿರುವರು.

ಗಾಂಧಿಜಿಯವರ ಸೂಚನೆ

ಸತ್ಯಾಗ್ರಹಿಗಳು ಸಂತೋಷದಿಂದ ಕೈಕೋಳಗಳನ್ನು ಧರಿಸಬೇಕು

ತಾರೀಕು ೧೪ರಲ್ಲಿ ವಾರ್ಧಾದಿಂದ ಎ. ಐ. ಸಿ. ಸಿ. ಜನರಲ್ ಸೆಕ್ರೆಟರಿಯವರು ಎಲ್ಲಾ ಪ್ರಾಂತೀಯ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಸರ್ಕ್ಯುಲಾರುಗಳನ್ನು ಕಳುಹಿಸಿದ್ದಾರೆ. ಅದರಲ್ಲಿ ಸತ್ಯಾಗ್ರಹಿಗಳಿಗೆ ಹಲವು ಸೂಚನೆಗಳನ್ನು ಕೊಡಲಾಗಿದೆ. ಆ ಪೈಕಿ, ಸತ್ಯಾಗ್ರಹಿಗಳನ್ನು ಬಂದು ಜೈಲಿನಿಂದ ಇನ್ನೊಂದು ಜೈಲಿಗೆ ಕೊಂಡುಹೋಗುವಾಗ ಸರಕಾರದವರು ಕೈಕೋಳಗಳನ್ನು ತೊಡಿಸಿದರೆ ಸತ್ಯಾಗ್ರಹಿಗಳು ಅವುಗಳನ್ನು ಸಂತೋಷದಿಂದ ಧರಿಸಬೇಕೆಂಬ ಸೂಚನೆಯು ಒಂದಾಗಿದೆ.

ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಸಾಧಿಸಬೇಕು

ಜೈಲಿಗೆ ಹೋಗುವುದೇ ಮುಖ್ಯವಲ್ಲ

ಸತ್ಯಾಗ್ರಹದ ಬಗ್ಗೆ ಗಾಂಧಿಯವರ ಹಿತವಚನ

ಕಲ್ಕತ್ತಾ,

'ಜೈಲಿಗೆ ಹೋಗುವುದರಲ್ಲಿ ದೊಡ್ಡ ಗುಣವೂ ಕೀರ್ತಿಯೂ ಇಲ್ಲ. ಸ್ವಾತಂತ್ರ್ಯ ಚಳವಳದಲ್ಲಿ ಅದೂ ಒಂದು ಕಾರ್ಯ. ಜೈಲಿಗೆ ಹೋಗದೆ ಸ್ವಾತಂತ್ರ್ಯ ಲಭಿಸುವುದಾದರೆ ಅದು ಎಲ್ಲರಿಗೂ ಹಿತಕರ' ಎಂಬುದಾಗಿ ಮಹಾತ್ಮಾ ಗಾಂಧಿಯವರು ಪ್ರಾಂತ ಕಾಂಗ್ರೆಸ್ ಕಮಿಟೀ ಸೆಕ್ರೆಟರಿಯವರಿಗೂ ಇತರ ಕೆಲಸಗಾರರಿಗೂ ಒಂದು ಪತ್ರವನ್ನು ಬರೆದು ತಿಳಿಸಿದ್ದಾರೆ.

ಗಾಂಧಿಜಿಯವರು ತಮ್ಮ ಪತ್ರದಲ್ಲಿ ಕಾಂಗ್ರೆಸ್ ಕೆಲಸಗಾರರಿಗೂ, ಸತ್ಯಾಗ್ರಹಿಗಳಿಗೂ ತಿಳಿಸುವುದೇನೆಂದರೆ:— 'ಜೈಲಿಗೆ ಹೋಗುವುದಕ್ಕಿಂತಲೂ, ದೇಶದ ಹಿತಸಾಧನೆಗೆ ಅವಶ್ಯಕವಾದ ರಚನಾತ್ಮಕ ಕೆಲಸಗಳನ್ನು ಮಾಡುವುದು ಮುಖ್ಯವಾದುದು. ಹೇಗಿದ್ದರೂ, ಜನತೆಯಲ್ಲಿ ಬಹುಸಂಖ್ಯೆಯವರು ಜೈಲುಗಳಿಗೆ ಹೋಗದವರೇ ಆಗಿದ್ದಾರೆ. ಇವರೆಲ್ಲರೂ ಸರಿಯಾದ ವ್ಯವಸ್ಥೆಯಿಂದ ದೇಶಕಾರ್ಯದಲ್ಲಿ ನಿರತರಾದರೆ, ಯಾರೂ ಜೈಲಿಗೆ ಹೋಗಬೇಕಾಗಿಲ್ಲ.

'ಮೌಲಾನಾ ಅಬುಲ್ ಕಲಾಂ ಅಜಾದರ ದಸ್ತಗಿರಿ ಮತ್ತು ಶಿಕ್ಷೆ ವಿಷಾದಕರವಾದುದೇ ಸರಿ. ಅವರ ದಸ್ತಗಿರಿಯಾಗುವುದೆಂದು ಊಹಿಸಲಾಗಿತ್ತು. ಈ ಕಾಲದಲ್ಲಿ ಎಲ್ಲರೂ ತಮ್ಮ ಯೋಗ್ಯತೆಗೆ ತಕ್ಕಂತೆ ಸ್ವಾತಂತ್ರ್ಯಕ್ಕಾಗಿ ಸಾಹಸಪಡಬೇಕು.'

ಸಮಶೀತಲವಾದ ರುಚಿಕರ ಓವಲ್‌ಟಿನ್

ಬಿಸಿಲು ದಿನಗಳಲ್ಲಿ ಒಂದು ಗ್ಲಾಸ್ ತಣ್ಣನೆಯ ಓವಲ್‌ಟಿನ್ ರುಚಿಕರವಾದ ಪಾನೀಯವಾಗಿರುವದಲ್ಲದೆ ಇಡೀ ದೇಹಕ್ಕೆ ಪೋಷಣೆಯನ್ನೂ ಚೈತನ್ಯವನ್ನೂ ಕೊಡುತ್ತದೆ. ಇದನ್ನು ತಯಾರಿಸುವುದು ಬಹು ಸುಲಭ. ಒಂದು ಗ್ಲಾಸ್ ತಣ್ಣನೆಯ ಹಾಲಿಗೆ ಸುಮ್ಮನೇ ಎರಡು ಟೀ ಚಂಚದಷ್ಟು "ಓವಲ್‌ಟಿನ್" ಅದನ್ನು ಸೇರಿಸಿರಿ ಮತ್ತು ನಿಮಗೆ ಬೇಕಾದರೆ ಸಕ್ಕರೆಯನ್ನು ಬೆರಸಿ, ನಂತರ ಚೆನ್ನಾಗಿ ಕಲಕಿಬಿಡಿ. ನೆನಪಿನಲ್ಲಿಡಿ, ಬಿಸಿ "ಓವಲ್‌ಟಿನ್" ನಿಮಗೆ ಎಷ್ಟು ಒಳ್ಳೆಯದೋ ತಣ್ಣನೆಯ "ಓವಲ್‌ಟಿನ್" ಅಷ್ಟು ಒಳ್ಳೆಯದು— ಅಷ್ಟೇ ಪೋಷಣೆ ಕೊಡುತ್ತೆ, ಆನಂದದಾಯಕ, ಚೈತನ್ಯದಾಯಕವಾಗಿರುತ್ತೆ. ಎಲ್ಲಾ ಔಷಧ ಮಾರುವವರಲ್ಲೂ ಮತ್ತು ಅಂಗಡಿಗಳಲ್ಲೂ ದೊರೆಯುತ್ತದೆ.



ಓವಲ್‌ಟಿನ್

OVALTINE

ಹಂಚುವವರು: ಗ್ರಹಾಂಸ್ ಟ್ರೇಡಿಂಗ್ ಕಂ. [ಇಂಡಿಯಾ]ಲಿ., ಬಾಂಬೆ, ಕಲ್ಕತ್ತಾ, ಕರಾಚಿ, ರಂಗೂನ್, ಮತ್ತು ಮದ್ರಾಸು.

"ಓವಲ್‌ಟಿನ್" ಬಿಸ್ಕತುಗಳು

ರುಚಿಕರ, ಜೀರ್ಣಕರ, ಮತ್ತು ಪುಷ್ಟಿದಾಯಕ ... "ಓವಲ್‌ಟಿನ್" ಬಿಸ್ಕತುಗಳು ... "ಓವಲ್‌ಟಿನ್" ಸೇರಿದೆ. ... ದಬ್ಬಿಗಳಲ್ಲಿ ಮಾರುತ್ತಾರೆ.

OV/18/40

THREE "S"'s OF SOUND BANKING

Service! — Safety! — Security!

The Canara Industrial & Banking Syndicate, Limited

Head Office:-UDIPI, (S. India.)

PROVIDES THEM ALL AND INVITES YOU TO ENJOY THEM BY BEING ONE OF ITS OWN CLIENTALE.

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

4-4-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೪-೪-೧೯೪೧

ಬ್ರಿಟಿಷರು ವಚನಭ್ರಷ್ಟರಾಗಬಾರದು

ಅಪಕೀರ್ತಿ ಗಳಿಸಬಾರದು

ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕು

ಎಡ್ವರ್ಡ್ ಥಾಮ್ಸನರ ಲೇಖನ

ಎಡ್ವರ್ಡ್ ಥಾಮ್ಸನ್ನರು ತಮ್ಮ ವಿಚಾರ ಪರಿಪ್ಲುತ ಉತ್ತಮ ಗ್ರಂಥ ಲೇಖನಗಳಿಂದ ಜಗತ್ತಿಗೆ ಸುಪ್ರಸಿದ್ಧರಾಗಿದ್ದಾರೆ. ಅವರು ಭಾರತೀಯರಿಗೆ ಸ್ವಾತಂತ್ರ್ಯವನ್ನು ಕೊಡುವ ವಿಷಯದಲ್ಲಿ ಸಹಾನುಭೂತಿಯುಳ್ಳರುವ ಬ್ರಿಟಿಷರಾಗಿರುವರು. ಭಾರತೀಯ ಸ್ವಾತಂತ್ರ್ಯದ ಕುರಿತು ಅವರು ಬರೆದ ಒಂದು ಲೇಖನವನ್ನು ಕೆಲವರು ಟೀಕಿಸಿದ್ದರು. ಆ ಟೀಕೆಗಳಿಗೆ ಉತ್ತರವನ್ನು ಕೊಡುತ್ತಾ ಥೊಮ್ಸನ್ನರು ಟೈಮ್ ಎಂಡ್ ಟೈಡ್ ಎಂಬ ಪ್ರಖ್ಯಾತ ಪತ್ರಿಕೆ ಹೀಗನ್ನುತ್ತಾರೆ:—

ಬಿಕ್ಕಟ್ಟಿನ ಪರಿಹಾರ ಮಾಡಿರಿ

ಭಾರತದ ರಾಜಕೀಯ ಭವಿಷ್ಯವನ್ನು ಬ್ರಿಟಿಷರಿಂದ ರೂಪಿಸಲಿಕ್ಕಾಗುವದಿಲ್ಲ. ಬ್ರಿಟಿಷರು ಕೇವಲ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾತ್ರ ಮಾಡಬಹುದು. ಭಾರತದಲ್ಲಿ ರಾಜಕೀಯ ಭವಿಷ್ಯವನ್ನು ರೂಪಿಸುವವರು ಭಾರತೀಯರು ಮಾತ್ರ ಆಗಿರುವರು. ಆದ್ದರಿಂದ ಬ್ರಿಟಿಷರು ದಿನದಿಂದ ದಿನಕ್ಕೆ ಕೆಡುತ್ತ ಹೋಗುತ್ತಿರುವ ಅಲ್ಲಿಯ ಬಿಕ್ಕಟ್ಟನ್ನು ಪರಿಹರಿಸಲಿಕ್ಕೆ ಯಥಾರ್ಥ ಪ್ರಯತ್ನಗಳನ್ನು ಮಾಡಬೇಕಾಗಿದೆ

ವಚನ ಭ್ರಷ್ಟರಾಗಬಾರದು

ಬ್ರಿಟಿಷರು ವಚನ ಭ್ರಷ್ಟರಾಗಬಾರದು. ಭಾರತಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವದು ತಮ್ಮ ಗುರಿ ಎಂದು ಬ್ರಿಟಿಷರು ಹೇಳಿ ಅನೇಕ ವರ್ಷಗಳು ಕಳೆದು ಹೋದವು. ಬ್ರಿಟಿಷ ಸರಕಾರವು ಈ ವಚನ ಪರಿಪಾಲನೆಗೆ ಆಗಲೇ ತೊಡಗಿದ್ದರೆ, ರಾಜಿನಾಮೆ ಕೊಟ್ಟ ಕಾಂಗ್ರೆಸ ಮಂತ್ರಿಮಂಡಲಗಳು ಪುನಃ ಅಧಿಕಾರ ಸ್ವೀಕರಿಸಿ ಆಗಲೇ ಸ್ವಲ್ಪ ಸಮಯ ಕಳೆದು ಹೋಗಿರುತ್ತಿತ್ತು. ಆಗ ಅಲ್ಪ ಸಂಖ್ಯೆಯಲ್ಲಿ ಚುನಾಯಿತರಾದ ಮುಸ್ಲಿಂ ಲೀಗಿನ ಪ್ರತಿನಿಧಿಗಳಿಗೆ ಮಂತ್ರಿ ಮಂಡಲವನ್ನು ಸೇರುವ ಅಧಿಕಾರವಿರುವದಿಲ್ಲವಾದರೂ, ನಿಯಮಾಯಕಿಯಿಂದ ಅವರನ್ನು ಸೇರಿಸಿಕೊಂಡು ಸಮ್ಮಿಶ್ರಿತ ಮಂತ್ರಿಮಂಡಲಗಳನ್ನು ಸ್ಥಾಪಿಸಲಿಕ್ಕೆ ಕಾಂಗ್ರೆಸನ್ನು ಒಡಂಬಡಿಸಲಿಕ್ಕೂ ಸುಲಭವಾಗುತ್ತಿತ್ತು. ಪ್ರಾಂತ್ಯಗಳಲ್ಲಿ ಸರ್ವ ಪಕ್ಷೀಯ ಮಂತ್ರಿಮಂಡಲಗಳು ಅಧಿಕಾರದಲ್ಲಿದ್ದುವಾದರೆ ಬ್ರಿಟಿಷರ ಯುದ್ಧ ಪ್ರಯತ್ನಗಳಿಗೆ ಅಪೂರ್ವ ಸಹಾಯವು ಹಿಂದುಸ್ಥಾನದಿಂದ ದೊರಕುತ್ತಿತ್ತು. ಮತ್ತೆ ಭಾರತದ ರಾಜಕೀಯ ಘಟನೆಯನ್ನು ತಯಾರಿಸಲಿಕ್ಕೂ ಬೇಕಾದಷ್ಟು ಸಮಯವು ದೊರೆಯುತ್ತಿತ್ತು. ಮತ್ತೆ ಪರಸ್ಪರ ಹೋರಾಟದಲ್ಲಿ ತೊಡಗಿರುವ ಭಾರತದ ಎರಡು ಪ್ರಧಾನ ರಾಜಕೀಯ ಪಂಗಡಗಳೊಳಗೆ ಸ್ನೇಹವನ್ನುಂಟು ಮಾಡಿದ ಕೀರ್ತಿಯು ಬ್ರಿಟಿಷರಿಗೆ ದೊರೆಯುತ್ತಿತ್ತು. ಆದ್ದರಿಂದಲೇ ಬ್ರಿಟಿಷರು ಈಗಾದರೂ ವಚನ ಭ್ರಷ್ಟರಾಗಬಾರದಾಗಿದೆ

ಕಷ್ಟಗಳು ಅಪರಿಹಾರವಲ್ಲ

ಬ್ರಿಟಿಷ ಸಾಮ್ರಾಜ್ಯವೆಂಬುದು ನಿನ್ನೆ ಮೊನ್ನೆಯದ್ದಲ್ಲ. ಅದು ಹಿಂದೆ ಅನೇಕ ಸಮಸ್ಯೆಗಳನ್ನು ಬಿಡಿಸಿದೆ. ಅದಕ್ಕೆ ಬಹಳ ದೀರ್ಘ ಕಾಲದ ಅನುಭವವೂ ಇದೆ. ರಕ್ಷಣೆ ಸಂಬಂಧವಾದ ಸಮಸ್ಯೆಗಳು ಹಿಂದೆಯೂ ಉಪಸ್ಥಿತವಾಗಿದ್ದುವು. ಕೆನಡ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕದಲ್ಲಿಯೂ ಇವೇ ಸಮಸ್ಯೆಗಳಿದ್ದುವು ಆದರೆ ಅವು ಸ್ವರಾಜ್ಯವನ್ನು ಪಡೆಯಲಿಕ್ಕೆ ಈ ಸಮಸ್ಯೆಗಳು ಅಡ್ಡಿಯಾಗಲಿಲ್ಲ. ಮತ್ತೆ ಜಾತೀಯ ಜಗಳಗಳು, ಕೆಥೊಲಿಕ ಪ್ರೊಟೆಸ್ಟಾಂಟ ಸಂಘರ್ಷಗಳು ಬ್ರಿಟನಿನಲ್ಲೇ ಇದ್ದವು. ಅವು ಬ್ರಿಟನವರನ್ನು ಸ್ವರಾಜ್ಯಕ್ಕೆ ಅಪಾತ್ರರನ್ನಾಗಿ ಮಾಡಲಿಲ್ಲ. ಆದ್ದರಿಂದ ಮನಸ್ಸು ಮಾಡಿದರೆ ಭಾರತಕ್ಕೆ ಸ್ವರಾಜ್ಯವನ್ನು ಕೊಡಲಿಕ್ಕೆ ಇರುವ ಕಷ್ಟಗಳನ್ನೂ ಪ್ರಯತ್ನ ಪೂರ್ವಕ ದೂರಮಾಡಿಕೊಳ್ಳಬಹುದು.

ಅಪಕೀರ್ತಿಗಳಿಸಬೇಡಿ

ಬ್ರಿಟಿಷರು ವಚನ ಭ್ರಷ್ಟರೆಂದು ಅಪಕೀರ್ತಿ ಬರಬಾರದು. ಅವರು ಕೊಟ್ಟ ಮಾತಿನಂತೆ ನಡಕೊಳ್ಳಲಾರರಾದರೆ ಅವರಿಗೆ ಎಲ್ಲಿಯೂ ಉಳಿಗಾಲವಿಲ್ಲ. ಭಾರತಕ್ಕೆ ಸ್ವರಾಜ್ಯವನ್ನು ಕೊಡುವೆವೆಂದು ಬ್ರಿಟಿಷರು ಹೇಳಿದ್ದಾರೆ-ಹೇಳುತ್ತ ಬಂದಿದ್ದಾರೆ. ಒಳ ಆಡಳಿತದಲ್ಲಿ ಬ್ರಿಟಿಷರು ಅವರಿಗೆ ಅನೇಕ ಅಧಿಕಾರಗಳನ್ನು ಕೊಟ್ಟಿದ್ದಾರೆ. ಸ್ವಾತಂತ್ರ್ಯದ ಸವಿಯನ್ನು ಸ್ವಲ್ಪ ಸ್ವಲ್ಪ ಉಣಿಸಿದ್ದಾರೆ. ಮತ್ತೆ ಭಾರತಕ್ಕೆ ಕೊಡುವ ಸ್ವರಾಜ್ಯವೆಂದರೆ ಅದು ಬ್ರಿಟಿಷರ ಮಾದರಿಯ ಪ್ರಜಾಪ್ರಭುತ್ವ ಎಂಬುದನ್ನು ಕಳೆದ ೩೦ ವರ್ಷಗಳಿಂದ ಪ್ರತ್ಯಕ್ಷ ತೋರಿಸಿಕೊಟ್ಟಿದ್ದಾರೆ ಇನ್ನೂ ಒಂದು **ಹೆಜ್ಜೆ ಮುಂದಿಡಿ!**

ಆದರೆ ಈಗ ಮಾತ್ರ ಹಿಂದೆ ಮಾಡಿದ್ದೆಲ್ಲ ವ್ಯರ್ಥವಾಗುವ ಹಾಗಿನ ಪ್ರಯೋಜನಕ್ಕೆ ಬಾರದಾಗುವ ದುಶ್ಚಿಹ್ನಗಳು ತೋರಿಬರುತ್ತಿವೆ! ಹಿಂದುಸ್ಥಾನದ ಪರಿಸ್ಥಿತಿಗೆ ಅನುಕೂಲವಾದ ರೀತಿ, ಎಂದು ಹೇಳಿ ಅಲ್ಲಿ ಅನರ್ಥವನ್ನೇ ಉಂಟುಮಾಡುವ ಒಂದು ಹೊಸ ಪದ್ಧತಿಯ ಪರೀಕ್ಷೆಯನ್ನು ಮಾಡಲಾರಂಭಿಸಿದ್ದಾರೆ. ಮತ್ತೆ ಯಾವ ಒಡಂಬಡಿಕೆಯೂ, ಸುವ್ಯವಸ್ಥೆಯೂ ಆಗದಂತೆ ತಡೆ ಹಾಕಬಲ್ಲ ಅಧಿಕಾರ ಸ್ವಾತಂತ್ರ್ಯವನ್ನು ಕೊಟ್ಟು ಅಲ್ಪ ಸಂಖ್ಯಾಕ ಪಕ್ಷಗಳಿಗೆ ಪ್ರತ್ಯಕ್ಷ ಪರೋಕ್ಷ ಸಹಾಯ ಪ್ರೋತ್ಸಾಹಗಳನ್ನು ಕೊಡಲಾರಂಭಿಸಿದ್ದಾರೆ. ಈ ಹೊಸ ನೀತಿಯನ್ನು ಬ್ರಿಟಿಷ ಸರಕಾರವು ಇನ್ನೂ ಸ್ವಲ್ಪ ಕಾಲದ ತನಕ ಅನುಸರಿಸಿಕೊಂಡು ಹೋಗುವದಾದರೆ, ಅದರಿಂದ ಬ್ರಿಟನಿಗೂ ಭಾರತಕ್ಕೂ ಭಯಂಕರ ಹಾನಿಯಾಗಲಿದೆ.

ಅತ್ಯಂತ ಸುಲಭ

ಈಗಲಾದರೂ ಭಾರತದಲ್ಲಿ ಒಂದು ತಾತ್ಕಾಲಿಕ ವ್ಯವಸ್ಥೆಯನ್ನು ಹೆಚ್ಚಿನವರಿಗೆ ತೃಪ್ತಿಕರವಾಗುವಂತೆ ಮಾಡುವದು ಕಠಿಣವಲ್ಲ. ಭಾರತದ ಪರಿಸ್ಥಿತಿಯು ಐರ್ಲೆಂಡಿನ ಪರಿಸ್ಥಿತಿಯಂತೆ ಇನ್ನೂ ವಿಷಮಾವಸ್ಥೆಯನ್ನು ಮುಟ್ಟಿಲ್ಲ. ಭಾರತೀಯರನ್ನು ಸಂತೋಷಗೊಳಿಸಿ ಅವರ ಹಾರ್ದಿಕ ಸ್ನೇಹವನ್ನು ಸಂಪಾದಿಸಲಿಕ್ಕೆ ಈ ಐವತ್ತು ವರ್ಷಗಳಲ್ಲಿ ಬ್ರಿಟಿಷರು ಅನೇಕ ಸಂದರ್ಭಗಳನ್ನು ಕಳಕೊಂಡರಾದರೂ ಈಗ ಅವರಿಗೆ ಅದಕ್ಕೋಸ್ಕರ ಅತ್ಯುತ್ತಮ ಸಂದರ್ಭವು ಒದಗಿಬಂದಿದೆ. ಅದನ್ನೂ ಅವರು ಕಳಕೊಳ್ಳುವರೆ?

ಸಾರ್ವಜನಿಕ ವಿಶ್ವಾಸವೇ

"ಓರಿಯಂಟಲ್"ನ್ನು

ಹಿಂದೂದೇಶದ ಪ್ರಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಚಾಲ್ತಿಯಲ್ಲಿರುವ ಪೋಲಿಸಿಗಳು	31-12-39	ರೂ. 79½ ಕೋಟಿಗಿಂತ ಮಿಕ್ಕಿದೆ.
ಫಂಡುಗಳು	,,	ರೂ. 25½ ,, ,,
ವಾರ್ಷಿಕ ಆದಾಯ	,,	ಸುಮಾರು ರೂ. 4½ ಕೋಟಿಗೆ ,,

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವ ಪ್ರೊಸ್ಪೆಕ್ಟಸಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅ — ದಿ ಇನ್‌ಸ್ಪೆಕ್ಟರ್

ಸೌತ್ ಪೆರೇಡ್, ಫ — ಕಾರ್ನಾಡ್ ಸದಾಶಿವರಾವ್ ರೋಡ್,

ಬೆಂಗಳೂರು. ವಾ ಮಂಗಳೂರು.

ಹೆಡ್ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು

ಸ್ವದೇಶಾಭಿಮಾನಿ

ತಾರೀಕು 4—4—1941

ಯುಗೊಸ್ಲೇವಿಯ ಕೆರಳಿದೆ!

"ನಮ್ಮ ರಾಜ್ಯ, ನಮ್ಮ ರಾಷ್ಟ್ರ, ನಮ್ಮ ಜನಾಂಗ ಇವುಗಳ ಹಿತವನ್ನು ಸಂರಕ್ಷಿಸುವ ಸಲುವಾಗಿ ಯುಗೊಸ್ಲೇವಿಯದ ಜನರು ಈ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಬೇಕೆಂದು ಪ್ರತಿಜ್ಞೆ ತೊಟ್ಟಿದ್ದಾರೆ. ಪ್ರತಿಯೊಂದು ಮನೆಯನ್ನೂ ರಕ್ಷಿಸಲು ಅವರು ಸಿದ್ಧರಾಗಿದ್ದಾರೆ. ಇದಕ್ಕಾಗಿ ಸಂದರ್ಭವೊದಗಿದರೆ ಅವರು ತಮ್ಮ ಜೀವಗಳನ್ನು ಅರ್ಪಿಸುವರು. ನಮ್ಮ ಸೈನ್ಯ, ವಿಮಾನ ಮತ್ತು ನೌಕಾಬಲಗಳು ತಮ್ಮ ತಮ್ಮ ಕೆಲಸಗಳನ್ನು ಮಾಡಲು ಸಿದ್ಧವಾಗಿವೆ"—ಹೀಗೆಂದು ಯುಗೊಸ್ಲೇವಿಯದ ಮುಖ್ಯ ಮಂತ್ರಿ ಜನರಲ್ ಸಿಮೊವಿಚರು ಜರ್ಮನರನ್ನು ಎದುರಿಸುವ ತಮ್ಮ ದೃಢನಿರ್ಧಾರವನ್ನು ಆಕಾಶವಾಣಿಯ ಮೂಲಕ ಸಾರಿ ಅದ್ಭುತ ಧೈರ್ಯವನ್ನು ತೋರಿಸಿದ್ದಾರೆ.

ಮೊನ್ನೆ ಮೊನ್ನೆ ಯುಗೊಸ್ಲವಿಯ ಸರಕಾರವು ಜರ್ಮನಿಯ ಅಧೀನವಾಯಿತು. ಒಂದು ಒಪ್ಪಂದ ಮಾಡಿಕೊಂಡು ಹಿಟ್ಲರ್ ಮುಸಲಿನಿಗಳ ಬಲೆಗೆ ಯುಗೊಸ್ಲವಿಯವು ಬಿತ್ತು. ಈ ಸಂದರ್ಭದಲ್ಲಿ ಜನತೆಯು ಒಪ್ಪಂದಕ್ಕೆ ಒಪ್ಪಿರಲಿಲ್ಲವೆಂದೂ ಹೇಳಲಾಗಿತ್ತು. ಜರ್ಮನರು ಈ ಜಯದಿಂದ ಹಿಗ್ಗಿಕೊಂಡರು. ಆದರೆ ಬೂದಿ ಮುಚ್ಚಿದ ಕೆಂಡವು ಇಂದು ತಿರಿಗಿ ಕೆರಳಿದೆ. ಯುಗೊಸ್ಲವಿಯದ ಜನರು ಜರ್ಮನರೆದುರು ಕಾದಾಡಲು, ತಮ್ಮ ನಾಡಿನ ಸ್ವಾತಂತ್ರ್ಯವನ್ನು ರಕ್ಷಿಸಲು ಪಣತೊಟ್ಟು ನಿಂತಿದ್ದಾರೆ. ಯುಗೊಸ್ಲವಿಯದ ಜನರು ಜರ್ಮನರ ಸೊಕ್ಕು ಮುರಿವಂತೆ ದೊಂಬಿ ಗೆದ್ದಿದ್ದಾರೆ.

ಯುಗೊಸ್ಲವಿಯದಲ್ಲಿ ಹೊಸ ಸರಕಾರವೊಂದು ಈಗ ಸ್ಥಾಪಿತವಾಗಿದೆ. ಅಲ್ಲಿನ ಅರಸರಾದ ಪೀಟರರು ಇಂದು ಅಪ್ರಾಪ್ತರು; ಪೂರ್ಣ ವಯಸ್ಸಿಗೆ ಬರಲು ಇನ್ನೂ ಆರು ತಿಂಗಳು ಬೇಕು. ಆದರೂ ಅವರು ಆರು ತಿಂಗಳ ಮೊದಲೇ ರಾಜ್ಯದ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡು, ಬ್ರಿಟನ್ ಪಕ್ಷಪಾತಿ ಸಿಮೊವಿಚರನ್ನು ಪ್ರಧಾನಮಂತ್ರಿಯಾಗಿ ಮಾಡಿ ಜರ್ಮನರೆದುರು ಯುಗೊಸ್ಲವಿಯನರನ್ನು ಹುರಿದುಂಬಿಸಿದ್ದಾರೆ. ಮದೋನ್ಮತ್ತನಾದ ಹಿಟ್ಲರನನ್ನು ಎದುರಿಸಲು ಅವರು ಆವೇಶಪೂರ್ಣರಾಗಿ ಮುಂದೆ ಬಂದಿದ್ದಾರೆ. ಬ್ರಿಟಿಷ್ ಸಾರ್ವಭೌಮರು, ಬ್ರಿಟಿಷ್ ಪ್ರಧಾನಮಂತ್ರಿಗಳು ಹಾಗೂ ಬ್ರಿಟಿಷ್ ಜನಾಂಗವೇ ಪೀಟರರ ಈ ಸಾಹಸವನ್ನು ಮತ್ತು ಧೈರ್ಯೋತ್ಸಾಹಗಳನ್ನು ಮುಕ್ತಕಂಠದಿಂದ ಕೊಂಡಾಡಿದೆ. ಪೀಟರರಿಗೆ ಬ್ರಿಟನಿನಿಂದ ಸಂಪೂರ್ಣ ಸಹಾ[illegible]

ಭಾರತ ಪರಿಸ್ಥಿತಿ

ಭಾರತದ ಪರಿಸ್ಥಿತಿಯಲ್ಲಿ ಆಶಾದಾಯಕವಾದ ಘಟನೆಗಳು ಯಾವುವೂ ನಡೆಯುವುದು ಕಂಡುಬರುವುದಿಲ್ಲ. ಗಾಂಧಿಜಿ ಮೊದಲೇ ಹೇಳಿದಂತೆ, ಬಹಳ ದೀರ್ಘಕಾಲದ ತನಕ ಸತ್ಯಾಗ್ರಹವನ್ನು ಮಂದಗತಿಯಲ್ಲಿಯೇ ಸಾಗಿಸುತ್ತಿದ್ದಾರೆ. ಸರಕಾರದವರಾದರೂ ಯುದ್ಧ ಪ್ರಯತ್ನದಲ್ಲಿಯೇ ಇದ್ದಾರಲ್ಲದೆ ಇತರ ಯಾವ ವಿಷಯಕ್ಕೂ ತಲೆಹಾಕುವಂತೆ ಕಂಡುಬರುವುದಿಲ್ಲ. ಈ ಮಧ್ಯದಲ್ಲಿ ಅಪಕ್ಷದ ಮುಖಂಡರು ಕೆಲವರು ಕೂಡಿ ಭಾರತದ ಬಿಕ್ಕಟ್ಟನ್ನು ಬಗೆಹರಿಸಲು ಪ್ರಯತ್ನಮಾಡಿದರಾದರೂ, ಅವರ ಪ್ರಯತ್ನಕ್ಕೆ ಯೋಗ್ಯ ಪ್ರತಿಫಲವು ಸಿಗುವಂತೇನೂ ಕಂಡುಬರುವುದಿಲ್ಲ. ಇತ್ತ ಹಿಂದೂ ಮಹಾಸಭೆಯವರಾದರೂ, ಮುಸ್ಲಿಂ ಲೀಗಿನ ಮೇಲೆ ಮುಸಗಿ ನಿಂತಿದ್ದಾರೆ. ಜಿನ್ನರು ಪಾಕಿಸ್ಥಾನದ ದುರ್ಬುದ್ಧಿಯನ್ನು ಬಿಟ್ಟುಕೊಡುವಂತೆಯೂ ಇಲ್ಲ. ಸರಕಾರವು ಇಂತಹ ರಾಷ್ಟ್ರಘಾತುಕಯೋಜನೆಯನ್ನು ಖಂಡನೆ ಮಾಡದಿದ್ದರೆ ಹಿಂದೂ ಮಹಾಸಭೆಯು ಆಂದೋಲನ ಮಾಡದೆ ಇರಲಾರದು. ಎಪ್ರಿಲ್ ತಿಂಗಳಲ್ಲಿ ಹಿಂದೂ ಮಹಾಸಭೆಯು ಆಂದೋಲನ ಮಾಡಲಿದೆಯೆಂದು ವರ್ತಮಾನವಿದೆ.

ಭಾರತ ಮಂತ್ರಿಗಳಾದ ಅಮೇರಿಯವರು ಇಷ್ಟೆಲ್ಲಾ ವೈಪರೀತ್ಯಗಳಿದ್ದರೂ ಏನೇನೂ ಸಮಾಧಾನಕರವಾಗಿ ವರ್ತಿಸುವಂತೆ ತೋರುವುದಿಲ್ಲ. ಅವರು ಮೊನ್ನೆ ತಾನೇ ಒಂದು ಹೇಳಿಕೆಕೊಟ್ಟರು; ಅದರಲ್ಲಿಯೂ ಅವರ ಹಿಂದಿನ ಹಾಡಿನ ಪಲ್ಲವಿಯೇ ಪುನರಾವೃತ್ತಿಯಾಯಿತಲ್ಲದೆ ಹೊಸತೇನೂ ಇಲ್ಲ. ಒಟ್ಟಿನಿಂದ ಭಾರತದ ರಾಜಕೀಯ ಮುಂದಾಳುಗಳಲ್ಲಿ ಹಲವರ ಮನಸ್ಸಿಗೆ ಬೇಸರವೇ ಅವರ ಹೇಳಿಕೆಯಿಂದ ಉಂಟಾಗಿದೆಯೆನ್ನಬಹುದು. ವೈಸರಾಯರಾದರೂ ಈ ಸಂದರ್ಭದಲ್ಲಿ ಏನೂ ಚಟುವಟಿಕೆಯಿಂದಿಲ್ಲ. ರಾಷ್ಟ್ರದ ಮುಂದಾಳುಗಳೂ ಜನತೆಯೂ ತಳಮಳಗೊಂಡಿದೆ. ಗಾಂಧಿಜಿ ಮಾತ್ರ ಸಮಾಧಾನದಿಂದಿದ್ದಾರೆ. ಆದರೆ, ಇವುಗಳೆಲ್ಲಾ ಗೊತ್ತಿದ್ದೂ ವೈಸರಾಯರು ಯಾವುದೊಂದೂ ಇತ್ಯರ್ಥಕ್ಕೆ ಬರಲು ಮನಸ್ಸು ಮಾಡದಿರುವುದು ಬಹಳ ಚಿಂತಾಜನಕವಾದ ವಿಚಾರವಾಗಿದೆ.

ರಾಷ್ಟ್ರೀಯ ಸಪ್ತಾಹ

ತಾ. 6–4–1941ರಿಂದ ತಾ. 13–4–1941ರ ವರೆಗೆ

ಮಹಾತ್ಮಾಗಾಂಧಿಯವರ ಅಪ್ಪಣೆಯ ಮೇರೆಗೆ ಇದೇ ಬರುವ ರಾಷ್ಟ್ರೀಯ ಸಪ್ತಾಹವನ್ನು, ಜನತೆಯಲ್ಲಿ ನವಜಾಗ್ರತಿಯ ಚೈತನ್ಯವು ತುಂಬಿ ಹೊರಹೊಮ್ಮಿ ಹರಿಯುವಂತೆಯೂ ತಾ. ೬ ಮತ್ತು ೧೩ರ ದಿನ ಉಪವಾಸವಿದ್ದು ಆತ್ಮ ಪರಿಶುದ್ಧತೆಯನ್ನು ಹೊಂದುವಂತೆಯೂ ಆಚರಿಸಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಈ ಪವಿತ್ರ ವಾರವನ್ನು ಹುರುಪು ಉತ್ಸಾಹಗಳಿಂದಲೂ ಗಾಂಭೀರ್ಯದಿಂದಲೂ ಎಲ್ಲರೂ ಕೂಡಿ ಸಹಕರಿಸಿ ಆಚರಿಸಬೇಕಾಗಿದೆ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಇತರ ಬಂಧುಗಳ ಸಹಕಾರದಿಂದ ತಯಾರಿಸಿದ ಕಾರ್ಯಕ್ರಮವನ್ನು ಈ ಮೂಲಕ ಪ್ರಕಟಿಸಿಯದೆ. ಎಲ್ಲಾ ಪೇಟೆ ಪಟ್ಟಣಗಳಲ್ಲಿಯೂ, ಹಳ್ಳಿಹಳ್ಳಿಗಳಲ್ಲಿಯೂ ಸರ್ವರೂ ಈ ವರ್ಷದ ರಾಷ್ಟ್ರೀಯ ಸಪ್ತಾಹವನ್ನು ಯೋಗ್ಯ ರೀತಿಯಲ್ಲಿ ಆಚರಿಸಿ, ಯುಕ್ತ ವರದಿಗಳನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಚೇರಿಗೆ ಕಳುಹಿಸಿ ಕೊಡಬೇಕಾಗಿ ವಿನಂತಿ.

— ಕಾರ್ಯಕ್ರಮ —

ಎಪ್ರಿಲ್ 6

ಸತ್ಯಾಗ್ರಹ ದಿನ

ಬೆಳಿಗ್ಗೆ 5-30ಕ್ಕೆ ಪ್ರಭಾತ ಫೇರಿ
,, 7-15ಕ್ಕೆ ರಾಷ್ಟ್ರ ಧ್ವಜವಂದನೆ
ಇಡೀ ದಿನ ನೂಲುವುದು
ಸಾಯಂಕಾಲ 5-30 ಮೆರವಣಿಗೆ
,, 6-30 ಸಾರ್ವಜನಿಕ ಸಭೆ

ಎಪ್ರಿಲ್ 7

ಹರಿಜನ ದಿನ

ಬೆಳಿಗ್ಗೆ 6 ಹರಿಜನ ಕೇರಿಗಳ ಸಂದರ್ಶನ
ಅವರಿಗೆ ಬೋಧನೆ
,, 9 ಹರಿಜನ ಮಕ್ಕಳಿಗೆ ಉಪಾಹಾರ
ಇಡೀ ದಿನ ಖಾದಿ ಮಾರಾಟ ಮತ್ತು
ಹರಿಜನ ಸೇವೆಗಾಗಿ ವಂತಿಗೆ
ಸಾಯಂ. 5-30 ಹರಿಜನರೊಂದಿಗೆ ಮೆರವಣಿಗೆ
,, 6-30 ಸಾರ್ವಜನಿಕ ಸಭೆ

ಎಪ್ರಿಲ್ 8

ಖಾದಿ ದಿನ

ಬೆ. 9-30ರಿಂದ 11-30ರ ತನಕ ನೂಲುವಸ್ಪರ್ಧೆ
ಇಡೀ ದಿನ ಖಾದಿ ಮಾರಾಟವೂ ಇದೆ
ಸಾಯಂ. 6-30 ಸಾರ್ವಜನಿಕ ಸಭೆ

ಎಪ್ರಿಲ್ 9

ಮಜೂರರ ಮತ್ತು ಕೂಲಿಕಾರರ ದಿನ

ಬೆ. 5-30 ಮಜೂರರೊಂದಿಗೆ ಪ್ರಭಾತಫೇರಿ
ಸಾಯಂ. 6-30 ಸಾರ್ವಜನಿಕ ಸಭೆ [illegible]
[illegible]

ಎಪ್ರಿಲ್ 10

ಮಹಿಳೆಯರ ದಿನ

ಬೆಳಿಗ್ಗೆ 8 ಖಾದಿ ಪ್ರಚಾರ, ಮನೆಮನೆಗೆ
ಹೋಗಿ ನೂಲುವುದಕ್ಕೆ ಕಲಿಸುವುದು
ಸಾಯಂ. 6-30 ಸಾರ್ವಜನಿಕ ಸಭೆ

ಎಪ್ರಿಲ್ 11

ಜಾತಿ ಐಕ್ಯತೆಯ ದಿನ

ಬೆಳಿಗ್ಗೆ ಖಾದಿ ಪ್ರಚಾರ ಮತ್ತು ಮಾರಾಟ
ಸಾಯಂ. 6-30 ಸಾರ್ವಜನಿಕ ಸಭೆ

ಎಪ್ರಿಲ್ 12

ಗ್ರಾಮೋದ್ಧಾರ ದಿನ

ಖಾದಿ ಪ್ರಚಾರ ಮತ್ತು ಮಾರಾಟ
ಸಾಯಂ. 6-30 ಸಾರ್ವಜನಿಕ ಸಭೆ

ಎಪ್ರಿಲ್ 13

ಜಲಿಯನವಾಲ್ ಬಾಗ್ ದಿನ

ಬೆಳಿಗ್ಗೆ 5-30 ಪ್ರಭಾತಫೇರಿ
,, 7-15 ಧ್ವಜವಂದನೆ
ಸಾಯಂಕಾಲ 5-30 ಮೆರವಣಿಗೆ
,, 6-30 ಸಾರ್ವಜನಿಕ ಸಭೆ

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ
ಮಂಗಳೂರು.

ರಾಷ್ಟ್ರೀಯ ಸಪ್ತಾಹ

ಪ್ರತಿ ವರ್ಷ ತಾ. ೬ನೇ ಎಪ್ರಿಲಿನಿಂದ ೧೩ನೇ ಎಪ್ರಿಲಿನವರೆಗೆ ೭ ದಿವಸಗಳನ್ನು ರಾಷ್ಟ್ರೀಯ ವಾರವೆಂದು ನಾವು ಪಾಲಿಸುತ್ತಾ ಬಂದಿದ್ದೇವೆ. ಈ ಸಲವಾದರೂ ಈ ಸಪ್ತಾಹವನ್ನು ಒಳ್ಳೇ ಉತ್ಸಾಹದಿಂದ ನಾವು ಆಚರಿಸ ತಕ್ಕದ್ದು. ಗಾಂಧಿಜಿಯವರು ಈ ಸಪ್ತಾಹದ ಆಚರಣೆಯ ಬಗ್ಗೆ ಒಂದು ಪ್ರಕಟನೆಯನ್ನು ಹೊರಡಿಸಿದ್ದು ಅದರ ಪ್ರತಿಗಳನ್ನು ಈ ನೋಟೀಸು ಕಳಿಸಲಾಗಿದೆ. ಅದು ವೃತ್ತ ಪತ್ರಗಳಲ್ಲಿಯೂ ಪ್ರಕಟವಾಗಿದೆ. ಅದರ ಕನ್ನಡ ಪ್ರತಿಗಳನ್ನು ಇಷ್ಟರಲ್ಲಿಯೇ ಕಳಿಸಲಿರುವೆವು.

ಈ ಸಪ್ತಾಹದಲ್ಲಿ ನಾವು ಹೆಚ್ಚು ಆತ್ಮಶುದ್ಧಿ ಮಾಡಿಕೊಳ್ಳಬೇಕು. ಹಾಗೂ ವಿಧಾಯಕ ಕಾರ್ಯಕ್ರಮಗಳನ್ನು ಹೆಚ್ಚು ಜೋರಿನಿಂದ ನಡಿಸಬೇಕೆಂದು ಗಾಂಧಿಜಿಯವರು ಇಚ್ಛಿಸುವರು. ಗಾಂಧಿಜಿಯವರು ವಿಧಾಯಕ ಕಾರ್ಯಕ್ರಮಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿರುವರು. ಈ ವಾರದಲ್ಲಿ ಖಾದೀ ಮಾರಾಟ, ನೂಲುವ ಸ್ಪರ್ಧೆ, ಜಾತೀಯ ಐಕ್ಯತೆ, ಹರಿಜನ ಉದ್ಧಾರ ಮುಂತಾದವುಗಳನ್ನು ಮಾಡಬೇಕು. ಶಕ್ಯವಿದ್ದ ಸ್ಥಳಗಳಲ್ಲಿ ಪಿಸಾಯೂ ಪ್ರಭಾತಫೇರಿ ಹಾಗೂ ಸಾರ್ವಜನಿಕ ಸಭೆಗಳನ್ನು ಸೇರಿಸಬೇಕು. ಸಭೆಗಳಲ್ಲಿ ಕಾಂಗ್ರೆಸ್ಸಿನ ಸಧ್ಯದ ಧೋರಣೆಯನ್ನು ಸ್ಪಷ್ಟೀಕರಿಸಬೇಕು. ಈ ಸಭೆಗಳಲ್ಲಿ ೧೯೧೯ನೇ ಇಸವಿಯಲ್ಲಿ ಪಂಜಾಬಿನಲ್ಲಿ ಆದ ಅತ್ಯಾಚಾರದ ಬಗ್ಗೆ ವಿಶೇಷ ವರ್ಣಿಸುವ ಅಗತ್ಯವಿಲ್ಲ. ಈಗಿನ ನಮ್ಮ ಕಾರ್ಯಕ್ರಮವು ಮುಂದೆ ಸಾಗುವಂತೆ ಪ್ರಯತ್ನಿಸಬೇಕು.

ಈ ಸಲ ನಾವು ಸತ್ಯಾಗ್ರಹ ಸಮರದಲ್ಲಿ ಧುಮುಕಿರುವದರಿಂದ ಈ ಸಪ್ತಾಹದಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಬೇಕಾಗಿಲ್ಲ. ವಿಧಾಯಕ ಕಾರ್ಯಕ್ರಮವು ಹಾಗೂ ಸತ್ಯಾಗ್ರಹ ಇವೆರಡೂ ಜೋಡಿಯಾಗಿಯೇ ನಡೆಯತಕ್ಕದ್ದು. ಆದರೆ ಗುಡ್ ಫ್ರೈಡೆ (೧೧-೪-೪೧) ಹಾಗೂ ನಿತ್ಯದಂತೆ ರವಿವಾರ (೧೩-೪-೪೧) ಈ ಎರಡು ದಿವಸ ಸತ್ಯಾಗ್ರಹವನ್ನು ಇಡಕೂಡದು. ಶಕ್ಯವಾದಲ್ಲಿ ಈ ಸಪ್ತಾಹದ ಒಂದು ದಿವಸ ಜಿಲ್ಲೆಯೊಳಗಿನ ಯಾವದಾದರೊಂದು ತಾಲೂಕಿನ ಪ್ರತಿಯೊಂದು ಹಳ್ಳಿಗಳಲ್ಲಿ ಸತ್ಯಾಗ್ರಹ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬಹುದು.

ಈ ಪ್ರಕಾರ ಈ ಸಪ್ತಾಹದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜರಗುವಂತೆ ಪ್ರಯತ್ನಿಸಬೇಕಾಗಿ ನಾನು ಎಲ್ಲರಿಗೂ ಪ್ರಾರ್ಥಿಸುತ್ತೇನೆ. ಈ ಸಪ್ತಾಹದ ಆಚರಣೆಯ ವರದಿಯನ್ನು ನಮ್ಮ ಕಡೆಗೆ ಕಳಿಸಬೇಕು ಎಂಬುದಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀಯುತ ಕೃಷ್ಣಾಬಾಯಿ ಪಂಜೀಕರರು ತಿಳಿಸುತ್ತಾರೆ.

ಮಹಾತ್ಮರೊಡನೆ ಅಲ್ಲಾಬಾದಿಗೆ ತೆರಳಿದಾಗ

ಸರ್ ವಿಜಯರ ಆನಂದದ ಅನುಭವಗಳು!

ಮಂದಸ್ಮಿತದಿಂದ ಮಹಾವಿಶ್ವವನ್ನೇ ಗೆಲ್ಲಬಲ್ಲರು!

ಜಗತ್ತಿನ ಮಾಂತ್ರಿಕ ಮಾಯಗಾರ!

ಸೇವಾಗ್ರಾಮವೆಂಬುದು ಇಂದು ಮಕ್ಕಾಗಳ ಮಕ್ಕಾ, ಜೆರುಸಲೇಮುಗಳ ಜೆರುಸಲೇಮು, ಕಾಶಿಗಳ ಕಾಶಿ. ಸತ್ಯಾರಾಧಕನು ಅಲ್ಲಿರುವನು. ಅಹಿಂಸಾ ಪ್ರವಾದಿಯು ಅಲ್ಲಿ ನೆಲಸಿರುವನು. ಶಾಂತಿ ದೂತನು ಅಲ್ಲಿ ವಾಸವಾಗಿರುವನು. ಆ ಮಹಾಂತನ ವ್ಯಕ್ತಿತ್ವವು ಅದ್ಭುತವಾದುದು ಅತನ ಮುಂದೆ ಪರುಷ ಪಾಷಾಣಗಳಾದರೂ ಹಿಮದ ಗಡ್ಡೆಯಂತೆ ಕರಗುವವು. ಮನುಷ್ಯ ಹೃದಯಗಳನ್ನು ಆತನು ತನ್ನೆಡೆಗೆ ಆಕರ್ಷಿಸಿಕೊಂಡಿದ್ದಾನೆ ಆತನ ಸ್ಮಿತ ಮಧುರ ಮುಖದಲ್ಲಿ ಜಗತ್ತಿನ ಪುಣ್ಯರಾಶಿಯು ನಲಿಯುತ್ತಿದೆ. ಅಖಿಲ ಬ್ರಹ್ಮಾಂಡವನ್ನೇ ಬೆರಗುಗೊಳಿಸಿದ ಮಹಾ ತತ್ವಸಾಧನಾದ ರಾಜಯೋಗಿ ಅಲ್ಲಿ ನೆಲೆಸಿರುವನು.

ಗಾಂಧಿಜಿಯವರ ಕುರಿತು ವಿಜಯನಗರದ ರಾಜಕುಮಾರ ಸರ್ ವಿಜಯರು ಹೀಗೆಂದು ಬರೆಯುತ್ತಾರೆ ಅಲ್ಲಾಬಾದಿಗೆ ಕಮಲಾನೆಹರು ಸ್ಮಾರಕ ವೈದ್ಯಾಲಯದ ಉದ್ಘಾಟನೆಗಾಗಿ ಗಾಂಧಿಜಿ ತೆರಳಿದ ಸಂದರ್ಭದಲ್ಲಿ ಅವರೊಡಗೂಡಿ ಹೋದ ಸರ್ ವಿಜಯರು ತನ್ನ ಅನುಭವದ ಆನಂದವನ್ನು ಒಂದು ಹೃದಯ ಸ್ಪರ್ಶಿಯಾದ ಲೇಖನದಲ್ಲಿ ಬಹಳ ರಸವತ್ತಾಗಿ ವರ್ಣಿಸಿದ್ದಾರೆ. ಅವರ ಲೇಖನದ ಸಾರವು ಹೀಗಿರುತ್ತದೆ

'ಪ್ರಾರ್ಥನೆ ಮುಗಿದ ಬಳಿಕ, ಕೆಲ ನಿಮಿಷಗಳ ವರೆಗೆ ಮಾತನಾಡಲು ಅವಕಾಶವಿದೆಯೆಂದು ನನ್ನನ್ನು ಗಾಂಧಿಜಿ ತನ್ನ ಬಳಿಗೆ ಕರೆದರು ಕಸ್ತೂರಿಬಾಯಿಯವರು ನನ್ನ ತಾಯ ವಿಚಾರವಾಗಿ ಪ್ರಶ್ನಿಸಿದರು. ನನ್ನ ತಾಯಿಯು ಪರಿಚಯವು ಆಶ್ರಮದವರೆಲ್ಲರಿಗೂ ಇದೆ. ಇದರಿಂದ ನಾನು ಆನಂದಗೊಂಡೆ

ಮರುದಿನ ಬೆಳಿಗ್ಗೆ ಆಮೇಲೆ ಅವರು ನನ್ನನ್ನೂ ಬಳಿ ಕುಳ್ಳಿರಿಸಿ ಊಟಮಾಡಿದರು. ಆ ಅಮೃತ ನಿಮಿಷಗಳನ್ನು ನಾನು ನನ್ನ ಜೀವಮಾನದಲ್ಲೆ ಮರೆಯಲಾರೆ. ಕಸ್ತೂರಿ ಬಾಯಿಯವರು ಮತ್ತು ಅವರು ನನ್ನ ಮೇಲೆ ತೋರಿಸಿದ ವಾತ್ಸಲ್ಯವು "ನನ್ನನ್ನು ಪರವಶರನ್ನಾಗಿ ಮಾಡಿತು. ಇವುಗಳೆಲ್ಲ ನನ್ನ ನೆನಪಿನಲ್ಲಿ ಹೊಚ್ಚ ಹೊಸತಾಗಿಯೇ ಉಳಿಯುವವು

ಆಶ್ರಮದ ಆಹಾರದ ವಿಷಯ. ರಾಜಕುಮಾರಿ ಅಮೃತಕೌರರು ಹೇಳುತ್ತಾರೆ, ನಾವು ಬದುಕುವ ಸಲುವಾಗಿ ಉಣ್ಣುತ್ತೇವೆ, ಉಣ್ಣುವ ಸಲುವಾಗಿ ಬದುಕುವುದಲ್ಲವೆಂದು: ಗಾಂಧಿಜಿ ಸ್ವಲ್ಪ ಚಟ್ನಿಯನ್ನು ತನ್ನ ಎಲೆಯಿಂದ ತೆಗೆದು ನನಗೆ ಕೊಟ್ಟರು. ನಾನದನ್ನು ತೆಗೆದು ಬಾಯಿಗೆ ಹಾಕಿಬಿಟ್ಟೆ; ಗಾಂಧಿಜಿಯೇ ಹತ್ತಿರ ಕುಳಿತಿದ್ದುದರಿಂದ, ಅದನ್ನು ನುಂಗುವದು ನನಗೆ ಸಾಧ್ಯವಾಗದಿದ್ದರೂ, ಅದನ್ನು ಉಗುಳುವುದೂ ನನ್ನಿಂದಾಗಲಿಲ್ಲ.

ಆಹಾರ ತೆಗೆದುಕೊಂಡ ಮೇಲೆ ಗಾಂಧಿಜಿ ನನ್ನ ಕೈಗೆ ನೀರುಹಾಕಿದರು. ನಾನು ಬೇಡವೆಂದೆ; ಆದರೆ ಅವರು ಬಿಡಲಿಲ್ಲ. ನಾನುಂಡ ಎಲೆಯನ್ನು ಗಾಂಧಿಜಿಯವರ ಎಲೆಯ ಸಂಗಡ, ಅವರ ಜೀವನದ ದಿವ್ಯ ಸಹಭಾಗಿನಿಯೇ ಎತ್ತಿಕೊಂಡು ಹೋಗಿ ಬಿಸುಟರು! ಆಗ ನನಗಾದ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ!

ಮಧ್ಯಾಹ್ನದ ಮೇಲೆ ನಾವು ಬಹಳ ದೀರ್ಘ ಸಂಭಾಷಣೆ ಮಾಡಿದೆವು. ನಾನು ನನ್ನನ್ನೇ ಪೂರ್ಣವಾಗಿ ಮಹಾತ್ಮರ ಕೈಯಲ್ಲಿ ಅರ್ಪಿಸಿದೆ. ನಾವು ಮಾತನಾಡಿದ ಹಲವು ವಿಷಯಗಳಲ್ಲಿ ನನಗೆ ಸತ್ಯಾಗ್ರಹ ಮಾಡಲು ಅನುಮತಿ ಕೇಳುವ ವಿಷಯವೂ ಒಂದಾಗಿತ್ತು ಅವರು ಆ ವಿಷಯವಾಗಿ ಕೊಟ್ಟ ಉತ್ತರವು ಈಗಾಗಲೇ ಮಹಾದೇವ ದೇಸಾಯಿಗಳ ಮೂಲಕ ಅಖಿಲ ಜನತೆಗೆ ತಿಳಿದಿದೆ ಗಾಂಧಿಜಿಯವರ ಸೂಚನೆ ಪಡೆದು ಅದ ಪ್ರಕಟಣೆಗೆ ಕೊಡಲಾಯಿತು

ಮರುದಿನ ಬೆಳಿಗ್ಗೆ ಗಾಂಧಿಜಿ ಆಶ್ರಮವಾಸಿಗಳನ್ನು ಕರೆದು, ಬಳಿಯ ಹೊಲವೊಂದರಲ್ಲಿ ಕಟ್ಟುವಿಗೆ ಸಿದ್ಧವಾದ ಬೆಳೆಯನ್ನು ಕೊಯ್ಯಲು ಹೇಳಿದರು ಪ್ರತಿದಿನ ಆಶ್ರಮವಾಸಿಗಳು ಎಷ್ಟು ಗಜ ನೂಲು ತೆಗೆಯುತ್ತಾರೆ ಎಂಬ ವಿಷಯವಾಗಿ ಅವರು ತಿಳಕೊಳ್ಳುತ್ತಾರೆ ಅದು ಎಲ್ಲದಕ್ಕಿಂತಲೂ ಸ್ವಾರಸ್ಯವಾದೊಂದು ವಿಷಯವು.

೨೬ನೆಯ ತಾರೀಕಿಗೆ ಮಹಾತ್ಮಾಜಿ ಅಲ್ಲಾಬಾದಿಗೆ ಕಮಲಾನೆಹರು ಸ್ಮಾರಕ ವೈದ್ಯಾಲಯದ ಉದ್ಘಾಟನೆಗಾಗಿ ತೆರಳುವವರಿದ್ದರು ಆ ಸಮಯದಲ್ಲಿ ಅವರೊಡನಾಡಿಯಾಗಿ ಹೋಗುವ ಸಂದರ್ಭವು ನನಗೆ ನನ್ನ ಪುಣ್ಯದಿಂದ ದೊರೆಕಿತು ಎಂದು ನಾನು ಭಾವಿಸಿಕೊಳ್ಳುತ್ತೇನೆ

ಈ ಸುದ್ದಿ ಬೆಂಕಿಯಂತೆ ಹರಡಿತು ನಾಗಪುರ ಜಿಲ್ಲೆಯ ಜನರು ಸಾವಿರಾರು ಮಂದಿ ಸ್ಟೇಶನಿನಲ್ಲಿ ಒಟ್ಟು ಕೂಡಿದರು. ಪ್ಲೇಟ್ ಫಾರ್ಮಿನಲ್ಲಿ ಜನಸಂದಣಿ ಕಿಕ್ಕಿರಿದಿತ್ತು ಹೆಂಗಸರು, ಗಂಡಸರು ಮಕ್ಕಳು, ಮಹಾತ್ಮರನ್ನು ನೋಡಿ ಘೋಷ್ಟ ಸ್ವರದಿಂದ, ಮಹಾತ್ಮಾ ಗಾಂಧಿ ಕೀ ಜೈ ಎಂದು ಜಯಘೋಷ ಮಾಡಿದರು. ಯೂರೋಪಿಯನ್ ಗೃಹಸ್ಥ ಗೃಹಿಣಿಯರೂ ತಮ್ಮ ಪೇಟಾಗಳನ್ನು ಎತ್ತಿ ಹಿಡಿದು 'ಅರ್ಧನಗ್ನ ಫಕೀರ'ನನ್ನು ಗೌರವಿಸಿದರು

ನಾವು ಒಂದು ಪೇಸೆಂಜರ್ ಗಾಡಿಯಲ್ಲಿದ್ದೆವು ಪ್ರತಿಯೊಂದು ಸ್ಟೇಶನಿನಲ್ಲಿಯೂ ಗಾಡಿ ನಿಂತಿತು ಪ್ರತಿಯೊಂದೆ ಕಡೆಯಲ್ಲಿಯೂ ಜನಸಂದಣಿ ಕಿಕ್ಕಿರಿದು ತುಂಬಿತ್ತು ಹೆಚ್ಚಾಗಿ ಹಳ್ಳಿಗಳ ಜನರೇ ಎಲ್ಲೆಲ್ಲೂ ತೋರಿಬರುತ್ತಿತ್ತು. 'ಭಾರತದ ಅನಭಿಷಕ್ತ ಸಾಮ್ರಾಟ'ನಿಗೆ ಸತ್ಕಾರವನ್ನರ್ಪಿಸಲು ಅವರು ಬಂದು ನೆರೆಯುತ್ತಿದ್ದರು.

ಕೆಲವು ಸ್ಟೇಶನುಗಳಲ್ಲಿ ಚಿಕ್ಕ ಮಕ್ಕಳೂ ಕೂಡಾ ತೊದಲ್ನುಡಿಗಳಿಂದ ಮಹಾತ್ಮಾ ಗಾಂಧಿ ಕಿ ಜೈ ಎಂದು ಹೇಳುತ್ತಿದ್ದವು ಮಕ್ಕಳ ಆ ಮಾದರಿಯು ಬಹಳ ಸವಿಯಾಗಿತ್ತು ಇದು ನೈಸರ್ಗಿಕವಾಗಿತ್ತು ಪ್ರತಿಯೊಂದು ಜೀವಜಂತುವೂ ಆ ಮಹಾ ಮಾಯಗಾರನ ಕುರಿತು ತಿಳಿಯದಿದ್ದರೂ ಅವನೆಡೆಗೆ ಆಕರ್ಷಿತವಾಗುತ್ತಿತ್ತು. ಆ ಮಹಾ ಪುರುಷನ ವ್ಯಕ್ತಿತ್ವವು ಅದ್ಭುತವಾದುದು, ಯಾವವು ಪರುಷ ಪಾಷಾಣಗಳೆಂದು ನಾವು ನೆನಸಿದ್ದೆವೋ ಅಂತವುಗಳು ಆತನ ಮಂದಸ್ಮಿತದ ಮುಂದೆ ಕರಗಿ ಹೋಗುತ್ತಿತ್ತು. ಜಗತ್ತಿನ ಮಹಾಪುರುಷನಾದ ಆತನ ಶಕ್ತಿ ಅಗಾಧವಾಗಿತ್ತು

ಗಾಂಧಿಜಿ ಯಾವಾಗಲೂ ಕಾರ್ಯಾಸಕ್ತರಾಗಿಯೇ ಇರುತ್ತಾರೆ. ಚರಕ ತಿರುಗಿಸುವುದು, ಓದುವುದು, ಪ್ರಾಮುಖ್ಯ ವಿಷಯಗಳ ಕುರಿತು ಚರ್ಚಿಸುವುದು ಹೀಗೆ ಅಮೂಲ್ಯವಾದ ಉದ್ದೇಶಗಳಲ್ಲಿ ಸಮಯ ವ್ಯಯಿಸುತ್ತಾರೆ. ರೈಲಿನಲ್ಲಾದರೂ ನಮ್ಮಂತೆ ವ್ಯರ್ಥ ಹರಟೆಯಿಂದ ಹೊತ್ತು ಕಳೆಯುವುದೇ ಇಲ್ಲ ದಾರಿಯುದ್ದಕ್ಕೂ ಗಾಂಧಿಜಿ ಮುಗುಳ್ನಗುತ್ತಾ ನಮಸ್ಕಾರ ಹೊಡಿ ತನ್ನ ಪ್ರಿಯಕರವಾದ ಉದ್ದೇಶವಾದ ಹರಿಜನರಿಗಾಗಿ ಎರಡು ಕೈಗಳನ್ನೊಡ್ಡಿ ಹಣ ಬೇಡುತ್ತಿದ್ದರು ಕೈಯಲ್ಲಿ ಹತ್ತು ರೂಪಾಯಿ ನೋಟು ಬಿದ್ದರೂ, ಒಂದೇ ಒಂದು ಪೈಸೆ ಬಿದ್ದರೂ ಅವರ ಮುಖದಲ್ಲಿ ಒಂದೇ ಒಗೆಯ ದಿವ್ಯಸ್ಮಿತವೇ ಅರಳುತ್ತಿತ್ತು ನಾವು ರೈಲು ಗಾಡಿಯಲ್ಲಿ ಹೋಗುತ್ತಿದ್ದಂತೆ ಮುಂಚೆ, ನಾವು ಕುಳಿತ ಮೂರನೆಯ ತರಗತಿಯ ಕೋಣೆಯೊಳಗ ಸೋರುವೂ ಇತ್ತು

ಜೆಹಾಂಗಿರಿನಲ್ಲಿ ಇಳಿದೆವು. ಅಲ್ಲಿ ಹಲವು ಮಂದಿ ಬಂದಿದ್ದರು. ದೋಣಿಯ ಮೂಲಕ ನೆರ್ಬುದಾ ನದಿಯನ್ನು ದಾಟಿ ಸೇಟ್ ರತನ್ ಸೀ ಹಿರ್ಜಿಯವರಲ್ಲಿ ಉಳಕೊಂಡೆವು ದಾರಿಯುದ್ದಕ್ಕೂ ಜನರು ಸಾವಿರ ಸಾವಿರ ಹಿಂಬಾಲಿಸುತ್ತಿದ್ದರು ಹಿರ್ಜಿಯವರ ಮನೆಯ ಬಳಿಯಂತೂ ಸೂಜಿಯೂರ ಷಷ್ಟು ಸ್ಥಳವಿರಲಿಲ್ಲ

ಗಾಂಧಿಜಿಯವರ ದರ್ಶನವೇ ಒಂದು ಮಾಂತ್ರಿಕತೆಯುಳ್ಳದ್ದು ನಾವು ಇಳಿ ಮನೆಯಲ್ಲಿಯೇ ಕಮಲಾ ನೆಹರು ಸ್ಮಾರಕಕ್ಕಾಗಿ ಹಣ ಸುರಿದದ್ದು ನೋಡಿದರೆ ಅದು ತಿಳಿದು ಬರಬಹುದಾಗಿತ್ತು ಗಾಂಧಿಜಿ ಹಳ್ಳಿಯಲ್ಲಿರಲಿ, ಪಟ್ಟಣದಲ್ಲಿರಲಿ, ಜನರು ಅಲ್ಲಿಗ ಆಕರ್ಷಿತರಾಗುತ್ತಾರೆ, ಒಂದು ರೀತಿಯಿಂದ ನೋಡಿದರೆ ಅದರ ಸನ್ನಿಧಿಯೆಂಬುದೇ ಒಂದು ಮಸೀದಿ, ಚರ್ಚ್, ಅಥವಾ ದೇವಾಲಯಕ್ಕಿಂತಲೂ ವಿಶೇಷವಾದುದು ಹಿಂದೂ ಕ್ರಿಶ್ಚಿಯನ್ ಮುಸ್ಲಿಮರೆನ್ನದೆ ಎಲ್ಲರೂ ಅವರ ದರ್ಶನಕ್ಕಾಗಿ ಆತುರಆತುರದಿ ಬರುತ್ತಿದ್ದರು ಹಲವಾರು ಸಂಗತಿಗಳಲ್ಲಿ ನಾನು ಒಂದು ಘಟನೆಯನ್ನು ಎಂದೆಂದೂ ಮರೆಯಲಾರೆನು

ಒಬ್ಬ ದೊಡ್ಡ ಮಾರ್ವಾಡಿ ವ್ಯಾಪಾರಿ ಒಂದು ಉಪಾಹಾರ ಪತ್ರದಲ್ಲಿ ಆತನು ಒಹ ಪಶ್ಚಯರ್ವಂನಿದ್ದೇಶ, ಕಮಲಾ ನೆಹರು ಸ್ಮಾರಕ ವೈದ್ಯಾಲಯಕ್ಕೆ ೩,೫೦೦ ರೂಪಾಯಿಗಳನ್ನು ಕೊಡುವುದಾಗಿ ಬರೆದಿದ್ದ. ಗಾಂಧಿಜಿಯವರು ಆತನ ದರ್ಶನವನ್ನು ಇಚ್ಛಿಸಿದರು, ಕೂಡಲೇ ಆತನು ಸಂಖ್ಯೆಯನ್ನು ಇಮ್ಮಡಿಸಿಬಿಟ್ಟನು.

"ಗಾಂಧಿಜೀಕಿ ಜೈ" ಎಂಬ ಜಯಘೋಷವು ಮುಗಿಲು ಮುಟ್ಟುತಿತ್ತು ನಾವು ಕಟ್ನಿಗೆ ಮೈಲು ಹತ್ತಿದೆವು. ದೆಲ್ಲೂ ನಿಲ್ಲದ ಸ್ಥಳಗಳಲ್ಲಿಯೂ ಜನರು ಸ್ಟೇಶನಿನ ಬಳಿ ಕಾಯುತ್ತಾ ನಿಂತಿದ್ದರು, ಅವರು ಮರಗಳ ಮೇಲೆ, ಮನೆಗಳ ಮೇಲೆ ಎತ್ತರ ಎತ್ತರಗಳಲ್ಲಿ ನಿಂತು ಆ ಮಹಾಸಂತನನ್ನು ನೋಡುತ್ತಿದ್ದರು

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines Unique Banking facilities to Businessmen and interested Public
Apply for particulars—
K. R. GURU, *Managing Director*

ಫ್ರಾನ್ಸಿನಲ್ಲಿ ಕ್ರಾಂತಿಯ ಕಿಡಿ ಉರಿಯುತ್ತಿದೆ!

ವಿಚಿ ಸರಕಾರಕ್ಕೆ ಫ್ರೆಂಚರ ವಿರೋಧ ಬೆಳೆಯುತ್ತಿದೆ

ಸ್ವಿಸ್ ಪತ್ರಿಕೆಗಳ ಸಿಂಹಾವಲೋಕನ

ಫ್ರಾನ್ಸಿನ ಶೇಂಸ ಕನಕದ ಒಂದು ಬಹು ದೊಡ್ಡ ಪ್ರದೇಶವನ್ನು ಜರ್ಮನಿಯು ಪಶುಬಲದ ಮೂಲಕ ತನ್ನ ಅಧೀನ ಮಾಡಿಕೊಳ್ಳಲಿಕ್ಕೆ ಸಮರ್ಥವಾಗಿದೆಯಾದರೂ, ಅದರ ಆತ್ಮಬಲವನ್ನು ಗೆಲ್ಲಲಿಕ್ಕೆ ಜರ್ಮನರು ಇನ್ನೂ ಅಸಮರ್ಥರಾಗಿದ್ದಾರೆ. ಜನತೆಯ ಹೃದಯದಲ್ಲಿ ನಾಝಿಗಳ ವಿರುದ್ಧ ಕ್ರಾಂತಿಯ ಕಿಡಿಯು ಹೊಗೆಯಾಡುತ್ತಲಿದೆ. ಅದು ಯಾವ ಸಮಯಕ್ಕೂ ಉರಿದು ಜರ್ಮನರೊಡನೆ ಫ್ರೆಂಚರು ತಮ್ಮ ಸೋಲಿನ ಪ್ರತೀಕಾರ ತಕ್ಕೊಳ್ಳಬಹುದೆಂದು, ಯಾವ ಪಕ್ಷಕ್ಕೂ ಸೇರದ ಸ್ವಿಜರ್ಲೆಂಡಿನ ಪತ್ರಿಕೆಗಳು ಬರೆಯತೊಡಗಿರುವವು. ಪರಿಸ್ಥಿತಿಯ ಸತ್ಯವನ್ನು ಮುಚ್ಚಿಡಲಿಕ್ಕೆ ನಾಝಿಗಳಿಂದ ಪ್ರೇರಿತವಾದ ಫ್ರೆಂಚ ಪತ್ರಿಕೆಗಳು ಭಗೀರಥ ಪ್ರಯತ್ನ ಮಾಡಿರುವವು. ಪರಂತು ಅವುಗಳೆಲ್ಲ ಒಂದೇ ರೀತಿಯಿಂದ ಅಸಫಲವಾಗಿರುವವು.

ನಾಝಿಗಳಿಗೆ ಫ್ರೆಂಚರ ಸಹಾಯ

ನಾಝಿಗಳಿಗೆ ಫ್ರೆಂಚರ ಸಹಾಯವೆಂಬುದು ಆಕಾಶಕುಸುಮದಂತೆ ಭ್ರಮಕಾರಿಯಾಗಿರುವದು. ಫ್ರಾನ್ಸಿನಲ್ಲಿ ಯಾರಿಗೂ ನಾಝಿಗಳ ಅಥವಾ ಅವರ ತತ್ವಸಿದ್ಧಾಂತಗಳ ಮೇಲೆ ಸಹಾನುಭೂತಿ ಇರುವದಿಲ್ಲ. ಕೇವಲ ಎರಡು ಪಕ್ಷಗಳು ಮಾತ್ರ ನಾಝಿಗಳೊಡನೆ ಸಹಕರಿಸುತ್ತಲಿವೆ; ಅವು ಯಾವುವೆಂದರೆ— ನಾಝಿಗಳ ಗೂಢಚಾರ ದಳ ಮತ್ತು ಲಾವಲ್, ಬೊನೆಟರ ಸಂಚಿನವರು. ವಿಚಿ ಸರಕಾರದ ಎಲ್ಲರೂ ನಾಝಿಗಳಿಗೆ ತಲೆಬಗ್ಗಿಸಿರುವದಿಲ್ಲ. ಆ ಸರಕಾರದ ಮಂತ್ರಿಮಂಡಲದಲ್ಲಿ ನಾಝಿ ನಿರಂಕುಶ ವರ್ತನೆಯನ್ನು ವಿರೋಧಿಸುವ ಪ್ರಬಲ ಪಕ್ಷವಿದೆ. ಲಾವಲ್ ಬೊನೆಟರು ಸ್ವಾರ್ಥವಶರಾಗಿ ಫ್ರಾನ್ಸನ್ನು ಜರ್ಮನಿಗೆ ಮಾರಿಬಿಡುವ ಘೋರ ಸಂಚು-ಪ್ರಯತ್ನಗಳನ್ನು ಮಾಡಿರುವದೂ, ಅವರಿಂದ ಪ್ರೇರಿತವಾದ ಫ್ರೆಂಚ ಪತ್ರಿಕೆಗಳು ನಾಝಿಗಳ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕಿ ಕುಣಿಯುತ್ತಿರುವದೂ ನಿಜ. ಪರಂತು ಫ್ರೆಂಚ ಜನರು ಮಾತ್ರ ಇವರ ಬಹುಕೃತವೇಶವನ್ನು ಚೆನ್ನಾಗಿ ತಿಳಿದಿದ್ದಾರೆ.

ಜನರ ಅಂತರಂಗ

ಫ್ರೆಂಚ ಜನರ ಅಂತರಂಗದ ಭಾವನೆಗಳೇನಿರುವವೆಂದು ತಿಳಿಯಬೇಕಾದರೆ ಅವರ ಒಡನಾಡಿಗಳಾಗಿರಬೇಕು. ಹೀಗೆ ಒಡನಾಡಿಗಳಾಗಿದ್ದ ಸ್ವಿಸ್ ಪತ್ರಿಕೆಗಳ ವಾರ್ತಾದಾಯಕರೆ— ಅವರ ಹೃದಯ ಭಾವನೆಗಳನ್ನು ತಮ್ಮ ಪತ್ರಿಕೆಗಳಿಗೆ ಬರೆದು ತಿಳಿಸಿದ್ದಾರೆ. ಫ್ರೆಂಚ ಜನರು ಲಾವಲ್ ಬೊನೆಟರಿಗೆ ಘೋರ ವಿರೋಧವಾಗಿದ್ದಾರೆ. ಈ ಇಬ್ಬರು ಧೂರ್ತರು ಫ್ರಾನ್ಸಿಗೆ ಮಾಡಿದ ವಂಚನೆ-ಮೋಸಗಳಿಗಾಗಿ ಅವರು ಹಲ್ಲು ಕಡಿಯುತ್ತಿರುವರು.

ನಾಝೀ ಸಿದ್ಧಾಂತಗಳ ವಿರೋಧಿಯಾಗಿರುವ ವಿಚೀ ಸರಕಾರದೊಳಗಿನ ಮುಖಂಡರೇ ಜನರ ಯಥಾರ್ಥ ಮುಖಂಡರಾಗಿದ್ದಾರೆ. ಇದ ಜರ್ಮನಿಗೂ ಹಿಟ್ಲರನಿಗೂ ತಿಳಿದಿದೆ. ಆದ್ದರಿಂದ ತನ್ನ ಅನ್ಯಾಯದ ಆಜ್ಞೆಗಳನ್ನು ಬಗ್ಗಿ ಶಿರಸಾವಹಿಸಲಿಕ್ಕೆ ಹಿಟ್ಲರನು ವಿಚಿ ಸರಕಾರದ ಮೇಲೆ ಪ್ರಚಂಡ ಬಲಾತ್ಕಾರ ಹಾಕಿದನಾದರೂ, ಇಂಗ್ಲಾಂಡಿನ ಮೇಲೆ ಯುದ್ಧವನ್ನು ಹೂಡಲಿಕ್ಕೆ ವಿಚಿ ಸರಕಾರವನ್ನು ಬಹಳ ಒತ್ತಾಯ ಮಾಡಿದನಾದರೂ, ಈ ಸರಕಾರವು ಹಿಟ್ಲರನ ಬಲಾತ್ಕಾರ-ಒತ್ತಾಯಗಳನ್ನು ಯಶಸ್ವಿಯಾಗಿ ವಿರೋಧಿಸಲಿಕ್ಕೆ ಸಮರ್ಥವಾಗಿದೆ; ಮತ್ತೆ ಹಿಟ್ಲರನಾದರೂ ಮುಖಭಂಗ ಮಾಡಿಕೊಂಡು ಸುಮ್ಮನಿರಬೇಕಾಯಿತು.

ವಿಚಿ ಸರಕಾರಕ್ಕೆ ವಿರೋಧ

ಸಾಮಾನ್ಯ ಸಂಗತಿಗಳಲ್ಲಿ ಕೂಡ ನಾಝಿಗಳಿಗೆ ಅನುಕೂಲವಾಗಿ ವಿಚಿ ಸರಕಾರವು ನಡಕೊಳ್ಳುವದು ಫ್ರೆಂಚರಿಗೆ ಸಮ್ಮತವಾಗಿಲ್ಲ. ಬಹಳ ಮೃದುಸ್ವಭಾವದ ಪತ್ರಿಕೆಗಳು ಕೂಡ ವಿಚಿ ಸರಕಾರವು ನಾಝಿಗಳಿಗೆ ಬಗ್ಗಿದ್ದು ಹೆಚ್ಚಾಯಿತು ಎಂದು ದೂರುತ್ತವೆ. ವಿಜಯಗರ್ವದಿಂದ ಉನ್ಮತ್ತನಾದ ಜರ್ಮನಿಯೊಡನೆ ಸಹಕರಿಸಿ ನಡೆಯುವದೆಂದರೆ, ಅದರ ಗುಲಾಮತನವನ್ನು ಒಪ್ಪಿಕೊಂಡಂತೆಯೇ ಸರಿ ಎಂಬುದು ಫ್ರೆಂಚರ ಸರ್ವಸಾಧಾರಣ ಅಭಿಪ್ರಾಯವಾಗಿದೆ.

ಸೋಲಿನಲ್ಲಿ ಗೆಲು

ಜರ್ಮನ ನಾಝಿಗಳೊಡನೆ ಯುದ್ಧ ಹೂಡಿ ಫ್ರೆಂಚರು ಸೋತರಾದರೂ, ಈ ಸೋಲಿನಲ್ಲಿ ಅವರು ಗೆಲುವನ್ನು ಕಾಣಲಾರಂಭಿಸಿರುವರು. ಸೋಲುವದಕ್ಕಿಂತಲೂ, ಸೋತು ಸ್ವಾಮಿತ್ವವನ್ನು ಒಪ್ಪಿಕೊಳ್ಳುವದು, ಅಥವಾ ತನ್ನ ಮರ್ಯಾದೆಯನ್ನು ಮಾರಿ ಪಶುತುಲ್ಯ ಜೀವನವನ್ನು ನಡೆಸುವದು ಹೆಚ್ಚು ಹೀನವಾಗಿದೆ; ಫ್ರೆಂಚ ಸಂಸ್ಕೃತಿ ಮತ್ತು ರೀತಿನೀತಿ ವೈಶಿಷ್ಟ್ಯಗಳಿಗೆ ಭಂಗ ತರುವ ನಾಝಿಗಳ ಪ್ರತಿಯೊಂದು ಸಿದ್ಧಾಂತ-ಪ್ರಯತ್ನಗಳನ್ನು ಪ್ರಾಣ ಕೊಟ್ಟಾದರೂ ವಿರೋಧಿಸಬೇಕೆಂದು ಎಲ್ಲಾ ಫ್ರೆಂಚ ಪತ್ರಿಕೆಗಳು ಒಂದೇ ಪಲ್ಲವಿಯನ್ನು ಹಾಡುತ್ತವೆ. ನಾಝಿಗಳಿಗೆ ಅಧೀನವಾದ ಫ್ರಾನ್ಸಿನ ಬಂದರು-ಪಟ್ಟಣಗಳ ಮೇಲೆ ಬ್ರಿಟಿಷ ಯುದ್ಧವಿಮಾನಗಳು ಬಂದು ಬಾಂಬುಗಳನ್ನು ಸುರಿಯುತ್ತವೆ. ಪಟ್ಟಣಕ್ಕೆ ಪಟ್ಟಣಗಳು ಧ್ವಂಸವಾಗುತ್ತವೆ. ಒಂದು ಸಮಯ ಸ್ನೇಹದಲ್ಲಿದ್ದ ಬ್ರಿಟಿಷರೇ ಈಗ ಶತ್ರುಗಳಾಗಿ ಧ್ವಂಸಕಾರ್ಯದಲ್ಲಿ ತೊಡಗಿರುವರು. ಪ್ರತಿಯೊಬ್ಬನಿಗೂ ಅಂತರಂಗದಲ್ಲಿ ಅಸಹನೀಯ ವೇದನೆಯನ್ನು ಉಂಟುಮಾಡುತ್ತದೆ. ಆದರೆ ಈ ಪ್ರದೇಶಗಳು ಹಿಟ್ಲರನ ವಶದಲ್ಲಿರುವಷ್ಟು ಕಾಲ ಬ್ರಿಟಿಷರು ಹೀಗೆ ಮಾಡಿ ಹಿಟ್ಲರನ ಶಕ್ತಿಯನ್ನು ಮುರಿಯಬೇಕಾದ್ದು ಅನಿವಾರ್ಯವಾಗಿದೆ ಎಂದು ಅವರು ಬಲ್ಲರು. ಫ್ರಾನ್ಸು ಸೋತ ಮೇಲೆ ಬ್ರಿಟನೂ ಸೋಲುವದು ಎಂದು ಒಂದು ಸಮಯ ಫ್ರೆಂಚರು ಊಹಿಸಿದ್ದರು. ಆದರೆ ಫ್ರೆಂಚ ಬಂದರು ಮತ್ತು ಮಿಲಿಟರಿ ಠಾಣೆಗಳ ಮೇಲೆ ಆಗುವ ಬ್ರಿಟಿಷ ಹಲ್ಲೆಗಳು ಈ ಫ್ರೆಂಚರ ಕಣ್ಣುಗಳನ್ನು ತೆರೆಸಿವೆ. ಹಿಟ್ಲರನ ಪ್ರತಿಪಕ್ಷದಲ್ಲಿ ಬ್ರಿಟಿಷರ ವಿರೋಧವು ಹೇಗೆ ಯಶಸ್ವಿಯಾಗುತ್ತಾ ಬರುತ್ತಲಿದೆ ಎಂಬುದರ ಅನುಭವವನ್ನು ಅವರು ಮಾಡುತ್ತಲಿದ್ದಾರೆ. ನಿರಾಶೆಯು ಗಾಢಾಂಧಕಾರದಲ್ಲಿ ಫ್ರೆಂಚರಿಗೆ ಈ ಅನುಭವವೇ ಆಶೆಯ ಬೆಳಕನ್ನು ಬೀರಿದೆ. ಬ್ರಿಟಿಷರ ಯಶಸ್ಸಿನಲ್ಲಿ ಅವರು ತಮ್ಮ ಸ್ವಾತಂತ್ರ್ಯವನ್ನು ನೋಡುತ್ತಿದ್ದಾರೆ.

ಆರಾಧ್ಯಮೂರ್ತಿ ಗೋಲೆ

ಬ್ರಿಟಿಷರೊಡನೆ ಸೇರಿಕೊಂಡು ಸ್ವತಂತ್ರ ಫ್ರೆಂಚರ ಪರವಾಗಿ ಜರ್ಮನರೊಡನೆ ಹೋರಾಡುತ್ತಿರುವ ಜನರಲ್ ಡಿ. ಗೋಲೆಯು ಫ್ರೆಂಚರ ಆರಾಧ್ಯಮೂರ್ತಿಯಾಗಿರುವನು. ಮೊದಮೊದಲು ಅವನ ವಿಷಯವಾಗಿ ಫ್ರಾನ್ಸಿನಲ್ಲಿ ಬಹಳ ಅಪಪ್ರಚಾರವಾಯಿತು. ಆದರೆ ಈಗ ಅವನು ಅಲ್ಲಿ ಧವಳಕೀರ್ತಿಯನ್ನು ಸಂಪಾದಿಸಿದ್ದಾನೆ. ಅವನೇ ಸೋತುಬಿದ್ದ ಫ್ರೆಂಚರಲ್ಲಿ ಹೊಸ ಉತ್ಸಾಹ, ಹೊಸ ಸ್ಫೂರ್ತಿಯನ್ನು ಕೊಡುತ್ತಿದ್ದಾನೆ; ಜೀವನ್ಮೃತ ಫ್ರಾನ್ಸಿಗೆ ಹೊಸ ಜೀವವನ್ನು ತರುತ್ತಿದ್ದಾನೆ. ಅವನ ಮೂಲಕ ಫ್ರಾನ್ಸಿನಲ್ಲಿ ಕ್ರಾಂತಿಯ ಕಿಡಿಯು ಹೊಗೆಯಾಡುತ್ತಿದೆ. ಅದು ಯಾವ ಸಮಯಕ್ಕಾದರೂ ಪ್ರಜ್ವಲಿಸಿ ಉರಿದು, ಫ್ರಾನ್ಸನ್ನು ಪುನಃ ಪೂರ್ವಕ ಗೌರವಮಯ ಉಚ್ಚಸ್ಥಿತಿಗೆ ತರಬಹುದು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ, ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ—

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ. ಮಹಮ್ಮದಾಲಿ ರೋಡ್, ಮಂಗಳೂರು.

ಸ್ವದೇಶಾಭಿಮಾನಿಗೆ

'ಪಿತಾಜೀ, ಪಿತಾಜೀ' ಗಾಬರಿಗೊಂಡ ಯುವಕನು ತಂದೆಯನ್ನು ಬಿಗಿದಪ್ಪಿದನು.

'ಏನಾಯಿತು ಮಗು?' ತಂದೆಯು ಮಗನ ಕೂದಲುಗಳನ್ನು ತನ್ನ ಶಿಥಿಲ ಹಸ್ತದಿಂದ ಸವರುತ್ತ ಪ್ರಶ್ನಿಸಿದನು.

'ಸ್ವಪ್ನ, ಭಯಂಕರ! ರಕ್ತ!' ಬೆಚ್ಚಿಬೀಳುತ್ತ ಹುಡುಗನುತ್ತರಿಸಿದನು.

ತಂದೆಯು ಪ್ರೀತಿಯಿಂದ ಮಗನನ್ನು ಬಿಗಿದಪ್ಪಿ ಸಮಾಧಾನಿಸಿದನು. ಕೆಂಪಾಗಿದ್ದ ಹುಡುಗನ ಕಣ್ಣುಗಳು ಕ್ಷಣಹೊತ್ತಿನಲ್ಲಿ ಪೂರ್ವಸ್ಥಿತಿಗೆ ಬಂದುವು.

'ನಾನು ಒಂದು ದೊಡ್ಡ ಭಯಾನಕ ಸ್ವಪ್ನವನ್ನು ನೋಡಿದೆನಪ್ಪಾ' ತಡೆತಡೆಯುತ್ತ ಯುವಕನು ಮಾತನಾಡತೊಡಗಿದನು "ಒಬ್ಬ ಜೀರ್ಣಾಂಗಳಾದ ವೃದ್ಧೆಯು ನನ್ನ ಸಮೀಪದಲ್ಲಿ ನಿಂತು ಎಚ್ಚರಿಸುತ್ತಿದ್ದಳು. ಅವಳ ಮುಖ ಚಹರೆಯು ಬಹು ವಿಕೃತ ಮತ್ತು ಭಯಪಡಿಸುವಂತಹುದಾಗಿತ್ತು. ಕಣ್ಣಿನಿಂದ ರಕ್ತವಿಳಿಯುತಿತ್ತು. ಹಲವು ವರ್ಷಗಳಿಂದ ಎಣ್ಣೆಯನ್ನು ಕಾಣದ ಕೂದಲು ಸಿಕ್ಕಾಬಟ್ಟೆ ಚದರಿದ್ದುವು. ಮೈಯಲ್ಲೆಲ್ಲ ಗೊಬ್ಬರ ತುಂಬಿತ್ತು. ಶರೀರವು ಒಣಗಿದ ಮರವಾಗಿ ಕೈಕಾಲುಗಳು ಅದರ ಒಣಗಿದ ಕೊಂಬೆಗಳಂತಿದ್ದುವು. ಮೆಲ್ಲ ಮೆಲ್ಲನೆ ನನ್ನನ್ನೆಚ್ಚರಿಸುತ್ತ ಅವಳೆಂದಳು. 'ಯುವಕಾ, ವಿಶ್ರಾಂತಿಯ ನಿದ್ದೆಯಲ್ಲಿರುವೆ. ಸ್ವಲ್ಪವೂ ಈ ಕಡೆ ನೋಡಬಾರದೆ? ನಿನ್ನ ನಾಲ್ಕೂ ದಿಕ್ಕುಗಳಲ್ಲೇನು ನಡೆಯುತ್ತದೆ. ಕಣ್ಣನ್ನಾದರೂ ತೆರೆಯಬಾರದೆ? ದೇಶದಲ್ಲೇನು ನಡೆಯುತ್ತದೆ? ನಾನು ನಿನ್ನ ತಾಯಿ. ಹೀಗೇಕೆ ನನ್ನನ್ನು ಭಯಗೊಂಡವನಂತೆ ನೋಡುತ್ತಿರುವೆ? ನಿನ್ನ ತಾಯಿಗೂ ಹೆದರುವಿಯಾ? ಥೂ! ಛೀ! ನನ್ನೀ ರೂಪವನ್ನು ನೋಡಿ ಹೆದರಬಹುದಲ್ಲವೇ? ನಿಜ, ಆದರೆ ನನ್ನೀ ರೂಪವು ಹೀಗಾಗಲು ಕಾರಣ ಯಾರು? ವಿಚಾರಮಾಡು, ನೀನು ಇದರ ಕಾರಣನು, ನೀನೇ ಆಗಿರುವೆ. ಯುವಕನಾದ ನೀನು ಸುಖನಿದ್ರೆಯಲ್ಲಿರುವೆ. ಆಲಸ್ಯದ ದೆಸೆಯಿಂದ ನಿನ್ನ ತಾಯಿಗೇನು ಕಷ್ಟ ಎಂದಿರುವುದೆಂದು ನೋಡುವುದು ಕೂಡಾ ಇಲ್ಲ. ಇದು ಸರಿಯೆ ಮಗು? ತಾಯಿಯು ಎನ್ನ ವೈರಿ ಶತ್ರುಗಳ ಕಟ್ಟಿಗೆ ಹೇರುವಾಗ ಪುತ್ರನು ಸುಖನಿದ್ರೆಗೈಯುತ್ತಿರುವುದ? ನೋಡು ಮಗೂ! ಸ್ವಲ್ಪ ನನ್ನ ಕಡೆ ನೋಡು.'

'ನಾನವಳ ಕಡೆಗೆ ನೋಡಿದೆನು. ಅವಳ ಕಣ್ಣುಗಳು ಹೊಳೆಯುತ್ತಿದ್ದವು. ನೋಡು ನೋಡುತ್ತಿದ್ದಂತೆ ಅವು ಕಪ್ಪಾಗಿ ಬಿಟ್ಟವು. ನನಗೆ ತಿಳಿಯದಂತೆ ನಾನಾ ಕೆಯು ಬಳಿ ಹೋಗುತ್ತಿದ್ದಂತೆ ಭಾಸವಾಯಿತು. ಅವಳು—'ಯುವಕಾ ಏಳು, ಜಾಗ್ರತನಾಗು, ಶಕ್ತಿಸಂಚಯ ಮಾಡು. ನಿನ್ನನ್ನು ನೀನು ಗುರುತಿಸು. ನೀನೇನಾಗಿದ್ದೆ? ಯೋಚಿಸು. ನನ್ನನ್ನಂತೂ ನೋಡುವುದಿಲ್ಲ. ಬೇಡ ನೀನ್ನನಾದರೂ ನೋಡಿಕೋ. ನಿನ್ನ ಜೀವನವು ಹೇಗೆ ಪ್ರಸ್ತುತವಾಗಿ ಬಾಳುತ್ತಿದೆಯೆಂಬುದನ್ನು ತಿಳಿ. ನಿನ್ನ ಹಿತದ ಮಾತನ್ನಾದರೂ

ಈ ವಾರದ ಕತೆ:

ದೇಶಭಕ್ತ

(ಜಪಾನೀ ಕತೆಯ ಆಧಾರದಿಂದ)

ಲಕ್ಷಿಸು. ಇದೇ ನಿನ್ನ ದೇಶದ ಕೂಗು. ನಿನ್ನ ಮಾತೆಯ ಕೂಗು. ಇನ್ನೂ ನೀವು ಬೇರೆ ಬೇರೆ ಇದ್ದೀರಿ. ಐಕ್ಯತೆಯನ್ನುಂಟುಮಾಡು. ಶಕ್ತಿಸಂಚಯ ಮಾಡು'

—ಸ್ವಲ್ಪ ಹೊತ್ತು ಸುಮ್ಮನಿದ್ದು ನನ್ನ ಮುಖ ನೋಡತೊಡಗಿದಳು. ಅನಂತರ ಪುನಹ—'ಯುವಕಾ ನಾಲ್ಕೂ ಕಡೆ ಅಗ್ನಿಯು ತಗಲಿದೆ. ನಿನ್ನ ಮನೆಯು ಸುಡುತ್ತಿರುವಾಗ ನೀನು ನಿದ್ರಿಸುತ್ತಿರುವೆ. ನಿನ್ನ ಜೀವನವು ಯಾರ ಸಲುವಾಗಿ ಇದೆ? ದೇಶಪುತ್ರ ದೇಶದ ಕೂಗನ್ನು ಕೇಳು. ಸೇನೆಯು ತುಂಬುತ್ತಿದೆ. ನೀನೂ ಸ್ಫೂರ್ತಿಯಿಂದ ಸೈನಿಕನಾಗಿ ನಿನ್ನ ಕರ್ತವ್ಯಪಾಲನೆ ಮಾಡು'—ನಾನು ನೋಡುತ್ತಿದ್ದಂತೆ ಮೂರ್ತಿಯು ಮಾಯವಾಗಿ ಬಿಟ್ಟಿತು. ಸಹಸಾ ನಾನು ಕಿರಿಚಿದೆನು. 'ಅಮ್ಮಾ ಅಮ್ಮಾ' ಎಂದು. ನನ್ನ ನಿದ್ರೆಯು ದೂರಾಗಿ ಬಿಟ್ಟಿತು.'

ತಂದೆಯು ಹೇಗೂ ಮಗನನ್ನು ಶಾಂತಗೊಳಿಸಿದನು.

◆ ◆

'. . ದೇಶದ ಕೂಗು, ತಾಯಿಯ ಸಂದೇಶ. ಅವಳು ಅಕ್ಷರಶಃ ಸತ್ಯ ಹೇಳಿರುವಳು. ದೇಶದ ಸುಲಿಗೆಯಾಗುತ್ತಿದೆ. ನಮಗೇನು ಸಿಗುತ್ತದೆ? ಒಣ ಅನ್ನ. ಅದಂಲ್ಲೂ ದಿನಕ್ಕೆ ಸರಾಸರಿ ಹೊಟ್ಟೆತುಂಬ ಎರಡು ಬಾರಿಯಾದರೂ ಭೋಜನ ಸಿಗದ ಜನರು ನಮ್ಮಲ್ಲಿ ಎಷ್ಟು ಮಂದಿ ಇಲ್ಲ? . . ಹೋಗುವೆ, ಸೈನ್ಯಕ್ಕೆ ಸೇರಿಬಿಡುವೆ. ತಾಯಿಯ ಆಜ್ಞಾಪಾಲನೆ ಮಾಡುವೆ. ಪ್ರಾಣವನ್ನಿತ್ತು ಬಾಂಧವರನ್ನು ಸುಖದಲ್ಲಿಡುವೆ. ಇದೇ ಮನುಷ್ಯನ ಕರ್ತವ್ಯ.'

'. . ಆದರೆ ವೃದ್ಧ ತಂದೆಯೋರ್ವರಿರುವರಲ್ಲ? ನನ್ನ ತರುವಾಯ ಅವರನ್ನು ನೋಡಿಕೊಳ್ಳುವರಾರು? ಮನೆಯಲ್ಲಿ ನನ್ನ ಹೊರತು ಎರಡನೆಯವರಾರೂ ಇಲ್ಲ. ನಾನೇ ನನ್ನ ತಂದೆಯ ಆಧಾರವು. ವೃದ್ಧಾಪ್ಯದ ಊರುಗೋಲು. ಈ ಸಮಯಕ್ಕಾಗಿಯೇ ಜನರು ಪುತ್ರರಕ್ಷಣೆ ಮಾಡುತ್ತಾರೆ. ಇಂಥಾ ಅವರ ವೃದ್ಧಾಪ್ಯ ಸಮಯದಲಿ ನಾನವರ ಸಹಕಾರಿಯಾಗದಿದ್ದೆನೆಂದರೆ ನನ್ನ ಜನ್ಮವೇ ವ್ಯರ್ಥ. ಎಷ್ಟೊಂದು ಕಷ್ಟದಿಂದ ಪ್ರೀತಿಯಿಂದ ಅವರು ನನ್ನನ್ನು ಸಂರಕ್ಷಣೆ ಮಾಡಿಲ್ಲ? 'ನನ್ನನ್ನು ಜನ್ಮ ಕೊಟ್ಟಾಗಲೇ ತಾಯಿಯು ಇಹಲೋಕವನ್ನು ಬಿಟ್ಟಳು. ತಾಯಿಯ ಸುಖವನ್ನು ನಾನರಿಯೆ. ಇವರೇ ನನ್ನ ತಂದೆ ತಾಯಿ ಸರ್ವಸ್ವ. ಇಂಥವರನ್ನೇ ಈ ವೃದ್ಧಾಪ್ಯದ ದೆಸೆಯಲ್ಲಿ ಬಿಟ್ಟು ಓಡಿಹೋಗಲೆ? ಹಿಂದಿರುಗಿ ಬರುವೆನೋ ಇಲ್ಲವೋ ಬಲ್ಲವರಾರು? ಆದರೆ, ಆದರೆ . ಆದರೆ ನನ್ನ ವೃದ್ಧ ತಂದೆಯನ್ನು ನೋಡತಕ್ಕವರಾರು? ಭಗವಾನ್ ಕಠಿಣ ಸಮಸ್ಯೆ. ಏನು ಮಾಡಲಿ. ಯಾರೆನಗೆ ಸಲಹೆ ಕೊಡುವರು?'

'. . . ಒಬ್ಬನ ರಕ್ಷಣೆಗಾಗಿ ಬದುಕುವುದಕ್ಕಿಂತ ಕೋಟ್ಯವಧಿ ಜನರ ರಕ್ಷಣೆಗಾಗಿ ಸಾಯುವುದು ಮೇಲು. ಹಾಗಾದರೆ ತಂದೆಯೊಡನೆ ಈ ಎಲ್ಲ ವಿಚಾರಗಳನ್ನು ಹೇಳಿಹೋಗಲೆ? ಇಲ್ಲ, ಅವರು ನನ್ನನ್ನು ತಡೆದರೆ? ಅಥವಾ ನಾನೇ ನಿಂತುಬಿಟ್ಟರೆ? ನನ್ನ ನಿಶ್ಚಯವೇ ನನ್ನಿಂದ ದೂರವಾಗಿಬಿಟ್ಟರೆ?

◆ ◆

'ಸರದಾರ ಸಾಹೇಬ'

ಸರದಾರನು ಮುಖ ತಿರುಗಿಸಿ ನೋಡಿದನು. ೨೦ ೨೧ ವರ್ಷದ ಗಂಭೀರ ಪ್ರಕೃತಿಯ ಯುವಕನು ನಿಂತಿದ್ದನು. ಹಸನ್ಮುಖವಾಗಿದ್ದಾತನ ಮುಖದರ್ಶನ ಪ್ರಭಾವದಿಂದ ಸರದಾರನು ಪ್ರೀತನಾಗಿ ಹೋದನು.

'ಏನು ಬೇಕಾಗಿದ್ದಿತು?' ಸರದಾರನು ಗಂಭೀರ ಪೂರ್ವಕ ಪ್ರಶ್ನಿಸಿದನು.

'ನಾನು ನಿಮ್ಮ ಸೇನೆಯಲ್ಲಿ ಭರ್ತಿಯಾಗಲಿಕ್ಕೆ ಬಂದಿರುತ್ತೇನೆ'

ಸರದಾರನ ಮುಖವು ಪ್ರಫುಲ್ಲಿತವಾಯಿತು. ಪ್ರೀತಿಯಿಂದ ಸಮೀಪ ಕುಳ್ಳಿರಿಸಿದನು.

(17ನೆಯ ಪುಟವನ್ನು ನೋಡಿ)



NOTICE BY SUBSTITUTED SERVICE

In the Court of the District Munsiff of Mangalore

S. C. No. 936/1940

Between —

B. Narayana Kamath, H. Sanjiva Pai, Co. Plaintiff.

and

Silvester Perao, Defendant.

To

Defendant—Silvester Perao, son of Antony Perao residing at Ulai Kof Padukodi village, Mangalore Taluk.

Please take notice that the plaintiff has filed the above suit against you for recovery of Rs 68-3-5 from you being principal and interest up to 20-12-1940, together with costs of suit and future interest in respect of dealings carried on by you with the plaintiff firm and that the suit is posted for hearing at 11 a. m. on 7-4-1941, in the above court. You may appear, either in person or by pleader on or before the said date and contest the suit, failing which the same will be decided exparte.

Mangalore. M. Keshava Kamath

ಸಂಪತ್ತು ಸರಿಸಮವಾಗಿ ಹಂಚಿಹೋಗುವುದು

ಗ್ರಾಮೋದ್ಯೋಗದ ಅಭಿವೃದ್ಧಿಯಿಂದ

ರಾಷ್ಟ್ರೀಯ ವಾರದಲ್ಲಿ ನಮ್ಮ ಕರ್ತವ್ಯ

ಸ್ವಾವಲಂಬಿಗಳಾಗಲು ಸ್ವತಂತ್ರ ಉದ್ಯೋಗ

— ರಚನಾತ್ಮಕ ಕಾರ್ಯದ ಕುರಿತು ಕುಮಾರಪ್ಪನವರ ಕರೆ —

ನಮ್ಮಲ್ಲಿ ಹಲವರಿಗೆ ರೂಪಾಯಿ ಆಣೆ ಪೈಗಳ ಲೆಕ್ಕವು ಸಂಪದಭಿವೃದ್ಧಿಯನ್ನು ಅಳೆಯುವ ಸಾಧನವಾಗಿದೆ. ಆದ್ದರಿಂದ ಹೊಸ ಹೊಸ ಕೈಗಾರಿಕಾ ಸಾಧನಗಳನ್ನು ತಯಾರುಮಾಡಲಿಕ್ಕೆ ವಿನಿಯೋಗಿಸುವ ನಮ್ಮ ಉಳಿಕೆ ಹಣವನ್ನು ಅವರು ಭಂಡವಾಳವೆಂದು ತಿಳಿಯುತ್ತಾರೆ. ಹೇಗೆ ಹೇಗೆ ನಾವು ಹೆಚ್ಚೆಚ್ಚು ಭಂಡವಾಳವನ್ನು ವಿನಿಯೋಗಿಸುವೆವೋ ಹಾಗೆ ಹಾಗೆ ನಮ್ಮ ಮತ್ತು ನಮ್ಮ ದೇಶದ ಸಂಪದಭಿವೃದ್ಧಿಯಾಗುವದೆಂದು ಅವರು ತಿಳಿದಿದ್ದಾರೆ. ಉಳಿಕೆ ಹಣವನ್ನು ಕೈಗಾರಿಕೆಗಳಲ್ಲಿ ವಿನಿಯೋಗಿಸುವದರಿಂದಲೇ ಸಂಪದಭಿವೃದ್ಧಿ ಎಂದು ತಿಳಿಯುವದು ತಪ್ಪು. ಯಾಕಂದರೆ ಈ ಭಂಡವಾಳದ ವಿನಿಯೋಗದಿಂದ ಹೊಸ ಹೊಸ ಸಾಮಗ್ರಿಗಳನ್ನು ಹೆಚ್ಚೆಚ್ಚಾಗಿ ಸಿದ್ಧಮಾಡಿ ಲಾಭ ಪಡೆಯಬೇಕಾದಂತೆ, ಅವುಗಳನ್ನು ಕೊಂಡುಕೊಳ್ಳುವವರನ್ನೂ ತಯಾರು ಮಾಡಬೇಕಾಗುತ್ತದೆ. ಇದು ಯಾವಾಗಲೂ ಸಾಧ್ಯವಲ್ಲ. ಕೊಂಡುಕೊಳ್ಳುವವರಲ್ಲಿ ಕೊರತೆಯುಂಟಾದೊಡನೆ ಕೈಗಾರಿಕೆಗಳಲ್ಲಿ ಮುಗ್ಗಟ್ಟು ಉಂಟಾಗುವದು, ಮತ್ತು ಕ್ರಮೇಣ ಭಂಡವಾಳವು ಮೃತಾವಸ್ಥೆಯಲ್ಲಿ ಇರಬೇಕಾಗಿ ಬಡತನವು ಹೆಚ್ಚುವದು

ಭಂಡವಾಳ ಶಾಹಿಯಿಂದಾಗುವ ಅನರ್ಥ

ಕೈಗಾರಿಕೆಗಳಲ್ಲಿ ವಿನಿಯೋಗಿಸುವ ರೂಪಾಯಿ ಆಣೆ ಪೈಗಳ ಭಂಡವಾಳವೇ ಸಂಪದಭಿವೃದ್ಧಿ ಎಂದು ತಿಳಿದು ಆ ಪ್ರಕಾರ ಪ್ರವರ್ತಿಸುವದರಿಂದ ಸಂಪದಭಿವೃದ್ಧಿಯಾಗುವುದರ ಬದಲಿಗೆ ದೇಶದ ಬಡತನವು ಹೆಚ್ಚಿ, ಹೇಗೆ ಅದು ನಾನಾ ಬಗೆಯ ಕಷ್ಟಪರಂಪರೆಗಳಿಗೆ ಬಲಿಯಾಗುತ್ತದೆಂಬುದನ್ನು ನೋಡೋಣ. ಒಬ್ಬ ವ್ಯಾಪಾರಿಯು ತನ್ನ ವ್ಯಾಪಾರದಲ್ಲಿ ತುಂಬಾ ಲಾಭವನ್ನು ಗಳಿಸಿ ಶ್ರೀಮಂತನಾಗಬೇಕಾದರೆ, ಜನರಿಗೆ ಬೇಕಾದ ಎಲ್ಲಾ ವಸ್ತು ಒಡವೆಗಳನ್ನು ಅವನೊಬ್ಬನೇ ತರಿಸಿಕೊಡಬೇಕು. ಹೇಗೆ ಹೇಗೆ ಜನರು ಅವನ ಮೇಲೆ ಹೆಚ್ಚೆಚ್ಚು ಅವಲಂಬಿಸಿ ಇರುವರೋ ಹಾಗೆ, ಹಾಗೆ ಅವನ ವ್ಯಾಪಾರದ ಅಭಿವೃದ್ಧಿಯಾಗುತ್ತದೆ. ಜನರ ಪರಾವಲಂಬನವೇ ಅವನ ವ್ಯಾಪಾರ ಸಫಲತೆಯ ಮುಖ್ಯ ಉಪಾಯವಾಗಿರುವದು. ವ್ಯಾಪಾರವು ಬೆಳೆಯಬೇಕಾದರೆ ಜನರು ಸ್ವಾವಲಂಬನಕ್ಕೆ ತಿಲಾಂಜಲಿ ಕೊಡಬೇಕು ಆದ್ದರಿಂದಲೇ ಯಾವ ದೇಶಗಳಲ್ಲಿ ಕೇಂದ್ರೀಕೃತ ಕೈಗಾರಿಕೆ ಉತ್ಪತ್ತಿಗಳಾಗುತ್ತಿವೆಯೋ ಅಲ್ಲಿ ಜನರು ಬಹಳ ಅಸಹಾಯ ಸ್ಥಿತಿಯಲ್ಲಿರುವದನ್ನೂ ಅವರ ಆರ್ಥಿಕ ನೈತಿಕ ಪತನವಾಗಿರುವದನ್ನೂ ಕಾಣಬಹುದು. ಯೂರೋಪಿನ ಜನಾಂಗಗಳು ಏಷ್ಯ, ಆಫ್ರಿಕ ಮೊದಲಾದ ಪೌರ್ವಾತ್ಯ ಖಂಡಗಳನ್ನು ತಮ್ಮ ಕೇಂದ್ರೀಕೃತ ಕೈಗಾರಿಕೆ ಸಾಮಗ್ರಿಗಳ ವ್ಯಾಪಾರ ಕೇಂದ್ರಗಳನ್ನಾಗಿ ಮಾಡಿರುವುದರಿಂದಲೇ ಈ ಖಂಡಗಳು ರಾಜಕೀಯ_ಆರ್ಥಿಕ ಬಂಧನದಲ್ಲಿ ಕೊಳೆಲಿ ಗತಿಕಾಣದೆ ಇವೆ. ಯೂರೋಪಿನಿಂದ ಬರುವ ಅಗ್ಗದ ಸಾಮಾನುಗಳನ್ನು ಕೊಂಡುಕೊಳ್ಳುವದರಿಂದ ತಮ್ಮ ಹಿತವಾಗುವದೆಂಬ ಭ್ರಮೆಯಲ್ಲಿ ಈ ಜನರನ್ನಿಡಲು ಎಷ್ಟರ ತನಕ ಯೂರೋಪಿನ ರಾಷ್ಟ್ರಗಳು- ಸಮರ್ಥವಾಗುವವೋ ಅಷ್ಟರ ತನಕವೇ ಯೂರೋಪಿನ ರಾಷ್ಟ್ರಗಳು ತಮ್ಮ ಸಾಂಪತ್ತಿಕ ಉನ್ನತಿಯನ್ನು ಸಾಧಿಸಬಲ್ಲುವು.

ಪಾಶ್ಚಾತ್ಯರ ಅಸಹಾಯತೆ

ಈ ಪ್ರಕಾರದ ದೂಷಿತ ಆರ್ಥಿಕ ಸಿದ್ಧಾಂತಗಳನ್ನು ಅನುಸರಿಸಿರುವದರಿಂದ ಪಾಶ್ಚಾತ್ಯ ದೇಶಗಳ ಜನರು ಯಾವ ಶೋಚನೀಯ ಸ್ಥಿತಿಯಲ್ಲಿ ಇದ್ದಾರೆಂಬುದನ್ನು ನೋಡಿರಿ. ಅಲ್ಲಿಯ ಮಹಿಳೆಯರು ಅಡಿಗೆಮಾಡುವದನ್ನು ತಿಳಿಯರು ಎಲ್ಲ ಅಡಿಗೆಯು ಅವರಿಗೆ ಕಾರ್ಖಾನೆಗಳಲ್ಲಿ ತಯಾರಾಗಿ ಬರಬೇಕು. ಜೀವನಕ್ಕೆ ಬೇಕಾದ ಯಾವತ್ತು ಸಾಮಗ್ರಿಗಳನ್ನು ಅವರು ಕೊಂಡುಕೊಳ್ಳುವರೇ ಹೊರತು ತಾವು ಸ್ವಂತ ಪರಿಶ್ರಮದಿಂದ ಏನನ್ನೂ ಮಾಡುವದಿಲ್ಲ. ಅವರಿಗೆ ಜೀವನದ ಒಂದೊಂದು ಹೆಜ್ಜೆಯನ್ನಿಡಲಿಕ್ಕೂ ಇತರರ ಸಹಾಯ ಬೇಕು. ನಮ್ಮ ದೇಶದಲ್ಲಿಯೂ ಪರಿಸ್ಥಿತಿಯು ಹೀಗೆಯೇ ಬದಲಾವಣೆ ಹೊಂದುತ್ತಾ ಇದೆ. ಪಾಶ್ಚಾತ್ಯರ ಅನುಕರಣೆಯಿಂದಲೇ ನಮ್ಮ ಉದ್ಧಾರವೆಂದು ತಿಳಿಯುತ್ತಿದ್ದೇವೆ. ಕಿರಿದಿಗೆ-ಬಾಟ್ಲಿಗಳಲ್ಲಿ ತುಂಬಿಸಿ ಬಂದ ಸಿದ್ಧ ಪದಾರ್ಥಗಳಲ್ಲಿಯೇ ಪೌಷ್ಟಿಕ ಆಹಾರ ಗುಣವಿದೆಯೆಂದು ನಮ್ಮಲ್ಲಿಯ ಪದವೀಧರ ವೈದ್ಯರೂ ಹೇಳಲಾರಂಭಿಸಿರುವರು! ಆದ್ದರಿಂದಲೇ ರೂಪಾಯಿ ಆಣೆ ಪೈಗಳ ಭಂಡವಾಳ ವಿನಿಯೋಗದಿಂದ ತಮ್ಮ ಸಂಪದಭಿವೃದ್ಧಿಯೆಂಬ ತಪ್ಪು ತಿಳುವಳಿಕೆಯು ಹೋಗಿ, ಯಾವಾಗ ಜನರು ತಮ್ಮ ಶೋಚನೀಯ ಸ್ಥಿತಿಯ ಅನುಭವ ಮಾಡಿಕೊಳ್ಳುವರೋ ಆಗ ಈ ದೂಷಿತ ಭಂಡವಾಳಶಾಹಿಯು ನಷ್ಟವಾಗಲೇ ಬೇಕು!

ಉದ್ಧಾರ ಮಾರ್ಗ

ಇದರ ಬದಲಿಗೆ-ವಿಚಾರಿಸಿ ನೋಡಿದರೆ-ಅಖಿಲ ಭಾರತ ಗ್ರಾಮೋದ್ಯೋಗ ಸಂಘವು ಇಟ್ಟುಕೊಂಡ ಕಾರ್ಯಕ್ರಮದಲ್ಲಿಯೇ ಉದ್ಧಾರ ಮಾರ್ಗವು ಇದೆ ಎಂಬುದು ಈಗ ನಮಗೆ ಗೊತ್ತಾಗಬಹುದು. ಪಾಶ್ಚಾತ್ಯ ಕೈಗಾರಿಕಾ ಪದ್ಧತಿಯು-ಮೇಲೆ ತೋರಿಸಿಕೊಟ್ಟ ಪ್ರಕಾರ ವಿನಾಶಕವಾಗಿರುವದಾದರೆ, ಗ್ರಾಮೋದ್ಯೋಗ ಸಂಘದ ಕಾರ್ಯಪದ್ಧತಿಯು ರಚನಾತ್ಮಕವಾಗಿರುವದು. ಯಾಕಂದರೆ ಇದರಲ್ಲಿ ಯಾರೂ ತಮ್ಮ ಸ್ವಾರ್ಥಕ್ಕಾಗಿ ಇತರರಿಗೆ ಸಾಮಾನುಗಳನ್ನು ತಯಾರಿಸಿ ಮಾರುವದಿಲ್ಲ. ಎಲ್ಲರೂ ತಮತಮಗೆ ಬೇಕಾದ ಸಾಮಾನುಗಳನ್ನು ತಾವು ತಾವೇ ತಯಾರಿಸಿಕೊಳ್ಳುವರು ಹಾಗೆ ತಯಾರಿಸಲು ತಮ್ಮಿಂದ ಆಗುವದಿಲ್ಲವಾದರೆ, ಅವರು ಅವುಗಳ ಉಪಯೋಗ ಸಂದರ್ಭಗಳನ್ನೇ ತಂದುಕೊಳ್ಳುವದಿಲ್ಲ. ಆದ್ದರಿಂದಲೇ ಈ ಕಾರ್ಯಕ್ರಮವು ಹೆಚ್ಚೆಚ್ಚು ಸಫಲವಾದ ಹಾಗೆ, ಜನರು ಹೆಚ್ಚೆಚ್ಚು ಸ್ವಾವಲಂಬಿಗಳಾಗುವರು. ಹಳ್ಳಿಗರು ತಮತಮಗೆ ಬೇಕಾದ ವಸ್ತು ಒಡವೆಗಳನ್ನು ತಾವು ತಾವೇ ತಯಾರಿಸಿಕೊಂಡು, ಪಟ್ಟಣಿಗರಿಗೂ ಮಾರುವ ಸ್ಥಿತಿಯನ್ನು ಉಂಟುಮಾಡುವದೇ ಗ್ರಾಮೋದ್ಯೋಗ ಸಂಘದ ಧ್ಯೇಯವಾಗಿದೆ. ಇದರಿಂದ ನಿರುದ್ಯೋಗವು ದೂರವಾಗುವದು. ಮತ್ತು ಹಣವು ಎಲ್ಲರಲ್ಲಿ ಸರಿಸಮವಾಗಿ ಹಂಚಿಹೋಗುವದು. ಬಡತನವನ್ನು ದೂರಮಾಡುವ ಇದೊಂದೇ ಯಥಾರ್ಥ ಉಪಾಯವಾಗಿದೆ.

ಸ್ವಾವಲಂಬನದಿಂದ ಸ್ವಾತಂತ್ರ್ಯ ಸಂಪಾದನೆ

ತಮತಮಗೆ ಬೇಕಾದ ವಸ್ತುಒಡವೆಗಳನ್ನು ತಾವು ತಾವೇ-ತಮ್ಮ ಮನೆಗಳಲ್ಲಿ-ತಯಾರಿಸಿಕೊಂಡು ಉಪಯೋಗಿಸಿ ಜನರು ಸ್ವಾವಲಂಬಿಗಳಾಗುತ್ತ ಹೋದ ಹಾಗೆ ಪಾರತಂತ್ರ್ಯವು ದೂರವಾಗುವದು. ಸ್ವಾತಂತ್ರ್ಯ ಸಂಪಾದನೆಯು ಬಹು ಸುಲಭವಾಗುವದು. ಸ್ವಾತಂತ್ರ್ಯದ ಸದುಪಯೋಗವನ್ನು ಮಾಡಲಾರೆವಾದರೆ-ಸ್ವಾತಂತ್ರ್ಯವನ್ನು ಪಡೆದೂ ನಾವು ನಮ್ಮ ಜೀವನಾವಶ್ಯಕ ವಸ್ತು ಒಡವೆಗಳಿಗಾಗಿ ಪರಾವಲಂಬಿಗಳಾಗಿ ಇರುವೆವಾದರೆ-ಬ್ರಿಟಿಷರು ನಮಗೆ ಸ್ವಾತಂತ್ರ್ಯವನ್ನು ಧಾರಾದತ್ತ ಮಾಡಿಕೊಟ್ಟರೂ ಏನು ಪ್ರಯೋಜನ? ಅಮೇರಿಕವು ಭಯಂಕರ ಅಂತಃಕಲಹವನ್ನು ಹೊಂದಿ ಅಲ್ಲಿ ಗುಲಾಮಪದ್ಧತಿಯನ್ನು ನಾಶ ಮಾಡಿತು. ಆದರೆ ಕೇಂದ್ರೀಕೃತ ಕೈಗಾರಿಕಾ ಪದ್ಧತಿ ಮತ್ತು ಭಂಡವಾಳಶಾಹಿಯ ದೆಸೆಯಿಂದ ಜನರು ಈಗಲೂ ಗುಲಾಮ ಜನರ ಹಾಗೆಯೇ ಪರಾವಲಂಬಿಗಳಾಗಿ ಜೀವನ ಮಾಡುತ್ತಿದ್ದಾರೆ ಅಲ್ಲಿಯ ಸ್ಥಿತಿಯನ್ನಾದರೂ ಕಂಡ ನಾವು ಪಾಠ ಕಲಿಯಬೇಕು, ಸ್ವಾವಲಂಬಿಗಳಾಗಬೇಕು. ಆಗತಾನೇ ದೇವರೂ ನಮ್ಮ ಸಹಾಯಕ್ಕೆ ಬರುವನು.

ನಮ್ಮ ಕರ್ತವ್ಯ

ಸ್ವಾತಂತ್ರ್ಯ ಅಥವಾ ಪಾರತಂತ್ರ್ಯ ನಮಗೆ ಯಾವುದು ಬೇಕು? ಸ್ವಾತಂತ್ರ್ಯವೇ ತಾನೆ? ಹಾಗಿದ್ದ ಪಕ್ಷದಲ್ಲಿ ನಾವು ಸ್ವಾವಲಂಬಿಗಳಾಗಲು ಮೊದಲು ಕಲಿಯಬೇಕು. ಮಹಾತ್ಮಾಜಿಯವರು ಸ್ವಾತಂತ್ರ್ಯ ಸಂಪಾದನೆಗೆ ರಚನಾತ್ಮಕ ಕಾರ್ಯಕ್ರಮದ ಸಫಲತೆಯು ಅವಶ್ಯಕವೆಂದು ಅದಕ್ಕೆ ಸ್ವರಾಜ್ಯ ಪ್ರಯತ್ನಗಳಲ್ಲಿ ಬಹು ಮುಖ್ಯ ಸ್ಥಾನವನ್ನು ಕೊಟ್ಟಿರುವ ರಹಸ್ಯವು ಇದುವೇ ಆಗಿದೆ. ಈಗಿನ ಪರಿಸ್ಥಿತಿಯಲ್ಲಿ ನಮನಮಗೆ ಬೇಕಾದದನ್ನು ನಾವು ನಾವೇ ತಯಾರುಮಾಡಲು ಸಮರ್ಥರಾಗಿಲ್ಲದಿರಬಹುದು. ಆದರೆ ಅದು ನಿಶ್ಚಯಕ್ಕೂ ನಮ್ಮ ಜೀವನಧ್ಯೇಯವಾಗಿರಬೇಕು ಮತ್ತು ಹಳ್ಳಿಗಳಲ್ಲಿ ಹಳ್ಳಿ ಜನರು ತಮ್ಮ ಮನೆಗಳಲ್ಲಿ ತಯಾರಿಸಿದ ವಸ್ತು ಒಡವೆಗಳನ್ನೇ ನಾವು ಕೊಂಡುಕೊಳ್ಳಬೇಕು. ಇದು ಎಲ್ಲರಿಗೆ ಸಾಧ್ಯವಾಗಿದೆ. ರಾಷ್ಟ್ರೀಯ ವಾರದಲ್ಲಿ ಇದೇ ನಮ್ಮ ಮುಖ್ಯ ಕರ್ತವ್ಯವಾಗಿರಲಿ. ಯಾಕಂದರೆ ಈ ಕರ್ತವ್ಯ ಪರಿಪಾಲನೆಯಿಂದ ಮಾತ್ರ, ನಮಗೆ ಸ್ವರಾಜ್ಯದ ಯಥಾರ್ಥ ಸುಖವು ಪ್ರಾಪ್ತವಾಗುವದು ಮತ್ತು ದೇಶದ ನಿಜವಾದ ಸಂಪದಭಿವೃದ್ಧಿಯಾಗುವುದು.

ನೋಟೀಸು

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. E. P. 62/1941

O. S. 153/33

ಕಿಟ್ಟಪ್ಪ ಚೆಟ್ಟಿ . ಡಿಕ್ರೀದಾರ-ವಾದಿ

ಮತ್ತು

1 ಹಾಮದ್ ಬ್ಯಾರಿ, 2. ಬಾಪಕುಂಞ ಬ್ಯಾರಿ, 3. ಕುಂಞಪಾತುಂಮ, 4. ಇಬ್ರಾಯಿಂ ಮೊಂಞುಂಞ ಬ್ಯಾರಿ ಮಕ್ಕಳು—ಮಂಗಳೂರು ತಾಲೂಕು ಯಿಂ... ಗ್ರಾಮಸ್ಥರು . . . . ರೆಸ್ಪೊಂಡೆಂಟರು

ಮೇಲೆ ಹೆಸರು ಕಾಣಿಸಿದ ರೆಸ್ಪೊಂಡೆಂಟರಿಗೆ- ಮೇಲಿನ ವ್ಯಾಜ್ಯದ ಡಿಕ್ರಿಯಲ್ಲಿ ನಿಮ್ಮ ಮೇಲೆ ಹಾಜಿಲು ಮಾಡಿದ R. E. P. 62/'41 ನೇ ಅಮಲ್ದ್ಯಾರಿಯನ್ನು ತಾ. 27-5-'41ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನೀವುಗೇನಾದರೂ ಆಕ್ಷೇಪವಿದ್ದರೆ ಸದ್ರಿ ತಾರೀಕಿನ ದಿನ 10½ ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು.

ಕೋರ್ಟು ಹುಕುಂ ಪ್ರಕಾರ

ಮಂಗಳೂರು 24-3-'41 } B. R. Vyasaraya Achar, ಅರ್ಜಿದಾರನ ಪರ ಪ್ಲೀಡರ್

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲೆಯ ಸತ್ಯಾಗ್ರಹಿಗಳ ಐದನೆಯ ಪಟ್ಟಿ:— ನಮ್ಮ ಜಿಲ್ಲೆಯ ಸತ್ಯಾಗ್ರಹಿಗಳ ಐದನೆಯ ಪಟ್ಟಿಗೆ ಗಾಂಧಿಜಿಯವರ ಅನುಮತಿ ಸಿಕ್ಕಿದೆಯೆಂದು ತಿಳಿಯುತ್ತದೆ. ಇದರಲ್ಲಿ ಒಟ್ಟು ೨೬ ಜನರು ಸತ್ಯಾಗ್ರಹಿಗಳಾಗಿ ಆರಿಸಲ್ಪಟ್ಟಿರುವರು. ಇವರಲ್ಲಿ ಕೋಲ್ನಾಡಿನ ಮುಸ್ಲಿಂ ಬಂಧುಗಳಾದ ಶ್ರೀ. ಮಹಮ್ಮದ್ ಹಸನ್‌ರವರೂ ಮಂಗಳೂರು ಮುನಿಸಿಪಲ್ ಕೌನ್ಸಿಲರುಗಳಾದ ಮಿಸೆಸ್ ಮೇರಿ ಜೆ. ಬ್ರಿಟೋ, ಎಫ್ ಎಸ್. ಡಿ. ಪಿಂಟೋ, ಎಂ. ಆರ್. ಭಟ್, ಕೆ. ಕೆ. ತಿಂಗಳಾಯ ಮೊದಲಾದವರ ಹೆಸರುಗಳು ಇರುವುದಾಗಿ ತಿಳಿದುಬರುತ್ತದೆ. ಇವರು ಎಪ್ರಿಲ್ ೫ರ ಮೇಲೆ ಸತ್ಯಾಗ್ರಹ ಹೂಡಬಹುದೆಂದೂ ಹೇಳಿದೆ.

ಶ್ರೀ ಬಿ. ಡಿ. ಸುವರ್ಣರ ಸತ್ಯಾಗ್ರಹ:— ಇದೇ ತಾ. ೨೫-೩-೪೧ರಲ್ಲಿ ಶ್ರೀ. ಬಿ. ಡಿ. ಸುವರ್ಣರವರು ಪ್ರಾತಃ ೯ ಗಂಟೆಗೆ ಹಂಪನಕಟ್ಟೆಯಲ್ಲಿ (ಸುಳಗಟ್ಟಾಲಲ್ಲಿ) ಸತ್ಯಾಗ್ರಹ ಮಾಡಿದರು. ಇವರನ್ನು ಸೆರೆಹಿಡಿಯಲಿಲ್ಲ.

ಸತ್ಯಾಗ್ರಹಿ ಕೈದಿಗಳನ್ನು ಕನ್ನಾನ್ನೂರಿಗೆ ಒಯ್ದರು:— ತಾ. ೧೮ರಂದು ೧೨ ಗಂಟೆಯ ಗಾಡಿಯಲ್ಲಿ, ಮಂಗಳೂರು ಸಬ್ ಜೈಲಿನಲ್ಲಿದ್ದ ಸತ್ಯಾಗ್ರಹಿ ಕೈದಿಗಳಾದ ಶ್ರೀಯುತರು ಎನ್. ಶೇಷಗಿರಿರಾವ್, ಟಿ. ಜಗನ್ನಾಥ ಶೆಟ್ಟಿ, ಬಿ ಗೋಪಾಲಕೃಷ್ಣ ಕಾಮತ್, ಕುಳಾಲು ಪದ್ಮನಾಭ ಶೆಣೈ, ರಾಮನ ಶೆಟ್ಟಿ ಮತ್ತು ಪಾಂಡುರಂಗ ಶೆಟ್ಟಿ ಇವರನ್ನು ಕನ್ನಾನ್ನೂರಿಗೆ ಒಯ್ಯಲಾಯಿತು. ಸತ್ಯಾಗ್ರಹಿಗಳೆಲ್ಲರೂ ಒಳ್ಳೆಯ ಆರೋಗ್ಯದಲ್ಲಿಯೇ ಇದ್ದಾರೆ.

ಶ್ರೀ ಬಿ. ನಾರಾಯಣ ಆಚಾರ್ಯರ ಸತ್ಯಾಗ್ರಹ:— ಮಂಗಳೂರಿನ ಶ್ರೀ. ಬಿ. ನಾರಾಯಣ ಆಚಾರ್ಯರು ತಾ. ೩೧ರಂದು ಬೋಳೂರು ಬತ್ತೇರಿಯ ಬಳಿಯಲ್ಲಿ ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ಅವರನ್ನು ಬಂಧಿಸದ ಕಾರಣ ಅವರು ದಿಲ್ಲಿಯತ್ತ ಕಡೆ ಪ್ರಚಾರ ಮಾಡುತ್ತಾ ಸಾಗುತ್ತಿದ್ದಾರೆ.

ನಗರದ ಜನ ಸಂಖ್ಯೆ:— ಮಂಗಳೂರು ನಗರದಲ್ಲಿ ಹಿಂದಿನ ಜಾನೇಶುಮಾರಿ ಲೆಕ್ಕಕ್ಕನುಸಾರವಾಗಿ ಒಟ್ಟಿಗೆ ೬೬,೭೫೬ ಜನರಿದ್ದರು. ಈ ವರ್ಷದ ಜಾನೇಶುಮಾರಿಗನುಸಾರವಾಗಿ ಆ ಸಂಖ್ಯೆಯು ೭೧,೮೫೭ಕ್ಕೇರಿದೆ. ಗಂಡಸರು ೩೭,[illegible]; ಹೆಂಗುಸರು ೩೪,[illegible].

ಸಿಡುಬು:— ಸ್ಥಳೀಯ ; ಬೋಳೂರು, ಜೆಪ್ಪು ಮೊದಲಾದೆಡೆಗಳಲ್ಲಿ ಸಿಡುಬು ರೋಗವು ತಲೆಯೆತ್ತಿದೆಯಾಗಿ ಹೇಳಲಾಗಿದೆ.

ನಗರಾರ್ವನಿಗೆ:— ಬ್ಯಾರಿಯ ವಿದ್ಯಾರ್ಥಿ ಕಾರಿಗಳಾಗಿ ವರ್ಗಾಯಿಸಲ್ಪಟ್ಟ ಶ್ರೀ ಯು. ಕಣ್ಣಪ್ಪನವರ ಸ್ಥಾನಕ್ಕೆ ಶ್ರೀ ಸಿ. ಕೇಶವ ಮುನ್ಸಾಡಿಯಾರ್ ಅವರು ನೇಮಕ ಹೊಂದಿರುವರು.

ಶ್ರೀ. ಅಣ್ಣಪ್ಪ ಭಂಡಾರಿಗಳ ಸತ್ಯಾಗ್ರಹ:— ಕೊಲ್ನಾಡು ಸಂಯುಕ್ತ ಕಾಂ. ಸಮಿತಿಯ ಕಾರ್ಯದರ್ಶಿಗಳಾದ ಕಟೀಲು ಗುತ್ತಿನ ಶ್ರೀ ಅಣ್ಣಪ್ಪಭಂಡಾರಿಯವರು ತಾ. ೧೦-೩-'೪೧ರಲ್ಲಿ ಸತ್ಯಾಗ್ರಹವನ್ನು ಮಾಡಿದರು. ಕೈದಾಗಲಿಲ್ಲ.

ಶ್ರೀ ಸದ್ಗುರು ರಾಮದಾಸ ಸೇವಾಶ್ರಮ, ಪದವು ಮಂಗಳೂರು:— ಇದೇ ತಾ. ೧೧ನೇ ಶುಕ್ರವಾರ ಚೈತ್ರ ಪೂರ್ಣಿಮಾ ಹನುಮಜ್ಜಯಂತಿ ದಿನವೇ, ಶ್ರೀ ಸ್ವಾಮಿ ರಾಮದಾಸರ ಜನ್ಮದಿನವಾಗಿರುವುದರಿಂದ ಆದಿನ ಪ್ರಾತಃಕಾಲ ೫ ಘಂಟೆಗೆ ಏಕಾಹ ಭಜನೆಯನ್ನು ಪ್ರಾರಂಭಿಸಿ ಮರುದಿನ ಬೆಳಗ್ಗೆ ೫ ಘಂಟೆಗೆ ಮಂಗಲಾಚರಣೆ ಮಾಡುವುದೆಂತಲೂ ನಿಶ್ಚಯಿಸಿರುತ್ತೇವೆ. ಈ ಸದ್ಗುರು ಸೇವೆಗೆ ಎಂದಿನಂತೆ ತಾವೆಲ್ಲರೂ ಸಹಭಾಗಿಗಳಾಗಿ ೬ನೇ ವರ್ಷದ ಶ್ರೀ ಸದ್ಗುರು ಜನ್ಮದಿನಾಚರಣೆಯನ್ನು ನಡೆಯಿಸಿಕೊಡಬೇಕಾಗಿಯೂ ಸಂಬಂಧ ಪಟ್ಟವರು ವಿನಂತಿಸುತ್ತಾರೆ.

ಸಮಾಜಸೇವಾಸಮಿತಿ, ಮಹಾನವಮಿಕಟ್ಟೆ, ಮಂಗಳೂರು:— ತಾ. ೧೬ರಂದು ಶ್ರೀ. ರಾಮನವಮಿಯನ್ನು ಶ್ರೀ. ವೈದ್ಯಗುರು ಎ. ಆರ್. ಭಟ್ಟರವರ ಭವ್ಯಭವನದಲ್ಲಿ ಆಚರಿಸಬೇಕೆಂದು ನಿಶ್ಚಯಿಸಿದೆ.

ಭಟ್ಕಳದಲ್ಲಿ ದ. ಕ. ಸತ್ಯಾಗ್ರಹಿಗಳ ಬಂಧನ

ತಾ. ೨೪-೩-೪೧ಕ್ಕೆ ಯುದ್ಧ ವಿರುದ್ಧ ಘೋಷಣೆ ಮಾಡುತ್ತಾ ಮುಂದರಿಯುತ್ತಿದ್ದ ಸತ್ಯಾಗ್ರಹಿಗಳಾದ ಶ್ರೀಗಳಾದ ಭಾಷಿ ಉಪೇಂದ್ರ ಶೆಣೈ, ಗುರುಪುರದ ಪುಂಡಲೀಕ ಕಾಮತ್, ಮಂಗಳೂರು ಪದ್ಮನಾಭ ಶೆಣೈ ಮತ್ತು ಕೋಟೇಶ್ವರ ಶಿವರಾಮ ಸೆಟ್ಟಿ, ಬಿ. ವಿಟ್ಠಲದಾಸ ಸೆಟ್ಟಿ, ಕೆ. ಕೇಶವ ಕುಡ್ವ, ಸ. ಸುಬ್ರಾಯ ಶೆಣೈ ಇವರನ್ನು ಇಲ್ಲಿ ಬಂಧಿಸಿ, ವಿಚಾರಣೆ ನಡೆದು ಆರು ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿ ಹಿಂಡಲ್ಗಿ ಜೈಲಿಗೆ ಕಳುಹಿಸಿದರು.

ಸತ್ಯಾಗ್ರಹ:— ಕೊಲ್ನಾಡು ಚಿಕ್ಕಯ ಸಾಲ್ಯಾನ್ ಮತ್ತು ಎಸ್. ಉಪೇಂದ್ರನಾಯ್ಕರು ನಂದಾವರ ಮತ್ತು ಸಜಿಕೊಂಬುಗಳಲ್ಲಿ ಸತ್ಯಾಗ್ರಹ ಮಾಡಿದರು. ಬಂಧಿಸಲಾಗಲಿಲ್ಲ.

ಪುತ್ತೂರು

ಸತ್ಯಾಗ್ರಹ:— ತಾ. ೩೧-೩-೪೧ರಂದು ಶ್ರೀಯುತ ರಾಮಕುಡ್ವರು ವೆಂಕಟರಮಣ ದೇವಸ್ಥಾನದ ಕಂಪೌಂಡಿನಲ್ಲಿ ನೆರೆದಿರುವ ಜನಸಮೂಹದ ಮುಂದೆ ಬರೆದು ಯುದ್ಧವಿರೋಧ ಘೋಷಣೆ ಮಾಡಿದರು. ಇವರನ್ನು ದಸ್ತಗಿರಿ ಮಾಡಿಲ್ಲ.

ಐದು ಜನ ಸತ್ಯಾಗ್ರಹಿಗಳ ಆಗಮನ:— ಶ್ರೀಗಳಾದ ಕಾರ್ಕಳ ನರಸಿಂಹ ಕಮ್ತಿ ಕಟಪಾಡಿ ವೇದವ್ಯಾಸನಾಯ್ಕ, ಸುಬ್ಬಣ್ಣ ನಾಯ್ಕ ಗೋಕಳೆ, ವಾಮನ ಶರ್ಮ, ಇವರು ತಾ. ೨೮ನೇ ಶುಕ್ರವಾರ ಪ್ರಹ್ಲಾದ ಕೋರ್ಟಿನ ಮೈದಾನದಲ್ಲಿ ಒಟ್ಟೊಟ್ಟಾಗಿಯೇ ಯುದ್ಧವಿರೋಧ ಘೋಷಣೆ ಮಾಡಿದರು. ಜನಸಂದಣಿಯು ಕಿಕ್ಕಿರಿದಿತ್ತು. ಅನಂತರ ಈ ಐದು ಜನ ಸತ್ಯಾಗ್ರಹಿಗಳೂ ಜನಸಮೂಹದ ಜತೆಗೆ ಪ್ರಮುಖ ಗಲ್ಲಿ ಕೇರಿಗಳಲ್ಲಿ ಪ್ರಚಾರ ಮಾಡಿದರು.

ಭಯಂಕರ ಖೂನಿ:— ನೇರಳಕಟ್ಟೆಯ ಸಮೀಪ ಗುಡ್ಡೆಯಲ್ಲಿ ತಾರೀಕು ೨೪ನೆ ಸೋಮವಾರ ದೇರಪೂಜಾರಿ ಎಂಬವನನ್ನು ತಲೆ ಬೇರೆ ಮುಂಡ ಬೇರೆಯಾಗಿ ಭಯಂಕರ ಖೂನಿ ಮಾಡಿರುತ್ತಾರೆ. ಈ ಬಗ್ಗೆ ವಿಚಾರಣೆ ನಡೆಯುತ್ತದೆ.

ಕಲ್ಯಾಡ್ಕ

ಹಿಂದೀ ಪರೀಕ್ಷೆಯ ಫಲಿತಾಂಶ: ಕಳೆದ ಫೆಬ್ರುವರಿ ತಿಂಗಳಲ್ಲಿ ಜರಗಿದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾರಂಭಿಕ ಪರೀಕ್ಷೆಗೆ ಶ್ರೀ. ಕೆ. ಭೀಮೇಶ್ವರ ಭಟ್ಟ, ವಿದ್ವಾನ್. ಇವರ ಉದಾರ ಪ್ರಚಾರದಿಂದ ಈ ಕೇಂದ್ರದಲ್ಲಿ ಉಪಸ್ಥಿತರಾದ ೧೧ ಮಂದಿ ಹಿಂದೀ ವಿದ್ಯಾರ್ಥಿಗಳ ಪೈಕಿ ಪ್ರಾಥಮಿಕ ಪರೀಕ್ಷೆಯಲ್ಲಿ ನಾಲ್ಕು ಮಂದಿ ಪ್ರಥಮ ಶ್ರೇಣಿಯಲ್ಲಿಯೂ ಒಬ್ಬರು ದ್ವಿತೀಯ ಶ್ರೇಣಿಯಲ್ಲಿಯೂ, ಇಬ್ಬರು ರಾಷ್ಟ್ರ ಭಾಷೆಯಲ್ಲಿಯೂ, ಉತ್ತೀರ್ಣರಾಗಿರುತ್ತಾರೆ.

ಕುಂದಾಪುರ

ಸತ್ಯಾಗ್ರಹ:— ಜಿ. ಬೋರ್ಡು ಸದಸ್ಯೆಯಾಗಿರುವ ಶ್ರೀಮತಿ ಸುಶೀಲಾ ಬಾಯಿಯವರೂ ಮತ್ತು ಶ್ರೀ ಸರ್ವೋತ್ತಮ ಪೈಗಳೂ ತಾ. ೨೫ರಲ್ಲಿ ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದ ಎದುರು ಯುದ್ಧವಿರೋಧ ಘೋಷಣೆ ಮಾಡಿ ಸತ್ಯಾಗ್ರಹ ಮಾಡಿದರು. ಪೋಲೀಸರು ಅವರನ್ನು ದಸ್ತಗಿರಿ ಮಾಡಿದರು. ತಾ. ೨೬ರಲ್ಲಿ ವಿಚಾರಣೆಯಾಗಿ ಶ್ರೀಮತಿ ಸುಶೀಲಾಬಾಯಿ ಪೈಗಳಿಗೆ ೧೧ ತಿಂಗಳು ಸಾದಾ ಶಿಕ್ಷೆಯೂ ಶ್ರೀ. ಸರ್ವೋತ್ತಮ ಪೈಗಳಿಗೆ ೯ ತಿಂಗಳು ಕಠಿಣ ಸಜೆಯೂ ವಿಧಿಸಲ್ಪಟ್ಟಿತು.

ಉಡುಪಿ

ಫಲಿಸಾರು:— ಈ ದಿನ ತಾ. ೪ಕ್ಕೆ ಅಪರಾಹ್ನ ೩ ಘಂಟೆ ೫ಕ್ಕೆ ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಾಲಯದ ಎದುರು ನೆರೆಯುತ್ತ ಶ್ರೀಮಾನ್ ಪಡುಬಿದ್ರಿ ಸದಾಶಿವ ಕೆ. ರಾಯಣ್ಣ ಸೆಟ್ರು ಯುದ್ಧವಿರೋಧ ಘೋಷಣೆಯೊಂದಿಗೆ ಸತ್ಯಾಗ್ರಹ ಮಾಡುವರು.

ಕಾರ್ಕಳ

ಉದಾರ ಧನ ಸಹಾಯ:— ಸ್ಥಳೀಯ ಲೋಕಲ್ ಫಂಡ ಆಸ್ಪತ್ರೆಗೆ ಒಂದು ಸರ್ಜಿಕಲ್ ವಾರ್ಡನ್ನು ಕಟ್ಟಿಸುವುದಕ್ಕೋಸ್ಕರ ಇಲ್ಲಿಯ ಸಾಹುಕಾರ ಶ್ರೀ. ರಂಜಾಳ ಗೋವರ್ಧನ ವೈಕುಂಠ ಶೆಣೈಯವರು ೩೦೦೦ ರೂಪಾಯಿಗಳ ಉದಾರ ಧನಸಹಾಯ ಮಾಡಿದ್ದಾರೆ.

ಸಭೆ ಸಮಾರಂಭಗಳು:— ಸತ್ಯಾಗ್ರಹ ಮಾಡಲಿರುವ ಬೋರ್ಡ ಹೈಸ್ಕೂಲಿನ ನಿವೃತ್ತ ಉಪಾಧ್ಯಾಯ ಶ್ರೀ. ಎಮ್. ರಾಮರಾಯ ನಾಯ್ಕರನ್ನು ಬೀಳ್ಕೊಳ್ಳುವದಕ್ಕೋಸ್ಕರ ಹಿಂದಿನ ವಿದ್ಯಾರ್ಥಿಗಳ ಪರವಾದ ಒಂದು ಸತ್ಕಾರ ಕೂಟವು ಬೋರ್ಡ ಹೈಸ್ಕೂಲಿನಲ್ಲಿ, ಕಾರ್ಕಳ ಹಿಂದೂ ಬಾಲಿಕಾ ಪಾಠ ಶಾಲೆಯ ವಾರ್ಷಿಕೋತ್ಸವವು ಶ್ರೀಮತಿ ರಾಧಾಬಾಯಿ ನರಸಿಂಹ ಅಧ್ಯಕ್ಷತಾಯ ಜಿ. ಎ. ಯವರ ಅಧ್ಯಕ್ಷತೆಯಲ್ಲಿ ಆ ಶಾಲೆಯಲ್ಲಿಯೂ, ಸ್ಥಳೀಯ ಆರ್ಯ ಸಮಾಜದ ವಾರ್ಷಿಕೋತ್ಸವವು ಶ್ರೀ ಕೆಂ. ಗಳಾದ ಕೇಶವ ರಾಮಚಂದ್ರ ಶೆಣೈ ಮತ್ತು ಆರ್. ಮಂಜುನಾಥ ಶೆಣೈಯವರ ಭಾಷಣಗಳೊಂದಿಗೆ ಸರ್ಕಾರಿ ಶಾಲೆಯಲ್ಲಿಯೂ ತಾ. ೩೦-೩-೪೧ರ ದಿನ ಜರಗಿದುವು.

ಸತ್ಯಾಗ್ರಹ ಸಮಾಚಾರಗಳು:— ಸ್ಥಳೀಯ ಸತ್ಯಾಗ್ರಹಿಗಳಾದ ಶ್ರೀ ಎ. ತಿರುಮಲೇಶ್ವರ ಭಟ್ಟ, ಪಿ. ರಾಮಕೃಷ್ಣ, ರಾವ್, ಪದ್ಮನಾಭ ಪೈ, ಪ್ರಭಾಕರ ದೇವಾಡಿಗ, ಗೋವಿಂದ ಗಾಣಿಗ ಮೊದಲಾದವರು ಸಭೆಗಳನ್ನು ಕೂಡಿಸಿ ಸತ್ಯಾಗ್ರಹ ಪ್ರಚಾರ ಮಾಡುತ್ತಿದ್ದಾರೆ.

ರಜಾ ಕಾಲದ ಹಿಂದೀ ಕ್ಲಾಸುಗಳು:— ಸ್ಥಳೀಯ ಪ್ರಮಾಣಿಕ ಹಿಂದೀ ಪ್ರಚಾರಕರಾದ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈ ಇವರು ಶುಲ್ಕರಹಿತವಾಗಿ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳ ಸಲುವಾಗಿ ಇಲ್ಲಿ ಬೇಸಿಗೆ ರಜಾ ಕಾಲದ ಹಿಂದೀ ವರ್ಗಗಳನ್ನು ನಡೆಸುವರು.

ಪರೀಕ್ಷಾ ಫಲಿತಾಂಶ:— ಕಳೆದ ಫೆಬ್ರವರಿ ತಿಂಗಳ ಹಿಂದೀ ಪರೀಕ್ಷೆಗಳಲ್ಲಿ ಈ ಕೇಂದ್ರದಿಂದ ಪ್ರಾಥಮಿಕದ ಎಲ್ಲರೂ, ಮಧ್ಯಮದಲ್ಲಿ ೪ ಜನರೂ ರಾಷ್ಟ್ರಭಾಷೆಯಲ್ಲಿ ಶ್ರೀಮತಿ ಕಮಲಾ, ರಾಧಾ, ಪುಷ್ಪಾ, ಸಂಧ್ಯಾ, ರಮಣಿ, ಮತ್ತು ಸರೋಜಾ ಇವರು ತೇರ್ಗಡೆಯಾಗಿದ್ದಾರೆ.

ಬದಿಯಡ್ಕ

ಮಕ್ಕಳ ಹಬ್ಬ:— ಕಳೆದ ದಿನಾಂಕ ೨೯ನೇ ಯಲ್ಲಿ ಅಡ್ಯನಡ್ಕ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ಹಬ್ಬವು ಶ್ರೀ ಬಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಿಂದ ವಿವಿಧ ಕಾರ್ಯಗಳೊಂದಿಗೆ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಆ ದಿನದ ಸಭೆಗೆ ಊರ ಮಹನೀಯರನೇಕರೂ ಆಮಂತ್ರಿತರಾಗಿದ್ದರು. [illegible] ಶ್ರೀ. ರಾಮಕೃಷ್ಣರಾಯರು ಪ್ರತಿನಿಧಿ ಸಂಘವನ್ನು ರಚಿಸುವ ವಿಷಯವಾಗಿ [illegible] [illegible] ಈಗಿನ ಸ್ಕೂಲ್ ಕಮಿಟಿಯೇ ಪ್ರತಿನಿಧಿ ಸಂಘದ ಸ್ಥಾನದಲ್ಲಿ ಕೆಲಸ ಮಾಡುವುದಾಗಿ ನಿರ್ಣಯಿಸ.

ಹೊಂದಿ!
ಪೋಸ್ಟಾಫೀಸಿನಿಂದ
ಗಳಿಸಿರಿ 2½% ಲಾಭವನ್ನು
ಆದಾಯ ತೆರಿಗೆ ಇಲ್ಲದ್ದು

ಒಂದು ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ಆರಂಭಿಸಿರಿ.

ಈ ಹಿಂದೆ ಎಂದೂ ಇಲ್ಲದಷ್ಟು ಹೆಚ್ಚಿನ ಬಡ್ಡಿಯನ್ನು ಶೇ. ೨½ ಆದಾಯ ತೆರಿಗೆ ವಿನಾ ಸಂಪಾದಿಸಲು ಪೋಸ್ಟಾಫೀಸಿನವರು ಈಗ ನಿಮಗೆ ವಿಶಿಷ್ಟವಾದ ಒಂದು ಅವಕಾಶವನ್ನು ಕಲ್ಪಿಸಿದ್ದಾರೆ. ನೀವು ಮಾಡಬೇಕಾದದ್ದು ಇಷ್ಟೇ: ೨ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ನಿಮ್ಮ ಹೆಸರಿನಲ್ಲಿ ಠೇವಣಿ ಇಡುವುದರ ಮೂಲಕ ಒಂದು ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟನ್ನು ಆರಂಭಿಸುವುದು. ಸಾಮಾನ್ಯವಾದ ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕ್ ಲೆಕ್ಕದ ವ್ಯವಹರಣೆಯಂತೆ ಈ ಲೆಕ್ಕದ ವ್ಯವಹರಣೆಯೂ ಸುಲಭವಾಗಿದೆ. ಪರಮಾವಧಿಯಲ್ಲಿ ೧೦,೦೦೦ ರೂಪಾಯಿ ವರೆಗೆ ಠೇವಣಿ ಇಡಬಹುದಾಗಿದೆ. ಹತ್ತಿರದ ಪೋಸ್ಟಾಫೀಸಿಗೆ ಹೋಗಿ ಪೂರ್ತಿ ವಿವರಗಳನ್ನು ಕೇಳಿ ತಿಳಿದುಕೊಳ್ಳಿ. ಈಗ ದೊರೆತಿರುವಂತಹ ಈ ಸದವಕಾಶ ಇನ್ನುಮುಂದೆ ನಿಮಗೆ ದೊರೆಯದೆ ಹೋಗಬಹುದು.

ಈ ಬಗ್ಗೆ ಸುದ್ದಿಯನ್ನು ನಿಮ್ಮ ಮಿತ್ರರಿಗೂ ತಿಳಿಸಿ.

ಆರಂಭಿಸಿರಿ ಪೋಸ್ಟಾಫೀಸ್ ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟ್

ಶ್ರೀಮತಿ ಕೃಷ್ಣಾಬಾಯಿ ಪಂಜೀಕರರು ಬಂಧಿತರಾದರು

ಕರ್ನಾಟಕದ ಐದನೆ ಸತ್ಯಾಗ್ರಹಿಗಳ ಪಟ್ಟಿ

ಜಾತೀಯ ದಂಗೆಯಿಂದ ಸತ್ಯಾಗ್ರಹಕ್ಕೆ ತಡೆ

ಮಹಾತ್ಮರ ಸೂಚನೆ

ಜಾತೀಯ ದಂಗೆ ನಡೆದ ಸ್ಥಳಗಳಲ್ಲಿ ಕೆಲವು ದಿನಗಳ ವರೆಗೆ ಸತ್ಯಾಗ್ರಹ ಚಳವಳಿಯನ್ನು ನಿಲ್ಲಿಸಬೇಕೆಂದು ಮಹಾತ್ಮ ಗಾಂಧಿಯವರು ಬಂಗಾಲ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಸೂಚನೆ ಕೊಟ್ಟಿರುವರು. ಈ ಸೂಚನೆಯ ಪ್ರಕಾರ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಸತ್ಯಾಗ್ರಹ ನಿಲ್ಲಿಸುವಂತೆ ಢಾಕಾ ಜಿಲ್ಹಾ ಕಾಂಗ್ರೆಸ ಕಮಿಟಿಯವರಿಗೆ ತಿಳಿಸಿದ್ದಾರೆ

ಪಾಕಿಸ್ಥಾನ ವಿರೋಧಿ ಪರಿಷತ್ತು

ಅಲ್ಲಾಭಕ್ಷರ ಅಧ್ಯಕ್ಷತೆ

ಮದ್ರಾಸಿನಲ್ಲಿ ಪಾಕಿಸ್ಥಾನ ವಿರೋಧ ಪರಿಷತ್ತು ಎಪ್ರಿಲ್ ಎರಡನೆಯ ವಾರದಲ್ಲಿ ಅಲ್ಲಾಭಕ್ಷರ ಅಧ್ಯಕ್ಷತೆಯಲ್ಲಿ ಸೇರಲಿರುವುದೆಂದು ತಿಳಿದುಬಂದಿದೆ

ನೆಹರುಗಳು

ಪಂಡಿತ ಜವಾಹಿರಲಾಲರಿಗೆ ಕೆಲವು ಕೆಯರು ಹಣ್ಣುಹಂಪಲಗಳನ್ನು ಕಳಿಸಿಕೊಡುತ್ತಿದ್ದರು. ಆದರೆ ಅದನ್ನು ಜೈಲು ನಿಯಮಗಳಂತೆ ಮುಟ್ಟಿಸಬರುವುದಿಲ್ಲ. ಆದ್ದರಿಂದ ಹಣ್ಣುಹಂಪಲ ಕಳಿಸಬಾರದಾಗಿ ಜವಾಹಿರಲಾಲರ ಕಾರ್ಯದರ್ಶಿಗಳ ವಿನಂತಿ.

ಶ್ರೀಮತಿ ಪಂಜೀಕರರ ಬಂಧನ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷೆಯರಾದ ಶ್ರೀಮತಿ ಕೃಷ್ಣಾಬಾಯಿ ಪಂಜೀಕರರನ್ನು ಬೆಂಗಳೂರು ಸ್ಟೇಶನಿನಲ್ಲಿ ಬಂಧಿಸಿದರು.

ಮುಂದೆ ಪ್ರಾಂತಿಕ ಅಧ್ಯಕ್ಷರನ್ನಾಗಿ ಶ್ರೀ ...ರಮಕರರನ್ನು ನೇಮಿಸಲಾಗಿದೆಯೆಂದು ತಿಳಿದುಬರುತ್ತದೆ.

ಸಂಯುಕ್ತ ಪ್ರಾಂತ ಕಾಂಗ್ರೆಸ್ ಕಮಿಟಿಯ ಝಡತಿ

ಸೆಕ್ರೆಟರಿಗಳ ಬಂಧನ

ಪೋಲೀಸರು ಎಪ್ರಿಲ್ ತಾರೀಕು ...ರಂದು ಮುಂಜಾನೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯನ್ನು ಝಡತಿಮಾಡಿ ಅಂದು ಸ್ಥಾನ ಸಂರಕ್ಷಣ ಕಾಯದೆಯ ಪ್ರಕಾರ ಕಚೇರಿ ಸೆಕ್ರೆಟರಿಗಳನ್ನೊಳಗೊಂಡು ಇಬ್ಬರನ್ನು ಸೆರೆಹಿಡಿದುಕೊಂಡು ಹೋದರು. ಕೆಲವು ಕಾಗದಪತ್ರಗಳನ್ನಾದರೂ ಅವರು ತೆಗೆದುಕೊಂಡು ಹೋಗಿರುವರೆಂದು ಹೇಳಲಾಗುತ್ತದೆ.

ಪಾರ್ಲಿಮೆಂಟಿನಲ್ಲಿ ಭಾರತ ಚರ್ಚೆ -- ಈಸ್ಟರ್ ನಂತರ

ಪಾರ್ಲಿಮೆಂಟಿನಲ್ಲಿ ಈಸ್ಟರ್ ನಂತರ ಭಾರತದ ವಿಷಯ ಚರ್ಚೆ ನಡೆಯಲಿದೆಯೆಂದು ತಿಳಿದುಬರುತ್ತದೆ. ಜಗದೀಶ ಪ್ರಸಾದರು ವೈಸರಾಯರಿಗೂ ಭಾರತ ಮಂತ್ರಿಗಳಿಗೂ ಕಳುಹಿಸಿದ ತಮ್ಮ ನಿರ್ಣಯದ ವಿಚಾರವಾಗಿ ಪ್ರಾತಿನಿಕತೆ ನಾಮ... ಯಲು ಇನ್ನೂ ಕೆಲದಿನಗಳು ಬೇಕಾಗ...

ಪಾಕಿಸ್ಥಾನ ವಿರುದ್ಧ ಸಮ್ಮೇಳನ

ಅಲ್ಲಾಭಕ್ಷರ ಅಧ್ಯಕ್ಷತೆಯಲ್ಲಿ

ಪಂಡಿತ ರಮಾಕಾಂತ ಮಾಲವೀಯರ ಬಿಡುಗಡೆ

ಪಂಡಿತ ಮದನಮೋಹನ ಮಾಲವೀಯರ ಪುತ್ರ ರಮಾಕಾಂತ ಮಾಲವೀಯರನ್ನು ಮುಂದೆ ರಾಜಕೀಯದಲ್ಲಿ ಕೈಹಾಕುವುದಿಲ್ಲವೆಂದು ತಿಳಿಸಿದ ನಂತರ ಬಿಡುಗಡೆ ಮಾಡಿದ್ದರೆಂದು ತಿಳಿಯುತ್ತದೆ. ಇವರ ಆರೋಗ್ಯವು ಬಹಳ ಕೆಟ್ಟಿತ್ತೆಂದೂ ತಿಳಿದು ಬರುತ್ತದೆ

ಸತ್ಯಾಗ್ರಹಿಗಳ ಕೈಗೆ ಕೋಳ ಹಾಕಬಾರದು

ಮದ್ರಾಸು ಸರಕಾರದ ಪ್ರಕಟಣೆ.

ಸತ್ಯಾಗ್ರಹೀ ಕೈದಿಗಳು ತಪ್ಪಿಸಿಕೊಂಡು ಹೋಗುವುದಿಲ್ಲ. ಆದಕಾರಣ ಅವರ ಕೈಗೆ ಕೋಳಹಾಕಬಾರದು ಎಂದು ಮದ್ರಾಸ ಸರಕಾರವು ಒಂದು ಪ್ರಕಟಣೆ ಹೊರಡಿಸಿದೆ

ಮಗನ ಸತ್ಯಾಗ್ರಹಕ್ಕೆ ತಂದೆಯ ಆತಂಕ

ಪಂಜಾಬದೊಳಗಿನ ಸದಾಬಾದ ಗ್ರಾಮದ—ಲಾಲಾ ಗೌರಿಶಂಕರರವರು ಮಾರ್ಚ ೨ನೇ ತಾರೀಕಿಗೆ ಬಲದೇವ ಗ್ರಾಮದಲ್ಲಿ ಸತ್ಯಾಗ್ರಹ ಮಾಡುವೆವಾಗಿ ತಿಳಿಸಿದರು. ಲಾಲಾ ಗೌರಿಶಂಕರರ ತಂದೆಯವರು ರಾಜನಿಷ್ಠರು. ಅವರಿಗೆ ಸತ್ಯಾಗ್ರಹದ ವಿಚಾರ ಸಮ್ಮತವಿರಲಿಲ್ಲ. ಲಾಲಾ ಗೌರಿಶಂಕರರವರಿಗೆ ಮೆರವಣಿಗೆಯಿಂದ ಸತ್ಯಾಗ್ರಹ ಸ್ಥಳದಲ್ಲಿ ಒಯ್ಯುವಾಗ ಅವರ ತಂದೆಯವರು ಮೆರವಣಿಗೆಯನ್ನು ನುಗ್ಗಿ, ಮಗನನ್ನು ಬೇರೆ ಕಾಂಗ್ರೆಸ ಕಾರ್ಯಕರ್ತರನ್ನು ದೊಣ್ಣೆಯಿಂದ ಹೊಡೆದರು. ಆದಾಗ್ಯೂ ಜನರು ಗಡಿಬಿಡಿ ಮಾಡದೆ ಪ್ರಶಾಂತ ಚಿತ್ತದಿಂದ ಉಳಿದು ಮೆರವಣಿಗೆಯನ್ನು ಯಥಾಕ್ರಮ ನಡಿಸಿ ಸತ್ಯಾಗ್ರಹದ ಕಾರ್ಯವನ್ನು ನೆರವೇರಿಸಿದರು. ಹೀಗೆಲ್ಲ ವಿಚಿತ್ರ ಘಟನೆಗಳು ಸಂಭವಿಸುತ್ತಿದೆ.

ಹರಿಜನ ಪತ್ರಿಕೆಗಳು ಹೊರಡುವುದಿಲ್ಲ

ಮಹಾದೇವ ದೇಸಾಯಿಗಳ ಹೇಳಿಕೆ

ಎಪ್ರಿಲ್ ತಿಂಗಳಲ್ಲಿ ಮಹಾತ್ಮರ ಹರಿಜನ ಪತ್ರಿಕೆಗಳು ಇಂಗ್ಲಿಷ್, ಹಿಂದಿ, ಗುಜರಾಥಿ ಭಾಷೆಗಳಲ್ಲಿ ಹೊರಡುವವೆಂದು ಪ್ರಕಟವಾಗಿತ್ತಷ್ಟೆ? ಆದರೆ ಕೆಲ ಕಾರಣಗಳಿಂದ ಅದನ್ನು ಪ್ರಕಟಿಸಲಾಗುವುದಿಲ್ಲವೆಂದು ಮಹಾದೇವ ದೇಸಾಯಿಗಳು ಪ್ರಕಟಣೆ ಹೊರಡಿಸಿದ್ದಾರೆ

ವೈಸರಾಯರಿಗೆ ಜಿನ್ನಾರವರ ಪತ್ರ

ಲೀಗ ಕೌನ್ಸಿಲ ಗೊತ್ತುವಳಿ ಕಳಿಸಿದರು

ಮಿ. ಜಿನ್ನಾರವರು ೨೯ನೇ ತಾರೀಕಿಗೆ ದಿಲ್ಲಿಯಿಂದ ಹೊರಡುವ ಪೂರ್ವದಲ್ಲಿ ಲೀಗಿನ ಕೌನ್ಸಿಲ ಹಾಗೂ ಕಾರ್ಯಕಾರಿ ಮಂಡಳದಲ್ಲಿ ಇತ್ತೀಚೆಗೆ ಸ್ವೀಕೃತವಾದ ಗೊತ್ತುವಳಿಗಳನ್ನು ವೈಸರಾಯರಿಗೆ ಕಳಿಸಿರುವರೆಂದು ತಿಳಿಯುತ್ತದೆ. ಅದರಲ್ಲಿ ಲೀಗಿನ ಪಾಕಿಸ್ತಾನ ಬೇಡಿಕೆಯನ್ನು ಸ್ಪಷ್ಟೀಕರಿಸಿರುವರೆಂದು ತಿಳಿದುಬರುವದು. ಇದಲ್ಲದೆ ಅವರು ರೇಲ್ವೆ ನೌಕರಿಗಳಲ್ಲಿಯ ಮುಸಲ್ಮಾನರ ಸಂಕಷ್ಟಗಳ ಸಂಬಂಧದಲ್ಲಿ ಮಧ್ಯವರ್ತಿ ಕಾರ್ಯಕಾರಿ ಮಂಡಳದ ಲೀಗ್ ಸಭಾಸದರ ಒಂದು ಮನವಿಯನ್ನೂ ವೈಸರಾಯರಿಗೆ ಸಾದರಪಡಿಸಿರುವರೆಂದು ಹೇಳಲಾಗುತ್ತದೆ.

ಒಂದು ರೂಪಾಯಿ ಹರಕು ನೋಟುಗಳು

ಮರಾಯಿಸಲು ಅನುಕೂಲತೆಗಳು

ಸರಕಾರದ ಪ್ರಕಟಣೆಯೊಂದು ಹೀಗಿದೆ - ತುಂಡಾದ ಅಥವಾ ಹರಕಾದ ಒಂದು ರೂಪಾಯಿಯ ನೋಟುಗಳನ್ನು ಮರಾಯಿಸುವ ವಿಷಯದಲ್ಲಿ ಪ್ರತ್ಯೇಕವಿದ್ದ ಏರ್ಪಾಡಿನ ಕುರಿತು ಬಂದ ದೂರುಗಳ ದೆಸೆಯಿಂದ ಆ ಬಗ್ಗೆ ಒದಗುವ ಅನಾನುಕೂಲತೆಯನ್ನು ನಿವಾರಿಸುವ ಬಗ್ಗೆ, ಸದರಿ ತಾಜಾ ಹರಕು ನೋಟುಗಳನ್ನು ಗುರುತಿಸಲು ಪ್ರತಿಬಂಧಕವಿಲ್ಲದಿದ್ದು ಅಥವಾ ಮೋಸಕರದ್ದೆಂದು ಗುಮಾನಿಯಿಲ್ಲದಿದ್ದು, ಅಂದರೆ ಅವುಗಳ ಅರ್ಧಾಂಶಕ್ಕೂ ಹೆಚ್ಚಿನ ಭಾಗವು ಮುಂಚಿನ ಸ್ಥಿತಿಯಲ್ಲಿಯೇ ಇದ್ದ ಪಕ್ಷಕ್ಕೆ ಅವುಗಳ ಸಂಪೂರ್ಣ ಮೌಲ್ಯದಷ್ಟು ಹಣ ತೆಗೆಬೇಕೆಂದು ಯಾವತ್ತು ಟ್ರೆಜರಿ ಆಫೀಸರರಿಗೂ ಇಂಪೀರಿಯಲ್ ಬೇಂಕಿನ ಶಾಖೆಗಳಿಗೂ ಸೂಚನೆ ಕೊಟ್ಟಿದೆ. ಅಂತಹ ನೋಟುಗಳು ತುಂಡಾಗಿ, ಅಥವಾ ಹರಕಾಗಿ ಇದ್ದು ಅವುಗಳನ್ನು ಸರಿಯಾಗಿ ಗುರುತಿಸಲು ಸಾಧ್ಯವಿಲ್ಲವೆಂದಾದರೆ, ಈಗ ಜಾರಿಯಲ್ಲಿರುವ ಕ್ರಮದಂತೆ ಅವುಗಳನ್ನು ಮರಾಯಿಸಲಿಕ್ಕೆ ರಿಜರ್ವ ಬೇಂಕಿಗೆ ಅರ್ಜಿಮಾಡಬಹುದಾಗಿದೆ

ಮಂಗಳೂರು

ಸತ್ಯಾಗ್ರಹ:—ಶ್ರೀ. ಪಿ. ಮಾಧವ ... ರಥಬೀದಿಯ ವೆಂಕಟ್ರಮಣ ದೇವಸ್ಥಾನದ ಮುಂದುಗಡೆಯಲ್ಲಿ ತಾ ... ರಂದು ಯುದ್ಧ ವಿರುದ್ಧ ಘೋಷಣೆ ಸತ್ಯಾಗ್ರಹ ಮಾಡಿದರು. ಪೋಲೀಸರು ಹಾಜರಿದ್ದರೂ ಅವರನ್ನು ಬಂಧಿಸಲಿಲ್ಲ. ಅವರು ಕಾಲ್ನಡೆಯಿಂದ ಹೊರಟಿದ್ದಾರೆ



ಯುಗೋಸ್ಲೇವಿಯದಲ್ಲಿ ಗಡಿಬಿಡಿ ಹೆಚ್ಚಿದೆ!

ಯುಗೋಸ್ಲೇವಿಯಾ ಬಗ್ಗೆ ಜರ್ಮನಿಯ ಕಳವಳ

ವಿದೇಶಾಂಗ ನೀತಿಗೆ ತೊಂದರೆ ಕೊಡುವ ಸೂಚನ

ಯುಗೋಸ್ಲೇವಿಯಾದಲ್ಲಿ ಜರ್ಮನ್ ವಿರೋಧ ಭಾವನೆ

ಬೆಲ್‌ಗ್ರೇಡಿನಲ್ಲಿರುವ ಜರ್ಮನ್ ರಾಯಭಾರ ಮಂತ್ರಿಯನ್ನು ಬರ್ಲಿನಿಗೆ ಬರಬೇಕೆಂದು ಆಜ್ಞಾಪಿಸಲಾಗಿದೆಯೆಂದು ಅನಧಿಕೃತ ವರದಿಯೊಂದು ತಿಳಿಸುತ್ತದೆ. ಹೊರಡುವ ಮುನ್ನ ಆ ರಾಯಭಾರ ಮಂತ್ರಿಯು ಹೊಸ ಯುಗೋಸ್ಲೇವಿಯಾ ವಿದೇಶಾಂಗ ಮಂತ್ರಿಯನ್ನು ಭೇಟಿಮಾಡಿದರು.

ಯುಗೋಸ್ಲೇವಿಯಾದಲ್ಲಿ ಉಂಟಾದ ಹೊಸ ಪರಿಸ್ಥಿತಿಯ ಬಗ್ಗೆ ಜರ್ಮನಿಯ ಕಳವಳವು ಈಗ ತಾನೆ ಹೊರಪಟ್ಟಿರುವ ಅಧಿಕಾರಿ ಹೇಳಿಕೆಯಲ್ಲಿ ಗೊತ್ತಾಗುವುದು. ಈ ಹೇಳಿಕೆಯು ಜರ್ಮನಿಯ ವಿದೇಶಾಂಗ ಕಚೇರಿಯ ಪತ್ರಿಕೆಯಲ್ಲಿ ಪ್ರಕಟವಾಗಿದೆ

ಈಗ ನಡೆದಿರುವ ಕ್ರಾಂತಿಯು ಕೇವಲ ಒಳದೇಶದ ನೀತಿಗೆ ಸಂಬಂಧಿಸಿದುದೆಂದೂ, ವಿದೇಶಾಂಗ ನೀತಿಗೆ ಇದರಿಂದೇನೂ ತೊಂದರೆಯಾಗಲಾರದೆಂದೂ ಅರ್ಥ ಬರುವ ಹೇಳಿಕೆ ಹೊರಟಿದೆ ಆದರೆ ಈ ಹೇಳಿಕೆಯನ್ನು ಜರ್ಮನಿಯು ಒಪ್ಪಲಾರದು. ದೇಶದಲ್ಲೆಲ್ಲಾ ಜರ್ಮನ್ ವಿರೋಧವು ನೆಲಸಿದೆ.

ಬೆಲ್‌ಗ್ರೇಡಿನಲ್ಲಿ ಗಲಾಟೆ

ಗಲಾಟೆಗಳನ್ನು ನಿಲ್ಲಿಸಲು ಸೈನಿಕರನ್ನು ಕರೆಸಲಾಯಿತು

ಯುಗೋಸ್ಲೇವಿಯಾ ಮುಖ್ಯ ಮಂತ್ರಿಯೂ, ವಿದೇಶಾಂಗ ಮಂತ್ರಿಯೂ ತ್ರಿರಾಷ್ಟ್ರ ಒಪ್ಪಂದಕ್ಕೆ ಸಹಿ ಹಾಕಿ ಈಗ ವಿಯನ್ನಾದಿಂದ ಬೆಲ್‌ಗ್ರೇಡಿಗೆ ವಾಪಾಸು ಬಂದರು

ಅವರು ಬಂದ ಕೂಡಲೇ ರಾಜಧಾನಿಯಲ್ಲಿ ವಿರೋಧ ಪ್ರದರ್ಶನಗಳಾದವು ಈ ವಿರೋಧ ಪ್ರದರ್ಶನಗಳನ್ನು ಹತೋಟಿಗೆ ತರಲು ಪೋಲೀಸ್ ಉಸ್ತುವಾರಿಯನ್ನು ಜಾಸ್ತಿ ಮಾಡಲಾಯಿತು.

ಅಶಾಂತಿಯುತರಾದ ಜನರನ್ನು ಶಾಂತಗೊಳಿಸಬೇಕಾದರೆ ಸೈನಿಕರನ್ನು ಕರೆಸಬೇಕಾಗಿ ಬಂದಿತೆಂದು ಏಜನ್ಸಿ ಸುದ್ದಿ ತಿಳಿಸುತ್ತದೆ.

ಬೆಲ್‌ಗ್ರೇಡಿನಲ್ಲಿರುವ ಶಾಲೆಗಳೆಲ್ಲಾ ಸೋಮವಾರದ ವರೆಗೆ ಮುಚ್ಚಲಾಗಿದೆ

ಯುಗೋಸ್ಲೇವಿಯಾದ ಎಲ್ಲ ಕಡೆಗಳಲ್ಲಿಯೂ ಗಲಾಟೆ

ಆಕ್ಸಿಸ್ ಒಪ್ಪಂದಕ್ಕೆ ಯುಗೋಸ್ಲೇವಿಯಾವು ಸಹಿ ಹಾಕಿದುದರಿಂದ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಲು ಯುಗೋಸ್ಲೇವಿಯಾದ ಎಲ್ಲೆಡೆಗಳಲ್ಲಿ ದಂಗೆಗಳು, ಗಲಾಟೆಗಳೂ ಆಗುತ್ತಿವೆಯೆಂದು ವರದಿಗಳು ಬರುತ್ತಿದೆ

ಜರ್ಮನ್ ರೇಡಿಯೋವಿನ ಎಚ್ಚರಿಕೆ

ಒಪ್ಪಂದಕ್ಕೆ ಸಹಿ ಹಾಕಿದ ಕೆಲವು ಗಂಟೆಗಳ ನಂತರ ನಿನ್ನೆ ರಾತ್ರಿ ಜರ್ಮನ್ ರೇಡಿಯೋವು 'ಯುಗೋಸ್ಲೇವಿಯಾದಲ್ಲಿ ಗಲಾಟೆಗಳಾದರೆ ಅವನ್ನು ತುಳಿಯಲು ಜರ್ಮನ್ ಸೈನ್ಯಗಳು ಯುಗೋಸ್ಲೇವಿಯಾಕ್ಕೆ ಹೊರಡು ಬರುವುವು'' ಎಂದು ಎಚ್ಚರಿಕೆಯಿತ್ತಿತು.

ಬೆಲ್‌ಗ್ರೇಡ್ ನಗರದ ಎಲ್ಲಾ ರಸ್ತೆಗಳಲ್ಲಿಯೂ ಕೂಡ ಸೈನ್ಯಗಳನ್ನು ಕರೆಸಲಾಗಿದೆ

ಬೆಲ್‌ಗ್ರೇಡ್ ನಗರದ ಮಧ್ಯಭಾಗದಲ್ಲಿ ಈ ಬೆಳಿಗ್ಗೆ ಗಲಭೆಯು ಪ್ರಾರಂಭವಾಯಿತು ಗಲಾಟೆಯನ್ನು ಶಾಂತಗೊಳಿಸುವ ಉದ್ದೇಶದಿಂದ ಪೋಲೀಸರೂ, ಸೈನಿಕರೂ ಜನರ ಮೇಲೆ ಬಿದ್ದರು

ಜರ್ಮನರನ್ನು ವಿರೋಧಿಸಿ ಹಸ್ತಪತ್ರಿಕೆಗಳನ್ನು ಹಂಚಲಾಗಿದೆ

ಯುಗೋಸ್ಲೇವಿಯಾವು ತ್ರಿರಾಷ್ಟ್ರ ಒಪ್ಪಂದಕ್ಕೆ ಸೇರಿದುದರಿಂದ ಟರ್ಕಿ ಮತ್ತು ಗ್ರೀಸ್‌ಗಳಿಗೆ ಚಿಂತೆಯುಂಟಾಗಿದ್ದರೂ, ಅವಕ್ಕೆ ನಿರಾಶೆಯೇನೋ ಉಂಟಾಗಿದೆ ಗ್ರೀಸ್ ಮಾತ್ರ ಕೊನೆಯ ಜಯ ಪಡೆಯುವವರೆಗೂ ಹೋರಾಟವನ್ನು ನಡೆಸಿಕೊಂಡು ಹೋಗಲು ನಿರ್ಧರಿಸಿದೆ

ಸಿರಿಯಾದಲ್ಲಿಯೂ ಸ್ವಾತಂತ್ರ್ಯ

ಸಿರಿಯದ ಅನೇಕ ಕಡೆಗಳಲ್ಲಿ ದೊಂಬಿಗಳು ಪ್ರಾರಂಭವಾಗಿವೆ ಕ್ಷೋಭೆಗಳು ನಡೆದಿವೆ...

—ಜರ್ಮನಿಯ ವಿರುದ್ಧ ಬಂಡಾಯ—

ಜಪಾನಿನ ರಾಯಭಾರಿ ಹಿಟ್ಲರನನ್ನು ಕಂಡನು

ಸಿರಿಯಾಕ್ಕೆ ಸ್ವಾತಂತ್ರ್ಯ ಬೇಕಾಗಿದೆ

...ಮುಚ್ಚಲ್ಪಟ್ಟಿವೆ ವಾಹನ ಸಂಚಾರಗಳು ನಿಂತಿವೆ ಸಿರಿಯಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ರಾಷ್ಟ್ರೀಯ ಶಾಸನ ಸಭೆಯನ್ನು ಸ್ಥಾಪಿಸಬೇಕೆಂದು ಅಲ್ಲಿನ ರಾಷ್ಟ್ರೀಯ ಪಕ್ಷದ ಮುಖಂಡರು ಚಳವಳಿ ಮಾಡುತ್ತಿದ್ದಾರೆ (ಸಿರಿಯಾವು ರಾಷ್ಟ್ರಸಂಘದವರಿಂದ ಫ್ರಾನ್ಸಿಗೆ ಕೊಡಲಾಯಿತು ೧೯೪೦ರಲ್ಲಿ ಅದಕ್ಕೆ ಸ್ವಾತಂತ್ರ್ಯ ಕೊಡಲಾಗುವುದೆಂದು ಫ್ರಾನ್ಸ್ ಕೊಟ್ಟ ಭರವಸೆ ಹಾಳಾಯಿತು)

ಅಮೇರಿಕದಲ್ಲಿ ವಿಮಾನ ಹೆಚ್ಚುತ್ತಿವೆ

ಹದಿಮೂರು ಪಾಲು ಅಧಿಕ

ಅಮೇರಿಕದಲ್ಲಿ ಈಗ ೧೯೩೯ನೆಯ ಸಪ್ಟಂಬರದಿಂದ ವಿಮಾನಗಳು ಅಧಿಕ ತಯಾರಾಗುತ್ತಿವೆ ಮೊದಲಿನ ಸಂಖ್ಯೆಗಿಂತ ಇಂದು ಹದಿಮೂರು ಪಾಲು ಹೆಚ್ಚಿದೆಯೆಂದು ತಿಳಿದುಬರುತ್ತದೆ

ನಾರ್ವೆಯಲ್ಲಿ ಪ್ರಚಂಡ ಸೈನ್ಯದಾಳ್ವಿಕೆ

ನಾರ್ವೆಯಲ್ಲಿ ಪ್ರಚಂಡ ಕ್ರೂರ ಸೈನ್ಯದಾಳ್ವಿಕೆಯು ಆರಂಭವಾಗಿದೆ ಹಿಟ್ಲರನ ಪ್ರತಿನಿಧಿಯು ಈ ಹುಕುಂ ಕೊಟ್ಟಿರುವನು

ಯುಗಸ್ಲವಿಯದಲ್ಲಿ ಗಂಡಾಂತರ ಘೋಷಣ

ಜನರು ಶಾಂತರಾಗಿರಬೇಕು

ಯುಗಸ್ಲವಿಯದಲ್ಲಿ ಜನರೆಲ್ಲರೂ ಶಾಂತರಾಗಿರಬೇಕೆಂದು ಘೋಷಿಸಲಾಗಿದೆ

ಹಿಟ್ಲರ್ ಮಟ್ಸುವೋಕಾ ಚರ್ಚೆ

ಜಪಾನೀ ವಿದೇಶ ಮಂತ್ರಿಗಳಾದ ಮಟ್ಸುವೋಕಾ ಜರ್ಮನ್ ವಿದೇಶ ಮಂತ್ರಿ ಹೆರ್ ವಾನ್ ರಿಬನ್‌ಟ್ರಾಪನೊಡನೆ ಹೋಗಿ ಹಿಟ್ಲರನನ್ನು ಕಂಡು ರಾಜಕೀಯ ಮಾತುಕತೆ ನಡೆಸಿರುವುದಾಗಿ ತಿಳಿದುಬರುತ್ತದೆ ಯೂರೋಪ್ ಏಷ್ಯಾ ಖಂಡಗಳ ರಾಜಕೀಯವು ಚರ್ಚಿಸಲಾಯಿತೆಂದು ಸುದ್ದಿ

ಯುಗಸ್ಲವಿಯದ ಬಗ್ಗೆ ಮುಂದೇನು?

ಇಟಲಿ-ಜರ್ಮನಿಗಳ ಮೌನ

ಯುಗಸ್ಲವಿಯದಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಇಟಲಿ ಜರ್ಮನಿಗಳು ಮುಂದೆ ಏನು ಮಾಡತಕ್ಕವಿವೆಯೆಂಬ ವಿಚಾರವಾಗಿ ಯಾವ ಅಧಿಕೃತ ಸುದ್ದಿಯೂ ಬಂದಿಲ್ಲ

ಹಿಟ್ಲರನು ಸೋಲುವ ವರೆಗೂ ಏನೂ ಹೇಳುವುದಿಲ್ಲ

ನರೇಂದ್ರ ಮಂಡಳಿಯ ಸೂಚನೆಗೆ ಚರ್ಚಿಲ್ಲರ ವಿಚಿತ್ರ ಉತ್ತರ

ನರೇಂದ್ರ ಮಂಡಳಿಯ ಮಾರ್ಚಿ ೧೪ನೆಯ ಬ್ರಿಟಿಷ್ ಸಾಮ್ರಾಜ್ಯ ಸರಕಾರಕ್ಕೆ ಸಹಾಯ ಮಾಡುವ ಕುರಿತು ಒಂದು ನಿರ್ಣಯವನ್ನು ಮಾಡಿ ಚರ್ಚಿಲ್ಲರಿಗೂ ಅದರ ಪ್ರತಿಯನ್ನು ಕಳುಹಿಸಿದರು. ಈಗ ಅದಕ್ಕೆ ಚರ್ಚಿಲರು ಈ ರೀತಿ ಉತ್ತರವಿತ್ತಿರುವರು:

ನಿಮ್ಮ ನಿರ್ಣಯವನ್ನೂ ನಿಮ್ಮ ಸಹೋದ್ಯೋಗಿಗಳ ಮನಸ್ಸಿನ ಕರಗಿತ... ಸನ್ನಿವೇಶದ ಬಗ್ಗೆ ನೀವು ಪ್ರಶಂಸನೀಯ ಮಾತುಗಳನ್ನು ಹೇಳಿದ್ದು ಕೇಳಿ ನನಗೆ ಅತ್ಯಾನಂದವೇ ಆಯಿತು. ... ತೋರಿಸಿದ ಸಾಹಸವನ್ನು ಸರಕಾರವು ಎಂದೂ ಮರೆಯಲಾರದು. ನೀವು ಮಾಡುವ ಸಹಾಯವನ್ನೂ ನಾವು ಅಭಿನಂದಿಸುತ್ತೇವೆ.

ಯುದ್ಧವು ಮುಗಿದ ನಂತರ ... ಮಾಡಲಾಗುವುದು ಎಂಬೀ ವಿಚಾರಗಳಿಗೆ ಚರ್ಚಿಲ್ಲರು ಉತ್ತರ ಕೊಡಲಿಲ್ಲ. ... ರಾಷ್ಟ್ರೀಯ ... ಪ್ರಶ್ನೆಗಳಿಗೆ ಉತ್ತರ ಕೊಡದಿರುವುದು ಅವಶ್ಯವಿದೆಯೆಂದು ಅವರು ಹೇಳಿದರು. 'ಹಿಟ್ಲರನು ಸೋಲುವ ವರೆಗೆ ಏನೂ ಹೇಳುವುದಿಲ್ಲ. ಈ ಧೋರಣೆಗೆ ದಾಸರೆಲ್ಲರೂ ಬೆಂಬಲ ಕೊಟ್ಟಿದ್ದಾರೆ ಇಂಗ್ಲೆಂಡ್ ... ಸರಕಾರವನ್ನು ಸ್ಥಾಪಿಸುವಾಗ ಕೇವಲ ಒಂದೇ ಪಕ್ಷದ ಕಡೆಗೆ ಗಮನ ಕೊಡದೆ ಎಲ್ಲಾ ಪಕ್ಷಗಳ ಕಡೆಗೂ ವಿಚಾರ ಮಾಡುವುದು' ಎಂದಿರುವರು



ಶಾಲಾ ಪುಸ್ತಕಗಳು

*ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ; ತಿಳಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತದೆ. ಎರಡನೆಯ ಆವೃತ್ತಿಯು ಹೊರಬೀಳಲಿದೆ.

ಬೆಲೆ: ಒಂದೊಂದು ತರಗತಿಗೆ 0 6 0.

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ **ಬೆಲೆ 0-2-0.**
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ **ಬೆಲೆ 0-2-6**

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕವನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು, ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು; ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವಾಗಿದೆ. ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು; ಬಹಳ ಸ್ವಾರಸ್ಯವಾದುವುಗಳೆಂದೂ; ಬೋಧಪ್ರದಗಳೆಂದೂ.

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ. ಬಿ. ಶ್ರೀನಿವಾಸರಾವ್ ಮತ್ತು ಬಿ ದೂಮಪ್ಪನವರಿಂದ ರಚಿತವಾದದು

೪ನೆಯ ತರಗತಿಗೆ **ಬೆಲೆ 0 4 0** ೫ನೆಯ ತರಗತಿಗೆ **ಬೆಲೆ 0 5 0**

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿವೆ. ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ.

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ.

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮಾತ್ರ ಮೊದಲಾಗಿ ರಚಿತವಾದುವು. ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ, ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಬಾರದು ಬೇಕೆಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ. ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ.

ಬೆಲೆ: ೪, ೫ನೆಯ ತರಗತಿಗೆ 0-1-6 *೬ನೆಯ 0—2—0
*೭ನೆಯ 0-2-6 *೮ನೆಯ 0-3-0

ಸಿರಿಗನ್ನಡ ಪಾಠಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ. ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ, ತರುವಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪುಸ್ತಕದ ರಚನೆಯಾಗಿರುತ್ತದೆ.

ಬೆಲೆ: 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು:

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 6

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ಪ್ರಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದುತ್ತಮ.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಶಕ್ತಿಯ ಗುಟ್ಟು

ಶರೀರ ಗಾತ್ರವು ದೊಡ್ಡದಾಗಿದ್ದರೂ ಕೆಲವರು ಕ್ಷೀಣ ಶರೀರದವರಷ್ಟು ಕಷ್ಟ ಸಹಿಸಲು ಅಶಕ್ತರಾಗಿರುವುದರ ಕಾರಣವೇನು? ಹಲವು ವೇಳೆ ಶರೀರದ ಹೊರಗಿನ ಶಕ್ತಿಯ ಹೆಮ್ಮೆಯಿಂದ ಜನರು ಶರೀರದ ಅಂತರಂಗ ಯಂತ್ರಗಳ ವಿಷಯದಲ್ಲಿ ಪೂರಾ ಅಲಕ್ಷ್ಯ ಮಾಡುವುದುಂಟು; ಇದರಿಂದಲೇ ಈ ತರದ ನಿಶ್ಶಕ್ತತೆಯುಂಟಾಗುವುದು.

ಶರೀರವು ಮಾಂಸಲವಾಗಿರುವುದರಿಂದ ಮಾತ್ರ, ಮಲಕೋಶದ ಸ್ವಚ್ಛತೆ, ಶುದ್ಧವಾಯು ಸೇವನೆ, ನಾಲಗೆ ರುಚಿ ಮೊದಲಾದವು ಉಂಟಾಗಲಾರವು. ಶರೀರದ ಚೈತನ್ಯವು, ಅಂತರಂಗ ಶುಚಿತ್ವದಿಂದ ಮಾತ್ರ ಹೆಚ್ಚುವುದು. ಹೊಟ್ಟೆಯೊಳಗೆ ಕಶ್ಮಲಗಳಿದ್ದರೆ ಅದರಿಂದ ಎಂತಹ ಬಲಶಾಲಿಯೂ ನಿಶ್ಶಕ್ತನಾಗುವನು.

ಹೊಟ್ಟೆ, ಕರುಳು, ಪಿತ್ತಕೋಶ, ಇವೆಲ್ಲಾ ದಿನನಿತ್ಯವೂ ಶುಚಿಯಿರಬೇಕು; ಚೈತನ್ಯದಿಂದ ಕೂಡಿರಬೇಕು. ಒಂದು ಟಿನ್ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಕ್ಕೊಳ್ಳುವುದರಿಂದ ಇವೆಲ್ಲಾ ಆಗುವುದು. ಸಿದ್ಧವಾದ ಶಕ್ತಿ ಚೈತನ್ಯಗಳ ಲಾಭಕ್ಕೆ ಇದೇ ಗುಟ್ಟು ಆಗಿದೆ.

ಕರ್ನಾಟಕಸ್ಥರಲ್ಲಿ ಬಿನ್ನಹ

ನಾನು 'ಮಿಂಚಿನಬಳ್ಳಿ'ಯ ಮುಖಾಂತರ ತಮ್ಮ ಸೇವೆಯನ್ನು ಕೈಕೊಂಡಿದ್ದೆ. ವಿಚಾರ ಕ್ರಾಂತಿಯನ್ನೇ ತನ್ನ ಧ್ಯೇಯವನ್ನಾಗಿಟ್ಟುಕೊಂಡು ಈ ಮಿಂಚಿನಬಳ್ಳಿಯು ಈ ಮೂರು ವರುಷಗಳಲ್ಲಿ ೬೩ ಗ್ರಂಥಗಳನ್ನು ಪ್ರಕಟಿಸಿ ಸಲ್ಲಿಸಿದ ಸೇವೆಯು ತಮ್ಮೆಲ್ಲರಿಗೂ ಗೊತ್ತೇ ಇದೆ. ನಾನು ಈಗ ರಾಷ್ಟ್ರದ ಕರೆಯಂತೆ ಸತ್ಯಾಗ್ರಹ ಸಮರದಲ್ಲಿ ಧುಮುಕಿದ್ದರಿಂದ ಸಮರವು ಮುಗಿಯುವ ವರೆಗೆ ಮಿಂಚಿನ ಬಳ್ಳಿಯ ಸಂಪಾದಕತ್ವವನ್ನು ವಹಿಸಲು ಶ್ರೀ ರಂ. ಬಾ. ಜೋಶಿ ಅವರಿಗೂ ಪಾವತಿಯ ಎಲ್ಲ ವ್ಯವಸ್ಥೆಯನ್ನು ಕೈಕೊಳ್ಳಲು ಮನೋಹರ ಗ್ರಂಥ ಭಂಡಾರದ ಶ್ರೀ. ಜುಳಕಿ ಗೋವಿಂದರಾಯರಿಗೂ ಧನ್ಯವಿಸಿಕೊಂಡಿದ್ದೇನೆ. ಕನ್ನಡಿಗರು ಈ ಮೂರು ವರುಷ ಈ ರಾಷ್ಟ್ರೀಯ ವಿಧಾಯಕ ಕಾರ್ಯಕ್ಕೆ ನೀಡಿದ ಬೆಂಬಲದಂತೆ ಮುಂದೆಯೂ ನೆರವಾಗಿ ಮಿಂಚಿನಬಳ್ಳಿಯ ಚಿರಾಯುವಾಗುವಂತೆ ಮಾಡಬೇಕೆಂದು ಕರ್ನಾಟಕಸ್ಥರಲ್ಲಿ ಬಿನ್ನವಿಸಿಕೊಳ್ಳುತ್ತೇನೆಂದು ಬುರ್ಲಿ ಬಿಂದುಮಾಧವರು ತಿಳಿಸುತ್ತಾರೆ.

ಓರಿಯೆಂಟಲ್ ಗವರ್ನಮೆಂಟ್ ಸೆಕ್ಯುರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ವರ್ಷ 1940.

ಈ ಕಂಪೆನಿಯು ಕಳೆದ ವರ್ಷದಲ್ಲಿ ರೂ. 7,48,85,948ರ 35,764 ಪೋಲಿಸಿಗಳನ್ನು ಪಡೆದಿದೆಯೆಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಈ ಸಂಖ್ಯೆಯು ಸಂಸ್ಥೆಯ ಪ್ರಗತಿಯನ್ನು ತೋರಿಸುತ್ತದೆ.

★ ವಿಚಿತ್ರ-ಪ್ರಪಂಚ ★

ಪ್ರೇತಲೋಕದಿಂದ ಬ್ರಿಟಿಶರಿಗೆ ಸಂದೇಶ

ಭವಿಷ್ಯವಾದಿಗಳಾದ ಜನರು ಹಿಂದು ಸ್ಥಾನದಲ್ಲಿರುವಂತೆ ವಿಲಾಯತಿಯಲ್ಲೂ ಇದ್ದಾರೆ. ಅವರೂ ಜ್ಯೋತಿಷ, ನಿಮಿತ್ತ, ಕಾರಣಿಕ, ದರಶನ ಮೊದಲಾದವುಗಳಲ್ಲಿ ನಂಬಿಕೆಯನ್ನಿಡುತ್ತಾರೆ. ಮೊನ್ನೆ ತಾನೇ ಒಂದು ವಿಚಿತ್ರ ವರ್ತಮಾನವು ಪ್ರಕಟವಾಗಿದೆ. ವೇಲ್ಸ ದೇಶದಲ್ಲಿರುವ ಡೇನಿಯಲ್ ಎಡ್ವರ್ಡ್ಸ್ ಎಂಬ ಪಾತ್ರಿಯು ತನ್ನ ಮೇಲೆ ಇಂಗ್ಲಂಡಿನ ದಿವಂಗತ ಮುಖ್ಯಮಂತ್ರಿಗಳೂ, ಪ್ರಖ್ಯಾತ ರಾಜಕಾರಣಿಗಳೂ ಆಗಿದ್ದ ಗ್ಲಾಡ್‌ಸ್ಟನ್ನರ ಪ್ರೇತದ ಆವೇಶವಾಗಿ ಯುದ್ಧವಿಷಯವಾಗಿ ಹೀಗೆ ಒಂದು ಸಂದೇಶವನ್ನು ಕೊಟ್ಟಿರುತ್ತಾರೆ—'ಬ್ರಿಟನಿನ ನನ್ನ ಸ್ನೇಹಿತರೆ' ನೀವು ನಿರೀಕ್ಷಿಸಿರುವದಕ್ಕಿಂತಲೂ ಶೀಘ್ರದಲ್ಲಿ ನಿಮಗೆ ಯುದ್ಧದಲ್ಲಿ ವಿಜಯ ಲಾಭವಾಗುವದು. ಈ ವಿಷಯದಲ್ಲಿ ನಿಮಗೆ ಯಾವ ಸಂದೇಹವೂ ಬೇಡ. ಧೈರ್ಯದಿಂದ ಶತ್ರುವನ್ನು ಕಾದಿರಿ' ಸರ್ ಜ್ಞಾನ್ ಎಂಡರ್ಸನ್ನರೇ ಈ ವಿಷಯವನ್ನು ಅಲ್ಲಿಯ ಪತ್ರಿಕೆಗಳಲ್ಲಿ ಪ್ರಸಿದ್ಧಿಸಿದ್ದಾರೆ. ಆದ್ದರಿಂದ ಜನರು ಬಹಳ ಸಂತೋಷದಲ್ಲಿರುವರು.

ದಾಂಪತ್ಯವಿಚ್ಛೇದಕ್ಕೆ ವಿಚಿತ್ರ ಕಾರಣ

ವಾಷಿಂಗ್ಟನ್ ನಗರದ ಒಬ್ಬ ವಿದ್ಯಾವತಿಯಾದ ಹೆಂಗುಸು ದಾಂಪತ್ಯವಿಚ್ಛೇದಕ್ಕೆ ದಾವಾಮಾಡಿ, ಅದಕ್ಕೆ ವಿಚಿತ್ರ ಕಾರಣಗಳನ್ನು ಕೊಟ್ಟಿದ್ದಾಳೆ. ಅವುಗಳಲ್ಲಿ ಮುಖ್ಯವಾದುದು ಯಾವುದೆಂದರೆ— ಮದುವೆಯಾದ ಮೇಲೆ ಮಕ್ಕಳಾಗದ ಹಾಗೆ ನೋಡುತ್ತೇನೆ, ಅದರ ಜವಾಬುದಾರಿ ನನ್ನ ಮೇಲೆ" ಎಂದು, ಆಕೆಯ ಗಂಡ ಅವಳಿಗೆ ಮಾತುಕೊಟ್ಟಿದ್ದ. ಆದರೆ ಮದುವೆಯಾಗಿ ಒಂದು ವರ್ಷವಾಗಬೇಕಾದರೆಯೇ ಅವಳು ಹೆತ್ತು ಒಂದು ಗಂಡು ಮಗುವಿನ ತಾಯಿ ಆಗಬೇಕಾಯಿತು. ಮಗುವಿಗೆ ಹಾಲು ಕೊಟ್ಟು, ಹೆತ್ತು ಅವಳ ದೇಹಸೌಂದರ್ಯವೂ ಆರೋಗ್ಯವೂ ಕೆಟ್ಟಿತು." ಎಂದು ಅವಳು ಹೇಳಿದ್ದಾಳೆ. ಅಮೇರಿಕದಲ್ಲಿ ಮದುವೆಗಳಾಗುವುದು ಮಕ್ಕಳಾಗಲಿಕ್ಕೆ ಅಲ್ಲ; ಪರಂತು ಶರೀರ ಸುಖವನ್ನು ಅನುಭವಿಸಲಿಕ್ಕಾಗಿಯಷ್ಟೇ ಅಲ್ಲಿ ಮದುವೆಗಳಾಗುವವು.

ಭಾರತದ ಹಣ್ಣು ಮುದುಕ

ನಾಗಪುರದಲ್ಲಿ ಸಿದ್ಧ ವಸ್ತಾದನೆಂಬ ಒಬ್ಬ ಅತಿವೃದ್ಧ ಭಾರತೀಯನಿದ್ದಾನೆ. ಇವನಂಥ ಹಣ್ಣು ಮುದುಕ ಭಾರತದಲ್ಲಿ ಇನ್ನಾರು ಇರಲಾರರೆಂದೇ ಜನರು ಊಹಿಸಿರುವರು. ಮಧ್ಯಪ್ರಾಂತದಲ್ಲಿಯಂತೂ ಅವನೇ ಅತಿ ವೃದ್ಧನಾಗಿರುವನಂತೆ. ಇವನ ತಾಯಿ ಅರಬ್ಬೀ ದೇಶದವಳು. ತಂದೆ ಸಿದ್ಧ ಜಾತಿಯವ. ಬರೋಡದ ಈಗಿನ ಮಹಾರಾಜರ ಅಜ್ಜಂದಿರಾದ ಶ್ರೀ ಖಂಡೇರಾವ್ ಗಾಯಕವಾಡರವರು ಆಳುತಿದ್ದಾಗ ಈ ಸಿದ್ಧಿ ವಸ್ತಾದನು ಅವರ ಆಸ್ಥಾನದಲ್ಲಿ ಜಗಜಟ್ಟಿಯೆಂದು ಪ್ರಸಿದ್ಧನಾಗಿ ಇದ್ದನೆಂದು ಅವನೇ ಹೇಳುತ್ತಾನೆ. ಅವನಿಗೆ ಮೈಸೂರು ಯುದ್ಧ ಮತ್ತು ಅದರಲ್ಲಿ ಟಿಪ್ಪು ಸುಲ್ತಾನನ ಮರಣವಾದ್ದು ನೆನಪಿನಲ್ಲಿದೆ. ಕೊನೆಯ ಮೊಗಲ್ ಸಮ್ರಾಟನನ್ನು ಅವನು ಕಣ್ಣಾರೆ ಕಂಡಿದ್ದನು. ೧೮೫೭ರಲ್ಲಿ ನಡೆದ ಸಿಪಾಯಿ ದಂಗೆಯ ಕೆಲಕೆಲವು ದೃಶ್ಯಗಳನ್ನೂ ಅವನು ಕಂಡಿದ್ದು ಅವು ಈಗಲೂ ಅವನ ಸ್ಮರಣೆಗೆ ಬರುತ್ತವೆ.

ಪ್ರಪಂಚದ ಬಹು ಭಾಷೆಗಳು

ಇಡೀ ಪ್ರಪಂಚದಲ್ಲಿ ಒಟ್ಟು ೩೦೪೪ ಭಾಷೆಗಳು ಇರುತ್ತವೆ. ಪ್ರಪಂಚದಲ್ಲಿರುವ ಒಳಭಾಷೆ ಮತ್ತು ನುಡಿಗಳಿಗೆ ಲೆಕ್ಕವೇ ಇಲ್ಲ. ಅದ್ದರಿಂದ ಪ್ರಪಂಚದ ಎಲ್ಲಾ ಜನರಿಗೆ ತಿಳಿಯುವಂತೆ ಮಾತನಾಡಬಲ್ಲವನು ಪ್ರಪಂಚದಲ್ಲೇ ಇರುವದಿಲ್ಲವೆಂದು ಹೇಳುವರು. ಯಾಕೆಂದರೆ ಈ ಎಲ್ಲಾ ಭಾಷೆಗಳನ್ನು ನುಡಿಗಳನ್ನು ತನ್ನ ಜೀವಮಾನಕಾಲದಲ್ಲಿ ಕಲಿಯುವದು ಒಬ್ಬನಿಗೆ ಸಾಧ್ಯವೇ ಅಲ್ಲ. ಆದರೂ ಬಹುಭಾಷಿಗಳಾದ ಕೆಲವರು ಈ ಪ್ರಪಂಚದಲ್ಲಿ ಇದ್ದಾರೆ. ಜೋರ್ಜ್ ಗ್ರಿಯರ್ಸನ್ ಎಂಬ ಬ್ರಿಟಿಷ್ ಭಾಷಾವಿಶಾರದರು ಹಿಂದುಸ್ತಾನದ ೧೭೯ ಭಾಷೆಗಳನ್ನು ಮಾತನಾಡಬಲ್ಲರು. ಅವರು ತಿಳಿದಿರುವ ನುಡಿಗಳು ೫೪೪ಕ್ಕೂ ಮೀರಿವೆ. ಇಂಥವರು ಮಾತ್ರ ಪ್ರಪಂಚದಲ್ಲಿ ಬಹಳ ವಿರಳರಾಗಿದ್ದಾರೆ.

ಬಾಂಬು ಗುಂಡುಗಳ ಮೂಲಕ ಅಪ್ಸರೆಯ ಅವತಾರ!

ಇಂಗ್ಲಂಡಿನ ಮೇಲೆ ನಾಜಿ ನ್ಯೂಮಾನಿಕ ಧಾಳಿಗಳ ದುಃಖಪ್ರಸಂಗಗಳು ನಡೆಯುತ್ತಿರುವ ಸಮಯದಲ್ಲಿಯೇ ಅಲ್ಲಿ ಅನೇಕ ವಿಚಿತ್ರ ಘಟನೆಗಳೂ ನಡೆಯುತ್ತಿರುತ್ತವೆ. ಲಂಡನಿನ ಒಂದು ಹೋಟೇಲಿನಲ್ಲಿ ಸೈನಿಕನೊಬ್ಬನು ತನ್ನ ಪ್ರಿಯತಮೆಯೊಂದಿಗೆ ಕಾಫಿ ಕುಡಿಯುತ್ತ ನಿಂತಿದ್ದಾಗ, ಒಂದು ಬಾಂಬು ಸಿಡಿದು ಡಂ ಎಂದು ಶಬ್ದವಾಯಿತು. ಇಡೀ ಕಟ್ಟಡವು ಈ ಸ್ಫೋಟನದಿಂದ ಕಂಪಿಸಿತು. ವಿಚಿತ್ರವೆಂದರೆ ಸೈನಿಕನ ಆ ಪ್ರಿಯತಮೆ ಕ್ಷಣಾರ್ಧದೊಳಗೆ ಮಾಯವಾಗಿದ್ದಳು. ಅವಳು ಕೂತುಕೊಂಡ ಕುರ್ಚಿಯು ಮೇಲಕ್ಕೆ ಹಾರಿ ಇನ್ನೊಂದು ಕೋಣೆಯಲ್ಲಿ ಬಂದು ಬಿದ್ದಿತು. ಆದರೆ ಅವಳಿಗೆ ಒಂದಿಷ್ಟು ಗಾಯವಾಗಿರಲಿಲ್ಲ. ಕೈಯ್ಯಲ್ಲಿದ್ದ ಕಾಫಿ ತಟ್ಟೆಯಿಂದ ಕಾಫಿ ಕೂಡ ಚೆಲ್ಲಿ ಹೋಗಿರಲಿಲ್ಲ. ಅಲ್ಲಿ ಕೂತು ಕಾಪಿ ಕುಡಿಯುತಿದ್ದವರು—"ಓಹೋ, ಅಪ್ಸರೆಯ ಅವತಾರವಾಯಿತು" ಎಂದು ನಕ್ಕರು. ಅವಳೂ ನಕ್ಕಳು. ಹೀಗೆ ಇಂಗ್ಲಂಡಿನ ಜನರಿಗೆ ವೈಮಾನಿಕ ದಾಳಿಗಳ ಭಯವೇ ಸಡಸ್ಸು ಇಲ್ಲದೆ, ಅವರು ಸುಖದಲ್ಲಿಯೇ ಕಾಲಕಳೆಯುತಿದ್ದಾರೆ.

ವಿದ್ಯಾರ್ಥಿಗಳ ಹೊಸ ಪರೀಕ್ಷಾ ವಿಧಾನ!

ಪ್ರಶ್ನೆಗಳನ್ನು ಕೊಟ್ಟು ಅವುಗಳಿಗೆ ಸರಿಯಾದ ಉತ್ತರವನ್ನು ಪಡೆಯುವುದು ಪರೀಕ್ಷೆಗಳನ್ನು ನಡೆಸುವ ಈ ವರೆಗಿನ ಪದ್ಧತಿಯಾಗಿದೆಯಷ್ಟೆ! ಅಮೇರಿಕ ಹಾರ್ವರ್ಡ್ ವಿಶ್ವವಿದ್ಯಾಲಯದ ಕೆಲವು ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳ ಯೋಗ್ಯತೆಯನ್ನು ಪರೀಕ್ಷಿಸುವ ಹೊಸ ವಿಧಾನವನ್ನು ಕೈಕೊಂಡಿದ್ದಾರೆ. ಇದು ಅದ್ಭುತವೂ ವಿಚಿತ್ರವೂ ಆಗಿದೆ. ಅವರು ವಿಶ್ವವಿದ್ಯಾಲಯದ ಒಂದು ಕೋಣೆಯಲ್ಲಿ ಚೆಂದ ಚೆಂದದ ಹುಡುಗಿಯರನ್ನೂ, ಅವರ ಒನಪು ವಯ್ಯಾರ ಭಾವಭಂಗಿಗಳನ್ನು ತೋರಿಸುವ ಸುಂದರವಾದ ಚಿತ್ರಪಟಗಳನ್ನೂ ಇದುವರು. ಮತ್ತೆ ಮೇಜುಗಳ ಮೇಲೆ ಕಾಮೋತ್ತೇಜಕ ರುಚಿ ರುಚಿಯಾದ ತಿಂಡಿ ಪದಾರ್ಥಗಳನ್ನು ಅತ್ತರು ಪನ್ನೀರು ಸುಗಂಧ ದ್ರವ್ಯಗಳನ್ನು ಇಡುವರು. ಕಾಲೇಜಿನ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಆ ಕೋಣೆಯನ್ನು ಸೇರಿ, ಅಲ್ಲಿ ಮನಮೋಹಿಸುವ ಯಾವ ದಕ್ಕೂ ಆಕರ್ಷಿತರಾಗದೆ, ತಮ್ಮ ಕೆಲಸ ಮುಗಿಸಿ ಹೊರಗೆ ಬರಬೇಕು. ಆಗಲೇ ಅವರು ಪರೀಕ್ಷೆಯಲ್ಲಿ ಪಾಸಾಗುವರು. ಈಗ ಹುಡುಗರು, ಪರೀಕ್ಷೆಯಲ್ಲಿ ನಪಾಸಾದರೂ ಚಿಂತೆ ಇಲ್ಲ, ಚೆಂದ ಚೆಂದದ ಹುಡುಗಿಯರನ್ನು ಕಾಣಬಹುದಲ್ಲ ಎಂದು ಈ ವಿಶ್ವವಿದ್ಯಾಲಯಕ್ಕೇ ಹೆಚ್ಚಾಗಿ ಬಂದು ಸೇರುತ್ತಿರುವರಂತೆ!

ಸ್ವದೇಶಾಭಿಮಾನಿಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲ. ಪ್ರತಿಯೊಬ್ಬ ಭಾರತೀಯನ ಮೂಲನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ, ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ 4





ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

ಡಾಕ್ಕಾ, ಬಂಗಾಲ

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್: ಶಾ ಕಂಪೆನಿ, ಹಂಪನಕಟ್ಟಾ ಮಂಗಳೂರು.

ಬಂಗಾಳದ ತರುಣರಲ್ಲಿ ನವಸ್ಫೂರ್ತಿಯನ್ನು ನಾಟಿಸಿದವರು!

ಚಿತ್ತರಂಜನದಾಸರ ಜೀವನದ ನೆನಹು

—ಮಾತೃಭೂಮಿಗಾಗಿ ಅವರ ಅತುಲ ತ್ಯಾಗ—

ಭಾರತವು ಸುಪ್ತಾವಸ್ಥೆಯಿಂದ ಎಚ್ಚರಗೊಳ್ಳುವ ಕಾಲ; ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತದ ಪ್ರಾಂತ ಪ್ರಾಂತಗಳಲ್ಲಿ ಹಲವರು ಅಪೂರ್ವ ಪ್ರತಿಭಾಸಂಪನ್ನರಾದ, ಕಾರ್ಯಕರ್ತರಾದ, ಸ್ವಾರ್ಥತ್ಯಾಗಿಗಳಾದ, ಪ್ರಭಾವಶಾಲಿಗಳಾದ ಮಹನೀಯರು ಜನ್ಮವೆತ್ತಿದರು. ಇಂತಹವರಲ್ಲಿ ಒಬ್ಬರು ಬಂಗಾಳೀ ಜನರ ವೀರೋತ್ಸಾಹವನ್ನು ಕೆರಳಿಸಿದ ಕ್ರಾಂತಿಪುರುಷರು ಚಿತ್ತರಂಜನದಾಸರು. ಸಾಹಿತ್ಯ, ರಾಜಕೀಯ, ವಕಾಲತ್ತು ಈ ಮೂರು ಕ್ಷೇತ್ರಗಳಲ್ಲಿಯೂ ಅದ್ವಿತೀಯರಾಗಿ ಕೀರ್ತಿಪಡೆದವರು ಅವರು; ಬಂಗಾಳದಲ್ಲಿ ಹೊಸ ಯುಗದ ಹೊಸ ಹುರುಪನ್ನು ತುಂಬಿದವರು ಚಿತ್ತರಂಜನರು.

ಭುವನ್ ಮೋಹನ್‌ದಾಸ್ ಎಂಬುದು ಚಿತ್ತರಂಜನರ ತಂದೆಯ ಹೆಸರು. ಅವರು ಬ್ರಹ್ಮೋ ನ್ಯಾಯವಾದಿಗಳು ಮತ್ತು ಪತ್ರಿಕೋದ್ಯಮಿಗಳಾಗಿದ್ದರು. ಗಳಿಸಿದುದಕ್ಕಿಂತಲೂ ಹೆಚ್ಚಾಗಿಯೇ ವ್ಯಯಮಾಡುವುದು, ದಾನಧರ್ಮ ಮಾಡುವುದು ಅವರ ಸ್ವಭಾವವಾಗಿತ್ತು. ಹೀಗಾಗಿ ಯಾವಾಗಲೂ ಸಾಲಗಾರರ ತಗಾದೆ ಅವರಿಗೆ ತಪ್ಪುತ್ತಿರಲಿಲ್ಲ. ಇಂತಹ ಉದಾರ ದಾಸರ ಹೊಟ್ಟೆಯಲ್ಲಿ ಚಿತ್ತರಂಜನರು ಜನ್ಮವೆತ್ತಿದರು; ತಂದೆಯ ಸ್ವಭಾವಕ್ಕೆ ಸರಿಯಾಗಿ ಮಗನೂ ಮುಂದೆ ಮಿತಿಯಿಲ್ಲದೆ ವ್ಯಯಮಾಡುವವರೇ ಆಗಿ ಹೋದರು.

ಚಿತ್ತರಂಜನರು ಭವಾನೀಪುರದ ಲಂಡನ್ ಮಿಶನ್ ಕಾಲೇಜಿನಲ್ಲಿ ಮೊದಲು ವಿದ್ಯಾಭ್ಯಾಸ ಪಡೆದರು; ಮುಂದೆ ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕಲಿತರು. ಅಲ್ಲಿ ಬಿ. ಎ., ಡಿಗ್ರಿ ಪಡೆದು ಇಂಗ್ಲೆಂಡಿಗೆ ಐ. ಸಿ. ಎಸ್. ಕಲಿಯಲು ತೆರಳಿದರು. ಆದರೆ, ಅಲ್ಲಿ ಹೋದ ಮೇಲೆ, ಐ. ಸಿ. ಎಸ್. ಕಲಿವುದನ್ನು ಬಿಟ್ಟು ಕೊಟ್ಟು ವಕಾಲತ್ತಿನ ಅಭ್ಯಾಸ ಮಾಡಿದರು. ಲಂಡನಿನಲ್ಲಿ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿಯೂ ಅವರು ರಾಜಕೀಯದಲ್ಲಿ ಪ್ರಾಮುಖ್ಯ ಪಾತ್ರ ವಹಿಸುತ್ತಿದ್ದರು. ಪಾರ್ಲಿಮೆಂಟಿನಲ್ಲಿ ದಾದಾಭಾಯಿ ನೌರೋಜಿಯವರಿಗೆ ಸ್ಥಾನವೊಂದನ್ನು ಸಂಪಾದಿಸುವ ಕೆಲಸದಲ್ಲಿ—ಚುನಾವಣೆಯ ಕಾರ್ಯಕಲಾಪಗಳಲ್ಲಿ—ಚಿತ್ತರಂಜನರು ಬಹಳ ಅಗ್ರಗಾಮಿಯಾಗಿ ಕೆಲಸಮಾಡುತ್ತಿದ್ದರು.

ಭಾರತಕ್ಕೆ ಮರಳಿ ಬಂದವರು ಕಲ್ಕತ್ತೆಯಲ್ಲಿ ವಕಾಲತ್ತು ಆರಂಭಿಸಿದರು. ತಂದೆ ಮಾಡಿದ ಸಾಲವನ್ನು ತೀರಿಸುವುದು ಮಗನ ಪಾಲಿನ ಕರ್ತವ್ಯವಾಗಿತ್ತು. ಅದಕ್ಕಾಗಿ ಅವರು ಬಹಳೆ ಕಷ್ಟದಿಂದ ಅವಿಶ್ರಾಂತಿಯಿಂದ ದುಡಿಯಬೇಕಾಗಿತ್ತು.

ಕ್ರಾಂತಿಯ ಜಂಝಾವಾತವು ಬಂಗಾಳದಲ್ಲಿ ಆಗ ಬೀಸತೊಡಗಿತ್ತು. ವಿರೋಧಿಗಳನ್ನು ಕೊಲ್ಲುವುದೇ ಸ್ವಾತಂತ್ರ್ಯದೆಡೆಗಿರುವ ದಾರಿಯೆಂದು ಹಲವರು ದೇಶಪ್ರೇಮಿಗಳಾದ ತರುಣರು ಹಿಂಸೆಯ ಹಾದಿ ಹಿಡಿದಿದ್ದರು. ಇಂತಹವರನ್ನು ಹಲವರನ್ನು ಹಿಡಿದು ಗಲ್ಲಿಗೇರಿಸಲಾಗುತ್ತಿತ್ತು; ನಿರಪರಾಧಿಗಳು ಕೆಲವರೂ ದಂಡನೆಗೆ ಗುರಿಯಾಗದೆ ಇರುತ್ತಿರಲಿಲ್ಲ. ಇಂತಹವರಲ್ಲಿ 'ವಂದೇ ಮಾತರಂ' ಪತ್ರಿಕಾ ಸಂಪಾದಕರೂ, ಕೇಂಬ್ರಿಡ್ಜ್ ಯುನಿವರ್ಸಿಟಿಯ ಉಚ್ಚ ಪದವೀಧರರೂ ಆದ ಬಾಬು ಅರವಿಂದ ಘೋಷರು ಒಬ್ಬರಾಗಿದ್ದರು.

ಅರವಿಂದರು ಬಡವರಾಗಿದ್ದ ಕಾರಣ, ತನ್ನ ಮೇಲೆ ಸರಕಾರದವರು ಹೊರಿಸಿದ ಅಪಾದನೆಯನ್ನು ಅಲ್ಲಗಳೆಯಲು ಪ್ರಸಿದ್ಧ ಬ್ಯಾರಿಸ್ಟರರನ್ನು ಯಾರನ್ನಾದರೂ ನೇಮಿಸುವಷ್ಟು ಸಮರ್ಥರಿರಲಿಲ್ಲ. ಅರವಿಂದರ ಈ ಪರಿಸ್ಥಿತಿಯನ್ನು ತಿಳಿಕೊಂಡು ಚಿತ್ತರಂಜನರು ಅವರ ವಕಾಲತ್ತು ವಹಿಸಿಕೊಂಡರು. ಬಾಬು ಅರವಿಂದರನ್ನು ಸರಕಾರದ ಕರಾಳ ಶಾಸನದ ಹಿಡಿತದಿಂದ ತಪ್ಪಿಸುವ ಸಲುವಾಗಿ ಅವರು ಧೈರ್ಯಪೂರ್ವಕ ಮುನ್ನುಗ್ಗಿದರು. ಕವಿಸಹಜವಾದ ಸ್ಫೂರ್ತಿ, ತಾತ್ವಿಕ ದೃಷ್ಟಿ, ದೇಶಪ್ರೇಮ ಬುದ್ಧಿ ಇವುಗಳು ಅವರನ್ನು ಇಂತಹ ವ್ರತದಲ್ಲಿ ತೀವ್ರವಾಗಿ ಹೋರಾಡುವಂತೆ ಹುರಿದುಂಬಿಸಿದವು. ನ್ಯಾಯಸ್ಥಾನದಲ್ಲಿ ಚಿತ್ತರಂಜನರು ಆವೇಶಗೊಂಡವರಂತೆ ಮಾತನಾಡಿದರು; ಅಖಂಡವಾದ ಗಂಭೀರವಾದ ಕವಿತಾಮಯವಾದ ಶೈಲಿಯಲ್ಲಿ ವಾದಿಸಿದರು. ಕೊನೆಗೆ ಅರವಿಂದರು ನಿರಪರಾಧಿಯೆಂದು ಸಿದ್ಧವಾಯಿತು.

ಮುಂದೆ ವಕಾಲತ್ತಿನಲ್ಲಿಯೂ ಅವರ ಕೀರ್ತಿಯು ಹಬ್ಬಿತು. ಕಲ್ಕತ್ತದಲ್ಲಿ ಅವರು ಅಗ್ರಗಣ್ಯ ವಕೀಲರಾದರು. ಲಕ್ಷಾಂತರ ರೂಪಾಯಿಗಳನ್ನು ಗಳಿಸಿದರು. ಸಂಪಾದಿಸಿದಷ್ಟನ್ನೂ ವೆಚ್ಚ ಮಾಡಿದರು. ತಂದೆಯ ಸಾಲವನ್ನು ಕೊನೆಯ ಪೈಯ ತನಕವೂ ತೀರಿಸಿದರು. ಆದರೆ ತಾನು ತಿರಿಗಿ ಸಾಲಕ್ಕೆ ಬಿದ್ದರು; ಆದರೆ ಇದರಿಂದ ಅವರು ಧೈರ್ಯಗುಂದಲಿಲ್ಲ. ತಾನು ಗಳಿಸಿದುದು ತನ್ನ ಹಾಗೂ ತನ್ನ ಕುಟುಂಬದ ಸುಖಕ್ಕಾಗಿಯಲ್ಲವೆಂದು ಅವರು ನಂಬಿದ್ದರು. ಅದೆಲ್ಲವೂ ದೇವರ ಮಕ್ಕಳಿಗೆ ಎಂದು ಅವರ ನಿರ್ಧಾರವಾಗಿತ್ತು. ಈ ದೃಷ್ಟಿಯಿಂದ ಅವರು ಅರ್ಥಶಾಸ್ತ್ರವನ್ನು ತಲೆಕೆಳಗು ಮಾಡುವ ತನ್ನ ಸಿದ್ಧಾಂತವನ್ನು ಸಾಧಿಸಿ ಜೀವನಯಾತ್ರೆ ನಡೆಸುತ್ತಿದ್ದರು.

ಚಿತ್ತರಂಜನರ ಈ ತರದ ಧಾರ್ಮಿಕ ಬುದ್ಧಿ, ಪರೋಪಕಾರ ಬುದ್ಧಿ, ದೇಶಸೇವಾ ಕಾಂಕ್ಷೆಯು ಅವರು, ತಾಯ್ನಾಡಿನ ಕರೆಬಂದಾಗ ವಕಾಲತ್ತು ಬಿಟ್ಟುಬಿಡುವಂತೆ ಮಾಡಿತು. ಅಖಿಲ ಭಾರತಕ್ಕೆ ಆಗ ಅವರ ಹೆಸರು ಚೆನ್ನಾಗಿ ಅರಿವಾಯಿತು. ಧಾರಾಳವಾದ ಸಂಪಾದನೆ ಬಿಟ್ಟು ಆರ್ಥಿಕ ದೃಷ್ಟಿಯಲ್ಲಿ ಗರೀಬರೇ ಆದರು; ಆದರೆ ಹಿಡಿದ ತತ್ವದಲ್ಲಿ ಅವರದು ಮುಂದಾಳುತನವೇ ಆಗಿತ್ತು. ಕಾಂಗ್ರೆಸಿನ ನೀತಿಯನ್ನು ನಂಬಿ ಶಾಸನಭಂಗ ಆಂದೋಲನಕ್ಕೆ ದುಮುಕಿದರು. ಸಕುಟುಂಬರಾಗಿ ಸೆರೆಮನೆಯ ವಾಸವನ್ನು ಅನುಭವಿಸಿದರು. ಚಿತ್ತರಂಜನದಾಸರು ರಾಷ್ಟ್ರೀಯ ಮಹಾಪುರುಷರಾಗಿ ಗಣ್ಯರಾದರು. 'ದೇಶಬಂಧು' ಎಂಬ ಗೌರವದ ಬಿರುದು ಅವರಿಗೆ ಅರ್ಪಿತವಾಯಿತು!!!

ಸೆರೆಮನೆಯಿಂದ ಮರಳಿ ಬಂದವರಿಗೆ ಗಾಂಧಿಜಿಯವರು ಹೇಳುವಂತಹ ಅಸಹಕಾರ ಪದ್ಧತಿಯು ಸರಿಯಲ್ಲವೆಂದು ಕಂಡಿತು; ಸರಕಾರೀ ಶಾಲೆಗಳನ್ನು, ಕೋರ್ಟುಗಳನ್ನು, ಬ್ರಿಟಿಷ್ ವಸ್ತ್ರಗಳನ್ನು ಬಹಿಷ್ಕರಿಸುವ ವಿಷಯವಾಗಿಯಾಗಲಿ, ಖಾದಿ ಪ್ರಚಾರದ ವಿಷಯವಾಗಿಯಾಗಲಿ, ಅವರದು ಆಕ್ಷೇಪವಿರಲಿಲ್ಲ. ಶಾಸನ ಸಭೆಗಳ ಚುನಾವಣೆಗಳಿಗೆ ನಿಂತು—ಅಲ್ಲಿಂದ—ಆಗುವ ಅನ್ಯಾಯಗಳನ್ನು ಆದಷ್ಟು ಕಡಿಮೆ ಮಾಡಿ ಜನತೆಗೆ ಸೇವೆ ಸಲಿಸಬೇಕೆಂದು ಅವರು ವಾದಿಸಿದರು. ಕಾಂಗ್ರೆಸಿನವರು ಶಾಸನ ಸಭೆಯನ್ನು ಪ್ರವೇಶಿಸಬೇಕೆಂದು ಅವರು ಬೋಧಿಸಿದರು. ದಾಸರ ಈ ಹೊಸ ಹೇಳಿಕೆಯನ್ನು ಅನೇಕರು ಕಟುವಾಗಿ ಟೀಕಿಸಿದರು. ಅವರಿಗೆ ದಾಸರು ಉತ್ತರ ಕೊಡದೆ ಬಿಡಲಿಲ್ಲ. ಕಾಂಗ್ರೆಸು ಅವರ ವಾದವನ್ನು ಕೊನೆಗೂ ಒಪ್ಪಲಿಲ್ಲ. ಆದರೂ ದಾಸರು ತನ್ನ ಪ್ರಭಾವವನ್ನು ತೋರಿಸಿ, ದೇಶದ ಉದ್ದಗಲದಲ್ಲಿ ಅವರು ತನ್ನ ಅಭಿಪ್ರಾಯ ಸಾರಿದರು. 'ಫಾರ್ವರ್ಡ್' ಎಂಬ ಆಂಗ್ಲ ದೈನಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಜನತೆ ಇವರ ಮಾತಿನ ಕಡೆಗೆ ಕಿವಿಕೊಟ್ಟಿತು. ೧೯೨೩ರ ಚುನಾವಣೆಯ ಕಾಲದಲ್ಲಿ ಅವರು 'ಸ್ವರಾಜ್ಯ' ಪಕ್ಷವನ್ನು ಕಟ್ಟಿಕೊಂಡು ಚುನಾವಣೆಗೆ ನಿಂತರು. ಹಲವು ಕಡೆಗಳಲ್ಲಿ ಅವರ ಪಕ್ಷಕ್ಕೆ ಪ್ರಚಂಡ ವಿಜಯವೇ ದೊರಕಿತು.

ಬಂಗಾಳದ ಗವರ್ನರರು ದಾಸರನ್ನು ಕರೆದು ಮಂತ್ರಿಮಂಡಳವನ್ನು ರಚಿಸುವಂತೆ ಕೇಳಿಕೊಂಡರು. ಆದರೆ ದಾಸರು ಅದನ್ನು ತಿರಸ್ಕರಿಸಿಬಿಟ್ಟರು. ಅವರದು ವಿರೋಧಿಸುವ ಸ್ವಭಾವ. ಸರಕಾರದ ಹಲವಾರು ವರ್ತನೆಗಳನ್ನು ವಿರೋಧಿಸುವ ಸಲುವಾಗಿ ಅವರು ಶಾಸನ ಸಭೆಯನ್ನು ಪ್ರವೇಶಿಸಿದ್ದರು. ಅದನ್ನು ಬಹಳ ಯಶಸ್ವಿಯಾಗಿಯೇ ಸಾಧಿಸಿದರು.

ಕಲ್ಕತ್ತ ಕಾರ್ಪೊರೇಶನಿಗೆ ಎರಡು ಸಲ ಮೇಯರರಾಗಿ ಆರಿಸಲ್ಪಟ್ಟು ದೇಶಬಂಧು ದಾಸರು ಮಾಡಿದ ಜನತಾಸೇವೆಯನ್ನು ಬಂಗಾಳವು ಮರೆಯುವಂತಿಲ್ಲ. ಹೆಚ್ಚಾಗಿ ಬಡಜನರಿಗೆ, ನಿರ್ಗತಿಕರಿಗೆ ಸಹಾಯವಾಗುವಂತಹ ಅನೇಕ ಸುಧಾರಣೆಗಳನ್ನು ಅವರು ಮೇಯರರಾಗಿ ಮಾಡಿರುವರು.

ಇದೇ ಸಂದರ್ಭದಲ್ಲಿ ಡೇ ಎಂಬ ಯುರೋಪಿಯನ್ ಆಫೀಸರನನ್ನು ಗೋಪಿನಾಥ ಶಾಹನೆಂಬ ಕ್ರಾಂತಿಕಾರಿಯು ಕೊಂದುಬಿಟ್ಟನು. ಆ ಬಗ್ಗೆ ನೆರೆದ ಸಾರ್ವಜನಿಕ ಸಭೆಯಲ್ಲಿ ದಾಸರು ಮಾತನಾಡುತ್ತಾ, ಶಾಹನ ಕೃತ್ಯವನ್ನು ಖಂಡಿಸಿದರೂ, ಆತನ ಉದ್ದೇಶವನ್ನು ಪ್ರಶಂಸಿಸಿದರು. ದಾಸರ ಈ ಮಾತನ್ನು ಗಾಂಧಿಜಿಯವರೇ ಟೀಕಿಸಿದರು. ದಾಸರೂ ಕ್ರಾಂತಿಕಾರಕರ ಪ್ರೇರೇಪಕರೆಂದು ಸರಕಾರಕ್ಕೆ ಅಂಜಿಕೆ ಹುಟ್ಟಿತು. ಅವರನ್ನು ಬಂಧಿಸುವ ಹಂಚಿಕೆಗಳೂ ನಡೆದವು. ತನ್ನ ಭಾಷಣವು ಶುದ್ಧ ವಿಚಾರಗರ್ಭಿತವಾದುದೆಂಬುದನ್ನು ದಾಸರು ಸರಕಾರದ ತಿಳುವಳಿಕೆಗೆ ತಂದುಕೊಟ್ಟರು. ಮುಂದೆ ಪರ್ದಿಪುರ ಪರಿಷತ್ತಿನಲ್ಲಿ ದಾಸರು ತನ್ನ ಅಭಿಮತವನ್ನೂ ಕ್ರಾಂತಿಕಾರರ ವಿಚಾರವಾಗಿ ತನಗಿರುವ ಅಭಿಪ್ರಾಯವನ್ನೂ ಸ್ಪಷ್ಟವಾಗಿ ಸಾರಿದರು. ಸರಕಾರದೊಡನೆ ಸಮಯ ಬಂದರೆ, ಅನುಕೂಲ ಕಲ್ಪಿಸಿ ಕೊಟ್ಟರೆ ಸಹಕರಿಸುವೆನೆಂದೂ ಹೇಳಿದರು. ಭಾರತದ ರಾಜಕೀಯ ಅಶಾಂತ ಆಕಾಶದಲ್ಲಿ ಆಶೆಯ ಒಂದು ಮಿಂಚನ್ನು ಆಗ ವೈಸರಾಯರಾಗಿದ್ದ ಲಾರ್ಡ್ ಲಿಟ್ಟನರು ನೋಡಿದ್ದರು!

ಮುಂದಿನ ದಿನಗಳು ವಿಷಾದಮಯವಾಗಿ ಕೊನೆಗೊಂಡವು. ದಾಸರು ಅಕಸ್ಮಾತ್ತಾಗಿ ಅಸುಖದಲ್ಲಿ ಬಿದ್ದರು. ಡಾಕ್ಟರರು ಅವರನ್ನು ಯೂರೋಪಿಗೆ ತೆರಳಬೇಕೆಂದರು. ಆದರೆ ಯಾವ ಮಾತೃಭೂಮಿಯ ಸಲುವಾಗಿ ಅವರು ಅ[illegible]ಂದು ಸ್ವಾರ್ಥತ್ಯಾಗ ಮಾಡಿದರೋ, ಆ ನಾಡನ್ನು ಕೊನೆಯ ದಿನಗಳಲ್ಲಿ ಅಗಲಿ ಹೋಗಲು ಅವರಿಗೆ ಮನ ಒಪ್ಪೀತೆ? ಅವರು ಡಾರ್ಜಿಲಿಂಗಿಗೆ ತೆರಳಿದರು. ಆರೋಗ್ಯವು ಅಲ್ಲಿಯೂ ಕೆಟ್ಟಿತು. ೧೯೨೫ನೆ ಇಸವಿ ಜೂನ್ ೧೬ರಂದು ಅವರು ಅಸ್ತಂಗತರಾದರು!

ದೇಶಬಂಧು ದಾಸರಿಂದ ದೇಶವು, ತಾಯ್ನಾಡು, ಬಹಳ ಸೇವೆಯನ್ನು ಹಾರೈಸಿತ್ತು; ಪ್ರಕೃತ ಅಕಾಲ ನಿಧನದಿಂದ ಮಾತೆ ಕರಗಿದಳು! ಆದರೆ ಆಕೆಯ ದುಃಖವನ್ನು ಪರಿಹರಿಸುವ ಸಲುವಾಗಿ ಚಿತ್ತರಂಜನ ಸೋದರರನೇಕರು, ಬಂಗಾಳದ ತರುಣರು ಹಲವರು ಅವರನ್ನೂ ಮಿಗಿಸಿದ ಸ್ವಾರ್ಥತ್ಯಾಗಗಳಿಂದ ಹೋರಾಡುತ್ತಿದ್ದಾರೆ. ಈ ಉತ್ಸಾಹವನ್ನು ಕಂಡು ಚಿತ್ತರಂಜನರ ಆತ್ಮವು ಸಂತೋಷಗೊಳ್ಳದಿರಲಾರದು.

—K. K. Rai.

ಪ್ರಕಟಣೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

S. C. S. No. 67/1941

ಕೆ. ಪಿ. ರಾಜರಾವ್ ಸಹಾ. ... ವಾದಿರು

ಮತ್ತು

ದುರ್ಗಾಲಕ್ಷ್ಮಿ ಹೆಗ್ಗಡ್ತಿ [illegible] ಹೆಗ್ಗಡೆರ ಪತ್ನಿ, ಉಡುಪಿ ಕಸಬಾ [illegible] ನಲ್ಲಿ ಬೋರ್ಡ್ ಸ್ಕೂಲ್ [illegible]ಯ ಶ್ರೀ. ಬಿ. ರಾಮರಾಯ ಶೆಟ್ರ ಮನೆಯಲ್ಲಿಯೂ ಉಡುಪಿ ತಾಲ್ಲೂಕು ... ದಲ್ಲಿ ... ಇರುವವಳು

ಪ್ರತಿವಾದಿಳು

ಇವಳಿಗೆ—

ತಾ. 3-4-1897ರಲ್ಲಿ ವಾದಿ ರಾಜಯ್ಯ ವಗೈರೆರು ಮಾಡಿಕೊಂಡ ಪಾಲುಪಟ್ಟಿ ಕರಾರ ಪ್ರಕಾರ ಪಾದದ ಶಾಯಿ ಪಾಲಿ ವ್ಯತಪಟ್ಟಿರುವ ಕಾಪೇರಿಯಮ್ಮನಿಗೆ ಪ್ರತಿವಾದಿಯಿಂದ ಇದೇ ಕಳೆದ ಪ್ರಥಾಪ ಸಂವತ್ಸರ ಪಾಲ್ಗುಣ ಬಾ30ಕ್ಕೆ ಸಲತಕ್ಕ ಅಕ್ಕಿ ಮುಡಿ ೨೭ ಕ್ರಯ ಮತ್ತು ಬಡ್ಡಿ ಕೂಡಿ ರೂಪಾಯಿ 24—5—2 ಮತ್ತು ಮುಂದಿನ ಬಡ್ಡಿ ಕೋರ್ಟು ಖರ್ಚು ವಗೈರೆ ಬರಮಾಡಿಕೊಳ್ಳುವ ಬಗ್ಗೆ ವಾದಿರು ಪ್ರತಿವಾದಿಳ ಮೇಲೆ ಮಾಡಿದ ಸದ್ರಿ ದಾವೆಯು ಸದ್ರಿ ಕೋರ್ಟಿನಲ್ಲಿ ತಾ. 11-6-1941ಕ್ಕೆ ಅಖೈರ ತೀರ್ಮಾನದ ಬಗ್ಗೆ ಇಡಲ್ಪಟ್ಟಿದೆ. ಆದುದರಿಂದ ಸದ್ರಿ ದಿವಸ ಸದ್ರಿ ಕೋರ್ಟಿನಲ್ಲಿ ಮಧ್ಯಾಹ್ನ 11 ಗಂಟೆಗೆ ಪ್ರತಿವಾದಿಳು ಸ್ವತಹ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತನ್ನ ಉದಾಹರಣೆಯನ್ನು ವಾಕ್ಯ ಮಾಡತಕ್ಕದ್ದು, ತಪ್ಪಿದಲ್ಲಿ ಸದ್ರಿ ದಾವೆಯು ವಾದಿರ ಗುಣಕ್ಕೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿಯನ್ನು ಈ ಮೂಲಕ ಪ್ರತಿವಾದಿಳಿಗೆ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ

ಕಾರ್ಕಳ } ಎಂ. ಎಸ್. ಅಧಿಕಾರಿ,
28-3-41 } ವಾದಿರ ಪರ ವಕೀಲ.

★ ಸಿನೆಮಾ ಪುಟ ★

ಪರಿಮಳ ಬೀರುವ ಚಲನ ಚಿತ್ರಗಳು

ಸಿನೆಮಾಲೋಕದಲ್ಲಿ ಆಶ್ಚರ್ಯಕರ ಸಂಶೋಧನೆ

ದಿನದಿನಕ್ಕೂ ವಿಜ್ಞಾನ ಬೆಳೆಯುತ್ತದೆ ಚಲಚ್ಚಿತ್ರ ಬಂದಕೂಡಲೇ ಜನರ ಆಶ್ಚರ್ಯ ಹೇಳತೀರದು. ಚಿತ್ರ ಮಾತನಾಡುವುದನ್ನು ಕೇಳಿದಾಗಂತೂ ಬರಗು ಮೀರಿತಪ್ಪಿತು ಈಗ ಮತ್ತೊಂದು ಸೋಜಿಗ ಬಂದಿದೆ. ವಾಕ್ಪಟದ ಸುರುಳಿ ಬಿಚ್ಚುತ್ತ ಹೋದಂತೆ ನಟ ಹಚ್ಚಿಕೊಂಡ ಗಂಧದೆಣ್ಣೆಯ ವಾಸನೆ, ಮುಡಕೊಂಡ ಹೂವಿನ ನರುಗಂಪು, ಅಡಿಗೆಯ ಇಡ್ಲಿ ಸ್ವಾದು, ವಿದೂಷಕನ ನಶ್ಯವುಡಿಯ ಕಟುವಾಸನೆ, ಇವೆಲ್ಲವನ್ನು ಚಿತ್ರಪಟ ನೋಟಕರು ಅನುಭವಿಸಿ ಆನಂದಪಡುವ ಶೋಧನೆಯಾಗಿದೆ. ಈ ಶೋಧನೆಯ ಪಿತೃಗಳು ಇಬ್ಬರು ಸ್ವಿಸ್ ವಿಜ್ಞಾನಿಗಳು ಇವರೊಂದು ಸಣ್ಣ ಚಿತ್ರಪಟವನ್ನು ತಯಾರಿಸಿದ್ದಾರೆ. ಈ ಶೋಧನ ಮಾಡಲು ೭ ವರ್ಷ ಅಖಂಡ ಶ್ರಮಪಟ್ಟರಂತೆ, ಅವರು ತಮ್ಮ ಪ್ರಯೋಗವನ್ನು ಅಮೇರಿಕದ ನ್ಯೂಯಾರ್ಕ್ ಪ್ರಪಂಚದ ಯಾತ್ರೆಯಲ್ಲಿ ತೋರಿಸಿದರು.

ಈ ತರದ ಚಿತ್ರಪಟವನ್ನು ತಯಾರಿಸುವ ರೀತಿಯು ಇನ್ನೂ ಗೌಪ್ಯವಾಗಿಡಲಾಗಿದೆ. ಇವರಲ್ಲಿಯೂ ವಿದ್ಯುತ್ತಿನ ಕೈವಾಡವಿದೆ. ವಿದ್ಯುತ್ತಿನ ಕಿರಣಗಳು ಮೂರದಿಂದ ಧ್ವನಿಯನ್ನು ಹೊರಡಿಸುವಂತೆ ಈ ಕಿರಣಗಳ ಒಂದು ವಿಶಿಷ್ಟ ಯೋಜನೆಯ ಮೇರೆಗೆ ಸಿನೇಮಾ ಗೃಹದ ವಾತಾವರಣದ ಅಣುಗಳಲ್ಲಿ ಒಂದು ತರದ ವಾಸನೆ ಮಾಡಿ ಜನರಿಗೆ ಅನುಭವವಾಗುವಂತೆ ಮಾಡುತ್ತವೆ

ಈ ಪ್ರಕಾರ ಅಮೇರಿಕದಲ್ಲಿ ಮೊದಲನೆ ನರುಗಂಪು ಬೀರುವ ಚಿತ್ರಪಟ ತಯಾರಾಗಿದೆ ಅದರ ಹೆಸರು 'ನನ್ನ ಕನಸು' ತನ್ನ ಪ್ರತಿಸ್ಪರ್ಧಿಯನ್ನು ಬಲಿಯಲ್ಲಿ ಕೆಡವಲು ನಾಯಿಕೆಯು ಉಪಯೋಗಿಸಿದ ವಾಸನೆಯು ಎಷ್ಟೆಯು ಹೆಸರು 'ನನ್ನ ಕನಸು' ನಾಯಿಕೆ ನಾಯಕರು ಒಂದು ತೋಟದಲ್ಲಿಯ ಕೊಳದ ಮುಂದೆ ಭೆಟ್ಟಿಯಾಗುವರು ಕೊಳದ ತುಂಬ ನೀಲೋತ್ಪಲ, ಪ್ರೇಕ್ಷಕರಿಗೆ ದಿಗ್ಭ್ರಮೆಯಾಯಿತು. ನೀಲೋತ್ಪಲದ ವಾಸನೆ ಇಡುಗಿಬಿಟ್ಟಿದೆ. ಮೊದಲು ಮೂಗು ಮಾರುಹೋಯಿತು. ನಯನ ಮನೋಹರವಾದ ನೀಲೋತ್ಪಲ ಕಣ್ಣು ಸೆಳೆಯಿತು.

ನೋಟ ವಲ್ಲಟಿಸಿತು. ಒಂದು ಕೋಣೆಯಲ್ಲಿ ಡಿಕೋಲೋನ ಎಂಬ ಫ್ರೆಂಚ ಪನ್ನೀರನ್ನೂ ತುಂಬಿ ಸಿಂಪಡಿಸಲಾಗಿತ್ತು ನೋಟಕರು ಅತ್ತಿತ್ತ ನೋಡಿದರು ಮೈ ಮೂಸಿಕೊಂಡಿತು. ಒಬ್ಬ ಮನುಷ್ಯನು ಬಂದನು. ಬಾಳೆ ಹಣ್ಣನ್ನು ಸುಲಿದು ಬಾಯಿಯಲ್ಲಿ ಇಟ್ಟುಕೊಂಡ. ನೋಡುವವರ ಬಾಯಲ್ಲಿ ಬಾಳೆಹಣ್ಣಿನ ಕಂಪು ಇಡುಗಿತ್ತು, ನೀರು ಒಸರಿತ್ತು. ಕಿಸ ಯಿಂದ ಮಾವನ್ನು ತೆಗೆದ. ತುಂಬ ಚಿವುಟ ಸೊನೆ ಹೊಂದಿದ ಜನರು ಹಾ ಎಂದು ಉಸಿರೆಳೆದರು. ಲಿಂಬೆಯ ತೋಟ ಮೊದಲಾದುವುವೆಲ್ಲವೂ ಹುಚ್ಚುವಾಸನೆ ಬೀರಿದವು. ಜನರು ಕಕ್ಕಾವಿಕ್ಕಿಯಾದರು. ೫೫ ನಿಮಿಷಗಳ ವರೆಗೆ ನಡೆಯಿತು. ೩೭ ವಾಸನೆ ಬೀರಿತು.

ಇದು ವರೆಗೆ ಎಷ್ಟೋ ಪ್ರಯೋಗಗಳಾಗಿದ್ದುವು. ಆದರೆ ಯಶಸ್ವಿಯಾಗಲಿಲ್ಲ. ಒಂದು ವಾಸನೆ ಬಂದು ಇದಾಗಿದ ಮೇಲೆ ಅದನ್ನು ಕಳೆಯಲಾಗುತ್ತಿದ್ದಿಲ್ಲ ಆದ್ದರಿಂದ ಮುಂದಿನ ವಾಸನೆಯು ಪರಿಣಾಮವಾಗುತ್ತಿರಲಿಲ್ಲ. ಈಗ ಅದರಲ್ಲಿ ಒಂದು ಯೋಜನೆ ಮಾಡಿ ವಿದ್ಯುದ್ದೀಪಗಳನ್ನು ಬೇಕಾದಾಗ ಹಚ್ಚುವಂತೆ ಮತ್ತು ಆರಿಸುವಂತೆ, ಈ ವಾಸನೆಯನ್ನು ಬೀರಬಹುದು, ಬೇರಿದ್ದನ್ನು ಇಲ್ಲದಂತೆ ಮಾಡಬಹುದು.

ಪಟಲದಲ್ಲಿ ಧ್ವನಿಯನ್ನು ಮೂಡಿಸುವ ಯೋಜನೆ ಮಾಡಿದಂತೆ ಅಲ್ಲಿಯೇ ಈ ವಾಸನೆ ಬೀರುವ ಒಗೆಮೂಡಿಸಿದೆ ಅದರ ಮೇಲೆ ವಿದ್ಯುತ್ತಿನ ಕಿರಣ ವಿಶಿಷ್ಟವಾಗಿ ಬಿದ್ದ ಕೂಡಲೇ ವಾಸನೆ ಇಡಗುವುದು

ಸಿನೇಮಾ ಪ್ರೇಮಿಗಳಿಗೆ ಇದರಿಂದ ತಮ್ಮ ಪ್ರೀತಿಯ ನಟನಟಿಯರು ಉಪಯೋಗಿಸುವ ಸುವಾಸನೆಗಳನ್ನು ತಕ್ಕೊಳ್ಳಲು ಒಳ್ಳೇ ಅನುಕೂಲ ಸಿಕ್ಕಂತಾಗುವುದು ಸುಗಂಧ ವ್ಯಾಪಾರಿಗಳಿಗೆ ತಮ್ಮ ಸರಕುಗಳ ಜಾಹೀರಾತನ್ನು ಒಳ್ಳೇ ಲಾಭಕರವಾಗುವಂತೆ ಮಂಡಿಸಲಿಕ್ಕೆ ಒಳ್ಳೇ ಉಪಕರಣ ದೊರೆತಂತಾಗಿದೆ ಈ ಕ್ಷೇತ್ರದಲ್ಲಿ ಭವಿತವ್ಯವು ತುಂಬ ಆಶಾದಾಯಕವಾಗಿದೆ ಆದರೆ ಇದರಲ್ಲಿ ಇನ್ನೊಂದು ಅಡಚಣೆಯಿದೆ ಅದು ಆ ಸ್ವಿಸ್ ಶೋಧಕರಿಗೆ ಗೊತ್ತಿದೆ. ಅವರು ಅದನ್ನು ಬೇರೆ ಯಾರಿಗೂ ಹೇಳದೆ ಮುಚ್ಚಿಟ್ಟುಕೊಂಡಿದ್ದಾರೆ

ನಾಲ್ಕಾರು ಸಾಮಾನು ಬಂದಾಗ ಒಂದಕದೇ ವಾಸನೆಯನ್ನು ಹೇಗೆ ಬೀರಬೇಕೆಂಬುವೇ ಆ ಸಮಸ್ಯೆ ಒಂದೇ ಕಾಲಕ್ಕೆ ಸರೋವರದ ದಂಡೆಗಿದ್ದ ಗುಲಾಬಿ ಒಳಗಿನ ಕಮಲ, ಕೊಳೆತ ನಾರು ಪಾಚಿ, ಸತ್ತ ಮೀನು, ಇವುಗಳಲ್ಲಿ ಒಂದರದೇ ವಾಸನೆ ಬೇಕಾಗಿದ್ದಲ್ಲಿ ಏನು ಮಾತನ್ನು ತಮ್ಮಷ್ಟಕ್ಕೆ ಸಂಶೋಧಕರು ನುಚ್ಚಿದ್ದಾರೆ. ಇವೆಲ್ಲ ಇಂದಿಲ್ಲ ನಾಳೆ ಬಿಡಬಹುದು ಅಂತೂ ಒಮ್ಮೆ ಚಿತ್ರಪಟಗಳಲ್ಲಿ ತೋರುವ ಸುಂದರ ನರುಗಂಪು ಬೀರುವ ವಸ್ತುಗಳ ನರುಗಂಪನ್ನು ಅನುಭವಿಸುವ ಯೋಗ ಬಂದಿತು.

(ಕ ಪ.)

THE Canara Banking Corporation Limited

(Incorporated in British India)

ESTD 1906

HEAD OFFICE: UDIPI, South Kanara

SEASON DEPOSITS

are now accepted at all our Offices at the following rates of interest

2 & 3 months	...	3% p a
4 & 5	...	3½% p a

These deposits will not be allowed to run beyond September 1941.

THE BANK OF MANGALORE LIMITED

HEAD OFFICE MANGALORE — ESTD 1901

Branches — MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

1 to 3 years or over	5½ per cent
1	4¼ per cent
6 months	3¼ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3%

All kinds of banking business transacted

— ರಹಸ್ಯವು ಪ್ರಕಟಿಸಲ್ಪಟ್ಟಿತು —

ಕ್ರಮವಾಗಿ ಲೋಧ್ರವನ್ನುಪಯೋಗಿಸುವುದರಿಂದ ಅದು ತನ್ನನ್ನು ಈ ಮುದಿಪ್ರಾಯದಲ್ಲಿ ಕೂಡಾ ಆರೋಗ್ಯದಲ್ಲಿಯೂ, ತಾರುಣ್ಯದಂತೆ ಆನಂದದಾಯಕವಾಗಿರಿಸುವುದೆಂದು ಅಜ್ಜಿಯು ಶಿಫಾರಸು ಮಾಡುತ್ತಿರುವಳು.

ಆರೋಗ್ಯಕ್ಕೆ, ಸೌಂದರ್ಯಕ್ಕೆ ಗರ್ಭಾಶಯ ರೋಗಗಳಿಗೆ ಟಾನಿಕು · ಲೋಧ್ರ

ಎಲ್ಲಾ ಕೆಮಿಸ್ಟರಲ್ಲಿಯೂ ದೊರಕುತ್ತದೆ.

KESARI KUTEERAM

MADRAS

ಥ್ಯಾಲೆಂಡಿನ ಮೇಲೆ ಜಪಾನಿನ ದೃಷ್ಟಿ?

—ಬ್ರಿಟನು ಅಮೆರಿಕಗಳು ನಿರೋಧಿಸದಿದ್ದರೆ—

ಜಪಾನು ಜರ್ಮನಿಯಾಗುವ ಸಂಭವ!

ಸಿಂಗಾಪುರಕ್ಕೆ ಧಾಳಿಯಾಗಬಹುದೆ?

ಜರ್ಮನಿಯೊಡನೆ ಹೂಡಿದ ಯುದ್ಧದಲ್ಲಿ ಫ್ರಾನ್ಸು ಸೋತು ದುರ್ಬಲವಾದುದರಿಂದ, ಜಪಾನು ಇಂಡೋ ಚೀನದಲ್ಲಿ ಹಲವು ಸಂಚುಗಳನ್ನು ಮಾಡಿ ಅನೇಕ ಮಿಲಿಟರಿ ಅಧಿಕಾರಗಳನ್ನು ಪಡೆಯಿತು. ಚೀನದ ಯುದ್ಧವನ್ನು ಶೀಘ್ರದಲ್ಲಿ ಮುಗಿಸುವದಕ್ಕೋಸ್ಕರ ತಾನು ಇಂಡೋ ಚೀನದಲ್ಲಿ ನೌಕಾ ನಿಲಯ ಮತ್ತು ವಿಮಾನ ನಿಲ್ದಾಣಗಳನ್ನು ಕಟ್ಟುವ ಅಧಿಕಾರಗಳನ್ನು ಪಡೆದಿದ್ದೇನೆಂದು ಜಪಾನು ಹೇಳುತ್ತಿದೆಯಾದರೂ, ಅದೊಂದೇ ಉದ್ದೇಶದಿಂದ ಅದು ಇಂಡೋ ಚೀನದಲ್ಲಿ ಕಾರಸ್ಥಾನಗಳನ್ನು ನಡೆಸಿದೆ ಎಂದು ಹೇಳಲಿಕ್ಕಾಗದು. ಪೌರ್ವಾತ್ಯ ದೇಶಗಳಲ್ಲಿ — ಶಾಂತಸಾಗರದಲ್ಲಿ — ತನ್ನದೇ ಆದ ಅಧಿಕಾರವನ್ನು ಸ್ಥಾಪಿಸಲಿಕ್ಕೆ, ಜಪಾನು ಮಾಡಿದ ಮೊದಲನೆಯ ಸಫಲ ಪ್ರಯತ್ನವಿದಾಗಿದೆಯೆಂದೇ ಅನೇಕ ತಜ್ಞರ ಅಭಿಪ್ರಾಯವಿರುತ್ತದೆ. ಶಾಂತಸಾಗರದಲ್ಲಿ ಬ್ರಿಟನಿನ ಮತ್ತು ಅಮೇರಿಕದ ಅನೇಕ ಹಿತಾರ್ಥಗಳಿವೆ. ಇಲ್ಲಿ ಜಪಾನಿನ ಕೈ ಮೇಲಾದರೆ, ಮತ್ತೆ ಬ್ರಿಟನು ಅಮೆರಿಕಗಳ ಮುಖಭಂಗವಾಗದಿರದು.

ಈಗಾಗಲೇ ಜಪಾನು ಈ ಪ್ರದೇಶದಲ್ಲಿ ಪಡೆದ ಅಧಿಕಾರಗಳು ಬ್ರಿಟನು ಅಮೆರಿಕಗಳಿಗೆ ತುಂಬಾ ಹಾನಿಯನ್ನುಂಟುಮಾಡುವಂಥವುಗಳಾಗಿರುವವು. ಅವು ಜಪಾನಿನ ನಿರಂಕುಶ ಸ್ವೇಚ್ಛಾಚಾರಗಳಿಗೆ ತುಂಬಾ ಪುಷ್ಟಿ ಕೊಡುವಂಥವುಗಳಾಗಿರುತ್ತವೆ. ಇಂಡೋ ಚೀನಾದಲ್ಲಿ ಏನು ಬೇಕಾದರೂ ಮಾಡಬಲ್ಲ ಜಪಾನು, ಸೆರೆಯಲ್ಲಿರುವ ಥ್ಯಾಲೆಂಡನ್ನು ಆಕ್ರಮಿಸಿ, ಅದರ ಮೇಲೂ ತನ್ನ ಸಂಪೂರ್ಣ ಅಧಿಕಾರವನ್ನು ಸ್ಥಾಪಿಸಬಹುದು. ಇದು ಅದಕ್ಕೆ ಅತ್ಯಂತ ಸುಲಭವಾದ ಕಾರ್ಯವೇ ಸರಿ. ಇಷ್ಟು ಮಾತ್ರವಲ್ಲ, ಥ್ಯಾಲೆಂಡಿನಿಂದ ಸಿಂಗಾಪುರ ಮತ್ತು ಇನ್ನಿತರ ಬ್ರಿಟನು ಅಮೆರಿಕಗಳ ನಾಡಿ ಪ್ರದೇಶಗಳ ಮೇಲೆ ವೈಮಾನಿಕ ಹಲ್ಲೆಗಳನ್ನು ಮಾಡಿ, ಕ್ಷತಿಯನ್ನುಂಟುಮಾಡುವದೂ ಅದಕ್ಕೆ ಸುಲಭ. ಈಗ ಅದು ಇಂಡೋಚೀನದಲ್ಲಿ ಪಡೆದಿರುವ ನೌಕಾನಿಲಯಗಳಿಂದಲೂ ಅದು ಶಾಂತಸಾಗರದ ಸಮುದ್ರ ದಾರಿಗಳ ಮೇಲೆ ಬೇಕಾದಷ್ಟು ಸ್ವಚ್ಛಂದದ 'ಕಾರುಬಾರು' ಮಾಡಬಹುದಾಗಿದೆ. ಫಿಲಿಪ್ಪಾಯನ ದ್ವೀಪಗಳ ಭಾಗ್ಯವನ್ನು ಜಪಾನೇ ರೂಪಿಸಬಹುದು. ಮತ್ತೆ ಹವಾಯಿ ದ್ವೀಪಗಳೂ ಜಪಾನಿನ ವಶವಾಗಬಹುದು. ಸಿಂಗಾಪುರದ ದಾಳಿಗೆ ಮತ್ತೆ ಅನೇಕ ಸೌಲಭ್ಯಗಳುಂಟಾಗುವವು. ಆಗ ಸಿಂಗಾಪುರವನ್ನು, ಒಂದಲ್ಲ ಹಲವು ಕಡೆಗಳಿಂದ ಆಕ್ರಮಿಸುವದು ಸುಲಭ. ಸಿಂಗಾಪುರವು ಜಪಾನಿನ ಹಸ್ತಗತವಾದರೆ, ಬ್ರಿಟನು ಅಮೆರಿಕಗಳ ಪ್ರಸಿದ್ಧ ಕೈಗಾರಿಕೆಗಳಿಗೆ ಮಲಯ ಮತ್ತು ಡಚ್ ಈಸ್ಟ್ ಇಂಡಿಯಗಳಿಂದ ಬರುವ ಹಸಿ ಪದಾರ್ಥಗಳ ರಫ್ತು ನಿಂತು ಹೋಗುವದು. ಜಪಾನು ಬೃಹದ್ರಾಕ್ಷಸನ ಕೈ, ಆ ವೇಳೆ ಆಸ್ಟ್ರೇಲಿಯ ನ್ಯೂಝಿಲೆಂಡುಗಳ ತನಕ ನೀಡಿಕೊಳ್ಳಬಹುದು.

೧೯೩೯ ರಲ್ಲಿ ಜರ್ಮನಿ ಹೇಗಿದ್ದಿತೋ, ಅದರಂತೆ ಇಂದಿನ ಇಂಡೋ ಚೀನ ಮತ್ತು ಥ್ಯಾಲೆಂಡುಗಳ ಸ್ಥಿತಿಗತಿಗಳಿವೆ. ಆಗ ಜರ್ಮನಿ ಝೆಕೋಸ್ಲೊವೇಕಿಯ ಪೋಲೆಂಡನ್ನು ಆಕ್ರಮಿಸುವಾಗಲೇ, ಬ್ರಿಟನು ಅಮೆರಿಕಗಳು ಜರ್ಮನಿಯನ್ನು ವಿರೋಧಿಸಿ ಹಿಡಿತದಲ್ಲಿಟ್ಟುಕೊಂಡಿದ್ದರೆ, ಮತ್ತಿನ ಅನೇಕ ದುರಂತಗಳೂ, ಈಗ ಯೂರೋಪಿನ ಮಹಾಯುದ್ಧವೂ ನಡೆಯುತ್ತಿದ್ದಿಲ್ಲ. ಲೋಕದಲ್ಲಿ ಶಾಂತಿ ಸ್ಥಾಪಿತವಾಗುತ್ತಿತ್ತು. ಈಗಲಾದರೂ ಜಪಾನಿನ ತಲೆ ಮೇಲೆ ಸವಾರಿಯಾಗಿರುವ ಅದರ ಆಕ್ರಮಣಪ್ರಿಯತೆ ರಾಕ್ಷಸನ ಸೊಂಟ ಮುರಿದು ಹಾಕದಿದ್ದರೆ, ಯೂರೋಪಿನಲ್ಲಿ ಹಿಟ್ಲರನ ಪ್ರಾದುರ್ಭಾವದಿಂದ ಉಂಟಾದ ದುರಂತಗಳೇ ಏಸ್ಯಾದಲ್ಲಿಯೂ ಜಪಾನಿನ ಪ್ರಾದುರ್ಭಾವದಿಂದ ಆಗಬಹುದು.

ಥ್ಯಾಲೆಂಡು ಒಂದು ವಿಶಾಲವಾದ ಖನಿಜ ಸಂಪತ್ತಿರುವ ದೇಶವಾಗಿದೆ. ಹಿಂದೂ ಸಾಗರ ಮತ್ತು ಶಾಂತಸಾಗರದೊಳಗಿನ ಜಲದಾರಿಗಳಲ್ಲಿ ಇದ್ದು, ಕೂಡುತ್ತವೆ. ಮತ್ತೆ ಬ್ರಿಟಿಷರ ಬರ್ಮಾ, ಫ್ರೆಂಚರ ಇಂಡೋಚೀನ ಹಾಗೂ ಚೈನಗಳಿಗೆ ಮಧ್ಯವರ್ತಿಯಾಗಿ ಅದು ಪ್ರಾಮುಖ್ಯಸ್ಥಾನ ನಡಲಿದೆ. ಥ್ಯಾಲೆಂಡು ತನ್ನ ರಬ್ಬರು ಮತ್ತು ಸಾಗುವಾನಿಯನ್ನು ಬಹಳ ರಫ್ತು ಮಾಡುವದು. ಅದು ಅಕ್ಕಿಯ ಬಹು ದೊಡ್ಡ ಉಗ್ರಾಣ. ಆದ್ದರಿಂದ ಬ್ರಿಟನು ಅಮೆರಿಕಗಳಿಗೆ ಹಾನಿಯನ್ನುಂಟುಮಾಡುವದಕ್ಕಾಗಿ ಅಲ್ಲವಾದರೂ, ತನ್ನ ಸಂಪತ್ತನ್ನು ಬೆಳೆಸಲಿಕ್ಕಾದರೂ ಜಪಾನು ಥ್ಯಾಲೆಂಡನ್ನು ಆಕ್ರಮಿಸದೆ ಇರಲಾರದು. ಇನ್ನೂ ಒಂದು ಮಾತು. ಚೀನಕ್ಕೂ ಥ್ಯಾಲೆಂಡಿಗೂ ವ್ಯಾಪಾರದ ಹೆದ್ದಾರಿಯನ್ನು ಕಟ್ಟುವ ಬಹು ಸುಲಭವಾದ ಅನುಕೂಲತೆಗಳಿವೆ. ಇನ್ನು ಸ್ವಲ್ಪ ಸಮಯ ಕಳೆಯಿತಾದರೆ ಬರ್ಮಾ ರಸ್ತೆಯಂತೆ ಒಂದು ರಸ್ತೆಯು ಥ್ಯಾಲೆಂಡಿನಿಂದ ಚೀನಕ್ಕೆ ಆಗಬಹುದು. ಇದು ಜಪಾನಿನ ಪ್ರಯೋಜನಕ್ಕೆ ಇರುವದಿಲ್ಲ. ಇದನ್ನು ತಡೆಯುವುದು ಜಪಾನಿಗೆ ಅಗತ್ಯವಾಗಿದೆ. ಹಾಗೆಯೇ ಥ್ಯಾಲೆಂಡಿನಲ್ಲಿರುವ ವೈಮಾನಿಕ ದಾರಿಗಳೂ ಮುಖ್ಯವಾಗಿವೆ. ಇವು ಪ್ರಪಂಚದ ವೈಮಾನಿಕ ದಾರಿಗಳನ್ನು ಜೋಡಿಸುವವು. ಥ್ಯಾಲೆಂಡು ಜಪಾನಿನ ವಶವಾದರೆ ಈ ದಾರಿಗಳ ಮೇಲೂ ಜಪಾನು ಅಧಿಕಾರಮಾಡಬಹುದು.

ಹೀಗೆ ಥ್ಯಾಲೆಂಡು ಒಂದು ಸಂದುಕಟ್ಟಿನ ಸ್ಥಾನದಲ್ಲಿದೆಯಾದರೂ ಅದಕ್ಕೆ ರಾಜ್ಯವಿಸ್ತಾರಮಾಡುವ ಸಾಮ್ರಾಜ್ಯದಾಹವು ಇರುವದಿಲ್ಲ. ಆದರೂ ಥ್ಯಾಲೆಂಡಿನ ಜನರಿಗೆ ಸ್ವಾತಂತ್ರ್ಯವೆಂದರೆ ಪ್ರಾಣಕ್ಕಿಂತಲೂ ಹೆಚ್ಚಿನದಾಗಿರುವದು. ಥ್ಯಾಲೆಂಡಿನ ಸ್ವಾತಂತ್ರ್ಯಾಪಹಾರ ಮಾಡುವ ಬೇರೆ ರಾಷ್ಟ್ರಗಳ ಪ್ರತಿಯೊಂದು ಸಣ್ಣ ದೊಡ್ಡ ಪ್ರಯತ್ನವನ್ನು ಅವರು ಜೀವ ಕೊಟ್ಟು ವಿರೋಧಿಸುವರು. ಆದ್ದರಿಂದ ಜಪಾನು ಥ್ಯಾಲೆಂಡಿನ ಸ್ವಾತಂತ್ರ್ಯಾಪಹಾರ ಮಾಡುವುದು ಬ್ರಿಟನ ಅಮೆರಿಕಗಳಿಗೆ ಹಾನಿಕರ ಮಾತ್ರವಲ್ಲ ಲೋಕಕ್ಕೇ ಒಂದು ದೊಡ್ಡ ಗಂಡಾಂತರವಾಗಿದೆ. ಇದನ್ನು ತಪ್ಪಿಸಲಿಕ್ಕೆ ಬ್ರಿಟನ ಅಮೆರಿಕಗಳು ಒಂದಾಗಿ ಒಂದು ಉಪಾಯವನ್ನು ಹೂಡುವದು ಅಗತ್ಯವಾಗಿದೆ.

CANARA BANK LIMITED

(Incorporated in British India with Limited Liability)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6 00 000— 0— 0	Premises & Furniture	94 217— 6— 8
Paid up	3 92,551—15—11	***Advances to Customers***	
Reserve Funds	4 50 000— 0— 0	Secured by Valuable	
Deposits	86 71,764— 2— 6	Securities	37 87 804—13— 8
Due to Bankers	Nil	Secured by Bills of	
Sundries	7 08 593—14— 5	Exchange etc	9 29 550— 0— 6
Net Profits		***Investments***	20,34 328—12— 9
Appropriation account 1 244—10— 6		***Sundries***	6 81 012— 5— 7
Net Profit for the year 71 726— 5— 0		***Cash On Hand And at Call At***	
72,970—15— 6		***Bankers***	28,17 538— 5— 7
Less amount transferred to Reserves 41,369—3—7	31 601—11—11		
Rs	1,03,44,451—12— 9	Rs	1 03 44 451—12— 9

ಮಲಬದ್ಧತೆ, ತಲೆನೋವು, ಹೆಚ್ಚಾಗಿ ಆರೋಗ್ಯ ಕೆಡುವ ಪರಿಸ್ಥಿತಿ, ಶಕ್ತಿ ಕ್ಷೀಣವಾಗುವುದು ಇವುಗಳೆಲ್ಲಾ ನಿಮ್ಮ ಶರೀರದಲ್ಲಿ ಕಲ್ಮಷಗಳಿವೆಯೆಂಬುದನ್ನು ತೋರಿಸುತ್ತವೆ. ದಿನನಿತ್ಯವೂ ಒಂದು ಗ್ಲಾಸು ತಂಪುಕೊಡುವ ಎಂಡ್ರ್ಯೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡು, ಶರೀರದೊಳಗಿನ ಈ ವಿಷವಸ್ತುಗಳನ್ನು ಹೊರಹಾಕಿರಿ. ಕೂಡಲೇ ನೀವು ಹೊಸ ಮನುಷ್ಯರೇ ಆಗುವಿರಿ. ಬಾಯಾರಿಕೆ ತೀವ್ರವಾಗುವುದು. ಶರೀರ ಶಕ್ತಿಗೊಳ್ಳುವುದು, ಪಿತ್ತಕೋಶವನ್ನು ಎಂಡ್ರ್ಯೂಸ್ ಲಿವರ್ ಸಾಲ್ಟ್ ನಿರ್ಮಲಗೊಳಿಸುವುದು. ಶರೀರದೊಳಭಾಗವು ಶುಚಿಗೊಳ್ಳುವುದು. ಇದರಿಂದ ಖಂಡಿತವಾಗಿಯೂ ಉತ್ತಮ ಆರೋಗ್ಯವುಂಟಾಗುವುದು. ಶರೀರದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯ ಎಂಡ್ರ್ಯೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ.

ANDREWS LIVER SALT

ಆರೋಗ್ಯಕರ, ಹಾನಿಯಿಲ್ಲದ ಮತ್ತು ಪುಷ್ಟಿಕರವಾದುದು. ರುಚಿ, ತಂಪು, ಸುಖ, ಶಕ್ತಿದಾಯಕವಾದುದು.

ದೇಶಭಕ್ತ

[೭ನೆಯ ಪುಟದಿಂದ]

'ಎಲ್ಲಿಂದ ಬಂದುದು''

' . .' ಯಿಂದ'

' . . .ಯಿಂದಲೋ? ಅದಿಲ್ಲಿಂದ ಬಹು ದೂರವಿದೆ'

'ಅಹುದ್, ಮೂವತ್ತು ಹರದಾರಿ ದೂರ.'

'ಕಾಲು ನಡಿಗೆಯಿಂದಲೇ ಬಂದು ಬಿಟ್ಟೆಯಾ?'

'ಇಷ್ಟು ಬೆಳಿಗ್ಗೆ'

ಯುವಕನು ಒಳಗಿಂದೊಳಗೇ ಮುಗುಳು ನಕ್ಕನು.

'ಇಲ್ಲಿಗೇಕೆ ಬಂದೆ' ಸರದಾರನು ನಗುತ್ತ ಕೇಳಿದನು.

'ಮೊದಲೇ ಹೇಳಿರುವೆ ಸೇನೆಯನ್ನು ಸೇರಲಿಕ್ಕೆ ಎಂದು'

'ನಾನದನ್ನು ಕೇಳಲಿಲ್ಲ ನೀನೇಕೆ ಸೇನೆಯನ್ನು ಸೇರಲಿಕ್ಕೆ ಬಂದೆಯೆಂದ ತಿಳಿಯಲಿಚ್ಛಿಸುವೆನು.'

'ಸೇನೆಯನ್ನು ಸೇರಲೇಕೆ ಬಂದೆ? – ಯುವಕನು ಚಕಿತನಾದನು 'ನಾನು ಹಣ ಸಂಪಾದನೆ ಮಾಡಲಿಕ್ಕಾಗಿ ಬಂದವನಲ್ಲ' ಯುವಕನು ಉತ್ತೇಜಿತನಾಗಿ ಹೇಳಿದನು 'ದೇಶದ ಕೂಗನ್ನು ಕೇಳಿ ಬಂದೆನು ತಾರುಣ್ಯತೆಯನ್ನು ಸಾರ್ಥಕಗೊಳಿಸಲಿಕ್ಕಾಗಿ ಬಂದೆನು.'

ಬೆಚ್ಚಿಬಿದ್ದ ಸರದಾರನು, ಯುವಕನನ್ನಪ್ಪಿ ಹಿಡಿಯುವ ತನ್ನನ್ನು ತಾನೇ ತಡೆಯದಾದನು ಬಹಳ ಮಾತುಕತೆ ನಡೆಯಿತು – ಯುವಕನು ತನ್ನ ಸ್ವಪ್ನ ವೃತ್ತಾಂತವನ್ನೂ ಹೇಳಿಬಿಟ್ಟನು

ಸರದಾರನು ಯುವಕನ ಹೆಸರನ್ನು ದಾಖಲು ಮಾಡಲುದ್ಯಮಿಸಿದನು ಎಲ್ಲ ಸ್ಥಳವೂ ಬರ್ತಿಯಾಗುತ್ತಿರಲು ಅವನು ಕೇಳಿದನು 'ನೀವೆಷ್ಟು ಮಂದಿ ಅಣ್ಣ ತಮ್ಮಂದಿರರು?'

'ನಾನೊಬ್ಬನೆ.'

'ಮನೆಯಲ್ಲಿ ಯಾರ್ಯಾರಿರುವರು?'

'ತಂದೆಯವರೊಬ್ಬರೆ'

'ಒಬ್ಬರೇ?'

'ನಿಜ'

'ಅವರ ಪ್ರಾಯ?'

'ಎಪ್ಪತ್ತೈದು ವರ್ಷ'

'ಕೂಡಲೇ ಸರದಾರನ ಮುಖಚರ್ಯೆಯು ಬದಲಾಯಿತು ಲೇಖನಿಯನ್ನು ಮೆಲ್ಲಗೆ ಕೆಳಗಿಡುತ್ತ ಯುವಕನನ್ನು ನೋಡತೊಡಗಿದನು ಇದರಿಂದ ಗಾಬರಿಗೊಂಡ ಯುವಕನೇನೋ ಹೇಳಬೇಕೆನ್ನುವಷ್ಟರಲ್ಲೇ ಸರದಾರನು ಮೆಲ್ಲನೆ ಹೇಳಿದನು. 'ವಿಷಾದಕರ ವಿಷಯವಿದೆ. ಯುವಕಾ ಕಾಯದೆಗನುಗುಣವಾಗಿ ನಿನ್ನನ್ನು ಸೇನೆಯಲ್ಲಿ ತೆಕೊಳ್ಳಲಾಗುವುದಿಲ್ಲ. ದೇಶಕ್ಕಿಂತಲೂ ಮೊದಲು ನಿನ್ನ ತಂದೆಯನ್ನು ನೋಡಬೇಕಾಗಿದೆ. ಏಕೆಂದರೆ ನಿನ್ನ ವೃದ್ಧ ತಂದೆಗೆ. ನೀನೊಬ್ಬನೇ ಮಗನಿರುವೆ.'

ಆಕಾಶದಿಂದ ಕೆಳಗೆ ಬಿದ್ದ ಯುವಕ ಹೃದಯ ವೇಗವನ್ನು ತಡೆದು ಹಿಂದಿರುಗಿಬಿಟ್ಟನು. ಅವನ ಉತ್ಸಾಹ, ಸ್ಫೂರ್ತಿ, ತಾರುಣ್ಯವೆಲ್ಲವೂ ಎಲ್ಲಿ, ಹೇಗೆ ಮಾಯವಾಯಿತೆಂಬುದು ತಿಳಿಯದಾಯಿತು ಸೋಲಿಸಲ್ಪಟ್ಟ ಸಿಪಾಯಿಯಂತೆ ಕೆಲಸದಿಂದ ತೆಗೆದು ಹಾಕಲ್ಪಟ್ಟ ನೌಕರನಂತೆ ಅವನು ಮನೆಗೆ ಹಿಂದಿರುಗಿದನು

ಬೆಳಿಗ್ಗೆ ಎಲ್ಲಿ ಹೋಗಿದ್ದೆ ಮಗೂ' ಅಯ್ಯೋ ಮುಖವು ಬಾಡಿಹೋಗಿದೆ, ಇದುವರೆಗೂ ಆಹಾರ ತೆಗೆದುಕೊಂಡಿಲ್ಲವೇ? ಸರಿ ಅಡಿಗೆಯಾಗಿದೆ ಊಟ ಮಾಡು

'ತಾತಾ, ತಾತಾ ಕಂಬನಿಗರೆಯುತ್ತ ಯುವಕನು ತನ್ನ ತಂದೆಯ ಚರಣಗಳಲ್ಲಿ ಮಸ್ತಕವನ್ನಿಟ್ಟು ಎಲ್ಲ ವೃತ್ತಾಂತವನ್ನೂ ತಿಳಿಸಿದ್ದನು

ವೃದ್ಧನು ಪ್ರಾರಂಭದಲ್ಲಿ ಬೆಚ್ಚಿ ಬಿದ್ದನು, ಆದರೆ—ನಂತರ ಶಾಂತನಾದ್ನ!

ಯುವಕನು ಪತ್ರವನ್ನೋದ ತೊಡಗಿದನು

'ನನ್ನ ಪ್ರಾಣ! ನನ್ನ ಭಿನ್ನದೇಹವೇ!

ಅದೇ ದಿನ ನಾನು ನಿನ್ನನ್ನು ನೋಡುತ್ತಿದ್ದೆ ಕ್ಷಣಕ್ಷಣಕ್ಕೂ ನೀನು ಬೇರೆಯಾಗುತ್ತಿದ್ದೆ ಮಾತ ವಚನವು ನಿನ್ನಲ್ಲಿಷ್ಟು ಪರಿಣಾಮಕಾರಿಯಾದೀತೆಂದು ನಾನೆಣಿಸಿದ್ದಿಲ್ಲ ಅದರ ಫಲವಾಗಿಯೇ ನೀನು ದೇಶಸೇವಾನಿರತನಾಗಿ ಇಷ್ಟೊಂದು ಪ್ರೀತಿಸುವ ನಿನ್ನ ವೃದ್ಧ ತಂದೆಯನ್ನೂ ಬಿಟ್ಟು ಓಡಿಹೋಗಿದ್ದೆ ಆದರೆ ಬಾಗ್ಯ ಅದವಾ ಸೌಭಾಗ್ಯ ಮೂಲಕವೇ ಸರದಾರನ ಮಾತಿನಂತೆ ನೀನು ಹಿಂದಿರುಗಿದೆ'

'ನಾನೂ ನೋಡಿದೆ ವಿಚಾರಿಸಿದೆ. ಬಹಳ ಆಲೋಚಿಸಿದೆ ನಿನ್ನ ದೇಶಸೇವಾ ಪಥದಲ್ಲಿ ನಾನೇ ಅಡ್ಡಿ ಇರುವೆನೆಂಬುದನ್ನು ತಿಳಿದೆ ಹಣ್ಣಾದ ಮಾವಿನಂತೆ ನನಗಿನ್ನೇನಾಗಬೇಕಾಗಿದೆ? ಇಂದಲ್ಲ ನಾಳೆ ಕೆಳಬೀಳಬೇಕಾಗುವುದು ಮತ್ತೇಕೀ ಲಾಲಸೆ? ನಾನಿಲ್ಲದಿದ್ದರೆ ನೀನು ನಿರಾಯಾಸವಾಗಿ ಸೇನೆಯಲ್ಲಿ ಭರ್ತಿಯಾಗುವೆ ಅಲ್ಲದೆ ಆಗ ಸರದಾರರಿಗೂ ಯಾವ ಅಡ್ಡಿ ಹೇಳಲೂ ಬರುವಂತಿಲ್ಲ'

'ನಾನು ನಿನ್ನನ್ನು ಬಿಟ್ಟು ಹೊರಟಿದ್ದೇನೆ ತನ್ನ ಪ್ರೀತಿಯ ಪುತ್ರನನ್ನು ಬಿಟ್ಟು, ಮಮತೆಯ ಮನೆಯನ್ನು ತೊರೆದು ಹೊರಟೇ ಬಿಟ್ಟಿದ್ದೇನೆ ನಾನೀಗ ಮುಂದಿನ ಆಲೋಚನೆ ಮಾಡಿಕೊಂಡಿದ್ದೇನೆ ಅಂತೇ ಈ ಪತ್ರ ನಿನಗೆ ಸಿಗುವಷ್ಟರಲ್ಲೇ ನಾನು ನನ್ನ ದಾರಿ ಹಿಡಿದು ಬಿಟ್ಟಿದ್ದೇನೆ'

'ವ್ಯರ್ಥ ಬೇರೆ ಆಲೋಚನೆ ಮಾಡಬೇಡ ಈ ಪತ್ರದ ಸಂಗಡ ಸರದಾರರ ಬಳಿಗೆ ಹೋಗಬೇಕು ಮತ್ತು ತಾಯಿಯ ಆಜ್ಞಾಪಾಲನೆ ಮಾಡಬೇಕು ಇದೇ ನಿನ್ನ ಪಿತನ ಆಜ್ಞೆಯಾಗಿದೆ—ಅಂತಿಮ ಆಜ್ಞೆ! ಯಾರಾತನು ನಿನಗಿದುವರೆಗೆ ಯಾವುದೇ ಆಜ್ಞೆಯನ್ನೂ ಕೊಟ್ಟಿಲ್ಲವೋ ಅದೇ ಪಿತನ ಆಜ್ಞೆ ಹಾ ಅವನದೇ ಆಜ್ಞೆ' —ನಿನ್ನ ಹಿರಿಯನಾಗಿದ್ದೇನೆ

ನಿನ್ನ ತಂದೆ'

[ಹಿಂದೀ ಅನುವಾದ- ಹರಿದಾಸ್ ವಿದ್ವಾನ್]

ಎಳೆ ಮಕ್ಕಳ ಕೋಮಲ ಚರ್ಮಕ್ಕೆ ಉತ್ತಮವಾದ ಪೌಡರು

Cuticura Talcum

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿ

೪ ವಾಚುಗಳು ಮತ್ತು ೯೬೫ ಬಹುಮಾನಗಳು

ರೂಪಾಯಿ ೧—೪—೦ಕ್ಕೆ



ಉತ್ತಮ ಕುಸುಮದ ೬ ಸೀರೆ ಒಟ್ಟು ರೋಸ್ ಅಥವಾ ೬ ನೀರೆ ಹಿಂದ್ ನರ್ಮ (ಜಕಾರ್) ಮುಲಾಮು ಇವನ್ನು ಒಮ್ಮೆಗೆ ರೂ 1—4—0ಕ್ಕೆ ಕೊಂಡುಕೊಂಡವರಿಗೆ ಎರಡು ಬಂಗಾರದ ಗಿಲೀಟಿನ ದಮ್ಮಿ ರಿಸ್ಟ್ ವಾಚು (ಬೇಂಡ್ ಸಹಿತ) ಒಂದು ದಮ್ಮಿ ಟೈಂಪೀಸ್, ಒಂದು ಸೇಫ್ಟಿ ರೇಜರ್, ಒಂದು ಶೇವಿಂಗ್ ಬ್ರಶ್, ಒಂದು ಪೇಕೇಟ್ ಪೌಡರ್, ಒಂದು ಬಾಚಣಿಗೆ, ಒಂದು ಸೋಪು, ಒಂದು ಸೆಟ್ ಗುಬ್ಬಿಗಳು, ಒಂದು ಚೂರಿ, ಒಂದು 14 ಕ್ಯಾರೆಟಿನ ನಿಬ್ಬುಳ್ಳ ಪೆನ್ನು, 500 ಫೀಟು ಫೋಕಸಿನ 36 ತಾಸು ಉರಿಯುವ ಒಂದು ಲೈಟು ಮತ್ತು ಅನೇಕ ಸುಂದರ ವಸ್ತುಗಳು ಅಥವಾ—ಒಂದು—ಸಲ ಕೀ ಕೊಟ್ಟರೆ 36 ತಾಸು ನಡೆವ 10 ವರ್ಷ ಗ್ಯಾರಂಟಿಯ ಒಂದು ಲಿವರ್ ಪೋಕೆಟ್ ವಾಚು ಸಿಗುತ್ತವೆ. ಪೋಸ್ಟೇಜ್ ಮತ್ತು ಪೇಕಿಂಗ್ ಪ್ರತ್ಯೇಕ 12 ಆಣೆ

ವಿಳಾಸ —

THE AMERICAN COMMERCIAL STORES. POST BOX NO. 12213,

CALCUTTA (S. A.)



ವಿಜ್ಞಾನಯುಗ



ಭಾರತೀಯ ವಿಜ್ಞಾನಿಗೆ ಗೌರವ

ಅಮೇರಿಕದ ಪೆನ್ಸಿಲ್‌ವೇನಿಯದ ಫಿಲಡೆಲ್ಫಿಯಾದಲ್ಲಿರುವ ಲೋಕಪ್ರಸಿದ್ಧವಾದ ಫ್ರೆಂಕ್ಲಿನ್ ಇನ್ಸ್ಟಿಟ್ಯೂಟದವರು ಭಾರತೀಯ ವಿಜ್ಞಾನಿ ಸರ್ ಸಿ. ವಿ

ರಾಮನರವರಿಗೆ ಈ ವರ್ಷದ ಫ್ರಾಂಕ್ಲಿನ ಸ್ವರ್ಣ ಪದಕವನ್ನು ಕೊಟ್ಟು ಸನ್ಮಾನಿಸುವ ನಿರ್ಧಾರ ಮಾಡಿದ್ದಾರೆ. ಈ ಸಂಸ್ಥೆಯು ೧೮೨೪ರಲ್ಲಿ ಸ್ಥಾಪಿತವಾದ ಪ್ರಪಂಚದ ಅತ್ಯಂತ ಪುರಾತನ ವೈಜ್ಞಾನಿಕ ಮಂಡಲಿಯಾಗಿದೆ. ಇದರ ಗ್ರಂಥಾಲಯದಲ್ಲಿ ವಿಜ್ಞಾನ ವಿಷಯದ ಮೇಲೆ ೮೬೦೦೦ ಮಹಾಗ್ರಂಥಗಳೂ ೨೭೦೦೦ ಪುಸ್ತಕಗಳೂ ಇರುವವು. ಈ ಸಂಸ್ಥೆಯ ಸ್ವರ್ಣ ಪದಕವು ಪ್ರಪಂಚದ ಮಹಾ ವಿಜ್ಞಾನಿಗಳಿಗಷ್ಟೆ ಕೊಡಲ್ಪಡುತ್ತದೆ. ಆದರ ಈ ವರ್ಷದ ಪದಕವನ್ನು ಪಡೆಯುವ ಗೌರವಕ್ಕೆ ಭಾರತೀಯ ವಿಜ್ಞಾನಿಗಳಾದ ಸರ್ ಸಿ. ವಿ. ರಾಮನರು ಆರಿಸಲ್ಪಟ್ಟಿರುವದು ನಮಗೆ ಭೂಷಣಾಸ್ಪದವಾಗಿದೆ.

ರಕ್ತಶುದ್ಧಿಗೆ ಕಿರಣ ಚಿಕಿತ್ಸೆ

ಪ್ರಕಾಶ ಕಿರಣಗಳು ಎಲ್ಲಾ ಜಾತಿಯ ರೋಗಾಣುಗಳನ್ನು ಕೊಂದುಹಾಕುವವು. ಇದ್ದರಿಂದಲೇ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡುವಾಗ ಪ್ರಕಾಶ ಕಿರಣಗಳನ್ನು ಬಿಟ್ಟು ಕೋಣೆಗಳಲ್ಲಿ ಇರಬಹುದಾದ ಬೆಕ್ಟೀರಿಯ ರೋಗಾಣುಗಳನ್ನು ನಾಶಮಾಡುವರು. ಇದೇ ರೀತಿ ಮನುಷ್ಯನ ಶರೀರದೊಳಗೂ ಪ್ರಕಾಶ ಕಿರಣಗಳನ್ನು ಬಿಟ್ಟು, ರೋಗ ಚಿಕಿತ್ಸೆಯನ್ನು ಯಾಕೆ ಮಾಡಬಾರದು? ಎಮ್ಮೆಟ್ ಕೆ. ನೋಟ್ ಎಂಬ ವೈದ್ಯ ವೈಜ್ಞಾನಿಕನೊಬ್ಬನ ತಲೆಯೊಳಗೆ ಈ ಪ್ರಶ್ನೆಯು ಹುಟ್ಟಿ, ಕಳೆದ ೧೫ ವರ್ಷಗಳ ತನಕ ಸತತ ಪರಿಶೋಧನೆಗಳನ್ನು ಮಾಡಿದ ಪರಿಣಾಮವಾಗಿ ಅವನೀಗ ಈ ರೀತಿಯ ಒಂದು ಹೊಸ ಚಿಕಿತ್ಸಾಕ್ರಮವನ್ನು ಕಂಡುಹಿಡಿದಿದ್ದಾನೆ. ಚರ್ಮದ ಒಂದು ವಿಶೇಷಗಳಾದ ದೆಸೆಯಿಂದ ಪ್ರಕಾಶ ಕಿರಣಗಳನ್ನು ಶರೀರದೊಳಗೆ ಬಿಡಲಿಕ್ಕಾಗುವದಿಲ್ಲ. ಅದಕ್ಕೋಸ್ಕರ ಅವನು ರೋಗಾಣುಗಳ ಹಾವಳಿಯಿಂದ ವಿಷಪೂರಿತವಾದ ರಕ್ತವನ್ನು ಅರ್ಧ ಅರ್ಧ ಪಿಂಟಿನಷ್ಟು ರಕ್ತವನ್ನು ಹೊರತೆಗೆದು, ಅದು ಗಟ್ಟಿಯಾಗದ ಹಾಗೆ, ಅದಕ್ಕೆ ಸೋಡಿಯಂ ನ್ಯಾಟ್ರೇಟ್ ಎಂಬುದನ್ನು ಬೆರಸಿ, ಮತ್ತೆ ಪ್ರಕಾಶ ಕಿರಣಗಳನ್ನು ಅದಕ್ಕೆ ಬಿಡುವನು. ಈ ರೀತಿ ಆ ರಕ್ತವನ್ನು ಶುದ್ಧೀಕರಿಸಿದ ಮೇಲೆ ಅದನ್ನು ಪುನಃ ರೋಗಿಯ ಶರೀರಕ್ಕೆ ಬಿಡುವನು. ಸುಮಾರು ೬೦೦೦ ರೋಗಿಗಳನ್ನು ಈ ರೀತಿ ಚಿಕಿತ್ಸೆಮಾಡಿದಲ್ಲಿ ಅವರಿಗೆ ಬಹಳ ಗುಣವು ಕಂಡು ಬಂದಿದೆ.

ಒಂದು ಮೈಲಿಯಂತೆ ಏರುವ ವಿಮಾನ

ವಿಮಾನಗಳಿಂದ ಹಾರಿ ಒಂದು, ಅಲ್ಲಿಂದಲೇ ಶತ್ರುರಾಜ್ಯಗಳ ಮೇಲೆ ಬಾಂಬುಗಳನ್ನು ಚೆಲ್ಲುತ್ತಾರಷ್ಟೆ? ಈ ಬಾಂಬುಗಳ ಹಾವಳಿಯನ್ನು ತಪ್ಪಿಸುವ ಉಪಾಯವು ಯಾವುದು? ಇಷ್ಟರ ತನಕ ವಿಮಾನ ನಿರೋಧಕ ಫಿರಂಗಿಗಳನ್ನು ಸುಟ್ಟು, ಆ ವಿಮಾನಗಳನ್ನು ಓಡಿಸುತ್ತಿದ್ದರು, ಇಲ್ಲವೆ ಅವನ್ನು ಕೆಡವಿ ಹಾಕುತ್ತಿದ್ದರು. ಪರಂತು ಅಮೇರಿಕದ ಕರ್ಟಿಸ ರ್‍ಯಾಟ್ ಕಂಪೆನಿಯವರು ಈ ಉದ್ದೇಶಕ್ಕೆ ಹೊಸ ಜಾತಿಯ ವಿಮಾನಗಳನ್ನು ರಚಿಸಿದ್ದಾರೆ. ಈ ಜಾತಿಯ ವಿಮಾನವು ನೆಲದ ಮೇಲಿಂದ ಮಿನಿಟಿಗೆ ಒಂದು ಮೈಲಿಯಂತೆ ನೆಟ್ಟಗೆ ಆಕಾಶಕ್ಕೆ ಏರಬಲ್ಲುದು. ಮಿಕ್ಕ ಯಾವ ವಿಮಾನಗಳು ಹೀಗೆ ಲಂಬ ರೇಷೆಯಲ್ಲಿ ಏರಲಾರವು. ಇದರಲ್ಲಿ ನಾಲ್ಕು ಮೆಶೀನು ಗನ್ನುಗಳೂ, ಇತರ ಸಾಹಿತ್ಯ ಸಲಕರಣೆಗಳೂ ಇರುತ್ತವೆ. ಬಾಂಬರು ವಿಮಾನಗಳು ಬಂದೊಡನೆಯೇ ಇವು ಆರೆಕ್ಷಣದಲ್ಲಿ ಮೇಲಕ್ಕೆ ಹಾರಿ ಗುಂಡು ಹೊಡೆದು ಆ ಶತ್ರು ವಿಮಾನಗಳನ್ನು ನೆಲಕ್ಕೆ ಕೆಡವಿ ಹಾಕುವವು. ಈ ವಿಮಾನಗಳಲ್ಲಿ ದಾಳಿಯನ್ನು ತಡೆಯಲಿಕ್ಕೆ ಈ ವರೆಗಿಲ್ಲದಿದ್ದ ಇನ್ನೂ ಅನೇಕ ಸುಧಾರಣೆಗಳೂ ಆಗಿರುತ್ತವೆ.

ಕೃತ್ರಿಮ ವಜ್ರಗಳ ಹೊಸ ಶೋಧ

ಡಾಕ್ಟರ್ ಕ್ಲಿಫರ್ಡ್ ಎ. ಹಿಕ್ಮನ್ ಎಂಬ ಅಮೇರಿಕದ ಒಬ್ಬ ವಿಜ್ಞಾನಿಗಳು ಒಂದು ವಿದ್ಯುಚ್ಛಕ್ತಿಯ ಕಂಪನಿಯ ಸಹಾಯದಿಂದ ಹೊಸ ರೀತಿಯಲ್ಲಿ ಕೃತ್ರಿಮ ವಜ್ರಗಳನ್ನು ತಯಾರಿಸಿದ್ದಾರೆ. ಈ ವರೆಗಿನ ಪ್ರಯತ್ನಗಳಿಂದ ಅವರು ತಯಾರಿಸಿದ ವಜ್ರವು ಹೋಮಿಗೆಯಷ್ಟು ದೊಡ್ಡದಾಗಿ ಇರುತ್ತವೆ. ಇದಕ್ಕೂ ದೊಡ್ಡವಾದ ವಜ್ರಗಳನ್ನು ತಯಾರಿಸುವ ಪ್ರಯತ್ನದಲ್ಲಿ ಅವರೀಗ ತೊಡಗಿದ್ದಾರೆ. ಈ ಹೊಸ ಪ್ರಯತ್ನಗಳಲ್ಲಿ ಅವರು ಕೃತಕೃತ್ಯರಾದರೆ, ವಸ್ತು ಒಡವೆಗಳನ್ನು ಬಹು ಸೂಕ್ಷ್ಮದಲ್ಲಿ ಕಡಿಯಲಿಕ್ಕೆ ಉಪಯೋಗಿಸುವ ಬದಲಿಗೆ ಈ ಕೃತ್ರಿಮ ವಜ್ರಗಳನ್ನೇ ಉಪಯೋಗಿಸಬಹುದು. ಈ ಕಾರ್ಯಗಳಿಗಾಗಿಯೇ ದೊಡ್ಡ ದೊಡ್ಡ ಕಾರಖಾನೆಗಳವರು ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳ ಜಾತಿ ವಜ್ರಗಳನ್ನು ಕೊಂಡುಕೊಳ್ಳುತ್ತಾರೆ. ಮುಂದೆ ಕೃತ್ರಿಮ ವಜ್ರಗಳ ದೆಸೆಯಿಂದ ಈ ವ್ಯಾಪಾರವು ನಿಂತು ಹೋಗುವದರಿಂದ ವಜ್ರಗಳ ಬೆಲೆ ಇಳಿಯುವ ಸಂಭವ ಇರುತ್ತದೆ

BHUVANENDRA PRODUCTS LTD.,

KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರನಾರಾಯಣತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ,

ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು.—

ಯು ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಪಾಕಿಸ್ತಾನ ವಿರೋಧ ಪರಿಷತ್ತಿನ ಸನ್ನಾಹ

ಸ್ವಾಗತಾಧ್ಯಕ್ಷ ಶರೀಫರ ಸ್ಫೂರ್ತಿಮಯ ಸಂದೇಶ

ಎಲ್ಲರೂ ಒಂದಾಗಿ ಉಜ್ವಲ ಪರಂಪರೆಗೆ ತಕ್ಕಂತೆ ವರ್ತಿಸಿರಿ

—ಬರುವ ತಿಂಗಳ ತಾ. ೧೨ಕ್ಕೆ ಜರಗಲಿರುವ ಪಾಕಿಸ್ತಾನ ವಿರೋಧ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಕೆ. ಯಂ. ಶರೀಫರು ಮುಸ್ಲಿಮರ ಅಭಿಪ್ರಾಯವನ್ನು ವಿಶದೀಕರಿಸಿ ಈ ಕೆಳಗಿನಂತೆ ಹೇಳಿಕೆ ಕೊಟ್ಟಿದ್ದಾರೆ. ಮುಸ್ಲಿಮರೆಲ್ಲ ಒಂದಾಗಿ ಈ ಪರಿಷತ್ತನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ವಿನಂತಿಮಾಡಿಕೊಂಡಿದ್ದಾರೆ.

ದಕ್ಷಿಣ ಭಾರತದ ಹೊಸಗಾರ ಮುಸ್ಲಿಮರು ಪಾಕಿಸ್ತಾನ ಯೋಜನೆಗೆ ಬದ್ಧ ವಿರೋಧಿಗಳಾಗಿದ್ದಾರೆ. ಈ ವರೆಗೂ ಅವರು ದೂರವಿದ್ದರು. ಈ ಬಗೆಯ ವಿಚಿತ್ರ ರಾಜಕಾರಣದಲ್ಲಿ ಕೈಹಾಕಬಾರದು—ಸಾರ್ವಜನಿಕವಾಗಿ ಖಂಡಿಸಬೇಕೋ ಬೇಡವೋ ಎಂದು ಸುಮ್ಮನಿದ್ದರು. ಆದರೆ ಅಷ್ಟರಿಂದ ಅದು ಬಗೆಹರಿಯಲಿಲ್ಲ. ಈ ಬಗೆಯ ದುರಂತವನ್ನು ಕಿತ್ತೊಗೆಯದಿದ್ದರೆ ದೇಶದ ಕಲ್ಯಾಣವಾಗಲಾರದು. ದೇಶವನ್ನು ಇಬ್ಭಾಗ

ಮಾಡುವ ... ಯೋಜನೆ
ಯನ್ನು ... ಸಮ
ರ್ಥಿಸಲಾ ... ತಾಂತರ
ಸಮಯ ... ಹೋರಲ್
ಯನ್ನು ... ಯನ್ನಿತ್ತಿ
ಕೊಂಡಿರ ... ತಕ್ಕ
ಉಪಾಯ ... ದಕ್ಷಿಣ
ಭಾರತದ ... ಲ್ಯಾಕರು
ಇಂಥ ... ರ್ಥಿಸ
ಲಾರರು ... ಮಾಡು
ವದು ... ಕಾರಣ
ತನ್ನು ... ಪ್ರಾಯ
ವನ್ನು ... ಮಾಡು
ವದು ಅ ... ಪ್ರವರ್ತಕ
ಪ್ಪಾಗಿ ದ ... ನಮಾಡಿ
ಅದರ ಕ ... ಅವರು
ತುಂದೆ ... ಮುಸ್ಲಾನ
ವನ್ನು ... ಯಾವ
ಘಟನೆಯೂ ನಮಗೆ ಬೇಡ. ರಾಷ್ಟ್ರೀಯ ಒಕ್ಕಟ್ಟಿಗೆ ಹಾನಿಯಾದ ಮಾತೃಭೂಮಿಯ ಏಳ್ಗೆಗೆ ಘಾತವಾದ ಯಾವ ಘಟನೆಯೂ ನಮಗೆ ಬೇಡ. ಈ ದೇಶದ ಏಳ್ಗಾಗಿ ಮುಸ್ಲಿಮ್ ರಾಜರು ಮತ್ತು ಪುಣ್ಯಪುರುಷರು ಪ್ರಯತ್ನಿಸಿದ್ದಾರೆ. ಅದೇ ಮೇರೆಗೆ ಈಗಲೂ ಈ ಬಗೆಯ ಪಾಕಿಸ್ತಾನ ಭೂತವನ್ನು ನಿರ್ಮೂಲಗೊಳಿಸುವುದು ಮುಸ್ಲಿಮರ ಕರ್ತವ್ಯವಿದೆ.

ಜೇನುನೊಣ ಸಾಕುವಿಕೆಯ ಪ್ರಚಾರ ಕಾರ್ಯಕ್ರಮ

ಜೇನುನೊಣ ಸಾಕುವುದು ಒಂದು ಪ್ರಾಮುಖ್ಯ ಗ್ರಾಮಕೈಗಾರಿಕೆಯಾಗಿ ಪರಿಗಣಿಸಲ್ಪಟ್ಟಿದೆ. ಈ ಕೈಗಾರಿಕೆಯ ಬೆಳವಣಿಗೆಗೆ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಅನುಕೂಲತೆಗಳಿವೆ. ಆದರೂ ಹೆಚ್ಚಿನ ಜನರಿಗೆ ಜೇನುನೊಣ ಸಾಕುವ ವಿಷಯದಲ್ಲಿ ಇನ್ನೂ ಸರಿಯಾದ ಮಾಹಿತಿ ದೊರೆತಿರುವುದಿಲ್ಲ. ಆದುದರಿಂದ ಜನರಿಗೆ ಜೇನುನೊಣ ಸಾಕುವ ವಿಷಯದಲ್ಲಿ ಹೆಚ್ಚಿನ ಮಾಹಿತಿ ಕೊಡಲು ಪುತ್ತೂರು ತಾಲೂಕು ಜೇನುನೊಣ ಸಾಕುವವರ ಸಹಕಾರಿ ಸಂಘದವರು ಈ ಕೆಳಗೆ ಕಾಣಿಸಿದ ಸ್ಥಳ ಮತ್ತು ತಾರೀಕುಗಳಲ್ಲಿ ತರಬೇತು ಕ್ಲಾಸುಗಳನ್ನು ತೆರೆಯುತ್ತಾರೆ.

ಆದುದರಿಂದ ನಮ್ಮ ಜಿಲ್ಲೆಯ ಎಲ್ಲಾ ಸಹಕಾರಿ ಸಂಘದವರು ಮತ್ತು ಪಂಚಾಯತು ಬೋರ್ಡಿನವರೂ ಅವರವರ ವ್ಯವಹಾರ ಕ್ಷೇತ್ರಗಳಲ್ಲಿ ಈ ಗ್ರಾಮಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಉತ್ಸಾಹಿಗಳಾದ ಒಬ್ಬೊಬ್ಬ ಪ್ರತಿನಿಧಿಗಳನ್ನಾದರೂ ಶಿಕ್ಷಣ ಕ್ಲಾಸಿಗೆ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ.

೧. ಧರ್ಮಸ್ಥಳ ತಾರೀಕು ೧೫-೪-೪೧ರಿಂದ ೨೧-೪-೪೧ರ ವರೆಗೆ, ೨. ಸುಬ್ರಹ್ಮಣ್ಯ ತಾ. ೨೪ರಿಂದ ೩೦ರ ವರೆಗೆ, ೪. ಬೊಳ್ವಾರ ತಾ. ೪-೫ರಿಂದ ೧೦-೫ರ ವರೆಗೆ.

ವಿ. ಸೂಚನೆ:—

ಶಿಕ್ಷಣ ಕ್ಲಾಸಿಗೆ ಬರುವವರಿಗೆ ಊಟ ಮತ್ತು ವಸತಿಯ ಅನುಕೂಲತೆಗಳಿವೆ. ಬೋರ್ಡಿಂಗಿಗೆ ಬರುವವರು ಒಂದು ವಾರದ ಮುಂಚಿತವಾಗಿ ಪುತ್ತೂರು ತಾಲೂಕು ಜೇನು ಸಂಘದ ಕಾರ್ಯದರ್ಶಿಗಳಿಗೆ ತಿಳಿಸತಕ್ಕದ್ದು.

NOTICE

In the Court of the District Munsif of Mangalore

S. I. A. No. 82/1941 in S. C. No. 133/1941

Between:—

K. Madhava . Plaintiff-Petr.

and

The Swasthya Sanga, by its secretary, Sri. V. N. Bijur. . . Defendant-Respondent.

The above-named plaintiff petitioner has applied to the above Court in S. C. No. 133/1941 as per S. I. A. No. 82/1941 to permit him to sue the Secretary of the Swasthya Sangu, Mangalore, Sri. V. N. Bijur as representing the body of persons composing the Defendant Sanga. The said petition is posted to 2-6-'41. If there are any intending to oppose the said petition, they are required to appear on the above date at 11 A. M. before the above said Court.

Mangalore } K. V. POOJARI,
1-4-1941 } Advocate for the Petr.

HALFTONE & LINE BLOCK MAKING UNDERTAKEN

Sharada Press,

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—3—1940

From:

Sri K. Shivarama Nair,
Kerikcundah Estate,
Post Devegadabettu.
KADUR DISTRICT.

To.

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair

ಬಿಡಿ ಸಂಚಿಕೆಯ ಬೆಲೆ | ವಾರ್ಷಿಕ ಚಂದಾ ರೂ. 2-0-0 | ಅಂಚೆ ವೆಚ್ಚ ಸೇರಿ ರೂ. 2-13-0 | Regd. No. M. 34

ಸ್ವದೇಶಾಭಿಮಾನಿ

ಸಂಪುಟ 35] ತಾರೀಕು 1-4-1941 [ಸಂಚಿಕೆ 14]

The Bombay Life Assurance Company, Ltd.

(ESTABLISHED 1908)

Death! is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT —

Puthiyara, Calicut | Car Street, Mangalore. | Central Station Road, Trivandrum

Gautam Niwas, Charni Road, Bombay No. 4. | Post Box No 337, Mount Road, Madras | Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ವಿಳಿಯುಗಟ್ಟಿಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ESTD. 1906

ಸ್ವದೇಶಾಭಿಮಾನಿ

SWADESHABHIMANI

ರಾಜಪುತ್ರಿಯರು

ಎಲಿಜಬೆತ್ ಮತ್ತು ಆಕೆಯ ತಂಗಿ ಮಾರ್ಗರೆಟ್ ರೋಸ್

KANNADA ILLUSTRATED WEEKLY

ಪ್ರತಿ ಸಂಚಿಕೆಗೆ ಬೆಲೆ ಒಂದಾಣೆ — ವಾರ್ಷಿಕ ಚಂದಾ ರೂ. 3-0-0 — ಅಂಚೆ ವೆಚ್ಚ ಸೇರಿ ರೂ. 3-12-0 — Regd. No. M.

ಸ್ವದೇಶಾಭಿಮಾನಿ

ಸಂಪುಟ 35] — ತಾರೀಕು 4-4-1941 — [ಸಂಚಿಕೆ 14]

The Bombay Life Assurance Company, Ltd.,
(ESTABLISHED 1908)

Death! is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.
MADRAS BRANCH SECRETARIES.
The Bombay Life Building,
Gandhi Nagar, UDIPI.

OR AT ANY OF THEIR OFFICES AT:—

Puthiyara, Calicut — Car Street, Mangalore. — Central Station Road, Trivandrum.

Guttam Nivas, Charni Road, Bombay No. 4. — Post Box No. 337 Mount Road, Madras. — Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಜೇನ್ನೊಣ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ರೋ, ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ರಾಜಪುತ್ರಿಯರು

ಎಲಿಜಬೆತ್ ಮತ್ತು ಆಕೆಯ ತಂಗಿ ಮಾರ್ಗರೆಟ್ ರೋಸ್.

KANNADA ILLUSTRATED WEEKLY

ಭಾರತದ ಪರಿಸ್ಥಿತಿಯಲ್ಲಿ ವೈಪರೀತ್ಯ

ಟೈಮ್ಸ್ ಪತ್ರಿಕೆಯ ಅಗ್ರಲೇಖ

ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳ ಕ್ಲೇಶಿಕೆಗಳು

'ಭಾರತೀಯ ರಾಜಕೀಯದಲ್ಲಿ ಸದಾ ಇರುವಂತಹ ವಿಚಿತ್ರವಾದ ವಿರೋಧಾಭಾಸವು ಈಗ ಹಿಂದೆಗಿಂತಲೂ ಚೆನ್ನಾಗಿ ಕಾಣಬರುತ್ತಿದೆ' ಎಂಬುದಾಗಿ ಟೈಮ್ಸ್ ಪತ್ರಿಕೆಯು ಭಾರತದ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸುತ್ತಾ ಅಗ್ರಲೇಖನವೊಂದರಲ್ಲಿ ಬರೆದಿದೆ

'ನ್ಯಾಷನಲ್ ಕಾಂಗ್ರೆಸ್ ಪಾರ್ಟಿಯು ಸರಕಾರದೊಡನೆ ಸಹಕರಿಸಲು ಇನ್ನೂ ಕೂಡ ನಿರಾಕರಿಸುತ್ತಿದೆ ತಮ್ಮ ಮುಖಂಡರುಗಳು ಯಾವ ರಾಕ್ಷಸೀ ಕೃತ್ಯಗಳನ್ನು ತೀವ್ರ ಭಾಷೆಯಲ್ಲಿ ಖಂಡಿಸಿದ್ದರೋ ಆ ರಾಕ್ಷಸೀ ಕೃತ್ಯಗಳನ್ನು ತಡೆಗಟ್ಟಲು ಏರ್ಪಟ್ಟಿರುವ ವ್ಯವಸ್ಥೆಗೆ ಕಾಂಗ್ರೆಸು ವಿರೋಧಿಯಾಗಿರುವುದೇ ಅಲ್ಲದೆ ಅದಕ್ಕೆ ಬಹಿಷ್ಕಾರವನ್ನೂ ಹಾಕಿದೆ

'ಭಾರತವನ್ನು ಎರಡು ರಾಷ್ಟ್ರಗಳನ್ನಾಗಿ ವಿಭಾಗಿಸಬೇಕೆಂದೂ ಹಾಗಾಗದಿದ್ದಲ್ಲಿ ತಾವು ಸರಕಾರದೊಡನೆ ಸಹಕರಿಸುವುದಿಲ್ಲವೆಂದೂ ಅಖಿಲ ಭಾರತ ಮುಸ್ಲಿಮ್‌ಲೀಗಿನವರು ಹೇಳುತ್ತಿದ್ದಾರೆ. ಮುಸ್ಲಿಮ್ ಲೀಗಿನ ಆ ಸಲಹೆಯನ್ನು ಭಾರತೀಯ ಇತಿಹಾಸದ ಯಾವ ಸನ್ಯಾಸಿಯೇ ಆಗಲೀ ಅಥವಾ ಯಾವ ಭಾರತೀಯ ದೇಶಭಕ್ತನೇ ಆಗಲೀ ಒಪ್ಪಲಾರನು'

ಭಾರತದಲ್ಲಿ ಯುದ್ಧ ಪ್ರಯತ್ನ

ಟೈಂಸ್ ಪತ್ರಿಕೆಯು ಮೇಲಿನ ಅಂಶಗಳನ್ನು ಬರೆದು ನಂತರ ಭಾರತದಲ್ಲಿ ಯುದ್ಧ ಪ್ರಯತ್ನಗಳು ನಡೆದಿರುವ ಅಂಶವನ್ನು ಪ್ರಸ್ತಾಪಿಸಿದೆ. 'ಕಾಂಗ್ರೆಸ್ಸಿನ ಮುಖ್ಯ ಬೆಂಬಲಕಾರರೆಂದು ಹೇಳಿಕೊಳ್ಳಲಾದಂತಹ ಜಾತಿಗಳ ಮತ್ತು ವರ್ಗಗಳ ಸಹಾಯದಿಂದಲೇ ಯುದ್ಧ ಪ್ರಯತ್ನಗಳು ದಿನದಿನಕ್ಕೂ ಬೆಳೆದಿವೆ ಭಾರತೀಯ ಪಾರ್ಟಿಗಳ ಮುಖಂಡರುಗಳ ಮನೋಭಾವಗಳಲ್ಲಿ ಒಂದು ಮಾದರಿಯ ಅಸಹಜತೆ ಇದೆ ಎಂಬುದಾಗಿ ನಾವು ತೀರ್ಮಾನಕ್ಕೆ ಬರದೆ ಗತ್ಯಂತರವಿಲ್ಲ' ಎಂದು ಬರೆದಿದೆ.

ಬೊಂಬಾಯಿಯಲ್ಲಿ ನಡೆದ ಮುಖಂಡರುಗಳ ಸಮ್ಮೇಳನದ ವಿಷಯವನ್ನು ಆ ಪತ್ರಿಕೆಯು ಮುಂದೆ ಪ್ರಸ್ತಾಪಿಸಿದೆ 'ಈ ಸಮ್ಮೇಳನದ ಸಲಹೆಗಳು ಅನೇಕ ಕಡೆಗಳಿಂದ ವಿರೋಧಗಳನ್ನು ಪಡೆದಿದ್ದರೂ ಕೂಡ ಈಗಿನ ರಾಜಕೀಯ ಪರಿಸ್ಥಿತಿಯನ್ನು ಪುನರ್ವಿಮರ್ಶಿಸಲು ಇದು ಹೊಸ ಅವಕಾಶವನ್ನೇರ್ಪಡಿಸಿದೆ ಎಂಬುದಾಗಿ ಸಾಮಾನ್ಯವಾಗಿ ಹೊರಟ ಪತ್ರಿಕಾ ಟೀಕೆಗಳಿಂದ ಗೊತ್ತಾಗುವುದು.

ಜಿನ್ನಾರವರು ಬೇರೆ, ಈಚೆಗೆ ಕೇಂದ್ರ ಶಾಸನ ಸಭೆಯಲ್ಲಿ ಸೌಹಾರ್ದಯುತವಾದ ಒಂದು ಹೇಳಿಕೆ ಕೊಟ್ಟರು. ಯುದ್ಧವು ಮುಗಿದ ಮೇಲೆ ಬ್ರಿಟಿಷ್ ಇಂಡಿಯಾವನ್ನು ವಿಭಾಗಿಸುವ ತಮ್ಮ ಹಂಚಿಕೆಯನ್ನು ಪರಿಶೀಲಿಸುವುದಾದರೆ ಕೇಂದ್ರದಲ್ಲಿ ನೂತನವಾಗಿ ರಚಿತವಾಗುವ ಮಂತ್ರಿಮಂಡಳದಲ್ಲಿ ಮುಸ್ಲಿಂ ಲೀಗು ಸಹಕರಿಸುವದ್ದು ಎಂಬುದಾಗಿ ಅವರು ತಿಳಿಸಿದಾರೆ. ಇದರಿಂದ ಭಾರತದ ಎರಡು ಪಕ್ಷಗಳಿಗೆ ತಾತ್ಕಾಲಿಕವಾದ ಒಪ್ಪಂದವಾಗಲು ಅನುಕೂಲವೇರ್ಪಡಬಹುದು' ಎಂದು ಟೈಮ್ಸ್ ಪತ್ರಿಕೆಯು ಆಶೆಯನ್ನು ವ್ಯಕ್ತಪಡಿಸಿದೆ.

ವನಮೋಹಿನಿ

ತಮಿಳು ಭಾಷೆಯಲಿ ವನಮೋಹಿನಿ ಎಂಬೀ ಸಾಹಸ ವನಚಿತ್ರವು ತಯಾರಾಗುತ್ತಿದೆ. ಮಲಬಾರಿನ ಅತ್ಯಂತ ದೊಡ್ಡ ಆನೆ (ಚಂದ್ರು) ಎಂಬುದು ಇದರಲ್ಲಿ ಅಭಿನಯಿಸುತ್ತವೆ. ತವಮಣಿ ದೇವಿಯು ಪ್ರಾಮುಖ್ಯಪಾತ್ರ ವಹಿಸುವಳು. ಎಂ. ಕೆ. ರಾಧಾ, ಟಿ. ಎ. ಕೆ.ಪ ಸ್ವಾಮಿ ಇವರಲ್ಲದೆ ಇತರ ನಟರು.

ವಿಶ್ರಾಂತಿ ಕೊಡುವ ನಿದ್ರೆಗಾಗಿ
ಆರೋಗ್ಯಕರ ಪಾನೀಯ
ಓವಲ್ಟಿನ್‌ನ್ನು
ಉಪಯೋಗಿಸಿರಿ

ಇಡೀ ದಿನದ ಆರೋಗ್ಯಕ್ಕಾಗಿ, ಇಡೀ ರಾತ್ರಿಯ ವಿಶ್ರಾಂತಿಕರ ನಿದ್ರೆಗಾಗಿ 'ಓವಲ್ಟಿನ'ನ್ನು ಕುಡಿಯಿರಿ ನರಗಳನ್ನು ಸುಖಗೊಳಿಸಲು, ಗಾಢನಿದ್ರೆಯನ್ನುಂಟುಮಾಡಲು, ಮಿದುಳು ಮತ್ತು ಶರೀರಗಳನ್ನು ಸಮಾಧಾನ ಸ್ಥಿತಿಯಲ್ಲಿಡಲು, ಓವಲ್ಟಿನಿಗಿಂತ ಉತ್ತಮ ಪಾನೀಯ ಬೇರೊಂದಿಲ್ಲವೆಂದು ಸಾವಿರಾರು ಮಂದಿ ತಮ್ಮ ಅನುಭವದಿಂದ ಕಂಡುಹಿಡಿದಿದ್ದಾರೆ

ಹಾಗಾಗಿ ನಿಮ್ಮ ಊಟಹೊತ್ತಿಗೂ, ನಿದ್ದೆ ಮಾಡುವ ಮೊದಲೂ ಒಂದು ಕಪ್ಪು ಓವಲ್ಟಿನನ್ನು ತೆಗೆದುಕೊಳ್ಳಿರಿ

ಒಳ್ಳೆಯ ಬಾರ್ಲಿ ಮತ್ತು ಉತ್ತಮ ದನದ ಹಾಲುಗಳನ್ನು ಸೇರಿಸಿ, ಅನೇಕ ನೈಸರ್ಗಿಕ ವಿಟಮಿನುಗಳಿಂದ ಮತ್ತು ಆಹಾರವಸ್ತುಗಳಿಂದ ಇದು ಕೂಡಿರುತ್ತದೆ ಓವಲ್ಟಿನ್ ಪ್ರಕೃತಿ ಸಹಜವಾದ ಆರೋಗ್ಯ ಪಾನೀಯವಾಗಿರುತ್ತದೆ ಇದರ ಕೃತ್ರಿಮ ತಯಾರಿಕೆಗಳನ್ನು ನಂಬಬೇಡಿರಿ

★

ಎಲ್ಲಾ ಮದ್ದು ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ — ಮಾರಾಟಕ್ಕಿದೆ. —

ಓವಲ್ಟಿನು ಒಳ್ಳೆಯ ಜೀರ್ಣಕರವಾದ ಆರೋಗ್ಯಬಲಕಾರೀ ಔಷಧ. ಇದನ್ನು ಬಿಸಿಯಾಗಿಯೂ ತಣ್ಣಗಾಗಿಯೂ ತೆಗೆದುಕೊಳ್ಳಬಹುದು, ಇದನ್ನು ತಯಾರಿಸುವುದೂ ಅತ್ಯಂತ ಸುಲಭವಾಗಿರುತ್ತದೆ, ಪ್ರತಿಯೊಂದು ಓವಲ್ಟಿನ್ ಡಬ್ಬಿಯಲ್ಲಿ ತಯಾರು ಮಾಡುವಕ್ರಮ ಬರೆದಿದೆ

'ಓವಲ್‌ಟಿನ್'

OVALTINE ಪುಷ್ಟಿಕರವಾದ ಆಹಾರಪಾನೀಯ

ಓವಲ್ಟಿನ್ ಬಿಸ್ಕತ್ತುಗಳು—ಆರೋಗ್ಯಕರ, ಹಿತಕರ, ಜೀರ್ಣಕರಗಳಾಗಿವೆ. ನೀವು ಕೊಂಡುಕೊಳ್ಳಬಹುದಾದ ಬಿಸ್ಕಿಟುಗಳಲ್ಲಿ ಓವಲ್ಟಿನ್ ಬಿಸ್ಕಟುಗಳು ಅತ್ಯುತ್ತಮವಾದದ್ದು ಅವುಗಳಲ್ಲಿಯೂ ಓವಲ್ಟಿನಿನ ಗುಣಗಳು ಇರುತ್ತವೆ 4 ಔನ್ಸಿನ ಮತ್ತು 8 ಔನ್ಸಿನ ಪೆಕೇಟುಗಳಾಗಿಯೂ 1 ರಾತ್ತಲಿನ ಡಬ್ಬಿಯಾಗಿಯೂ ಮಾರಾಟಕ್ಕಿವೆ

ಡಿಸ್ಟ್ರಿಬ್ಯುಟರ್ಸ್:—
ಗ್ರೆಹಮ್ಸ್ ಟ್ರೇಡಿಂಗ್ ಕಂ. (ಇಂಡಿಯಾ) ಲಿ
16, ಬೇಂಕ್ ಸ್ಟ್ರೀಟ್, ಬೊಂಬೈ ಹಾಗೂ ಕಲ್ಕತ್ತ, ಮದ್ರಾಸು, ಕರಾಚಿ ಮತ್ತು ರಂಗೂನ್
OV/34/40

“ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

11—4—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೧—೪—೧೯೪೧

ಬ್ರಿಟಿಷರ ಮೇಲೆ ಹಿಟ್ಲರನ ಹಲವು ಆರೋಪಗಳು

ತಮ್ಮ ಹಿತಸಾಧನೆಗೆ ಅನ್ಯರನ್ನು ಕೆರಳಿಸಿದ್ದಾರೆ

ಆಗ್ನೇಯ ಯೂರೋಪಿನಲ್ಲಿ ಬ್ರಿಟಿಷರು ಕಾಲಿಡಬಾರದು

ಸೈನಿಕರಿಗೆ ಹಿಟ್ಲರನ ಘೋಷಣೆಗಳು

ಆಗ್ನೇಯ ಯೂರೋಪಿನಲ್ಲಿರುವ ತಮ್ಮ ಸೈನಿಕರನ್ನು ಉದ್ದೇಶಿಸಿ ಆಗಾಗ ಹಿಟ್ಲರನು ಮಾಡಿದ ಕೆಲವು ಭಾಷಣಗಳ ವಿವರಗಳು ಬಂದಿವೆ. ಅವುಗಳಲ್ಲಿ ಅವನು ಈ ರೀತಿ ಹೇಳಿರುವುದಾಗಿ ಪ್ರಕಟವಾಗಿದೆ.

“ಬ್ರಿಟಿಷ್ ಸೈನಿಕರನ್ನು ಗ್ರೀಸಿಗೆ ಬರಗೊಡಬಾರದೆಂದು ನಾನು ಮೊದಲೇ ಗ್ರೀಕರನ್ನು ಎಚ್ಚರಿಸಿದೆನು. ತ್ರಿರಾಷ್ಟ್ರ ಒಪ್ಪಂದಕ್ಕೆ ಸಹಿ ಹಾಕುವಂತೆ ನಾನು ಯುಗಸ್ಲವಿಯವನ್ನು ಒತ್ತಾಯಪಡಿಸಿದೆನು. ಬ್ರಿಟಿಷರು ಹಾಕಿದ ಬಲೆಯಿಂದ ಯುಗಸ್ಲವಿಯಕ್ಕೆ ತಪ್ಪಿಸಿಕೊಳ್ಳಲು ಉಪಾಯವಿಲ್ಲ. ಪೋಲೆಂಡಿನಲ್ಲಿ ಪೋಲರು ಜರ್ಮನರನ್ನು ಹಿಂಸಿಸಿದಂತೆ ಯುಗಸ್ಲವಿಯದಲ್ಲಿ ಅವರು ಜರ್ಮನರನ್ನು ಪೀಡಿಸುತ್ತಿದ್ದಾರೆ. ಕಡೆಗೆ ಯುಗಸ್ಲವಿಯದ ಸೈನ್ಯಸಂಘಟನೆಯಾಯಿತು. ಬ್ರಿಟಿಷ್ ಸೈನ್ಯಗಳು ಗ್ರೀಸನ್ನು ಸೇರಿದವು.

ಕಲಹಪ್ರಿಯರು—ಬ್ರಿಟಿಷರು

“ಜರ್ಮನರು ಈಗ ಒಳಸಂಚು ಮಾಡಿದ ಯುಗಸ್ಲವಿಯದೊಡನೆ ಯುದ್ಧ ಸಾರಿದ್ದಾರೆ. ಇಲ್ಲಿಂದ ಈ ಧೂರ್ತರ ತಂಡವು (ಬ್ರಿಟಿಷರು) ಹೊರಬಿದ್ದಾಗ ನಾವು ಆಯುಧಗಳನ್ನು ಕೆಳಗಿಡುವೆವು. ಅವರೆಲ್ಲರೂ ಯುಗಸ್ಲವಿಯದಿಂದ ಹೊರಗೆ ಹೋಗಬೇಕು. ಒಬ್ಬನೇ ಒಬ್ಬ ಬ್ರಿಟಿಷನಾದರೂ ಯುರೋಪಿನ ಈ ಭಾಗದಲ್ಲಿ ಇರಕೂಡದು.

“ಬ್ರಿಟಿಷರು ಯಾವಾಗಲೂ ಕಲಹಪ್ರಿಯರು. ತಮ್ಮ ಮುಖಂಡರು ಎಲ್ಲಾ ಬಗೆಯ ಪ್ರಯತ್ನ ಮಾಡಿದರು ಎಂಬ ಆತ್ಮಸಂತೋಷದಿಂದ ಜರ್ಮನರು ಈಗ ಕಾದಾಡುವರು. ಬ್ರಿಟಿಷರು ಆಗ್ನೇಯ ಯೂರೋಪಿನಲ್ಲಿ ಕಾಲಿಡಬಾರದೆಂದು ನಾನು ಎಚ್ಚರಿಸಿದೆನು. ಏಕೆಂದರೆ ಅವರು ಕಾಲಿಟ್ಟೊಡನೆ ಜರ್ಮನಿಗೆ ಹಾನಿಯಾಗುವುದು. ಆದರೆ, ದುರ್ದೈವದಿಂದ ನನ್ನ ಮಾತನ್ನು ಯಾರೂ ಕೇಳಲಿಲ್ಲ. ತ್ರಿರಾಷ್ಟ್ರ ಒಪ್ಪಂದವನ್ನು ಮಾಡಲು ಯತ್ನಿಸಿ ಯುಗಸ್ಲವಿಯ ಸರಕಾರಕ್ಕೆ ನಾನು ಎಲ್ಲವನ್ನೂ ಬಿಚ್ಚು ಮನಸ್ಸಿನಿಂದ ತಿಳಿಸಿದೆ. ಯುಗಸ್ಲವಿಯದಿಂದ ನಾನು ಯಾವ ಸೌಲಭ್ಯಗಳನ್ನೂ ಕೇಳಲಿಲ್ಲ. ಆದರೆ ಕುಟಿಲರಾದ ಬ್ರಿಟಿಷರು ಯುಗಸ್ಲವಿಯವನ್ನು ತಮ್ಮ ಕಡೆಗೆ ಒಲಿಸಿಕೊಂಡರು. ಬ್ರಿಟನು ತನ್ನ ಹಿತಸಾಧನೆಗಾಗಿ ಇತರರನ್ನು ಕಾಳಗದಲ್ಲಿ ಬಲಿಗೆ ಒಡ್ಡುತ್ತಿದೆ. ನಮ್ಮೆಡೆ ಯುದ್ಧವು ಸಾಮಾನ್ಯವಾದುದಲ್ಲ. ಪೋಲೆಂಡ್, ನಾರ್ವೆ, ಬೆಲ್ಜಿಯಮ್, ಫ್ರಾನ್ಸ್ ಮುಂತಾದ ರಾಷ್ಟ್ರಗಳನ್ನು ಲೀಲಾಮಾತ್ರದಿಂದ ೪೫ ದಿನಗಳಲ್ಲಿ ಗೆದ್ದ ನಮಗೆ ಇದು ದೊಡ್ಡ ಕೆಲಸವಲ್ಲ. ಪಶ್ಚಿಮ ಭಾಗದಲ್ಲಿ ಸಮರವು ಮುಗಿದಂತಾಗಿತ್ತು. ಅಷ್ಟರಲ್ಲಿ ಚರ್ಚಿಲ್ಲರು ಸಾಮ್ರಾಜ್ಯದ ಸರ್ವಶಕ್ತಿಯನ್ನು ನಮ್ಮ ಹಾಗೂ ಇಟಲಿಯ ವಿರುದ್ಧ ಒಟ್ಟುಗೂಡಿಸಿದರು. ಈಗ ಇಟಲಿ ಜರ್ಮನಿಗಳ ಸಮ್ಮಿಳನದಿಂದ ನಾವು ಈ ಗಂಡಾಂತರದಿಂದ ಪಾರಾದೆವು. ಈಗ ಸಮರಕ್ಷೇತ್ರವು ವ್ಯಾಪಿಸಿತು. ಬ್ರಿಟಿಷ್ ಸಮರಪ್ರವೀಣರು ತಮ್ಮ ಗುರಿ ಸಾಧಿಸುವುದರಲ್ಲಿ ಮಗ್ನರಾದರು. ಆದರೆ ಜರ್ಮನರಿಗೆ ಮೇಲಿಂದ ಮೇಲೆ ವಿಜಯವಾದದ್ದರಿಂದ ತಮ್ಮ ಕಾರ್ಯಯೋಜನೆಯನ್ನು ಅವರು ಮುಂದೆ ಹಾಕಿದರು.

NACET
BLADES

ನೇಸೆಟ್ ಬ್ಲೇಡುಗಳು

ತೃಪ್ತಿಕರವಾಗಿ ಮುಖಕ್ಷೌರವಾಗಬೇಕಾದರೆ, ಹರಿತ, ಶುಚಿ ಮತ್ತು ನಯ ಇವು ಮೂರು ಗುಣಗಳು ಇರಬೇಕು. ನೇಸೆಟ್ ಬ್ಲೇಡುಗಳು ಬಹಳ ಆಶ್ಚರ್ಯಕರವಾಗುವಷ್ಟು ಕಡಿಮೆ ಕ್ರಯದಲ್ಲಿ ಈ ಮೂರು ಗುಣಗಳನ್ನೂ ಕೊಡುತ್ತವೆ. ಪ್ರತಿಯೊಂದು ಬ್ಲೇಡಿನಿಂದ ಎಷ್ಟು ಸಲ ಕ್ಷೌರಮಾಡಬಹುದಾಗಿದೆಯೆಂಬುದನ್ನು ನೋಡಿ ನೀವು ಆಶ್ಚರ್ಯಪಡುವಿರಿ.



೩ ಗೂಟದ ರೇಜರುಗಳು

ಡೋಂಗರೆ
ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

ತಾರೀಕು 11—4—1941

ಯುಗಸ್ಲವಿಯಾ-ಗ್ರೀಸ್‌ಗಳು

ಇಂದು ಯುಗಸ್ಲವಿಯ ಗ್ರೀಸುಗಳು ತಿರಿಗಿ ಜರ್ಮನಿಯ ನಿರ್ದಯವಾದ ಆಕ್ರಮಣಕ್ಕೆ ಬಲಿಯಾಗಿವೆ. ಕಳೆದ ಆದಿತ್ಯವಾರ ಹಿಟ್ಲರನು ಅವುಗಳ ಮೇಲೆ ಧಾಳಿಯಿಡುವ ಕೊನೆಯ ನಿರ್ಧಾರವನ್ನು ಮಾಡಿದನು. ಭೀಷಣ ರಣರಂಗವು ಈಗ ನಡೆಯುತ್ತಿದೆ. ಕಳೆದ ತಿಂಗಳಿಂದ ಬಾಲ್ಕನಿನಲ್ಲಿ ಉಂಟಾದ ವಿಷಮ ವಾತಾವರಣವು, ಅಂತಃಕ್ರೋಧವು ಇಂದು ಈ ವಿಧದಲ್ಲಿ ಸಿಡಿಕಾರುತ್ತಿದೆ.

ಯುಗಸ್ಲವಿಯವು ಮೊನ್ನೆ ತಾನೇ ತ್ರಿರಾಷ್ಟ್ರ ಒಪ್ಪಂದಕ್ಕೆ ಸಹಿಹಾಕಿ ಜರ್ಮನಿಗೆ ಶರಣಾಗಿತ್ತು. ಆದರೆ ಅಲ್ಲಿಯ ಬಾಲರಾಜನಾದ ಪೀಟರನು ಯುಗಸ್ಲವಿಯವನ್ನು ತಿರಿಗಿ ಕ್ರಾಂತಿಗೆ ಕರೆಳಿ ನಿಲ್ಲಿಸಿದನು. ಯುಗಸ್ಲವಿಯದ ಜನತೆಯ ಸ್ವಾತಂತ್ರ್ಯದಾಹವು ಹೆಚ್ಚಿತು. ಹಾಗೆ ಕ್ರಾಂತಿ ಮಸಗಿದುದನ್ನು ಕಂಡು ಜರ್ಮನಿಯು ತನ್ನ ಪ್ರಬಲವಾದ ಧಾಳಿಯಿಂದ ಅದನ್ನು ಅಡಗಿಸುವ ದೃಢ ನಿಶ್ಚಯವನ್ನಿಂದು ಮಾಡಿದೆ. ಅದರೊಂದಿಗೆ ಜರ್ಮನಿಯು ಗ್ರೀಸಿನ ಮೇಲೆಯೂ ಆಕ್ರಮಣವನ್ನು ಕೈಕೊಂಡು ಒಂದೇ ಹೊಡೆತದಲ್ಲಿ ಎರಡು ಕೊಲೆಗಳನ್ನು ಮಾಡಲು ಈಗ ಕತ್ತಿ ಎತ್ತಿನಿಂತಿದೆ!

ಈ ಯುದ್ಧವು ಟರ್ಕಿಯ ವರೆಗೆ ಮುಂದುವರಿಯುವುದೋ ಇಲ್ಲವೋ ಎಂದು ಹೇಳುವುದು ಈಗ ಸಾಧ್ಯವಿಲ್ಲವಾದರೂ ಟರ್ಕಿಯ ಅವಸ್ಥೆಯು ಬಹಳ ವಿಷಮ ಪರಿಸ್ಥಿತಿಯಲ್ಲಿಯೇ ಇದೆ. ಬಾಲ್ಕನಿನಲ್ಲಿ ಹೊತ್ತುತ್ತಿರುವ ಈ ಹೊಗೆಯು ಯಾವ ಯಾವ ರಾಷ್ಟ್ರಗಳನ್ನು ನುಂಗಿ ನೀರ್ಕುಡಿಯುವುದೆಂದು ಹೇಳಲು ಬರುವುದಿಲ್ಲವಾದರೂ, ಇಂದಿನ ಈ ಕಾಲದಲ್ಲಿ ಸಣ್ಣ ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಉಳಿಗಾಲವು ಕಂಡುಬರುವುದಿಲ್ಲ.

ಯುಗಸ್ಲವಿಯದಲ್ಲಿ ಜರ್ಮನಿಯು ಶಾಂತಿ ವ್ಯವಸ್ಥೆ ಮಾಡುತ್ತಿರುವಲ್ಲಿ ಅಲ್ಲಿ ಉಂಟಾದ ಕ್ರಾಂತಿಯಿಂದ, ಜರ್ಮನಿಯು ಅದರ ಮೇಲೆ ಯುದ್ಧ ಮಾಡಬೇಕಾಯಿತೆಂದು ಈಗ ಹಿಟ್ಲರನು ಹೇಳುತ್ತಾನೆ. ಅಂತೂ ಜರ್ಮನಿಯ ಹೇಳಿಕೆಯೊಳಗೆ ಸಿಲುಕಲು ಇಷ್ಟಪಡದ ಕಾರಣ ಯುಗಸ್ಲವಿಯವು ಅದರ ತೀವ್ರ ವಿದ್ವೇಷಕ್ಕೆ ಇಂದು ಪಾತ್ರವಾಯಿತೆಂದು ಹೇಳಿಕೊಳ್ಳುವುದರಲ್ಲಿ ಏನೇನೂ ಸಂದೇಹವಿರುವುದಿಲ್ಲ. ಇನ್ನು ಗ್ರೀಸಿನ ಮೇಲೆ-ಣವೆಂದರೆ ಗ್ರೀಸು, ಜರ್ಮನಿಯ ಆತಂಕವಿದ್ದರೂ, ಬ್ರಿಟಿಷ್ ಸೈನ್ಯವನ್ನು ಕಾಲಿಡಲು ಬಿಟ್ಟಿತೆಂಬುದು. ಇವು ಇಂದಿನ ಕಾಲದಲ್ಲಿ ಕಲಹ ಕಾರಣಗಳಾಗಲು ಸಾಕಾಗಿವೆಯಾದರೂ ಇವು ಅಷ್ಟೊಂದು ಪ್ರಬಲವಾದವುಗಳೆನ್ನಲಾಗುವುದಿಲ್ಲ.

ಗ್ರೀಸು ಇಟಲಿಯೊಡನೆ ಕಾದಾಡಿ ತನ್ನ ಪರಾಕ್ರಮವನ್ನು ತೋರಿಸಿತು; ಇಟಲಿಗೆ ಗ್ರೀಸಿನ ಯುದ್ಧದಲ್ಲಿ ಅಪಜಯವೇ ಆಯಿತು. ಇಟಲಿಯ ಅಪಜಯದಿಂದ ಜರ್ಮನಿಯು ಸಹಜವಾಗಿ ಗ್ರೀಸಿನ ಮೇಲೆ ಕೆರಳಲು ಕಾರಣವಿದೆ. ಈ ಕಾರಣವೇ ಜರ್ಮನಿಯು ಗ್ರೀಸಿನ ಮೇಲೆ ಧಾಳಿಯಿಡಲು ಮುಖ್ಯವಾದುದೆಂಬುದಕ್ಕೆ ಅಡ್ಡಿಯಿಲ್ಲ. ಗ್ರೀಸಿನ ಮೇಲಿರುವ ಈ ದ್ವೇಷವನ್ನು ಸಾಧಿಸಲು ಯುಗಸ್ಲವಿಯವು ಸಹಾಯ ಮಾಡಲಿಲ್ಲವೆಂಬುದು ಇಂದಿನ ಯುಗಸ್ಲವಿಯ ಆಕ್ರಮಣಕ್ಕೂ ಹೇತುವಾಯಿತೆಂದು ತಿಳಿಯುವುದು ಅಸಮಂಜಸವಾಗಲಾರದು.

ಈ ಯುದ್ಧವು ಒಮ್ಮೆಯೇ ಬಹಳ ಭೀಷಣವಾಗಿದೆ. ಬ್ರಿಟಿಷರೂ ಜರ್ಮನರನ್ನು ಈ ಯುದ್ಧಕ್ಷೇತ್ರದಲ್ಲಿ ಎದುರಿಸುತ್ತಿದ್ದಾರೆ. ಬ್ರಿಟನಿನಿಂದ ಪ್ರತ್ಯಕ್ಷ ಸಹಾಯವೇ ದೊರಕುತ್ತದೆ. ಬಲ್ಗೇರಿಯದ ಗಡಿನಾಡಿನಲ್ಲಿ ಕದನ ಕೋಲಾಹಲಗಳ ನಡೆವ ಸುದ್ದಿ ಕೇಳಿ ಬರುತ್ತಿದೆ, ಅಮೇರಿಕವೂ ಯುಗಸ್ಲವಿಯ ಗ್ರೀಸುಗಳಿಗೆ ಸಾಕಷ್ಟು ಬೆಂಬಲವನ್ನು ಕೊಡುತ್ತದೆ. ಇದರಿಂದ ಮುಂದೆ ಈ ಎರಡು ರಾಷ್ಟ್ರಗಳು ಜರ್ಮನಿಯ ಆಕ್ರಮಣವನ್ನು ಇದಿರಿಸುವಲ್ಲಿ ಕೃತಕಾರ್ಯವಾಗುವವೇ ಎಂಬ ವಿಚಾರದಲ್ಲಿ ತೀರಾ ನಿರಾಶೆಯಿರುವುದಿಲ್ಲ.

ಹಿಟ್ಲರನು ಪ್ರಚಂಡನಾಗಿ ಈಗ ಆಕ್ರಮಣವನ್ನು ಆರಂಭಿಸಿದ್ದಾನೆ. ಹಿಟ್ಲರನ ಉಗ್ರತೆಯನ್ನು ಇದಿರಿಸಿ ತಲೆಯೆತ್ತಿ ನಿಂತ ಸಣ್ಣ ರಾಷ್ಟ್ರಗಳು ಇದುವರೆಗೆ ಇಲ್ಲ. ಆದರೆ ಹಿಟ್ಲರನನ್ನು ಹಿಂದಿನದೇ ರೀತಿಯಲ್ಲಿ ಮುಂದುವರಿಯಲು ಬಿಡಬಾರದೆಂದು ಬ್ರಿಟನು ಅಮೇರಿಕಗಳು ನಿರ್ಧಾರಮಾಡಿರುವುದರಿಂದ ಯುಗಸ್ಲವಿಯ ಗ್ರೀಸುಗಳ ಭವಿಷ್ಯವು ಯುರೋಪಿನ ಭವಿಷ್ಯವನ್ನು ನಿರ್ಮಿಸಲೂ ಸಾಕಾಗಬಹುದು.

ಸಪ್ರುಗಳ ಸಾಹಸ

ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ಕುರಿತು ಸರ್ ತೇಜಬಹದ್ದೂರ್ ಸಪ್ರುಗಳು ಮಾಡುವ ಸಾಹಸವು ಪ್ರಶಂಸಾರ್ಹವಿದೆ. ಮೊನ್ನೆತಾನೇ ತೀರಾ ಅನಾರೋಗ್ಯ ಪರಿಸ್ಥಿತಿಯಲ್ಲಿದ್ದರೂ, ಸಪ್ರುಗಳು ತಮ್ಮ ಹಿಂದಿನ ಅಭ್ಯಾಸಕ್ಕೆ ಸರಿಯಾಗಿ, ದೇಶದ ಸಂದಿಗ್ಧ ಕಾಲದಲ್ಲಿ ಸಂಧಾನ ದೂತರಾಗಿ ಮುಂದೆ ಬರಲು ಹಿಂಜರಿಯುವವರಲ್ಲ.

ಮುಂಬಯಿಯಲ್ಲಿ ಮೊನ್ನೆ ಮೊನ್ನೆ ಅಪಕ್ಷದ ಮುಖಂಡರ ಪರಿಷತ್ತು ಕೂಡಿತು. ಅದರಲ್ಲಿ ಕೆಲವು ನಿರ್ಣಯಗಳು ಮಂಜೂರಾದವು. ಆ ನಿರ್ಣಯಗಳನ್ನು ವೈಸರಾಯರ ಕಡೆಗೆ ಕಳುಹಿಸಲಾಗಿತ್ತು. ಆ ನಿರ್ಣಯಗಳ ಕುರಿತು ದೇಶದಲ್ಲಿ ಪಕ್ಷ ಪಕ್ಷಗಳಲ್ಲಿ ವಿಶೇಷ ಆಶಾಜನಕವಾದ ಅಭಿಪ್ರಾಯಗಳ ಪ್ರಕಟಿತವಾಗಿರದಿದ್ದರೂ, ವೈಸರಾಯರು ಅವುಗಳ ವಿಷಯದಲ್ಲಿ ಯಾವ ಉತ್ತರವನ್ನೂ ಇದುವರೆಗೆ ಕೊಡಲಿಲ್ಲ.

ಈ ಸಂದರ್ಭದಲ್ಲಿ ಸ್ವತಃ ಸಪ್ರುಗಳೇ ಈಗ ವೈಸರಾಯರನ್ನು ಭೇಟಿಯಾಗಲು ತೆರಳಿರುವರು. ಬಹಳ ದೀರ್ಘಕಾಲದ ತನಕ ಇವರೊಳಗೆ ಮಾತುಕತೆ ನಡೆಯಿತೆಂದು ತಿಳಿದುಬರುತ್ತದೆ. ಅವರ ಮಾತುಕತೆಗಳ/ವಿವರವು ಇದುವರೆಗೆ ಪ್ರಕಟವಾಗಿಲ್ಲ. ಆದರೆ, ವೈಸರಾಯರು ಈ ವಿಷಯದಲ್ಲಿ ಭಾರತ ಸಚಿವರೊಡನೆಯೂ ತಮ್ಮ ಮಾತುಕತೆಯ ಸಂಪರ್ಕವನ್ನಿಟ್ಟುಕೊಂಡಿರುವರೆಂದು ಸುದ್ದಿಯಿದೆ. ಅದ ಕಾರಣ, ಈ ಮಾತುಕತೆಗಳ ವಿಷಯ ಬ್ರಿಟಿಷ್ ಸರಕಾರವು ತೀವ್ರ ಆಲೋಚನಾಪರವಾಗಿದೆಯೆಂದು ಅರ್ಥಮಾಡಿಕೊಳ್ಳಬಹುದು.

ಸಪ್ರುಗಳ ಸಂಧಾನ ಸೂಚನೆಯ ವಿಷಯದಲ್ಲಿ ನಾವು ಈಗೇನೂ ಊಹಿಸಲಾಗುವುದಿಲ್ಲ. ಆದರೆ ದೇಶದಲ್ಲಿ ಉಂಟಾಗಿರುವ ಗೊಂದಲವನ್ನು ಪರಿಹರಿಸುವ ವಿಷಯ ಸರ್ ಸಪ್ರುಗಳಿಗಿರುವ ಈ ಉತ್ಸಾಹವನ್ನು ಯಾರಾದರೂ ಪ್ರಶಂಸಿಸಲೇ ಬೇಕು.

ಅಡಿಸ್ ಅಬಾಬದ ಪತನ

ಬ್ರಿಟಿಷ್ ಸೈನ್ಯವು ಅಬಿಸೀನಿಯ
ರಾಜಧಾನಿ ಅಡಿಸ್ ಅಬಾಬವನ್ನು
ತನ್ನ ಸ್ವಾಧೀನಪಡಿಸಿಕೊಂಡ ಸು
ಬಂದಿದೆ. ಇದರಿಂದ ಇಟಲಿಯನ
ಶಕ್ತಿ ಕುಗ್ಗಿಸುವ ಹಾಗೂ ಅಬಿಸೀನಿಯ
ಸ್ವಾತಂತ್ರ್ಯ ರಕ್ಷಿಸುವ ಕೆಲಸಗಳ
ಬ್ರಿಟಿಷರು ಮಾಡುವ ಪ್ರಯತ್ನವು ಸ್ಪ
ವಾಗುವ ಕಾರಣ, ಈ ಸುದ್ದಿಯು ಸ
ವಾಗಿಯೂ ಹರ್ಷದಾಯಕವಿದೆ.

ಅಡಿಸ್ ಅಬಾಬವು ಇಂದು ಇಟ
ಯನರ ಕೈ ಬಿಟ್ಟಿದೆ. ಇಂದಿಗೆ ಐದು
ವರ್ಷಗಳ ಹಿಂದೆ ಅಬಿಸೀನಿಯದ ಸ್ವಾ
ತಂತ್ರ್ಯವನ್ನು ಅಪಹರಿಸಿದ ಇಟಲಿಯ
ಕ್ರೂರ ಕಾರ್ಯವು ಈ ಸಂದರ್ಭದ
ಸ್ಮೃತಿಪಥಕ್ಕೆ ಬರದಿರದು.
ಯುದ್ಧವು, ಇಂದಿನ ಈ ವಿಷಮ
ಕೋಲಾಹಲವು, ಒಂದು ರೀತಿಯಿಂ
ನೋಡಿದರೆ ಅಬಿಸೀನಿಯದ ಸ್ವಾತಂತ್ರ್ಯಾ
ಪಹರಣದಿಂದ ಆರಂಭವಾಯಿತೆನ
ಹುದು. ಅಬಿಸೀನಿಯರು ಬಹಳ ಪರಾ
ಕ್ರಮದಿಂದ ಕಾದಾಡಿದರೂ, ಕಡೆತನ
ಹೋರಾಡಿ ಜಯಪಡೆಯಲು ಸಾಧ್ಯವಾ
ಗದೆ, ಇಟಲಿಗೆ ಶರಣಾಗಬೇಕಾಯಿತು.
ಇಟಲಿಯ ನವನವಾಸ್ತ್ರಗಳ ಮುಂ
ಅಬಿಸೀನಿಯರ ವೀರೋತ್ಸಾಹಗಳು ಸ
ಗದೆ ಹೋದುವು. ಇದರ ಫಲವಾ
ಅಬಿಸೀನಿಯದ ಚಕ್ರವರ್ತಿ ಹೈಲ್ ಸೆಲ
ಸಿಯವರು ಅಜ್ಞಾತವಾಸವನ್ನು ಅನ
ಭವಿಸಬೇಕಾಯಿತು. ಹೀಗೆ ಕಳೆಗುಂದಿ
ಅಬಿಸೀನಿಯದ ಸ್ವಾತಂತ್ರ್ಯ ದೇವತೆಯ
ಮುಖದಲ್ಲಿ ಇಂದು ನವಾರುಣ ಕಾ
ತಿಯು ಮಿಂಚತೊಡಗಿದೆ!

ಅಬಿಸೀನಿಯದ ಸ್ವಾತಂತ್ರ್ಯಾ
ಹರಣ ಕಾಲದಲ್ಲಿ ಬ್ರಿಟನು ಮಾ
ತಾಳಿದ ವಿಷಯವಾಗಿ ರಾಜಕಾರ
ಪಟುಗಳು ಬ್ರಿಟನನ್ನು ದೂಷ್ವರ
ಆದರೆ ಇಂದು ಬ್ರಿಟನು ಅಬಿಸೀನಿಯ
ಬಗ್ಗೆ ತೋರುವ ಸಹಾನುಭೂತಿಯ
ದುರೀತಿಯಿಂದ ಪ್ರಾಸಂಗಿಕವಾಗಿ ಒದ
ದ್ದರೂ, ಬ್ರಿಟನಿನ ಹಿಂದಿನ ಅ
ಯನ್ನು ದೂರಮಾಡಲೂ ನೆರವಾ
ವುದು.

ಇಂದು ಪ್ರಜಾಪ್ರಭುತ್ವ ಸ್ವಾತಂತ
ಗಳ ಸಲುವಾಗಿ ಹೋರಾಡುವ ಬ್ರಿಟ
ಅಬಿಸೀನಿಯಕ್ಕೆ ಮಾಡುವ ಈ ಕರ
ಸಹಾಯದಿಂದ ತನ್ನ ಯುದ್ಧ ಉದ್ದೇ
ವನ್ನು ಅದಷ್ಟು ವಿಶದೀಕರಿಸಿದಂತೆಯ
ಪ್ರಪಂಚದ ವಿಶ್ವಾಸವನ್ನು ಪಡೆದಂತೆಯ
ಆಗಿದೆ.

ಇಂದಿನ ಈ ಜಯದಿಂದ ಮಾತ್ರಯ
ರೂ ಹೆಚ್ಚಿನ ಸಂತೋಷಪಡುವ ಕಾರ
ವಿಲ್ಲ. ಏಕೆಂದರೆ ಅಲ್ಲಲ್ಲಿ ಆಗು
ಅಲ್ಪ ಸ್ವಲ್ಪ ಜಯ ವಿಜಯಗಳಿ
ಪ್ರಪಂಚ ವಿಶಾಲವಾಗಿ ಹರಡಿದ ಮಹಾ
ಯುದ್ಧದ ಪರಿಸ್ಥಿತಿಯು ಬದಲಾವ
ಹೊಂದಲಾರದು. ಆದರೆ, ಮನ
ಹೃದಯವು ಆಗಾಗ ಆಗುವ
ಜಯಾಪಜಯಗಳಿಂದಲೂ
ಕಳನು ಹೊಂದದೆ ಇರುವ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲ್ಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಗ್ರಾಮಕೈಗಾರಿಕೆಗಳ ಪುನರುದ್ಧಾರವಾಗಬೇಕು

ಯಂತ್ರಜೀವನದಿಂದ ಸತ್ವವಿಲ್ಲವಾಗಿದೆ

ಜನರು ಆತ್ಮಾವಲಂಬಿಗಳಾಗಿ ಬಾಳಬೇಕು

ಮೈಸೂರಲ್ಲಿ ರಾಜೇಂದ್ರ ಪ್ರಸಾದರ ಭಾಷಣ

'ನಮ್ಮ ದಿನದ ಜೀವನದಲ್ಲಿ ನಾವು ಆತ್ಮಾವಲಂಬಿಗಳಾಗಿ ಸ್ವತಂತ್ರರಾಗಿರಬೇಕು ಆದರೆ ನಾವು ಈಗ ಅಲಸ್ಯರಾಗಿದ್ದೇವೆ. ನಾವು ಕಷ್ಟಪಟ್ಟು ದುಡಿಯಬೇಕು ಪರಿಶ್ರಮ ಪಡಬೇಕು. ಅಖಿಲ ಭಾರತ ಕಾಂಗ್ರೆಸ್ಸೂ, ಮೈಸೂರು ಕಾಂಗ್ರೆಸ್ಸೂ ಗ್ರಾಮ ಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ಪ್ರಯತ್ನಿಸುತ್ತದೆ. ಸರಕಾರಕ್ಕೆ ಅಧಿಕಾರ ಶಕ್ತಿಗಳು ಇವೆ ಒಂದು ವೇಳೆ ಸಂಸ್ಥಾನಗಳ ಸರಕಾರಗಳು ಸಹಕರಿಸದೆ ಹೋದರೆ ನಿರಾಶರಾಗಬಾರದು ಸಂಸ್ಥಾನ ಸರಕಾರಕ್ಕಿಂತ ಪ್ರಬಲ ಶಕ್ತಿಯು ಜನತೆಯಲ್ಲಿದೆ'

ಹೀಗೆಂದು ಮೈಸೂರು ಕಾಂಗ್ರೆಸ್ಸಿನವರು ಏರ್ಪಡಿಸಿದ ಖಾದಿ ಮತ್ತು ಸ್ವದೇಶಿ ವಸ್ತುಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುತ್ತಾ ಬಾಬು ರಾಜೇಂದ್ರ ಪ್ರಸಾದರು ತಿಳಿಸಿದರು

ಗ್ರಾಮೋದ್ಯೋಗ ಪುನರುಜ್ಜೀವನವು ಕಾಂಗ್ರೆಸ್ಸಿನ ಒಂದು ಅಂಗ ನಮಗೆ ಬೇಕಾದುದು ಕೋಟಿಗಟ್ಟಲೆ ಜನಗಳಿಗೆ ಉದ್ಯೋಗ ದೇವರು ನಮಗೆ ಕೊಟ್ಟಿರತಕ್ಕ ಅಂಗಗಳ ಸದ್ವಿನಿಯೋಗ ಮಾಡಿಕೊಳ್ಳಬೇಕು ಯಂತ್ರದಂತೆ ವರ್ತಿಸುವದು ಸರಿಯಲ್ಲ.

ಆತ್ಮಾವಲಂಬಿಗಳಾಗಬೇಕು

ನಮ್ಮ ನಿತ್ಯಜೀವನಕ್ಕೆ ಅವಶ್ಯಕವಾದ ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ, ವಾಸಕ್ಕೆ ಮನೆ ಬೇಕು ಇವುಗಳನ್ನು ಯಂತ್ರಗಳ ಮೇಲೆ ಅವಲಂಬಿಸದೆ ಪೂರೈಸಿಕೊಳ್ಳಬೇಕು. ೧೫೦ ವರ್ಷಗಳ ಹಿಂದೆ ಭಾರತವು ಪರದೇಶಗಳಿಂದ ಬಟ್ಟೆಯನ್ನು ತರಿಸುತ್ತಿರಲಿಲ್ಲ. ಇಲ್ಲಿಂದ ಬೇರೆ ಕಡೆಗೂ ಹೋಗುತ್ತಿತ್ತು ಅಲ್ಲದೆ ಅಲ್ಲಿಯ ಬೆಲೆಗಿಂತಲೂ ಕಡಿಮೆ ಬೆಲೆಯಲ್ಲಿ ಸಿಗುತ್ತಿತ್ತು ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದು ಇಂಗ್ಲೀಷರು ಯಾವ ರೀತಿ ಭಾರತದ ವ್ಯಾಪಾರವನ್ನು ತಮ್ಮ ದೇಶದಲ್ಲಿ ತಡೆಗಟ್ಟಿದರು ಎಂಬುದನ್ನು ತಿಳಿಸಿದರು.

ಯಂತ್ರಗಳಿಂದ ನಿರುದ್ಯೋಗ

ಅವರು ಭಾಷಣವನ್ನು ಮುಂದುವರಿಸಿ, ಮಹಾಯುದ್ಧದಿಂದೀಚೆಗೆ ಪರಿಸ್ಥಿತಿಯು ಬದಲಾಯಿಸಿದೆ. ಭಾರತದಲ್ಲಿ ಬಹುಮಟ್ಟಿಗೆ ಬೇಕಾದ ಸಾಮಾನುಗಳು ತಯಾರಿಸಲ್ಪಡುತ್ತಿವೆ ಆದರೂ ಆ ನಮ್ಮ ಪ್ರಾಚೀನ ವೈಭವವು ಇನ್ನೂ ಬಂದಿಲ್ಲವೆಂದು ಹೇಳಿದರು. ಈ ಯಾಂತ್ರಿಕ ಜೀವನದಿಂದ ನಮ್ಮ ಜನತೆಯ ಗಂಡಸರ ಹೆಂಗಸರ ಕಸಬುವೃತ್ತಿಗಳ ಸಂಬಂಧವು ತಪ್ಪಿಹೋಗಿದೆ. ಯಂತ್ರಗಳು ಆ ವೃತ್ತಿಯನ್ನು ಕಸಿದುಕೊಂಡಿವೆ. ಯಂತ್ರಗಳಿಂದ ನಿರುದ್ಯೋಗಿತ್ವ ಹೆಚ್ಚಾಗಿದೆ ಎಂದು ಹೇಳಿ ಯಂತ್ರದ ವಿಷಯವನ್ನು ವಿವರಿಸುತ್ತ ಒಂದು ಯಂತ್ರವು ೧೦೦ ಜನರಿಗೆ ಉದ್ಯೋಗವನ್ನು ಕೊಟ್ಟರೆ ೬೦೦೦ ಜನರಿಗೆ ನಿರುದ್ಯೋಗವನ್ನು ಕಲ್ಪಿಸಿದಂತಾಗುತ್ತದೆ ಎಂದು ಹೇಳಿದರು ಇಂಗ್ಲೆಂಡು ತನ್ನ ವ್ಯಾಪಾರಕ್ಕಾಗಿ ಪ್ರಪಂಚದ ಮೂರನೇ ಒಂದು ಭಾಗವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿದೆ ಇದ್ದೇ ರೀತಿ ಇತರ ದೇಶಗಳೂ ಕೂಡ ತಮ್ಮ ವ್ಯಾಪಾರಕ್ಕಾಗಿ ಹವಣಿಸುತ್ತವೆ ಇದು ಘರ್ಷಣ ಅಶಾಂತಿ ನಿರುದ್ಯೋಗಗಳಿಗೆ ಕಾರಣವಾಗಿದೆ ಭಾರತದಲ್ಲಿ ಬಟ್ಟೆ ಕಾರ್ಖಾನೆಗಳಲ್ಲಿ ಮೂರು ಲಕ್ಷ ಜನರು ಕೆಲಸಮಾಡುತ್ತಿದ್ದಾರೆ ಅದೇ ರೀತಿ ಭಾರತವೂ ಆಗಬೇಕೆಂದು ಬಯಸಿದರೆ ಈ ವಿಶಾಲ ಭಾರತಕ್ಕೆ ತಕ್ಕ ವ್ಯಾಪಾರ ಸ್ಥಳವು ಸಿಗುವುದಾದರೂ ಎಲ್ಲಿ? ಈ ಪ್ರಪಂಚವಲ್ಲದೆ ಬೇರೆ ಗ್ರಹಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ.

ಗ್ರಾಮ ಕೈಗಾರಿಕೆ ಬೆಳೆಯಬೇಕು

ಅವರು ಗ್ರಾಮ ಕೈಗಾರಿಕೆಗಳ ಸಂಪತ್ತನ್ನು ಬೆಳೆಸಬೇಕು ಎಂದು ಹೇಳುತ್ತ ಈ ವ್ಯವಸ್ಥೆಯನ್ನು ಕಾರ್ಯಾಚರಣೆಗೆ ತರುವುದರಿಂದ ಕೆಲವರು ಕೋಟ್ಯಾಧೀಶರಾಗಲು ಕೆಲವರು ನಿರ್ಧನಿಕರಾಗಿರಲು ಸಾಧ್ಯವಿಲ್ಲವಾಗುತ್ತದೆ ಎಂದು ಹೇಳಿ, ಟಾಟಾ ಭದ್ರಾವತಿಯಂತಹ ಕಬ್ಬಿಣ ಉಕ್ಕು ಮೊದಲಾದ ಕಾರ್ಖಾನೆಗಳು ಹೋಗಬೇಕೆಂದು ಯಾರೂ ಹೇಳುವುದಿಲ್ಲವೆಂದು ನುಡಿದು ಗ್ರಾಮದ ಕೈಗಾರಿಕೆಗಳು ವೃದ್ಧಿಯಾಗಿ ಗ್ರಾಮಸ್ಥನಿಗೆ ತನಗೆ ಬೇಕಾದ ಸಲಕರಣೆಗಳು ತನ್ನ ಗ್ರಾಮದಲ್ಲೇ ದೊರೆಯುವಂತಾಗಬೇಕು ಎಂದು ನುಡಿದರು.

ಮೈಸೂರಿನಲ್ಲಿ

ಬಾಬುರಾಜೇಂದ್ರ ಪ್ರಸಾದರು ಕಾಂಗ್ರೆಸ್ ಕೆಲಸಗಾರರನ್ನು ಬಾಬು ರಾಜೇಂದ್ರರವರು ಭೇಟಿ ಮಾಡಿ ಸದ್ಯದ ಸಮಸ್ಯೆಗಳನ್ನು ಕುರಿತು ಮಾತುಕತೆ ನಡೆಸಿದರು.

ಕಾಂಗ್ರೆಸ್ ಕಚೇರಿಯಲ್ಲಿ ಭಾಷಣ

'೧೯೩೫ರಿಂದ ೧೯೪೧ರ ವರೆಗೆ ಎಲ್ಲ ಕಡೆಗಳಲ್ಲಿಯೂ ಬದಲಾವಣೆಗಳಾದವು. ಬ್ರಿಟಿಷ್ ಭಾರತದಲ್ಲಿಯೂ ಬಹಳ ಬದಲಾವಣೆಯಾಗಿದೆ ಈ ಬದಲಾವಣೆಗಳ ಫಲವು ಭವಿಷ್ಯದಲ್ಲಿ ದೊರೆಯುವುದು.

'ಮೈಸೂರಿನಲ್ಲಿಯೂ ಕೂಡ ಸೇವೆ ಮತ್ತು ತ್ಯಾಗಗಳಿಲ್ಲದೆ ಏನೊಂದೂ ಸರಿಯಾದ ಫಲ ಪಡೆಯುವ ಹಾಗಿಲ್ಲ. ಬಹಳ ಕಾಲದ ವರೆಗೆ ನ್ಯಾಷನಲ್ ಕಾಂಗ್ರೆಸು ದೇಶೀಯ ಸಂಸ್ಥಾನಗಳ ನೀತಿಯಿಂದ ದೂರವಾಗಿತ್ತು ಹಿಂದೆ ನಾನು ಇಲ್ಲಿಗೆ ಬಂದದ್ದಾಗ ಕಾಂಗ್ರೆಸ್ ಅನೇಕ ದೇಶೀಯ ಸಂಸ್ಥಾನಗಳ ಸಮಸ್ಯೆಗಳಿಂದ ದೂರವಾಗಿದೆಯೆಂದು ನನಗೆ ಅನೇಕ ಪ್ರಶ್ನೆಗಳನ್ನು ಹಾಕಲಾಯಿತು. ಅದರ ಕಾರಣವನ್ನು ನೀವು ಈಗ ಅರಿತಿದ್ದೀರಿ ಸಂಸ್ಥಾನಗಳೊಳಗೆ ಬಳವಣಿಗೆಯುಂಟಾಗಲೆಂಬುದೇ ನಮ್ಮ ಉದ್ದೇಶವಾಗಿತ್ತು. ಮುಂದೆ ನುಗ್ಗಿ, ದೃಢಚಿತ್ತರಾಗಿರಿ ಮತ್ತು ತ್ಯಾಗಕ್ಕಾಗಿ ಸಿದ್ಧರಾಗಿರಿ ಎಲ್ಲವೂ ಒಳ್ಳೆಯದಾಗುವುದು. ನಿಮ್ಮವನ್ನು ಪಡೆಯುವ ವಿಷಯದಲ್ಲಿ ಭಿನ್ನಾಭಿಪ್ರಾಯವಾಗಲೀ ಹೆದರಿಕೆಯಾಗಲೀ ಇಲ್ಲ. ಏರಿಳಿತಗಳನ್ನು ನಾವು ಕಳೆದುಹೋಗಬೇಕು, ಬ್ರಿಟಿಷ್ ಭಾರತ ಮತ್ತು ಮೈಸೂರಿನ ಅನುಭವಗಳು ಒಂದೇ ರೀತಿಯವು. ಇತರ ಸ್ಥಳಗಳಿಗಿಂತ ಮೈಸೂರಿನಲ್ಲಿ ಎಲ್ಲವೂ ಉತ್ತಮಗೊಳ್ಳಲೆಂದು ನಾನು ಆಶಿಸುತ್ತೇನೆ' ಎಂದು ಬಾಬು ರಾಜೇಂದ್ರರು ತಿಳಿಸಿದರು.

ಡಾ॥ ರಾಜೇಂದ್ರ ಪ್ರಸಾದರು ಬಾರ್ ಅಸೋಸಿಯೇಷನಿನಲ್ಲಿ ಮಾತನಾಡುತ್ತಾ, ವಕೀಲರುಗಳು ರಾಷ್ಟ್ರೀಯ ಉದ್ಯಮದಲ್ಲಿ ಅಗ್ರಪಂಕ್ತಿಯಲ್ಲಿರಬೇಕೆಂದೂ ಅವರು ಯಾವಾಗಲೂ ಪ್ರಜಾಹಕ್ಕು ಬಾಧ್ಯತೆಗಳ ರಕ್ಷಕರಾಗಿರಬೇಕೆಂದೂ ಅವರು ಪ್ರಜಾ ಜೀವನದ ಆಧಾರಸ್ತಂಭದಂತಿರಬೇಕೆಂದೂ ತಿಳಿಸಿದರು

ಶ್ರವಣಬೆಳಗೊಳ, ಬೇಲೂರು, ಹಳೇಬೀಡು ಮುಂತಾದ ಪ್ರಸಿದ್ಧ ಸ್ಥಳಗಳನ್ನು ನೋಡಿಕೊಂಡು ಅವರು ಹರಿಹರಕ್ಕೆ ಹೋಗುವರು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ— ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ, ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಯುಗಸ್ಲವಿಯದ

ಕ್ರಾಂತಿಗೆ ಕಾರಣವೇನು?

ಹಿಟ್ಲರ್ ವಿರೋಧವು ಹೆಚ್ಚಿತು

ಯುಗಸ್ಲವಿಯದ ಇಂದಿನ ಅಧಿಕಾರಿಗಳು

ವೆರ್ನಾನ್ ಬಾರ್ಟ್ಲೆಟ್‌ರವರು ಮಾರ್ಚ್ ೨೮ರಲ್ಲಿ ನ್ಯೂಸ್ ಕ್ರಾನಿಕಲ್ ಪತ್ರಿಕೆಯಲ್ಲಿ ಈ ರೀತಿ ಬರೆದಿರುವರು:—

ಯುಗೋಸ್ಲೇವಿಯಾದಲ್ಲಿ ಸರ್ಕಾರವು ಬದಲಾಗಿರುವುದು ಎಷ್ಟು ಪ್ರೋತ್ಸಾಹಕಾರಿಯಾಗಿರುವುದೋ ಅಷ್ಟೇ ಅದು ಮುಖ್ಯವಾದುದೂ ಆಗಿದೆ. ಸಲೋನಿಕಾವನ್ನು ಹಿಡಿಯಲು ಜರ್ಮನ್ ಪ್ರಯತ್ನವನ್ನು ಬಹಳವಾಗಿ ಜಟಿಲಗೊಳಿಸುವುದು, ಆದರೂ ಸಲೋನಿಕಾವನ್ನು ಹಿಡಿಯದೆ ಬಿಡುವುದಕ್ಕೂ ಆಗದ ಹಾಗೆ ಅದು ಮಾಡಿದೆ

ಸಲೋನಿಕವನ್ನು ಹಿಡಿಯದೆ ಸಾಧ್ಯವಿಲ್ಲ, ಏಕೆಂದರೆ ಮುಸಲನಿಯ ಸ್ಥಿತಿ ಹಾಗಿದೆ. ಅವನಿಗೆ ಸಹಾಯವಮಾಡುವ ಪ್ರಮೇಯವೊದಗಿದುದರಿಂದಲೇ ಹೆರ್. ಹಿಟ್ಲರನು ಬಾಲ್ಕನ್ ರಾಷ್ಟ್ರಗಳಲ್ಲಿ ಕೇವಲ ಆರ್ಥಿಕ ಒತ್ತಾಯಮಾಡುವ ಬದಲು ಸೈನಿಕ ಒತ್ತಾಯವನ್ನು ಮಾಡಬೇಕಾಗಿ ಬಂದಿತು ಈಗ ಈ ಪ್ರಯತ್ನವು ಸ್ವಲ್ಪದರಲ್ಲಿ ಕೆಟ್ಟು ಬಹಳ ಅಪಾಯವನ್ನು ತಂದೊಡ್ಡಿದೆ

ಯುಗೊಸ್ಲೇವಿಯಾ ಮೇಲೆ ಬಿದ್ದಿದೆ ಇಟಲಿಯ ಗತಿ

ಗ್ರೀಕರನ್ನು ಸೋಲಿಸುವುದಕ್ಕೆ ಸಾಧ್ಯವಾಗದೇ ಕುಳಿತಿರುವ ಇಟಲಿಯ ಸೈನ್ಯದ ಮೇಲೆ ಪಕ್ಕದಿಂದ ಯುಗೋಸ್ಲೇವಿಯಾ ಸೈನ್ಯವು ಬೀಳುವುದಾದರೆ ಇಟಲಿಯ ಸೈನ್ಯವು ಬಹಳವಾಗಿ ನಾಶವಾಗುವುದು.

ಡಿ ಅನನ್ಸಿಯೋರವರು ಫಿಯೂಮ್ ಪ್ರಾಂತವನ್ನು ಆಕ್ರಮಿಸಿದಾರಭ್ಯ ಯುಗೋಸ್ಲೇವಿಯಾವು ಇಟಲಿ ಮೇಲೆ ಬಲವಾಗಿ ಕಾರ್ಯಾಚರಣೆ ನಡೆಸಬೇಕೆಂಬ ಮನಸ್ಸು ಇದ್ದೇ ಇರುವುದು ಮುಸೋಲಿನಿಯವರ ಆಡಳಿತವನ್ನು ನಾಶಪಡಿಸಲು ಯುಗೋಸ್ಲೇವಿಯಾವು ಬಲವಾದ ಕಾರ್ಯಕ್ರಮ ಕೈಕೊಳ್ಳಲು ಆಸಕ್ತಿ ಹೊಂದಿದೆ

ಹಿಟ್ಲರನಿಗಿರುವ ತೊಂದರೆ

ಹೆರ್ ಹಿಟ್ಲರನು ತನ್ನ ಮಿತ್ರರನ್ನು ರಕ್ಷಿಸಲು ಗ್ರೀಸಿನ ಮೇಲೆ ಭೀಕರವಾದ ಧಾಳಿ ನಡೆಸಬೇಕು ಆದರೆ, ಯುಗೋಸ್ಲೇವಿಯಾದಲ್ಲಿ ಹಿಟ್ಲರನ ಗುಪ್ತ ಪ್ರಚಾರಮಾರ್ಗವು ಪರಾಜಯ ಹೊಂದಿದೆ.

ವರ್ಡಾರ್ ಕಣಿವೆಯೊಂದೇ ತನಗೆ ಇರುವ ಮಾರ್ಗವೆಂದು ಹಿಟ್ಲರನು ಎರಡು ದಿನಗಳ ಹಿಂದೆ ಅರಿತಿದ್ದನು. ಆದರೆ ಈಗ ಅವನಿಗೆ ಆ ಮಾರ್ಗವು ಸಾಧ್ಯವಿಲ್ಲವಾಗಿದೆ

ಇದಲ್ಲದೆ ಸಲೋನಿಕಾವಿಗೆ ಹೋಗಲು ಇರುವ ಇತರ ಮಾರ್ಗಗಳಿಗೂ ಅಡಚಣೆಯುಂಟಾಗಿದೆ ರೂಪೆಲ್ ಕಣಿವೆ ಮತ್ತು ಸ್ಟ್ರೂಮಾ ಕಣಿವೆಗಳು ಉಳಿದಿರುವ ಮಾರ್ಗಗಳು ರುಮೇನಿಯಾ ಮತ್ತು ಬಲ್ಗೇರಿಯಾಗಳಲ್ಲಿರುವ ಜನರು ಬಹುತೇಕವಾಗಿ ರೈತರೇ ಆಗಿದ್ದಾರೆ ಇವರು ಸದಾ ಸ್ವಾತಂತ್ರ್ಯಪ್ರಿಯರು ಆ ಸ್ವಾತಂತ್ರ್ಯಪ್ರಿಯತೆಯು 'ಬಲವತ್ತರವಾಗಿರುವುದೇ ಅಲ್ಲದೆ ಅನೇಕಾವರ್ತಿ ಮೇಲೆ ಬೀಳಲು ಕೂಡ ಪ್ರೋತ್ಸಾಹಿಸುವುದಾಗಿದೆ. ಈ ಕಾರಣಗಳಿಂದ ಗ್ರೀಕ್ ಬಲ್ಗೇರಿಯ ಸರಹದ್ದಿಗೆ ಜರ್ಮನರು ಬರಬೇಕೆಂದರೆ ಮತ್ತು ಸಂಪರ್ಕ ಹೊಂದಿರಬೇಕಾದರೆ ಬಹಳ ಕಷ್ಟವಾಗುವುದು

ಹಿಟ್ಲರನ ವಿರೋಧಿಗಳಿಗೆ ಪ್ರೋತ್ಸಾಹ

ಯುಗೋಸ್ಲೇವಿಯಾದಲ್ಲಿ ಈಗ ಆಗಿರುವ ಕ್ರಾಂತಿಯಿಂದ ಹೆರ್ ಹಿಟ್ಲರನ ನೂತನ ಯುರೋಪಿನಲ್ಲೆಲ್ಲಾ ಹಿಟ್ಲರ್ ಪ್ರಚಾರಕರ ವಿರೋಧಿಗಳಿಗೆ ಬಹಳ ಮಟ್ಟಿನ ಪ್ರೋತ್ಸಾಹ ದೊರೆದಂತಾಗಿದೆ

ಯುಗೋಸ್ಲೇವಿಯಾದಲ್ಲಿ ಈಗ ಹೊಸದಾಗಿ ಆಗಿರುವ ಮುಖ್ಯ ಮಂತ್ರಿಯು ಒಬ್ಬ ಜನರಲ್‌ನಾಗಿರುವನು ಒಂದು ಒಂದು ವಿಶೇಷ ಸೈನ್ಯದ ಮೇಲೂ ಅಧಿಕಾರಿಗಳೆಲ್ಲಾ ಬಹುಮಟ್ಟಿಗೆ ಸರ್ಬರೇ ಇದ್ದಾರೆ ಜರ್ಮನಿಗೆ ಶರಣಾಗತವಾಗುವುದಕ್ಕೆ ಸರ್ಬರೇ ಮುಖ್ಯವಾಗಿ ವಿರೋಧಿಗಳಾಗಿದ್ದರು, ಇವರ ಮಂತ್ರಿ ಮಂಡಲದಲ್ಲಿ ಎಲ್ಲ ಅಭಿಪ್ರಾಯಗಳವರೂ ಎಲ್ಲ ಉದ್ಯೋಗದವರೂ ಇದ್ದಾರೆ. ಈ ಮಂತ್ರಿ ಮಂಡಲವು ಎಷ್ಟರಮಟ್ಟಿಗೆ ಎದ್ದು ನಿಂತು ಕಾರ್ಯಾಚರಣೆ ನಡೆಯಿಸಲು ತಯಾರಿಸುವರೋ ನೋಡಬೇಕಾಗಿದೆ.

ಯುಗೋಸ್ಲೇವಿಯದ ಹೊಸ ಮಂತ್ರಿಗಳು

ಡಾ॥ ಎಂ. ಮಾಚೆಕ್‌ರವರೂ ಈ ಮಂತ್ರಿಮಂಡಲದಲ್ಲಿದ್ದಾರೆ. ಇವರು ಆಕ್ಸಿಸ್-ಒಪ್ಪಂದಕ್ಕೆ ಸಹಿ ಹಾಕಿದವರಾದರೂ ಅವರು ಹಿಂದೆ ವರ್ತಿಸುತ್ತಿದ್ದ ರೀತಿಯನ್ನು ನೋಡಿದರೆ ಹಿಂದಿನ ಸರಕಾರಕ್ಕಿಂತ ಈಗಿನ ಸರಕಾರದಲ್ಲಿರಲು ಬಹಳ ಸಂತೋಷಪಡುವರೆಂದು ಗೊತ್ತಾಗುವದು.

ಕ್ರೋಟ್ ಜನರಲ್ಲಿ ಡಾ॥ ಮಾಚೆಕ್‌ರವರ ಪ್ರಭಾವವು ಅಸೀಮವಾದುದು ಒಳಾಡಳಿತ ಮಂತ್ರಿ ಎಂ. ಬುಡಿಶ್ರ್‌ಕ್ರಿಚ್‌ರವರು ಕೂಡ ಕ್ರೋಸಿಯಾರವರೇ, ಎಂ. ಮಿಹೋಕ್ರಿಕ್‌ರವರು ಡೆಮೋಕ್ರಾಟರು ಇವರಿಗೆ ಸೋವೇನಿಯಾದಲ್ಲಿ ಬಲವಾದ ಅನುಯಾಯಿಗಳಿದ್ದಾರೆ ಅಂದಮೇಲೆ ರಾಷ್ಟ್ರೀಯ ಏಕಮತ್ಯವನ್ನು ಮುರಿಯಲು ನಾಜಿಗಳು ಪ್ರಯತ್ನನಡೆಸದಂತೆ ಹೊಸ ಸರಕಾರವು ಎಲ್ಲ ಎಚ್ಚರಿಕೆ ಕ್ರಮವನ್ನೂ ಕೈಕೊಂಡಿದೆ, ಸದ್ಯಕ್ಕೆ ಯುಗೋಸ್ಲೇವಿಯಾವು ವಿಯನ್ನಾ ಒಪ್ಪಂದವಾಗುವುದಕ್ಕೆ ಮುಂಚೆ ಯಾವ ರೀತಿ ತಾಟಸ್ಥ್ಯನೀತಿ ಹೊಂದಿದ್ದಿತೋ ಆ ನೀತಿಯನ್ನೆ ಈಗಲೂ ಅನುಸರಿಸುತ್ತಿದೆ. ಯುಗೋಸ್ಲೇವಿಯದಲ್ಲಾದ ಕ್ರಾಂತಿಯ ಫಲವಾಗಿ ಹೊಸ ಸರಕಾರಕ್ಕೆ ಹೆರ್ ಹಿಟ್ಲರನ ವೈರವು ಬಲವಾಗಿದೆ.

ಕೈಗಳಿಲ್ಲದೆ ಟೈಪು ಮಾಡುವಳು

ಸ್ಕಾಟ್ಲೆಂಡಿನ ದಂಡಿ ಎಂಬ ಊರಿನ ಮುನ್ಸಿಪಲ್ ಆಫೀಸಿನಲ್ಲಿ ಒಬ್ಬಳು ಕೈಗಳಿಲ್ಲದ ಹುಡುಗಿ ನೌಕರಿಮಾಡಿಕೊಂಡಿದ್ದಾಳೆ. ಇವಳಿಗೆ ಜನ್ಮದಾರಭ್ಯದಿಂದಲೂ ಕೈಗಳಿಲ್ಲ ಆದರೂ ತನ್ನ ಮೊಂಡು ಕೈಗಳ ಮಣಿಗಂಟುಗಳ ಸಹಾಯದಿಂದ ಅವಳು ಮಿನುಟಿಗೆ ೫೫ ಶಬ್ದಗಳಂತೆ ಟೈಪುಮಾಡುವಳು. ೧೦೦ ಶಬ್ದಗಳಂತೆ ಶೀಘ್ರಲಿಪಿ ಬರೆಯುವಳು

ಭಾಗ್ಯ ದುರ್ಭಾಗ್ಯ

ಲಗ್ನಕಾಲವು ಸಮೀಪವಾಗಿದೆ. ಈಗಾಗಲೇ ಸುವಾಸಿನಿಯರು ಬಂದು ಕುಂಕುಮವನ್ನು ಹಚ್ಚುವರು ಅಕ್ಷತವನ್ನು ಎರಚುವರು. ಹೂವನ್ನು ಮುಡಿಸಿ ಕೈಗೆ ಅರಗಿನ ಬಳೆಗಳನ್ನು ತೊಡಿಸುವರು. ನಿನ್ನೆಯ ತನಕ ಅವಳು ಕುಮಾರಿಯಾಗಿದ್ದಳು. ಜೀವನದಲ್ಲಿ ಎಲ್ಲವೂ ಇದ್ದು, ಅವಳಿಗೆ ಏನೂ ಇಲ್ಲದಾಗಿತ್ತು. ಎಲ್ಲಿ ನೋಡಿದರೂ, ಏನು ನೋಡಿದರೂ ಎಲ್ಲಾ ನೀರಸ, ಎಲ್ಲಾ ನಿಸ್ವಾದವಾಗಿತ್ತು. ಆದರೆ ಇಂದಾದರೋ ಅಪರಿಚಿತನೊಬ್ಬನು ಎಲ್ಲಿಂದಲೋ ಬಂದು, ಅವಳ ಕೈಯನ್ನು ಎತ್ತಿಕೊಳ್ಳುವನು, ಅವಳ ತನುಮನಗಳ ಸ್ವಾಮಿಯಾಗುವನು. ಜೀವನದ ಎಲ್ಲಾ ರಸವನ್ನು ಅವನೊಬ್ಬನೇ ಕುಡಿಯುವನು. ಅವನೊಬ್ಬನೇ ಅವಳ ಜೀವನದ ಸಹಚರನಾಗುವನು, ಅವಳನ್ನು ಸುಖಿಸಿ ತಾನು ಸುಖಿಯಾಗುವನು.

ಯಾವುದು ಇಂದಿನ ತನಕ ಕನಸಾಗಿ ಉಳಿದಿತ್ತೋ, ಅದುವೇ ಇಂದು ನಿಜವಾಗಿ ಪರಿಣಮಿಸುವುದು.

ಮನೋಹರವಾಗಿ ಶೃಂಗರಿಸಿದ ಮಂಟಪದಲ್ಲಿ ಅವನು ಕುಳಿತಿದ್ದಾನೆ, ಅವಳೂ ಬಂದು ಕುಳಿತಿದ್ದಾಳೆ. ಆರತಿಯನ್ನು ಎತ್ತುತ್ತಾರೆ, ಶೋಭನವನ್ನು ಹಾಡುತ್ತಾರೆ, ಅಕ್ಷತ ಹೂಗಳನ್ನು ಚೆಲ್ಲುತ್ತಾರೆ. ಹೊರಗೆ ವಾದ್ಯಗಳು ಆಗುತ್ತವೆ, ದುಂದುಭಿಗಳು ಮೊಳಗುತ್ತಿವೆ. ಎಲ್ಲಿ ನೋಡಿದರಲ್ಲಿ ಸೊಬಗೇ ಸೊಬಗು, ರಮ್ಯವೇ ರಮ್ಯ!

ಪುರೋಹಿತರು ಬಂದು ಮಂತ್ರ ಪಾಠ ಮಾಡಿದರು. ಆ ಕ್ಷಣ ಅವರು ಇಬ್ಬರಾಗಿದ್ದವರು ಒಬ್ಬರಾದರು. ಇಂದಿನಿಂದ ಅವಳು ಪತ್ನಿ, ಅವನು ಪತಿ. ಅವಳು ದಾಸಿ, ಅವನು ಸ್ವಾಮಿ. ಕಷ್ಟಕೊಟ್ಟರೂ ಸುಖಕೊಟ್ಟರೂ ಅವಳಿಗೆ ಅವನೊಬ್ಬನೆ ಗತಿ. ಏನು ಪ್ರಾಪ್ತವೋ, ಅದನ್ನು ಅವಳು ಭೋಗಿಸಲೇ ಬೇಕು.

ಮದುವೆಯ ಸಂಭ್ರಮವು ಮುಗಿಯಿತು. ಬಂದವರು ಹೋದರು. ಕೋಮಲೆಯಾದ ಆ ಸುಕುಮಾರಿಯನ್ನು ಕರೆಕೊಂಡು ಅವನೂ ಹೊರಟ.

ರೈಲುಗಾಡಿ ಸ್ಟೇಶನು ಬಿಟ್ಟಿತು.

. . .

ಎಲ್ಲೆಲ್ಲಿಯೂ ಸ್ಮಶಾನದಂಥ ಶಾಂತಿ. ದ್ಯುತಿಯ ದೀಪಗಳು ನೊಂದು ಹೋಗಿವೆ. ಎಲ್ಲೆಡೆಗಳಲ್ಲಿ ಅಂಧಕಾರವು ತುಂಬಿದೆ. ವಾದ್ಯ ಸ್ವರಗಳು ವಿಲೀನವಾಗಿವೆ. ಯಾದರಲ್ಲಿ—ಯಾರೂ ತಿಳಿಯರು.

ಅವಳು ಹೆತ್ತವರ ಒಬ್ಬಳೇ ಮಗಳಾಗಿದ್ದಳು. ಪ್ರೀತಿ ಪ್ರೇಮಗಳಿಂದ ಸಾಕಿದರು. ಆದರೆ ಸಮಾಜದ ದೃಷ್ಟಿ ಅವಳ ಮೇಲೆ ಬಿದ್ದಿತು. ಅವಳು ಆಗ ಕಿಶೋರಿಯಾಗಿದ್ದಳು. ಯಾರೋ ಒಬ್ಬ ಅಜ್ಞಾತ ವ್ಯಕ್ತಿ ಬಂದು, ಅವಳನ್ನು ಎಲ್ಲಿಗೋ ಕೊಂಡುಹೋದ.

ಆಗ—ತಾಯಿಯ ಕಣ್ಣುಗಳು ನೀರಿನಿಂದ ತುಂಬಿದುವು. ತಂದೆಯ ಹೃದಯವು ಬಿರಿದು ಹೋಯಿತು.

ಮಿಲನ ಸಮಯ. ದಂಪತಿಗಳು ಒಂದಾಗುವ ಸಮಯ.

ಪುಷ್ಪ ಶಯ್ಯೆ ಹಾಸಿದ್ದಿತು. ಅದರ ಮೇಲೆ ರೇಶ್ಮೆಯ ಶಾಲನ್ನು ಹೊದೆಸಿದ್ದರು. ಒಂದು ಕಡೆ ಮುಖಮಲ್ಲಿನ ಲೋಡು, ಇನ್ನೊಂದು ಕಡೆ ಹೂವಿನ ಮಾಲೆ, ಸುಗಂಧ ದ್ರವ್ಯಗಳ ಕಟ್ಟಿಗಳು. ಅವಳು ನಡುವೆ ಕೂತು ಅವನನ್ನು ಕಾಯುತ್ತಿದ್ದಳು.

ಕಾದಿದ್ದಳೋ, ಕೂತಿದ್ದಳೋ—ನನಗೆ ತಿಳಿಯದು. ಪಲ್ಲಂಗದಲ್ಲಿ ಕೂತ ಅವಳು ಕಣ್ಣೀರು ಮಿಡಿಯುತಿದ್ದಳು. ತಾಯಿ ತಂದೆಗಳಿಂದ ಬೇರೆಯಾದ ವಿರಹದ ಬೇನೆ ಇದ್ದಿರಬಹುದು. ಅಥವಾ ಹೃದಯೇಶನನ್ನು ಹೃದಯಕ್ಕೆ ಅಪ್ಪಿಕೊಳ್ಳುವ ವ್ಯಾಕುಲವಿದ್ದಿರಬಹುದು. ಅಷ್ಟರಲ್ಲಿ—

ಮೆಲ್ಲಗೆ ಕಟಕ್ಕೆಂದು ಶಬ್ದವಾಯಿತು. ಬಾಗಿಲು ತೆರೆಯಿತು.

ಅವನು ಜುಬ್ಬವನ್ನು ತೊಟ್ಟಿದ್ದ, ಬಿಳಿದಾದ ಧೋತರವನ್ನು ಉಟ್ಟಿದ್ದ. ಕಣ್ಣುಗಳು ಹೊಳೆಯುತ್ತಿದ್ದುವು, ತುಟಿಗಳು ಅದುರುತ್ತಿದ್ದವು. ದೃಢಕಾಯನಾದ ಸುಂದರ ಯುವಕನಾಗಿದ್ದ ಅವ! ಅವಳಿಗೆ ಒತ್ತಾಗಿ ಅವನು ಪಲ್ಲಂಗದ ಮೇಲೆ ಕೂತ. ಮತ್ತೆ ಒಂದು ಕೈಯಿಂದ ಅವಳ ಸೊಂಟ ಪ್ರದೇಶವನ್ನು ಸುತ್ತಿಕೊಂಡು—

'ಸಿಟ್ಟಾದಿಯಾ?' ಎಂದು ಕೇಳಿದ.

ಅವಳು ಮಾತೆತ್ತಲಿಲ್ಲ.

ಅವನು ಮೆಲ್ಲಗೆ ಅವಳ ಮೋರೆಯನ್ನು ತನ್ನ ಕಡೆಗೆ ತಿರುಗಿಸಿ ನೋಡಿದ—ಅವಳು ಅಳುತಿದ್ದಳು.

ಅವನು ಹೇಳಿದ—'ಅಳುತ್ತೀಯಾ? ನನ್ನನ್ನೊಮ್ಮೆ ನೋಡು!'

ಆದರೆ ಅವಳು ಅವನನ್ನು ನೋಡಲಿಲ್ಲ.

ಅವನು ಅವಳ ಗಲ್ಲವನ್ನು ಎತ್ತಿ ಹಿಡಿದು, ಹರಿಯುತಿದ್ದ ಕಣ್ಣೀರನ್ನು ಒರಸಿ ತೆಗೆದ. ಮತ್ತೆ ಅವಳ ಆ ಸುಂದರವಾದ ಕೋಮಲವಾದ ಕೆಂದುಟಿಗಳನ್ನು ಮೆಲ್ಲನೆ ಮುದ್ದಿಟ್ಟ. ನೋವಾಗದ ಹಾಗೆ! ಆದರೆ ಅವಳು ಶಾಂತ, ನಿಶ್ಚಲ, ಹೇಗೋ ಹಾಗಿದ್ದಳು.

'ನನ್ನನ್ನು ಪ್ರೇಮಿಸುವುದಿಲ್ಲವೆ?' ಅವನು ಕೇಳಿದ.

ಈಗ ಅವಳು ಒಮ್ಮೆಗೆ ಅವನನ್ನು ದಿಟ್ಟಿಸಿ ನೋಡಿ—'ನಾಥ!' ಅಂದಳು.

ಅವನು ಅವಳನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು—'ಚಿನ್ನಾ, ನನ್ನನ್ನು ಎಷ್ಟು ಪ್ರೀತಿಸುವಿಯಾ?' ಎಂದು ಕಾತರದಿಂದ ಕೇಳಿದ.

. . .

'ಮಾತನಾಡು, ಮುದ್ದೂ!'

'ಮಾತನಾಡುವುದಿಲ್ಲವೆ?'

'ಏನು. . . ?'

'ನಾನು ಕೇಳಿದೆ, ನೀನು ಎಷ್ಟು ನನ್ನನ್ನು ಪ್ರೀತಿಸುತ್ತಿ?'

'. . . '

'ಪುನಃ ಸುಮ್ಮಗಿದ್ದಿಯಾ?'

'. . ಬಹಳ'

'ಬಹಳ ಎಂದರೆ ಎಷ್ಟು?'—ಅವನು ನಸುನಕ್ಕ.

'. . ಇಷ್ಟು!' ಎರಡೂ ಕೈಗಳನ್ನು ವಿಶಾಲವಾಗಿ ಚಾಚಿ ಅವಳು ಅವನನ್ನು ಬಿಗಿದುಕೊಂಡಳು.

ಅವನು ನಕ್ಕನು, ಅವಳೂ ನಕ್ಕಳು.

'ಮತ್ತೆ ನೀವು?'

'ನಾನು . .? ಇತರ ಯಾರೂ ಪ್ರೀತಿಸದಷ್ಟು ಹೆಚ್ಚು, ನಾನು ನಿನ್ನನ್ನು ಪ್ರೀತಿಸುತ್ತೇನೆ, ಚಿನ್ನಾ!'

'ಕೊನೆಗೆ, ಎಷ್ಟೆಂದರೆ ?'

'ಇಷ್ಟು ನನ್ನ ಮುದ್ದೂ!' ಅವನೂ ಅವಳು ತನ್ನ ಬಾಹುಪಾಶದಿಂದ ಬಿಗಿದು ಮೋರೆಯನ್ನು ಮುದ್ದಿಟ್ಟ.

'ಇಷ್ಟನ್ನೇ ಮಾಡುತ್ತ ಸಮಯ ಕಳೆಯುವಿರಾ, ಅಥವಾ . . .'

'ಇಲ್ಲ, ನನ್ನ ಚಿನ್ನಾ! ನೀನು ನನ್ನ ಹೃದಯದ ರಾಣಿ, ಮನೆಯ ದೇವಿ! ಮುದ್ದು! ನಾನು ನಿನ್ನ ದಾಸ, ನೀನು ನನ್ನ ಒಡತಿ! ಗಿಣಿ, ನಾನು ನಿನ್ನ ಆರಾಧಕ, ನೀನು ನನ್ನ ಆರಾಧ್ಯ . .'

★

ಹಾಯ್! ಮಾತು ಮುಗಿಯುವುದರೊಳಗೆಯೇ ಅವನ ಹೃದಯಕ್ರಿಯೆ ನಿಂತಿತು. ಅಚಲನಾಗಿ ಅವನು ಅವಳ ತೊಡೆಗಳ ಮೇಲೆ ಬಿದ್ದು ಎಲ್ಲವೂ ಅಲ್ಲಿಗೆ ಮುಗಿಯಿತು. ಅವಳು ವಿಧವೆ ಆದಳು.

ಒಂದು ದಿನ, ತಾಯಿತಂದೆಗಳ ಮಡಿಲನ್ನು ಬಿಟ್ಟು, ಸ್ವತಂತ್ರಳಾಗಿ ಮಸ್ತಳಾಗಿ, ಅವಳು ತನ್ನ ಸಹಚರಿಗಳೊಂದಿಗೆ ಕುಣಿಯುತಿದ್ದಳು ಮತ್ತು ಅವರೊಂದಿಗೆ ನಲಿಯುತಿದ್ದಳು.

ಒಂದು ದಿನ ಅವಳು ಕಿಶೋರಿಯಾಗಿದ್ದಳು, ಸಂಭ್ರಮದಿಂದ ಅವಳ ವಿವಾಹವಾಗಿತ್ತು.

ಅದೇ ದಿನ, ಅಪರಿಚಿತನೊಬ್ಬನು ಬಂದು ತನ್ನದೆಲ್ಲವನ್ನು ಅವಳ ಚರಣ ಕಮಲಗಳಲ್ಲಿ ಸಮರ್ಪಿಸಿದ್ದ.

ಅದೇ ದಿನ ಅವಳ ಮಿಲನ ರಾತ್ರಿಯೂ ಬಂದಿತ್ತು ಮತ್ತು ಅದೇ ದಿನ ಅವಳು ಅವನನ್ನು . . .

ಅವನು ಹೇಳಿದ್ದ—'ನಾನು ನಿನ್ನ ದಾಸ, ನಾನು ನಿನ್ನ ಆರಾಧಕ' ಎಂದು.

ಆದರೆ ಈ ಹೊತ್ತು, ನಿರ್ಜನವಾದ ಸ್ಮಶಾನಘಟ್ಟದಲ್ಲಿ, ಹಳೆಯ ಗೋಳೀ ಮರದ ಬುಡದಲ್ಲಿ ಒಂದು ಚಿತೆ ಧಗಧಗಿಸಿ ಉರಿಯುತ್ತಾ ಇದೆ! ಭಾಗ್ಯ—ದುರ್ಭಾಗ್ಯ!!

(ಹಿಂದಿಯಿಂದ)

ಅನುವಾದಕರು:—ಕೆ. ಕೆ. ಶೆಟ್ಟಿ.

THE BANK OF MANGALORE LIMITED

HEAD OFFICE MANGALORE ESTD 1901

Branches—MOODABIDRI & PADUBIDRI

NOTICE

On and from 1st January 1941 the following are the revised rates of interest on deposits.

FIXED DEPOSITS

For 2 years or over	5½ per cent
„ 1 „	4½ per cent
„ 6 months	3½ per cent
„ 3 „	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3%

All kinds of banking business transacted

೪೩ ವಾಚುಗಳು ಮತ್ತು ೪೩ ಬಹುಮಾನಗಳು

ರೂಪಾಯಿ ೧—೪—೦ಕ್ಕೆ



ಉತ್ತಮ ಪರಿಮಳದ 6 ಸೀಸೆ ಒಟ್ಟೊ ರೋಸ್ ಅಥವಾ 6 ಸೀಸೆ ರಿಂಗ್ ವರ್ಮ್ (ಗಜಕರ್ಣ) ಮುಲಾಮು ಇದನ್ನು ಒಮ್ಮೆಗೆ ರೂ. 1—4—0ಕ್ಕೆ ಕೊಂಡುಕೊಂಡವರಿಗೆ ಎರಡು ಬಂಗಾರದ ಗಿಲಿಟಿನ ಡಮ್ಮಿ ರಿಸ್ಟ್ ವಾಚು (ಬೇಂಡ್ ಸಹಿತ) ಒಂದು ಡಮ್ಮಿ ಟೈಂಪೀಸ್, ಒಂದು ಸೇಫ್ಟಿ ರೇಜರ್, ಒಂದು ಶೇವಿಂಗ್ ಬ್ರಶ್, ಒಂದು ಪೋಕೆಟ್ ಪೌಡರ್, ಒಂದು ಬಾಚಣಿಗೆ, ಒಂದು ಸೋಪು, ಒಂದು ಸೆಟ್ ಗುಬ್ಬಿಗಳು, ಒಂದು ಚೂರಿ, ಒಂದು 14 ಕ್ಯಾರೆಟಿನ ನಿಬ್ಬುಳ್ಳ ಪೆನ್ನು, 500 ಫೀಟು ಫೋಕಸಿನ 36 ತಾಸು ಉರಿಯುವ ಒಂದು ಲೈಟು ಮತ್ತು ಅನೇಕ ಸುಂದರ ವಸ್ತುಗಳು ಅಥವಾ ಒಂದು ಸಲ ಕೀ ಕೊಟ್ಟರೆ 36 ತಾಸು ನಡೆವ 10 ವರ್ಷ ಗ್ಯಾರಂಟಿಯ ಒಂದು ಸಿಲ್ವರ್ ಪೋಕೆಟ್ ವಾಚು ಸಿಗುತ್ತದೆ. ಪೋಸ್ಟೇಜ್ ಮತ್ತು ಪೇಕಿಂಗ್ ಪ್ರತ್ಯೇಕ 12 ಆಣೆ.

ವಿಳಾಸ:—

THE AMERICAN COMMERCIAL STORES. POST BOX NO. 12218.

ಅಮೇರಿಕದಲ್ಲಿ ಪ್ರಪಂಚದ ಸುವರ್ಣ ಸಂಚಯ

ಚಿನ್ನವು ಬೆಲೆಯಿಲ್ಲದ ಲೋಹವಾಗುವುದೆ?

ಅರ್ಥಶಾಸ್ತ್ರಜ್ಞರಿಗೆ ದಿಕ್ಕುತೋರದ ಭಯ

ಪ್ರೆಸಿಡೆಂಟ್ ರೂಸ್ವೆಲ್ಟರು

ಅಮೇರಿಕವು ಬ್ರಿಟನಿಗೆ ಮಾಡುವ ಯುದ್ಧ ಸಹಾಯದ ಪ್ರತಿಯಾಗಿ ಬ್ರಿಟನು ತನ್ನ ಸಾಮ್ರಾಜ್ಯದ ಸುವರ್ಣವನ್ನೆಲ್ಲ ಅಡವು ಮಾಡಿಕೊಡಬೇಕೆಂದು ಒಂದು ಸೂಚನೆಯಾಗಿದೆ ಯುದ್ಧ ಸಾಮುಗ್ರಿಗಳಿಗೆ ಆಗುವ ಸಾಲದ ಬಾಧೆಯನ್ನು ದೂರಮಾಡಲಿಕ್ಕೆ ತತ್ಕಾಲಕ್ಕೆ ಇದೇ ವ್ಯವಹಾರಿಕ ಸುಲಭ ಉಪಾಯವಾಗಿರಬಹುದು ಆದರೆ ನಿಜವಾಗಿಯೂ ಅಮೇರಿಕಕ್ಕೆ ಹೆಚ್ಚಿನ ಚಿನ್ನದ ಆವಶ್ಯಕತೆ ಇರುವುದೆ? ಈಗ ಚಿನ್ನವು ವ್ಯಾಪಾರದ ವಸ್ತುವಾಗಿರುವುದಿಲ್ಲ ಮತ್ತು ಅದು ಸಂಪತ್ತಿಯ ಸೂಚನೆ ಆಗಿಯೂ ಇರುವುದಿಲ್ಲ ಈಗಾಗಲೇ ಅಮೇರಿಕೆಯ ಹತ್ತಿರ ೫,೦೦೦,೦೦೦,೦೦೦ ಪವನು ಬೆಲೆಬಾಳುವಷ್ಟು ಚಿನ್ನದ ಸಂಗ್ರಹ ಇರುತ್ತದೆ ಇದು ಯೂರೋಪಿನ ಅನೇಕ ರಾಷ್ಟ್ರಗಳಿಂದ ಬಂದ ಸಂಗ್ರಹವಾಗಿದೆ. ಪ್ರಪಂಚದ ಚಿನ್ನದ ಮೂರರಲ್ಲಿ ಎರಡು, ಪಾಲಷ್ಟು ಈಗ ಅಮೇರಿಕದಲ್ಲಿದೆ. ಯೂರೋಪಿನ ರಾಷ್ಟ್ರಗಳು ಬದ್ರತೆಗಾಗಿ ತಮ್ಮ ಎಲ್ಲ ಚಿನ್ನವನ್ನೂ ಅಮೇರಿಕಕ್ಕೆ ಕಳುಹಿಸತೊಡಗಿವೆ ಹೀಗೆಯೇ ಪರಿಸ್ಥಿತಿ ಇದ್ದರೆ, ಇನ್ನು ಎರಡು ಮೂರು ವರ್ಷಗಳ ಒಳಗೆ ಪ್ರಪಂಚದ ಎಲ್ಲಾ ಚಿನ್ನವು ಅಮೇರಿಕಕ್ಕೆ ಹೋಗಬಹುದು ಎಂದು ಫ್ರೆಂಕಲೋಂಗ ವರ್ತ ಎಂಬ ತಜ್ಞರು ಹಿಂದೂ ಪತ್ರಿಕೆಗೆ ಬಂದ ಲೇಖನವನ್ನು ಬರೆದಿರುತ್ತಾರೆ,

ಒಬ್ಬ ಬೇಂಕರನ ಅಭಿಪ್ರಾಯ

ಈ ಪರಿಸ್ಥಿತಿಯನ್ನು ಮನಗಂಡು ಅಮೇರಿಕದ ಒಬ್ಬ ಪ್ರಸಿದ್ಧ ಬೇಂಕರನು 'ಅಮೇರಿಕವು ತನ್ನ ಚಿನ್ನದ ಸಂಗ್ರಹದಿಂದ ಆರೇಳು ಬಿಲಿಯ ಡಾಲರು ಬೆಲೆಬಾಳುವ ಚಿನ್ನವನ್ನು ಪ್ರಪಂಚದ ಎಲ್ಲಾ ಭಾಗಗಳಲ್ಲಿ ವಿನಿಯೋಗಕ್ಕೆ ಹಾಕಬೇಕೆಂದು' ಹೇಳಿದ್ದಾನೆ ಯಾಕೆಂದರೆ ಅಮೇರಿಕವು ಇನ್ನು ಒಂದು ಔನ್ಸಿನಷ್ಟಾದರೂ ಚಿನ್ನವನ್ನು ಹೆಚ್ಚಿಗೆ ಸಂಗ್ರಹಿಸುವುದು ಅನರ್ಥಕಾರಿಯಾಗಿದ್ದೆ ಎಂಬುದು ಅವನ ಅಭಿಪ್ರಾಯವಾಗಿದೆ. ಎಲ್ಲ ಚಿನ್ನವು ಅಮೇರಿಕಕ್ಕೆ ಹೋಗುವ ಸಂದರ್ಭದಲ್ಲಿ, ಪ್ರಪಂಚದ ಇತರ ಭಾಗಗಳು ಚಿನ್ನರಹಿತವಾಗುವುವು ಆಗ ರಾಷ್ಟ್ರಗಳು ತಮ್ಮ ವ್ಯಾಪಾರ ವಹಿವಾಟುಗಳಿಗಾಗಿ ಸುವರ್ಣಮಾನವನ್ನು ಬಿಟ್ಟು ಬಿಡಬೇಕಾಗುವುದು. ಅಥವಾ ವ್ಯಾಪಾರ ವಹಿವಾಟನ್ನೇ ನಿಲ್ಲಿಸಬೇಕಾಗುವುದು ಯಾಕಂದರೆ ಚಿನ್ನವು ಬೆಲೆಯಿಲ್ಲದ್ದಾಗುವುದು

ಚಿನ್ನವು ಸಂಪತ್ತಿ ಸೂಚಕವಲ್ಲ

ಪ್ರತಿವರ್ಷವೂ ೩೦೦,೦೦೦,೦೦೦ ಪವನುಗಳಷ್ಟು ಚಿನ್ನವು ಖನಿಗಳಿಂದ ಉತ್ಪನ್ನವಾಗುತ್ತ ಇದೆ ಇದರ ಪೈಕಿ ಹೆಚ್ಚಿನ ಅಂಶವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಉತ್ಪನ್ನವಾಗುವುದು. ಈ ಎಲ್ಲಾ ಚಿನ್ನ ಒಂದಲ್ಲ ಒಂದು ದಿನ ಅಮೇರಿಕಕ್ಕೇನೇ ಹೋಗಲಿಕ್ಕಿದೆ. ಮತ್ತೆ ಹೀಗೆ ಬರುತ್ತಿರುವ ಚಿನ್ನದ ಭದ್ರತೆಗಾಗಿ ಅಮೇರಿಕವು ನೆಲಮಾಳಿಗೆಗಳನ್ನು ಕಟ್ಟಲಿಕ್ಕೆ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡುತ್ತದೆ ಮತ್ತು ಸಾವಿರಾರು ಸೈನಿಕರನ್ನು ಕಾವಲಿಗಾಗಿ ಇಡುತ್ತದೆ ಆದುದರಿಂದ ಅಮೇರಿಕದಲ್ಲಿ ಸಂಗ್ರಹವಾಗಿರುವ ಚಿನ್ನವು ಆ ರಾಷ್ಟ್ರದ ಸಂಪತ್ತನ್ನು ಸೂಚಿಸುವುದಿಲ್ಲ ಆದರೆ ಅದರ ಸಾಲದ ಭಾರವನ್ನು ತೋರಿಸುತ್ತದೆ. "ಹೀಗಾದುದರಿಂದಲೇ ಅಮೇರಿಕದಲ್ಲಿ ಸಂಗ್ರಹವಾದ ಚಿನ್ನವನ್ನು ಏನು ಮಾಡಬೇಕೆಂಬ ಪ್ರಶ್ನೆ ಹುಟ್ಟಿದೆ ಮತ್ತು ಇದು ಹಲವರನ್ನು ದಿಗಿಲುಗೊಳಿಸಿದೆ. ಯಾಕಂದರೆ ಮೊದಲು ಸೂಚಿಸಿದ ಪ್ರಕಾರ ಎಲ್ಲ ಚಿನ್ನವು ಅಮೇರಿಕದಲ್ಲಿ ಸಂಗ್ರಹವಾದರೆ ಅಂತರ್ರಾಷ್ಟ್ರೀಯ ವ್ಯಾಪಾರ ವಹಿವಾಟುಗಳು ನಿಂತುಹೋಗಿ ಬಹಳ ವಿಪರೀತ ಪರಿಸ್ಥಿತಿಯು ಉಂಟಾಗಬಹುದು ಒಂದೇ ಪ್ರಪಂಚದ ರಾಷ್ಟ್ರಗಳು ವ್ಯಾಪಾರ ವಹಿವಾಟುಗಳಿಗಾಗಿ ಬೇರೆಯೇ ಮಾನ ಮಾಧ್ಯಮವನ್ನು ಕೈಕೊಳ್ಳಬೇಕಾಗುವುದು ಅಥವಾ ಅಂಥಾ ವ್ಯಾಪಾರ ವಹಿವಾಟನ್ನೇ ನಿಲ್ಲಿಸಬೇಕಾಗುವುದು — ಆಗ — ಅಮೇರಿಕದಲ್ಲಿ ಚಿನ್ನವಿದ್ದು ಅದು ಕೈಕಟ್ಟಿ ಬೆನ್ನಾಗಿ ಕೂತುಕೊಂಡಿರಬೇಕಾಗುತ್ತದೆ

ಜರ್ಮನಿ ಮತ್ತು ಚಿನ್ನದ ಮಾನ

ಪ್ರಪಂಚದ ಚಿನ್ನವೆಲ್ಲ ಅಮೇರಿಕದಲ್ಲಿ ಸಂಗ್ರಹವಾಗುತ್ತಿರುವುದನ್ನು ಮನಗಂಡೇ ಜರ್ಮನಿಯಂಥ ಕೆಲವು ದೇಶಗಳು ನಮ್ಮ ರಾಷ್ಟ್ರಗಳ ನಾಣ್ಯ ಮತ್ತು ನೋಟುಗಳ ಚಲಾವಣೆಗೆ ಭಂಗಬಾರದ ಹಾಗೆ ಚಿನ್ನದ ಮಾನವನ್ನು ತ್ಯಜಿಸಿವೆ ಚಿನ್ನದ ವಿಷಯದಲ್ಲಿ ಅಮೇರಿಕದ ನಿರಂಕುಶ ಸರ್ವಾಧಿಕಾರವಾದರೆ, ಅದನ್ನು ಒಪ್ಪಲಿಕ್ಕೆ ತರುಣ ರಾಷ್ಟ್ರಗಳು ಸಿದ್ಧವಾಗಿರುವುದಿಲ್ಲ ಜಗತ್ತು ಈಗ ಪುರಾತನ ಸಂಪ್ರದಾಯ, ರೂಢಿಗಳಿಂದ ಬಿಡುಗಡೆ ಹೊಂದುತ್ತ ಇದೆ ಹಳತು ಹೊಸತುಗಳ ಸಂಘರ್ಷವಾಗುವ ಕಾಲವಿದು. ಜರ್ಮನಿಯು ಈಗಾಗಲೇ ಅಂಥ ಬಂಧನಗಳನ್ನ ಕಡಿದು ಹಾಕುವ ಅದ್ಭುತ ಸಾಹಸವನ್ನು ತೋರಿಸಿದೆ ಅದು ರಷ್ಯದ ಸ್ನೇಹದಿಂದ ಅಮೇರಿಕದ ಸರ್ವಾಧಿಕಾರವನ್ನು ಅಲ್ಲಗಳೆಯುವ ಮಹತ್ವಯತ್ನಗಳನ್ನು ಮಾಡಿದೆ ರಷ್ಯದಲ್ಲಿ ಮೊದಲು ಉತ್ಪತ್ತಿಯಾಗುತಿದ್ದುದಕ್ಕಿಂತಲೂ ಈಗ ಆರು ಪಾಲು ಚಿನ್ನವು ಉತ್ಪನ್ನವಾಗುತ್ತದೆ ಈಗ ರಷ್ಯದಲ್ಲಿ ಪ್ರತಿವರ್ಷ ಕಡಿಮೆ ಎಂದರೆ ೫೦,೦೦೦,೦೦೦ ಪವನು ಚಿನ್ನವು ಉತ್ಪನ್ನವಾಗುತ್ತದೆ ಅತಿ ಹೆಚ್ಚು ಚಿನ್ನವನ್ನು ತಯಾರಿಸುವ ರಾಷ್ಟ್ರಗಳು ಮೂರು ಇವೆ ಅವುಗಳಲ್ಲಿ ಪ್ರಥಮ ಸ್ಥಾನವು ದಕ್ಷಿಣ ಆಫ್ರಿಕಕ್ಕೂ ದ್ವಿತೀಯ ಸ್ಥಾನವು ಕೆನಡಕ್ಕೂ ಇದೆ ರಷ್ಯದಲ್ಲಿ ಉತ್ಪನ್ನವಾಗುವ ಚಿನ್ನವು ಕೆನಡಕ್ಕಿಂತ ಬಹು ಸ್ವಲ್ಪ ಕಡಿಮೆ ಇದೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಉತ್ಪನ್ನವಾಗುವ ಚಿನ್ನ ೨೦೦,೦೦೦,೦೦೦ ಪವನುಗಳಷ್ಟು ಪ್ರತಿವರ್ಷ ಇರುತ್ತದೆ ಆದರೂ ಹೀಗೆ ಉತ್ಪನ್ನವಾಗುವ ಚಿನ್ನವು ಈಗಿನ ಯುದ್ಧಕ್ರಮವನ್ನು ನೋಡಿದರೆ, ಮೂರು ವಾರಗಳ ಯುದ್ಧ ಖರ್ಚಿಗೂ ಸಾಲದಷ್ಟು ಇರುವುದು ಈ ಚಿನ್ನದಿಂದ ಕೆಲವು ಯುದ್ಧ ಹಡಗುಗಳನ್ನು ಅಥವಾ ಸ್ವಲ್ಪ ಹೆಚ್ಚಿಗೆ ಯುದ್ಧ ವಿಮಾನಗಳನ್ನು ಕ್ರಯಕ್ಕೆ ಕೊಂಡುಕೊಳ್ಳಬಹುದು ಅಮೇರಿಕವು ಇಂಥ ವ್ಯಾಪಾರಕ್ಕೆ ಸಿದ್ಧವಿಧಯೋ ಎಂದು ಸ್ಪಷ್ಟಗೊಳಿಸಿಲ್ಲ ಹೇಗಿದ್ದರೂ ಅಮೇರಿಕದಲ್ಲಿ ಇನ್ನೂ ಹೆಚ್ಚಿಗೆ ಚಿನ್ನದ ಸಂಗ್ರಹವಾದರೆ, ಚಿನ್ನವು ವಿನಿಯೋಗದಲ್ಲಿ ಬಾರದೆ ಅದರ ಬೆಲೆಯು ನಾವು ಕಲ್ಪಿಸಬಹುದಾದುದಕ್ಕಿಂತ ಕಡಿಮೆ ಇಳಿದು ಹೋಗಬಹುದು ಅಥವಾ ಅದು ಬೆಲೆಯೇ ಇಲ್ಲದ ಲೋಹವಾಗಬಹುದು. ಅಂಥ ಸಂದರ್ಭದಲ್ಲಿ ಒಂದು ಮಹಾ ಆರ್ಥಿಕ ವಿಪ್ಲವವೇ ಜಗತ್ತಿನಲ್ಲಿ ಉಂಟಾಗಲಿಕ್ಕಿದೆ ಇದು ಅರ್ಥಶಾಸ್ತ್ರಿಗಳಿಗೆ ದಿಕ್ಕುತೋರದ ಭಯವಾಗಿದೆ. ಇದಕ್ಕೆ ಏನು ಮಾಡಬಹುದು—ಎಂದು ಅವರು ಆಲೋಚಿಸುತಿದ್ದಾರೆ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಬಿಡುಗಡೆ

ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಮಂತ್ರಿಗಳಾಗಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು (ಪಂಡಿತ ಜವಾಹರಲಾಲ್ ನೆಹರೂ ಅವರ ಸಹೋದರಿಯವರು) ಎಪ್ರಿಲ್ ೨ನೇ ತಾರೀಕಿನ ದಿವಸ ನೈನಿ ಕಾರಾಗೃಹದಿಂದ ಬಿಡುಗಡೆ ಮಾಡಲಾಯಿತೆಂದು ತಿಳಿದುಬರುತದೆ



ಸತ್ಯಾಗ್ರಹ ಸಮಾಚಾರ

ಶ್ರೀ. ಬಿ. ನಾರಾಯಣರಾಯರಿಗೆ ಶಿಕ್ಷೆ

ಮುಲ್ಕಿಯಲ್ಲಿ ಕಳೆದ ತಾ. ೪ರಲ್ಲಿ ಸತ್ಯಾಗ್ರಹ ಹೂಡಿ ಶ್ರೀ. ಬೋಳ ನಾರಾಯಣರಾಯರ ವಿಚಾರಣೆ ನಡೆಸಿ ಸಬ್ ಡಿ. ಮ್ಯಾಜಿಸ್ಟ್ರೇಟರಾದ ಶ್ರೀ. ಕೆ. ಕೃಷ್ಣಯ್ಯನವರು, ತಮ್ಮ ಬಂಟ್ವಾಳ ಕೋರ್ಟಿನಲ್ಲಿ ೩ ತಿಂಗಳ ಕಠಿನ ಸಜೆಯನ್ನು ತಾ ೫ರಂದು ವಿಧಿಸಿದರು. ತರಗತಿ 'ಸಿ'

ಸೆರೆಯಾಗಿಲ್ಲ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸದಸ್ಯರಾದ ಶ್ರೀ. ಕೆ. ಪಿ. ಟಿ. ರಾಮ ಪೊತುವಾಳರು ಕಳೆದ ತಾ. ೨ರಂದು ನೆಲ್ಲಿಕಾರಿನಲ್ಲಿ ಸತ್ಯಾಗ್ರಹ ಮಾಡಿದರು. ಇವರ ಸೆರೆಯಾಗಿಲ್ಲ

ಶ್ರೀ. ವರದರಾಯ ಶೆಣೈಗಳು ಸೆರೆಯಾಗಿಲ್ಲ

ಶ್ರೀ. ಎನ್. ವರದರಾಯ ಶೆಣೈಗಳು ಕಳೆದ ತಾ ೫ರಂದು ಬಂಟ್ವಾಳದಲ್ಲಿ ಸತ್ಯಾಗ್ರಹ ಹೂಡಿ ಸೆರೆಯಾಗದ್ದರಿಂದ ಇವರು ಪಂಜಾಬು ಕಡೆಗೆ ತೆರಳಿದ್ದಾರೆ

ಶ್ರೀ. ಶಾಮರಾಯ ನಾಯ್ಕರು ಸೆರೆಯಾಗಿಲ್ಲ

ಶ್ರೀ. ಶಾಮರಾಯ ನಾಯ್ಕರು ಕಾರ್ಕಳದಲ್ಲಿ ಕಳೆದ ತಾ. ೫ರಲ್ಲಿ ಸತ್ಯಾಗ್ರಹ ಹೂಡಿದರು. ಇವರ ಸೆರೆಯಾಗಿಲ್ಲ

ಶ್ರೀ. ಲಕ್ಕಪ್ಪ ರೈಗಳು ಸೆರೆಯಾಗಿಲ್ಲ

ಇಂದು (೫-೪-೪೧) ಸಂಜೆ ಘಂಟೆ ೫ಕ್ಕೆ ಶ್ರೀ ಆಗಾರಿ ಲಕ್ಕಪ್ಪ ರೈಗಳು ವಿಟ್ಲ ಬೋ. ಹಾ. ಶಾಲೆಯ ಬಳಿ ಯುದ್ಧ ವಿರುದ್ಧ ಘೋಷಣೆಯನ್ನು ಸಾರಿದರು. ಶ್ರೀಯುತರ ಯುದ್ಧ ವಿರುದ್ಧ ಘೋಷಣೆ ಸಾರುವ ಮೊದಲು ಕಾಟ್ಟುಕರದ ಶ್ರೀಮಾನ್ ಅಯ್ಯಣ್ಣ ಶೆಟ್ಟರವರು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯದ ವಿಚಾರವಾಗಿ ಮಾತಾಡಿದರು.

ಯುದ್ಧ ವಿರುದ್ಧ ಘೋಷಣೆಯ ಸಂದರ್ಭದ ಈ ಮೊದಲು ಸತ್ಯಾಗ್ರಹವನ್ನು ಹೂಡಿ ವಾಕ್ ಸ್ವಾತಂತ್ರ್ಯವನ್ನು ಪಡೆದು ಇಲ್ಲಿಗೆ ಬಂದಿದ್ದ ಶ್ರೀಗಳಾದ ಕೆ ರಾಮ. ಕುಷ್ಠ ಚಿಕ್ಕಯ್ಯ ನಾಯ್ಕ, ಅಣ್ಣಪ್ಪ ಭಂಡಾರಿ, ಉಪೇಂದ್ರ ನಾಯ್ಕ, ಕೃಷ್ಣ ಪೈ, ವೆಂಕಪ್ಪ ರೈ ಸುಬ್ರಾಯನ್ ಇವರೆಲ್ಲರೂ ಈ ಸಭೆಯಲ್ಲಿ ಭಾಗವಹಿಸಿದ್ದರು. ಇವರಲ್ಲಿ ಪಾಣೆಮಂಗಳೂರು ಶ್ರೀ. ಉಪೇಂದ್ರ ನಾಯ್ಕರವರೂ, ಎಂ. ಸುಬ್ರಾಯನ್‌ರವರೂ ಕಾಂಗ್ರೆಸ್ ಧೋರಣೆಯ ಕುರಿತು ಭಾಷಣವಿತ್ತರು. ಶ್ರೀಮಾನ್ ಸಿ. ಎಚ್. ಅಪ್ಪುರವರು ಸತ್ಯಾಗ್ರಹಿಗಳಿಗೆ ಹಾರವನ್ನು ಹಾಕುತ್ತ ಸ್ಫೂರ್ತಿದಾಯಕವಾಗಿ ಮಾತನಾಡಿದರು. ಆ ಬಳಿಕ [illegible] ಎ. ಪುರಂದರ ಪೈಯವರ ಭಾಷಣವಾಯಿತು. ಶ್ರೀ ಲಕ್ಕಪ್ಪ ರೈಗಳು ಯುದ್ಧ ವಿರುದ್ಧ ಘೋಷಣೆಯನ್ನು ಸಾರುತ್ತ ಮುಂದಕ್ಕೆ ಪ್ರಯಾಣ ಬೆಳಸಿದರು

ಶ್ರೀ. ಕೃಷ್ಣ ಶ್ರೀನಿವಾಸ ಪೈ ಮತ್ತು ಶ್ರೀ. ಉಪೇಂದ್ರ ನಾಯ್ಕರ ಸೆರೆಯಾಗಿಲ್ಲ

ಶ್ರೀ. ಉಪೇಂದ್ರ ನಾಯ್ಕರು ತಾ. ೩ರಲ್ಲಿ ಪೂರ್ವಾಹ್ನ ಘಂಟೆ ೯-೩೦ಕ್ಕೆ ಮುನ್ನೂರು ಗ್ರಾಮದ ನಂದಾವರ ಗಣಪತಿ ದೇವಸ್ಥಾನದ ಎದುರಿಗೆ, ಯುದ್ಧವಿರೋಧ ಘೋಷವಮಾಡಿದರು ... ಉತ್ಸಾಹಿಗಳು ಭಗವದ್ಗೀತಾಗ್ರಂಥವನ್ನೂ ... ಮಹನೀಯರು ನೂಲು ಮತ್ತು ... ಒಂದು ತಕ್ಲಿಯನ್ನೂ ಶ್ರೀ ನಾಯ್ಕರಿಗೆ ಕೊಟ್ಟು ... ಸತ್ಯಾಗ್ರಹದ ಮೊದಲು ಶ್ರೀ. ... ಎಸ್. ಎನ್. ಹೊಳ್ಳರು ಒಂದು ಚಿಕ್ಕ ಭಾಷಣ ... ಇಂದಿನ ಸತ್ಯಾಗ್ರಹದ ಅರ್ಥವನ್ನು ವಿವರಿಸಿದರು. ಸತ್ಯಾಗ್ರಹ ಮುಗಿದು ಶ್ರೀ. ನಾಯ್ಕರು ಪಾಣೆಮಂಗಳೂರಿಗೆ ಕಾಲ್ನಡೆಯಾಗಿ ಮುಂದುವರಿದರು. ಶ್ರೀ. ನಾಯ್ಕರು ಪಾಣೆಮಂಗಳೂರು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು.

ಶ್ರೀ. ಕೃಷ್ಣ ಶ್ರೀನಿವಾಸ ಪೈಗಳವರು ಅಂದೇ (೩-೪-೪೧) ಸಾಯಂಕಾಲ ಘಂಟೆ ೫ಕ್ಕೆ ... ಕೊಂಬು ಗ್ರಾಮದ ಶ್ರೀ. ... ಮಸರ್ಟಪ್ಪೆಲ ...

ಜಿಲ್ಲಾ ಸಮಾಚಾರಗಳು

ಲಕ್ಷ್ಮೀ ನರಸಿಂಹ ದೇವಾಲಯದ ಮುಂದೆ ಯುದ್ಧ ವಿರೋಧ ಘೋಷ ಮಾಡುವ ಮೂಲಕ ಸತ್ಯಾಗ್ರಹ ಆಚರಿಸಿದರು. ಶ್ರೀ. ಪೈಗಳವರು ಸತ್ಯಾಗ್ರಹ ಆಚರಿಸುವ ಮೊದಲು ಶ್ರೀ. ಎಸ್. ಎನ್. ಹೊಳ್ಳರು ಸತ್ಯಾಗ್ರಹದ ವಿಷಯವಾಗಿ ವಿವರಿಸಿದರು. ಪಾಣೆಮಂಗಳೂರಿನಿಂದ ಒಂದು ಸೇರಿದ ಶ್ರೀ. ಉಪೇಂದ್ರನಾಯ್ಕರನ್ನು ಕೂಡಿ ಹಳ್ಳಿಹಳ್ಳಿಗಳಿಗೆ ಕಾಂಗ್ರೆಸ್ ಸಂದೇಶವನ್ನು ಸಾರಲು ಕಾಲ್ನಡೆಯಿಂದ ತೆರಳಿದರು.

ಶ್ರೀ. ಸುಬ್ರಾಯನರು ಸೆರೆಯಾಗಿಲ್ಲ

ಶ್ರೀ ಎಂ ಸುಬ್ರಾಯನ್, ಸಾಹಿತ್ಯ ಶಿರೋಮಣಿ ಮತ್ತು ವಿದ್ವಾನ್, ಇವರು ತಾ ೩ರಲ್ಲಿ, ಸಾಯಂಕಾಲ ಘಂಟೆ ೫ಕ್ಕೆ, ಕಲ್ಲಡ್ಕ ಬೋರ್ಡು ಎಲಿಮೆಂಟರಿ ಶಾಲೆಯ ಎದುರಲ್ಲಿ, ಯುದ್ಧ ವಿರೋಧ ಘೋಷ ಮಾಡಿದರು ಸತ್ಯಾಗ್ರಹದ ಮೊದಲು ಶ್ರೀ. ಸುಬ್ರಾಯನ್‌ರವರು ಕಾಂಗ್ರೆಸಿನ ನೀತಿತತ್ತ್ವಗಳನ್ನು ವಿವರಿಸಿ ಭಾಷಣವಿತ್ತರು ಸತ್ಯಾಗ್ರಹ ಸಮಯ ಮಂಗಳೂರಿನಿಂದ ಲೂ ಪಾಣೆಮಂಗಳೂರಿನಿಂದಲೂ ಜನರು ಬಂದು ಸೇರಿದ್ದರು. ಶ್ರೀ ಎಸ್. ಎನ್. ಹೊಳ್ಳ, ಶ್ರೀ ಉಪೇಂದ್ರ ನಾಯ್ಕ, ಶ್ರೀ ಅಣ್ಣಪ್ಪ ಭಂಡಾರಿ ಇವರ ಭಾಷಣಗಳೂ ನಡೆದುವು. ೫ಕ್ಕೆ ಸರಿಯಾಗಿ ಶ್ರೀ. ಎಂ. ಸುಬ್ರಾಯನರವರು ಯುದ್ಧ ವಿರೋಧ ಘೋಷಮಾಡಿದರು. ಮತ್ತೆ ಹಳ್ಳಿಗಳಲ್ಲಿ ಪ್ರಚಾರ ಕಾರ್ಯಕ್ಕಾಗಿ ತೆರಳಿದರು.

ಶ್ರೀ. ಬಿ. ಎಸ್. ಸೂರಪ್ಪ ಶೆಟ್ಟರ ಬಂಧನ

ಶ್ರೀ. ಬಿ. ಎಸ್. ಸೂರಪ್ಪಶೆಟ್ಟರು ಬ್ರಹ್ಮಾವರ ಸ್ವರಾಜ್ಯ ಮೈದಾನಿನಲ್ಲಿ ನೆರೆದ ಮಹಾಸಭೆಯ ಮುಂದೆ ಸತ್ಯಾಗ್ರಹ ಹೂಡಿದರು. ಸ್ಥಳೀಯ ಸಬ್ ಇನ್ಸ್‌ಪೆಕ್ಟರರು ಅವರನ್ನು ಕೈದುಮಾಡಿ ಸ್ಟೇಷನ್ನಿಗೆ ಕೊಂಡುಹೋದರು

ಶ್ರೀ ಕೊಂಚಾಡಿ ನಾರಾಯಣ ಶೆಣೈಗಳು ಸೆರೆಯಾಗಲಿಲ್ಲ

ಶ್ರೀ ಕೊಂಚಾಡಿ ನಾರಾಯಣ ಶೆಣೈಗಳು ತಾ. ೫ರಂದು ಮೂಡಬಿದರೆಯಲ್ಲಿ ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು ಆದರೆ ಬಂಧಿತರಾಗಲಿಲ್ಲ ಅವರು ಡಿಲ್ಲಿಯತ್ತ ಹೊರಟಿದ್ದಾರೆ

ಮಂಗಳೂರು

ಸಾರ್ವಜನಿಕ ಸಭೆ

ರಾಷ್ಟ್ರೀಯ ವಾರದ ಮೊದಲನೆಯ ದಿನದ ನಿಮಿತ್ತ ಸಾರ್ವಜನಿಕ ಸಭೆಯೊಂದು ಕಳೆದ ಆದಿತ್ಯವಾರ ಸಂಜೆ ಸ್ಥಳೀಯ ಮೈದಾನಿನಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ಕೆ ಕೃಷ್ಣರಾವ್ ಮತ್ತು ಬಿ. ಬಿ. ಬಾಳಿಗರು ಭಾಷಣವಿತ್ತರು. ಮುಂಜಾನೆ ಪ್ರಭಾತ ಫೇರಿಯೂ, ಧ್ವಜವಂದನೆಯೂ ಇದ್ದಿತು.

ಶ್ರೀ. ಗೋವಿಂದ ಪೈಗಳ ಉಪನ್ಯಾಸ

ಬೆಂಗಳೂರಲ್ಲಿ ನಡೆವ ಕನ್ನಡ ಸಾಹಿತ್ಯ ಪರಿಷತ್ತಿನ ವಸಂತೋತ್ಸವದಲ್ಲಿ ಉಪನ್ಯಾಸಕೊಡಲು ಆಮಂತ್ರಿತರಾಗಿ, ಕನ್ನಡದ ಸುಪ್ರಸಿದ್ಧ ಕವಿಗಳೂ ಸಂಶೋಧಕರೂ ಆದ ಶ್ರೀಮಾನ್ ಮಂಜೇಶ್ವರ ಗೋವಿಂದ ಪೈಗಳು ತಾ. ೭ರಂದು ಇಲ್ಲಿಂದ ಬೆಂಗಳೂರಿಗೆ ತೆರಳಿದ್ದಾರೆ ಅವರು 'ಕರ್ನಾಟಕ ಕ್ಷತ್ರಿಯ ಜೈನರ ಆಗಮನ' ಎಂಬ ವಿಷಯ ಕುರಿತು ಉಪನ್ಯಸಿಸುವರು

ಬಿಡುಗಡೆ

ಪುತ್ತೂರು ತಾಲೂಕಿನ ಮಂಡೆಕೋಲು ಗ್ರಾಮದ ಗೋವಿಂದ ಮಣಿಯಾಣಿ ಮತ್ತು ಅಪ್ಪಟ್ಟೆ ಎರಪ್ಪರು ಅದೇ ಗ್ರಾಮದ ಕಮ್ಮಾರ ಚೆನ್ನಯ್ಯಾಚಾರಿ ಎಂಬವನನ್ನು ಕಳೆದ ಸೆಪ್ಟಂಬರದಲ್ಲಿ ಆತ ಸುಳ್ಯದಿಂದ ಹಿಂತಿರುಗುತ್ತಿದ್ದಾಗ ಅಡಗಿ ನಿಂತು, ಹೊಡೆದು ಕೊಂದರೆಂಬ ಆರೋಪದ ಮೇಲೆ ಸೆಶನ್ಸಿಗೆ ಕಮಿಟ್ ಮಾಡಲ್ಪಟ್ಟಿದ್ದರು ಎರಡನೆಯ ಆಪಾದಿತನ ತಂದೆಯು ನಾಡ ನನ್ನು, ತನ್ನ ಮಗನನ್ನು ಕದಿಯ ತಂಬಿ ಸಿಟ್ಟಿನಿಂದ ಹತನು ಕೊಂದನೆಂದೂ, ಎರಡನೇ ಆಪಾದಿತನಿಗೂ ಹಣದ ವ್ಯವಹಾರದಿಂದ ಮನಸ್ತಾಪವಿತ್ತೆಂದೂ ಹೇಳಲಾಗಿದೆ. ಆಪಾದಿತರು ತಾವು ನಿರಪರಾಧಿಗಳೆಂದು ವಾದಿಸಿದರು ಎಸೆಸರರೆಲ್ಲರೂ ಆಪಾದಿತರು ಅಪರಾಧಿಗಳೆಂದರು. ಜಿಲ್ಲಾ ಜಡ್ಜರಾದ ಶ್ರೀ ಕೆ. ಎನ್ ಗೋಪಾಲನ್‌ರವರು, ಆಪಾದಿತರ ಆಪಾದನೆ ರುಜುವಾಗಿಲ್ಲವೆಂದೂ, ಪ್ರಾಸೆಕ್ಯೂಶನ್ ಆಪಾದನೆ ಅಪ್ರಬುದ್ಧವೆಂದು ಆಪಾದಿತರನ್ನು ನಿರಪರಾಧಿಗಳೆಂದು ಬಿಡುಗಡೆಮಾಡಿದರು.

ಕಾರ್ಕಳ

ಸತ್ಯಾಗ್ರಹ ಸಮಾಚಾರಗಳು:— ಶ್ರೀಯುತ ಯನ್. ಶಾಮರಾಯ ನಾಯಕರು ತಾ. ೫ರ ದಿನ ಬೆಳಗ್ಗೆ ಕಾರ್ಕಳದಲ್ಲಿ ಸತ್ಯಾಗ್ರಹ ನಡಿಸಿದರು. ಆದರೆ ಪೋಲೀಸರು ಅವರನ್ನು ಕೈಸೆರೆಹಿಡಿಯಲಿಲ್ಲ ಅವರೂ ತಾ. ೩-೪-೪೧ರಂದು ನೆಲ್ಲಿಕಾರಿನಲ್ಲಿ ಸತ್ಯಾಗ್ರಹ ಮಾಡಿದ ಶ್ರೀ ಕೆ ಪಿ ಟಿ ರಾಮಪೊತುವಾಳರವರೂ ಬೈಲೂರು, ಮುಡಾರು, ಅಂಗಡಿ, ಸಾಣೂರು ಮೊದಲಾದ ಹಳ್ಳಿಗಳಲ್ಲಿ ಸಂಚಾರವಿದ್ದು ಸತ್ಯಾಗ್ರಹ ಸಂದೇಶವನ್ನು ಸಾರುತ್ತಿದ್ದಾರೆ

ಯುದ್ಧಪರ ಭಾಷಣ: – ಸ್ಥಳೀಯ ಯುದ್ಧ ಸಹಾಯ ಸಮಿತಿಯ ಆಶ್ರಯದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಡಾಕ್ಟರ್ ಸಿ ರಾಮ ಕಾಮತರವರು ಒಂದು ಭಾಷಣವನ್ನು ಕೊಟ್ಟು, ಹಿಟ್ಲರಿಸಂನ್ನು ನಾಶಪಡಿಸುವುದಕ್ಕಾಗಿ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯಮಾಡುವದು ಅಗತ್ಯವೆಂದು ಹೇಳಿದರು. ಈ ಸಂದರ್ಭದಲ್ಲಿ ಕುರಿತು ಶ್ರೀ. ಯಂ ಅಪ್ಪುರಾವ್ ಮತ್ತು ಡಾಕ್ಟರ್ ಸಿ. ಭವಾನಿರಾಯರೂ ಮಾತನಾಡಿದರು.

ಉಪಾಧ್ಯಾಯರ ಸಭೆ:— ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಂಘದ ಸಭೆಯು ತಾ ೧ರ ದಿನ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕೂಡಿತು.

ರಾಷ್ಟ್ರೀಯ ವಾರ:— ಇದಕ್ಕೆ ಸಂಬಂಧಪಟ್ಟು, ತಾ ೬-೪ 1941ರ ದಿನ ಬೆಳಗ್ಗೆ ಪ್ರಭಾತ ಫೇರಿಯಾಯಿತು. ಶ್ರೀ ಕೆ. ವೇದವ್ಯಾಸ ನಾಯಕರು ಧ್ವಜಾರೋಹಣ ಮಾಡಿದರು. ಶ್ರೀ. ನಾಮನ ಶರ್ಮರು ರಚನಾತ್ಮಕ ಕಾರ್ಯಕ್ರಮ ಮತ್ತು ಸತ್ಯಾಗ್ರಹ ಸಂದೇಶದ ಕುರಿತು ಭಾಷಣ ಕೊಟ್ಟರು. ಇತರ ದಿನಗಳಲ್ಲೂ ಖದ್ದರ್ ಪ್ರಚಾರ, ಅಸ್ಪೃಶ್ಯತಾ ನಿವಾರಣೆ ಮೊದಲಾದ ವಿಷಯಗಳ ಮೇಲೆ ಭಾಷಣ, ಇತ್ಯಾದಿ ನಡೆದಿದೆ.

ಭಟ್ಕಳದಲ್ಲಿ ದ. ಕ. ಸತ್ಯಾಗ್ರಹಿಗಳ ಬಂಧನ

ಭಟ್ಕಳದಲ್ಲಿ ಶ್ರೀ. ಕುಳಾಲು ರಾಮಯ್ಯ ರೈ ಮತ್ತು ಶ್ರೀ. ಮಾಧವ ಪ್ರಭುಗಳನ್ನು ಬಂಧಿಸಿ ಪ್ರತಿಯೊಬ್ಬರಿಗೂ ೪ ತಿಂಗಳ ಸಾದಾ ಸಜೆ ವಿಧಿಸಿದರೆಂದೂ, ಹಿಂದೆಯೇ ಬಂಧಿತರಾದ ಶ್ರೀ. ಗೋವಿಂದ ಪೈಗಳಿಗೂ ೪ ತಿಂಗಳ ಸಾದಾ ಸಜೆ ವಿಧಿಸಿದರೆಂದೂ ಎಲ್ಲರನ್ನೂ ಹಿಂಡಲಗಿ ಸೆರೆಮನೆಗೆ ...

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶ ಗಳಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ,

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ಕೊಡುವುದು.

ಸೇರಿಗೆ ರೂ 4



ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

ಡಾಕ್ಕಾ, ಬಂಗಾಲ

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್ ಪೈ ಕಂಪೆನಿ, ಹಂಪನಕಟ್ಟಾ, ಮಂಗಳೂರು.

ಯುಗೊಸ್ಲೇವಿಯ ಗ್ರೀಸ್‌ಗಳ ಮೇಲೆ ಜರ್ಮನರ ಧಾಳಿ!

ಎಲ್ಲೆಲ್ಲಿ ಯುದ್ಧ ನಡೆಯುತ್ತಿದೆ?

ತ್ರಿಮುಖ ಯುದ್ಧ

ಇಂದು ಯೂರೋಪಿನಲ್ಲಿ ಮೂರು ಕಡೆಗಳಲ್ಲಿ ಯುದ್ಧ ನಡೆಯುತ್ತಿದೆ. ಆಫ್ರಿಕ, ಬಾಲ್ಕನ್ ಮತ್ತು ಅಟ್ಲಾಂಟಿಕ್‌ಗಳಲ್ಲಿ. ಈ ಮೂರು ಯುದ್ಧಗಳ ಸಂಬಂಧವು ಒಟ್ಟಿನಿಂದ ಪರಿಶೀಲಿಸಿದರೆ ಒಂದೇ ಆಗಿದೆ. ಈ ಮೂರು ಕಡೆಗಳ ಯುದ್ಧಗಳಲ್ಲಿ ಇಂಗ್ಲಿಷರು ಮತ್ತು ಜರ್ಮನರು ಮಾಡುವ ವಿರುದ್ಧ ಕೈವಾಡಗಳು ಸಾಕಷ್ಟು ಇವೆ. ಈ ಮೂರು ಕಡೆಯ ಯುದ್ಧಗಳ ಜಯದಲ್ಲಿಯೋ, ಅಪಜಯದಲ್ಲಿಯೋ, ಯೂರೋಪಿನ ಭವಿಷ್ಯವು ಅಡಗಿರುತ್ತದೆ.

ಟರ್ಕಿಯ ಧೋರಣವೇನು?

ಟರ್ಕಿಯ ಧೋರಣದ ಕುರಿತು ಕಳೆದ ವಾರದಲ್ಲಿ ಲೂರಾಲನೆಂಬವನು ಈ ರೀತಿ ಹೇಳಿರುತ್ತಾನೆ:

'ನಮಗೆ ಯುದ್ಧ ಬೇಡ; ಬ್ರಿಟಿಷರು ನಮಗೆ ಮಿತ್ರರಿರಬಹುದು. ಆದರೆ ಸ್ವಾತಂತ್ರ್ಯ ಹಕ್ಕು ಬಾಧ್ಯತೆಗಳನ್ನು ಮನ್ನಿಸುವವರೊಡನೆ ನಾವು ಸದಾ ಮೈತ್ರಿಯಿಂದಿರುವೆವು. ಸದ್ಯಕ್ಕಂತೂ ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವಷ್ಟು ಅಪಾಯಕಾರಕವಾದ ಕಾರಣಗಳಾವುವೂ ನಮಗೆ ತೋರುವುದಿಲ್ಲ.'

ಯುಗಸ್ಲವಿಯದ ನಿರ್ಧಾರ

ಯುಗಸ್ಲವಿಯದಲ್ಲಿ ಹೊಸ ಮಂತ್ರಿಮಂಡಳವು ಸ್ಥಾಪಿತವಾದಂದಿನಿಂದ ಹೊಸ ಹುರುಪು ಹುಟ್ಟಿದೆ. ತಮ್ಮ ರಾಷ್ಟ್ರದ ಸಲುವಾಗಿ ಆತ್ಮಾರ್ಪಣೆ ಮಾಡಲೂ ಅವರು ಸಿದ್ಧರಿದ್ದಾರೆ.

ಯುಗಸ್ಲವಿಯ ಅರಸು

ಯುಗಸ್ಲವಿಯದ ಅರಸು ಎರಡನೆಯ ಪೀಟರನು ರಾಜ್ಯಾರೋಹಣ ಮಾಡಿದನು. ಅದು ಬಹಳ ವಿಜೃಂಭಣೆಯಿಂದ ನಡೆಯಿತು. ಮುಖ್ಯ ಮಂತ್ರಿ ಸಿಮೊವಿಚರೂ ಆಗ ಹಾಜರಿದ್ದರು. ಬೇರೆ ಬೇರೆ ಅಧಿಕಾರಿಗಳೂ ಅನೇಕ ಜನರು ನೆರೆದಿದ್ದರು.

ಮುಖ್ಯ ಮಂತ್ರಿ ಸಿಮೊವಿಚರು ಈ ಸಂಬಂಧದಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸುತ್ತಾ ಅದರಲ್ಲಿ ಯುಗಸ್ಲವಿಯದಲ್ಲಿ ಶಾಂತತೆ ಕಾಪಾಡಿಕೊಳ್ಳಬೇಕೆಂದೂ ಯುಗಸ್ಲವಿಯವು ನೆರೆಯ ರಾಷ್ಟ್ರಗಳೊಂದಿಗೆ ಕಾದಾಡುವುದಿಲ್ಲವೆಂದೂ, ಅದು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದೆಂದೂ ಹೇಳಿದರು.

ಪೀಟರರ ಆಡಳಿತದ ಕೆಳಗೆ ಯುಗಸ್ಲವಿಯನರು ಕ್ರಾಂತಿಯನ್ನು ಮಾಡುತ್ತಿದ್ದಾರೆ. ಜರ್ಮನರೊಡನೆ ಮಾಡಿದ ಒಪ್ಪಂದ ಶರತ್ತುಗಳನ್ನು ಮುರಿದು ದಂಗೆಯೆದ್ದಿರುವರು. ಆ ಬಗ್ಗೆ ಜರ್ಮನಿಯ ಧಾಳಿ ನಡೆಯಿತು.

ರಷ್ಯ—ಯುಗಸ್ಲವಿಯ ಒಪ್ಪಂದ

ರಷ್ಯ ಯುಗಸ್ಲವಿಯಗಳು ಪರಸ್ಪರ ಅನಾಕ್ರಮಣ ಒಪ್ಪಂದ ಮಾಡಿಕೊಂಡಿರುವವೆಂದು ತಿಳಿದುಬರುತ್ತದೆ. ಈ ಒಪ್ಪಂದಕ್ಕೆ ರಷ್ಯದ ಪರವಾಗಿ ಮೊಲೊಟೊವ್ ಮತ್ತು ಯುಗಸ್ಲವಿಯದ ಪರವಾಗಿ ಗವ್ರಿಲೋವಿಚ್ ಇವರು ಸಹಿಮಾಡಿರುವರು.

ಯುಗೊಸ್ಲೇವಿಯ ಸರಕಾರ ಬೆಲ್‌ಗ್ರೇಡ್ ಬಿಟ್ಟಿತು!

ಜರ್ಮನ್ ಸೈನ್ಯಗಳು ಮುನ್ನುಗ್ಗುತ್ತಿವೆ!

ಎಡಿಸ್ ಅಬಾಬವು ಸ್ವಾಧೀನವಾಯಿತು

ಯುಗಸ್ಲವಿಯದಲ್ಲಿ ರಣೋತ್ಸಾಹ

ಬೆಲ್‌ಗ್ರೇಡಿಗೆ ಹೊರಗಿನ ಜಗತ್ತಿಗೂ ಯಾವ ಸಂಬಂಧವೂ ಇರುವುದಿಲ್ಲ. ಯುಗಸ್ಲವಿಯವು ಒಳ್ಳೆಯ ಶಾಂತರೀತಿಯಿಂದಲಿದೆ. ಎಲ್ಲಾ ತರದ ಪರಿಸ್ಥಿತಿಗಳನ್ನು ಎದುರಿಸಲೂ ಸಿದ್ಧವಿದೆ. 'ಇತರರು ಮದುವೆಮಂಟಪಕ್ಕೆ ಹೋಗುವಂತೆ ನಾವು ರಣಾಂಗಣಕ್ಕೆ ಹೋಗುವೆವು.' ಎನ್ನುತ್ತಾ ಅಲ್ಲಿನ ವೀರ ಯೋಧರು ಗಡಿ ದಾಟಿದರು.

ವಿಂಡ್ಸರ್ ದಂಪತಿಗಳು ಬದುಕಿದರು

ಡ್ಯೂಕ್ ಮತ್ತು ಡಚೆಸ್ ವಿಂಡ್ಸರರು ಹಡಗದಲ್ಲಿ ಕುಳಿತು ಹೋಗುತ್ತಿದ್ದಾಗ ಅಲೆಡೋ ಹತ್ತಿರ ಹಡಗು ಮುಳುಗಿತು. ಆದರೆ ಡ್ಯೂಕ್ ಮತ್ತು ಡಚೆಸರು ಜೀವದಿಂದ ಉಳಿದಿರುವರೆಂಬ ಸಂತೋಷದ ಸುದ್ದಿ ಬಂದಿದೆ.

ಹಂಗೇರಿ ಪ್ರಧಾನರ ಆತ್ಮಹತ್ಯೆ

ಹಂಗೇರಿಯ ಪ್ರಧಾನರಾದ ಕೌಂಟ್ ತೆಲ್ಲಿಯವರು ಬುಡಾಪೆಸ್ಟಿನಲ್ಲಿ ಗುಂಡಿನಿಂದ ಆತ್ಮಹತ್ಯೆ ಮಾಡಿಕೊಂಡರೆಂದು ಹೇಳಲಾಗಿದೆ. ಅವರಿಗೆ ತಮ್ಮ ರಾಜಕಾರ್ಯಗಳನ್ನು ನಿರ್ವಹಿಸುವುದು ಕಷ್ಟವಾದುದೇ ಇದಕ್ಕೆ ಕಾರಣವಂತೆ. ಹಂಗೇರಿಗೆ ಈಗ ಎಂ. ಲಾಸ್ಲೊ-ಡಿ. ಬಾರ್ಡೊಸಿಯವರು ಹೊಸ ಪ್ರಧಾನರು.

ಟರ್ಕಿಗೆ ಅಮೇರಿಕದ ಸಹಾಯ

ಲೀಸ್ ಮತ್ತು ಲೆಂಡ್ ಕಾಯಿದೆಯಂತೆ ಯುದ್ಧೋಪಕರಣಗಳನ್ನು ಟರ್ಕಿಗೆ ಅಮೇರಿಕವು ಕೊಡುವುದಾಗಿ ವಿಷಯ ಮಾತುಕತೆ ನಡೆಯುತ್ತಿರುವುದೆಂದು ತಿಳಿದುಬರುತ್ತದೆ.

ಅಮೇರಿಕದಿಂದ ಯುಗಸ್ಲವಿಯಕ್ಕೆ ಸಹಾಯ

ಯುದ್ಧ ಸಾಮಗ್ರಿಗಳ ಸಹಾಯ ನೀಡಬೇಕೆಂದು ಯುಗಸ್ಲವಿಯವು ಅಮೇರಿಕದೊಡನೆ ಕೇಳಿರುವುದೆಂದೂ ಅಮೇರಿಕವು ಅಂತಹ ಸಹಾಯದ ಭರವಸೆ ಕೊಡುವುದೆಂದೂ ಸುದ್ದಿಯಿದೆ.

ಗ್ರೀಕರ ಶೌರ್ಯೋತ್ಸಾಹ

ತಾವು ಸಾವಿಗಂಜುವ ಭಟರಲ್ಲವೆಂದು ಗ್ರೀಕರು ಜರ್ಮನಿಯ ಧಾಳಿಯನ್ನು ಎದುರಿಸುತ್ತಿದ್ದಾರೆ. 'ದೇವರ ಕೃಪೆಯಿಂದ ನಾವು ಶತ್ರುಗಳನ್ನು ಗೆಲ್ಲುವೆವು. ಗ್ರೀಕರು ಮಾನಪ್ರಿಯರು ಹೊಸ ಶತ್ರುವಿನೊಡನೆ ಹೋರಾಡಿ ಜಯಪಡೆಯುವೆವು' ಎಂದು ಗ್ರೀಕರಾಜ ಜಾರ್ಜರು ಸಾರುತ್ತಿದ್ದಾರೆ.

ಯುಗಸ್ಲವಿಯದಲ್ಲಿ ಗ್ರೀಕರ ಮುನ್ನಡೆ

ಯುಗಸ್ಲವಿಯದ ಗಡಿನಾಡಿನಲ್ಲಿ ನುಗ್ಗಿದ ಜರ್ಮನ್ ದಂಡುಗಳು ಟ್ಯಾಂಕ್ ಮೊದಲಾದ ಯುದ್ಧಾಸ್ತ್ರಗಳ ಸಮೇತ ಮುಂದೆ ಮುಂದೆ ನುಗ್ಗುತ್ತಿರುವರು.

ಎಡಿಸ್ ಅಬಾಬದ ಪತನ

ಎಡಿಸ್ ಅಬಾಬದ ಮೇಲೆ ಬ್ರಿಟಿಷರು ಮುನ್ನಡೆದು ಅದನ್ನು ಸ್ವಾಧೀನಪಡಿಸಿಕೊಂಡಿರುವರಾಗಿ ತಿಳಿದುಬರುತ್ತದೆ.

ಸೇವಿಸಿದಾಗಲೆಲ್ಲಾ ಸುಂದರ ರೂಪ

ಆಕೆ ಕಣ್ಣಾರೆ ನೋಡಿದ್ದಾಳೆ— ಜತೆ ಸ್ತ್ರೀಯರೆಷ್ಟೋ ಜನ 'ಲೋಧ್ರ' ಸೇವಿಸುವುದನ್ನು. ಹಾಗೆ ಸೇವಿಸಿದವರಿಗೆಲ್ಲಾ ಗರ್ಭಾಶಯ ರೋಗಗಳು ಗುಣವಾಗಿವೆ. ಕುಂಬಳಕಾಯಿಯಂತೆ ದೃಢವಾಗಿರುವ ಮಕ್ಕಳನ್ನು ಹಡೆದಿದ್ದಾರೆ. ಅದಕ್ಕಾಗಿಯೇ 'ಲೋಧ್ರ' ಸೇವಿಸುವಾಗಲೆಲ್ಲಾ ಒಂದು ಮೋಹನಾಕಾರವು ಆಕೆಯ ಕಣ್ಣಿಗೆ ಕಟ್ಟಿದಂತಾಗುವುದು.

'ಲೋಧ್ರ' ಸ್ತ್ರೀಯರಿಗೆ ಸಂಪೂರ್ಣಾರೋಗ್ಯವನ್ನು ಕೊಡುತ್ತೆ. ಗರ್ಭಾಶಯ ರೋಗಗಳನ್ನು ಹೊರದೂಡಿ ಸತ್ಸಂತಾನವನ್ನು ಕೊಡುತ್ತೆ. ಆದ್ದರಿಂದಲೇ ಎಂತಹ ರುಗ್ಣತೆಗಳಿಗೂ ಸ್ತ್ರೀಯರು 'ಲೋಧ್ರ' ವನ್ನು ಸೇವಿಸಬೇಕು.

'ಲೋಧ್ರ' ಎಲ್ಲಾ ಔಷಧದಂಗಡಿಗಳಲ್ಲಿಯೂ ಸಿಕ್ಕುತ್ತೆ

ತಯಾರಿಸುವವರು: ಕೇಸರಿ ಕುಟೀರಂ ಲಿಮಿಟೆಡ್—ಮದರಾಸು

ಬೆಂಗಾಜಿಯನ್ನು ಬ್ರಿಟಿಷರು ಬಿಟ್ಟುಬಿಟ್ಟರು

ಇದು ಮಹತ್ವದಲ್ಲವಂತೆ

ಬ್ರಿಟಿಷರು ಬೆಂಗಾಜಿಯನ್ನು ಬರಿದು ಮಾಡಿ ಹಿಂದೆ ನಿಂತಾಗ ಇಟಲಿಯನ್ ಜರ್ಮನ್ ಸೈನ್ಯಗಳು ಟ್ಯಾಂಕುಗಳ ಸಮೇತ ಮುನ್ನುಗ್ಗಿದವು. ಸೈನಿಕ ಮಹತ್ವ ದೃಷ್ಟಿಯಿಂದ ಬೆಂಗಾಜಿಯು ಪ್ರಯೋಜನವಿಲ್ಲದ ಸ್ಥಳವೆಂದೂ, ಅಲ್ಲಿಂದ ಹಿಂಜರಿದ ವಿಷಯ ಯಾರೂ ತಪ್ಪು ಯೋಚಿಸುವುದು ಅವಶ್ಯವಿಲ್ಲವೆಂದೂ ಸಾರಲಾಗಿದೆ.

ಬ್ರಿಟನಿಗೆ ಅಮೇರಿಕದ ಸಹಾಯ

ಬ್ರಿಟನಿಗೆ ಕಳುಹಿಸಲು ೧೫೦೦೦ ವಿಮಾನಗಳನ್ನೂ, ೨೧೨ ವ್ಯಾಪಾರಿ ಹಡಗಗಳನ್ನೂ ಅಮೇರಿಕವು ತಯಾರು ಮಾಡುತ್ತಿರುವುದೆಂದು ಹೇಳಲಾಗಿದೆ.

ಯುಗಸ್ಲವಿಯಕ್ಕೆ ರುಮೇನಿಯದ ಎಣ್ಣೆಯಿಲ್ಲ

ರುಮೇನಿಯವು ಯುಗಸ್ಲವಿಯಕ್ಕೆ ಒದಗಿಸುತ್ತಿದ್ದ ಎಣ್ಣೆಯನ್ನು ಶನಿವಾರದಿಂದ ನಿಲ್ಲಿಸಲಾಗುವುದೆಂದು ಜರ್ಮನ್ ನ್ಯೂಸ್ ಏಜೆನ್ಸಿಯ ಸುದ್ದಿ.

ಯುಗಸ್ಲವಿಯ ಗ್ರೀಸುಗಳ ಮೇಲೆ ಜರ್ಮನರ ದಾಳಿ

ತಾ. ೬ರಂದು ಜರ್ಮನರು ಯುಗಸ್ಲವಿಯದ ಮೇಲೆ ಯುದ್ಧ ಸಾರಿದರು. ಗ್ರೀಸಿನ ಮೇಲೆಯೂ ದಾಳಿ ನಡೆದಿದೆ.

ಕ್ರೋಟ್ ಜನರಿಗೆ ಸ್ವಾತಂತ್ರ್ಯ ಕೊಡುವುದು

ಜರ್ಮನಿಯ ಒಳತಂತ್ರ

ಯುಗಸ್ಲವಿಯದಲ್ಲಿರುವ ಕ್ರೋಟ್ ಜನರಿಗೆ ಸ್ವಾತಂತ್ರ್ಯ ಕೊಡುವುದು ತಮ್ಮ ಉದ್ದೇಶವಾಗಿದೆಯೆಂದು ಜರ್ಮನಿಯ ಪ್ರಚಾರ ನಡೆದಿದೆ. ಇದರಿಂದ ಅವರು ಯುಗಸ್ಲವಿಯದ ವಿರುದ್ಧ ನಿಂತು ಜರ್ಮನರಿಗೆ ಸಹಾಯ ಮಾಡಲಿ ಎಂಬುದು ಇದರ ಒಳತಂತ್ರವಾಗಿದೆ.

ಬೆಲ್‌ಗ್ರೇಡ್ ಬಿಟ್ಟಿತು

ಯುಗಸ್ಲವಿಯ ಸರಕಾರವು ಬೆಲ್‌ಗ್ರೇಡನ್ನು ಬಿಟ್ಟು ಯಾವುದೋ ಒಂದು ಗುಪ್ತ ಸ್ಥಳಕ್ಕೆ ಸ್ಥಳಾಂತರ ಮಾಡಿರುವುದಾಗಿ ತಿಳಿದುಬರುತ್ತದೆ.

ಜರ್ಮನ್ ಸೈನ್ಯಗಳು ಗ್ರೀಸ್ ಯುಗಸ್ಲವಿಯಾ ಯುದ್ಧರಂಗಗಳಲ್ಲಿ ಮುನ್ನುಗ್ಗುತ್ತಿದ್ದಾವೆ. ಸ್ಕ್ಯೂಮಾ ಕಣಿವೆಯಲ್ಲಿ ಮುಂದುವರಿಯುತ್ತಾರೆ. ವಿಮಾನಕೊಡೆಗಳಿಂದ ಇಳಿಯುತ್ತಾರೆ.

೬೯ ಹಡಗುಗಳನ್ನು ಹಿಡಿದರು

ಅಮೇರಿಕದ ಬಂದರುಗಳಲ್ಲಿರುವ ೬೯ ಜರ್ಮನ್ ಮತ್ತು ಇಟಲಿಯನ್ ಹಡಗುಗಳನ್ನು ಅಮೇರಿಕನರು ಹಿಡಿದು ಸ್ವಾಧೀನಪಡಿಸಿರುವರಾಗಿ ತಿಳಿದುಬರುತ್ತದೆ.

ಸಪ್ರು ವೈಸರಾಯರೊಳಗೆ ದೀರ್ಘಕಾಲದ ಮಾತುಕತೆ

—ಸಪ್ರು—ವೈಸರಾಯ ಭೇಟಿ

ಸರ್. ತೇಜ ಬಹದ್ದೂರ್ ಸಪ್ರುಗಳು ವೈಸರಾಯರನ್ನು ಭೇಟಿಯಾಗಿ ಮುಂಬಯಿ ಪರಿಷತ್ತಿನ ನಿರ್ಣಯದ ವಿಚಾರದಲ್ಲಿ ಮಾತುಕತೆ ನಡೆಸಿದರು. ಮಾತುಕತೆ ಬಹಳ ದೀರ್ಘಕಾಲ ನಡೆದಿತ್ತು. ಆದರೆ ಅದರ ವಿಚಾರಗಳು ಪ್ರಕಟವಾಗಿಲ್ಲ. ಮುಂದೆ ವೈಸರಾಯರು ಭಾರತ ಸಚಿವರೊಡನೆ ವಿಚಾರವಿನಿಮಯ ಮಾಡಿ ಮುಂದೆ ಏನು ಮಾಡಬಹುದು ಎಂಬ ವಿಚಾರವಾಗಿ ತಿಳಿಸಬಹುದೆಂದು ಊಹಿಸಲಾಗಿದೆ.

ಡಾ|| ರಾಜೇಂದ್ರ ಪ್ರಸಾದರು

ಮೈಸೂರು ಕಾಂಗ್ರೆಸ್ ಅಧಿವೇಶನವನ್ನು ತೀರಿಸಿ, ಡಾ ರಾಜೇಂದ್ರ ಪ್ರಸಾದರು ವರ್ಧಾಭಿಮುಖಿಗಳಾಗಿ ಹೊರಟರು

ಬ್ರಿಟಿಷ್ ಅಂದಾಜುಪತ್ರಿಕೆ

೨೫೦೦ ಲಕ್ಷ ಪೌಂಡುಗಳ ಹೆಚ್ಚಿನ ಕರ

೧ ಪೌಂಡಿಗೆ ೧೯|| ಶಿಲಿಂಗ್ ಕರ

ಬ್ರಿಟಿಷ್ ಸರಕಾರದ ಆರ್ಥಿಕ ಸಚಿವರಾದ ಸರ್ ಕಿಂಗ್ಸ್‌ಲೆವುಡ್ಡರು ಬ್ರಿಟಿಷ್ ಅಂದಾಜುಪತ್ರಿಕೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದರು. ಅವರ ಅಂದಾಜು ಪತ್ರಿಕೆ ಮತ್ತು ಹೊಸ ಕರಗಳ ಯೋಜನೆಯಂತೆ ಪ್ರತಿ ವರ್ಷಕ್ಕಿಂತ ಈ ವರ್ಷ ಒಟ್ಟು ೨೫೦೦ ಲಕ್ಷ ಪೌಂಡುಗಳನ್ನು ಕರರೂಪದಿಂದ ಹೆಚ್ಚು ಕೊಡಬೇಕಾಗುವುದು.

ಮೊದಲು ಇದ್ದ ಒಂದೂವರೆ ಶಿಲಿಂಗ್ ಉತ್ಪನ್ನ ಕರದ ದರವನ್ನು ಈಗ ೧೦ ಶಿಲಿಂಗ್‌ಗಳಿಗೆ ಏರಿಸಲಾಗಿದೆ. ಉತ್ಪನ್ನ ಕರ ಮತ್ತು ಸರ್ ಟ್ಯಾಕ್ಸ್ ಎರಡೂ ಬನ್ನ ಮುಸುವವನ್ನು ಉತ್ಪನ್ನವಿದ್ದವರು ೧ ಪೌಂಡಿನಲ್ಲಿ ೧೯||-ಶಿಲಿಂಗ್ ಕೊಡಬೇಕಾಗುವುದು.

ಇಲ್ಲಿಯ ವರೆಗೆ ವರ್ಷಕ್ಕೆ ೧೨೦ ಪೌಂಡ್ ಉತ್ಪನ್ನದವರ ಮೇಲೆ ಕರ ಹೊರಿಸಲಾಗುತ್ತಿತ್ತು. ಈ ಮಿತಿಯನ್ನು ಈಗ ೧೧೦ ಪೌಂಡಿಗೆ ಇಳಿಸಲಾಗಿದೆ. ಇದರ ಪರಿಣಾಮವಾಗಿ ೨೦ ಲಕ್ಷ ಹೆಚ್ಚು ಜನರು ಕರ ಕೊಡಬೇಕಾಗುವುದು.

ಶೌಕತ್ ಹಯಾತ್ ಖಾನರು ಇಟಲಿಯನರ ಸೆರೆಯಿಂದ ಮುಕ್ತರಾದರು

ಪಂಜಾಬಿನ ಮುಖ್ಯಮಂತ್ರಿ ಸರ್ ಸಿಕಂದರರ ಮಗ ಶೌಕತ್ ಹಯಾತ್ ಖಾನರು ಎಪ್ರಿಲ್ ೨ನೆಯ ತಾರೀಕಿನ ದಿನ ಇಟಲಿಯನರ ಸೆರೆಯಿಂದ ಮುಕ್ತರಾದರೆಂದು ಸುದ್ದಿ ಬಂದಿದೆ.

ವೆಲ್ಲೂರು ಸೆರೆಮನೆಯಲ್ಲಿ ಅನ್ನತ್ಯಾಗ

ವೆಲ್ಲೂರು ಸೆರೆಮನೆಯಲ್ಲಿರುವ ಡೆಟ

ಶ್ವೇತಭವನದೊಡನೆ ವಿಚಾರ ವಿನಿಮಯ

ವಿಜಯಲಕ್ಷ್ಮಿ ಪಂಡಿತರಿಗೆ ಚೀನದ ಆಹ್ವಾನ

ಮೈಸೂರಲ್ಲಿ ರಾಜೇಂದ್ರ ಪ್ರಸಾದರು

ನ್ಯಾಗಳು ತಮ್ಮ ವರ್ಗೀಕರಣದ ಬಗ್ಗೆ ಅಸಂತುಷ್ಟರಾಗಿ ಅನ್ನತ್ಯಾಗವನ್ನು ಕೈಕೊಂಡಿರುವರೆಂದು ತಿಳಿದುಬಂದಿದೆ

ಡಾಕಾ ದಂಗೆಯಲ್ಲಿ ೪೧೮ ಜನರ ಬಂಧನ

ಡಾಕಾದಲ್ಲಿ ಉಂಟಾದ ದಂಗೆಯ ನಿಮಿತ್ತದಲ್ಲಿ ಇದು ವರೆಗೆ ೪೧೮ಕ್ಕೆ ಮಿಕ್ಕಿದ ಜನರನ್ನು ಬಂಧಿಸಲಾಗಿದೆ

ವಿಜಯಲಕ್ಷ್ಮಿ ಪಂಡಿತ್

ಸೆರೆಮನೆಯಿಂದ ಬಿಡುಗಡೆ ಹೊಂದಿದ ವಿಜಯಲಕ್ಷ್ಮಿ ಪಂಡಿತರಿಗೆ ಚೀನದಿಂದ ಆಹ್ವಾನ ಬಂದಿದೆ

ಅವರು ಮಹಾತ್ಮರನ್ನೂ ಪಂಡಿತ ನೆಹರೂರವರನ್ನೂ ಕಂಡು ಮಾತನಾಡಿದರು

ಡಿಫೆನ್ಸ್ ಕಾನೂನಿನ ದುರುಪಯೋಗ

ಇಂಡಿಯಾ ಡಿಫೆನ್ಸ್ ಕಾನೂನಿನ ದುರುಪಯೋಗ ನಡೆದಿದೆಯೆಂದು ಕೇಂದ್ರ ಎಸೆಂಬ್ಲಿಯಲ್ಲಿ ಒಂದು ಸೂಚನೆ ಬಂತು. ಅದಕ್ಕೆ ಅಧ್ಯಕ್ಷರು ಅಪ್ಪಣೆ ಕೊಡಲಿಲ್ಲ.

ಶ್ರೀ ಹುಕ್ಕೇರಿಕರರ ಬಂಧನ

'ನಮ್ಮ ಪರಿಸ್ಥಿತಿ ಮತ್ತು ನಮ್ಮ ಕರ್ತವ್ಯ' ಎಂಬೀ ಪುಸ್ತಕವನ್ನು ಮುದ್ರಿಸಿದಕ್ಕಾಗಿ ಶ್ರೀ ರಾಮರಾವ ಹುಕ್ಕೇರಿಕರರನ್ನು ಸಂರಕ್ಷಕ ಕಾಯಿದೆಯನ್ವಯ ಬಂಧಿಸಿರುವರು. ಅವರಿಗೆ ಕೇಳಿದ ೧೨೦೦ ರೂ ಜಾಮೀನು ಕೊಡಲಾಗಿದೆ

ರಾಜಕೀಯ ಕೈದಿಗಳ ಸಂದರ್ಶನಕ್ಕೆ ನಿಯಮ

ಬಳ್ಳಾರಿ ಮತ್ತು ಆಲಿಪುರಂ ಜೈಲಿನಲ್ಲಿ

ಆಲಿಪುರಂ ಜೈಲಿನಲ್ಲಿ ಬುಧವಾರ ಮತ್ತು ಶನಿವಾರ, ಬಳ್ಳಾರಿ ಜೈಲಿನಲ್ಲಿ ಮಂಗಳವಾರ ಮತ್ತು ಶನಿವಾರ ಮಾತ್ರ ಭೇಟಿಯಾಗಬಹುದು. —ಮಧ್ಯಾಹ್ನ ೧೧ ಗಂಟೆಯೊಳಗೆ ಜೈಲಿನ ಮುಂದಿರುವ ಡಬ್ಬಿಯಲ್ಲಿ ಅರ್ಜಿ ಹಾಕಬೇಕು.

ಎಲ್ಲಾ ಸರಿಯಿರುವ 16 ಮಂದಿಗೆ ಬಹುಮಾನಕೆ ಕೊಡಲಾಗುವುದು

ಭದ್ರತೆಯ ಇನಾಮು **ಸ್ಪರ್ಧೆ ನಂಬ್ರ 23**

ಮಾತ್ರವಲ್ಲದೆ, ಪೆಟ್ಟಿನ ರೂ. ೫೧೦ ಇನಾಮು ಯಾರ ಮೊದಲನೆಯ ಅಡ್ಡ ಸಾಲು ಮೊದಲನೆಯ ಎರಡು ಅಂಕೆಗಳು ನಮ್ಮ ಉತ್ತರಕ್ಕೆ ಸರಿಯಾಗಿ ಸೇರುವುದೋ ಅವರಿಗೆ ಕೊಡಲಾಗುವುದು. ಮತ್ತೆ ಯಾರ ಯಾವುದಾದರೊಂದು ಸಾಲು ನಮ್ಮ ಉತ್ತರದ ಸಾಲಿಗೆ ಸಮನಿರುತ್ತದೋ ಅವರಿಗೆ ರೂ 20 ಕನ್ಸೊಲೇಶನ್ ಪ್ರೈಸ್ ಕೊಡಲಾಗುವುದು. 1 ಮೊದಲನೆಯ ಎರಡು ಅಡ್ಡ ಗೆರೆಯ ಸಾಲುಗಳಿಗೆ ಸಮವಿದ್ದರೆ ಅಥವಾ 2 ಯಾವುದೇ ಎರಡು ಮೇಲಿಂದ ಕೆಳಗಿನ ಗೆರೆಯ ಸಾಲುಗಳು ಅಥವಾ ಅಡ್ಡ ಸಾಲುಗಳು, ಕ್ರಮವಾಗಿ ನಮ್ಮ ಉತ್ತರದ ಯಾವುದೇ ಎರಡು ಮೇಲಿಂದ ಕೆಳಗಿನ ಗೆರೆಯ ಸಾಲುಗಳಿಗೆ ಅಥವಾ ಅಡ್ಡ ಸಾಲುಗಳಿಗೆ ಸರಿಹೋಗುವುದೋ ಅಂಥವರಿಗೆ ರೂ 300 ಕೊಡಲಾಗುವುದು. 2ರಿಂದ 17ರ ವರೆಗೆ ಅಂಕೆಗಳನ್ನು ಈ ಚೌಕದಲ್ಲಿ, ಪ್ರತಿಯೊಂದು ಸಾಲಿನ ಅಂಕೆಗಳು ಮತ್ತು ಎರಡು ಮೂಲೆಯಿಂದ ಎದುರು ಮೂಲೆಗೆ ಹೋಗುವ ಕೂಡಿ 38 ಆಗುವಂತೆ ಜೋಡಿಸಿರಿ. ಪ್ರತಿಯೊಂದು ಅಂಕೆಯನ್ನು ಒಂದು ಸಲ ಮಾತ್ರ ಉಪಯೋಗಿಸಬಹುದು. ಉತ್ತರ ಕಳುಹಿಸುವ ಕಡೆಯ ತಾರೀಕು 26-4-41 ಫಲಿತಾಂಶವು ಪ್ರಕಟವಾಗುವ ತಾರೀಕು 6-5-41

ಪ್ರವೇಶ ಫೀಸು ಪ್ರತಿಯೊಂದಕ್ಕೆ ರೂ 1 3 ಉತ್ತರಗಳಿಗೆ ರೂ 2 8 ಉತ್ತರಗಳಿಗೆ ರೂ 5 ಮೇಲೆ ಹೇಳಿದ ನಿಯಮದಂತೆ ಎಷ್ಟೇ ಉತ್ತರಗಳನ್ನು ಕಾಗದದಲ್ಲಿ ಬರೆದು ಕಳುಹಿಸಿದುದಲ್ಲಿ ಸ್ವೀಕರಿಸಲಾಗುವುದು. ಹಣವನ್ನು ಮನಿ ಆರ್ಡರ್ ಮೂಲಕ ಇಲ್ಲವೇ ಇಂಡಿಯನ್ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸುವುದು

ಕಡಿಮೆ ಪಕ್ಷದಲ್ಲಿ ಎರಡು ಸಾವಿರ ರೂಪಾಯಿಗಳ ಇನಾಮು ಪ್ರತಿಯೊಂದು ಶುದ್ಧ ಉತ್ತರಕ್ಕೆ ಕೊಡಲಾಗುವುದು. ಶುದ್ಧ ಉತ್ತರವು ಬೊಂಬಾಯಿಯ ಪ್ರಾಮುಖ್ಯ ಬೇಂಕೊಂದರಲ್ಲಿ ಡಿಪೋಜಿಟ್ ಇಡಲಾಗಿದೆ ಪ್ರತಿಯೊಂದು ಸ್ಪರ್ಧೆಯ ಇನಾಮುಗಳು ರೂ. 32,000 ಆಗುತ್ತವೆ. ಇದನ್ನು ಇನಾಮು ಪಡೆದ ಜನರ ಸಂಖ್ಯೆಯನ್ನು ಹೊಂದಿಕೊಂಡು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು. ಫಲಿತಾಂಶ ತಿಳಿಯುವರೇ ನಿಮ್ಮ ವಿಳಾಸ ಬರೆದ ಸ್ಟಾಂಪು ಹಚ್ಚಿದ ಲಕೋಟೆಯೊಂದನ್ನು ಉತ್ತರದೊಡನೆ ಕಳುಹಿಸಿರಿ. ಮೇನೇಜರರ ನಿರ್ಧಾರವೇ ಕೊನೆಯ ನಿರ್ಧಾರ

ಒಟ್ಟು ಸಂಖ್ಯೆ 42ರ ಉತ್ತರ

1ನೆಯ ಸಾಲು	4, 15, 16, 17
2ನೆಯ ಸಾಲು	9, 18, 13, 2
3ನೆಯ ಸಾಲು	15, 8, 13, 6
4ನೆಯ ಸಾಲು	14, 11, 10, 7

ಪ್ರವೇಶ ಮತ್ತು ಹಣ ಕಳುಹಿಸುವ ವಿಳಾಸ—

The Manager,
Presidency Commercial Syndicate
(S.W.N.) Mumbadevi, BOMBAY, 3,

ಪುರುಷೋತ್ತಮ ದಾಸ ತಂಡನರ ಬಂಧನ

ಸಂಯುಕ್ತ ಪ್ರಾಂತ ಎಸೆಂಬ್ಲಿ ಸ್ಪೀಕರರಾದ ಶ್ರೀ ಪುರುಷೋತ್ತಮದಾಸ ಟಂಡನರವರನ್ನು ಡಿಫೆನ್ಸ್ ಕಾನೂನಿನ ಪ್ರಕಾರ ಬಂಧಿಸಿ ನೈನಿ ಜೈಲಿನಲ್ಲಿ ಸ್ಥಾನ ಬದ್ಧರನ್ನಾಗಿ ಇಡಲಾಗಿದೆ

ಜಿಲ್ಲಾ ಸಮಾಚಾರ

ಉಪಾಧ್ಯಾಯರ ಸಭೆ:— ಜಿಲ್ಲಾ ಅಧ್ಯಾಪಕರ ಸಂಘದ ವಾರ್ಷಿಕೋತ್ಸವವು ಕೆ ಗೋಪಾಲರಾಯರ ಸನ್ಮಾನ ಅಧ್ಯಕ್ಷತೆಯಲ್ಲಿ ಸೈಂಟ್ ಜೋನ್ಸ್ ಹಾಯಿ ಶಾಲೆಯಲ್ಲಿ ಜರಗಿತು. ಕೇಂದ್ರ ಶಾಲೆಯ ಮಕ್ಕಳಿಂದ ವಿವಿಧ ವಿನೋದಾವಳಿಗಳಿದ್ದುವು. ಅಧ್ಯಕ್ಷರ ಭಾಷಣವಾದ ನಂತರ ಉಪಹಾರ ಕೂಟದೊಂದಿಗೆ ಅಂದಿನ ಸಮಾರಂಭವು ಕೊನೆಗೊಂಡಿತು.

ಮಂಗಳೂರಲ್ಲಿ ರಾಷ್ಟ್ರೀಯ ಸಪ್ತಾಹ

ಮಂಗಳೂರಲ್ಲಿ ರಾಷ್ಟ್ರೀಯ ಸಪ್ತಾಹವು ವಿಶೇಷ ಕಾರ್ಯಕ್ರಮಗಳಿಂದ ಬಹಳ ಉತ್ಸಾಹಪೂರ್ವಕ ಆಚರಿಸಲ್ಪಟ್ಟಿತು. ಖಾದಿ ದಿನ, ಕೂಲಿಗಾರರ ದಿನ, ಮಹಿಳೆಯರ ದಿನ ಮೊದಲಾದ ಕಾರ್ಯಕ್ರಮಗಳು ಇದ್ದುವು. ಶ್ರೀಗಳಾದ ಮಲ್ಯ ಪಿಲ್ಲೆ, ಬಾಳಿಗ, ಕೃಷ್ಣರಾವ್, ನಾರಾಯಣರೈ ಮೊದಲಾದವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಬಂಧಿತರಾಗದೆ ಬಂದ ಸತ್ಯಾಗ್ರಹಿಗಳೂ ಇದರಲ್ಲಿ ಸೇರಿದ್ದರು

ಫಲಿಮಾರು

ಶ್ರೀ ಕರಿಯಣ್ಣ ಶೆಟ್ಟರನ್ನು ಸೆರೆಹಿಡಿಯಲಿಲ್ಲ

ಇದೇ ತಾ ೪ರಂದು ಫಲಿಮಾರು ಶ್ರೀ ಮಹಾಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿ ಪಡುಬಿದ್ರೆ ಸಾಹುಕಾರರಾದ ಶ್ರೀ ಕೆ ಕರಿಯಣ್ಣ ಶೆಟ್ರು ಯುದ್ಧವಿರೋಧ ಘೋಷಣೆಯೊಂದಿಗೆ ಸತ್ಯಾಗ್ರಹವನ್ನು ಹೂಡಿದರು. ಸುಮಾರು ಮೂರು ಸಾವಿರಕ್ಕೂ ಮಿಕ್ಕಿದ ಜನಸಮೂಹವು ಮೊದಲೇ ನೆರೆದಿತ್ತು. ಕೇಂದ್ರ ಕಾಂಗ್ರೆಸು ಕಮಿಟಿಯವರು ಸತ್ಯಾಗ್ರಹಿಯನ್ನು ಎದುರ್ಗೊಂಡು ಸಂಭ್ರಮದ ಸ್ವಾಗತವಿತ್ತು ಸ್ಥಳೀಕ ಮಠಕ್ಕೆ ಕರೆತಂದರು. ಶ್ರೀ ಪಾದಂಗಳವರು ಫಲಮಂತ್ರಾಕ್ಷತೆಯನ್ನು ಕೊಟ್ಟು ಆಶೀರ್ವದಿಸಿದ ಬಳಿಕ ಜಯಕಾರದೊಂದಿಗೆ ದೇವಸ್ಥಾನದ ಎದುರುಗಡೆಗೆ ಬಂದು ಸತ್ಯಾಗ್ರಹಿಯು ತುಳುವಿನಲ್ಲಿಯೂ, ಕನ್ನಡದಲ್ಲಿಯೂ ಹಿಂದಿಯಲ್ಲಿಯೂ ಯುದ್ಧ ವಿರೋಧ ಘೋಷಣೆಯನ್ನು ಓದಿಹೇಳಿದರು. ನೆರೆದ ಜನರು ಅರ್ಪಿಸಿದ ಪುಷ್ಪಮಾಲೆಗಳು ಸತ್ಯಾಗ್ರಹಿಯ ಮುಖವೇ ಕಾಣದಷ್ಟು ವಿಶೇಷವಾಗಿತ್ತು. ಪೋಲೀಸರು ಹಾಜರಿದ್ದರೂ ದಸ್ತಗಿರಿ ಮಾಡಲಿಲ್ಲ.

ಶಾಲಾ ಪುಸ್ತಕಗಳು

*ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ. ಎರಡನೆಯ ಆವೃತ್ತಿಯು ಹೊರಬೀಳಲಿದೆ

ಬೆಲೆ ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ **ಬೆಲೆ 0-2-0**

ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ **ಬೆಲೆ 0-2-6**

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕಥನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು, ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು, ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ. ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು, ಮೋದಬೋಧಪ್ರದಗಳೆಂದು.

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ ಬಿ ಶ್ರೀನಿವಾಸರಾವ್ ಮತ್ತು ಬಿ ದೂಮಪ್ಪನವರಿಂದ ರಚಿತವಾದದು

೪ನೆಯ ತರಗತಿಗೆ **ಬೆಲೆ** 0 4 0 , ೫ನೆಯ ತರಗತಿಗೆ **ಬೆಲೆ** 0 5 0

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿದೆ. ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮಾತ್ರ ಮೊದಲಾಗಿ ರಚಿತವಾದುವು ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ, ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ.

ಬೆಲೆ: ೪, ೫ನೆಯ ತರಗತಿಗೆ 0—1—6 *೬ನೆಯ 0—2—0
*೭ನೆಯ 0—2—6 *೮ನೆಯ 0—3—0

ಸಿರಿಗನ್ನಡ ಪಾಠಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್. ವಿ. ಎಸ್ ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ. ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ, ತರುವಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪುಸ್ತಕದ ರಚನೆಯಾಗಿರುತ್ತದೆ.

ಬೆಲೆ 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟ, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು.

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 6

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ ಸೂ ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯವನ್ನು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ವಿಕ್ಟೋರಿಯಾ ರಾಣಿ ರೂಪಾಯಿ

ವಿಕ್ಟೋರಿಯಾ ರಾಣಿಯವರ ಮುಖ ಮುದ್ರೆಯುಳ್ಳ ರೂಪಾಯಿಗಳನ್ನೂ ಮತ್ತು ಅರ್ಧ ರೂಪಾಯಿಗಳನ್ನೂ ಚಲಾವಣೆಯಿಂದ ವಾಪಾಸು ತೆಗೆದುಕೊಳ್ಳುವುದು.

೧೯೪೦ನೆಯ ಇಸವಿ ಅಕ್ಟೋಬರ್ ೧೧ನೆಯ ತಾರೀಕಿನಲ್ಲಿ ಇಸ್ತಿಹಾರುನಾಮೆಯ ಮೂಲಕ ಪ್ರಕಟಿಸಿರುವ ಮೇರೆಗೆ ವಿಕ್ಟೋರಿಯಾ ರಾಣಿಯವರ ಮುಖ ಮುದ್ರೆಯುಳ್ಳ ರೂಪಾಯಿಗಳನ್ನೂ ಅರ್ಧ ರೂಪಾಯಿಗಳನ್ನೂ ಚಲಾವಣೆಯಿಂದ ವಾಪಾಸು ತೆಗೆದುಕೊಳ್ಳಲಾಗುವುದೆಂದು ಗೊತ್ತಾಗಿರುವುದು ಸರಿಯಷ್ಟೆ. ಈ ನಾಣ್ಯಗಳನ್ನು ಎಲ್ಲ ಸರ್ಕಾರಿ ಖಜಾನೆಗಳಲ್ಲಿಯೂ ಮತ್ತು ಪೋಸ್ಟಾಫೀಸುಗಳಲ್ಲಿಯೂ, ೧೯೪೧ನೆಯ ಇಸವಿ ಮಾರ್ಚ ೩೧ನೆಯ ತಾರೀಕಿನ ಲಾಗಾಯತು ಆರು ತಿಂಗಳ ವರೆಗೆ ಎಂದರೆ, ೧೯೪೧ನೆಯ ಇಸವಿ ಸೆಪ್ಟೆಂಬರ ೩೦ನೆಯ ತಾರೀಕಿನ ವರೆಗೆ ತೆಗೆದುಕೊಂಡರೂ ಸಹ, ಅವುಗಳನ್ನು ೧೯೪೧ನೆಯ ಇಸವಿ ಮಾರ್ಚ ೩೧ನೆಯ ತಾರೀಕಿನ ವರೆಗೆ ಮಾತ್ರ ಚಲಾವಣೆಯಲ್ಲಿ ಅಂಗೀಕರಿಸಲಾಗುವುದು. ೧೯೪೧ನೆಯ ಇಸವಿ ಅಕ್ಟೋಬರ್ ೧ನೆಯ, ತಾರೀಕಿನ ತರುವಾಯ ಬೇರೆ ನೋಟೀಸು ಸಾದರಾಗುವ ವರೆಗೆ ಬೊಂಬಾಯಿಯಲ್ಲಿಯೂ ಮತ್ತು ಕಲ್ಕತ್ತಾದಲ್ಲಿಯೂ ಭರತಖಂಡ ಇಂಡಿಯಾ ದೇಶದ ರಿಜರ್ವ್ ಬ್ಯಾಂಕಿನ ('ಇಷ್ಯೂ') ಶಾಖೆಯ ಆಫೀಸುಗಳಲ್ಲಿ ಈ ನಾಣ್ಯಗಳನ್ನು ತೆಗೆದುಕೊಳ್ಳಲಾಗುವುದು. ಆದುದರಿಂದ, ವಿಕ್ಟೋರಿಯಾ ರಾಣಿಯವರ ಮುಖ ಮುದ್ರೆಯುಳ್ಳ ರೂಪಾಯಿಗಳನ್ನೂ ಅರ್ಧ ರೂಪಾಯಿಗಳನ್ನೂ ಇಟ್ಟುಕೊಂಡಿರುವ ಸಮಸ್ತ ಜನರೂ ಮುಂದೆ ತಾವು ತೊಂದರೆಗೊಳಗಾಗದಂತೆ ಇರುವುದು. ಆದಷ್ಟು ಶೀಘ್ರದಲ್ಲಿ ಈ ನಾಣ್ಯಗಳನ್ನು ಪಾವತಿಗಾಗಿ ತಂದುಕೊಡತಕ್ಕದ್ದು ಯುಕ್ತವಾಗಿದೆ.

ಬೆಂಗಳೂರು

ವಸಂತ ಸಾಹಿತ್ಯೋತ್ಸವ

ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಪ್ರಾಂತ ಸಮಿತಿಯವರು ಬೆಂಗಳೂರಲ್ಲಿ ೧೧ರಿಂದ ೧೩ರ ವರೆಗೆ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ವಸಂತ ಸಾಹಿತ್ಯೋತ್ಸವ ನಡೆಸುತ್ತಾರೆ. ಮೈಸೂರು ಸಂಸ್ಥಾನದ ದ್ವಿತೀಯ ಸಚಿವರಾದ ರಾಜಮಂತ್ರಪ್ರವೀಣ ಕೆ. ಅನಂತರಾಮನ್ ಅವರು ಏಪ್ರಿಲ್ ೧೧ನೆ ಗುರುವಾರ ಬೆಳಗ್ಗೆ ೮-೩೦ಕ್ಕೆ ಪ್ರಾರಂಭೋತ್ಸವ ನೆರವೇರಿಸುವರು. ಶ್ರೀಗಳಾದ ಎಂ. ಗೋವಿಂದ ಪೈ, ಡ. ರಾ. ಬೇಂದ್ರೆ, ಗುಂಡಪ್ಪ, ಅನಂತಕೃಷ್ಣ ಶರ್ಮ, ಎಂ. ಎಚ್. ಕೃಷ್ಣ, ಸಿ. ಕೃಷ್ಣ ಶಾಸ್ತ್ರಿ ಮೊದಲಾದವರ ಭಾಷಣಗಳೂ ಕಾವ್ಯ ವಾಚನಗಳೂ, ಸಂಗೀತ ನಾಟಕ ಮೊದಲಾದ ಕಾರ್ಯಕ್ರಮಗಳೂ ಇವೆ.

ಗಂಡರೊಂದಿಗೆ ಹೆಂಡರ ಅಸಹಕಾರ

ಶ್ರೀಮತಿ ಎಡ್ನ ಬಲ್ಲಾರ್ಜ್ ಎಂಬ ಅಮೇರಿಕದ ಒಬ್ಬ ವಿಧವೆ ಒಂದು ವಿಚಿತ್ರ ಸಂಘವನ್ನು ಸ್ಥಾಪಿಸಿಕೊಂಡು ಲೋಕ ಪ್ರಖ್ಯಾತಿಯನ್ನು ಪಡೆದಿರುವಳು. ಇವಳು ತನ್ನ ದಿವಂಗತನಾದ ಸ್ಟೆಂಟ ಜರ್ಮನ ಎಂಬಾತನೇ ದೇವರು ಎಂಬ ಕುರುಡು ನಂಬಿಕೆಯನ್ನು ಹುಟ್ಟಿಸಿ ಯಾರು ಇವನ ಅನುಯಾಯಿಗಳಾಗುವರೋ ಅವರು ನಿಜವಾಗಿಯೂ ಚಿರಂಜೀವಿಗಳಾಗುವರು ಎಂದು ಬೋಧಿಸಿದ್ದಾಳೆ. ಅನೇಕ ಜನರು ಇವಳ ಬೋಧನೆಗೆ ಮರುಳಾಗಿ ತಮ್ಮ ಆಸ್ತಿಪಾಸ್ತಿ ಚಂಬುಚರಿಗೆಗಳನ್ನೆಲ್ಲಾ ಅವಳ ಸಂಘಕ್ಕೆ ಧಾರಾದತ್ತ ಮಾಡಿ ಮೋಸಹೋಗಿರುವರು. ಅವಳು ಈ ಜನರಿಂದ ದಕ್ಕಿಸಿಕೊಂಡ ಸಂಪತ್ತು ಹಳೂವರೆ, ಎಂಟು ಲಕ್ಷ ಪವನುಗಳಷ್ಟಾಗಿರುವದಂತೆ. ತನ್ನ ಗಂಡನಿಗೆ ನೀರುಳ್ಳಿ ಬೆಳ್ಳುಳ್ಳಿ ಎಂದರೆ ಬಹಳ ಅಸಹ್ಯವಾಗುತ್ತಿತ್ತಾದ್ದರಿಂದ ಅವನ ಅನುಯಾಯಿಗಳೂ ಅವನ್ನು ತಿನ್ನಬಾರದೆಂದು ಅವಳು ಹೇಳುತ್ತಿರುವಳು ಮಾತ್ರವಲ್ಲ, ಹೆಂಡಂದಿರು ಗಂಡಂದಿರ ಸಹವಾಸದಲ್ಲಿರಲೂ ಬಾರದೆಂದು ಅವಳು ಬೋಧಿಸುತ್ತಿರುವಳು. ಯಾಕಂದರೆ ಗಂಡರೊಂದಿಗೆ ಹೆಂಡರ ಸಂಸಾರವು ಬಹಳ ಕಷ್ಟವಂತೆ! ಈಗ ಇವಳಿಂದ ವಂಚಿತರಾಗಿ ತಮ್ಮ ಸರ್ವಸ್ವವನ್ನು ಕಳಕೊಂಡವರೂ, ಹೆಂಡಂದಿರ ಸುಖ ಸಹವಾಸವು ದೊರೆಯದೆ, ವಿರಹ ವೇದನೆಯಿಂದ ನರಳುತ್ತಿರುವ ಅವರ ಗಂಡಂದಿರೂ, ಕೂಡಿ ಈ ವಿಚಿತ್ರ ಹೆಂಗಸಿನ ಮೇಲೆ ದಾವೆ ಮಾಡಿದ್ದಾರೆ. ಇವಳ ದುರ್ಬೋಧನೆಗೆ ಒಳಗಾಗಿ ಹೆಂಡಂದಿರ ಗಂಡಂದಿರೊಂದಿಗೆ ಅಸಹಕಾರ ಮಾಡುತ್ತಿರುವರೆಂದು ಅಮೇರಿಕದಲ್ಲಿ ಗೋಳು ಎದ್ದಿರುವುದು.

★ ವಿಚಿತ್ರ-ಪ್ರಪಂಚ ★

ಜಗತ್ತಿನ ಪುರಾತನ ಲೋಹಸ್ತಂಭ

ಜಗತ್ತಿನಲ್ಲೆಲ್ಲಾ ಅತಿ ಪುರಾತನವಾದ್ದೆಂದು ಪ್ರಸಿದ್ಧವಾಗಿರುವ ಲೋಹಸ್ತಂಭವು ದಿಲ್ಲಿಯ ಸಮೀಪದಲ್ಲಿದೆ. ಇದು ಎರಕವಾದ್ದು ಕ್ರಿಸ್ತ ಶಕ ೩೧೦ರಲ್ಲಿ—ಅಂದರೆ ಈಗ ೧೬೩೦ ವರ್ಷಗಳ ಹಿಂದೆ ಎಂದು ಹೇಳುತ್ತಾರೆ. ಇದು ಈಗಿರುವ ಸ್ಥಾನದಲ್ಲಿ ಕ್ರಿ. ಶ ೧೦೫೨ರಲ್ಲಿ ಸ್ಥಾಪಿಸಲ್ಪಟ್ಟಿತೆಂಬುದಕ್ಕೆ ಐತಿಹಾಸಿಕ ಆಧಾರಗಳಿವೆ. ಇದರಲ್ಲಿರುವ ಒಂದು ಆಶ್ಚರ್ಯದ ಸಂಗತಿ ಏನಂದರೆ ಕಂಬವು ಲೋಹನಿರ್ಮಿತವಾದರೂ, ಅದಕ್ಕೆ ಮಣ್ಣು ಹಿಡಿಯುವುದಿಲ್ಲ! ಇದು ೨೨ ಅಡಿ ಎತ್ತರವಾಗಿದೆ. ಇದರ ಭಾರ ಆರು ಟನ್ ಅಂದರೆ ೪೮೦ ಮಣ ಆಗಿರಬಹುದೆಂದು ಅಂದಾಜು ಇದೆ. ಭಾರತೀಯರು ಬಹು ಹಿಂದಿನಿಂದಲೂ ಲೋಹ ಕೆಲಸಗಳಲ್ಲಿ ನಿಪುಣರಾಗಿದ್ದರೆಂಬುದಕ್ಕೆ ಇದು ಒಂದು ಉತ್ತಮ ಉದಾಹರಣೆಯಾಗಿದೆ.

◇ ◇

ಹಿಟ್ಲರ್ ಸರಕಾರ ಸ್ತ್ರೀಯರ ಮುಂಡನ ಮಾಡುವುದು

ಯುದ್ಧದ ದೆಸೆಯಿಂದ ಜರ್ಮನಿಯಲ್ಲಿ ಉಣ್ಣೆಯ ಕ್ರಯ ಬಹಳ ಏರಿಬಿಟ್ಟಿದೆ. ಅಷ್ಟಾಗಿಯೂ ಅದು ದೊರೆಯುವುದು ಕಷ್ಟವಾಗಿದೆ. ಸೈನಿಕರಿಗೆ ಬೇಕಾದ ಉಣ್ಣೆ ವಸ್ತ್ರಗಳಿಗೆ ಅಲ್ಲಿ ಬಹಳ ಅಭಾವವಿದೆ. ಆದ್ದರಿಂದ ಹಿಟ್ಲರ್ ಸರಕಾರವು ಒಂದು ಆಜ್ಞಾಪತ್ರವನ್ನು ಹೊರಡಿಸಿ ಕ್ಷೌರ ಮಾಡಿದ ಕೂದಲನ್ನು ಸುಮ್ಮಗೆ ಒಗೆಯಬಾರದೆಂದೂ, ಗಂಡಸರಂತೆ ಹೆಂಗಸರೂ ಕ್ಷೌರಮಾಡಿಸಿಕೊಳ್ಳಬೇಕೆಂದೂ ಹೇಳಿದೆ. ಈ ತಲೆಕೂದಲುಗಳಿಂದಲೇ ಅಲ್ಲಿ ಉಣ್ಣೆ ವಸ್ತ್ರ ಮಾಡಲಿಕ್ಕೆ ಸರಕಾರ ಆಲೋಚಿಸಿದೆ. ಆದ್ದರಿಂದ ಜರ್ಮನ್ ಸ್ತ್ರೀಯರ ತಲೆಗಳೆಲ್ಲ ಬೋಳಾಗುತ್ತಿರುವುವು! ಯಾರು ಇದನ್ನು ವಿರೋಧಿಸುವರೋ—ಅವರ ತಲೆಗಳನ್ನು ಬಲಾತ್ಕಾರದಿಂದ ಬೋಳಿಸಿ ಮತ್ತೆ ಅವರನ್ನು ಕಳುಹಿಸುತ್ತಿರುವರು. ಯುದ್ಧವು ಇನ್ನೂ ಒಂದೆರಡು ವರ್ಷಗಳ ಕಾಲ ನಡೆದರೆ ಮತ್ತೆ ಜರ್ಮನಿಯಲ್ಲಿ ಎಲ್ಲಿಯೂ ಕೂದಲು ರೋಮಗಳಿಗೆ ಸರಕಾರದ ಗಿರಾಕಿಯು ಆಗುವುದೋ!

◇ ◇

ಹುಳುಹುಪ್ಪಟೆಗಳಿಂದ ಸಾರಾಯಿ

ಸಾರಾಯಿ ಕುಡಿಯುವಿಕೆ ಎಷ್ಟು ಅಸಹ್ಯ ಎಂಬುದನ್ನು ಈ ಕೆಲವು ಸಂಗತಿಗಳಿಂದಲೂ ತಿಳಕೊಳ್ಳಬಹುದು. ಮೆಕ್ಸಿಕೋದಲ್ಲಿ ಸಾರಾಯಿ ಜೇನಿರುವೆಗಳಿಂದ ತಯಾರಿಸುತ್ತಾರೆ. ಈ ಇರುವೆಗಳ ಹೆಚ್ಚಾಗಿ ಜೇನುಕುಡಿದು ಜೀವಿಸುತ್ತವೆ. ಇವುಗಳ ಹೊಟ್ಟೆಯಲ್ಲಿ ಅವು ಕುಡಿದ ತುಂಬಾ ಜೇನು ಇರುತ್ತದೆ. ಮದ್ಯ ತಯಾರಿಸುವವರು ಈ ಇರುವೆಗಳನ್ನು ಹಿಂಗಟ್ಟಲೆ ಕ್ರಯಕ್ಕೆ ತೆಗೆದುಕೊಂಡು, ಅವನ್ನು ಜಜ್ಜಿ ಹಿಂಡುವರು. ಮತ್ತೆ ಬಟ್ಟೆಯಲ್ಲಿ ಸೋಸಿದ ರಸವನ್ನು ಕೆಲವು ದಿನ ಇಡುವರು. ಅದು ಅಲ್ಲಿಯೇ ಕೊಳೆತು ಹುಳಿಯಾಗಿ ಸಾರಾಯಿಯಾಗುತ್ತದೆ. ಮತ್ತೆ ಈ ದೇಶದಲ್ಲಿ ಸಗಣಿಹುಳುಗಳಿಂದಲೂ ಮದ್ಯಮಾಡುವರು. ಈ ಹುಳುಗಳನ್ನು ಹಿಡಿದು ಕುದಿಯುವ ನೀರಿನಲ್ಲಿ ಬೇಯಿಸುವರು. ಮತ್ತೆ ಬೇಯಿಸಿದ ಈ ಹುಳುಗಳನ್ನು ಪಾತ್ರಗಳಲ್ಲಿ ಹಾಕಿ ಹಿಂಡುವರು. ಮತ್ತೆ ಅದನ್ನು ಹುಳಿಯಾಗುವಂತೆ ಕೆಲವು ದಿನ ಇಡುವರು. ಇದು ಒಂದು ಜಾತಿಯ ವಿಸ್ಕಿ ಆಗುವುದು. ಇದು ಬಹಳ ಅಮಲುಂಟುಮಾಡುವದಾಗಿದೆ. ಕೆಂಪಿರುವೆಗಳಿಂದಲೂ ವಿನಿಗರ್ ಎಂಬ ಮದ್ಯವನ್ನು ತಯಾರಿಸಲಿಕ್ಕಾಗುತ್ತದೆ. ಯಾಕೆಂದರೆ ಇವುಗಳು ಕಚ್ಚಿದಾಗ ಹೊರಬಿಡುವ ಎಂಜಲಿನಲ್ಲಿ ಒಂದು ಬಗೆಯ ಏಸಿಡ್ ಇದೆ. ಸ್ವೀಡನಿನಲ್ಲಿ ಕೆಂಪಿರುವೆಯ ವಿನಿಗರವನ್ನು ಬೆರಸಿ ಅಗ್ಗದ ಬ್ರೆಂಡಿಯನ್ನು ಮಾರುತ್ತಾರೆ. ಎಷ್ಟು ಅಸಹ್ಯ!

◇ ◇

ಕಲಿಯುಗದ ಕುಂಭಕರ್ಣರು

ಅನೇಕ ಮಂದಿ ದೀರ್ಘಕಾಲ ನಿದ್ದೆಹೋಗಿ ಎಚ್ಚರಕ್ಕೆ ಬಂದ ಬಹಳ ಘಟನೆಗಳಿವೆ. ಇವರ ಈ ತರದ ದೀರ್ಘನಿದ್ರೆಗೆ ತಜ್ಞ ವೈದ್ಯರೂ ಕಾರಣಗಳನ್ನು ಹೇಳಲಾರರು. ಔಷಧಿ ಚಿಕಿತ್ಸೆಯನ್ನು ಮಾಡಲಾರರು. ಆದರೆ ಕೆಲವು ದೀರ್ಘನಿದ್ರಾರೋಗಿಗಳಿಗೆ ಈ ರೋಗವು ಅಭಿಶಾಪವಾಗುವ ಬದಲು ವರದಾನವಾಗಿ ಪರಿಣಮಿಸಿದೆ. ಡಚ್ಚಿನ ಒಬ್ಬಾತನು ಪೋಲಾಂಡು ಯುದ್ಧಕ್ಕೆ ಹೋಗುವ ಮೊದಲು ನಿದ್ದೆಹೋಗಿ ಈಗಲೂ ಎಚ್ಚರವಾಗಿರುವುದಿಲ್ಲ. ಪ್ರಪಂಚವೆಲ್ಲ ಯುದ್ಧ ಬೇನೆಯಿಂದ ನರಳುತ್ತಿದೆಯಾದರೂ ಇವನು ಮಾತ್ರ ಪರಮಸುಖವನ್ನು ಅನುಭವಿಸುತ್ತಿದ್ದಾನೆ. ನಿದ್ದೆಯಲ್ಲೇ ಇವನಿಗೆ ಡಾಕ್ಟರರು ಹಾಲು ಕೊಟ್ಟು ಸಾಕುತ್ತಿರುವರು. ಮರ್ಜೋನಿಯದಲ್ಲಿ ಓಮನ್ ಎಂಬಾಕೆ ದೀರ್ಘಕಾಲ ನಿದ್ದೆಹೋಗಿ ಕನಸಿನಲ್ಲಿಯೇ ಸಂಗೀತ ಕಲಿತವಳು. ಈಗ ಅವಳು ಸಂಗೀತ ಕಲಾ ಕುಶಲಳಾಗಿ, ಸಂಗೀತ ಕಲಿಸಿಯೇ ಜೀವನ ನಿರ್ವಾಹ ಮಾಡುತ್ತಿದ್ದಾಳೆ.

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ

BHUVANENDRA PRODUCTS LTD.,
KATAPADI, S K

Why Doctors prescribe
"BHUVANENDRA"
NARAYANA TAILA
Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!
ಯಾವ ಕಾರಣದಿಂದ?
'ಭುವನೇಂದ್ರನಾರಾಯಣ ತೈಲ'
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು
ಸ್ಥಳೀಯ ಸ್ಟಾಕಿಸ್ಟರು —
ಯು ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ರಥಬೀದಿ.
ಡಾ| ಎಮ್. ಎಸ್. ಪ್ರಭು, ಸಿ. ಸಿ ಸಿ ಬಿಲ್ಡಿಂಗ್ಸ್.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನಡ

ಹಿಂಸೆಯ ಕುಲವನ್ನು ಅಹಿಂಸೆಗೆ ಪಳಗಿಸಿದವರು!

-ಧೀರ ಪಠಾಣರ ಶೂರ ಸೇನಾನಿ ಖಾನ್ ಗಫರ್ ಖಾನ್-

'ಗಡಿನಾಡಿನ ಗಾಂಧಿ'ಯೆಂಬುದು ಹೊತ್ತ ಕೀರ್ತಿ

'ಕೆಂಪಂಗಿ'ಗಳು 'ದೇವರ ಸೇವಕ'ರಾದರು

ಅರ್ಪಿತವಾದ ಅಖಿಲ ಭಾರತ ಕಾಂಗ್ರೆಸಿನ ಅಧ್ಯಕ್ಷ ಸ್ಥಾನವನ್ನು ಎರಡೆರಡು ಬಾರಿಯೂ, ತಾನು ಅಂತಹ ಉಚ್ಚ ಸ್ಥಾನಕ್ಕೆ ಅರ್ಹತೆ ಪಡೆದಿಲ್ಲವೆಂದು, ಒಲ್ಲೆನೆಂದು, ಗೌರವವನ್ನು ಕಡೆಗಣಿಸಿ, ಕಾಂಗ್ರೆಸಿನ ಕಾರ್ಯಕ್ರಮಗಳ ಕಡೆಗೆ ಮಾತ್ರ ಮನಸ್ಸಿಟ್ಟು, ಗಡಿನಾಡಿನ ಹಿಂಸಾ ಜೀವಿಗಳಾದ ಪಠಾಣರನ್ನು ಅಹಿಂಸಾಮಯ ಸಂಗ್ರಾಮದಲ್ಲಿ ದೃಢ ನಿರ್ಧಾರದಿಂದ ವೀರ ಸೈನಿಕರಾಗಿ ಪಳಗಿಸುವ ಮಹಾಪುರುಷರು, 'ಗಡಿನಾಡಿನ ಗಾಂಧಿ' ಎಂದು ಕೀರ್ತಿ ಹೊತ್ತ ಖಾನ್ ಅಬ್ದುಲ್ ಗಫರ್ ಖಾನರು. ಅವರನ್ನು ಇಂದು ಭಾರತದ ಅತ್ಯಂತವೂ ಕೇಳದವರು, ತಿಳಿಯದವರು ಯಾರೂ ಇರಲಾರರು. ಅಬ್ದುಲ್ ಗಫರ್ ಖಾನರ ಜೀವನವೆಂಬುದು ದೃಢ ತಪಸ್ಸಿನ ವೀರ ಇತಿಹಾಸವೇ ಆಗಿದೆ. ಒಳ್ಳೆಯ ಪ್ರಭಾವಶಾಲಿಯಾದ ಕುಲೀನ ಪಠಾಣ ವಂಶದಲ್ಲಿ ಹುಟ್ಟಿ, ಅತುಲ ಸಂಪತ್ಸುಖದಲ್ಲಿ ಬೆಳೆದು ಹತ್ತಾರು ಜನರ ಮೇಲೆ ತನ್ನ ನಿರಂತರ ಪ್ರಭಾವವನ್ನು ಮೆರೆಸಬಲ್ಲ ಶಕ್ತಿವಂತರಾದರೂ ಇಂದು ಅವರು ನಿಜವಾಗಿಯೂ ತಾಪಸ ಜೀವನವನ್ನೇ ಅನುಸರಿಸುತ್ತಿದ್ದಾರೆ. 'ಗಡಿನಾಡಿನ ಗಾಂಧಿ' ಎಂಬ ಹೆಸರುಳ್ಳ ಆ ಮಹಾ ವ್ಯಕ್ತಿಯ ಹೆಸರು (ಕೀರ್ತಿ)ಗಳು, ಮಹಾತ್ಮಾಜಿಯವರ ನಂತರ ಪ್ರಸಿದ್ಧರಾದ ದೇಶಸೇವಕರ ಸಾಲಿನಲ್ಲಿ ಅಗ್ರಗಣ್ಯವಾಗಿ ದೇಶದ ಉದ್ದಗಲಗಳಲ್ಲಿ ಪ್ರಖ್ಯಾತವಾಗಿದೆ.

ಖಾನ್ ಎಂದರೆ, ಒಂದು ಪಂಗಡದ ಮುಖ್ಯಸ್ಥ ಸಂದರ್ಭ. ಅಬ್ದುಲ್ ಗಫರ್ ಖಾನರ ತಂದೆ, ಬೆಹರಾಮ್ ಖಾನರು ಭಾರತದ ಗಡಿನಾಡಾದ ಪೇಶಾವರ ಜಿಲ್ಲೆಯ ಉತ್ಮಾಂಜೈ ಗ್ರಾಮದ ಮುಖ್ಯಸ್ಥರು, ಗುರಿಕಾರರು ಆಗಿದ್ದರು. ಖಾನ್ ಎಂಬುದು ಅವರ ವಂಶಕ್ಕೆ ಸಂದ ಗೌರವದ ಬಿರುದು. ಗಫರ್ ಖಾನರ ಅಣ್ಣಂದಿರಾದ ಡಾ|| ಖಾನ್ ಸಾಹೇಬರೂ ಒಳ್ಳೆಯ ಪ್ರಭಾವಶಾಲಿಗಳು; ಸೈನ್ಯದಲ್ಲಿ ಕೆಲಸಮಾಡಿದವರು; ತಮ್ಮನೊಡನೆ ಸೆರೆಮನೆಯನ್ನೂ ಕಂಡವರು; ಮತ್ತೆ ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಿದಾಗ, ಗಡಿನಾಡಿನ ಪ್ರಧಾನ ಮಂತ್ರಿಗಳಾಗಿಯೂ ಮೆರೆದವರು.

ಗಫರ್ ಖಾನರು ಅಲಿಘರ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಮೌಲಾನಾ ಅಬುಲ್ ಕಲಂ ಆಜಾದರ ಲೇಖನಗಳು ಮುಸ್ಲಿಂ ಜನತೆಯಲ್ಲಿಯೇ ನವಜಾಗ್ರತಿಯನ್ನು ಕೆರಳಿಸಿದವು. ತರುಣ ಗಫರ್ ಖಾನರ ಎದೆಯಲ್ಲಿಯೂ ಅವು ನಾಟಿದವು. ಮೌಲಾನರ ಪತ್ರಿಕೆ 'ಅಲ್ ಹಿಲಾಲ್' ಮುಸ್ಲಿಂ ಜನತೆಯಲ್ಲಿ ಕ್ರಾಂತಿಯನ್ನೇ ಹುಟ್ಟಿಸಿತು. ಸಂಶಯವಾಗಿ ಅದನ್ನು ಹಲವರು ಕಟುವಾಗಿ ದೂರುತ್ತಿದ್ದರು. ಮೌಲಾನರು ತನ್ನ ಜಾತಿ ಬಾಂಧವರ ಮುಂದೆ ಒಂದು ಹೊಸ ಆದರ್ಶವನ್ನು ಎತ್ತಿ ಹಿಡಿದಿದ್ದರು. ತನ್ನ ಅದ್ಭುತ ಲೇಖನಶಕ್ತಿಯಿಂದ ತನ್ನ ಆದರ್ಶವನ್ನು ಜನತೆಯ ಮುಂದೆ ಮಂಡಿಸುತ್ತಿದ್ದರು. ತರುಣ ಗಫರ್ ಖಾನರು ಇದರಿಂದ ಆಕರ್ಷಿತರಾದರು.

ಗಫರ್ ಖಾನರು, ಮೌಲಾನರು ದೇಶದ ಮುಂದೆ ಮಂಡಿಸಿದ ಹೊಸ ಆದರ್ಶಗಳನ್ನು ಮುಂದೆ ವಿದ್ಯಾಭ್ಯಾಸ ಮುಗಿಸಿದ ಮೇಲೆ ತಮ್ಮ ಪ್ರಾಂತಕ್ಕೆ ತೆರಳಿದಾಗ ಅಲ್ಲಿಗೂ ಒಯ್ದರು; ಮಾತ್ರವಲ್ಲದೆ ಅಲ್ಲಿ ಅದರ ಪ್ರಚಾರವನ್ನೇ ಮಾಡಿದರು. ಜನತಾ ಸಂಘಟನೆಗೆ ಆರಂಭಿಸಿದರು. ರೌಲಟ್ ಆಕ್ಟಿಗೆ ವಿರುದ್ಧವಾಗಿ ಚಳವಳವನ್ನು ಆರಂಭಿಸುವ ಸಂದರ್ಭವೂ ಬಂದೊದಗಿತು. ಸಣ್ಣ ಪ್ರಾಯದಲ್ಲಿಯೇ ಅವರ ಪ್ರಭಾವವು ಬಹಳ ಅದ್ಭುತವಾಗಿತ್ತು. ಅವರು ಭಾಷಣ ಕೊಡುವ ಸಭೆಗಳಿಗೆ ಸಾವಿರಾರು ಮಂದಿ ಬರುತ್ತಿದ್ದರು. ಅಂತಹ ಒಂದು ಸಭೆಯಲ್ಲಿ, ಸಾವಿರಾರು ಜನರು ನೆರೆದಿದ್ದ ಮಹಾಸಭೆಯಲ್ಲಿ, ಅವರ ಮುದಿ ತಂದೆಯ ಕಣ್ಣಮುಂದೆಯೇ ಗಫರ್ ಖಾನರು ಬಂಧಿತರಾಗಿ ವಿಚಾರಣೆಯಿಲ್ಲದೆ ಶಿಕ್ಷೆಗೆ ಗುರಿಯಾದರು. ಪೋಲೀಸು ಅಧಿಕಾರಿಯು, ಗಫರ್ ಖಾನರು ಮುಂದೆ ಅಂತಹ ಚಳವಳಗಳಲ್ಲಿ ಕೈಹಾಕಬಾರದೆಂದು ಬೋಧಿಸತೊಡಗಿದನು. ಗಫರ್ ಖಾನರ ಅಜ್ಜಂದಿರು ೧೮೫೭ರ ದಂಗೆಯ ಕಾಲದಲ್ಲಿ ಬ್ರಿಟಿಷರ ಪಕ್ಷದಲ್ಲಿ ನಿಂತು ಕಾದಾಡಿದವರಿದ್ದರು. ಆದಕಾರಣ, ಅಧಿಕಾರಿಗಳಿಗಾದರೂ ಒಂದು ರೀತಿಯಿಂದ ಗಫರ್ ಖಾನರ ಮೇಲೆ ದಯೆಯೇ ಇತ್ತು. ಆದರೆ, ಅವರ ಬೋಧನೆಗಳು, ತರುಣ ಖಾನರ ಅಚಲ ನಿರ್ಧಾರದ ಮುಂದೆ ನಿಲ್ಲದಾದವು. ಮುಂದೆ ಅವರ ಮುದಿ ತಂದೆಯನ್ನೂ ಸರಕಾರವು ಬಂಧಿಸಿತು; ಆ ಮುದುಕನಾದರೂ, ತನ್ನ ಮಗನ ಪ್ರಭಾವದಿಂದಲೇ ಅತ್ಯಂತ ರಾಜಭಕ್ತಿಯಿಂದ ಉಜ್ವಲ ಸಂಗ್ರಾಮರಂಗಕ್ಕೆ ಇಳಿದು ಕಾದಾಡಿದರು!

ಸೆರೆಮನೆಯೆಂಬುದು ಹೊಸ ಅನುಭವ. ಗಫರ್ ಖಾನರನ್ನು ಕೋಳದಲ್ಲಿಯೇ ಇಟ್ಟರು. ಕೋಳವಾದರೂ ಅವರ ಬಲಿಷ್ಠವಾದ ಕೈಗಳಿಗೆ ಸಡಿಲವಾಗಿರದೆ ಸಣ್ಣವಾಗಿಯೇ ಇದ್ದುವು; ಅವು ಬಹಳ ನೋವು ಕೊಡುತ್ತಿದ್ದವು. ಆದರೂ ಅವರು ಹರ್ಷಿತರಾಗಿಯೇ ಇದ್ದರು! ತನ್ನ ಸುತ್ತಲಿನ ಈ ತರದ ಜೀವನದ ಅನುಭವದಲ್ಲಿ ಅವರು ಹಸನ್ಮುಖರಾಗಿಯೇ ಇದ್ದರು. ಮುಂದೆ ಬಿಡುಗಡೆಹೊಂದಿದ ಮೇಲೆಯೂ ಅವರು ಜಾತೀಯ ಐಕ್ಯತೆಗಾಗಿ ತೀವ್ರ ಪ್ರಚಾರವನ್ನೇ ಕೈಕೊಂಡರು. ಕುರಾನ್ ಮತ್ತು ಗೀತಾ ಈ ಎರಡು ಮಹಾ ಗ್ರಂಥಗಳ ಸಾರವನ್ನು ಜನರಿಗೆ ತಿಳಿಸಲು ಅಲ್ಲಲ್ಲಿ ಶಿಕ್ಷಣ ಕೇಂದ್ರಗಳನ್ನೂ ಪ್ರಾರಂಭಿಸಿದರು.

ಗಫರ್ ಖಾನರನ್ನು ಬಂಧನದಿಂದ ಬಿಡುಗಡೆ ಮಾಡುವ ಹೊತ್ತಿಗೆ ದೇಶ ಸರ್ವತ್ರ ಅಸಹಕಾರ ಮತ್ತು ಖಿಲಾಪತ್ ಆಂದೋಲನಗಳು ತೀವ್ರತರವಾಗಿ ನಡೆಯುತ್ತಿದ್ದವು. ಇವೆರಡರಲ್ಲಿಯೂ ಖಾನರು ಪ್ರಮುಖ್ಯ ಪಾತ್ರವನ್ನೇ ವಹಿಸಿದರು. ಮೊದಲೇ ಅವರು ಇಡೀ ಪ್ರಾಂತದಲ್ಲಿ ರಾಷ್ಟ್ರೀಯ ವಿದ್ಯಾಭ್ಯಾಸದ ಪ್ರಚಾರ ಮಾಡಿದರು; ಮತ್ತೆ ಕೆಲವು ಪ್ರಸಿದ್ಧ ವಿದ್ವಾಂಸರ ಸಹಾಯದಿಂದ ಅಲ್ಲಲ್ಲಿ ಪ್ರಾಂತವೆಲ್ಲೆಲ್ಲ ರಾಷ್ಟ್ರೀಯ ವಿದ್ಯಾಶಾಲೆಗಳನ್ನು ಸ್ಥಾಪಿಸಿದರು.

೧೯೩೦ರ ಶಾಸನಭಂಗ ಆಂದೋಲನದ ಬಳಿಕ

ಗಡಿನಾಡು ಪ್ರಾಂತದ ಇತಿಹಾಸದಲ್ಲಿ ಹೊಸ ಅಧ್ಯಾಯವೇ ಆರಂಭವಾಯಿತು. ಖಾನ್ ಸಹೋದರರು ಬಹು ಸಮಯದಿಂದ ಬಹಳ ತಾಳ್ಮೆಯಿಂದ ಮಾಡಿದ ಕೆಲಸವು ಫಲವನ್ನು ಕೊಡುವ ಸಮಯ ಬಂದಿತು. ಸೆರೆಮನೆಗಳಲ್ಲಿ ಸ್ಥಳವಿಲ್ಲವೆಂಬಂತೆ ಜನರು ಮುಂದೊತ್ತಿದರು. ಹೋದವರನ್ನು ಹಿಂಬಾಲಿಸಿ, ಸಾವಿರಾರು ಮಂದಿ ಸಿದ್ಧರಾಗಿ ಸದಾ ನಿಲ್ಲುತ್ತಿದ್ದರು. ಇದು ಸರಕಾರದ ದೃಷ್ಟಿಗೆ ಅಸಹನೀಯವಾಯಿತು. ಸೈನಿಕ ದೃಷ್ಟಿಯಿಂದ ಪ್ರಾಮುಖ್ಯ ಪ್ರಾಂತವಾದ ಗಡಿನಾಡೇ ಅವರ ಕೈಯಿಂದ ಜಾರಿಹೋಗುವ ಸ್ಥಿತಿಗೆ ಬರುವುದನ್ನು ಅವರು ನೋಡಿದರು. ದೇಶಸರ್ವತ್ರ ದಬ್ಬಾಳಿಕೆಯು ಮಸಗಿತು. ಈ ದಬ್ಬಾಳಿಕೆಯ ಕಥೆಯು ವಿಠ್ಠಲಭಾಯಿ ಪಟೇಲರ ಅಧ್ಯಕ್ಷತೆಯಿಂದ ಸ್ಥಾಪಿತವಾದ ಗಡಿನಾಡಿನ ವಿಚಾರಣಾ ಸಮಿತಿಯ ವರದಿಯಲ್ಲಿ ಬಹಳ ಚಿತ್ತವೇಧಕವಾಗಿ ವರ್ಣಿತವಾಗಿದೆ. ಆ ವರದಿಯನ್ನೇ ಮುಂದೆ ಸರಕಾರವು ನಿರ್ಬಂಧಿಸಿತು; ಅದರ ವಿವರವನ್ನು ಕೊಡುವ ಇನ್ನೂ ಅನೇಕ ಪುಸ್ತಕಗಳು ಸರಕಾರದ ಕ್ರೂರ ದೃಷ್ಟಿಗೆ ಗುರಿಯಾದವು.

ಗಾಂಧಿ ಅರ್ವಿನ್ ಒಪ್ಪಂದಕಾಲದಲ್ಲಿ ಖಾನ್ ಸಹೋದರರು ಬಿಡುಗಡೆಹೊಂದಿದರು. ಕೆಲವೇ ತಿಂಗಳಲ್ಲಿ ತಿರಿಗಿ ಅವರ ಬಂಧನವಾಯಿತು. ರೌಂಡ್ ಟೇಬ್ಲ್ ಕಾನ್ಫರೆನ್ಸಿನಿಂದ ಗಾಂಧಿಜಿ ಮರಳುವ ಮೊದಲೇ ಗಡಿನಾಡಿನಲ್ಲಿ ದಬ್ಬಾಳಿಕೆ ಆರಂಭವಾಗಿತ್ತು: ಖಾನ್ ಸಹೋದರರು ಸೆರೆಮನೆ ಸೇರಿಸಲ್ಪಟ್ಟರು. ಅವರ ಮೇಲೆ ಯಾವುದೇ ರೀತಿಯ ತಪ್ಪು ಹೊರಿಸಲೂ ಸಾಕಾದಷ್ಟು ಆಧಾರ ಸಿಗದಿದ್ದ ಮೇಲೆ, ಅಧಿಕಾರಿಗಳು, ಬ್ರಿಟಿಷ್ ಸರಕಾರದ ವಿರುದ್ಧ ಸಶಸ್ತ್ರ ಕ್ರಾಂತಿಯನ್ನು ಎಬ್ಬಿಸಲು ಅವರು ಯತ್ನಿಸುತ್ತಿರುವರೆಂದು ದೂರಿಟ್ಟರು. ಆದರೆ ಧೀರ ಪಠಾಣರು ಬ್ರಿಟಿಷರ ದಬ್ಬಾಳಿಕೆಯನ್ನು ವೀರ ಅಹಿಂಸೆಯಿಂದ ಎದುರಿಸುವ ದೃಶ್ಯವು ಇಡೀ ರಾಷ್ಟ್ರವನ್ನೇ ಬೆರಗುಗೊಳಿಸಿ ನವಿರೇಳಿಸಿತು; ಗಡಿನಾಡಿನಲ್ಲಿ ಕುಟುಂಬ ಕುಟುಂಬಗಳೇ ಸೆರೆಮನೆ ಸೇರಿದವು. ಖಾನ್ ಸಹೋದರರು, ತಮ್ಮ ಮಕ್ಕಳು, ಅಳಿಯಂದಿರು, ಸೊಸೆಯಂದಿರೊಂದಿಗೆ ಕತ್ತಲು ಕೋಣೆಯ ಪಾಲಾದರು.

ಗಫರ್ ಖಾನರು ಗಾಂಧಿಜಿಯವರ ತತ್ವವನ್ನು ಪೂರ್ಣವಾಗಿ ಅಂಗೀಕರಿಸಿದ್ದಾರೆ. ಇವರು ಅಹಿಂಸೆಯಲ್ಲಿ ಇಟ್ಟಿರುವ ಈ ವಿಶ್ವಾಸವನ್ನು ಪ್ರತ್ಯಕ್ಷ ಅನುಭವದಿಂದಲೇ ಗಳಿಸಿಕೊಂಡಿದ್ದಾರೆ. ಮತ್ತೆ ಗಾಂಧಿಜಿಯವರಂತೆ ತನ್ನಲ್ಲಿಯೇ ಸ್ವತಂತ್ರ ರೀತಿಯ ವಿಚಾರದಿಂದಲೇ ಅವರು ಗಾಂಧಿಜಿಯವರು ಕಂಡ ಆದರ್ಶವನ್ನೇ ಕಾಣುತ್ತಿದ್ದಾರೆ. ಇಂದು ಮಹಾತ್ಮರ ವಿಶ್ವಾಸಪಾತ್ರನಾದ ದಳಪತಿಯೊಬ್ಬರೆಂದರೆ ಅಬ್ದುಲ್ ಗಫರ್ ಖಾನರೆನ್ನಬಹುದು.

[illegible]

CANARA BANK LIMITED

(Incorporated in British India with Limited Liability.)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6,00,000— 0— 0	Premises & Furniture	94,217— 6—8
Paid up	3,92,551—15—11	***Advances to Customers***	
Reserve Funds	4,50,000— 0— 0	Secured by Valuable Securities	37,87,804—13—8
Deposits	86,71,764— 2— 6	Secured by Bills of Exchange etc.	9,29,550— 0—6
Due to Bankers	Nil	***Investments***	20,34,328—12—9
Sundries	7,98,533—14— 5	***Sundries***	6,81,012— 5—7
Net Profits		***Cash On Hand And At Call At Bankers***	28,17,538— 5—7
Appropriation account 1,244—10— 6			
Net Profit for the year 71,726— 5— 0			
72,970—15— 6			
Less amount transferred to Reserves 41,369—3—7	31,601—11—11		
Rs.	1,03,44,451—12— 9	Rs.	1,03,44,451—12—9

★ ಸಿನೆಮಾ ಪುಟ ★

ಹೊಲಿವುಡ್ ನಿರ್ದೇಶಕರಿಂದಲೂ ಹೆಚ್ಚಿನ ಸಮರ್ಥರು

ನಿರ್ದೇಶಕ ಶಾಂತಾರಾಮರ ಪ್ರಶಂಸೆ

'ಶಾಂತಾರಾಮರು ಚಿತ್ರನಿರ್ಮಾಣದಲ್ಲಿ ಅಸಾಮಾನ್ಯರು; ಜೀವನದ ವಿಶಾಲ ಕ್ಷೇತ್ರದಲ್ಲಿ ಬಹಳ ಸೂಕ್ಷ್ಮ ನಿರೀಕ್ಷಣೆ ಮಾಡಿದವರು; ಅವರು ಸುಪ್ರಸಿದ್ಧ ಕಲಾಕುಶಲರು. ಕೆಲಸಂದರ್ಭಗಳಲ್ಲಿ ಅವರು ಪಾಶ್ಚಾತ್ಯ ನಿರ್ದೇಶಕರನ್ನೂ ಮೀರಿಸುವ ಸಾಮರ್ಥ್ಯವಂತರು'

ಹೀಗೆಂದು 'ಚಿತ್ರ ಸಮಾಚಾರ'ದ ಸಂಪಾದಕರು ಭೇಟಿಯಾದಾಗ ನಿರ್ದೇಶಕ ಡಂಗನ್‌ರವರು ಪ್ರಭಾತದ ಪ್ರಸಿದ್ಧ ನಿರ್ದೇಶಕರಾದ ಶಾಂತಾರಾಮರ ಕುರಿತು ಪ್ರಶಂಸೆಯ ಮಾತುಗಳನ್ನು ಹೇಳಿದರು. ಡಂಗನರವರು ಪಾಶ್ಚಾತ್ಯ ನಿರ್ದೇಶಕರು. ಈಗ ಪ್ರವಾಸಕ್ಕಾಗಿ ಬಂದಿದ್ದಾರೆ; ಬೆಂಗಳೂರಿನಲ್ಲಿ ಕೆಲಸಮಯ ವಾಸವಾಗಿದ್ದರು.

ಪ್ರಭಾತದ ಹೊಸ ಸಾಹಸ

ಪ್ರಭಾತ ಕಂಪೆನಿಯುವರು ಶೈಕ್ಷಣಿಕ ಮತ್ತು ವ್ಯಾವಹಾರಿಕ ಚಲಚ್ಚಿತ್ರಗಳನ್ನು ತಯಾರು ಮಾಡುವರಾಗಿ ತಿಳಿಯುತ್ತದೆ. ಭಾರತದ ಚಲಚ್ಚಿತ್ರಲೋಕದಲ್ಲಿ ಇರುವ ಈ ತರದ ಚಿತ್ರಗಳ ನ್ಯೂನತೆಯನ್ನು ಪ್ರಭಾತದಂತಹ ಅತ್ಯುತ್ತಮ ಚಿತ್ರ ನಿರ್ಮಾಪಕರು ಪೂರ್ತಿಗೊಳಿಸುವರೆಂದು ತಿಳಿಯಬಹುದಾಗಿದೆ. ಮಾತ್ರವಲ್ಲದೆ ಪ್ರಭಾತವು ಜಾಹೀರಾತು ಫಿಲ್ಮುಗಳನ್ನೂ ತಯಾರಿಸುವ ಯೋಜನೆಯನ್ನು ಕೈಕೊಳ್ಳಲಿದೆಯೆಂದು ಸುದ್ದಿ.

ಅಪ್ನಾ ಘರ್

ಸಿರ್ಕೋ ಕಂಪೆನಿಯವರ ಹೊಸ ಚಿತ್ರವಾದ 'ಅಪ್ನಾ ಘರ್'ನಲ್ಲಿ ಶಾಂತಾ ಆಪ್ಟೆ, ಚಂದ್ರಮೋಹನ್, ಕೇ. ಸಿ. ಡೇ ಇವರು ನಟಿಸಲಿರುವರು. ಶ್ರೀ. ದೇವಕಿ ಬೋಸರು ಇದರ ನಿರ್ದೇಶಕರಾಗಿದ್ದಾರೆ.

ಅಶೋಕ್ ಕುಮಾರ್

ಐತಿಹಾಸಿಕ ಚಿತ್ರ

ಅಶೋಕ್ ಕುಮಾರ್ ಎಂಬ ಐತಿಹಾಸಿಕ ಕಥೆಯು ಮುರುಗನ್ ಕಂಪೆನಿಯವರಿಂದ ತಯಾರಾಗುತ್ತಿದೆ. ಕನ್ನಂಬಾ, ತ್ಯಾಗರಾಜ ಭಾಗವತರ್ ಮತ್ತು ಕುಮುದಿನಿ ಇವರು ಇದರಲ್ಲಿ ಪ್ರಾಮುಖ್ಯ ಪಾತ್ರ ವಹಿಸುವರು.

ಸುರೇಶ್

ಬಂಧನ್‌ದಲ್ಲಿ ಅಭಿನಯಿಸಿದ ಪ್ರಖ್ಯಾತ ತರುಣ ನಟ ಸುರೇಶನು ಬೊಂಬೇ ಟಾಕೀಸಿನ ನಯಾ ಸಂಸಾರದಲ್ಲಿ ಅಭಿನಯಿಸಿರುವನು. ಇದು ಬೊಂಬೇ ಟಾಕೀಸಿನ ಇತ್ತೀಚೆಯ ಚಿತ್ರವಾಗಿದೆ.

ಜ್ಯೋತಿ

ಪ್ರಕಾಶ ಕಂಪೆನಿಯ ಪ್ರಸಿದ್ಧ ನಟಿ ಜ್ಯೋತಿಯು ಅವರ ಇತ್ತೀಚೆಯ ಚಿತ್ರ ದರ್ಶನ್‌ದಲ್ಲಿ ಅಭಿನಯಿಸುತ್ತಾಳೆ.

ಮಿಸ್ ನಲಿನಿ

ನೇಶನಲ್ ಕಂಪೆನಿಯ 'ರಾಧಿಕಾ' ಚಿತ್ರದಲ್ಲಿ ಮಿಸ್ ನಲಿನಿಯು ಅಭಿನಯಿಸುತ್ತಾಳೆ.

ಸಾರ್ವಭೌಮರು 'ಡಿಕ್ಟೇಟರ'ನನ್ನು ಕಂಡರು

ಸಾರ್ವಭೌಮರು ಪತ್ನಿ ಸಮೇತರಾಗಿ ತನ್ನ ಇಬ್ಬರು ಮಕ್ಕಳೊಡನೆ ಕಳೆದ ವಾರ, ತಮ್ಮ ಜನ್ಮದಿನೋತ್ಸವದ ದಿನ ಚಲಚ್ಚಿತ್ರವೊಂದನ್ನು ನೋಡಿದರು. ಅವರು ನೋಡಿದ ಚಿತ್ರವು ಚಾರ್ಲಿ ಚಾಪ್ಲಿನರ ಹೊಸ ಚಿತ್ರ 'ದಿ ಗ್ರೇಟ್ ಡಿಕ್ಟೇಟರ್' ಎಂಬುದಾಗಿತ್ತು.

ಇಡೀ ಬ್ರಿಟನಿನಲ್ಲಿ ಆ ದಿನ ಬಹಳ ವಿಶೇಷ ಉತ್ಸವವಿತ್ತು. ಸಂತೋಷ ಕೂಟಗಳಿದ್ದವು. ಅಂದಿನ ಚಲಚ್ಚಿತ್ರಕ್ಕೆ ಸಾವಿರಾರು ಮಂದಿ ಬಂದು ಕೂಡಿದ್ದರು, ಹೀಗೆಂದು ಲಂಡನಿನ 'ಫಿಲ್ಮ್ ವೀಕ್ಲಿ' ಎಂಬ ಚಲಚ್ಚಿತ್ರ ಪತ್ರಿಕೆಯೊಂದು ಬರೆಯುತ್ತದೆ.

ಚಾರ್ಲಿ ಚಾಪ್ಲಿನರ ಈ ಚಿತ್ರವು ಸಾರ್ವಭೌಮರೂ ಬಂದು ನೋಡುವಷ್ಟು ವಿಶೇಷತರದ್ದಾಗುವುದೆಂದು ಯಾರೂ ಭಾವಿಸಿರಲಿಲ್ಲ.

ಇಂದಿನ ಕಾಲದಲ್ಲಿ ಚಲಚ್ಚಿತ್ರವೆಂಬುದು ನಮ್ಮ ಜೀವನದ ಒಂದು ಭಾಗವೇ ಆಗಿದೆ. ಗೆಳೆಗನೆಯ ಈ ಇಸವಿ ಯುದ್ಧ ಭೀಕರ ಯುಗವಾದರೂ ಇಂತಹ ಸಮಯದಲ್ಲಿಯೂ ಜನರ ಜೀವನೋಪಾಯಗಳಲ್ಲಿ ಸಿನೆಮಾ ಸೇರಿಹೋಗಿದೆ. ಯುದ್ಧ ಪ್ರಾರಂಭವಾದಾಗ ಸಿನೆಮಾದಂತಹ ತಮಾಷೆಗಳು ಇನ್ನು ಮುಂದೆ ನಿಲ್ಲಬಹುದೇ ಎಂದು ಹಲವರು ಸಂಶಯಗೊಂಡಿದ್ದರು. ಆದರೆ ಇಂದು ರಾಷ್ಟ್ರರಾಷ್ಟ್ರಗಳಲ್ಲಿ ಯುದ್ಧವು ತೀವ್ರತರವಾಗಿ ನಡೆಯುತ್ತಿರುವುದಾದರೂ ಜನತೆಯ ತೀವ್ರ ವಿಚಾರಕ್ಕೆ ವಿಶ್ರಾಂತಿ ಪರಿಹಾರವಾಗಿ ಸಿನೆಮಾ ಅತ್ಯುತ್ತಮ ಸಾಧನವಾಗಿದೆ.

ವಸಂತಸೇನಾ

ಮೈಸೂರಿನ ಎಸ್. ಎಸ್. ಎಸ್. ನಾಟಕ ಮಂಡಲಿಯವರು ಮದರಾಸಿನ ಪ್ರಗತಿ ಪಿಕ್ಚರ್ಸ್‌ನವರ ಚಿತ್ರಶಾಲೆಯಲ್ಲಿ 'ವಸಂತ ಸೇನಾ'ಯೆಂಬ ಕನ್ನಡ ವಾಕ್ಪಟವನ್ನು ಸಿದ್ಧಪಡಿಸುತ್ತಲಿದ್ದಾರೆಂದು ಗೊತ್ತಾಗಿದೆ. ಶ್ರೀ ರಾಮಯ್ಯ ಮತ್ತು ಶ್ರೀ ಶಿರೂರ ಇವರು ನಿರ್ದೇಶಕರು. ಶ್ರೀಯುತ ಆರ್. ನಾಗೇಂದ್ರರಾವ್, ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ ಚಂದ್ರಮ್ಮ ಇವರು ಮುಖ್ಯಪಾತ್ರ ಧರಿಸಿದ್ದಾರೆ.

ಶಾಂತಾ ಆಪ್ಟೆ ಹೊರಗೆ ನಡೆದು ಹೋದ ವಿಷಯ ಸತ್ಯವಲ್ಲ

ಕಂಪೆನಿಯವರ ಹೇಳಿಕೆ

ಮದ್ರಾಸಿನ ರೊಯಲ್ ಟಾಕೀ ಡಿಸ್ಟ್ರಿಬ್ಯೂಟರ್ಸ್‌ನವರ ಪಬ್ಲಿಸಿಟಿ ಆಫೀಸರನು, ಶಾಂತಾ ಆಪ್ಟೆಗೂ ದಿಗ್ದರ್ಶಕ ವೈ. ವಿ. ರಾಯರಿಗೂ ನಡೆದ ವೈಮನಸ್ಸಿನ ಪರಿಣಾಮವಾಗಿ ಆಕೆ ಸ್ಟುಡಿಯೋದಿಂದ ಹೊರಗೆ ನಡೆದು ಹೋದ ಮತ್ತು ಶಾಂತಾ ಇದ್ದ ದೃಶ್ಯಗಳನ್ನೆಲ್ಲ ತೆಗೆದು ಅದರ ಬದಲಿಗೆ ಎಂ. ಎಸ್. ಸುಬ್ಬುಲಕ್ಷ್ಮಿಯನ್ನು ಸಾವಿತ್ರಿಯಾಗಿ ಪುನಃ ದೃಶ್ಯಗಳನ್ನು ತೆಗೆಯುವರೆಂದು ಪ್ರಕಟಿಸಿದ ಸಮಾಚಾರವು ಅನಾಧಾರವೂ ಅಸತ್ಯವೂ ಆಗಿದೆ ಎಂದು ತಿಳಿಸುತ್ತಾನೆ.

ಯಾವ ಕಲಹವೂ ನಡೆದಿಲ್ಲವೆಂದೂ ಮತ್ತು ಶಾಂತಾ ಆಪ್ಟೆ ಆಕೆಯ ಕಂಪೆನಿಯೊಡನೆ ಸಮಾಧಾನದಿಂದಿದ್ದಾಳೆಂದೂ ಹೇಳಿಕೆ.

ಸಾಬುವಿನ ಫಿಲ್ಮ್ ಭವಿಷ್ಯ

ಭಾರತ ನಟ ಸಾಬು ಆಂಗ್ಲ ಚಿತ್ರಗಳಲ್ಲಿ ಅಭಿನಯಿಸಿ ಕೀರ್ತಿ ಪಡೆದ ವಿಚಾರ ಸಿನೆಮಾ ಪ್ರಿಯರಿಗೆಲ್ಲರಿಗೂ ಗೊತ್ತು. 'ದಿ ಡ್ರಂ' ಚಿತ್ರದಲ್ಲಿ ಆತನು ಅಭಿನಯಿಸಿದ ಬಳಿಕ, 'ದಿ ಥೀಫ್ ಓಫ್ ಬಗ್ದಾದ್' ಚಿತ್ರದಲ್ಲಿ ನಟಿಸಿದನು. ಈ ಚಿತ್ರವು ಕೇವಲ ಎಂಟು ತಿಂಗಳ ಹಿಂದೆ ಪೂರ್ಣವಾಯಿತು.

'ದಿ ಥೀಫ್ ಓಫ್ ಬಗ್ದಾದ್' ಚಿತ್ರವು ಯುದ್ಧ ಪ್ರಾರಂಭವಾದ ಕಾಲದಲ್ಲಿ ಆರಂಭವಾಯಿತು. ಆ ಚಿತ್ರದ ವಿಷಯದಲ್ಲಿ ಅನೇಕ ಕೆಲಸಗಳು ಮತ್ತೂ ಮಾಡತಕ್ಕವು ಬಾಕಿಯುಳಿದಿದ್ದವು. ಆ ಮೇಲೆ ಅಲೆಕ್ಸಾಂಡರ್ ಕೋರ್ಡಾರವರು ಅದನ್ನು ಹಾಲಿವುಡ್ಡಿನಲ್ಲಿ ತಯಾರಿಸುವುದಾಗಿ ನಿಶ್ಚಯಿಸಿದರು.

ಚಿತ್ರವನ್ನು ಹಾಲಿವುಡ್ಡಿನಲ್ಲಿ ತಯಾರಿಸುವ ವಿಷಯವಾಗಿಯೂ ಸ್ವಲ್ಪ ತಡವೇ ಆಯಿತು. ಅಮೇರಿಕಕ್ಕೆ ಸಾಬುವನ್ನೂ ಕರಕೊಂಡು ಹೋದರು.

ಸಾಬು ಅಮೇರಿಕದಲ್ಲಿ ಈಗ ವಾಸವಾಗಿರುವನು. ರುಡಿಯಾರ್ಡ್ ಕಿಪ್ಲಿಂಗರ 'ದಿ ಜಂಗಲ್ ಬ್ಯುಕ್' ಎಂಬ ಹೊಸ ಚಿತ್ರದಲ್ಲಿ ಅಭಿನಯಿಸುವುದಾಗಿ ಏರ್ಪಾಡು ಆಗಿರುತ್ತದೆಂದು ತಿಳಿಯುತ್ತದೆ.

ಸಾಬುವಿಗೆ ಈಗ ೧೮ ವರ್ಷ ಪ್ರಾಯ. ಆತನ ಕೀರ್ತಿ ಮುಂದೆ ಹೆಚ್ಚು ಹೆಚ್ಚಾಗಿ ಬೆಳಗಲಿದೆಯೆಂದು ತಿಳಿದು ಬರುತ್ತದೆ.

ದುಬಾರಿ ಗುಣವುಳ್ಳ ಕುಟಿ ಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ. ಇದು ಮೈಯ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೆ, ಅಂದವಾಗಿರಿಸುವುದು. ಪರಿಮಳ ತೈಲ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂಹರಿಸಿ ವಾಸಿಮಾಡಿ ವಿಷಹಾರಕ ಗುಣವಿರುವುದು. ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ಮೈಯ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು. ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು—ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲ್ಲದಂತೆ ಮಾಡುವುದು.

ಕುಟಿಕೂರಾ ಸೋಪ್

Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ಬೊಯಿಲೆಟ್ಟ) ಮತ್ತು ಸಣ್ಣ ಬಿಲ್ಲೆಯ (ಶೌಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

ಹಿಂಸೆಯ ಕುಲವನ್ನು ಅಹಿಂಸೆಗೆ ಪಳಗಿಸಿದವರು!

[೧೪ನೇ ಪುಟದಿಂದ]

ಧರ್ಮವಿಚಾರಕ್ಕಿಂತಲೂ ಅವರಿಗೆ ರಾಷ್ಟ್ರ ವಿಚಾರವು ಹೆಚ್ಚಿನದಾಗಿದೆ. ರಾಷ್ಟ್ರದ ಇಂದಿನ ಪರಿಸ್ಥಿತಿಯಲ್ಲಿ ಪ್ರಬಲ ಪರಿವರ್ತನವಾಗಬೇಕೆಂಬ ಅವರ ಮನೋದ್ದೇಶವು ಅವರನ್ನು ಜನತಾ ಧುರೀಣತೆಗೆಳೆದಿದೆ. ಜನತಾ ಧುರೀಣತೆಯಲ್ಲಿ, ಜನತಾ ಸಂಘಟನೆಯಲ್ಲಿ ಗಫರ್‌ಖಾನರದು ಬೆರಗುಗೊಳಿಸುವಂತಹ ಪ್ರಭಾವವಾಗಿದೆ.

ಧರ್ಮದಲ್ಲಿಯೂ ಅವರಿಗೆ ಅಚಲ ವಿಶ್ವಾಸವುಂಟು; ಆದರೆ ಅವರದು ಸಂಕುಚಿತ ಧರ್ಮ ದೃಷ್ಟಿಯಲ್ಲ. ವಿಶ್ವಧರ್ಮ ಅವರ ತತ್ವವಾಗಿದೆ. ದೇವರ ಸೇವೆಯಲ್ಲಿ ಆತನ ಮಕ್ಕಳು, ಮಾನವರೆಲ್ಲರೂ ಸಮಾನರೆಂಬ ದೃಷ್ಟಿ, ಇಂತಹ ವಿಶಾಲ ಧರ್ಮಭಾವನೆ, ಪರಮತ ಸಹಿಷ್ಣುತೆ ಇವುಗಳಿಂದ ಅವರು ಲೋಕಪ್ರಿಯರಾಗಿ ಮೆರೆಯುತ್ತಾರೆ.

ಭಾರತದ ರಾಜಕೀಯದಲ್ಲಿ ಗಫರ್‌ಖಾನರು ಬಹಳ ಪ್ರಭಾವಶಾಲಿಗಳಾಗಿದ್ದಾರೆ. ಕಳೆದ ಹಲವು ವರ್ಷಗಳಿಂದ ಅವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿದ್ದಾರೆ. ರಾಜಕೀಯ ಪ್ರಾಮುಖ್ಯತೆಯುಳ್ಳ ಗಡಿನಾಡಿನಲ್ಲಿ ಸೋದರ ಡಾ। ಖಾನ್‌ಸಾಹೇಬರ ಸಹಕಾರದಿಂದ ಬಹಳ ಪ್ರಾಮುಖ್ಯ ಸಂಘವೊಂದನ್ನು—ಖುದಾಯಿ ಕಿದ್ಮತ್‌ಗಾರರೆಂಬ (ದೇವರ ಸೇವಕರು) ಕೆಂಪಂಗಿ ದಳದವರನ್ನು ಅವರು ತರಬೇತಿ ಮಾಡಿದ್ದಾರೆ. ಹಿಂಸೆ, ಕೊಲೆ, ಕಾದಾಟಗಳಲ್ಲಿಯೇ ಪಳಗಿದ ಕ್ರೂರ ಪಠಾಣರನ್ನು ಸತ್ಯ, ಅಹಿಂಸಾ ವೀರ ಸತ್ಯಾಗ್ರಹಿಗಳನ್ನಾಗಿ ಮಾರ್ಪಡಿಸಿದ್ದಾರೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಕಾಂಗ್ರೆಸ್ ಧ್ವಜದ ನೆರಳಿಗೆ ಭಾರತದ ಮುಸ್ಲಿಮರನ್ನು ತಂದು ಒಂದುಗೂಡಿಸುವ ಮಹಾ ಸೇವೆಯನ್ನು ಅವರು ಮಾಡಿದ್ದಾರೆ.

ಅವರ ಶಕ್ತಿ ದ್ವಿಮುಖವಾಗಿ ಅಖಿಲ ಜಗತ್ತಿಗೇ ಪ್ರದರ್ಶಿತವಾಗಿದೆ. ಹಿಂಸೆಯ ಕುಲದವರಾದ ಪಠಾಣರನ್ನು ಅಹಿಂಸೆಯಲ್ಲಿ ಪಳಗಿಸುವುದು ಸಾಮಾನ್ಯವಲ್ಲ; ಬಹಳ ಪ್ರಭಾವಶಾಲಿಯಾದ ಬ್ರಿಟಿಷ್ ಸರಕಾರವನ್ನೂ ಒಂದು ಸಂಘಟನೆಯ ಸ್ವಯಂಸೇವಕರಿಂದ ಕೂಡಿಕೊಂಡು ಬೆರಗುಗೊಳಿಸುವುದೂ ಅದ್ಭುತವೇ ಆಗಿರುವುದು. ಕೆಂಪಂಗಿ ದಳದವರ ಮೇಲೆ ಸರಕಾರದವರ ಕಣ್ಣು ಬೀಳದಿರಲಿಲ್ಲ. ಕೆಂಪಂಗಿಗಳು ಕಮ್ಯೂನಿಸ್ಟರೆಂದು ಸರಕಾರವು ಬೆಚ್ಚಿತು! ಆದರೆ ಅದೇ ಕೆಂಪಂಗಿಗಳು ಮುಂದೆ ಖುದಾಯಿ ಕಿದ್ಮತ್‌ಗಾರರೆನಿಸಿ 'ದೇವರ ಸೇವಕ'ರೆಂದು ಪ್ರಸಿದ್ಧರಾದರು. ಮೇಲಿನ ಬಣ್ಣದಿಂದ ಮಾತ್ರ ಒಳಗಿನ ತಿರುಳಿನ ಅರ್ಥ ಮಾಡಿಕೊಂಡ ಅಧಿಕಾರಿಗಳು ತಮ್ಮ ಜ್ಞಾನಶೂನ್ಯತೆಗಾಗಿ ನಾಚುವಂತಾಯಿತು. ಖುದಾಯಿ ಕಿದ್ಮತ್‌ಗಾರರು ವೀರ ಅಹಿಂಸಾ ವ್ರತಿಗಳೆಂದು ಸ್ಥಾಪಿತವಾಯಿತು.

ವಿಪತ್ಪರಂಪರೆಗಳನ್ನು ಅಚಲ ಧೈರ್ಯದಿಂದ ಎದುರಿಸುವ ಧೀರರು ಅವರು. ಸೆರೆಮನೆಯಲ್ಲಿದ್ದಾಗ ಅವರ ಅಣ್ಣನ ಮಗನು ನಿರಶನವನ್ನು ಕೈಕೊಂಡ ಸುದ್ದಿ ಬಂದಿತು. ಗಫರ್‌ಖಾನರು ಅವನನ್ನು ಕಾಣಬೇಕೆಂದಾಗಲಿ, ಅವನ ನಿಶ್ಚಯದಿಂದ ಆತನ ಮನಸ್ಸನ್ನು ತಿರುಗಿಸಬೇಕೆಂದಾಗಲಿ ಪ್ರಯತ್ನಿಸಲಿಲ್ಲ. ಆ ತರುಣನು ೭೪ ದಿನಗಳ ಸುದೀರ್ಘ ಉಪವಾಸ ಮಾಡಿದನು. ಕೊನೆಗೆ ಆತನ ಆಯುಸ್ಸು ಮುಗಿಯುತ್ತದೆಂದು ತಿಳಿದಾಗ ಆತನ ದೇಹವನ್ನು ಒಪ್ಪಿಸುವ ಕುರಿತು ಮಾತ್ರ ಖಾನರು ಸರಕಾರಕ್ಕೆ ಕಾಗದವೊಂದನ್ನು ಬರೆದರು.

ಅವರು ಪ್ರಚಂಡ ವಾಗ್ಮಿಗಳಲ್ಲ; ತಮ್ಮ ಪ್ರಾಂತವನ್ನು ಬಿಟ್ಟು ಹೊರಗಡೆಯಲ್ಲಿ ಬಹಳ ಕಡಿಮೆ ಮಾತಾಡುತ್ತಾರೆ. ಆದರೆ ಹೃದಯಾಂತರಾಳದಿಂದ ಬರುವ ಅವರ ಮಾತುಗಳು ಅವುಗಳ ಯಥಾರ್ಥದ ಪರಿಣಾಮವನ್ನು ಮಾಡದೆ ಉಳಿವುದಿಲ್ಲ. ಅವರ ಗಂಭೀರ ವ್ಯಕ್ತಿತ್ವವು ಬಹಳ ಆಕರ್ಷಣೀಯವಾದುದು. ಆರು ಕಾಲು ಫೀಟುಗಳನ್ನು ಮೀರಿದ ಎತ್ತರದ ಗಾತ್ರ ಅವರದು. ಬಹಳ ಗಟ್ಟಿಮುಟ್ಟಾದ ಶರೀರ. ಒಮ್ಮೆ ಹದಿನೈದು ಸ್ಟೋನುಗಳಷ್ಟು ಭಾರ ತೂಗಿದ್ದರಂತೆ.

ಬಾಲ್ಯದಲ್ಲಿ ಸೈನ್ಯಕ್ಕೆ ಸೇರಬೇಕೆಂದು ಖಾನರು ಬಗೆದಿದ್ದರಂತೆ. ತಮ್ಮ ಶರೀರ ಶಕ್ತಿಗಳ ವಿಷಯ ಅವರಿಗೆ ಅಭಿಮಾನವೇ ಇತ್ತು. ಅದರಲ್ಲಿ ಯಶಸ್ವೀ ಜೀವನ ಮಾಡಬಹುದೆಂಬ ಭರವಸೆಯಿತ್ತು. ಆದರೆ ಕೆಲ ಯುರೋಪಿಯನ್ ಆಫೀಸರರು ಭಾರತದ ಸಹೋದ್ಯೋಗಿಗಳ ವಿಷಯ ತೋರುವ ದುರ್ವರ್ತನೆಗಳನು ನೋಡಿ ಅವರಿಗೆ ಮನಸ್ಸು ಮುರಿಯಿತು. ಆದರೂ ಅವರು ಸೈನಿಕ ಜೀವನವನ್ನು ಬಿಡಲಿಲ್ಲ. ಅಹಿಂಸಾ ಸೈನ್ಯದ ಧೀರ ದಳಪತಿಯಾಗಿದ್ದಾರೆ. ರಾಷ್ಟ್ರದ ಸೇವೆಗಾಗಿ ಸರ್ವಸ್ವವನ್ನರ್ಪಿಸಿ ನಿರಂತರ ಕಾದಾಡುತ್ತಿದ್ದಾರೆ.

—K K Rai.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧ

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ—ಕೊಕಸ' ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ. 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭ್ಯಾ ಪಟೇಲ್ ರೋಡ್, ಮುಂಬಾಯಿ 4.

Sole Manufacturer: **Dr. D. N. JASANI,** Vithalbhai Patel Road, BOMBAY 4

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

NOTIFICATION

A competitive examination for the award of two Scholarships from the Victoria Jubilee Scholarship Fund, Mangalore of the value of Rs. 15/- per mensem tenable for a period of five years to students studying any one of the marginally-noted subjects in a Government institution in India,—one awardable to a candidate of the Brahmin community and the other to a candidate of the Christian community, will be held in the Government College, Mangalore on Monday 23rd June 1941 at 10 A. M.

1. Engineering — Civil, Municipal Electrical Mechanical, Marine or Sanitary
2. Forestry
3. Agriculture
4. Mining and Metallurgy

2. The scholarships shall be awarded to students who have passed at least the Public Examination held by S. S. L. C. Board, Madras, and who are between the ages of 16 and 21 years. Provided however, that if a Graduate of any recognised University applies for any of the scholarships, it shall be sufficient if he shall not have completed the age of 24 years. The candidate shall produce satisfactory evidence of good character, physical fitness and age.

3. Application for the examination in the prescribed form will be received in the District court, South Kanara, Mangalore till the 15th June 1941, after which date none shall be received.

4. Forms of applications and copies of the rules regulating the award of the scholarships can be had from the office the District Judge, Mangalore, on working days between 11 A. M. and 5 P. M. on payment of one anna and two annas respectively.

Mangalore, 25-3-1941. (sd) K. N. Gopalan, District Judge and President V. J. S. Fund Mangalore



ಇಸ್ಮೆತ್ ಇನೋನು

ನವಟರ್ಕಿಯ ನಿರ್ಮಾಪಕ
ಇಸ್ಮತ್ ಇನೋನು
ಚತುರ ಸೇನಾಧಿಪತಿ-ಪ್ರಸಿದ್ಧ ರಾಜಕಾರಣಿ
ಯೂರೋಪಿನ ಭವಿಷ್ಯದಲ್ಲಿ ಈತನ ಸ್ಥಾನ

ಯೂರೋಪಿನ ರಾಜಕಾರಣಗಳಲ್ಲಿ ಟರ್ಕಿಯ ಸ್ಥಾನಮಾನಗಳು ವಿಚಿತ್ರ ಪ್ರಕಾರದವುಗಳಾಗಿರುವವು. ಟರ್ಕಿಯು ಒಂದು ಪೌರ್ವಾತ್ಯ ರಾಷ್ಟ್ರವೆನ್ನಿಸುತ್ತದಾದರೂ, ಅದನ್ನು ಲೆಕ್ಕಕ್ಕೆ ತಾರದೆ ಯೂರೋಪಿನ ರಾಷ್ಟ್ರಗಳು ಯಾವ ದೊಡ್ಡ ನಿರ್ಧಾರವನ್ನೂ ಮಾಡಲಾರವು. ಟರ್ಕಿಯು, ಯೂರೋಪು ಮತ್ತು ಏಸ್ಯದ ಹೆಬ್ಬಾಗಿಲಿನಂತೆ ಇರುವದರಿಂದ ಅದಕ್ಕೆ ಅತಿಶಯ ಮಹತ್ವವು ಬಹಳ ಹಿಂದಿನಿಂದಲೂ ಪ್ರಾಪ್ತವಾಗಿರುವದು. ಹಿಟ್ಲರ ಮುಸಲೋನಿ ಮತ್ತು ಮಿತ್ರರಾಷ್ಟ್ರಗಳೊಳಗೆ ಪ್ರಚಂಡವಾಗಿ ನಡೆಯುತ್ತಿರುವ ಇಂದಿನ ಯುದ್ಧವು ಏಸ್ಯಕ್ಕೂ ಹರಡದಂತೆ ತಡೆದು ಹಿಡಿದಿರುವ ರಾಜ್ಯವೆಂದರೆ ಟರ್ಕಿಯು. ಆದ್ದರಿಂದ ಅದರ ಮೂರ್ತಿ ಸಣ್ಣದಾದರೂ, ಕೀರ್ತಿ ದೊಡ್ಡದಾಗಿರುವದು.

ಟರ್ಕಿಗೆ ಈ ಮಹತ್ವವನ್ನು ತಂದುಕೊಟ್ಟ ಮುಸ್ತಫಾ ಕೆಮಲ್ ಪಾಶಾರ ಬಲಗೈಯಾಗಿ ಕೆಲಸಮಾಡಿದವನೇ ಇಂದು ಟರ್ಕಿಯ ಪ್ರೆಸಿಡೆಂಟನಾಗಿರುವ ಇಸ್ಮೆತ್ ಇನೋನು ಆಗಿರುವನು. ಕೆಮಾಲ ಪಾಶಾರ ನಂತರ ಇವನೇ ಟರ್ಕಿಯ ಅದೃಷ್ಟನಾಯಕನೂ ಭಾಗ್ಯದೇವತೆಯೂ ಆಗಿದ್ದಾನೆ. ಇವನನ್ನು ಕೆಣಕಿಸುವ ಕೆಚ್ಚೆದೆ ಜರ್ಮನಿಯ ಹಿಟ್ಲರನಿಗೂ ಇರುವದಿಲ್ಲ. ಬಾಲ್ಕಾನದ ಯುದ್ಧದಲ್ಲಿ ಟರ್ಕಿಯನ್ನು ಜಯಿಸದ ಹೊರತು ಯಾವ ಪಕ್ಷಕ್ಕೂ ಜಯಶ್ರೀ ಒಲಿಯುವ ಹಾಗಿಲ್ಲ. ಆದ್ದರಿಂದ ಇನೋನುವನ್ನು ಸಮಜಾಯಿಸಿ ತನ್ನ ಪಕ್ಷಕ್ಕೆ ಮಾಡಿಕೊಳ್ಳಲು ಧೂರ್ತನಾದ ಹಿಟ್ಲರ್, ಭಗೀರಥ ಪ್ರಯತ್ನಗಳನ್ನು ಮಾಡುತಿದ್ದಾನೆ. ಅತ್ತ ಬ್ರಿಟಿಷರೂ, ಮಿತ್ರಪಕ್ಷದವರೂ ಈ ಪ್ರಯತ್ನಗಳಲ್ಲಿ ಹಿಟ್ಲರನನ್ನು ಮೀರಿಸಿ ಇದ್ದಾರೆ.

ಬಾಲ್ಕನದ ಭಾಗ್ಯವಿಧಾತ

ಇಸ್ಮೆತ್ ಇನೋನು ಬಾಲ್ಕನ್ ರಾಷ್ಟ್ರಗಳ ಭಾಗ್ಯವಿಧಾತ ಎಂದರೂ ಅತಿಶಯೋಕ್ತಿ ಆಗಲಾರದು. ಯೂರೋಪಿನ ಯುದ್ಧದ ಪ್ರಳಯಕಾರಿ ಕಿಚ್ಚಿನ ಬೇಗೆಯಿಂದ ಬಾಲ್ಕನ್ ರಾಷ್ಟ್ರಗಳನ್ನು ಕಾಪಾಡುವ ಸಾಮರ್ಥ್ಯವು ಕೇವಲ ಈ ಮಹಾಪುರುಷನ ಮೇಲೆ ಇದೆ. ಈ ಮಹಾರಾಷ್ಟ್ರವಾಗಿರುವ ರಷ್ಯದ ಸುರಕ್ಷಿತತೆಯು ಕೂಡ ಇವನ ಮೇಲೆಯೇ ಹೊಂದಿಕೊಂಡಿದೆ.

ಇಸ್ಮೆತ್ ಇನೋನುವಿನ ಬಾಲ್ಯಜೀವನವು ಅಜ್ಞಾತವಾದದ್ದು. ಸುಮಾರು ೫೭ ವರ್ಷಗಳ ಮೊದಲು ಇವನು ಒಂದು ವ್ಯಾಪಾರಿ ಕುಟುಂಬದಲ್ಲಿ ಜನ್ಮತಾಳಿದನು. ಆದರೆ ವ್ಯಾಪಾರಕ್ಕಿಂತಲೂ ಇವನ ಪ್ರವೃತ್ತಿ ಸೈನಿಕ ವೃತ್ತಿಯ ಕಡೆಗೆ ವಿಶೇಷವಾಗಿತ್ತಾದ್ದರಿಂದ ಇವನು ೧೮ನೆ ವರ್ಷ ಪ್ರಾಯದಲ್ಲಿ ಟರ್ಕಿಯ ಮಿಲಿಟರಿ ಕಾಲೇಜಿನಲ್ಲಿ ಶಿಕ್ಷಣ ಪಡೆಯಲಿಕ್ಕೆ ಸೇರಿ ಒಂದು ವರ್ಷದ ಅನಂತರ ಆರ್ಟಿಲ್ಲರಿ ಲಿಪ್ಟನೆಂಟ ಪರೀಕ್ಷೆಯಲ್ಲಿ ತೇರ್ಗಡೆಯಾದನು. ಮತ್ತೆ ಟರ್ಕಿಯ ಸೇನೆಯಲ್ಲಿ ಸೇರಿಕೊಂಡು ಬಹಳ ಯೋಗ್ಯತೆಯಿಂದ ಕೆಲಸಮಾಡುತ್ತಿದ್ದುದರಿಂದ ೧೯೦೬ರಲ್ಲಿ ಇವನು ಕೆಪ್ಟನನಾದನು. ಮತ್ತೆ ಬಾಲ್ಕನ್ ಯುದ್ಧಗಳಲ್ಲಿಯೂ, ಟರ್ಕಿಯಲ್ಲಾದ ಸೈನಿಕ ಕ್ರಾಂತಿಯಲ್ಲಿಯೂ ಬಹಳ ಅನುಭವಗಳನ್ನು ಸಂಪಾದಿಸಿ; ೧೯೧೪-೧೯೧೮ರ ಮಹಾಯುದ್ಧದಲ್ಲಿ ಇವನು ಟರ್ಕಿಯ ಸರ್ವ ಸೇನಾಧಿಪತಿಯಾದನು. ಜರ್ಮನಿಯ ಪರವಾಗಿ ಹೋರಾಡುತ್ತಿದ್ದ ಟರ್ಕಿಯು ಡಾರ್ಡನೆಲ್ಲಸ್ ಜಲಸಂಧಿ ಬ್ರಿಟಿಷರ ಕೈವಶವಾಗದಂತೆ ಅದ್ಭುತ ಸಾಹಸವನ್ನು ತೋರಿಸಿದ ಅಪ್ರತಿಮ ವೀರನೆಂದರೆ ಇನೋನುವೇ ಆಗಿರುವನು. ಮತ್ತೆ ಅನೇಕ ರಣರಂಗಗಳಲ್ಲಿ ಪ್ರಬಲ ಶತ್ರುಗಳನ್ನು ಇದಿರಿಸಿ ಇನೋನು ಆ ಶತ್ರುಗಳಿಂದಲೂ ಹೊಗಳಿಸಿಕೊಂಡನು.

ಅಟಾಟರ್ಕರ ಬಲಗೈ

ಪರಂತು ಟರ್ಕಿಯು ಮಹಾಯುದ್ಧದಲ್ಲಿ ಸೋತಿತು. ಕೆಮಾಲ್ ಅಟಾಟರ್ಕರು ನವಟರ್ಕಿಯ ನಿರ್ಮಾಣ ಮಾಡಿದರು. ಅವರು ಅದರ ಪ್ರಥಮ ಪ್ರೆಸಿಡೆಂಟರಾದರು. ದೂರದರ್ಶಿಗಳೂ ಸೂಕ್ಷ್ಮದರ್ಶಿಗಳೂ ಆದ ಅವರು ಇನೋನುವಿನ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ತಿಳಕೊಂಡು ಇದ್ದುದರಿಂದ ಇವನನ್ನು ಅವರು ತಮ್ಮ ಬಲಗೈಯನ್ನಾಗಿ ಮಾಡಿಕೊಂಡರು. ಟರ್ಕಿ ಸೇನೆಯ ಪುನರ್ಘಟನೆ ಮಾಡುವ ಸರ್ವ ಭಾರವು ಇನೋನುವಿನ ಮೇಲೆ ಬಿದ್ದಿತು. ಇನೋನು ಮುಂದೆ ಎರಡು ವರ್ಷಗಳಲ್ಲಿ ನಡೆದ ಗ್ರೀಸಿನ ಯುದ್ಧದಲ್ಲಿ ಗ್ರೀಸರನ್ನು ಸೋಲಿಸಿ ಟರ್ಕಿಯ ಸ್ವಾತಂತ್ರ್ಯ ಧ್ವಜವನ್ನು ಎತ್ತಿ ಹಿಡಿದನು. ಈ ವಿಜಯದ ಸ್ಮಾರಕವಾಗಿಯೇ ಅವರ ಹೆಸರು ಇಸ್ಮೆತ್ ಇನೋನು ಎಂದಾಯಿತು.

ಮತ್ತೆ ಇನೋನು ರಾಜಕಾರಣವನ್ನು ಪ್ರವೇಶಿಸಿದನು. ಸೈನಿಕ ವೃತ್ತಿಯಲ್ಲಿ ಹೇಗೋ, ರಾಜಕಾರಣ ಕ್ಷೇತ್ರದಲ್ಲಿಯೂ ಅವನು ತನ್ನ ವಿಚಕ್ಷಣತೆ, ಚಾತುರ್ಯಾದಿ ಮಹಾ ಗುಣಗಳನ್ನು ಪ್ರದರ್ಶಿಸಿ ಲೋಕವಿಖ್ಯಾತನಾಗಿದ್ದಾನೆ. ಇನೋನು ಇಲ್ಲವಾಗಿದ್ದರೆ ಟರ್ಕಿಗೆ ಸೆವ್ರೆಸ್ ಸಂಧಿಯಲ್ಲಾದ ಅನ್ಯಾಯವನ್ನು ಸರಿಪಡಿಸುವದಾಗಲೀ, ಲೊಸೇನ್ ಸಂಧಿಯಲ್ಲಿ ನ್ಯಾಯ ಪಡೆಯುವದಾಗಲೀ ಸಾಧ್ಯವಾಗುತ್ತಿದ್ದಿಲ್ಲ. ಇದರಿಂದ ಟರ್ಕಿಯು ಮಹಾಯುದ್ಧದಲ್ಲಿ ಜರ್ಮನರ ಪರವಾಗಿ ಹೋರಾಡಿ ಸೋತುಹೋಯಿತಾದರೂ, ಅದು ಒಂದೆ ಸಂಪೂರ್ಣ ಸ್ವತಂತ್ರ ರಾಷ್ಟ್ರವಾಗಿ ಇರಬಹುದಾಯಿತು. ಟರ್ಕಿಯು ಸ್ವತಂತ್ರವಾಗಲಿಕ್ಕೆ ಆಗ ಬ್ರಿಟಿಷರು ಅನುಕೂಲರಾಗಿದ್ದರು. ಮುಸಲೋನಿ ಪ್ರತಿಕೂಲನಾಗಿದ್ದ. ಆಗಿನ ಆ ಶತ್ರು ಮಿತ್ರಭಾವವು ಈಗಲೂ ಟರ್ಕಿಯಲ್ಲಿ ಹೊಗೆಯಾಡುತ್ತ ಇದೆ.

ಪ್ರಧಾನ ಮಂತ್ರಿ ಇನೋನು

ಇಷ್ಟರ ತನಕ ಹೊರದೇಶ ಮಂತ್ರಿಗಳಾಗಿ ಕೆಲಸಮಾಡಿದ್ದ ಇನೋನು ಈಗ ಪ್ರಧಾನ ಮಂತ್ರಿಯಾದನು. ಇನೋನು ಈ ಉಚ್ಚ ಪದವಿಗೆ ಬಂದ ಅನಂತರ ಅವನ ಪ್ರೇರಣೆಯಿಂದಲೇ ಟರ್ಕಿಯಲ್ಲಿ ಆಧುನಿಕತೆಗೆ ಒಪ್ಪುವ ಮತ್ತು ಅವಶ್ಯಕವಾದ ಅನೇಕ ನವಸುಧಾರಣೆಗಳು ತಲೆದೋರಿದುವು. ಅಲ್ಲಿ ಒಂದು ರಾಜಕೀಯ, ಧಾರ್ಮಿಕ, ಸಾಮಾಜಿಕ ಮಹಾ ಕ್ರಾಂತಿಯೇ ಆಯಿತು. ಆದರೆ ಈ ಕ್ರಾಂತಿಯಲ್ಲಿ ಒಂದು ಹನಿ ನೆತ್ತರು ಕೂಡ ಕೆಳಗೆ ಬೀಳಲಿಲ್ಲ!

೧೯೩೮ರಲ್ಲಿ ಕೆಮಾಲ ಪಾಶರ ನಿಧನವಾದ ಬಳಿಕ ಇನೋನು ಅವರ ಸ್ಥಾನಕ್ಕೆ ಆರಿಸಲ್ಪಟ್ಟನು. ಅವನು ನವಟರ್ಕಿಯ ಎರಡನೆಯ ಪ್ರೆಸಿಡೆಂಟನಾದನು. ಇನೋನುವಿಗೆ ಸರ್ವಾಧಿಕಾರತ್ವದಲ್ಲಿ ವಿಶ್ವಾಸವಿಲ್ಲ. ಪ್ರಜಾಸತ್ತೆಯಲ್ಲಿ ಅವನಿಗೆ ಬಹಳ ಶ್ರದ್ಧೆಯಿದೆ. ಆದ್ದರಿಂದಲೇ ಹಿಟ್ಲರನ ಬಹಳ ಪ್ರಲೋಭನಗಳಿದ್ದರೂ ಅವನು ಅವಕ್ಕೆ ಮರುಳಾಗಲಿಲ್ಲ; ಬೆದರಿಕೆಗಳನ್ನು ಹಾಕಿದರೂ ಅವಕ್ಕೆ ಅಂಜಿ ಸಾಹಸಿಯು ಮಣಿಯಲಿಲ್ಲ. ಯುರೋಪಿನ ರಾಜಕಾರಣಗಳಲ್ಲಿ ದೊಡ್ಡ ದೊಡ್ಡ ಬಿರುಗಾಳಿಗಳು ಏಳುತ್ತಿವೆಯಾದರೂ ಇವನು ಮಾತ್ರ ಟರ್ಕಿಯ ನೌಕೆಯನ್ನು ಸುರಕ್ಷಿತವಾಗಿ ದಡ ಮುಟ್ಟಿಸುತಿದ್ದಾನೆ.

ಹೀಗಿದ್ದರೂ ಈ ಮಹಾವ್ಯಕ್ತಿ ಆಡಂಬರ ನು ಬಾಹು ಏನೂ ಇಲ್ಲ. ಅವನು ಕಟ್ಟಾಳುವೂ ಅಲ್ಲ. ಸ್ವಭಾವವು ಬಹಳ ಸರಳ ಮತ್ತು ಸೌಮ್ಯವಾಗಿದೆ. ಮಿತಭಾಷಿ. ನೋಡಿದರೆ ಯಾರೂ ಅವನನ್ನು ಸೇನಾಧಿಕಾರಿ ಎಂದು ಹೇಳಲಾರರು. ರಾಜನೀತಿಜ್ಞನೆಂದು ಹೇಳಲಿಕ್ಕೂ ಶಕ್ಯವಾಗುವದಿಲ್ಲ. ಇಂಥ ವಿಚಿತ್ರ ಪ್ರಕೃತಿಯ ಮನುಷ್ಯನೇ ಇನೋನು ಆಗಿರುವನು.

THE
Canara Banking Corporation Limited
(Incorporated in British India)
ESTD: 1906.
HEAD OFFICE: **UDIPI,** *South Kanara.*

SEASON DEPOSITS

are now accepted at all our Offices at the following rates of interest :

2 & 3 months	... ...	3% p. a.
4 & 5 „	... ...	3½% p. a.

These deposits will not be allowed to run beyond September 1941.

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director.*

ವಿಜ್ಞಾನಯುಗ

ಬಹು ಕೆಲಸಗಳಿಗೆ ಬರುವ ಕೋವಿಗುಂಡು

ಅಮೇರಿಕದ ಸೇನಾಖಾತೆಯ ವಿಜ್ಞಾನಿಗಳು ಒಂದು ಹೊಸ ತರದ ಕೋವಿಗುಂಡಿನ ರಚನಾಕ್ರಮವನ್ನು ತಿಳಕೊಂಡಿದ್ದಾರೆ. ಈ ಗುಂಡನ್ನು ಸಾಮಾನ್ಯ ಕೋವಿಗಸಗೂ ಮೆಶೀನುಗಳಿಗೂ ಉಪಯೋಗಿಸಲಿಕ್ಕೆ ಆಗುತ್ತದೆ. ಗುಂಡು ಹೋಗ್ಗಿ ನೋಟವನ್ನು ಹುಟ್ಟಿದಂತೆಯೇ ಅಲ್ಲಿ ಅದು ಬಾಂಬು ಸಿಡಿಯುವ ಹಾಗೆ ಸಿಡಿದು ಅನೇಕ ಗುಂಡುಗಳಾಗಿ ಗುರಿಯನ್ನು ಪುಡಿ ಪುಡಿ ಮಾಡುವದು. ವಿಮಾನಗಳ ಲೋಹಕವಚಗಳನ್ನೂ ಪುಡಿಗುಟ್ಟುವ ಅಸಾಧಾರಣ ಸಾಮರ್ಥ್ಯವು ಈ ಗುಂಡಿಗೆ ಇರುತ್ತದೆ. ಮೊದಲು ಗುಂಡುಮಾಡಿ, ಮತ್ತೆ ಅದನ್ನು ಕೊರೆದು ಅದರೊಳಗೆ ಸ್ಫೋಟನ ದ್ರಾವಕಗಳನ್ನು ಚಿಕ್ಕ ಗುಂಡುಗಳನ್ನು ಮಡಗಿಸುವರು. ಮತ್ತೆ ಬಾಯಿಯನ್ನು ಒಂದು ಮೊಳೆಯಿಂದ ಮುಚ್ಚುವದು. ಗುಂಡು ಯಾವುದಾದರೊಂದು ವಸ್ತುವಿಗೆ ಹೋಗಿ ಅಪ್ಪಳಿಸಿದೊಡನೆ, ಮೊಳೆಯು ಒಳಗೆ ಅಮುಕಿದಂತಾಗಿ ಗುಂಡು ಸಿಡಿಯುವದು. ಇದೇ ಗುಂಡಿನೊಳಗೆ ಸ್ಫೋಟನದ್ರಾವಕ ಮತ್ತು ಗುಂಡುಗಳ ಬದಲಿಗೆ ಬೆಂಕಿ ಹಿಡಿಯುವ ದ್ರಾವಕಗಳನ್ನು ತುಂಬಿಸಿದರೇ ಗುಂಡು ಬಿದ್ದಾಗ ಅಲ್ಲಿ ಅಗ್ನಿ ಪ್ರಳಯವೇ ಆಗಿ ಬಿಡುವದು! ಹೀಗೆ ಈ ಗುಂಡು ಹಲವಾರು ಕೆಲಸಗಳಿಗೆ ಬರುತ್ತದೆ.

◆ ◆

ಮದ್ಯಪಾಯಿಗಳಿಗೆ ಔಷಧಿ

ಮದ್ಯಪಾಯಿಗಳ ಕುಡಿಯುವ ಅಭ್ಯಾಸವನ್ನು ಸುಲಭದಲ್ಲಿ ಬಿಡಿಸಲಿಕ್ಕಾಗುವುದಿಲ್ಲ. ಅವರನ್ನು ಆ ಅಭ್ಯಾಸ ಬಿಡಲಿಕ್ಕೆ ಬಲತ್ಕಾರಮಾಡಿದರೆ, ಒಂದು ಬಗೆಯ ಮಾನಸಿಕ ಶಾರೀರಿಕ ಯಾತನೆಯಿಂದ ಅವರು ಸತ್ತೇ ಹೋಗಬಹುದು. ಆದ್ದರಿಂದ ಆ ದುರಭ್ಯಾಸವನ್ನು ಬಹಳ ಜಾಗ್ರತೆಯಿಂದ ಬಿಡಿಸಬೇಕಾಗುತ್ತದೆ. ಸಂಯುಕ್ತ ಸಂಸ್ಥಾನಗಳ ಇಬ್ಬರು ಡಾಕ್ಟರರು ಇದಕ್ಕೆ ಒಂದು ಸುಲಭ ಉಪಾಯವನ್ನು ಸೂಚಿಸಿದ್ದಾರೆ. ಮದ್ಯಪಾಯಿಗೆ ಮೊದಲು ಬೇಕಾದಷ್ಟು ಮದ್ಯವನು ಕುಡಿಯಲಿಕ್ಕೆ ಕೊಡಬೇಕು ಮತ್ತೆ ಆ ಕೂಡಲೆ ಅವನಿಗೆ ವಾಂತಿಗೆ ಔಷಧಿ ಅಥವಾ ಇಂಜಕ್ಶನು ಕೊಡಬೇಕು. ಹೀಗೆ ಪ್ರತಿದಿನವೂ ಕುಡಿದ ಮದ್ಯವೆಲ್ಲಾ ವಾಂತಿಯಾಗಿ ಹೋಗುತ್ತಾ, ಮದ್ಯಪಾಯಿಗೆ ಮದ್ಯದ ಮೇಲೆ ಒಂದು ತರದ ಅಸಹ್ಯತೆಯು ಹುಟ್ಟುವದು. ಮದ್ಯವೆಂದರೆ ಅವನಿಗೆ ವಾಕರಿಕೆಯಾಗುವುದು. ಅನಂತರ ಅವನು ಮದ್ಯವನ್ನು ಮುಟ್ಟುವದೇ ಇಲ್ಲ. ಈ ರೀತಿಯಲ್ಲಿ ಚಿಕಿತ್ಸೆಮಾಡಿ, ಅವರು ಅನೇಕ ಮದ್ಯಪಾಯಿಗಳ ಆ ಅಭ್ಯಾಸವನ್ನು ಬಿಡಿಸಿರುವರು.

◆ ◆

ಸತ್ತ ಮೇಲಿನ ಜೀವಿಗಳ ಸ್ಥಿತಿಗತಿ

ಇದನ್ನು ತಿಳಕೊಳ್ಳುವದಕ್ಕಾಗಿ ಪ್ರಪಂಚದ ಅನೇಕ ವಿಜ್ಞಾನಿಗಳು ಬಹಳ ಸಮಯದಿಂದ ಹಲವು ಪ್ರಯತ್ನಗಳನ್ನು ಮಾಡಿದ್ದಾರೆ. ಇವರಲ್ಲಿ ಈಗ ದಿವಂಗತರಾಗಿರುವ ಸರ್ ಒಲಿವರ್ ಲೋಜರು ಬಹಳ ಪ್ರಸಿದ್ಧರು. ಇವರು ಸಾಯುವ ಮೊದಲು ಕೆಲವು ಗುಪ್ತ ಲಿಖಿತಗಳನ್ನು ಬರೆದು ತಮ್ಮ ಉತ್ತರಾಧಿಕಾರಿಗಳಿಗೆ ಕೊಡುತ್ತಾ, ಅವುಗಳೊಳಗೆ ಬರೆದಿರುವ ವಿಷಯಗಳನ್ನು ಪರಲೋಕಗಳಿಂದ ಬರುವ ಪ್ರೇತ ಸಂದೇಶಗಳೊಂದಿಗೆ ಹೋಲಿಸಿ ಸತ್ತ ಮೇಲಿನ ಜೀವಿಗಳ ಸ್ಥಿತಿಗತಿಗಳ ಸತ್ಯವನ್ನು ತಿಳಕೊಳ್ಳಬೇಕೆಂದಿದ್ದಾರೆ. ಇದಕ್ಕಾಗಿ ಅವರು ಲಂಡನಿನ ಪರಲೋಕ ವಿದ್ಯಾಸಂಸ್ಥೆದವರ ತಜ್ಞ ಸಹಾಯವನ್ನು ಪಡೆಯಬೇಕೆಂದು ಸೂಚಿಸಿರುವರು. ಇಹಲೋಕದಲ್ಲಿ ಹೇಗೋ, ಪರಲೋಕದಲ್ಲಿಯೂ ಜೀವಿಯ ಜೀವನ ಕ್ರಮವು ಇರುತ್ತೆವೆ, ಮತ್ತು ಅವೇ ಭಾವ, ಸಂಸ್ಕಾರಗಳಿಗೆ ಪರವಶನಾಗಿ ಅದು ಇರುತ್ತದೆ ಎಂದು ಈ ವಿಜ್ಞಾನಿಗಳ ವಿಶ್ವಾಸವಿದೆ. ಅದನ್ನು ಒರೆಗಲ್ಲಿಗೆ ಹಚ್ಚಿ ಸತ್ಯವನ್ನು ತಿಳಕೊಳ್ಳಬೇಕೆಂದೂ ಅಲ್ಲಿಯ ಎಲ್ಲಾ ಸಂಗತಿಗಳನ್ನು ತಿಳಕೊಳ್ಳಬೇಕೆಂದೂ ಈ ವಿಜ್ಞಾನಿಗಳು ಸಾಧಿಸುತ್ತಿದ್ದಾರೆ. ಅದಕ್ಕಾಗಿಯೇ ಅವರು ಪರಲೋಕದಲ್ಲಿರುವ ಸರ್ ಒಲಿವರ್ ಲೋಜರ ಸಂದೇಶವನ್ನು ಕಾಯುತ್ತಿದ್ದಾರೆ.

◆ ◆

ರಾತ್ರಿಕಾಲದಲ್ಲೂ ಫೋಟೋ ತೆಗೆಯಬಹುದು

ರಾತ್ರಿಕಾಲದಲ್ಲಿ ನಾಲ್ಕೂ ಸುತ್ತ ಗಾಢಾಂಧಕಾರವು ತುಂಬಿದ್ದಾಗಲೂ ಶತ್ರುವ್ಯೂಹಗಳ ಛಾಯಾಚಿತ್ರ ತೆಗೆಯಲಾಗುವಂತೆ ಅಮೇರಿಕದ ಕೆಲವು ವಿಜ್ಞಾನಿಗಳು ಒಂದು ಹೊಸ ಸಾಧನವನ್ನು ಕಂಡುಕೊಂಡಿದ್ದಾರೆ. ರಾತ್ರಿಕಾಲದಲ್ಲಿ ವಿಮಾನಗಳಲ್ಲಿ ಹಾರಾಡುತ್ತಾ ಶತ್ರುಪ್ರದೇಶಗಳ ಮೇಲೆ ಬಂದಾಗ, ಅಲ್ಲಿ ಅವರು ಬಹಳ ತೀಕ್ಷ್ಣವಾದ ಪ್ರಕಾಶವನ್ನು ಬೀರುವ ಮೆಗ್ನೇಶಿಯಂ ಹುಡಿಯ ಗೋಲಕವನ್ನು ಕೆಳಗೆ ಬಿಡುವರು. ವಿಮಾನಗಳು ೫೦೦೦ ಅಡಿಗಳ ಎತ್ತರದಲ್ಲಿದ್ದುವಾದರೂ ಈ ಗೋಲಕಗಳಿಂದ ಹೊರಟ ಒಂದು ವಿದ್ಯುತ್ಪ್ರವಾಹವು ವಿಮಾನದೊಳಗಿನ ಕೆಮೆರದ ಬಾಗಿಲನ್ನು ತನ್ನಷ್ಟಕ್ಕೆ ತೆರೆಸುವದು ಮತ್ತು ಅದೇ ಸಮಯ ಮೆಗ್ನೇಶಿಯಂ ಹುಡಿಯು ಉರಿದು ಸೂರ್ಯಪ್ರಕಾಶದಂಥ ಬೆಳಕನ್ನು ಕೊಡುವದು. ಆ ಬೆಳಕಿನಲ್ಲಿ ಶತ್ರುವ್ಯೂಹಗಳ ಛಾಯಾಚಿತ್ರಗಳೆಲ್ಲ ಕೆಮೆರದಲ್ಲಿ ಬಂದುಬಿಡುವವು. ಈ ಹೊಸ ಸಾಧನಗಳು ಬ್ರಿಟಿಷರಲ್ಲಿಯೂ ಇವೆಯಂತೆ. ಆದಕಾರಣ ಅವರಿಗೆ ಈ ಯುದ್ಧದಲ್ಲಿ ಜರ್ಮನಿಯ ಮಿಲಿಟರಿ ವಿಷಯಗಳು ತಿಳಿಯುವದು ಸುಲಭವಾಗಿದೆ.

◆ ◆

ಅತಿ ಚಿಕ್ಕ ಮೆಶೀನು ಗನ್ನು

ಕೇವಲ ೨೦೦-೩೦೦ ಡಾಲರುಗಳನ್ನು ಖರ್ಚುಮಾಡಿ ಚಿಕ್ಕ ಮೆಶೀನು ಗನ್ನುಗಳನ್ನು ತಯಾರಿಸಲಿಕ್ಕಾಗುತ್ತದೆ, ಮತ್ತು ಅಂಥ ಯುದ್ಧೋಪಕರಣಗಳು ಬಹಳ ಪ್ರಚಾರದಲ್ಲಿವೆ ಎಂಬುದನ್ನು ವಾಚಕರು ಈ ಮೊದಲೇ ತಿಳಿದಿರಬಹುದು. ಈಗ ವಿಜ್ಞಾನಿಗಳು ಇವಕ್ಕೂ ಚಿಕ್ಕ ಮೆಶೀನು ಗನ್ನುಗಳನ್ನು ತಯಾರಿಸಿದ್ದಾರೆ. ಇವುಗಳು ಕೇವಲ ಆರು ರಾತಲು ಭಾರವಿರುವವು. ಆದರೆ ಕಾರ್ಯನಿರ್ವಾಹದಲ್ಲಿ ಇವು ದೊಡ್ಡ ಗನ್ನುಗಳಿಗೇನೂ ಕಡಿಮೆಯಾಗಿಲ್ಲ. ಇವು ನಿಮಿಷಕ್ಕೆ ೨೦೦ ಗುಂಡುಗಳನ್ನು ಹಾರಿಸಬಲ್ಲವು. ಮತ್ತು ಇವುಗಳ ವೆಚ್ಚವು ಬರೇ ೫೦ ಡಾಲರುಗಳು ಇರುತ್ತವೆ. ಇವನ್ನು ಅಸಂಖ್ಯಾತವಾಗಿ ತಯಾರಿಸಿ ರಣರಂಗಕ್ಕೆ ಕಳುಹಿಸಲಿಕ್ಕೆ ಅಮೇರಿಕದಲ್ಲಿ ದೊಡ್ಡ ಕಾರ್ಖಾನೆಯೊಂದು ಸ್ಥಾಪಿತವಾಗುತ್ತಾ ಇದೆ.

◆ ◆

ನೊಣ ಚಿಕ್ಕಾಡುಗಳನ್ನು ಕೊಲ್ಲುವ ಉಪಾಯ

ಅನೇಕ ಭಯಂಕರ ರೋಗಗಳಿಗೆ ಕಾರಣವಾದ ನೊಣ, ಚಿಕ್ಕಾಡು, ಸೊಳ್ಳೆ, ಅಣು ಜೀವಿಗಳು ಇರುವವಷ್ಟೆ! ಇವನ್ನು ಕೊಲ್ಲಲಿಕ್ಕೂ ನಿರ್ಮೂಲನಾಶ ಮಾಡಲಿಕ್ಕೂ ವಿಜ್ಞಾನಿಗಳು ಬಹಳ ಉಪಾಯಗಳನ್ನು ತೋರಿಸಿಕೊಡುತ್ತಾರೆ. ಕ್ರಿಮಿನಾಶಕ ಲೋಶನುಗಳಿಂದ ಇವನ್ನು ಕೊಲ್ಲುವದು ಎಲ್ಲೆಡೆಗಳಲ್ಲಿಯೂ ಪ್ರಚಾರದಲ್ಲಿರುವ ಕ್ರಮವಾಗಿದೆ. ಪರಂತು ಈ ಯಾವ ಉಪಾಯದಿಂದಲೂ ಇವನ್ನು ಸಂಪೂರ್ಣ ನಾಶಮಾಡುವದು ಸಾಧ್ಯವಾಗಿಲ್ಲ. ಅದಕ್ಕಾಗಿಯೇ ಈಗ ವಿಜ್ಞಾನಿಗಳು ರೋಗಕಾರಕ ಕ್ರಿಮಿಕೀಟಗಳನ್ನು ನಾಶಮಾಡಲಿಕ್ಕೆ ಅವನ್ನು ತಿಂದ ಬದುಕುವ ಕ್ರಿಮಿಕೀಟಗಳನ್ನು ಸಾಕಿಬೇಕು ಎನ್ನುತ್ತಿದ್ದಾರೆ. ಪ್ರತಿಯೊಂದು ರೋಗಕಾರಕ ಕ್ರಿಮಿಕೀಟಕ್ಕೆ ಅವನ್ನು ತಿಂದ ಜೀವಿಸುವ ಶತ್ರು ಜೀವಿಯು ಇರುತ್ತದೆ. ಈ ಶತ್ರು ಜೀವಿಗಳನ್ನು ಸಾಕಿದರೆ ಅವು ರೋಗಕಾರಕ ಕ್ರಿಮಿಕೀಟಗಳನ್ನು ತಿಂದು ಹಾಕಿ ಅವುಗಳ ಉಪಟಳವನ್ನು ತಗ್ಗಿಸುವವು. ಆದ್ದರಿಂದಲೇ ಇಟಲಿಯಲ್ಲಿ ಸೊಳ್ಳೆಯ ಬಾಧೆಯನ್ನು ನಿವಾರಿಸಲಿಕ್ಕೆ ಸ್ವೆಲ್ಲೋ ಎಂಬ ಪಕ್ಷಿಯನ್ನು ಸಾಕುತ್ತಾರೆ. ಉರುಗ್ವೆಯಲ್ಲಿ ಪೈರನ್ನು ನಾಶ ಮಾಡುವ ಮಿಡಿತೆಗಳನ್ನು ಕೊಲ್ಲಲಿಕ್ಕೆ ಬೆಕ್ಟೀರಿಯಗಳನ್ನು ಸಾಕಿದ್ದಾರೆ. ಕ್ವೀನ್ಸ್‌ಲೆಂಡಿನಲ್ಲಿ ಕಬ್ಬನ್ನು ಹಾಳುಮಾಡುವ ಅಣುಜೀವಿಗಳನ್ನು ಕೊಲ್ಲಲಿಕ್ಕೆ ಗೋಕರ ಕಪ್ಪೆಗಳನ್ನು ಸಾಕುತ್ತಿದ್ದಾರೆ.

ರೂ. 3/9 ಲಾಭ
ಪ್ರತಿ ರೂ. 10/- ಕ್ಕೆ
ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳು
ನಿಮ್ಮ ಹತ್ತಿರದ ಪೋಸ್ಟ್ ಆಫೀಸಿನಲ್ಲಿ ಪೂರ್ಣ ವಿವರಗಳನ್ನು ತಿಳಿದುಕೊಳ್ಳಿ.
Kn: 6J. 39.

ಬಡತನದಿಂದಲಾಗಿ ತಾಯಿ ಮಗುವಿಗೆ ಅಫೀಮು ಕೊಟ್ಟಳು

ತ್ರಾವಂಕೋರಿನಲ್ಲಿ ನಿರುದ್ಯೋಗದ ಪರಿಣಾಮವಾಗಿ ತಾಯಿ ತನ್ನ ಮಗುವಿಗೆ ಅಫೀಮು ಕೊಟ್ಟ ಆರೋಪದಿಂದ ಗಲ್ಲಿಗೇರಿಸುವ ಶಿಕ್ಷೆಗೆ ಗುರಿಯಾದಳು. ಹೊಟ್ಟೆಗಿಲ್ಲದ ಕಾಲದಲ್ಲಿ ತಾನು ಹಾಗೆ ಮಾಡಬೇಕಾಯಿತು ಎಂದು ಅವಳು ಕಂಬನಿ ಸುರಿಸಿ ಹೇಳಿದಳು. ತೀರ್ಪು ಕೊಡುವಾಗ ಜಡ್ಜರ ಕುತ್ತಿಗೆ ಬಿಗಿದು ಬಂದಿತು

ಡಿಲ್ಲಿಗೆ ನಡೆದ ಕೇರಳದ ಸತ್ಯಾಗ್ರಹಿ ಮಡಿದನು

ಬಂಧಿತನಾಗದೆ ಡಿಲ್ಲಿಗೆ ಕಾಲ್ನಡೆಯಿಂದ ಹೋಗುತ್ತಿದ್ದ ಕೇರಳದ ಶ್ರೀ ರಾಮಲಿಂಗಂ ಮುದಲಿಯಾರ ಎಂಬ ಸತ್ಯಾಗ್ರಹಿ ಮಡಿದನು ಆತನ ಶವ ಸಂಸ್ಕಾರ, ಅಂತ್ಯಕ್ರಿಯೆಗಳನ್ನು ಕೇರಳ ಪ್ರಾಂತದವರು ಬಹಳ ವಿಜೃಂಭಣೆಯಿಂದ ನಡೆಸಿದರು

ಅಕ್ಕಿಧಾರಣೆ ಏರಿದೆ

ಮುಂಬೈಯಲ್ಲಿ ಅಕ್ಕಿಯ ಕೊರತೆಯಾದುದರಿಂದ ಧಾರಣೆಯು ಫಕ್ಕನೇ ಏರಿರುವುದು

ಸಾದರ-ಸ್ವೀಕಾರ

ಗಾಯತ್ರಿ — (ಕೈ ಬರಹದ ತ್ರೈಮಾಸಿಕ ಪತ್ರಿಕೆ) ಪೆರಡಾಲಿನ ಮಹಾಜನ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳ ಉದ್ಯಮ ವಿದು ಮೂರನೆಯ ಸಂಪುಟದ ಮೂರನೆಯ ಸಂಚಿಕೆ ನಮ್ಮ ಕೈಸೇರಿದೆ ಆದರದಿಂದ ಸ್ವೀಕರಿಸಿದ್ದೇವೆ

ಹೆಚ್ಚಾಗಿ ಇದರಲ್ಲಿ ಸಂಸ್ಕೃತ ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳು ಹಾಗೂ ಕೆಲವು ಪ್ರಾಸಂಗಿಕ ವಿಷಯಗಳ ಕುರಿತು ಬರೆದ ಲೇಖನಗಳೂ, ಮತ್ತೆ ಕವಿತೆ ಕತೆ ಪ್ರಬಂಧಗಳೂ ಕೂಡಿದ್ದು ಈ ಕೈಬರಹದ ಪತ್ರಿಕೆಯು ವಾಚನೀಯ ವಿದೆ ಇಂದು ಮೂರು ವರ್ಷಗಳನ್ನು ಮಾತ್ರ ದಾಟಿ ಈ ಪತ್ರಿಕೆಯು ಮುಂದೆ ನೂರು ವರ್ಷಗಳ ವರೆಗೂ ವಿದ್ಯಾರ್ಥಿಗಳ ಲೇಖನಶಕ್ತಿಯನ್ನು ಹೆಚ್ಚಿಸಿಕೊಂಡು ಬಾಳಲೆಂದು ನಮ್ಮ ಹಾರ್ದಿಕವಾದ ಹಾರೈಕೆಯಾಗಿದೆ ಪುಸ್ತಕದ ಹೊರ ಒಳ ಪುಟಗಳನ್ನು ಚಲೋದಾಗಿ ಮಾಡುವುದೂ, ಲೇಖನ ಕಲೆಯಲ್ಲಿ, ಪತ್ರಿಕೋದ್ಯಮದಲ್ಲಿ ವಿಶೇಷ ಗಮನೀಯ ಮಾಡೆಂದು ವಿಚಾರವೆಂಬುದನ್ನು ತರುಣ ಉತ್ಸಾಹಿಗಳಾದ ಈ ಪತ್ರಿಕಾ ಸಂಪಾದಕ ಮಂಡಳಿಯವರಿಗೆ ನಾವು ಸೂಚಿಸಲು ಇಚ್ಛಿಸುತ್ತೇವೆ

ನೋಟೀಸು

ದಕ್ಷಿಣ ಕನ್ನಡ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

(O S 362/39) R E P 664/1940

ಶ್ರೀ ವಿಶ್ವೇಶ ತೀರ್ಥ ಸ್ವಾಮಿರು (ಮೈನರರು) ಇವರ ಹಿತಚಿಂತಕರು ವ ರಕ್ಷಕ ಮಿಯಾಳ ನರಸಿಂಹಾಚಾರ್ಯ—

ಅರ್ಜಿದಾರರು (ವಾದಿ)

ಮತ್ತು

ಲಕ್ಷ್ಮಿ ಶೆಡ್ತಿ ಕೋಟಿ ಶೆಟ್ರ ವಿಧವೆ ಮಂಗಳೂರು ತಾಲೂಕು ಕೊಂಡೆಮೂಲ ಗ್ರಾಮದ ಕಟೀಲಿನಲ್ಲಿರುವವಳು—

ರೆಸ್ಪೊಂಡೆಂಟಳು-(ಪ್ರತಿವಾದಿಳು)

ಸದ್ರಿ ಮೇಲ್ಕಾಣಿಸಿದ O S 362/39 ನೇ ನ್ಯಾಯ್ಯದ ಡಿಕ್ರಿ ಮೇಲೆ ಮೇಲಿನ ಅರ್ಜಿದಾರರು ಸದ್ರಿ ರೆಸ್ಪೊಂಡೆಂಟಳ ಸ್ಥಿರಾಸ್ತಿ ಏಲಂ ಬಗ್ಗೆ ದಾಕ್ಲು ಮಾಡಿದ ಸದ್ರಿ ಮೇಲಿನ ಅಮ್ಲಜ್ಯಾರಿಯು ತಾ 13 6 1941ನೆ ಪೂರ್ವಾಹ್ನ 10 30 ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಸದ್ರಿ ಅಮ್ಲಜ್ಯಾರಿಯಲ್ಲಿ ದಾಕ್ಲು ಮಾಡಿದ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತನ್ನಿಗೆ ಇಟ್ಟಿರುತ್ತದೆ ಸದ್ರಿ ದಿವಸ ಪ್ರತಿವಾದಿಳು (ರೆಸ್ಪೊಂಡೆಂಟಳು) ಖುದ್ದಾಗಿ ಯಾ ವಕೀಲರ ಮುಖಾಂತರ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪನೆ ಇದ್ದರೆ ಮನವಿ ಮಾಡಿಕೊಳ್ಳಬಹುದು ತಪ್ಪಿದರೆ ಸದ್ರಿ ಅಮ್ಲಜ್ಯಾರಿಯು ಅವಳ ಗೈರಹಾಜರಿಯಿಂದ ತೀರ್ಮಾನವಾಗುವುದು ಎಂತ ಕೋರ್ಟಿನ ಹುಕ್ಕುಂ ಪ್ರಕಾರ ಪ್ರಕಟಿಸಲಾಗಿಯದೆ

ಮಂಗಳೂರು 7-4-41 **M Vasudeva Rao,** Advocate for Petitioner

NOTICE

In the Court of the District Munsif of Mangalore

R E P. No 711/1940

Sub Court S C No 70/19 8

Between —

The Jayalaxmi Bank Ltd, Mangalore

Petitioner (decree holder)

and

Kudpi Venkat Rao & another Respondents (Judgment debtors)

To

Kudpi Venkat Rao, son of Ananthayya Teacher Kenju Board School, Bajpe 1st Respondent

Whereas the above named petitioner decree holder has applied to the sale of the immoveable properties more fully described in the draft sale proclamation filed into Court

You are hereby warned that the 7th day of June 1941 has been fixed for settling the terms of the proclamation, and you are hereby requested to appear and contest the same failing wherein the same shall determined exparte

Mangalore 4-1941 G Somasheker Rao, Vakil for Petitioner

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9— — 1940

FROM
Sri K. Shivarama Nair,
Kerikcundah Estate,
Post Devegadabettu,
KADUR DISTRICT

To,
The Joint Managers,
C P. C Motor Service Ltd,
MANGALORE

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter

I am much glad to state that the staff of your Company is taking keen interest and no worries whatever for the passengers and conveying my best thanks to all of you

Yours faithfully,

(Sd) K. Shivarama Nair.

Regd. No. M. 3460

ಸ್ವದೇಶಾಭಿಮಾನಿ

ಸಂಪುಟ 35] ತಾರೀಕು 11—4—1941 [ಸಂಚಿಕೆ 15]

The Bombay Life Assurance Company, Ltd.

(ESTABLISHED 1908)

Death! is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT—

Pathivara Calicut	Car Street, Mangalore.	Central Station Road Trivandrum
Gautam Nivas Chami Road, Bombay No 4	Post Box No 337 Mount Road, Madras	Visvesvarapuram Circle, Bangalore City

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕು-ಕತ್ತರಿ ಗಾಯ, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ... ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಗಜ್ಜಿ, ಹುಳುಕಡ್ಡಿ, ಸಿಬ್ಬ, ಉಪದ್ರವ, ಕಜ್ಜಿತುರಿ, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ಠಾಗೂರರು

ವಿಶ್ವಕವಿ ರವೀಂದ್ರರ ೮೦ನೆಯ ಹುಟ್ಟಿದ ಹಬ್ಬವು ಎಪ್ರಿಲ್ ತಿಂಗಳ ೧೪ರಂದ 'ವಿಶ್ವ ಭಾರತಿ'ಯಲ್ಲಿ ನೆರವೇರಿತು

KANNADA ILLUSTRATED WEEKLY

ಮತ್ಸೂಕರ

ಯುರೋಪು ಯಾತ್ರೆಯ ಉದ್ದೇಶವೇನು!

ಜಪಾನು ಲೋಕಯುದ್ಧದಲ್ಲಿ ದುಮುಕುವುದೆ?

ಹಿಟ್ಲರನ ಬಾಲಹಿಡಿದು ಕುಣಿದಾಡುವುದೆ?

ಜಪಾನಿನ ಪರರಾಷ್ಟ್ರ ಸಚಿವರಾದ ಮತ್ಸೂಕರವರು ಯುರೋಪಿಗೆ ಪ್ರಯಾಣ ಬೆಳಸಿ, ರಷ್ಯ ಮತ್ತು ಜರ್ಮನಿಯ ರಾಜಕಾರಣಿಗಳನ್ನೂ ಅಧಿಕಾರ ವರ್ಗದವರನ್ನೂ ಕಂಡು ಮಾತನಾಡಿರುವುದು ಪ್ರಕಟವಾಗಿದೆ ಯಷ್ಟೆ? ಜಪಾನು ಒಂದಲ್ಲ ಒಂದು ದಿನ, ಮತ್ತು ಬಹು ಶೀಘ್ರದಲ್ಲಿ ಲೋಕಯುದ್ಧದಲ್ಲಿ ಧುಮುಕಬೇಕಾದ ಪ್ರಸಂಗ ಬಂದರೆ ಜಪಾನಿನ ಕಾರ್ಯಸಾಧನೆಯಾಗಬೇಕಾದರೆ ರಷ್ಯದ ಸ್ನೇಹವು ಅವಶ್ಯವಾಗಿರಲು ಅದನ್ನು ಸಂಪಾದಿಸಲಿಕ್ಕಾಗಿಯೇ ಮತ್ಸೂಕರು ಯುರೋಪಿಗೆ ಹೋದುದಾಗಿ ಹೇಳುವರು ಜಪಾನು, ಜರ್ಮನಿ ಇಟಲಿಗಳೊಡನೆ ಒಡಂಬಡಿಕೆ ಮಾಡಿಕೊಂಡಿರುವುದರಿಂದ ಜರ್ಮನಿಗೆ ಯಥೇಷ್ಟ ಲಾಭವಾಗಿದಯಾದರೂ ಹಿಟ್ಲರನ ಬಾಲ ಹಿಡಿದು ಕುಣಿದಾಡಿ ಜಪಾನಿಗೆ ಮಹತ್ವದ ಏನೂ ಲಾಭವಾಗಿರುವುದಿಲ್ಲವಾಗಿ ಅಂತಹ ಲಾಭವನ್ನೇನಾದರೂ ಪಡೆಯಲಿಕ್ಕಾಗುತ್ತದೆಯೇ ಎಂದು ಪ್ರಯತ್ನಿಸಲಿಕ್ಕೆ ಮತ್ಸೂಕರು ಯುರೋಪಿಗೆ ಹೋದುದು ಎಂದು ಊಹಿಸಲಿಕ್ಕೆ ಬಲವಾದ ಆಧಾರಗಳಿವೆ

ಜಪಾನಿನ ದುಸ್ಥಿತಿ

ಜಪಾನಿನ ಸ್ಥಿತಿಗತಿಗಳು ದಿನದಿಂದ ದಿನಕ್ಕೆ ಕೆಡುತ್ತಾ ಬರುತ್ತಿವೆ ಚೀನದೊಡನೆ ಮಾಡಿದ ನಾಲ್ಕು ವರ್ಷಗಳ ಹೋರಾಟದಲ್ಲಿ ಅದಕ್ಕೆ ಪರಾಭವವಲ್ಲದೆ ಮತ್ತೇನೂ ಕೈಗೆ ಸಿಕ್ಕಿರುವುದಿಲ್ಲ ಈ ಯುದ್ಧದ ದೆಸೆಯಿಂದ ಜಪಾನಿನ ಆರ್ಥಿಕ ಸ್ಥಿತಿಯು ಕಟ್ಟಿದೆ ಕರಕಂದಾಯಗಳು ಬೆಳೆದಿವೆ ಜನರಲ್ಲಿ ಬಹಳ ಅಸಂತುಷ್ಟಿಯುಂಟು ಜಪಾನೀ ಸಾಮ್ರಾಟರನ್ನು ಪ್ರತ್ಯಕ್ಷ ದೇವರೆಂದೇ ತಿಳಿಯುವ ಶ್ರದ್ಧಾಭಾವವು ಜಪಾನೀಯರಲ್ಲಿ ರೂಢಮೂಲವಾಗಿರುವುದರಿಂದ ಮಾತ್ರ ಜನತೆಯು ಸರಕಾರದ ವಿರುದ್ಧ ದಂಗೆ ಏಳಲಾರದೆ ಎಲ್ಲವನ್ನೂ ನಿರುಪಾಯವಾಗಿ ಸಹಿಸಿಕೊಂಡಿರಬೇಕಾಗಿದೆ. ಸರಕಾರದ ಯುದ್ಧವೆಚ್ಚವು ವರ್ಷಕ್ಕೆ ಐನೂರು ಮಿಲಿಯ ಯೆನ್ನುಗಳಷ್ಟು ಇದೆ ಆದ್ದರಿಂದ ಅದರ ಆರ್ಥಿಕ ಕಟ್ಟಡವು ಮುರಿದು ಬೀಳುವ ಹಾಗೆ ಇದೆ ಇದು ಸರಕಾರಕ್ಕೆ ಚೆನ್ನಾಗಿ ತಿಳಿದಿದೆ ಆದ್ದರಿಂದ ಅದು ಈಗಲೇ ಮುಂಜಾಗ್ರತೆ ತೆಗೆದುಕೊಳ್ಳಬೇಕಾಗಿ ಬಂದಿರುವುದು

ಅಸಹಾಯತೆಯ ಕಷ್ಟ

ಜಪಾನು ಬಹಳ ಅಸಹಾಯ ಸ್ಥಿತಿಯಲ್ಲಿಯೂ ಇದೆ. ಜಪಾನು ಕೈಗಾರಿಕೆಯಲ್ಲಿ ಬಹಳ ಮುಂದುವರಿದ ರಾಷ್ಟ್ರವಾದರೂ ಕಚ್ಚಾ ಸಾಮಗ್ರಿಗಳ ಮಟ್ಟಿಗೆ ಅದು ಪರಾವಲಂಬಿಯಾಗಿರುವುದು. ಅದಕ್ಕೆ ಬೇಕಾದ ಹತ್ತಿ, ಉಣ್ಣೆ, ಕಬ್ಬಿಣ, ಎಣ್ಣೆ, ರಬ್ಬರು ಮೊದಲಾದುವು ಅದಕ್ಕೆ ಹಿಂದುಸ್ಥಾನ, ಆಫ್ರಿಕ, ಆಸ್ಟ್ರೇಲಿಯಾ ಮಲಯಾ ಮೊದಲಾದ ದೇಶಗಳಿಂದಲೇ ಬರಬೇಕು ಎಣ್ಣೆಯ ಮಟ್ಟಿಗೆ ಅದು ಸ್ವಲ್ಪ ಕಾಲ ನಿಶ್ಚಿಂತವಾಗಿರಬಹುದು ಕಾರಣ, ಅದು ತುಂಬಾ ಎಣ್ಣೆಯನ್ನು ಸಂಗ್ರಹಿಸಿ ಇಟ್ಟಿದೆ ಈ ಸಂಗ್ರಹವು ಕಳೆದ ವರ್ಷಕ್ಕಿಂತ ಈ ವರ್ಷ ಏಳು ಪಾಲಷ್ಟು ಹೆಚ್ಚಾಗಿದೆ ಮತ್ತು ಡಚ್ ದ್ವೀಪ ಸಮುದಾಯಗಳೊಡನೆಯೂ ಅದ ೯ ಲಕ್ಷ ಗೆಲನ್ ಎಣ್ಣೆಗೆ ಹೊಸ ಕರಾರು ಮಾಡಿಕೊಂಡಿದೆ. ರಬ್ಬರಿನ ವಿಷಯದಲ್ಲಿಯೂ ಅದಕ್ಕೆ ಕಷ್ಟ ಬರಲಾರದು ಯಾಕಂದರೆ ಇಂಡೋ ಚೀನದಲ್ಲಿ ಈಗ ಅದರ ಬೇಳೆ ಬೆಳೆಯುತ್ತಿರುವುದರಿಂದ ಅಲ್ಲಿಂದ ಅದು ಬೇಕಾದಷ್ಟು ರಬ್ಬರನ್ನು ತರಿಸಿಕೊಳ್ಳಬಹುದು. ಆದರೆ ಉಳಿದ ಸಾಮಗ್ರಿಗಳ ಮಟ್ಟಿಗೆ ಏನು ಮಾಡಬಹುದು? ಶಾಂತಿಯ ಕಾಲದಲ್ಲಿ ಇವನ್ನು ಜಪಾನು ಹೊರದೇಶಗಳಿಂದ ತರಿಸಿಕೊಂಡಿತೆಂದು ಈಗ ಯುದ್ಧಕಾಲದಲ್ಲಿ ಅವನ್ನು ಆ ದೇಶಗಳಿಂದ ತರಿಸಿಕೊಳ್ಳುವ ಹಾಗಿಲ್ಲ ಹಾಗೆಂದು ಈ ಸಾಮಗ್ರಿಗಳಿಲ್ಲದೆ ಅದರ ನಿರ್ವಾಹವಾಗುವ ಹಾಗೂ ಇಲ್ಲ ಜರ್ಮನಿಯಿಂದ ಈ ಸಾಮಗ್ರಿಗಳನ್ನು ಮುಖ್ಯವಾಗಿ ಕಬ್ಬಿಣವನ್ನು ಪಡೆಯಲಿಕ್ಕೆ ಸಾಧ್ಯವೇ ಎಂಬುದನ್ನು ಪರೀಕ್ಷಿಸಲಿಕ್ಕೆ ಮತ್ಸೂಕರು ಅಲ್ಲಿಗೆ ಹೋಗಿದ್ದಾರೆ.

ಕಂಗೆಟ್ಟವರೊಡನೆ ಭಿಕ್ಷೆ

ಆದರೆ ಜರ್ಮನಿ ಜಪಾನಿಗೆ ಏನು ಕೊಡಬಹುದು? ಇದು ಕಂಗೆಟ್ಟವರೊಡನೆ ಮತಿಗೆಟ್ಟವರು ಭಿಕ್ಷೆಗೆ ಹೋದ ಹಾಗೆ ಇದೆ. ಕಬ್ಬಿಣ, ಮೊದಲಾದ ಯುದ್ಧಕ್ಕೆ ಬೇಕಾದ ಕಚ್ಚಾ ಸಾಮಗ್ರಿಗಳು ಜರ್ಮನಿಗೆ ಎಷ್ಟಿದ್ದರೂ ಸಾಲದು ಅದಕ್ಕೆ ಈಗ ದೊರೆಯುವುದೆಲ್ಲ ಕುಂಬಳಕಾಯಿ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂಬಂತಿರುವದು ಆದ್ದರಿಂದ ಹಿಟ್ಲರನೊಡನೆ ಮತ್ಸೂಕರ ಮಾತುಕತೆಗಳು ಬಹಳ ತೃಪ್ತಿಕರವಾಗಿ ನಡೆದಿವೆ ಎಂದು ಎಷ್ಟು ಬಾಯಿ ಬಡಾಯಿ ಕೊಚ್ಚಿಕೊಂಡರೂ, ಅದರಲ್ಲಿ ಯಥಾರ್ಥತೆ ಇರುವುದಿಲ್ಲ ಜಪಾನು ತನ್ನ ಸ್ವಾರ್ಥದಲ್ಲಿ ನಿರಾಶವಾಗಿಯೇ ಇರಬೇಕಾಗಿದೆ.



ನೈಸರ್ಗಿಕ ಆಹಾರವನ್ನು ಕೊಟ್ಟಲ್ಲಿ ನಿಮ್ಮ ಮಗುವು ಆರೋಗ್ಯವಾಗಿಯೂ ಬಲಶಾಲಿಯಾಗಿಯೂ ಬೆಳೆಯುವುವು ಉತ್ತಮ ಪಾನೀಯವಾದ "ಓವಲ್ಟಿನ್"ನ್ನು ದಿನನಿತ್ಯವೂ ಸೇವಿಸುವುದರಿಂದ ಮಗುವಿಗೆ ಧಾರಾಳ ತಾಯಿಯ ಮೊಲೆಹಾಲೇ — ಕೊಟ್ಟಂತೆ ಆಗುತ್ತದೆ —

ಓವಲ್ಟಿನ್ನು ಸಂಪೂರ್ಣ ಮತ್ತು ಯೋಗ್ಯವಾದ ನೈಸರ್ಗಿಕ ಆಹಾರ. ಇದು ಉತ್ತಮ ಬಾರ್ಲಿಯಿಂದಲೂ ಹೊಸ ಹಾಲಿನಿಂದಲೂ ತಯಾರಾದುದು ಮಾತ್ರವಲ್ಲದೆ ಇತರ ಅನೇಕ ವಿಟಮಿನುಗಳು ಶರೀರ ಪೋಷಕ ವಸ್ತುಗಳೂ ಇದರಲ್ಲಿ ಇವೆ. ಇದನ್ನು ಕುಡಿಯುವುದರಿಂದ ತಾಯಿಯ ಆರೋಗ್ಯವೂ ಪೂರ್ಣ ಯೋಗ್ಯ ರೀತಿಯಿಂದಿದ್ದು ಉತ್ತಮ ಶಕ್ತಿ ಬಲಗಳನ್ನು ಕೊಡುತ್ತದೆ ಇದರಂತೆ ಕೃತ್ರಿಮ ರೀತಿಯಲ್ಲಿ ತಯಾರಾದ ಬೇರೆ ಪಾನೀಯಗಳನ್ನು ಕೊಂಡುಕೊಂಡು ಮೋಸಹೋಗಬೇಡಿರಿ.

'ಓವಲ್‌ಟಿನ್'

OVALTINE ಒಂದು ಪುಷ್ಟಿಕರವಾದ ...

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರಕುತ್ತದೆ

ಡಿಸ್ಟ್ರಿಬ್ಯೂಟರ್ಸ್ ಗ್ರೆಹಮ್ಸ್ ಟ್ರೇಡಿಂಗ್ ಕಂಪೆನಿ, (ಇಂಡಿಯಾ)

ಬೊಂಬೆ, ಕಲ್ಕತ್ತಾ, ಮದ್ರಾಸ್, ಕರಾಚಿ, ರಂಗೂನ ಲಿಮಿಟೆಡ್

ಓವಲ್ಟಿನ್ ಬಿಸ್ಕುಟುಗಳು—ರುಚಿಕರ, ಜೀರ್ಣಕರ, ಮತ್ತು ಶಕ್ತಿಕರವಾದ ಓವಲ್ಟಿನ್ ಬಿಸ್ಕುಟುಗಳು ಅತ್ಯುತ್ತಮವಾಗಿವೆ. ಅವುಗಳಲ್ಲಿಯೂ 'ಓವಲ್ಟಿನ್' ಗುಣಗಳೆಲ್ಲಾ ಕೂಡಿವೆ 4ಔನ್ಸ್ ಮತ್ತು 8ಔ. ಪಕೇಟುಗಳೂ, 1 ರಾತಲು ಟಿನ್ನುಗಳೂ ಮಾರಲ್ಪಡುತ್ತವೆ.

OV/2/4

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

18-4-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೮-೪-೧೯೪೧

ಲೋಕೋದ್ಧಾರಕ ಯುಗಪುರುಷನು ಭಾರತದಲ್ಲಿ ಜನ್ಮವೆತ್ತುವನು!

ಬ್ರಿಟಿಷರ ಆಳುವಿಕೆಯಲ್ಲಿ ಭಾರತದ ಪ್ರಗತಿ ಕೆಟ್ಟಿತು

— ಕವೀಂದ್ರ ರವೀಂದ್ರರ ಹುಟ್ಟುಹಬ್ಬದ ಸಂದೇಶ —

ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಿಸಬೇಕೆಂದು ರೂಸ್‌ವೆಲ್ಟರಿಗೆ ಸರ್ ವಿಜಯರ ತಂತಿ.

ಕವೀಂದ್ರ ರವೀಂದ್ರರ ಜನನದ [illegible]ದ ಹಬ್ಬವು ಶಾಂತಿನಿಕೇತನದ ವಿಶ್ವಭಾರತಿಯಲ್ಲಿ ಆಚರಿಸಲ್ಪಟ್ಟಿತು. ವಿಶ್ವಕವಿಯು ಆ ಸಂದರ್ಭದಲ್ಲಿ ಒಂದು ಅಮೃತಮಯವಾದ ಸಂದೇಶವನ್ನು ಉಪನ್ಯಾಸ ರೂಪವಾಗಿ ಇತ್ತರು

ಅದು ಹೀಗಿದೆ -

'ಮನುಷ್ಯ ರಾಕ್ಷಸನು ಇಂದು ಮುಸುಕನ್ನಿಕ್ಕಿ ಲೋಕವಿನಾಶಕ್ಕಾಗಿ ಹಲ್ಲು ತೆರೆದು ಮುಂದು ಬಂದಿರುವನು ಬ್ರಹ್ಮಾಂಡದ ಒಂದ ಬದಿಯಿಂದ ಇನ್ನೊಂದು ತುದಿಯ ತನಕ ರೋಷ ದ್ವೇಷಗಳ ವಿಷವಾಯುವು ಬೀಸುತ್ತಲಿದೆ ಪಶ್ಚಿಮ ಭೂಖಂಡದಲ್ಲಿ ಇದುವರೆಗೆ ಅಡಗಿಕೊಂಡಿದ್ದ ಮಾನವ ಜನನ ರೋಗವು ಇಂದು ವೃದ್ಧಿಯಾಗಿ ಮನುಷ್ಯನ ಆತ್ಮನಾಶಕ್ಕಾಗಿ ಸಿದ್ಧವಾಗಿರುತ್ತದ'

ರವೀಂದ್ರರು ಆ ವೇಳೆ ಭಾರತವನ್ನು ಇನ್ನಿತರ ಪಶ್ಚಿಮಖಂಡಗಳ ರಾಷ್ಟ್ರಗಳೊಡನೆ ಹೋಲಿಸಿ ಹೀಗಂದು ಹೇಳಿದರು.

ಭಾರತೀಯರು ಪಶ್ಚಿಮದವರಿಗಿಂತ ಯಾವ ದೃಷ್ಟಿಯಿಂದ ನೋಡಿದರೂ ಹಿಂದೆ ಉಳಿದವರಲ್ಲ. ಬ್ರಿಟಿಷ್ ಸರಕಾರವು ಇಲ್ಲಿ ಕಾಯದೆ ಹಾಗೂ ಸುವ್ಯವಸ್ಥೆಯ [illegible]ದರೆ ಪೋಲೀಸ್ ಕಾರಬಾರಿನ ಆಡಳಿತೆಯನ್ನು ನಡೆಸಿದ್ದಾರೆಂಬುದು ನಿಜ. ಹಿಂಸೆಯಿಂದ ಆಳುವ ಹಾಗೂ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದ ರಾಜ್ಯಕ್ರಮದಲ್ಲಿ ಇನ್ನು ಮೇಲೆ ನಮಗೆ ನಂಬುಗೆ ಇರಲಾರದು. ಬ್ರಿಟಿಷರು ತಮ್ಮ ಸಂಸ್ಕೃತಿಯಲ್ಲಿರುವ ಒಳ್ಳೆಯ ಗುಣಗಳನ್ನು ಲೋಭಿಗಳಂತೆ ಅಡಗಿಸಿಟ್ಟುಕೊಂಡು, ಭಾರತೀಯರೊಡನೆ ನಿಜವಾದ ಬಾಂಧವ್ಯವನ್ನು ಬೆಳೆಸಲು ನಿರಾಕರಿಸಿ ನಮ್ಮ ಪ್ರಗತಿಯ ಹಾದಿಯನ್ನು ತಡೆಗಟ್ಟಿದ್ದಾರೆ.

'ಯುರೋಪಿನ ಹೃದಯದಿಂದ ಸಂಸ್ಕೃತಿಯ ಬುಗ್ಗೆಯು ಸ್ಫುರಿಸಿ ಹರಿಯುವುದೆಂದು ನಾನು ಒಂದು ಸಮಯ ನಂಬಿದ್ದೆನು. ಆದರೆ ನನ್ನ ಕೊನೆಯ ದಿನಗಳಲ್ಲಿ ನನ್ನ ಹಿಂದಿನ ಆ ನಂಬುಗೆಯು ಹಾರಿಹೋಗಿದೆ ಇಂದು ನನಗೊಂದು ಕೊನೆಯಾಶೆಯಿದೆ. ಇಂದಿನ ಈ ರೋಗಗಳಿಗೆ ಔಷಧಕೊಡುವ ಯುಗಪುರುಷನೊಬ್ಬನು ನಮ್ಮ ದರಿದ್ರದೇಶದಲ್ಲಿಯೇ ಜನ್ಮವೆತ್ತುವನು. ಆತನ ಅಮೃತಮಯ ದಿವ್ಯ ಸಂದೇಶವು ಪಶ್ಚಿಮ ಭೂಖಂಡಗಳಲ್ಲಿ ಪಸರಿಸಿ ಅಲ್ಲಿಯ ಹೃದಯಗಳಲ್ಲಿ ಅಭ್ಯುದಯದ ಆಶೆಯನ್ನು ತುಂಬುವುದು

ರೂಸ್‌ವೆಲ್ಟರಿಗೆ ಸರ್ ವಿಜಯರ ತಂತಿ

ಬ್ರಿಟನು ಯಾವ ಪ್ರಜಾಪ್ರಭುತ್ವಕ್ಕಾಗಿ ಪಾಪದಿಂದ ಹೋರಾಡುವುದೋ ಅದನ್ನು ಭಾರತಕ್ಕೂ ಕೊಡಬೇಕೆಂದು ಬ್ರಿಟನಿಗೆ ನೀವು ಹೇಳುವ ಕಾಲವು ಈಗ ಬಂದಿಲ್ಲವೆ? ಇತರ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವವು ಹೇಗಿದೆಯೋ ಅಂತೆಯೇ ಜನರ ಪ್ರಭುತ್ವದ ಸರಕಾರವು ನಮಗೂ ಇಂದು ಬೇಕಾಗಿರುತ್ತದೆ '

ಹೀಗೆಂದು ವಿಜಯನಗರದ ರಾಜಕುಮಾರರಾದ ಸರ್ ವಿಜಯರು ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರನ್ನು ಪ್ರಾರ್ಥಿಸಿ ಒಂದು ತಂತಿಯನ್ನು ಕಳಿಹಿಸಿದ್ದಾರೆ

ಅದರಲ್ಲಿ ಮತ್ತೂ ಹೀಗೆ ಹೇಳಲಾಗಿದೆ 'ನಿಮ್ಮ ಧುರೀಣತೆಯಲ್ಲಿ ಅಮೇರಿಕವು ನಿಜವಾಗಿಯೂ ಪ್ರಜಾಪ್ರಭುತ್ವದ ಮುದ್ದಿನ ತೊಟ್ಟಿಲಾಗಿದೆ ನಿಮ್ಮ ಕೀರ್ತಿಯುತವಾದ ಆಳುವಿಕೆಯು ಚರಿತ್ರೆಯಲ್ಲಿ ಪ್ರಸಿದ್ಧಿಹೊಂದುವುದಾಗಿದೆ ನಾಜಿಸಮ್ಮಿನ ಎದುರಾಗಿ ನೀವು ನಡೆಸಿದ ಹೋರಾಟವನ್ನು ನೋಡಿ ಇಡೀ ಸ್ವಾತಂತ್ರ್ಯಪ್ರಿಯ ವಿಶ್ವವೇ ನಿಮ್ಮ ಹೆಸರನ್ನು ಹಾಡಿ ಕೊಂಡಾಡುತ್ತದೆ

'ಹೀಗಿದ್ದರೂ ಭಾರತದ ಬಗೆಗೆ ನಿಮ್ಮ ಗಮನವು ಹರಿಯದಿರುವುದು ನಮ್ಮ ದುರ್ದೈವವೇ ಆಗಿದೆ. ಭಾರತವೂ ನಿಮ್ಮ ಮಧ್ಯದ ಮನೆಯ ಒಂದು ಸ್ಥಳವಾಗಬೇಕೆಂದು ನಾವು ದಿನವೂ ಹಂಬಲಿಸುತ್ತೇವೆ. ಬ್ರಿಟನಿನೊಡನೆ ಭಾರತವನ್ನೂ ಸಮಾನ ಸ್ಥಾನದಲ್ಲಿ ನೋಡಿಕೊಳ್ಳಬೇಕೆಂದು ಕೇಳುವ ಕಾಲವು ಈಗ ಬಂದಿರುವುದಲ್ಲವೆ? ಯುದ್ಧದ ಕಾಲದಲ್ಲಿ ಶಾಸನ ವಿಷಯ ಬದಲಾವಣೆ ಕೇಳುವುದು ಸರಿಯಾಗಿಲ್ಲವೆ? ಹಾಗಾದರೆ ಯುದ್ಧ ಕಾಲದಲ್ಲಿ ಕೆನಡಾ ಆಸ್ಟ್ರೇಲಿಯಾ ಹಾಗೂ ನಿಮ್ಮ ದೇಶದಲ್ಲಿಯೇ ದೇಶದ ಮುಖವನ್ನೇ ಬದಲಾಯಿಸುವಂತಹ ಪ್ರಚಂಡ ಚುನಾವಣೆಗಳು ಆಗಲಿಲ್ಲವೆ? ಭಾರತವೂ ಪಾರತಂತ್ರ್ಯದಿಂದ ಮುಕ್ತವಾಗಿ ಸ್ವತಂತ್ರವಾಗಿರಲು ಯೋಗ್ಯವಾಗಿಲ್ಲವೇ ಎಂದು ನಿಮ್ಮ ಸದ್ವಿವೇಕ ಬುದ್ಧಿಗೆ ನಾವಿಂದ ಪ್ರಾರ್ಥಿಸಿಕೊಳ್ಳುವೆವು

'ನಿಮ್ಮ ರಾಷ್ಟ್ರವು ತನ್ನ ಕರ್ತವ್ಯವೆಂದು ಫಿಲಿಪಾಯಿನ್ ಹವಾನಾ ಪ್ರಾಂತಗಳಿಗೆ ಸ್ವತಂತ್ರವನ್ನು ಕೊಟ್ಟಿತು. ಸರಳವಾದ ಪ್ರಜಾಪ್ರಭುತ್ವವನ್ನು ನೀಡಿತು, ಅದೇ ಪಾಠವನ್ನು ಇಂದು ಬ್ರಿಟನು ಭಾರತದ ಬಗೆಗೆ ಕಲಿಯಬೇಕಾದ ಕಾಲ ಬಂದೊದಗಲಿಲ್ಲವೆ?

'ಭಾರತದ ವಿಷಯದಲ್ಲಿ ಕೈಹಾಕಿ ಯತ್ನಿಸಲು ನೀವು ಅತ್ಯಂತ ಯೋಗ್ಯರಿರುವಿರಿ. ನಿಮ್ಮ ಉಚ್ಚಪದವಿ, ಲೋಕದ ಉನ್ನತ ನಾಗರಿಕತೆಯ ಪೂರ್ಣ ಪ್ರಭಾವ ಇವುಗಳು ಲೋಕದ ಪ್ರೀತಿಗೆ ಕಾರಣವಾಗಿವೆ. ನಿಮ್ಮಿಂದ ಆಶಾದಾಯಕವಾದ ಪ್ರೀತಿ ವಿಶ್ವಾಸದ ಪ್ರತ್ಯುತ್ತರವನ್ನು ನಾವು ಹಾರೈಸಬಹುದೆ? ಹೀಗೆ ಮಾಡಿದರೆ ನಿಮ್ಮ ಘನವಾದ ಹೆಸರನ್ನು ಭಾರತವು ಎಂದೆಂದೂ ಕೃತಜ್ಞತಾಪೂರ್ವಕವಾಗಿ ಸ್ಮರಿಸುವುದು

THE

Canara Banking Corporation Limited

(In corporated in British India)

ESTD 1906

HEAD OFFICE: ***UDIPI,*** *South Kanara*

SEASON DEPOSITS

ARE now accepted at all our Offices at the following rates of interest :

2 & 3 months	... ...	3% p. a.
4 & 5 „	... ...	3½% p. a.

These deposits will not be allowed to run beyond September 1941.

ಸ್ವದೇಶಾಭಿಮಾನಿ

ತಾರೀಕು 18—4—1941

ಮದ್ರಾಸಿನಲ್ಲಿ ಜಿನ್ನರು

ಮದ್ರಾಸಿನಲ್ಲಿ ಈ ಸಾರೆ ಮುಸ್ಲಿಂ ಲೀಗಿನ ಮಹಾಧಿವೇಶನವು ಅದರ ನಿರಂತರ ಅಧ್ಯಕ್ಷರಾದ ಜಿನ್ನರ ಅಧ್ಯಕ್ಷತೆಯಿಂದ ಜರಗಿತು. ತಮ್ಮ 'ಪಂಚವಾರ್ಷಿಕ' ಯೋಜನೆಯಿಂದ ಮುಸ್ಲಿಂ ಲೀಗನ್ನು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಯ ತನಕವೂ ಪಸರಿಸಿದೆನೆಂದು ಅಧ್ಯಕ್ಷಪೀಠದಿಂದ ಜಿನ್ನರು ಕೂಗಿ ಹೇಳಿದರು. ಮುಗಲ್ ರಾಜ್ಯದ ಪತನದ ಬಳಿಕ, ಮುಸ್ಲಿಂ ಭಾರತವು ಇಂದಿನಂತೆ ಹಿಂದೆ ಎಂದೂ ಸಂಘಟಿತವಾಗಿಲ್ಲವೆಂದು ಜಿನ್ನರು ಸಂತೃಪ್ತಿಯಿಂದ ಸಾರಿದರು.

ಜಿನ್ನರ ಭಾಷಣವು—ಇತ್ತೀಚೆಯ ಅವರ ಹೇಳಿಕೆ ಭಾಷಣಗಳ ಮಾದರಿಯಲ್ಲಿಯೇ ಇದ್ದು, ಬಹುತರವಾದ ನಿಂದೆ, ಅಬದ್ಧ ಸರಣಿಗಳಿಂದ ಕೂಡಿತ್ತೆನಲು ಯಾವ ಅಡ್ಡಿಯೂ ಇಲ್ಲ. ಜಿನ್ನರು ತಮ್ಮ ಅಭಿಪ್ರಾಯಕ್ಕೆ ಯಾರು ಅನುಕೂಲವಾಗಿ ನಡೆವುದಿಲ್ಲವೋ ಅವರೆಲ್ಲರನ್ನೂ ಕಂಠಶೋಷಣೆಯಾಗುವಂತೆ ಬೈಗಿದ್ದಾರೆ. ಹೀಗೆ ನಿಂದೆಗೊಳಗಾದ ರಾಜಕೀಯ ಪಕ್ಷಗಳಲ್ಲಿ, ಸಹಜವಾಗಿ ಕಾಂಗ್ರೆಸ್ಸೇ ಪ್ರಮುಖವಾಗಿರುವುದು ಎಂದೂ ಎಲ್ಲರೂ ಮುಂಚಿತವಾಗಿಯೇ ಬಲ್ಲ ವಿಷಯು ಆಗಿದೆ.

ಮುಸ್ಲಿಂ ಲೀಗಿನ ಉದ್ದೇಶವನ್ನು ಇನ್ನೊಮ್ಮೆ ತಮ್ಮ ಸ್ಪಷ್ಟವಾಣಿಯಿಂದ ಅವರು ಸಾರಿಹೇಳಿದರು. ಭಾರತದ ವಾಯುವ್ಯ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ಮುಸ್ಲಿಂ ಅಧಿಕಾರವುಳ್ಳ 'ಪಾಕಿಸ್ತಾನ'ವನ್ನು ನಿರ್ಮಿಸುವುದು ತಮ್ಮ ಉದ್ದೇಶವಿರುವುದಾಗಿ ಹೇಳಿದರು. ಈ 'ಪಾಕಿಸ್ತಾನ'ದಲ್ಲಿ ಮುಸ್ಲಿಮರಿಗೆ ಸ್ವತಂತ್ರವಾಗಿ ರಕ್ಷಣೆ, ಪರದೇಶ ನೀತಿ, ವ್ಯಾಪಾರ, ರಹದಾರಿ, ಆರ್ಥಿಕ ವಿಚಾರ, ಮೊದಲಾದ ಎಲ್ಲಾ ಅಧಿಕಾರಗಳೂ ಸಿಗಬೇಕಾಗಿವೆಯೆಂದರು. ಕೇಂದ್ರದಲ್ಲಿ ಒಂದಾಗಿರುವ ಅಖಿಲ ಭಾರತ ರಾಜ್ಯಾಧಿಕಾರವು ತಮಗೆ ಬೇಡವೆಂದರು. ನಾವು ಇಂತಹ ರಾಜ್ಯಾಡಳಿತಕ್ಕೆ ಒಪ್ಪಿದರೆ, ಮುಸ್ಲಿಮರ ಅಸ್ತಿತ್ವವೇ ಅಳಿದು ಹೋಗುವುದೆಂದು ಮುಸ್ಲಿಮರಿಗೆ ಅಂಜಿಕೆ ಹುಟ್ಟಿಸಿದರು.

ಮೇಲಿನ ವಿಷಯಗಳಿಂದಲೇ ಜಿನ್ನರ ಹಾಗೂ ಮುಸ್ಲಿಂ ಲೀಗಿನ ಮಥಿತಾರ್ಥವು ತಿಳಿದುಬರುತ್ತದೆ. ಇಷ್ಟು ಮಾತ್ರವಲ್ಲದೆ, ಅವರು ಮದ್ರಾಸಿಗೆ ಬಂದ ನಿಮಿತ್ತ ಇಲ್ಲಿನ ಬ್ರಾಹ್ಮಣ, ಅಬ್ರಾಹ್ಮಣ ವಾದವನ್ನು ಕೆರಳಿಸುವ ಕುತಂತ್ರವನ್ನೂ ನಡೆಸದೆ ಬಿಡಲಿಲ್ಲ. ಅಬ್ರಾಹ್ಮಣರಿಗೆ ಬ್ರಾಹ್ಮಣರಿಂದ ಬಹಳ ಅನ್ಯಾಯವಾಗುತ್ತದೆಂದು ನೊಂದುಕೊಂಡರು. ಅದರಿಂದಾಗಿ ಮದ್ರಾಸು ಪ್ರಾಂತದ ಬಹು ಮಂದಿ ಪ್ರಜೆಗಳಾದ ಅಬ್ರಾಹ್ಮಣರು ತಮ್ಮ ಸಂಸ್ಕೃತಿ ಅಭಿಮಾನ ರಕ್ಷಣೆಗಳ ಸಲುವಾಗಿ 'ದ್ರಾವಿಡ ಸ್ಥಾನ'ವನ್ನು ಕೇಳುವುದು ಉಚಿತವಾಗಿದೆಯೆಂದು ಸಮರ್ಥಿಸಿದರು! 'ದ್ರಾವಿಡ ಸ್ಥಾನ'ದ ಆಂದೋಲನಕ್ಕೆ ಮುಸ್ಲಿಂ ಜನಾಂಗದ ಬೆಂಬಲವಿದೆಯೆಂದು ಹೇಳಿದರು. ಹೀಗೆಲ್ಲಾ ಹೇಳಿದ ಜಿನ್ನರ ಭಾಷಣದ ವಾಕ್ಯಗಳನ್ನು ಬಿಡಿಸಿ ಬಿಡಿಸಿ ವಿಚಾರಿಸಿದಲ್ಲಿ, ಅಲ್ಲಿ ಎಷ್ಟರಮಟ್ಟಿಗೆ ದೇಶವಿಘಾತುಕವಾದ ವಿಷಾಣುಗಳು ಅಡಕವಾಗಿವೆಯೆಂದು ತಿಳಿಯದಿರದು.

ಇಂದು ಭಾರತದ ಮಾತ್ರವಲ್ಲ ಅಖಿಲ ಜಗತ್ತಿನ ಮುಂದೆ ನಿಂದಿರುವುದು 'ಸ್ವಾತಂತ್ರ್ಯ'ದ ಒಂದೇ ಒಂದು ಪ್ರಶ್ನೆಯಾಗಿದೆ. ಹಲವಾರು ರಾಷ್ಟ್ರಗಳು ಸ್ವಾತಂತ್ರ್ಯವನ್ನು ಕಳಕೊಂಡು ಸಾಮ್ರಾಜ್ಯ ಶಾಹಿ ರಾಷ್ಟ್ರಗಳ ಕೈಕೆಳಗೆ ನರಳುತ್ತಿವೆ. ಹಲವಾರು ರಾಷ್ಟ್ರಗಳು ನಾಜಿಸಂ, ಫೇಸಿಸಂಗಳ ನಿರ್ದಯ ಪದಹತಿಯಲ್ಲಿ ಇಂದು ಚೂರ್ಣವಾಗುತ್ತಿವೆ. ಇಂತಹ ಕಾಲದಲ್ಲಿ ಭಾರತವಾದರೂ ಹೋರಾಡುವುದು ಅಖಿಲಭಾರತದ ಸ್ವಾತಂತ್ರ್ಯಕ್ಕಾಗಿ ಎಂಬ ವಿಷಯವು ಜನತೆಯ ಕಣ್ಣ ಮುಂದೆ ಅಚ್ಚೊತ್ತಿ ನಿಲ್ಲಬೇಕಾಗಿದೆ. ಆಗ ಮಾತ್ರ ಜಿನ್ನರ ಅಥವಾ ಅಂತಹ ಜಾತೀಯತೆಯ ಸಂಕುಚಿತ ಬುದ್ಧಿಯ ಮುಖಂಡಂ ಮನ್ನರ ಮಾತುಗಳಿಗೆ ಜನತೆಯು ಮನ್ನಣೆಕೊಡಲಾರದು. ಈ ಜಾಗೃತಿಯು ಕೆಲಸವನ್ನು ಇನ್ನಷ್ಟು ತೀವ್ರತರವಾಗಿ ವ್ಯಾಪಕತ್ವದ್ದು ರಾಷ್ಟ್ರೀಯ ಮನೋಭಾವದ ಸಕಲರ ಕರ್ತವ್ಯವಾಗಿದೆ. ದೇಶಘಾತುಕ ಧೋರಣೆಯ ಈ ತರದ ಮುಖಂಡರ ಮುಖಭಂಗ ಮಾಡಲು, ಅವರ ಅಪಸ್ವರ ನಿಲ್ಲಿಸಲು ಅದು ಮಾತ್ರದಿವ್ಯಾಸ್ತ್ರವಾಗಿದೆ.

ಇಂದು ಕಾಂಗ್ರೆಸ್ಸು ಒಂದು ಕಡೆಯಿಂದ ವೈಯುಕ್ತಿಕ ಸತ್ಯಾಗ್ರಹಕ್ಕೆ ಇಳಿದಿದೆ. ಇಂತಹ ಕಾಲದಲ್ಲಿ ರಾಜಕೀಯ ಕಾರ್ಯಗಳನ್ನು ಕೈಕೊಳ್ಳುವರೆ ಕಾಂಗ್ರೆಸ್ಸು ಉದಾಸೀನವಾಗಿರುವುದು. ಈ ಸಂದರ್ಭವನ್ನು ನೋಡಿಕೊಂಡು ಇಂದು ಈ ರೀತಿಯ ಅನೇಕ ಜಾತೀಯ ಭೂತಗಳು ಕೆರಳಿನಿಂತಿವೆ. ರಾಜಕೀಯ ರಂಗದಲ್ಲಿ ಅವುಗಳ ಮತ್ತನೃತ್ಯವೇ ನಡೆಯುತ್ತದೆ. ಇದನ್ನು ಹೀಗೆಯೇ ಬೆಳೆಯಬಿಡುವುದು ಯುಕ್ತವಲ್ಲ; ಕಾಂಗ್ರೆಸ್ಸು, ತಿರಿಗಿ ರಾಜಕೀಯ ಪ್ರಗತಿಯ ಕಾರ್ಯಗಳ ಕಡೆಗೆ ಗಮನ ಕೊಡಬೇಕು. ದೇಶದ ರಾಜಕೀಯ ಅಭ್ಯುದಯಕ್ಕಾಗಿ, ಐಕ್ಯಕ್ಕಾಗಿ ಐಕ್ಯಗೊಂಡು ಪಡೆವ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ಸು ಎಚ್ಚತ್ತು, ದೇಶಸರ್ವತ್ರ ಯೋಗ್ಯ ಕಾರ್ಯಕ್ರಮವನ್ನು ಮುಂದಿಟ್ಟು ಕಾರ್ಯಸಾಧನೆ ಮಾಡಬೇಕು. ದೊರೆತ ಸಂಧಿಯನ್ನು ದುರುಪಯೋಗ ಮಾಡಿಕೊಂಡು ಭಾರತದ ರಾಜಕೀಯ ಕ್ಷೇತ್ರವನ್ನು ಭ್ರಷ್ಟಮಾಡಲು ಜಿನ್ನರಂತಹ, ಜಾತೀಯ ಸಂಕೋಚ ಬುದ್ಧಿಯ ಮುಖಂಡರು ಮುಂದೆ ಬಂದು ಕೆಲಸಮಾಡುವುದನ್ನು ಖಂಡಿತವಾಗಿಯೂ ಖಂಡಿಸಬೇಕಾಗಿದೆ; ತಡೆದುನಿಲ್ಲಿಸಬೇಕಾಗಿದೆ.

'ಹಿಂದೂ' ಪತ್ರಿಕೆಯ ಅಗ್ರಲೇಖ

ಜಿನ್ನರ ಭಾಷಣದ ವಿಷಯವನ್ನು ಟೀಕಿಸುತ್ತಾ ಮದ್ರಾಸಿನ 'ಹಿಂದು' ಪತ್ರಿಕೆಯು 'ಕಾಂಗ್ರೆಸ್ಸಿನ ಕರ್ತವ್ಯ'ವೆಂಬ ವಿಷಯವಾಗಿ ಒಂದು ವಿಚಾರಪ್ರಚೋದಕವಾದ ಅಗ್ರಲೇಖನವನ್ನು ಬರೆದಿದೆ. ಕಾಂಗ್ರೆಸ್ಸು ಇಂದಿನ ಈ ಕಾಲದಲ್ಲಿ ಸತ್ಯಾಗ್ರಹ ರಂಗಕ್ಕಿಳಿದು ರಾಜಕೀಯ ಕ್ಷೇತ್ರವನ್ನು ಪ್ರತಿಗಾಮಿ ಧೋರಣೆಯ ಜಾತೀಯ ಸಂಸ್ಥೆಗಳ ಕಣಿದಾಟಕ್ಕೆ ಬಿಟ್ಟದ್ದು ಸರಿಯಾಗಲಿಲ್ಲವೆಂದೂ, ದೇಶದಲ್ಲಿ ಐಕ್ಯ, ಸ್ವಾತಂತ್ರ್ಯ ಪ್ರೇಮ, ರಾಜಕೀಯ ಪ್ರಗತಿಗಳನ್ನು ಸಾಧಿಸಲು ಯೋಗ್ಯತೆಯುಳ್ಳ ಸಂಸ್ಥೆಯಾದ ಕಾಂಗ್ರೆಸ್ಸು ತಿರಿಗಿ ರಾಜಕೀಯ ಕ್ಷೇತ್ರಕ್ಕಿಳಿದು ಪ್ರಗತಿಪರವಾದ ಕಾರ್ಯಕ್ರಮಗಳನ್ನು ಕೈಕೊಂಡು ದುಡಿದು ಇತರ ಅಪ್ರಾಗತಿಕವಾದ ರಾಜಕೀಯ ಸಂಸ್ಥೆಗಳನ್ನು ಹಿಂದಕ್ಕಟ್ಟಬೇಕೆಂದೂ ಎಚ್ಚರಿಸಿದೆ. ಇಂತಹ ಅವಶ್ಯದ ಕಾರ್ಯಸಾಧನೆಗಾಗಿ ಕಾಂಗ್ರೆಸ್ಸು ಇಂದಿನ ಸತ್ಯಾಗ್ರಹ ಆಂದೋಲನವನ್ನು ಹಿಂತೆಗೆದುಕೊಳ್ಳುವುದೂ ಯುಕ್ತವಾಗಿದೆಯೆಂದೂ, ಇದರಿಂದ ದೇಶದ ಪ್ರಗತಿಗೆ ಹಾನಿಯಾಗಲಾರದೆಂದೂ ವಾದಿಸಿದೆ.

ಹಿಂದೂ ಪತ್ರಿಕೆಯ ಈ ವಾದವನ್ನೇ ಹಿಡಿದೆತ್ತಿ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ತರದ ಸೂಚನೆಯು ಸ್ವಲ್ಪ ಸಮಯಕ್ಕೆ ಮುಂಚಿತವಾಗಿಯೇ ಬರತಕ್ಕದ್ದಿತ್ತೆಂದೂ ಹೇಳಿರುತ್ತಾರೆ. ಆದರಲ್ಲಿ ಅವರು ಮಹಾತ್ಮರು ಆರಂಭಿಸಿದ ಸತ್ಯಾಗ್ರಹ ಆಂದೋಲನಕ್ಕಿರುವ ಪಾವಿತ್ರ್ಯವನ್ನು ಒಪ್ಪಿಕೊಳ್ಳುತ್ತಾ, ರಚನಾತ್ಮಕ ಕಾರ್ಯಗಳ ವಿಷಯದಲ್ಲಿ ಗಾಂಧಿಜಿ ಒತ್ತಿ ಹೇಳುವ ಉದ್ದೇಶವನ್ನು ಅಂಗೀಕರಿಸುತ್ತಾ, ಮಾತೃಭೂಮಿಯ ಸೇವೆಯಲ್ಲಿ ಕಾಂಗ್ರೆಸ್ಸಿನ ಮುಖಂಡರು ಹೊರಗಿದ್ದು ಮಾಡತಕ್ಕ ಎಷ್ಟೋ ಅಮೂಲ್ಯ ಕಾರ್ಯಗಳು ಬಾಕಿಯಿರುವಾಗ, ಅವರನ್ನು ಕಣ್ಣಗೆ ಸೆರೆಮನೆಗೆ ದೂಡುವ ಇಂದಿನ ಸತ್ಯಾಗ್ರಹ ಆಂದೋಲನವು ಪರಿಣಾಮಕಾರಿಯಾಗಿಲ್ಲವೆಂದೂ ಸಾರಿದ್ದಾರೆ.

ಕೊನೆಗೆ ಅವರು ಕಾಂಗ್ರೆಸ್ಸಿನ ಮುಖಂಡರಿಗೆ ಒಂದು ವಿನಂತಿ ಮಾಡಿಕೊಳ್ಳುತ್ತಾ ಅವರೆಲ್ಲರೂ ತಮ್ಮ ಸಹಜವಾದ ಚಟುವಟಿಕೆಗಳ ಕಡೆಗೆ ತಿರಿಗಿ, ಈಗ ಗಮನ ಕೊಡಬೇಕಾಗಿದೆಯೆಂದೂ ಇದರಿಂದ ಇಂದಿನ ಧೋರಣವನ್ನು ಸಂಪೂರ್ಣ ಬದಲಾಯಿಸಬೇಕಾಗಿ ಬಂದರೂ ದೇಶದ ಉನ್ನತಿಗೆ ಲಾಭವಲ್ಲದೆ ನಷ್ಟವಿಲ್ಲವೆಂದೂ ಹೇಳಿದ್ದಾರೆ.

ಪೋಪರ ಸಂದೇಶ

ಯುರೋಪಿನ ಕ್ರೈಸ್ತ ಜನಾಂಗವು, ಕ್ರೈಸ್ತ ಮತಾಸಕ್ತ ರಾಷ್ಟ್ರಗಳೂ ಇಂದು ಅನ್ಯೋನ್ಯ ಕತ್ತಿಕಟ್ಟಿ ಕ್ರೂರ ಹಿಂಸಾಕಾರ್ಯಕ್ಕೆ ತೊಡಗಿರುವುದನ್ನು ನೋಡಿ ಕ್ರೈಸ್ತ ಜಗದ್ಗುರುಗಳಾದ ಪೋಪರು ಮನಕರಗಿದ್ದಾರೆ. ಇಂದಿನ ಈ ತರದ ಕ್ರೂರ ಅಧರ್ಮ ಯುದ್ಧವು ಅನ್ಯಾಯದ್ದೆಂದೂ, ಎಲ್ಲಾ ರಾಷ್ಟ್ರಗಳೂ ಹಿಂಸೆಯನ್ನು, ಪಶುಬುದ್ಧಿಯನ್ನು ನಿಲ್ಲಿಸಿ ಲೋಕಶಾಂತಿಗೆ ನೆರವಾಗಬೇಕೆಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ. ಇಂದಿನ ಈಸ್ಟರ್ ಹಬ್ಬದ ಸಮಯದಲಿ ಪೋಪರು ಯುದ್ಧಾಸಕ್ತ ರಾಷ್ಟ್ರಗಳಿಗೆ ಅಂತಹ ಒಂದು ದಿವ್ಯ ಸಂದೇಶವನ್ನು ಸಾರಿದ್ದಾರೆ.

'ಅನಾಥರಾದ, ನಿಶ್ಶಸ್ತ್ರರಾದ ಮಕ್ಕಳು ಹೆಂಗಳೆಯರಮೇಲೆ ಆಗುವ ಕ್ರೂರವಾದ ಈ ವಿಧದ ಅಮಾನುಷ ಧಾಳಿಯಿಂದ ಯುದ್ಧಾಸಕ್ತ ರಾಷ್ಟ್ರಗಳ ಮಾನವ ಹೃದಯವು ಪರಿತಪಿಸುವುದಿಲ್ಲವೆ?' ಎಂದು ಪೋಪರು ತಮ್ಮ ಸಂದೇಶದಲ್ಲಿ ಕೇಳಿದ್ದಾರೆ. ಯಾರು ಯುದ್ಧಕ್ಕೆ ಇದಿರಾಗಿ ಬಂದಿದ್ದಾರೋ ಅವರೊಡನೆ ಪಂಥ ಕಟ್ಟಿ ಕಾದಾಡುವುದು ಧರ್ಮ ಯುದ್ಧವಾಗುವುದು; ನ್ಯಾಯವಾಗುವುದು. ಆದರೆ ಯುದ್ಧದಲ್ಲಿ ಯಾವುದೇ ತರದಿಂದಲೂ ಸೇರದೆ ಇರುವ ನಿರಪರಾಧಿಗಳಾದ ಜನರ ಮೇಲೆ, ಹೆಂಗಸರು ಮಕ್ಕಳ ಮೇಲೆ ಬಾಂಬುಗಳನ್ನು, ಕಠಿಣ ಶಸ್ತ್ರಾಸ್ತ್ರಗಳನ್ನು ಎಸೆದು ಹಿಂಸೆಗೊಳಿಸುತ್ತಿರುವುದು ಮಾನವ ಹೃದಯವನ್ನು ಕಲ್ಲಾಗಿ ತೋರ್ಪಡಿಸುವಂತಹ ಕಾರ್ಯವಾಗಿದೆ.

ಇದನ್ನು ಕಂಡು, ಇಂದಿನ ಯುದ್ಧದಿಂದ ಹೆಚ್ಚುತ್ತಿರುವ ಹಿಂಸೆಯನ್ನೂ ದ್ವೇಷವನ್ನೂ ಪೋಪರು ಮನಗಂಡು ತಿರಿಗಿ ಒಮ್ಮೆ ಈಗ ಶಾಂತಿಸ್ಥಾಪನೆಗಾಗಿ ಸಂದೇಶ ಮೂಲಕ ಸಾರಿದ್ದಾರೆ. ಎಲ್ಲಾ ರಾಷ್ಟ್ರಗಳೂ ಸಮಾನ ಸ್ವಾತಂತ್ರ್ಯದಿಂದ ಅನ್ಯೋನ್ಯ ಮೈತ್ರಿಯಿಂದಿದ್ದು ಶಾಂತಿ ಸುಖದಿಂದ ಉಳಿಯಲೆಂದು ಅವರು ಹಾರೈಸಿದ್ದಾರೆ. ಪೋಪರು, ಕ್ರಿಶ್ಚಿಯನ್ ಜಗದ ಧರ್ಮಗುರುಗಳಾದ ನಿಮಿತ್ತ ಇಂದು ಯುರೋಪಿನಲ್ಲಿ ಕ್ರಿಶ್ಚಿಯನ್ ರಾಷ್ಟ್ರಗಳೇ ಪರಸ್ಪರ ಕಾದಾಡುತ್ತಿರುವ ಕಾಲದಲ್ಲಿ ಅವರ ಮಾತಿಗೆ ಏನೂ ಬೆಲೆ ಭಾರದೆಂದು ಹೇಳಬರುವಂತಿಲ್ಲ. ಹಿಂಸೆ, ದ್ವೇಷಗಳಿಂದ ಕಲ್ಲಾದ ಯುದ್ಧಾಸಕ್ತ ರಾಷ್ಟ್ರಗಳ ಧುರೀಣರ ಹೃದಯಗಳು ವಿಚಲಿತವಾಗಲಾರದೆಂದು ಬಗೆದರೂ ಅಲ್ಲಿನ ಸಾವಿರಾರು ಮಂದಿ ಧರ್ಮನಿರತ ಜನರ, ನಾಗರಿಕರ ಹೃದಯದಲ್ಲಿ ಈ ಸಂದೇಶದ ಪರಿಣಾಮವು ಆಗದಿರಲಾರದು.

ಭಾರತದ ಕೆಲವು ವಿಚಾರವಂತರಲ್ಲಿ, ರಾಜಕಾರಣ ಪಟುಗಳಲ್ಲಿ ಈ ಅಭಿಪ್ರಾಯವೂ ಬೆಳೆಯುತ್ತಿದೆ.

ಭಾರತದ ತೃಪ್ತಿಯು ಬ್ರಿಟನಿನ ಜಯದ ಕಾರಣವಾಗಿದೆ!

ಎಮೆರಿಯವರ ಹೇಳಿಕೆಯ ಕುರಿತು ಸಾವರ್ಕರರ ಅಭಿಪ್ರಾಯ

ನಮ್ಮ ಮಹತ್ವವನ್ನು ನಾವು ತಿಳಿದುಕೊಳ್ಳಬೇಕು

ನಮಗೆ ಸ್ವಾತಂತ್ರ್ಯವು ತಾನಾಗಿ ಪ್ರಾಪ್ತವಾಗುವುದು

ಭಾರತೀಯರು, ಅದರಲ್ಲೂ ಪ್ರತ್ಯೇಕವಾಗಿ ಹಿಂದುಗಳು ಅಂತರಾಷ್ಟ್ರೀಯ ,ವ್ಯವಹಾರಗಳಲ್ಲಿ ತಮ್ಮ ಸ್ಥಾನ ಮಹತ್ವವನ್ನು ತಿಳಕೊಂಡು ದ್ದಾದರೆ ಮತ್ತು ತಮ್ಮ ಬಲವನ್ನು ತಮ್ಮ ಕಾರ್ಯಸಾಧನೆಗೆ ಉಪಯೋಗಿಸಿಕೊಂಡುದಾದರೆ, ಆಗ ಬ್ರಿಟನು ತಮಗೆ ಸ್ವಾತಂತ್ರ್ಯವನ್ನು ಯಾವಾಗ ಕೊಟ್ಟಿತೆಂದು ಅವರು ಅದರ ಮನ್ನದೊಲವನ್ನು ಕಾದಿರಬೇಕಾದ ಅಗತ್ಯ ಬೀಳಲಾರದು; ಆದರೆ ಬ್ರಿಟನ್ನು ಸ್ವೀಕರಿಸಲಿಕ್ಕೇ ಬೇಕಾದ ಕೇಳಿಕೆಗಳನ್ನು ಅವರು ಅದರ ಮುಂದೆ ಇಡುವರು ಮತ್ತು ಸ್ವತಂತ್ರ ಮತ್ತು ಮುಖ್ಯ ರಾಷ್ಟ್ರಗಳ ಶ್ರೇಣಿಯಲ್ಲಿ ಹಿಂದುಸ್ಥಾನವು ತಾನಾಗಿ ತನ್ನ ಸ್ಥಾನವನ್ನು ದೊರಕಿಸಿಕೊಳ್ಳುವುದು ಎಂಬ ವಿಷಯವನ್ನು ಭಾರತ ಸಚಿವರಾದ ಎಮೆರಿಯವರ ಸ್ವಲ್ಪ ಸಮಯದ ಹಿಂದಿನ ರೇಡಿಯೋ ಭಾಷಣಕ್ಕೆ ಉತ್ತರ ಕೊಡುತ್ತಾ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಬೆರಿಸ್ಟರ್ ಸಾವರಕರರವರು ಹೇಳಿದ್ದಾರೆ

ಎಮೆರಿಯವರ ಭಾಷಣ

'ತಾತ್ಕಾಲಿಕ ವಿಷಯಗಳು' ಎಂದು ಎಮೆರಿಯವರು ಕೊಟ್ಟ ಭಾಷಣದಲ್ಲಿ ಅವರು ಹಿಂದ ಸ್ಥಾನದ ಕುರಿತು ಆಡಿದ ಮಾತುಗಳು ಮೊದಲಿಗಿಂತಲೂ ಹೆಚ್ಚು ಪ್ರತಿಕೂಲವಾಗಿರುವುವು ಯುದ್ಧವಾರಂಭವಾದ ಮೇಲೆ ಬ್ರಿಟಿಷ್ ರಾಜಕಾರಣಿಗಳು ಮೊದಮೊದಲು ಸಾಮಂತ ಸ್ವರಾಜ್ಯ, ಯುದ್ಧ ಮುಗಿದ ಮೇಲೆ ಆದಷ್ಟು ತ್ವರ್ಯದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಎಂದು ಮೊದಲಾಗಿ ಬಹು ಸವಿಯಾದ ಮಾತುಗಳನ್ನಾಡಿ ಹಿಂದು ಸ್ಥಾನವನ್ನು ಒಲಿಸುವ ಪ್ರಯತ್ನಗಳನ್ನು ಮಾಡಿದ್ದಾವಾದರೆ ಎಮೆರಿಯವರ ಮೊನ್ನೆಯ ಭಾಷಣದಲ್ಲಿ ಆ ಸವಿ ಮಾತುಗಳೂ ಇರುವುದಿಲ್ಲ. ಅವರು ಭಾರತದ ಸ್ವರಾಜ್ಯ ಘಟನೆಯು ಹೇಗಿರಬೇಕು, ಹೇಗೆ ರೂಪಿಸಲ್ಪಡಬೇಕು ಎಂಬ ಕುರಿತು 'ಚ' ಶಬ್ದವನ್ನು ಕೂಡ ಎತ್ತಿರುವುದಿಲ್ಲ. ಬರಬರುತ್ತ ಭಾರತದ ಕುರಿತು ಅವರ ಮಾತಿನ ಧಾಟಿಯು ನಿಷ್ಠುರವಾಗುತ್ತ ಬಂದಿದೆ. ಬ್ರಿಟಿಷರಿಗೆ ಆಫ್ರಿಕದೊಳಗಿನ ಯುದ್ಧದಲ್ಲಿ ದೊರೆತ ಅಲ್ಪಸ್ವಲ್ಪ ವಿಜಯವೇ ಎಮೆರಿಯವರ ಧಾಟಿಯು ಬದಲಾಗಲಿಕ್ಕೆ ಕಾರಣವಾಗಿರಬಹುದು ಇದು ನಿಜವಾದರೆ ಭವಿಷ್ಯವು ನಿರಾಶಮಯವಾಗಿರುವುದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಯಾಕೆಂದರೆ ಆಫ್ರಿಕದೊಳಗಿನ ಅಲ್ಪಸ್ವಲ್ಪ ವಿಜಯವು ಎಮೆರಿಯವರು ಹಿಂದಿನ ಮಾತುಗಳನ್ನು ಮರೆಯುವಂತೆ ಮಾಡಿದೆಯಾದರೆ, ಯುದ್ಧವು ಮುಗಿದು, ಅದರಲ್ಲಿ ಬ್ರಿಟಿಷರು ಸಂಪೂರ್ಣ ವಿಜಯಿಗಳಾದಾಗ ಬ್ರಿಟಿಷ್ ಸರಕಾರವು ಹಿಂದುಸ್ಥಾನಕ್ಕೆ ಕೊಟ್ಟ ಯಾವ ಮಾತಿನ ಭರವಸೆಯನ್ನು ನೆನಪಿನಲ್ಲಿಟ್ಟುಕೊಳ್ಳಲಿಕ್ಕಿಲ್ಲ! ಹಿಂದಿನ ಯುದ್ಧಾಂತ್ಯದಲ್ಲೂ ವಿಜಯಿಗಳಾದ ಬ್ರಿಟಿಷರು ಕೊಟ್ಟ ಮಾತುಗಳನ್ನು ಮರೆತಿದ್ದಾರೆ ಈಗಲೂ ಅವರಿಗೆ ಮರೆವು ಉಂಟಾಗುವ ಸಂಭವವಿದೆ. ಯಾಕೆಂದರೆ ಮನುಷ್ಯ ಸ್ವಭಾವವು ಫಕ್ಕನೆ ಬದಲಾಗುವುದಿಲ್ಲ.

ಅಸಂಬಂಧವಾದ ಮಾತುಗಳು.

ಎಮೆರಿಯವರು ಭಾರತದ ವಿಷಯವಾಗಿ ಏನನ್ನೂ ಮಾತನಾಡದಿರಬಹುದು ಮೌನವೇ ಪರಮಾನ ಎಂದು ಅವರು ತಿಳಕೊಂಡಿರಬಹುದು. ಏನಾದರೂ ಸ್ಪಷ್ಟವಾಗಿ ಮಾತನಾಡುವುದು ಮೂರ್ಖತನದ ಪರಮಾವಧಿ ಎಂದು ಎಣಿಸಿರಬಹುದು. ಆದರೆ ಅವರಿಗೆ ಒಂದು ಎಚ್ಚರಿಕೆಯನ್ನು ಕೊಡಲಿಳಿಸುತ್ತೇವೆ. ಹಿಂದಿನಂತೆಯೇ ಇಂದೂ ಅವರು ಭಾರತದೊಡನೆ ಕಣ್ಣುಮುಚ್ಚಾಲೆ ಆಟವು ಹವಣಿಸಿದ್ದಾರಾದರೆ, ಮೊದಲಿನಂತೆ ಈಗ ಅವರು ತಮ್ಮ ಆಟದಲ್ಲಿ ಸಫಲರಾಗುವುದಿಲ್ಲ ಭಾರತೀಯರು ಬ್ರಿಟಿಷರ ಗುಣ ಸ್ವಭಾವಗಳನ್ನು ತಿಳಿದು ಜಾಗ್ರತರಾಗಿದ್ದಾದರಿಂದ, ಅವರು ಬಹು ಎಚ್ಚರಿಕೆಯಿಂದಲೇ ಇದ್ದು ತಮ್ಮ ಕಾರ್ಯಗಳನ್ನು ಸಾಧಿಸುವರು ಎಮೆರಿಯವರ ಅಸಂಬಂಧ ಪ್ರಲಾಪದಲ್ಲಿ ಈಗ ಭಾರತೀಯರಿಗೆ ವಿಶ್ವಾಸವು ಕಳೆಯುತ್ತಾ ಬಂದಿದೆ. ಅವರ ಭಾಷಣದಲ್ಲಿ ಅಸಂಬದ್ಧತೆ ಇರುವುದಿಲ್ಲವಾದರೆ ಅವರು ಭಾರತದ ಗುರಿ ಮತ್ತು ಅದನ್ನು ಮುಟ್ಟುವ ಕಾಲದ ಕುರಿತು ಸ್ಪಷ್ಟವಾಗಿ ಮಾತನಾಡಬೇಕು. ಸ್ವಾತಂತ್ರ್ಯವೇ ಹಿಂದುಸ್ಥಾನದ ಗುರಿಯಾಗಿದೆ, ಮತ್ತು ಅದು ಆ ಗುರಿಯನ್ನು ಎಷ್ಟು ಬೇಗ ಸಾಧ್ಯವೋ, ಅಷ್ಟು ಶೀಘ್ರದಲ್ಲಿ ಮುಟ್ಟಲಿಕ್ಕೆ ಇಚ್ಛಿಸುತ್ತದೆ

ಭಾರತದ ಮಹತ್ವ

ಆದರೆ ಭಾರತೀಯರು ಅದರಲ್ಲೂ ಮುಖ್ಯವಾಗಿ ಹಿಂದುಗಳು ತಮ್ಮ ಸ್ಥಾನ ಬಲ ಮತ್ತು ಮಹತ್ವವನ್ನು ತಿಳಕೊಂಡುದಾದರೆ, ಅವರು ಎಮೆರಿಯವರ ಭಾಷಣದ ಸ್ವರ ಬದಲಾವಣೆಗೆ ಕಾದಿರಬೇಕಾದ ಅಗತ್ಯವಿಲ್ಲ ಅಥವಾ ಬ್ರಿಟಿಷರು ಉದಾರಬುದ್ಧಿಯಿಂದ ಭಾರತೀಯರಿಗೆ ಸ್ವಾತಂತ್ರ್ಯವನ್ನು ಕೊಡಬೇಕಾದದ್ದೂ ಇಲ್ಲ. ಸ್ವರಾಜ್ಯವು ಅವರಿಗೆ ಅವರ ಶಕ್ತಿಸಾಮರ್ಥ್ಯದಿಂದ ತಾನಾಗಿ ಬರುವುದು. ಸಿಂಗಾಪುರ ಮತ್ತು ಕೈರೋ ಇವೆರಡರ ನಡುವಿರುವ ಹಿಂದುಸಾಗರದೊಳಗಿನ ವಿಶಾಲವಾದ ಬ್ರಿಟಿಷ್ ಸಾಮ್ರಾಜ್ಯಭಾಗದಲ್ಲಿ ಹಿಂದುಸ್ಥಾನವು ನಟ್ಟನಡುವೆ ಇದೆ. ಆಫ್ರಿಕದಿಂದ ಪ್ರಾರಂಭಿಸಿ ಆಸ್ಟ್ರೇಲಿಯದ ತನಕ ಒಂದು ಮೂಲೆಯಿಂದ ಇನ್ನೊಂದು ಮೂಲೆಯ ತನಕ ಇರುವ ಸಾಮ್ರಾಜ್ಯ ಭಾಗದ ರಕ್ಷಣೆಗೆ ಬ್ರಿಟನಿನಿಂದ ಸಹಾಯವು ಒದಗಿಬರುವುದಕ್ಕಿಂತ ಹಿಂದುಸ್ಥಾನದಿಂದ ಆ ಸಹಾಯವು ಒದಗಿಬರುವುದು ಹೆಚ್ಚು ಅನುಕೂಲವೂ ಸುಲಭವೂ ಆಗಿದೆ ,ಮತ್ತೆ ಹಿಂದುಸ್ಥಾನವು ಸಂತೃಪ್ತವೂ ಸಂತುಷ್ಟವೂ ಆಗಿದ್ದು ಬ್ರಿಟನು ಅದರೊಂದಿಗೆ ಸ್ನೇಹದಲ್ಲಿದ್ದರೆ, ಯಾವ ಪ್ರಬಲ ಶತ್ರುವಿನ ಪ್ರಚಂಡ ಆಕ್ರಮಣವಾದಾಗಲೂ ಕೂಡ ಬ್ರಿಟನು ತನ್ನ ಸಾಮ್ರಾಜ್ಯದ ಈ ವಿಭಾಗದ ರಕ್ಷಣೆಯ ಎಲ್ಲ ಉಪಾಯಗಳನ್ನು ಹಿಂದುಸ್ಥಾನಕ್ಕೆ ಬಿಟ್ಟು ನಿಶ್ಚಿಂತವಾಗಿರಬಹುದು. ಹಿಂದುಸ್ಥಾನದ ಸ್ಥಾನ ಮಾನ ಬಲ ಯೋಗ್ಯತೆಗಳು ಈ ಉಪಾಯಗಳನ್ನು ಕೈಕೊಳ್ಳಲಿಕ್ಕೆ ಯೋಗ್ಯವಾಗಿಯೇ ಇವೆ. ಯಾವ ಸಮಯಕ್ಕೂ ಹಿಂದುಸ್ಥಾನದಲ್ಲಿ ಒಂದು ಮಿಲಿಯದಷ್ಟು ಸೇನಾಬಲವನ್ನು ಸಿದ್ಧಗೊಳಿಸಬಹುದು. ಪೂರ್ವ ವ್ಯವಸ್ಥೆ ಮಾಡಿದುದಾದರೆ ಯುದ್ಧಕ್ಕೆ ಬೇಕಾದ ಎಲ್ಲ ಶಸ್ತ್ರಾಸ್ತ್ರ, ಸರಂಜಾಮುಗಳನ್ನು ಹಿಂದುಸ್ಥಾನವೊಂದೇ ಒದಗಿಸಿಕೊಡಬಹುದು. ಆದುದರಿಂದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು, ಅದನ್ನು ಎಲ್ಲ ವಿಷಯಗಳಲ್ಲಿ ಸಂತುಷ್ಟವೂ ಯೋಗ್ಯವೂ ಮಾಡಿ, ಅದರ ಸ್ನೇಹದಲ್ಲಿರುವುದು ಬ್ರಿಟನಿನ ಹಿತಕ್ಕಾಗಿಯೇ ಇರುತ್ತದೆ

ಅವಿಭಕ್ತ ಹಿಂದುಸ್ಥಾನ

ಈ ಎಲ್ಲ ಸಂಗತಿಗಳನ್ನು ಬ್ರಿಟಿಷ್ ರಾಜಕಾರಣಿಗಳು ಚೆನ್ನಾಗಿ ತಿಳಿದಿದ್ದರೂ ಕೂಡ ಅವರು ಆ ಕುರಿತು ಮೌನವಾಗಿ ಯಾವ ಕೆಲಸವನ್ನೂ ಮಾಡದಿರುವುದು ಆತ್ಮಘಾತುಕವಾಗಿದೆ. ಎಲ್ಲ ಪಾರ್ಟಿ ಸಂಗಡಗಳೂ ಒಂದಾಗಿ ಸ್ವರಾಜ್ಯಘಟನೆಯನ್ನು ತಯಾರಿಸುವುದಾದರೆ ತಾವು ಅದಕ್ಕೆ ಸಮ್ಮತಿ ಕೊಡುವೆವೆಂದು ಬ್ರಿಟಿಷರು ಹೇಳಿರುವುದೇನೋ ನಿಜ. ಆದರೆ ಇದು ಬಾಯಿಬಡಕತನವಲ್ಲದೆ ಮತ್ತೇನಿಲ್ಲ. ನಾಳೆ ಹಿಂದುಸ್ಥಾನದ ಎಲ್ಲ ಜನರು ಒಟ್ಟುಕೂಡಿ ಬ್ರಿಟಿಷರು ಇಲ್ಲಿಂದ ಗಂಟುಮೂಟೆ ಕಟ್ಟಿ ಹೊರಗಾಗಬೇಕೆಂದು ಹೇಳಿದರೆ ಬ್ರಿಟಿಷರು ಅದಕ್ಕೆ ಒಪ್ಪುವರೇ? ಇಲ್ಲ ಹಾಗಿದ್ದ ಮೇಲೆ ನ್ಯಾಯಕ್ಕೂ ನೀತಿಗೂ ಸರಿಬಾರದ ಪಾರ್ಟಿಸಂಗಡಗಳ ಫಲವನ್ನು ತಾವು ಒಪ್ಪಲಾರೆವೆಂದು ಬ್ರಿಟಿಷರು ಹೇಳಿ ಸ್ವರಾಜ್ಯಘಟನೆಯನ್ನು ~~ತಯಾರಿಸಲಿಕ್ಕೆ ಅವರೇಕೆ ಸಹಾಯ~~ ಮಾಡಬಾರದು? ನ್ಯಾಯಸಮ್ಮತವಾದ ಒಡಂಬಡಿಕೆಯು ಆಗದಂತೆ. ಅವರೇಕೆ ಇಲ್ಲಿಯ ಅಲ್ಪಸಂಖ್ಯಾಕರನ್ನು ಎತ್ತಿಕಟ್ಟಬೇಕು? ಅವಿಭಕ್ತ ಹಿಂದುಸ್ಥಾನದ ತಳಗಟ್ಟಿನ ಮೇಲೆಯೇ ಅದಕ್ಕೆ ಸ್ವರಾಜ್ಯವೆಂದು ಸಾರಿ ಅವರೇಕೆ ಪಾಕಿಸ್ತಾನ ಆಂದೋಲನಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸುವುದಿಲ್ಲ? ಯಾವದಾದರೂ ತರ್ಕ ಅಥವಾ ನ್ಯಾಯದಿಂದ ಅವರು ಹೀಗೆ ಮಾಡದಿರುವುದಲ್ಲ. ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವುದು ಬ್ರಿಟಿಷರ ಮನಸ್ಸಿಲ್ಲ. ಆದರೆ ಹಾಗೆ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ನುಡಿಯಲಿಕ್ಕೂ ಅವರಿಗೆ ಮನಸ್ಸಿಲ್ಲ ಯಾಕೆಂದರೆ ಆಗ ಲೋಕಾಪವಾದಕ್ಕೆ ಗುರಿಯಾಗಿ ಅವರು ಲೋಕದ ಸಹಾನುಭೂತಿಯನ್ನು ಕಳಕೊಳ್ಳುವರು. ಆದುದರಿಂದಲೇ ಒಂದಕ್ಕೊಂದು ಸಂಬಂಧ ಬೀಳದ ಮಾತುಗಳನ್ನು ಅವರು ಆಡುತ್ತಲಿದ್ದಾರೆ.

THE BANK OF MANGALORE LIMITED.
HEAD OFFICE MANGALORE ESTD. 1901
Branches—MOODABIDRI & PADUBIDRI
NOTICE
On and from 1st January 1941 the following are the revised rates of interest on deposits
FIXED DEPOSITS.

For 2 years or over	5½ per cent
1 „	4½ per cent
6 months	3½ per cent
3 „	3 per cent

Interest payable Quarterly
SAVINGS BANK DEPOSITS:
On daily balances on balances over Rs. 5 in multiples of Rs 5 @ 3%.
—All kinds of banking business transacted.

ಹಿಟ್ಲರನು ಮುಂದೇನು ಮಾಡುವನೆಂದು ಹೇಳಬರುವುದಿಲ್ಲ

ಟರ್ಕಿಗೆ ಗಂಡಾಂತರವು ತಪ್ಪಿದಲ್ಲ

ಗ್ರೀಸಿಗೆ ಬ್ರಿಟನು ಸಹಾಯ ಕೊಡಲು ಕಾರಣ.

ಪ್ರಕೃತ ಪರಿಸ್ಥಿತಿಯ ಕುರಿತು ಚರ್ಚಿಲ್ಲರು

ಕಳೆದವಾರ ಕಾಮನ್ಸ್ ಸಭೆಯಲ್ಲಿ ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರು ಈಗಿನ ಯುದ್ಧ ಪರಿಸ್ಥಿತಿಯ ಕುರಿತು ವಿವೇಚಿಸಿ ಒಂದು ದೀರ್ಘ ಭಾಷಣವಿತ್ತರು. ಗ್ರೀಸಿನ ಯುದ್ಧದಲ್ಲಿ ಬ್ರಿಟಿಷರು ನೆರವಾಗಲು ಕಾರಣವೇನೆಂದು ಅದರಲ್ಲಿ ವಿವರಿಸಿ ಹೇಳಿದರು. ಅದರಲ್ಲಿ ಬೆಂಗಾಜಿಯು ಶತ್ರುಗಳ ಕೈವಶವಾಗಲು ಕಾರಣವೇನೆಂದೂ ಹೇಳಿದರು. ಯುದ್ಧದಲ್ಲಿ ಜರ್ಮನಿಯು ಅನುಸರಿಸಿದ ಧೋರಣದ ಕುರಿತು ಮಾತನಾಡಿದರು.

ಅವರ ಭಾಷಣದ ಸಾರಾಂಶವು ಹೀಗಿದೆ:—

ಬೆಂಗಾಜಿಯು ನಮ್ಮ ಕೈತಪ್ಪಿ ನಾವು ಅಲ್ಲಿಂದ ಹಿಂತೆರಳಿದೆವು. ಜರ್ಮನರು ಸಿರೆನೇಶಿಯಕ್ಕೆ ನುಗ್ಗಿದರು. ಅದರಿಂದ ಅಲ್ಲಿನ ವೈಮಾನಿಕ ಕ್ಷೇತ್ರವು ಶತ್ರುಗಳ ಕೈವಶವಾಯಿತು.

ಬಾಲ್ಕನಿನ ಪರಿಸ್ಥಿತಿಯು ಬಹಳ ಪ್ರಾಮುಖ್ಯದ್ದಿದೆ. ಆದ್ದರಿಂದ ತೋಬ್ರುಕವು ನಮ್ಮ ಕೈವಶವಾಗಲು ನಮ್ಮ ಪ್ರಗತಿಯನ್ನು ನಾವು ನಿಲ್ಲಿಸಿದೆವು.

ಮುಂದೆ ಸಿರೆನೇಶಿಯದಲ್ಲಿ ಏನು ಮಾಡಬೇಕೆಂಬ ವಿಚಾರ ಈಗ ಹೇಳಲಾರೆ. ಸಿರೆನೇಶಿಯದಲ್ಲಿ ಮುನ್ನುಗ್ಗುವುದು ಜರ್ಮನರಿಗೆ ಸುಲಭವಲ್ಲ. ಅದನ್ನೂ ಈಜಿಪ್ತನ್ನೂ ನಾವು ಸಂರಕ್ಷಿಸಬೇಕು. ಇಟಲಿಯನರು ಎರಿಟ್ರಿಯಾ, ಇಥೋಪಿಯಾ ಮತ್ತು ಬ್ರಿಟಿಷ್ ಸೋಮಾಲಿಲೇಂಡುಗಳಲ್ಲಿ ಸೋತಕಾರಣ ಹೆಚ್ಚು ಶಸ್ತ್ರಸಂಗ್ರಹಕ್ಕೆ ಅನುಕೂಲವಾಯಿತು. ಧೀರರಾದ ಭಾರತದ ಯೋಧರ ಸಾಹಸವು ಪ್ರಶಂಸನೀಯವಾಗಿದೆ. ಅಸ್ಮಾರವು ಕೈತಪ್ಪಿದೆ. ಮಸ್ಸಾವವು ಕೈವಶವಾಗಿದೆ. ಕೆಂಪು ಕಡಲಲ್ಲಿ ಶತ್ರುಭೀತಿಯು ಹೆಚ್ಚಾಗಿದೆ. ಹಾರಾರದ ಪತನವಾಗಿದೆ ಅಡಿಸ್ ಅಬಾಬವು ನಮ್ಮ ವಶವಾಗಿದೆ. ಅಬಿಸೀನಿಯದಲ್ಲಿರುವ ಇಟಲಿಯನರನ್ನು ನಾವು ಸದೆಬಡಿಯುತ್ತಿದ್ದೇವೆ.

ಜರ್ಮನರು ಹಂಗೇರಿ ರುಮೇನಿಯಗಳಲ್ಲಿ ವ್ಯಾಪಿಸಿದ್ದು ಸುಸಜ್ಜಿತರಾಗಿರುವರು. ವಿಮಾನಗಳು ಹೆಚ್ಚು ಹೆಚ್ಚಾಗಿವೆ. ಸಣ್ಣ ರಾಷ್ಟ್ರಗಳೂ ತಮ್ಮ ಅಸ್ತಿತ್ವವನ್ನು ಕಾದಾಡಿ ಉಳಿಸಿಕೊಳ್ಳಬೇಕು.

ಇಟಲಿ ಗ್ರೀಸಿನ ಮೇಲೆ ಧಾಳಿ ಮಾಡಿತು. ಗ್ರೀಕರು ನಮ್ಮ ನೆರವನ್ನು ಕೇಳಿದರು. ಆಗ ನಾವು ಸಹಾಯ ಕಳುಹಿಸಿದೆವು.

ಜರ್ಮನ್ ಸೈನ್ಯವು ಬಲ್ಗೇರಿಯವನ್ನು ಆಕ್ರಮಿಸಿದೆ. ಸಾಲೋನಿಕವನ್ನು ವಶಮಾಡುವುದು ಇವರ ಗುರಿಯಾಗಿತ್ತು. ಬಾಲ್ಕನ್ ವರೆಗೆ ಯುದ್ಧ ಹರಡಬೇಕೆಂಬುದು ನಮ್ಮ ಗುರಿಯಾಗಿರಲಿಲ್ಲ. ದಕ್ಷಿಣ ತಿಂಗಳಲ್ಲಿ ಹಂಗೇರಿ ರುಮೇನಿಯಾ ಮಾರ್ಗವಾಗಿ ಬಲ್ಗೇರಿಯಾ ಕಡೆಗೆ ಹೋಗುವುದು ನಮಗೆ ತಿಳಿಯಿತು. ದೇಶದ್ರೋಹಿಯಾದ ಬಲ್ಗೇರಿಯ ರಾಜನಿಂದ ಜರ್ಮನ್ ಸೇನೆಯು ನುಗ್ಗಿ ಅದು ಜರ್ಮನಿಯ ವಶವಾಯಿತು.

ಈಗ ಬಾಲ್ಕನ್ ರಾಷ್ಟ್ರಗಳು ಒಂದಾಗಿ ಶತ್ರುವನ್ನು ಹಿಮ್ಮೆಟ್ಟಿಸಬೇಕಾಗಿದೆ. ಇದು ಗ್ರೀಕರಿಗೆ ಗೊತ್ತಿದೆ. ಆದರೆ ನಾವು ಈಗ ಗ್ರೀಕರನ್ನು ಒತ್ತಾಯ ಮಾಡಲೊಪ್ಪುವುದಿಲ್ಲ. ಇಟಲಿಯೊಡನೆ ಯುದ್ಧಮಾಡುತ್ತಿದ್ದ ಅವರು ಇನ್ನೊಬ್ಬ ಪ್ರಬಲ ಶತ್ರುವನ್ನು ಎದುರಿಸುವುದು ಕಷ್ಟವಾಗಿದೆ. ಏಡನರು ಅಲ್ಲಿ ಹೋದಾಗ, ಅಲ್ಲಿನ ರಾಜರು ನರರ ಧಾಳಿಯನ್ನು ತಾವು ಪಕಾಶಿಯಾದರೂ ಎದುರಿಸುವೆವೆಂದರು. ಬಾಲ್ಕನಿನ ಯಾವ ರಾಷ್ಟ್ರವೂ ಸಹಾಯ ಕೊಡದಿದ್ದರೂ ಇಟಲಿ—ಜರ್ಮನಿಗಳೆದುರು ಗ್ರೀಸು ಸಾವತನಕ ಹೋರಾಡುವುದು. ಅವರ ನಿರ್ಧಾರವು ಅಷ್ಟು ನಿಶ್ಚಲವಾದುದರಿಂದ ಅವರಿಗೆ ಸಹಾಯ ನೀಡುವುದು ಅವಶ್ಯವಾಯಿತು.

ಯುಗೊಸ್ಲವಿಯವನ್ನು ಸಂಧಿಗೆ ಒಪ್ಪುವಂತೆ ಜರ್ಮನರು ಒತ್ತಾಯಮಾಡಿದರು. ಈ ಒಪ್ಪಂದದಂತೆ ನಡೆಯುತ್ತಿದ್ದರೆ ಯುಗಸ್ಲವಿಯವು ಇಷ್ಟರಲ್ಲಿ ಜರ್ಮನ್ ವಶವಾಗುತಿತ್ತು. ಸ್ಲೇವನರು ದಾಸ್ಯವಂಕದಲ್ಲಿ ಕೊಳೆಯಬೇಕಾಗುತಿತ್ತು. ಇದನ್ನು ತಿಳಿದು ಅಲ್ಲಿನ ನಾಗರಿಕರು ಬಂಡಾಯವೆದ್ದರು. ಸರ್ವತ್ಯಾಗದಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಕಾದಾಡಲು ಮುಂದೆ ಬಂದರು.

ಪಿಟೇನರ ಪ್ರಕಟಣೆ ಅಭಿನಂದನೀಯ ಹಳೆಯ ಮಿತ್ರರ ವಿರುದ್ಧ ಕೈಯೆತ್ತುವುದಿಲ್ಲವೆಂದು ಅವರು ಹೇಳಿದ್ದಾರೆ. ಫ್ರಾನ್ಸಿಗೆ ಕಳುಹಿಸಿದ ಆಹಾರ ಸಾಮಗ್ರಿಯನ್ನ ಜರ್ಮನರು ಕಡೆದಿದ್ದಾರೆ. ಫ್ರಾನ್ಸಿಗೆ ಆಹಾರ ಸಾಮಗ್ರಿಗಳನ್ನು ನಾವು ಕಳುಹಿಸಲು ಸಹಾಯಮಾಡಬೇಕು.

ಫ್ರೆಂಚರು ಜಾಗ್ರತೆ ವಹಿಸಬೇಕು. ರಬ್ಬರ್ ಹಾಗೂ ಇತರ ಯುದ್ಧೋಪಕರಣಗಳು ಮತ್ತು ಹಡಗಗಳನ್ನು ಜರ್ಮನರ ಸ್ವಾಧೀನಪಡಿಸಿ ಕಳಿಸಬಾರದು.

ನಮ್ಮ ವಿಮಾನ ದಳದ ಸಾಹಸವು ಪ್ರಶಂಸನೀಯವಿದೆ. ಈಗಾಗಲೇ ಅನೇಕ ಹಡಗುಗಳು ನಾಶವಾಗಿವೆ. ೧೯೧೮ರಂತೆ ೧೯೪೧ರಲ್ಲಿಯೂ ಅಮೇರಿಕವು ಹಡಗುಗಳನ್ನಿತ್ತು ನಮಗೆ ನೆರವಾಗಬೇಕ. ಈ ಬಗ್ಗೆ ನಮಗೆ ಆಶ್ವಾಸನ ದೊರೆತಿದೆ ಈಗಾಗಲೆ ಹಡಗುಗಳು ಸಹಾಯಕ್ಕೆ ಹೊರಟಿವೆ.

ಹಿಟ್ಲರನು ಮುಂದೇನು ಮಾಡುವನೆಂದು ಈಗ ಊಹಿಸುವುದು ಕಷ್ಟ. ಆತನು ಯಾವುದಕ್ಕೂ ಹೇಸಲಾರನು. ಇಂಗ್ಲಾಂಡಿನ ಮೇಲೆ ಬೇಕಾದಾಗ ಆತನು ಧಾಳಿಮಾಡಬಹುದು. ಇಂಗ್ಲಾಂಡು ಎಲ್ಲದಕ್ಕೂ ತಯಾರಾಗಿದೆ. ಬಾಲ್ಕನಿನಲ್ಲಿ ಹಿಟ್ಲರನು ತೀವ್ರವೇಗದಿಂದ ಸಾಗುತ್ತಿದ್ದಾನೆ. ಟರ್ಕಿಯ ಮೇಲೆ ಎಂದು ಬೀಳುವನೆಂದು ಈಗ ಹೇಳಬರುವುದಿಲ್ಲ. ಟರ್ಕಿಗೂ ಗಂಡಾಂತರ ತಪ್ಪಿಲ್ಲ. ಉಕ್ರೇನಿನ ದವಸಧಾನ್ಯಗಳನ್ನೂ ಎಣ್ಣೆ ಬಾವಿಗಳನ್ನೂ ಸ್ವಾಧೀನಪಡಿಸುವುದೂ ಆತನ ಉದ್ದೇಶವೇ ಆಗಿದೆ

"ಸ್ವತಂತ್ರ ಭಾರತ"ವೆಂಬ ಆಕಾಶವಾಣಿ ಕೇಂದ್ರವೆಲ್ಲಿದೆ?

ಗುಪ್ತ ರೇಡಿಯೋ ಕೇಂದ್ರ?

ಕಲ್ಕತ್ತಾದ ಸ್ಟೇಟ್ಸ್‌ಮನ್ ದಿನಪತ್ರಿಕೆಯು ತನ್ನ ೧೭ನೇ ಮಾರ್ಚ ಸಂಚಿಕೆಯಲ್ಲಿ ಕೋಲಾಹಲವನ್ನೆಬ್ಬಿಸುವ ಸುದ್ದಿಯೊಂದನ್ನು ಪ್ರಕಟಿಸಿಬಿಟ್ಟಿದೆ! ಆಕಾಶವಾಣಿಯ ಮೇಲಿಂದ ಬೇರೆ ಬೇರೆ ಸುದ್ದಿಗಳನ್ನು ಕೇಳುವವರು ಒಂದು ಅಜ್ಞಾತ ನಭೋವಾದ ಕೇಂದ್ರವನ್ನು ಗೊತ್ತು ಹಚ್ಚಿದ್ದಾರಂತೆ.

ಆದರೆ ಈ ಕೇಂದ್ರವೆಲ್ಲಿದೆ ಎಂಬುವುದು ಗೊತ್ತಾಗಿಲ್ಲ. ರಾತ್ರಿ ಸುಮಾರು ೮ ಘಂಟೆಗೆ ೧೯ ಮೀಟರು ವೇವ್ ಲೆಂಗ್ತಿನ ಮೇಲೆ ಕಾರ್ಯಕ್ರಮವು ಪ್ರಾರಂಭವಾಗುವುದು. ಕಾರ್ಯಕ್ರಮದಲ್ಲಿ ಹಾಡು, ತಮಾಷೆ ಮೊದಲಾದುವುಗಳೇನೂ ಇರುವುದಿಲ್ಲ. ಕೇವಲ ಭಾಷಣ ಮತ್ತು ಸುದ್ದಿ 'ಸ್ವತಂತ್ರ ಭಾರತ'ವೆಂದು ಮೊದಲು ಘೋಷಣೆಯಾಗಿ ನಂತರ ಇಂಗ್ಲೀಷು ಹಿಂದಿಗಳಲ್ಲಿ ಭಾಷಣವು ಆಗುತ್ತವೆ. ಒಂದು ದಿನ ಟರ್ಕಿಸ್ಥಾನವನ್ನುದ್ದೇಶಿಸಿ 'ಸ್ವತಂತ್ರ ಭಾರತ'ವು ಹೇಳಿದ್ದೇನೆಂದರೆ— ಹಿಟ್ಲರನ ರಣಕ್ಷೇತ್ರದಲ್ಲಿ ವಿನಾಕಾರಣ ಕೈಹಾಕಬೇಡಿ ಬ್ರಿಟಿಷರಿಂದ ಸಹಾಯವಾಗುವುದೆಂಬುದನ್ನು ಮರೆಯಿರಿ. ಯಾಕೆಂದರೆ ಗ್ರೀಸಿನ ಮೇಲೆ ಹಬ್ಬಿರುವ ಕಾರ್ಮೋಡಗಳು ಬ್ರಿಟನ್ನಿನಿಂದಲೇ ಉದ್ಭವಿಸಿವೆ." ಎಂದು.

ರಷ್ಯಾ ಜರ್ಮನಿ ಸುದ್ದಿಗಳು ಕೂಡ ಹೇಳಲಾಗುತ್ತಿವೆ. ಕೇಂದ್ರವು ತನ್ನ ಸ್ವಂತ ವಿಷಯವನ್ನು ಹೇಳಿಕೊಳ್ಳುವಾಗ ತಿಳಿಸಿದ್ದೇನೆಂದರೆ — ಭಾರತದಲ್ಲಿ ತುಂಬಾ ನಮ್ಮ ಸುದ್ದಿಗಾರ ಕಾರ್ಯಕರ್ತರೂ ಪಸರಿಸಿದ್ದಾರೆ. ಅವರ ಕಡೆಯಿಂದ ಪ್ರತಿಕ್ಷಣಕ್ಕೂ ನಮಗೆ ಸುದ್ದಿ ಬರುತ್ತವೆ. ಕಲ್ಕತ್ತಾದಲ್ಲಿನ ನಮ್ಮ ಸುದ್ದಿಗಾರನನ್ನು ಕೈಸೆರೆಹಿಡಿದದ್ದರಿಂದ ನೀನು ಸುದ್ದಿ ಕಳುಹಿಸುತ್ತಾ ಬಾ ಎಂದು ಅವರ ಪ್ರತಿನಿಧಿಗೆ ಹೇಳಿದರು.

ರೇಡಿಯೋ ತಜ್ಞರ ಅಭಿಪ್ರಾಯದಂತೆ ಈ ಕೇಂದ್ರವು ದಿಲ್ಲಿಯಿಂದ ೨ ಸಾವಿರ ಮೈಲು ದೂರ ಇರಬೇಕೆಂದು ಇದೆ. ಅದಾರಂತೆಯೋ ಗೋಬೆಲ್ಸ್ ಹಿಂದೂಸ್ಥಾನದಲ್ಲಿ ತಮ್ಮ ರಾಷ್ಟ್ರದ ಪ್ರಚಾರ ಮಾಡಲು ಹೀಗೆ ಮಾಡಿರಬಹುದೆಂದೂ ಹೇಳಲಾಗುತಿದೆ.

CANARA BANK LIMITED

(Incorporated in British India with Limited Liability)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6,00,000— 0— 0	Premises & Furniture	94 217— 6—8
Paid up	3,92,551—15—11	***Advances to Customers***	
Reserve Funds	4,50,000— 0— 0	Secured by Valuable Securities	37,87,804—13—8
Deposits	86 71,764— 2— 6	Secured by Bills of Exchange etc	9,29,550— 0—6
Due to Bankers	Nil	***Investments***	20,34,328—12—9
Sundries	7,98,533—14— 5	***Sundries***	6,81,012— 5—7
Net Profits		***Cash On Hand And At Call At Bankers***	28,17,538— 5—7
Appropriation account 1 244—10— 6			
Net Profit for the year 71,726— 5— 0			
72,970—15— 6			
Less amount transferred to Reserves 41,369—3—7	31,601—11—11		
Rs.	1,03,44,451—12— 9	Rs.	1,03,44,451—12—9

'. . . . . ಮಗನೆ''

'ನೋಡಿ, ಶಾನುಭಾಗ್ರೇ, ಹಾಗೆಲ್ಲ ಬೈದ್ರೆ....'

'ಶಾಕಶ್ಯಕು, ಹರಟ ಜೇಡ—ಗೇಣಿ ಈಗ ಕೊಟ್ಟರೆ ಆಯಿತು. ಇಲ್ಲವಾದ್ರೆ ಚೆಂಬುಚರಿಗೆ ಎಲ್ಲಾ ಹೊರಗಿಟ್ಟುಬಿಡ್ತೇನೆ

ಶಾನುಭಾಗರು ಸಿಟ್ಟಿನಿಂದ ಸಂತಪ್ತರಾಗಿದ್ದರು. ಹೀಗೆ ಹೇಳುತ್ತ ಅವರು ಸದಿಯನ ಗುಡಿಸಲಿನಿಂದ ಹೊರಬಂದರು. ಆಗಲೂ ಅವರ ಬಾಯಿಯಿಂದ ಬೈಗಳ ಸುರಿಮಳೆ ಆಗುತಿತ್ತು.

ಸಮೀಪದಲ್ಲಿಯೇ ಈಶ್ವರ ದೇವಾಲಯವಿದೆ. ದೇವಾಲಯದ ಮುಂದುಗಡೆ ಒಂದು ಕೆರೆ ಇದೆ. ಶಾನುಭಾಗರು ಅದರಲ್ಲಿ ಇಳಿದು ಝಟಪಟ ಸ್ನಾನ ಮಾಡಿದರು. ಬೇಗಬೇಗ ಮೈಒರಸಿಕೊಂಡರು ಮತ್ತೆ ಏನೇನನ್ನೋ ಗುಣಿಸುತ್ತ ದೇವಾಲಯಕ್ಕೆ ಹೋದರು. ಮೂರು ಮೂರು ಸುತ್ತು ತೆಗೆದರು. ಮೂರ್ತಿಗೆ ಬಗ್ಗಿ ನಮಸ್ಕಾರ ಮಾಡಿದರು. ಎದ್ದು ಬಲಬದಿಗೆ ನೋಡುವಾಗ, ಅಲ್ಲಿ ನಾಗಪ್ಪ ಶೆಟ್ಟರು ನಿಂತಿದ್ದರು ಪುನಃ ಬಗ್ಗಿ ನಮಸ್ಕಾರ ಮಾಡಿ ಶೆಟ್ಟರೊಂದಿಗೆ ಅವರೂ ಸುತ್ತು ಬರಲಾರಂಭಿಸಿದರು ಒಮ್ಮೊಮ್ಮೆ ಅವರ ಮಸ್ತಕದ ಮೇಲೆ ಭಕ್ತಿಯ ರೇಖೆಗಳು ಎದ್ದು ಕಾಣಿಸುತಿದ್ದುವು. ಒಮ್ಮೊಮ್ಮೆ ಅವರ ಬಾಯಿಯಿಂದ ಶಿವ ಶಿವ ಎಂದು ದೇವರ ಹೆಸರು ಹೊರಡುತಿತ್ತು. ಎರಡನೆಯ ಸುತ್ತು ಪೂರ್ಣ ಮುಗಿದಿರಲಿಲ್ಲ, ಅಷ್ಟರಲ್ಲಿ ಶೆಟ್ಟರು ಹೇಳಿದರು. 'ಅವ್ನನದು ಇಷ್ಟು ಧೈರ್ಯ?'

'ಹೌದು ಶೆಟ್ಟರೆ, ಗೇಣಿ ಕೊಡುವುದಿಲ್ಲ ಮಾಡುವುದನ್ನು ಮಾಡಿ ಎಂದು ಸ್ಪಷ್ಟ ಹೇಳಿ ಬಿಟ್ಟಿದ್ದಾನೆ.

'ಹಾಗೆ ಹೇಳುವಾಗ ಅವನ ಕೆನ್ನೆಗೆ ಎರಡು ಥಪರಾಕು ಕೊಡಬಹುದಿತ್ತು.'

'ಆದರೆ ಸ್ವಾಮಿ, ಮಾತು ಮಾತಿಗೆ ಅವನು ರಿಪೋರ್ಟು ಮಾಡುತ್ತೇನೆ ಅನ್ನುತಿದ್ದ. ನಾವು ಕಾನೂನು ತಿಳಿಯುವುದಿಲ್ಲವೆ? ಗೇಣಿಬಾಕಿಗೆ ಈಗ ಯಾರೂ ಒತ್ತಾಯ ಮಾಡಲಿಕ್ಕಿಲ್ಲ. ಒಕ್ಕಲು ಕೊಡುವಾಗ ಧನಿ ತೆಗೆದುಕೊಳ್ಳಬೇಕು. ಹೊಡೆದರೆ ಜೈಲಿಗ ಹೋಗ ಬೇಕಾದೀತು. ಮೊನ್ನೆ ಶಿವರಾಮಯ್ಯನವರು ಇದೇ ವಿಷಯ ಲೆಕ್ಚರು ಕೊಟ್ಟರು. ನಾವು ಇದೇ ಕಿವಿಗಳಿಂದ ಸಾಫ್ ಸಾಫ್ ಕೇಳಿದ್ದೇವೆ. ಧನಿಗಳ ರಾಜ್ಯ ಮುಗಿಯಿತು. ಈಗ ಒಕ್ಕಲುಗಳ ರಾಜ್ಯ ಎಂದು ಅವರು ಅಪ್ಪಣೆ ಕೊಟ್ಟಿದ್ದಾರೆ. ದೊಡ್ಡ ದೊಡ್ಡ ಸರಕಾರಗಳು ಮಣ್ಣು ಗೂಡುತ್ತಲಿವೆ. ಈಗ ನಮ್ಮದೇ ಸರಕಾರ.....' ಎಂದು ಮೊದಲಾಗಿ ಅವನು ಬಹಳ ಹರಟಿದ್ದಾನೆ.

'ಅರರರರರೇ, ಇಲ್ಲಿಯ ತನಕ ಸ್ಥಿತಿ ಬಂದಿತೆ?'

'ಅಷ್ಟು ಮಾತ್ರವಲ್ಲ, ಗೇಣಿ ಕೊಡಬೇಡಿರೆಂದು ಬೇರೆ ಒಕ್ಕಲುಗಳಿಗೂ ಅವನು ಕಲಿಸಿಕೊಟ್ಟಿದ್ದಾನೆ. ಯಾವ ಒಕ್ಕಲು ಅಧಿಗಾದರೂ ನೀವು ಹೋಗಿ ಅವರು, ಗೇಣಿ ಈಗ ಇಲ್ಲ, ಮತ್ತೆ ಬನ್ನಿ ಎನ್ನುವುದು ಪೂರ ಉಳಿಯಿತು. ನಿಮ್ಮನ್ನು ಕಂಡಾಕ್ಷಣ ಬೈಯ್ಯತೊಡಗುವರು.

ವಾರದ ಕತೆ:—

ನೀರ್ಗುಳ್ಳೆಯ ಸಾಕ್ಷಿ

'ಹಾಗಿದ್ದರೆ ಅವನಿಗೆ ಆ ಬೋ...ಮಗನಿಗೆ ಬುದ್ಧಿ ಕಲಿಸದೆ ಉಪಾಯವೇ ಇಲ್ಲ.'

ಇಷ್ಟು ಹೇಳಿದ ಮೇಲೆ ಇಬ್ಬರೂ ಶಿವಮಂದಿರದ ಹೊರಗಾದರು ಪ್ರತೀಕಾರ ಬುದ್ಧಿಯು ಮನುಷ್ಯನನ್ನು ಕುರುಡನನ್ನಾಗಿ ಮಾಡುತ್ತದೆ ಎಂಬುದು ಅವರ ನಡಿಗೆಯಿಂದ ಸ್ಪಷ್ಟವಾಗುತಿತ್ತು

✱

ಒನಕೆಧಾರೆಯಿಂದ ಮಳೆ ಬರುತಿತ್ತು ಶೆಟ್ಟರು ತಾಳೆಗರಿಯ ಕೊಡೆಯನ್ನು ಹಿಡಕೊಂಡು ಕಾಡನ್ನು ದಾಟಿ, ಗುಡ್ಡವನ್ನು ಇಳಿದು, ಗದ್ದೆಗಳನ್ನು ಹಾದು ಬೇಗ ಬೇಗ ಬರುತಿದ್ದರು. ಅವರ ಒಂದು ಕೈಯಲ್ಲಿ ಒಂದು ದೊಣ್ಣೆ ಇದ್ದಿತು ಕ್ಷಣದಲ್ಲಿ ಸದಿಯನ ಗುಡಿಸಲಿಗೆ ಸಮೀಪವಾದರು.

ಸದಿಯ ಗುಡಿಸಲಿನೊಳಗೆ ಸೇರಿದ ಮಳೆ ನೀರನ್ನು ಹಾಳೆಕಷ್ಟಿಯಿಂದ ಹೊರಗೆ ಚೆಲ್ಲುತಿದ್ದ. ಹರಿದುಹೋದ ಮಡಲು ಗರಿಯ ಮಾಡನ್ನು ಕೈಯಿಂದ ತಟ್ಟಿ ಸರಿ ಮಾಡುತಿದ್ದ. ಈ ಕಾರ್ಯಾವಸರದಿಂದ ಶೆಟ್ಟರು ಬಂದು ಹಿಂದೆ ನಿಂತಿರುವುದು ಅವನಿಗೆ ತಿಳಿಯಲಿಲ್ಲ. ಇನ್ನೊಮ್ಮೆ ಬಗ್ಗಿದಾಗ ಕೈಯ ದೊಣ್ಣೆಯಿಂದ ಅವರು ಸರಿಯಾಗಿ ಒಂದೇಟನ್ನು ಸದಿಯನ ತಲೆಗಿಟ್ಟು ಬಿಟ್ಟರು. ಅವನು ದಡಾಲ್ಲನೆ ಕೆಸರಿನಲ್ಲಿ ಬಿದ್ದು ಕೈಕಾಲು ಎಳೆಯತೊಡಗಿದ. ಕಣ್ಣುಗಳು ಗುಂಡಿಯನ್ನು ಸೇರಿದುವು. 'ನೋಡುತ್ತ ನೋಡುತ್ತ 'ಈ ನೀರ್ಗುಳ್ಳೆಗಳು' ಸಾಕ್ಷಿ, ನಿಮಗೆ ಇದರ ಫಲ ದೊರೆಯದಿರದು' ಎಂದು ಅವನು ಕಣ್ಣುಮುಚ್ಚಿದ. ಮುಚ್ಚಿದ ಕಣ್ಣುಗಳು ಮತ್ತೆ ತೆರೆಯಲಿಲ್ಲ.

'ನೀರ್ಗುಳ್ಳೆಗಳು ಸಾಕ್ಷಿಯಂತೆ! ಅದನ್ನು ಆಲೋಚಿಸಿ ಶೆಟ್ಟರಿಗೆ ನಗುಬಂದಿತು. ಅವರು ತಮ್ಮಷ್ಟಕ್ಕೆ ಗಹಗಹಿಸಿ ನಕ್ಕರು. ಆದರೆ ಹೊರಗೆ ನೀರ್ಗುಳ್ಳೆಗಳೂ ಅವರನ್ನು ನೋಡಿ ನಗುತ್ತಿರುವುದು ಅವರಿಗೆ ತಿಳಿಯಲಿಲ್ಲ. ಇಂಥ ಎಷ್ಟೋ ಹತ್ಯೆಗಳು ಅವರ ಕೈಗಳಿಂದ ಆಗಿದ್ದುವು. ಬೇಕಾದಷ್ಟು ಹಣವಿದ್ದಿತು. ಅದರ ಬಲದಿಂದ ಅವರು ಎಲ್ಲಾ ಪಾಪಕೃತ್ಯಗಳನ್ನೂ ದಕ್ಕಿಸಿಕೊಂಡಿದ್ದರು. ಸರಕಾರದ ದೃಷ್ಟಿಯಲ್ಲಿಯೂ ಸಂಭಾವಿತ ಭದ್ರಪುರುಷ ಎನ್ನಿಸಿಕೊಂಡಿದ್ದರು. ಈಗ ಇದೊಂದು ಹೆಚ್ಚೆ? ಎಂದು ಅವರಿಗೆ ಅನ್ನಿಸಿತು. ಸದಿಯನಿಗೆ ಮಿಂಚು ಬಡೆದಿರಬಹುದು. ಅವನು ನೆರೆಯಲ್ಲಿ ಬಿದ್ದು ಸತ್ತಿರಬಹುದು ಎಂದು ಊರಿನಲ್ಲಿ ಸಮಾಚಾರವಾಯಿತು. ಯಾರಿಗೂ ಸತ್ಯಾಂಶ ಗೊತ್ತಾಗಲಿಲ್ಲ. ನೀರ್ಗುಳ್ಳೆಗಳಿಗೆ ಮಾತ್ರ ಅದು ಗೊತ್ತಿತ್ತು!

✱

ಐದುವರ್ಷಗಳ ಅನಂತರದ ಮಾತು. ಅಷ್ಟು ಮಳೆ ಮತ್ತೆ ಎಂದೂ ಬಂದಿರಲಿಲ್ಲ. ನಾಗಪ್ಪ ಶೆಟ್ಟರು ಮನೆಚಾವಡಿಯಲ್ಲಿ ಕೂತು ಎಲೆ ಅಡಿಕೆ ಮೆಲ್ಲುತಿದ್ದರು. ಕಾಳಮ್ಮ ಶೆಡ್ತಿಯೂ ಸಮೀಪ ಕೂತು ವೀಳ್ಯ ಗುದ್ದುತಿದ್ದರು. ಶೆಟ್ಟರು ಹೊರಗೆ ನೋಡುನೋಡುತಿದ್ದ ಹಾಗೆ ಒಮ್ಮಿದೊಮ್ಮೆಗೆ ನಕ್ಕು ಬಿಟ್ಟರು ಶೆಡ್ತಿಗೆ ಆಶ್ಚರ್ಯವಾಯಿತು 'ಏನು, ಏನಾಯಿತು? ಯಾಕೆ ನಕ್ಕಿರಿ?' ಎಂದವರು ಕೇಳಿದರು.

'ಏನೂ ಇಲ್ಲ, ಸುಮ್ಮಗೆ ನಕ್ಕೆ' ಎಂದು ಹೆಂಡತಿಯನ್ನು ಮರೆಸಲಿಕ್ಕೆ ನಾಗಪ್ಪ ಶೆಟ್ಟರು ಪುರುಷ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಸ್ತ್ರೀಯ ಹಠದ ಮುಂದೆ ಪುರುಷನ ಛಲ ಎಷ್ಟು ಹೊತ್ತು ನಡೆದೀತು? ಕೊನೆಗೆ ಸದಿಯನ ಹತ್ಯಾಕಾಂಡ ಮತ್ತು ನೀರ್ಗುಳ್ಳೆಯ ಸಾಕ್ಷಿ ವಿಚಾರ ಕೂಲಂಕುಷವಾಗಿ ಆಕೆಗೆ ಹೇಳಿ 'ಎದ್ದು ನಿಮಿಷದೊಳಗೆ ಒಡೆದು ಹೋಗುವ ನೀರ್ಗುಳ್ಳೆಗಳೂ ಸಾಕ್ಷಿಯಾಗುವದಿದೆಯೆ? ಸುಮ್ಮಗಿರು, ನೋಡೋಣ ನೀನು ಮಾತ್ರ ಯಾರಿಗೂ ಹೇಳಬೇಡ ಎಂದರು.

ಎರಡು ಮೂರು ತಿಂಗಳುಗಳು ಕಳೆದ ಮೇಲೆ ಬೇಸಿಗೆಯ ದಿನಗಳು ಬಂದುವು. ಸುತ್ತಮುತ್ತಲಿನ ಹೆಂಗಸರು ಊಟ ತೀರಿಸಿ ಶೆಟ್ಟರ ಚಾವಡಿ ಮೇಲೆ ಗಾಳಿ ತಗೊಳ್ಳುತಿದ್ದರು. ಕಾಳಮ್ಮ ಶೆಡ್ತಿಯೂ ಇದ್ದರು, ಅಲ್ಲಿ ದೊಡ್ಡ ಪಂಚಾಯತಿ ಸಭೆಯೇ ಕೂಡಿತು. ಪ್ರಾಯಕ್ಕೆ ಬಂದ ಅವಿವಾಹಿತ ಹುಡುಗಿಯರು ತಮ್ಮ ಸಂಬಂಧವನ್ನು ಕುರಿತು ಗೊಣಗುಟ್ಟುತಿದ್ದರು. ಪ್ರಾಯ ಹೋದ ಅಜ್ಜಿಯರು ಕೇಳಿದರೂ ಕೇಳದಿದ್ದರೂ ಬಾದರಾಯಣ ಕಾಲದ ಕತೆ ಹೇಳುತಿದ್ದರು ಅಂಗಳದಲ್ಲಿ ಕಾಳಮ್ಮ ಶೆಡ್ತರ ನಾಲ್ಕು ವರ್ಷದ ಚಿಕ್ಕ ಮಗ ಸಾಬೂನು ನೀರಿನಿಂದ ಗುಳ್ಳೆಮಾಡಿ ಸ್ವಾಳಿಗೆ ಹಾರಿಸುತಿದ್ದ. ಹಾರಿ ಹಾರಿ ಅವನ್ನು ಮೇಲಕ್ಕೆ ಊದುತಿದ್ದ. ಅವು ಕ್ಷಣದೊಳಗೆ ಎದ್ದು ಒಡೆದು ಹೋಗುತಿದ್ದುವು. ನೋಡಿ ಶೆಡ್ತರಿಗೆ ನಗು ಬಂದಿತು. ಆ ನಗುವಿನ ಮರೆಯಲ್ಲಿ ಒಂದು ದೊಡ್ಡ ಕತೆಯು ಅಡಗಿತ್ತು.

'ನಾನು ಯಾಕೆ ನಕ್ಕೆನೆಂದು ನಿಮಗೆ ತಿಳಿಯಿತೆ?' ಶೆಡ್ತರು ಕೇಳಿದರು.

'ಇಲ್ಲ, ಇಲ್ಲ ಯಾಕೆ ಯಾಕೆ?' ಎಂದವರು ಪ್ರಶ್ನಿಸಿದರು.

'ಇಲ್ಲ, ನಾನು ಹೇಳುವುದಿಲ್ಲ' ಶೆಡ್ತರು ಮೋರೆಗೆ ನಾಲ್ಕು ಗಂಟು ಹಾಕಿದರು.

'ಹೇಳಲೇ ಬೇಕು. ಇಲ್ಲವಾದರೆ ನಾವು....'

ಸ್ತ್ರೀತ್ವವು ಎಲ್ಲಿಯ ತನಕ ಸುಮ್ಮಗಿರಬಹುದು? ನಾಗಪ್ಪ ಶೆಟ್ಟರ ಪಂಡತಿ ಕಾಳಮ್ಮ ಶೆಡ್ತಿ—ತಮ್ಮ ನಾಲಗೆಯನ್ನು ಬಿಗಿ ಹಿಡಿಯದಾದರು. ಅವರು ಸದಿಯನ ಕೊಲೆಯ ಎಲ್ಲ ಸಂಗತಿಗಳನ್ನು ಮೆಲ್ಲಗೆ ಪಿಸುಗುಟ್ಟಿದರು. ಯಾರಿಗೂ ಹೇಳಬೇಡಿ ಎಂದು ಕತೆಯನ್ನು ಮುಕ್ತಾಯ ಮಾಡಿದರು. ಎಲ್ಲರೂ ಒಂದು ನಿಟ್ಟುಸಿರು ಬಿಟ್ಟು ಸಾಯಂಕಾಲದ ಸಮಯಕ್ಕೆ ತಂತಮ್ಮ ಮನೆಗೆ ಹೊರಟರು.

ಸಿ. ಐ. ಡಿ. ಇನ್ಸ್‌ಪೆಕ್ಟರ್ ಗೋಪಾಲನಾಯ್ಡುಗಳು ಆ ಸಮಯಕ್ಕೇ ಇಲ್ಲಿಗೆ ವರ್ಗವಾಗಿ ಬಂದಿದ್ದರು. ಅವರ ಬಿಡಾರ ನಾಗಪ್ಪ ಶೆಟ್ಟರ ಮನೆಯ ಹತ್ತಿರಗಿತ್ತು ಅವರ ಮಗಳೂ ಪಟ್ಟಾಂಗ ಹೊಡೆಯಲಿಕ್ಕೆ ಕಾಳಮ್ಮ ಶೆಡ್ತರ ಬಳಿಗೆ ದಿನಾಲೂ ಹೋಗಿಬರುತಿದ್ದಳು ಆ ದಿನದ ಕತೆಯನ್ನು ಅವಳೂ ಕೇಳಿದ್ದಳು.

ಎರಡು ಮೂರು ದಿನಗಳ ಅನಂತರ ನಾಗಪ್ಪ ಶೆಟ್ಟರ ಕೈದಾಯಿತು ಊರಿನವರಿಗೆ ಇದು ಏನೆಂದು ಗೊತ್ತಾಗಲಿಲ್ಲ. ಪೋಲೀಸರು ಶೆಟ್ಟರನ್ನು ಜೈಲಿಗೆ ಕೊಂಡುಹೋದರು.

✱

ಸುಮಾರು ಒಂದು ವರ್ಷ ಕಳೆಯಿತು ಕಾರ್ಮೋಡಗಳು ಆಕಾಶವನ್ನು ಮುಚ್ಚಿ ಬಂದಿದ್ದುವು ಕೆಲವು ಜನರು ಪೇಪರು ಓದುತಿದ್ದರು — 'ಜರ್ಮನಿಯ ಎರಡು ವಿಮಾನಗಳು ಪರ್ವತದ ಮೇಲಿಂದ ಉರುಳಿ ಬಿದ್ದುವು! ಲಂಡನಿನ ಮೇಲೆ ಶತ್ರು ಪಕ್ಷದ ಭಯಂಕರ ಧಾಳಿಯಾಯಿತು. ಆದರೆ ವಿಶೇಷ ನಷ್ಟ ಹಾನಿ ಏನೂ ಆಗಿಲ್ಲ—ಇತ್ಯಾದಿ ಇತ್ಯಾದಿ' ಒಂದು ಮೂಲೆಯಲ್ಲಿ ಛಾಪೆಯಾಗಿದ್ದ ಇದೊಂದು ಸಮಾಚಾರವನ್ನು ಅವರು ಓದಿದರು

ಸದಿಯನೆಂಬವನ ಕೊಲೆ ಮಾಡಿದವನು ನಾಗಪ್ಪ ಶೆಟ್ಟಿ ಎಂದೇ ರುಜುವಾದುದರಿಂದ ಅವನಿಗೆ ಕರಿನೀರಿನ ಶಿಕ್ಷೆ ಕೊಟ್ಟು ಸರಕಾರವು ಈ ದಿನ ಅಂಡಮಾನಿಗೆ ಕಳುಹಿಸಿದೆ' 'ನೀರ್ಗುಳ್ಳೆಯ ಸಾಕ್ಷಿ ಹೇಳಿತು!' ಎಂದು ಜನರು ಒಂದು ನಿಟ್ಟುಸಿರುಬಿಟ್ಟರು

"ಕತೆಗಾರ"

HALFTONE & LINE
BLOCK MAKING
UNDERTAKEN
Sharada Press,

ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

ಭಾರತವು ಮಿಶನರಿಗಳ ಕ್ರೀಡಾರಂಗವೆ?

ಸರಕಾರವು ತೆಗೆದುಕೊಳ್ಳುವ ಎಚ್ಚರ

ಜಪಾನು-ಕೊರಿಯಗಳಿಂದಲೂ ಮಿಶನರಿಗಳು ಬರುವರೆ?

ಕಳೆದ ಮಹಾಯುದ್ಧವಾರಂಭವಾದಂದಿನಿಂದ ಬ್ರಿಟಿಷ್ ಸರಕಾರವು ವಿದೇಶಗಳಿಂದ ಬರುವ ಕ್ರೈಸ್ತ ಮತೋಪದೇಶಿಗಳ ಕುರಿತು ಬಹಳ ಎಚ್ಚರಿಕೆಯಿಂದ ವರ್ತಿಸತೊಡಗಿದೆ. ಹಿಂದುಸ್ಥಾನದಲ್ಲಿ ನ್ಯಾಯಬದ್ಧವಾಗಿ ಸ್ಥಾಪಿಸಲ್ಪಟ್ಟಿರುವ ಸರಕಾರದ ಅಸ್ತಿತ್ವಕ್ಕೆ ಭಂಗತರುವ ಯಾವ ಕೆಲಸದಲ್ಲಿಯೂ ತಾನು ತೊಡಗುವುದಿಲ್ಲವೆಂದು ವಿದೇಶಗಳಿಂದ ಇಲ್ಲಿಗೆ ಬರುವ ಪ್ರತಿಯೊಬ್ಬ ಮಿಶನರಿಯೂ ಬ್ರಿಟಿಷ್ ಸರಕಾರಕ್ಕೆ ಮಾತಿನ ಭರವಸೆ ಕೊಡಬೇಕಾಗಿದೆ. ವಿದೇಶದಲ್ಲಿನ ಮಿಶನರಿ ಸಂಸ್ಥೆಗಳೂ ಕೂಡ ತನ್ನ ಅಧೀನದಲ್ಲಿರುವ ಮಿಶನರಿಗಳು ಶಿಸ್ತುಭಂಗ ಮಾಡಿ ಭಾರತ ಸರಕಾರವನ್ನು ಪೇಚಿನಲ್ಲಿ ಹಾಕದಹಾಗೆ ಜವಾಬುದಾರಿ ತೆಗೆದುಕೊಳ್ಳಬೇಕಾಗಿರುತ್ತದೆ.

ನಿರ್ಬಂಧದ ಕಾರಣ

ಕಳೆದ ಬಾರಿಯ ಚಳಿಗಾಲದಲ್ಲಿ ಅಮೆರಿಕದ ಒಂದು ಮಿಶನಿನಲ್ಲಿ ಕೆಲಸ ಮಾಡುವ ಕೆಲವು ಜನ ಯೋಗ್ಯ ಪಾದರಿಗಳು ಕಾಂಗ್ರೆಸಿನ ಸ್ವರಾಜ್ಯ ಆಂದೋಲನವನ್ನು ಸಮರ್ಥಿಸುತ್ತ ಸರಕಾರದ ತತ್ಸಂಬಂಧವಾದ ವರ್ತನೆಯನ್ನು ನಿಷೇಧಿಸುವ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಈಗ ಸರಕಾರವು ವಿದೇಶೀಯ ಮಿಶನರಿಗಳ ಮೇಲೆ, ಮೇಲೆಹೇಳಿದ ಕಠಿನ ನಿರ್ಬಂಧಗಳನ್ನು ಹಾಕಿರುವುದರ ಮುಖ್ಯ ಕಾರಣವು ಈ ಹೇಳಿಕೆಯೇ ಆಗಿರುವುದೆಂದು ಎಣಿಸಲಾಗುತ್ತದೆ. ಈ ಹೇಳಿಕೆಯು ಹೊರಟೊಡನೆ, ಸರಕಾರದ ಒತ್ತಾಯವಿದ್ದುದರಿಂದ ಅಮೇರಿಕ ಮಿಶನ್ ಸಂಸ್ಥೆಯು ಹೇಳಿಕೆ ಕೊಟ್ಟ ಲಕ್ನೋದ ಜೇ. ಹೋಮ್ಸ್‌ಸ್ಮಿತ್, ಮಸೂರಿಯ ಪಾವಲ್ ಕೆ. ರೇನ್, ಮಥುರೆಯ ರಾಲ್ಪ ಚಿ. ಟೆಂಪ್ಲಿನ್ ಮತ್ತು ಅವರ ಧರ್ಮಪತ್ನಿ ಈ ಪಾದರಿಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕಾಯಿತು.

ಸರಕಾರದ ನೀತಿ-ಧೋರಣೆ

ಹೀಗಿದ್ದರೂ ಕೂಡ ವಿದೇಶಿ ಮಿಶನರಿಗಳ ಕುರಿತು ಬ್ರಿಟಿಷ್ ಸರಕಾರದ ನೀತಿ ಧೋರಣೆಯು ಬೇರೆ ವಿದೇಶಿ ಸರಕಾರಗಳಿಗಿಂತ ಉದಾರವಾಗಿರುತ್ತದೆಂದು ಹೇಳುತ್ತಾರೆ. ಜಪಾನು ಸರಕಾರದ ಈ ವಿಷಯವಾದ ಧೋರಣೆಯು ಬಹಳ ಉಗ್ರವಾಗಿರುವುದು. ಸರಕಾರದ ಸ್ವಾರ್ಥಕ್ಕೆ ಭಂಗಬಾರದ ಹಾಗೆ ಎಚ್ಚರಿಕೆ ತೆಗೆದುಕೊಂಡು ಅಲ್ಲಿ ವಿದೇಶೀ ಮಿಶನರಿಗಳು-ಏನು ಬೇಕಾದರೂ ಮಾಡಬಹುದು' ಈ ಬಾರಿ ಬ್ರಿಟನಿಗೆ ಮತ್ತು ಜರ್ಮನಿಗೆ ಲೋಕಯುದ್ಧವು ಆರಂಭವಾದ ಬಳಿಕ ಸರಕಾರವು ಅನೇಕ ಜರ್ಮನ್ ಕ್ರೈಸ್ತ ಪಾದರಿಗಳನ್ನು ಕೈಸೆರೆ ಹಿಡಿಯಿತಾದರೂ, ಕೇವಲ ಮತ ಪ್ರಚಾರ ಮಾಡುವವರು ಎಂಬ ಭರವಸೆಯಾದ ಅನೇಕರನ್ನು ಸರ್ಕಾರವು ಮತ್ತೆ ಬಿಟ್ಟುಬಿಟ್ಟಿದೆ. ಜಪಾನಿನಲ್ಲಿ ಮಾದರೆ ಇನ್ನು ಯಾವ ಕ್ರೈಸ್ತ ವಿದೇಶಿ ಮಿಶನರಿಯೂ ಕಾಲಿಡಲಾಗದೆಂದು ಸದ್ಯವೇ ಕಾಯಿದೆ ಆಗಲಿಕ್ಕಿದೆ. ಇನ್ನು ಮುಂದೆ ಜಪಾನ್ ಸಾಮ್ರಾಜ್ಯದಲ್ಲಿ ವಿದೇಶೀ ಪಾದರಿಗಳಿಗೆ ಬಹಿಷ್ಕಾರ ಬೀಳಲಿರುವುದರಿಂದ, ಅವರನ್ನು ಅಲ್ಲಿ ನೇಮಿಸಿ ಕಳುಹಿಸಿದ ಅಮೇರಿಕನ್ ಸಂಸ್ಥೆಯು ಆ ಎಲ್ಲರನ್ನೂ ಹಿಂದುಸ್ಥಾನಕ್ಕೆ ಕಳುಹಿಸಬೇಕೆಂದು ಆಲೋಚಿಸಿದೆಯಂತೆ! ಯಾಕಂದರೆ ಮತಾಂತರ ಮತ್ತು ಮಿಶನರಿಗಳ ಇತರ ಕಾರ್ಯಸಾಧನೆಗೆ ಹಿಂದುಸ್ಥಾನವು ಹುಲುಸು ಭೂಮಿಯಾಗಿದೆ ಎಂದು ವಿದೇಶಿ ಮಿಶನ ಸಂಸ್ಥೆಗಳ ಅಭಿಪ್ರಾಯವಿದೆ.

ಎಚ್ಚರಿಕೆ

ಸ್ವತಂತ್ರ ವಿಚಾರ, ಮತ್ತು ಕೇವಲ ಸೇವಾಸಕ್ತಿ ಇರುವಂಥ ಹೋಮ್ಸ್‌ಸ್ಮಿತ್, ರಾಲ್ಫಟೆಂಪ್ಲಿನರ ವರ್ಗಕ್ಕೆ ಸೇರುವ ವಿದೇಶೀ ಪಾದರಿಗಳ ಮೇಲೆ ಬ್ರಿಟಿಷ್ ಸರಕಾರದ ವಕ್ರದೃಷ್ಟಿ ಇದ್ದೇ ಇದೆ. ನಮ್ಮ ದೇಶದ ರಾಷ್ಟ್ರೀಯ ವಿಚಾರ ಆಂದೋಲನಗಳಲ್ಲಿ ಯಾವುದೇ ತರದ ಸಹಾನುಭೂತಿ ಇಲ್ಲದಂಥ ವಿದೇಶೀ ಮಿಶನರಿಗಳನ್ನೇ ಸರಕಾರವು ಇಲ್ಲಿಗೆ ಬರಲು ಬಿಡುತ್ತದೆ. ಮತಾಂತರ ಮತ್ತು ಇಂಥ ಕ್ರೈಸ್ತ ಪಾದರಿಗಳ ಬೇರೆ ಕೆಲಸಗಳ ಪರಿಣಾಮವಾಗಿ ಭಾರತೀಯ ಸಭ್ಯತೆ ಸಂಸ್ಕೃತಿಗಳು ಹೇಗೆ ನಷ್ಟವಾಗಿ ದೇಶೀಯರು ಭ್ರಷ್ಟರಾಗಬೇಕಾಗುತ್ತದೆ ಎಂಬುದನ್ನು ಕಳೆದ ಎರಡುಮೂರು ಶತಮಾನಗಳ ಇತಿಹಾಸವು ನಮಗೆ ಸ್ಪಷ್ಟವಾಗಿ ಹೇಳಿಕೊಡುವುದು. ಆದುದರಿಂದ ದೇಶ ಹಿತೈಷಿ ಮತ್ತು ರಾಷ್ಟ್ರಪ್ರೇಮಿಯಾಗಿರುವ ಪ್ರತಿಯೊಬ್ಬ ಭಾರತೀಯನೂ ವಿದೇಶಗಳಿಂದ ಬರುವ ಈ ಮಿಶನರಿಗಳ ಕುರಿತು ತುಂಬಾ ಎಚ್ಚರಿಕೆಯಿಂದ ಇರಬೇಕಾಗಿರುವುದು. ಸ್ವತಂತ್ರ ಜಪಾನಿಗೆ ಬೇಡವಾದ ಈ ಮಿಶನರಿಗಳು ಪರತಂತ್ರ ಭಾರತಕ್ಕಾದರೂ ಹೇಗೆ ಬೇಕಾಗಬಹುದು?

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು, ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

$\frac{1}{4}$ ಸೇರಿಗೆ ರೂ 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರ್.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್. ಪಾ ಕಂಪೆನಿ, ಹಂಪನಕಟ್ಟಾ, ಮಂಗಳೂರು.

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.

Apply for particulars

K. R. GURU, *Managing Director.*

ಜಿಲ್ಲಾ ಸಮಾಚಾರಗಳು

ಮಂಗಳೂರು

— ಸತ್ಯಾಗ್ರಹಿಗಳ ಭಾಷಣ

ಸತ್ಯಾಗ್ರಹಿಗಳಾದ ಶ್ರೀ. ಪಿ. ವಿ. ಕದಂಬಳಿತ್ತಾಯ, ಕಟಪಾಡಿ ದಾಮೋದರ ನಾಯಕ, ಶ್ರೀ ಎಮ್. ಎಸ್. ರಾಮನವರು ಕೂಡಾ. ತಾ. ೧೪-೪-೪೧ನೇ ಸಾಯಂಕಾಲ ೫। ಗಂಟೆಗೆ ಕಂಕನಾಡಿಯಲ್ಲೂ ಸಾಯಂಕಾಲ ೭॥ ಗಂಟೆಗೆ ನಪ್ಪಿನಲ್ಲಿ ಕಾಂಗ್ರೆಸಿನ ಇತಿಹಾಸ, ಯುದ್ಧ ವಿರೋಧ ಭಾಷಣ, ರಚನಾತ್ಮಕ ಕ್ರಮಗಳ ಕುರಿತು ಭಾಷಣಮಾಡಿದರು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅವಗಾಹನೆ ಬಗ್ಗೆ

ಬಂಧಿಸಲ್ಪಡದಿರುವ ಸತ್ಯಾಗ್ರಹಿಗಳು ಜಿಲ್ಲೆಯಲ್ಲಿ ಪ್ರಚಾರ ಕಾರ್ಯವನ್ನು ಸಾಗಿಸುತ್ತಿದ್ದಾರೆ. ಆದರೆ ಅವರ ಪರಿಣಾಮವು ಜನತೆಯ ಮುಂದೆ ಬರಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೮೦೦ ಹಳ್ಳಿಗಳಿವೆ. ಪ್ರತಿಯೋರ್ವ ಸತ್ಯಾಗ್ರಹಿಯೂ ಪ್ರತೀ ಹಳ್ಳಿಯನ್ನು ಸಂಚರಿಸಿ ಕಾಂಗ್ರೆಸ್ ಸಂದೇಶವನ್ನು ಸಾರಿ ಕನಿಷ್ಠಪಕ್ಷ ಹತ್ತು ಮೆಂಬರರನ್ನಾದರೂ ಸೇರಿಸಿ ಬಂದರೆ ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ಮೆಂಬರರು ಹೆಚ್ಚಿದ ಹಾಗಾಯಿತು. ಮಾತ್ರವಲ್ಲ ಖಾದಿ ಪ್ರಚಾರ, [illegible] ಇವೇ ಮೊದಲಾದ ಕೆಲಸಗಳು ತಲೆದೋರಲು ಅವಕಾಶವಿದೆ. ಆದುದರಿಂದ ಸತ್ಯಾಗ್ರಹಿಗಳು ಪ್ರತಿ ಗ್ರಾಮವನ್ನೂ ಪ್ರವಾಸಸಂಚರಿಸಿ ಗ್ರಾಮದ ಸ್ಥಿತಿಗತಿ ಕಾಂಗ್ರೆಸ್ ಕಾರ್ಯಕ್ರಮ ಜನಸಂಖ್ಯೆ ಕೃಷಿ, ಕಾಂಗ್ರೆಸಿನಲ್ಲಿ ಜನಗಳಿರುವ ಹೆಸರು ಇವೇ ಮೊದಲಾದವನ್ನು ಆದಷ್ಟೇ ಸಂಗ್ರಹಿಸುವುದರಲ್ಲಿ ತುಂಬಾ ಅನುಕೂಲವಿದೆ. ಆದುದರಿಂದ ಡಿ. ಸಿ. ಸಿ. ಯವರು ಈ ಬಗ್ಗೆ ಒಂದು ಕಾರ್ಯಕ್ರಮವನ್ನು ಗೊತ್ತುಪಡಿಸಿ ಕೂಡಲೇ ಸತ್ಯಾಗ್ರಹಿಗಳ ತಿಳುವಳಿಕೆಗೆ ತರಬೇಕಾಗಿ ಅಪೇಕ್ಷೆಪಡುತ್ತೇವೆ ಎಂದು ಸತ್ಯಾಗ್ರಹಿ ಶ್ರೀ ಪಿ ವಿ ಕದಂಬಳಿತ್ತಾಯರು ಬರೆಯುತ್ತಾರೆ.

ವಿದ್ಯಾವರ್ಧಕ ಸಂಘ ಉರ್ವ

ಇಲ್ಲಿಯ ಪೋಸ್ಟ್ ಟಿಕೆಟ್ ಆಫೀಸಿನ ಮಾಳಿಗೆಯಲ್ಲಿ, ಕಳೆದ ರವಿವಾರ ವಿದ್ಯಾಪ್ರಚಾರದ ಸಂಬಂಧ ಕೆಲ ತರುಣರೊಂದು ಕೂಟ ನೆರೆದು, ವಿದ್ಯಾವರ್ಧಕ ಸಂಘ ಎಂಬ ಹೆಸರಿನ ಸಂಘವನ್ನು ಸ್ಥಾಪಿಸಲಾಯಿತು. ಶ್ರೀ ಪಿ. ಕೃಷ್ಣ ತಂತ್ರಿ, ರಾಷ್ಟ್ರ ಭಾಷಾ ವಿಶಾರದ ಇವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಜೊ. ಸಿ ಪಿರೇರರನ್ನು ಕಾರ್ಯದರ್ಶಿಯನ್ನಾಗಿಯೂ ಕೆಲವು ಉತ್ಸಾಹೀ ತರುಣರನ್ನು ಸ್ಥಾಪಕ ಸಮಿತಿಯ ಸದಸ್ಯರನ್ನಾಗಿಯೂ ಚುನಾಯಿಸಿ, ಸಂಘದ ಪ್ರಥಮ ಕಾರ್ಯವಾಗಿ ಕಳೆದ ಬುಧವಾರದಿಂದ ಸಾಯಂ. ಹಿಂದೀ ಶಿಕ್ಷಣವನ್ನು ಕಲಿಸಲಾಗುತ್ತಿದೆ.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲ

ಈ ಸಂಸ್ಥೆಯ ಸೆಕೆಕಾಲದ ಶಿಕ್ಷಣ ಶಿಬಿರವು ಇದೇ ತಾರೀಕು ೧೫ಕ್ಕೆ ಪ್ರಾರಂಭವಾಗಿರುತ್ತದೆ. ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ವ್ಯಾಯಾಮ ಶಿಕ್ಷಣ ಪಡೆಯುವರೆ ಕೆಲವರು ಬಂದಿರುತ್ತಾರೆ.

ಮದ್ರಾಸ್ ಹೈ ಕೋರ್ಟ್ ಎಡಿಶನಲ್ ಜಡ್ಜರು

ಮದ್ರಾಸ್ ಹೈ ಕೋರ್ಟಿನ ಎಡಿಶನಲ್ ಜಡ್ಜರಾಗಿ (ಎರಡು ವರ್ಷಗಳ ವರೆಗೆ) ಮದ್ರಾಸಿನ ಸ್ಮಾಲ್ ಕೋಸ್ ಕೋರ್ಟಿನ ಚೀಫ್ ಜಡ್ಜರಾದ ದಿವಾನ್ ಬಹದ್ದೂರ್ ಸಿ. ಕುಂಞಿರಾಮನ್ ಇವರೂ, ಮದ್ರಾಸಿನ ದಿಸ್ಟ್ರಿಕ್ಟ್ ಜಡ್ಜರಾದ ಶ್ರೀ. ಎಸ್. ಚಂದ್ರಶೇಖರ ಅಯ್ಯರವರೂ ನೇಮಿಸಲ್ಪಟ್ಟಿರುವರು. ಶ್ರೀ. ಅಯ್ಯರರು ಹಿಂದೆ ನಮ್ಮ (ಸೆಷನ್ಸ್) ಜಡ್ಜರಾಗಿದ್ದರು.

ಸಬ್-ಕೋರ್ಟು

ಎಡಿಶನಲ್ ಸಬ್ ಜಡ್ಜರಾಗಿ ಶ್ರೀ. ಟಿ. ಡಿ. ರಾಘವ ಪರತಲುರವರು ವರ್ಗಹೊಂದಿರುವರು ಕಳೆದ ವರ್ಷದಲ್ಲಿ ಆರಂಭಿಸಲ್ಪಟ್ಟ ಇಲ್ಲಿನ ಎಡಿಶನಲ್ ಸಬ್ ಕೋರ್ಟು ಈ ತಿಂಗಳ ತಾ. ೯ಕ್ಕೆ ಮುಚ್ಚಲ್ಪಟ್ಟಿತು.

ಮುನ್ಸಿಫ್ ಕೋರ್ಟು

ರಜಾ ಮುಗಿದ ಬಳಿಕ, ಇಲ್ಲಿ ಒಂದು ಎಡಿಶನಲ್ ಮುನ್ಸಿಫ್ ಕೋರ್ಟು ಆರಂಭಿಸಲ್ಪಡಲಿದೆ ಎಂದು ತಿಳಿದುಬಂದಿದೆ.

ಕೋರ್ಟು ರಜೆ

ಜಿಲ್ಲಾ ಸಬ್ ಹಾಗೂ ಮುನ್ಸಿಫ್ ಕೋರ್ಟುಗಳು ಕಳೆದ ತಾ. ೯ರಲ್ಲು ಬೇಸಿಗೆ ರಜಾ ನಿಮಿತ್ತ ಮುಚ್ಚಲ್ಪಟ್ಟಿವೆ.

ಪೈಗಂಬರರ ದಿನ

ಕಳೆದ ಗುರುವಾರ ಗಣಪತಿ ಹೈಸ್ಕೂಲಿನಲ್ಲಿ, ಯಂಗ್ ಮೆನ್ಸ್ ಮುಸ್ಲಿಂ ಅಸೋಸಿಯೇಶನಿನ ಆಶ್ರಯದಲ್ಲಿ ಶ್ರೀ ಕೆ. ಯಸ್. ಉನ್ನಿ ನಾಯರ್‌ರವರ ಅಧ್ಯಕ್ಷತೆಯಲ್ಲಿ ಪೈಗಂಬರರ ದಿನವು ಆಚರಿಸಲ್ಪಟ್ಟಿತು. ಜನಾಬ್ ಯಂ. ಸಿ. ಅಹಮ್ಮದ್‌ರವರು ಸ್ವಾಗತ ಭಾಷಣವನ್ನೂ, ಜನಾಬ್ ಮಹಮ್ಮದ್ ಕಮಾಲ್ ಸಾಹೇಬರು ಪ್ರಾರ್ಥನೆಯನ್ನೂ ನಡೆಸಿದ ಬಳಿಕ, ಶ್ರೀ ಬಿ. ವೈಕುಂಠ ಬಾಳಿಗ, ಜನಾಬ್ ಅಬ್ದುಲ್ ರಹಿಮ್ ಅಹಮ್ಮದ್, ಜನಾಬ್ ಜಿ ಮುಹಮ್ಮದ್ ಹರೂನ್ ಸಾಹೇಬ್ ಮತ್ತು ಜನಾಬ್ ಸಿ. ಟಿ. ಮಹಮ್ಮದ್ ಕುಂಞಿ ಸಾಹೇಬ್‌ರವರು ಭಾಷಣವಿತ್ತರು.

ಶ್ರೀಮತಿ ಮನೋರಮಾ ಬಾಯಿಯವರ ಬಿಡುಗಡೆ

ಎರಡು ತಿಂಗಳ ಹಿಂದೆ ಸತ್ಯಾಗ್ರಹ ನಡೆಸಿ ಎರಡು ತಿಂಗಳ ಸಜೆಗೆ ಗುರಿಯಾಗಿದ್ದ ಶ್ರೀಮತಿ ಪಿ. ಮನೋರಮಾ ಬಾಯಿಯವರು, ವೆಲ್ಲೂರ ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟವರು ಕಳೆದ ಶುಕ್ರವಾರ ಮಂಗಳೂರಿಗೆ ತಲುಪಿದರು.

ಶ್ರೀ ರಾಮಕೃಷ್ಣ ಪರಮಹಂಸರ ವರ್ಧಂತಿ

ಶ್ರೀ ವಿವೇಕಾನಂದ ಸಂಘದ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿನಾಚರಣೆಯು ತಾ. ೫ ಮತ್ತು ೬ರಲ್ಲಿ ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀ ಸುವಿಜ್ಞಾನಾನಂದ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ಮಹಾಸಭೆ, ಸಂಘದ ವರದಿವಾಚನ, ಪೂಜೆ ಇತ್ಯಾದಿಗಳು ನಡೆದುವು. ಸಾಯಂಕಾಲ ಪಂಡಿತ ನಡ್ಯೋಡಿ ಅನಂತ ಉಪಾಧ್ಯಾಯರೂ ಡಾ. ಸಿ ರಾಮಸ್ವಾಮಿಯವರೂ ಪ್ರೊ. [illegible]ಚಾರ್ಯರೂ ಶ್ರೀ ರಾಮಕೃಷ್ಣ ಮಿಶನಿನ ಶಿವರ ಸ್ವಾಮಿಜಿಯವರೂ, ಶ್ರೀ ರಾಮಕೃಷ್ಣರ ಜೀವನಚರಿತ್ರೆ, ಅವರ ಬೋಧನೆ ಈ ವಿಷಯಗಳನ್ನೆತ್ತಿಕೊಂಡು ಭಾಷಣವಿತ್ತರು.

ಈ ಸಮಾರಂಭದಲ್ಲಿ ಸ್ವಾಮಿ ಧ್ರುವಾನಂದಜಿಯವರು ಅಧ್ಯಕ್ಷತೆ ವಹಿಸಿದ್ದರು. ಉರ್ವ ಮೈದಾನಿನಲ್ಲಿ ಬಡಬಗ್ಗರಿಗೆ ಅನ್ನದಾನ ಮಾಡಲಾಯಿತು.

ಹರಿಜನ ಸೇವಕ ಸಂಘ

ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಡಿ. ಸಿ. ಮಿಶನ್ ಹಾ. ಎ. ಶಾಲೆಯಲ್ಲಿ, ಡಾ. ಎಚ್. ವಿ. ಆನಪರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕಿನ ಸೀತಂಗೋಳಿಯಲ್ಲಿ ಹರಿಜನ ಕಾಲನಿಗಾಗಿ ದರ್ಖಾಸ್ತು ಮಾಡಿಕೊಳ್ಳಲಿರುವ ವಿಚಾರವಾಗಿ ಯೋಚಿಸಿ, ಇದನ್ನು ಜಿಲ್ಲಾ ಸಂಘದ ಹೆಸರಲ್ಲಿ ಮಾಡಿಕೊಳ್ಳಲು ನಿರ್ಧರಿಸಿತು. ಅಗತ್ಯವಿದ್ದರೆ ಜಿಲ್ಲಾ ಸಂಘವನ್ನು ರಿಜಿಸ್ತ್ರ ಮಾಡಿಸಲೂ ಸಂಘ ನಿರ್ಧರಿಸಿತು. ಬೋರ್ಡು ಶಾಲೆಗಳಲ್ಲಿ ಕಲಿವ ಹರಿಜನ ಮಕ್ಕಳ ಮಧ್ಯಾಹ್ನದ ಊಟದ ಖರ್ಚಿನ ಮೂರನೆಯ ಒಂದಂಶವನ್ನು ಸಂಘವು ವಹಿಸಲು ನಿಶ್ಚಯಿಸುವದರೊಡನೆ ಉಳಿದ ಅಂಶಕ್ಕೆ ಬೋರ್ಡನ್ನು ವಿನಂತಿಸಿತು.

ಸುರತ್ಕಲ್ ವರ್ಧಂತ್ಯುತ್ಸವ

ಇದ್ಯ ವಿದ್ಯಾದಾಯಿನೀ ಶಾಲೆಯ ಇಪ್ಪತ್ತನಾಲ್ಕನೇ ವರ್ಧಂತಿ ಉತ್ಸವವು ಇದೇ ತಾ. 30-4-41ನೇ ಬುಧವಾರ ಶ್ಯಾಮ ಘಂಟೆ ೬ಕ್ಕೆ ಶ್ರಿಯುತ ಉಪಾಧ್ಯಾಯರ ಸದಿಯ, ಸಾಹುಕಾರ್, ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು ಎಂದು ಆಡಳಿತ ಕಮಿಟಿ ಸಭಾಸದರು ತಿಳಿಸುತ್ತಾರೆ.

ಬಂಟ್ವಾಳ ವಾರ್ಷಿಕೋತ್ಸವ

ಇದೇ ತಾ. 11—4—'41ರಲ್ಲು ಇಲ್ಲಿಯ ಶ್ರಿ ಯಶವಂತ ವ್ಯಾಯಮ ಶಾಲೆಯ ಪ್ರಥಮ ವಾರ್ಷಿಕೋತ್ಸವವು ಶ್ರೀ ಪಿ. ಎಸ್ ಕುದ್ವರ ಅಧ್ಯಕ್ಷತೆಯಲ್ಲಿ ಸಾಗಿತು. ವರದಿ ವಾಚನ ಆಟಗಳನ್ನೂ ಬಳಿಕ ವ್ಯಾಯಮ ಶಾಲೆಯ ಸದಸ್ಯರು ವಿವಿಧ ಶಸ್ತ್ರಾಸ್ತ್ರಗಳ ಪ್ರಯೋಗಾಭ್ಯಾಸಗಳನ್ನೂ ಜೆಂಕಿಯ ಬೇರೆ ಬೇರೆ ಆಟಗಳನ್ನೂ ಪ್ರದರ್ಶಿಸಿದರು. ಅಧ್ಯಕ್ಷರಿಂದ ಬಹುಮಾನಗಳು ಕೊಡೋಣಾದ ಬಳಿಕ ಹಿತಚಿಂತಕರ ಪರವಾಗಿ ಶ್ರೀ ತೋನ್ಸೆ ವೆಂಕಟೇಶ ಪೈ ಇವರು ಭಾಷಣ ಮಾಡಿದರು ನಂತರ ಶ್ರೀ ವಾಸುದೇವ ಶೆಣೈಯವರು ಭಾಷಣವಿತ್ತರು, ಕೊನೆಗೆ ಅಧ್ಯಕ್ಷರು ವ್ಯಾಯಮ ಶಾಲೆಯ ಅಭಿವೃದ್ಧಿಯನ್ನು ಹಾರೈಸಿ ಭಾಷಣವನ್ನು ಮಾಡಿದರು.

ಕಾರ್ಕಳ ಸತ್ಯಾಗ್ರಹ ಸಮಾಚಾರಗಳು

ಕಳೆದ ತಿಂಗಳಲ್ಲಿ ಇಲ್ಲಿ ಸತ್ಯಾಗ್ರಹ ಮಾಡಿ ಈಗ ಬಿ. ತರಗತಿಯ ಕೈದಿಗಳಾಗಿ ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲಿ ೪ ತಿಂಗಳ ಸಕ್ರಮ ಸಜೆಯನ್ನು ಅನುಭವಿಸುತ್ತಿರುವ ಶ್ರೀ ಕೆ. ವೆಂಕಟೇಶ ಪ್ರಭುಗಳವರನ್ನು ಸರಕಾರವು ಎ. ತರಗತಿಗೆ ವರ್ಗಾಯಿಸಿದೆ ಎಂದು ತಿಳಿದುಬರುತ್ತದೆ. ಸಂಚಾರದಲ್ಲಿರುವ ಶ್ರೀಗಳಾದ ಕೆ. ಶೀನ ಶೆಟ್ಟಿ, ಯಸ್. ವರದರಾಯ ಶೆಣೈ, ಶ್ರೀಧರ ನಾಯಕ ಮೊದಲಾದವರು ತಾ.೨೮ ದಿನ ಇಲ್ಲಿ ಸತ್ಯಾಗ್ರಹ ಸಂದೇಶವನ್ನು ಸಾರಿದರು. ಶ್ರೀ ನೀಲಕಂಠ ಪೂಜಾರವರು ತಾ.12ರ ದಿನ ಸ್ವರಾಜ್ಯ ಮೈದಾನಿನಲ್ಲಿ ಸತ್ಯಾಗ್ರಹ ಮಾಡಿದರು. ಆದರೆ ಪೋಲೀಸರು ಅವರನ್ನು ಕೈದುಮಾಡಲಿಲ್ಲ.

ವರ್ಧಂತಿ ಉತ್ಸವ

ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ತಾ. 12 ಮತ್ತು 13 ಎರಡು ದಿನಗಳಲ್ಲಿ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಸತ್ಯಾಗ್ರಹೀ ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟರ ಸಂಚಾರ

ನಮ್ಮ ಜಿಲ್ಲೆಯಲ್ಲಿ ಪ್ರಥಮವಾಗಿ ವಾಕ್‌ಸ್ವಾತಂತ್ರ್ಯವನ್ನು ಪಡೆದು ಮುಂದೆ ಹೊರಟ ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟರು ವಾರಂಗ, ಮುನಿಯಾಲು, ಅಜೆಕಾರು, ಎಣ್ಣೆಹೊಳೆ, ಮೂಡೂರು, ಕಾರ್ಕಳ, ಕುಕ್ಕುಂದೂರು, ಜಾರ್ಕಳ ಬೈಲೂರು, ನಿಂಜೂರು, ಕಣಜಾರು, ಗುಡ್ಡೆಅಂಗಡಿ, ಹಿರಿಯಡ್ಕ, ಆತ್ರಾಡಿ, ಪರ್ಕಳ, ಪೆರ್ಡೂರು, ಸಾಂತ್ಯಾರು, ದೊಂಡೇರಂಗಡಿ, ಕುಕ್ಕೆಹಳ್ಳಿ, ಹಾವಂಜೆ, ಕೊಳಲಗಿರಿ, ಪೇತ್ರಿ, ಕುಂಜಾಲು, ಆರೂರು, ಕೆಂಜೂರು, ಕೊಕ್ಕರ್ಣೆ ಬಾರ್ಕೂರು, ಸಾಬರಕಟ್ಟೆ, ಸಿರಿಯಾರ, ಕೊಕ್ಕೆಬೈಲು, ಮತ್ತಾಡಿ, ಹುಣ್ಸೆಮಕ್ಕಿ, ಬಿದ್ಕಲ್‌ಕಟ್ಟೆ, ಹಾರ್ದಳ್ಳಿ, ಹಾಲಾಡಿ, ಒಂಡಾರು, ಮಂದರ್ತಿ, ಹೆಗ್ಗುಂಜೆ, ಮೆಕ್ಕೆಕಟ್ಟೆ, ಶಂಕರನಾರಾಯಣ, ಸಿದ್ಧಾಪುರ, ಹೊಸಂಗಡಿ, ಕಂಡ್ಲೂರು, ಬಸ್ರೂರು, ಕುಂದಾಪುರ, ಕೋಟೇಶ್ವರ, ಕುಂಭಾಶಿ, ತೆಕ್ಕಟ್ಟೆ, ಕೋಟ, ಸಾಲಿಗ್ರಾಮ, ಸಾಸ್ತಾನ, ಹಂಗಾರಕಟ್ಟೆ, ಬಾಳ್ಕುದ್ರು, [illegible]ಗಳಲ್ಲಿ ಯುದ್ಧ ವಿರುದ್ಧ ಪ್ರಚಾರ ಕಾರ್ಯವನ್ನು ಅತಿ ಉತ್ಸಾಹದಿಂದ ಮಾಡುತ್ತಾ ಮುಂದರಿಯುತ್ತಿರುವರು ಶ್ರೀಯುತ ಸೆಟ್ಟರು ಹಾರಾಡಿ, ಸಾಲಿಕೇರಿ, ಬ್ರಹ್ಮಾವರ, ಕಲ್ಯಾಣಪುರ ಉಡುಪಿ ರಥಬೀದಿ, ಅಜ್ಜರಕಾಡು ಮಲ್ಪೆ, ಕೊಡವೂರು, ಕೆಮ್ಮಣ್ಣು, ಉದ್ಯಾವರ, ಕಟಪಾಡಿ ಕಾಪು ಇತ್ಯಾದಿ ಸ್ಥಳಗಳಲ್ಲಿಯೂ ಭಾಷಣ ಘೋಷಣ ಮಾಡಿದರು.

ಕಾಸರಗೋಡು

ಪೋಲೀಸ್ ಕೊಲೆಯ ಪರಿಣಾಮ

ಕೈಯ್ಯೂರು ಗ್ರಾಮದಲ್ಲಿ ಒಬ್ಬ ಕಾನ್‌ಸ್ಟೇಬಲನನ್ನು ಹೊಳೆಗೆ ದೂಡಿದುದರ ಪರಿಣಾಮವಾಗಿ ಅಲ್ಲಿ ಹಲವು ಮನೆಗಳ ಝಡ್ತಿಯಾಗಿ ಕೆಲವು "ಕಮ್ಯುನಿಸ್ಟ್" ಸಾಹಿತ್ಯ ದೊರಕಿದೆ ಎಂದೂ, ಕೃಷಿಕ ಸಂಘದ ಆಫೀಸಿನ ಝಡ್ತಿಯೂ ನಡೆದು ಸುಮಾರು 25 ಮಂದಿಯು ಕೈದಾಗಿದೆ ಎಂದೂ ಕೈಯ್ಯೂರು ಗ್ರಾಮದ ಹಾಗೂ ಅದರ ನೆರೆ ಗ್ರಾಮವಾದ ಪೊದಕ್ಕಾಡಿನ ನೂರಾರು ಮಂದಿ ಸಮೀಪದ ಕಾಡುಗಳಿಗೆ ಹೋಗಿರುವರೆಂದೂ ಮಲಬಾರ್ ಸ್ಪೆಶಲ್ ಪೋಲೀಸ್ ಫೋರ್ಸಿನವರು ಇಲ್ಲಿಗೆ ಕಳುಹಿಸಲ್ಪಟ್ಟಿದ್ದು ಅವರು ತನಿಖೆ ನಡೆಸುವರೆಂದೂ ತಿಳಿದು ಬಂದಿದೆ.

೧೪೪ನೇ ಪ್ರಕರಣ ಜಾರಿಯಾಗಿದೆ

ಪೆರುಂಬಳಂ ಎಂಬಲ್ಲಿ ಒಂದು ಕಾನ್ಫರೆನ್ಸ್ ನಡೆಯಲಿದ್ದು ಅದನ್ನು ಕಾಸರಗೋಡಿನ ಸಬ್ ಮೆಜಿಸ್ಟ್ರೇಟರು ತಮ್ಮ 144ನೇ ಪ್ರಕರಣದ ಆಜ್ಞೆಯ ಜಾರಿಯಿಂದ ಬಹಿಷ್ಕರಿಸಿದ್ದಾರೆ. ಇನ್ನೆರಡು ತಿಂಗಳ ವರೆಗೆ ರೈತರ ಯಾವ ಚಳವಳಿಯೂ ಅಲ್ಲಲ್ಲ ನಡೆಯ್ಯಕೂಡದಾಗಿದೆ. ಈ ಬಹಿಷ್ಕಾರದ ಆಜ್ಞೆ ಕಾಸರಗೋಡು ಕಸಬಾ, ಮುಟ್ಟತ್ತೋಡಿ ಹಾಗೂ ಅನ್ನಮದು ಗ್ರಾಮಗಳಿಗೆ ಅನ್ವಯಿಸುವುದಾಗಿದೆ. ನಡೆಯಲಿದ್ದ ಆ ಕಾನ್ಫರೆನ್ಸಿನ ಅಧ್ಯಕ್ಷ ಮಿ. ಇ. ಮೊಯಿದು ಮೌಲ್ವಿ ಮೊದಲಾದವರಿಗೆ ಈ ಆಜ್ಞೆಯ ಪ್ರತಿ ಕಳುಹಲಾಗಿದೆ. ಹಳ್ಳಿಗಳಲ್ಲಿ ಮನೆಝಡ್ತಿ ನಡೆಯುತ್ತಿದೆ.

ಒಂದು ಜಾತಿಗೆ ಪೌರುಷ ಪ್ರತಿಭೆಗಳು ಬೇಕೆಂದರೆ

ಬಲವಿರಬೇಕು
ಜಾತಿಯು ನಿಸ್ತೇಜವಾದರೆ
ಜಾತೀಯತೆಯಿರಲಾರದು
ಜೀವವಿರಲಾರದು
ಭಾರತೀಯರು
ಬಲಪೌರುಷ ಪ್ರತಿಭೆಗಳನ್ನು
ಗಳಿಸಬೇಕಾದರೆ

ಎಲ್ಲರಿಗೂ ಸಹಜವಾಗಿ ಬಲವಿರದು. ಅಂಥವರು "ಅಮೃತ" ಸೇವಿಸಲೇ ಬೇಕು. "ಅಮೃತ" ಆರೋಗ್ಯಕ್ಕೂ ಬಲಕ್ಕೂ ಇಟ್ಟದ್ದೇ ಹೆಸರು.

ಆರೋಗ್ಯಕ್ಕೂ ಬಲಕ್ಕೂ ಅಮೃತ

ಕೇಸರಿಕುಟೀರಂ-ಮದ್ರಾಸು.

ಪ್ರಾಂತಗಳಲ್ಲಿ ಗವರ್ನರರ ಅಧಿಕಾರವು ಮುಂದುವರಿಯುವುದು

ಭಾರತದಲ್ಲಿ ವಿಶೇಷ ಘಟನೆಗಳೇನೂ ನಡೆದಿಲ್ಲ. ಸತ್ಯಾಗ್ರಹವು ಭರದಿಂದ ಮುಂದೆ ಸಾಗುತ್ತಿದೆ. ಡಾಕಾದಲ್ಲಿ ದೊಂಬಿಯಾಗಿದೆ. ಇದಕ್ಕೆ ಬಂಗಾಳದ ಹಕ್ಕ ಮಂತ್ರಿಮಂಡಲದ ದೌರ್ಬಲ್ಯವೇ ಕಾರಣವೆಂದು ಮುಖಂಡರನೇಕರು ಹೇಳಿದ್ದಾರೆ. ಮದ್ರಾಸಿನಲ್ಲಿ ಜಿನ್ನರ ಅಧ್ಯಕ್ಷತೆಯಿಂದ ಮುಸ್ಲಿಂ ಲೀಗ್ ಅಧಿವೇಶನವು ಕೂಡಿತು. ಜಿನ್ನರು ತಾವು ಪಾಕಿಸ್ತಾನಕ್ಕೆ ಹೋರಾಡುವೆವೆಂದೂ, ಮದ್ರಾಸಿನ ಅಬ್ರಾಹ್ಮಣರು ದ್ರಾವಿಡಸ್ತಾನಕ್ಕೆ ಹೋರಾಡಿರೆಂದೂ ಬೊಬ್ಬಿಟ್ಟರು. ಸಪ್ರೂ ವೈಸರಾಯರ ಭೇಟಿಯ ಫಲಿತಾಂಶವೇನೂ ತಿಳಿದುಬರಲಿಲ್ಲ. ಕಾಂಗ್ರೆಸ್ಸು ಮಂತ್ರಿಗಳು ರಾಜೀನಾಮೆ ಕೊಟ್ಟ ಪ್ರಾಂತಗಳಲ್ಲಿ ೯೩ನೆಯ ನಿಯಮದಂತೆ ಗವರ್ನರರ ಸರ್ವಾಧಿಕಾರೀ ಆಡಳಿತವೇ ಮುಂದುವರಿಯುವುದೆಂದು ತಿಳಿದಿದೆ.

ಮದ್ರಾಸಿನಲ್ಲಿ ಮುಸ್ಲಿಂ ಲೀಗ್ ಅಧಿವೇಶನ

ಮದ್ರಾಸಿನಲ್ಲಿ ಮಾ. ಜಿನ್ನರ ಅಧ್ಯಕ್ಷತೆಯಿಂದ ಮುಸ್ಲಿಂ ಲೀಗ್ ಅಧಿವೇಶನವು ನೆರೆಯಿತು. ಜಿನ್ನರು ಪಾಕಿಸ್ತಾನದ ವಿಷಯವಾಗಿ ಮಾತನಾಡುತ್ತಾ ೧೨೦ ನಿಮಿಷಗಳ ದೀರ್ಘ ಭಾಷಣವಿತ್ತರು. ಪಾಕಿಸ್ತಾನದಂತೆ ದ್ರಾವಿಡಸ್ತಾನವೂ ಇರಬೇಕೆಂದು ಹೇಳಿದರು.

ಹಿಂದೂ ಮಹಾಸಭೆಯ ಪ್ರತ್ಯಕ್ಷ ಹೋರಾಟ

ಮಧುರಾಧಿವೇಶನದಲ್ಲಿ ನಿರ್ಣಯಿಸಿದಂತೆ ಹಿಂದೂ ಮಹಾಸಭೆಯು ಆರಂಭಿಸಲಿರುವ ಪ್ರತ್ಯಕ್ಷ ಹೋರಾಟದ ವಿಷಯ ಅ. ಭಾ. ಹಿಂದೂ ಮಹಾಸಭೆಯಲ್ಲಿಯೇ ನಿರ್ಣಯವಾಗಬೇಕೆಂದು ಹಿಂ. ಮ. ಸಭೆಯ ವರ್ಕಿಂಗ್ ಕಮಿಟಿ ನಿರ್ಣಯಿಸಿತು.

೬ ಸಾವಿರ ರೂಪಾಯಿ ಜುಲ್ಮಾನೆ ಅಮಾನುಷ

ಪಂಜಾಬು ಪ್ರಾಂತಿಕ ಶಾಸನ ಸಭೆಯ

ದ್ರಾವಿಡಸ್ಥಾನಕ್ಕೆ ಮುಸ್ಲಿಂ ಲೀಗಿನ ಬೆಂಬಲ

ಜಿನ್ನರು ಮೂರ್ಛೆಹೊಂದಿದರು!

ಡಾಕಾದ ವಿಶ್ವವಿದ್ಯಾಲಯಕ್ಕೆ ಬೆಂಕಿ ಬಿತ್ತು!

ಸದಸ್ಯರಾದ ಇಫ್ತಿಕರುದ್ದೀನರಿಗೆ ಒಂದು ವರ್ಷದ ಕಠಿಣ ಶಿಕ್ಷೆ ಹಾಗೂ ೬ ಸಾವಿರ ರೂಪಾಯಿಗಳ ಜುಲ್ಮಾನೆ ವಿಧಿಸಲಾಗಿತ್ತಷ್ಟೆ? ಈ ಕುರಿತು ಅಲ್ಲಿನ ವಕೀಲರು ಕೂಡಿ ಸ್ವಯಂಪ್ರೇರಿತರಾಗಿ ಅಪೀಲು ಮಾಡಿದರು. ೬ ಸಾವಿರ ರೂಪಾಯಿಯ ಜುಲ್ಮಾನೆಯು ಇಂತಹ ಅಪರಾಧಕ್ಕೆ ವಿಧಿಸುವುದು ಅಮಾನುಷವೆಂದು ಅಪೀಲು ವಿಚಾರಣೆ ಮಾಡಿದ ನ್ಯಾಯಾಧೀಶರು ಬರೆದು ಅವರಿಗೆ ೧॥ ಸಾವಿರ ರೂಪಾಯಿ ಜುಲ್ಮಾನೆಯನ್ನೂ ೬ ತಿಂಗಳ ಶಿಕ್ಷೆಯನ್ನೂ ವಿಧಿಸಿದರು.

ಭಾರತದಲ್ಲಿ ೯೩ನೆಯ ನಿಯಮದ ಅವಧಿ ಬೆಳೆಯುವುದು

ಪ್ರಾಂತಗಳಲ್ಲಿ ಗವರ್ನರರ ಸರ್ವಾಧಿಕಾರ

ಕಾಮನ್ಸ್ ಸಭೆಯಲ್ಲಿ ಮೇಜರ್ ಸಿ. ಆರ್. ಅಟ್ಲೀಯವರು ಹಿಂದೂಸ್ಥಾನದಲ್ಲಿ ೯೩ನೆಯ ನಿಯಮದ ಅವಧಿ ಬೆಳೆಯುವ ಠರಾವು ಮಂಡಿಸುವರು.

ಪ್ರಾಂತಿಕ ಮಂತ್ರಿಗಳು ಏಳು ಪ್ರಾಂತಗಳಲ್ಲಿ ರಾಜಿನಾಮೆಯಿತ್ತ ಮೇಲೆ ಗವರ್ನರರೇ ೯೩ನೆಯ ನಿಯಮದಂತೆ ಅಧಿಕಾರ ನಡೆಸಿದರಷ್ಟೆ? ಮುಂದೆಯೂ ಆ ಪ್ರಾಂತಗಳಲ್ಲಿ ತಿರಿಗಿ ಚುನಾವಣೆಯಿಲ್ಲದೆ ಗವರ್ನರರೇ ಅಧಿಕಾರ ನಡೆಸತಕ್ಕವರಾಗಿ ಈ ೯೩ನೆಯ ನಿಯಮದ ಅವಧಿ ಬೆಳೆಸಿದುದರ ಅರ್ಥವಾಗಿದೆ.

ಭಾರತದಲ್ಲಿ ಹಿಟ್ಲರನ ಗುಪ್ತ ರೇಡಿಯೋ ಇದೆಯೆ?

ಭಾರತದಲ್ಲಿ ಹಿಟ್ಲರನ ಗುಪ್ತ ಆಕಾಶವಾಣಿ ಇದೆಯೋ ಎಂಬ ಬಗ್ಗೆ ಸರಕಾರದವರಿಗೆ ಸಂಶಯವುಂಟಾಗಿ ಆ ಕುರಿತು ವಿಚಾರಣೆ ನಡೆಸಿ ಗುಪ್ತ ಆಕಾಶವಾಣಿಯಿಲ್ಲವೆಂದೂ ಅಲ್ಲಲ್ಲಿನ ಪತ್ರಿಕಾ ಪ್ರತಿನಿಧಿಗಳು ವರ್ತಮಾನವನ್ನು ಜರ್ಮನಿಗೆ ತಿಳಿಸುವರೆಂದೂ ಪ್ರಕಟಿಸಲಾಗಿದೆ.

ಕವೀಂದ್ರ ರವೀಂದ್ರರ ಹುಟ್ಟಿದ ಹಬ್ಬ

ರವೀಂದ್ರರ ೮೦ನೆಯ ಹುಟ್ಟಿದ ಹಬ್ಬವು ಶಾಂತಿನಿಕೇತನದಲ್ಲಿ ತಾ. ೧೪ರಂದು ಆಚರಿಸಲ್ಪಟ್ಟಿತು. ಆ ಕಾಲದಲ್ಲಿ ಅವರ 'ನನ್ನ ಬಾಲ್ಯ' ಎಂಬ ಪುಸ್ತಕವು ಪ್ರಕಟವಾಗಲಿದೆ.

ವಿಶ್ವಭಾರತಿಯೆಂಬ ರವೀಂದ್ರರ ವಿದ್ಯಾಪೀಠವು ಭಾರತಕ್ಕೆ ಕೊಡುವ ಸಾಂಸ್ಕೃತಿಕ ಕಾಣಿಕೆಯನ್ನು ಮನಗಂಡು ಭಾರತ ಸರಕಾರವು ಅದಕ್ಕೆ ೨೫ ಸಾವಿರ ರೂಪಾಯಿ ಸಹಾಯ ಕೊಡುವುದೆಂದೂ ಬಂಗಾಳ ಸರಕಾರವು ೨೫ ಸಾವಿರ ರೂಪಾಯಿ ಸಹಾಯ ಕೊಡುವುದೆಂದೂ ತಿಳಿದಿದೆ.

ಸಂಯುಕ್ತ ಪ್ರಾಂತದಲ್ಲಿ ಸತ್ಯಾಗ್ರಹ

ಸತ್ಯಾಗ್ರಹವು ಆರಂಭವಾದಂದಿನಿಂದ ಸಂಯುಕ್ತಪ್ರಾಂತ್ಯದಲ್ಲಿ ಒಟ್ಟು ೧೨ ಸಾವಿರ ಮಂದಿ ಸೆರೆಹಿಡಿಯಲ್ಪಟ್ಟರೆಂದೂ ೧೦ ಲಕ್ಷ ರೂಪಾಯಿ ಜುಲ್ಮಾನೆ ತೆರಲಾಯಿತೆಂದೂ ಗೊತ್ತಾಗಿದೆ.

ಸಾವರ್ಕಾರ — ಅಮೆರಿ

ಡಾಕಾದಲ್ಲಿ ನಡೆದ ಜಾತೀಯ ದಂಗೆಯ ವಿಚಾರವಾಗಿ ಅಮೆರಿಯವರ ಲಕ್ಷ್ಯವನ್ನು ಬ್ಯಾ. ಸಾವರ್ಕಾರರು ತಂತಿಯ ಮೂಲಕ ಸೆಳೆದಿರುವರು.

ಜಿನ್ನರು ಮೂರ್ಛೆ ಹೊಂದಿದರು

ಮದ್ರಾಸಿನಲ್ಲಿ ನಡೆದ ಮುಸ್ಲಿಂ ಲೀಗ್ ಅಧಿವೇಶನಕ್ಕೆ ಆಗಮಿಸುವ ಜಿನ್ನರು ರಾಯಚೂರಿನ ಬಳಿಯಲ್ಲಿ ಉಗಿಬಂಡಿಯಲ್ಲಿ ಮೂರ್ಛೆ ಹೊಂದಿದರು.

ಕೊಚ್ಚಿನ್ ಮಹಾರಾಜರ ನಿಧನ

ಸರ್ ಶ್ರೀ. ರಾಮ ವರ್ಮರಾಜರು. ಕೇರಳ ವರ್ಮರಾಜರು ಪಟ್ಟವೇರಿದರು

ಕೊಚ್ಚಿಯ ರಾಜರಾದ ಶ್ರೀ. ರಾಮ ವರ್ಮರಾಜರು ತಮ್ಮ ೮೦ನೇ ವಯಸ್ಸಿನಲ್ಲಿ ದಿವಂಗತರಾದರು. ಕೊಚ್ಚಿಯ ಪಟ್ಟವನ್ನು ಕೇರಳ ವರ್ಮರಾಜರು ಏರಿರುವರು.

ಡಾಕಾದ ವಿಶ್ವವಿದ್ಯಾಲಯಕ್ಕೆ ಬೆಂಕಿ

ಡಾಕಾ ದಂಗೆಯ ನಿಮಿತ್ತ ಅಲ್ಲಿನ ವಿಶ್ವವಿದ್ಯಾಲಯಕ್ಕೆ ಬೆಂಕಿ ಹಚ್ಚಿರುವರು. ಆ ಸಂಬಂಧ ಹತ್ತು ಜನ ವಿದ್ಯಾರ್ಥಿಗಳ ಬಂಧನವಾಗಿದೆ. ಅಲ್ಲಲ್ಲಿ ಈಗಲೂ ಹಿಂದೂ ಮುಸ್ಲಿಂ ಗಲಾಟೆ ನಡೆಯುತ್ತಿವೆ.

೧೦೦೦ ಸತ್ಯಾಗ್ರಹಿಗಳು

ಮಹಾರಾಷ್ಟ್ರದ ಮೂರನೆಯ ಪಟ್ಟಿಯಲ್ಲಿ ೧೦೦೦ ಸತ್ಯಾಗ್ರಹಿಗಳಿಗೆ ಮಹಾತ್ಮರ ಅನುಮತಿ ದೊರೆತಿದೆಯೆಂದು ತಿಳಿದುಬರುತ್ತದೆ.

ರಾಜಕೀಯ ಕೈದಿಗಳ ಅನ್ನತ್ಯಾಗ

ಮುಂಬಯಿ ಪ್ರಾಂತದ ಠಾಣಾ ಸೆರೆಮನೆಯಲ್ಲಿ ಆಹಾರವು ಕೀಳೆಕತ್ತಲಗಳಿಂದ ಕೂಡಿರುವುದೆಂದು ರಾಜಕೀಯ ಕೈದಿಗಳು ಅನ್ನತ್ಯಾಗ ಮಾಡಿರುವರು.

ಕುಮಾರಿ ಇಂದಿರಾ

ಲಂಡನಿನಿಂದ ಭಾರತಕ್ಕೆ ಮರಳಿ ಬರಲು ಹೊರಟ ನೆಹರೂ ಪುತ್ರಿ ಕುಮಾರಿ ಇಂದಿರೆಯು ಈಗ ದರ್ಬಾನಿಗೆ ಬಂದು ಮುಟ್ಟಿರುವುದಾಗಿ ತಿಳಿಯುತ್ತದೆ.

ರೂಸ್‌ವೆಲ್ಟರಿಗೆ ಸರ್. ವಿಜಯರ ತಂತಿ

ಜಗತ್ತಿಗೆ ಕೊಡುವ ಸ್ವಾತಂತ್ರ್ಯವನ್ನು ಬ್ರಿಟನು ನಮಗೆ ಕೊಡಬೇಡವೆ? ನಮ್ಮ ಪರವಾಗಿ ನೀವು ವಿಚಾರಿಸಿರೆಂದು ನಾವು ನಿಮ್ಮೊಡನೆ ಕೇಳುತ್ತೇವೆ ಎಂದು ವಿಜಯನಗರದ ರಾಜಕುಮಾರರಾದ ಸರ್. ವಿಜಯರು ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರಿಗೆ ತಂತಿ ಕಳುಹಿಸಿದ್ದಾರೆ.

ಪಂ. ಕುಂಜ್ರುಗಳು ಪಾಕಿಸ್ತಾನವನ್ನು ಖಂಡಿಸುತ್ತಾರೆ

ಪಂಡಿತ ಹೃದಯನಾಥ ಕುಂಜ್ರುಗಳು ಮದ್ರಾಸಿನಲ್ಲಿ ಒಂದು ಭಾಷಣಮಾಡುತ್ತಾ ಪಾಕಿಸ್ತಾನದ ವಿಷಯದಲ್ಲಿ ಸದುತ್ತರವನ್ನು ಕೊಟ್ಟಿದ್ದಾರೆ. ಮುಸ್ಲಿಂ ಲೀಗಿನ ಹಾಗೂ ಜಿನ್ನರ ಪಾಕಿಸ್ತಾನದ ಕೂಗು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವೆಂದು ಸಾರಿದ್ದಾರೆ. ಭಾರತದ ಒಕ್ಕಟ್ಟನ್ನು ಹರಿದುಬಿಡಲು ಈ ಯೋಜನೆಯಾಗಿದೆಯೆಂದು ಎಚ್ಚರಿಸಿದ್ದಾರೆ. ಹಿಂದುಗಳೂ ಮುಸ್ಲಿಮರೂ ಶತಮಾನಗಳಿಂದ ಒಂದೇ ರಾಷ್ಟ್ರಕ್ಕೆ ಸೇರಿ ಬಾಳಿದ ಬಾಂಧವರೆಂದೂ, ಧರ್ಮಪರಿವರ್ತನೆಯಿಂದ ಮಾತ್ರ ಜನಾಂಗ ಬದಲಾವಣೆಯಾಗುವುದು ಅಸಾಧ್ಯವೆಂದೂ, ಭಾರತದ ಹಲವು ಮಂದಿ ಮುಸ್ಲಿಮರು ಮತ ಪರಿವರ್ತಿತ ಹಿಂದೂ ವಂಶಜರೆಂದೂ ಇಂತಹ ಸಮೀಪ ಸಾಮೀಪ್ಯದ ಒಂದು ಜನಾಂಗದ ಜನರನ್ನು ಬೇರ್ಪಡಿಸುವ ಹೇಳಿಕೆಯು ಅರಾಷ್ಟ್ರೀಯವೆಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಶ್ರೀ. ಬಿ. ವಿಠಲ್‌ದಾಸ್ ಶೆಟ್ಟಿ

ಇವರು ವಿಟ್ಲದ ಪ್ರಥಮ ಸತ್ಯಾಗ್ರಹಿ, ಸರಕಾರದವರಿಂದ ರಕ್ಷಣಾ ಮಸೂದೆ ಪ್ರಕಾರ ದಸ್ತಗಿರಿಗೊಳಪಟ್ಟರು. ೨೫ ದಿವಸಗಳ ನಿರ್ಬಂಧವನ್ನು ಮಂಗಳೂರು ಸಬ್ ಜೈಲಿನಲ್ಲಿ ಅನುಭವಿಸಿದ ನಂತರ ವಿಚಾರಣೆಯಿಲ್ಲದೆ ಬಿಡಲ್ಪಟ್ಟರು.



ಅನಂತರ ಧಿಲ್ಲಿಗೆ ಹೋಗಿ ಕೆಲವು ಉದ್ದೇ... ವನ್ನಿಟ್ಟುಕೊಂಡು, ... ಕಾಲುನಡಿಗೆಯಿಂದ ... ಊರೂರಿಗೆ ಹೋಗಿ ಯುದ್ಧ ವಿರುದ್ಧ ಪ್ರಚಾರ ಮಾಡುತ್ತಾ ಭಟ್ಕಳಕ್ಕೆ ಹೋಗಿ ತಲಪಿದಾಗ ಮುಂಬಯಿ ಸರಕಾರದವರಿಂದ ಪುನಹ ಬಂಧಿಸಲ್ಪಟ್ಟರು. ಆರು ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿ ಬೆಳಗಾವಿಯ ಹಿಂಡಲ್ಗ ಜೈಲಿಗೆ ಕಳುಹಿಸಲ್ಪಟ್ಟಿದ್ದಾರೆ.

ಇಜಿಪ್ಟ್ ಪಾರ್ಲಿಮೆಂಟಿನ ಗುಪ್ತ ಅಧಿವೇಶನ ಸೇರಿದೆ!

ಜರ್ಮನಿಯ ಸೈನ್ಯ ನುಗ್ಗುವುದೆ?

ರಶ್ಯ-ಜಪಾನುಗಳೊಳಗೆ ತಾಟಸ್ಥ್ಯ ಒಪ್ಪಂದ!

ಯುಗಸ್ಲವಿಯದ ಮೇಲೆ ಐದು ರಾಷ್ಟ್ರಗಳ ಮುತ್ತಿಗೆ!

ಗ್ರೀಸ್ ಯುಗಸ್ಲವಿಯಗಳಲ್ಲಿ ಭೀಕರ ಕದನ ನಡೆದಿದೆ ಜರ್ಮನರು ಆಕ್ರಮಿಸಿದ್ದಾರೆ ಬ್ರಿಟಿಷರ ಸಹಾಯ ಹೋಗಿದೆ. ಯುಗಸ್ಲವಿಯದ ರಾಜಧಾನಿ ಜರ್ಮನರ ವಶವಾಗಿದೆ ಇಜಿಪ್ತು ಪಾರ್ಲಿಮೆಂಟಿನ ಗುಪ್ತ ಸಭೆ ಕೂಡಿದೆ ಬಾಲ್ಕನಿನಲ್ಲಿ ಯುದ್ಧವು ಹರಡುತ್ತಿದೆ. ರಶ್ಯ ಜಪಾನುಗಳು ತಟಸ್ಥ ಒಪ್ಪಂದ ಮಾಡಿಕೊಂಡಿವೆ. ಚೀನವು ಇದರಿಂದ ನೊಂದುಕೊಂಡಿದೆ. ಚೀನಕ್ಕೆ ರಶ್ಯವು ಕಳುಹಿಸುವ ಸಹಾಯ ಧೋರಣೆಗೆ ಈ ಒಪ್ಪಂದವು ಆತಂಕವಾಗಲಾರದೆಂದು ರಶ್ಯವು ಚಿಯಾಂಗ್ ಕೈಶೇಕರಿಗೆ ತಿಳಿಸಿದೆ ಲಂಡನಿನ ಬಳಿ ದಾಳಿ ನಡೆದಿದೆ

ರಶ್ಯಾ-ಜಪಾನು ಒಪ್ಪಂದದಿಂದ ಚೀನವು ನೊಂದಿದೆ

ರಶ್ಯಾ ಜಪಾನುಗಳೊಳಗೆ ಆದ ಒಪ್ಪಂದದಿಂದ ಚೀನವು ಬಹಳವಾಗಿ ನೊಂದಿದೆ ಆ ಒಪ್ಪಂದವನ್ನು ನಿರಾಕರಿಸಿ, ಕಟುವಾಗಿ ಟೀಕಿಸಿ, ಚೀನೀ ವಿದೇಶ ಮಂತ್ರಿ ಡಾ ವಾಂಗ್ ಚಂಗ ಹೂಯಿಯವರು ಒಂದು ಪ್ರಕಟಣೆ ಹೊರಡಿಸಿದ್ದಾರೆ. ಅದರಲ್ಲಿ ಮ ಊರನೆಯ ರಾಷ್ಟ್ರಗಳು ಮಾಡಿದ ಒಪ್ಪಂದಕ್ಕೂ ತಮಗೂ ಯಾವುದೇ ತರದ ಸಂಬಂಧವಿರುವುದಿಲ್ಲವೆಂದು ಹೇಳಿರುತ್ತಾರೆ

ಬ್ರಿಟಿಷ್ ಜರ್ಮನ್ ಸೈನ್ಯಗಳ ಕಾಳಗ

ಇಜಿಪ್ತ್ ಪಾರ್ಲಿಮೆಂಟಿನ ಗುಪ್ತ ಸಭೆ

ತೋಬ್ರುಕದ ಹತ್ತಿರ ಬ್ರಿಟಿಷ್ ಸೈನ್ಯಗಳು ಬೆಂಗಾಜಿಯಿಂದ ಇಜಿಪ್ತ್ ಗಡಿನಾಡಿನ ವರೆಗೆ ನುಗ್ಗಿ ಜರ್ಮನ್ ಸೈನ್ಯಗಳನ್ನು ಹಿಂದಕಟ್ಟಿದವಂತೆ ಹೊಸದಾಗಿ ಉಂಟಾದ ಪರಿಸ್ಥಿತಿಯನ್ನು ವಿಚಾರಿಸಲು ಇಜಿಪ್ತ್ ಪಾರ್ಲಿಮೆಂಟಿನ ಗುಪ್ತ ಸಭೆಯೊಂದು ಸೇರಿರುತ್ತದೆ.

ಯುದ್ಧದಲ್ಲಿ ಬೀಳದಂತೆ ಅಮೇರಿಕವನ್ನು ತಡೆಯುವರೆ?

ಪ್ರಿನ್ಸ್ ಕೊನಾಯಿಯವರ ಹೇಳಿಕೆ

ಅಮೇರಿಕವು ಯುದ್ಧದಲ್ಲಿ ಬೀಳದಂತೆ ಜಪಾನ್ ರಾಯಭಾರಿ ನೋಮುರಾ ಇವರು ಯತ್ನಿಸುವರಾಗಿ ಜಪಾನ್ ಮುಖ್ಯಮಂತ್ರಿ ಪ್ರಿನ್ಸ್ ಕೊನಾಯಿ ಇವರು ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿದರು.

ಜಪಾನು ಅಮೇರಿಕಾ ಸಂಬಂಧವು ವಿಷಮವಾಗಿದೆಯೆಂದು ನನಗನಿಸುವುದಿಲ್ಲವೆಂದೂ ಅವರು ಹೇಳಿದರು

ಮೊನಾಸ್ಟೀರ್, ಪ್ಲಾರಿನಾ ರಸ್ತೆಯಲ್ಲಿ ಕಾಳಗ

ಮೊನಾಸ್ಟೀರ್ ಪ್ಲಾರಿನಾ ರಸ್ತೆಯಲ್ಲಿದ್ದ ಜರ್ಮನ್ ಟೀರಿಕ್ ದಳವನ್ನು ಗ್ರೀಕರು ಪರಾಭವಗೊಳಿಸಿದರೆಂದು ತಿಳಿದುಬರುತ್ತದೆ

ಟರ್ಕಿಯ ಮೇಲೆ ಆಕ್ರಮಣ ಉದ್ದೇಶವಿಲ್ಲ

ಟರ್ಕಿ ವಿದೇಶಾಂಗ ಮಂತ್ರಿಗೆ ಜರ್ಮನ್ ರಾಯಭಾರಿಯ ಭರವಸೆ

ಯುಗೋಸ್ಲೇವಿಯಾ ಮೇಲೂ ಗ್ರೀಸಿನ ಮೇಲೂ ಜರ್ಮನಿಯು ಯುದ್ಧವನ್ನು ಘೋಷಿಸಿದ ಮೇಲೆ ಜರ್ಮನ್ ರಾಯಭಾರಿಯಾದ ಹೆರ್ ವಾನ್ ಪೇಪನ್‌ರವರು ಟರ್ಕಿಯ ವಿದೇಶಾಂಗ ಮಂತ್ರಿ ಎಮ್ ಸರಜೋಗ್ಲುರವರನ್ನು ಭೇಟಿ ಮಾಡಿ ಟರ್ಕಿಯ ಮೇಲೆ ಬೀಳುವ ಯಾವುದೇ ಉದ್ದೇಶವೂ ಜರ್ಮನಿಗಿಲ್ಲ ಎಂಬುದಾಗಿ ಭರವಸೆ ಕೊಟ್ಟರು

ಚೀನಕ್ಕೆ ರಶ್ಯದ ಭರವಸೆ

ಹೊಸ ಒಪ್ಪಂದದಿಂದ ಚೀನಕ್ಕೆ ರಶ್ಯವು ಸಹಾಯಮಾಡುವ ಧೋರಣೆಯಲ್ಲಿ ಬದಲಾವಣೆಯಿಲ್ಲವೆಂದು ರಶ್ಯವು ಚಿಯಾಂಗ್ ಕೈಶೇಕರಿಗೆ ತಿಳಿಸಿದೆಯಂತೆ

ಗ್ರೀಕರು ಕೊರಿಜಾದಿಂದ ಹಿಂತೆಗೆದರು

ಜರ್ಮನ್ ಸೈನ್ಯಗಳು ಸಾಲೋನಿಕದಿಂದ ಆಗ್ನೇಯಕ್ಕೆ ಮುನ್ನುಗ್ಗುತ್ತವೆ ಯುದ್ಧದ ಗಂಡಾಂತರದಿಂದ ಕೊರಿಜಾ ರಣಭೂಮಿಯಿಂದ ಹಿಂತೆಗೆಯಲು ಗ್ರೀಕರು ಸೈನ್ಯಕ್ಕೆ ಅನುಮತಿ ಕೊಟ್ಟಿದ್ದಾರಂತೆ

ತೋಬ್ರುಕದ ಯುದ್ಧದಲ್ಲಿ ೩೦೦ ಜರ್ಮನರ ಕೈಸೆರೆಯಾಗಿ ೧೨ ಜರ್ಮನ್ ವಿಮಾನಗಳುರುಳಿಸಲ್ಪಟ್ಟಿವೆಯಂತೆ

ಕ್ರೋಷಿಯಾ ನಾಜಿಗಳ ವಶ

ಜರ್ಮನ್ ಸೈನ್ಯವು ಯುಗಸ್ಲವಿಯದಲ್ಲಿ ಮುಂದೊತ್ತುತ್ತಿದೆ ಕ್ರೋಷಿಯಾ ಪ್ರಾಂತ್ಯವನ್ನು ಜರ್ಮನರು ಸ್ವಾಧೀನಪಡಿಸಿಕೊಂಡಿರುವರು.

ನಾಜಿಗಳ ಕ್ರೌರ್ಯ

ಯುಗಸ್ಲವಿಯದ ರಾಜಧಾನಿ ಬೆಲ್ಗ್ರೇಡಿನ ಮೇಲೆ ಧಾಳಿಯಿಟ್ಟು ನಾಜಿಗಳು ಹೆಂಗಸರು ಮಕ್ಕಳೇ ಮೊದಲಾದವರನ್ನು ಗುಂಡಿಟ್ಟುಕೊಂದುಹಾಕಿದರು ಅರಮನೆಯಮೇಲೆ ೩೦ ಬಾಂಬುಗಳು ಬಿದ್ದುವು

ಟರ್ಕಿಯ ಎಚ್ಚರಿಕೆ

ಇಸ್ತಾಂಬೂಲಿನಿಂದ ಜನರು ಬೇರೆ ಕಡೆಗೆ ಹೋಗಬೇಂದೂ ಯಾವುದೇ ಪರಿಸ್ಥಿತಿಯನ್ನಾದರೂ ಎದುರಿಸಬೇಕೆಂದೂ ಟರ್ಕಿ ಸರಕಾರವುಜನರಿಗೆ ಎಚ್ಚರಿಕೆ ಕೊಟ್ಟಿದೆ ವ್ಯಾಪಾರ ಉದ್ಯೋಗದಲ್ಲಿರುವವರು ಇಸ್ತಾಂಬೂಲಿನಿಂದ ತೆರಳಿಹೋಗಬೇಕೆಂದು ಸಾರಲಾಗಿದೆ

ತೋಬ್ರುಕದ ಪರಿಸ್ಥಿತಿ ಚಿಂತೆಗೆ ಕಾರಣವಿಲ್ಲ

ತೋಬ್ರುಕದ ಭವಿತವ್ಯದ ಬಗ್ಗೆ ಚಿಂತೆಗೊಳಗಾಗುವ ಕಾರಣವಿಲ್ಲವೆಂದು ತಿಳಿಸಲಾಗಿದೆ ಬ್ರಿಟಿಷ್ ಸೈನಿಕರು ತಮ್ಮ ವಿಮೋಚನೆಗಾಗಿ ಕಾಯುವರು ಇಲ್ಲವೇ ಸಮುದ್ರ ಮುಖಾಂತರ ಅದನ್ನು ಖಾಲಿ ಮಾಡುವರೆಂದು ಹೇಳಲಾಗಿದೆ

ಪೋಪರ ಸಂದೇಶ

ಪೋಪರು ಈಸ್ಟರ್ ಹಬ್ಬದ ನಿಮಿತ್ತ ಒಂದು ಸಂದೇಶ ಕೊಡುತ್ತಾ ಯುದ್ಧಾಸಕ್ತ ರಾಷ್ಟ್ರಗಳು ಹತ್ಯಾಕಾಂಡವನ್ನು ನಿಲ್ಲಿಸಿ ಶಾಂತಿಸ್ಥಾಪಿಸಲು ಯತ್ನಿಸಬೇಕೆಂದು ಸಾರಿರುವರು.

ಯುಗಸ್ಲವಿಯದ ಮೇಲೆ ಐದು ರಾಷ್ಟ್ರಗಳು ಮುತ್ತಿಗೆ ಹಾಕಿದುವು

ಯುಗಸ್ಲವಿಯದ ಪರಿಸ್ಥಿತಿ ಚಿಂತಾಜನಕವಾಗಿದೆ ಈ ದುರ್ಬಲ ರಾಷ್ಟ್ರದ ಮೇಲೆ ಜರ್ಮನಿ, ಇಟಲಿ, ಹಂಗೇರಿ ರುಮೇನಿಯಾ, ಬಲ್ಗೇರಿಯಾಗಳು ಮುತ್ತಿಗೆ ಹಾಕಿವೆ ಬೇರೆ ಬೇರೆ ದಿಕ್ಕಿನಿಂದ ಅವುಗಳ ಸೈನ್ಯಗಳು ಮುತ್ತಿಗೆ ಹಾಕಿರುತ್ತವೆ

ದಕ್ಷಿಣ ಯುಗಸ್ಲವಿಯದಿಂದ ಉತ್ತರ ಗ್ರೀಸಿಗೆ

ಜರ್ಮನ್ ಸೈನ್ಯಗಳು, ನುಗ್ಗಿದವು. ಮೊನಾಸ್ಟರ್ ಕಣಿವೆ ಮಾರ್ಗವಾಗಿ ಹಾದು ಹೋದವು. ಅಲ್ಲಿ ಭಯಂಕರವಾದ ಕಾಳಗವು ನಡೆಯಿತು.

ಕಾಪುಜ ಮತ್ತು ಸೊಲ್ಲಮ್ ಕೋಟೆಗಳ ಆಕ್ರಮಣ

ಲಿಬಿಯದ ದಂಡೆಯಲ್ಲಿರುವ ಕಾಪುಜ ಮತ್ತು ಸೊಲ್ಲಮ್ ಕೋಟೆಗಳನ್ನು ಜರ್ಮನರು ವಶಪಡಿಸಿಕೊಂಡಿರುವರೆಂದು ತಿಳಿದಿದೆ.

ಟರ್ಕಿ ಅಧ್ಯಕ್ಷರು ಮತ್ತು ಬ್ರಿಟಿಷ್ ರಾಯಭಾರಿ

ಟರ್ಕಿಯ ಅಧ್ಯಕ್ಷರನ್ನು ಬ್ರಿಟಿಷ್ ರಾಯಭಾರಿ ಸರ್ ನಾಚಬುಲ್ ಹೆಗಸನ್ ಇವರು ಕಂಡರು ವಿಚಾರ ವಿನಿಮಯ ನಡೆಯಿತು.

ರಶ್ಯಾ-ಜಪಾನು ತಾಟಸ್ಥ್ಯ ಒಪ್ಪಂದ

ರಶ್ಯ ಮತ್ತು ಜಪಾನುಗಳೊಳಗೆ ಐದು ವರ್ಷಗಳ ತಾಟಸ್ಥ್ಯ ಒಪ್ಪಂದವೊಂದು ಸಹಿಯಾಯಿತು. ಎರಡು ರಾಷ್ಟ್ರಗಳೂ ಪರಸ್ಪರ ಮೈತ್ರಿಯಿಂದಿರಬೇಕೆಂದೂ, ಯಾವುದಾದರೊಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ಆಕ್ರಮಿಸಿದರೆ ಆ ಅವಧಿ ಮುಗಿಯುವ ವರೆಗೆ ತಟಸ್ಥವಾಗಿರಬೇಕೆಂದೂ ತಿಳಿದಿದೆ

ಜಪಾನು ರಶ್ಯದ ಅಸ್ತಿತ್ವವನ್ನು ಮನ್ನಿಸಿ ಮಂಗೋಲಿಯನ್ ರಿಪಬ್ಲಿಕನ್ನು ಮಾನ್ಯಮಾಡಲು ಒಪ್ಪಿದೆಯೆಂದೂ ಅದೇ ಮೇರೆಗೆ ಮಂಚುಕೋ ಸಾಮ್ರಾಜ್ಯವನ್ನು ಮನ್ನಿಸುವ ಒಗೆ ಅದರ ಅಸ್ತಿತ್ವವನ್ನು ಗಳಿಸುವ ಬಗ್ಗೆ ರಶ್ಯದ ಆಶ್ವಾಸನ ಸಿಕ್ಕಿದೆಯೆಂದೂ ತಿಳಿದುಬರುತ್ತದೆ

ಬಾರ್ಡಿಯವು ಶತ್ರು ವಶವಾಯಿತು,

ಬಾರ್ಡಿಯವು ಜರ್ಮನ್ ವಶವಾಯಿತು. ಇದನ್ನು ತಿಳಿದ ಬ್ರಿಟಿಷರು ಮೊದಲೇ ಅದನ್ನು ಖಾಲಿಮಾಡಿದ್ದರು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 10/I 41

ಪಣಂಬೂರು ನರಸಿಂಹ ಭಟ್ಟ — ವಾದಿ

ಸಂಕಣ ಶೆಟ್ಟಿ, ಮರವೂರು ಗ್ರಾಮ, ಸ್ಥಿರವಾಸ, ಕೊಡಿಯಾಲ್‌ಬೈಲ್ ಗ್ರಾಮ ವ ಜಾನುವಾರ ಆಸ್ಪತ್ರೆ ಒಳಿಯಿರುವವ — ಪ್ರತಿವಾದಿ

ಪ್ರತಿವಾದಿ ಸಂಕಣ ಶೆಟ್ಟಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಪ್ರತಿವಾದಿ ಸಂಕಣ ಶೆಟ್ಟರು ವಾದಿಗೆ ತಾ 21-9 39ರಲ್ಲಿ ರೂಪಾಯಿ 250ಕ್ಕೆ ಬರಕೊಟ್ಟ ನೋಟಿನ ಬಾಕಿ ಅಸಲು ಬಡ್ಡಿ ರೂಪಾಯಿ 106-1-4ಕ್ಕೆ ಪ್ರತಿವಾದಿ ನಿಮ್ಮ ಮೇಲೆ ವಾದಿಯು ದಾಖಲುಮಾಡಿದ ಮೇಲ್ಕಂಡ ದಾವೆಯು ತನಿಖೆಯು ತಾರೀಕು 2-6-41ಕ್ಕೆ ಇಟ್ಟಿರುವುದರಿಂದ ಆ ದಿನ ಹಗಲು 11 ಗಂಟೆಗೆ ನೀವು ಸ್ವತಹ ಯಾ ವಕೀಲರ ಮುಖಾಂತ್ರ ಹಾಜರಾಗಿ ನಿಮ್ಮ ಉದಾಹರಣೆಯನ್ನು ಕೊಡತಕ್ಕದ್ದು ತಪ್ಪಿದರೆ ನಿಮ್ಮ ಗೈರ ಹಾಜ್ರಿಯಲ್ಲಿ ಸದ್ರಿ ದಾವೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನವಾಗಲಾಗುವುದು

(By order of the Court)

ಮಂಗಳೂರು ತಾ. 3-4-41 — B. Srinivasa Pai, Vakil for Plaintiff

ಶಾಲಾ ಪುಸ್ತಕಗಳು

*ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ. ಎರಡನೆಯ ಆವೃತ್ತಿಯು ಹೊರಬೀಳಲಿದೆ.

ಬೆಲೆ ಒಂದೊಂದು ತರಗತಿಗೆ 0 - 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ **ಬೆಲೆ 0-2-0**
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ **ಬೆಲೆ 0-2-6**

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕವನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು, ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳೂ ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ. ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು, ಮೋದಬೋಧಪ್ರದಗಳೆಂದು.

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ. ಬಿ. ಶ್ರೀನಿವಾಸರಾವ್ ಮತ್ತು ಬಿ. ದೂಮಪ್ಪನವರಿಂದ ರಚಿತವಾದದು.
೪ನೆಯ ತರಗತಿಗೆ **ಬೆಲೆ** 0 4 0 ೫ನೆಯ ತರಗತಿಗೆ **ಬೆಲೆ** 0 5 0

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿದೆ. ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಪಾಠಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ.

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮಾತ್ರ ಮೊದಲಾಗಿ ರಚಿತವಾದುವು. ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ, ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ. ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ.

ಬೆಲೆ: ೪, ೫ನೆಯ ತರಗತಿಗೆ 0—1—6 *೬ನೆಯ 0—2—0
*೭ನೆಯ 0—2—6 *೮ನೆಯ 0—3—0

ಸಿರಿಗನ್ನಡ ಪಾಠಕಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ. ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ ತರುವಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪಾಠಕದ ರಚನೆಯಾಗಿರುತ್ತದೆ.

ಬೆಲೆ. 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು.

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 6

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ವಿ. ಸೂ. ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುತ್ತದು

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಮಂಗಳೂರಲ್ಲಿ ರಾಷ್ಟ್ರೀಯ ಸಪ್ತಾಹ

ಹರಿಜನ ದಿನ

ರಾಷ್ಟ್ರೀಯ ವಾರದ ಅಂಗವಾಗಿ ಹರಿಜನ ದಿನವು ಕಳೆದ ಸೋಮವಾರ ಆಚರಿಸಲ್ಪಟ್ಟಿತು. ಡಾ. ಯು. ಪಿ. ಮಲ್ಯ, ಶ್ರೀಗಳಾದ ಕೆ. ಕೃಷ್ಣಪ್ಪ ತಿಂಗಳಾಯ, ಬಿ. ಡಿ. ಬಾಳಿಗ ಮತ್ತು ಯನ್. ಯಸ್. ಕಿಲ್ಲೆಯವರು ಆರು ಹರಿಜನ ಕೊಲನಿಗಳನ್ನು ಸಂದರ್ಶಿಸಿ, ಭಾಷಣಗಳನ್ನು ನಡೆಸಿ, 500 ಮನೆಗಳಿಗೆ ಸಾಬೂನು ಹಂಚಿದರು. ಅವರು ಆರು ಹರಿಜನ ಶಾಲೆಗಳನ್ನೂ ಸಂದರ್ಶಿಸಿ, ಅಲ್ಲಿನ ಸುಮಾರು 500 ಮಕ್ಕಳಿಗೆ ಮಿಠಾಯಿ ಹಂಚಿದರು. ಆ ದಿನ ಹಂಚಿದ ಸಾಬೂನನ್ನು ಶ್ರೀ ಮಣೇಲ್ ಅಣ್ಣಪ್ಪ ನಾಯಕರೂ, ಮಿಠಾಯಿಯನ್ನು ಶ್ರೀ ಬಿ. ವೈಕುಂಠ ಬಾಳಿಗರೂ ದಾನವಾಗಿ ಕೊಟ್ಟಿದ್ದರು.

ಖಾದಿ ದಿನ

ರಾಷ್ಟ್ರೀಯ ವಾರದ ಅಂಗವಾಗಿ ಮಂಗಳವಾರ ಖಾದಿ ದಿನವು ಆಚರಿಸಲ್ಪಟ್ಟಿತು. ಖಾದಿ ವಿಕ್ರಯವು ನಡೆಯಿತು. ಸಂಜೆ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಯಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಲ್ಲಿ ಸೆಂಟ್ಲೆಂಡ್ ಪೇಟೆಯಲ್ಲಿ ಸಾರ್ವಜನಿಕ ಸಭೆಯೊಂದು ಜರುಗಿತು.

ಕೂಲಿಕಾರರ ದಿನ

ರಾಷ್ಟ್ರೀಯ ವಾರದ ಅಂಗವಾಗಿ ಕೂಲಿಕಾರರ ದಿನವು ಕಳೆದ ಬುಧವಾರ ಆಚರಿಸಲ್ಪಟ್ಟಿತು. ಸಂಜೆ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿತು. ಶ್ರೀಗಳಾದ ವೆಂಕಣ್ಣ, ಲಕ್ಕಪ್ಪ ರೈ, ಗೋಪಾಲ ಸಾಲೆನ್ಸ, ಕೆ. ಕೆ. ರೈ, ಕೆ. ಕೃಷ್ಣರಾವ್, ಬಿ. ಡಿ. ಬಾಳಿಗ ಮತ್ತು ಸೋನ್ಸರು ಮಾತನಾಡಿದರು.

ಜಲಿಯನ್ ವಾಲಾಬಾಗ್ ದಿನ

ರಾಷ್ಟ್ರೀಯ ವಾರದ ಅಂಗವಾಗಿ ಜಲಿಯನ್ ವಾಲಾಬಾಗ್ ದಿನವು ಕಳೆದ ತಾ. ೧೩ರಂದು ಇಲ್ಲಿ ಆಚರಿಸಲ್ಪಟ್ಟಿತು. ಪ್ರಭಾತ ಫೇರಿಯಾದ ಬಳಿಕ ಮಿಸೆಸ್ ಮೇರಿ ಬ್ರಿಟೋರವರು ಧ್ವಜಾರೋಹಣ ನಡೆಸಿದರು. ಸಂಜೆ ಬಿ. ಡಿ. ಬಾಳಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಕೆ. ಕೃಷ್ಣರಾವ್, ಎಮ್. ಆರ್. ಭಟ್ ಮತ್ತು ಪಾಂಗಾಳ ನಾಯಕರು ಭಾಷಣವಿತ್ತರು. ಶ್ರೀ. ಕೆ. ಯಸ್. ಅಹಮ್ಮದ್ ಬಾವಾರವರು ವಂದನಾರ್ಪಣೆ ನಡೆಸಿದರು.

ಮಹಿಳೆಯರ ದಿನ

ರಾಷ್ಟ್ರೀಯ ವಾರದ ಅಂಗವಾಗಿ ತಾ. 10ರಂದು ಮಹಿಳೆಯರ ದಿನವು ಆಚರಿಸಲ್ಪಟ್ಟಿತು. ಭಗಿನೀ ಸಮಾಜದ ನೇತೃತ್ವದಲ್ಲಿ ನೂಲುವ ಸ್ಪರ್ಧೆ ಖಾದಿ ಮಾರಾಟ ಮೊದಲಾದ ಚಟುವಟಿಕೆಗಳಿದ್ದುವು. ನೂಲುವ ಸ್ಪರ್ಧೆಯಲ್ಲಿ ಡಾ. ಯು. ಪಿ. ಮಲ್ಯರ ಪತ್ನಿಯವರು ಪ್ರಥಮ ಸ್ಥಾನ ಪಡೆದಿರುವರು. ಸಂಜೆಗೆ ಸಾರ್ವಜನಿಕ ಸಭೆ ನಡೆಯಿತು.

ಜಾತಿ ಐಕ್ಯ ದಿನ

ತಾ. 11ರಂದು ರಾಷ್ಟ್ರೀಯ ವಾರದ ಅಂಗವಾಗಿ ಜಾತಿ ಐಕ್ಯ ದಿನವು ಆಚರಿಸಲ್ಪಟ್ಟಿತು. ಡಿ. ಬೋ. ಪ್ರೆಸಿಡೆಂಟ್ ಡಾ. ವಿಟ್ಠಲ ಶೆಟ್ಟಿ ಅಧ್ಯಕ್ಷತೆಯಿಂದ ಸಾರ್ವಜನಿಕ ಸಭೆ ನೆರೆಯಿತು. ಹಿಂದೂ ಮುಸ್ಲಿಂ ಐಕ್ಯದ ಕುರಿತು ಕಾಸರಗೋಡಿನ ಮುಹಮ್ಮದ್ ಕುಂಞಾಯವರು ಎಸ್. ಎನ್. ಹೊಳ್ಳರೇ ಮೊದಲಾದವರು ಮಾತನಾಡಿದರು.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

★ ವಿಚಿತ್ರ-ಪ್ರಪಂಚ ★

ಭಿಕ್ಷೆ ಬೇಡಿ ಬದುಕಿದ 'ಅಕ್ಕಿರಾಜ'

ಪ್ರಾಚೀನ ಕತೆಗಳನ್ನು ಓದಿದರೆ ಭಿಕ್ಷೆ ಬೇಡಿ ಬದುಕಿದ ಅನೇಕ ರಾಜರು ದೊರೆಯಬಹುದು. ಆದರೆ ಈಗ ಹೇಳುವುದು ಅಂಥ ಪ್ರಾಚೀನ ಕತೆಯಲ್ಲ. ಇದು ಅಮೆರಿಕದಲ್ಲಿ ನಡೆದ ನಿಜವಾದ ಘಟನೆ. ಜೋಶುವ ಅಬ್ರಹಾಮ್ ಎಂಬ ದಕ್ಷಿಣ ಆಫ್ರಿಕದ ಒಬ್ಬ ನಿವಾಸಿಯು ಅಮೇರಿಕಕ್ಕೆ ಹೋಗಿ ವ್ಯಾಪಾರದ ಮೂಲಕ ಜೀವಿಸಿಕೊಂಡಿದ್ದ. ಅವನು ವ್ಯಾಪಾರದ ಮೂಲಕವೇ ಅಮೆರಿಕ ಧನಿಕರಲ್ಲಿ ಒಬ್ಬನಾದ. ಅಮೆರಿಕದ ಅಕ್ಕಿ ವ್ಯಾಪಾರವೆಲ್ಲ ಅವನ ಕೈಯೊಳಗಿದ್ದುದರಿಂದ ಜನರು ಅವನನ್ನು ಅಕ್ಕಿರಾಜ ಎಂದು ಕರೆಯುತಿದ್ದರು. ಆದರೆ ಕರ್ಮಧರ್ಮ ಸಂಯೋಗದಿಂದ ಅವನು ಎಲ್ಲವನ್ನು ಕಳಕೊಂಡು ಒಂದು ದಿನ ದಿವಾಳಿಯಾದ. ಜನರು ಅವನನ್ನು ರಾಜನಲ್ಲ, ಚಕ್ರವರ್ತಿ ಎಂದು ತಮಾಶೆಮಾಡತೊಡಗಿದರು. ಅವನೂ ಹುಚ್ಚನಾಗಿ ಚಕ್ರವರ್ತಿ-ರಾಜನಂತೆಯೇ ಉಡಿಗೆತೊಡಿಗೆಗಳಿಂದ ಶೃಂಗಾರಮಾಡಿಕೊಂಡು ತಿರುಗಲಾರಂಭಿಸಿದ. ಹೋದ್ದಲ್ಲೆಲ್ಲಿ ಭಿಕ್ಷೆಬೇಡಿ ರಾಜ ಠೀವಿಯಿಂದ ತಿರುಗುತ್ತಿದ್ದ. ಜನರು ಇವನ ವೇಷಭೂಷ, ರೀತಿನೀತಿಗಳನ್ನು ನೋಡಿ ವಿನೋದಗೊಳ್ಳುತಿದ್ದರು. ನಾಟಕ, ಸಿನೇಮ, ಹೊಟೇಲು ಮನೆ-ಎಲ್ಲ ಕಡೆಗಳಲ್ಲಿಯೂ ಅವನಿಗೆ ಪುಕ್ಕಟೆ ಪ್ರವೇಶವಿರುತಿತ್ತು. ಈಗ ಅವನು ತೀರಿಕೊಂಡಿರುವುದರಿಂದ ಜನರು ಅವನಿಗೆ ಒಂದು ಸ್ಮಾರಕವನ್ನು ಕಟ್ಟಲಿಕ್ಕೆ ಯೋಚಿಸಿದ್ದಾರೆ.

ಪೋರ್ಚುಗೀಸರಿಂದ ಫರಂಗಿ ರೋಗ

ಈಗ ಸರ್ವಸಾಧಾರಣವಾಗಿರುವ ಫರಂಗಿ ರೋಗವು ಅನಾದಿಯಿಂದಲೂ ನಮ್ಮ ದೇಶದಲ್ಲಿ ಇದ್ದುದಲ್ಲ. ಪೋರ್ಚುಗೀಸರು ನಮ್ಮ ದೇಶಕ್ಕೆ ಬರುವ ತನಕ ಅದು ಈ ದೇಶೀಯರಿಗೆ ಅಜ್ಞಾತವಾಗಿತ್ತು. ೧೪೯೮ರಲ್ಲಿ ಪೋರ್ತುಗೀಸ ನಾವಿಕನಾದ ವಾಸ್ಕೋಡಿಗಾಮನು ತನ್ನ ಇತರ ಕೆಲವು ನಾವಿಕರೊಂಧಿಗೆ ಕಲ್ಲಿಕೋಟೆಯಲ್ಲಿ ತನ್ನ ಹಡಗದ ಲಂಗರು ಹಾಕಿದನು. ಅವರು ಕಲ್ಲಿಕೋಟೆಯಲ್ಲಿ ವ್ಯಾಪಾರ ವಹಿವಾಟುಗಳನ್ನು ಆರಂಭಿಸಿದರು. ಅವರಲ್ಲಿ ಕೆಲವರು ಫರಂಗಿ ರೋಗದಿಂದ ಪೀಡಿತರಾಗಿದ್ದರು. ಅವರ ಸಂಪರ್ಕದಿಂದ ಈ ರೋಗವು ಕಲ್ಲಿಕೋಟೆಯಲ್ಲಿ ಹರಡಿ, ಅಲ್ಲಿಂದ ಮತ್ತೆ ಭಾರತದಲ್ಲೆಲ್ಲಾ ಪ್ರವೇಶಮಾಡಿತು. ಭಾರತೀಯರು ವಿಲಾಯತಿಯ ಜನರನ್ನು ಫರಂಗಿಗಳೆಂದು ಕರೆಯುತಿದ್ದರು. ಆದ್ದರಿಂದ ೧೬ನೇ ಶತಮಾನದ ಪ್ರಸಿದ್ಧ ವೈದ್ಯನಾದ ಭಾವಮಿಶ್ರ ಎಂಬಾತನು ಭಾರತಕ್ಕೆ ಹೊಸಬಾದ ಈ ರೋಗಕ್ಕೆ ಫರಂಗಿ ರೋಗವೆಂದು ಹೆಸರಿಟ್ಟನು!

ತಕ್ಕ ವಿಜ್ಞಾನಿಯ 'ಮೃತ್ಯು ಕಿರಣ'

ವೈರಿಗಳನ್ನು ಬಹಳ ದೂರದಿಂದ ಕೊಲ್ಲುವ ಅಪ್ರತಿಮ ಶಕ್ತಿಯನ್ನು ಪಡೆದ ಒಂದು ಅದ್ಭುತ ಮೃತ್ಯು ಕಿರಣವನ್ನು ಕಂಡುಹಿಡಿದಿದ್ದೇನೆಂದು ಲೋಕವನ್ನೇ ಬೆರಗುಗೊಳಿಸಿ ಮೋಸಮಾಡಿದ ಒಬ್ಬ ಠಕ್ಕ ವಿಜ್ಞಾನಿಯ ವಿಚಿತ್ರ ಕತೆಯು ಈಗ ಪ್ರಕಟವಾಗಿದೆ. ಸೇನರ ರಾಮೋನ್ ರೋಜ್ ಎಂಬ ಈ ವಿಜ್ಞಾನಿಯು ತನ್ನ ಅದ್ಭುತ ಶೋಧೆಗಾಗಿ ಅನೇಕ ಸುಳ್ಳು ಸರ್ಟಿಫಿಕೇಟುಗಳನ್ನು ಸಂಪಾದಿಸಿದ್ದನು. ಯುದ್ಧದಲ್ಲಿ ಆಸಕ್ತವಾದ ಬೊಲಿವಿಯ ಸರಕಾರವು ಇವನ ಶೋಧೆಯನ್ನು ಪರೀಕ್ಷಿಸಲಿಕ್ಕೆ ನಿರ್ಧರಿಸಿ, ಒಬ್ಬ ಯುದ್ಧ ಕೈದಿಯನ್ನು ಒಂದು ಮರಕ್ಕೆ ಕಟ್ಟಿಹಾಕಿತು. ವಿಜ್ಞಾನಿಯು ತನ್ನ ಯಂತ್ರ ಸಾಧನದ ಮೂಲಕ ಕೆಲವು ಪಂಕ್ತಿ ಕಿರಣಗಳನ್ನು ಹಾರಿಸಿದನು. ಕೈದಿಯು ಆ ಕೂಡಲೇ ಸತ್ತು ನೆಲಕ್ಕೆ ಬಿದ್ದನು. ಬೊಲಿವಿಯ ಸರಕಾರವು ವಿಜ್ಞಾನಿಗೆ ಲಕ್ಷಾಂತರ ರೂಪಾಯಿಗಳ ಪುರಸ್ಕಾರಕೊಟ್ಟು ಈ ಶೋಧೆಯನ್ನು ಕೊಂಡುಕೊಳ್ಳುವದೆಂದು ನಿರ್ಧರಿಸಿತು. ಆದರೆ ಕೆಲವರಿಗೆ ಸಂದೇಹವಾಗಿ ಇನ್ನು ಕೆಲವು ಪರೀಕ್ಷೆಗಳನ್ನು ಮಾಡಿದಾಗ, ವಿಜ್ಞಾನಿಯು ಯಾರಿಗೂ ತಿಳಿಯದಂತೆ ಕೈದಿಯ ಶರೀರಕ್ಕೆ ವಿದ್ಯುತ್ತಿನ ತಂತಿಯ ಜೋಡಣೆ ಮಾಡಿದ್ದನೆಂಧೂ, ವಿದ್ಯುತ್ತಿನ ಪ್ರವೇಶವಾಗಿ ಕೈದಿಯು ಸತ್ತನೆಂದೂ, ಮೃತ್ಯು ಕಿರಣಗಳಿಂದ ಆತನು ಸತ್ತುದಲ್ಲವೆಂದೂ ಗೊತ್ತಾಯಿತು. ಇದು ಗೊತ್ತಾದ ಮರುಕ್ಷಣದಲ್ಲಿ ಠಕ್ಕ ವಿಜ್ಞಾನಿ ಎಲ್ಲಿಯೋ ಮರೆಯಾಗಿ ಬಿಟ್ಟ. ಈಗಲೂ ಅವನು ಎಲ್ಲಿದ್ದಾನೆಂಬುದು ಗೊತ್ತಾಗಿರುವದಿಲ್ಲ.

ನೂರು ಮಿಲಿಯ ಪವನಿನ ಕೋಟೆ

ಫ್ರಾನ್ಸ ಮತ್ತು ಜರ್ಮನಿಯ ಉತ್ತರ ದಕ್ಷಿಣ ಎಲ್ಲೆಗಳಿಗೆ ಸಮೀಪದ ಫ್ರಾನ್ಸ್ ಕಟ್ಟಿದ ಮೆಜಿನೋ ಕೋಟೆಗಳ ಸಾಲು ಇದೆಯಲ್ಲ! ಅದನ್ನು ಕಟ್ಟಿಸಲಿಕ್ಕೆ ಫ್ರಾನ್ಸಿಗೆ ಒಂದು ನೂರು ಮಿಲಿಯ ಪವನುಗಳ ಖರ್ಚಾಗಿದ್ದಿತು. ಮತ್ತು ಅದರೊಳಗೆ ಕಾಲು ಮಿಲಿಯ ಅಂದರೆ ೨೫ ಲಕ್ಷ ಜನರಿಗೆ ಒಂದು ವರ್ಷಕ್ಕೆ ಬೇಕಾಗುವಷ್ಟು ಆಹಾರ ಸಾಮಾಗ್ರಿಗಳು ಸಂಗ್ರಹವಾಗಿ ಇರುತಿದ್ದುವು. ಫ್ರಾನ್ಸಿನ ಸೇನೆಗೆ ಬೇಕಾದ ಸರಂಜಾಮುಗಳೂ, ಯುದ್ಧೋಪಕರಣಗಳೂ ಇದರೊಳಗೆಯೇ ಸಂಗ್ರಹವಾಗಿ ಇರುತಿದ್ದುವು. ಪರಂತು ಜರ್ಮನ ರಾಜಕಾರಣಿಗಳು ಫ್ರಾನ್ಸಿನ ಮುಖಂಡರೊಳಗೆ ಭೇದ ನೀತಿಯ ಉಪಯೋಗ ಮಾಡಿ, ಈ ಕೋಟೆಯ ಸಾಲನ್ನು ತಮ್ಮ ವಶಮಾಡಿಕೊಂಡಿದ್ದಾರೆ. ಮತ್ತು ಫ್ರಾನ್ಸು ತನ್ನ ರಕ್ಷಣೆಗಾಗಿ ಅಲ್ಲಿ ಸಂಗ್ರಹಮಾಡಿ ಇಟ್ಟುದನ್ನೆಲ್ಲ ಅವರು ಅದೇ ಫ್ರಾನ್ಸಿನ ಸ್ವಾಭಿಮಾನಭಂಗಕ್ಕಾಗಿಯೂ ಸ್ವಾತಂತ್ರ್ಯಾಪಹಾರಕ್ಕಾಗಿಯೂ ಉಪಯೋಗಿಸುತಿದ್ದಾರೆ. ಮೆಜಿನೋ ಕೋಟೆಯ ಸಾಲನ್ನು ಕಿತ್ತುಹಾಕುತಿದ್ದಾರೆ. ಕಾಲವು ಯಾರನ್ನೂ ಯಾವುದನ್ನೂ ಲೆಕ್ಕಿಸುವುದಿಲ್ಲ ಎಂಬುದಕ್ಕೆ ಇದಕ್ಕಿಂತ ಬೇರೆ ದೃಷ್ಟಾಂತ ಬೇಡ.

ಸುಕ್ಕೂರು ಸ್ತ್ರೀಯರ ಮದುವೆ ಪ್ರತಿಬಂಧ

ಸುಕ್ಕೂರಿನ ಒಂದು ಕಾಲೇಜಿನಲ್ಲಿ ಓದುತಿದ್ದ ಒಬ್ಬ ವಿದ್ಯಾರ್ಥಿಯ ತರುಣ ಹೆಂಡತಿಯು ಕಾರಣ ಗೊತ್ತಾಗದೆ ಅಕಸ್ಮಿಕವಾಗಿ ಸತ್ತುಹೋದಳು. ಆ ವಿದ್ಯಾರ್ಥಿಯೇ ತನ್ನ ಹೆಂಡತಿಯ ಪ್ರಾಣವನ್ನು ತೆಗೆದಿರಬಹುದೇ ಎಂಬ ಕುರಿತು ಬಲವಾದ ಸಂದೇಹವಿದೆ. ಇದು ಪರಿಷ್ಕಾರವಾಗಿ ತಿಳಿದುಬಂದು, ಆತನ ಹೆಂಡತಿ ಸಹಜವಾದಕಾರಣಗಳಿಂದ ಸತ್ತುಹೋಗಿದ್ದಾಳೆಂದು ಗೊತ್ತಾಗುವ ತನಕ ಯಾವ ಹುಡುಗಿಯೂ ಆತನನ್ನು ಎರಡನೇ ಬಾರಿಗೆ ಮದುವೆಯಾಗಬಾರದೆಂದು ಸುಕ್ಕೂರಿನ ಹಿಂದೂ ಸ್ತ್ರೀಯರು ಸಭೆ ಕೂಡಿ ಸರ್ವಾನುಮತಿಯ ಠರಾವನ್ನು ಮಾಡಿದ್ದಾರೆ ಹೀಗಾಗಿ ಆ ವಿದ್ಯಾರ್ಥಿಯು ಅತ್ತ ಹಿಂದಿನ ಹೆಂಡತಿಯೂ ಇಲ್ಲದೆ, ಇತ್ತ ಹೊಸ ಹೆಂಡತಿಯೂ ಆಗದೆ ಬಹಳ ಪೇಚಿನಲ್ಲಿ ಬಿದ್ದು ಸಂಕಟಪಡುತಿದ್ದಾನಂತೆ. ವಿದ್ಯಾರ್ಥಿಯು ಸಾಯುವ ತನಕವೂ ಏಕಾಂಗಿಯಾಗಿದ್ದು, ತನ್ನ ಕರ್ಮದ ಫಲವನ್ನು ಉಣ್ಣುತ್ತಿರಬೇಕೆಂದು ಸ್ತ್ರೀಯರು ಹಟತೊಟ್ಟಿದ್ದಾರೆ. ಈ ಬಗೆಯ ಹಟವು ಸ್ತ್ರೀಯರಲ್ಲಿ ಹುಟ್ಟಿದುದು ಆಶ್ಚರ್ಯಕರ ಎಂದು ಜನರಾಡಿಕೊಳ್ಳುತ್ತಾರೆ.

BHUVANENDRA PRODUCTS LTD.,
KATAPADI, S. K.

Why Doctors prescribe
"BHUVANENDRA"
NARAYANA TAILA
Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!
ಯಾವ ಕಾರಣದಿಂದ?
'ಭುವನೇಂದ್ರ ನಾರಾಯಣ ತೈಲ'
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.
ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ನೆಹರುಗಳ ಆತ್ಮಕಥೆಗೆ ಸೇರಿಸಿದ ಹೊಸ ಪುಟಗಳು

ಅಮೇರಿಕದ ಆವೃತ್ತಿಗಾಗಿ ಬರೆದ ನವೀನ ಅಧ್ಯಾಯ

ಭಾರತ ಮತ್ತು ಅಂತರ್ರಾಷ್ಟ್ರೀಯ ವಿಚಾರಗಳು!

ಆಶ್ರಿತರಾಜರು ಬ್ರಿಟನಿನ 'ಪಂಚಮ ದಲ'ದವರು'

ನೆಹರುಗಳ ಆತ್ಮಕಥೆಯು ಲೋಕ ಪ್ರಸಿದ್ಧವಾಗಿದೆ ಜವಾಹರಲಾಲರು ತಮ್ಮ ಆತ್ಮಕಥೆಗೆ ಹೊಸತನವನ್ನು ಕೊಡಲು ಒಂದು ಹೊಸ ಅಧ್ಯಾಯವನ್ನು ಸೇರಿಸಿದ್ದಾರೆ. ಅದರಲ್ಲಿ ಅವರ ಇತ್ತೀಚೆಯ ವಿಚಾರ ಭಾವನೆಗಳಿವೆ. ಅದು ಹೀಗಿದೆ:

'ಐದುವರೆ ವರ್ಷಗಳ ಹಿಂದೆ, ನಾನು ಅಲ್ಮೋರಾ ಸೆರೆಮನೆಯಲ್ಲಿದ್ದಾಗ ನನ್ನ ಆತ್ಮಕಥೆಯ ಲೇಖನ ಕಾರ್ಯವನ್ನು ಮುಗಿಸಿದೆ. ಅಲ್ಲಿಂದಾಚೆ ಎಂಟು ತಿಂಗಳ ನಂತರ ಜರ್ಮನಿಯ ಬೆಡನ್‌ವೀಲರ್‌ನಲ್ಲಿದ್ದಾಗ ಅದಕ್ಕೊಂದು ಅಧ್ಯಾಯವನ್ನು ಸೇರಿಸಿದೆ. ಇಂಗ್ಲಂಡಿನಲ್ಲಿ ಪ್ರಕಟವಾದ ನನ್ನ ಆತ್ಮಚರಿತ್ರೆಯು ಎಲ್ಲ ದೇಶಗಳ ಜನರಿಂದ ಮನ್ನಿಸಲ್ಪಟ್ಟಿತು. ಈ ಕಾರ್ಯದಿಂದ ಪರಕೀಯರಲ್ಲಿ ಭಾರತದ ಆಂತರಿಕ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಸಹಾನುಭೂತಿ ಹುಟ್ಟುವಂತಾಯಿತೆಂದು ನನಗೆ ಆನಂದವೂ ಆಯಿತು. ದುರ್ದೈವದಿಂದ ಈ ಗ್ರಂಥವು ಅಮೇರಿಕದ ಜನತೆಗೆ ಮುಟ್ಟಲಿಲ್ಲ. ಕೊನೆಗೆ ನನ್ನ ಈ ಗ್ರಂಥವು ಅಮೇರಿಕದಲ್ಲಿ ಹೊಸ ಅವತರಣದಲ್ಲಿ ಪ್ರಕಟವಾಗುತ್ತಿರುವದು ಸಂತೋಷದ ಸಂಗತಿಯೇ ಆಗಿದೆ.

'ಈ ಗ್ರಂಥವನ್ನು ಹೊತ್ತು ಹೊಸತಾಗಿ ಪ್ರಕಟಿಸಬೇಕೆಂದು ಪ್ರಕಾಶಕರು ನನ್ನನ್ನು ಕೇಳಿಕೊಂಡರು ನನಗೆ ಅದನ್ನು ಅಲ್ಲಗಳೆಯುವುದಾಗಲಿಲ್ಲ. ನನ್ನ ಗ್ರಂಥಕ್ಕೆ ಪರಿಶಿಷ್ಟವನ್ನು ಬರೆದುಕೊಡುವದೂ ಸುಲಭಸಾಧ್ಯವಾದ ಕಾರ್ಯವಾಗಿರಲಿಲ್ಲ. ನಾವೀಗ ವಿಲಕ್ಷಣವಾದ ಪರಿಸ್ಥಿತಿಯಲ್ಲಿದ್ದೇವೆ. ಜೀವನದ ಗತಿಯೇ ತೀರ ಭಿನ್ನತರದ್ದಾಗಿಬಿಟ್ಟಿದೆ. ನನ್ನ ಗ್ರಂಥ ಪ್ರಕಾಶಕರೊಂದಿಗೆ ಪತ್ರವ್ಯವಹಾರ ನಡೆಸುವುದೂ ಕಷ್ಟವಾದದ್ದಾಗಿದೆ. ಇದೀಗ ಅಮೇರಿಕವು ಭಾರತದಿಂದ ಅದೆಷ್ಟೋ ಅಂತರದಲ್ಲಿದ್ದಂತಿದೆ. ಒಮ್ಮೊಮ್ಮೆ ಪತ್ರಗಳು ಸಾಗರಗಳಾಚೆ ಹೋಗಿ ಮುಟ್ಟಬೇಕಾದರೂ ಅದೆಷ್ಟೋ ತಿಂಗಳುಗಳು ಹಿಡಿಯುತ್ತವೆ.

'ಯುರೋಪಿನ ಹಾಗೂ ಸುದೂರ ಪೂರ್ವದ ಸದ್ಯದ ಘಟನೆಗಳು ನನ್ನ ಮೇಲೆ ತುಂಬಾ ಪರಿಣಾಮವನ್ನುಂಟು ಮಾಡಿದವು. ಮ್ಯೂನಿಚ್ ಘಟನೆಯಂತೂ ಅಸಹನೀಯವಾದ ಆಘಾತವಾಯಿತು. ಸ್ಪೈನಿನ ದುರಂತದಿಂದಲಂತೂ ನನ್ನ ಹೃದಯವು ಕೊರೆಯಿತು. ಭೀಕರವಾದ ಇತ್ತೀಚೆಯ ಈ ಎಲ್ಲಾ ಆಘಾತಗಳಿಂದಾಗಿ ಜಗದ ಭವಿಷ್ಯತ್ತಿನ ಬಗೆಗೆ ನನ್ನಲ್ಲಿ ಅದೊಂದು ಅವಿಶ್ವಾಸವು ಮನೆಮಾಡಿಕೊಂಡಿತು.

'ಈಗಲಂತೂ ಮಹಾವಿಪತ್ತು ತಲೆಯೆತ್ತಿದೆ. ಯುರೋಪಿನ ಈ ಆಪತ್ತುಗಳು ಏನಾಕದ

ಕಿಡಿಗಳನ್ನೇ ಕಾರುತ್ತಿವೆ, ಭಾರತದಲ್ಲಿಯೂ ಜ್ವಾಲಾಮುಖಿಯ ಬದಿಯಲ್ಲಿಯೇ ಕೂತಂತೆ ನನಗೀಗ ಅನಿಸಹತ್ತಿದೆ. ಭಾರತದ ಜ್ವಾಲಾಮುಖಿಯು ಅದೆಂದು ಸ್ಫೋಟವಾಗುವದೋ ಯಾರಿಗೆ ಗೊತ್ತು! ಸದ್ಯದ ಬಿಕ್ಕಟ್ಟಿನಿಂದ ದೂರ ಸಿಡಿದುನಿಂತು ಕಳೆದ ಐದುವರ್ಷಗಳ ಬಗೆಗೆ ಶಾಂತಚಿತ್ತತೆಯಿಂದ ಬರೆಯುವದೂ ನನಗೆ ಕಷ್ಟಕರವಾಗಿದೆ.

'ಕಳೆದ ಕೆಲವಾರು ವರ್ಷಗಳಿಂದ ನಾನು ಬಾರಿಬಾರಿಗೂ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಲಿಯ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದೂ ಯೋಚಿಸುತ್ತಿದ್ದೆನು. ನನ್ನ ಸಹಕಾರ್ಯಕರ್ತರೊಂದಿಗೆ ನಿರಾತಂಕವಾಗಿ ಕಾರ್ಯ ನಡೆಸುವದೂ, ನನಗೆ ತೊಂದರೆಯೆನಿಸತೊಡಗಿತು. ಅದರಿಂದಾಗಿ ಅವರು ನನ್ನ ಚಟುವಟಿಕೆಗಳನ್ನೆಲ್ಲ ಶಂಕೆಯಿಂದ ಪರಿಶೀಲಿಸುತ್ತಿರುವರೆಂದೂ ನನಗೆ ಸ್ಪಷ್ಟವಾಗಿ ತಿಳಿದುಬಂದಿತು. ಅವರು ನನ್ನ ಕಾರ್ಯಕ್ಕೆ ವಿರೋಧಿಸದಿದ್ದರೂ ಅವರಿಗೆ ನನ್ನ ಕಾರ್ಯದ ಧಾಟಿ–ಧೋರಣೆಗಳೂ ರೀತಿ–ನೀತಿಗಳೂ ಸರಿಬೀಳಲಿಲ್ಲ, ನನ್ನ ದೃಷ್ಟಿಕೋನವೇ ಬದಲಾದದ್ದಾಗಿದ್ದರಿಂದ ಅವರು ಹಾಗೆ ನನ್ನನ್ನು ನಿರೀಕ್ಷಿಸುತ್ತಿರುವುದು ನ್ಯಾಯವೇ ಆಗಿದ್ದಿತು. ನಾನು ಕಾಂಗ್ರೆಸ್ಸಿನ ನಿರ್ಧಾರಕ್ಕೆ ವಿಧೇಯನಾಗಿದ್ದರೂ, ನಿರ್ಧಾರದಲ್ಲಿ ಕೆಲವು ಅಂಶಗಳಿಗೆ ನಾನು ಮಹತ್ವಕೊಟ್ಟರೆ, ನನ್ನ ಸಹಕಾರ್ಯಕರ್ತರು ಬೇರೆ ಅಂಶಗಳನ್ನು ಎತ್ತಿಹಿಡಿದರು. ಕೊನೆಗೆ ನಾನು ರಾಜೀನಾಮೆ ಕೊಡಲು ನಿರ್ಧರಿಸಿ, ಹಾಗೆ ಗಾಂಧೀಜಿಯವರಿಗೂ ತಿಳಿಸಿದೆನು.

'ಅಲ್ಲಿಂದಾಚೆ, ಭಾರತಕ್ಕೆ ಸಂಬಂಧವಲ್ಲದ ಘಟನೆಯೊಂದು ನನ್ನಮೇಲೆ ತೀರಾ ಪರಿಣಾಮ ಮಾಡಿ, ನಾನು ನನ್ನ ನಿರ್ಧಾರವನ್ನು ಬದಲಾಯಿಸಬೇಕಾಯಿತು. ಸ್ಪೈನಿನಲ್ಲಿಯ ಜನರಲ್ ಫ್ರಾಂಕೋನ ದಂಗೆಯ ವೃತ್ತಾಂತವೇ ಇದಾಗಿತ್ತು ಜರ್ಮನ್–ಇಟಲಿಗಳ ಕುಮ್ಮಕ್ಕಿನಿಂದಲೇ ಸ್ಪೈನಿನಲ್ಲಿ ಫ್ರಾಂಕೊ ಎದ್ದು ಕುಳಿತಿರಬೇಕೆಂದು ನಾನು ಮನಗಂಡೆನು. ಇದರಿಂದ ಯುರೋಪು ಮಾತ್ರವಲ್ಲ ಇಡೀ ಜಗತ್ತೇ ಗಂಡಾಂತರದ ಮಡುವಿನಲ್ಲಿ ಸಿಗುವದೆಂದೂ, ಭಾರತವೂ ಇದರಲ್ಲಿ ಮುಳುಗೇಳುವ ಸಂಭವವಿದೆಯೆಂದೂ ಮನಗಂಡು ನಾನು ನನ್ನ ನಿರ್ಧಾರವನ್ನು ಬದಲಾಯಿಸಿರದಿದ್ದರೆ ಭಾರತದಲ್ಲಿಯೇ ಆಂತರಿಕ ದುರವಸ್ಥೆಯುಂಟಾಗುವಂತಿದ್ದಿತು ಮಾತ್ರವಲ್ಲದೆ ನಮ್ಮ ಸಂಘಟನೆಯಲ್ಲಿಯೂ ಅದೊಂದು ಬಗೆಯ ಸಡಿಲುತನವುಂಟಾಗುತ್ತಿದ್ದಿತು. ಹೀಗೆ ನಾನು ಪರಿಸ್ಥಿತಿಯನ್ನು ಪೃಥಕ್ಕರಿಸಿದ್ದು ಯೋಗ್ಯವಾದದ್ದೇ ಆಗಿದ್ದಿತು.

'ಭಾರತದ ಸಮಸ್ಯೆಯು ಜಗತ್ತಿನ ಇತರ ಸಮಸ್ಯೆಗಳೊಂದಿಗೆ ಹೇಗೆ ಹೊಂದಿಕೊಂಡಿರುವುದೆಂಬುದು, ಸ್ಪೈನಿನ ಯುದ್ಧದಿಂದ ನನ್ನ ಮೇಲಿಂದ ಪರಿಣಾಮದಿಂದ ವಿದಿತವಾಗದಿರದು. ಭಿನ್ನ ಭಿನ್ನ ರಾಜಕೀಯ ಅಥವಾ ಆರ್ಥಿಕ ಸಮಸ್ಯೆಗಳು ಚೀನದಲ್ಲಿಯೇ ಇರಲಿ, ಮಧ್ಯ ಯುರೋಪಿನಲ್ಲಿಯೇ ಇರಲಿ, ಭಾರತದಲ್ಲಿಯೇ ಇರಲಿ, ಜಗತ್ತಿನ ಯಾವ ಭಾಗದಲ್ಲಿದ್ದರೂ ಅವೆಲ್ಲ ಜಗತ್ತಿನ ಸಮಸ್ಯೆಯ ಒಂದೊಂದು ಮುಖಗಳಾಗಿವೆಯೆಂದು ವಿಚಾರಿಸಿದಂತೆಲ್ಲ ತಿಳಿಯಹತ್ತಿತು. ಈ ಮೂಲಭೂತವಾದ ಸಮಸ್ಯೆಯು ಪರಿಹಾರವಾಗಬೇಕಾದರೆ ಅದೆಷ್ಟೋ ಸ್ಥಿತ್ಯಂತರಗಳಾಗುವವು. ಜಗತ್ತಿನ ಶಾಂತಿಯು ಅವಿಭಾಜ್ಯವಾಗಿದ್ದರಂತೆ ಸ್ವಾತಂತ್ರ್ಯವಾದರೂ ಅವಿಭಾಜ್ಯವಾಗಿದೆಯೆಂದು ಹೇಳಲಾಗಿದ್ದಿತು. ಫ್ಯಾಸಿಜಂ ನಾಝಿಜಂಗಳ ಅಭ್ಯಾಸವು ಸಾಮ್ರಾಜ್ಯಶಾಹಿಯ ಆಕರ್ಷವಂತಿವೆ' ಅವೆರಡು 'ಇಜಂ'ಗಳು ಅವಳಿಜವಳಿ ಮಕ್ಕಳಿದ್ದಂತಿವೆ. ಸಾಮ್ರಾಜ್ಯಶಾಹಿಯು ವಸಾಹತುಗಳಲ್ಲಿಯೂ ನಿಯಂತ್ರಿತ ರಾಜ್ಯಗಳಲ್ಲಿಯೂ ನಡೆಯುತ್ತಿರುವದು ಅದರ ಒಂದೇ ಫ್ಯಾಸಿಜಂ, ನಾಝಿಜಂಗಳು ಸ್ವದೇಶದಲ್ಲಿಯೇ ನಡೆಯುವವು. ಜಗತ್ತಿನಲ್ಲೆಲ್ಲ ಸ್ವಾತಂತ್ರ್ಯವು ಪ್ರಸ್ಥಾಪಿಸಲ್ಪಡಬೇಕಾದರೆ ಫ್ಯಾಸಿಜಂ ನಾಝಿಜಂಗಳು ಬೇರುಸಹಿತ ಕಿತ್ತೊಗೆಯಲ್ಪಟ್ಟು, ಸಾಮ್ರಾಜ್ಯಶಾಹಿಯು ನಿರ್ನಾಮಗೊಳ್ಳಬೇಕಾಗಿದ್ದಿತು.

'ಈ ಪರದೇಶದ ಘಟನೆಗಳು ಕೇವಲ ನನ್ನೊಬ್ಬನ ಮೇಲೆಯೇ ಪರಿಣಾಮ ಮಾಡದೆ ಇನ್ನಿತರ ಅದೆಷ್ಟೋ ಭಾರತೀಯರಿಗೂ ಸ್ವಲ್ಪ ಹೆಚ್ಚು ಕಡಿಮೆಯಾಗಿ ನನ್ನಂತೆಯೇ ಅನ್ನಿಸತೊಡಗಿತು. ಸಾರ್ವಜನಿಕರ ಮೇಲೆಯೂ ಇದರ ಪರಿಣಾಮವಾಗದಿರಲಿಲ್ಲ. ಇದರ ಪರಿಣಾಮದಿಂದಾಗಿ ಭಾರತದಲ್ಲೆಲ್ಲ ಸಾವಿರಾರು ಸಾರ್ವಜನಿಕ ಸಭೆಗಳು ನಡೆದವು. ಭಾರತೀಯರು ಚೀನ, ಅಬಿಸೀನಿಯಾ, ಪ್ಯಾಲಿಸ್ಟಾಯಿನ್ ಹಾಗೂ ಸ್ಪೈನ್ ದೇಶದ ಜನರಿಗೆ ತಮ್ಮ ಸಹಾನುಭೂತಿಗಳನ್ನು ವ್ಯಕ್ತಗೊಳಿಸಿದರು. ಚೀನ ಹಾಗು ಸ್ಪೈನ್‌ಗಳಿಗೆ ಆಹಾರ ಸಾಮಗ್ರಿಗಳನ್ನು ಔಷಧಗಳನ್ನು ಪೂರಯಿಸುವ ಪ್ರಯತ್ನಗಳೂ ನಮ್ಮಿಂದ ನಡೆದವು. ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ನಾವು ಹೀಗೆ ಆಸ್ಥೆ

(ಎನೆಯ ಪುಟವನ್ನು ನೋಡಿ)

ಸಿನಿಮಾ ಸುದ್ದಿ

ನರ್ತಕಿಯಲ್ಲಿ ಲೀಲಾ ದೇಸಾಯಿಯ ಅಪ್ರತಿಮವಾದ ಅಭಿನಯ

ನ್ಯೂ ಥಿಯೇಟರ್ಸಿನ ಇತ್ತೀಚೆಯ ಚಿತ್ರ ನರ್ತಕಿಯು ಈಗಾಗಲೇ ಸಿನೆಮಾ ಪ್ರಿಯರ ಕಣ್ಮನಗಳನ್ನು ಆನಂದಗೊಳಿಸಿದೆ. ಲೀಲಾದೇಸಾಯಿಯು ನರ್ತಕಿ ರೂಪಕುಮಾರಿಯ ಪಾತ್ರದಲ್ಲಿ ಪ್ರೇಕ್ಷಕರ ಹೃದಯವನ್ನು ಸೂರೆಗೊಳ್ಳುವಳು. ನಜಾಮನು ಸತ್ಯಸುಂದರನೆಂಬ ತರುಣ ಬ್ರಹ್ಮಚಾರಿಯ ಪಾತ್ರದಲ್ಲಿ ಅಭಿನಯಿಸುವನು.

ಅಪ್ರತಿಮ ಅಭಿನೇತ್ರಿಯಾಗಿ ನಿಪುಣ ನಟಿಯಾಗಿ ಲೀಲಾ ದೇಸಾಯಿಯು ಇಂದು ಭಾರತದ ಕಲಾಲೋಕದಲ್ಲಿ ಕೀರ್ತಿಶಾಲಿನಿಯಾದ ತಾರೆಯಾಗಿದ್ದಾಳೆ 'ವಿದ್ಯಾಪತಿ' 'ಪ್ರೆಸಿಡೆಂಟ್' ಚಿತ್ರಗಳ ಅಭಿನಯವನ್ನು ಆಕೆಯ 'ನರ್ತಕಿ'ಯ ಅಭಿನಯವು ಮೀರಿಸಿದೆ ಕಥೆಯ ಹೃದಯಸ್ಪರ್ಶಿಯಾದ ಘಟನೆಗಳು, ಲೀಲಾ ದೇಸಾಯಿಯ ರೂಪ ವ್ಯಕ್ತಿತ್ವಗಳೂ ಪ್ರೇಕ್ಷಕರನ್ನು ಮೂಕಮುಗ್ಧರನ್ನಾಗಿ ಮಾಡುತ್ತವೆ.

ಇವಿಷ್ಟೂ ನಿರ್ದೇಶಕ ದೇವಕಿ ಬೋಸರ ಸಾಮರ್ಥ್ಯವೆಂದರೂ ಹೆಚ್ಚಾಗದು.

ಪಂಕಜ ಮಲ್ಲಿಕನು ಇದರಲ್ಲಿ ಆಸ್ಥಾನ ಹಾಡುಗಾರನಾಗಿ ಅಭಿನಯಿಸುವನು.

ಶಕುಂತಲೆ

ಮದ್ರಾಸು ಪ್ರಭಾತ ಟಾಕೀಸಿನಲ್ಲಿ 'ಶಕುಂತಲೆ' ೯ನೇ ವಾರದ ವರೆಗೆ ನಡೆಯುತ್ತದೆ. ಇನ್ನೂ ಕೆಲವು ವಾರಗಳವರೆಗೆ ಮದ್ರಾಸಿನಲ್ಲಿ ನಡೆಯುತ್ತದೆ.

ಪಾಗಲ್

ರಣಜಿತ್ ಕಂಪೆನಿಯ ಚಿತ್ರ ಪಾಗಲ್ ಎಂಬುದು ಪೃಥ್ವೀರಾಜ, ಮಾಧುರಿ ಮತ್ತು ಖಾಟೂನ್ ಇವರ ಅಭಿನಯದಿಂದ ಕೂಡಿದುದಾಗಿದೆ.

ಸುಭದ್ರಾ
ಕನ್ನಡ ಚಲನಚಿತ್ರ

ಬಾಲಾಜಿ ಗುಬ್ಬಿ ಫಿಲಂಸ್‌ಯವರ ಪ್ರಥಮ ಕನ್ನಡ ವಾಕ್ಚಿತ್ರವಾದ ಸುಭದ್ರೆಯ ತಯಾರಿಕೆಯು ಮುಗಿಯುತ್ತ ಬರುತ್ತಿದೆ. ಮುಂದಿನ ಮೇ ತಿಂಗಳಲ್ಲಿ ಚಿತ್ರವು ಪ್ರದರ್ಶನಕ್ಕೆ ಸಿದ್ಧವಾಗುವುದೆಂದು ಖಚಿತವಾಗಿ ಗೊತ್ತಿದೆ. ಈ ವಾರ ಚಿತ್ರದ ಮುಖ್ಯ ದೃಶ್ಯಗಳಲ್ಲೊಂದಾದ ನಾಗಲೋಕದ ಸೆಟ್ಟಿಂಗಿನಲ್ಲಿ ಷೂಟಿಂಗ್ ಮುಗಿಯಿತು. ಸೆಟ್ಟಾರ್‍ಟಿಸ್ಟ್ರಗಳು ಈ ದೃಶ್ಯವನ್ನು ಅಧಿಕ ಧನವ್ಯಯದಿಂದ ಮನೋರಂಜಕವನ್ನಾಗಿ ನಿರ್ಮಿಸಿದ್ದಾರೆ.

ನಾಗರಾಜ ನಂದಿನಿ ಉಲೂಪಿಯ ಪಾತ್ರವು ವಿನೋದ ರತ್ನಾಕರ ಶ್ರೀಮಾನ್ ಜಿ. ಹೆಚ್. ವೀರಣ್ಣನವರ ಪುತ್ರಿ ಕುಮಾರಿ ಮಾಲತಮ್ಮನಿಂದ ಚಿತ್ತಾಕರ್ಷಕವಾಗಿ ಅಭಿನಯಿಸಲ್ಪಟ್ಟಿದೆ. ಆಕೆ ಎರಡು ಹಾಡುಗಳನ್ನು ಮೃದುಮಧುರ ಕಂಠದಲ್ಲಿ ಶ್ರವಣಾನಂದಕರವಾಗಿ ಹಾಡಿದ್ದಾಳೆ. ಪ್ರೇಮ ಪ್ರಧಾನವಾದ ದೃಶ್ಯಗಳಲ್ಲಿ ಅಭಿನಯಿಸುವದು ನುರಿತ ನಟಿಗೆ ಮಾತ್ರ ಸಾಧ್ಯ. ಅರ್ಜುನನ ಪಾತ್ರಧಾರಿಯಾದ ಶ್ರೀಮಾನ್ ಹೊನ್ನಪ್ಪ ಭಾಗವತರು ಈ ದೃಶ್ಯದಲ್ಲಿ ಚಾತುರ್ಯದಿಂದ ಅಭಿನಯಿಸಿದ್ದಾರೆ.

ನಾರದನಿಗೆ ಸಂಬಂಧಿಸಿದ ಕೆಲವು ದೃಶ್ಯಗಳೂ ಈ ವಾರ ತೆಗೆದುಕೊಳ್ಳಲ್ಪಟ್ಟವು. ಈ ಪಾತ್ರ ಧರಿಸಿರುವವರು ಆಸ್ಥಾನ ಸಂಗೀತ ವಿದ್ವಾನ್ ಬಿ ದೇವೇಂದ್ರಪ್ಪನವರು. ಆ ಎರಡು ಗೀತಗಳಲ್ಲಿ ಒಂದು ಉತ್ತರಾದಿ ಮತ್ತೊಂದು ದಕ್ಷಿಣಾದಿ ಧಾಟಿಯಲ್ಲಿರುತ್ತವೆ ಒಂದೆರಡು ಸನ್ನಿವೇಶಗಳಲ್ಲಿ ಚಿಕ್ಕ ಬಾಲಕರು ಚನ್ನಾಗಿ ಕೆಲಸಮಾಡಿರುವರಂತೆ

ಸಂಗೀತದಲ್ಲಿ ಮಲ್ಲಿಕಾರ್ಜುನ ಮನ್ಸೂರ ಅವರ ಗೀತಗಳಿಂದ ಚಿತ್ರದ ಸಂಗೀತ ಸೌಂದರ್ಯವು ಹೆಚ್ಚಿರುತ್ತದೆ. ಅವರು ಕೊಟ್ಟಿರುವ ಐದು ಗೀತಗಳೂ ರಸಭಾವ ಪರಿಪೋಷಕವಾಗಿದ್ದು ಎಲ್ಲರ ಬಾಯಲ್ಲೂ ಉಳಿಯುವವೆನ್ನಲು ಅಡ್ಡಿಯಿಲ್ಲ.

ಕೆ. ಸಿ. ಡೇಯ ಗಾನಕಚೇರಿ

ಬಂಗಾಳದ ಪ್ರಸಿದ್ಧ ಹಾಡುಗಾರ ಕೆ. ಸಿ ಡೇಯು ಮುಂಬಯಿಗೆ ಬಂದಿದ್ದು ಕುರುಡರ ಸಹಾಯಾರ್ಥವಾಗಿ ನಿಧಿಯನ್ನು ಸೇರಿಸಲು ಅಲ್ಲಲ್ಲಿ ಗಾಯನ ಕಚೇರಿಗಳನ್ನು ಸೇರಿಸಲಿರುವುದಾಗಿ ತಿಳಿದುಬರುತ್ತದೆ.

ಅಖಿಲಭಾರತ ಚಲಚ್ಚಿತ್ರ ಪರಿಷತ್ತು

ಈಸ್ಟರ್ ರಜಾಕಾಲದಲ್ಲಿ ಅಖಿಲ ಭಾರತ ಚಲಚ್ಚಿತ್ರ ಪರಿಷತ್ತು ಲಾಹೋರಿನಲ್ಲಿ ಜರಗುವುದು.

ಅಮೃತ ಬಜಾರ್ ಪತ್ರಿಕೆಯ ಸಂಪಾದಕರಾದ ತುಷಾರಕಾಂತಿ ಘೋಷರು, ನ್ಯೂಥಿಯೇಟರ್ಸಿನ ಬಿ. ಎನ್. ಸರ್ಕಾರರು ಮೊದಲಾದವರು ಪರಿಷತ್ತಿನಲ್ಲಿ ಭಾಗವಹಿಸುವರು.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

ಗಾಯಗಳಲ್ಲಿರುವ ಹೊಲಸು
ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚು ಪಿಕೆಯಾ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ತೋರಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿಸಿದ ಭಾಗದಲ್ಲಿ ಕ್ರಿಮಿಗಳು ವಾಸಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ವಿಷದಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಣಗಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಉದ್ಭವ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನರ್ಸಿಮೆಹತಾ

ಪ್ರಕಾಶ ಪಿಕ್ಚರ್ಸಿನವರು ಗುಜರಾಥಿನ ೧೫ನೆಯ ಶತಮಾನದ ಪ್ರಸಿದ್ಧ ಸಂತನೂ ಅಹಿಂಸಾರಾಧಕನೂ ಆದ ನರ್ಸಿಮೆಹತನ ಜೀವಿತವನ್ನು ಚಿತ್ರೀಕರಿಸುವರು. ವಿಷ್ಣುಪಂತ ಪಗ್ನೀಸ್ ಮತ್ತು ದುರ್ಗಾ ಖೋಟೆ ಇವರು ಇದರಲ್ಲಿ ಪಾತ್ರವಹಿಸುವರು.

ದೇವಿಕಾರಾಣಿ ಅಭಿನಯಿಸುವಳೆ?

ದೇವಿಕಾರಾಣಿ ಇನ್ನು ಅಭಿನಯಿಸುವಳೆ? ಎಂದು ಹಲವರು ಆಕೆಯ ಪತಿಯು ಗತಿಸಿದ ಮೇಲೆ ಪ್ರಶ್ನೆಮಾಡುತ್ತಿದ್ದರು. ಬೊಂಬಾಯಿ ಟಾಕೀಸಿನ ಮುಂದಿನ ಚಿತ್ರದಲ್ಲಿ ದೇವಿಕಾರಾಣಿ ನಟಿಸುವಳಾಗಿ ಸಾಧಾರವಾದ ವಾರ್ತೆ ಬಂದಿದೆ

ಪುಸ್ತಕಾವಲೋಕನ

ಗೋಳಿನ ಬಾಳು*

ಸ್ವತಂತ್ರ ಕನ್ನಡ ಸಾಮಾಜಿಕ ಕಾದಂಬರಿಯಿದೊಂದು. ಉಡುಪಿಯ 'ಲ್ಯಾಸಿಯಮ್' ನವರು ತಮ್ಮ ಗ್ರಂಥಮಾಲೆಯ ಪ್ರಥಮ ಪುಷ್ಪವಾಗಿ ಇದನ್ನು ಪ್ರಕಟಿಸಿದ್ದಾರೆ. ಉತ್ಸಾಹೀ ತರುಣ ಲೇಖಕರಾದ ಶ್ರೀ. ಪಿ. ದಯಾನಂದ ನಾಯಕರು ಇದನ್ನು ಬರೆದವರು ಶ್ರೀಯುತರು ಹಿಂದೂಸಮಾಜದ ಸಮಸ್ಯೆಗಳಲ್ಲೊಂದಾದ ವಿಧವಾ ಜೀವನವನ್ನೆತ್ತಿ ಈ ಕರುಣ ಕಥೆಯನ್ನು ಕಟ್ಟಿದ್ದಾರೆ. ಕನ್ನಡ ವಾಙ್ಮಯ ಲೋಕದಲ್ಲಿ ಹೊಸಬರಾದರೂ ಈ ಲೇಖಕರು ಸಾಕಷ್ಟು ಪ್ರತಿಭೆಯುಳ್ಳ, ಉದಯೋನ್ಮುಖರಾದ ತಮ್ಮ ಶೈಲಿಯ ಸೊಬಗಿನಿಂದ ವಾಚಕರನ್ನು ತೃಪ್ತಿಪಡಿಸಿದ್ದಾರೆ. ಸ್ವತಂತ್ರ ಕಾದಂಬರಿಗಳು ಕಡಿಮೆಯಾಗಿರುವ ಕನ್ನಡ ವಾಙ್ಮಯದ ಕೊರತೆಯನ್ನು ಈ ಸಾಮಾಜಿಕ ಕಾದಂಬರಿಯು ಪರಿಹರಿಸುವಷ್ಟು ರಸವತ್ತಾಗಿದೆ. ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಒಂದು ಸೊಗಸಾದ ಮುನ್ನುಡಿಯನ್ನು ಬರೆದು ಲೇಖಕರನ್ನೂ, ಕಾದಂಬರಿಯನ್ನೂ 'ಲ್ಯಾಸಿಯಮ್ಮ'ನ್ನೂ ಕನ್ನಡಿಗರಿಗೆ ಪರಿಚಯಮಾಡಿ ಕೊಟ್ಟಿದ್ದಾರೆ. ಈ ಕಾದಂಬರಿಯು ವಿಧವಾ ವಿವಾಹಕ್ಕಾಗಿ ನಿರಂತರ ದುಡಿಯುತ್ತಿರುವ ಸಿರ್ಸಿಯ ಶ್ರೀ. ಆಕಾಶ ಗಣಪತಿ ಭಟ್ಟರಿಗೆ ಅರ್ಪಿತವಾಗಿದೆ.

ಕಥಾಘಟನೆಗಳಿಗೆ ಉಡುಪಿಯ ವಾತಾವರಣವು ನೆಲೆಯಾಗಿದೆ. ಚಂದ್ರಭಾಗಮ್ಮನು ಗಂಡನನ್ನು ಕಳಕೊಂಡು ಸೀತೆಲೀಲೆಯರೆಂಬ ಪುತ್ರಿಯರೊಂದಿಗೆ, ಜೀವಿಸುತ್ತಿದ್ದಳು. ಸೀತೆ ಬಾಲವಿಧವೆ. ಆಕೆ ನಗರದಲ್ಲಿ ವಿದ್ಯಾಭ್ಯಾಸ ಮಾಡಿಕೊಂಡು ಉದ್ಯೋಗದಲ್ಲಿರುವವಳು, ಚಂದ್ರಭಾಗಮ್ಮನ ಕಷ್ಟಕಾಲದಲ್ಲಿ, ಅವರ ಸುಖದುಃಖಗಳಲ್ಲಿ ಗೋವಿಂದ ಮಾಸ್ತರರು ನೆರವಾದವರು. ಗೋವಿಂದ ಮಾಸ್ತರರು ಸಮಾಜ ಸುಧಾರಣೆಯ ಉದ್ದೇಶವುಳ್ಳ ಸಂಸ್ಕೃತ ಜೀವಿ. ನೆರೆಮನೆಯ ಗೋಪಾಲರಾಯರ ಮಗ ಅನಂತನು ಮದ್ರಾಸಿನಲ್ಲಿ ಪಠನಕಲಿಯುತ್ತಿದ್ದ ಅನಂತನ ತಾಯಿ ಕಾವೇರಮ್ಮ ಲೀಲೆಯನ್ನು 'ಸೊಸೆ'ಯೆಂದು ಮುದ್ದಿಸುತ್ತಿದ್ದಳು.

ಸೀತೆ ತನ್ನ ಮನೆಗೆ ಬಂದಳು, ಗೋವಿಂದ ಮಾಸ್ತರರ ಗುಣ ಸ್ವಭಾವ ಆದರ್ಶಗಳು ಆಕೆಗೆ ಮೆಚ್ಚಿದವು, ಸೀತೆ ಮತ್ತು ಗೋವಿಂದ ಮಾಸ್ತರರು ಉತ್ತಮ ಧ್ಯೇಯಾದರ್ಶಗಳಿಂದ ಆಕರ್ಷಿತರಾಗುವರು. ಅನಂತನೂ ರಜೆಯ ಸಮಯ ಮನೆಗೆ ಬಂದನು. ಬಂದವನಿಗೆ ಸೀತೆ ಲೀಲೆಯರ ಪರಿಚಯ ಹೆಚ್ಚಿತು. ಲೀಲೆ ಅನಂತನೊಡನೆ ತನ್ನ ಸಹಜ ಚಪಲ ಸ್ವಭಾವದಿಂದ ಲೀಲಾವಿನೋದವಾಡುವಳು. ಆದರೆ ಆತನ ಹೃದಯವು ವಿಧವೆ ಸೀತೆಯ ಕಡೆಗೇ ಒಲಿಯುವುದು ಸೀತೆ ಒಪ್ಪಿದರೆ ಆತನು ಆ ಬಾಲವಿಧವೆಯನ್ನು ಕೈಹಿಡಿವ ದೃಢ ನಿಶ್ಚಯ ಮಾಡುವನು.

ಈ ವಿಷಯವು ಸೀತೆಗೆ ನೋವನ್ನುಂಟು ಮಾಡುವುದು. ಎಲ್ಲರೂ ಅನಂತನಿಗೆ ಲೀಲೆಯೇ ತಕ್ಕವಳೆಂದು ಬಗೆದಿದ್ದರು. ಅನಂತನು ತನ್ನ ವಿಷಯದಲ್ಲಿ ಇಟ್ಟ ಅನುರಾಗದಿಂದ ಆತನನ್ನು ನಿವೃತ್ತಿಪಡಿಸಲು ಸೀತೆ ಯತ್ನಿಸುವಳು. ಇದರ ಸಲುವಾಗಿ ಗೋವಿಂದ ಮಾಸ್ತರರೊಡನೆಯೇ ಸೀತೆ ಹೆಚ್ಚಾಗಿ ಮಾತುಕತೆ ಮಾಡುವಳು ಅನ್ಯಾಸಕ್ತವಾದ ಪ್ರಣಯಪ್ರದರ್ಶನಗಳಿಂದಲಾದರೂ ಅನಂತನ ಹೃದಯವು ತನ್ನ ಬಳಿಯಿಂದ ತಿರುಗಿ ಲೀಲೆಯ ಕಡೆಗೆ ಹರಿಯಲಿ ಎಂಬುದು ಸೀತೆಯ ಹಂಬಲವು. ಇದರಿಂದಲೂ ಪ್ರಯೋಜನವಾಗಲಿಲ್ಲ. ಸೀತೆಯೊಡನೆ ಕೊನೆಗೊಂದು ದಿನ ಅನಂತನು ಪ್ರಣಯ ಭಿಕ್ಷೆ ಬೇಡುವನು ಅನಂತನ ಪ್ರೇಮ ಹೃದಯವನ್ನು ಸೀತೆಯೂ ಮುರಿಯಲಾರದಾದಳು.

ಈ ವಿವಾಹಕ್ಕೆ ಕಾವೇರಮ್ಮ ಸಮ್ಮತಿಸಲಿಲ್ಲ. ಅನಂತನು ಓದಿಗಾಗಿ ಮದ್ರಾಸಿಗೆ ತೆರಳುವನು. ಕಾವೇರಮ್ಮನು ತನ್ನ ಏಕಮಾತ್ರ ಪುತ್ರನು ವಿಧವೆಯ ಕೈ ಹಿಡಿವುದನ್ನು ಅದರಿಂದ ಸಮಾಜ ಬಾಹಿರನಾಗುವುದನ್ನು ಸಹಿಸಲಾರದಾದಳು, ಸೀತೆಯನ್ನು ಕರೆದು, ಆಕೆಯಿಂದ ತನ್ನ ಮಗನನ್ನು ಮದುವೆಯಾಗುವುದಿಲ್ಲವೆಂದು ಭಾಷೆ ತೆಗೆದುಕೊಂಡಳು, ಹಾಗೆಂದು ಆತನಿಗೆ ಒಂದು ಪತ್ರವನ್ನೂ ಸೀತೆಯಿಂದ ಬರೆಸಿದಳು.

ದಶಂಬರದ ರಜೆಯಲ್ಲಿ ಅನಂತನು ಊರಿಗೆ ಬಂದನು ಸೀತೆಯು ಹಂಬಲವನ್ನು ಆತ ಬಿಡಲೇ ಇಲ್ಲ. ಕಡೆಗೆ ಕಾವೇರಮ್ಮನೂ ಆ ವಿವಾಹಕ್ಕೆ ಸಮ್ಮತಿಸದಿರದಾದಳು, ಆದರೆ ಸೀತೆಗೆ ಆಗ ರೋಗ ಹಿಡಿದಿತ್ತು ಡಾಕ್ಟರರು ನೋಡಿ ಕ್ಷಯರೋಗವೆಂದರು, ಎಲ್ಲರಿಗಿಂತಲೂ ಹೆಚ್ಚಾಗಿ ಅನಂತನು ಇದರಿಂದ ಗಾಬರಿಗೊಂಡನು, ಮೊದಲು ಮದ್ರಾಸಿಗೆ, ಅಲ್ಲಿಂದ ಬೆಂಗಳೂರಿಗೆ ಅನಂತನು ಚಿಕಿತ್ಸೆಗಾಗಿ ಸೀತೆಯನ್ನು ಕರೆದೊಯ್ದನು, ಬಹಳ ಉಪಚರಿಸಿದನು, ಆದರೆ ಸೀತೆಯ ಅಂತಿಮ ದಿನವೂ ಬಂದಿತು ಸೀತೆ ಅನಂತನ ಅಪ್ಪುಗೆಯಲ್ಲಿಯೇ ಆತನ ಬಳಿಯಲ್ಲಿಯೇ ಕೊನೆಯ ಉಸಿರೆಳೆದಳು. ಸೀತೆಯ 'ಗೋಳಿನ ಬಾಳು' ಹೀಗೆ ಕೊನೆಗಂಡಿತು ಅನಂತನು ಮತ್ತೆ ಮದನಪುರ ಬಿಟ್ಟು ಅಲೆದಾಡಿದ ಆದರೆ ಆತನಿಗೆ ಎಲ್ಲಿಯೂ ಜೀವಶಾಂತಿ ಸಿಗಲಿಲ್ಲ ಕೊನೆಗೆ ಬೇಗನೆ ಊರಿಗೆ ಬಂದನು, ಲೀಲೆಯೊಡನೆ ಆತನ ವಿವಾಹವಾಗುವುದು, ಅವರಿಗೆ ಹೆಣ್ಣು ಶಿಶುವೊಂದು ಹುಟ್ಟಿತು, ಅದಕ್ಕೆ ಸೀತೆಯೆಂದೇ ಹೆಸರಿಡುವರು. ಗೋವಿಂದ ಮಾಸ್ತರರು ಸೀತೆಯ ಮರಣ ವಾರ್ತೆ ಕೇಳಿ ಕೆಲದಿನ ಮಂಕರಾಗಿದ್ದರು. ಕೊನೆಗೆ ದುಃಖವನ್ನು ಮರೆತು ಆಜೀವ ಬ್ರಹ್ಮಚಾರಿಯಾಗಿ ಶೇಷಾಯುಷ್ಯವನ್ನು ಸಮಾಜ ಸೇವೆಯಲ್ಲಿ ಕಳೆದರು.

'ಸೀತೆಯನ್ನು ಎಲ್ಲರೂ ಮರೆಯಬಹುದು, ಆದರೆ ಇಬ್ಬರು ಮಾತ್ರ ಮರೆಯುವಂತಿಲ್ಲ..... ಇವರಲ್ಲೊಬ್ಬನು ಅನಂತನು, ಮತ್ತೊಬ್ಬರು ಯಾರೆಂದರೆ—ಗೋವಿಂದ ಮಾಸ್ತರರು' ಕಾದಂಬರಿಯು ಈ ಮಾತಿನಿಂದ ಕೊನೆಗೊಳ್ಳುತ್ತದೆ.

ಇದರಲ್ಲಿ ಚಿತ್ರಿತವಾದ 'ಗೋಳಿನ ಬಾಳು' ಸೀತೆಯದು. ಹಿಂದೂ ಸಮಾಜದ ಓರ್ವ ಬಾಲವಿಧವೆಯದು' ಬಾಳಬೇಕಾಗಿದ್ದ, ಬಾಳಿ ಬೆಳಗಬೇಕಾಗಿದ್ದ ಜೀವರತ್ನವೊಂದು ಸಮಾಜದ ನಿಷ್ಕರುಣ ನಿಯಮಯಂತ್ರಕ್ಕೆ ಸಿಲುಕಿ ಚೂರ್ಣವಾಯಿತು' ಇಂತಹ ದೃಶ್ಯವನ್ನು ನಾವು ನಮ್ಮ ಸಮಾಜದಲ್ಲಿ ಇಂದು ಹಜ್ಜೆ ಹಜ್ಜೆಗೂ ಕಾಣುತ್ತೇವೆ, ಸುತ್ತುಮುತ್ತಲೂ ನೋಡುತ್ತೇವೆ. ಕಾದಂಬರಿಕಾರರು ಈ ಸಾಮಾಜಿಕ ಸಮಸ್ಯೆಯನ್ನು ಎತ್ತಿಕೊಂಡು ಹೃದಯವನ್ನು ಕರಗಿಸುವಂತಹ ಕತೆಯೊಂದನ್ನು ಕಟ್ಟಿದ್ದಾರೆ.

ಶೈಲಿಯು ಮನಸೆಳೆಯುತ್ತದೆ ಭಾಷೆ ಶುದ್ಧವಾಗಿದೆ ಲೇಖಕರು ಅಲ್ಲಲ್ಲಿ ತಮ್ಮ ಲೇಖನ ಕೌಶಲ್ಯವನ್ನೂ ತೋರಿಸಿದ್ದಾರೆ ಕಾದಂಬರಿಯ ಕಥೆಯೂ ಅವಶ್ಯವಿಲ್ಲದಷ್ಟು ಲಂಬಿತವಾಗಿಲ್ಲ. ಪಾತ್ರಗಳ ಸಂಭಾಷಣೆಗಳಲ್ಲಿ ಉದ್ದುದ್ದ ಉಪನ್ಯಾಸಗಳು ಹಲವು ಕಡೆ ಒಂದಿವೆ ಇಂತಹ ಸ್ಥಳಗಳಲ್ಲಿ ಲೇಖಕರು ಹಲವು ವಿಚಾರಗಳನ್ನೆತ್ತಿ ವಾದಿಸಿದ್ದಾರೆ, ಶುದ್ಧವಾಗಿ ತರ್ಕಿಸಿದ್ದಾರೆ ಆದರೂ ಒಳ್ಳ ವಿಷಯ ಘಟನೆಗಳಿಂದ ರಮ್ಯವಾಗಿ ಬೆಳೆವ ಕಾದಂಬರಿಯಲ್ಲಿ ಇಂತಹ ಉಪನ್ಯಾಸಗಳು-ರಸಿಕ ವಾಚಕರನ್ನು ಬೇಸರಗೊಳಿಸಲೂ ಬಹುದೆಂದು ನಮ್ಮ ಣಿಕೆಯಾಗಿದೆ.

ಒಟ್ಟಿನಲ್ಲಿ ಈ ಕಾದಂಬರಿಯು ವಾಚನೀಯವಿದೆ. ಕನ್ನಡದಲ್ಲಿ ರಸವತ್ತಾದ ಸ್ವತಂತ್ರ ಕಾದಂಬರಿಗಳು ಕಡಿಮೆಯಾಗಿರುವ ಕೊರತೆಯನ್ನು ಈ ಕಾದಂಬರಿಕಾರರು ಪರಿಹರಿಸಬಲ್ಲರೆಂಬ ಭರವಸೆ ಪಡಬಹುದಾಗಿದೆ. ಉಡುಪಿಯ 'ಲ್ಯಾಸಿಯಮ್'ನ ಈ ಸಾಹಸ ಕಾರ್ಯಕ್ಕೆ ಅವರನ್ನು ನಾವು ಕೊಂಡಾಡದಿರಲಾರೆವು.

— ಕಯ್ಯಾರ

*ಗೋಳಿನ ಬಾಳು ಲೇಖಕರು; ಪಿ. ದಯಾನಂದ ನಾಯಕ್, ಬಿ. ಎ. ಎಲ್ ಎಲ್. ಬಿ. ಲ್ಯಾಸಿಯಮ್ ಗ್ರಂಥಮಾಲೆಯ ಪ್ರಥಮ ಕುಸುಮ ಕ್ರೌನ್ ⅛ ಆಕಾರದ ೧೩೦ ಪುಟಗಳು, ಬೆಲೆ ಆಠಾಣೆ.

ಸೌಂದರ್ಯ ಮತ್ತು
ಮುಖಕಾಂತಿಗೆ
ಹಿಮಾನಿ ಸ್ನೋ
ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ್ದ ಸ್ನೋ —
ಹಿಂದಿನಿಂದಲೂ ಶೀಘ್ರವಾಗಿಯೇ ಇದು ಮುಖದ ಮೇಲಿನ ಯಾವತರಾ ಕಲೆ, ಮಚ್ಚೆ, ಛಿದ್ರ ಮುಂತಾದುದನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ

ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು:—
ಕೊರೆನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಅಂತರಂಗ ನೈರ್ಮಲ್ಯವೇ
ಆರೋಗ್ಯದ
ಮಾಡಿತು

ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮ ಸೂತ್ರವೆಂದು ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಕಲಿಸಿ

ದೇಹದ ಒಳಭಾಗವನ್ನು ನೈರ್ಮಲ್ಯವಾಗಿಸಲು ಯಾವಾಗಲೂ ಅವರುಗಳಿಗೆ ಎಂದು ಗ್ಲಾಸು ಎಂಡ್ರೂಸ್ ಲಿವರ್ ಸಾಲ್ಟನ್ನು ಕೊಡಿರಿ ಎಂಡ್ರೂಸ್ ಲಿವರ್ ಸೋಲ್ಟ್ ಹೊಟ್ಟೆಯನ್ನು ಹಗುರವಾಗಿಯೂ ಸ್ವಚ್ಛವಾಗಿಯೂ ಇಟ್ಟು ಗೊಳಿಸಿ ಮಲಬದ್ಧತೆ ಮತ್ತು ಇನ್ನಿತರ ಬಾಧೆಗಳಿಗೆ ಕಾರಣವಾದ ಮಲೀನತೆಯನ್ನು ಹೊರಗೆ ದಬ್ಬುತ್ತದೆ. ಮಕ್ಕಳಿಗೆ ಉತ್ತೇಜನವನ್ನೂ, ಚೈತನ್ಯವನ್ನೂ ಕೊಟ್ಟು ಮುಖ ಮತ್ತು ಕಣ್ಣುಗಳ ಸೌಂದರ್ಯವನ್ನೂ ಹೆಚ್ಚಿಸಿ ಸುಖವನ್ನೀಯುವುದು

— ಅಂತರಂಗ ನೈರ್ಮಲ್ಯಕ್ಕೆ ಯಾವಾಗಲೂ ಸೇವಿಸಿರಿ

ಎಂಡ್ರೂಸ್ ಲಿವರ್ ಸಾಲ್ಟ್

ANDREWS
LIVER SALT

ಆರೋಗ್ಯ ಪಾನೀಯ ಮತ್ತು ವಿರೇಚಕ ನೈರ್ಮಲ್ಯ, ತಂಪು ದಣುವಾರಿಸು

ಸ. ಸೈ. 11 ಆ
ದೊ. ಸೈ. 1½ ರೂ



ನೋಟಗಳು

ಬಾಲ್ಕನಿನಲ್ಲಿ ಹಿಟ್ಲರನು ರಣೋನ್ಮತ್ತನಾಗಿ ಕಾದಾಡುತ್ತಾನೆ! ಗ್ರೀಸ್-ಯುಗೊಸ್ಲೇವಿಯಗಳು ನಾಜೀ ಯುದ್ಧಯಂತ್ರಕ್ಕೆ ಸಿಲುಕಿ ನರಳುತ್ತಿವೆ!

◆ ◆

ಯುಗೊಸ್ಲೇವಿಯಕ್ಕೆ ಏಕಕಾಲದಲ್ಲಿಯೇ ನಾಲ್ಕೈದು ಕಡೆಗಳಿಂದ ಆಕ್ರಮಣಗಳು ಒದಗಿದುವು ಬೆಲ್ಗ್ರೇಡನ್ನು ಹಿಟ್ಲರನು ಅಮಾನುಷವಾದ ಹಿಂಸೆಯಿಂದ ಸ್ವಾಧೀನಪಡಿಸಿಕೊಂಡನು.

◆ ◆

ಇಷ್ಟು ರಭಸದಿಂದ ನಾಜಿಗಳು ಗ್ರೀಸು, ಯುಗೊಸ್ಲೇವಿಯಗಳಿಗೆ ಹೊಡೆಯುವರೆಂದು ಯಾರೂ ಎಣಿಸಿರಲಿಲ್ಲ. ಇಟಲಿಯನ್ನು ಪರಾಕ್ರಮದಿಂದ ಎದುರಿಸಿದ ಗ್ರೀಸು ಜರ್ಮನಿಯೊಡನೆಯೂ ಕಾದಾಡಿ ಶೌರ್ಯವನ್ನು ಮೆರೆಸಿತಾದರೂ ವಿಜಯವು ಬಹಳ ಅನುಮಾನವೇ ಆಗಿದೆ

◆ ◆

'ಗ್ರೀಕರು ಸ್ವಬುದ್ಧಿಯಿಂದ ಯುದ್ಧ ಸಾರಿದರು. ಜರ್ಮನಿಯನ್ನು ಎದುರಿಸಲು ಪೂರ್ಣ ಸಹಾಯ ಕೊಡುವುದಾಗಿ ನಾವು ಗ್ರೀಕರಿಗೆ ಭರವಸೆ ಕೊಡಲಿಲ್ಲ. ಸಹಾಯವಷ್ಟೇ ಮಾಡುವುದಾಗಿ ನಾವು ಹೇಳಿದ್ದೆವು' ಹೀಗೆಂದು ಸಾರಿ ಚರ್ಚಿಲ್ಲರು ಗ್ರೀಸಿನ ವಿಷಯದಲ್ಲಿ ಬ್ರಿಟಿಷರು ತೋರಿಸುವ ಉತ್ಸಾಹವನ್ನು ಸ್ಪಷ್ಟಪಡಿಸಿದ್ದಾರೆ.

◆ ◆

ಬಾಲ್ಕನ್ ರಾಷ್ಟ್ರವನ್ನು ಬ್ರಿಟಿಷರು ಕೈಕನ್ಸಿಸಿ ತಾನೇ ಅಲ್ಲಿನ ಅಧಿಪತಿಯಾಗುವೆನೆಂದು ಹಿಟ್ಲರನು ಬಗೆದುದಿದೆ. ಬ್ರಿಟಿಷರನ್ನು ಆ ಪ್ರದೇಶದಲ್ಲಿಯೇ ಇರಬಿಡುವುದಿಲ್ಲವೆಂದು ಹಿಟ್ಲರನು ಆರ್ಭಟಿಸುತ್ತಾನೆ.

◆ ◆

ಮುಂದೆ ಟರ್ಕಿಯ ಅವಸ್ಥೆ ನೋಡತಕ್ಕದ್ದಿದೆ. ಟರ್ಕಿಯನ್ನು ಹಿಟ್ಲರನು ಸುಮ್ಮನೆ ಇರಗೊಡಲಾರನೆಂದು ಚರ್ಚಿಲ್ಲರೇ ಅಭಿಪ್ರಾಯಪಡುತ್ತಾರೆ.

ರಶ್ಯಾ ಜಪಾನುಗಳೊಳಗೆ ತಾಟಸ್ಥ್ಯ ಒಪ್ಪಂದವು ಸಹಿಯಾಯಿತು. ಉಭಯ ರಾಷ್ಟ್ರಗಳೊಳಗಿನ ಅನ್ಯೋನ್ಯ ವೈತ್ರಿಯು ಇದರಿಂದ ಕಂಡಿಸಲ್ಪಟ್ಟಿತು.

◆ ◆

ಲೋಕಯುದ್ಧದಲ್ಲಿ ಜಪಾನು ಧುಮುಕಬೇಕಾಗಿ ಬರುವ ಸಂಭವವು ತೀರಾ ತಪ್ಪಿಲ್ಲ. ಇಂತಹ ಸಂದರ್ಭದಲ್ಲಿ ಈ ಒಪ್ಪಂದದ ಮೂಲಕ ಸವಿಾಪದ ರಶ್ಯವು ತನ್ನನ್ನು ಎದುರಿಸಬಾರದಾಗಿ ಜಪಾನು ಹುಂಜಿಕೆ ಹೂಡಿರುವುದೆಂದು ಊಹಿಸಲು ಸಾಧ್ಯವಿದೆ

◆ ◆

ರಶ್ಯವೂ ತಾಟಸ್ಥ್ಯ ನೀತಿಯನ್ನು ಮುಂದಿನ ಯೋಜನೆಯಲ್ಲಿಟ್ಟಿದೆಯೆಂದ ಎಣಿಸಬಹುದು. ವಂಥಕ್ಕೀಳಿದು ಹೋರಾಡುವ ರಾಷ್ಟ್ರಗಳ ಶಕ್ತಿಯು ಕ್ಷೀಣವಾಗುವ ಅನುಕೂಲ ಸಮಯವನ್ನು ರಶ್ಯವು ಹೀಗೆ ತಟಸ್ಥವಾಗಿ ನಿಂತು ಹಾರೈಸುತ್ತದೆಯೇ ಎಂದು ರಾಜಕಾರಣ ಪಟುಗಳ ಅಭಿಪ್ರಾಯವಾಗಿದೆ.

ಮದ್ರಾಸಿನಲ್ಲಿ ಮುಸ್ಲಿಂ ಲೀಗಿನ ಮಹಾಧಿವೇಶನವು ಜರಗಿತು. ಅಧ್ಯಕ್ಷರಾದ ಜಿನ್ನರಿಂದ, ಮದ್ರಾಸಿನ ಅಬ್ರಾಹ್ಮಣರಿಗೆ 'ದ್ರಾವಿಡಸ್ಥಾನ'ದ ಅಭಯವೂ ದೊರಕಿತು

◆ ◆

ಭಾರತದ ವಾಯುವ್ಯ ಮತ್ತು ಪೂರ್ವ ಪ್ರಾಂತಗಳಲ್ಲಿ ಪಾಕಿಸ್ತಾನವಾಗಬೇಕೆಂದು ಜಿನ್ನರ ಹಾಗೂ ಅವರ ಮುಸ್ಲಿಂ ಲೀಗಿನ ಶುದ್ಧ ಉದ್ದೇಶವಾಗಿದೆ. ಪಾಕಿಸ್ಥಾನವಾಗಿ ಉಳಿದ 'ಬಾಕಿಸ್ಥಾನ'ದಲ್ಲಿ ಮದ್ರಾಸ ಪ್ರಾಂತ್ಯವೊಂದು ದ್ರಾವಿಡಸ್ಥಾನವಾಗಲೆಂದೂ ಜಿನ್ನರು ಹಾರೈಸುತ್ತಾರೆ

◆ ◆

ಮದ್ರಾಸಿನ ಅಬ್ರಾಹ್ಮಣರ ಸಂಕಷ್ಟವನ್ನು ನೆನೆದು ನೆನೆದು ಜಿನ್ನರು ಕಂಬನಿಗರೆವ ಭಾಷಣಮಾಡಿದರು! ಮದ್ರಾಸಿನ ಬ್ರಾಹ್ಮಣರು ಈ ಅಬ್ರಾಹ್ಮಣರನ್ನು ಬಹಳ ಅನ್ಯಾಯದಿಂದ ಆಳುತ್ತಿದ್ದಾರೆಂದು ನೊಂದುಕೊಂಡರು!

◆ ◆

ಜಿನ್ನರಿಗೆ ಹಿಂದುಗಳ ಮೇಲೆ ಸಿಟ್ಟಿದ್ದರೂ ಅವರಲ್ಲಿ ಅಬ್ರಾಹ್ಮಣರ ಮೇಲೆ ಬಹಳ ಕರುಣೆಯಿದ್ದಂತೆ ಕಾಣುತ್ತದೆ. ಶೇಕಡ ಮೂರರಷ್ಟು ಇರುವ ಬ್ರಾಹ್ಮಣರು ತಮ್ಮ ತಂತ್ರೋಪಾಯಗಳಿಂದ ಅಬ್ರಾಹ್ಮಣರನ್ನು ಈ ಪ್ರಾಂತದಲ್ಲಿ ಆಳುತ್ತಿರುವುದು ಬಹಳ ಅನ್ಯಾಯವೆಂದು ಅವರ ವಾದವಾಗಿದೆ.

◆ ◆

ಆದಕಾರಣ ಮದ್ರಾಸಿನ ಅಬ್ರಾಹ್ಮಣರಿಗೆ ತಾನು ಮುಸ್ಲಿಂ ಲೀಗಿನ ಮೂಲಕ ಪೂರ್ಣ ಸಹಾಯ ಕೊಡುವುದಾಗಿ ಜಿನ್ನರ ಭರವಸೆಯಾಗಿದೆ

◆ ◆

ದ್ರಾವಿಡ ಧುರೀಣರಾದ ರಾಮಸ್ವಾಮಿ ನಾಯಕರಿಗೆ ಜಿನ್ನರ ಬೆಂಬಲವೂ ಸಿಕ್ಕಿರುವುದು ಒಂದು 'ಗೌರವ'ದ ವಿಷಯವೇ ಆಗಿದೆ

◆ ◆

ಕಾಂಗ್ರೆಸ್ಸಿನ ವಿರೋಧವಾಗಿ ಹೋರಾಡುವ ಮುಸ್ಲಿಂ ಲೀಗು ಮತ್ತು ಜಸ್ಟಿಸ್ ಪಾರ್ಟಿಗಳು ಮದ್ರಾಸಿನಲ್ಲಿ ಸಂಧಿಸಿ ಹೀಗೆ ಅನ್ಯೋನ್ಯ ಸ್ನೇಹಾಲಿಂಗನ ಮಾಡಿಕೊಂಡವು!

ಸಪ್ರೂ ವೈಸರಾಯ್ ಸಂಭಾಷಣೆಯ ಫಲ
ಹೊಸ ಡಿಲ್ಲಿಯಲ್ಲಿ ಊಹಾಪೋಹಗಳು

ವೈಸರಾಯರು ಮಹಾತ್ಮಾ ಗಾಂಧಿಯವರನ್ನು ಬೇಟಿಗಾಗಿ ಆಹ್ವಾನಿಸಿ ಒಪ್ಪಂದಕ್ಕಾಗಿ ಹೊಸ ಮಾತುಕತೆಯನ್ನ ಆರಂಭಿಸುವರೇ?

ವೈಸರಾಯರಿಗೂ ಸರ್ ತೇಜಬಹದ್ದೂರ್ ಸಪ್ರೂರವರಿಗೂ ನಡೆದ ಮಾತುಕತೆಗಳ ಫಲವಾಗಿ ಈಗ ಹೊಸ ಡಿಲ್ಲಿಯ ರಾಜಕೀಯ ಆವರಣದಲ್ಲಿ ಮೇಲಿನ ಪ್ರಶ್ನೆಯು ಏಳುತ್ತಿದೆ.

ಸರ್ ಸಪ್ರೂರವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ 'ಬೊಂಬಾಯಿ ಸಮ್ಮೇಳನದ ಆಧಾರದ ಮೇಲೆಯೇ ನಾನು ದೃಢವಾಗಿ ನಿಂತಿದ್ದೆ' ಎಂದು ತಿಳಿಸಿದರು. ಇತರ ಪಕ್ಷಗಳ ಅಭಿಪ್ರಾಯವನ್ನು ತಿಳಿಯಲು ಪ್ರಯತ್ನಿಸುವುದು ವೈಸರಾಯರ ಕರ್ತವ್ಯ ಎಂದು ಅವರು ನುಡಿದರು.

ಸರ್ ಸಪ್ರೂರವರು ಕೊಟ್ಟಿರುವ ಸಲಹೆಯನ್ನು ತಾವು ಒಪ್ಪುವುದಾಗಿ ವೈಸರಾಯರು ಸ್ಪಷ್ಟವಾಗಿ ನುಡಿದಿಲ್ಲ. ಆದರೆ ಅವರ ಮನೋಭಾವವು ಸಹಾನುಭೂತಿಯುತವಾಗಿತ್ತೆಂದು ಸಪ್ರೂರವರು ನುಡಿದಿದ್ದಾರೆ.

ಸರ್ ಸಪ್ರೂರವರೊಡನೆ ತಾವು ನಡೆಸಿದ ಮಾತುಕತೆಗಳ ವರದಿಯನ್ನು ಸೆಕ್ರೆಟರಿ ಆಫ್ ಸ್ಟೇಟರಿಗೆ ವೈಸರಾಯರು ಕಳುಹಿಸಿ ಬ್ರಿಟಿಷ್ ಸರ್ಕಾರದ ಅಪ್ಪಣೆ ಪಡೆಯುವರು.

ಭಾರತದ ಇತರ ಮುಖಂಡರುಗಳನ್ನೂ ಅವರು ನೋಡಿ ಬೊಂಬಾಯಿ ಸಮ್ಮೇಳನದ ಸಲಹೆಯ ಆಧಾರದ ಮೇಲೆ ಆ ಮುಖಂಡರುಗಳ ಅಭಿಪ್ರಾಯ ಪಡೆಯುವರು. ಮುಖಂಡರುಗಳನ್ನು ಒಟ್ಟಿಗೇ ಕರೆಸಿ ಮಾತನಾಡುವರೋ ಅಥವಾ ಪ್ರತ್ಯೇಕ ಪ್ರತ್ಯೇಕವಾಗಿ ಕರೆಸಿ ಮಾತನಾಡುವರೋ ಗೊತ್ತಾಗಿಲ್ಲ.



ವಿಜ್ಞಾನಯುಗ

ನೀರಿನೊಳಗೆ ಕೆಲಸ ಮಾಡುವವರಿಗಾಗಿ

ವಾಯು ಬುಟ್ಟಿ ಅಥವಾ ಆಕಾಶ ಯಾನಗಳಲ್ಲಿ ಕೆಲಸಮಾಡುವವರಿಗೆ ಹೇಲಿಯಂ ಎಂಬ ಬಹಳ ಹಗುರವಾದ ಅನಿಲದ ಉಪಯೋಗವು ಚೆನ್ನಾಗಿ ತಿಳಿದಿರುತ್ತದೆ. ಹೇಲಿಯಂ ಹಗುರವಾದರೂ ಜಲಜನಕದಂತೆ ಅದು ಉರಿಯುವುದಿಲ್ಲ. ಆದ್ದರಿಂದ ಆಕಾಶಯಾನಗಳಿಗೆಲ್ಲ ಉಪಯುಕ್ತವಾದ ಈ ಅನಿಲವನ್ನು ಉಪಯೋಗಿಸುತ್ತಾರೆ. ನೀರಿನೊಳಗೆ ಮುಳುಗಿ ಕೆಲಸ ಮಾಡುವವರೂ ಇದೇ ಅನಿಲವನ್ನು ಉಪಯೋಗಿಸುತ್ತಿದ್ದರು. ಈಗ ಹೇಲಿಯಮನ್ನು ಉಪಯೋಗಿಸಿದರೆ, ಅಂಗಾರಾಮ್ಲದ ಉಪಯೋಗದಿಂದಾಗುವ ಅಪಘಡಗಳು ಇದರಿಂದಾಗುವುದಿಲ್ಲವೆಂದು ತಿಳಿದುಬಂದಿದೆ. ಆದ್ದರಿಂದ ಅಮೇರಿಕದ ನೌಕಾಖಾತೆಯವರು ಈ ಕೆಲಸಕ್ಕೆ ಹೇಲಿಯಂ ಮತ್ತು ಆಮ್ಲ ಅನಿಲದ ಮಿಶ್ರಣವನ್ನು ಉಪಯೋಗಿಸಲಾರಂಭಿಸಿದ್ದಾರೆ. ಹೇಲಿಯಮನ್ನು ಅಮೇರಿಕವೇ ಮುಖ್ಯವಾಗಿ ತಯಾರಿಸುತ್ತಿರುವುದರಿಂದ ಅದು ಅವರಿಗೆ ಮತ್ತಷ್ಟು ಅನುಕೂಲವಾಗಿದೆ.

ಗೆರೇಜಿನ ಹೊಸ ರಚನಾಕ್ರಮ

ಅಮೇರಿಕದ ವಿಜ್ಞಾನಿಗಳು ಹೊಸ ಕ್ರಮದಲ್ಲಿ ಮೋಟರು ಗೆರೇಜನ್ನು ರಚಿಸಿದ್ದಾರೆ. ಮೋಟರು ಗೆರೇಜಿಗೆ ಬಂದಾಗ, ಮುಚ್ಚಿದ್ದ ಗೆರೇಜಿನ ಬಾಗಿಲನ್ನು ತರೆಯಲಿಕ್ಕೆ ಮೋಟರಿನ ಡ್ರೈವರನಿಗಾಗಲೀ, ಕ್ಲೀನರನಿಗಾಗಲೀ, ಮೋಟರಿನಿಂದ ಕೆಳಗಿಳಿಯಬೇಕೆಂದಿಲ್ಲ. ಕಾಲಮಾನಕ್ಕನುಸರಿಸಿ, ಗಾಳಿ, ಮಳೆ, ಚಳಿ, ಬಿಸಿಲುಗಳಿಂದ ಅವನು ತ್ರಾಸಪಡಬೇಕೆಂದಿಲ್ಲ. ಒಂದು ರೇಡಿಯೋದ್ಧ ಸಂಯೋಜನೆಯ ಮೂಲಕ, ಮೋಟರಿನೊಳಗಿದ್ದ ಡ್ರೈವರನು ಒಂದು ಗುಂಡಿಯನ್ನು ಒತ್ತಿದೊಡನೆ ಗೆರೇಜಿನ ಬಾಗಿಲು ತನ್ನಷ್ಟಕ್ಕೆ ತೆರೆದುಕೊಳ್ಳುವುದು. ಗೇರೆಜಿಗೆ ಬೀಗ ಹಾಕಿದ್ದರೂ, ಬೀಗವು ಕಳಚುವದು. ಡ್ರೈವರನು ಮೋಟರಿನೊಳಗಿದ್ದುಕೊಂಡೇ, ಮೋಟರನ್ನು ಗೆರೇಜಿನೊಳಗೆ ಕೊಂಡುಹೋಗಿ, ಅದನ್ನು ನಿಲ್ಲಿಸಿ ಮರಳಬಹುದು. ಕಾರ್ಯಾವಸರದಲ್ಲಿರುವ ಅಮೇರಿಕದ ಜನರಿಗೆ ಈ ಹೊಸ ಯೋಜನೆಯು ಬಹಳ ಅನುಕೂಲವಾಗಿದೆಯಂತೆ. ಎಲ್ಲೆಲ್ಲೂ ಈ ಹೊಸ ರೀತಿಯ ಗೆರೇಜುಗಳನ್ನೇ ಕಟ್ಟುತ್ತಿದ್ದಾರೆ. ಅವು ಬಹಳ ಲೋಕಪ್ರಿಯವಾಗಿವೆ.

ಅತಿ ಚಿಕ್ಕ ನಗರ

ಅಮೇರಿಕದ ಇಬ್ಬರು ವಿಜ್ಞಾನಿಗಳು ಮಿಚಿಗಾನ ಎಂಬಲ್ಲಿ ಒಂದು ಅತಿ ಚಿಕ್ಕದಾದ ನಗರವನ್ನು ನಿರ್ಮಿಸಿ ಪ್ರಪಂಚದ ದೃಷ್ಟಿಯನ್ನು ತಮ್ಮ ಕಡೆಗೆ ಆಕರ್ಷಿಸಿಕೊಂಡಿದ್ದಾರೆ. ನೂರಾರು ಜನರು ಪ್ರತಿದಿನವೂ ಬಂದು ಈ ನಗರವನ್ನು ನೋಡಿ ಆಶ್ಚರ್ಯಪಡುತ್ತಿದ್ದಾರೆ. ಈ ನಗರದಲ್ಲಿ ಜನವಸತಿ ಇರುವುದಿಲ್ಲ. ಆದರೆ ಒಂದು ಮಾದರಿ ನಗರವು ಹೇಗಿರಬೇಕು ಎಂಬುದನ್ನು ಜನರಿಗೆ ತಿಳಿಸಲಿಕ್ಕಾಗಿ ಈ ನಗರದ ನಿರ್ಮಾಣವಾಗಿರುವುದರಿಂದ, ಜನವಸತಿಯು ಅಗತ್ಯ ಇರುವುದಿಲ್ಲ. ಈ ನಗರವು ೧೧೦ ಅಡಿ ಉದ್ದ ಮತ್ತು ೫೦ ಅಡಿ ಅಗಲವಾಗಿದೆ. ಆದರೆ ಒಂದು ಮಾದರಿ ನಗರದ ರಚನೆಗೆ ಯಾವ ಪ್ರಕಾರ ಆಗಬೇಕೋ, ಯಾವ ಯಾವ ಸೌಲಭ್ಯಗಳು, ಅನುಕೂಲತೆಗಳು ಆಗಬೇಕೋ, ಅವೆಲ್ಲ ಈ ನಗರದಲ್ಲಿ ಯಥಾಕ್ರಮದಲ್ಲಿ ಯಥೋಚಿತವಾಗಿ ಇರುತ್ತವೆ. ಮತ್ತೆ ಅಲ್ಲಲ್ಲಿ ಮನುಷ್ಯಾಕೃತಿಯ ಬೊಂಬೆಗಳನ್ನು ಇಟ್ಟಿರುವುದರಿಂದ ಅದು ಒಂದು ನಗರದ ಯಥಾಪ್ರತಿಯಂತೆ ತೋರುತ್ತಿದೆ. ಈ ನಗರದ ನಿರ್ಮಾಣಕ್ಕೆ ೩೦೦೦ ಡಾಲರುಗಳು ಖರ್ಚಾಗಿವೆ. ಆದರೂ ಪ್ರತಿನಿತ್ಯ ಬಂದುಹೋಗುವ ಪ್ರೇಕ್ಷಕರು ನೋಡಲಿಕ್ಕೆ ಹಣ ಕೊಡಬೇಕಾಗಿರುವುದರಿಂದ ನಗರವನ್ನು ನಿರ್ಮಿಸಿದ ಆ ಇಬ್ಬರು ವಿಜ್ಞಾನಿಗಳಿಗೆ ಲಾಭವೇ ಆಗಿದೆ.

ಬಾಂಬು ನಿರೋಧಕ ಹೊಸ ವಸ್ತು

ಈಗ ಯುದ್ಧಕಾಲ. ಬಾಂಬು ಸಿಡಿದು ಕಾಂಕ್ರೀಟು ಮತ್ತು ಡಾಮರಿನ ಬಹಳ ತಾಳಿಕೆಯ ರಸ್ತೆಗಳೂ ಹಾಳಾಗಿ ಕೋಟ್ಯಂತರ ರೂಪಾಯಿಗಳ ನಷ್ಟವಾಗುತ್ತದೆ. ಇದಕ್ಕೇನು ಮಾಡೋಣ? ಅಮೇರಿಕದ ಕೆಲವರು ವಿಜ್ಞಾನಿಗಳು ಒಂದು ಬಗೆಯ ಹೊಸ ಆಸ್ಫಾಲ್ಟ್ ಮಿಶ್ರಣವನ್ನು ತಯಾರಿಸಿದ್ದಾರೆ. ಇದನ್ನು ಹಾಕಿ ತಯಾರಿಸಿದ ರಸ್ತೆಗಳಿಗೆ ಬಾಂಬುಗಳ ಸಿಡಿತವನ್ನು ತಡೆದುಕೊಳ್ಳು[...] ಅದ್ಭುತವಾದ ಶಕ್ತಿಯು ಇರುವುದಂತೆ. ಮತ್ತು ಬಹಳ ದೊಡ್ಡದಾದ ಬಾಂಬು ಸಿಡಿದರೂ ಕೂಡ, ಅದು ಬಿದ್ದಲ್ಲಿ ಮಾತ್ರ ರಸ್ತೆಯು ಹಾಳಾಗಬಹುದಲ್ಲ[...] ರಸ್ತೆಯ ಉಳಿದ ಭಾಗಗಳು ಎಲ್ಲಿಯು[...] ಸರಿ ಬಿಡುವುದಿಲ್ಲ, ಅಥವಾ ಬಿರುಕು ಬೀಳುವುದಿಲ್ಲ. ಮತ್ತೆ ಬಾಂಬು ಬಿದ್ದು ಕೆಟ್ಟು ಹೋದ ರಸ್ತೆಯ ಭಾಗವನ್ನು ಕೂಡ ಬಹು ಸುಲಭದಲ್ಲಿ ಪೂರ್ವ[...] ಸ್ಥಿತಿಗೆ ತರಬಹುದಾಗಿದೆ. ಆದರೆ ಈ[...] ಈ ತರದ ರಸ್ತೆಗಳನ್ನು ಕಟ್ಟಲು ಖರ್ಚು ಬಹಳ ಇರುವುದರಿಂದ, ವಿಮಾನ ನಿಲ್ದಾಣಗಳಂಥ ಅತಿ ಪ್ರಾಮುಖ್ಯವಾದ ಕ[...] ಗಳಲ್ಲಿ ಮಾತ್ರ ಈ ಹೊಸ ಸಾಮ[...] ಯಿಂದ ರಸ್ತೆಗಳನ್ನು ಕಟ್ಟಲಾರಂಭಿಸಿದ್ದಾರೆ.

ಸಾರ್ವಭೌಮರಿಗೆ ವೈಭವ[...] ರೈಲುಗಾಡಿ

ಬ್ರಿಟಿಷ್ ಸಾರ್ವಭೌಮರಿಗಾಗಿ ಇ[...] ಗ್ಲಾಂಡಿನ ಒಂದು ಕಾರ್ಖಾನೆಯ[...] ಕಟ್ಟಿ ತಯಾರಾಗುತ್ತಿರುವ ರೈಲುಗಾಡಿಯು ಇನ್ನು ಮೂರು ನಾಲ್ಕು ತಿಂಗಳಲ್ಲಿ ಪ್ರಯಾಣಕ್ಕೆ ಸಿದ್ಧವಾಗುವುದು[...] ಈ ಗಾಡಿಯ ಕೆಲಸವು ಸುಮಾರು ಮೂರು ವರ್ಷಗಳ ಹಿಂದೆಯೇ ಆರಂಭವಾಗಿತ್ತಾದರೂ, ಯುದ್ಧಕಾರ್ಯಗಳಿ[...] ತಡೆಯಾಗಬಾರದೆಂದು ಚಕ್ರವರ್ತಿಗಳು[...] ತಿಳಿಸಿದ್ದರಿಂದ ಕೆಲಸವು ಮುಗಿಯಲಿ[...] ಇಷ್ಟು ವಿಳಂಬವಾಯಿತು. ಆದರೂ[...] ಗಾಡಿಯಲ್ಲಿ ಅತ್ಯಾಧುನಿಕ ಪ್ರಯಾ[...] ಸೌಕರ್ಯಗಳೆಲ್ಲ ತುಂಬಿರುವವು. ಚ[...]ವರ್ತಿಗಳ ಪರಿವಾರದವರಿಗೂ, ಪರಿಚಾರಕೆಯರಿಗೂ, ಅರಸು ದಂಪತಿಗಳಿಗೂ ಇ[...]ಲಿಕ್ಕೆ ಅವರ ಸ್ಥಾನಮಾನ ಯೋಗ್ಯ[...]ಳಿಗೆ ಅನುಕೂಲವಾದ ಬೇರೆ ಬೇ[...] ಕೋಣೆಗಳು ಈ ಗಾಡಿಯಲ್ಲಿ ಇ[...]ತ್ತವೆ. ಮತ್ತು ಅರಸು ದಂಪತಿಗಳ[...] ಈ ಗಾಡಿಯ ಒಂದು ಕೊನೆಯಿಂ[...] ಇನ್ನೊಂದು ಕೊನೆಯ ತನಕ ಸಂಚರಿ[...] ಪ್ರತಿಯೊಬ್ಬರ ದರ್ಶನ ತೆಗೆದುಕೊ[...]ಲಿಕ್ಕೆ ಅನಕೂಲವಾಗಿ ಇದರೊಳ[...] ಒಂದು ಪ್ರತ್ಯೇಕ ದಾರಿ ಉದ್ದಕ್ಕೂ ಇ[...]ತ್ತದೆ. ವಿದ್ಯುಚ್ಛಕ್ತಿ, ರೇಡಿಯೋ, ನಾ[...]ಕ, ಸಿನೇಮ ಮೊದಲಾದುವುಗಳು [...] ಗಾಡಿಯ ಒಳಗೇ ಇರುವವು. ಸ[...] ಸಣ್ಣ ಆಟಗಳನ್ನೂ, ವ್ಯಾಯಾಮ ಸಾ[...]ನೆಗಳನ್ನೂ ಈ ಗಾಡಿಯೊಳಗಿದ್ದೇ ಅ[...] ಬಹುದ

ಸಂದಿ!

ಪೋಸ್ಟಾಫೀಸಿನಿಂದ

ಗಳಿಸಿರಿ 2½% ಲಾಭವನ್ನು

ಆದಾಯ ತೆರಿಗೆ ಇಲ್ಲದ್ದು

ಒಂದು ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ಆರಂಭಿಸಿರಿ.

ಈ ಹಿಂದೆ ಎಂದೂ ಇಲ್ಲದಷ್ಟು ಹೆಚ್ಚಿನ ಬಡ್ಡಿಯನ್ನು ಶೇ. ೨½-ಆದಾಯ ತೆರಿಗೆ ವಿನಾ-ಸಂಪಾದಿಸಲು ಪೋಸ್ಟಾಫೀಸಿನವರು ಈಗ ನಿಮಗೆ ವಿಶಿಷ್ಟವಾದ ಒಂದು ಅವಕಾಶವನ್ನು ಕಲ್ಪಿಸಿದ್ದಾರೆ. ನೀವು ಮಾಡಬೇಕಾದದ್ದು ಇಷ್ಟೆ: ೫ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ನಿಮ್ಮ ಹೆಸರಿನಲ್ಲಿ ತೇವಣಿ ಇಡುವುದರ ಮೂಲಕ ಒಂದು ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟನ್ನು ಆರಂಭಿಸುವುದು. ಸಾಮಾನ್ಯವಾದ ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕ್ ಲೆಕ್ಕದ ವ್ಯವಹರಣೆಯಂತೆ ಈ ಲೆಕ್ಕದ ವ್ಯವಹರಣೆಯೂ ಸುಲಭವಾಗಿದೆ. ಪರಮಾವಧಿಯಲ್ಲಿ ೧೦,೦೦೦ ರೂಪಾಯಿ ವರೆಗೆ ತೇವಣಿ ಇಡಬಹುದಾಗಿದೆ. ಹತ್ತಿರದ ಪೋಸ್ಟಾಫೀಸಿಗೆ ಹೋಗಿ ಪೂರ್ತಿ ವಿವರಗಳನ್ನು ಕೇಳಿ ತಿಳಿದುಕೊಳ್ಳಿ. ಈಗ ದೊರೆತಿರುವಂತಹ ಈ ಸದವಕಾಶ ಇನ್ನುಮುಂದೆ ನಿಮಗೆ ದೊರೆಯದೆ ಹೋಗಬಹುದು.

ಈ ಬಗ್ಗೆ ಸುದ್ದಿಯನ್ನು ನಿಮ್ಮ ಮಿತ್ರರಿಗೂ ತಿಳಿಸಿ.

ಆರಂಭಿಸಿರಿ ಪೋಸ್ಟಾಫೀಸ್ ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟ್

GI-Kn-42

ನೆಹರುಗಳ ಆತ್ಮಕಥೆಗೆ ಸೇರಿಸಿದ ಹೊಸ ಪುಟಗಳು

(೧೪ನೆಯ ಪುಟದಿಂದ ಮುಂದುವರಿದುದು)

…ಏರಿಸಿದ್ದರಿಂದ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದ ಮಟ್ಟವೂ ಮೇಲಕ್ಕೇರಿತು. ಅದರಿಂದ ಸ್ವಲ್ಪ ಮಟ್ಟಿಗೆ ನಮ್ಮ ಸಂಕುಚಿತ ದೃಷ್ಟಿಯೂ ಕಡಿಮೆಯಾದಂತಾಯಿತು.

'೧೯೩೮ರಲ್ಲಿ ನಾನು ಯೂರೋಪಿನಿಂದ ಮರಳಿ ಬಂದನಂತರವೇ ಇನ್ನೆರಡು ಗಮನಾರ್ಹವಾದ ಚಟುವಟಿಕೆಗಳು ನಡೆದವು. ಉದಿಮಾನದಲ್ಲಿ ಕೂಡಿದ ಆಲ್ ಇಂಡಿಯಾ ಸ್ಟೇಟ್ಸ್ ಪೀಪಲ್ಸ್ ಕಾನ್ಫರೆನ್ಸಿನಲ್ಲಿ ನಾನು ಭಾಷಣಮಾಡಿದ್ದರಿಂದ ಭಾರತೀಯ ಸಂಸ್ಥಾನಗಳಲ್ಲಿಯ ಪ್ರಾಗತಿಕ ಚಳವಳಿಯೊಂದಿಗೆ ನನ್ನ ಸಂಬಂಧವು ಹೆಚ್ಚು ಹೆಚ್ಚಾಗಿ ಬೆಳೆಯಿತು. ಭಾರತದ ಅದೆಷ್ಟೋ ಸಂಸ್ಥಾನಗಳಲ್ಲಿ ಯಾವಾಗಲಾದರೂ ಪ್ರಜೆಗಳು ಹಾಗು ಸಂಸ್ಥಾನಾಧಿಪತಿಗಳೊಂದಿಗೆ ತಿಕ್ಕಾಟವು ನಡೆದೇ ಇರುವುದು. ಬ್ರಿಟಿಷ್ ಸೈನ್ಯವೇ ಹಲವಾರು ಸಲ ಸಂಸ್ಥಾನಾಧಿಪತಿಗಳೊಂದಿಗೆ ನೇರವಾಗಿ ಈ ಬಗೆಯ ತಿಕ್ಕಾಟವನ್ನೆಸಗಿರುವದು. ಈಗಲೂ ಹಲಕೆಲವು ಸಂಸ್ಥಾನಗಳಲ್ಲಿ ಮಧ್ಯಯುಗದ ರಾಜನೀತಿಯ ಅವಶೇಷಗಳು ಕಂಡುಬರುತ್ತವೆ. ಅವನ್ನು ಸಯುಕ್ತಿಕವಾಗಿ ವರ್ಣಿಸುವದು ತ್ರಾಸದಾಯಕವಾಗಿದೆ. ಆಧುನಿಕ ಲೇಖಕರೊಬ್ಬರು ಈ ಬಗೆಯ ರಾಜಮಹಾರಾಜರನ್ನು ಭಾರತದಲ್ಲಿಯ ಬ್ರಿಟನ್ನಿನ ಪಂಚಮದಳವೆಂದು ಕರೆದಿದ್ದಾರೆ.

'ಸಿಲೋನಿನಲ್ಲಿ ಅಲ್ಲಿಯ ಸರಕಾರ ಹಾಗು ಭಾರತೀಯ ನಿವಾಸಿಗಳಲ್ಲಿ ಮನಸ್ತಾಪವುಂಟಾಗಿದ್ದಿತು. ಅದರಿಂದಾಗಿ, ನಾನು ೧೯೩೯ರ ಬೇಸಿಗೆಯಲ್ಲಿ ಸಿಲೋನನ್ನು ಸಂದರ್ಶಿಸಿದೆನು. ಆ ಸುಂದರವಾದ ನಡುಗಡ್ಡೆಯನ್ನು ಸಂದರ್ಶಿಸಲು ನನಗೆ ಅದೆಷ್ಟೋ ಆನಂದವಾಯಿತು. ನಾನು ಅದನ್ನು ಸಂದರ್ಶಿಸಿದ ಪರಿಣಾಮದಿಂದಾಗಿ, ಸಿಲೋನ ಹಾಗು ಭಾರತಗಳಲ್ಲಿ ಅದೊಂದು ಬಗೆಯ ಹಿತಸಂಬಂಧದ ತಳಹದಿ ಕೂಡಿತು. ಸಿಲೋನಿನಲ್ಲಿ ಸರಕಾರಿ ಅಧಿಕಾರಿಗಳಿಂದ ಮೊದಲ್ಗೊಂಡು ಪ್ರತಿಯೊಬ್ಬನಿಂದಲೂ ಆದರ ದೊರೆಯಿತು. ಭಾವೀ ರಾಜಕೀಯ ವ್ಯವಸ್ಥೆಯಲ್ಲಿ ಸಿಲೋನ ಹಾಗು ಭಾರತಗಳು ಒಂದಾಗುವುದರಲ್ಲಿ ನನಗೆ ಎಳ್ಳಷ್ಟು ಸಂಶಯವಿಲ್ಲ. ಚೀನ ಹಾಗು ಭಾರತ, ಬರ್ಮಾ ಹಾಗು ಸಿಲೋನ, ಅಫಗಾನಿಸ್ಥಾನ, ಸಾಧ್ಯವಿದ್ದರೆ ಇತರ ದೇಶಗಳು ಕೂಡಿ ಒಂದೇ ಒಂದು ಸಂಯುಕ್ತ ರಾಜ್ಯಾಡಳಿತದ ಭಾವೀ ಚಿತ್ರವೊಂದು ನನ್ನ ಕಣ್ಣು ಮುಂದೆ ನಲಿದಾಡುತ್ತಿದೆ. ಜಾಗತಿಕ ಸಂಯುಕ್ತ ರಾಜ್ಯಾಡಳಿತವೂ ಆದರಣೀಯವಾಗಬಹುದು.

'ಯುದ್ಧ ಹಾಗು ಭಾರತ. ನಾವೇನು ಮಾಡಬೇಕಾಗಿದ್ದಿತು? ಕಳೆದ ಅದೆಷ್ಟೋ ವರ್ಷಗಳಿಂದ ನಾವು ಈ ಬಗೆಗೆ ವಿಚಾರಿಸಿ ನಮ್ಮ ಧೋರಣೆಯನ್ನು ಸಾರಿದ್ದೇವೆ. ಆದರೂ ಬ್ರಿಟಿಷ ಸರಕಾರವು ಭಾರತೀಯರಿಗೆ ಸೂಚಿಸದೆ ತಟಸ್ಥ ದೇಶವೆಂದು ಸಾರಿತು. ಕೇಂದ್ರ ಎಸೆಂಬ್ಲಿ ಅಥವಾ ಪ್ರಾಂತಿಕ ಸರಕಾರಗಳಿಗೂ ಇದು ಗೊತ್ತಾಗದೆ ಹೋಯಿತು. ಅಲ್ಲಿಂದಾಚೆ ಕಾಂಗ್ರೆಸ್ ವರ್ಕಿಂಗ್ ಕಮೀಟಿಯು ೧೯೩೯ರ ಸಪ್ಟೆಂಬರ ತಿಂಗಳ ಮಧ್ಯದಲ್ಲಿ ಒಂದು ದೀರ್ಘವಾದ ಪ್ರಕಟನೆಯನ್ನು ಹೊರಡಿಸಿತು. ಅದರಲ್ಲಿ ನಮ್ಮ ಹಿಂದಿನ ಹಾಗು ಸದ್ಯದ ರಾಜಕೀಯ ಧೋರಣೆಯನ್ನು ವಿವರಿಸಿ, ಬ್ರಿಟಿಷ ಸಾರ್ವಭೌಮತ್ವದವರ ಯುದ್ಧೋದ್ದೇಶಗಳನ್ನು ಕೇಳಲಾಗಿದ್ದಿತು.

'ಕಾಂಗ್ರೆಸಿನ ಸೂಚನೆಯು ಅದೇನೂ ಸ್ಥಿತ್ಯಂತರಗಳಿಲ್ಲದೆ ಕಾರ್ಯರೂಪದಲ್ಲಿ ಬರಬೇಕಾಗಿದ್ದಿತು. ರಾಷ್ಟ್ರೀಯ ಸರಕಾರದಲ್ಲಿ ಅಲ್ಪಸಂಖ್ಯಾಕ ಪಂಗಡಗಳಿಗೂ ಸರಿಯಾದ ಸ್ಥಾನಮಾನಗಳಿರುವವು. ರಾಷ್ಟ್ರೀಯ ಸರಕಾರದ ಈ ಸೂಚನೆಯೇನೋ ಆಧುನಿಕವೇ ಆಗಿದೆ. ಈ ಸೂಚನೆಯ ಬಗೆಗೆ ಏನಾದರೂ ಕಾರ್ಯಗಳು ನಡೆಸಿದರೆ ಸದ್ಯದ ಪರಿಸ್ಥಿತಿಯಲ್ಲಿ ಸಂರಕ್ಷಣೆಗೂ ಯುದ್ಧ ಚಟುವಟಿಕೆಗಳಿಗೂ ಜನರಿಂದ ಸಹಕಾರ ಸಹಾನುಭೂತಿಗಳು ದೊರೆಯುವವು. ಸರಕಾರವೇ ಇದಕ್ಕೆ ಸರಿಯಾದ ಮಾರ್ಗವಾಗಿದೆ. ಈ ಸಾಮ್ರಾಜ್ಯಶಾಹಿಯ ಧೋರಣೆಯಿಂದ ಬ್ರಿಟನ್ನು ತನ್ನ ಯುದ್ಧದ ಚಟುವಟಿಕೆಗಳಿಗೆ ಭಾರತೀಯರ ಸಹಾನುಭೂತಿ ದೊರಕಿಸುವುದು ಸಾಧ್ಯವೇ ಇಲ್ಲ. ಆದರೆ ಸಾಮ್ರಾಜ್ಯಶಾಹಿಯು ಭಿನ್ನವಾಗಿಯೇ ವಿಚಾರಿಸಿ ತನ್ನ ಮೊದಲಿನ ಧೋರಣೆಯನ್ನೇ ತಳೆದು ಜನತೆಯನ್ನು ಒತ್ತಾಯಪಡಿಸುತ್ತದೆ. ಗಂಡಾಂತರ ಬಂದರೂ ಕೂಡ ಅದು ಭಾರತೀಯರಿಂದ ಸಹಾಯ ತೆಗೆದುಕೊಳ್ಳಲು ಸಿದ್ಧವಿಲ್ಲ. ಅದು ಭಾರತದಲ್ಲಿಯೇ ಆಗಲಿ ನೈತಿಕ ಗೌರವವನ್ನು ಕಾಯ್ದುಕೊಳ್ಳಲು ಲಕ್ಷ್ಯಗೊಡುತ್ತಿಲ್ಲ.

'ವ್ಹಾಯಿಸರಾಯರು ನಮಗೆ ಬ್ರಿಟಿಷ ಸರಕಾರದ ಉತ್ತರವನ್ನು ಕೊಟ್ಟಿದ್ದಾರೆ. **ಬ್ರಿಟಿಷ ಸರಕಾರದ ಉತ್ತರವು ಇನ್ನೂ ಹಳೆಯ ಸಾಮ್ರಾಜ್ಯಶಾಹಿಯ ಭಾಷೆಯಲ್ಲಿಯೇ ಇದೆ.** ಇತ್ತ ಭಾರತದಲ್ಲಿಯ ರಾಜಕೀಯ ಕಾಲಚಕ್ರವು ಜಗತ್ತಿನ ಹಾಗು ಯುರೋಪಿನ ಪರಿಸ್ಥಿತಿಗನುಸರಿಸಿ ತಿರುಗುತ್ತಿದೆ.

'ನನ್ನ ಸಹಕಾರ್ಯಕರ್ತರೆಷ್ಟೋ ಮತ್ತೆ ಸೆರೆಮನೆವಾಸವನ್ನನುಭವಿಸುತ್ತಲಿದ್ದಾರೆ. ಸದ್ಯದ ಜಗತ್ತಿನ ಯುದ್ಧದ ರಾಜಕೀಯ ವಾತಾವರಣದಲ್ಲಿರುವದಕ್ಕಿಂತ ಸೆರೆಮನೆಯ ಏಕಾಂತವಾಸದಲ್ಲಿದ್ದುಕೊಂಡಿರುವುದು ಜೀವನದ ಬಗೆಗೆ ಅದೊಂದು ಬಗೆಯ ನಿಶ್ಚಿತ ಭಾವನೆಯನ್ನು ಮಾರ್ಪಡಿಸಿಕೊಳ್ಳಲು ಅನುಕೂಲವಾಗುವುದು.

'ಆದರೆ ಕೆಲವೊಂದು ಸಲ ಈ ಜಗತ್ತಿನಿಂದ ಪಾರಾಗಿರಲೂ ಬರುವುದು. ಕಳೆದ ತಿಂಗಳು ನಾನು ಇಪ್ಪತ್ತು ಮೂರು ವರ್ಷಗಳ ತರುವಾಯ ಪುನಃ ಕಾಶ್ಮೀರಿಗೆ ಹೋದೆನು. ನಾನಲ್ಲಿ ಹನ್ನೆರಡೇ ದಿನ ದಿನಗಳವರೆಗಿದ್ದೆನು. ಆದರೆ ಈ ದಿನಗಳನ್ನೆಲ್ಲ ಸೌಂದರ್ಯೋಪಾಸನೆಯಲ್ಲಿಯೇ ಕಳೆದು ಮಹದಾನಂದ ಪಡೆದೆನು. ಅಲ್ಲಿಯ ಗಿರಿ ಕಂದರಗಳನ್ನು ಕಂಡು ನನಗೆ ಆಶ್ಚರ್ಯವಾಯಿತು. ಅಲ್ಲಿಯ ಹಿಂದು ಸೇರಿನ ಬುಗ್ಗೆಯನ್ನು ನೋಡಿ ಜೀವನವು ಬೆಳೆಯುತ್ತಿದ್ದಾಗಿದೆಂದೂ ನನಗನಿಸಿತು.'

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9-3-1940

FROM

Sri K. Shivarama Nair,
Kerikcundah Estate,
Post Devegadabettu,
KADUR DISTRICT

To,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—13—0   Regd. No. M. 3460

ಸ್ವದೇಶಾಭಿಮಾನಿ

ಸಂಪುಟ 35]   ತಾರೀಖು 18-4-1941   [ಸಂಚಿಕೆ 16]

The Bombay Life Assurance Company, Ltd.

(ESTABLISHED 1908)

Death! { **is not a matter of supposition**
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT.—

Puthiyara
Calicut

Car Street,
Mangalore.

Central Station Road,
Trivandrum.

Gautam Nivas, Churni Road,
Bombay No. 4.

Post Box No. 337
Mount Road, Madras

Visweswarapuram Circle
Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಥಾಯಿಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುಂಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಕ್ರೋಶಿಯದಲ್ಲಿ ಹೊಸ ಸರಕಾರ

ಕ್ರೋಶಿಯದಲ್ಲಿ ಡಾ. ಅಂಟೆ ಪಾಲಿಲಿಕ್ಕರು ಹೊಸ ಸರಕಾರವೊಂದನ್ನು ಸ್ಥಾಪಿಸಿದ್ದಾರೆ.

ಕಲ್ಪಾಕದ ಉತ್ತರದಲ್ಲಿ ಕಾಳಗ

ಬ್ರಿಟಿಷ್ ಗ್ರೀಕ್ ಸೈನ್ಯಗಳನ್ನು ಭೇದಿಸಿಲ್ಲವಾದರೂ, ಗ್ರೀಕ್ ವ್ಯೂಹದ ಪರಿಸ್ಥಿತಿ ವಿಷಮತೆ ಒಂದಿದೆ. ಉತ್ತರ ಗ್ರೀಕಿನಲ್ಲಿ ಜರ್ಮನರ ಮುಂದೊತ್ತುವಿಕೆಯಿಂದ ಗ್ರೀಕ್ ಸೈನ್ಯಗಳು ಹಿಮ್ಮೆಟ್ಟುತ್ತಿವೆ.

ಕಲ್ಪಾಕದ ಹತ್ತಿರ ಜರ್ಮನರು ಗ್ರೀಕ್ ಸೈನ್ಯದ ಮೇಲೆ ಬಹಳ ಆವೇಶದಿಂದ ಬಿದ್ದಿರುವರು. ಜರ್ಮನರು ಯುಗಸ್ಲವಿಯದಿಂದ ಬಹಳ ಜೋರಿನಲ್ಲಿ ಗ್ರೀಸ್ ರಣಭೂಮಿಗೆ ಸೈನ್ಯವನ್ನು ಕಳುಹಿಸುತ್ತಿರುವರು.

ಪ್ಯಾರಿಸಿನಲ್ಲಿ ಕ್ರಾಂತಿ
೬೦೦೦ ಮಂದಿಗೆ ನೋಟೀಸ್

ಪಾರಿಸಿನಲ್ಲಿ ಸ್ವಾತಂತ್ರ್ಯ ಚಳವಳವು ದಿನದಿನಕ್ಕೂ ಪ್ರಬಲಿಸುತ್ತಿದೆಯೆಂದು ತಿಳಿದಿದೆ. ಇದರಿಂದ ಜರ್ಮನರು ಅನೇಕ ಪ್ರೆಂಚರ ವಿಷಯದಲ್ಲಿ ಬಹಳ ತೀವ್ರ ಕ್ರಮಗಳನ್ನು ತೆಗೆದುಕೊಳ್ಳುವರಂತೆ. ಪಾರಿಸ್‌ನ ಪೋಲೀಸು ಅಧಿಕಾರಿಗಳು ಈಗಾಗಲೇ ಈ ವಿಷಯದಲ್ಲಿ ೬೦೦೦ ನೋಟೀಸುಗಳನ್ನು ಜಾರಿಮಾಡಿ ಯಾರು ಯಾರು ಸ್ವಾತಂತ್ರ್ಯ ಚಳವಳದ ಪ್ರಕಟಣೆಗಳನ್ನು ತಮ್ಮ ಗೋಡೆಯ ಮೇಲೆ ಅಂಟಿಸಿದ್ದಾರೋ ಅವರ ಮೇಲೆಯೂ ಕ್ರಮ ತೆಗೆದುಕೊಳ್ಳಲಾಗುವುದೆಂದು ಎಚ್ಚರವಿತ್ತಿರುವರು.

ಇನ್ನು ಒಂದೂವರೆ ವರ್ಷದಲ್ಲಿ ಜಯ
ಜನರಲ್ ಸ್ಮಟ್ಸರ ಹೇಳಿಕೆ

'ನಮಗೆ ಇದಿರಾಗಿ ಇಡೀ ಪ್ರಪಂಚದಲ್ಲಿ ಮಹಾ ಪರಾಕ್ರಮಶಾಲಿ ಶಕ್ತಿಯೊಂದು ನಿಂತಿದೆ; ಅದು ಮಾನವ ಶಕ್ತಿಯಲ್ಲ ಯಂತ್ರಶಕ್ತಿ. ಆದರೆ ಯಂತ್ರಶಕ್ತಿಯು ಮಾನವ ಶಕ್ತಿಯನ್ನು ಅದು ಬಿಡಲಾರದು; ಇನ್ನು ಹನ್ನೆರಡು ಅಥವಾ ಹದಿನೆಂಟು ತಿಂಗಳಲ್ಲಿ ನಮಗೆ ಜಯವು ಒದಗುವುದು' ಎಂದು ದಕ್ಷಿಣ ಆಫ್ರಿಕದ ಮುಖ್ಯ ಮಂತ್ರಿ ಜನರಲ್ ಸ್ಮಟ್ಸರು ಹೇಳಿದರು.

ಟರ್ಕಿಯಿಂದ ಬ್ರಿಟಿಷರ ಪ್ರಯಾಣ

ಬಾಲ್ಕಿಕ್ ರಾಷ್ಟ್ರಗಳಿಂದ ಬಂದು ಆಶ್ರಯ ಪಡೆದಿದ್ದ ಬ್ರಿಟಿಷರನ್ನು ಬಾಲ್ಕನ್ ರಾಷ್ಟ್ರಗಳಿಂದ ಈಚೆಗೆ ಬಂದಿದ್ದ ನಿರಾಶ್ರಿತ ಜನರನ್ನೂ ಈಗ ಟರ್ಕಿಯಿಂದ ಸಾಗಿಸಲಾಗಿದೆ. ಇವರಲ್ಲಿ ಕೆಲವರು ತಮ್ಮ ಸ್ವೇಚ್ಛೆಯಿಂದಲೇ ಟರ್ಕಿಯನ್ನು ಬಿಟ್ಟು ಹೋಗಿದ್ದಾರೆ. ಬ್ರಿಟಿಷ್ ರಾಯಭಾರಿ ಕಚೇರಿಯು ಅಂತಹ ಆಜ್ಞೆ ಹೊರಡಿಸಿಲ್ಲವಂತೆ.

ಮುಖಚಿತ್ರ:—ಬ್ರಿಟನಿನಲ್ಲಿ ಅಮೇರಿಕನ್ ಎಂಬ್ಯುಲೆನ್ಸ್ ದಳದವರು.



ಓವಲ್ಟಿನು ನಿಮಗೆ ಶಕ್ತಿ ಮತ್ತು ಆರೋಗ್ಯವನ್ನು ಕೊಡುತ್ತದೆ

ನಿಮ್ಮ ಶರೀರವನ್ನು ಬಲಪಡಿಸಿಕೊಂಡರೆ ನೀವು ಶಕ್ತಿಶಾಲಿಗಳಾಗಿ ಸುಖದಿಂದ ಇರಬಹುದು. ಒಳ್ಳೆಯ ಆಹಾರದಿಂದ ಬುದ್ಧಿಯೂ ಬಲಗೊಳ್ಳುತ್ತದೆ.

ದಿನನಿತ್ಯ ಒಂದು ಕಪ್ಪು ಓವಲ್ಟಿನು ತೆಗೆದುಕೊಳ್ಳುವುದರಿಂದ ಶರೀರವು ಬಲಗೊಳ್ಳಲು ಬೇಕಾದ ಸತ್ವಗಳು ಸಿಗುತ್ತವೆ. ಹಾಗಾಗಿಯೇ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಸಾವಿರಾರು ಮನೆಗಳಲ್ಲಿ ಓವಲ್ಟಿನನ್ನೇ ಉಪಯೋಗಿಸುತ್ತಾರೆ. ಅದರಿಂದ ಅವರಿಗೆ ಆರೋಗ್ಯ, ಬಲ ಶಕ್ತಿಗಳು ಕೊಡುತ್ತವೆ. ಕೆಲ ದಿನಗಳ ತನಕ ಓವಲ್ಟಿನ್ನು ಸೇವಿಸಿ ನೋಡಿ ಮತ್ತೆ ತಿಳಿಯುವಿರಿ. ಅನಾರೋಗ್ಯವನ್ನು ತಡೆಯಲು ಓವಲ್ಟಿನ್ನು ಅತ್ಯುತ್ತಮ.

ಓವಲ್ಟಿನು ಶುದ್ಧ ನೈಸರ್ಗಿಕ ಆಹಾರ. ಇದನ್ನು ಬಾರ್ಲಿ ಹಾಲು ಮತ್ತು ಅನೇಕ ಉತ್ತಮ ಆಹಾರ ಸತ್ವಗಳನ್ನು ಸೇರಿಸಿ ತಯಾರಿಸಲಾಗಿದೆ. ಕೃತ್ರಿಮವಾದವುಗಳನ್ನು ಕೊಂಡುಕೊಳ್ಳಬೇಡಿರಿ.

ಓವಲ್ಟಿನ್ನು ಹಿತಕರವಾದ ಆರೋಗ್ಯಕರ ಪಾನೀಯ. ಇದನ್ನು ತಣ್ಣಗಾಗಲಿ ಬಿಸಿಯಾಗಲಿ ತೆಗೆದುಕೊಳ್ಳಬಹುದು. ಇದನ್ನು ತಯಾರಿಸುವುದೂ ಬಹು ಸುಲಭ. ತಯಾರಿಸುವ ರೀತಿಯು ಪ್ರತಿಯೊಂದು ಡಬ್ಬಿಯಲ್ಲಿಯೂ ಬರೆದಿದೆ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.

ಡಿಸ್ಟ್ರಿಬ್ಯೂಟರ್: ಗ್ರೆಹಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್
ಕೈತ್‌ನೆಸ್ ಹೋಲ್, 310–311 ಲಿಂಗಚೆಟ್ಟಿ ಸ್ಟ್ರೀಟ್ ಮದರಾಸು ಹಾಗೂ ಕಲ್ಕತ್ತ, ಬೊಂಬಾಯಿ, ಕರಾಚಿ ಮತ್ತು ರಂಗೂನ್.

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಓವಲ್ಟಿನ್ ಬಿಸ್ಕುಟುಗಳು:

ಓವಲ್ಟಿನ್ ಬಿಸ್ಕುಟುಗಳು, ಹಿತಕರ, ಜೀರ್ಣಕರ ಮತ್ತು ಆರೋಗ್ಯಕರ ಇರುವ ಬಿಸ್ಕುಟುಗಳಲ್ಲೆಲ್ಲಾ ಹೆಸರು ಪಡೆದದ್ದು. ಅವರಲ್ಲಿ ಪ್ರತ್ಯೇಕ ಗುಣವೇ ಇದೆ. 4 ಔನ್ಸಿನ ಮತ್ತು 8 ಔನ್ಸಿನ ಕಟ್ಟುಗಳು ಮತ್ತು 1 ರಾತಲು ಟಿನ್ನುಗಳಲ್ಲಿ ಸಿಕ್ಕುತ್ತವೆ.

OV/49/40

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

26—4—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೫—೪—೧೯೪೧

ಸೆರೆಮನೆಯಲ್ಲಿಯೂ 'ಸ್ಪೀಕರ'ರ ಕೆಲಸವು ಸಾಗುತ್ತಲಿದೆ!

ಪುರುಷೋತ್ತಮದಾಸ ತಂಡನರ ಕಾರ್ಯಕಲಾಪ.

ಶಾಸನ ಸಭಾಧ್ಯಕ್ಷರ ಕುರಿತು ಸಮಸ್ಯಾ ವಿಚಾರ

ಸಂಯುಕ್ತ ಪ್ರಾಂತ ಶಾಸನ ಸಭೆ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ ತಂಡನರು ಸತ್ಯಾಗ್ರಹದ ನಿಮಿತ್ತ ಸ್ಥಾನಬದ್ಧರಾಗಿ ಸೆರೆಮನೆಯಲ್ಲಿರುವರಷ್ಟೆ? ತನ್ನ ಪದವಿಗೆ ರಾಜಿನಾಮೆ ಕೊಡದ ನಿಮಿತ್ತ ಅವರು ಸೆರೆಮನೆಯೊಳಗಿದ್ದೇ ಸರಕಾರದ ಕೆಲಸ ನಡೆಸುತ್ತಿರುವ ಸಮಸ್ಯಾತ್ಮಕ ವಿಷಯವು ಈಗ ಪ್ರಕಟವಾಗಿರುವುದು.

ಅಹಮ್ಮದಾಬಾದಿನಿಂದ ಈ ವಿಷಯವಾಗಿ ಸುದ್ದಿ ಬಂದಿರುವುದು. ಅದರಲ್ಲಿ ತಂಡನರು ಸೆರೆಮನೆಗೆ ತಮ್ಮೊಡನೆ ತಮ್ಮ ಆಫೀಸು ಕೆಲಸದ ಅನೇಕ ಕಾಗದ ಪತ್ರಗಳನ್ನೂ ಒಯ್ದಿರುವರೆಂದು ಹೇಳಲಾಗಿದೆ.

ಅದರ ವಿವರವು ಇಂತಿದೆ —

ತಂಡನರು ಸೆರೆಮನೆಯ ಬಾಗಿಲಿಗೆ ಬಂದಾಗ, ಜೈಲು ಸುಪರಿಂಟೆಂಡೆಂಟರಾದ ಕರ್ನಲ್ ಒಒಕ್ಲೆಯವರು ಅವರನ್ನು ಸ್ವಾಗತಿಸಲು ಬಂದಿದ್ದರು. ಶ್ರೀಗಳಾದ ಲಾಲ ಬಹದ್ದೂರ್ ಶಾಸ್ತ್ರಿ, ಕೇಶವ ದೇವ ಮಾಲವೀಯ, ಆರ್ ಎಸ್ ಬಸು ಮೊದಲಾದವರ ತಂಡನರನ್ನು ಸೆರೆಮನೆಗೆ ಸೇರಿಸುವ ಸಮಯ ಹಾಜರಿದ್ದರು.

ಆದರೆ ತಂಡನರು ಸೆರೆಮನೆಯಲ್ಲಿ ಸ್ಪೀಕರರಾಗಿ ಕೆಲಸಗಳನ್ನು ಮಾಡಬಹುದೆ? ಎಂಬೀ ಪ್ರಶ್ನೆಯನ್ನು ವಿಚಾರಿಸುತ್ತಾ ನೇಶನಲ್ ಹೆರಾಲ್ಡ್ ಪತ್ರಿಕೆಯು ಹೀಗೆಂದು ಬರೆದಿದೆ.

ಅವರು ಬಂಧಿಯಾಗಿರುವುದರಿಂದ ಅಲ್ಲಿ ಸ್ಪೀಕರರಾಗಿ ಕೆಲಸಮಾಡ ಕೂಡದೆಂದು ಸರಕಾರವು ಹೇಳಬಹುದಾಗಿದೆ.

ಆದರೆ ಈ ವಿಷಯದಲ್ಲಿ ಕಾನೂನು ಹೇಗಿದೆಯೆಂಬದನ್ನು ವಿಚಾರಿಸುವುದು ಪ್ರಾಸಂಗಿಕವಾಗಿರುವುದು.

ಶಾಸನ ಸಭೆಯ ಸದಸ್ಯತ್ವವನ್ನು ಕಳಕೊಂಡ ಪಕ್ಷದಲ್ಲಿ ಸ್ಪೀಕರರು ತನ್ನ ಆಫೀಸಿನ ಕೆಲಸವನ್ನು ಮಾಡಲು ಅರ್ಹತೆಯುಳ್ಳವರಾಗುವದಿಲ್ಲ (೧೯೩೫ನೆಯ ಗವರ್ನಮೆಂಟ್ ಓಫ್ ಇಂಡಿಯಾ ಆಕ್ಟಿನ ೬೯ನೆಯ ನಿಯಮ) ಈ ನಿಯಮದಂತೆ ಎರಡು ವರ್ಷಕ್ಕಿಂತ ಕಡಿಮೆಯಿಲ್ಲದಷ್ಟು ಸಮಯ ಕೋರ್ಟಿನ ವಿಚಾರಣೆಯ ಮೂಲಕ ಶಿಕ್ಷೆಗೊಳಗಾದ ಸದಸ್ಯನು ಮಾತ್ರ ಸದಸ್ಯತ್ವದ ಯೋಗ್ಯತೆಯನ್ನು ಕಳಕೊಳ್ಳುತ್ತಾನೆ.

ಆದರೆ ತಂಡನರ ವಿಷಯವು ಹಾಗಾಗುವುದಿಲ್ಲ. ಅವರನ್ನು ಬಂಧಿಸಿ ಸ್ಥಾನಬದ್ಧರಾಗಿ ಮಾತ್ರ ಇಟ್ಟಿದೆ. ಅವರ ವಿಚಾರಣೆ ನಡೆದಿರುವುದಿಲ್ಲ. ಅವರನ್ನು ಎಷ್ಟು ಸಮಯ ಹಾಗೆ ಬಂಧನದಲ್ಲಿಡಲಾಗುವುದೆಂಬ ವಿಷಯವೂ ಕೂಡಾ ಸರಕಾರದ ಇಚ್ಛೆಯನ್ನು ಹೊಂದಿದೆ. ಹೆಚ್ಚೆಂದರೆ ಯುದ್ಧವು ಸಾಗುವ ತನಕ ಇಡಲಾಗುವುದೆಂದು ಹೇಳಬಹುದಾಗಿದೆ. ಯುದ್ಧವು ಎಷ್ಟು ಸಮಯಗಳ ವರೆಗೆ ಸಾಗುವುದೆಂದೇನೂ ಹೇಳಿರುವುದಿಲ್ಲ. ಹೇಗಿದ್ದರೂ ಈ ಶಿಕ್ಷೆಯು ನ್ಯಾಯಸ್ಥಾನದ ವಿಚಾರಣೆಯ ಮೂಲಕ ಇದುದಲ್ಲ.

ನಿಯಮ ಹೀಗಿರ ಪ್ರಕಾರವೂ, ಎಸೆಂಬ್ಲಿಯ ಸ್ಪೀಕರ್ ಅಥವಾ ಡೆಪ್ಯುಟಿ ಸ್ಪೀಕರನಾದವನು, ತಾನು ತನ್ನ ಸದಸ್ಯತ್ವವನ್ನು ಕಳಕೊಂಡ ಕೂಡಲೇ ಆಫೀಸನ್ನು ಬಿಡತಕ್ಕದ್ದೆಂದು. ಇದೆ ಪ್ರಕೃತದ ವಿಚಾರದಲ್ಲಿ ಆ ನಿಯಮವೂ ಅನ್ವಯಿಸುವದಿಲ್ಲ. ಶಾಸನ ಸಭೆಯ ಅವಧಿಯು ಇನ್ನೂ ಮುಗಿದಿಲ್ಲ. ತಂಡನರು ತನ್ನ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿರುವುದೂ ಇಲ್ಲ.

ಹೀಗಾಗಿ ಸೆರೆಮನೆಯೊಳಗಿದ್ದರೂ ತಂಡನರು ಎಸೆಂಬ್ಲಿ ಸ್ಪೀಕರರಾಗಿ ಕೆಲಸ ಮಾಡುವ ಅವಶ್ಯವಿದೆ. ಸರಕಾರವು ಸಂಬಳವನ್ನು ನಿಲ್ಲಿಸಿದ ಮೇಲೆಯೂ ತಂಡನರು ಸದಾ ಸ್ಪೀಕರರಾಗಿ ದುಡಿಯುತ್ತಿದ್ದ ವಿಷಯವು ಸರಕಾರಕ್ಕೇ ಗೊತ್ತಿದೆ. ಅವರ ಕಾರ್ಯ ಬಾಹುಳ್ಯದ ನಿಮಿತ್ತ ಸರಕಾರವು ಸಹಾ ಅವರ ಸಲುವಾಗಿ ಒಂದು ಕಾರ ಗೊತ್ತು ಮಾಡಿತ್ತು. ಮತ್ತು ಎಸೆಂಬ್ಲಿಯ ನೌಕರ ವರ್ಗವು ಅವರಿಗೆ ವಿಧೇಯರಾಗಿ ಅವರ ಅಪ್ಪಣೆಯನ್ನು ಸದಾ ಪಾಲಿಸುತ್ತಿತ್ತು.

ಇದೇ ರೀತಿಯಲ್ಲಿ ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೆಸಿಡೆಂಟರಾದ ಸರ್ ಸೀತಾರಾಮ್ ಇವರೂ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ಸೇವಿಸಿದಾಗಲೆಲ್ಲಾ ಸುಂದರ ರೂಪ

ಆಕೆ ಕನ್ನಾಡಿ ನೋಡಿದ್ದಾಳೆ— ಜತೆ ಸ್ತ್ರೀಯರಷ್ಟೋ ಜನ 'ಲೋಧ್ರ' ಸೇವಿಸುವುದನ್ನು ಕ್ರಮಾಗಿ ಸೇವಿಸಿದವರೆಲ್ಲಾ ಗರ್ಭಾಶಯ ರೋಗಗಳು ಗುಣವಾಗಿವೆ. ಕುಂಬಳಕಾಯಿಯಂತೆ ದೃಢವಾಗಿ ಮಕ್ಕಳನ್ನು ಹಡೆದಿದ್ದಾರೆ. ಅದಕ್ಕಾಗಿಯೇ 'ಲೋಧ್ರ' ಸೇವಿಸುವಾಗಲೆಲ್ಲಾ ಒಂದು ಮೋಹನಾಕಾರವು ಆಕೆಯ ಕಣ್ಣಿಗೆ ಕಟ್ಟಿದಂತಾಗುವುದು.

'ಲೋಧ್ರ' ಸ್ತ್ರೀಯರಿಗೆ ಸಂಪೂರ್ಣ ಆರೋಗ್ಯವನ್ನು ಕೊಡುತ್ತೆ. ಗರ್ಭಾಶಯ ರೋಗಗಳನ್ನು ಹೋಗಲಾಡಿಸಿ ಸತ್ಸಂತಾನವನ್ನು ಕೊಡುತ್ತೆ. ಅದರಿಂದಲೇ ಎಂತಹ ರುಗ್ಣತೆಗಳಿಗೂ ಸ್ತ್ರೀಯರು 'ಲೋಧ್ರ'ವನ್ನು ಸೇವಿಸಬೇಕು.

'ಲೋಧ್ರ' ಎಲ್ಲಾ ಔಷಧದಂಗಡಿಗಳಲ್ಲಿಯೂ ಸಿಕ್ಕುತ್ತೆ

ತಯಾರಿಸುವವರು: ಕೇಸರಿ ಕುಟೀರಂ ಲಿಮಿಟೆಡ್—ಮದರಾಸು

ರಾಜಾವೈದ್ಯ ಬಾಬಾ ಗುಣೆ ಇವರ

"ಸುರಂಗಾ" ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ— ಕೂದಲು ಬೀಳುವಿಕೆ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು ಅಲ್ಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ನಿವಾರಿಸುತ್ತದೆ.

೪ ಔನ್ಸಿನ ಬಾಟ್ಲಿಗೆ ರೂ. ೧—೦—೦.

Agents,

Anglo Oriental Pharmacy, Hampankatta.

Stocks also at.

R. V. Kamath & Co., Car-street Mangalore.

ಸ್ವದೇಶಾಭಿಮಾನಿ

ತಾರೀಕು 25—4—1941

ಯುಗೊಸ್ಲಾವಿಯಾ ಸ್ವಾಹಾ!

ಸ್ವತಂತ್ರ ಯುಗಸ್ಲವಿಯವು ನಿರ್ದಯ ನಾಜೀ ನೀತಿಗೆ ಕ್ರೂರ ಆಹುತಿಯಾಯಿತು! ಬಾಲ್ಕನ್ ರಾಷ್ಟ್ರಗಳನ್ನು ನುಂಗಿ ನೀರ್ಕುಡಿಯಲು ಬಯಸಿದ ಹಿಟ್ಲರನು ರುಮೇನಿಯವನ್ನು ಹಿಡಿದು ಮುಂದೊತ್ತಿ ಬಂದು ಮತ್ತುಳಿದ ಸಣ್ಣ ಸಣ್ಣ ರಾಷ್ಟ್ರಗಳನ್ನು ಭಗ್ನಮಾಡಲು ಬಯಸಿರುವನು. ಗ್ರೀಸ್ ಯುಗಸ್ಲವಿಯಗಳು ಅವನ ಈ ಕ್ರೂರ ಧಾಳಿಗೆ ಇದಿರಾಗಿವೆ! ಅವುಗಳಲ್ಲಿ ಯುಗಸ್ಲವಿಯವು ಸ್ವಾತಂತ್ರ್ಯಕ್ಕಾಗಿ ಬಲವಂತನಾದ ವೈರಿಯೊಡನಾದರೂ ಸಾಹಸ ಧೈರ್ಯಗಳಿಂದ ಕಾದಾಡಿ ಕಡೆಗೆ ಅನ್ಯ ಉಪಾಯವಿಲ್ಲದೆ ಶರಣವಾಯಿತು!

ನಾಜಿಗಳು ಕೇವಲ ಎರಡೇ ತಾಸಿನ ಎಚ್ಚರಿಕೆಯಿತ್ತು ಯುಗಸ್ಲವಿಯದ ಮುಖ್ಯ ಪಟ್ಟಣವಾದ ಬೆಲ್ಗ್ರೇಡಿಗೆ ಮುತ್ತಿಗೆ ಹಾಕಿದರು ಗ್ರೀಸ್ ಯುಗಸ್ಲವಿಯ ಸೈನ್ಯಗಳು ಜತೆಯಾಗಿ ಕಾದಾಡದಂತೆ ಜರ್ಮನ್ ಸೈನ್ಯವ್ಯೂಹವು ಬಿಗಿಯಿತು. ಕ್ರೋಶಿಯನರಿಗೆ ಒಂದು ಬೇರೆ ರಾಜ್ಯವನ್ನೇ ಮಾಡಿಕೊಟ್ಟು ಅವರನ್ನು ಜರ್ಮನರು ಪ್ರತ್ಯೇಕ ಮಾಡಿದರು ಮೊದಲೇ ನಾಜಿಗಳ ತಾಳಕ್ಕೆ ಸರಿಯಾಗಿರುವ ಹಂಗೇರಿ, ರುಮೇನಿಯಾ, ಬಲ್ಗೇರಿಯಗಳು ಒಟ್ಟಿಗೆ ಸುತ್ತಲಿಂದ ಯುಗಸ್ಲವಿಯಕ್ಕೆ ಆಕ್ರಮಣ ಮಾಡಿದವು ಇಟಲಿ ಸೈನ್ಯವೂ ಸಹಾಯಕ್ಕೆ ಬಂತು, ಜರ್ಮನರು ಸುಲಭದಲ್ಲಿಯೇ ರಾಜಧಾನಿ ಬೆಲ್ಗ್ರೇಡನ್ನು ಕೈವಶಪಡಿಸಿಕೊಂಡರು. ಮತ್ತೆ ಜರ್ಮನರು ಎಲ್ಲೆಡೆಗಳಿಂದಲೂ ಸುತ್ತುವರಿದು ಬಂದು ಯುಗಸ್ಲವಿಯವನ್ನು ಮುತ್ತಲು ಯುಗಸ್ಲವಿಯನರು ನಿಸ್ಸಹಾಯಕರಾಗಿ ಶರಣು ಬಂದರು. ಸ್ವಾತಂತ್ರ್ಯವನ್ನು ಜೀವಕ್ಕೆ ಸಮವಾಗಿ ತಿಳಿದು ಕಾದಾಡಿದ ಯುಗಸ್ಲವಿಯವು ಪರತಂತ್ರ್ಯದ ನರಕ ಕುಂಡದಲ್ಲಿ ಬಿದ್ದಿತು!

ಜರ್ಮನ್ ಸೈನ್ಯವನ್ನು ಎದುರಿಸುವುದು ಯುಗಸ್ಲವಿಯದಂತಹ ಸಣ್ಣ ರಾಷ್ಟ್ರಕ್ಕೆ ಬಲು ಸಾಹಸದ ಮಾತಾಗಿತ್ತು. ಅದನ್ನು ತಿಳಿದೂ ಯಾವ ಘನತತ್ವದ ಸಲುವಾಗಿ ಅವರು ಎದುರಿಸಿ ಕಾದಾಡಿದರೋ ಆ ಬಗ್ಗೆ—ಆ ತರದ ಸ್ವಾತಂತ್ರ್ಯ ಅಭಿಮಾನಗಳ ಬಗ್ಗೆ—ಯುಗಸ್ಲವಿಯರನ್ನು ಕೊಂಡಾಡದೆ ಇರಲು ಸಾಧ್ಯವಿಲ್ಲ. "ಸೋತರೂ ಚಿಂತೆಯಿಲ್ಲ; ಸ್ವಾತಂತ್ರ್ಯದ ಸಲುವಾಗಿ ಹೋರಾಡಿದೆವು" ಎಂದು ಅಲ್ಲಿನ ಮುಖ್ಯ ಮಂತ್ರಿಯೇ ತಮ್ಮ ದೇಶದ ಅಂತರ್ಯವನ್ನು ತನ್ನೊಂದು ಹೇಳಿಕೆಯಲ್ಲಿ ಸಾರಿದ್ದಾನೆ.

ಹೀಗೆ ಇನ್ನೆಷ್ಟು ಸ್ವತಂತ್ರ ದುರ್ಬಲ ರಾಷ್ಟ್ರಗಳು ಪಶು ಶಕ್ತಿಯ ಪ್ರಬಲ ರಾಷ್ಟ್ರಗಳ ರಾಕ್ಷಸೋದರಕ್ಕೆ 'ಸ್ವಾಹಾ' ಆಗಲಿದೆಯೋ ದೇವರೇ ಬಲ್ಲ!

ಹಿಟ್ಲರನ ಹಾದಿಯೆತ್ತ

ಕಳೆದೆರಡು ವಾರಗಳ ಕಾದಾಟದಿಂದ ಹಿಟ್ಲರನು ಯೂರೋಪಿನಲ್ಲಿ ತೀವ್ರ ಪರಿಣಾಮಕರವಾದ ಪರಿವರ್ತನೆಯನ್ನು ಉಂಟುಮಾಡಿದ್ದಾನೆ ಎನ್ನಬಹುದು. ಬಾಲ್ಕನಿನಲ್ಲಿ, ಆಫ್ರಿಕದಲ್ಲಿ ಜರ್ಮನ್ ವೇಗವು ಹೆಚ್ಚುತ್ತಿದೆ. ಬ್ರಿಟಿಷ್ ಸೈನ್ಯವು ಹಿಮ್ಮೆಟ್ಟುತ್ತಿದೆ ಯುಗಸ್ಲಾವಿಯವು ಭಗ್ನವಾದ ಮೇಲೆ ಗ್ರೀಸಿನ ಗತಿ ನಿರ್ಣಯವಾದಂತೆಯೇ ಆಗಿದೆ. ಯುದ್ಧ ಪ್ರಾರಂಭ ಕಾಲದಿಂದಲೇ ಜರ್ಮನಿಯ ಎದುರು ನಿಂತ ರಾಷ್ಟ್ರಗಳ ಅವಸ್ಥೆಯು ಈಗಲೂ ಹೀಗೆ ಪುನರಾವರ್ತಿ ಹೊಂದುತ್ತಿದೆ, ಜರ್ಮನರ ಅಮಿತ ಪರಾಕ್ರಮ, ಕ್ರೂರ ರೀತಿಯ ಯುದ್ಧ ಕಾರ್ಯ, ಭೀಷಣ ರಾಜತಂತ್ರಗಳ ಮುಂದೆ ಸಣ್ಣ ರಾಷ್ಟ್ರಗಳು ಮೊದಲಿಂದಲೂ ತಲೆತಗ್ಗಿಸಿಯೇ ಬಂದಿವೆ.

ಇದರಲ್ಲಿ ಹಿಟ್ಲರನ ಉದ್ದೇಶವೇನು ಎಂಬುದು ಒಂದು ಕೂತೂಹಲದ ಪ್ರಶ್ನೆಯಾಗಿದೆ. ಮಧ್ಯ ಪೂರ್ವದ ಹಿಟ್ಲರನ ಈ ಹೋರಾಟವು ಬ್ರಿಟಿಷ್ ಸಾಮ್ರಾಜ್ಯದ ಎದುರು ಕಾದುವ ಪ್ರಬಲ ಕದನದ ಒಂದು ಅಂಗವಾಗಿದೆ ಸಾಗರದಾಚೆಯ ಸ್ಥಳಗಳಿಗೆ ವೈರಿ ರಾಷ್ಟ್ರದ ವ್ಯವಹಾರವು ತಡೆಯಾಗುವಂತೆ ಎಸಗುವ ಪ್ರಯತ್ನವಿದಾಗಿದೆ. ಈ ಕಾರ್ಯಕ್ಕಾಗಿ ಗೆಳೆಯ ಮುಸಲನಿಯನ್ನು ನಿಯೋಜಿಸಿದ್ದು, ಅವನಿಂದ ಅದು ಪೂರೈಸದಿರಲು, ಕಿರಿಗಿ ಹಿಟ್ಲರನೇ ಬಂದು ಆ ಕಾರ್ಯಕ್ಕೆ ನಿಯುಕ್ತನಾಗಿದ್ದಾನೆ ಏಶ್ಯಾ ಮತ್ತು ಆಫ್ರಿಕಗಳ ಕಡೆಗೆ ಬ್ರಿಟನಿಗಿರುವ ವ್ಯವಹಾರವನ್ನು ಕಡಿದು ಹಾಕಲು ಜರ್ಮನಿ ಈಗ ಸಾಧಿಸುತ್ತಿದೆ.

ಹಾಗಾದರೆ ಈ ಉದ್ದೇಶ ಸಾಧನೆಗಾಗಿ ಹಿಟ್ಲರನು ಯಾವ ಹಾದಿ ಹಿಡಿದು ಮುಂದುವರಿಸಲಿರುವನೆಂದು ತಿಳಿವ ಕುತೂಹಲವು ಸಹಜವಾಗಿ ಹುಟ್ಟುತ್ತದೆ. ನಾಜೀ ದೃಷ್ಟಿಯು ಸಹಜವಾಗಿ ಟರ್ಕಿಯ ಕಡೆಗೆ ಹರಿಯಲು ಅವಕಾಶವಿದೆ. ಟರ್ಕಿಯ ನಿರ್ಧಾರವು ಈ ಸಲದ ಮಹಾಯುದ್ಧದಲ್ಲಿ ಬಹಳ ಮಹತ್ವದ ನಿರ್ಧಾರವಾಗುವುದು ಟರ್ಕಿಗಾದರೂ ನಿರ್ಧಾರ ಮಾಡುವದಷ್ಟೇನು ಸುಲಭವಾಗಿಲ್ಲ ವೈರಿಯ ಅಮಿತ ಶಕ್ತಿ ಅದಕ್ಕೆ ಚೆನ್ನಾಗಿ ಗೊತ್ತಿದೆ. ಜರ್ಮನಿಗೆ ಎದುರುನಿಂತ ರಾಷ್ಟ್ರಗಳ ಅವಸ್ಥೆಗಳನ್ನು ಅದು ಕಣ್ಣಾರೆ ಕಂಡಿದೆ; ಇನ್ನೊಂದು ಕಡೆಯಿಂದ ಬ್ರಿಟನಿನ ಆರ್ಥಿಕ ಸಹಾಯ ಪಡೆದು, ಅದರೊಡನೆ ಸಹಕರಿಸಲು ಸಮ್ಮತಿಗೊಟ್ಟಿದೆ ಹೀಗಾಗಿ ಟರ್ಕಿ ತ್ರಿಶಂಕು ಸ್ವರ್ಗದಲ್ಲಿ ನೇತಾಡುವಂತೆ ಇದೆ. ಬ್ರಿಟನಿನ ಪ್ರೋತ್ಸಾಹದಿಂದ ಟರ್ಕಿಯೂ ಹೋರಾಟಕ್ಕಿಳಿಯದಿರದು ಎಂದು ನಾವೀಗ ಅಭಿಪ್ರಾಯ ಪಡಬಹುದಾಗಿದೆ.

ಗಾಂಧಿಜಿ ಹೇಳುತ್ತಾರೆ

ಕಳೆದ ವಾರ ನಾವು ಹಿಂದು ಪತ್ರಿಕೆಯು ಬರೆದ ಅಗ್ರಲೇಖದ ವಿವರವನ್ನು, ಅದರ ಕುರಿತು ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಇತ್ತ ಅಭಿಪ್ರಾಯವನ್ನೂ ಕೊಟ್ಟಿದ್ದೆವು ಭಾರತದ ಇನ್ನೂ ಕೆಲವು ವಿಚಾರವಂತರಲ್ಲಿ, ಮಂದಪಕ್ಷದ ಮುಖಂಡರಲ್ಲಿ, ಪಂಡಿತ ಕುಂಜ್ರು ಪ್ರಭೃತಿಗಳಲ್ಲಿ ಇಂದಿನ ಸತ್ಯಾಗ್ರಹವು ಪರಿಣಾಮಕಾರಿಯಾಗಿಲ್ಲನೆಂಬ ವಿಷಯವಾಗಿ ವಿಚಾರಗಳು ಕಲೆಯುತ್ತಿವೆ. ಟ್ಯಾಮ್ಸ್ ಓಫ್ ಇಂಡಿಯಾ ಪತ್ರಿಕೆಯೂ ಕೂಡಾ ಅಂತಹುದೇ ಒಂದು ಅಗ್ರಲೇಖನವನ್ನು ಬರೆದಿರುವುದು. ಅದಕ್ಕೆ ಉತ್ತರ ರೂಪವಾಗಿ ಗಾಂಧಿಜಿ ಒಂದು ಲೇಖನವನ್ನು ಬರೆದು ಇಂದಿನ ಸತ್ಯಾಗ್ರಹವು ಎಷ್ಟರ ಮಟ್ಟಿಗೆ ನೈತಿಕ ತತ್ವವುಳ್ಳದಾಗಿದೆಯೆಂದೂ, ಅದು ಜಗತ್ತಿನ ಶಾಂತಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆಯೆಂದೂ ವಿವರಿಸಿದ್ದಾರೆ

'ಲೋಕದ ಇಂದಿನ ಈ ಭೀಕರತೆಯ ದುರೂ ಅಹಿಂಸೆಯಲ್ಲಿ ನಮಗಿರುವ ಅಚಲ ವಿಶ್ವಾಸವನ್ನು ಈ ಮೂಲಕ ಸಾರಿ ಹೇಳಿದುದಾಗಿ ಸತ್ಯಾಗ್ರಹದ ತತ್ವವೆಂದು' ಗಾಂಧಿಜಿ ಹೇಳುತ್ತಾರೆ 'ಭಾರತದ ಅಭಿಪ್ರಾಯವನ್ನು ಕೇಳದೆ ಯುದ್ಧ ಪ್ರಯತ್ನದಲ್ಲಿ ಭಾರತವನ್ನೆಳೆದಿರಲು, ಅದರಿಂದ ದೂರವಾಗಿರಬೇಕೆಂಬ ಸಲುವಾಗಿ ಕಾಂಗ್ರೆಸು ಅಧಿಕಾರ ತ್ಯಾಗಮಾಡಬೇಕಾಯಿತು. ಇದೇ ಪರಿಸ್ಥಿತಿಯು ಮುಂದುವರಿಯುತ್ತಿದ್ದರೆ ಅಧಿಕಾರ ಸ್ವೀಕಾರಮಾಡಲು ತತ್ವತಃ ಕಾಂಗ್ರೆಸಿಗೆ ಸಾಧ್ಯವಿಲ್ಲವೆಂಬುದನ್ನು ತಿಳಿಸುತ್ತದೆ. ಹೀಗಾಗಿ ಇಂದಿನ ಸತ್ಯಾಗ್ರಹವು ನ್ಯಾಯುಕ್ತವಾಗಿದ್ದು, ಬ್ರಿಟಿಷರು ಸ್ವತಂತ್ರ ಜನಾಂಗದ ಹೆಸರಲ್ಲಿ ಮಾಡುವ ಈ ತರದ ಯುದ್ಧ ಯತ್ನಕ್ಕೆ ಗಂಭೀರವಾದ ನೈತಿಕ ನಿಷೇಧ ಪ್ರದರ್ಶನವಾಗಿರುವದೆಂದು' ಹೇಳಿರುವರು. ಸತ್ಯಾಗ್ರಹವು ಪರಿಣಾಮಕಾರಿಯಾಗಿಲ್ಲವೆಂಬ ಸೂಚನೆಗೆ ಗಾಂಧಿಜಿ ಒಪ್ಪುವುದಿಲ್ಲ. ಯುದ್ಧಯತ್ನದಲ್ಲಿ ಬಹಳ ವಿಶೇಷವಾದ ಪರಿಣಾಮವು ಈ ಸತ್ಯಾಗ್ರಹದಿಂದ ಆಗಬೇಕೆಂದೂ ಅವರು ಇಚ್ಛಿಸಿಟ್ಟಿಲ್ಲ; ಇಚ್ಛಿಸಿದ ಕಾರ್ಯವು ಈ ಸತ್ಯಾಗ್ರಹದಿಂದ ಫಲಿಸುವುದೆಂದು ಸತ್ಯಾಗ್ರಹದ ಸೇನಾನಿಗೆ ಸಂಪೂರ್ಣ ವಿಶ್ವಾಸವಿದ್ದರೆ ಅದಕ್ಕೆ ಯಾರೂ ಆತಂಕಪಡಿಸುವುದು ಸಾಧ್ಯವಿಲ್ಲ ಎಂದು' ಹೇಳಿರುವರು.

ಹಿಂದುಗಳಿಗಾಗಲಿ, ಮುಸ್ಲಿಮರಿಗಾಗಲಿ, ಭಾರತದ ಪ್ರಜಾ ಕೋಟಿಯಲ್ಲಿ ಯಾವುದೇ ಜಾತಿಯ ಹಿತಕ್ಕೆ ಧಕ್ಕೆಯಾಗಿ ಕಾಂಗ್ರೆಸು ಸ್ವಾತಂತ್ರ್ಯ ಪಡೆಯದಿದ್ದರೂ ಚಿಂತೆಯಿಲ್ಲ ಎಂದು ಅವರ ಅಭಿಪ್ರಾಯ. ಆದರೆ ಇಂದಿನ ಮುಸ್ಲಿಂ ಲೀಗಿನ ಈ ಕೂಗು, ಕಾಂಗ್ರೆಸು ಮಂತ್ರಿಮಂಡಳವನ್ನು ಬಿಟ್ಟಿರವುದರಿಂದ ವಿಶೇಷವಾಗಿದೆಯೆಂಬುದನ್ನು ಅವರು ಒಪ್ಪುವುದಿಲ್ಲ. ಜನರು ರಾಜಕೀಯ ಶಿಕ್ಷಣದಲ್ಲಿ ತರಬೇತಿ ಹೊಂದದ ವಿನಾ ಜಾತೀಯ ಸಂಕೋಚವು ಪೂರ್ಣ ಅಡಗುವುದು ಸಾಧ್ಯವಿಲ್ಲ. ಹೆಚ್ಚಾಗಿ ವಿದ್ಯೆಯಲ್ಲಿ ಹಿಂದುಳಿದ ಮುಸಲ್ಮಾನರನ್ನು ಜಿನ್ನರಂತಹವರು, ಯಾವುದೇ ಇಚ್ಛೆಯಿಂದರಲಿ ಆತ್ಮಘಾತದ ಕಡೆಗೆ ಸಾಗಿಸುತ್ತಿದ್ದರು, ಒಮ್ಮೆ ಜಾಗೃತಿಯನ್ನು ಹೊಂದಿದ ಮುಸ್ಲಿಮರಾದರೂ ತಮ್ಮ ತಪ್ಪು ಹಾದಿಯನ್ನು ತಿಳಿಯದೆ ಇರಲಾರರು ಆದಕಾರಣವೇ ಮಹಾತ್ಮರಾಗಲಿ, ಕಾಂಗ್ರೆಸಾಗಲಿ ಮುಸ್ಲಿಂ ಲೀಗಿನ ಆರ್ಭಟೆಗಾಗಿ ಎಂದೂ ಭಯಕಂಪಿತವಾಗಿಲ್ಲ

ಗಾಂಧಿಜಿ ತನ್ನ ಸತ್ಯಾಗ್ರಹವನ್ನು ಯಶಸ್ವಿಯಾಗಿ ನಡೆಸುವ ಧೈರ್ಯದಲ್ಲಿರುವರು ಕಾಂಗ್ರೆಸು ಅವರ ಮುಂದಾಳುತನವನ್ನು ಒಪ್ಪಿಕೊಂಡು ಶಿಸ್ತಿನಿಂದ ಮುನ್ನಡೆಯುತ್ತದೆ ಇಂತಹ ಸಂದರ್ಭದಲ್ಲಿ ಆಗತಕ್ಕ ಯತ್ನಗಳು ಏನಾದರು ಇದ್ದರೆ ಅದು ಅಧಿಕಾರೀ ವರ್ಗದವರಿಂದ ಮಾತ್ರ, ಭಾರತ ಸಚಿವರು, ವೈಸರಾಯರು ಈ ಕುರಿತು ತೀವ್ರ ಆಲೋಚಿಸತಕ್ಕದ್ದೆ. ಹೀಗಿರುವಾಗ ಭಾರತದ ಕೆಲವು ಪತ್ರಿಕೆಗಳು ಹಾಗೂ ಪುರದ ಪಕ್ಷೀಯರು ಗಾಂಧಿಜಿಯೊಡನೆ ಸತ್ಯಾಗ್ರಹವು ಪರಿಣಾಮಕಾರಿಯಾಗಿಲ್ಲವೆಂದು ಹೇಳುವುದು ಉಪಯುಕ್ತವಾಗಿಲ್ಲವೆಂದು ಹೇಳಬೇಕಾಗಿದೆ ಗಾಂಧಿಜಿಗೆ ಸತ್ಯಾಗ್ರಹ ಹೂಡಲು ಅನುಮತಿ ಕೊಟ್ಟ ಕಾಂಗ್ರೆಸಿನವರು ಈಗ ಯೋಚಿಸತಕ್ಕದ್ದಿದೆ. ಯಾರೊಡನೆ ಸತ್ಯಾಗ್ರಹ ಸಮರ ಹೂಡಲಾಗಿದೆಯೋ ಆ ಸರಕಾರವಾದರೂ ವಿಚಾರಿಸುವುದು ಅವಶ್ಯವಿರುತ್ತದೆ. ದೇಶದ ಮುಖಂಡರು ಹಲವರು ಸೆರೆಮನೆಯಲ್ಲಿ ಇರುವಾಗ ಸರಕಾರವು ಶಾಂತಿ ಸಾಧನೆಗೆ ಮನಸ್ಸು ಕೊಟ್ಟು ಅವರನ್ನು ಬಿಡಿಸಿ ವಿಚಾರವಿನಿಮಯ ಮಾಡಲು ಅವಕಾಶ ಕೊಡಬೇಕಾದುದು ಯುಕ್ತವು. ಬ್ರಿಟಿಷ್ ರಾಜಕಾರಣಪಟುಗಳಲ್ಲಿ ಇಂತಹ ಅಭಿಪ್ರಾಯವು ತಲೆದೋರಿ ಭಾರತದ ರಾಜಕೀಯ ಬಿಕ್ಕಟ್ಟು ಬೇಗನೇ ಪರಿಹಾರವಾಗಲೆಂದು ನಾವು ಸೂಚಿಸುವೆವು.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

ಸತ್ಯಾಗ್ರಹವನ್ನು ಹಿಂತೆಗೆಯುವುದು ಸಾಧ್ಯವಿಲ್ಲ.

ಚಳವಳಿಯಲ್ಲಿ ನೈತಿಕ ತತ್ವವು ಅಡಕವಾಗಿದೆ

ಮೂವತ್ತೈದು ಕೋಟಿಯ ಜನರ ಸ್ವಾತಂತ್ರ್ಯ ಪ್ರೇಮದ ಪ್ರದರ್ಶನವಿದೆ

ಅಹಿಂಸೆಯಲ್ಲಿರುವ ಅಚಲ ವಿಶ್ವಾಸ

(ಮಹಾತ್ಮರ ಲೇಖನ)

ಮಹಾತ್ಮಾ ಗಾಂಧಿಯವರು ಪ್ರಕೃತದ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಈ ಬಗೆಯ ಅವರ ನಿರ್ಣಯವು ಟೈಮ್ಸ್ ಒಫ್ ಇಂಡಿಯಾ ಪತ್ರಿಕೆಯು ಬರೆದೊಂದು ಅಗ್ರಲೇಖಕ್ಕೆ ಉತ್ತರದಲ್ಲಿ ಪ್ರಕಟವಾಗಿದೆ ಪ್ರಕೃತದ ಸತ್ಯಾಗ್ರಹದ ಹಿನ್ನೆಲೆಯಲ್ಲಿರುವ ನೈತಿಕ ತತ್ವದ ಸಲುವಾಗಿ ಅದನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲವೆಂದು ಅವರು ತಮ್ಮ ಉತ್ತರದಲ್ಲಿ ಸ್ಪಷ್ಟಪಡಿಸಿದ್ದಾರೆ

ಅವರ ಲೇಖನದ ವಿವರವು ಹೀಗಿದೆ

ನಾನು ಸತ್ಯಾಗ್ರಹವನ್ನು ಆರಂಭಿಸುವಾಗ ಹೇಳಿದ ಅಭಿಪ್ರಾಯಗಳಿಗೇ ಈಗಲೂ ಅಂಟಿಕೊಂಡಿದ್ದೇನೆ. ನಾನು ಸತ್ಯಾಗ್ರಹವನ್ನು ಆರಂಭಿಸಿದಾಗ, ಮುಂದೆ ಆಗತಕ್ಕ ತೀವ್ರ ಬದಲಾವಣೆಗಳ ವಿಷಯದಲ್ಲಿ ನನಗೆ ವಿಶೇಷ ಕಲ್ಪನೆಗಳೇನೂ ಇರಲಿಲ್ಲ. ಇಂದು ಜಗತ್ತಿನ ಎದುರು ನಿಂತಿರುವ ಭೀಕರ ಸಂಧಿಗ್ಧ ಪರಿಸ್ಥಿತಿಗಳ ಮಧ್ಯದಲ್ಲಾದರೂ, ಇಂದಿನ ಸತ್ಯಾಗ್ರಹವು ಅಹಿಂಸೆಯ ಕುರಿತು ಇರುವ ಅಚಲವಾದ ವಿಶ್ವಾಸವನ್ನು ಅದು ಸಾರಿದೆ.

ಕಾಂಗ್ರೆಸಿನ ವಿಶಿಷ್ಟ ಸ್ಥಾನ

ಈ ಲೋಕದಲ್ಲಿ ಗಣನೆಗೆ ಬಲ್ಲಂಥ ಸಂಯುಕ್ತ ಶಕ್ತಿಗಳಿಂದ ಆಗುವ ಬಲ ಪ್ರದರ್ಶನಗಳಿಗಿಂತ, ಗಣನಾತೀತವಾದ ದೈವಶಕ್ತಿಯು ಹೆಚ್ಚಿನ ಬಲಶಾಲಿಯಾದುದೆಂದು ನಾನು ನಂಬುತ್ತೇನೆ ಆ ಗಣನಾತೀತವಾದ ಶಕ್ತಿಯು ಒಂದಲ್ಲ ಒಂದು ವಿಧದಿಂದ ಮಾನವನಮೂಲಕವಾಗಿಯೇ ಕಾರ್ಯಸಾಧಿಸಬೇಕಾಗಿದೆ ಅದು ಹೇಗೆ ಮತ್ತು ಯಾವಾಗಲೆಂದು ನಾನು ಹೇಳಲಾರೆ ಆ ಕಾರ್ಯಸಾಧನೆಯ ಸಾಧನವು ಕಾಂಗ್ರೆಸೋ ಅಲ್ಲವೋ ಎಂದೂ ನಾನು ಹೇಳಲಾರೆ. ಶಾಂತಿಯ ಯತ್ನಗಳಿಗಾಗಿ ಕೆಲಸಮಾಡುತ್ತಿರುವ ಸಂಸ್ಥೆಯು ಇಂದು, ಎಷ್ಟೇ ನ್ಯೂನತೆಗಳಿದ್ದರೂ ಅದು ಕಾಂಗ್ರೆಸು ಒಂದು ಮಾತ್ರ ಎಂದು ಹೇಳಬಲ್ಲೆ

ಇದು ನನ್ನಅಭಿಪ್ರಾಯವಾಗಿದ್ದು, ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಸತ್ಯಾಗ್ರಹವನ್ನು ಹಿಂತೆಗೆಯಲಾರೆನು. ಸತ್ಯಾಗ್ರಹವನ್ನು ಬಿಟ್ಟರೇ ಮಾಡಲಿಕ್ಕಿಲ್ಲವೇ ಬಹುಮಂದಿ ಮಾಡಲಿ ಇದೇನೂ ವಿಶೇಷವಿದ್ದಲ್ಲ. ಬರುವ ಅನರ್ಥಗಳನ್ನು ಎದುರಿಸಿ ಇದು ಮುಂದುವರಿಯಬೇಕಾಗಿದೆ. ಕಾಂಗ್ರೆಸಿನವರು ಇದನ್ನು ಹಲವು ವಿಧಗಳಿಂದ ಗ್ರಹಿಸಬಹುದು, ಆಗ ಇದು ಸಂಘಟಿತ ಕಾರ್ಯವಾಗಿ ಉಳಿಯಲಾರದ, ಹಾಗೆ ಉಳಿಯುದಿದ್ದರೆ ಪರಿಣಾಮಕಾರಿಯಾಗಿಯೂ ಉಳಿಯಲಾರದು ಹಾಗಾದರೂ ಅಹಿಂಸೆಯ ತತ್ವದಲ್ಲಿ ನಾನು ವಿಶ್ವಾಸ ವಿಟ್ಟುಕೊಳ್ಳಬಲ್ಲೆನಾದರೆ ನನಗೆ ತೃಪ್ತಿಯಿದೆ.

ಈ ಸತ್ಯಾಗ್ರಹವು ಯಾವುದೇ ರೀತಿಯಿಂದಲಾದರೂ, ಜಾತೀಯ ಸ್ವರೂಪದ್ದೆಂದು ಹೇಳುವುದನ್ನು ಮುಸ್ಲಿಂ ವಿರುದ್ಧವಾದುದು ಇಲ್ಲವೇ ಬ್ರಿಟಿಷ್ ವಿರುದ್ಧವಾದುದು ಎಂಬುದನ್ನು ನಾನು ಅಲ್ಲಗಳೆಯಬೇಕಾಗಿದೆ ಈ ಆಂದೋಲನವನ್ನು ಒಂದು ಮಿತಿಯೊಳಗೆ ಇಡುವ ಸಲುವಾಗಿ ಸಾಕಷ್ಟು ಜಾಗರೂಕತೆಯನ್ನು ವಹಿಸಲಾಗಿದೆಯೆಂಬುದು ಇದನ್ನು ವಿಚಾರಿಸಿದವರಿ ತಿಳಿಯದಿರದು

ಸ್ವಾತಂತ್ರ್ಯಾಭಿಲಾಷೆಯ ಪ್ರದರ್ಶನ

ಹಲವು ಸರಕಾರೀ ಜನರು ತಮ್ಮ ತಿಳುವಳಿಕೆಗೆ ಅನುಗುಣವಾಗಿ, ಈ ಆಂದೋಲನವು ಪರಿಣಾಮಕಾರಿಯಾಗಿಲ್ಲವೆಂದು ಹೇಳಿದ್ದಾರೆ ಈ ಲೇಖನ ಬರೆದವರು, (ಟೈಮ್ಸ್ ಓಫ್ ಇಂಡಿಯದ ಅಗ್ರಲೇಖನ) ಅವರ ಕಲ್ಪನೆಗೆ ಅನುಗುಣವಾಗಿ ಹೇಳಿರುತ್ತಾರೆ ಇಬ್ಬರೂ ಸರಿಯೇ ಎನ್ನಬೇಕಾಗಿದೆ ಆದರೆ, ಈ ಆಂದೋಲನವು ಸ್ವತಂತ್ರ ಜನಾಂಗದ ಹೆಸರಲ್ಲಿ ನಡೆವ ಈ ಯುದ್ಧ ಪ್ರಯತ್ನದಲ್ಲಿ ಬಹಳ ವಿಶೇಷವಾದ ಅಭಿಪ್ರಾಯವನ್ನು ಹುಟ್ಟಿಸಬೇಕಾಗಿ ಉದ್ದೇಶಿಸಲ್ಪಟ್ಟಿಲ್ಲ.

ಅಧಿಕಾರ ತ್ಯಾಗದಲ್ಲಿ ನೈತಿಕ ತತ್ವ

'ಮೂಕ ಮಿಲಿಯರಲ್ಲಿ ಸೇರಿದ, ಹಿಂದುಗಳಿಗೂ, ಮುಸ್ಲಿಮರಿಗೂ ಇನ್ನಿತರರಿಗೂ ಅವರ ಹಿತವನ್ನು ಹಾಳುಮಾಡಿಕೊಂಡು ಸ್ವಾತಂತ್ರ್ಯ ಪಡೆಯುವುದಕ್ಕಿಂತ, ಅದು ಸ್ವಾತಂತ್ರ್ಯ ಪಡೆಯದಿರುವುದು ಒಳ್ಳೆಯದೆಂದು ನಾನು ಸೂಚಿಸುವೆನು ಕಾಂಗ್ರೆಸು ಅಧಿಕಾರದಲ್ಲಿದ್ದರೆ, ಪಾಕಿಸ್ತಾನದ ಕೂಗು ಇಂದಿನಷ್ಟು ಜೋರಾಗುತ್ತಿರಲಿಲ್ಲವೆಂಬ ವಿಷಯವನ್ನು ನಾನು ಒಪ್ಪುವುದಿಲ್ಲ ಆದರೆ ಮುಸ್ಲಿಂ ಹಿತ ಅಥವಾ ಇತರ ಯಾವುದೇ ಹಿತದ ವಿಷಯಕ್ಕಿಂತಲೂ, ಕಾಂಗ್ರೆಸು ಅಧಿಕಾರ ತ್ಯಾಗಮಾಡಿದ್ದಲ್ಲಿ ಮುಖ್ಯವಾಗಿ ನೈತಿಕ ತತ್ವವೇ ಅಡಕವಾಗಿತ್ತು ಭಾರತವನ್ನು ಯುದ್ಧದಲ್ಲಿ ಸೇರಿಸಲು, ಅದರ ಅಭಿಪ್ರಾಯವನ್ನು ಕೇಳದೆ ಇದ್ದ ಕಾರಣವಾಗಿ ಅದು ಯುದ್ಧ ಯತ್ನದಿಂದ ದೂರವಿರ ಬೇಕಾದುದೇ ಅಧಿಕಾರ ತ್ಯಾಗದ ಮೂಲಕಾರಣವಾಗಿದೆ ಇದನ್ನು ನಾನು ಸ್ಪಷ್ಟ ರಾಜಕೀಯ ಭಾಷೆಯಲ್ಲಿ ಈ ರೀತಿ ವಿವರಿಸಿದ್ದೇನೆ. ನನ್ನ ಸ್ವಂತ ವಿಷಯವು ಇದಕ್ಕಿಂತಲೂ ಹೆಚ್ಚಿನ ನೈತಿಕತೆಯಿಂದನ್ನೆ ಇದಕ್ಕಿಂತಲೂ ಹೆಚ್ಚಿನ ವಿಶ್ವಭಾವನೆಯಿಂದ ಕೂಡಿದೆಯೆಂದೂ ಅಂತೆಯೇ ಇದರಷ್ಟೇ ಕಾರ್ಯರೂಪಕ್ಕೆ ತರಲು ಸಾಧ್ಯವಾದುದೆಂದೂ ನಾನು ಹೇಳಬಲ್ಲೆ.

ಒಂದು ಕಾಲದಲ್ಲಿ, ಶಸ್ತ್ರಾಸ್ತ್ರಗಳ ಝಣತ್ಕಾರವು ಕೊನೆಗಂಡು, ನಾವು ನಿತ್ಯ ಶಾಂತಿಯಲ್ಲಿ ನೆಲೆನಿಂತಾಗ, ಅದು ಸ್ಥಿರವಾದ ಶಾಂತಿಯಿರಲಿ ಅದು ಅಸ್ಥಿರವಾದುದಿರಲಿ— ಈ ಕಾಂಗ್ರೆಸಿನ ಹೋರಾಟವನ್ನು ಭವಿಷ್ಯತ್ತಿನ ಇತಿಹಾಸವು ಯಾವುದೇ ಮಾನವ ಗೌರವಕ್ಕೆ ನೋವನ್ನೀಸಗದ ನೈತಿಕ ಧರ್ಮ ಯುದ್ಧವೆಂದು ಸಾರುವುದು

ಬ್ರಿಟನು ಭಾರತದ ಹಿತ ಬಯಸುವುದಿದ್ದರೆ

ನಾನು ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ ಕಳೆದ ಅರ್ಧ ಶತಮಾನಗಳಿಂದ ನನ್ನಲ್ಲಿ ಉಳಿದಿದ್ದ ಅಹಿಂಸೆಯ ಅಚಲ ವಿಶ್ವಾಸವನ್ನು, ಜಗತ್ತಿನ ಜೀವನದ ಹಾಗೂ ನನ್ನ ಜೀವನದ ಈ ವಿಶೇಷ ಕಾಲದಲ್ಲಿ ಬಿಟ್ಟು ಬಿಡತಕ್ಕದೆಂದು ಗೆಳೆಯರು ನನ್ನೊಡನೆ ಹೇಳುತ್ತಾರೆಯೋ? ಈ ಒಂದು ವಿಚಾರವು ಎಷ್ಟೇ ಅಸ್ವಾಗತ ಕರವಾಗಿದ್ದರೂ ನಾನದನ್ನು ವಿಚಾರಿಸುವಂತೆ ಬಿಡಿರಿ ಕಾಂಗ್ರೆಸು ಹೋರಾಟವನ್ನು ನಿಲ್ಲಿಸಲಿ ನಿಲ್ಲಿಸದಿರಲಿ ಬ್ರಿಟನು ಭಾರತದ ಹಿತವನ್ನು ಬಯಸುವುದಿದ್ದರೆ ಎಲ್ಲವೂ ತೃಪ್ತಿಕರವಾಗುವುದೆಂದು ನಾನು ತಿಳಿಕೊಂಡಿದ್ದೇನೆ. ಆದರೆ, ದೌರ್ಭಾಗ್ಯದಿಂದ ಬ್ರಿಟಿಷ್ ರಾಜ್ಯಕಾರ್ಯ'ಪಟುಗಳು, ತಪ್ಪುದಾರಿ ಹಿಡಿದಿರುವರು ಹಾಗಾಗಿ ಭಾರತದ ಸ್ವಾತಂತ್ರ್ಯ ಮಾರ್ಗದಲ್ಲಿ ಊಹನೆಯ ತೊಂದರೆಗಳನ್ನು ತಂದು ಹಾಕಿರುವರು ಆ ಒಂದು ಅಧ್ಯಾಯದ ಕುರಿತು ನಾನು ವಿಸ್ತರಿಸಿ ಹೇಳಲು ಇಚ್ಛಿಸುವುದಿಲ್ಲ



ಮೂರು ಗೂಟದ ರೇಜರುಗಳು

ನಸೆಟು ಬ್ಲೇಡುಗಳು

ಮೂರು ಗೂಟದ ರೇಜರುಗಳಿಗೆ ನಸೆಟು ಬ್ಲೇಡುಗಳನ್ನುಪಯೋಗಿಸಿ ನೂತನತೆಯಲ್ಲಿರುವ ಪ್ರತಿ ಬ್ಲೇಡು ಅದರ ಕಡಿಮೆ ಬೆಲೆಗಿಂತ ಮಿಕ್ಕಿದ ನುಣುಪೂ ನಯವೂ ಉತ್ತಮವೂ ಆದ ಕ್ಷೌರವನ್ನುಂಟುಮಾಡುವುದು.

INB.3.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R E P. 109/1941

O S 239/1937

ಎಚ್. ರತ್ನಾಬಾಯಿ ಕೂಡಾ

. . . ವಾದಿರು ಅಮ್ಲ ಜಾರಿ ಅರ್ಜಿದಾರರು,

ಮತ್ತು

1 ಸುಬ್ಬಮ್ಮಾ (ಪೌತಿ) 2 ಉತ್ತುನಾರಾಯಣ ಎಸ್. ರಾಮಕೃಷ್ಣ (ಮೈನರ) 1ನೇ ಪ್ರತಿವಾದಿಳ ಮ ನೈತಾಬಿ ವಾಸ್ತೇಮಯ್ಯನ ಮಕ್ಕಳು . ಪ್ರತಿವಾದಿಯು,

ಕುಂದಾಪುರ ತಾಲೂಕು ಮರ್ವಂತೆ ಗ್ರಾಮದಲ್ಲಿರುವವರು

ಅಮ್ಲಜಾರಿ ಅರ್ಜಿದಾರರು ಹಾಜರಪಡಿಸಿದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾ. 4—6—1941ಕ್ಕೆ ಮೇಲೆ ಕಾಣಿಸಿದ ಕೋರ್ಟು ಮುಂದೆ ಅಮ್ಲಜಾರಿ ಅರ್ಜಿಯನ್ನು ಇಟ್ಟಿರುತ್ತದೆ ಎಂತ ಈ ಮೂಲಕ 2ನೇ ಪ್ರತಿವಾದಿಗೆ ತಿಳಿಸಲಾಗುತ್ತದೆ, ಆ ದಿವಸ ಆತನು ಹಗಲು 11 ಘಂಟೆಗೆ ಹಾಜರಾಗಿ ಆ ಕುರಿತು ಆಕ್ಷೇಪಗಳಿದ್ದರೆ ಜಾಹಿರುಮಾಡಿಕೊಳ್ಳತಕ್ಕದ್ದು.

ತಾ. 17—4—1941

G. Sanjiva Rau, B.A.LL.B.
Pleader for Petitioners.

ರಶ್ಯದ ಗಡಿಯಲ್ಲಿ ಹಿಟ್ಲರನ ಸೈನ್ಯವೇಕೆ?

ಜರ್ಮನಿಯು ರಶ್ಯದ ಮೇಲೆ ಬೀಳುವುದೆ?

ರಾಜಕಾರಣಿಗಳ ಅಭಿಪ್ರಾಯ

ರಶ್ಯ ಜರ್ಮನಿಗಳೊಳಗೆ ಸ್ನೇಹಾಚಾರದ ಒಡಂಬಡಿಕೆಯಾಗಿರುವುದು ನಿಜ. ಪೋಲಾಂಡಿನ ಒಂದಂಶವನ್ನು ಜರ್ಮನಿಯು ಸ್ನೇಹದಿಂದ ರಶ್ಯವು ಕಿತ್ತುಕೊಂಡಿರುವುದೂ ನಿಜ. ಆದರೆ ಯೂರೋಪದಲ್ಲಿ ರಶ್ಯವು ಪ್ರಬಲವಾಗುವುದು ಜರ್ಮನಿಗೆ ಇಷ್ಟವಿಲ್ಲ; ಜರ್ಮನಿಯು ಪ್ರಬಲವಾಗುವುದು ರಶ್ಯಕ್ಕೂ ಇಷ್ಟವಿಲ್ಲ. ಹೀಗೆ ತೋರಿಕೆಗೆ ಈ ಎರಡು ರಾಷ್ಟ್ರಗಳು ಸ್ನೇಹದಿಂದಿರುವಂತೆ ನಟಿಸುತ್ತಿದ್ದರೂ ಒಳಗಿಂದೊಳಗೆ ಇವು ಪರಸ್ಪರ ದ್ವೇಷಿಸುತ್ತಿರುವುವು, ಮತ್ತು ಒಂದರ ಸೋಲಿಗೆ ಇನ್ನೊಂದು ಪ್ರಯತ್ನಿಸುತ್ತಿರುವದು.

ಹಿಟ್ಲರನ ವಿಜಯದ ಸೂಕ್ಷ್ಮ

ಅನಿರೀಕ್ಷಿತವಾಗಿ, ಅಕಸ್ಮಾತ್ತಾಗಿ ಬಂದು ಮೇಲೆ ಬೀಳುವ ವೃತ್ತಿಯಲ್ಲಿ ಸಂಪೂರ್ಣ ಕುಶಲತೆಯನ್ನು ಪಡೆದಿದ್ದುದರಿಂದಲೇ ಹಿಟ್ಲರನು ಆಸ್ಟ್ರೀಯ, ಹಂಗೇರಿ, ಪೋಲಾಂಡ್, ಸ್ವೀಡನ್, ಬೆಲ್ಜಿಯಂ ಮೊದಲಾದ ದೇಶಗಳಲ್ಲಿ ವಿಜಯಿಯಾದನು. ಹಿಟ್ಲರನ ಸಫಲತೆಯ ಸೂಕ್ಷ್ಮವು ಈಗ್ಗ ಎಲ್ಲರಿಗೆ ತಿಳಿದು ಹೋಗಿದೆ. ಮತ್ತು ಅನಿರೀಕ್ಷಿತ, ಅಕಸ್ಮಾತ್ತಾದ ಆಕ್ರಮಣಗಳು ಆಗದ ಹಾಗೆ ಬ್ರಿಟನ ಮೊದಲಾದ ರಾಷ್ಟ್ರಗಳು ಈಗ ಎಲ್ಲಾ ಸಿದ್ಧತೆಗಳನ್ನು ಮಾಡಿ ಬಹು ಎಚ್ಚರಿಕೆಯಿಂದ ಇರುವವು. ಪೂರ್ವತಯಾರಿಯು ಹಿಟ್ಲರನ ಯುದ್ಧ ಕ್ರಮಗಳನ್ನು ತಿಳಿದೇ ಆಗಿರುತ್ತಿರುವುದರಿಂದ, ಮಿತ್ರರಾಜ್ಯಗಳು ಹಿಟ್ಲರನನ್ನು ದೂರದಲ್ಲಿ ತಡೆದು ಹಿಡಿಯಲಿಕ್ಕೆ ಸಮರ್ಥವಾಗಿವೆ. ಮಾತ್ರವಲ್ಲ, ಈ ಸೂಕ್ಷ್ಮವನ್ನು ತಿಳಕೊಂಡು ರಶ್ಯವೂ ಪ್ರಬಲ ರಕ್ಷಣೋಪಾಯಗಳನ್ನು ಮಾಡಿರುವುದು.

ಹಿಟ್ಲರ್ ಸ್ಟಾಲಿನ್ ದ್ವೇಷ

ಹಿಟ್ಲರ್ ಸ್ಟಾಲೀನರೊಳಗೆ ಹಾರ್ದಿಕ ಸ್ನೇಹವು ಇರುತ್ತಿದ್ದುದಾದರೆ ರಶ್ಯವು ರಕ್ಷಣೋಪಾಯಗಳನ್ನು ಕೈಕೊಳ್ಳಬೇಕಾಗಿರಲಿಲ್ಲ. ಆದರೆ ಹಿಟ್ಲರ್ ಸ್ಟಾಲೀನರೊಳಗಿನ ಸ್ನೇಹವು ಅವರವರ ಒಂದು ರಾಜಕೀಯ ಉದ್ದೇಶವನ್ನು ಪೂರ್ತಿ ಮಾಡಲಿಕ್ಕಾಗಿ ಮಾತ್ರ ಇರುವುದು. ಮತ್ತು ಆ ರಾಜಕೀಯ ಉದ್ದೇಶವು ಪೂರ್ತಿಯಾದೊಡನೆ ಇಬ್ಬರೂ ಒಬ್ಬರನ್ನೊಬ್ಬರು ದ್ವೇಷಿಸಲಿಕ್ಕಿದ್ದಾರೆ. ಹಿಟ್ಲರನಿಗೆ ರಶ್ಯನರ ಮೇಲಿರುವ ದ್ವೇಷವು ಅವನು ಮೈಯಿನ್ ಕಾಂಫ ಎಂಬ ತನ್ನ ಗ್ರಂಥವನ್ನು ಬರೆದನೆಂಬುದು ಲೋಕ ವಿಶ್ರುತವಾಗಿದೆ. ಆ ಗ್ರಂಥದಲ್ಲಿ ಅವನು ರಶ್ಯನರಿಗೆ ಯಾರೊಡನೆಯೂ ಗೌರವಯುತವಾದ ಒಡಂಬಡಿಕೆ ಮಾಡಿಕೊಳ್ಳುವ ಇಚ್ಛೆಯಿಲ್ಲ; ಒಂದು ಪಕ್ಷ ಅಂಥ ಒಡಂಬಡಿಕೆಯಾದರೂ ಅವರು ಅದನ್ನು ಅಕ್ಷರಶಃ ಪಾಲಿಸಲಾರರು ಎಂದಿದ್ದಾನೆ. ಹಿಟ್ಲರನಿಗೆ ರಶ್ಯನರ ಮೇಲೆ ವಿಶ್ವಾಸವಾಗಲೀ ಶ್ರದ್ಧೆಯಾಗಲೀ ಇರುವುದಿಲ್ಲ ಎಂಬುದು ಸ್ಪಷ್ಟ. ಹಾಗೆ ರಶ್ಯನರೂ ಜರ್ಮನರನ್ನು ಮೆಚ್ಚುವುದಿಲ್ಲ. ಅವರು ಶತಮಾನಗಳಿಂದ ಇವರ ಶತ್ರುಗಳಾಗಿದ್ದಾರೆ.

ಘಟನೆಗಳ ವಿಚಾರ

ಆದರೂ ಹಿಟ್ಲರನಿಗೆ ರಶ್ಯವನ್ನು ಆಕ್ರಮಿಸಿ ಅಲ್ಲಿಯೂ ತನ್ನ ಸಾಮ್ರಾಜ್ಯ ವಿಸ್ತಾರ ಮಾಡಬೇಕೆಂಬ ದಾಹವಿದೆ. ಸಮಯ ಸಾಧಿಸಿ ಅದರ ಮೇಲೆ ಧಾಳಿಮಾಡಬೇಕೆಂದೇ, ಬೇರೆ ಕಡೆ ಭಯಂಕರ ಯುದ್ಧ ಪ್ರಸಂಗದಲ್ಲಿ ಬಿದ್ದಿರುತ್ತಾನಾದರೂ ಜರ್ಮನಿಯು ೭೫ ಸಾವಿರ ಸೇನಾದಳಗಳನ್ನು ರಶ್ಯದ ಎಲ್ಲೆಡೆಗಳಲ್ಲಿ ಇಟ್ಟಿದ್ದಾನೆ. ಇವು ಯಾವಾಗ ರಶ್ಯದ ಮೇಲೆ ಬೀಳಬಹುದೆಂದು ಹೇಳಲಿಕ್ಕಾಗುವುದಿಲ್ಲ. ಸಮಯವು ಅನುಕೂಲವಾಗಿ ಒದಗಿ ಬಂದಿತೆಂದರೆ, ರಶ್ಯವನ್ನು ಆಕ್ರಮಿಸಲಿಕ್ಕೆ ಹಿಟ್ಲರನು ಒಂದು ನಿಮಿಷವಾದರೂ ಹಿಂದೆ ಮುಂದೆ ನೋಡಲಾರನೆಂಬುದಷ್ಟು ಮಾತ್ರ ಸುಸ್ಪಷ್ಟವಾಗಿದೆ. ಸ್ಟಾಲೀನನು ಕೂಡ ಹಿಟ್ಲರನ ಮುಖಭಂಗವಾಡಲಿಕ್ಕೆ ಬೇಕಾದಷ್ಟು ಪ್ರಯತ್ನಗಳನ್ನು ಮಾಡಿಯೇ ಇದ್ದಾನೆ. ಸ್ವೀಡನ್, ಹೊಲ್ಲಾಂಡ್ ಬೆಲ್ಜಿಯಂ, ಫ್ರಾನ್ಸಿನ ಪತನಗಳು ಒಂದರ ಮೇಲೊಂದರಂತೆ ಆದುವಾದರೂ, ಬ್ರಿಟನಿನ ಮೇಲೆ ಧಾಳಿ ಮಾಡಲಿಕ್ಕೆ ಹಿಟ್ಲರನಿಗೆ ಅಸಾಧ್ಯವಾಗಲು ರಶ್ಯವು ಹಿಂದಿನಿಂದ ಸೂತ್ರಚಾಲನೆ ಮಾಡಿದ್ದೇ ಕಾರಣವಾಗಿದೆ. ಮತ್ತೆ ಗ್ರೀಸಿನಲ್ಲಿ ಇಟಲಿಯು ಸೋಲಲಿಕ್ಕೂ, ಟರ್ಕಿಯು ಜರ್ಮನಿಯ ಪಕ್ಷ ಸೇರದೆ ತಟಸ್ಥವಾಗಿರಲಿಕ್ಕೂ, ಯುಗೋಸ್ಲೇವಿಯವು ಜರ್ಮನಿಯೊಡನೆ ಮಾಡಿಕೊಂಡ ತ್ರಿರಾಷ್ಟ್ರ ಒಪ್ಪಂದವನ್ನು ಮುರಿಯಲಿಕ್ಕೂ ರಶ್ಯವೇ ಕಾರಣ. ಹಿಟ್ಲರನಿಗೆ ಬಾಲ್ಕನಿನಲ್ಲಿ ಪರಾಭವವಾಗಲಿಕ್ಕೂ ರಶ್ಯವೇ ಕಾರಣ. ಹೀಗೆ ಹಿಟ್ಲರ ಸ್ಟಾಲೀನರೊಳಗಿನ ದ್ವೇಷವು ಬೂದಿ ಮುಚ್ಚಿದಂತಿದ್ದುದು ಈಗ ಹೊಗೆಯಾಡಲಾರಂಭಿಸಿರುವುದು.

ಜರ್ಮನಿಯಲ್ಲಿ ಕ್ರಾಂತಿ

ಯುದ್ಧವು ಹೀಗೆಯೇ ನಡೆದರೆ ಜರ್ಮನಿಯಲ್ಲಿ ಕ್ರಾಂತಿಯಾಗುವುದು. ಈ ಕ್ರಾಂತಿಯು ಹಿಂದೆ ರಶ್ಯದ ಕೈವಾಡವಿರುವುದು. ಇದನ್ನು ಹಿಟ್ಲರನು ತಿಳಿದಿದ್ದಾನೆ. ಮತ್ತು ಸ್ಟಾಲೀನನ ಆಟವು ಜರ್ಮನಿಯಲ್ಲಿ ನಡೆಯದಂತೆ ತಡೆಯುವುದಕ್ಕೋಸ್ಕರ ಉಕ್ರೇನನ್ನು ಮುತ್ತುವ ಹಂಚಿಕೆ ಮಾಡಿದ್ದಾನೆ. ಉಕ್ರೇನು ಸಂಪತ್ಸಮೃದ್ಧವಾದ ಪ್ರದೇಶ. ಅದು ಒಂದು ಹಿಟ್ಲರನಿಗೆ ದೊರಕಿದರೆ, ಹಿಟ್ಲರ ಸ್ಟಾಲೀನರೊಳಗಿನ ಸ್ನೇಹಾಚಾರದ ಒಡಂಬಡಿಕೆಯು ಮುರಿದು ಹೋದರೂ ಚಿಂತಿಲ್ಲವೆಂದು ಅವನು ಗ್ರಹಿಸಿದ್ದಾನೆ. ಹೀಗಾಗಿ ರಶ್ಯವು ಉಕ್ರೇನಿನ ಗಡಿಯಲ್ಲಿ ಅತ್ಯಾಧುನಿಕ ಶಸ್ತ್ರೋಪಕರಣಗಳಿಂದ ಸುಸಜ್ಜಿತವಾದ ಮಹಾಸೇನೆಯನ್ನು ಇಟ್ಟಿರುವನು. ಹೀಗೆ ಜರ್ಮನಿ ರಶ್ಯಾ ಗಡಿಗಳ ಎರಡು ಕಡೆಗಳಲ್ಲಿ ಹಿಟ್ಲರ ಸ್ಟಾಲೀನರು ಇಟ್ಟಿರುವ ಎರಡು ಸೇನೆಗಳೊಳಗೆ ಸಂಘರ್ಷವಾಗದೆ ಇರಬಹುದೆ? ಜರ್ಮನ ರಶ್ಯಗಳೊಳಗೆ ಯುದ್ಧವಾಗುವ ಸಂಭವವು ಈಗ ಮೊದಲಿಗಿಂತಲೂ ಬಹಳ ಹೆಚ್ಚಿಗಿದೆ.

THE BANK OF MANGALORE LIMITED.

HEAD OFFICE MANGALORE. ESTD. 1901.

Branches:—MOODABIDRI & PADUBIDRI.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	...	...	5½ per cent
„ 1 „	...	...	4½ per cent
„ 6months	...	...	4 per cent
„ 3 „	...	...	3½ per cent

Interest payable Quarterly

SAVINGS BANK DEPOSITS:

On daily balances on balances over Rs. 5 in multiples of Rs. 5 @ 3%.

All kinds of banking business transacted.

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಚುನಾವಣೆ ಅಥವಾ ಇಲೆಕ್ಷನ್

ಇದು ಆರದು ನಡೆದ ಸಂಗತಿ. ಅಂದು ಇಂದಲ್ಲ, ಆಗೋಸ್ತು ತಿಂಗಳ ೪ನೇ ತಾರೀಕಿನ ದಿನ ೧೯೩೫ನೇ ಇಸವಿ ಎಲ್ಲೆಲ್ಲಿಯೂ 'ಇಲೆಕ್ಷನಿ'ನ ಗಲಾಟೆ. ಡಿಸ್ಟ್ರಿಕ್ಟ್ ಬೋರ್ಡಿಗೋ ಕೌನ್ಸಿಲಿಗೋ ಎಸೆಂಬ್ಲಿಗೋ ಚುನಾವಣೆಯೆಂದೆಣಿಸಿ ಆ ಚುನಾವಣೆಗಾದರೆ ಕಾಂಗ್ರೆಸು ಉಮೇದ್ವಾರರು ಇರುವರಷ್ಟೆ. ಅವರ ಮಾಡುದ್ದ ಪ್ರಕಟನೆ ಪತ್ರಗಳು ದಾರಿಯುದ್ದಕ್ಕೂ ಪ್ರತಿ ಕಾಫಿ ಹೊಟೇಲುಗಳಲ್ಲಿಯೂ ಬಿದ್ದು ಹಾರಾಡಬೇಕಷ್ಟೆ ಆಗ ವಿಟಾಯಿಕಟ್ಟಲು ಬೇರೆ ಕಾಗದವನ್ನು ಕೊಂಡುಕೊಳ್ಳುವ ಅವಶ್ಯಕತೆಯೇ ಇಲ್ಲ. ನಾನು ಹೇಳುವುದು ಅಂತಹ 'ಇಲೆಕ್ಷನಿ'ನ ವಿಷಯವಲ್ಲ.

ಅಂದು, ನಮ್ಮ ವಿದ್ಯಾರ್ಥಿವೃಂದದ ಚು[ನಾವಣೆ]. ನಾನೂ ಒಬ್ಬ ಉಮೇದ್ವಾರ. ಕಾರ್ಯದರ್ಶಿ ಪದವಿಗೆ. ನನಗೊಬ್ಬ ಎದುರು ಉಮೇದ್ವಾರ. 'ಕಾಂಗ್ರೆಸು ಜಸ್ಟಿಸ್'ಗಳ ಗಲಾಟೆಯಂತೆ ನಮ್ಮ ಗಲಾಟೆ. ನನಗೆ ದೊರಕೀತೆಂದು ಭರವಸೆ ನನಗಿದ್ದಿತು ಅವನಿಗೂ ಹಾಗೆಯೇ.

ಮುಂಚಿನ ರಾತ್ರಿ ನಿದ್ರೆ ಹಚ್ಚದು ನನಗೆ. ರಾತ್ರೆ ಇಡೀ 'ಇಲೆಕ್ಷನಿನ' ವಿಷಯವೇ ತಿರುಗುತ್ತಿತ್ತು ನನ್ನ ತಲೆಯಲ್ಲಿ. ಅರ್ಧ ತಾಸಿಗೊಮ್ಮೆ ತಲೆ ಎತ್ತಿ ಗಂಟೆ ನೋಡುತಿದ್ದೆ. ದೀಪವು ರಿಯುತ್ತಲೇ ಇತ್ತು. ಹಾಗು ಹೀಗು ಗಂಟೆ ೬ ಹೊಡೆಯಿತು. ತಟ್ಟನೆ ಹಾಸಿಗೆಯಿಂದ ಎದ್ದೆ. ನಿಲುಗನ್ನಡಿಯಲ್ಲಿ ನನ್ನ ಮೊಗವನ್ನೇ ನೋಡಿದೆ. ಬೆಳಗೆದ್ದು ತನ್ನ ಮೊಗವನ್ನೇ ನೋಡಿದರೆ ಶುಭವಂತೆ. ಹೊರಗೆ ಒಂದು ತೆಂಗಿನ ಮರವನ್ನು ನೋಡಿದೆನು, ಅದು ಹಾಗೆಯೇ ಶುಭವಂತೆ.

ಅಷ್ಟರಲ್ಲಿ ಸುಬ್ಬಿಯು ಹೊರಗೆ ಬಂದಳು. ನನ್ನನ್ನು ಕಂಡು ನಕ್ಕಳು. ನನಗೆ ಆನಂದವಾಯಿತು. ಬೆಳಿಗ್ಗೆ ಎದ್ದು ಸುಬ್ಬಿಯ ಮುಖವನ್ನು ಕಂಡೆ ಎಷ್ಟಾದರೂ ನನ್ನ ಸುಬ್ಬಿಯಲ್ಲಿವೇ ಶುಭಲಕ್ಷಣವೇ ಅಂದುಕೊಂಡೆ.

ಅವಳು 'ಈ ದಿನ ಇಷ್ಟು ಮುಂಜಾನೆ ಏಳಲು ಯಾವ ಕಡೆಯಿಂದ ಸೂರ್ಯ ಉದಯಿಸಿದನಪ್ಪಾ'' ಎಂದು ಆಕಾಶವನ್ನು ನೋಡಿ ಮುಗುಳುನಗೆ ನಕ್ಕಳು.

ಈ ದಿನ 'ಇಲೆಕ್ಷನ್' ಅಲ್ಲವೇ? ಸುಬ್ಬಿ, ನಿನ್ನ ಮೊಗವನ್ನು ನೋಡಿದೆ. ಏನಾದರೂ ಆಗಬೇಕು ಮತ್ತೆ . . .? ಎಂದು ಸ್ನಾನ ಮಾಡಲು ಕೆರೆಗೆ ಹೋದೆ. ಸ್ನಾನವಮಾಡಿ ಬಂದು ಗಂಜಿ ಊಟ ತೀರಿಸಿ ಖಾದಿ ಭಂಡಾರಕ್ಕೆ ಬಂದೆ. ನನಗೆ ಪೈಜಾಮುವನ್ನು ಹೊಲಿಸಬೇಕೆಂಬ ಆಸೆ. ಅಂತೆಯೇ ಬಟ್ಟೆ ತೆಗೆದು ಹೊಲಿಯಲು ಕೊಟ್ಟು 'ಸಾಯಂಕಾಲ ಇಲೆಕ್ಷನಿಗೆ ಹೋಗುವಾಗ ಸಿಗಬೇಕು' ಅಂದೆ.

ಅನಂತರ ಹಿಂತಿರುಗಿ ಕೃಷ್ಣಾ ರೆಸ್ಟೋರೆಂಟಿಗಾಗಿ ಬಂದೆ! ಬರುವಾಗ ಕಿಟ್ಟು, ಮೊದಲಾದವರು ನಿಂತಿದ್ದರು. 'ನಮಸ್ಕಾರ, ಕಾರ್ಯದರ್ಶಿಗಳೆ Congratulations in anticipation' ಅಂದರು.

'ನಮಸ್ಕಾರ ಬಹಳ ಉಪಕಾರ ಅಂದೆ. ಈಗ ಕಾಫಿ ಕೊಡಬೇಕು, ನಮ್ಮ ಮನಸ್ಸು ತೃಪ್ತಿ ಮಾಡಿದರೆ ಓಟು ಕೊಟ್ಟೇವು ಅಂದರು. ಅಂತೂ ಇಂತು ಎಳೆಂಟಾಣೆಗೆ ಗೀಟಿಟ್ಟರು

ಒಂದು ಹೇಳುವುದಕ್ಕೆ ಮರೆತಿದ್ದೆ ನಾನೇ Provisional ಕಾರ್ಯದರ್ಶಿ ಆಗಿದ್ದೆ ಅದುದರಿಂದ ಅಂದಿನ ಎಲ್ಲಾ ಕೆಲಸದ ಭಾರವು ನನ್ನ ತಲೆಯ ಮೇಲೆ ಬಿದ್ದಿತು. ಓಟಿನ ಕಾಗದವನ್ನು ತಯಾರಿಸಲು ಕಾಗದವನ್ನು ಕೊಂಡುಕೊಂಡು ಮನೆಗೆ ಬಂದೆ.

ಹೆಬ್ಬಾಗಿಲಲ್ಲಿ ನಿಂತಿದ್ದಳು ನನ್ನ ಸುಬ್ಬಿ. ನಮಸ್ಕಾರ ಸೆಕ್ರೆಟರಿಯವರಿಗ ಅಂದಳು.

'ನಮಸ್ಕಾರ you Giddy Girl' ಅಂದು ಕಿವಿಯನ್ನು ಮೆಲ್ಲನೆ ಹಿಸುಕಿದೆ. ಜತೆಯಲ್ಲಿ ನಮ್ಮ ರೂಮಿಗೆ ಹೋದೆವು ಓಟಿನ ಕಾಗದವನ್ನು ತಯಾರಿಸಲು ಸುಬ್ಬಿಯು ನನಗೆ ಸಹಾಯ ಮಾಡಿದಳು.

ಹಾಗೂ ಹೀಗೂ ಗಂಟೆ ಮೂರು ಹೊಡೆಯಿತು. ಇನ್ನು ಎರಡು ಗಂಟೆ ಉಳಿದಿತ್ತು. 'ಇಲೆಕ್ಷನಿಗೆ' ನಾನು ಕೈಯಲ್ಲಿ 'ಫ್ಲ್ಯಾಗ್' ಹಿಡಿದುಕೊಂಡೇ ಹೊರಟೆ. ಹೊರಡುವ ಮೊದಲು ನಮ್ಮ ಮನೆಯ ದೈವವಾದ 'ಪುಲಂದಾಯ'ನ ನಾಮ ಸ್ಮರಿಸಿಕೊಂಡೆ. ಇದೇ ಮೊದಲನೆಯ ಸಾರಿ, ಅನಂತರ 'ಶುಕ್ಲಾಂಬರಧರಂ ವಿಷ್ಣು .. ಸರ್ವ ವಿಘ್ನೋಪಶಾಂತಯೇ' ಎಂಬ ಶ್ಲೋಕವನ್ನು ಹೇಳಿ ಹೊರಟು ಅಂಗಳವನ್ನು ಇಳಿಯಲು, ಸುಬ್ಬಿ ಓಡಿ ಬಂದು ಒಳಗಿನಿಂದ, 'I wish you Success' ಅಂದಳು. ನನಗೆ ಸಂತೋಷವಾಯಿತು. ಸುಬ್ಬಿಯು ಎದುರು ಸಿಕ್ಕಿದಳು ಶುಭಲಕ್ಷಣ.

Thank you ಅಂದು ಅವಳ ಮೊಗವನ್ನೊಮ್ಮೆ ಕಣ್ಣಗಲಿಸಿ ನೋಡಿದೆನು.

ಅನಂತರ ಬೀದಿಗೆ ಇಳಿದೆ, ದೂರದಲ್ಲಿ ಒಂದು ಕೆಂಪು ಸೀರೆ ಉಟ್ಟುಕೊಂಡ ಹೆಂಗಸು ಬರುತಿತ್ತು ವಿಧವೆಯೋ? ಎಂದು ತಲೆ ತಿರುಗಿತು ನನಗೆ ಕಾಲು ಬಾರದು ಮುಂದೆ ಸಾಗಲು. ಆದರೆ ಅದು ವಿಧವೆಯಲ್ಲ. ಒಂದು ಬಾಯಮ್ಮ ತಲೆಗೆ ಸೆರಗನ್ನು ಹಾಕಿಕೊಂಡಿದ್ದಳು, ಬಿಸಿಲಿನ ತಾಪ ತಾಳಲಾರದೆ. ಮುಂದುವರಿದೆ, ಒಂದು ಸುಧ್ಯದ ಗಡಿಗೆಯು ಎದುರು ಸಿಕ್ಕಿತು ಶುಭಲಕ್ಷಣ ಆನಂದಸಾಗರದಲ್ಲಿ ತೇಲಾಡಿದೆನು. ದಾರಿಯುದ್ದಕ್ಕೂ ಸ್ನೇಹಿತರು ಸಿಕ್ಕಿದರು. 'I wish you success' ಎಂದರು ಎಲ್ಲರೂ

'Thank you' 'Thank you' ಅಂದೆ.

ಪೈಜಾಮನ್ನು ಧರಿಸಿಕೊಂಡು ರೆಸ್ಟೋರೆಂಟಿಗೆ ಬಂದೆ. ಅಲ್ಲಿ ನಿಂತಿದ್ದರು ನಮ್ಮ ವೃಂದದ ಮೆಂಬರುಗಳು. ಸೆಕ್ರೆಟರಿಯವರಿಗೆ, ನಮಸ್ಕಾರ ಅಂದರು ಎಲ್ಲರೂ ನಮಸ್ಕಾರ ಅಂದು ಅವರನ್ನು ಕರೆದುಕೊಂಡು ಬೀಸೆಂಟ್ 'ಗರ್ಲ್ಸ್ ಸ್ಕೂಲಿಗೆ ಬಂದೆನು. ಅಲ್ಲಿ ನಮ್ಮ ಇಲೆಕ್ಷನ್ ಅಡ್ಡ Polling Station

ಗಂಟೆ ೫ ಬಾರಿಸಿತು. ನಾನು ಎದ್ದು ನಾವು ಈ ... ಈ ... ದಿನದ ಅಧ್ಯಕ್ಷಸ್ಥಾನವನ್ನು ದೂಮುಕೇತುವವರು ವಹಿಸಬೇಕಾಗಿ ಕೇಳಿಕೊಳ್ಳುತ್ತೇನೆ ಎಂದೆ

ಅನಂತರ ಅಂದಿನ ಕಾರ್ಯಕಲಾಪಗಳು ಒಂದೊಂದಾಗಿ ಸಾಗಿದವು. ಪ್ರಾರಂಭವಾಯಿತು ಇಲೆಕ್ಷನಿನ ಗಲಾಟೆ.

'ನಿಮ್ಮ ಓಟನ್ನು ಬಾಬುಗೇನೇ ಕೊಡಿರಿ' ಎಂದು ಕೇಳಿಸಿತು ಒಂದು ಕಡೆಯಿಂದ 'ನಿಮ್ಮ ಓಟನ್ನು ಕೋಟಿಗೆನೇ ಕೊಡಿರಿ' ಎಂದು ಇನ್ನೊಂದೆಡೆಯಿಂದ.

ಓಟು ಕೊಡುವ ಸಮಾರಂಭವು ಅರ್ಧ ತಾಸಿನ ತನಕ ನಡೆಯಿತು ನನ್ನ ಮೈಯೆಲ್ಲಾ ಬೆವರಿತ್ತು. ಇಷ್ಟರಲ್ಲಿ ಓಟುಗಳ ಎಣಿಕೆಯಾಯಿತು. ಅಧ್ಯಕ್ಷರು ಎದ್ದು ನಿಂತರು. ನಾನು ಅಲ್ಲಿ ಕುಳಿತುಬಿಟ್ಟೆ.

'ಈ ದಿನದ ಚುನಾವಣೆಯಲ್ಲಿ ಶ್ರೀಗಳಾದ ಕೋಟಿರಾಯರಿಗೆನೇ ಒಂದು ಓಟು ಹೆಚ್ಚು ದೊರೆತಿದೆ' ಅಂದರು.

ಎಲ್ಲೆಲ್ಲೂ ಕೈಚಪ್ಪಾಳೆಗಳು ಕೇಳಿಸಿದವು. ನನ್ನ ತಲೆ ತಿರುಗಿತು. ಕಣ್ಣು ಕಾಣದು. ಏನು ಇಷ್ಟರ ತನಕ ಶುಭಶಕುನ ಈಗ ಅಪಶಕುನ. ಛೆ! ಆಗದು ಏನು ಇದು ಕನಸೇ? ಎಂದು ಎದ್ದು ನಿಂತು ಕಣ್ಣನ್ನು ತಿಕ್ಕಿಕೊಂಡೆನು 'ಇಲ್ಲ ಇದು ಕನಸಾಗಿರಲಿಲ್ಲ ನಿಜಸ್ಥಿತಿ ಏನು ಹೇಳಲೂ ಬಾಯಿಬಾರದು. ಕಣ್ಣು ಕಾಣದು

ಅಷ್ಟರಲ್ಲಿ Sympathies Bachu ಎಂದು ಕೇಳಿಸಿತು Congratulationsನ ಬದಲಿಗೆ

ಧೈರ್ಯ ತಾಳಿಕೊಂಡೆ Failures are our stepping stones to Success ಎಂದು ಕೇಳಿದ್ದೆ ಅಂತೆಯೇ ನೆಟ್ಟಗೆ ಹೋಗಿ Congrtulation Koti ಅಂದು ಅವನಿಗೆ ಹಸ್ತಲಾಘವನ್ನು ಕೊಟ್ಟೆ. Sympathies better luck next time ಅಂದನವನು.

Oh! Thank you' ಅಂದೆ

ಸಭೆಯು ಮುಕ್ತಾಯವಾಯಿತು. ಎಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸಿದೆನು. ಎಲ್ಲರೂ ಕೋಟಿಯನ್ನು ಹಿಂಬಾಲಿಸಿಕೊಂಡು ಹೋದರು, ಯಾಕೋ ಕಾಣೆ! ಹಿಂದುಳಿದವರು ಒಬ್ಬಿಬ್ಬರೇ ಚಿಂತಿಲ್ಲ ಬಾಚು ವ್ಯಸನಪಡಬೇಡ ಅಂದರು.

ನಾನು ಅಂತಹವನೇ ಅಲ್ಲ ಅಂದು ಸರಿ ಕತ್ತಲಾಯಿತು, ಎಲ್ಲರೂ ಮನೆ ಹೊರಟುಹೋದರು. ನನಗೆ ಹೋಗಲು ಕಾಲು ಬಾರದು. ಸುಬ್ಬಿಗೆ ಹೇಗೆ ಮುಖತೋರಿಸಲಿ ಎಂದು

ಅಂತೂ ಇಂತೂ ಮೆಲ್ಲನೆ ಮನೆಕಡೆಗೆ ಸರಿದೆ. ದೈವವಶಾತ್ ಸುಬ್ಬಿ ಒಳಗೆ ಕೆಲಸದಲ್ಲಿದ್ದಳು. ನಾನು ಬೆಕ್ಕಿನಂತೆ ರೂಮಿಗೆ ಹೋಗಿ ದೀಪ ಹಚ್ಚಿಸಿ ಮೇಜಿನ ಮೇಲೆ ತಲೆಯನ್ನು ಇಟ್ಟು ಚಿಂತಿಸುತಿದ್ದೆ.

ಅಷ್ಟರಲ್ಲಿ ಬಾಗಿಲು ತೆರೆದ ಸದ್ದಾಯಿತು. ತಲೆ ಎತ್ತಲು ನಾಚಿಗೆ ಬಿಡದು. ನನ್ನ ಹತ್ತಿರ ಯಾರೋ ಬಂದು ನಿಂತಂತಾಯಿತು. ಸ್ವಲ್ಪ ಹೊತ್ತು ನಿಶ್ಶಬ್ದ. ಅನಂತರ ನನ್ನ ತಲೆ ಸವರಿದಂತಾಯಿತು. ಮತ್ತಾರು ನನ್ನ ಸುಬ್ಬಿ. ನಾನು ಕುಳಿತಿದ್ದ ಕುರ್ಚಿಯ ಕೈಯಲ್ಲಿ ಕುಳಿತು ತಲೆಯನ್ನು ಸವರುತ್ತಾ ಚಿಂತಿಲ್ಲ 'ಪ್ರಿಯಾ ಬೇಸರಿಸಬೇಡಿ ಅಂದಳು ಸುಬ್ಬಿ

'ಇಲ್ಲ ಪ್ರಿಯೇ' ಎಂದು ಅವಳ ಮುಖವನ್ನು ತಲೆ ಎತ್ತಿ ನೋಡಿದೆ. ಅವಳ ಮುಗುಳು ನಗೆಯನ್ನು ಕಂಡು ನನ್ನಲ್ಲಿ ಬೇಸರವು ಮಾಯವಾಯಿತು. ನಮ್ಮ ಕಣ್ಣುಗಳು ಒಂದನ್ನೊಂದು ದೃಷ್ಟಿಸಿ ನೋಡುತಿದ್ದವು, ಮುಗುಳು ನಗೆ ನಗುತ್ತಾ.

ಅಷ್ಟರಲ್ಲಿ ಒಳಗಿನಿಂದ ನನ್ನಮ್ಮ 'ಸುಬ್ಬೀ' ಎಂದರು.

ನನ್ನ ತಂದೆ ನನಗೊಂದು ಕೊಂಡುಕೊಡುತ್ತಾರೆ...

ಡಿಫೆನ್ಸ್

ಸೇವಿಂಗ್ಸ್

ಸರ್ಟಿಫಿಕೇಟ್

ನಿನ್ನ ತಂದೆ ನಿನಗೊ?

ಪೂರ್ತಾ ವಿವರಗಳಿಗೆ ನಿಮ್ಮ ಹತ್ತಿರದ ಪೋಸ್ಟ್ ಆಫೀಸ್‌ನಲ್ಲಿ ಕೇಳಿ

Kn. 61 40.

ಪಂಡಿತ ನೆಹರು ಪುನಃ ಬಂಧಿತರಾದರೇಕೆ?

ಅಮೆರಿಕದ ವಾಚಕರು ಕುತೂಹಲ ಪಡುತ್ತಾರೆ

ಆತ್ಮಚರಿತೆಯ ಹೊಸ ಆವೃತ್ತಿಯ ಪ್ರಕಟವಾಗಿದೆ

ಭಾರತ ಬ್ರಿಟನುಗಳ ದಾರಿ ಕವಲೊಡೆವ ಕಾಲ ಬಂದಿದೆ

ಪಂಡಿತ ನೆಹರುಗಳು ಇತ್ತೀಚೆಗೆ ಬರೆದ ಲೇಖನ "ದಾರಿ ಕವಲೊಡೆಯುವುದು" ಎಂಬುದು ಮಹಾತ್ಮರ ಮುನ್ನಡಿಯೊಡನೆ ಪ್ರಕಟವಾಗಿದೆ. ಅವರು ಸೆರೆಮನೆಗೆ ಸೇರುವ ಮುನ್ನ ಈ ಲೇಖನವು ಅಮೇರಿಕದ ಪತ್ರಿಕೆಯಲ್ಲಿ ಪ್ರಕಟವಾಯಿತು. ಇದರಲ್ಲಿ ಕಾಂಗ್ರೆಸಿನ ರೀತಿನೀತಿಯು ಬಹಳ ಶಕ್ತಿವತ್ತಾದ ಶೈಲಿಯಲ್ಲಿ ವರ್ಣಿತವಾಗಿದೆ. ಈ ಉಜ್ವಲ ಲೇಖನವು ಅವರ ಅಮೇರಿಕದಲ್ಲಿ ಮೊನ್ನೆ ಪ್ರಕಟವಾದ ಆತ್ಮ ಚರಿತ್ರೆಯಲ್ಲಿ ಸೇರಿಸಲಾಗಿದೆ.

ಆ ಪುಸ್ತಕದ ವಿಷಯವಾಗಿ ಅಮೇರಿಕದ ಪತ್ರಿಕೆ 'ಟೈಮ್' ಈ ತೆರದಲ್ಲಿ ಬರೆಯುತ್ತದೆ.

ನೆಹರು ಇಂದು ತಿರಿಗಿ ಸೆರೆಮನೆಯಲ್ಲಿದ್ದಾರೆ. ಇಂತಹದು ಅವರಿಗೆ ಹಲವು ಸಲ ಬಂದಿದೆ. ೧೯೨೧ರ ಬಳಿಕ ಅವರು ಒಂದು ವರ್ಷಕ್ಕಿಂತ ಹೆಚ್ಚಿನ ಕಾಲ ಹೊರಗಡೆಯಿದ್ದದ್ದೆಂದರೇ ಅಪರೂಪ.

ನೆಹರುವಿನ ತಪ್ಪು?

ಅವರ ತಪ್ಪು ಬಹಳ ಕಡಿಮೆಯದು. ಅವರ ತಪ್ಪೆಂದರೆ ಸಾಮ್ರಾಜ್ಯಶಾಹಿಯ ಹಿಂಬದಿಯನ್ನಿಟ್ಟುಕೊಂಡು ಕುಣಿವ ಪ್ರಜಾಪ್ರಭುತ್ವವನ್ನು ಮೆಚ್ಚದ ಜಗತ್ತಿನ ಶುದ್ಧ ಪ್ರಜಾಪ್ರಭುತ್ವವಾದೀ ನಾಯಕನೆಂಬುದೇ ಆಗಿದೆ. ಭಾರತದಲ್ಲಿ ಗಾಂಧಿಜಿಯ ನಂತರ ಅವರು ಮಹಾ ಪ್ರಭಾವಶಾಲೀ ಧುರೀಣರಾಗಿದ್ದಾರೆ. ಅವರು ಎಡಪಕ್ಷದವರಾಗಿ, ಧಾರ್ಮಿಕ ಸಂದೇಹಗ್ರಸ್ತರಾಗದೆ ಭಾರತದಲ್ಲಿನ ಬ್ರಿಟಿಷ್ ಹಿತಕ್ಕೆ ಬಹಳ ಭಯಂಕರ ಸ್ವರೂಪಿಗಳಾಗಿದ್ದಾರೆ

ಆತ್ಮಚರಿತೆ ಬರೆದುದು

೧೯೩೪—೩೫ರಂದು ಅವರ ಕಾರಾಗೃಹೋತ್ಸವದ ಕಾಲ ಅವರು ತಮ್ಮ ಆತ್ಮಚರಿತೆಯನ್ನು ಬರೆದರು. ಇದು ಇಂಗ್ಲೆಂಡಿನಲ್ಲಿ ಪ್ರಕಟವಾಯಿತು. ಇಂಗ್ಲಿಷ್ ಸಾಹಿತ್ಯದಲ್ಲಿ ಇದೂ ಒಂದು ಸ್ಥಾನ ಪಡೆಯಿತು. ಇದು ಹದಿನಾಲ್ಕನೆಯ ಆವೃತ್ತಿಯನ್ನೂ ಪಡೆಯಿತು ಇಂದು ಅದನ್ನು ಸ್ವಲ್ಪ ಪರಿಷ್ಕರಿಸಿ ಅಮೇರಿಕದ ವಾಚಕರಿಗೆ ಒಪ್ಪಿಸಲಾಗಿದೆ. (ಇದರ ಕ್ರಯ ನಾಲ್ಕು ಡಾಲರುಗಳು) ಮಹಾಪುರುಷನಾಗಿ, ನಿಸ್ವಾರ್ಥ ವೀರನಾಗಿ, ಮಹಾಜನಾಂಗದ ಅನುಪಮ ದೇಶಭಕ್ತನಾಗಿ **ಅವರ ಆತ್ಮ ಚರಿತೆಯು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ.**

ಮೂರು ವ್ಯಕ್ತಿತ್ವಗಳ ಮಿಲನ

ನೆಹರುಗಳ ಆತ್ಮಚರಿತೆ ಮೂರು ವಿಧದಲ್ಲಿ ಆಕರ್ಷಣೀಯವಿದೆ. ನೆಹರುಗಳ ಪ್ರತ್ಯೇಕ ವ್ಯಕ್ತಿತ್ವ, ತಂದೆಯ ಗುಣ, ಪ್ರಭಾವ, ಮಹಾತ್ಮಜಿಯವರ ಪ್ರೇಮಾವರಣ ಇವುಗಳಿಂದ್ಧ ಅದು ಭವ್ಯವಾಗಿದೆ. ತಂದೆ ೫೮ನೆಯ ವರ್ಷದಲ್ಲಿ ಮಗನೊಡನೆ ಸ್ವಾತಂತ್ರ್ಯ ಸಮರಕ್ಕೆ ದುಮುಕಿ ಅತುಲ ಐಶ್ವರ್ಯ ಸಂಪಾದನೆಯ ವಕಾಲತ್ತು ಬಿಟ್ಟರು ಗಾಂಧಿಜಿಯೊಡನೆ ನೆಹರು ಆಗಾಗ ಭಿನ್ನಮತ ತೋರಿಸುವರಾದರೂ, ಮಹಾತ್ಮರ ಮೇಲೆ ಅವರ ಭಕ್ತಿ ಅಪಾರವು. ಗಾಂಧಿಜಿಯ ಮೇಲೆ ಹೀಗೆ ಅಪಾರ ಭಕ್ತಿಯಿದ್ದರೂ ನೆಹರು ಅದರಿಂದ ಕುರುಡಾಗಲಿಲ್ಲ.

ನೆಹರು ಹೊಸ ಜಗತ್ತಿನ ನಿರ್ಮಾಣದಲ್ಲಿ ಭಾರತದ ಸ್ಥಾನಮಾನಗಳನ್ನು ನೋಡುತ್ತಾರೆ. ನೆಹರು, ಗಾಂಧಿಜಿಯನ್ನು ಮೆಲ್ಲಮೆಲ್ಲನೆ ತನ್ನ ಅಭಿಪ್ರಾಯಕ್ಕೆ ಸಮ್ಮತಿಸುವಂತೆ ಮಾಡುತ್ತಾರೆ. ನೆಹರುಗಳ ಲೇಖನ ಶೈಲಿ ಅವರ ವಾಕ್ ಶಕ್ತಿಯಂತೆಯೇ ಭವ್ಯವಾದುದು. ಸಿಟ್ಟಿನಿಂದ ಕೆರಳುವಂತಿದ್ದರೂ ವಿಚಾರಗಳಿಂದ ಕೂಡಿಕೊಂಡಿರುವವುಗಳು.

ಗಿಳಿಗಳಿಗೆ ಭಾಷೆ ಕಲಿಸಲಿಕ್ಕೆ ಮೊದಲನೆ ಶಾಲೆ

ಗಿಳಿ ಮೊದಲಾದ ಮಾತನಾಡುವ ಪಕ್ಷಿಗಳಿಗೆ ಭಾಷೆಗಳನ್ನು ಕಲಿಸಲಿಕ್ಕೆ ಅಮೇರಿಕದ ಬ್ರೌನ್ಸ್‌ವಿಲ್ಲೆ ಎಂಬಲ್ಲಿ ಒಬ್ಬನು ಒಂದು ಶಾಲೆಯನ್ನು ತೆರೆದಿದ್ದಾನೆ. ಇದು ಪ್ರಪಂಚದಲ್ಲಿ ಮೊದಲನೆಯದ್ದು. ಈ ಶಾಲೆಯಲ್ಲಿ ಈಗ ೧೫೦೦ ಗಿಳಿ ವಿದ್ಯಾರ್ಥಿಗಳಿದ್ದಾವೆ. ಇವಕ್ಕೆ ಇಂಗ್ಲಿಷು ಭಾಷೆಯನ್ನು ಕಲಿಸುತಿದ್ದಾರೆ. ಅಭ್ಯಾಸದ ಅವಧಿಯು ಮೂರು ತಿಂಗಳ ತನಕ ಇರುತ್ತದೆ. ವಾರವಾರವೂ ಪರೀಕ್ಷೆ ಆಗಿ ಹೊಸಹೊಸ ಪಾಠಗಳನ್ನು ಕಲಿಸುವ ವ್ಯವಸ್ಥೆ ಇರುತ್ತದೆ. ಗಿಳಿಗಳು ಸರಿಯಾಗಿ ಅಭಿವೃದ್ಧಿಯನ್ನು ತೋರಿಸುವುದಿಲ್ಲವಾದರೆ, ಅವಕ್ಕೆ ದಂಡನೆಯೂ ಇದೆ. ಅವನ್ನು ಕೆಳತರಗತಿಗಳಿಗೆ ಕಳುಹಿಸಲಾಗುತ್ತದೆ. ಆಗ ಅವು ಬಹಳ ನೊಂದುಕೊಳ್ಳುತ್ತವಂತೆ. ಒಂದುವರೆ ತಿಂಗಳ ಒಳಗೆ ಸಾಕಷ್ಟು ಅಭಿವೃದ್ಧಿಯನ್ನು ತೋರಿಸದಿದ್ದರೆ, ಅವನ್ನು ಶಾಲೆಯಿಂದ ಡಿಸ್‌ಮಿಸ್ ಮಾಡುತ್ತಾರೆ! ಗ್ರಾಮೊಫೋನು ರಿಕಾರ್ಡುಗಳ ಮೂಲಕ ಅತ್ಯಾಧುನಿಕ ಪದ್ಧತಿಯಲ್ಲಿ ಭಾಷೆ ಕಲಿಸುವ ಏರ್ಪಾಡು ಈ ಶಾಲೆಯಲ್ಲಿ ಇದೆ.

ಸುಕ್ರ ಸಂಜೀವನ

ಭಾರತ ದೇಶವೆಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ. ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರು ಏಜೆಂಟ್ಸ್: ಶಾ ಕಂಪೆನಿ, ಹಂಪನಕಟ್ಟಾ, ಮಂಗಳೂರು

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilitie to Businessmen and interested Public.

Apply for particulars—
K. R. GURU, *Managing Director.*

ಜಿಲ್ಲಾ ಸಮಾಚಾರ



ಮಂಗಳೂರು

ಭಟ್ಕಳದಲ್ಲಿ ದ. ಕ ಸತ್ಯಾಗ್ರಹಿಗಳ ಕೈದು

ಈ ಜಿಲ್ಲೆಯ ಶ್ರೀಗಳಾದ ಕೆ. ಶೀನ ಸೆಟ್ಟಿ, ಶ್ರೀಧರ ನಾಯಕ್ ಮತ್ತು ವರದರಾಯ ಶೆಣೈ ಇವರು ಈ ಜಿಲ್ಲೆಯಲ್ಲೆಲ್ಲಾ ಪ್ರಚಾರ ಕಾರ್ಯ ಮುಗಿಸಿ, ಉತ್ತರ ಕನ್ನಡಕ್ಕೆ ಹೋಗುವಾಗ, ಭಟ್ಕಳದಲ್ಲಿ ತಾ ೧೫ಕ್ಕೆ ಕೈದು ಮಾಡಲ್ಪಟ್ಟು, ಪ್ರತಿಯೊಬ್ಬರಿಗೂ ೪ ತಿಂಗಳ ಕಠಿನ ಸಜೆ ವಿಧಿಸಲಾಗಿದೆ.

ಕೃಷ್ಣಪ್ಪಾ ಸ್ಮಾರಕ ಬ್ಯಾಡ್‌ಮಿಂಟನ್ ಪಂದ್ಯಾಟ

ತಾ. ೨೦ರಲ್ಲಿ 'ಕೃಷ್ಣಪ್ಪಾ ಸ್ಮಾರಕ ಬ್ಯಾಡ್‌ಮಿಂಟನ್ ಪಂದ್ಯಾಟ'ದ ಕೊನೆಯ ಸ್ಪರ್ಧೆಯಲ್ಲಿ ಓರಿಯಂಟಲ್ 'ಎ' ಟೀಮು ಉಳ್ಳಾಲದ ಟೀಮನ್ನು ಸೋಲಿಸಿ, ಬಹುಮಾನವಾಗಿ ಒಂದು ರೋಲಿಂಗ್ ಕಪ್ಪನ್ನು ಪಡೆಯಿತು ಮಿ. ಎಸ್. ಸೋನ್ಸ್, ನಿವೃತ್ತ ಜಿಲ್ಲಾ ರಿಜಿಸ್ಟ್ರಾರ್ ಇವರು ಅಧ್ಯಕ್ಷಸ್ಥಾನವನ್ನು ವಹಿಸಿ ರೋಲಿಂಗ್ ಕಪ್ಪನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಆಟಗಾರರಿಗೆ ಪದಕಗಳನ್ನೂ ಕೊಟ್ಟರು. ಅಧ್ಯಕ್ಷರು, 'ಕೃಷ್ಣಪ್ಪನವರು ಮಂಗಳೂರಿಗೆ ಭೂಷಣಪ್ರಾಯರಾಗಿದ್ದರು, ಅವರು ಎಲ್ಲಾ ಬಗೆಯ ಆಟಗಳಲ್ಲಿಯೂ ತನ್ನ ಸಾಹಸ, ಕೈಚಳಕಗಳನ್ನು ತೋರಿಸಿದ್ದರು. ಅಂಥ ತರುಣ ವ್ಯಕ್ತಿಯು ಆಕಸ್ಮಾತ್ತಾಗಿ ಕಣ್ಮರೆಯಾಗಿ ಹೋದುದು, ಮಂಗಳೂರಿಗೆ ಬಹು ದೊಡ್ಡ ನಷ್ಟ' ಎಂದು ಮುಂತಾಗಿ ಶ್ರೀ ಕೃಷ್ಣಪ್ಪನವರ ಗುಣಕಥನ ಮಾಡಿ, ಅವರ ನೆನಪಿಗಾಗಿ ಅನೇಕ ಆಟಗಳನ್ನು ಪ್ರತಿ ವರುಷವೂ ನಡೆಯಿಸುವುದು ಬಹು ಯೋಗ್ಯವಾದ ಕೆಲಸವೆಂದು ಹೇಳಿದರು.

ಪಡುಬಿದ್ರಿ

ಶ್ರೀ ಯಂ ರಘುನಾಥ ಪ್ರಭುಗಳ ಸತ್ಯಾಗ್ರಹ

ಪಡುಬಿದ್ರಿಯ ಪ್ರಮುಖ ಸಾರ್ವಜನಿಕ ಕೆಲಸಗಾರರಾದ ಶ್ರೀ ಯಂ. ರಘುನಾಥ ಪ್ರಭುಗಳು ಇದೇ ತಾ. ೧೬ನೇ ಅಪರಾಹ್ನ ಗಂಟೆ ೨ಕ್ಕೆ ಪಡುಬಿದ್ರಿಯಲ್ಲಿ ಸತ್ಯಾಗ್ರಹ ಮಾಡಿದರು. ಇವರನ್ನು ದಸ್ತಗಿರಿ ಮಾಡಲಿಲ್ಲ.

ಮೂಡಬಿದ್ರೆ ಸತ್ಯಾಗ್ರಹ

ತಾ ೧೯ರಲ್ಲಿ ಮೂಡಬಿದ್ರೆಯ ಶ್ರೀ ನರಸಿಂಗರಾವ್ ಅಂಕೋಲೇಕರ್ ಇವರು ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹವನ್ನಾಚರಿಸಿದರು. ಕೈದುಮಾಡಲಿಲ್ಲ.

ಕಾರ್ಕಳ.

ಸತ್ಯಾಗ್ರಹ ಸಮಾಚಾರಗಳು

ಕಾರ್ಕಳದಲ್ಲಿ ಸತ್ಯಾಗ್ರಹಮಾಡಿ ಬಂಧಿತರಾಗದೆ ಡಿಲ್ಲಿ ಕಡೆಗೆ ಪ್ರಯಾಣ ಹೊರಟ ಇಲ್ಲಿಯ ಶ್ರೀ ಕೆ. ನರಸಿಂಹ ಕಾಮತ್ ಮತ್ತು ಶ್ರೀ ಸೋಮನಾಥ ಗೋಖಲೆಯವರು ಭಟ್ಕಳದಲ್ಲಿ ಸೆರೆಹಿಡಿಯಲ್ಪಟ್ಟಿರುತ್ತಾರೆ. ಬಿ. ಕ್ಲಾಸಿನಲ್ಲಿ ೪ ತಿಂಗಳ ಸಜೆಗೆ ಗುರಿಯಾಗಿದ್ದ ಶ್ರೀ ಕೆ. ಗೋಪಾಲಕೃಷ್ಣ ಕಾಮತರವರು ಸರಕಾರದಿಂದ ಎ. ಶ್ರೇಣಿಗೆ ವರ್ಗಾಯಿಸಲ್ಪಟ್ಟಿರುವರು. ಇವರೀಗ ತಿರುಚಿನಾಪಳ್ಳಿ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವರು.

ಕೋಟಿ ದಿನಾಚರಣೆ.

ಮದ್ರಾಸು ಗವರ್ನರರ ಯುದ್ಧನಿಧಿಗೆ ಒಂದು ಕೋಟಿ ರೂಪಾಯಿ ಸಂಗ್ರಹವಾದ ಕುರಿತು ಸಂತೋಷ ಸೂಚನಾರ್ಥ ಇಲ್ಲಿ ಕಳೆದ ಶನಿವಾರ ಶಾಲಾ ಮಕ್ಕಳ ಮೆರವಣಿಗೆ, ಮಿಠಾಯಿ ಹಂಚುವುದು, ಬಡಬಗ್ಗರಿಗೆ ಅಕ್ಕಿದಾನ ಮೊದಲಾದ ಕಾರ್ಯಗಳು ನಡೆದುವು. ಡಾಕ್ಟರ ಪಿ. ಭವಾನಿರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಕೂಡಿ ಡಾ. ಸಿ ರಾಮ ಕಾಮತರವರು ಯುದ್ಧದಲ್ಲಿ ಭಾರತೀಯರು ಬ್ರಿಟಿಷರಿಗೆ ಸಹಾಯಮಾಡಬೇಕೆಂದು ಭಾಷಣಕೊಟ್ಟರು.

ಹಳೆ ವಿದ್ಯಾರ್ಥಿಗಳ ಸಭೆ

ಬೋರ್ಡು ಹೈಸ್ಕೂಲಿನ ಹಿಂದಿನ ವಿದ್ಯಾರ್ಥಿಗಳ ಒಂದು ಸಭೆಯು ತಾ ೧೪ರ ದಿನ ಶ್ರೀ ವಕೀಲ ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಕೂಡಿ ಬಡ ವಿದ್ಯಾರ್ಥಿಗಳ ಸಹಾಯನಿಧಿಗೆ ಹಣ ಸಂಗ್ರಹ ಕೊಡುವುದಕ್ಕೋಸ್ಕರ ಇದೇ ಮೇ ತಿಂಗಳಲ್ಲಿ ಒಂದು ನಾಟಕವನ್ನು ಅಭಿನಯಿಸಬೇಕೆಂಬ ನಿರ್ಣಯವಾಗಿದೆ.

ವರ್ಗಾವರ್ಗಿ

ಇಲ್ಲಿಯ ಜಿಲ್ಲಾ ಮನ್ಸೀಫರಾಗಿದ್ದ ಶ್ರೀ ವಿ. ಪೋಲಾ ರೆಡ್ಡಿಯವರು ಪೆನುಕೊಂಡೆಗೆ ಮುನ್ಸೀಫರಾಗಿಯೂ, ಇಲ್ಲಿ ಕಮರ್ಸಿಯಲ್ ಟ್ಯಾಕ್ಸ್ ಆಫೀಸರರಾಗಿದ್ದ ಶ್ರೀ ಪಳ್ಳಿ ಬ್ಯಾರಿಯವರು ಪುತ್ತೂರಿಗೆ ತಹಸಿಲ್ದಾರರಾಗಿಯೂ, ಇಲ್ಲಿ ರಿಜಿಸ್ಟ್ರಾರರಾಗಿದ್ದ ಶ್ರೀ ಟಿ. ನಾರಾಯಣರವರು ಉಡುಪಿಗೆ ರಿಜಿಸ್ಟ್ರಾರರಾಗಿಯೂ ವರ್ಗ ಹೊಂದಿದ್ದಾರೆ.

ಉಡುಪಿ

ಸತ್ಯಾಗ್ರಹಿಗಳ ಆಗಮನ

ಶ್ರೀಗಳಾದ ಲಕ್ಷ್ಮಪ್ಪ ರೈ (ವಿಟ್ಲ) ಅಣ್ಣಪ್ಪ ಭಂಡಾರಿ (ವಿಟ್ಲ), ವೆಂಕಟರಮಣ ಪೈ (ವಿಟ್ಲ), ಬಿ. ಡಿ ಸುವರ್ಣ (ಮೂಲ್ಕಿ), ಕಮಲಾಕ್ಷ ಪೈ (ಬದಿಯಡ್ಕ), ಮಾಧವ ಪೈ (ಕುಂಬಳೆ) ಶೀಲ ಕಂದಸರಕ್ (ಕಾರ್ಕಳ) ಈ ಏಳು ಮಂದಿ ಸತ್ಯಾಗ್ರಹಿಗಳು ಯುದ್ಧವಿರೋಧ ಘೋಷಣೆಗಳನ್ನು ಮಾಡಿದರು. ಆದರೆ ಇವರನ್ನು ಕೈದು ಮಾಡಲಿಲ್ಲ.

ಸಾರ್ವಜನಿಕ ಸಭೆ

ರಾಷ್ಟ್ರೀಯ ಸಪ್ತಾಹದ ಕೊನೆಯ ದಿನವಾದ ತಾ 13-4-41ನೇ ಆದಿತ್ಯವಾರ ಸಂಜೆ ಗಂಟೆ 5-30ಕ್ಕೆ ಸ್ಥಳೀಯ ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ಕೂಡಿತು. ಅಧ್ಯಕ್ಷಸ್ಥಾನವನ್ನು ಈ ಹಿಂದೆ ಸತ್ಯಾಗ್ರಹವನ್ನು ಹೂಡಿ, ಕಾರಾಗೃಹವನ್ನು ಸೇರಿ, ಹಿಂದಿನ ದಿನವೇ ಬಿಡುಗಡೆ ಹೊಂದಿ ಬಂದಿದ್ದ ಶ್ರೀಮತಿ ಪಿ. ಮನೋರಮಾ ಬಾಯಿ ಮಂಜುನಾಥ ನಾಯಕರವರು ವಹಿಸಿದ್ದರು. ಮೊದಲಾಗಿ ನಮ್ಮ ಜಿಲ್ಲೆಯ ಸತ್ಯಾಗ್ರಹಿಗಳಲ್ಲೊಬ್ಬರಾದ ಶ್ರೀ ಮುಪ್ರಾಡಿ ಕೃಷ್ಣಯ್ಯ ಶೆಟ್ಟರು ತನ್ನ ಭಾಷಣ ಕೊಟ್ಟರು. ರಾಷ್ಟ್ರೀಯ ವಾರವೆಂದರೇನು? ಭಾರತವಾಸಿಯಾದರು ಅದನ್ನು ಏತಕ್ಕಾಗಿ ಆಚರಿಸಬೇಕು? ಹೇಗೆ ಆಚರಿಸಬೇಕು? ಎಂಬಿತ್ಯಾದಿ ಮಹತ್ವದ ಹಾಗೂ ಅರ್ಥಗರ್ಭಿತ ವಿಷಯಗಳನ್ನೆತ್ತಿ ಸೊಗಸಾದ ಭಾಷಣವನ್ನು ಮಾಡಿದರು. ನಂತರ ಹಳ್ಳಿ ಹಳ್ಳಿಗಳನ್ನು ಸಂಚರಿಸಿ, ಯುದ್ಧ ವಿರೋಧ ಘೋಷಣವನ್ನು ಮಾಡಿ, ಅಲ್ಲಲ್ಲಿ ಭಾಷಣಗಳನ್ನಿತ್ತು, ಆಗ ತಾನೆ ಉಡುಪಿಗೆ ಬಂದಿದ್ದ ಶ್ರೀಯುತರುಗಳಾದ ಕಮಲಾಕ್ಷ ಪೈ ಇತ್ಯಾದಿಯವರೂ, ಸಭಿಕರಲ್ಲಿ ಶ್ರೀಗಳಾದ ಎಮ್. ವಿ. ಹೆಗ್ಡೆ ಮೊದಲಾದವರೂ ಚಿಕ್ಕದಾದ ಭಾಷಣಗಳನ್ನಿತ್ತ ತರುವಾಯ— ಅಧ್ಯಕ್ಷಿಯರ ಸಮಾರೋಪ ಭಾಷಣ, ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡ್

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಮಹಾಸಭೆಯು ಇದೇ ತಾ. 14ನೇ ಸೋಮವಾರ ಉಡುಪಿ ಬೋರ್ಡು ಹೈಸ್ಕೂಲಿನಲ್ಲಿ ಮಿ ರೋಕ್ ಪೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ವರದಿಯನ್ನು ಗಿಲ್ಡಿನ ಕಾರ್ಯದರ್ಶಿಯವರಾದ ಶ್ರೀ ಯು. ಶ್ರೀನಿವಾಸ ಶಿಣೈಯವರು ಓದಿದರು. ಗಿಲ್ಡಿನವರು ಕಳೆದ ಡಿಸೆಂಬರ ತಿಂಗಳಲ್ಲಿ ಭಾಷೆಯನ್ನು ಕಲಿಸುವ ವಿಚಾರ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ಒಂದು ರಿಪ್ರೆಷರ್ ಕೋರ್ಸನ್ನು ಏರ್ಪಡಿಸಿ ಅದರಲ್ಲಿ ಡಿವಿಜನ್ ಇನ್ಸ್‌ಪೆಕ್ಟರರಾದ ಶ್ರೀ ಆರ್. ಎಮ್ ಸಪ್ತಾರ್‌ರವರು ಕೊಟ್ಟ ಭಾಷಣಗಳ ಸಾರಾಂಶವನ್ನು ಎಲ್ಲಾ ಉಪಾಧ್ಯಾಯರಿಗೆ ಉಪಯೋಗವಾಗುವಂತೆ ಛಾಪಿಸಿ ಬರೇ 0-1-6ರಂತೆ ಪ್ರತಿಗಳು ಸಿಗುವಂತೆ ಮಾಡಿರುವರು ಮಾತ್ರವಲ್ಲದೆ ಪ್ರಾಥಮಿಕ ಶಾಲಾ ಪಾಠಪಟ್ಟಿಯಲ್ಲಿ ತಿದ್ದುಪಡಿಯಾಗಿ ಈಗ ತಾನೇ ಪ್ರಕಟವಾಗಿರುವ ಭೂಗೋಳ ಸಿಲೆಬಸನ್ನು ಗಿಲ್ಡಿನವರು ಕನ್ನಡಕ್ಕೆ ಭಾಷಾಂತರಿಸಿ 1ನೇ ಕ್ಲಾಸಿನಿಂದ 8ನೇ ಕ್ಲಾಸಿನ ವರೆಗಿನ ಸಿಲೆಬಸಿರುವ ಪ್ರತಿಗೆ ಒಂದಾಣೆಯಂತೆಯೂ, 1ನೇ ಕ್ಲಾಸಿನಿಂದ 5ನೇ ಕ್ಲಾಸಿನ ವರೆಗಿನ ಸಿಲೆಬಸಿರುವ ಪ್ರತಿಗೆ 9 ಪೈಯಂತೆ ಸಿಗುವಂತೆ ಛಾಪಿಸುತ್ತಾರೆ. ಅನಂತರ ಸಭೆಯಲ್ಲಿ ಈ ಸಾಲಿಗಿನ ಚುನಾವಣೆಯಾಯಿತು— ಮಿ. ರೋಕ್ ಫೆರ್ನಾಂಡಿಸ್ (ಅಧ್ಯಕ್ಷರು), ಶ್ರೀ ಎಚ್ ಶಾಸ್ತ್ರಿ ಏಕಾಂಬರ ರಾವ್ ಮತ್ತು ಶ್ರೀ ಉಡುಪಿ ಗೋವಿಂದ ರಾವ್ (ಉಪಾಧ್ಯಕ್ಷರು), ಶ್ರೀ ಯು. ಶ್ರೀನಿವಾಸ ಶಿಣೈ (ಜನರಲ್ ಸೆಕ್ರಿಟರಿ), ಶ್ರೀ ಎಚ್ ದೇವರಾವ್ ಮತ್ತು ಮಿ. ಎಸ್. ಎಪ್. ಫರ್ಟಾಡೊ (ಸೆಕ್ಷನಲ್ ಸೆಕ್ರಿಟರಿಗಳು) ಮತ್ತು ಶ್ರೀ ಎಸ್ ರಾಮಚಂದ್ರ ಅಯ್ಯರ್ (ಎಸ್ ಐ. ಟಿ. ಯು. ಪ್ರತಿನಿಧಿ).

ಕಾಸರಗೋಡು

ನೀಲೇಶ್ವರ ವಸತಿ ಪರಿಶೋಧನೆ

ಶ್ರೀಯುತರುಗಳಾದ ಯನ್. ಕೆ. ಬಾಲಕೃಷ್ಣನ್, ಚಂದು ಕುಟ್ಟಿ, ಉಂಬ್ಲಿಕ್ಕನ್ ಇವರ ವಸತಿಗಳನ್ನು ರಿಸರ್ವ್ ಪೋಲೀಸರ ತಂಡವು ಒಂದಾಗಿ ಪರಿಶೋಧಿಸಿದೆ. 144ನ ಸೆಕ್ಷನ್ ಜಾರಿಯಲ್ಲಿರುವ ಇತರ ಪ್ರದೇಶಗಳಲ್ಲೂ ವಸತಿ ಶೋಧನೆ ನಡೆಯುತ್ತಿದೆ.

ಕೈದುಗಳು

ಕೈಯ್ಯೂರು ಪ್ರಕರಣಕ್ಕೆ ಸಂಬಂಧಿಸಿ (ಕಳೆದ ಮಂಗಳವಾರ ತನಕ) ಕ್ಯಾಪ್ಟನ್ ಶ್ರೀ ಚಂದು ಇನ್ನಿತರ ನಾಲ್ವರನ್ನು ಬಂಧಿಸಲಾಗಿದೆ.

ಮಂಜೆಯಲ್ಲಿ ಶ್ರೀ ಎ ಕೆ. ವಿಶ್ವನಾಥ ಶೆಟ್ರು ಸತ್ಯಾಗ್ರಹ ದಸ್ತಗಿರಿಯಾಗಲಿಲ್ಲ

ಎಪ್ರಿಲ್ 15ರಲ್ಲು 'ಮಂಜೆ ಶಾಲೆ' ಎದುರು ಗಂಟೆ 9,30ಕ್ಕೆ ಶ್ರೀಯುತರು ಸತ್ಯಾಗ್ರಹವನ್ನು ಮಾಡಿದರು. ಶ್ರೀಗಳಾದ ಕಾಡ್ತಲ ಅಯ್ಯಣ್ಣ ಶೆಟ್ರು, ಪತ್ತುಮುಡಿಯ ಮಾಜಿ ಪಟೇಲರು, ಕೋಳ್ಯಾರ ಕೃಷ್ಣ ಭಟ್ಟರು, ನೆಕ್ಕಳ ನಾರಾಯಣ ಮಾಡರು ಮೊದಲಾದವರಲ್ಲದೆ ಸಾಧಾರಣ ನೂರಕ್ಕೆ ಮೇಲ್ಪಟ್ಟು ಜನರು ನೆರೆದಿದ್ದರು. ಪೋಲೀಸ್ ಅಧಿಕಾರಿಗಳಲ್ಲಿ ಸಬ್ ಇನ್ಸ್‌ಪೆಕ್ಟರ್ ಶೀನ ಶೆಟ್ರು, ಒಬ್ಬ ಕಾನ್ಸ್ಟೇಬಲ್ ಮತ್ತು ಸಿಪಾಯಿ ಗಾರ್ಡನವರೊಬ್ಬರೂ ಬಂದಿದ್ದರು. ಸತ್ಯಾಗ್ರಹಿಯ ಕೈಯಲ್ಲಿ ಮಹಾತ್ಮಾಜಿಯವರ ಅಪ್ಪಣೆಪತ್ರವಿದೆಯೋ ಎಂದು ಅಧಿಕಾರಿಗಳು ಕೇಳಿದರೆಂದೂ ತಿಳಿದುಬರುತ್ತದೆ. ಸ್ಥಿತಸಮಯದ ಮೊದಲು ಕಾಂಗ್ರೆಸ್ ಸಂದೇಶವನ್ನು ಶ್ರೀ ಶೆಟ್ರು ವಿವರಿಸಿ ಹೇಳಿದರಲ್ಲದೆ ಯುದ್ಧವಿರುದ್ಧ ಘೋಷಣೆಯನ್ನು ಸರಿಯಾದ ಸಮಯಕ್ಕೆ ಎಚ್ಚರಿಸಿ, ಬಂಧಿತರಾಗದ್ದರಿಂದ ಮುಂದರಿದಿರುತ್ತಾರೆ.

ಬಾರಕೂರು

ಸತ್ಯಾಗ್ರಹಿಗಳ ಭಾಷಣ

ತಾ 15 ಮಂಗಳವಾರ ದಿವಸ ಮಂಗಳೂರ ರತ್ನಕಟ್ಟೆಯಿಂದ ಬಾರಕೂರಿಗೆ ಬಂದ ಸತ್ಯಾಗ್ರಹಿಗಳಾದ ಶ್ರೀ ಅಗಾರಿ ಲಕ್ಷ್ಮಪ್ಪ ರೈ, ಕಮಲಾಕ್ಷ ಪೈ, ಅಣ್ಣಪ್ಪ ಭಂಡಾರಿ, ಬದಿಯಡ್ಕ ವೆಂಕಟರಮಣ ಪೈ, ಬಿ ಡಿ ಸುವರ್ಣ ಮಾಧವ ಪೈ ಮೊದಲಾದವರನ್ನು ಬಾರಕೂರು ವೆಂಕಟೇಶ ಕಾಮತ್‌ರವರು ಆದರದಿಂದ ಸತ್ಕರಿಸಿ ಇದೇ ದಿವಸ ಸಾಯಂಕಾಲ 5 ಗಂಟೆಗೆ ಬಾರಕೂರು ಕರ್ನಾಟಕ ಸ್ಟೋರ್ಸ್ ಇವರ ಮುಂಭಾಗದಲ್ಲಿ ಶ್ರೀ ಬಿ. ಅಂತಯ್ಯ ಶೆಟ್ರು ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಸುಮಾರು 200 ಜನರು ಎಲ್ಲಾ ಮತೀಯರೂ ಸೇರಿದ್ದರು. ಶ್ರೀಗಳಾದ ಅಗರಿ ಲಕ್ಷ್ಮಪ್ಪ ರೈಗಳು ಸಭಿಕರಿಗೆ ಮನದಟ್ಟಾಗಿ ಕಿಂಗ್‌ಸ್ಟನ್ನು ಕಾರ್ಯಕ್ರಮವನ್ನು ರಚಿಸುವ ಮಾಡುವ ಭಾಷಣವನ್ನಿತ್ತರು. ಆ ಬಳಿಕ ಶ್ರೀ ಕಮಲಾಕ್ಷ ಪೈಗಳವರು ಹಾಸ್ಯ ವಿನೋದಾವಳಿಗಳಿಂದ ಜನರಿಗೆ ಕಾಂಗ್ರೆಸ್ಸಿನ ಬೇಡಿಕೆ, ಇಂಗ್ಲಿಷ ಸರಕಾರದ ತಿರಸ್ಕಾರ, ಅದರ ಪರಿಣಾಮ ಮೊದಲಾದವುಗಳ ಕುರಿತು ಭಾಷಣವನ್ನಿತ್ತರು. ಆ ಕಾಲಕ್ಕೆ ಶ್ರೀ ಮಾಧವ ಪೈಗಳು ಚಟುವಟಿಕೆ ರೀತಿಯಲ್ಲಿ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮ, ಶಿಸ್ತುಪಾಲನೆ ಮೊದಲಾದವುಗಳ ಕುರಿತು ಭಾಷಣವಿತ್ತರು. ಶ್ರೀ ಬಿ. ಮಲ್ಯರೂ ಭಾಷಣವಿತ್ತರು.

ಬೊಂಬಾಯಿ

ಅಂತರ್ಜಾತೀಯ ಮದುವೆ.

ಮುಂಬಾಯಿ ಸ್ಮಾಲ್‌ಕಸ್ಟಲ್ ಗಾರ್ಡನ್‌ನ ಕಾರ್ಯದರ್ಶಿ ಶ್ರೀ ಗೋವಿಂದ ಬಿ ಮಂಗಳರು ಶ್ರೀಮತಿ ಮರಿಗಲಾ ಬ್ಯಾಪ್ತಿ, ಇಂಜಿನಿಯರ್ ಎಂಬ ಯುವತಿಯನ್ನು ಕಳೆದ ತಾ. ೬ರಲ್ಲಿ ಶಾಮ ಇನ್‌ಸ್ಟಿಟ್ಯೂಟಿನಲ್ಲಿ ವೈದಿಕ ವಿಧಿ ಪ್ರಕಾರ ಮದುವೆ ಮಾಡಿಕೊಂಡರು. ವರನು ದ ಕ. ಜಿಲ್ಲೆಯ ಮೊಗವೀರ ಸಮಾಜಕ್ಕೆ ಸೇರಿದವರು. ವಧು ಗುಜರಾಥಿ.

ಹುಂಡಿ ಡಬ್ಬಿಯ ಪದ್ಧತಿ.

ತಾ ೨೦–ಸಹಕಾರಿ ಸಂಘದ ಸದಸ್ಯರುಗಳು ಪ್ರತಿಯೊಬ್ಬರೂ, ಹುಂಡಿ ಡಬ್ಬಿಯ ಪದ್ಧತಿಯನ್ನು ಜಾರಿಗೆ ತಂದುಕೊಳ್ಳುವಂತೆ ಮಾಡಿದರೆ ಹಣವನ್ನು ಕೂಡಿಡಲು ಬಹಳ ಸಹಕಾರಿಯಾಗುವುದೆಂದು ಶ್ರೀ. ಕೆ. ಅಚ್ಯುತ ನಾಯರ್, ಡೆಪ್ಯುಟಿ ರಿಜಿಸ್ಟ್ರಾರ್, ಕೋಆಪರೇಟಿವ್ ಸಂಘಗಳು ಇವರು ಕೋರ್ಟ್ ಹಿಲ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ, ಆದಿ ದ್ರಾವಿಡ ಸಹಕಾರ ಸಂಘದ ಸಭೆಯಲ್ಲಿ ಮಾತನಾಡುವಾಗ ಹೇಳಿದರು. ಪ್ರೊಫೆಸರ್ ಪಿ. ರಾಮಚಂದ್ರಯ್ಯರ್ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಭಾರತದಲ್ಲಿ ವಿಶೇಷ ಘಟನೆಗಳೇನೂ ನಡೆದಿಲ್ಲ. ಸತ್ಯಾಗ್ರಹವನ್ನು ನಿಲ್ಲಿಸುವುದು ಸರಿಯೆಂದು ಕೆಲವರ ಸೂಚನೆಗೆ ಹಾಗೆ ಮಾಡುವುದು ಶಕ್ಯವಿಲ್ಲವೆಂದು ಉತ್ತರವಿತ್ತಿದ್ದಾರೆ. ವೈಯುಕ್ತಿಕ ಸತ್ಯಾಗ್ರಹವು ನಡೆಯುತ್ತಲೇ ಇದೆ. ಅಲ್ಲಲ್ಲಿ ದೊಂಬಿಗಳು ನಡೆಯುತ್ತಿವೆ. ಢಾಕ್ಕಾದ ವಿವರವು ಹೃದಯುದ್ರಾವಕವಿದೆ. ಅಹಮ್ಮದಾಬಾದಿನಲ್ಲಿಯೂ ಹಾಗೆಯೇ ಆಗಿದೆ. ಬೊಂಬಾಯಿಯಲ್ಲಿಯೂ ಗಲಾಟೆ ಸುರುವಾಗಿದೆಯೆಂದು ಸುದ್ದಿ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಐಕ್ಯದಿಂದ ಹೋರಾಡಬೇಕಾದೀ ಕಾಲದಲ್ಲಿ, ಜಾತೀಯ ಮುಖಂಡರು, ಜನತೆಯಲ್ಲಿ ಜಾತೀಯ ಭಾವನೆಗಳನ್ನು ಕೆರಳಿ ಆತ್ಮಘಾತ ಮಾಡಿಕೊಳ್ಳುತ್ತಿದ್ದಾರೆ.

ಇಂದಿರಾ ನೆಹರುಗಳ ಆಗಮನ

ಪಂಡಿತ ಜವಾಹರಲಾಲರ ಪುತ್ರಿ ಇಂದಿರಾ ನೆಹರೂರವರು ಸ್ವಿಝರ್ಲೆಂಡಿನಿಂದ ಇದೇ ತಾ. ೧೭ರಲ್ಲಿ ಬೊಂಬಾಯಿಗೆ ಬಂದಿಳಿದರು. ಇವರು ಹಿಂದೂದೇಶವನ್ನು ಬಿಟ್ಟು ಎರಡು ವರ್ಷಗಳಾದ್ದವು. ಯುದ್ಧಾರಂಭದಿಂದಲೂ ಇಂದಿರಾ ನೆಹರೂರವರು ಸ್ವಿಝರ್ಲೆಂಡಿನಲ್ಲಿದ್ದರು. ಇವರು ಸ್ಪೈನ್, ಪೋರ್ಚುಗಲ್, ಲಂಡನ್‌ಗಳನ್ನು ಸಂದರ್ಶಿಸಿದ್ದಾರೆ.

ಇಂಗ್ಲಂಡಿನ ಮೇಲಿನ ದಾಳಿಯ ಕುರಿತು ಮಾತಾಡುತ್ತ ಶ್ರೀಮತಿ ನೆಹರೂರವರು "ಬಡಜನರು ಬೊಂಬ್ ದಾಳಿಯನ್ನು ಧೈರ್ಯದಿಂದ ಸಹಿಸಿಕೊಂಡಿರುವರು" ಎಂದರು.

ಇಂದಿರಾ ನೆಹರೂರವರು ಕೆಲದಿನ ಬೊಂಬಾಯಿಯಲ್ಲಿ ಉಳಕೊಂಡು, ನಂತರ ಲಕ್ನೋಗೆ, ತನ್ನ ತಂದೆಯನ್ನು ಕಾಣಲು ಹೋಗುವರು.

ಹೊಸ ಸತ್ಯಾಗ್ರಹಿಗಳಿಗೆ ಕೆಲವು ಸೂಚನೆಗಳು

ಈಗ ತಾನೇ ಖಾದಿ ಧರಿಸಿ, ನೂಲುವುದನ್ನು ನಿನ್ನೆ ಮೊನ್ನೆ ಅಭ್ಯಾಸಿಸಿದವರಿಗೆ ಸತ್ಯಾಗ್ರಹ ಹೂಡಲು ಇನ್ನು ಮುಂದೆ ಅನುಮತಿ ಸಿಗಲಾರದು. ಅವರು ಹಳ್ಳಿಗಳಿಗೆ ಹೋಗಿ ನೆಲಸಬೇಕು. ಅಲ್ಲಿ ರಚನಾತ್ಮಕ ಕಾರ್ಯಗಳನ್ನು ಮಾಡಿ ಆ ಕಾರ್ಯ ವರದಿಯನ್ನು ವಾರ ವಾರವೂ ಯಾರು ಕಳುಹಿಸುತ್ತಾ ಇರುತ್ತಾರೋ ಅವರಿಗೆ ಅನುಮತಿ ಕೊಡಲಾಗುವುದು."

ನಾಗಪುರ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಿಗೆ ಮಹಾತ್ಮಾಜಿಯವರು ಈ ತರದ ಸೂಚನೆಗಳನ್ನು ಹೇಳಿರುವರೆಂದು ತಿಳಿದಿದೆ.

ನೆಹರುಗಳನ್ನು ಸ್ಥಳ ಬದಲಾಯಿಸಿದರು

ಲಕ್ನೋ ಸೆರೆಮನೆಯಲ್ಲಿದ್ದ ಪಂಡಿತ ಜವಾಹರಲಾಲ ನೆಹರು ಆರ್. ಎಸ್. ಪಂಡಿತ ಇವರನ್ನು ಡೆಹರಾಡೂನ್ ಸೆರೆಮನೆಗೆ ಕರೆದೊಯ್ದಿರುವರೆಂದು ತಿಳಿದು ಬಂದಿದೆ.

ಇಂದಿರಾ ನೆಹರು ಭಾರತಕ್ಕೆ ಮರಳಿ ಬಂದರು

ಜಿನ್ನರಿಗೆ ರಾಜೇಂದ್ರ ಪ್ರಸಾದರ ಉತ್ತರ

ಭಾರತದ ಹಲವು ಕಡೆಗಳಲ್ಲಿ ದೊಂಬಿಗಳು

ಪಾಕಿಸ್ತಾನ ಯೋಜನೆಯ ವಿವರವೇನು?

ಜಿನ್ನರಿಗೆ ರಾಜೇಂದ್ರ ಬಾಬುಗಳ ಉತ್ತರ

"ಪಾಕಿಸ್ತಾನ ಯೋಜನೆಯು ಸರಿಯಾಗಿ ಏರ್ಪಟ್ಟಿಲ್ಲ ಅದರ ವಿವರವೇನೆಂದು ಜನರಿಗೆ ಗೊತ್ತಿಲ್ಲ. ಇಂತಹ ಸ್ಥಿತಿಯಲ್ಲಿ ಆ ಯೋಜನೆಯನ್ನು ಕಾಂಗ್ರೆಸು ಪರಿಶೀಲಿಸಲು ಸಾಧ್ಯವಿಲ್ಲ. ಅದರಿಂದ ಪ್ರಯೋಜನವೂ ಇಲ್ಲ. ಜಿನ್ನರು ಹೇಳುವುದರಲ್ಲಿ ಅರ್ಥವೂ ಇಲ್ಲ. ಸಾರ್ವಜನಿಕರು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗದ ಒಂದು ಯೋಜನೆಯನ್ನು ಪರಿಶೀಲಿಸುವುದು ಅಸಾಧ್ಯವೇ ಆಗಿದೆ." ಹೀಗೆಂದು ಜಿನ್ನರು ಮದ್ರಾಸು ಲೀಗ್ ಪರಿಷತ್ತಿನಲ್ಲಿ ಹೇಳಿದ ಮಾತುಗಳಿಗೆ ರಾಜೇಂದ್ರ ಬಾಬುಗಳು ಉತ್ತರಕೊಟ್ಟಿದ್ದಾರೆ.

ಭಾರತದಲ್ಲಿ ಮೋಟರ್ ಕೈಗಾರಿಕೆ ಫಲಕಾರಿಯಿದೆ; ನಷ್ಟವಿಲ್ಲ

"ಭಾರತದಲ್ಲಿ ಮೋಟಾರು ಕೈಗಾರಿಕೆಯನ್ನು ಮಾಡಿದರೆ, ಆರ್ಥಿಕ ದೃಷ್ಟಿಯಿಂದ ಲಾಭವಿದೆ. ಅಮೇರಿಕಕ್ಕೆ ಹೋದಾಗ ನಾನು ಅಲ್ಲಿನ ಮೋಟಾರ್ ಕೈಗಾರಿಕೆಯ ಖರ್ಚು ವೆಚ್ಚಗಳನ್ನು ತಿಳಿದು ಬಂದಿದ್ದೇನೆ. ಸ್ವೀಡ್, ಬೆಲ್ಜಿಯಂ ಮೊದಲಾದ ಚಿಕ್ಕ ದೇಶಗಳಲ್ಲಿ ಮೋಟರು ಕೈಗಾರಿಕೆ ನಡೆಯುತ್ತಿದೆ. ಈ ಕೈಗಾರಿಕೆಯಿಂದ ಲಾಭವಲ್ಲದೆ ನಮಗೆ ನಷ್ಟ ಬರುವಂತಿಲ್ಲ" ಎಂದು ಶ್ರೀ. ಲಾಲ್ ಚಂದ್ ಹೀರಾಚಂಧರು ಅಭಿಪ್ರಾಯಪಡುತ್ತಾರೆ.

ಮೌಲಾನಾ ಆಜಾದರು

ಅಲಹಾಬಾದಿನಲ್ಲಿ ಬಿಸಿಲಿನ ದಗೆಯು ಹೆಚ್ಚುತ್ತಿರುವುದರಿಂದ ರಾಷ್ಟ್ರಪತಿ ಮೌಲಾನಾ ಅಜಾದರು ಇತ್ತೀಚೆಗೆ ಒಂದು ದಿನ ಆ ತಾಪದಿಂದ ಅತ್ಯಂತ ತೊಂದರೆಗೀಡಾದರೆಂದು ಸುದ್ದಿ ಬಂದಿದೆ.

ಭಾರತಕ್ಕೆ ಜರ್ಮನ್ ಕೈದಿಗಳು.

ಆಫ್ರಿಕಾ ಯುದ್ಧದಲ್ಲಿ ಸೆರೆಸಿಕ್ಕಿದ ೧೭ ಮಂದಿ ಜರ್ಮನ್ ಕೈದಿಗಳನ್ನು ಬೊಂಬಾಯಿಗೆ ತಂದಿರುವರೆಂದು ತಿಳಿದುಬರುತ್ತದೆ. ಭಾರತಕ್ಕೆ ಜರ್ಮನ್ ಕೈದಿಗಳನ್ನು ತಂದದ್ದು ಇದೇ ಮೊದಲನೆಯ ಪಂಗಡವು.

ಜಿನ್ನಾರೊಡನೆ ಜಸ್ಟಿಸ್ ಪಾರ್ಟಿ ಮುಖಂಡರ ವಿಚಾರವಿನಿಮಯ

ಮದ್ರಾಸಿಗೆ ಮುಸ್ಲಿಂ ಲೀಗಿನ ಪರಿಷತ್ತಿಗೆ ಬಂದ ಜಿನ್ನರೊಡನೆ ಜಸ್ಟಿಸ್ ಪಾರ್ಟಿ ಮುಖಂಡರು ವಿಚಾರವಿನಿಮಯ ಮಾಡಿಕೊಂಡರೆಂದು ತಿಳಿದುಬರುತ್ತದೆ. ಪರಸ್ಪರ ಉದ್ದೇಶಗಳಲ್ಲಿ ಹೇಗೆ ಸಹಕರಿಸಬಹುದೆಂದು ಅವರ ಆಲೋಚನೆಯಂತೆ.

ಅಹಮ್ಮದಾಬಾದಿನಲ್ಲಿ ದೊಂಬಿ

ಅಹಮ್ಮದಾಬಾದಿನಲ್ಲಿ ದೊಂಬಿ ಸುರುವಾಗಿ ಅನೇಕ ಮನೆಗಳು ಸುಡಲ್ಪಟ್ಟಿವೆ. ಕರಾರಿ ಇರಿತಗಳು ಓಣಿಗಳಲ್ಲಿ ಆಗಿರುತ್ತವೆ.

ಶ್ರೀನಿವಾಸನ್‌-ರಾಜಾಜಿ ಭೇಟಿ

ತಿರುಚಿನಾಪಳ್ಳಿಯ ಸೆರೆಮನೆಯಲ್ಲಿರುವ ರಾಜಾಜಿಯವರನ್ನು ಹಿಂದೂ ಪತ್ರಿಕಾ ಸಂಪಾದಕರಾದ ಶ್ರೀನಿವಾಸರು ಹೋಗಿ ಸಂದರ್ಶಿಸಿ ಸತ್ಯಾಗ್ರಹ ನಿಲ್ಲಿಸಲು ಕಡಿಮೆಯ ಕರಾರು ಏನೆಂಬ ವಿಷಯ ವಿಚಾರವಿನಿಮಯ ಮಾಡಿದರೆಂದು ತಿಳಿಯುತ್ತದೆ.

ರಾಮನಾಡ ಜಿಲ್ಲೆಯಲ್ಲಿ ಗೋಳಿಬಾರು

ಪೋಲೀಸರು ಸತ್ಯಾಗ್ರಹಿಯನ್ನು ಹೊಡೆದರೆಂಬ ಸುದ್ದಿಯ ಪರಿಣಾಮ

ಚಿಕಿತ್ಸೆಯ ಸಲುವಾಗಿ ರಾಮನಾಡಕ್ಕೆ ತರಲ್ಪಟ್ಟಿರುವ ಒಬ್ಬ ಸತ್ಯಾಗ್ರಹಿಯನ್ನು ಪೋಲೀಸರು ಸಾಯ ಹೊಡೆದರೆಂಬ ಸುದ್ದಿಯನ್ನು ಕೇಳಿ ಸುಮಾರು ೩-೪ ಸಾವಿರ ಜನರು ಇದರ ನಿಜಾಂಶವನ್ನು ತಿಳಿಯಲು ಅರುಪಕೊತ್ತಾಯ ತಾಲೂಕ ಸ್ಟೇಶನಿಗೆ ಹೋಗಿ ಅಲ್ಲಿದ್ದವರ ಮೇಲೆ ಕಲ್ಲುಗಳನ್ನು ಒಗೆದರೆಂದು ಸುದ್ದಿ ಬಂದಿದೆ. ಆಗ ಪೋಲೀಸರು ಗೋಳಿಬಾರು ಮಾಡಿದರಲ್ಲದೆ, ಹಲವರನ್ನು ಸೆರೆಹಿಡಿದರಂತೆ ವಿವರಗಳು ಇನ್ನೂ ತಿಳಿದು ಬಂದಿಲ್ಲ.

ಬಜಾಜರ ಮಗನ ಸತ್ಯಾಗ್ರಹ

ಜುಲ್ಮಾನೆಗಳು-ತಿರಿಗಿ ಸತ್ಯಾಗ್ರಹ

ಶೇಠ ಜಮುನಾಲಾಲ ಬಜಾಜರ ಕಿರಿಯ ಮಗ ಶ್ರೀ ರಾಮಕೃಷ್ಣ ಬಜಾಜರು ಪ್ರಥಮ ಸಲ ಸತ್ಯಾಗ್ರಹ ಮಾಡಿ ಸರಕಾರವು ವಿಧಿಸಿದ ೧೦೦ ರೂಪಾಯಿ ಜುಲ್ಮಾನೆಯಾಗಿ ಅದನ್ನು ತೆತ್ತರು. ಎರಡನೆಯ ಸತ್ಯಾಗ್ರಹ ಮಾಡಿ, ತಿರಿಗಿಯೂ ವಿಧಿಸಲಾದ ೨೦೦ ರೂ. ದಂಡವನ್ನು ತೆತ್ತು ಈಗ ಮೂರನೆಯ ಸಲ ಸತ್ಯಾಗ್ರಹ ಮಾಡಿ ಕೈದಾಗಿರುವರು.

ಡಾ. ಮಿಸ್ ತುಂಗಮ್ಮ

ನಮ್ಮ ಜಿಲ್ಲೆಯವರಾದ, ಶ್ರೀ ಬೋಳಾರ ಬೋಜರಾಯರ ಸೋದರಿ ಡಾ। ಮಿಸ್‌ ತುಂಗಮ್ಮನವರು ಕಾಶಿಯ ಮೊದಲನೆಯ ಸ್ತ್ರೀ ಸತ್ಯಾಗ್ರಹಿಯಾಗಿ ಸತ್ಯಾಗ್ರಹ ಹೂಡಿ 'ಬಂಧಿತರಾದರಷ್ಟೆ? ಅವರನ್ನು ಈಗ ಲಖನೋ ಜೈಲಿನಿಂದ ಕಾಶಿ ಜೈಲಿಗೆ ತರಲ್ಪಾಗಿದೆಯೆಂದು ತಿಳಿದು ಬರುತ್ತದೆ. ಇವರು ಬೇಗನೇ ಬಿಡುಗಡೆಯಾಗಲಿರುವರೆಂದು ತಿಳಿದುಬರುತ್ತದೆ.

ಸತ್ಯಾಗ್ರಹಿಗೆ ಹೂವಮಾಲೆ ಹಾಕಿದ್ದು ತಪ್ಪೆ?

ಕಾಶಿಯಲ್ಲಿ, ಸತ್ಯಾಗ್ರಹಿಗೆ ಹೂವಮಾಲೆ ಹಾಕಿದ್ದು ಆತನಿಗೆ ಉತ್ತೇಜನ ಕೊಟ್ಟಂತಾಯಿತೆಂಬ ಆರೋಪದಿಂದ ಮೂರು ಜನರ ಮೇಲೆ ಖಟ್ಲೆ ಮಾಡಲಾಗಿತ್ತು. ಆದರೆ ಅವರು ನಿರ್ದೋಷಿಗಳೆಂದು ಮೇಜಿಸ್ಟ್ರೇಟರು ತೀರ್ಮಾನವಿತ್ತರು.

ಆಲಿಪುರಂ ಜೈಲಿನಲ್ಲಿ ರಾಜಕೀಯ ಕೈದಿಗಳ ಅನ್ನಸತ್ಯಾಗ್ರಹ

ಬೆತ್ತದಿಂದ ಹೊಡೆದರು

ಗಾಂಧಿಜಿಗೆ ಮತ್ತು ಸರಕಾರಕ್ಕೆ ತಂತಿ

ಬಳ್ಳಾರಿಯ ಆಲಿಪುರಂ ಜೈಲಿನಲ್ಲಿ ರಾಜಕೀಯ ಕೈದಿಗಳಿಗೆ ವಾರ್ಡರರು ಬೆತ್ತದಿಂದ ಹೊಡೆದರೆಂದು ತಾ. ೧೩ರಿಂದ ಅನ್ನಸತ್ಯಾಗ್ರಹವು ಆರಂಭವಾಗಿದೆ. ಕೆಲವರಿಗೆ ರಕ್ತವು ಸೋರಲು ಆರಂಭವಾಗಿರುವುದು.

ವೆಲ್ಲೂರು ಸೆರೆಮನೆಯ ಕೈದಿಗಳ ಉಪವಾಸದಲ್ಲಿ ಸಹಾನುಭೂತಿ ತೋರಿಸಲು ಇವರೂ ಉಪವಾಸ ಪ್ರಾರಂಭಿಸಿದರು. ಇದರ ನಿಮಿತ್ತ ಹೀಗಾಯಿತೆಂದು ಬಿಡುಗಡೆಯಾದ ಕೈದಿಯೊಬ್ಬನು ತಿಳಿಸಿದನು. ಈ ವಿವರವನ್ನು ಗಾಂಧಿಜಿಗೆ ಮತ್ತು ಸರಕಾರಕ್ಕೆ ತಂತಿ ಮೂಲಕ ತಿಳಿಸಲಾಗಿದೆ.

ಡಕಾಯಿತು ಪಂಗಡಗಳು ಬಂದಿತವಾಗಿವೆ

ಬಿಹಾರ ಬಂಗಾಳ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ದೊಂಬಿ ನಡಿಸಿದರೆಂದು ೨೪ ಡಕಾಯಿತ ಪಂಗಡಗಳನ್ನು ಸರಕಾರದವರು ಸೆರೆಹಿಡಿದಿರುವರು.

ಢಿಲ್ಲಿಗೆ ಮುಟ್ಟಿದ ಮೊದಲನೆಯ ಸತ್ಯಾಗ್ರಹಿ'

ಮುಂದೇನು ಮಾಡಬೇಕೆಂದು ಗಾಂಧಿಜಿಗೆ ತಂತಿ!

ಡಾ. ಟಿ. ಎ. ಅಮುತ್ತು ಎಂಬ ಸತ್ಯಾಗ್ರಹಿಯು ಡಿಲ್ಲಿಗೆ ಮುಟ್ಟಿರುವರು. ಪ್ರಾಂತಗಳಿಂದ ನಡೆದು ಬಂದ ಸತ್ಯಾಗ್ರಹಿಗಳಲ್ಲಿ ಇವರು ಮೊದಲನೆಯವರು. ಇವರು ಉತ್ತರ ಆರ್ಕಾಟಿನ ಜಿಲ್ಲೆಯವರು. ಕೇತಾಂಡ ಪಟ್ಟಣವೆಂಬ ಗ್ರಾಮದವರು. ಅಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾಗದೆ, ಒಟ್ಟು ೧೫೦೦ ಮೈಲು ಪಾದಚಾರಿಯಾಗಿ ನಡೆದು ಬಂದರು. 'ತಾನು ಡಿಲ್ಲಿಗೆ ಬಂದಿರುವೆನು; ಮುಂದೇನು ಮಾಡಬೇಕು' ಎಂದು ಅವರು ಗಾಂಧಿಜಿಗೆ ತಂತಿ ಕಳುಹಿಸಿರುವರು. ಇವರು ಚಕ್ರವರ್ತಿ ರಾಜಗೋಪಾಲಾಚಾರ್ಯರ ಸಂಬಂಧಿಕರೆಂದು ತಿಳಿದಿದೆ.

ಸೋತರೂ ಸ್ವಾತಂತ್ರ್ಯದ ಸಲುವಾಗಿ ಹೋರಾಡಿದೆವು

ಯುಗಸ್ಲವಿಯದ ಕಥೆ ಮುಗಿಯಿತು! ಗ್ರೀಸು ಅತ್ಯಂತ ಭೀಕರ ಪರಿಸ್ಥಿತಿಯಲ್ಲಿದೆ ಲಂಡನಿನ ಮೇಲೆ ಅತ್ಯುಗ್ರವಾದ ಧಾಳಿ ನಡೆಯಿತು ಬಾಲ್ಕನಿನಲ್ಲಿ ವಿಷಮ ಕೋಲಾಹಲ ಉಂಟಾಗಿದೆ ಈ ವಾರದಲ್ಲಿ ನಡೆದಷ್ಟು ಘನಘೋರ ಕಾಳಗವು ಯುದ್ಧ ಆರಂಭವಾದ ಮೇಲೆ ನಡೆದಿಲ್ಲವೆಂದು ಸುದ್ದಿ ಬಂದಿದೆ

ಸೋವಿಯಟ್ ರಶ್ಯದೊಡನೆ ಜಪಾನವು ಮಾಡಿಕೊಂಡ ಒಪ್ಪಂದಿಂದ ತ್ರಿರಾಷ್ಟ್ರ ಒಪ್ಪಂದಕ್ಕೆ ಭಂಗಬಂದಿಲ್ಲ ಅದು ಮತ್ತಷ್ಟು ಬಲಗೊಂಡಂತಾಯಿತು ಎಂದು ಜಪಾನ ಪರಮಂಡಳ ಸಚಿವರಾದ ಮತ್ಸುವೋಕಾ ಇವರು ಸ್ಪಷ್ಟೀಕರಿಸಿದರು

ಅಮೇರಿಕಕ್ಕೆ ಜಪಾನಿನ ಎಚ್ಚರಿಕೆ

ಬ್ರಿಟಿಷ್ ಹಡಗುಗಳನ್ನು ರಕ್ಷಿಸಬಾರದೆಂದು

ಜಪಾನಿನ ವಿದೇಶ ಮಂತ್ರಿ ಮೆಟ್ಸುವೋಕಾನು ಯೂರೋಪು ಪ್ರವಾಸದಿಂದ ಮರಳಿಬಂದನು ಜಪಾನಿನ ರಾಜಕಾರಣದಲ್ಲಿ ಅಲ್ಪಸ್ವಲ್ಪ ಬದಲಾವಣೆಯಾದರೂ ಮುಖ್ಯ ಧೋರಣೆ ಬೇರೆಯಾಗಿಲ್ಲವೆಂದೂ, ಬ್ರಿಟಿಷ್ ಸಾಮಾಗ್ರಿ ಹಡಗುಗಳ ರಕ್ಷಣೆಯ ಹೊಣೆಯನ್ನು ಅಮೇರಿಕವು ಹೊರುವುದು ಒಳಿತಾಗಿಲ್ಲವೆಂದೂ ಅವನು ಎಚ್ಚರವಿತ್ತಿರುವನು. ಅಮೇರಿಕದ ಹಡಗುಗಳು ಬಹಳ ಎಚ್ಚರಿಕೆಯಿಂದ ಇರಬೇಕು ಎಂದನು

ಯುಗಸ್ಲವಿಯವನ್ನು ಹಂಚಿಕೊಳ್ಳುವ ಯೋಜನ

ಯುಗಸ್ಲವಿಯವನ್ನು ಹಂಚಿಕೊಳುವ ಬಗ್ಗೆ ಇಟಲಿ ಜರ್ಮನಿಗಳ ಪ್ರಮುಖರಲ್ಲಿ ವಿಚಾರವಿನಿಮಯ ನಡೆಯುತ್ತಿದೆ ಈ ವಿಭಜನೆಯಲ್ಲಿ ಹಂಗೇರಿ, ರುಮೇನಿಯ, ಬಲ್ಗೇರಿಯ ಮತ್ತು ಆಲ್ಬೇನಿಯಗಳಿಗೂ ಪಾಲು ದೊರೆಯಬೇಕಂತೆ

ಅಥೆನ್ಸಿನ ಮೇಲೆ ವೈಮಾನಿಕ ಧಾಳಿ

ಅಥೆನ್ಸ್ ಚರ್ಚ್‌ಗಳಲ್ಲಿ ಪ್ರಾರ್ಥನೆ ನಡೆಯುತ್ತಿರುವಾಗ ಧಾಳಿಯ ಕಂಡೆ ಕೇಳಿಸಿತು. ಸ್ವಲ್ಪ ಹೊತ್ತಿನಲ್ಲಿಯೇ ನೂರಾರು ಜರ್ಮನ್ ವಿಮಾನಗಳು ಬಂದು ಎಲ್ಲಾ ಕಡೆಯೂ ಬಾಂಬುಗಳನ್ನು ಸುರಿಸಿದವು. ಆಸ್ತಿಪಾಸ್ತಿ ಪ್ರಾಣಗಳ ಹಾನಿಗಳಾಗಿವೆ.

ಯುಗಸ್ಲವಿಯ ಸರಕಾರಕ್ಕೆ ರಶ್ಯದ ಸಹಾಯ

ಜರ್ಮನಿಗೆ ಆಶ್ಚರ್ಯವಾಗಿದೆ

ರಶ್ಯನ್ ಸರಕಾರದವರು ಯುಗಸ್ಲವಿಯನ್ ಸರಕಾರದ ಮುಖ್ಯ ಮಂತ್ರಿಯೊಡನೆ ಸಹಾಯದ ಮಾತುಕತೆ ಮಾಡುತ್ತಿರುವರೆಂದು ಸುದ್ದಿ ಹರಡಿ ಜರ್ಮನ್ ಅಧಿಕಾರಿಗಳಿಗೆ ಆಶ್ಚರ್ಯವಾಗಿದೆಯಂತೆ

ಯುಗಸ್ಲವಿಯದ ಪ್ರಧಾನರು ಹೇಳುತ್ತಾರೆ

ಗ್ರೀಸಿನ ಪರಿಸ್ಥಿತಿ ಭೀಕರವಾಗಿದೆ!

ಲಂಡನಿನ ಮೇಲೆ ಮಹೋಗ್ರ ಧಾಳಿ!

ಯುಗಸ್ಲವಿಯಕ್ಕೆ ರಶ್ಯದ ಸಹಾಯ

ಪಾರ್ಲಿಮೆಂಟ್ ಕಟ್ಟಡದ ಮೇಲೆಯೂ ಧಾಳಿ

ಪಾರ್ಲಿಮೆಂಟ್ ಕಟ್ಟಡದ ಮೇಲೆಯೂ ಬಾಂಬುಗಳು ಬಿದ್ದವು. ಒಳಚೌಕದಲ್ಲಿರುವ ಸ್ಪೀಕರರ ಭವನವು ಶತ್ರು ಧಾಳಿಗೆ ಭಗ್ನವಾಗಿರುವುದು ಸ್ಪೀಕರರು ಮನೆಯಲ್ಲಿ ರಲಿಲ್ಲ

ಕಾಮನ್ಸ್ ಭವನದ ಪುಸ್ತಕಾಲಯಕ್ಕೆ ಧಕ್ಕೆ ತಗಲಿದೆ ಕಾವಲುಗಾರರ ಬಿಡಾರಗಳು ಪುಡಿಮುರಿಯಾಗಿವೆ.

ಪರರಾಷ್ಟ್ರಗಳ ಅಂಕೆಗೆ ನಾವು ಒಳಪಟ್ಟಿಲ್ಲ

ರಶ್ಯದ ಧೋರಣೆ

ಈಗ ಜಪಾನಿನೊಡನೆ ಮಾಡಿಕೊಂಡ ಒಪ್ಪಂದವು ಜರ್ಮನಿ ವಿರುದ್ಧವಲ್ಲ ನಮ್ಮ ಈಗಿನ ಧೋರಣೆಯು ಪರರಾಷ್ಟ್ರದ ಹಿಡಿತಕ್ಕೆ ಒಳಗಾಗಿಲ್ಲ. ನಮ್ಮ ದೇಶದ ಶಾಂತಿ ಕಾಪಾಡುವುದು ನಮ್ಮ ಉದ್ದೇಶ ಹೀಗೆಂದು ರಶ್ಯದ 'ಪ್ರವಾಡ' ಪತ್ರಿಕೆಯು ಬರೆದಿದೆ

ಗ್ರೀಕ್ ಪ್ರಧಾನ ಮಂತ್ರಿಯ ಆತ್ಮಹತ್ಯೆ!

ದೇಶದ ಪ್ರಕ್ಷೋಭವು ಕಾರಣವಂತೆ

ಗ್ರೀಸಿನ ಪ್ರಧಾನ ಕೋರಿಟ್ಸರು ತಾ. ೧೮ರಂದು ಆತ್ಮಹತ್ಯೆ ಮಾಡಿಕೊಂಡರು ದೇಶದ ಪರಿಸ್ಥಿತಿಯು ಬಹಳ ಪ್ರಕ್ಷೋಭವಾಗಿರುವುದರಿಂದ ಜವಾಬ್ದಾರಿಯ ಕಷ್ಟವನ್ನು ತಡೆಯಲಾರದೆ ಅವರು ಆತ್ಮಹತ್ಯೆ ಮಾಡಿಕೊಂಡರಂತೆ

ಗ್ರೀಸಿನಲ್ಲಿ ಹೊಸ ಮಂತ್ರಿಮಂಡಳ

ರಾಜರೇ ಮಹಾಪ್ರಧಾನರಾದರು

ಗ್ರೀಸಿನಲ್ಲಿ ಹೊಸ ಮಂತ್ರಿಮಂಡಳವು ಸ್ಥಾಪಿತವಾಗಿದೆ ಜಾರ್ಜ ರಾಜರೇ ಮಹಾಪ್ರಧಾನರಾಗುವರೆಂದು ತಿಳಿದು ಬಂದಿದೆ

ಇಂಗ್ಲೆಂಡಿನ ಮೇಲೆ ಭಯಂಕರ ಧಾಳಿ

ಈ ವಾರ ಇಂಗ್ಲೆಂಡಿನ ಮೇಲೆ ಅತ್ಯುಗ್ರವಾದ ಧಾಳಿಯಾಗಿದೆ. ಅನೇಕ ಪ್ರಸಿದ್ಧ ಕಟ್ಟಡಗಳು ಜನಭವನಗಳು ನಾಶವಾಗಿವೆ ಹಲವು ಹೃದಯ ದ್ರಾವಕ ದೃಶ್ಯಗಳು ಆಗಿವೆ. ಕಾಲಾಗ್ನಿಯು ಗಗನ ಚುಂಬಿಸುವಂತಿತ್ತು! ಲಾರ್ಡ್ ಸ್ಟಾಂಪ್ ಮತ್ತು ಅವರ ಧರ್ಮಪತ್ನಿಯವರು ಇದರಿಂದ ಮಡಿದಿದ್ದಾರೆ

ಸೋತರೂ ಚಿಂತೆಯಿಲ್ಲ

ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವು

ಯುಗಸ್ಲವಿಯದ ಮಂತ್ರಿ ಹೇಳುತ್ತಾನೆ

ನಾವು ಹೋರಾಡಿದ್ದು ಸಮಬಲದ ಶತ್ರುವಿನೊಡನಲ್ಲ ಆದರೂ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡಬೇಕಾಯಿತು ಇದರಲ್ಲಿ ಸೋತರೂ ಈಗ ನಮಗ ಸೋಲಿಗಾಗಿ ಚಿಂತೆಯಿಲ್ಲವೆಂದು ಯುಗಸ್ಲವಿಯದ ಮುಖ್ಯ ಮಂತ್ರಿಯು ಹೇಳುತ್ತಾನೆ

ಬರ್ಲಿನಿನ ಮೇಲೆಯೂ ಧಾಳಿ

ಈ ವಾರ ಬ್ರಿಟಿಷ ವಿಮಾನಗಳು ಬರ್ಲಿನಿನ ಮೇಲೆಯೂ ಭೀಕರವಾಗಿ ಧಾಳಿಮಾಡಿರುವುವು

ಚೀನಕ್ಕೆ ರಶ್ಯದ ಸಹಾಯವಿಲ್ಲ.

ಜಪಾನೀ ಅಧಿಕಾರಿ ಹೇಳುತ್ತಾನೆ.

ರಶ್ಯಾ ಜಪಾನು ಒಪ್ಪಂದವಾದ ನಿಮಿತ್ತ ಇನ್ನು ಮುಂದೆ ಚೀನಕ್ಕೆ ರಶ್ಯದಿಂದ ಬರುವ ಸಹಾಯವು ತಪ್ಪಿತೆಂದು ಜಪಾನು ಸೈನ್ಯಾಧಿಕಾರಿಯೊಬ್ಬನು ಹೇಳುತ್ತಾನೆ

ಟರ್ಕಿ-ಜರ್ಮನಿ ಅನಾಕ್ರಮಣ ಒಪ್ಪಂದ?

ಟರ್ಕಿ ಮತ್ತು ಜರ್ಮನಿಗಳೊಳಗೆ ಇಷ್ಟರಲ್ಲಿಯೇ ಅನಾಕ್ರಮಣ ಒಪ್ಪಂದವೊಂದು ಸಹಿಯಾಗಲಿರುವುದಾಗಿ ತಿಳಿದು ಬರುತ್ತದೆ ರಾಯಭಾರಿಗಳು ಅತ್ತಿತ್ತ ಓಡಾಡುತ್ತಿರುವರಂತೆ

ಗ್ರೀಸ್ ರಣಭೂಮಿಗೆ ಜರ್ಮನ ಸೈನ್ಯಗಳು ಬಂದುವು

ದಕ್ಷಿಣ ಯುಗಸ್ಲವಿಯೊದಲ್ಲಿದ್ದ ಹಲವು ಪ್ರಬಲವಾದ ಜರ್ಮನ್ ಸೈನ್ಯಗಳು ಪಶ್ಚಿಮ ಮ್ಯಾಸಿಡೋನಿಯಕ್ಕೆ ಬಂದಿರುವವು ಆಲ್ಬೇನಿಯಾದಲ್ಲಿದ್ದ ಗ್ರೀಕ್ ಸೈನ್ಯಗಳು ಇದರಿಂದ ಹಿಂದಕ್ಕೆ ಸರಿದು ಹೋಗಬೇಕಾಯಿತು

ಗ್ರೀಕ್ ವ್ಯೂಹದಲ್ಲಿ ಜರ್ಮನರ ಒತ್ತಾಟ ಹೆಚ್ಚಾಗಿದೆ

ಗ್ರೀಕ್ ರಣಭೂಮಿಯಲ್ಲಿ ಜರ್ಮನರ ಒತ್ತಾಟವು ವಿಶೇಷವಾಗಿ, ಗ್ರೀಕ್ ಮತ್ತು ಬ್ರಿಟಿಷ ಸೈನ್ಯಗಳು ಹಿಂದೆ ಹಿಂದಕ್ಕೆ ಸರಿಯುತ್ತಿವೆಯೆಂದು ತಿಳಿದುಬರುತ್ತದೆ.

ಗ್ರೀಕ್ ಮುಖ್ಯ ಮಂತ್ರಿಯ ನಿಧನ

ಗ್ರೀಕ್ ಮುಖ್ಯಮಂತ್ರಿ ಅಲೆಗ್ಝಾಂಡರ ಕೊಂಜಿಜ ಇವರು ತಾ. ೧೮ರಂದು ಅಕಸ್ಮಿಕ ನಿಧನಹೊಂದಿರುವ ವಾರ್ತೆಯು ಬಂದಿದೆ

ಯುಗಸ್ಲವಿಯ ಶರಣಾಯಿತು!

ಶರಣುಪತ್ರಕ್ಕೆ ಸಹಿ

ಯುಗಸ್ಲವಿಯವು ಜರ್ಮನಿಗೆ ಶರಣು ಹೊಕ್ಕಿರುವ ಬಗ್ಗೆ ಒಪ್ಪಂದವಾಗಿ ಬೆಲ್ಗ್ರೇಡಿನಲ್ಲಿ ಒಪ್ಪಂದ ಪತ್ರಕ್ಕೆ ಸಹಿಯಾಗಿದೆ ಯುಗಸ್ಲವಿಯವನ್ನು ಇಟಲಿ ಮತ್ತು ಜರ್ಮನ್ ಸೈನ್ಯಗಳ ವಶಪಡಿಸಿಕೊಳ್ಳುವವು

ಸ್ಪೈನಿಗೂ ಸಾಮ್ರಾಜ್ಯದ ಆಸೆ!

ಸ್ಪೈನ್ ಸರಕಾರದ ಸರ್ವಾಧಿಕಾರಿ ಜನರಲ್ ಫ್ರಾಂಕೋ ಮಾತನಾಡುತಾ ಸ್ಪೈನ್ ಸಾಮ್ರಾಜ್ಯವನ್ನು ಕಟ್ಟುವ ತವಾಬ್ದಾರಿಯ ಸಿಪಾಯಿಗಳನ್ನು ಅವಲಂಬಿಸಿದೆಯೆಂದನು

"ಶಾಂತಿಯೆಂಬುದು ಸುಳ್ಳು ಇಂದಿನ ಶಾಂತಿಯು ಕೇವಲ ಸಮರ ಸಿದ್ಧತೆಯಾಗಿದೆ ಹಿಂದಿನ ವಿಜಯಗಳಲ್ಲಿ ಮೈಮರೆವ ವ್ಯಕ್ತಿಯು ಆತ್ಮನಾಶವನ್ನಾಡಿಕೊಳ್ಳುತ್ತಾನೆ" ಎಂದು ಅವನು ಹೇಳಿದನು

ಒಲಿಂಪಸ್ ಪರ್ವತದ ಬಳಿ ಕಾಳಗ

ಮ್ಯಾಸಿಡೋನಿಯದ ಒಲಿಂಪಸ್ ಪರ್ವತದ ಬಳಿ ಘೋರ ಕಾಳಗ ನಡೆಯುತ್ತಿದೆಯೆಂದು ತಿಳಿದುಬರುತ್ತದೆ ಅಲ್ಲಿ ಗ್ರೀಕ್ ಮತ್ತು ಬ್ರಿಟಿಷ ಸೈನ್ಯಗಳು ಜರ್ಮನರನ್ನು ತಡೆವರು ಜರ್ಮನರ ಕಡೆಯಲ್ಲಿ ಸುಮಾರು ೬೦,೦೦೦ ಜನರು ಸತ್ತರೆಂದು ಸುದ್ದಿಯಿದೆ ಜರ್ಮನ್ ಸೈನ್ಯದವರನ್ನು ಹಿಂದೂಡಲಾಯಿತೆಂದು ವಾರ್ತೆ

ಸೊಲ್ಲುಂ ನಾಜಿಗಳ ವಶವಾಯಿತು.

ಕೆಪುಟ್ಸೊ ಕೋಟೆಯನ್ನೂ ಹಿಡಿದರು

ಜರ್ಮನರು ಲಿಬಿಯಾ ತೀರದ ಕೆಪುಟ್ಸೊ ಕೋಟೆಯನ್ನೂ ಈಜಿಪ್ತ ಗಡಿಯಲ್ಲಿರುವ ಸೊಲ್ಲುಮನ್ನೂ ಹಿಡಿದರು. ಟೋಬ್ರುಕಿನ ಬಳಿ ಜರ್ಮನ್ ಧಾಳಿ ಬಲವಾಗಿದೆ

ಮಾಲ್‌ಟೋವ್ ಟೋಕಿಯೋವಿಗೆ

ರಶ್ಯದ ವಿದೇಶಾಂಗ ಮಂತ್ರಿ ಮಾಲ್‌ಟಾವ್ಹರನ್ನು ಜಪಾನ್ ವಿದೇಶಾಂಗ ಮಂತ್ರಿ ಮಟ್ಸೂಕರು ಆಹ್ವಾನಿಸಿದಂತೆ ಅವರು ಟೋಕಿಯೋವಿಗೆ ತೆರಳಿರುವರು

(೧೨ನೆಯ ಪುಟವನ್ನು ನೋಡಿ)

ಶಾಲಾ ಪುಸ್ತಕಗಳು

*ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ. ಎರಡನೆಯ ಆವೃತ್ತಿಯು ಹೊರಬೀಳುತ್ತಿದೆ.

ಬೆಲೆ ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕವನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು, ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು, ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ. ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು, ಮೋದಬೋಧಪ್ರದಗಳೆಂದು

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ ಬಿ ಶ್ರೀನಿವಾಸರಾವ್ ಮತ್ತು ಬಿ. ದೂಮಪ್ಪನವರಿಂದ ರಚಿತವಾದದು

೪ನೆಯ ತರಗತಿಗೆ ಬೆಲೆ 0 4 0 ೫ನೆಯ ತರಗತಿಗೆ ಬೆಲೆ 0 5 0

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿದೆ. ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮೊತ್ತ ಮೊದಲಾಗಿ ರಚಿತವಾದುವು. ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ, ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ. ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ.

ಬೆಲೆ: ೪, ೫ನೆಯ ತರಗತಿಗೆ 0-1-6 *೬ನೆಯ 0-2-0
*೭ನೆಯ 0-2-6 *೮ನೆಯ 0-3-0

ಸಿರಿಗನ್ನಡ ಪಾಠಕಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್ ವಿ. ಎಸ್ ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ, ತರುವಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪಾಠಕದ ರಚನೆಯಾಗಿರುತ್ತದೆ.

ಬೆಲೆ 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 6

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ವಿ ಸೂ ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಉತ್ತರ ಗ್ರೀಸ ರಣಭೂಮಿಯಲ್ಲಿ ಭೀಕರ ಪರಿಸ್ಥಿತಿ

ಗ್ರೀಕ-ಬ್ರಿಟಿಷ್ ಸೈನ್ಯಗಳು ಹಿಂದೆ ಸರಿದವು

ಗ್ರೀಸಿನಲ್ಲಿದ್ದ ಬ್ರಿಟಿಷ ಸೈನ್ಯಗಳು ಹಿಂದೆ ಸರಿದವು. ಆದರೂ ವ್ಯೂಹವು ಮುರಿದಿಲ್ಲವಂತೆ.

ಒಲಿಂಪಸ್ ಪರ್ವತವನ್ನು ಬ್ರಿಟಿಷರು ಖಾಲಿಮಾಡಿರುವರು. ಅಲ್ಲಿನ ಪರಿಸ್ಥಿತಿ ಭೀಕರವಾಗಿದೆ.

ಗ್ರೀಕರಿಗೆ ಅರಸರ ಸಂದೇಶ

ಕೊನೆವರೆಗೆ ಕಾದಾಡುವ

ಗ್ರೀಸಿನ ಅರಸರಾದ ಜಾರ್ಜರು ಒಂದು ಸಂದೇಶವನ್ನು ಕೊಡುತ್ತಾ ಪ್ರತಿಯೊಬ್ಬನೂ ಶಾಂತತೆಯಿಂದಿದ್ದು ದೇಶದ ಗೌರವ ಸ್ವಾತಂತ್ರ್ಯಗಳ ಸಲುವಾಗಿ ಕೊನೆವರೆಗೆ ಹೋರಾಡಲು ಕಂಕಣಬದ್ಧನಾಗತಕ್ಕದ್ದೆಂದು ಹೇಳಿರುವರು.

ಪೂರ್ವ ಏಶ್ಯದಲ್ಲಿ ಯುದ್ಧವಾದರೆ?

ಪೂರ್ವ ಏಶ್ಯಾದಲ್ಲಿ ಯುದ್ಧವಾದರೆ ಮುಂದೇನು ಮಾಡತಕ್ಕದ್ದೆಂದು ಆಲೋಚನೆ ಮಾಡಲು ಸಿಂಗಾಪುರದಲ್ಲಿ ಒಂದು ಸಭೆ ಕೂಡಿತು. ಅನೇಕ ಪ್ರಮುಖ ರಾಜಕಾರಣಿಗಳು ಇದಕ್ಕೆ ಬಂದಿದ್ದರು.

ಫ್ರಾನ್ಸು ಲೀಗ್ ಓಫ್ ನೇಶನ್ಸಿನಿಂದ ದೂರವಾಯಿತು

ಲೀಗ್ ಓಫ್ ನೇಶನ್ಸಿನಿಂದ ಫ್ರಾನ್ಸು ಈಗ ಬೇರಾಗಿದೆ. ಇದರಿಂದ ಲೀಗ್ ಓಫ್ ನೇಶನ್ಸಿನ ಪತನವೇ ಪೂರ್ಣವಾಯಿತು. ಈಗ ಅದರಲ್ಲಿ ಉಳಿದಿರುವ ರಾಷ್ಟ್ರವೆಂದರೆ ಬ್ರಿಟನು ಒಂದು ಮಾತ್ರ.

ಜರ್ಮನರಿಗೆ ಬ್ರಿಟಿಷ್ ಸರಕಾರದ ಎಚ್ಚರಿಕೆ

ಎಥೆನ್ಸ್ ಕೈರೊಗಳನ್ನು ಮುತ್ತಿದರೆ ರೋಮನ್ನು ನಾಶಪಡಿಸಲಾಗುವುದು

ಎಥೆನ್ಸ್ ಕೈರೋ ನಗರಗಳ ಮೇಲೆ ಭಯಂಕರವಾಗಿ ಧಾಳಿ ನಡೆಸಲಾಗುವುದೆಂದು ಜರ್ಮನರು ಬೆದರಿಸುತ್ತಾರೆ. ಈ ನಗರಗಳ ಮೇಲೆ ಜರ್ಮನರು ಬಾಂಬುಗಳನ್ನೆಸೆದರೆ ರೋಮಿನ ಮೇಲೆ ಭಯಂಕರ ಧಾಳಿ ಮಾಡುವುದಾಗಿ ಬ್ರಿಟಿಷ್ ಸರಕಾರವು ನಿರ್ಧರಿಸಿರುತ್ತದೆ. ಪೋಪರು ಇರುವ ವೆಟಿಕನ್ ನಗರದ ಮೇಲೆಯೂ ಧಾಳಿ ಮಾಡಲಾಗುವುದೆಂದು ಹೇಳಲಾಗಿದೆ.

ಉತ್ತರ ಆಫ್ರಿಕದಲ್ಲಿ ಕಾಳಗ

ಬಾಲ್ಕನಿಗಿಂತಲೂ ಮಹತ್ವದ್ದು

ಉತ್ತರ ಆಫ್ರಿಕದಲ್ಲಿ ನಡೆಯುತ್ತಿರುವ ಕಾಳಗವು ಬಾಲ್ಕನ್ ಯುದ್ಧಕ್ಕಿಂತಲೂ ಮಹತ್ವದ್ದಾಗಿರುತ್ತದೆಂದು ಹೆಲಿಫಾಕ್ಸರು ಹೇಳಿದರು. ಅವರು ವಾಶಿಂಗಟನಿನಲ್ಲಿ, ಕಾರ್ಡೆಲ್ ಹಲ್ಲರೊಡನೆ ಮಾತುಕತೆ ನಡೆಸಿದರು.

★ ವಿಚಿತ್ರ-ಪ್ರಪಂಚ ★

ಪಕ್ಕೆಲುಬು ಕೊಟ್ಟು ಮದುವೆ ಮಾಡಿಕೊಂಡ

ಅಮೇರಿಕದ ಒಬ್ಬ ಪ್ರಸಿದ್ಧ ಎಣ್ಣೆ ವ್ಯಾಪಾರಿಯ ಒಬ್ಬಳೇ ಆದ ಮಗಳು ಒಂದು ದಿನ ಅಪಘಾತಕ್ಕೆ ಗುರಿಯಾಗಿ ಒಂದು ಪಕ್ಕೆಲುಬನ್ನು ಮುರಿದುಕೊಂಡಳು ಒಬ್ಬ ಜೀವಂತ ಮನುಷ್ಯನ ಇನ್ನೊಂದು ಪಕ್ಕೆಲುಬನ್ನು ತೆಗೆದು ಕಟ್ಟಿದ ಹೊರತು ಅವಳನ್ನು ಬದುಕಿಸುವುದು ಕಷ್ಟವೆಂದು ಕಂಡಿತು ವೈದ್ಯರು ಬಹಳ ಹುಡುಕಿದ ಮೇಲೆ ನ್ಯೂ ಯೋರ್ಕಿನ ಒಬ್ಬ ಪ್ರಸಿದ್ಧ ತರುಣ ಶಿಲ್ಪಿ ಲ್ಯಾನ್ಸ ಎಂಬಾತನನ್ನು ಕೇಳಿದರು ಅವನು ಒಪ್ಪಿದ ಶಸ್ತ್ರ ಚಿಕಿತ್ಸೆ ನಡೆದು ಲ್ಯಾನ್ಸನ ಒಂದು ಪಕ್ಕೆಲುಬನ್ನು ಆ ಲಾವಣ್ಯವತಿಗೆ ಕಟ್ಟಿದುದಾಯಿತು ಇಬ್ಬರೂ ಗುಣಮುಖರಾದರು. ಕೊನೆಗೆ ತನಗೆ ಸೌಂದರ್ಯ ಕೊಟ್ಟು ಜೀವದಾನ ಮಾಡಿದವನ ಮೇಲೆ ಈ ರಮಣಿಗೆ ಮೋಹವುಂಟಾಯಿತು. ಅವರೊಳಗೆ ಪ್ರಣಯವೂ ಹುಟ್ಟಿತು ಮದುವೆಯೂ ಆಯಿತು, ಈಗ ಇಬ್ಬರೂ ಗಂಡಹೆಂಡರಾಗಿ ಅಮೇರಿಕದಲ್ಲಿ ಸುಖ ಜೀವನವನ್ನು ನಡೆಸುತ್ತಿದ್ದಾರೆ.

◈ ◈

ಮರ ಸಾಗಲಿಕ್ಕೆ ಆನೆಮಾರ್ಗ

ಅಂಡಮಾನದಲ್ಲಿ ದಟ್ಟವಾದ ಕಾಡುಗಳಿವೆ ಇವುಗಳಿಂದ ಕಡಿದ ಮೋಪಿನ ಮರಗಳನ್ನು ರವಾನೆ ಮಾಡಲಿಕ್ಕೆ ಬ್ಲೇರ್ ಬಂದರಿಗೆ ಕಳುಹಿಸಲಿಕ್ಕೆ ಒಂದು ಸುತ್ತಾದ ರಾಜಮಾರ್ಗವನ್ನು ಅನುಸರಿಸಬೇಕು ಇದಕ್ಕೆ ಖರ್ಚೂ ಸಮಯವೂ ಬಹಳ ತಗಲುತ್ತದೆ. ಅದಕ್ಕೋಸ್ಕರ ಭಾರತ ಸರಕಾರದ ಸಮ್ಮತಿಯಿಂದ ಒಂದು ಯೋಜನೆಯನ್ನು ಕೈಕೊಂಡಿದ್ದಾರೆ ಈ ಕಾಡುಗಳಿಂದ ಬ್ಲೇರ್ ಬಂದರಿಗೆ ನೆಟ್ಟಗಿನ ಆನೆಮಾರ್ಗಗಳನ್ನು ಕಡಿಯುವರು. ಅಂದರೆ ಆನೆಗಳು ಬಂದು ಹೋಗಬಹುದಾದಷ್ಟು ಅಗಲವಾದ ಮಾರ್ಗಗಳನ್ನು ಕಡಿದು, ಚಿಕ್ಕ ಬಂಡಿಗಳ ಮೇಲೆ ಮೋಪಿನ ಮರಗಳನ್ನು ಹೇರುವರು ಆನೆಗಳು ಇವನ್ನು ಎಳೆಕೊಂಡು ಹೋಗುವವು ಇದರಿಂದ ಖರ್ಚೂ ಸಮಯವೂ ಕಡಿಮೆ ತಗಲುತ್ತದೆ. ಈ ಆನೆಮಾರ್ಗಗಳನ್ನು ಕಡಿಯಲಿಕ್ಕೆ ೧೩೫೦೦ ಪವನುಗಳು ಮಂಜೂರಾಗಿವೆ ಈ ಮಾರ್ಗಗಳ ಇತರ ಮಾರ್ಗಗಳಂತೆ ಸಮತಟ್ಟಾಗಿರಬೇಕಾಗಿಲ್ಲ ಏರುತಗ್ಗಾಗಿದ್ದರೂ ಆಗುತ್ತದೆ ಆದ್ದರಿಂದ ಅನುಕೂಲವಾಗಿದೆ? ಇಂಥ ಮಾರ್ಗಗಳಾಗುವುದು ಪ್ರಪಂಚದಲ್ಲಿ ಇದು ಮೊದಲನೆ ಬಾರಿಯಂತೆ'

◈ ◈

ಪ್ರಶ್ನೆ ಕೇಳಿದುದಕ್ಕೆ ಚಾಮರ ಪೂಜೆ!

ನಮ್ಮ ದೇಶದಲ್ಲಿ ಖಾನೇಶುಮಾರಿ ನಡೆದು ಬಹಳ ದಿನಗಳಾಗಲಿಲ್ಲ ಈಗ ಖಾನೇಶುಮಾರಿಯ ಕುರಿತು ಅನೇಕ ಮನೋರಂಜಕ ಕತೆಗಳು ಪ್ರಕಟವಾಗಲಾರಂಭಿಸಿವೆ, ಒಬ್ಬ ಗಣಕನು ಒಂದು ದಿನ ಒಬ್ಬ ಹೆಂಗಸಿನ ಮನೆಗೆ ಹೋದನು ಮನೆಯಲ್ಲಿ ಅವಳು ಒಬ್ಬಳೇ ಇದ್ದಳು. ಗಣಕನು ಕೇಳಿದ–ನಿನಗೆ ಪ್ರಾಯ ಎಷ್ಟು? ತಾಯಿ ಪ್ರಾಯ ಎಷ್ಟು? ತಂದೆ ಪ್ರಾಯ ಎಷ್ಟು? ಯಾವಾಗ ಮದುವೆ ಆಯಿತು? ಎಂಬೀ ಮೊದಲಾದ ಪ್ರಶ್ನೆಯೊಂದು ಪ್ರಶ್ನೆಗೆ ಅವಳ –'ನನಗೆ ಗೊತ್ತಿಲ್ಲ, ಸತ್ತ ತಂದೆಯನ್ನು ಕೇಳಬೇಕು, ತಾಯಿಯನ್ನು ಕೇಳಬೇಕು.' ಎಂದು ಮುದ್ದಾದ ಉತ್ತರ ಕೊಡುತ್ತಿದ್ದಳಂತೆ ಗಣಕನಿಗೆ ಸಿಟ್ಟು ಬಂದು ಅವನು ಮುಂದೆ ಕೇಳಬೇಕಾದ ಪ್ರಶ್ನೆ–'ಮದುವೆಯಾಗಿ ಎಷ್ಟು ಸಮಯದ ನಂತರ ಮಗು ಹುಟ್ಟಿತು?' ಎಂಬುದರ ಬದಲಿಗೆ, 'ಮದುವೆಯಾದ ಮೇಲೆ ನಿನಗೆ ಎಷ್ಟು ಮಕ್ಕಳು ಹುಟ್ಟಿದುವು?' ಎಂದು ಕೇಳಿದನಂತೆ ಅವಳು ಸಿಟ್ಟಾಗಿ ಬೈದಳು ಬೈಗಳು ಕೇಳಿಯೂ ಗಣಕನು ಹೊರಡದಿದ್ದಾಗ, ಅವಳು ಚಾಮರ ಹಿಡಿದು ನಿಂತಳಂತೆ'

◈ ◈

ಆಂಗ್ಲೇಯರು ಭಾರತದಿಂದ ಕಲಿತದ್ದು

ಮದ್ರಾಸಿನ ಅನಾಥಾಲಯದ ಮೊದಲನೆ ಸಂಚಾಲಕರಾಗಿದ್ದ ಡಾಕ್ಟರ ಎಂಡ್ರ್ಯೂ ಬೆಲ್ ಎಂಬವರು ಒಂದು ದಿನ ಮದ್ರಾಸಿನ ಒಂದು ರಸ್ತೆಯಲ್ಲಿ ತಿರುಗುತ್ತಿದ್ದರು. ಅಲ್ಲಿ ಒಂದು ಮನೆಯಲ್ಲಿ ಒಂದು ಮಗಳ ಮಠ ...ದರೊಳಗೆ ಒಬ್ಬನೇ ಉಪಾಧ್ಯಾಯ. ಹಲವು ಕ್ಲಾಸುಗಳು ಆದರೂ ಮಂದಕ್ರಮಗಳೆಲ್ಲ, ವ್ಯವಸ್ಥೆಯಿಂದ, ಶಿಸ್ತಿನಿಂದ ನಡೆಯುತ್ತಿದ್ದುವು ಒಬ್ಬ ಮಗಳಿಂದ ಇಷ್ಟು ತರಗತಿಗಳ ವ್ಯವಸ್ಥೆ ಮಾಡುವುದು ಹೇಗೆ ಸಾಧ್ಯ ಎಂದು ಆಶ್ಚರ್ಯಪಟ್ಟ ಡಾಕ್ಟರ ಬೆಲ್ಲರು ಒಳಗೆ ಹೋಗಿ ನೋಡಿದರು ಮಗಳೆರಡು ಒಬ್ಬರಿಬ್ಬರಾದರೂ ಮೋನಿಟರ್ಸ್ ಎಂದು ನಾವು ಕರೆಯುವ ಹಿರೇಮಾಣಿಗಳು ಈ ಮಗಳಿಗೆ ಸಹಾಯಕರಾಗಿದ್ದುದನ್ನು ಕಂಡರು ಚುರುಕು ಬುದ್ಧಿಯ ಮಕ್ಕಳು ಮಂದ ಬುದ್ಧಿಯವರಿಗೂ, ಮೇಲಿನ ತರಗತಿಯವರಿಗೂ ಕೆಳತರಗತಿಯವರಿಗೂ ಕಲಿಸುತ್ತಿದ್ದರು. ಇದು ಬಹಳ ಉತ್ತಮವಾದ ಕ್ರಮವೆಂದು ಡಾ ಬೆಲ್ಲರಿಗೆ ಅನ್ನಿಸಿತ ಈ ಪದ್ಧತಿಯನ್ನು ಅವರು ೧೭೯೭ರಲ್ಲಿ ತಮ್ಮ ನಾಡಿಗೆ ಕೊಂಡುಹೋದರು. ಅವರು ಸಾಯುವಾಗ, ಅಂದರೆ ೧೮೩೨ರ ಸುಮಾರಿಗೆ ಬ್ರಿಟನಿನ ೧೨೦೦೦ ಶಾಲೆಗಳಲ್ಲಿ ಈ ಪದ್ಧತಿಯನ್ನು ಅನುಸರಿಸಿದ್ದರೆಂದು ಗೊತ್ತಾಗುತ್ತದೆ ಹಿರೇಮಾಣಿ ಪದ್ಧತಿಯನ್ನು ಡಾಕ್ಟರ ಬೆಲ್ಲರೇ ಭಾರತದಲ್ಲಿ ಮದ್ರಾಸಿನ ಮಗಳಿಂದ ಕಲಿತು ಮೊತ್ತ ಮೊದಲು ಜಗತ್ತಿಗೆ ತಿಳಿಸಿದರೆಂದು ಹೇಳಲಾಗುತ್ತದೆ

◈ ◈

ಮೋಟರಿಗೆ ಹೊಸ ದಾಹಕಗಳು

ಯುದ್ಧವು ಬಹಳ ಭಯಂಕರವಾಗಿ ಯುರೋಪದಲ್ಲೆಲ್ಲಾ ಹರಡುತ್ತಿದ್ದ ಹಾಗೆ ಯುದ್ಧಾಸಕ್ತ ರಾಷ್ಟ್ರಗಳಲ್ಲಿ ಮಾತ್ರವಲ್ಲ, ಇತರ ತಟಸ್ಥ ರಾಜ್ಯಗಳಲ್ಲಿಯೂ, ಪೆಟ್ರೋಲು ಮೊದಲಾದ ದಾಹಕ ಪದಾರ್ಥಗಳು ಸಿಕ್ಕುವದು ಬಹಳ ಕಷ್ಟವಾಗಿದೆ ಆದ್ದರಿಂದ ಈ ಪದಾರ್ಥಗಳ ಬದಲಿಗೆ ಆ ರಾಜ್ಯಗಳ ವಿಜ್ಞಾನಿಗಳು ಬೇರೆ ಪದಾರ್ಥಗಳನ್ನು ಹುಡುಕುತಿದ್ದಾರೆ ಡೆನ್ಮಾರ್ಕಿನಲ್ಲಿ 'ಪೀಟ್' ಎಂಬುದು ಧಾರಾಳವಾಗಿ ದೊರೆಯುತ್ತದೆ. ಅಲ್ಲಿಯ ಒಬ್ಬ ವಿಜ್ಞಾನಿಯು ಈ ಪೀಟ್ ಪದಾರ್ಥವನ್ನೇ ಮೋಟರಿಗೆ ಪೆಟ್ರೋಲಿನ ಬದಲಿಗೆ ಉಪಯೋಗಿಸಲಿಕ್ಕಾಗ ಹಾಗೆ ಮೋಟರಿನ ಯಂತ್ರದಲ್ಲಿ ಅಗತ್ಯವುಳ್ಳ ಬದಲಾವಣೆಗಳನ್ನು ಮಾಡಿ ಯಶಸ್ವಿಯಾಗಿದ್ದಾನೆ ಹಾಗೆಯೇ ಸ್ವೀಡನ್ ದೇಶವು ಕೂಡ ಬ್ರಿಟನು, ಇಟಲಿ ಮೊದಲಾದ ಬೇರೆ ಕೆಲವು ದೇಶಗಳ ಅನುಕರಣಮಾಡಿ. ಉಪಯೋಗಿಸಿ ಉಳಿದ ಕಟ್ಟಿಗೆಯಿಂದ ಮಿಥೇನ್ ಗೇಸ್ ಎಂಬುದನ್ನು ತಯ್ಯಾರಿಸಿ, ಆ ಗ್ಯಾಸನ್ನೇ ಮೋಟರಿಗೆ ಪೆಟ್ರೋಲಿನ ಬದಲಿಗೆ ಉಪಯೋಗಿಸಲಿಕ್ಕೆ ಆರಂಭಿಸಿರುವರು ಆರಂಭಿಸಿರುವರು. ಹೀಗಾದ್ದರಿಂದ ಈ ಗ್ಯಾಸನ್ನು ತಯ್ಯಾರಿಸಲಿಕ್ಕೆ ದೊಡ್ಡ ಕಾರ್ಖಾನೆಗಳನ್ನು ಕಟ್ಟಲಾರಂಭಿಸಿರುವರು

◈ ◈

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

BHUVANENDRA PRODUCTS LTD.,
KATAPADI, S. K.

Why Doctors prescribe
"BHUVANENDRA"
NARAYANA TAILA
Because it sets right
the nervous system and gives good relief
from Rheumatic complaints

ಅತ್ಯಂತ ಸುಖ! ತುಂಬಾ ಉಲ್ಲಾಸ!!
ಯಾವ ಕಾರಣದಿಂದ?
'ಭುವನೇಂದ್ರನಾರಾಯಣ ತೈಲ'
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು
ಸ್ಥಳೀಯ ಸ್ಟೋಕಿಸ್ಟರು.—
ಯು ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಘು ಶೈ, ರಥಬೀದಿ
ಡಾ ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ ದ. ಕನ್ನಡ

ಸೆರೆಮನೆಗಳಲ್ಲಿ ಸತ್ಯಾಗ್ರಹಿಗಳು ಹೇಗಿರುವರು?

ಸತ್ಯಾಗ್ರಹದ ದ್ವಿತೀಯಾಂಕದ ವರದಿ

ಮಹಾದೇವ ದೇಸಾಯಿಗಳ ಲೇಖನ

ಸತ್ಯಾಗ್ರಹದ ದ್ವಿತೀಯಾಂಕವು ಮುಗಿಯುತ್ತಾ ಬಂದಿದೆ. ಈಗಿನ ಪರಿಸ್ಥಿತಿಯನ್ನು ನಾವು ಸ್ವಲ್ಪ ವಿಚಾರಿಸಬೇಕು. ಈ ಆಂದೋಲನದಲ್ಲಿ ನಾವು ಗೈದ ಕಾರ್ಯದ ಪ್ರತಿಫಲವನ್ನು ಅಪೇಕ್ಷಿಸುವುದು ಮುಖ್ಯವಲ್ಲ. ನಮ್ಮ ಮೂಲಭೂತ ಹಕ್ಕನ್ನು ಸ್ಪಷ್ಟ ಮಾಡುವುದೇ ಇದರ ಮುಖ್ಯವಾಗಿದೆ. ಹೀಗೆ ಮಾಡಬೇಕಾದರೆ ನಾವು ನಮ್ಮ ಯೋಗ್ಯತೆಯನ್ನು ಸ್ಪಷ್ಟಮಾಡಬೇಕು. ಅಥವಾ ಅದನ್ನು ಸಾಧಿಸುವಾಗ ಸೆರೆಮನೆಯನ್ನು ಸೇರಬೇಕಲ್ಲದೆ ಮೂರನೆಯ ಮಾರ್ಗವಿಲ್ಲ

ಗಡಿನಾಡಿನಲ್ಲಿ

ಗಡಿನಾಡಿನಲ್ಲಿ ವಾಕ್ ಸ್ವಾತಂತ್ರ್ಯವು ದೊರಕಿದೆ ಎನ್ನಬಹುದು. ಸರಕಾರವು ಮಾತ್ರ ಇನ್ನೂ ವಾಕ್ಸ್ವಾತಂತ್ರ್ಯ ಮತ್ತು ಲೇಖನಿ ಸ್ವಾತಂತ್ರ್ಯವನ್ನು ಅಲ್ಲಿ ಕೊಟ್ಟಿರುವುದಾಗಿ ಪ್ರಕಟ ಮಾಡಲಿಲ್ಲ. ಅಲ್ಲಿ ಸತ್ಯಾಗ್ರಹಿಗಳನ್ನು ಕೈದು ಮಾಡುವುದಿಲ್ಲ. ಕೈದು ಮಾಡಿದರೂ ಲಾಭವಿಲ್ಲವೆಂಬಂತೆ ತೋರುತ್ತದೆ. ನಾವು ಸಿಂಹಾವಲೋಕನ ಮಾಡುವಾಗ ಸರಕಾರವು ಏನು ಮಾಡಲಿಲ್ಲವೆಂಬುದು ಮುಖ್ಯ ಪ್ರಶ್ನೆಯಲ್ಲ. ನಾವು ನಮ್ಮ ಕರ್ತವ್ಯವನ್ನು ಪೂರೈಸಿರುವೆವೋ ಇಲ್ಲವೆಂಬುದು ಮಹತ್ವದ ಪ್ರಶ್ನೆ. ಈ ಚಳವಳವು ಸ್ವಾತಂತ್ರ್ಯದ ಹೋರಾಟದ ಒಂದು ಮುಖ್ಯ ಅಂಗವಾಗಿದೆ. ಅಂದರೆ ನಮ್ಮಲ್ಲಿ ಸತ್ಯ ಹಾಗೂ ಅಹಿಂಸೆಯನ್ನು ಬೆಳೆಸಿ ಆತ್ಮಶುದ್ಧೀಕರಣಕ್ಕೆ ಈ ಚಳವಳವು ಮುಖ್ಯ ಕಳಹದಿಯಾಗಿದೆ.

ರಚನಾತ್ಮಕ ಕಾರ್ಯಗಳು

ಈ ಮೊದಲು ನಡೆದ ಸತ್ಯಾಗ್ರಹ ಚಳವಳದಲ್ಲಿ ಈ ಸಾರಿಯಷ್ಟು ಕಠೋರವಾದ ನಿರ್ಬಂಧಗಳಿರಲಿಲ್ಲ. ಆದಕಾರಣ ಈ ಬಾರಿ ನಮ್ಮ ವಿರೋಧಿಗಳ ಟೀಕೆಯನ್ನು ಸ್ವಾಗತಿಸಲು ನಾವು ನಮ್ಮ ಆತ್ಮಸಂತೋಷದಿಂದ ಸಿದ್ಧರಾದೆವು. ಆದರೆ ಎಲ್ಲವೂ ರೀತಿಯಂತೆ ನಡೆದಿದೆ ಎಂದು ತಿಳಿದುಕೊಂಡರೆ ನಮ್ಮ ಮೈಗಳ್ಳತನವನ್ನೇ ವ್ಯಕ್ತಮಾಡಿದಂತಾಗುವುದು. ಸತ್ಯಾಗ್ರಹಿಗಳ ವಿರುದ್ಧ ಅನೇಕ ಆಕ್ಷೇಪಣೆಗಳು ಬಂದಿವೆ. ಕೆಲವು ಆಕ್ಷೇಪಣೆಗಳು ಸತ್ಯವಾದುವು. ಹಲವು ಕೇವಲ ಕಾಲ್ಪನಿಕವಾದುವು. ಸೆರೆಮನೆಯಲ್ಲಿ ಕೆಲವರು ಕುಶಾಲು ಮಾಡುತ್ತಿರುವರೆಂಬ ಆರೋಪವೂ ಬಂದಿದೆ. ಆದರೆ ಇಂಥ ಉದಾಹರಣೆಗಳು ಹೆಚ್ಚು ಸಿಗಲಾರವು. ಬೇರೆ ಬೇರೆ ಸೆರೆಮನೆಗಳ ಸತ್ಯಾಗ್ರಹಿಗಳು ಚೆನ್ನಾಗಿ ದುಡಿಯುತ್ತಿರುವರು. ಹಾಗೂ ರಚನಾತ್ಮಕ ಕಾರ್ಯಗಳನ್ನು ಸಾಗಿಸುತ್ತಿರುವರೆಂಬುದು ನಂಬತಕ್ಕ ವರದಿ ಬಂದಿದೆ.

ಸೆರೆಮನೆಗಳಲ್ಲಿ

ಶ್ರೀ ವಿನೋಬಾ ಹಾಗೂ ಅವರ ಕೆಲಸದ ಬಗ್ಗೆ ಎಲ್ಲರಿಗೂ ಚೆನ್ನಾಗಿ ಪರಿಚಯುವಿದೆ. ಆದರೆ ಸೆರೆಮನೆಯೊಳಗಿರುವಾಗ ಮಾಡಿದಷ್ಟು ರಚನಾತ್ಮಕ ಕಾರ್ಯವನ್ನು ಹೊರಗೆ ಇರುವಾಗ ಮಾಡುವುದು ... ಅವರು

ಗಾಂಧಿಜಿಯವರಿಗೆ ಎರಡು ಸಲ ಪತ್ರ ಬರೆದು 'ನಿಮ್ಮ ಆಶೀರ್ವಚನದಿಂದ ನಾನು ಅಹಿಂಸೆಯನ್ನು ಬಹಳ ಮಟ್ಟಿಗೆ ಸಾಧಿಸಿ ನನ್ನ ಆಲೋಚನೆಯ ಶುದ್ಧೀಕರಣ ಮಾಡಿಕೊಂಡೆ' ಎಂದು ತಿಳಿಸಿದರು. ಅವರು ಸೆರೆಮನೆಯಿಂದ ಹೊರಗೆ ಬರುವಾಗ ಅವರ ಜೊತೆಯಲ್ಲಿದ್ದ ಕೈದಿಗಳು ತಾವು ನೂತ ನೂಲಿನ ಒಂದು ಮೂಟೆಯನ್ನು ಹೇರಿಸಿದ್ದರು. ಸೆರೆಮನೆಯನ್ನು ತಿರುಗಿ, ಸೇರುವ ಪೂರ್ವದಲ್ಲಿ ಅವರು ಈ ನೂಲನ್ನು ನೇದು ಅರಿವೆಗಳನ್ನು ತಯಾರಿಸುವ ವ್ಯವಸ್ಥೆ ಮಾಡಿದರು. ಎಷ್ಟೋ ಜನರಿಗೆ ಮೊದಲು ಹಿಂಜುವುದು ಗೊತ್ತಿರಲಿಲ್ಲ. ಈಗ ಒಬ್ಬರಿಗಿಂತ ಒಬ್ಬರು ನಾ ಮುಂದು ನೀ ಮುಂದೆ ಎಂದು ಮಾಡುತ್ತಿದ್ದಾರೆ. ಶ್ರೀ ಬ್ರಹ್ಮದತ್ತರಷ್ಟು ವೇಗವಾಗಿ ನೂಲು ಸುತ್ತುವವರು ಸಿಗಲಾರರು. ಅರ್ಧಗಂಟೆಗೆ ಅವರು ೧೫೦೦ ಸುತ್ತು ಸುತ್ತುತ್ತಿದ್ದಾರೆ. ಪ್ಯಾರಿಲಾಲರು ಬಹಳ ಉತ್ತಮ ನೂಲನ್ನು ಈಗ ತಯಾರಿಸುತ್ತಾರೆ. ಅಲ್ಲದೆ ಕುರಾಣವನ್ನು ಅವರು ಒಳ್ಳೆಯ ಲಕ್ಷಪೂರ್ವಕವಾಗಿ ಅಭ್ಯಸಿಸುತ್ತಾರೆ. ಹೊರಗೆ ಬರುವ ಪೂರ್ವದಲ್ಲಿ ಅರೇಬಿಕ್ ಮತ್ತು ಕುರಾಣ ಸಾಹಿತ್ಯದಲ್ಲಿ ಅವರು ಪಾರಂಗತರಾಗುವುದರಲ್ಲಿ ಅನುಮಾನವಿಲ್ಲ.

ಸರದಾರ ಪಟೇಲರು

ಸರದಾರ ಪಟೇಲರು ವಿನೋಬರಿಗಿಂತಲೂ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಹೊರಗೆ ಇರುವಾಗ ಅವರಿಗೆ ಸ್ವಲ್ಪವೂ ವಿರಾಮವಿರಲಿಲ್ಲ. ಈಗ ಒಳಗೆ ತಮ್ಮ ಜತೆಯ ಕೈದಿಗಳೊಡನೆ ಒಳ್ಳೆಯ ಕ್ರಮದಲ್ಲಿ ಹಾಗು ಶಿಸ್ತಿನಿಂದ ಕೆಲಸ ಸಾಗಿಸುತ್ತಿದ್ದಾರೆ. ಹಿಂದೆ ಮಂತ್ರಿಗಳಾಗಿದ್ದ ಶ್ರೀ ಖೇರ ಮತ್ತು ಶ್ರೀ ಗಿಲ್ಡರ ಇವರು ಸರದಾರ ಪಟೇಲರ ಜೊತೆಯಲ್ಲಿ ದುಡಿಯುತ್ತಿದ್ದಾರೆ ಶ್ರೀ. ಭೂಲಾಭಾಯಿಯವರೂ ಅಲ್ಲಿಯೇ ಇರುವರು. ಶ್ರೀ. ಭೂಲಾಭಾಯಿಯವರು ಈಗ ಯೋಗ ಸೂತ್ರವನ್ನು ಶ್ರೀ ಮುನಶಿಯವರೊಡನೆ ಓದುತಿದ್ದು ಸಂಸ್ಕೃತ ಅಭ್ಯಾಸ ಮಾಡುತ್ತಿದ್ದಾರೆ.

ಸರದಾರ ಪಟೇಲರ ಗುಜರಾತಿ ವ್ಯಕ್ತವನ್ನು ಒಮ್ಮೊಮ್ಮೆ ಇಂಗ್ಲಿಷಿಗೆ ಭಾಷಾಂತರಿಸೋಣವೇ? ಎಂದು ನನಗೆ ಅನಿಸುತ್ತದೆ ಅವರು ೪ಗಂಟೆಗೆ ಎದ್ದು ಪ್ರಾರ್ಥನೆ ನಡಿಸುತ್ತಾರೆ. ಎಲ್ಲರೊಡನೆ ಒಳ್ಳೆಯ ಹಿತಕರವಾದ ಹಾಗು ರುಚಿಕಟ್ಟಾದ ಸಂಭಾಷಣೆಯನ್ನು ಮಾಡುತಿದ್ದು ಹೊತ್ತಿಗೆ ಸರಿಯಾಗಿ ಎಲ್ಲ ಕೆಲಸವನ್ನು ಮಾಡುತಿದ್ದಾರೆ. ಮೊದಲು ನೂರಿಯವರು ಕುರಾಣವನ್ನು ಓದಿದ ಬಳಿಕ ಗಿಲ್ಡರರು ಕೆಲವು ಸಾರೆ ತಮ್ಮ ಪವಿತ್ರ ಗ್ರಂಥದಿಂದ ಕೆಲವು ಮಾತುಗಳನ್ನು ಓದಿದ ಬಳಿಕ ಆಶ್ರಮದ ನಿಯಮಕ್ಕನುಸರಿಸಿ ಮುಂದೆ ಪ್ರಾರ್ಥನೆ ನಡೆಯುವುದು. ರಾತ್ರಿ ೯ ಗಂಟೆಯ ವರೆಗೆ ಎಲ್ಲರೂ ಓದುತ್ತಾರೆ. ರೈಲ್ವೆ ಗಡಿಯಾರದಂತೆ ಅವರ ಕೆಲಸವು ಸುಸೂತ್ರವಾಗಿ ಸಾಗಿದೆ.

ವಂಚಕರು

ಪಂಜಾಬದಿಂದಲೂ ನಮಗೆ ಸುದ್ದಿ ಬಂದಿದೆ. ಅಲ್ಲಿಯೂ ಪರಿಸ್ಥಿತಿಯು ನೆಟ್ಟಗಿಲ್ಲ. ಸತ್ಯಾಗ್ರಹಿಗಳ ಪ್ರತಿಜ್ಞಾಪತ್ರಕ್ಕೆ ಸಹಿ ಮಾಡಿದ ಹಲವರು ಹೊರಗಿರುವಾಗ ನೂತು ಖಾದಿ ಧರಿಸಿಕೊಂಡವರು ಅದರಲ್ಲಿ ತಮ್ಮ ವಿಶ್ವಾಸವಿಲ್ಲೆಂದೂ ಅದೊಂದು ಬಗೆಯ ವ್ಯಾಯಾಮವೆಂದೂ ತಾವು ಹಾಗೆ ಮಾಡಿರುವುದಾಗಿ ಹೇಳುತ್ತಾರೆಂದು ನನಗೆ ಪತ್ರ ಬಂದಿದೆ. ದೊಡ್ಡ ದೊಡ್ಡ ಚಳವಳಗಳಲ್ಲಿ ಇಂಥ ಲೋಪದೋಷಗಳು ಬರುವುದು ಸ್ವಾಭಾವಿಕವಿದೆ ಆದರೆ ವಂಚಕರು ಹಾಗು ಸೋಗು ಹಾಕಿಕೊಳ್ಳುವರು ಇದರಿಂದ ಕೊನೆಗಾದರೂ ಆತ್ಮದ್ರೋಹ ಹಾಗು ಆತ್ಮವಂಚನೆ ಮಾಡಿಕೊಂಡಂತಾಗುವುದು ಎಂಬುದನ್ನು ಮರೆಯಬಾರದು. ಆದರೆ ಸೆರೆಮನೆಯಲ್ಲಿ ಹೆಚ್ಚು ಮಂದಿ ಯೋಗರಾದ ತಮ್ಮ ಸಮಯದ ಸದುಪಯೋಗ ಮಾಡಿಕೊಳ್ಳುವ ಉತ್ತಮ ಸತ್ಯಾಗ್ರಹಿಗಳಿದ್ದಾರೆ. ಅವರು ಪ್ರತಿನಿತ್ಯ ನೂತು ಪ್ರಾರ್ಥನೆ ಮಾಡಿ ಅಭ್ಯಸಿಸುತ್ತಾರೆ. ಢಿಲ್ಲಿಯ ಕೆಲ ಮಿತ್ರರು ಮೊಟ್ಟಮೊದಲು ಅಷ್ಟೊಂದು ನೂಲುತ್ತಿರಲಿಲ್ಲ. ಈಗ ಚೆನ್ನಾಗಿ ತರಬೇತಿ ಹೊಂದುತ್ತಿದ್ದಾರೆ.

ಸಂಯುಕ್ತ ಪ್ರಾಂತದಲ್ಲಿ

ಸಂಯುಕ್ತ ಪ್ರಾಂತದ ಸತ್ಯಾಗ್ರಹಿಗಳಲ್ಲಿ ಎರಡು ಜಿಲ್ಲೆಯವರು ಖಾದಿಧಾರಿಗಳೂ ಅಲ್ಲ, ನೂಲುವವರೂ ಅಲ್ಲವೆಂಬಂತೆ ನನಗೆ ವರದಿ ಬಂದಿದೆ. ಅಲ್ಲದೆ ಮೂವರು ಸತ್ಯಾಗ್ರಹಿಗಳು ತಮ್ಮ ಹೆಸರು ಪಟ್ಟಿಯಲ್ಲಿ ಕಾಣಿಸಲಾಗಿತ್ತೆಂದೂ ತಮಗೆ ನೂಲುವುದಕ್ಕೆ ಗೊತ್ತಿಲ್ಲವೆಂದೂ ತಾವು ಖಾದಿಧಾರಿಗಳಲ್ಲವೆಂದೂ ತಿಳಿಸಿದ್ದರು ಆದರೆ ಜವಾಹರಲಾಲರು ಕರ್ತವ್ಯನಿಷ್ಠರು. ಸೆರೆಮನೆಯ ಹೊರಗೂ ಒಳಗೂ ಅವಿಶ್ರಾಂತ ಶ್ರಮದಿಂದ ಅವರು ದುಡಿಯುವವರು. ಅದೇ ರೀತಿ ಅ

(೧೯ನೆಯ ಪುಟವನ್ನು ನೋಡಿ)

ಸೌಂದರ್ಯ ಮತ್ತು
ಮುಖಕಾಂತಿಗೆ
ಹಿಮಾನಿ ಸ್ನೋ
ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —
ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ, ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ
ಹಿಮಾನಿ ಗ್ಲಿಸರಿನ್ ಸಾಬೂನುಗಳು
ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ

ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

ಸಿನಿಮಾ ಸುದ್ದಿ

ಮಾಧುರಿ

ಮಾಧುರಿಯು ರಣಜಿತ್ ಕಂಪೆನಿಯಲ್ಲಿಯೇ ಇರುವಂತೆ ಹೊಸ ಒಪ್ಪಂದವಾಗಿದೆಯೆಂದು ಸುದ್ದಿ

ಸಾಧನಾ ಬೋಸ್ ದಕ್ಷಿಣಭಾರತ ಚಿತ್ರದಲ್ಲಿ ಅಭಿನಯಿಸುವಳೆ?

ಶ್ರೀಮತಿ ಸಾಧನಾ ಬೋಸಳು ದಕ್ಷಿಣ ಭಾರತ ಚಿತ್ರವೊಂದರಲ್ಲಿ ಅಭಿನಯಿಸುವಳೆ? ನರ್ತನ ಮಾಡುವಳೇ? ಎಂಬ ವಿಷಯದಲ್ಲಿ ಈಗ ಕುತೂಹಲ ಜನಕ ಸುದ್ದಿಗಳು ಬಂದಿವೆ

ಮದ್ರಾಸಿಗೆ ಬಂದಿದ್ದಾಗ ಮೊನ್ನೆ ಆಕೆ ಜೆಮಿನಿ ಸ್ಟುಡಿಯೋವನ್ನು ಸಂದರ್ಶಿಸಿದ ಮೇಲೆ ಈ ಸುದ್ದಿಗೆ ಕಳೆಯೇರಿದೆ

ಆ ಸ್ಟುಡಿಯೋ ಅತ್ಯುತ್ತಮವಾಗಿದೆಯೆಂದು ಸಾಧನಾ ಹೇಳಿರುವುದಾಗಿಯೂ ಅದನ್ನು ಬಹಳ ಮೆಚ್ಚಿರುವುದಾಗಿಯೂ ತಿಳಿದುಬಂದಿದೆ

ಮದ್ರಾಸಿನಲ್ಲಿದ್ದು ಆಕೆ ಭಾರತ ನಾಟ್ಯವನ್ನು ಕಲಿಯುವಳೆಂದೂ ಸುದ್ದಿ.

ತಿಮಿರ ಬರಣನೊಡನೆ ಆಕೆ ಜೆಮಿನಿ ಸ್ಟುಡಿಯೋದಲ್ಲಿ ಒಂದು ಚಿತ್ರವನ್ನು ಅಭಿನಯಿಸಲು ಒಪ್ಪಿಕೊಂಡಿರುವುದಾಗಿಯೂ ಊಹಿಸಲಾಗಿದೆ. ಮುಂದಿನ ನ್ಯೂ ಥಿಯೇಟರ್ಸ್ ಚಿತ್ರದ ಕಾರ್ಯಕ್ರಮವನ್ನು ಹೊಂದಿಕೊಂಡು ಈ ಚಿತ್ರ ತಯಾರಿಕೆಯ ಕಾರ್ಯಕ್ರಮವು ಗೊತ್ತುಪಡಿಸಲಾಗುವುದಂತೆ.

ಕಾಪೂರ್ ಚಂದ

ಶ್ರೀ ಕಾಪೂರ ಚಂದರು ಅಮೇರಿಕಕ್ಕೆ ತೆರಳಿ ಚಲಚ್ಚಿತ್ರಕ್ಕೆ ಬೇಕಾದ ಕಚ್ಚಾ ಸಾಲು, ರಸಾಯನ ದ್ರವ್ಯಗಳೇ ಮೊದಲಾದವುಗಳನ್ನು ವ್ಯವಸ್ಥಿತ ರೀತಿಯಿಂದ ಭಾರತಕ್ಕೆ ಒದಗಿಸುವ ಏರ್ಪಾಡು ಮಾಡಲು ಯೋಚಿಸುತ್ತಿರುವರೆಂದು ತಿಳಿದಿದೆ.

ದೇವಕೀ ಬೋಸರು

'ಅಪ್ನಾ ಘರ್' ಚಿತ್ರದ ನಿರ್ದೇಶಕ ಕಾರ್ಯಕ್ಕಾಗಿ ಬೊಂಬಾಯಿಗೆ ತೆರಳಿದ್ದ ದೇವಕೀ ಬೋಸ್ ಇವರು ಕಲ್ಕತ್ತೆಗೆ ಈಗ ಮರಳಿ ಬಂದಿರುವರು.

ಕದಾರ್ರ್ ಮತ್ತು ನಾಸೀಮ್

ಇವರು ರಣಜಿತ್ ಚಿತ್ರ ಕಂಪೆನಿಯನ್ನು ಸೇರುವರೆಂದು ತಿಳಿದುಬಂದಿದೆ.

ನಯಾ ಸಂಸಾರ

ಬೊಂಬೇ ಟಾಕೀಸಿನ ನಯಾ ಸಂಸಾರ ಚಿತ್ರದಿಂದ ಬೊಂಬಾಯಿಯಲ್ಲಿ ಎಂಟೇ ವಾರಗಳ ಪ್ರದರ್ಶನದಲ್ಲಿ ೨೭,೦೦೦ ರೂಪಾಯಿಗಳಷ್ಟು ಸಂಗ್ರಹವಾಗಿದೆಯೆಂದು ತಿಳಿಯುತ್ತದೆ.

ಸುರೇಂದ್ರ ದೇಸಾಯಿ

'ಬುಲ್ ಬುಲ್' ಎಂಬ ಹೆಸರಿನಿಂದ ಪ್ರಸಿದ್ಧನಾದ ಸುರೇಂದ್ರ ದೇಸಾಯಿಯು ತನ್ನ ಸ್ವಂತ ಸಿನೆಮಾ ಕಂಪೆನಿಯೊಂದನ್ನು ಪ್ರಾರಂಭಿಸುವ ಯೋಜನೆಯಲ್ಲಿರುವುದಾಗಿ ತಿಳಿದಿದೆ

ನಲಿನಿ ತರ್ಕಡ್

ನಲಿನಿ ತರ್ಕಡ್ ಈಗ ತಿರಿಗಿ ಪ್ರಭಾತ ಕಂಪೆನಿಯನ್ನು ಸೇರಿರುವುದಾಗಿ ಸುದ್ದಿಯುಂಟು.

ಪ್ರಕಾಶ (ಚಿತ್ರಗಳು

ಪ್ರಕಾಶ ಚಿತ್ರ ಕಂಪೆನಿಯ ಇತ್ತೀಚಿಯ ಸಾಮಾಜಿಕ ಚಿತ್ರ 'ದರ್ಶನ'ದ ತಯಾರಿಯು ಮುಗಿಯುತ್ತಾ ಬಂದಿದೆ.

ಪ್ರೇಮ ಮತ್ತು ಜ್ಯೋತಿ ಇವರು ಇದರಲ್ಲಿ ಜತೆಗೂಡಿ ಅಭಿನಯಿಸುವರು.

ಭಾರತ್ ಮಿಲಾಪ್ ಚಿತ್ರವನ್ನು ನಿರ್ದೇಶಕ ವಿಜಯ ಭಟ್ ಇವರು ತಯಾರಿಸುವ ಅವಸರದಲ್ಲಿರುವರು ದುರ್ಗಾ ಖೋಟೆ, ಶೋಭನಾ ಸಮರ್ಥ, ಸಾಹು ಮೋಡಕ್ ಮತ್ತು ಪ್ರೇಮ ಅದೀಬ್ ಇವರು ಇದರಲ್ಲಿ ಪ್ರಾಮುಖ್ಯ ಪಾತ್ರಧಾರಿಗಳಾಗಿರುವರು

ಪ್ರಕಾಶ ಚಿತ್ರ ಕಂಪೆನಿಯವರು ವಿಕ್ರಮಾದಿತ್ಯ ಎಂಬೀ ಹೊಸ ಚಿತ್ರವೊಂದನ್ನು ತಯಾರಿಸಲು ನಿಶ್ಚಯ ಮಾಡಿರುತ್ತಾರೆ

ವೀರಣ್ಣ ಮತ್ತು ಜಯಮ್ಮ ಕನ್ನಡ ಚಿತ್ರದಲ್ಲಿ

ಕನ್ನಡ ಚಲಚ್ಚಿತ್ರ 'ಸುಭದ್ರಾ' ಈಗ ಪೂರ್ಣವಾಗುತ್ತಾ ಬರುತ್ತಿದೆ ಕನ್ನಡ ಪ್ರಸಿದ್ಧ ಹಾಸ್ಯ ನಟ ವೀರಣ್ಣನವರ ಇದರಲ್ಲಿ ಅಭಿನಯಿಸುವನು. 'ಸದಾರಮೆ'ಯಲ್ಲಿ ಕೀರ್ತಿಗೆ ಬಂದ, ಜಯಮ್ಮನೂ ಇದರಲ್ಲಿ ಅಭಿನಯಿಸುವಳು.

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತ್ತಿದ್ದಾರೆ ಬಹಳ ಕೋಮಲವಾದ ಚರ್ಮವನ್ನು ಕೂಡ ಸಂರಕ್ಷಿಸುವುದು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತವಿಸುವ ಶಕ್ತಿ ಇರುವುದು. ಉಷ್ಣದಿಂದ ಬೆಂದಂತ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ ಬೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು. ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಮೆಚ್ಚುತ್ತಿರುವರು

ಇಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದುದು.

ಎಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ಉಷ್ಣ ಹವೆಯ ಕಾಲುನೋವುಗಳನ್ನು ಗುಣಪಡಿಸಿರಿ.

ಪ್ರತಿದಿನವೂ ಜ್ಯಾಂಬಕ್‌ನಿಂದ ತಿಕ್ಕಿರಿ.

ಉಷ್ಣ ಹವೆಯು ನಿಮ್ಮ ಕಾಲುಗಳನ್ನು ಗಾಯಗೊಳಿಸುತ್ತದೆ ಆದ್ದರಿಂದ ಪ್ರತಿ ರಾತ್ರಿ ಜ್ಯಾಂಬಕ್‌ನಿಂದ ಕಾಲನ್ನು ತಿಕ್ಕಿ ಅವನ್ನು ಉಪಶಾಂತಿಗೊಳಿಸಿರಿ. ಜ್ಯಾಂಬಕ್‌ನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವಗಳು ಚರ್ಮಕ್ಕೆ ಎಳೆಕೊಳ್ಳುತ್ತವೆ, ನೋವನ್ನು ಕಡಿಮೆ ಮಾಡುತ್ತವೆ, ನೋವು ಗಾಯಗಳನ್ನು ಗುಣಪಡಿಸುತ್ತವೆ. ನಿಮ್ಮ ಕಾಲು ತಿರಿಗಿ ಆರೋಗ್ಯದಿಂದ ಕೂಡಿರುತ್ತವೆ. ಜ್ಯಾಂಬಕ್ ಲೇಪಕ್ಕೆ ಒಂದು ರೂಪಾಯಿ ಅಥವಾ 2—4—0 ಸಂಚಿಯಾನಿಗೆ ಒಂದು ರೂಪಾಯಿ, ಪೌನರಿಗೆ ಒಂದು ರೂಪಾಯಿ.

ಏಜೆಂಟರು —

ಮೆಸರ್ಸ್ ದಾಥಾ ಮತ್ತು ಕಂಪೆನಿ, ಬಿ. ಟಿ ಮದ್ರಾಸು.

ಯಾವಾಗಲೂ ಜ್ಯಾಂಬಕನ್ನೆ ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಅಮೆರಿ ಮತ್ತು ನೆಹರು ಇವರಿಗೊಂದು ಬಹಿರಂಗ ಪತ್ರ

ಪಾರ್ಲಿಮೆಂಟಿನ ಸದಸ್ಯರೊಬ್ಬರಿಂದ.

ಸಾಮಂತ ಸ್ವರಾಜ್ಯ ಕೊಡುವ ಅವಧಿ ನಿಶ್ಚಯಿಸಬೇಕು

"ನೀವಿಬ್ಬರೂ ಪರಸ್ಪರರು ತಪ್ಪು ಮಾಡುತ್ತಿರುವರೆಂದು ಅಭಿಪ್ರಾಯ ಪಡುತ್ತೀರಿ. ಆದರೆ, ಇಂದು ಅನೇಕ ಕಾರ್ಯಗಳು ಮಾಡಲು ಇರುವಾಗ ಹಾಗೆ ಅಭಿಪ್ರಾಯ ಪಟ್ಟುಕೊಂಡಿರುವುದು ಪ್ರಾಮುಖ್ಯವೆ? ಇಂದಿನ ಯುದ್ಧದಲ್ಲಿ ಭಾರತದ ಪೂರ್ಣ ಸಹಕಾರವನ್ನು ಪಡೆಯಲು ಯಶಸ್ವಿಯಾಗದಿರುವುದೆಂದರೆ, ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಾತ್ರವಲ್ಲ, ಅಖಿಲ ಜಗತ್ತಿನ ಸ್ವತಂತ್ರ ಜನತೆಗೇ ದೊಡ್ಡ ಅನರ್ಥವಾಗಿದೆ. ಯಾರು ತಪ್ಪು ಮಾಡಿದರೆಂಬುದನ್ನು ಮುಂದಿನ ಇತಿಹಾಸಗಾರರಿಗೆ ನಿಶ್ಚಯಿಸಲು ಬಿಡಬಾರದೇಕೆ? ಇಂದು ನಿಶ್ಚಿತವಾದ ಅವಧಿಯ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ವಿಷಯದಲ್ಲಿ ಯತ್ನಿಸಬಾರದೇಕೆ? ಅಥವಾ ನಿಮ್ಮಂತೆಯೇ ಒಂದು ಯೋಗ್ಯ ತೀರ್ಮಾನ ಮಾಡಬೇಕೆಂದು ಆಶಿಸುತ್ತಿರುವ ವೈಸರಾಯರಿಗೆ ಏನೂ ವೈಯುಕ್ತಿಕ ಅಪಮಾನವಾಗದಂತೆ ನೀವಿಬ್ಬರೂ ಕೂಡಿ ಮಾತನಾಡಬಾರದೇಕೆ?"

ಹೀಗೆಂದು ಪಾರ್ಲಿಮೆಂಟಿನ ಸದಸ್ಯರಲ್ಲೊಬ್ಬರಾದ ವೆರ್ನನ್ ಬಟ್ಲೆಟ್ಟರವರು ನೆಹರು ಮತ್ತು ಅಮೆರಿಯವರಿಗೆ ಒಂದು ಸಂಯುಕ್ತ ಬಹಿರಂಗ ಪತ್ರವನ್ನು ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಮುಖಾಂತರ ಬರೆದು ಪ್ರಕಟಿಸಿದ್ದಾರೆ.

ಅದರ ವಿವರ ಹೀಗಿದೆ.—

'ಪ್ರಿಯ ಅಮೆರಿ, ಪ್ರಿಯ ನೆಹರು, ನಿಮ್ಮಿಬ್ಬರನ್ನೂ ನಾನು ಒಂದೇ ಪತ್ರದಲ್ಲಿ ಉಲ್ಲೇಖಿಸುವುದಕ್ಕಾಗಿ ನನ್ನನ್ನು ದಯಮಾಡಿ ಕ್ಷಮಿಸಿರಿ. ನೀವು ಹಾಗೆ ಮಾಡುವಿರೆಂದು ತಿಳಿದಿದ್ದೇನೆ. ಏಕೆಂದರೆ ನೀವಿರ್ವರೂ ಹಿಟ್ಲರನನ್ನು ಅಪಜಯಗೊಳಿಸಲು ಆತುರರಿರುತ್ತೀರಿ; ಅದಕ್ಕಾಗಿ ಸಮಯವನ್ನು ವ್ಯರ್ಥವಾಗಿ ಈ ಯುದ್ಧಕಾಲದಲ್ಲಿ ಹಾಳುಮಾಡಲಾಶಿಸಲಾರಿರಿ.

ಪ್ರಿಯ ನೆಹರು, ನಾನು ನಿಮ್ಮನ್ನು, ನೀವು ಜುಕೋಸ್ಲವೇಕಿಯದಿಂದ ಮರಳಿದ ಸ್ವಲ್ಪ ಕಾಲದ ಮೇಲೆ ನೋಡಿದ್ದು. ಆಗ ನೀವು, ನಮ್ಮ ಸರಕಾರವು ಹಿಟ್ಲರನ ಕೈಯಲ್ಲಿ ಕುಣಿವ ವಿಷಯದಲ್ಲಿ ಬಹಳ ಸಿಟ್ಟಾಗಿದ್ದಿರಿ; ಮತ್ತು ಆ ವಿಷಯ ಎಚ್ಚರ ಕೊಟ್ಟಿದ್ದಿರಿ; ಪ್ರಿಯ ಅಮೆರಿ, ನೀವೂ ಅಂತೆಯೇ ಸಿಟ್ಟಾಗಿದ್ದಿರಿ; ಎಚ್ಚರ ಕೊಟ್ಟಿದ್ದಿರಿ.

ನಿಮ್ಮಿಬ್ಬರ ವಿಚಾರಗಳು ಹಲವು ವಿಷಯಗಳಲ್ಲಿ ಐಕ್ಯಗೊಳ್ಳುವುದರಿಂದ ನಾನು ನಿಮಗೆ ಹೀಗೆ ಸಂಯುಕ್ತ ಪತ್ರವನ್ನು ಖಂಡಿತ ಬರೆಯಬಹುದು. ನಿಮ್ಮಿಬ್ಬರಲ್ಲಿಯೂ ಅಪರಿಮಿತ ಧೈರ್ಯ ಸಾಹಸಗಳಿವೆ. ನಿಮ್ಮಲ್ಲಿ ಯಾರು ಅದನ್ನು ಹೆಚ್ಚು ತೋರಿಸಿದ್ದೀರೆಂಬ ವಿಷಯವಾಗಿ ನಾನೇನೂ ಹೇಳಲಾರೆ:- ಒಬ್ಬರು ತಮ್ಮ ನಿರ್ಧಾರಕ್ಕನುಗುಣವಾಗಿ ಸೆರೆಮನೆ ಹೊಕ್ಕಿದ್ದಾರೆ, ಇನ್ನೊಬ್ಬರು, ತಮ್ಮ ಪಕ್ಷದ ಅಧಿಕಾರಿಗಳ ವಿರುದ್ಧ ಹೌಸ್ ಆಫ್ ಕಾಮನ್ಸಿನಲ್ಲಿ ಅವರಿಗೆ ಅನುಕೂಲಿಸುತ್ತಾರೆ. ಮಾನವ ಪ್ರಗತಿಗೆ ಮತ್ತು ಸುಖಕ್ಕೆ ಸಹಾಯಕವಾಗುವ ಎಷ್ಟು ವಿಷಯಗಳು ಈಗ ಬಾಕಿಯುಳಿದಿವೆಯೆಂದು ನೀವಿಬ್ಬರೂ ಬಲ್ಲಿರಿ.

ದುಂಡು ಮೇಜಿನ ಬಳಿಯಲ್ಲಿ

ನಿಮಗಿಬ್ಬರಿಗೂ ವ್ಯಕ್ತಿಗತ ರಾಜಭಕ್ತಿಯು ಪರಂಪರೆಯಿಂದೆ. ಅದು ಬ್ರಿಟಿಷ್ ಸಾರ್ವಜನಿಕ ಶಿಕ್ಷಣದಲ್ಲಿ ನ್ಯಾಯವೆಂದೂ ತಪ್ಪೆಂದೂ ಎರಡು ಬಗೆಯಿಂದಲೂ ಚರ್ಚಿಸಲಾಗಿದೆ. ನೀವು ಇಬ್ಬರೂ ಅದೇ ತರದಲ್ಲಿ ಇರಬಹುದಾದರೂ ನಾನೀಗ ಆ ವಿಷಯದಲ್ಲಿ ಗಲಭೆಗೊಳಗಾಗಲಿಲ್ಲ.

ನೀವು ಒಂದು ದುಂಡು ಮೇಜಿನ ಬಳಿ ಕುಳಿತುಕೊಂಡು ಹತ್ತಾರು ಜನರನ್ನು ಸೇರಿಸಿ ಬ್ರಿಟಿಷ್ ಸಾಮ್ರಾಜ್ಯ ನೀತಿಗೆ ಯಾವುದು ಯುಕ್ತವಾದುದೆಂಬ ವಿಚಾರವಾಗಿ, ಯುರೋಪಿನ ಜನಾಂಗಗಳಿಗೆ ಯಾವ ಕಾರ್ಯಕ್ರಮವು ಯೋಗ್ಯವಾದೀತೆಂಬ ವಿಷಯದಲ್ಲಿ ವಿಚಾರಿಸುತ್ತಿರುವುದನ್ನು ನಾನು ಊಹಿಸಬಲ್ಲೆ, ಅಲ್ಲಿ ಮಾಡತಕ್ಕ ಮಹತ್ವದ ಕಾರ್ಯವಿರುತ್ತದೆ.

ಆದರೆ, ನಿಮ್ಮಲ್ಲಿ ಒಬ್ಬರು ಇನ್ನೊಬ್ಬರನ್ನು ವೈಸರಾಯರ ಮುಖಾಂತರ ಸೆರೆಮನೆಗೆ ನೂಕಿದ್ದೀರಿ. ಇದು ಶಬ್ದದಿಂದ ಉಲ್ಲೇಖಿಸುವಷ್ಟು ಗೌರವದ್ದಲ್ಲ, ಉಚಿತವಾದುದಲ್ಲ.

ಹಿಂದಿನದನ್ನು ಮರೆತುಬಿಡಿ

ಎಮೆರಿ, ನೀವು ನಿನ್ನೆ ಹೌಸ್ ಓಫ್ ಕಾಮನ್ಸಿನಲ್ಲಿಯೇ ನಾವು ಉತ್ಪಾದನೆ ಮಾಡುವ ಯುದ್ಧ ಸಾಮಾಗ್ರಿಗಳಿಗೆ ಭದ್ರ ಸ್ಥಳವು ಭಾರತದಲ್ಲಿ ಇಲ್ಲವೆಂಬುದನ್ನು ಮುಚ್ಚಿಡಲು ಮತ್ತು ಭಾರತೀಯರ ರಾಜಭಕ್ತಿ ಮತ್ತು ದಾರಿದ್ರ್ಯಗಳು ಅವರನ್ನು ಸೈನ್ಯಕ್ಕೆ ಸೇರುವಂತೆ ಮಾಡಿತೆಂಬುದನ್ನು ಹೇಳಲು ಯತ್ನಿಸಿದಿರಿ. ಕೌನ್ಸಿಲಿಗೆ ಅವು ಸಾಕುಸಾಕಾದವು, ಏಕೆಂದರೆ ಅಲ್ಲಿನವರಿಗೆ ಬೇಕಾದುದು ಬರೀ ಮಾತಲ್ಲ, ಕಾರ್ಯ ಮತ್ತು ಪ್ರಗತಿಯಾಗಿತ್ತು.

ಕಳೆದ ವಿಷಯಗಳನ್ನು ನಾವು ಮರೆತುಬಿಡುವ. ಆಗಸ್ಟಿನಲ್ಲಿ 'ಶ್ವೇತಪತ್ರ'ವು ಪ್ರಕಟವಾದಾಗ, ಕಾಂಗ್ರೆಸು ಮತ್ತು ಇತರ ಪಕ್ಷಗಳು ಅದನ್ನು ಪ್ರಗತಿಯ ಹೆಜ್ಜೆಯೆಂದು ತಿಳಿದು ಅಂಗೀಕರಿಸುವವೆಂದು ಆಶಿಸಿದ್ದೆನು. ಅವುಗಳು ಅಂಗೀಕರಿಸಲಿಲ್ಲವೆಂದು ನಾನಿಂದೂ ವಿಷಾದಿಸುತ್ತೇನೆ. ಆದರೆ ಅವೆಲ್ಲವೂ ಆಶ್ಚರ್ಯಕರವೇನೂ ಅಲ್ಲ. ನಾವು ಬ್ರಿಟಿಷರು ಭಾರತಕ್ಕೆ ಸಾಮಂತ ಸ್ವರಾಜ್ಯ ಕೊಡುವ ವಿಚಾರ ೨೦ ವರ್ಷಗಳಿಂದ ಮಾತನಾಡುತ್ತೇವೆ. ಆದರೆ ಇಂದೂ ನಾವದನ್ನು ಕೊಡಲಿಲ್ಲ. ಎಮೆರಿ, ನಿಮಗೆ ಭಾರತೀಯರು ಅದಕ್ಕೆ ಅನರ್ಹರೆಂದೇ ಅಭಿಪ್ರಾಯವಿದ್ದರೂ, ಅವರಿಗೆ ಸಾಮಂತ ಸ್ವರಾಜ್ಯ ಕೊಡದ ವಿಷಯವು ಅವರಿಗೆ ಸಂದೇಹವನ್ನುಂಟು ಮಾಡತಕ್ಕದ್ದೇ ಆಗಿದೆ.

ಅಲ್ಲಿ ಅಲ್ಪ ಸಂಖ್ಯಾಕರಿರುವರೆಂದೂ ನಾನು ಬಲ್ಲೆ, ನಾನೂ ಅಲ್ಪ ಸಂಖ್ಯಾಕರಲ್ಲಿಯೇ ಸೇರಿದವನಾದ ಕಾರಣ ಅವರ ಕುರಿತು ಸಹಸಂತಾಪವುಳ್ಳವನಾಗಿ ಇದ್ದೇನೆ. ಅಲ್ಲಿ ಆಶ್ರಿತ ರಾಜರೂ ಇದ್ದಾರೆ, ಆದರೆ ಅವರ ವಿಷಯ ನಾನು ಗಣ್ಯವೇ ಮಾಡುವುದಿಲ್ಲ; ಅನೇಕ ಕಾಲದಿಂದ ಅವರಿಗೆ ಬ್ರಿಟಿಷ್ ಸಾಮ್ರಾಜ್ಯದ ಅಡಿಯಲ್ಲಿ ಭದ್ರವಾದ ರಕ್ಷಣೆ ಸಿಕ್ಕಿದೆ; ಆದರೂ ಕೆಲವೇ ಮಂದಿ ಮಾತ್ರ ದೇಶದ ಅಭಿವೃದ್ಧಿಯ ಕಾರ್ಯವನ್ನು ಮಾಡಿರುತ್ತಾರೆ. ಆದರೆ, ಬಹುಸಂಖ್ಯಾಕರಿಗೂ ಅವರ ಹಕ್ಕು ಇದ್ದೇ ಇದೆ.

ನಿಮಗೀ ಪತ್ರ ಕಳುಹಿಸಲು ನಾನು ಯಾರು? ಇದು ನಿಮ್ಮ ಉತ್ತರ ಮತ್ತು ಅನುಕೂಲತೆಗಳು. ಆದರೆ ನಾನು [illegible]ರ ಚೈನದ ಅವಸ್ಥೆಯನ್ನು ನೋಡುತ್ತೇನೆ. ಆಗ ಸರ್ ಆಸ್ಟಿನ್ ಚೆಂಬರ್ಲೆನರು ಒಂದು ಕ್ರಿಸ್‌ಮಸ್ ಮೆಮೊರಾಂಡಂ ಕಳುಹಿಸಿದ್ದರು. ಆ ವಿಷಯ ಬ್ರಿಟಿಷರು ಅನೇಕ ಕಾಲ ವಿವಾದ ಮಾಡುತ್ತಿದ್ದರು.

ಆದರೆ ಈ ಚೀನೀಯರು ಯುದ್ಧ ಮಾಡುವುದು ನಾವು ಯುದ್ಧ ಮಾಡುವ ಕಾರಣವು ಯಾವುದೋ ಅದರ ಸಲುವಾಗಿಯೇ ಆಗಿದೆ. ಅದಕ್ಕೆ ಇಂದು ಸಿಗುವುದಕ್ಕಿಂತ ಹೆಚ್ಚಿನ ಸಹಾಯ ಭೂಕಿ ಸಿಗಬೇಕಾಗಿದೆ. ಹಲವರು ಕೇವಲ ಮರಗಳನ್ನು ಮಾತ್ರ ನೋಡುತ್ತಿದ್ದರೂ, ನಿರೀಕ್ಷಿಸುವವರಿಗೆ, ಲೋಕದಲ್ಲಿ ಹಲವು ಪೊದರುಗಳೂ ಕಾಣುತ್ತವೆ.

ಆದ್ದರಿಂದ ನೀವಿಬ್ಬರೂ ಕೆಲಸಕ್ಕೆ ಕೈ ಹಚ್ಚಬೇಕೆಂದು ಒತ್ತಾಯಿಸುವ ವಿಷಯವಾಗಿ ನಾವು ಕ್ಷಮೆ ಕೇಳುವುದಿಲ್ಲ. ನಿಮ್ಮಿಬ್ಬರೊಳಗೆ ನೀವು ಜಿಡಾಯಿಮಾಡಿ ಕೊಳ್ಳುವುದಕ್ಕಿಂತ, ನಮ್ಮ ಅಸ್ತ್ರಗಳನ್ನು ಹಿಟ್ಲರನ ಬೊಂಬುಗಳ, ಫಿರಂಗಿಗಳ, ಯುದ್ಧ ಹಡಗಗಳ, ಟ್ಯಾಂಕುಗಳ ಎದುರು ಬಿಟ್ಟರೆ ಹೆಚ್ಚಿನ ಪ್ರಯೋಜನವಾಗಬಹುದು.

ಹೀಗೆಯೇ ಮುಂದುವರಿಸಿಕೊಂಡು ಹೋಗುವದಕ್ಕಿಂತ, ಅಮೆರಿ, ಅಪಜಯವನ್ನು ಒಪ್ಪಿಕೊಂಡು ರಾಜಿಕೊಡುವುದು ಒಳ್ಳೆಯದು. ಕಡೆಗೆ, ನೀವೇ ಒಮ್ಮೆ ಹೇಳಿದಂತೆ 'ದೇವರಆಣೆಯಾಗಿಹೋಗು' ಎಂದು ನಾವೂ ಬೊಬ್ಬೆಯಬ್ಬಿಸಬೇಕಾಗಬಹುದು. ನೆಹರು, ನೀವೂ ಕೂಡಾ ಅವರ ಭವಿಷ್ಯವನ್ನು ನಿಶ್ಚಯಿಸಲು ನಿಮ್ಮ ರಾಷ್ಟ್ರ ಜನತೆಗೆ ಇನ್ನೂ ಹೆಚ್ಚು ಸಹಾಯವನ್ನು ಮಾಡಬಹುದು."

CANARA BANK LIMITED

(Incorporated in British India with Limited Liability)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6,00 000— 0— 0	Premises & Furniture	94,217— 6—8
Paid up	3,92,551 15—11	***Advances to Customers***	
Reserve Funds	4,50 000— 0— 0	Secured by Valuable Securities	37,87,804—13—8
Deposits	86,71,764— 2— 6	Secured by Bills of Exchange etc.	9,29,550— 0—6
Due to Bankers	Nil	***Investments***	20 34,328—12—9
Sundries	7,98 533—14— 5	***Sundries***	6,81,012— 5—7
Net Profits		***Cash On Hand And at Call At Bankers***	28,17,538— 8—7
Appropriation account 1,244—10— 6			
Net Profit for the year 71,726— 5— 0			
72,970—15— 6			
Less amount transferred to Reserves 41,369—3—7	31,601—11—11		
Rs.	1,03,44,451—12— 9	Rs.	1,03,44,451—12—9

ಇಟಲಿಯಲ್ಲಿ ಆಹಾರದ ಬರಗಾಲವಾಗಿದೆ!

ಮುಸಲನಿಯ ಆಡಳಿತದ ಕುರಿತು ಅಸಂತುಷ್ಟಿ

ದಂಗೆಯೇಳುವುದು ಸಂಭವವೆ?

ಬ್ರಿಟಿಷರೊಡನೆ ಇಟಲಿ ಯುದ್ಧವನ್ನು ಹೂಡಿದ ದಿನದಿಂದಾರಂಭಿಸಿ ಮುಸಲೋನಿಯ ಭಾಗ್ಯ ಸೂರ್ಯನು ಅಸ್ತಂಗತನಾದ ಹಾಗೆಯೇ ಕಾಣುತ್ತಾನೆ ಮುಸಲೋನಿಗೆ ಹಿಡಿದ ಕಾರ್ಯದಲ್ಲಿ ಸೋಲು ಹೋದ ಹೋದಲ್ಲಿ ಅಪಜಯ ಎಂಬ ಹಾಗಿದೆ. ಆಫ್ರಿಕದ ರಣರಂಗದಲ್ಲಿ ಇಟಾಲಿಯನ್ ಸಾಮ್ರಾಜ್ಯವು ನಷ್ಟವಾದ ಹಾಗೆಯೇ ಸರಿ! ಅಬಿಸೀನಿಯದ ಪೂರ್ವ ಚಕ್ರವರ್ತಿ ಹೇಲೇಸಿಲಾಸಿಯು ಪುನಃ ಅಡೀಸ ಅಬಾಬವನ್ನು ಸೇರಿ ತನ್ನ ವಿಜಯ ಧ್ವಜವನ್ನು ಊರಿದ್ದಾನೆ ಸ್ವಾತಂತ್ರ್ಯ ಪತಾಕೆಯನ್ನು ಹಾರಿಸಿದ್ದಾನೆ ಸೋಮಾಲಿ ಲೆಂಡ ಮೊದಲಾದ ಪ್ರದೇಶ ಬ್ರಿಟಿಷರ ಹಸ್ತಗತವಾಗಿವೆ ಹೀಗೆ ಇಟಾಲಿಯಾನರ ಸಾಹಸ, ಧೈರ್ಯ, ಬಲ, ಪುರಾತನ ಕೀರ್ತಿಗೆ ಒಂದುರೀತಿಯಿಂದ ಪ್ರಬಲವಾದ ಆಘಾತ ವುಂಟಾಗಿದ್ದು ಮುಸಲೋನಿಯಿಂದಾಗಿಯೇ ಇಟಾಲಿಯನ್ ರಾಷ್ಟ್ರವು ಅಪಮಾನಿತವಾಗಿರುವದು. ಆದ್ದರಿಂದ ಇಟಲಿಯಲ್ಲಿ ಮುಸಲೋನಿ ರಾಜ್ಯಭಾರದ ಕುರಿತು ಘೋರ ಅಸಂತುಷ್ಟಿಯು ಹರಡಿರುವದು

ಇಟಲಿಯಲ್ಲಿ ಸ್ಥಿತಿ

ಇಟಾಲಿಯನ್ ಸಾಮ್ರಾಜ್ಯವು ಕಳೆಗುಂದುತ್ತಾ ಬರುವಾಗ ಇಟಲಿಯಲ್ಲಿಯೂ ಸ್ಥಿತಿಯು ಬಹಳ ಕೆಟ್ಟಿರುತ್ತದೆ ಹಡಗು ಸಂಚಾರವು ನಿಂತುಹೋಗಿರುವುದರಿಂದಲೂ, ಜನಾಂಗವು ಯುದ್ಧಾಸಕ್ತವಾಗಿರುವುದರಿಂದಲೂ ಆಹಾರದ ಬಹಳ ಕೊರತೆಯಾಗಿದೆ. ರಣಕ್ಷೇತ್ರದಿಂದ ಹಿಂದುಳಿದ ಜನರಿಗೆ ಹೊಟ್ಟೆ ತುಂಬಾ ಅನ್ನ ಸಿಕ್ಕುವದು ಕಠಿಣವಾಗಿದೆ. ಉಪವಾಸಿಗಳೂ ಅರ್ಧನಗ್ನರೂ ಆದ ಜನರು ಸರಕಾರದ ವಿರುದ್ಧ ಬಂಡಾಯವೇಳುವಂತಿರುವರು ಎಂದು ಇಟಲಿಗೆ ಹೋಗಿ ಬಂದ ತಟಸ್ಥ ರಾಜ್ಯದ ಒಬ್ಬ ಪ್ರಮುಖನು ತಾನು ಕಣ್ಣಾರೆ ಕಂಡುದನ್ನು ಹೇಳಿರುವನು

ಯುದ್ಧ ಬೇಡವೆಂದು ಆಂದೋಲನ

ಜನರು ಯುದ್ಧ ಬೇಡವೆಂದು ಕೂಗಿಡಲಾರಂಭಿಸಿರುವರು. ಅನ್ನ ಬಟ್ಟೆ ಕೊಡಿರೆಂದು ಕಾಡ ತೊಡಗಿರುವರು ಯುದ್ಧ ಬೇಡವೆಂದು ಹೇಳುವ ಒಂದು ದೊಡ್ಡ ಆಂದೋಲನವೇ ಆರಂಭವಾಗಿದೆ ಇಟಲಿಯಲ್ಲಿ ಮುಸಲೋನಿ ಈ ಆಂದೋಲನಕಾರಿಗಳನ್ನು ಮುರಿಯಲಿಕ್ಕೆ ಶತಪ್ರಯತ್ನಗಳನ್ನು ಮಾಡಿದ್ದಾನ, ಅವರಿಗೆ ಚಿತ್ರ ಹಿಂಸೆಯನ್ನು ಕೊಟ್ಟಿದ್ದಾನೆ ಆದರೂ ಅವರು ದಿನೇ ದಿನೇ ಪ್ರಬಲರಾಗುತ್ತಿರುವರು

ಪೋಪರ ಸಂದೇಶ

ಆಹಾರ ವಸ್ತುಗಳ ಬೆಲೆ ವಿಪರೀತ ಏರಿಬಿಟ್ಟಿರುವುದರಿಂದ ಇಟಲಿಯಲ್ಲಿ ಬಡವರು ಒಪ್ಪೊತ್ತು ಊಟಕ್ಕೂ ಗತಿ ಇಲ್ಲದವರಾಗಿರುವರು ಮತ್ತೆ ಹೊಟ್ಟೆ ತುಂಬಿಸಿಕೊಳ್ಳಲಿಕ್ಕಾಗಿ ಈ ಬಡವಾಯಿಗಳು ಹಾಳು ಹಳಸಿದ ಆಹಾರವನ್ನು ತಿನ್ನ ತೊಡಗಿರುವರು. ಅನ್ನಕ್ಕೆ ಬರಗಾಲವಾಗಿರುವುದರಿಂದ ಇಟಾಲಿಯನ್ ಹೆಂಗಸರಲ್ಲಿ ಅನೀತಿಯು ಬಹಳ ಹರಡಿದೆ ಅನ್ನ ಕೊಡುವವರಿಗಾಗಿ ಅವರು ತಮ್ಮ ಶರೀರ ಯೌವನವನ್ನು ಮಾರಲಾರಂಭಿಸಿದ್ದಾರೆ. ಇದಕ್ಕೆ ಅವರ ಗಂಡಂದಿರ ಸಮ್ಮತಿಯೂ ಇರುವದಂತೆ! ಇದನ್ನೆಲ್ಲಾ ಕಂಡು ಸಹಿಸಲಿಕ್ಕಾಗದೆ, ಯುದ್ಧದಿಂದಾಗುವ ಅನರ್ಥಗಳನ್ನು ಕಣ್ಣಾರೆ ಕಂಡು, ಪೋಪರು ಶಾಂತಿಯ ಸಂದೇಶವನ್ನು ಕೊಟ್ಟಿರುತ್ತಾರೆ.

ಎದೆಯ ಬೇನೆಗಳನ್ನು ಗುಣಪಡಿಸಿರಿ

ಕಫ ಮತ್ತು ಶೀತಗಳು ಸರಿಯಾಗಿ ಪೆಪ್ಸನ್ನು ತೆಗೆದುಕೊಳ್ಳುವುದರಿಂದ ಗುಣವಾಗುವವು ಕುತ್ತಿಗೆಗೆ ಎದೆಗೆ ಮತ್ತು ಶ್ವಾಸಕೋಶಕ್ಕೆ ಪೆಪ್ಸ್ ಮಾತ್ರೆಗಳು ಬಹಳ ಪರಿಣಾಮಕಾರಿಯಾದ ಗುಣಗಳನ್ನು ಕೊಡುತ್ತವೆ

ಎಲ್ಲಾ ಕಡೆಗಳಲ್ಲಿಯೂ ಒಂದು ರೂಪಾಯಿ ಬೆಲೆಗೆ ಮಾರಾಟ ಮಾಡಲ್ಪಡುತ್ತವೆ

ಏಜೆಂಟ್ಸ್ ಪೆಸಸ್ ದಾಧಾ ಮತ್ತು ಕಂಪೆನಿ, ೭ ಟ ಮದ್ರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

Notice

In the Court of the District Munsif of Mangalore

~~S C No. 928 of 1940~~

Between

The Kadri Sri Jogishwara Mutt … Plaintiff

and

B Sheil Ahmad Saheb … Defendants

To

2nd defendant

Mrs. Misquith Bai, daughter of Jermi Vas and wife of Santhan Misquith, Kurkun Matti Jaguekan Estate, Kadur District

Take notice that the above named plaintiff filed the above suit for reliefs claimed in the plaint copy of which can be had from Court, for recovery of rental of properties situated in Kadri village, Mangalore Taluk, and the said suit stands posted to ***9—6—1941*** for final disposal

You are hereby requested to appear and contest the above matter failing wherein the same shall be heard and determined in your absence

Mangalore 10-4-1941 — G Somasheker Rao, Vakil for Plaintiff

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕಾರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವವು

ಬೆಲೆ. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯ್ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** Vithalbhai Patel Road, BOMBAY 4.

~~*Madras Agent:* **Appah & Co, China Bazar Madras.**~~

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ವಿಜ್ಞಾನಯುಗ

ರೋಗಪ್ರಸಾರವನ್ನು ತಡೆಯಲಿಕ್ಕೆ ಗ್ಯಾಸು ಮಾಸ್ಕುಗಳು

ಲಂಡನಿನಂಥ ದೊಡ್ಡ ಪಟ್ಟಣಗಳಲ್ಲಿ ಶತ್ರುಪಕ್ಷದ ವಿಮಾನದಾಳಿಗಳಿಂದ ತಮ್ಮನ್ನು ಕಾಪಾಡಿಕೊಳ್ಳಲಿಕ್ಕೆ, ಜನರು ನೆಲಮಾಳಿಗೆಗಳಲ್ಲಿ ಅಡಗಿ ಬಹಳ ಸಮಯವನ್ನು ಕಳೆಯಬೇಕಾಗುತ್ತದೆ. ಇದರಿಂದ ಜನರು ಕೆಲವು ತರದ ಶಾರೀರಿಕ ಮತ್ತು ಮಾನಸಿಕ ರೋಗಗಳಿಗೆ ಗುರಿಯಾಗುತ್ತಾರೆ. ಯಾಕೆಂದರೆ ಎಲ್ಲಾ ಪ್ರಕೃತಿಯ ಜನರು ಕೂಡಿ ಅಲ್ಲಿ ವಾಯು ಸೇವನೆ ಮಾಡುವುದರಿಂದ ಅಲ್ಲಿಯ ಹವೆಯು ಅನಾರೋಗ್ಯಕರಾಂ ಆಗುತ್ತದೆ. ಇವರ ಪರಿಹಾರಕ್ಕಾಗಿ ವಿಜ್ಞಾನಿಗಳು ಹೊಸ ತರಧ ಗ್ಯಾಸುಮಾಸ್ಕುಗಳನ್ನು ತಯ್ಯಾರಿಸಿದ್ದಾರೆ. ಇವನ್ನು ರೋಗಿಗಳು ಧರಿಸಿಕೊಳ್ಳುವುರಿಂದ ಅವರ ಉಸಿರಿನೊಳಗಿರುವ ರೋಗಾಣುಗಳು ಹೊರಗಿನ ವಾಯುವಿನಲ್ಲಿ ಸೇರಿಕೊಳ್ಳುವುದಿಲ್ಲ. ಅಲ್ಲದೆ ನಿರೋಗಿಗಳು ಈ ಮಾಸ್ಕುಗಳನ್ನು ಉಪಯೋಗಿಸಿದರೆ ಅವರ ಉಸಿರಿನಲ್ಲಿ ಇತರ ರೋಗಾಣುಗಳೂ ಸೇರಿಕೊಳ್ಳುವುದಿಲ್ಲ. ಆದ್ದರಿಂದ ನೆಲಮಾಳಿಗೆ ಅಥವಾ ರಕ್ಷಣಾಮಂದಿರಗಳಲ್ಲಿ ಇರುವ ಕಾಲಕ್ಕೆ ಎಲ್ಲರೂ ಈ ಮಾಸ್ಕುಗಳನ್ನು ಉಪಯೋಗಿಸಲಾರಂಭಿಸಿದ್ದಾರೆ.

ಹೊಸತರದ ಪೆರೆಚೂಟು

ಅಮೇರಿಕದ ಟೆನೆಸ್ಸಿ ಜಿಲ್ಲೆಯ ಮೆಂಫಿಸ್ ಎಂಬಲ್ಲಿಯ ಒಬ್ಬ ವಿಜ್ಞಾನಿಯು ಹೊಸತರದ ಪೆರೆಚೂಟು ಅಥವಾ ಗಾಳಿಕೊಡೆಯನ್ನು ಕಂಡುಹಿಡಿದಿದ್ದಾನೆ. ಸಾಧಾರಣ ತರದ ಗಾಳಿಕೊಡೆಗಳು ಸಂಪೂರ್ಣ ತೆರೆದುಕೊಳ್ಳಬೇಕಾದರೆ ಕಡಿಮೆ ಪಕ್ಷ ೧೫ ನಿಮಿಷಗಳ ಸಮಯ ಬೇಕು. ಆದರೆ ಈ ಹೊಸ ಕೊಡೆಯು ಕೇವಲ ಒಂದು ನಿಮಿಷದೊಳಗೆ ತೆರೆದುಕೊಳ್ಳುವುದು. ಇದರ ಮತ್ತೊಂದು ಪ್ರಯೋಜನವೇನೆಂದರೆ—ಈ ವರೆಗಿನ ಗಾಳಿಕೊಡೆಗಳು ಆಕಾಶದಿಂದ ಕೆಳಗಿಳಿಯುವ ವೇಗವು ನಿಮಿಷಕ್ಕೆ ೨೫೦ ಅಡಿಗಳಂತೆ ಇರುತ್ತದೆ. ಆದರೆ ಇದರ ವೇಗವು ಅರ್ಧಕ್ಕಿಂತಲೂ ಕಡಿಮೆ ಅಂದರೆ ನಿಮಿಷಕ್ಕೆ ೧೨೨ ಅಡಿಗಳಷ್ಟು ಇರುವುದು. ಆದ್ದರಿಂದ ಗಾಳಿಕೊಡೆಯ ಸಹಾಯದಿಂದ ಕೆಳಗಿಳಿಯುವವರು ತಲೆ ಒಡೆದುಕೊಳ್ಳುವ ಭಯವಿಲ್ಲ. ಇದರಲ್ಲಿ ಇನ್ನೂ ಒಂದು ವಿಶೇಷತೆ ಇದೆ. ಈ ಕೊಡೆಯಲ್ಲಿರುವ ಒಂದು ಸೂತ್ರದ ಸಂಚಾಲನೆ ಮಾಡಿ, ಇಳಿಯುವವನು ತನ್ನ ಗತಿಯನ್ನು ಬೇಕಾದ ದಿಕ್ಕಿಗೆ ಬದಲಾಯಿಸಿಕೊಳ್ಳಬಹುದು. ಹಳೆಯ ಕೊಡೆಗಳಲ್ಲಿ ಈ ವ್ಯವಸ್ಥೆ ಇರುವುದಿಲ್ಲ.

ವಿಜ್ಞಾನಿಯ ಅನುಪಮ ತ್ಯಾಗ

ಶತ್ರು ಪಕ್ಷದ ವೈಮಾನಿಕ ದಾಳಿಗಳಾಗುವಾಗ, ಸಿಡಿಯುವ ಬಾಂಬುಗಳು ತಮ್ಮ ಧ್ವಂಸಕಾರ್ಯವನ್ನು ಹೇಗೆ ನಡೆಸುತ್ತವೆ ಎಂಬ ಮಾತಿನ ಪರೀಕ್ಷೆಯು ನಡೆಯುವುದು ಅಗತ್ಯ. ಆಗ ಮಾತ್ರ ಅಂಥ ಬಾಂಬುಗಳಿಗೆ ಪ್ರತಿಯಾದ ಬೇರೆ ಶತ್ರುನಿಗ್ರಹ ಉಪಾಯಗಳನ್ನು ಕೈಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಈ ಪರೀಕ್ಷೆಯು ಚೆನ್ನಾಗಿ ನಡೆಯಬೇಕಾದರೆ, ಬಾಂಬು ಬೀಳುವಾಗ ಒಬ್ಬನು ಬುದ್ಧಿಪೂರ್ವಕ ಸಿಡಿಯುವ ಆ ಬಾಂಬಿಗೆ ತಲೆಕೊಡಬೇಕು. ಇದಕ್ಕಾಗಿಯೇ ಲಂಡನಿನ ಒಬ್ಬ ವಿಜ್ಞಾನಿಯು ಮುಂದೆ ಬಂದಿದ್ದಾನೆ. ಇವನು ಸಾಮಾನ್ಯ ವಿಜ್ಞಾನಿಯೇನೂ ಅಲ್ಲ. ಒಂದು ವಿಶ್ವವಿದ್ಯಾಲಯದಲ್ಲಿ ವಿಜ್ಞಾನವನ್ನು ಕಲಿಸುವ ಒಬ್ಬ ಆಚಾರ್ಯನಾಗಿದ್ದಾನೆ. ಇವನು ಮೇಲಿನಿಂದ ಬಾಂಬು ಬೀಳುವಾಗ ತಲೆಗೆ ತವರದ ಕುಲಾವಿಯನ್ನಿಟ್ಟುಕೊಂಡು ಬೇಕೆಂದೇ ಹೊರಗೆ ಬರುವನು. ಮತ್ತು ಬಾಂಬು ಸಿಡಿದು ಕಟ್ಟಡ ಮೊದಲಾದುವು ಕುಸಿದು, ಜರಿದು, ನಾಶವಾಗುವುದರ ಸೂಕ್ಷ್ಮ ಅವಲೋಕನ ಮಾಡುವನು. ಮತ್ತು ತಾನು ಕಂಡುದನ್ನು ಇತರ ವಿಜ್ಞಾನಿಗಳಿಗೆ ತಿಳಿಸುವನು. ಅವರು ಪ್ರತಿಕಾರ ಉಪಾಯಗಳನ್ನು ಚಿಂತಿಸುವರು. ಈ ಕೆಲಸಕ್ಕೆ ಅವನಿಗೆ ಹಣ ದೊರೆಯುತ್ತದೆ. ಆದರೆ ಇದು ಅವನಿಗೆ ಒಂದು ಆಟವಾಗಿದೆ.

ಗಾಯಗೊಂಡವರಿಗೆ ಸಂಜೀವನ ಔಷಧಿ

ಸಂಯುಕ್ತ ಸಂಸ್ಥಾನಗಳ ತಜ್ಞ ವೈದ್ಯರು ಕೆಲವು ಪ್ರಾಣಿಗಳ ಮೇಲೆ ಮಾಡಿದ ಪ್ರಯೋಗಗಳ ಮೇಲಿಂದ ಈಗ ತಿಳಿದುಬರುವುದೇನಂದರೆ—ಗಾಯಗೊಂಡವುಗಳಿಗೆ ಬಾರ್ಬಿಟ್ಯುರೇಟ್ ಮೂಲಿಕೆಗಳನ್ನು ಔಷಧಿಯಾಗಿ ಕೊಡುವುದರಿಂದ, ಶಸ್ತ್ರಚಿಕಿತ್ಸೆಯಿಂದಾಗುವ ಮಾನಸಿಕ ಕಳವಳವು ಸುಮಾರು ೧೦½ ತಾಸುಗಳ ತನಕ ಉಂಟಾಗುವುದಿಲ್ಲ. ತನ್ಮಧ್ಯೆ ಶಸ್ತ್ರಚಿಕಿತ್ಸೆ ಮಾಡಿ ಗಾಯಗೊಂಡವುಗಳಿಗೆ ಪ್ರಾಣದಾನ ಮಾಡುವುದು ಸುಲಭ. ಆದ್ದರಿಂದ ಯುದ್ಧದಲ್ಲಿ ಗಾಯಗೊಂಡವರಿಗೆ ಎರಡು ಮಿಲಿಗ್ರೈನ್ ಪ್ರಮಾಣದ ಈ ಮೂಲಿಕೆಗಳ ಮಾತ್ರೆಗಳನ್ನು ಕೊಟ್ಟರೆ ಅವರು ಆಸ್ಪತ್ರೆಯನ್ನು ಸೇರುವ ತನಕ ಗಾಯದ ಕಳವಳದಿಂದ ಪ್ರಾಣ ಕಳೆಕೊಳ್ಳುವ ಪ್ರಸಂಗವು ತಪ್ಪುತ್ತದೆ. ಹೀಗೆ ಸಾವಿರಾರು ಮಂದಿ ಗಾಯಗೊಂಡವರ ಜೀವರಕ್ಷಣೆ ಮಾಡಬಹುದು ಎಂದು ಸೇನೆಯ ಮುಖ್ಯ ವೈದ್ಯರು ಇತರರಿಗೆ ತಿಳಿಸಿದ್ದಾರೆ.



ಹೊಟ್ಟೆಯ ಅಸ್ವಸ್ಥತೆ—ತಲೆಸಿಡಿತ—ಕೆಲಸ ಮಾಡಲು ಸಾಗದೆ—ಅವನು ಕೆಲಸವನ್ನು ಕಳೆದುಕೊಳ್ಳುವುದರಲ್ಲಿದ್ದನು.

ಈಗ—ಉಲ್ಲಾಸಿತ ಆಫೀಸು ಕೆಲಸಗಾರ—ಆರೋಗ್ಯವಂತ ಮತ್ತು ಕೆಲಸದಲ್ಲಿ ಸಮರ್ಥ—ಯಾಕೆಂದರೆ ಆತನ ಅಂತರಂಗವು ನೈರ್ಮಲ್ಯವಾಗಿದೆ.

ಹೊಟ್ಟೆಯ ಅಸ್ವಸ್ಥತೆ, ಪಿತ್ಥಬಾಧೆ ಮತ್ತು ಮಲಬದ್ಧತೆಯ ಬಾಧೆಗಳಿಗೆ ಒಂದು ಗ್ಲಾಸು ನೊರೆ ಬರುವ ಗುಣವುಳ್ಳ ತಂಪಾದ ಎಂಡ್ರೂಸ್ ಲಿವರ್ ಸೋಲ್ಟಿನಷ್ಟು ಉತ್ತಮವಾದುದು ಬೇರಾವುದೂ ಇಲ್ಲ. ಇದು ನಿಮ್ಮ ದೇಹದ ಒಳಭಾಗವನ್ನು ನೈರ್ಮಲ್ಯಗೊಳಿಸುತ್ತದೆ—ನಿಮ್ಮ ಅಸ್ವಸ್ಥತೆಗೆ ಕಾರಣವಾದ ಮಲೀನತೆಯನ್ನು ನಾಶಮಾಡುತ್ತದೆ. ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮಸೂತ್ರ. ಎಂಡ್ರೂಸ್ ಲಿವರ್ ಸೋಲ್ಟ್ ಅಂತರಂಗವನ್ನು ನೈರ್ಮಲ್ಯಗೊಳಿಸುತ್ತದೆ. ನಾಲಿಗೆಯನ್ನೂ ಬಾಯಿಯನ್ನೂ ಸ್ವಚ್ಛಗೊಳಿಸುತ್ತದೆ. ಯಕೃತ್ತನ್ನು ಸರಿಗೊಳಿಸುತ್ತದೆ. ಮತ್ತು ಹೊಟ್ಟೆಯನ್ನು ನಿಧಾನವಾಗಿ ಪೂರ್ಣ ನೈರ್ಮಲ್ಯಗೊಳಿಸುತ್ತದೆ. ಎಂಡ್ರೂಸ್ ಸದಾಕಾಲ ಅಭ್ಯಾಸವಾಗುವಂತಿಲ್ಲ.

ಅಂತರಂಗ ನೈರ್ಮಲ್ಯಕ್ಕೆ ಕ್ರಮವಾಗಿ ಸೇವಿಸಿರಿ

ANDREWS
LIVER SALT

ಶುಚಿಗೊಳಿಸುತ್ತದೆ—ತಂಪುಗೊಡುತ್ತದೆ—ಆನಂದಪಡಿಸುತ್ತದೆ



ಸ.ಸೈ. 11 ಆ.
ದೊಡ್ಡ ಸೈಜು 1-4-0

HALFTONE & LINE
BLOCK MAKING
UNDERTAKEN
Sharada Press,
MANGALORE

ಸೆರೆಮನೆಗಳಲ್ಲಿ ಸತ್ಯಾಗ್ರಹಿಗಳು ಹೇಗಿರುವರು?

(೧೪ನೆಯ ಪುಟದಿಂದ ಮುಂದುವರಿದುದು)

ಪ್ರಾಂತದಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಕಟಜೂ ಮತ್ತು ಹಾಫಿಜ ಇಬ್ರಾಹಿಮ ಮೊದಲಾದವರು ದುಡಿಯುತ್ತಾರೆ. ಇದನ್ನು ಆ ಪ್ರಾಂತದವರು ಮರಿಯಬಾರದು. ಯುಕ್ತ ಪ್ರಾಂತದ ಸೆರೆಮನೆಯಲ್ಲಿ ಕೆಲವರು ಜಗಳ ಹೂಡುತ್ತಿರುವರೆಂದೂ, ಇಲ್ಲದ ಆತಂಕಗಳನ್ನು ಹುಟ್ಟಿಸುತ್ತಿರುವರೆಂದೂ, ಸುಮ್ಮನೆ ಮುಷ್ಕರ ಹೂಡುವರೆಂದೂ ತಮ್ಮಂತೆ ಕೇಳದವರನ್ನು ನಿಂದಿಸುತ್ತಿರುವರೆಂದೂ ಮುಂತಾಗಿ ನಂಬಲರ್ಹವಾದ ಪತ್ರ ಬಂದಿದೆ. ಈ ಬಗೆಯ ದೂರು ಪಂಜಾಬ ಸೆರೆಮನೆಯಿಂದಲೂ ಬಂದಿದೆ. ಇದು ತರವಲ್ಲ. ಸತ್ಯಾಗ್ರಹಿಯ ರೀತಿ ನೀತಿಗಳಿಗೆ ತಕ್ಕುದಲ್ಲ. ರೀತಿ ನೀತಿಬದ್ಧವಾಗಿ ದುಡಿಯುವವನು ಓರ್ವನೇ ಇದ್ದರೂ ಆದಾವ ಸಂದರ್ಭದಲ್ಲಿಯೂ ಮಣಿಯದೆ ಅಂಜದೆ ಕೆಲಸವನ್ನು ಸಾಗಿಸಬೇಕು. ಬಂಗಾಲ ಬಿಹಾರ ಪ್ರಾಂತಗಳಿಂದ ಇನ್ನೂ ಪತ್ರ ಬಂದಿಲ್ಲ. ಒಂದು ತಿಂಗಳ ಹಿಂದೆ ಡಾ. ಪ್ರಫುಲ್ಲ ಘೋಷರು ಒಂದು ಪತ್ರ ಬರೆದು ಗಂಟೆಗೆ ೫೦೦ ಗಜ ತಾವು ನೂಲುವುದಾಗಿ ತಿಳಿಸಿದ್ದಾರೆ. ಅಲ್ಲದೆ ಇನ್ನೊಬ್ಬ ಸಹ ಕೈದಿಯ ಜೊತೆಯಲ್ಲಿ ಸಂಸ್ಕೃತ ಅಭ್ಯಾಸ ಮಾಡುತ್ತಿದ್ದಾರೆ. ಅಲ್ಲದೆ ವಿಜ್ಞಾನ ಶಾಸ್ತ್ರದ ಮೇಲೆ ಕವಿತೆ ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಅಸ್ಸಾಮಿನಿಂದಲೂ ಸುದ್ದಿಯಿಲ್ಲ. ಆದರೂ ಶ್ರೀ ಶಂಕರ ಚಂದ್ರಬರೂವ ಇವರು ಚೆನ್ನಾಗಿ ನೂಲುತ್ತಾರೆಂದು ಸುದ್ದಿ ಇದೆ. ಜನಾಬ ಫಕ್ರುದ್ದೀನ ಅಹಮ್ಮದರೂ ನೂಲುತ್ತಿದ್ದಾರೆ.

ತಮಿಳುನಾಡಿನಲ್ಲಿ

ತಮಿಳುನಾಡಿನಿಂದ ಸುದ್ದಿ ಬರುವುದೇ ವಿರಳ. ತಿಂಗಳಿಗೊಮ್ಮೆ ಮಾತ್ರ, ಪತ್ರ ಬರೆಯಲವಕಾಶವಿರುವುದರಿಂದ ಅಲ್ಲಿ ಆ ಸುಸಂಧಿಯನ್ನು ಸತ್ಯಾಗ್ರಹಿಗಳು ತಮ್ಮ ಸಂಬಂಧಿಕರಿಗೆ ಪತ್ರ ಬರೆಯುವ ಬಗ್ಗೆ ಉಪಯೋಗಿಸಿಕೊಳ್ಳುತ್ತಾರೆ. ಆದರೂ ರಾಜಾಜಿಯವರು ಬರೆದ ಒಂದು ಪತ್ರದಲ್ಲಿ ಎಲ್ಲವನ್ನು ಸಾಕಷ್ಟು ವಿಶದೀಕರಿಸಿದ್ದಾರೆ. ಗಾಂಧೀಜಿಯವರು ಬರೆದ ಪತ್ರಕ್ಕೆ ಉತ್ತರ ಬರೆದು ತಾವೆಲ್ಲ ಚೆನ್ನಾಗಿರುವುದಾಗಿಯೂ, ವಾಲ್ಮೀಕಿ ರಾಮಾಯಣ, ಕುರುಳ್ ಹಾಗು ಗೀತೆಯನ್ನು ಅಭ್ಯಸಿಸುವುದಾಗಿಯೂ ತಿಳಿಸಿ ಆಳ್ವಾರ ಕವನದ ವರ್ಣನೆಯನ್ನು ಮಾಡಿದ್ದಾರೆ. ಈಗ ಗೀತೆಯನ್ನು ಶಂಕರರ ಮತ್ತು ರಾಮಾನುಜ ಪದ್ಧತಿಗನುಸರಿಸಿ ಓದಿ ತುಲನೆ ಮಾಡುತ್ತಿದ್ದಾರೆ. ಮತ್ತು ಮುನಿಸ್ವಾಮಿ ಪಿಳ್ಳೆಯವರ ಗುಣ ಪ್ರಶಂಸೆ ಮಾಡಿ ಅವರು ತಮ್ಮನ್ನು ತಾಯಿಯಂತೆ ನೋಡಿಕೊಳ್ಳುವುದಾಗಿ ತಿಳಿಸಿದ್ದಾರೆ, ಡಾ. ರಾಜನ್ ಮತ್ತು ಬಾಪಿನೀಡು ಇವರು ಅದೇ ಸೆರೆಮನೆಯಲ್ಲಿರುತ್ತಾರೆ. ಸತ್ಯಮೂರ್ತಿಯವರು ಚೆನ್ನಾಗಿದ್ದಾರೆ ಆದರೆ ಅವರಿಗೆ ಬೇಕಾದಷ್ಟು ನಿದ್ದೆ ಹತ್ತಲೊಲ್ಲದು ಎಂದು ತಿಳಿಸಿದ್ದಾರೆ.

ದಿಲ್ಲಿ ಪ್ರವಾಸಿಕರು

ಸತ್ಯಾಗ್ರಹಿಗಳಲ್ಲಿ ದಿಲ್ಲಿಗೆ ಹೊರಟ ಶ್ರೀಮತಿ ದಮಯಂತಿ ಬಾಯಿ ಧರ್ಮಾಧಿಕಾರಿ ಮತ್ತು ಶರಯೂತಾಯಿ ಧೋತ್ರೆ ಇವರು ಅನೇಕ ಊರುಗಳನ್ನು ತಿರುಗಿ ಬಹಳ ರಚನಾತ್ಮಕ ಕಾರ್ಯಗಳನ್ನು ಮಾಡಿದ್ದಾರೆ ಮೊದಲು ಅವರಿಗೆ ಅದು ರುಚಿಸುತ್ತಿರಲಿಲ್ಲ ಈಗ ಅದರ ಪರಿಣಾಮ ಗೊತ್ತಾಗಿದೆ ದಿಲ್ಲಿ ಪ್ರವಾಸಿಗಳು ಇದರಂತೆ ಮಾಡುವದು ಉತ್ತಮ. ಕೆಲವರಿಗೆ ವಿಧಾಯಕ ಕಾರ್ಯವೇ ಗೊತ್ತಿಲ್ಲ ಅಂತವರು ನಿರಕ್ಷರಿಗಳಾದರೂ ತಮ್ಮ ಬುದ್ಧಿಯ ಉಪಯೋಗ ಮಾಡಿಕೊಳ್ಳುವವರು ಬೇಕು. ಮಾತಾಡಿ ವಿಧಾಯಕ ಕಾರ್ಯಕ್ರಮ ಮಾಡಲು ಗೊತ್ತಿಲ್ಲದವರು ಹೀಗೆ ಬಂದು ಇನ್ನು ಕೆಲ ಕಾಲ ತರಬೇತಿ ಹೊಂದುವದು ಲೇಸು. ಆದ್ದರಿಂದ ಅಂಥವರನ್ನು ಹಿಂದೆ ಕರಸಿಕೊಳ್ಳುವದು ಉತ್ತಮವೆಂದು ಸರಪಟೇಲರಿಗೆ ಬಿನ್ನವಿಸಿಕೊಳ್ಳುತ್ತೇನೆ.

THE

Canara Banking Corporation Limited

(Incorporated in British India)

ESTD 1906.

HEAD OFFICE. **UDIPI,** *South Kanara*

SEASON DEPOSITS

ARE now accepted at all our Offices at the following rates of interest

2 & 3 months	... ...	3% p. a.
4 & 5 „	... ...	3½% p. a.

These deposits will not be allowed to run beyond September 1941.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—3—1940

FROM.

Sri K. Shivarama Nair,
Kerikcundah Estate,
Post Devegadabettu,
KADUR DISTRICT.

To,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd). K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ.: 2-13-0 Regd. No M 3460

ಸ್ವದೇಶಾಭಿಮಾನಿ

ಸಂಪುಟ 35] ತಾರೀಕು 25-4-1941 [ಸಂಚಿಕೆ 17]

The Bombay Life Assurance Company, Ltd.

(ESTABLISHED 1908)

Death! { **is not a matter of supposition** / **is a matter of Certainty**

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.	Car Street, Mangalore.	Central Station Road, Trivandrum.
Gantam Nivas, Charni Road, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಪ್ರಮುಖಗಳೂರಲ್ಲಿ ತಾ ಕಂಪೆನಿಯಲ್ಲಿ ದೊರೆಯುವುದು.



ಇಂದು ವಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI

ಸೆರೆಯ ಮರೆಯಲ್ಲಿ!

ಡಾ| ಯು. ಪಿ. ಮಲ್ಯರು

KANNADA ILLUSTRATED WEEKLY

‘ಓವಲ್‌ಟಿನ್’
OVALTINE
UNTOUCHED BY HAND
AN IDEAL BEVERAGE
A COMPLETE FOOD
OVALTINE
TONIC FOOD BEVERAGE
★ ಆರೋಗ್ಯದಲ್ಲಿದ್ದ ಸಂಸಾರವೇ ★
ಸುಖಮಯ ಸಂಸಾರ
ನಿಮ್ಮ ಕುಟುಂಬದ ಪ್ರತಿ ಒಬ್ಬನಿಗೂ ಯಾವಾಗಲೂ “ಓವಲ್ಟಿನ್” ಇತ್ತು, ಪ್ರತಿ ಕಡೆಯಲ್ಲಿಯೂ ಸಾವಿರಾರು ಜನರು ಅನುಸರಿಸುತ್ತಿರುವ ಉದಾಹರಣೆಯನ್ನೇ ಅನುಸರಿಸಿರಿ. ಶ್ರೇಷ್ಠವಾದ ಪೋಷಣೆಯ ಗುಣವುಳ್ಳ ಈ ಪಾನೀಯವು ಆರೋಗ್ಯ, ಬಲ ಹಾಗೂ ಚೇತನವನ್ನೀಯುತ್ತದೆ.
ಮಕ್ಕಳು ಹಾಗೂ ಪ್ರಾಯಸ್ಥರು ಇದರ ರುಚಿಯನ್ನು ಬಹಳ ಮೆಚ್ಚುತ್ತಾರೆ. “ಓವಲ್ಟಿನ್”ನ ಪ್ರತೀ ಒಂದು ಹನಿಯೂ ಶ್ರೇಷ್ಠವಾದ ಪೋಷಣೆಯಿಂದ ಕೂಡಿದ್ದು ದೇಹ, ಮೆದುಳು ಹಾಗೂ ನರನಾಡಿಗಳನ್ನು ಉತ್ತೇಜನ ಸ್ಥಿತಿಯಲ್ಲಿರುತ್ತದೆ. ನಿಮ್ಮ ಮಕ್ಕಳು ಮರಿಗಳ ಸುಖವು ಅವರ ಆರೋಗ್ಯದ ಮೇಲೆ ಹೊಂದಿಕೊಂಡಿರುವುದೆಂದು
ನೆನಪಿನಲ್ಲಿಟ್ಟುಕೊಳ್ಳಿರಿ!
“ಓವಲ್ಟಿನ್” ಪ್ರಕೃತಿಯ ಶ್ರೇಷ್ಠ ಟಾನಿಕ್ ಆಹಾರಗಳ ತಯಾರಿಕೆಯಾಗಿರುತ್ತದೆ. ನೆನೆಯ ಹಾಕಿ ಮಾಗಿದ ಬಾರ್ಲಿ—ನೆನದ ಹಾಲು, ಶ್ರೇಷ್ಠವಾದ ನೈಸರ್ಗಿಕ ಜೀವಾತುಗಳು, ಮತ್ತು ಇತರ ನಕಲಿ ಪಾನೀಯಗಳನ್ನು ತ್ಯಜಿಸಿರಿ. “ಓವಲ್ಟಿನ್”ನ್ನು ಕೊಂಡುಕೊಳ್ಳಿರಿ
“ಓವಲ್ಟಿನ್” ರುಚಿಕರವಾದ ಆಹಾರಪಾನೀಯವಾಗಿರುತ್ತದೆ. _ಇದು ಬಿಸಿಯಾಗಲೀ ತಣ್ಣಗಾಗಲೀ ಕುಡಿಯಬಹುದು. ಅದಲ್ಲದೆ ಓವಲ್ಟಿನ್ ಪಾನೀಯವನ್ನು ತಯಾರಿಸಲು ಬಹಳ ಸುಲಭ. ಪ್ರತಿ ಟಿನ್ನುಗಳ ಒಟ್ಟಿಗೆ ಮೇಲೆ ತಯಾರಿಸುವ ವಿಧಾನವಿದೆ.
‘ಓವಲ್ಟಿನ್ ಬಿಸ್ಕಿಟುಗಳು’
ರುಚಿಕರ ಜೀರ್ಣಕಾರಿ — ಹಾಗೂ ಪೋಷಕ—ಓವಲ್ಟಿನ್ ಬಿಸ್ಕಿಟುಗಳು ಉತ್ತಮವಾದುವು. ಇವುಗಳಲ್ಲಿ ಉತ್ತಮ ಬೆಲೆಯ ‘ಓವಲ್ಟಿನ್’ ಸೇರಿದೆ.
4 ಔನ್ಸ್ 8 ಔನ್ಸುಗಳ ಪೆಕೇಟುಗಳಲ್ಲಿಯೂ 1 ಪೌಂಡಿನ ಟಿನ್ನಿನಲ್ಲಿಯೂ ಮಾರಲ್ಪಡುತ್ತದೆ
ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ
— ಮಾರಲ್ಪಡುತ್ತದೆ —
ಡಿಸ್ಟ್ರಿಬ್ಯುಟರ್ಸ್:
ಗ್ರೆಹಮ್ಸ್ ಟ್ರೇಡಿಂಗ್ ಕೋ.
(ಇಂಡಿಯಾ), ಲಿಮಿಟೆಡ್.
16 ಬೇಂಕ್ ಸ್ಟ್ರೀಟ್, ಬೊಂಬಾಯಿ ಮತ್ತು ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್‌ಗಳಲ್ಲಿ.

"ನ ನಿಶ್ಚಿತಾರ್ಥಾ ..."

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

2-5-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨-೫-೧೯೪೧.

ಸತ್ಯಾಗ್ರಹಕ್ಕೆ ಸಾರ್ವಜನಿಕ ಬೆಂಬಲವಿಲ್ಲವೆನ್ನುತ್ತಾರೆ!

ಭಾರತ ಸಚಿವರಾದ ಅಮೆರಿಯವರು

ಕಾಮನ್ಸ್ ಸಭೆಯ ಮುಂದೆ ಭಾಷಣ

ಭಾರತದ ಕುರಿತು ಕಾಮನ್ಸ್ ಸಭೆಯಲ್ಲಿ ಭಾರತ ಸಚಿವರಾದ ಅಮೆರಿಯವರು ಕಾಂಗ್ರೆಸು ಮಂತ್ರಿ ಮಂಡಳ ವಹಿಸಿದ ಪ್ರಾಂತಗಳಲ್ಲಿ ಗವರ್ನರರ ಅಧಿಕಾರವು ಬೆಳೆವ ಕರಾವನ್ನು ಮುಂದಿಸುತ್ತಾ ಒಂದು ದೀರ್ಘ ಪ್ರಕಟಣೆಯನ್ನು ಕೊಟ್ಟಿರುವರು. ಅದರಲ್ಲಿ ಪ್ರಕೃತದ ಸತ್ಯಾಗ್ರಹ ಚಳವಳ, ವೈಸರಾಯರ ಕಾರ್ಯಕಾರೀ ಮಂಡಳದ ವಿಸ್ತರಣೆ, ಪಾಕಿಸ್ತಾನ ಯೋಜನೆ ಇವುಗಳ ಕುರಿತು ಅವರು ಹೇಳಿದ ಮಾತುಗಳು ಹೀಗಿವೆ.

"ಕಾಂಗ್ರೆಸಿನ ಸತ್ಯಾಗ್ರಹ ಆಂದೋಲನವು ಮೊತ್ತಮೊದಲು ಕೇವಲ ಧುರೀಣರಿಗೆ ಮಾತ್ರ ಅನ್ವಯಿಸಿತ್ತು, ಮತ್ತೆ ಸ್ಥಳೀಯ ಮತ್ತು ಪ್ರಾಂತಿಕ ಕಾಂಗ್ರೆಸ್ ಪ್ರತಿನಿಧಿಗಳಿಗೆ ಅವರಿಸಿತು. ಅದೂ ಈಗ ಮುಗಿದು ಮೂರನೆಯ ಅಂಕವು ಬೇಗನೆ ಪ್ರಾರಂಭವಾಗಬಹುದು.

'ಸತ್ಯಾಗ್ರಹಿಗಳನ್ನು ಬಂಧಿಸಿ ಮೆಜಿಸ್ಟ್ರೇಟರು ಬಹಳ ಬುದ್ಧಿವಂತಿಕೆಯಿಂದ ವಿಚಾರಣೆಮಾಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವರಿಗೆ ಶಿಕ್ಷೆ ವಿಧಿಸದೆ ಜುಲ್ಮಾನೆಯನ್ನೇ ವಿಧಿಸಲಾಗುತ್ತದೆ. ಈ ಪ್ರಕಾರ ಜುಲ್ಮಾನೆ ವಿಧಿಸಲ್ಪಟ್ಟವರಲ್ಲಿ ಅನೇಕರು ಚುನಾವಣೆಗಳಲ್ಲಿ ಕೀರ್ತಿ ಪಡೆಯಲು ಇಚ್ಛಿಸುವವರೇ ಇದ್ದಾರೆ. ತಮ್ಮನ್ನು ಜೈಲಿಗೆ ಕಳುಹಿಸುವರೆಂದೇ ಅವರು ಭಾವಿಸಿದ್ದರು. ಜುಲ್ಮಾನೆ ತೆರಲು ಹಿಂದುಮುಂದು ನೋಡುತ್ತಿರುವುದನ್ನು ನೋಡಿ, ಗಾಂಧಿಯವರು, ಜುಲ್ಮಾನೆ ಕೊಡುವುದೂ ಬಹಳ ದೊಡ್ಡ ತ್ಯಾಗವೆಂದಿರುವರು.

'ಒಟ್ಟಿನಿಂದ ಈ ಚಳವಳವು ಬಹಳ ಕಷ್ಟದಿಂದ ಸಾಗುತ್ತಿದೆ. ಈ ಆಂದೋಲನದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಆಸಕ್ತಿಯೇ ಇಲ್ಲ. ಸಂಯುಕ್ತ ಪ್ರಾಂತದಲ್ಲಿ ಮಾತ್ರ ಜನಸಂಖ್ಯೆಯ ಅರ್ಧಾಂಶದಷ್ಟು ಜನರು ಶಾಸನಭಂಗ ಮಾಡಿರುವರು.

'ಮಾರ್ಚಿ ತಿಂಗಳ ಮಧ್ಯದ ವರೆಗೆ ೭೦೦೦ ಜನರಿಗೆ ಶಿಕ್ಷೆ ವಿಧಿಸಲಾಗಿದೆ, ಅವರಲ್ಲಿ ೫೦೦೦ ಮಂದಿ ಸೆರೆಮನೆಯಲ್ಲಿದ್ದಾರೆ. ಈ ರೀತಿಯಲ್ಲಿ ಭಾರತ ಸರಕಾರದ ವ್ಯವಸ್ಥೆ ನಡೆವುದು ನಮಗೆ ಅತ್ಯಂತ ದುಃಖದಾಯಕವಾದ ಸಂಗತಿಯಾದರೂ ಬೇರೆ ದಾರಿಯಿರುವುದಿಲ್ಲ.

ವೈಸರಾಯರ ಕಾರ್ಯಕಾರೀ ಮಂಡಳ

ವೈಸರಾಯರ ಕಾರ್ಯಕಾರೀ ಮಂಡಳದ ವಿಸ್ತರಣೆಯನ್ನು ಮುಸ್ಲಿಂ ಲೀಗೂ ವಿರೋಧಿಸಿದೆ. ಅವರಿಗೆ ಹಿಂದುಗಳಷ್ಟೇ ಪ್ರಾತಿನಿಧ್ಯವು ಬೇಕೆಂದು ಅವರು ವಾದಿಸುತ್ತಾರೆ. ಇದು ಹೇಗೆ ಸಾಧ್ಯ, ಇದಕ್ಕಾಗಿಯೇ ಅವರು ವಿರೋಧಿಸುತ್ತಾರೆ.

'ಹೀಗೆ ಕಾಂಗ್ರೆಸೂ, ಲೀಗೂ ಆ ಯೋಜನೆಗೆ ಸಮ್ಮತಿಸದ ಕಾರಣ ಅದು ಪ್ರಕೃತಕ್ಕೆ ಮುಂದುವರಿಸಲಾಗಿದೆ. ಆದರೆ ವೈಸರಾಯರು ಎಲ್ಲಾ ಪಕ್ಷಗಳೂ ಒಟ್ಟಾಗಲು ಸರ್ವ ಸಹಾಯಗಳನ್ನೂ ಕೊಡಲು ಸಿದ್ಧರಿರುತ್ತಾರೆ.

ಪಾಕಿಸ್ತಾನ ಪ್ರಯೋಜನವಿಲ್ಲ

'ಭಾರತದ ವಾಯುವ್ಯ ಮತ್ತು ಈಶಾನ್ಯ ಭಾಗಗಳನ್ನು ಬೇರೆ ಮಾಡಿ ಅಲ್ಲಿನ ವಿದೇಶಾಂಗ ನೀತಿ, ರಕ್ಷಣೆ, ಆರ್ಥಿಕ ಯೋಜನೆಗಳ ಮೇಲೆ ಅಧಿಕಾರ ಕೊಡಬೇಕೆಂದು ಜಿನ್ನಾರು ಕೇಳುತ್ತಿದ್ದಾರೆ. ಈ ಯೋಜನೆಯು ಕಾರ್ಯರೂಪಕ್ಕೆ ಬರಲು ತುಂಬಾ ತೊಡಕುಗಳಿರುತ್ತವೆ ಎಂಬ ಸಂಗತಿಯನ್ನು ಪ್ರಕೃತ ನಾನು ವಾದಿಸುವುದಿಲ್ಲ. ಭಾರತವನ್ನು ವಿಭಜಿಸಬೇಕೆನ್ನುವವರು ಅದರ ೧೫೦ನೆಯ ಶತಮಾನದ ಇತಿಹಾಸವನ್ನೂ, ಇಂದಿನ ಬಾಲ್ಕನ್ ರಾಷ್ಟ್ರಗಳ ಪರಿಸ್ಥಿತಿಯನ್ನೂ ವಿಚಾರಿಸುವಲ್ಲಿ ಅದರ ಪ್ರಯೋಜನ ಶೂನ್ಯತೆಯು ವಿಚಾರ ತಿಳಿಯಬಹುದು.

ವೈಸರಾಯರ ಪ್ರಕಟಣೆ

'ಈ ವಿಷಯದಲ್ಲಿ ವೈಸರಾಯರು ಕಳೆದ ಆಗೋಸ್ತು ತಿಂಗಳಲ್ಲಿ ಒಂದು ಮಹತ್ವದ ಪ್ರಕಟಣೆಯನ್ನು ಕೊಟ್ಟಿರುತ್ತಾರೆ.

'ಅದರಲ್ಲಿ ಭಾರತೀಯರೇ ತಮ್ಮ ಮುಂದಿನ ರಾಜ್ಯಾಂಗ ವ್ಯವಸ್ಥೆಯನ್ನು ರಚಿಸಬೇಕೆಂದು ಹೇಳಲಾಗಿದೆ. ಈ ಪ್ರಕಟಣೆಯಂತೆ ಹಲವು ರಾಜಕೀಯ ಮಾರ್ಪಾಡಗಳನ್ನು ಮಾಡಬಹುದಾಗಿತ್ತು. ಆದರ ಪ್ರಾಧಾನ್ಯತೆಯನ್ನು ಭಾರತೀಯರು ಚೆನ್ನಾಗಿ ಗಮನಿಸಲಿಲ್ಲ. ಈ ಪ್ರಕಟಣೆಯಲ್ಲಿ ಭಾರತಕ್ಕೆ ಸಾಮಂತ ಸ್ವರಾಜ್ಯ ಕೊಡುವ ಸೂಚನೆಯಿತ್ತು. ಭಾರತೀಯರೇ ಭಾರತ ಸರಕಾರವನ್ನು ನಡೆಸಬೇಕೆಂದು ನಮ್ಮ ಅಭಿಪ್ರಾಯವಿದೆ. ಆದರೆ ಈ ರೀತಿಯ ರಾಜ್ಯಭಾರವನ್ನು ನಡೆಸಿಕೊಳ್ಳುವವರು ಸರಕಾರಕ್ಕೆ ಯಾವ ವಿಪತ್ತುಗಳೂ ಬರದಂತೆ ಬರಲು ಶಕ್ತರಿರಬೇಕು. ಆಗಲೇ ನಾವು ಅಧಿಕಾರವನ್ನು ಬಿಟ್ಟುಕೊಡಲು ಸಾಧ್ಯವಿರುತ್ತದೆ."

ಇಂದಿನ ಬ್ರಿಟಿಷ ಸರಕಾರದಿಂದ ಏನನ್ನೂ ನಿರೀಕ್ಷಿಸಲಾಗುವುದಿಲ್ಲ.

[ಆಚಾರ್ಯ ಕೃಪಾಲಾನಿಯವರ ಹೇಳಿಕೆ.]

ಭಾರತ ಸಚಿವ ಅಮೆರಿಯವರ ಭಾಷಣದ ಕುರಿತು ಆಚಾರ್ಯ ಕೃಪಾಲಾನಿಯವರು ಒಂದು ಹೇಳಿಕೆ ಕೊಡುತ್ತಾ ಅದರಲ್ಲಿ, 'ಭಾರತ ಸಚಿವರು ಹೇಳುವುದು ಹೊಸತೇನೂ ಅಲ್ಲ, ಅಮೆರಿಯವರ ಅಭಿಪ್ರಾಯವು ಏನೆಂದು ಗೊತ್ತಿದ್ದವರಿಗೆ ಆಶ್ಚರ್ಯವೂ ಆಗಿಲ್ಲ. ಬೊಂಬಾಯಿ ಸಮ್ಮೇಳನದ ಪರಿಣಾಮದಿಂದ ಅನುಕೂಲವುಂಟಾಗುವುದೆಂದು ಹಾರೈಸಿದ್ದವರಿಗೆ ಮಾತ್ರ ಅಮೆರಿಯವರ ಭಾಷಣದಿಂದ ನಿರಾಶೆಯಾಗಿದೆ. ಭಾರತದ ಇಂದಿನ ಪರಿಸ್ಥಿತಿಯನ್ನು ವಾಸ್ತವವಾಗಿ ತಿಳಿದವರು ಯಾರಾದರೂ, ಇಂದಿನ ಬ್ರಿಟಿಷ್ ಸರಕಾರದಿಂದ ಏನನ್ನೂ ನಿರೀಕ್ಷಿಸಲಾಗುವುದಿಲ್ಲವೆಂದು ಹೇಳಿರುತ್ತಾರೆ.

ಸಪ್ರುಗಳ ನಿರಾಶೆ

ಅಮೆರಿಯವರ ಹೇಳಿಕೆಯ ಕುರಿತು ಸರ್ ತೇಜ ಬಹದ್ದೂರ್ ಸಪ್ರುಗಳು ಅಭಿಪ್ರಾಯ ಕೊಡುತ್ತಾ, ಭಾರತದ ರಾಜ್ಯಾಧಿಕಾರವನ್ನು ಭಾರತೀಯರೊಡನೆ ಸಹಕರಿಸಿ ನಡೆಸಲು ಬ್ರಿಟನು ಇಷ್ಟಪಡುವುದಿಲ್ಲವೆಂದೂ, ಕೇವಲ 'ನ'ಕಾರದಿಂದ ಬ್ರಿಟನು ಭಾರತವನ್ನು ಅಲ್ಲಗಳೆಯುತ್ತದೆಂದೂ, ಮುಸ್ಲಿಂ ಲೀಗಿನ ಬಗ್ಗೆ ಅವರ ಭಾವನೆ ಪಕ್ಷಪಾತದ್ದಾಗಿದೆಯೆಂದೂ ತಿಳಿದುಬರುತ್ತದೆಯೆಂದರು.

ಸ್ವದೇಶಾಭಿಮಾನಿ

ತಾರೀಕು 2—5—1941

ಅಮೆರಿ ರಾಗ

ಕಾಂಗ್ರೆಸು ಮಂತ್ರಿಗಳು ರಾಜಿನಾಮೆಯಿತ್ತ ಏಳು ಪ್ರಾಂತಗಳಲ್ಲಿ ಗವರ್ನರರ ಸ್ವೇಚ್ಛಾಧಿಕಾರಕ್ಕೆ ಇನ್ನೊಂದು ವರ್ಷದ ಜೀವದಾನ ಕೊಡುವ ನಿರ್ಣಯವನ್ನು ಕಾಮನ್ಸ್ ಸಭೆಯ ಮುಂದಿಡುತ್ತಾ, ಭಾರತ ಸಚಿವರಾದ ಅಮೆರಿಯವರು ಭಾರತದ ರಾಜಕೀಯ ಪರಿಸ್ಥಿತಿಯ ಕುರಿತು ಸುದೀರ್ಘ ಭಾಷಣವೊಂದನ್ನು ಮಾಡಿದರು. ಅವರ ಭಾಷಣಕ್ಕೆ ಉತ್ತರಕೊಡುತ್ತಾ ಮಹಾತ್ಮಾ ಗಾಂಧಿಯವರು, ತಮ್ಮ ಹೇಳಿಕೆಯ ಕೊನೆಯಲ್ಲಿ, ೪೦ ಮಿಲಿಯ ಜನರ ಮೇಲೆ ಅಧಿಕಾರ ನಡೆಸುವ ಹೊಣೆಗಾರಿಕೆ ಹೊತ್ತ ಮಹಾಶಯರು ಈ ತರದ ಮಾತುಗಳನ್ನು ಆಡದಿದ್ದರೆ ಉಚಿತವಾಗುತಿತ್ತು ಎಂದು ತಮ್ಮ ಅಭಿಪ್ರಾಯವನ್ನು ಸಾರಿದ್ದಾರೆ. ಅಮೆರಿಯವರ ಮಾತುಗಳು ದೇಶದ ಎಲ್ಲಾ ರಾಜಕೀಯ ಮುಖಂಡರಿಗೂ ಅತೃಪ್ತಿಯನ್ನೇ ಹುಟ್ಟಿಸಿದೆ. ಸಪ್ರು ಸಮಿತಿಯವರೂ ಕೂಡಾ, ಆ ವಿಷಯದಲ್ಲಿ ಒಂದು ದೀರ್ಘವಾದ ಪ್ರಕಟಣೆ ಹೊರಡಿಸಿ, ಅಮೆರಿಯವರ ಕುತರ್ಕಗಳನ್ನು ಖಂಡಿಸಿ, ಒಟ್ಟಿನಿಂದ, ಬ್ರಿಟಿಷ್ ಸರಕಾರಕ್ಕೆ ಅಧಿಕಾರ ತ್ಯಾಗಮಾಡಲು ಮನಸ್ಸಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಬ್ರಿಟಿಷ್ ಸರಕಾರದ ಈ ತರದ ಧೋರಣೆಯಿಂದ ಭಾರತದ ರಾಜಕೀಯ ವಾತಾವರಣದಲ್ಲಿ ಬಹುಮಟ್ಟಿಗೆ ಅಶಾಂತಿ, ಕಳವಳ ಉದ್ವೇಗಗಳೇ ಹೆಚ್ಚಿರುವವೆನ್ನಲು ಅಡ್ಡಿಯಿಲ್ಲ.

ಅಮೆರಿಯವರು, ಭಾರತದಲ್ಲಿ ಇಂದು ಇರುವ ಬಿಕ್ಕಟ್ಟಿನ ಬಗೆಗೆ ಯಾವುದೇ ರೀತಿಯ ಒಂದು ನ್ಯಾಯಸಮ್ಮತವಾದ ಸೂಚನೆಯನ್ನು ಅದರಲ್ಲಿ ಕೊಟ್ಟದ್ದು ಕಂಡುಬರುವುದಿಲ್ಲ. ಅಮೆರಿಯವರು ಮಾಡಿದ ವಾದಸರಣಿಯನ್ನು ಪರ್ಯಾಲೋಚಿಸಿದರೆ ಅದು ಬಹಳ ವಿಚಿತ್ರವಾಗಿದ್ದು, ಇದ್ದ ನ್ಯಾಯಗಳನ್ನು ಮುಚ್ಚಿಟ್ಟು ಪರದೇಶಿಯರ ಕಣ್ಣಲ್ಲಿ ಮಣ್ಣೆರಚುವ ಹವ್ಯಾಸ ಮಾಡಿದಂತೆ ತೋರುತ್ತದೆ. ಪ್ರಾಂತಗಳಲ್ಲಿ ಕಾಂಗ್ರೆಸು ಮಂತ್ರಿಗಳು ರಾಜಿನಾಮೆಯಿತ್ತ ಮೂಲಕಾರಣವನ್ನು ಮರೆಸಿ, ಅದಕ್ಕೆ ಅನರ್ಥದ ಅರ್ಥವನ್ನು ಕಲ್ಪಿಸಿ ಟೀಕೆ ಮಾಡಿದ್ದಾರೆ. ಪಾರ್ಲಿಮೆಂಟರಿ ಸರಕಾರವನ್ನು ಕಿತ್ತೊಗೆಯುವುದು ಕಾಂಗ್ರೆಸಿನ ಉದ್ದೇಶವಾಗಿದೆಯೆಂದು ಹೇಳಿದ ಅಮೆರಿಯವರ ಮಾತಿನಲ್ಲಿ ಒಂದಿಷ್ಟಾದರೂ ಸ್ವಾರಸ್ಯವುಂಟೆಂದು ಯಾವನೇ ಆದರೂ ಭಾರತೀಯನು, ಮಾತ್ರವಲ್ಲ ಭಾರತದ ಯಥಾರ್ಥತೆಯನ್ನು ಬಲ್ಲ ಪರಕೀಯನೇ ಆದರೂ ಸಮ್ಮತಿಸಲಾರನು. ಬ್ರಿಟಿಷರು ಇಂದು ಯುದ್ಧೋದ್ದೇಶವಾಗಿ ಸಾರುತ್ತಿರುವ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳು ಎಷ್ಟರ ಮಟ್ಟಿಗೆ ಭಾರತದಲ್ಲಿ ಅಪಹಾಸ್ಯದ ಮಾತಾಗಿವೆಯೆಂಬುದನ್ನು ಜಗತ್ತಿನೆದುರು ತೋರಿಸಿ, ತನ್ನ ನ್ಯಾಯಕ್ಕಾಗಿ ಅಧಿಕಾರ ತ್ಯಾಗಮಾಡಿ ನಿಂತ ಕಾಂಗ್ರೆಸಿನ ಉತ್ತಮ ಆದರ್ಶವನ್ನು ಸರ್ವಾಧಿಕಾರದ ನೆಲೆಯಲ್ಲಿ ನೋಡಿದ ಅಮೆರಿಯವರ ತರ್ಕವು ಬಹಳ ಕರ್ಕಶವಾಗಿದೆಯೆಂದರೆ ಇದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಕಾಂಗ್ರೆಸಿಗೆ ಸಾರ್ವಜನಿಕರ ಬೆಂಬಲವಿಲ್ಲವೆಂದು ಭಾರತ ಸಚಿವರು ದೂರುತ್ತಾರೆ. ಕಾಂಗ್ರೆಸಿನ ಬೆಂಬಲವು ಸರಿಯಾಗಿ ಅಮೆರಿಯವರಿಗೆ ತಿಳಿಯಬೇಕಾಗಿದ್ದರೆ, ರಾಜಿನಾಮೆಯಿತ್ತ ಪ್ರಾಂತಗಳಲ್ಲಿ, ಗವರ್ನರರ ಸ್ವೇಚ್ಛಾಧಿಕಾರವನ್ನು ಬೆಳೆಸುವ ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುವ ಬದಲು ಒಂದು ಹೊಸ ಚುನಾವಣೆಯನ್ನು ಹೂಡಿ ನೋಡಬಹುದಾಗಿತ್ತು. ಕಾಂಗ್ರೆಸು ರಾಜಿನಾಮೆ ಕೊಟ್ಟದ್ದು ಜನರಿಗೆ ಅರ್ಥವಾಗಿದೆಯೋ, ಅದು ಜನತೆಗೆ ಹಿತವಾಗಿದೆಯೋ, ಅದು ಹಿತವಾಗದಿದ್ದರೆ ಇನ್ನಾದರೂ ಕಾಂಗ್ರೆಸಿಗೆ ಜನತೆ ಬೆಂಬಲಕೊಡಬಹುದೋ ಎಂಬೀ ಅಂಶಗಳು ಅಂತಹ ಚುನಾವಣೆಯಿಂದ ಮಾತ್ರ ಸಿದ್ಧವಾಗಬಹುದಾಗಿತ್ತು. ಅದನ್ನು ಜಗಗೊಡದೆ ತಮಗಿಚ್ಛೆ ಬಂದಂತೆ ಮಾಡಲು ಮನಮಾಡಿಕೊಂಡು ಗವರ್ನರರ ಆಡಳಿತಕ್ಕೆ ಇನ್ನೂ ಜೀವದಾನಕೊಟ್ಟುಕೊಂಡು ಕಾಂಗ್ರೆಸು ಜನತಾಬೆಂಬಲವಿಲ್ಲದ ಸಂಸ್ಥೆಯೆಂದು ತೆಗಳುವ ಅಮೆರಿಯವರ ನ್ಯಾಯವು ಯಾರಿಗಾದರೂ ಅಬದ್ಧವೆನಿಸದಿರಲಾರದು. ಅಖಿಲ ಭಾರತವನ್ನು ಒಬ್ಬ ವೈಸರಾಯರ ಮತ್ತು ಅವರ ಅಂಕೆಯಲ್ಲಿ ಪ್ರಾಂತಪ್ರಾಂತಗಳಲ್ಲಿ ಗವರ್ನರರ ಹಾಗೂ ವಿದೇಶೀ ಜನರ ಸ್ವೇಚ್ಛಾಪ್ರಭುತ್ವಕ್ಕೆ ಎಡೆ ಮಾಡಿಕೊಟ್ಟು ಆಳುವ ಬ್ರಿಟಿಷ್ ಸರಕಾರವು ಕಾಂಗ್ರೆಸನ್ನು ಪ್ರಜಾಪ್ರಭುತ್ವಕ್ಕೆ ಒಪ್ಪದ ಸಂಸ್ಥೆಯೆಂದು ಸಾರುವುದು, ತನ್ನ ಮೇಲಿನ ಆರೋಪದ ಸಂಗತಿಗಳನ್ನು ಹೆರವರ ಮೇಲೆ ಹೊರಿಸುವ ಕುತರ್ಕಗಳ ಸ್ಥಿತಿಯಂತಲ್ಲದೆ ಬೇರೇನೂ ಈ ವಿಷಯದಲ್ಲಿ ಹೇಳಬರುವುದಿಲ್ಲ.

ಪಂಜಾಬು, ಬಂಗಾಳ, ಸಿಂಧ, ಅಸ್ಸಾಮು ಈ ಪ್ರಾಂತಗಳಲ್ಲಿ ಪ್ರಾಂತಿಕ ಸ್ವಾಯತ್ತತೆಯು ಯಶಸ್ವಿಯಾಗಿ ನಡೆದಿದೆಯೆಂದೂ ಆ ಪ್ರಾಂತಗಳು ಸ್ವಾತಂತ್ರ್ಯದ ಹಾದಿಯಲ್ಲಿ ಮುಂದುವರಿಯುತ್ತಿವೆಯೆಂದೂ ಭಾರತ ಸಚಿವರು ಸಮಾಧಾನಗೊಂಡಿದ್ದಾರೆ. ದೇಶದ ಗೌರವವನ್ನು ಮನ್ನಿಸತಕ್ಕ ಸಂದರ್ಭ ಬಂದಾಗ ಮಾತ್ರ ಕಾಂಗ್ರೆಸು ಮಂತ್ರಿಗಳೂ ರಾಜಿನಾಮೆಯಿತ್ತರಲ್ಲದೆ, ಹಿಂದೆ ಕಾಂಗ್ರೆಸು ಪ್ರಾಂತಗಳೂ ಯಶಸ್ವಿಯಾಗಿಯೇ ಪ್ರಾಂತಿಕ ಸ್ವಾಯತ್ತತೆಯನ್ನು ನಡೆಸಿವೆಯೆಂಬುದು ಅಮೆರಿಯವರಿಗಾದರೂ ತಿಳಿದ ವಿಚಾರವೇ ಆಗಿದೆ. ಗವರ್ನರರ ಅಂಕೆಯೊಳಗಿದ್ದುಕೊಂಡೂ ಕೆಲಸಮಾಡಿ, ಸಿಕ್ಕಿದಷ್ಟಾದರೂ ಪ್ರಯೋಜನವನ್ನು ಜನತೆಗೆ ಒದಗಿಸಿ ಕೊಡಲು ಕಾಂಗ್ರೆಸು ಸಂಸ್ಥೆಯೂ ಬಹಳ ಆದರ ಭಾವದಿಂದಲೇ ಮಂತ್ರಿಮಂಡಳವನ್ನು ವಹಿಸಿ ಕೆಲಸ ನಡೆಸಿದರೂ, ಕೊನೆಗೆ, ದೇಶದ ಗೌರವಕ್ಕೆ ಕೊರತೆ ಬರುವಂತಹ ಸಂದರ್ಭವೊದಗಲು ದೇಶದ, ಜನತೆಯ ಪ್ರತಿನಿಧಿಗಳನ್ನು ಲೆಕ್ಕಿಸದೆ ಭಾರತವನ್ನು ಯುದ್ಧಕ್ಕೆಳೆಯಲು ಅವುಗಳು ರಾಜಿನಾಮೆಕೊಟ್ಟಿರುತ್ತಾರೆ. ರಾಜಿನಾಮೆಕೊಟ್ಟ ಉದ್ದೇಶವನ್ನು ಅಲಕ್ಷಿಸಿಕೊಂಡು ಕಾಂಗ್ರೆಸಿನ ಅಧಿಕಾರ ಪರತ್ಯಾಗ ಬುದ್ಧಿಯನ್ನು ಮಾತ್ರ ಅವಹೇಳನ ಮಾಡುವುದು ಪಾರ್ಲಿಮೆಂಟರಿ ಸರಕಾರದ ಆರಾಧಕರೇ ಆದ ಅಮೆರಿಯವರಿಗೂ ಭೂಷಣಾಸ್ಪದವೆನಿಸುವಂತಹುದಲ್ಲ.

ಕಾಂಗ್ರೆಸು, ಯುದ್ಧೋದ್ದೇಶವನ್ನು ಕೇಳಿದ ವಿಷಯದಲ್ಲಿ ಅಮೆರಿಯವರು ಅತೃಪ್ತಿಪಟ್ಟುದು ಸಮಂಜಸವೇ ಎನ್ನಬಹುದು. ಏಕೆಂದರೆ ಒಂದೆಡೆ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳ ಘೋಷಣೆ ಮಾಡಿ ಯುದ್ಧ ಹೂಡಿದ ಬ್ರಿಟನು ಇನ್ನೊಂದೆಡೆ ಅದರ ಸ್ಪಷ್ಟೀಕರಣವನ್ನು ಕೇಳಿದಾಗ ಹಿಂದೆಮುಂದೆ ನೋಡುವುದರಿಂದ ಕಾಂಗ್ರೆಸು ಕೇಳಿದ ಯುದ್ಧೋದ್ದೇಶ ಸ್ಪಷ್ಟೀಕರಣವು ಅಮೆರಿಯವರಿಗಾದರೂ ಸುಲಭಸಾಧ್ಯವೆನಲಾಗುವುದಿಲ್ಲ. 'ಮ[illegible] ಕೃತಿಯೆಸಗಿ' ಎನ್ನುವುದು ಯಾರಿಗೂ ಭೂಷಣವೂ ಅಲ್ಲ. ಹಾಗಿರುವಾಗ, ಕಾಂಗ್ರೆಸು ಯುದ್ಧೋದ್ದೇಶವನ್ನು ಕೇಳಿದ್ದು ಬ್ರಿಟಿಷ್ ರಾಜನೀತಿಜ್ಞರ ವಿಷಯದಲ್ಲಿ ಅತೃಪ್ತಿಕರವಾಗಿರಬಹುದಾದರೂ, ಕಾಂಗ್ರೆಸಿಗೆ ಅದನ್ನು ಕೇಳದೆ ಬೇರೆ ನಿರ್ವಾಹವೇ ಇರಲಿಲ್ಲ. ಆದರೆ ಅಮೆರಿಯವರು ನಿಜಸ್ಥಿತಿಯನ್ನು ಈ ವಿಷಯದಲ್ಲಿ ಮುಚ್ಚಿಡ ಹೋಗುವುದು ನ್ಯಾಯವಲ್ಲ. ಕಾಂಗ್ರೆಸು, ಸಾಧ್ಯವಾದಷ್ಟು ಬಗ್ಗಿಕೊಂಡು ಬ್ರಿಟಿಷ್ ಸರಕಾರದ ಧೋರಣಕ್ಕೆ ಹೊಂದಿಕೊಂಡು ಹೋಗುವಂತಾಗಬೇಕೆಂದೇ ಪುಣೆಯ ನಿರ್ಣಯವನ್ನು ಮಾಡಿತ್ತು. ಆದರೂ ಕಾಂಗ್ರೆಸಿಗೆ ಯಾವುದೇ ತರದ ಆಶ್ವಾಸನವು ಸಿಗಲಿಲ್ಲ. ಮತ್ತೆ ಮುಂಬಯಿಯಲ್ಲಿ ಪುಣೆಯ ನಿರ್ಣಯವು ರದ್ದಾಗುವಾಗಲಾದರೂ, ಗಾಂಧಿಜಿಯು, ಬ್ರಿಟನು ಈಗ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವುದು ಸಾಧ್ಯವಿಲ್ಲದ್ದರಿಂದ, ಆಂದೋಲನವನ್ನು ಕೇವಲ ವಾಕ್ಸ್ವಾತಂತ್ರ್ಯದ ಮಟ್ಟಿಗೆ ನಿಯಂತ್ರಿತ ಮಾಡಿದರು. ಬ್ರಿಟಿಷ್ ಸರಕಾರಕ್ಕೆ ಯಾವುದೇ ತರದ ತೊಂದರೆ ಕೊಡಬಾರದೆಂದು ನಡೆಸಿದರು. ಹೀಗಿರುವಾಗ ಕಾಂಗ್ರೆಸು, 'ಎಲ್ಲವನ್ನೂ ಈಗ ಕೊಡಬೇಕು; ಇಲ್ಲವಾದರೆ ಏನೂ ಬೇಡ' ಎನ್ನುವ ಧೋರಣೆ ವಹಿಸಿತೆಂದು ಅಮೆರಿಯವರು ದೂರುವುದು ಅಸಮಂಜಸವಾಗುತ್ತದೆ.

ಭಾರತೀಯರು ಮೊದಲು ತಮ್ಮಲ್ಲಿಯೇ ಒಂದು ಒಪ್ಪಂದ ಮಾಡಿಕೊಳ್ಳಲಿ ಎಂದೂ ಅನಂತರ ತಾವು ಅವರ ಒಪ್ಪಂದಕ್ಕೆ ಸಮ್ಮತಿ ಕೊಡುವೆವೆಂದೂ ಹೇಳಿದ್ದಕ್ಕೆ ಗಾಂಧಿಜಿಯವರು, ಅಮೆರಿಯವರ ಮಾತು ಭಾರತೀಯರ ಬುದ್ಧಿವಂತಿಕೆಗೆ ಅಪಮಾನಮಾಡಿದಂತಾಗುತ್ತದೆಂದು ಟೀಕಿಸಿದ್ದಾರೆ. 'ಭಾರತದ ಪಕ್ಷ ಪಕ್ಷಗಳಲ್ಲಿ ಒಡಕು ಹುಟ್ಟುವುದಕ್ಕೆ ಬ್ರಿಟಿಷ್ ರಾಜಕಾರಣಿಗಳೇ ಕಾರಣರು; ಭಾರತವು ಬ್ರಿಟಿಷರ ದಾಸ್ಯದಲ್ಲಿರುವ ವರೆಗೆ ಈ ಒಡಕುಗಳು ಇರುವವು—ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಲಿ, ಕಾಂಗ್ರೆಸು ಮುಸ್ಲಿಂ ಲೀಗುಗಳೇ ಮೊದಲಾದ ಎಲ್ಲಾ ಪಕ್ಷಗಳೂ ತಮ್ಮೊಳಗೆ ಒಂದು ಯೋಜನೆಯನ್ನು ಮಾಡಿಕೊಳ್ಳುವವು' ಎಂದು ಗಾಂಧಿಜಿ ಇದಕ್ಕೆ ಸಮಂಜಸವಾಗಿಯೇ ಉತ್ತರವಿತ್ತಿದ್ದಾರೆ.

THE
Canara Banking Corporation Limited
(Incorporated in British India)
ESTD: 1906.
HEAD OFFICE: **UDIPI,** *South Kanara.*
SEASON DEPOSITS
ARE now accepted at all our Offices at the following rates of interest:
2 & 3 months ... ... 3% p. a.
4 & 5 ... ... 3½% p. a.
These deposits will not be allowed to run beyond September 1941.

ಬ್ರಿಟಿಷರು ಬಿಟ್ಟುಹೋದರೆ ಭಾರತದ ಬಿಕ್ಕಟ್ಟು ಬಗೆಹರಿಯುವುದು.

ವಿಭಜಿಸಿ ಆಳುವುದೇ ಬ್ರಿಟಿಷರ ರಾಜನೀತಿ

ಬ್ರಿಟಿಷರ ಆಳುವಿಕೆಯಿಂದ ಶಾಂತಿಸ್ಥಾಪನೆ ಆಗಿರುವುದೆ?

ಅಮೆರಿಯವರಿಗೆ ಮಹಾತ್ಮರ ಉತ್ತರ.

ಭಾರತ ಮಂತ್ರಿ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಮಾಡಿದ ಭಾಷಣವನ್ನು ಟೀಕಿಸಿ ಗಾಂಧೀಜಿ ಒಂದು ಪ್ರಕಟಣೆ ಕೊಟ್ಟಿದ್ದಾರೆ. ಅದರಲ್ಲಿ ಅವರು ಬ್ರಿಟಿಷರ ಆಳುವಿಕೆಯಲ್ಲಿ, ಭಾರತದಲ್ಲಿ ಶಾಂತಿಸ್ಥಾಪನೆಯಾಗಲಿಲ್ಲವೆಂದು ಹೇಳಿದ್ದಾರೆ. ಇಂದಿನ ಬಿಕ್ಕಟ್ಟಿಗೆ ಬ್ರಿಟಿಷ್ ರಾಜಕಾರಣಿಗಳೇ ಕಾರಣರೆಂದಿದ್ದಾರೆ. ಭಾರತೀಯರು ಮೊದಲು ತಮ್ಮಲ್ಲಿ ಒಪ್ಪಂದ ಮಾಡಿಕೊಂಡರೆ ತಾವು ಮತ್ತೆ ಮುಂದಿನ ಕಾರ್ಯಗಳನ್ನು ಮಾಡುವೆವೆಂದು ಹೇಳಿದ ಅಮೆರಿಯವರ ಮಾತನ್ನು ಟೀಕಿಸಿ, ಒಡಕು ಹುಟ್ಟಿಸಿ ರಾಜ್ಯವಾಳುವುದೇ ಬ್ರಿಟಿಷರ ರಾಜನೀತಿಯೆಂದು ಮಹಾತ್ಮರೆನ್ನುತ್ತಾ ಬ್ರಿಟಿಷರಿರುವವರೆಗೆ ಒಗ್ಗಟ್ಟು ಉಂಟಾಗುವುದು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಕೊನೆಗೆ ಬ್ರಿಟಿಷರು ಈ ದೇಶವನ್ನು ಬಿಟ್ಟುಹೋದರೆ ಭಾರತದ ರಾಜಕೀಯ ಪಂಗಡಗಳೆಲ್ಲವೂ ಒಂದಾಗಿ ಒಂದು ಯೋಜನೆಯನ್ನು ಕಂಡುಹಿಡಿಯುವವೆಂದು ಅಂದಿದ್ದಾರೆ.

ಮಹಾತ್ಮರ ಪ್ರಕಟಣೆಯ ವಿವರವು ಹೀಗಿರುತ್ತದೆ:

ಭಾರತದ ವಿಚಾರ ಕಾಮನ್ಸ್ ಸಭೆಯಲ್ಲಿ ನಡೆದ ದೀರ್ಘ ಚರ್ಚೆಯನ್ನು ಓದಿ ನನಗೆ ತುಂಬಾ ಸಂಕಟವಾಯಿತು. ವಿಪತ್ತು ಬಂದಾಗ ಜನರ ಹೃದಯವು ಕರಗುವುದೆಂದೂ ಆಗ ಅವರ ನಿಜಸ್ಥಿತಿಯು ಅರಿಯುವುದೆಂದೂ ಅನೇಕರು ಹೇಳುವುದನ್ನು ನಾನು ಕೇಳಿದ್ದೇನೆ. ಆದರೆ, ಬ್ರಿಟನಿನ ಮೇಲೆ ಬಹಳ ಗಂಡಾಂತರ ಬಂದಿದ್ದರೂ, ಅಮೆರಿಯವರ ಹೃದಯವು ಸ್ವಲ್ಪವೂ ಬದಲಾಗಲಿಲ್ಲ.

ಬ್ರಿಟಿಷರ ಈ ಕಠಿಣ ಹೃದಯವನ್ನು ಕಂಡು ಅಹಿಂಸೆಯಲ್ಲಿರುವ ನನ್ನ ವಿಶ್ವಾಸವು ಮತ್ತಷ್ಟು ದೃಢವಾಗಿದೆ. ಎಷ್ಟೇ ಕಷ್ಟದ ಪ್ರಸಂಗ ಬಂದರೂ ಅಹಿಂಸೆಯಲ್ಲಿರುವ ವಿಶ್ವಾಸವನ್ನು ಕಾಂಗ್ರೆಸು ಬಿಡಬಾರದೆಂದು ನನಗೆ ಅನಿಸುತ್ತದೆ. ಭಾರತದ ನಿಜಸ್ಥಿತಿಯನ್ನು ಅಮೆರಿಯವರು ಸ್ವಲ್ಪವೂ ತಿಳಿದಿಲ್ಲ. ಈ ವಿಷಯ ಅವರು ತೀರಾ ಅಲಕ್ಷ್ಯವನ್ನು ತೋರಿಸಿದ್ದಾರೆ. ಇದ್ದರಿಂದ ಬ್ರಿಟನಿಗೆ ಹಿತವಾಗುವುದೆಂದು ನನಗನಿಸುವುದಿಲ್ಲ.

ಬ್ರಿಟಿಷರ ಆಳುವಿಕೆ

ಬ್ರಿಟಿಷರ ಆಳುವಿಕೆಯಲ್ಲಿ ಭಾರತಕ್ಕೆ ಶಾಂತಿ ಸಿಕ್ಕಿದೆಯೆಂದು ಅವರು ಹೆಮ್ಮೆಯಿಂದ ಹೇಳುತ್ತಾರೆ. ಆದರೆ ಡಾಕಾ ಮತ್ತು ಅಹಮ್ಮದಾಬಾದುಗಳಲ್ಲಿ ಏನಾಗುತ್ತಿದೆಯೆಂದು ಅವರಿಗೆ ಗೊತ್ತಿಲ್ಲವೆ? ಈ ಎರಡು ಸ್ಥಳಗಳಲ್ಲಿ ಶಾಂತತೆಯನ್ನು ಕಾಯುವ ಹೊಣೆಗಾರಿಕೆ ಯಾರದು? ಬಂಗಾಳದಲ್ಲಿ ಪ್ರಾಂತಿಕ ಸ್ವಾಯತ್ತತೆಯಿಂದ ಅಮೆರಿಯವರು ನನಗೆ ಉತ್ತರ ಕೊಡಬಹುದು. ಆದರೆ ಇದು ಸ್ವಾಯತ್ತತೆಯು ಕೇವಲ ಆಭಾಸ ಮಾತ್ರವೆಂದು ಅವರಿಗೂ ಗೊತ್ತಿದೆ.

ಮಂತ್ರಿಗಳು ಕಾಂಗ್ರೆಸಿನವರಿರಲಿ, ಲೀಗಿನವರಿರಲಿ, ಬೇರೆ ಯಾರೇ ಇರಲಿ ಇಂಥ ಬಿಕ್ಕಟ್ಟಿನ ಪ್ರಸಂಗಗಳನ್ನೆದುರಿಸಲು ಅವರಿಗೆ ವಿಶೇಷ ಅಧಿಕಾರಗಳಿಲ್ಲವೆಂಬ ಮಾತನ್ನು ಒಪ್ಪಿಕೊಳ್ಳಲೇ ಬೇಕು. ಕೆಲವು ಪುಂಡರನ್ನಾದರೂ ಎದುರಿಸಲಾರದಂತಹ ಅಸಹಾಯ ಸ್ಥಿತಿ ಭಾರತೀಯರಿಗೆ ಬಂದುದೇಕೆ? ಬ್ರಿಟಿಷರು ಈ ಬಗ್ಗೆ ತಮ್ಮ ನೂರಾರು ವರ್ಷಗಳ ಆಳುವಿಕೆಯಲ್ಲಿ ಏನು ಮಾಡಿರುವರು? ಅಮೆರಿಯವರು ಇದಕ್ಕೆ ಉತ್ತರ ಕೊಡುವರೆ? ಕೆಲವು ಪುಂಡರು ಕೊಲೆ ಸುಲಿಗೆಗಳಿಗೆ ಕೈಹಚ್ಚಿದ ಕೂಡಲೇ ಸಾವಿರಾರು ಜನ ಸ್ತ್ರೀಪುರುಷರು ಮನೆಮಠಗಳನ್ನು ಬಿಟ್ಟು ಗಾಬರಿಗೊಂಡು ಓಡಿಹೋಗುವುದು ಬ್ರಿಟಿಷರಿಗೇ ನಾಚಿಗೆಯನ್ನುಂಟುಮಾಡುವ ವಿಷಯವಲ್ಲವೆ? ನನ್ನ ಸರಕಾರವಲ್ಲಿ ಎಂದಿಗೂ ಹೀಗಾಗುತ್ತಿರಲಿಲ್ಲ, ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳಲು ನನ್ನ ಸರಕಾರವು ಪ್ರತಿಯೊಬ್ಬರಿಗೂ ಕಲಿಸುತ್ತಿತ್ತು. ಆದರೆ ವಿದೇಶೀ ಬ್ರಿಟಿಷ್ ಸರಕಾರವು ಭಾರತದ ಹಿತವನ್ನು ಸಂಪೂರ್ಣ ದುರ್ಲಕ್ಷಿಸಿದೆ.

ಭಾರತದ ಸೈನಿಕರ ಸಾಹಸವನ್ನು ಅಮೆರಿಯವರು ಬಾಯಿತುಂಬಾ ಹೊಗಳಿದ್ದಾರೆ. ಆದರೆ ಭಾರತದ ಪರಿಸ್ಥಿತಿಯನ್ನು ಗಮನಿಸಿದರೆ ಇವರ ಹೊಗಳಿಕೆ ಎಷ್ಟರ ಮಟ್ಟಿಗೆ ಪೊಳ್ಳಾಗಿರುವುದೆಂದು ತಾನಾಗಿಯೇ ತಿಳಿದುಬರುತ್ತದೆ.

ಕಾಂಗ್ರೆಸು ಅಹಿಂಸಾತತ್ವವನ್ನೆಂಬುದು ನಿಜ. ಆದರೆ, ಪ್ರಕೃತಕ್ಕೆ ಕಾಂಗ್ರೆಸಿನ ಅಹಿಂಸೆಯನ್ನು ಬದಿಗಿಟ್ಟು, ವಿಚಾರ ಮಾಡುವ. ಭಾರತವನ್ನು ಶಸ್ತ್ರಸಜ್ಜಿತವಾಗಿ ಮಾಡಿದ್ದರೆ, ಮತ್ತು ಭಾರತೀಯರೆಲ್ಲರಿಗೂ ಸ್ವಸಂರಕ್ಷಣೆಯ ಶಿಕ್ಷಣಕೊಟ್ಟಿದ್ದರೆ, ಅದರ ಮಾತೇ ಬೇರೆಯಾಗುತಿತ್ತು. ಯುರೋಪ ಖಂಡದ ಎಲ್ಲಾ ಅತ್ಯಾಚಾರೀ ರಾಷ್ಟ್ರಗಳು ಒಂದಾಗಿದ್ದರೂ ಇಂಗ್ಲೆಂಡನ್ನು ಮುಟ್ಟುವ ಧೈರ್ಯ ಅವಕ್ಕೆ ಆಗುತ್ತಿರಲಿಲ್ಲ.

ವಿಭಜಿಸಿ ಆಳುವ ನೀತಿ

ಭಾರತೀಯರು ಮೊದಲು ತಮ್ಮೊಳಗೆ ರಾಜಿಮಾಡಿಕೊಳ್ಳಬೇಕೆಂದೂ, ಆ ಬಳಿಕ ಒಟ್ಟಾದ ಭಾರತದ ಮೇಲೆ ತಾವು ತಮ್ಮ ಮುಷ್ಟಿಯನ್ನು ಒತ್ತುವುದಾಗಿಯೂ ಅಮೆರಿಯವರು ಹೇಳುತ್ತಾರೆ. ಇದರಿಂದ ಇಡೀ ಭಾರತೀಯರ ಬುದ್ಧಿಗೆ ಅಪಮಾನ ಮಾಡಿದಂತಾಗುತದೆ.

ರಾಜಕೀಯ ಪಕ್ಷಗಳು ಒಂದಾಗುವುದನ್ನು ತಪ್ಪಿಸುವುದೇ ಬ್ರಿಟನಿನ ಮುಖ್ಯ ಧೋರಣವಾಗಿದೆಯೆಂದು ನಾನು ಈ ಮೊದಲು ಎಷ್ಟೋ ಸಾರಿ ಹೇಳಿದ್ದೇನೆ. ಭೇದ ಹುಟ್ಟಿಸಿ ರಾಜ್ಯವಾಳುವುದೇ ಬ್ರಿಟಿಷರ ಹೆಮ್ಮೆಯ ಮತ್ತು ನಿಚಾರಕಟ್ಟ ರಾಜನೀತಿಯಾಗಿದೆ. ಭಾರತೀಯರಲ್ಲಿ ಪಕ್ಷಪಕ್ಷಗಳ ಒಡಕು ಹುಟ್ಟುವುದಕ್ಕೆ ಬ್ರಿಟಿಷ್ ರಾಜನೀತಿಜ್ಞ ಕಾರಣರು. ಭಾರತವು ಬ್ರಿಟಿಷರ ವಶ್ಯದಲ್ಲಿ ಇರುವವರೆಗೆ ಈ ಒಡಕುಗಳು ಉಳಿದೇ ಉಳಿಯುವವು.

ಕಾಂಗ್ರೆಸು ಮತ್ತು ಮುಸ್ಲಿಂ ಲೀಗುಗಳಲ್ಲಿ ಮತಭೇದವಾಗಿರುವುದು ನಿಜ. ಇದನ್ನು ನಾನು ಅತ್ಯಂತ ವಿಷಾದದಿಂದ ಒಪ್ಪಿಕೊಳ್ಳುತ್ತೇನೆ. ಆದರೆ ಇದು ಭಾರತೀಯರ ಗೃಹಕಲಹವೆಂದು ಬ್ರಿಟಿಷರು ಏಕೆ ತಿಳಿಯಬಾರದು?

ಬ್ರಿಟಿಷರು ಬಿಟ್ಟುಹೋಗಲಿ

ಬ್ರಿಟಿಷರು ಭಾರತವನ್ನು ಬಿಟ್ಟುಹೋಗಲಿ. ಆಗ ಕಾಂಗ್ರೆಸು, ಮುಸ್ಲಿಂ ಲೀಗು ಈ ಎಲ್ಲಾ ಪಕ್ಷಗಳೂ ಒಂದಾಗಿ, ಭಾರತದ ಆಡಳಿತದ ಸಲುವಾಗಿ ತಾವೇ ಒಂದು ಯೋಜನೆಯನ್ನು ಅಳವಡಿಸುವರು. ಈ ಯೋಜನೆಯು ಪೂರ್ಣ ಶಾಸ್ತ್ರೀಯವಾಗಿರಲಿಕ್ಕಿಲ್ಲ. ಪಾಶ್ಚಾತ್ಯರ ರಾಜ್ಯಘಟನೆಗಳಂತೆ ಅದು ಇರಲಿಕ್ಕಿಲ್ಲ. ಆದರೆ ಅದು ಕಡೆತನಕ ಬಾಳುವುದು. ಅಂಥ ಪರಿಸ್ಥಿತಿಗೆ ಬರಲು ನಾವು ನಮ್ಮ ನಮ್ಮಲ್ಲಿಯೇ ಜಗಳವಾಡಬೇಕಾಗಬಹುದು. ಆದರೆ ವಿದೇಶೀಯರ ಸಹಾಯ ಕೇಳಬಾರದೆಂದು ನಾವು ನಿಶ್ಚಯಿಸಿದಲ್ಲಿ, ಯುರೋಪಿನಲ್ಲಿ ಇಂದು ಬಂದಿರುವಂತಹ ಪರಿಸ್ಥಿತಿಯು ನಮಗೆ ಖಂಡಿತ ಬರುವುದಿಲ್ಲ. ದುರ್ದೈವದಿಂದ, ಬ್ರಿಟಿಷರು ನಮ್ಮನ್ನು ನಿರಾಯುಧರನ್ನಾಗಿ ಮಾಡಿದ್ದಾರೆ.

ಕಾಂಗ್ರೆಸಿನ ಧೋರಣೆ

ಎಲ್ಲವನ್ನೂ ಕೊಡಿರಿ, ಇಲ್ಲದಿದ್ದರೆ ಏನೂ ಬೇಡವೆಂದು ಕಾಂಗ್ರೆಸು ಕೇಳುತ್ತಿದೆಯೆಂದು ಅಮೆರಿಯವರು ಸುಳ್ಳು ಹೇಳಿ, ಅಜ್ಞಜನರ ಕಣ್ಣಲ್ಲಿ ಮಣ್ಣೆರಚುತ್ತಿದ್ದಾರೆ. ಆದರೆ ನಿಜಸ್ಥಿತಿಯನ್ನು ಮುಚ್ಚಿಡುವುದು ಎಂದೂ ಸಾಧ್ಯವಿಲ್ಲ. ಬ್ರಿಟಿಷರ ಅನುಕೂಲಕ್ಕೆ ಹೊಂದಿಕೊಳ್ಳುವುದಕ್ಕಾಗಿ ಕಾಂಗ್ರೆಸು ಪೂನಾ ನಿರ್ಣಯವನ್ನು ಮಾಡಿತು. 'ಅದರೆ ಬೊಂಬಾಯಿಯಲ್ಲಿ ಈ ನಿರ್ಣಯವನ್ನು ರದ್ದು ಮಾಡುವಾಗಲೂ, ನಾನು, ಬ್ರಿಟಿಷರು ಈಗ ಪೂರ್ಣಸ್ವಾತಂತ್ರ್ಯವನ್ನು ಕೊಡುವುದು ಸಾಧ್ಯವಿಲ್ಲದ್ದರಿಂದ ವಾಕ್‌ಸ್ವಾತಂತ್ರ್ಯವನ್ನಾದರೂ ಕೊಟ್ಟರೆ ಸಾಕೆಂದು ಹೇಳಿದ್ದೆ. ಹೀಗಿರುವಾಗ 'ಎಲ್ಲವನ್ನೂ ಕೊಡಿರಿ, ಇಲ್ಲದಿದ್ದರೆ ಏನೂ ಬೇಡ' ಎಂದು ಹೇಳಿದಂತಾಯಿತೆ? ಬ್ರಿಟಿಷರಿಗೆ ಕಷ್ಟಬಂದಿರುವಾಗ ತೊಂದರೆ ಕೊಡಬಾರದೆಂದು ಕಾಂಗ್ರೆಸು ತನ್ನ ಬೇಡಿಕೆಯನ್ನು ಎಷ್ಟೇ ಕೆಳಗಿಳಿಸಿದರೂ ಅಮೆರಿಯವರು ಅದನ್ನು ಮಾನ್ಯ ಮಾಡಲಿಲ್ಲ. ಅಮೆರಿಯವರ ಮನೋವೃತ್ತಿಯನ್ನು ನೋಡಿದರೆ, ಅವರಂಥ ಜನರು ಕಾಂಗ್ರೆಸಿನ ಈ ಉದಾರತೆಯನ್ನು ಮಾನ್ಯಮಾಡುವುದು ಶಕ್ಯವಿಲ್ಲವೆಂದು ತೋರದೆ ಬಿಡದು. ಇಷ್ಟೇ ಅಲ್ಲ, ಸತ್ಯಾಗ್ರಹ ಚಳವಳವು ಕುಗ್ಗುತ್ತಿದೆಯೆಂದು ಅವರು ಅಂದಿರುತ್ತಾರೆ.

ಭಾರತವು ದರಿದ್ರವಾಗುತ್ತಿದೆ

ಭಾರತೀಯರ ಉನ್ನತಿಯಾಗುತ್ತಿದೆಯೆಂದು ಅವರು ಹೇಳಿದ್ದನ್ನು ಕೇಳಿ ನನ್ನ ಎದೆ ಹಾರಿತು. ಅಮೆರಿಯವರ ಈ ವರ್ಣನೆಯು ಕೇವಲ ಕಾಲ್ಪನಿಕವಿರುತ್ತದೆ. ಭಾರತೀಯರು ದಿನದಿಂದ ದಿನಕ್ಕೆ ಕೇವಲ ದರಿದ್ರರಾಗುತ್ತಾ ಬರುತ್ತಾರೆ. ದಿನಾ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸಾಕಷ್ಟು ಬಟ್ಟೆಬರೆಗಳಿಲ್ಲ; ಹೊಟ್ಟೆಗೆ ಆಹಾರ ಸಿಗುವುದಿಲ್ಲ. ಒಬ್ಬ ಮನುಷ್ಯನು ಕೋಟ್ಯಂತರ ಜನರ ಆವಾಜು ಪತ್ರಿಕೆಯನ್ನು ತಿರಸ್ಕರಿಸಬೇಕಾಗಿದೆ. ಬ್ರಿಟಿಷರ ಆಳುವಿಕೆಯಲ್ಲಿ ಭಾರತವು ಅಧೋಗತಿಗಿಳಿದಿದೆಯೆಂದು ಇದರಿಂದ ಕಂಡುಬರುತ್ತದೆ. ಭಾರತದ ಚೈತನ್ಯ ಸಂಕಲ್ಪವನ್ನು ಬಲ್ಲ ಪ್ರತಿಯೊಬ್ಬನೂ ಈ ನಿರಂಕುಶ ಅಧಿಕಾರವನ್ನು ವಿರೋಧಿಸುವುದು ಆತನ ಕರ್ತವ್ಯ. ಆದರೆ ಭಾರತದ ಈ ವಿರೋಧವು ಶಾಂತಿಮಯವಾಗಿದೆ. ಶಾಂತಿಯಿಂದಲೇ ಭಾರತದ ಗುರಿಯು ಸಾಧಿಸುವುದೆಂದು ನಾನು ಆಶಿಸುತ್ತೇನೆ.

ಅಮೆರಿಯವರ ಈ ದುರ್ಭಾಷಣದ ಬಗ್ಗೆ ಹೆಚ್ಚು ವಿಚಾರ ಮಾಡುವುದು ಅವಶ್ಯವಿಲ್ಲ. ಇದುವರೆಗೆ ನಾವು ಹೇಳಿರುವುದು ಸಹ ಅವಶ್ಯವಿರಲಿಲ್ಲ. ಆದರೆ ಅವರ ಭಾಷಣದಿಂದ ತಪ್ಪು ತಿಳುವಳಿಕೆಯುಂಟಾಗುವುದು ಸಂಭವವಿದ್ದುದರಿಂದ ಇಷ್ಟನ್ನು ಹೇಳಬೇಕಾಯಿತು. ಅಮೆರಿಯವರ ಭಾಷಣದಲ್ಲಿ ಹಲವು ಅಬದ್ಧ ಸಂಗತಿಗಳಿದ್ದುದರಿಂದ ಅದನ್ನು ತಿದ್ದುವುದಕ್ಕಾಗಿ ನಾನು ಈ ಹೇಳಿಕೆಯನ್ನು ಹೊರಡಿಸಬೇಕಾಯಿತು. ಸಾಧಾರಣ ೪೦ ಕೋಟಿ ಭಾರತೀಯರ ಮೇಲೆ ಅಧಿಕಾರ ನಡೆಸುವ ಮಹನೀಯರು ಈ ಭಾಷಣ ಮಾಡದೆ ಇದ್ದರೆ ಉಚಿತವಾಗುತಿತ್ತು!

ರಾಜವೈದ್ಯ ಬಾಬಾ ಗುಣೆ ಇವರ

"ಸುರಂಗಾ" ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ— ಕೂದಲು ಬೀಳುವಿಕೆ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು. ಅಲ್ಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ನಿವಾರಿಸುತ್ತದೆ.

೪ ಔನ್ಸಿನ ಬಾಟ್ಲಿಗೆ ರೂ. ೧—೦—೦.

Agents:
Anglo Oriental Pharmacy, Hampankatta.
Stocks also at:
R. V. Kamath & Co., Car-street Mangalore.

A3 I

ಬಾಲ್ಕನಿನ ಬಳಿಕ

ಹಿಟ್ಲರನ ದಂಡಯಾತ್ರೆ ಯಾವ ಕಡೆಗೆ?

ಟರ್ಕಿ-ಈಜಿಪ್ಟುಗಳ ವಿಷಮ ಕಾಲ

ಕಳೆದ ಎರಡು ಮೂರು ವಾರಗಳ ಅಲ್ಪಾವಧಿಯೊಳಗಾಗಿ ಹಿಟ್ಲರನು ಪ್ರಪಂಚದಲ್ಲಿ ಹಿಂದೆಂದೂ ನಡೆಯದಿರದಂಥ ಮಹಾ ಅದ್ಭುತವೊಂದನ್ನು ತೋರಿಸಿ ಪ್ರಪಂಚವೇ ಮೂಗಮೇಲೆ ಬೆರಳಿಡುವಂತೆ ಮಾಡಿಬಿಟ್ಟಿದ್ದಾನೆ ಮೊದಲು ನಾಜಿಗಳೊಡನೆ ಒಡಂಬಡಿಕೆ ಮಾಡಿಕೊಂಡು ಮತ್ತೆ ಬ್ರಿಟಿಷರ ಮರೆಯಲ್ಲಿದ್ದ ಯುಗೊಸ್ಲೇವಿಯವನ್ನು ಹತ್ತೇ ಹತ್ತು ದಿನಗಳ ಒಳಗೆ ನಷ್ಟಭ್ರಷ್ಟಮಾಡಿಯೂ, ಮುಸಲೋನಿಯ ಮುಖಭಂಗ ಮಾಡಿದ ಗ್ರೀಕ್ ಮಹಾಸೇನೆಗಳು ಸೋಲನ್ನು ಒಪ್ಪಿಕೊಂಡು ಅಸ್ತ್ರಗಳನ್ನು ಕೆಳಗಿಡುವಂತೆ ಸಾಧಿಸಿಯೂ, ಮತ್ತೆ ಶತ್ರುಪಾಲಾಗಲಿಕ್ಕಿದ್ದ ಅಲ್ಬೇನಿಯವನ್ನು ಮುಸಲೋನಿಗೆ ಉಳಿಸಿಯೂ ಹಿಟ್ಲರನು ಬೇರೆ ಏನಿಲ್ಲವಾದರೂ ಒಬ್ಬ ಐತಿಹಾಸಿಕ ಪುರುಷನಾಗಿ ಅಮರ ಕೀರ್ತಿಯನ್ನು ಪಡೆದಿರುವನು ಈಗ ಹಿಟ್ಲರನ ಸೇನೆಗಳು ಅತ್ತ ಮೊರೊಕ್ಕೊದ ಮೂಲಕ ಈಜಿಪ್ಟಿನ ಮತ್ತು ಇತ್ತ ಯುಗಸ್ಲೇವಿಯ ಗ್ರೀಸ್‌ಗಳ ಮೂಲಕ ಟರ್ಕಿ ಇರಾಕುಗಳ ಹೆಬ್ಬಾಗಿಲಿಗೆ ಬಂದು ನಿಂತಿರುವವು. ಈಗ ತತ್ಕಾಲಕ್ಕೆ ಬ್ರಿಟಿಷರಿಗೆ ಯೂರೋಪಿನಲ್ಲಿ ಕಾಲೂರಲಿಕ್ಕೆ ಎಲ್ಲಿಯೂ ಸ್ಥಳವಿಲ್ಲದಂತಾಗಿರುವುದು. ಇದಕ್ಕೆಲ್ಲ ಹಿಟ್ಲರನ ಮಿಂಚಿನ ವೇಗದ ಧಾಳಿಯ ಕ್ರಮವೇ ಕಾರಣವೆನ್ನಬಹುದು

ಹಿಟ್ಲರನ ಸೇನೆ ಅಧಿಕ ಸಂಖ್ಯಾಕವಾಗಿದ. ಅದರ ಯುದ್ಧೋಪಕರಣಗಳು ಅತ್ಯುತ್ತಮವಾಗಿ ಧಾರಾಳವಾಗಿವೆ. ಮತ್ತು ಕಾರ್ಯಸಾಧನೆಗಾಗಿ ಹಿಟ್ಲರನು ಅನುಕೂಲ ನೋಡಿ ಎಂಥ ನೀಚ ಕಾರ್ಯನೀತಿಯನ್ನಾದರೂ ಅವಲಂಬಿಸುವನು. ಮುಂದಿನಿಂದ ಮಿತ್ರನಂತೆ ನಟಿಸಿ ಹಿಂದಿನಿಂದ ಕತ್ತಿ ಹಿರಿಯಲಿಕ್ಕೂ ಅವನು ಹೇಸುವುದಿಲ್ಲ. ಅವನ ಆಕ್ರಮಣಗಳು ಯಾವಾಗಲೂ ಅಪರೀಕ್ಷಿತವಾಗಿ, ಮಿಂಚಿನ ವೇಗದಿಂದ ನಡೆಯುತ್ತವೆ. ಆದುದರಿಂದಲೇ ಅವನು ವಿಜಯಿಯಾಗುತ್ತ ನಡೆದಿದ್ದಾನೆ.

ಮುಂದೇನು?

ರಷ್ಯಾ ಟರ್ಕಿಗಳನ್ನು ಬಿಟ್ಟರೆ ಹಿಟ್ಲರನು ಯುರೋಪಿನ ಎಲ್ಲವನ್ನೂ ತನ್ನ ಅಂಕೆಯಲ್ಲಿಟ್ಟುಕೊಂಡಂತಾಯಿತು. ಬ್ರಿಟನಿನ ಸ್ನೇಹದಲ್ಲಿ ಅದರ ಸಹಾಯಕ್ಕೆ ಬರುವ ಯಾವ ರಾಷ್ಟ್ರವೂ ಯೂರೋಪಿನಲ್ಲಿರುವುದಿಲ್ಲ. ಇಷ್ಟಾದರೂ ಕೂಡ ಯುದ್ಧವು ಇಲ್ಲಿಗೆ ಮುಗಿಯುವುದೆ? ಇಲ್ಲ. ಬ್ರಿಟಿಷರು ಸೋತಂತಾದರೆ? ಹಿಟ್ಲರನು ಗೆದ್ದಂತಾಯಿತೆ? ಅದೂ ಇಲ್ಲ. ಹಿಟ್ಲರನು ತನ್ನ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಪೂರೈಸಿಕೊಳ್ಳಲಿಕ್ಕಾಗಿ ಮಾಡಬೇಕಾದ ಕೆಲಸಗಳು ಇನ್ನೂ ಹತ್ತು ಹಲವಾರು ಇರುವವು. ಈಗ ಅವನು ಇನ್ನೇನು ಮಾಡುವನು? ಅವನ ಗೃಧ್ರದೃಷ್ಟಿ ಎಲ್ಲಿ ಬೀಳುವುದು?

ಬ್ರಿಟನಿನ ಸಮುದ್ರ ಶಕ್ತಿಯನ್ನು ಸಂಪೂರ್ಣ ನಾಶಮಾಡುವ ಮೊದಲು ಹಿಟ್ಲರನು ವಿಜಯಿಯಾಗುವಂತಿಲ್ಲ. ಈ ಸಮುದ್ರ ಶಕ್ತಿ ಅಟ್ಲಾಂಟಿಕದಲ್ಲಿಯೂ ಭೂಮಧ್ಯ ಸಮುದ್ರದ ಪೂರ್ವದಲ್ಲಿಯೂ ಅಪಾರವಾಗಿದ್ದು ಅಜೇಯವಾಗಿದೆ. ಮತ್ತೆ ಹಿಂದೂ ಸಾಗರದಲ್ಲಿಯೂ ಶಾಂತ ಸಾಗರದಲ್ಲಿಯೂ ಈ ಶಕ್ತಿಗೇನೂ ಚ್ಯುತಿ ಬಂದಿಲ್ಲ. ಆದುದರಿಂದ ಬ್ರಿಟನಿನ ಈ ಅಪಾರ ಶಕ್ತಿಯನ್ನು ಮುರಿಯುವುದೇ ಹಿಟ್ಲರನ ಮುಂದಿನ ಯುದ್ಧೋದ್ದೇಶವಾಗಿರಬೇಕು. ಬ್ರಿಟನಿಗೂ ಅದರ ಸಮುದ್ರದಾಚೆಯ ಸಾಮ್ರಾಜ್ಯ ಪ್ರದೇಶಗಳಿಗೂ ಇರುವ ವ್ಯವಹಾರ ಸಂಬಂಧವನ್ನು ಕಡಿದುಹಾಕುವುದೂ ಹಿಟ್ಲರನ ಧ್ಯೇಯವಾಗಿರಬೇಕು. ಈ ಎರಡು ಧ್ಯೇಯೋದ್ದೇಶಗಳಲ್ಲಿ ಕೃತಕೃತ್ಯನಾದರೆ ಮಾತ್ರ ಹಿಟ್ಲರನು ವಿಜಯಿ ಎನ್ನಿಸಿಕೊಳ್ಳಬಹುದೆಂದು ನಮಗೆ ಕಾಣುತ್ತದೆ. ಇದು ಮಾತ್ರ ಅಸಂಭವವೆಂದೇ ನಮಗೆ ತೋರುವುದು

ಮಾರ್ಗದಲ್ಲಿರುವ ಅಡಚಣೆಗಳು

ಮೇಲೆ ಹೇಳಿದ ಧ್ಯೇಯೋದ್ದೇಶಗಳನ್ನು ಸಾಧಿಸುವುದಕ್ಕೋಸ್ಕರ ಹಿಟ್ಲರನು ಈಜಿಪ್ಟಿನ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿ ಸುವೇಸ್ ಕಾಲುವೆಯನ್ನು ಬ್ರಿಟನಿನ ಹಿಡಿತದಿಂದ ತಪ್ಪಿಸಬೇಕು, ಮತ್ತು ಟರ್ಕಿಯನ್ನು ಹಿಡಿದು ಇರಾಕಿನ ಎಣ್ಣೆಗನಿಗಳನ್ನೂ ಸ್ವಾಧೀನ ಮಾಡಿಕೊಳ್ಳಬೇಕು. ಜಪಾನನ್ನು ಯುದ್ಧಕ್ಕೆ ಕರೆದು ಶಾಂತಸಾಗರದಲ್ಲಿ ಅದು ಬ್ರಿಟಿಷರ ವಿರುದ್ಧ ಯುದ್ಧ ಸಾಗುವಂತೆ ಮಾಡಬೇಕು. ಅವನು ಹೀಗೆಲ್ಲ ಮಾಡುವ ಉದ್ದೇಶವು ಈಗ ಕಂಡುಬಂದಿದೆ. ಆದರೆ ಅವನ ಮಾರ್ಗದಲ್ಲಿ ಮಾತ್ರ ತುಂಬ ಅಡಚಣೆಗಳಿರುವವು. ಟರ್ಕಿ ಹಿಟ್ಲರನ ಆಕ್ರಮಣವನ್ನು ಎದುರಿಸಲಿಕ್ಕೆ ಸಮರ್ಥವಲ್ಲವಾದರೂ ಅದು ಸುಮ್ಮಗೆ ಹಿಟ್ಲರನಿಗೆ ಶರಣಾಗತವಾಗುವಂತೆ ಇಲ್ಲ. ಬ್ರಿಟಿಷರ ನೌಕಾಬಲದ ಸಹಾಯವು ಅದಕ್ಕೆ ಇದ್ದೇ ಇದೆ. ಅತ್ತ ರಶ್ಯದೊಡನೆಯೂ ಅದು ಸ್ನೇಹದ ಒಡಂಬಡಿಕೆ ಮಾಡಿಕೊಂಡಿದೆ. ಆದರೂ ಹಿಟ್ಲರನು ಆ ಕಡೆಗೆ ಮುಂದುವರಿಯುವುದಷ್ಟು ನಿಜ. ಹಾಗೆಯೇ ಈಜಿಪ್ಟಿನ ಪರಿಸ್ಥಿತಿ ಕೂಡ ಇದೆ. ಅಲ್ಲಿಯೇ ಬ್ರಿಟಿಷರ-ಸೇನೆ ಬಹಳ ಮಟ್ಟಿಗೆ ಕೇಂದ್ರೀಕೃತವಾಗಿದ್ದು ಈಜಿಪ್ಟನ್ನು ಮತ್ತು ಸುಯೇಜು ಕಾಲುವೆಯನ್ನೂ ಮಹಾ ಸಂಗ್ರಾಮ ಹೂಡದೆ ಹಿಟ್ಲರನು ತನ್ನ ವಶಮಾಡಿಕೊಳ್ಳುವ ಹಾಗಿಲ್ಲ

ಅಟ್ಲಾಂಟಿಕದಲ್ಲಿ ಯುದ್ಧವು ಪ್ರಬಲವಾದರೆ ಅಮೆರಿಕವು ಯುದ್ಧಕ್ಕಿಳಿಯಲೇ ಬೇಕಾಗುವುದು. ಜಪಾನು ಯುದ್ಧಕ್ಕೆ ಇಳಿದರೆ ರಶ್ಯವು ಏನು ಮಾಡಿತೋ ಹೇಳಿರುವುದಿಲ್ಲ. ಹೇಗಿದ್ದರೂ ಮುಂದಿನ ಹಲವು ತಿಂಗಳುಗಳು ಈ ಯುದ್ಧದ ಇತಿಹಾಸದಲ್ಲಿ ಬ್ರಿಟಿಷರ ಸತ್ವಪರೀಕ್ಷೆಯ ದಿನಗಳು; ಮಹಾಭಯಂಕರ ದಿನಗಳಾಗಿರುವಲ್ಲಿ ಸಂದೇಹವಿಲ್ಲ.

ನಿಮಗೆ ಮಲಬದ್ಧತೆಯು ಬಾಧಿಸುತ್ತಿದ್ದರೆ ನೀವು ಆಡುವಾಗಲಾಗಲಿ, ವಿಶ್ರಾಂತಿಯಿಂದಿರುವಾಗಲಿ, ಸಂತೋಷದಿಂದಿರಲಾರಿರಿ. ಮಲಬದ್ಧತೆಯು ಆರೋಗ್ಯವನ್ನು ಕುಂದಿಸುತ್ತದೆ ಮನಸ್ಸನ್ನು ಕಳವಳಗೊಳಿಸಿ ದೇಹಶಕ್ತಿಯನ್ನು ಕ್ಷೀಣಿಸುತ್ತದೆ ಪ್ರತಿದಿನ ಒಂದು ಗ್ಲಾಸ್ ಎಂಡ್ರ್ಯೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡು ನಿಮ್ಮ ದೇಹದ ಒಳಭಾಗವನ್ನು ತೊಳೆದುಬಿಡಿ. ಅದು ನಾಲಿಗೆ ಮತ್ತು ಬಾಯಿಗಳನ್ನು ಶುಚಿಗೊಳಿಸುತ್ತದೆ ಹೊಟ್ಟೆಯೊಳಗೆ ಸೇರಿ, ಮಲಬಾಧೆಯನ್ನು ಸಂಪೂರ್ಣ ನಿವಾರಿಸುತ್ತದೆ, ಮಾತ್ರವಲ್ಲದೆ ದೇಹಕ್ಕೆ ತಂಪುಕೊಟ್ಟು ರಕ್ತವನ್ನು ಶುದ್ಧಿಗೊಳಿಸುವುದು ಮತ್ತು ಇಡೀ ಶರೀರದಲ್ಲಿ ಹೊಸ ಚೈತನ್ಯವನ್ನು ತರುತ್ತದೆ.

ಶರೀರದ ಒಳಭಾಗವು ನಿರ್ಮಲವಾಗಿರಬೇಕಾದರೆ ದಿನನಿತ್ಯವೂ ನೀವು ಎಂಡ್ರ್ಯೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿರಿ.

ANDREWS
LIVER SALT

ಆರೋಗ್ಯಕರ ಪಾನೀಯ ಮತ್ತು ಟಾನಿಕ್ ಗುಣಕಾರಿ-ಶುದ್ಧಿ-ತಂತ್ರ-ಆನಂದ-ಆರೋಗ್ಯಕರ ಗುಣವುಳ್ಳದ್ದು.

ಸಣ್ಣ ಸೈಜ ಆ. 11
ದೊಡ್ಡ ಸೈಜು ರೂ 1,4

ಈ ವಾರದ ಕತೆ:—

ನಿಭಾರ್ಗ್ಯ ತಾರೆ.

ಕತೆಗಾರ ಕೆ. ಎಸ್ ಶರ್ಮಾ

ಹೌದು. ಅಂದು ಮಾಧವ ತಾರೆಯರು ಚಿಕ್ಕಂದಿನಲ್ಲಿ ಅದೆಷ್ಟೊ ಆಟಗಳನ್ನು ಆಡಿದ್ದರು ಅಂದು ಅವರ ಜತೆಯು ಅದೆಷ್ಟೊ ಚಂದವಾಗಿ ಒಪ್ಪುತ್ತಿತ್ತು. ಚಿಕ್ಕವರಾದರೂ ಅವರ ಭಾವನೆಯು ತಾವಿನ್ನು ಮುಂದೆ ಸುಖದ ಅರಮನೆಯನ್ನು ಕಟ್ಟಿ ಬಾಳಬೇಕೆಂದಿತ್ತು ಇದೇ ಭಾವನೆಯನ್ನೇ ಅವರು ತಮ್ಮೊಳಗೆ ಅದೆಷ್ಟೋ ಬಾರಿ ಅಂದಿದ್ದಾರೆ ತಾರೆಯು ತಾನು ತಾಯಿಯಿಲ್ಲದವಳು ಮಾತೃವಿಹೀನಳಾದ ಆಕೆಯನ್ನು, ಆಕೆಯ ಸೋದರತ್ತೆಯಾದ ಮಾಧವನ ತಾಯಿಯು ಸಾಕುತ್ತಿದ್ದಳು ಆಕೆಗಾದರೂ, ತಾರೆಯನ್ನು ತನ್ನ ಪ್ರೀತಿಯ ಮಗನಾದ ಮಾಧವನಿಗೆ ಕೊಡಬೇಕೆಂದಿತ್ತು. ಅವಳ ಆ ಭಾವೀ ಆಕಾಂಕ್ಷೆಯು ಮಾಧವ ತಾರೆಯರ ಸಲಿಗೆಯ ಆಟದಿಂದ ತೃಪ್ತಿಯನ್ನು ಪಡೆಯುತ್ತಲಿದ್ದಿತು

ದಿನದಿಂದ ದಿನಕ್ಕೆ ಮಾಧವ ತಾರೆಯರು ಒಂದೊಂದೇ ಹೆಜ್ಜೆಯನ್ನು ಮುಂದಿಡುತ್ತಾ ಬಂದರು. ಜೀವನದಲ್ಲಿ ಒಂದೊಂದೇ ಹೊಸ ಹೊಸ ಮಾರ್ಪಾಟುಗಳನ್ನು ಹೊಂದುತ್ತಲಿದ್ದರು

ಮಾಧವನು 'ಎಸ್ ಎಸ್. ಎಲ್ ಸಿ.' ಕ್ಲಾಸಿನಲ್ಲಿ ಓದುತ್ತಿದ್ದನು ತಾರೆಯು ೬ನೇ ಕ್ಲಾಸಿನಲ್ಲಿ ಅಭ್ಯಾಸ ಮಾಡುತ್ತಿದ್ದಳು ಬಿಡುವಿದ್ದಾಗ ಮಾಧವನು ತಾರೆಯನ್ನು ಕರೆದ ತಿಳಿಯದ ಪಾಠವನ್ನು ಹೇಳುವನು ಮಧ್ಯಮಧ್ಯದಲ್ಲಿ ಕಿಲಕಿಲನೆ ನಗುತ್ತಿದ್ದರು ಮಾಧವ ತಾರೆಯರ ಆ ಬಾಲ್ಯ ಜೀವನವು ಅದೊಂದು ಆನಂದಸಾಗರದಲ್ಲಿ ತೇಲಾಡುತ್ತಿತ್ತು

೨

ಮಾಧವನು ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿದನು ಆತನ ತಂದೆಯು ಆತನನ್ನು ಉಚ್ಚ ವಿದ್ಯಾಭ್ಯಾಸಕ್ಕಾಗಿ ಮದ್ರಾಸಿಗೆ ಕಳುಹಿಸಲಿದ್ದರು ತಾರೆಯನ್ನು ಬಿಟ್ಟು ಹೋಗುವದು ಮಾಧವನಿಗೆ ಮನಸ್ಸೊಪ್ಪಲಿಲ್ಲ ಬಹು ದುಃಖಗೊಂಡನು ಆದರೂ, ಮುಂದಿನ ಜೀವನದ ಮಾರ್ಗವನ್ನು ಪರ್ಯಾಲೋಚಿಸಿ, ಹೇಗಾದರೂ ಹೋಗುವದೆಂದೇ ನಿಶ್ಚಯಿಸಿದ ಒಮ್ಮೊಮ್ಮೆ ಆ ಪ್ರೇಮಮೂರ್ತಿಯು ಮನೋಮುಕುರದಲ್ಲಿ ಪ್ರತಿಬಿಂಬಿಸಿದೊಡನೆಯೇ ಸಿಕ್ಷಲನಾಗುವನು. ಬಹಳ ಹೊತ್ತು ಯೋಚಿಸುತ್ತಾ ನಿಂತುಬಿಡುವನು ಮರುಕ್ಷಣದಲ್ಲಿ ಧೈರ್ಯವನ್ನು ತಂದುಕೊಳ್ಳುವನು.

ಮಾಧವನ ತಂದೆಯು ಆತನನ್ನು ಮುಲ್ಲಾಗೆ ಕಳುಹಿಸಲು ನಿಶ್ಚಯ ಮಾಡಿದರು. ಇನ್ನು ಒಂದೆರಡು ದಿನಗಳು ಮಾತ್ರ ಉಳಿದಿದ್ದುವು. ತಾಯಿಗೆ, ಮಗನನ್ನು ದೂರಕ್ಕೆ ಕಳುಹಿಸುವ ಉತ್ಸಾಹವೂ, ವೇದನೆಯೂ ಆಗಾಗ ಕೆಲಸಗಳಲ್ಲಿ ಗಡಿಬಿಡಿಯನ್ನುಂಟುಮಾಡುತ್ತಿತ್ತು. ತಾರೆಯು ಮಾತ್ರ ಅದೇನೋ ಒಂದು ದುಸ್ಸಹವಾದ ಯಾತನೆಯನ್ನನುಭವಿಸುತ್ತಿದ್ದಳು. ಮಾಧವನು ಬಹು ಬಾರಿ ಆಕೆಯನ್ನು ಸಮಾಧಾನಪಡಿಸಿದನು.

ಆಕೆಯು ಅಳುವನ್ನು ಕಂಡು ತಾನೂ ಅಳುವನು. ಕಡೆಗೆ ಇಬ್ಬರೂ ಒಂದು ಕ್ಷಣ ಶಾಂತಿಯನ್ನು ಪಡೆಯುವರು.

★

ಇಂದು ಮಾಧವನು ತೆರಳುವನು. ತನ್ನ ಸಾಮಾನುಗಳೆಲ್ಲವನ್ನೂ ಕಟ್ಟಿ ಮಾಡಿ ಆಫೀಸಿಗೆ ಸಾಗಿಸಿದನು. ತಾನೂ ಹೊರಟು ತಾಯಿತಂದೆಯವರಿಗೆ ನಮಸ್ಕರಿಸುತ್ತಾ ತನ್ನ ಓದುವ ಕೋಣೆಗೆ ತೆರಳಿದನು ಕೋಣೆಯ ಒಂದು ಮೂಲೆಯಲ್ಲಿ ಅಳುತ್ತಾ ನಿಂತಿದ್ದಳು ತಾರೆ ತಾರೆ, ನೋಡು ಮತ್ತೂ ದುಃಖಿಸುವೆಯಾ, ನಾನು ಆಗಾಗ ಬರುವದಿಲ್ಲವೇ, ನಿನ್ನ ಕ್ಷೇಮಸಮಾಚಾರಕ್ಕಾಗಿ ಆಗಾಗ ನಾನು ಬರೆಯುವದಿಲ್ಲವೇನೇ ತಾರೆ? ನೀನು ಹೀಗೆ ಅತ್ತರೆ, ನಾನೆಂತು ಹೋಗಲಿ'.

ಮಾಧವ, ನಿನ್ನನ್ನು ಅಗಲಿ ಇರಲು ಶಕ್ಯವಾಗದೆ, ನಾನು ಅಳುವೆನಲ್ಲದೆ, ನೀನು ಹೋಗಬಾರದೆಂದು ನಾನೆಣಿಸಿರುವೆನೆ? ನೀನು ಕಲಿತು ಬಂದರೆ ನನಗೆ ಸಂತೋಷವಲ್ಲವೆ?

'ತಾರೆ, ಹಾಗಾದರ ನನ್ನನ್ನು ಪ್ರೀತಿಯಿಂದ ಬಿಟ್ಟು ಕಳುಹುವೆಯಾ, ನನಗಾಗಿ ಅತ್ತು ಬೇಸರಿಸಬೇಡ ತಿಳಿಯಿತೇ ತಾರೆ. ನೀನು ಚೆನ್ನಾಗಿ ಓದುತ್ತಿರು ನಾನು ಹೋಗಲೆ?'

'ಆಗಬಹುದು, ಕಾಗದ ಬರೆಯುತ್ತಿರಬೇಕು' ತಾರೆ ಮುಖದಲ್ಲಿ ಮುಗುಳ್ನಗೆಯನ್ನು ಕಾಣಿಸಿಕೊಂಡು ದುಃಖದಿಂದ ಬೀಳ್ಕೊಟ್ಟಳು.

೩

ಮಾಧವನು ಮದ್ರಾಸಿಗೆ ತೆರಳಿದ ಮೇಲೆ ತಾರೆಗೆ ಎಷ್ಟೊ ಪತ್ರಗಳನ್ನು ಬರೆದಿದ್ದ ತನ್ನ ವಿದ್ಯಾಭ್ಯಾಸದ ಕುರಿತು ಅನೇಕ ಅಭಿಪ್ರಾಯಗಳನ್ನು ಬರೆಯುತ್ತಿದ್ದ ಆದರೆ ಕೆಲ ತಿಂಗಳ ತರುವಾಯ ಮಾಧವನ ಪತ್ರಗಳು ತಾರೆಯ ಹೆಸರಿಗೆ ಬಾರದಾದುವು ಕಾಗದಗಳು ಬಾರದಿರುವ ಕಾರಣವನ್ನು ತಾರೆಯು ತಿಳಿಯದಾದಳು ಏನೋ ದೊಡ್ಡ ಕಾರಣವಿರಬಹುದೆಂದು ಬಗೆದಳು

ಮಾಧವನ ಹೃದಯವನ್ನು ಆತನ ಸಹಪಾಠಿನಿ ಜಲಜೆಯು ಅಪಹರಿಸಿದ್ದಳು. ಆಕೆಯು ಓರ್ವ ಮೈಜಿಸ್ಟ್ರೇಟರ ಮಗಳು. ಬಹು ಸೊಬಗಿನವಳು. ನರಿ, ಮಾಧವನ ಮನಸ್ಸು ಬಡವೆ, ತಬ್ಬಲಿ, ತಾರೆಯ ಕಡೆಯಿಂದ ಜಲಜೆಯ ಕಡೆಗೆ ತಿರುಗಿತು ಅಯ್ಯೊ! ಮಾಧವನೊಡನೆ, ಭಾವೀ ಜೀವನದಲ್ಲಿ ಕೂಡಿ ನಲಿಯಬೇಕೆಂದಿದ್ದ ತಾರೆಯು ಹೀಗಾಗುವದನ್ನು ಬಲ್ಲಳೆ? ತಾರೆ, ನೀನು ಮೋಸಹೋದೆಯಾ?

ಪಾಪ! ತಾರೆಯು ಇಂದಲ್ಲ ನಾಳೆಯಾದರೂ ತನಗೆ ಮಾಧವನ ಪತ್ರವು ಬರಬಹುದೆಂದು ಭಾವಿಸಿದ್ದಳು ಮನೆಗೆ ಬಂದ ಕಾಗದದಲ್ಲಿ ತನ್ನ ವಿಷಯಕವಾದ ಯಾವ ಮಾತೂ ಇಲ್ಲದುದನ್ನು ಕಂಡು ಕೊರಗುವಳು ತಾನು ಪ್ರತ್ಯೇಕವಾಗಿ ಕಾಗದ ಬರೆದಳು ಉತ್ತರವೇ ಇಲ್ಲ ತಾರೆಯು ನಿರಾಶಳಾದಳು ತನ್ನ ವಿಷಯದಲ್ಲಿ ಮಾಧವನು ಬೇಸರಗೊಂಡಿರಬಹುದೆ? ಛೆ! ಹಾಗೆ ಮಾಡಲಾರನು ನಾನೇನೂ ಅಂತಹ ಅಪರಾಧ ಮಾಡಿಲ್ಲ ಮಾಧವನು ಅಂತಹ ಕಠಿಣ ಹೃದಯನಲ್ಲ. ಆತನ ಮನಸ್ಸು ಬಹು ವಿಶಾಲ— ಎಂದೆನ್ನುತ್ತಾ ತನ್ನಲ್ಲೇ ಸಮಾಧಾನಪಟ್ಟುಕೊಳ್ಳುವಳು.

★

ಇದೊಂದು ದಿನ ತಾರೆಯು ಜಗಲಿಯಲ್ಲಿ ಹೆರಳು ಹಾಕುತ್ತಾ ಕುಳಿತಿದ್ದಳು. ಅಷ್ಟರಲ್ಲಿಯೇ ಟಪ್ಪಾಲು ಪೇದೆಯು ಒಂದು ಕಾಗದವನ್ನು ತಂದು ಕೊಟ್ಟನು. ಮಾಧವನ ಪತ್ರವಿರಬಹುದೆಂದು ತಾರೆಯು ಲಗುಬಗೆಯಿಂದ ಓದಿ ನೋಡಿದಳು.

ತಾರೆ,

ಬರೆದ, ಕಾಗದಗಳನ್ನು ಉದ್ದುದ್ದ ಬೆಳೆಸುತ್ತಾ ಇರಲಾರೆ ನಾನು ನಿನ್ನನ್ನು ತೀರಾ ಮರೆತಿರುವೆ. ನೀನು ವಿದ್ಯಾವಂತೆಯಲ್ಲ, ಅಷ್ಟೊಂದು ಸುಂದರಿಯೂ ನೀನಲ್ಲ ನಿನ್ನಲ್ಲಿ ನನಗೇನೋ ಒಂದು ಬಗೆಯ ಪ್ರೇಮವಿತ್ತು ನಿಜ ಆದರೆ ಅದು ಚಿರಸ್ಥಾಯಿಯಲ್ಲವೆಂದು ಹೇಳುವದಕ್ಕೇ ಈ ಕಾಗದವನ್ನು ಬರೆಯಲಾಯಿತು. ನನ್ನ ಮನಸ್ಸನ್ನು ಜಲಜೆಯೆಂಬವಳೋರ್ವಳು ಅಪಹರಿಸಿದ್ದಾಳೆ. ಇನ್ನು ನೀನು ಕಾಗದ ಬರೆಯುವದೂ ಬೇಡ ನನ್ನ ಕಾಗದದ ನಿರೀಕ್ಷಣೆಯಾದರೂ ನಿನಗೆ ಬೇಡ. ಇನ್ನು ಬರೆಯಲಾರೆ

ಇತಿ,

ಮಾಧವರಾವ್

THE BANK OF MANGALORE LIMITED.

HEAD OFFICE MANGALORE ESTD 1901

Branche — MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5½ per cent
„ 1 „	4½ per cent
„ 6months	3½ per cent
„ 3 „	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs. 5 @ 3%

All kinds of banking business transacted.

ತಾರೆಯು ಬಹು ಹೊತ್ತು ಕಣ್ಣೀರು ಮಿಡಿದಳು ಕಾಗದವನ್ನು ಮಡಚಿ ಕೈಯಲ್ಲಿ ಹಿಡಿದುಕೊಂಡಳು ನೇರವಾಗಿ ಕೋಣೆಗೆ ಬಂದಳು. ಒಂದೆಡೆ ಕೆಮ್ಮನೆ ಕುಳಿತಳು ಗೋಡೆಯ ಮೇಲೆ ಕಣ್ಣನ್ನು ಹರಿಸಿದಳು ಅಲ್ಲಿ ಶಾಂತ ಮುದ್ರೆಯಿಂದ ನೋಡುತ್ತಿದೆ ಮಾಧವನ ಭಾವಚಿತ್ರ. ತಾರೆಯು ಚಿತ್ರವನ್ನು ನೋಡುತ್ತಾ 'ಮಾಧವ, ನೀನು ಹೀಗಾಗಬಹುದೆ? ಅಯ್ಯೋ' ನಾನು ವಿದ್ಯಾವತಿಯಲ್ಲ, ಸುಂದರಿಯಲ್ಲ, ಸರಿ. ಜಲಜೆಯು ಅವೆರಡೂ ಉಳ್ಳವಳಲ್ಲವೆ? ಮಾಧವ, ನನ್ನನ್ನು ತ್ಯಜಿಸಿದೆಯಾ? ಅಯ್ಯೋ ನಾನು ನಿಭಾರ್ಗ್ಯಳು' ಎಂದೆನ್ನುತ್ತಾ ಒಂದೆಡೆ ಬಿದ್ದುಕೊಂಡಳು ಮಾಧವನ ತಾಯಿ ಬಹು ಹೊತ್ತು ಬಂದು ಕರೆದಳು ಆದರೆ ತಾರೆ ಏಳಲಿಲ್ಲ 'ಅಮ್ಮಾ, ಸ್ವಲ್ಪ ತಲೆ ನೋವಾಗುತ್ತಿದೆ, ಏಳಲಾರೆ, ಸ್ವಲ್ಪ ತಡೆದು ಬರುವೆ' ಎಂದೆನ್ನುತ್ತಾ ಮಲಗಿದಳು

೪

ತಾರೆಯು ಮತ್ತೆ ಆಧಿಯಿಂದ ವ್ಯಾಧಿಗೆ ತುತ್ತಾದಳು ಇದರ ಕಾರಣವು ಯಾರಿಗೂ ಅರಿಯದು. ಯಾರಲ್ಲೂ ತಾರೆಯು ಹೇಳಲಿಲ್ಲ ತನ್ನ ಅಭಾಗ್ಯದ ಕಂತೆಯನ್ನು ಯಾರಲ್ಲೂ ಬಿಚ್ಚಲಿಲ್ಲ ಔಷಧೋಪಚಾರಗಳೇನೋ ನಡೆಯುತ್ತಿದ್ದುವು ಆದರೆ ಅವೆಲ್ಲಾ ನಿರರ್ಥಕವಾಯಿತು. ಕಟ್ಟಕಡೆಗೆ ತಾರೆಯು ತಂದೆ ಆಕೆಯನ್ನು ವೈದ್ಯನೋರ್ವನ ಆಪತ್ತಿಗೆ ... ವ್ಯಾಧಿಯನ್ನು ನಿವಾರಿಸುವದ ಸಾರಿಂಥಾದ್ದೀತು? ತಾರೆಯ ಆಪತ್ತು ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು. ತಂದೆಯು ಅನೇಕ ಬಾರಿ ಆಕೆಯನ್ನು ಕೇಳಿದ. ಆದರೆ ತಾರೆಯು ಮಾತ್ರ ಅವುದನ್ನೂ ಹೇಳಲಾರದ ಸುಮ್ಮನಿದ್ದಳು

೫

ತಾರೆಯು ತೆರಳಿದ ಎಂಟು ಹತ್ತು ದಿನಗಳಲ್ಲಿ ಮಾಧವನು ಮದ್ರಾಸಿನಿಂದ ಹಿಂತಿರುಗಿ ಬಂದನು. ಆತನು ಹಿಂದಿರುಗಿ ಬರ ಬೇಗ ಜಲಜೆಯನ್ನು ವಿವಾಹವಾಗುವೆನೆಂದು ಒಪ್ಪಿ ಬಂದಿದ್ದನು. ರೈಲಾಫೀಸಿನಿಂದಿಳಿದು ನೇರವಾಗಿ ಮನೆಗೆ ಬಂದ ತಂದೆ ತಾಯಿಯರು ಬಹುವಾಗಿ ಆನಂದಿಸಿದರು ತಂದೆಯು 'ಮಗೂ, ಮಾಧು, ಪರೀಕ್ಷೆಯು ಸುಲಭವಾಗಿತ್ತೆ? ಪಾಸಾಗಬಹುದೆ?' ಎಂಬುದಾಗಿ ಕೇಳುತ್ತಾ ಇದ್ದರು.' ಮಾಧವನ ತಾಯಿಯು 'ಮಗೂ, ತಾರೆಯು ಬಹು ಆಪತ್ತಿನಲ್ಲಿ ಇರುವಳು ರೋಗದ ಕಾರಣವು ಇದ ವರೆಗೂ ತಿಳಿದಿಲ್ಲ' ಎಂದರು.

'ಅಮ್ಮಾ ರೋಗವು ಬಹು ಭಯಂಕರವಿರುವದೆ?'

'ಮಾಧು, ಹೌದಪ್ಪಾ, ಆಕೆಯ ತಂದೆ ಮೊನ್ನೆ ಬಂದು ಕರೆದೊಯ್ದನು. ಆಪತ್ತಿನ ಕಾರಣ ತಿಳಿಯುವ, ಎಲ್ಲಾ ಔಷಧಗಳೂ ನಿಷ್ಫಲವಾಗುತ್ತಿರುವವು —ಮಾಧು ನೀನು ಹೋಗುವದಿಲ್ಲವೆ?'

(ಆನೆಯ ಪುಟವನ್ನು ನೋಡಿ)

ನಿರ್ಭಾಗ್ಯ ತಾರೆ

ಅವಮ್ಮಾ ಏನವಸರ, ಒಂದೆರಡು ದಿನಗಳಲ್ಲಿ ಹೋಗಬಹುದು. ಈಗ ತುಂಬಾ ಕೆಲಸವಿದೆ. ಮಾಧವನ ಈ ಮಾತನ್ನು ತಾಯಿಯು ನಂಬಿದಳು.

★

ದಿವಸಗಳನೇಕ ಕಳೆದುವು. ಮಾಧವನು ಒಂದು ಬಾರಿಯಾದರೂ ತಾರೆಯ ಬಳಿಗೆ ಹೋಗಲಿಲ್ಲ. ಮನಸ್ಸಿನಿಂದಲೂ ತಾರೆಯನ್ನು ಮರೆತಿದ್ದ. ಆತನಿಗೆ ಸದಾ ಜಲಜೆಯ ಧ್ಯಾನ.

ಒಂದು ದಿನ ಮಾಧವನು ಹೊರ ಜಗಲಿಯಲ್ಲಿ ಕುಳಿತಿದ್ದ. ಥಕ್ಕನೆ ಟಪ್ಪಾಲು ಪೇದೆಯು ಒಂದು ಕಾಗದವನ್ನಿತ್ತು ಹೊರಟು ಹೋದ. ಮಾಧವನು ಬಿಡಿಸಿ ಓದತೊಡಗಿದ.

ಮಾಧವ,

ಅಯ್ಯೋ! ಹೇಗೆ ಬರೆಯಲಿ, ಕೈ ನಡುಗುತ್ತಿರುವದು. ನಾನಿಂದು ಬಡವೆಯಾಗಿದ್ದೇನೆ. ಒಂದು ಬಾರಿಯಾದರೂ ಇಲ್ಲಿ ನೀನು ಬರಬಾರದೆ? ಅಂದು ನಾವು ಆಡಿದ ಆಟಗಳನ್ನಾದರೂ ನೆನೆದು ಒಂದು ಬಾರಿಯಾದರೂ ಬರಬಾರದೆ? ಇದೋ ಬೇಡುವೆ, ಒಂದು ಬಾರಿ ಬಂದು ಸಾಯುವ ಈ ಜೀವಿಗೆ ದರ್ಶನವೀಯು. ನಿನ್ನ ಆ ಪತ್ರವೇ ನನ್ನನ್ನು ಈ ಗತಿಗಿಳಿಸಿತು. ಮಾಧವ, ಈ ವಿಷಯವನ್ನು ನಿನ್ನಲ್ಲಿ ಹೇಳಿದೆನಲ್ಲದೆ ಇನ್ನಾರಲ್ಲಿಯೂ ಹೇಳಿಲ್ಲ. ಆಗಲಿ, ನೀನೀಗ ಮನೆಗೆ ಬಂದಿರುವಿಯೆಂದು ತಿಳಿದೇ ಈ ಪತ್ರ ಬರೆದೆನು. ನನ್ನ ಹೃದಯ ದೇವತೆಯೇ ಒಂದು ಬಾರಿ ಈ ಬಡವೆಗೆ ದರ್ಶನವನ್ನೀಯು. ಹಾಗಾದರೆ ಇದೋ ಇಂದೇ ಸುಖವಾಗಿ ಪ್ರಾಣಗಳನ್ನು ತೊರೆದು ಬಿಡುವೆ.

ಇತಿ—ತಾರೆ.

ಮಾಧವನು ಕಾಗದವನ್ನು ನಿರ್ಲಕ್ಷ್ಯದಿಂದ ಒಂದೆಡೆ ತೆಗೆದಿಟ್ಟ. ಅದರ ಗೊಡ್ಡವೆಗೆ ಹೋಗಲಿಲ್ಲ. ತಾರೆಯನ್ನು ನೆನೆಯಲೇ ಇಲ್ಲ. ಮಾಧವನ ತಾಯಿ ಎಷ್ಟೋ ಬಾರಿ ಆತನನ್ನು ಹೋಗಲು ಹೇಳಿದರೂ ಆತನು ಹೋಗಲೇ ಇಲ್ಲ.

★

'ರಿಸಲ್ಟು' ಬರುವ ದಿನ. ಮಾಧವನು ಪೇಪರನ್ನು ಕಾಯುತ್ತಿದ್ದ. ಆ ಸಮಯಕ್ಕೆ ಸರಿಯಾಗಿ 'ಹಿಂದೂ' ಎಂದು ಯಾರೋ ಕೂಗಿದರು. ಮಾಧವನು ಓಡಿ ಒಂದನ್ನು ತೆಗೆದುಕೊಂಡನು. ಬಿಡಿಸಿ ರಿಸಲ್ಟು ಭಾಗವನ್ನು ನೋಡಿದ. ಆದರೆ ಮಾಧವನ ನಂಬರಿರಲಿಲ್ಲ. ನಿರಾಶೆಯಿಂದ ಹಿಂದಿರುಗಿದ. ತನ್ನ ಪರೀಕ್ಷೆಯ ಅಪಜಯದ ಕಾರಣವು ತಾನು ಮದ್ರಾಸಿನಲ್ಲಿ ಜಲಜೆಯ ಪ್ರೇಮಕ್ಕೆ ಬಿದ್ದ ಪರಿಣಾಮವೇ ಎಂಬುದನ್ನು ಮಾಧವನು ತಿಳಿಯದಿರಲಿಲ್ಲ. ಆತನ ಮನದಲ್ಲಿ ಬೇರೂರಿದ್ದ ಒಂದೊಂದೇ ಉಪ್ಪರಿಗೆಗಳು ಕುಸಿದು ಬೀಳತೊಡಗಿದುವು. ತಂದೆ ತಾಯಿಗಳಿಗಂತೂ ತೀರಾ ಬೇಸರ.

ರಿಸಲ್ಟು ಬಂದು ೫-೬ ದಿನಗಳು ಕಳೆದಿದ್ದುವು. ಮಾಧವನು ಒಂದು ದಿನ ಪೇಪರನ್ನು ಓದುತ್ತಾ ಕುಳಿತಿದ್ದ. ಪುಟ ಮಗುಚಿದಂತೆ ಒಂದೆಡೆ ಥಕ್ಕನೆ ಒಂದು 'ವಧೂವರರ' ಭಾವಚಿತ್ರವು ಕಾಣಬಂತು. ಅದರ ಕೆಳಗಡೆ ದಪ್ಪನಾದ ಅಕ್ಷರದಲ್ಲಿ:-

'ಮದ್ರಾಸಿನಲ್ಲಿ ಸುಪ್ರಸಿದ್ಧ ಮನುಷ್ಯರಾದ 'ಮೆಜಿಸ್ಟ್ರೇಟ್' ಶಾಮರಾಯರ ಮಗಳಾದ ಜಲಜೆಯನ್ನು ಬೊಂಬಾಯಿಯಲ್ಲಿರುವ ವಕೀಲ್ 'ದೇವರಾವ್' ಇವರಿಗೆ ವಿವಾಹಮಾಡಿ ಕೊಡಲಾಯಿತು. ಇವರಿಗೆ ದೇವರು ಶ್ರೇಯಸ್ಸನ್ನುಂಟುಮಾಡಲಿ' ಎಂಬುದಾಗಿ ಬರೆದಿತ್ತು.

ಮಾಧವನು ಓದುತ್ತಲೇ ಇದ್ದವನು ಕಣ್ಣು ಮುಚ್ಚಿಬಿಟ್ಟ. ಪ್ರತಿಯೊಂದಕ್ಷರಗಳೂ ಕಠಾರಿಯಂತೆ ಎದೆಯನ್ನು ಸೀಳಿದುವು. 'ಜಲಜಾ, ನೀನು ವಂಚಕಳೆ, ನನ್ನನ್ನು ವಂಚಿಸಿ ತಾರೆಯನ್ನು ನನ್ನಿಂದಲೇ ಕೊಲ್ಲಿಸಿದೆಯಾ? ಅಯ್ಯೋ! ನಿನ್ನನ್ನೇಕೆ ದೂರಲಿ, ನೀನು ದೊಡ್ಡವಳು. ನಿನ್ನಂಥವಳ ಸ್ನೇಹವನ್ನು ಕೋರಿದ ನಾನು ಕ್ರೂರ. ತಾರೆ, ನಿನ್ನನ್ನು ಸಾಯಗೊಳಿಸಿದ ಪಾಪಿಯು ನಾನು. ತಾರೆ, ನಿನ್ನನ್ನು ನೋಡಲು ನಾನಯೋಗ್ಯನು. ನಿನ್ನನ್ನು ಅಧೋಗತಿಕಳನ್ನಾಗಿ ಮಾಡಿದ ನನ್ನನ್ನು ಕ್ಷಮಿಸಲಾರೆಯಾ? ಹೀಗೆಂದು ಪರಿತಪಿಸಿಕೊಂಡನು. ಮತ್ತೆ ತಾಯಿಯ ಬಳಿ ಬಂದ. 'ಅಮ್ಮ ನನ್ನನ್ನು ಕ್ಷಮಿಸು. ತಾರೆಯ ನಾಶಕ್ಕೆ ಕಾರಣನಾದವನು ನಾನು. ಅಯ್ಯೋ! ನಾನು ಪಾಪಿ' ಎಂದನ್ನುತ್ತಾ ಆಕೆಯ ಪಾದಕ್ಕೆ ಅಡ್ಡಬಿದ್ದ. 'ಅಮ್ಮಾ ನಾನೊಂದು ಬಾರಿ ತಾರೆಯ ದರ್ಶನಕ್ಕೆ ಹೋಗಲೆ?' ಎಂದು ರೈಲ್ವೇ ನಿಲ್ದಾಣಕ್ಕೆ ನಡೆದ. ರೈಲು ಹತ್ತಿ ತೆರಳಿದ. ಕೆಲ ಗಂಟೆಗಳೊಳಗೆ ತಾರೆಯ ಮನೆಗೆ ತಲುಪಿತು. ಎಲ್ಲರೂ ಮೌನವಾಗಿ ಅಳುತ್ತಿದ್ದರು. ಸಂತೋಷದ ಕುರುಹೇ ಇಲ್ಲ. ಬಂದಿ ಜ್ಯೋತಿಯು ನಂದಿದಂತಿದೆ ಆ ಮನೆ. ಮಾಧವನು ಬಾಗಿಲಲ್ಲೇ ತಾರೆಯ ತಂದೆಯನ್ನು ಸಂಧಿಸಿದ. 'ಮಾವಾ, ತಾರೆಯು ಎಂತಿರುವಳು?' 'ಮಾಧವ, ಆಕೆಯು ತೆರಳಿದಳು. ನಮ್ಮನ್ನು ಬಿಟ್ಟು ಶಾಂತಿಧಾಮಕ್ಕೆ ತೆರಳಿದಳು.' ಎಂದನ್ನುತ್ತಾ ಅಲ್ಲಿಯೇ ಬಿದ್ದುಬಿಟ್ಟರು.

ಮಾಧವನು ದಿಙ್ಮೂಢನಾಗಿ 'ಏನು, ತಾರೆಯು ಹೋದಳೆ? ತಾರೆ, ನನ್ನ ಹೃದ್ದೇವತೆಯೆ, ಏನು ಹೋಗಿಯೇಬಿಟ್ಟೆಯಾ? ನನಗೆ ಒಂದು ಬಾರಿ ಅಂತ್ಯ ದರ್ಶನವನ್ನಾದರೂ ಕೊಡದೆ ಹೋದೆಯಾ? ನಾನಷ್ಟು ಪಾಪಿಯೆ, ಇರಬಹುದು; ಖಂಡಿತ. ಅಯ್ಯೋ! ತಾರೆ, ಅಲ್ಲಲ್ಲ ಪವಿತ್ರಾತ್ಮಳೆ, ನಿನ್ನನ್ನದೆಷ್ಟು ವ್ಯಸನಪಡಿಸಿದೆ. ನೀನು ಮಾತ್ರ ನನ್ನಲ್ಲಿ ನೋಯದೆ, ನನ್ನನ್ನು ಮತ್ತೂ ಸ್ತುತಿಸಿದೆಯಾ? ಅಯ್ಯೋ! ಶಾಂತಮೂರ್ತಿಯೆ, ನಿನ್ನನ್ನು ಬಿಟ್ಟು ನಾನೆಂತು ಇರಲಿ; ಹೇಗೆ ಬಾಳಲಿ; ಬಾಳಲಾರೆ—ಖಂಡಿತ—ಇನ್ನು ನಿಲ್ಲಲಾರೆ. ಆದರೆ ತಾರೆ, ಇದೋ ಬೇಡುವೆ, ಒಂದು ಬಾರಿ ನನ್ನನ್ನು ಕ್ಷಮಿಸಿಬಿಡು.' ಎಂದನ್ನುತ್ತಾ ಮುಗಿಲ ಕಡೆ ಶೂನ್ಯದೃಷ್ಟಿಯನ್ನು ಬೀರಿದ.

ಆದರೆ ಆದಾರು ಕ್ಷಮಿಸುವರು. ಶಾಂತಿಸಾಮ್ರಾಜ್ಯದಲ್ಲಿ ಆ ಆತ್ಮವು ನೆಲೆಗೊಂಡಿತ್ತು.

ಸುಕ್ರ ಸಂಜೀವನ

ಭಾರತ ದೇಶದಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲಿ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿದ್ದಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ಶಕ್ತ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನನ್ನ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ತವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೆಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಬ್ರಾಂಚುಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್: ಷಾ ಕಂಪೆನಿ, ಹಂಪನಕಟ್ಟಾ, ಮಂಗಳೂರು

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತ್ರಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.

Apply for particulars

K. R. GURU, *Managing Director.*

ಜಿಲ್ಲಾ ಸಮಾಚಾರಗಳು

ಮಂಗಳೂರು

ಡಾ। ಯು. ಪಿ. ಮಲ್ಯರ ಸತ್ಯಾಗ್ರಹ

ನಾಲ್ಕು ತಿಂಗಳ ಕಠಿಣ ಶಿಕ್ಷೆ ೩೦೦ ರೂ. ಜುಲ್ಮಾನೆ ಎ. ಕ್ಲಾಸು

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ। ಯು. ಪಿ. ಮಲ್ಯರು ತಾ. ೩೦ರಂದು ಬೆಳಗ್ಗೆ ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿ ರಾಷ್ಟ್ರ ಧ್ವಜವಂದನೆಮಾಡಿ ಯುದ್ಧವಿರೋಧ ಘೋಷಣೆಗೈದು ಸತ್ಯಾಗ್ರಹಮಾಡಿದರು. ಅವರನ್ನು ಕೂಡಲೇ ಬಂಧಿಸಿ, ಅದೇ ದಿನ ವಿಚಾರಣೆ ನಡೆಸಿ ನಾಲ್ಕು ತಿಂಗಳ ಕಠಿಣ ಶಿಕ್ಷೆ, ೩೦೦ ರೂ. ಜುಲ್ಮಾನೆವಿಧಿಸಿದರು. ಎ. ಕ್ಲಾಸು ಕೊಡಲಾಗಿದೆ.

ಅನೇಕ ಕಾಂಗ್ರೆಸ್ ಧುರೀಣರು ಪುರ ಪ್ರಮುಖರು ಬಂದು ನೆರೆದಿದ್ದರು. ಮಹಿಳೆಯರೂ ಬಹು ಮಂದಿ ಬಂದಿದ್ದರು. ಡಾ. ಮಲ್ಯರು ಸಮಯಕ್ಕೆ ಸರಿಯಾಗಿ ತನ್ನ ಮನೆಯಿಂದ ಹೊರಟೊಡನೆ ನಡಕೊಂಡು ರಾಷ್ಟ್ರ ಧ್ವಜದಡಿಯಲ್ಲಿ ನಿಂತು ವಂದೇ ಮಾತರಂ ಹಾಡಿ ಧ್ವಜ ವಂದನೆಗೈದರು. ಮತ್ತೆ ರಾಷ್ಟ್ರ ಧ್ವಜದ ಗೌರವವನ್ನುಳಿಸಬೇಕೆಂದುಸಭಿಕರಲ್ಲಿ ಭಿನ್ನವಿಸಿಕೊಂಡು ಯುದ್ಧ ವಿರುದ್ಧ ಘೋಷಣೆಮಾಡಿದರು. ನೆರೆದವರು ಹೂಮಾಲೆಗಳನ್ನು ಹಾಕಿ ಗೌರವಿಸಿದರು. ಘೋಷಣೆಯನ್ನು ಎರಡನೆ ಸಲ ಉಚ್ಚರಿಸಿ ತಾನಿನ್ನು ಡಿಲ್ಲಿಯ ಕಡೆ ಪ್ರಯಾಣಮಾಡುತ್ತೇನೆಂದು ಹೊರಡುವಾಗ ಅವರನ್ನು ಪೋಲಿಸಿನವರು ಬಂಧಿಸಿ ಕೊಂಡೊಯ್ದರು.

ಮಣ್ಣಗುಡ್ಡೆಯಲ್ಲಿ ಸತ್ಯಾಗ್ರಹ:— ತಾ ೨೯ ರಂದು ಶ್ರೀ. ವರದರಾಯ ಪ್ರಭುಗಳು ಮಂಗಳೂರು ಮಣ್ಣಗುಡ್ಡೆ ಮೈದಾನಿನಲ್ಲಿ ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸಲಿಲ್ಲ.

ಭಟ್ಕಳದಲ್ಲಿ ಬಂಧಿಸಿದರು

ಸತ್ಯಾಗ್ರಹಿಗಳಾದ ಶ್ರೀ ಬಡಿಯಡ್ಕ ಕಮಲಾಕ್ಷ ಪೈ, ಶ್ರೀ ಕುಂಬಳೆ ಮಾಧವ ಪೈ, ಶ್ರೀ ಕುಟಾಲ ಅಣ್ಣಪ್ಪ ಭಂಡಾರಿ, ಶ್ರೀ ಎ. ಲಕ್ಕಪ್ಪ ರೈ, ಶ್ರೀ. ಮೈಂದಪ್ಪ ರೈ, ಶ್ರೀ. ಬಿ. ಡಿ. ಸವೇರ್ಣ ಶ್ರೀ. ಶ್ರೀ. ನೀಲಕಂಠ ಪಾಠಕ, ಶ್ರೀ. ರಾಮಕೃಷ್ಣ ರಾವ್, ಶ್ರೀ. ವಿಠಲ ನಾರಾಯಣಾಚಾರ್ಯ, ಶ್ರೀ. ಕೊಂಚಾಡಿ ನಾರಾಯಣ ಶೆಣೈ, ಶ್ರೀ. ಪಡುಬಿದ್ರಿ ಕರಿಯಣ್ಣ ಶೆಟ್ಟಿ, ಶ್ರೀ. ಸೋಮನಾಥ ಗೋಖಲೆ ಮತ್ತು ಶ್ರೀ. ಬಿ. ಸದಾಶಿವ ಹೆಗ್ಡೆ—ಇವರನ್ನು ಭಟ್ಕಳದಲ್ಲಿ ಸೆರೆಹಿಡಿದು ಪ್ರತಿಯೊಬ್ಬರಿಗೆ ನಾಲ್ಕು ತಿಂಗಳ ಶಿಕ್ಷೆಯನ್ನು ವಿಧಿಸಲಾಯಿತು.

ಪೊಳಲಿಯಲ್ಲಿ ಸತ್ಯಾಗ್ರಹ:— ಪೊಳಲಿ ಶ್ರೀ ದುರ್ಗಾ ಪರಮೇಶ್ವರಿ ದೇವಾಲಯದ ಮುಂದುಗಡೆ ಶ್ರೀ ಎ. ಎಸ್. ಶೀನಪ್ಪ ಹೆಗ್ಡೆಯವರು ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಮಾಡಿದರು. ಕೈದಾಗಲಿಲ್ಲ.

ವರ್ಗಾವರ್ಗಿ:—ಒಂದು ತಿಂಗಳ ರಜಾ ಪಡೆದಿರುವ ಶ್ರೀ ಗಣೇಶ್, ತಹಶಿಲ್ದಾರ್, ಕಾಸರಗೋಡು ಇವರ ಸ್ಥಾನಕ್ಕೆ ಅಸಿಸ್ಟೆಂಟ್ ಕಮರ್ಶಿಯಲ್ ಆಫೀಸರರಾಗಿದ್ದ ಮಿ. ಸೋಲಮನ್ ಜೋಶ್ವರವರು ನೇಮಿಸಲ್ಪಟ್ಟಿದ್ದಾರೆ.

ಜಿಲ್ಲೆಯ ಕೃಷಿ ಇಲಾಖೆಯ ಅಧಿಕಾರ ಸ್ಥಾನಕ್ಕೆ ಶ್ರೀ. ಉಳ್ಳಾಲ ವಿಟ್ಠಲರಾಯರು ನೇಮಿಸಲ್ಪಟ್ಟಿದ್ದಾರೆ.

ಕುಂದಾಪುರದ ಸಬ್ ರಿಜಿಸ್ಟ್ರಾರ್, ಶ್ರೀ. ಬಿ. ರಾಮಕೃಷ್ಣ ರಾವ್, ಇವರು ಕಾರ್ಕಳಕ್ಕೂ, ಶ್ರೀ. ಬಿ. ಪುರುಷೋತ್ತಮ. ಅವರು 'ಕುಂದಾಪುರಕ್ಕೂ, ಕಾರ್ಕಳದ ಮಿ. ಬಿ. ಮೈಕಾ ಅವರು ಉಡುಪಿಗೂ ಸಬ್ ರಿಜಿಸ್ಟ್ರಾರರಾಗಿ ವರ್ಗಾಯಿಸಲ್ಪಟ್ಟಿರುವರು.

ಮಂಗಳೂರು ಪಿ. ಡಬ್ಲ್ಯು. ಡಿ. ಆಫೀಸಿನ ಅಸಿಸ್ಟಾಂಟ್ ಇಂಜಿನಿಯರರಾಗಿ ಮಿ. ಇ. ಎ. ವಾಸ್ ಅವರು ನೇಮಕ ಹೊಂದಿರುವರು.

ಮೇ ಡೇ ದಿನಾಚರಣೆ:—ತಾ. ೧ ರಂದು ಮಂಗಳೂರಲ್ಲಿ ಕೂಲಿಗಾರ ಸಂಘಗಳ ಆಶ್ರಯದಲ್ಲಿ ಮೇ ಡೇ ದಿನಾಚರಣೆಯು ಜರಗಿತು.

ಕಯ್ಯೂರು ಪ್ರಕರಣದಲ್ಲಿ:—೫೫ ಜನರ ಬಂಧನ:—ಕಾಸರಗೋಡು ತಾಲೂಕಿನ ಕಯ್ಯೂರಿನಲ್ಲಿ ಒಬ್ಬ ಪೋಲೀಸನನ್ನು ಕೊಂದ ಪ್ರಕರಣದಲ್ಲಿ ತಾ. ೩೦ರ ವರೆಗೆ ೫೫ ಜನರನ್ನು ಬಂಧಿಸಲಾಗಿದೆ. ಅವರೆಲ್ಲರೂ ಕರ್ಷಕ ಸಂಘದ ಸದಸ್ಯರು. ೬೧ ಜನರ ಮೇಲೆ ಆಪಾದನೆಯಾಗಿದೆ.

ಸ್ಪೆಶಲ್ ಪೋಲೀಸರು ಬಂದು ಆ ಸ್ಥಳದಲ್ಲಿ ಜೋರಿನ ವಿಚಾರಣೆ ನಡೆಸುತ್ತಿದ್ದಾರೆ.

ಕೈಯ್ಯೂರು ಮತ್ತದರ ಆಸುಪಾಸಿನ ಗ್ರಾಮುಗಳಲ್ಲಿ ಈಗ ಪೋಲೀಸಿನವರದೇ ಅಧಿಕಾರವಾಗಿದೆಯೆಂದೂ, ಪೋಲೀಸ್ ಮೇಲಧಿಕಾರಿಗಳ ಗಮನಕ್ಕೆ ಬಾರದ ರೀತಿಯಲ್ಲಿ ಪೋಲೀಸ್ ಕಾನ್‌ಸ್ಟೇಬಲರುಗಳು ಜನರನ್ನು ಪೀಡಿಸಿ, ಹೆಂಗಸರು ಮಕ್ಕಳನ್ನು ಸಹ ಭಯಗೊಳಿಸುತ್ತಿದ್ದಾರೆಂದೂ, ಈ ವಿಚಾರದಲ್ಲಿ ಜಿಲ್ಲಾಧಿಕಾರಿಗಳಿಗೆ ಮೊರೆ ಹೋಗಿದೆಯೆಂದೂ ಅವರು ತಾವು ಈ ವಿಷಯವಾಗಿ ತನಿಖೆ ನಡೆಸುವುದಾಗಿ ಹೇಳಿರುವರೆಂದೂ ಗೊತ್ತಾಗಿದೆ.

ಜಿಲ್ಲಾ ಪತ್ರಿಕೋದ್ಯಮಿಗಳ ಸಂಘ:—ತಾ. ೨೬ನೇ ಪೂರ್ವಾಹ್ನ ೧೦.೩೦ ಘಂಟೆಗೆ ನೋಲಿನ ಸಂಘದ ಸಭೆಯು ಡಿ. ಸಿ. ಯಂ. ಶಾಲೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ. ಎಚ್. ಭೀಮರಾಯರ ಅಧ್ಯಕ್ಷತೆಯಲ್ಲಿ ಸೇರಿ, ಕೈಯ್ಯೂರು ಮತ್ತು ಅದರ ಆಸುಪಾಸಿನ ಹಳ್ಳಿಗಳಲ್ಲಿನ ಪ್ರಕೃತ ಪರಿಸ್ಥಿತಿಯನ್ನು ವಿಚಾರಿಸಬೇಕೆಂದೂ, ಸ್ಥಳೀಯ ಜವಾಬ್ದಾರಿ ಮನುಷ್ಯರಿಂದ ಹೇಳಿಕೆಗಳನ್ನು ಪಡೆಯಬೇಕೆಂದೂ ಅಗತ್ಯವಾದ ಸಹಾಯವನ್ನು ಸ್ಥಳೀಯ ಅಧಿಕಾರಿಗಳಿಂದ ಪಡೆಯಬೇಕೆಂದೂ ಠರಾವಾಯಿತು.

ಪೆರಡಾಲಿನಲ್ಲಿ ಸತ್ಯಾಗ್ರಹ:—ಶ್ರೀ. ಕೆ. ಟಿ. ಶಂಕರ, ಟೈಲರ್ ಇವರು ತಾ. ೩೦ರಂದು ಪ್ರಾತಃ ಘಂಟೆ ೯ಕ್ಕೆ ಶ್ರೀವದನ ಪರಮೇಶ್ವರ ದೇವಾಲಯದ ಮುಂದುಗಡೆಯಲ್ಲಿ ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಮಾಡಿದರು. ಇವರನ್ನು ಕೈದು ಮಾಡಲಿಲ್ಲ.

ಕಾರ್ಕಳದಲ್ಲಿ ಸತ್ಯಾಗ್ರಹ:— ಕಾರ್ಕಳ ಕೇಂದ್ರ ಕಾಂಗ್ರೆಸ್ ಕಮಿಟಿಯ ಸದಸ್ಯರಾದ ಶ್ರೀ. ಬಿ. ಸದಾಶಿವ ಹೆಗ್ಡೆಯವರು ಸತ್ಯಾಗ್ರಹಮಾಡಿದರು. ದಸ್ತಗಿರಿಯಾಗಲಿಲ್ಲ.

ಸತ್ಯಾಗ್ರಹ:—ತಾ. ೧೮-೪-೪೧ ರಂದು ಸಂಜೆ ೫ ಘಂಟೆಗೆ ಪಡುಬಿದ್ರಿ ಶ್ರೀ. ರಂಗನಾಥ ಪ್ರಭುಗಳು ಸತ್ಯಾಗ್ರಹ ಮಾಡಿ ಘೋಷಣೆಮಾಡಿ ಸತ್ಯಾಗ್ರಹ ಮಾಡಿದರು. ಕೈದಾಗಲಿಲ್ಲ.

ಮೂಡಬಿದ್ರೆ:— ಕಾಣೆಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ. ಶ್ರೀನಿವಾಸ ಪೈ, ಕಾರ್ಯದರ್ಶಿ ಶ್ರೀ. ಉಪೇಂದ್ರ ನಾಯಕ್ ಹಾಗೂ ಶ್ರೀ ಸುಬ್ರಾಯನ್ (ಸತ್ಯಾಗ್ರಹಿಗಳು) ಇದೇ ತಾ. ೨೦ರಂದು ಇಲ್ಲಿಗೆ ಬಂದಿದ್ದು ಸಾರ್ವಜನಿಕ ಸಭೆ ಜರಗಿಸಲಾಗಿತ್ತು.

ನಿಡ್ಲೆಯಲ್ಲಿ ಸತ್ಯಾಗ್ರಹ

ನಿಡ್ಲೆ ಗ್ರಾಮದ ಬೂಡು ಮಜ್ಜು ಎಂಬಲ್ಲಿ ಮಾಡಂಕಲ್ಲು ಸುಬ್ರಾಯ ತೆಬ್ಬಾರರು ಕಳೆದ ತಾ. ೧೬ನೇ ಸಾಯಂ. ಯುದ್ಧವಿರುದ್ಧ ಘೋಷಣೆಯನ್ನು ಮಾಡಿ ಸತ್ಯಾಗ್ರಹ ಮಾಡಿದರು. ಅವರ ದಸ್ತಗಿರಿಯಾಗಲಿಲ್ಲ.

ಸತ್ಯಾಗ್ರಹಿಗಳು ಆರೋಗ್ಯ ಹೊಂದುತ್ತಿದ್ದಾರೆ:—ವಿಟ್ಲದ ಶ್ರೀ ಎ. ಜಿ. ಭಟ್ ಆಲಂಗಾರರವರು ಬಾರಕೂರಲ್ಲಿ ಅಸ್ವಸ್ಥರಾದವರು ಸ್ಥಳೀಯ ಸುಪ್ರಸಿದ್ಧ ವೈದ್ಯರಾದ ಕೆ. ಟಿ. ಎಸ್. ನಂಬಿಯಾರರಿಂದ ಔಷಧೋಪಚಾರದಲ್ಲಿ ಗುಣವನ್ನು ಹೊಂದುತ್ತಿದ್ದಾರೆ. ಶ್ರೀ ಭಟ್ಟರು ೭.೮ ದಿನಗಳಿಂದ ಜ್ವರ ಬಿಟ್ಟು ಗುಣ ಹೊಂದುತ್ತಿದ್ದಾರೆ. ಆದರೂ ಸರಿಯಾದ ವಿಶ್ರಾಂತಿ ಹೊಂದಲು ೭ ೮ ದಿನಗಳು ಬೇಕಾದೀತು. ಬಾರಕೂರು ಶ್ರೀ ಬಿ. ವೆಂಕಟೇಶ ಕಾಮತರು ಶ್ರೀ ಭಟ್ಟರಿಗೆ ಬೇಕಾದ ಸಕಲ ಸಲಕರಣೆ ಉಪಚಾರಗಳನ್ನು ಮಾಡುತ್ತಿದ್ದಾರೆ. ಶ್ರೀ ಕಾಮತರವರ ಮತ್ತು ಶ್ರೀ ನಂಬಿಯರರ ಉದಾರ ಬುದ್ಧಿ ಮತ್ತು ಕರ್ತವ್ಯ ನಿಷ್ಠೆಗಳನ್ನು ಹೊಗಳತಕ್ಕದಾಗಿದೆ.

ಮುಂಡ್ಕೂರಿನಲ್ಲಿ ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರ ಭಾಷಣ:—ಮುಣ್ಣಗುತ್ತು ಶ್ರೀ. ಶಿವಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು. ಸತ್ಯಾಗ್ರಹಿ ಶ್ರೀಯುತ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಯುದ್ಧ ವಿರುದ್ಧ ಘೋಷಣೆಯನ್ನು ಹೇಳಿ, ಅದನ್ನು ಹೇಳುವ ಕಾರಣವನ್ನು ಸ್ಪಷ್ಟಪಡಿಸುತ್ತಾ ಭಾಷಣವಿತ್ತರು. ಅಧ್ಯಕ್ಷರು ಅವರ ಭಾಷಣವನ್ನು ಸಮರ್ಥಿಸಿ ಒಳ್ಳೆಯ ಮಾತುಗಳನ್ನಾಡಿ ಸ್ವಸಂತೋಷದಿಂದ ಖಾದಿಯ ಪ್ರತಿಜ್ಞೆಯನ್ನು ಕೈಗೊಂಡರು.

ರಾಮಕುಂಜ:—ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠ ಶಾಲೆಯ ಸಹಾಯಾಧ್ಯಾಪಕರಾದ ಶ್ರೀ. ಮರಕೂರು ಕೃಷ್ಣಾಚಾರ್, ಶಿರೋಮಣಿ ಇವರು ಬೆಯೋಧ್ಯೆಯ ಶ್ರೀ ಸಂಸ್ಕೃತ ಕಾರ್ಯಾಲಯಕ್ಕೆ ಕೆಲತಿಂಗಳುಗಳಿಂದ ಆಗಾಗ್ಗೆ ಬರೆದು ಕಳುಹಿಸುತ್ತಿದ್ದ ಸಂಸ್ಕೃತ ಲೇಖನಗಳ ವಿಷಯದಲ್ಲಿ ಸದ್ರಿ ಕಾರ್ಯಾಲಯದವರು ಸಂತುಷ್ಟರಾಗಿ ತಮ್ಮ ಸಮಿತಿಯ ನಿರ್ಣಯ ಪ್ರಕಾರ ಸದ್ರಿ ಆಚಾರ್ಯರಿಗೆ "ಸಂಸ್ಕೃತ ಸಾಹಿತ್ಯ ಭೂಷಣ" ಎಂಬ ಬಿರುದನ್ನು ದಯಪಾಲಿಸಿರುತ್ತಾರೆಂದೂ, ಈ ಜಿಲ್ಲೆಯಲ್ಲಿ ಇಂತಹ ಬಿರುದನ್ನು ಪಡೆದವರು ಇವರೇ ಮೊದಲನೆಯವರೆಂದೂ, ಈ ವಿಷಯದ ಅಭಿನಂದನಾರ್ಥವಾಗಿ ಸದ್ರಿ ಶಾಲೆಯ ಪ್ರಧಾನಾಧ್ಯಾಪಕರಾದ ಶ್ರೀ. ಎಸ್. ಶ್ರೀನಿವಾಸ ಶಾಸ್ತ್ರಿ ಮಹೋಪಾಧ್ಯಾಯ ಮತ್ತು ಶಿರೋಮಣಿ ಇವರ ಅಧ್ಯಕ್ಷತೆಯ ಸಭೆ ಜರಗಿತ್ತೆಂದೂ ತಿಳಿಸುವರೆ ತುಂಬ ಸಂತೋಷವಾಗುತ್ತದೆ.

ಕಾಯರ್ಾಡಿನಲ್ಲಿ ಸತ್ಯಾಗ್ರಹ:— ಕಳೆದ ತಾ. ೩೧ರಂದು ಕಾಯ್ರಾಡು ಮೈದಾನಿನಲ್ಲಿ ಶ್ರೀ. ಪಿ. ಯಸ್. ಕೃಷ್ಣ ಭಟ್ಟರು, ಯುದ್ಧ ವಿರುದ್ಧ ಸತ್ಯಾಗ್ರಹ ಮಾಡಿದರು. ಬಂಧಿತರಾಗಲಿಲ್ಲ.

ಪಡುತೋನ್ಸೆ:— ಇಲ್ಲಿಯ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿಗಳು ಕಳೆದ ತಾ. ೨೪-೪-೪೧ರಲ್ಲಿ ಶ್ರೀ. ಟಿ. ತಿಮ್ಮಪ್ಪ ಹೆಗ್ಗಡೆ ಬಿ. ಓ. ಎಲ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹಳೆಯ ವಿದ್ಯಾರ್ಥಿಗಳ ಸಂಘವೊಂದನ್ನು ಸ್ಥಾಪಿಸಿದರು.

ಕಾರ್ಕಳ

ಪ್ಲೇಗ್ ಲೀಡರುಗಳ ತರಬೇತಿ: ಹಿಂದುಸ್ಥಾನ ಸ್ಕೌಟಿಗೆ ಸಂಬಂಧಪಟ್ಟ ಪ್ಲೇಗ್ ಲೀಡರುಗಳ ಒಂದು ತರಬೇತಿ ಕೇಂದ್ರವು ಇಲ್ಲಿ ತಾ. ೨೫ರ ದಿನ ಶ್ರೀಮತಿ ರಮಾಬಾಯಿ ಮಾಧವರಾಯರಿಂದ ತೆರೆಯಲ್ಪಟ್ಟು ಐದು ದಿನಗಳ ತನಕ ನಡೆಯಿತು. ಒಟ್ಟು ೧೭ ಮಂದಿ ತರಬೇತಿ ಪಡೆದಿದ್ದಾರೆ.

ಬಾರಕೂರು

ಸತ್ಯಾಗ್ರಹ:—ತಾ. ೨೬ರಂದು ಹನೆಹಾಡಿ ಪಡುಮನೆ ಗೋವಿಂದ ಶೆಟ್ರು (ಬಾರಕೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಮತ್ತು ಖಜಾನ್ಜಿ) ಸತ್ಯಾಗ್ರಹವನ್ನು ಬಾರಕೂರು ಮಾರ್ಕೆಟು ಬಳಿಯಲ್ಲಿ ಮಾಡಿದರು. ಸತ್ಯಾಗ್ರಹ ಘೋಷಣೆ ಮಾಡುವ ಮೊದಲು ಶ್ರೀ. ಬಿ. ಅಂತೈ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಸಭಿಕರಲ್ಲಿ ಸುಮಾರು ೪೦ ಮಂದಿ ಖಾದಿ ಪ್ರತಿಜ್ಞೆ ಮಾಡಿದರು. ಶ್ರೀ ಶೆಟ್ರು ಧರ್ಮಪತ್ನಿ ಶ್ರೀ. ಸೌ. ಸಂಜೀವಿ ಬಾಯಿಯವರು ಆರತಿ ಅಕ್ಷತೆಯನ್ನು ಮಾಡಿ ಪತಿಯನ್ನು ವಂದಿಸಿದೊಡನೆ ಸಭಿಕರು ಪುಷ್ಪಮಾಲೆಯನ್ನು ಹಾಕಲು ಪ್ರಾರಂಭಿಸಿ ಸರಿಯಾದ ಸಮಯಕ್ಕೆ ಶ್ರೀ ಗೋವಿಂದ ಶೆಟ್ರು ಸತ್ಯಾಗ್ರಹ ಘೋಷಣೆಮಾಡಿದರು. ಆ ಕೂಡಲೆ ನೆರೆದ ಸಭಿಕರು ಜೈಕಾರ ಹಾಕಿ ಶ್ರೀ ಶೆಟ್ರು ಹಿಂದೆ ಹೊರಟರು. ಬ್ರಹ್ಮಾವರ ಪೋಲೀಸ್ ಸ್ಟೇಶನ್ ಅಧಿಕಾರಿಗಳು ಹಾಜರಿದ್ದರೂ ಸತ್ಯಾಗ್ರಹಿಯನ್ನು ಕೈದುಮಾಡಲಿಲ್ಲ.

ಕರ್ನಾಟಕ

ಎಮರಿ ನಿಷೇಧ ದಿನಾಚರಣೆ

೫—೫—೪೧:—ಭಾರತ ಮಂತ್ರಿಗಳಾದ ಎಮರಿಯವರು ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಪರಿಸ್ಥಿತಿಯನ್ನು ಕುರಿತು ಅಪಪ್ರಚಾರವಾಗುವಂಥ ಭಾಷಣವನ್ನು ಮಾಡಿರುವುದರಿಂದ ಆ ಭಾಷಣದಲ್ಲಿ ಅಡಕವಾಗಿರುವ ಅಪಸಿದ್ಧಾಂತಗಳನ್ನು ಖಂಡಿಸುವ ಕುರಿತು ಕರ್ನಾಟಕ ಪ್ರಾಂತದ ಎಲ್ಲ ಭಾಗಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತಾ. ೫—೫—೪೧ನೇ (ಸೋಮವಾರ) ದಿನವನ್ನು ಎಮರಿ ನಿಷೇಧ ದಿನವೆಂದು ಆಚರಿಸಲು, ಆ ದಿವಸ ಸಾರ್ವಜನಿಕ ಸಭೆಗಳನ್ನು ಸೇರಿಸಿ ಆ ಸಭೆಗಳಲ್ಲಿ ಮಹಾತ್ಮಾ ಗಾಂಧಿಯವರು ಎಮರಿಯವರಿಗೆ ಉತ್ತರರೂಪವಾಗಿ ಹೊರಡಿಸಿದ ಪ್ರಕಟನೆಯನ್ನು ತಿಳಿಸಿ ಹೇಳುವುದು.

ಈ ಪ್ರಕಾರ ಸಭೆಗಳಾದ ವರದಿಯನ್ನು ಪ್ರಾಂತೀಯ ಕಚೇರಿಗೆ ಆದಷ್ಟು ಬೇಗನೆ ಬರೆದು ತಿಳಿಸಬೇಕು. ಜಿಲ್ಲಾ ಸಮಿತಿಗಳು ತಮ್ಮ ಜಿಲ್ಲೆಯಲ್ಲಿ ಎಷ್ಟು ಕಡೆಗೆ ಈ ಸಭೆಗಳಾದವೆಂಬ ಬಗ್ಗೆ ವಿವರವಾದ ವರದಿಯನ್ನು ಕಳಿಸಬೇಕು ಎಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ದತ್ತಾತ್ರೇಯ ಕರಮರಕರವರು ತಿಳಿಸುತ್ತಾರೆ.

ಸಾರ್ವಜನಿಕ ವಿಶ್ವಾಸವೇ

"ಓರಿಯಂಟಲ್"ನ್ನು

ಹಿಂದೂದೇಶದ ಪ್ರಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಚಾಲ್ತಿಯಲ್ಲಿರುವ ಪೋಲ್ಸಿಗಳು	31-12-3½	ರೂ. 79½ ಕೋಟಿಗಿಂತ ಮಿಕ್ಕಿವೆ.
ಫಂಡುಗಳು	,,	ರೂ. 25½ ,, ,,
ವಾರ್ಷಿಕ ಆದಾಯ	,,	ಸುಮಾರು ರೂ. 4¾ ಕೋಟಿಗೆ

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವ ಪ್ರೊಸ್ಪೆಕ್ಟಸಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅ ದಿ ಇನ್‌ಸ್ಪೆಕ್ಟರ್

ಸೌತ್ ಪರೇಡ್, ಥ ಕಾರ್ನಾಡ್ ಸದಾಶಿವರಾವ್ ರೋಡ್,

ಬೆಂಗಳೂರು. ವಾ ಮಂಗಳೂರು.

ಹೆಡ್ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು.

ಗ್ರೀಸಿನಲ್ಲಿಯೂ ಜರ್ಮನರು ಜಯಶಾಲಿಗಳಾದರು. ಬ್ರಿಟಿಷ್ ಸೈನ್ಯವು ಗ್ರೀಸನ್ನು ಬಿಟ್ಟು ಹೊರಟಿತು. ಇಟಲಿ ಜರ್ಮನ್ ಸೈನ್ಯಗಳು ಈಜಿಪ್ಟಿನ ಗಡಿ ದಾಟಿದವೆಂದು ತಿಳಿದಿದೆ. ಟರ್ಕಿಯು ಜರ್ಮನಿಯೊಡನೆ ಒಂದು ಒಪ್ಪಂದವಮಾಡಿಕೊಂಡಿರುವುದೆಂದು ಸುದ್ದಿಯಿದೆ. ಫ್ರಾನ್ಸು ತಟಸ್ಥವಾಗಿರುವುದು ಲೇಸೆಂದು ಅಮೇರಿಕವು ಎಚ್ಚರಿಸಿದೆಯಾಗಿ ತಿಳಿದಿದೆ. ಸ್ವಿಝರ್ಲೆಂಡಿಗೆ ರೋಮಿನಿಂದ ಎಚ್ಚರಿಕೆ ಕೊಡಲಾಗಿದೆ.

ಟರ್ಕಿ-ರಶ್ಯಗಳ ಕುರಿತು ಹಿಟ್ಲರನ ವಿಚಾರವೇನು?

ಜರ್ಮನಿಯು ಕೆಲವು ಬೇಡಿಕೆಗಳನ್ನು ಟರ್ಕಿಗೆ ಮಾಡಿಕೊಳ್ಳಬಹುದೆಂದು ಸುದ್ದಿಯಿದೆ. ಟರ್ಕಿ ಮತ್ತು ರಶ್ಯಗಳಲ್ಲಿ ವಿಚಾರವಿನಿಮಯ ನಡೆಯಬೇಕೆಂದೂ ಸೂಚನೆಯುಂಟಾಗಿದೆ.

ಹಿಟ್ಲರನು ಇನ್ನು ಮುಂದೆ ಫ್ರೆಂಚ್ ಮತ್ತು ಸ್ಪೈನ್ ಆಫ್ರಿಕೆಗಳಲ್ಲಿ ಕೆಲವು ಸೈನ್ಯ ಕೇಂದ್ರಗಳನ್ನು ಪಡೆಯಲು ಪ್ರಯತ್ನಿಸಬಹುದೆಂದೂ, ಆ ಸೈನ್ಯ ಕೇಂದ್ರಗಳಿಂದ ಬ್ರಿಟಿಷ್ ನೌಕಾಪಡೆಯನ್ನು ಗೊತ್ತಿಗೆ ಹಚ್ಚಬೇಕೆಂದು ಆತನ ಇಚ್ಛೆಯಿರುವುದೆಂದೂ ಊಹಿಸಲಾಗಿದೆ ಹಿಟ್ಲರನು ಟರ್ಕಿ ಮತ್ತು ರಶ್ಯಗಳ ಮೇಲೆ ಒತ್ತಾಯಪಡಿಸುವನೆಂಬುದು ಕೇವಲ ಒಂದು ತರ್ಕವಾದರೂ ಬರಿ ಊಹನೆ ಮಾತ್ರವಲ್ಲ. ಜರ್ಮನಿಯು ಟರ್ಕಿ ರಶ್ಯಗಳ ವಿಷಯ ಯಾವ ಬೇಡಿಕೆಗಳನ್ನು ಮುಂದೆ ಮಾಡುವುದೆಂದು ಹೇಳಬರುವುದಿಲ್ಲ

ಜರ್ಮನರ ಮುಂದೊತ್ತುವಿಕೆಯಿಂದ ಟರ್ಕಿಯಲ್ಲಿ ವಿಭ್ರಮ
ಹಡಗ ವ್ಯವಹಾರಕ್ಕೆ ತಡೆ?

ಟರ್ಕಿಯ ಅಧ್ಯಕ್ಷರಾದ ಇನೋನುರವರು ಸ್ಮರ್ನಾಕ್ಕೆ ಹೋಗಿರುವರು. ಡಾರ್ಡನಲ್ಸ್‌ನ ಮಾರ್ಗವನ್ನು ನಿಯಂತ್ರಣಗೊಳಿಸುತ್ತಿರುವ ಗ್ರೀಕ್ ದ್ವೀಪಗಳನ್ನು ಜರ್ಮನರು ಅತ್ಯಂತ ಸುಲಭ ರೀತಿಯಿಂದ ವಶಪಡಿಸಿಕೊಂಡುದ್ದಕ್ಕಾಗಿ ಟರ್ಕಿಯಲ್ಲಿ ಬಹಳ ವಿಭ್ರಮವುಂಟಾಗಿರುತ್ತದೆ. ಇನ್ನು ಮುಂದೆ ದಕ್ಷಿಣ ಟರ್ಕಿಯ ಬಂದರಗಳಿಂದಲೇ ಹಡಗ ಸಂಚಾರವು ನಡೆಯಬೇಕಾಗಿದೆ ಪರಿಸ್ಥಿತಿ ಹೀಗಾದರೆ ಮುಂದೆ ಇರಾಕಿನ ಮುಖಾಂತರ ಎಲ್ಲಾ ವ್ಯವಹಾರ ನಡೆಯಬೇಕಾಗುವುದು. ಇರಾಕಿನಲ್ಲಿ ಬ್ರಿಟಿಷ್ ಸೈನಿಕರು ಬಂದದ್ದು ಬಹಳ ಮಹತ್ವದ ವಿಚಾರವಾಗಿದೆ. ಈಜಿಪ್ಟಿನ ಕಡೆಗೆ ಮುನ್ನುಗ್ಗುವ ಜರ್ಮನರು ಪೂರ್ವಭೂಮಧ್ಯ ಸಮುದ್ರದಲ್ಲಿರುವ ಇಟಲಿಯ ರಾಣಿಗಳಾದ ಡೊಡೆಕನೀಸ್ ದ್ವೀಪಗಳ ಮುಖಾಂತರ ಟರ್ಕಿಯನ್ನು ದಾಟಲು ಪ್ರಯತ್ನಿಸಬಹುದೆಂದು ಹಲವರು ಹೇಳುತ್ತಿರುವರು.

ಬ್ರಿಟಿಷ್ ಸೈನ್ಯ ಆಫ್ರಿಕಕ್ಕೆ ಮರಳಿತು

ಗ್ರೀಸ್ ಯುದ್ಧದಲ್ಲಿ ತೊಡಗಿದ್ದ

ಬ್ರಿಟಿಷ್ ಸೈನ್ಯವು ಗ್ರೀಸನ್ನು ಬಿಟ್ಟು ಹಿಂತೆರಳಿತು!

ಗ್ರೀಕರು ಶಸ್ತ್ರವನ್ನು ಕೆಳಗಿಟ್ಟರು

ಈಜಿಪ್ತಿನ ಗಡಿಯನ್ನು ಅತಿಕ್ರಮಿಸಿರುವರೆ?
ಸ್ವಿಜರ್ಲೆಂಡಿಗೆ ಹೆದರಿಕೆ ಹುಟ್ಟಿಸಲಾಗಿದೆ

ಬ್ರಿಟಿಷ್ ಸೈನ್ಯವು ತನ್ನ ಸಾಮಾಗ್ರಿಯೊಡನೆ ಆಫ್ರಿಕಕ್ಕೆ ಮರಳಿರುವುದಾಗಿ ತಿಳಿದಿದೆ.

ಗ್ರೀಕರ ಸೋಲಿಗೆ ಕಾರಣವೇನು?
ಪ್ರಚಂಡ ಶತ್ರುದಲವು ಎದುರಾಯಿತು

ಗ್ರೀಕರು ಸೋತು ಹೋಗಲು ಅವರು ಧೈರ್ಯಗೆಟ್ಟದ್ದು ಕಾರಣವಲ್ಲ; ಎರಡು ಸಾಮ್ರಾಜ್ಯಗಳ ೧೫ ಕೋಟಿ ಸೈನ್ಯವನ್ನು ಎದುರಿಸಬೇಕಾದುದೇ ಇದರ ಕಾರಣವಾಗಿದೆ ಎಂದು ಗ್ರೀಕ್ ಯುದ್ಧ ಮಂತ್ರಿ ಮಂಡಲದ ಪ್ರಕಟಣೆ ಸಾರಿದೆ.

ಪಶ್ಚಿಮ ಭೂಮಧ್ಯ ಸಮುದ್ರದ ಸ್ವಾಮಿತ್ವ ಸಂಪಾದನೆಯು ಜರ್ಮನಿಯ ಗುರಿಯೆ?

ಹಿಟ್ಲರನು ಪಶ್ಚಿಮಭೂಮಧ್ಯ ಸಮುದ್ರದ ಒಡೆತನ ಸಂಪಾದನೆಯನ್ನು ತನ್ನ ಉದ್ದೇಶವಾಗಿಟ್ಟು ಕೊಂಡಿರುವನೆಂದು ಲಂಡನಿನ ವಾದಕೀಯ ವಾರ್ತಾದಾರನ ಹೇಳಿಕೆಯಾಗಿರುತ್ತದೆ ರಶ್ಯದೊಡನೆ ಜರ್ಮನಿಯು ಒಂದು ಹೊಸ ಒಪ್ಪಂದವನ್ನು ಮಾಡುವುದೆಂದೂ ಆತನ ಹೇಳಿಕೆಯಿರುತ್ತದೆ.

ಟರ್ಕಿ ಅಧ್ಯಕ್ಷರ ಗುಪ್ತ ಪ್ರಯಾಣ

ಟರ್ಕಿಯ ಅಧ್ಯಕ್ಷರಾದ ಇನೋನು ಇವರ ಕಳೆದ ಶುಕ್ರವಾರ ರಾತ್ರಿ ಎಲ್ಲಿಗೋ ಗುಪ್ತ ಪ್ರಯಾಣಮಾಡಿರುವರೆಂದು ತಿಳಿದಿದೆ.

ಬೇಗನೇ ಮಹತ್ವದ ಘಟನೆಗಳು ನಡೆಯುವವು

ಸದ್ಯದಲ್ಲಿಯೇ ನಾವು ಮಹತ್ವದ ಘಟನೆಗಳನ್ನು ಕಾಣಲಿದ್ದೇವೆ ಇದರಲ್ಲಿ ಬ್ರಿಟಿಷರು ನಿಸ್ಸಂಶಯವಾಗಿ ತಮ್ಮ ಉತ್ತಮ ಸಾಮರ್ಥ್ಯವನ್ನು ತೋರಿಸುವರು ಎಂದು ಈಜಿಪ್ತ ಗಡಿನಾಡಿನ ಸೈನ್ಯಗಳ ಕಮಾಂಡರರು ಹೇಳಿದರು

ಬರ್ಮಾ ರಸ್ತೆಗೆ ಧಾಳಿ

ಬರ್ಮಾ ರಸ್ತೆಯ ಮೇಲೆ ಜಪಾನೀ ವಿಮಾನಗಳು ಧಾಳಿ ನಡೆಸಿದವೆಂದು ಫ್ರೆಂಚ್ ಇಂಡೋ ಚೈನದಲ್ಲಿರುವ ಜಪಾನೀ ಎಕ್ಸ್‌ಪೆಡಿಶನರಿ ಸೈನ್ಯದ ಹೆಡ್ ಕ್ವಾರ್ಟರ್ಸಿನ ವರದಿ ತಿಳಿಸುತ್ತದೆ

ಹೈಲಿಸೆಲಾಸಿಯವರ ಸಿಂಹಾಸನಾರೋಹಣ ತ್ವರಿತದ ವ್ಯವಸ್ಥೆ

ಅಬಿಸೀನಿಯದ ಚಕ್ರವರ್ತಿ ಹೈಲ್ ಸೆಲಾಸಿಯವರು ಪುನಃ ಸಿಂಹಾಸನವನ್ನು ಏರಲು ವ್ಯವಸ್ಥೆಗಳು ಬಹಳ ತ್ವರಿತವಾಗಿ ಆಗುತ್ತಿವೆಯೆಂದು ಲಂಡನಿನಿಂದ ಸುದ್ದಿಯಿದೆ.

ಅಥೆನ್ಸ್ ನಗರವನ್ನು ಜರ್ಮನ್ ಸೈನ್ಯಗಳು ಪ್ರವೇಶಿಸಿದವು
ಗ್ರೀಕ್ ಅರಮನೆ ಮೇಲೆ ಜರ್ಮನ್ ಧ್ವಜ

ಬ್ರಿಟಿಷ್ ಸೈನ್ಯ ಹಿಂತಿರುಗುತ್ತಿದೆ.

ಜರ್ಮನ್ ಮೋಟರ್ ಸಾಯ್‌ಕಲ್ ಸೈನ್ಯದ ಮೊದಲನೆಯ ಗುಂಪು ಅಥೆನ್ಸ್ ನಗರವನ್ನು ಹೊಕ್ಕು ಗ್ರೀಕ್ ಅರಮನೆಯ ಮೇಲೆ ಜರ್ಮನರ ಸ್ವಸ್ತಿಕ ಧ್ವಜವನ್ನು ಊರಿತು.

ಗ್ರೀಸಿನಲ್ಲಿದ್ದ ಬ್ರಿಟಿಷ್ ಸೈನ್ಯಗಳು ತಮ್ಮ ಯುದ್ಧ ಸಾಮಾಗ್ರಿಗಳೊಡನೆ ಅಲ್ಲಿಂದ ಮರಳಿರುವದಾಗಿ ತಿಳಿದು ಬರುತ್ತವೆ.

ಯುದ್ಧವಾದಂದಿನಿಂದ ಮೊದಲಾಗಿ ಬ್ರಿಟನಿನ ಮೇಲೆ ನಾಜೀ ಧಾಳಿ
ಸಾವಿರ ವಿಮಾನಗಳುರುಳಿದವು

ಇಂದಿನ ಯುದ್ಧವು ಪ್ರಾರಂಭವಾದಂದಿನಿಂದ ಬ್ರಿಟಿಷ್ ಫಿರಂಗಿಗಳು ಒಂದು ಸಾವಿರ ಶತ್ರು ವಿಮಾನಗಳನ್ನು ಹೊಡೆದುರುಳಿಸಿದವೆಂದು ತಿಳಿದುಬರುತ್ತದೆ.

ಇಂಗ್ಲೆಂಡಿನ ರಕ್ಷಣೆಯು ಬಹುಮುಖ್ಯವು

ಇಂಗ್ಲೆಂಡಿನ ರಕ್ಷಣೆಯೇ ಈಗಿನ ಈ ಈ ಯುದ್ಧಕಾಲದಲ್ಲಿ ಬಹುಮುಖ್ಯವಾದುದೆಂಬುದಾಗಿ ಅಧ್ಯಕ್ಷ ರೂಸ್‌ವೆಲ್ಟರ ಅಭಿಪ್ರಾಯವಾಗಿದೆ.

ಗ್ರೀಸಿನಿಂದ ಬ್ರಿಟಿಷ್ ಸೈನ್ಯ ಹಿಂತೆರಳಿತು

ಗ್ರೀಸು ಶರಣಾದ ಬಳಿಕ, ಬ್ರಿಟಿಷ್ ಸೈನ್ಯವು ಅಲ್ಲಿಂದ ಹಿಂತೆರಳಿತೆಂದು ತಿಳಿಯುತ್ತದೆ.

ಫ್ರಾನ್ಸಿಗೆ ಅಮೇರಿಕದ ಎಚ್ಚರಿಕೆ

ಫ್ರಾನ್ಸು ತಟಸ್ಥವಾಗಿ ಉಳಿಯುವಂತೆ ಅಮೇರಿಕವು ಎಚ್ಚರಿಸಿದೆಯೆಂದು ತಿಳಿದಿದೆ.

ಸ್ವಿಜರ್ಲೆಂಡಿಗೆ ಬೆದರಿಕೆ

ರೋಮಿನ ರೇಡಿಯೊದಿಂದ ಸ್ವಿಜರ್ಲೆಂಡಿಗೆ ಬೆದರಿಕೆ ಹುಟ್ಟಿಸುವಂತೆ ಸುದ್ದಿ ಬಂದಿದೆ.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ

ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು— ಕೈೂರನೇಷನ್ ಟ್ರೇಡಿಂಗ್ ಕೊ.

ಮಹಮ್ಮದಾಲಿ ರೋಡ್, ಮಂಗಳೂರು.

★ ಅಮೆರಿಯವರ ಭಾಷಣವನ್ನು ಎಲ್ಲರೂ ನಿಷೇಧಿಸಿದ್ದಾರೆ! ★

ಭಾರತ ಸಚಿವರಾದ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಕೊಟ್ಟ ಭಾಷಣವು ಮಹಾತ್ಮರಿಂದ ಮೊದಲ್ಗೊಂಡು ಸರ್ವರನ್ನೂ ಅತೃಪ್ತಿ, ಅಶಾಂತಿ, ಉದ್ವೇಗಮಗ್ನರನ್ನಾಗಿ ಮಾಡಿದೆ. ಭಾರತದ ಪರಿಸ್ಥಿತಿಯ ಕುರಿತು ಅವರ ಭಾಷಣದಲ್ಲಿ ಏನೊಂದೂ ಆಶಾದಾಯಕ ಸೂಚನೆಯಿರುವುದಿಲ್ಲ. ಸತ್ಯಾಗ್ರಹವನ್ನು ಹಿಂದೆಗೆದು ಅಧಿಕಾರ ಸ್ವೀಕರಿಸಬೇಕೆಂದು ಶ್ರೀನಿವಾಸ ಶಾಸ್ತ್ರಿಗಳು ದೀರ್ಘವಾದ ಹೇಳಿಕೆಯೊಂದನ್ನು ಕೊಟ್ಟಿದ್ದಾರೆ. ಮುಂಬಯಿ, ಅಹಮ್ಮದಾಬಾದ್ ಕಾನ್‌ಪುರಗಳಲ್ಲಿ ದಂಗೆಯೆದ್ದಿದೆ. ಕೆಲವು ಕಡೆಗಳಲ್ಲಿ ಪರಿಸ್ಥಿತಿಯು ಶಾಂತವಾಗಿದೆಯೆಂದು ತಿಳಿಯುತ್ತದೆ. ನೆಹರು ಪುತ್ರಿ ಇಂದಿರಾ ತಂದೆಯನ್ನು ಸೆರೆಮನೆಯಲ್ಲಿ ಸಂದರ್ಶಿಸಿದರು.

ಸಪ್ರುಗಳಿಗೂ ನಿರಾಶೆಯುಂಟಾಗಿದೆ!

ಅಧಿಕಾರ ಸ್ವೀಕರಿಸಬೇಕೆಂದು ಕಾಂಗ್ರೆಸಿನೊಡನೆ ಶಾಸ್ತ್ರಿಗಳ ಬಿನ್ನಹ

ಇಂದಿರಾ ನೆಹರು ಜವಾಹಿರಲಾಲರನ್ನು ಸಂದರ್ಶಿಸಿದರು.

ಭಾರತದಲ್ಲಿ ಮೋಟರ ಕೈಗಾರಿಕೆ ಬಗ್ಗೆ ಸರಕಾರವು ಉದಾಸೀನವಾಗಿದೆ

ಭಾರತದಲ್ಲಿ ಮೋಟರ್ ಕೈಗಾರಿಕೆಯ ಜನಕರಾದ ವಾಲಚಂದ ಹೀರಾಚಂದರು ಪಾರ್ಲಿಮೆಂಟ್ ಸದಸ್ಯರಾದ ಸೊರೆನ್ಸನರೇ ಮೊದಲಾದವರಿಗೆ ಸರಕಾರವು ಅದಕ್ಕೆ ಸಾಕಷ್ಟು ಪ್ರೋತ್ಸಾಹ ಕೊಡುವುದಿಲ್ಲವೆಂಬ ಕುರಿತು ಒಂದು ಮೊರೆ ಕಳುಹಿಸಿರುವರಾಗಿ ತಿಳಿದಿದೆ.

ಇಂದಿರಾ ಜವಾಹಿರರ ಭೇಟಿ

ಪಂಡಿತ ನೆಹರುಗಳನ್ನು ಅವರ ಪುತ್ರಿ ಕುಮಾರಿ ಇಂದಿರಾ ನೆಹರುಗಳು ಡೆಹರಾ ಡೂನ್ ಜೈಲಿನಲ್ಲಿ ಕಂಡು ದೀರ್ಘಕಾಲದ ತನಕ ಸಂಭಾಷಣೆ ನಡೆಸಿದರು.

ಕಾಂಗ್ರೆಸು ತಿರಿಗಿ ಅಧಿಕಾರ ವಹಿಸುವಂತೆ ಬಿನ್ನಹ

ಶ್ರೀನಿವಾಸ ಶಾಸ್ತ್ರಿಗಳಿಂದ

ಈ ಗಂಡಾಂತರ ಸಮಯದಲ್ಲಿ ತಿರಿಗಿ ಬಂದು ನಮ್ಮನ್ನು ರಕ್ಷಿಸಿರಿ ಎಂದು ನಾವು ಕಾಂಗ್ರೆಸಿನೊಡನೆ ಬಿನ್ನವಿಸುವೆವು. ದಿನದಿನದ ಪರಿಸ್ಥಿತಿ ಬದಲಾಗುತ್ತಿರುವುದರಿಂದ, ಸುವ್ಯವಸ್ಥೆಯಿಂದ ರಾಜ್ಯಭಾರ ನಡೆಸಲು ತಿರಿಗಿ ಅಧಿಕಾರ ವಹಿಸುವುದು ಅವಶ್ಯವಿದೆ. ಕಾಂಗ್ರೆಸಿನವರನ್ನು ತಿರಿಗಿ ಕರೆಸುವ ಬಗ್ಗೆ ಯೋಚನೆ ಮಾಡಬೇಕಾಗಿ ಸರಕಾರದವರು ಅವರನ್ನು ಬಂಧವಿಮೋಚನೆ ಮಾಡಬೇಕು, ಎಂದು ರೈಟ್ ಆನರೇಬಲ್ ಶ್ರೀನಿವಾಸ ಶಾಸ್ತ್ರಿಗಳು ಹೇಳಿದರು.

ಕಾನ್‌ಪುರದಲ್ಲಿ ದಂಗೆ

ಕಾನ್‌ಪುರದಲ್ಲಿಯೂ ದಂಗೆಯೆದ್ದಿದೆ. ಒಬ್ಬನು ಮರಣಹೊಂದಿರುವನು. ಕೆಲವರಿಗೆ ಗಾಯಗಳಾಗಿವೆ.

ಬ್ರಿಟಿಷ್ ಧೋರಣೆ ಬದಲಾಗದೆ ಯಾವುದೂ ಸಾಧ್ಯವಿಲ್ಲ

ಸಪ್ರುಗಳ ನಿರಾಶೆ

ಅಮೆರಿಯವರ ಹೇಳಿಕೆಯ ಬಗ್ಗೆ ಸಪ್ರುಗಳಿಗೆ ತೀರಾ ನಿರಾಶೆ ಹುಟ್ಟಿದೆ. ಅವರು ಒಂದು ಪ್ರಕಟಣೆ ಹೊರಡಿಸಿ ಅದರಲ್ಲಿ ಅಮೆರಿಯವರು ಪರಿಸ್ಥಿತಿಯನ್ನು ವಿಚಾರಿಸದೆ ಮಾತನಾಡಿದರೆಂದೂ ಬ್ರಿಟಿಷ್ ಧೋರಣವು ಬದಲಾಗದೆ ಏನೂ ಸಾಧ್ಯವಿಲ್ಲವೆಂದೂ ಹೇಳಿದರು.

ಮುಸ್ಲಿಂ ಲೀಗನ್ನು ಸೇರುವುದಕ್ಕಿಂತ ಮರಣವೇ ಲೇಸು

ಗಡಿನಾಡಿನ ಡಾ॥ ಖಾನ್ ಸಾಹೇಬರು ಒಂದು ಪ್ರಕಟಣೆಯನ್ನು ಹೊರಡಿಸಿ ಅದರಲ್ಲಿ ಪಾಕಿಸ್ತಾನ ಯೋಜನೆಯನ್ನು ಖಂಡಿಸುತ್ತಾ, ಪಾಕಿಸ್ತಾನವನ್ನು ಸಮರ್ಥಿಸುವಂತಹ ದೇಶದ್ರೋಹಿ ಧೋರಣೆಯುಳ್ಳ ಮುಸ್ಲಿಂ ಲೀಗನ್ನು ಸೇರುವುದಕ್ಕಿಂತ ಮರಣವೇ ಲೇಸೆಂದು ಹೇಳಿರುತ್ತಾರೆ.

ಅಹಮ್ಮದಾಬಾದ್ ದಂಗೆ

ಅಹಮ್ಮದಾಬಾದಿನ ದಂಗೆಯಲ್ಲಿ ೨೦ ಜನರು ಸತ್ತು ೬೦೦ ಜನರಿಗೆ ಗಾಯಗಳಾಗಿವೆಯೆಂದು ಸುದ್ದಿ ಬಂದಿದೆ.

ಮುಂಬಯಿಯಲ್ಲಿ ದೊಂಬಿ

ಮುಂಬಯಿಯಲ್ಲಿ ಅಕಸ್ಮಾತ್ತಾಗಿ ದೊಂಬಿ ಸುರುವಾಗಿದೆ. ಕೆಲವು ಜನರು ಸತ್ತಿರುವರಲ್ಲದೆ ಹಲವರಿಗೆ ಗಾಯಗಳಾಗಿವೆ. ಸಾವಿರಾರು ಜನರು ಸೆರೆಹಿಡಿಯಲ್ಪಟ್ಟಿರುವರು. ಅಂಗಡಿಗಳು ಮುಚ್ಚಲ್ಪಟ್ಟಿವೆ. ಪೋಲೀಸರ ಭದ್ರ ಕಾವಲು ಎಲ್ಲಾ ಕಡೆಗಳಲ್ಲಿ ಇದೆ.

ರಜಪುತಾನ ಹಡಗು ಮುಳುಗಿತು

೧೪೦೦೦ ಟನ್ ತೂಕದ ಹಡಗು

ರಜಪುತಾನವೆಂಬ ೧೪೦೦೦ ಟನ್ ತೂಕದ ಹಡಗವು ಮುಳುಗಿತು.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಚೀನಾ ಪ್ರವಾಸ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮೇ ತಿಂಗಳಿನಲ್ಲಿ ಚೀನಾ ದೇಶಕ್ಕೆ ಪ್ರಯಾಣಮಾಡಲಿರುವರೆಂದು ತಿಳಿದಿದೆ. ತಮ್ಮ ಸೋದರರನ್ನೂ ಕಂಡು ಮಾತನಾಡಿ ಬಂದಿದ್ದರು. ಪಂಡಿತ ನೆಹರುಗಳ ಅಭಿಪ್ರಾಯವನ್ನು ಗಾಂಧಿಜಿಗೂ ತಿಳಿಸಿದ್ದರು.

ಭಾರತದ ಸಮಸ್ಯೆಯನ್ನು ಸರಕಾರವು ಬಿಡಿಸಬೇಕು

ಮೆಂಚೆಸ್ಟರ್ ಗಾರ್ಡಿಯನಿನ ಸಲಹೆ

ಅಮೆರಿಯವರ ಭಾಷಣದ ಕುರಿತು ಅತೃಪ್ತಿಯನ್ನು ಸೂಚಿಸುತ್ತಾ ಲಂಡನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಭಾರತದ ಸಮಸ್ಯೆಯನ್ನು ಸರಕಾರವೇ ಬಿಡಿಸಬೇಕೆಂದು ಹೇಳಿರುವುದು.

ಅಮೆರಿಯವರ ಮುಂದಾಳುತನದಲ್ಲಿ ಕೊರತೆಯಿದೆ

ಭಾರತ ಮಂತ್ರಿ ಅಮೆರಿಯವರು ಹೇಳಿದ ಮಾತುಗಳು ತೀರಾ ಹಾಸ್ಯಾಸ್ಪದವಾದವುಗಳು. ಅವರು ಹೇಳಿದ ಮಾತುಗಳು ನಮ್ಮನ್ನು ನಿರಾಶೆಗೊಳಿಸುವುದೇ ಅಲ್ಲದೆ ಮುಂದಕ್ಕೆ ಒಯ್ಯುವುದಿಲ್ಲವೆಂಬುದಾಗಿ ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕರು ಬರೆಯುತ್ತಾರೆ.

ಅಧಿಕಾರ ಬಿಟ್ಟುಕೊಡುವುದು ಬ್ರಿಟಿಷ ಸರಕಾರಕ್ಕೆ ಇಷ್ಟವಿಲ್ಲ

ಸಪ್ರು ಸಮಿತಿಯ ಹೇಳಿಕೆ

ಯುದ್ಧ ಮುಗಿದ ಬಳಿಕ ನಿರ್ದಿಷ್ಟ ಅವಧಿಯಲ್ಲಿ ಸಾಮಂತ ಸ್ವರಾಜ್ಯವನ್ನು ಕೊಡುವಂತೆ ಆಶ್ವಾಸನವನ್ನು ಈಗಲೇ ಬ್ರಿಟನು ಕೊಡಬೇಕು. ಇಲ್ಲವಾದರೆ ಭಾರತದ ಸಾಕಷ್ಟು ಸಹಕಾರವು ದೊರಕಲಾರದು. ಕಾಂಗ್ರೆಸು ಮತ್ತು ಇನ್ನಿತರ ರಾಜಕೀಯ ಪಕ್ಷಗಳ ಅಭಿಮತವನ್ನು ಚೆನ್ನಾಗಿ ಪರಿಶೀಲಿಸದೆ, ಮುಸ್ಲಿಮರಲ್ಲಿ ಅಲ್ಪಸಂಖ್ಯಾಕ ಪಕ್ಷವಾದ ಮುಸ್ಲಿಂ ಲೀಗಿಗೆ ಪ್ರಾಧಾನ್ಯತೆ ಕೊಡುವುದು ತಪ್ಪು. ಅಲ್ಲಸಲ್ಲದ ತೊಡರುಗಳನ್ನು ಮುಂದೊಡ್ಡಿದರೆ ಇಂದಾಗಲಿ ಮುಂದಾಗಲಿ ಯಾವ ಘಟನೆಯೂ ಆಗುವಂತಿಲ್ಲ. ಹೀಗೆ ಮಾಡುವ ಅಪಮಾನವನ್ನು ಯಾವ ರಾಜಕೀಯ ಪಕ್ಷವೂ ಸಹಿಸಲಾರದು. ಬ್ರಿಟಿಷ ಸರಕಾರಕ್ಕೆ ಅಧಿಕಾರವನ್ನು ಬಿಟ್ಟುಕೊಡುವ ಮನಸ್ಸು ಇಲ್ಲವೆಂಬುದಾಗಿ ಅಮೆರಿಯವರ ಭಾಷಣದ ಕುರಿತು ಸಪ್ರು ಕಮಿಟಿಯು ಒಂದು ಹೇಳಿಕೆ ಕೊಟ್ಟಿರುತ್ತದೆ.

ಗ್ರೀಕ್ ಯುದ್ಧಕ್ಷೇತ್ರದಿಂದ ಸರಿ ಸುದ್ದಿಯೇ ಬರುವುದಿಲ್ಲ

ಹೋರ್‌ಬೆಲಿಶಿಯ ಗ್ರೀಕ್ ಯುದ್ಧದ ವಿಷಯ ಪ್ರಧಾನ ಮಂತ್ರಿಗಳನ್ನು ಪ್ರಶ್ನಿಸಿದಾಗ, ಅಲ್ಲಿಂದ ಸರಿಯಾಗಿ ಸುದ್ದಿಗಳು ಬರುವುದಿಲ್ಲವೆಂದು ಅವರು ಉತ್ತರವಿತ್ತರು.

ಉಪವಾಸದ ಮುಷ್ಕರ ನಿಲ್ಲಿಸಿದರು

ವೆಲ್ಲೂರು ಜೈಲಿನ ರಾಜಕೀಯ ಕೈದಿಗಳು

ವೆಲ್ಲೂರು ಜೈಲಿನಲ್ಲಿ ಉಪವಾಸದ ಮುಷ್ಕರ ಹಿಡಿದಿದ್ದ ರಾಜಕೀಯ ಕೈದಿಗಳು ಅದನ್ನು ನಿಲ್ಲಿಸಿರುತ್ತಾರೆಂದು ಸೆರೆಮನೆಯ ಅಧಿಕಾರಿಗಳು ಪ್ರಕಟಿಸಿರುತ್ತಾರೆ.

ಸಾದರ-ಸ್ವೀಕಾರ

ನವಕರ್ನಾಟಕ—(ಪ್ರತಿ ಭಾನುವಾರ ಮುಂಬಯಿಯಿಂದ ಹೊರಡುವ ಹೊಸ ವಾರಪತ್ರಿಕೆ). ಮೆನೆಜಿಂಗ್, ಎಡಿಟರ್ ಬಿ. ಎಂ. ಶ್ರೀಧರ್ಯಪ್ಪ, ವಾರ್ಷಿಕ ಚಂದಾ: ೩-೧೨-೦, ಬಿಡಿ ಸಂಚಿಕೆ ಒಂದಾಣೆ.

ಮುಂಬಯಿಯಲ್ಲಿ ಅನೇಕ ಕನ್ನಡಿಗರು ನೆಲಸಿದ್ದಾರೆ. ಅವರು ಮಾಡುವ ಹಲವು ವಿಧದ ಚಟುವಟಿಕೆಗಳು ಇತ್ತೀಚೆಗೆ ಇತರ ಕನ್ನಡ ಪ್ರಾಂತಗಳಲ್ಲಿರುವ ಕನ್ನಡಿಗರನ್ನೂ ಬೆರಗುಗೊಳಿಸುವಂತಿದೆ. ಮುಂಬಯಿಯಲ್ಲಿ ಕನ್ನಡ ಸೇವೆಯು ಬಹಳ ವಿಶೇಷವಾಗಿ ನಡೆಯುತ್ತಿರುವ ಸಮಯದಲ್ಲಿ 'ನವಕರ್ನಾಟಕ'ವು ಜನ್ಮವೆತ್ತಿ, ಮುಂಬಯಿ ಕನ್ನಡಿಗರ ಹಾಗೂ ಅವಿಲ ಕನ್ನಡನಾಡಿನ ಸೇವೆಯನ್ನು ಸಾಗಿ ಚಿರಾಯುವಾಗಿ ಬಾಳಲಿ ಎಂದು ನಾವು ಹಾರೈಸುತ್ತೇವೆ. ರಾಜಕೀಯ ಲೇಖನಗಳು, ಕಥೆ, ಸಿನೆಮಾವಿಚಾರ, ಸ್ತ್ರೀವಿಭಾಗ, ವಾರಭವಿಷ್ಯ ಮೊದಲಾದವುಗಳಿಂದ ಪತ್ರಿಕೆ ವಿವಿಧಾರುಚಿಯುಳ್ಳ ವಾಚಕರಿಗೆ ಉಪಯುಕ್ತವಾಗಿದೆ. ಮುದ್ರಣ ಚಿತ್ರಣಗಳೂ ಸುಂದರವಾ

ಒಂದು ಜಾತಿಗೆ ಪೌರುಷ ಪ್ರತಿಭೆಗಳು ಬೇಕೆಂದರೆ

ಬಲವಿರಬೇಕು.
ಜಾತಿಯು ನಿಸ್ತೇಜವಾದರೆ
ಜಾತೀಯತೆಯಿರಲಾರದು
ಜೀವವಿರಲಾರದು
ಭಾರತೀಯರು
ಬಲಪೌರುಷ ಪ್ರತಿಭೆಗಳನ್ನು
ಗಳಿಸಬೇಕಾದರೆ

ಎಲ್ಲರಿಗೂ ಸಹಜವಾಗಿ ಬಲವಿರಮ, ಅಂಥವರು "ಅಮೃತ" ಸೇವಿಸಲೇ ಬೇಕು, "ಅಮೃತ" ಆರೋಗ್ಯಕ್ಕೂ, ಬಲಕ್ಕೂ, ಇಟ್ಟಿದ್ದೇ ಹೆಸರು.

ಆರೋಗ್ಯಕ್ಕೂ ಬಲಕ್ಕೂ ಅಮೃತ

ಕೇಸರಿಕುಟೀರಂ—ಮದ್ರಾಸು.

ಶಾಲಾ ಪುಸ್ತಕಗಳು

*ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಿಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ. ಎರಡನೆಯ ಆವೃತ್ತಿಯು ಹೊರಬೀಳಲಿದೆ

ಬೆಲೆ ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕವನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು. ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು; ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ. ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು, ಮೋದಬೋಧಪ್ರದಗಳೆಂದು.

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ. ಬಿ. ಶ್ರೀನಿವಾಸರಾವ್ ಮತ್ತು ಬಿ. ದೊಮಪ್ಪನವರಿಂದ ರಚಿತವಾದದು
೪ನೆಯ ತರಗತಿಗೆ ಬೆಲೆ 0 4 0 ೫ನೆಯ ತರಗತಿಗೆ ಬೆಲೆ 0 5 0

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದ್ದರಣೀಯವಾಗಿದೆ. ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮಾತ್ರ ಮೊದಲಾಗಿ ರಚಿತವಾದುವು. ವ್ಯಾಕರಣವೆಂದರೆ ಉಪಾಧ್ಯಾಯರುಗಳಿಗಾಗಲಿ, ವಿದ್ಯಾರ್ಥಿಗಳಿಗಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ, ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ. ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ.

ಬೆಲೆ: ೪, ೫ನೆಯ ತರಗತಿಗೆ 0-1-6 *೬ನೆಯ 0-2-0
*೭ನೆಯ 0-2-6 *೮ನೆಯ 0-3-0

ಸಿರಿಗನ್ನಡ ಪಾಠಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲ್ ಅಧ್ಯಾಪಕರಾದ
ಶ್ರೀ. ಬಿ. ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಎಳೆಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ, ತರುವಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪಾಠಕವ ರಚನೆಯಾಗಿರುತ್ತದೆ.

ಬೆಲೆ 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 6

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

* ವಿ. ಸೂ. ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಸಾದರ-ಸ್ವೀಕಾರ

ಮೊಗವೀರ ಸಾಂವತ್ಸರಿಕ:— ಮುಂಬಯಿಯಲ್ಲಿ ನೆಲೆನಿಂತ ಸಾಹುಕಾರರಲ್ಲಿ ದಕ್ಷಿಣ ಕನ್ನಡದ ಮೊಗವೀರರು ಪ್ರಸಿದ್ಧರು. ಅವರು ತಮ್ಮ ಹಲವು ಚಟುವಟಿಕೆಗಳ ಎಡೆಯಲ್ಲಿ ವರ್ಷವರ್ಷವೂ ಈ ತೆರನ ಸರ್ವಾಂಗ ಸುಂದರವೂ, ವಿಪುಲ ಲೇಖನ ಸಂಪೂರ್ಣವೂ ಆದ ಸಂಚಿಕೆಯೊಂದನ್ನು ಹೊರಡಿಸುತ್ತಾ ಬರುವುದು ಬಹಳ ಪ್ರಶಂಸನೀಯ ಕಾರ್ಯವಾಗಿದೆ. ಇದರಲ್ಲಿ ಹಿರಿಯ ಕನ್ನಡಿಗರಾದ ಶ್ರೀ. ಆಲೂರ ವೆಂಕಟರಾಯ ಶ್ರೀ. ದಿವಾಕರ ರಂಗರಾಯ, ಶ್ರೀ ಶಿವರಾಮ ಕಾರಂತ, ಅಂಬಿಕಾತನಯದತ್ತ ಇವರೇ ಮೊದಲಾದವರ ಲೇಖನಗಳೂ ಕೂಡಿವೆಯೆಂದರೆ ಸಾಂವತ್ಸರಿಕದ ಯಶಸ್ವಿತೆಗೆ ಪ್ರತ್ಯೇಕ ನಿದರ್ಶನ ಬೇಕಾಗಿಲ್ಲ. ಮೊಗವೀರ ಸಾಂವತ್ಸರಿಕವು ಇತೋಪಿ ಊರ್ಜಸ್ವಿಯಾಗಲೆಂದು ನಾವು ಹಾರೈಸುವೆವು.

ಸಂಖ್ಯೋದ್ಯಾನ— ಬರೆದವರು: ಬಿ. ಸೀತಾರಾಮ ಶಾಸ್ತ್ರಿ, ಎಂ. ಎ. (ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರ ಪುಸ್ತಕಮಾಲೆ—) ಬೆಲೆ ಎರಡಾಣೆ

ಶ್ರೀ ಪಾರ್ಶ್ವನಾಥ ಚಂಪು— ಜಿ. ಪಿ. ರಾಜರತ್ನಂ ಪ್ರಕಾಶಕಿ. ಶ್ರೀಮತಿ ದೇವಮ್ಮನವರು—ವಣಪಿಲ ಅರಮನೆ. ನೆಲ್ಲಿಕಾರ್ ದ. ಕ. ಅನಂತ ಕೀರ್ತಿ ಗ್ರಂಥಮಾಲೆಯ ೧೨ನೆಯ ಪುಷ್ಪ, ಬೆಲೆ - ಸದ್ವಿನಿಯೋಗ.

ಲಕ್ಷ್ಮೀ ಹೃದಯಂ—ಶ್ರೀ ಸಿ. ಶ್ರೀನಿವಾಸ ತಂತ್ರಿಗಳಿಂದ ಪರಿಷ್ಕೃತ. ಪ್ರಕಾಶಕರು ಪಿ. ಪಿ. ಉಪಾಧ್ಯಾಯ, ಉಪಾಧ್ಯಾಯ ಬುಕ್ ಡಿಪೋ, ಎಸ್. ಸ್ಟ್ರೀಟ್ ಬೆಂಗಳೂರು ಸಿಟಿ. ಬೆಲೆ ೪ ಆಣೆ.

ಶ್ರೀಕೃಷ್ಣಾಷ್ಟೋತ್ತರ ಶತನಾಮ ಸ್ತೋತ್ರ—ಪರಿಷ್ಕರಣ ಮತ್ತು ಪ್ರಕಾಶ ನಮೇಲಿನವರೇ ಬೆಲೆ ೧ ಆ

ದಶಾವತಾರ ಸ್ತೋತ್ರ—ಪರಿಷ್ಕರಣ ಮತ್ತು ಪ್ರಕಾಶ ನಮೇಲಿನವರು. ಬೆಲೆ ೦-೨ಆ.

ಸುಂದರಕಾಂಡ ಕಥಾಸಂಗ್ರಹ— ಪರಿಷ್ಕರಣ ಮತ್ತು ಪ್ರಕಾಶ ಸಮೇಲಿನವರು. ಬೆಲೆ ೨ ಆಣೆ.

ಶಿಶು ವಿಹಾರಗಳು—ಸಿ. ರಂಗಾಚಾರ್ ಬಿ. ಎಸ್. ಸಿ. ಎಂ. ಎಡ್. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ. ಬೆಲೆ ೨ ಆಣೆ.

ವಿಡಂಬನ—ಎಸ್. ವಿ. ರಂಗಣ್ಣ ಎಂ. ಎ. ಪ್ರಕಾಶಕರು ಮೇಲಿನವರು. ಬೆಲೆ ೨ ಆಣೆ.

ಪುರಾತನರ ತ್ರಿವಿಧಿ—(ಶ್ರೀ ನಿಜಗುಣಶಿವಯೋಗಿ ವಿರಚಿತ) ಸಂಪಾದಕ: ಬಿ. ಶಿವಮೂರ್ತಿ ಶಾಸ್ತ್ರಿ, ಹುಲುಕುಂಟೆ ಮಠ, ತುಮಕೂರು. ಬೆಲೆ ೬ ಆಣೆ.



ವಿಚಿತ್ರ ಪ್ರಪಂಚ

ಮಗಳನ್ನು ಕಳುಹಿಸದ ಮಾವನ ಮೇಲೆ ದಾವೆ!

ಅಮೃತಸರದ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ವಿಚಿತ್ರ ದಾವೆ. ಸೇನೆಗೆ ಸೇರಿದ್ದ ಸಿರಂಜನಸಿಂಗ ಎಂಬಾತನು ಪಿಂಟೋರಿ ಗ್ರಾಮದ ಉಜಗರ್‌ಸಿಂಗ ಎಂಬಾತನ ೧೮ ವರ್ಷ ಪ್ರಾಯದ ಒಬ್ಬ ಮಗಳನ್ನು ಎರಡು ವರ್ಷಗಳ ಮೊದಲು ಮದುವೆಯಾಗಿದ್ದ. ಆದರೆ ಮದುವೆಯಾದ ದಿನವೇ ಮೇಲಧಿಕಾರಿಗಳು ಅವನಿಗೆ ಕೊಟ್ಟಿದ್ದ ರಜೆಯನ್ನು ರದ್ದು ಮಾಡಿ ಕೂಡಲೇ ಸೇನೆಗೆ ಬಂದು ಕೂಡಬೇಕೆಂದು ಹೇಳಿದ್ದರಿಂದ ಆ ದಿನ ರಾತ್ರಿ ಮಾತ್ರ ಅವನು ತನ್ನ ಹೆಂಡತಿಯೊಂದಿಗೆ ಇರಬಹುದಾಯಿತು. ಯುದ್ಧ ಕಾಲವಾದುದರಿಂದ ಮೊನ್ನೆ ಮೊನ್ನೆಯ ತನಕ ಅವನಿಗೆ ಬೇರೆ ರಜೆ ಸಿಕ್ಕಲಿಲ್ಲ. ಮೊನ್ನೆ ರಜೆ ಪಡೆದು ಅವನು ಅಮೃತಸರಕ್ಕೆ ಬಂದ ತವರುಮನೆಯಲ್ಲಿದ್ದ ಹೆಂಡತಿಯನ್ನು ಕಳುಹಿಸಿಕೊಡಬೇಕೆಂದು ಅವನು ಮಾವನಿಗೆ ಕಾಗದ ಬರೆದ. ಆದರೆ ಮಾವ ಮಗಳನ್ನು ಕಳುಹಿಸಲಿಕ್ಕೆ ಆಗುವುದಿಲ್ಲ ಎಂದಿದ್ದಾನೆ. ಸಿರಂಜನಸಿಂಗನು ಮದುವೆಯಾಗುವಾಗ ಹೆಂಡತಿಗೆ ೬೦೦ ರೂಪಾಯಿಗಳ ಆಭರಣ ಮಾಡಿ ಹಾಕಿದ್ದ. ಈಗ ಅವೂ ಇಲ್ಲ. ಆದ್ದರಿಂದ ಅವನು ಡಿವನ್ಸ್ ಆಫ್ ಇಂಡಿಯಾ ಆಕ್ಟಿನ ಪ್ರಕಾರ ಮಾವನ ಮೇಲೆ ದಾವೆ ತಂದಿದ್ದಾನೆ. ಮಗಳನ್ನು ಅಳಿಯನಲ್ಲಿಗೆ ಕಳುಹಿಸಲಿಕ್ಕೆ ಆಗುವುದಿಲ್ಲವೆಂಬುದೇ ಮಾವನ ಮೇಲಿರುವ ತಕ್ಷೀರು. ವಿಚಾರಣೆ ಆಗುತ್ತಾ ಇದೆ. ಮಾವನನ್ನು ಹಿಡಿದು ತಂದು ಮೆಜಿಸ್ಟ್ರೇಟರು ಒಂದು ಸಾವಿರ ರೂಪಾಯಿ ಜಾಮೀನಿನ ಮೇಲೆ ಅವನನ್ನು ಬಿಟ್ಟಿದ್ದಾರೆ.

ಮಕ್ಕಳಾದರೆ ಲಾಭವುಂಟು!

ಜರ್ಮನಿ, ಜಪಾನು, ಇಟಲಿ, ರಷ್ಯ ಮೊದಲಾದ ಸೈನಿಕ ರಾಷ್ಟ್ರಗಳಲ್ಲಿರುವಂತೆ ಇಂಗ್ಲಾಂಡಿನಲ್ಲಿಯೂ ಹೆಚ್ಚು ಮಕ್ಕಳನ್ನು ಹೆತ್ತವರಿಗೆ ಸರಕಾರವು ಸಹಾಯದ್ರವ್ಯವನ್ನು ಕೊಡಬೇಕೆಂದು ಚಳವಳವಾಗಿದೆ. ಮಕ್ಕಳಾಗದ ಗಂಡಹೆಂಡರು ಎಷ್ಟು ಬೇಕಾದರೂ ಶೋಕು ಮಾಡಬಹುದು, ಸುಖಭೋಗಗಳನ್ನು ಅನುಭವಿಸಬಹುದು. ಆದರೆ ಹೆಚ್ಚು ಮಕ್ಕಳ ತಾಯಿ ತಂದೆಗಳ ಮಾತು ಹಾಗಲ್ಲ. ಅವರು ಹುಟ್ಟಿದ ಮಕ್ಕಳ ಲಾಲನೆ ಪಾಲನೆಗಾಗಿ ಬಹಳ ಕಷ್ಟಗಳನ್ನು ಅನುಭವಿಸಬೇಕು. ಆದುದರಿಂದ ಸರಕಾರವು ಇಂಥವರಿಗೆ ಸಹಾಯ ದ್ರವ್ಯವನ್ನು ಕೊಟ್ಟು ಅವರ ಕಷ್ಟಪರಿಹಾರ ಮಾಡುವುದರಲ್ಲಿ ನ್ಯಾಯವಿದೆಯೆಂದು ಇಂಗ್ಲೆಂಡಿನ ಸಮಾಜಸುಧಾರಕರು ಬಹಳ ಕಾಲದಿಂದ ಪ್ರಯತ್ನಿಸಿದ್ದರು. ಹೀಗಾದರೆ ಜನರು ಮಕ್ಕಳು ಹುಟ್ಟಿಸುವುದನ್ನೇ ಮುಖ್ಯ ವೃತ್ತಿಯನ್ನಾಗಿ ಇಟ್ಟುಕೊಳ್ಳಬಹುದು. ಉದ್ಯೋಗದಂಥೆಗಳು ಮೂಲೆಸೇರಬಹುದು ಎಂಬ ಸಂದೇಹದಿಂದ ಆ ಪ್ರಯತ್ನಗಳಿಗೆ ಆಗ ಯಾರೂ ಬೆಲೆ ಕಟ್ಟಿರಲಿಲ್ಲ. ಈಗಲಾದರೆ ಯುದ್ಧ ಕಾಲ. ಮಕ್ಕಳ ಸಂಖ್ಯೆ ದಿನದಿನಕ್ಕೆ ಹೆಚ್ಚಾಗಬೇಕಾದ್ದು ಅಗತ್ಯ. ಆದ್ದರಿಂದ ಇಂಗ್ಲೀಷರ ಸರಕಾರವೇ ಹೆಚ್ಚು ಮಕ್ಕಳ ತಾಯಿತಂದೆಗಳಿಗೆ ಸಹಾಯ ದ್ರವ್ಯ ಕೊಡಬೇಕೆಂದು ಆಲೋಚಿಸಿದೆ. ಅದಕ್ಕೆ ಒಂದು ಸಮಿತಿಯನ್ನು ಮಾಡಿದೆ. ಮತ್ತು ಈ ಸಮಿತಿಯು ಒಂದನೆಯ ಮಗುವಿಗೆ ೫ ಶಿಲಿಂಗು, ೨ನೆಯ ಮಗುವಿಗೆ ೪ ಶಿಲಿಂಗ್ ಉಳಿದುವುಗಳಿಗೆ ತಲೆಯೊಂದರ ೩ ಶಿಲಿಂಗುಗಳಂತೆ ಪ್ರತಿವಾರ ಸಹಾಯ ದ್ರವ್ಯ ಕೊಡಬೇಕೆಂದು ಶಿಫಾರಸು ಮಾಡಿದೆ. ನಮ್ಮ ದೇಶದ ಸರಕಾರಕ್ಕೆ ಈ ಮನಸ್ಸು ಯಾವಾಗ ಆಗಬಹುದೊ?

ಎರಡು ಹೆಡೆಗಳ ಹಾವು

ಜಗತ್ತನ್ನು ಹೊತ್ತಿರುವ ಆದಿಶೇಷನಿಗೆ ಸಾವಿರ ಹೆಡೆಗಳಿರುವವೆಂದು ಪೌರಾಣಿಕರು ಹೇಳುವರು. ಮತ್ತೆ ಐದು ಹೆಡೆಗಳ ಸರ್ಪಗಳು, ಏಳು ಹೆಡೆಗಳ ಸರ್ಪಗಳು ಇತ್ಯಾದಿ ಇರುವವೆಂದು ನಾವು ಕಥೆಗಳಲ್ಲಿ ಆಗಾಗ ಕೇಳಿದುದುಂಟು. ಆದರೆ ಈ ಮಾತುಗಳಲ್ಲಿ ನಿಜತ್ವವೆಷ್ಟಿದೆಯೋ, ಅದನ್ನು ಯಾರೂ ಹೇಳಲಾರರು. ಇದು ಹೇಗಿದ್ದರೂ ಎರಡು ತಲೆಯ ಹಾವುಗಳನ್ನು ಈಗ ಪ್ರತ್ಯಕ್ಷ ಕಂಡದ್ದಿದೆ. ಸ್ವಿಜರ್ಲೆಂಡಿನಲ್ಲಿ ಇಂಥ ಒಂದು ಹಾವು ಕಾಣಲಿಕ್ಕೆ ಸಿಕ್ಕಿದೆ. ಈ ಹಾವಿಗೆ ಎರಡು ಹೆಡೆಗಳಷ್ಟೆ ಅಲ್ಲ, ಎರಡು ಬಾಲಗಳೂ ಇರುವವು. ವಿಜ್ಞಾನಿಗಳು ಈ ಹಾವನ್ನು ಹಿಡಿದು ಪರೀಕ್ಷಿಸಿದರು. ಬಹಳ ಸಣ್ಣದಿರುವಾಗ ಏನೋ ಕಾರಣದಿಂದ ಸಜಾತೀಯ ಹಾವಿನ ಮರಿಗಳು ಒಂದನ್ನೊಂದು ಅಂಟಿಹೋಗಿ ಈ ಹಾವು ಆಗಿರಬಹುದೆಂದು ಅವರು ಹೇಳಿದ್ದಾರೆ. ಆದರೆ ಇದು ಅವಿ...

ಮುಕ್ಕಾಲು ರೂಪಾಯಿಗೆ ಒಂದು ಮದುವೆ

ದುಂದುವೆಚ್ಚದ ಮದುವೆಗಳನ್ನು ಮಾಡಿ ಸೋತವರು ಈ ಕಡಿಮೆ ವೆಚ್ಚದ ಒಂದು ಮದುವೆಯಿಂದ ಪಾಠ ಕಲಿತುಕೊಳ್ಳಬೇಕು. ಅಮರಾವತಿಯಲ್ಲಿ ಅತ್ಯಂತ ಕಡಿಮೆ ವೆಚ್ಚದಿಂದ ಮದುವೆಯೊಂದು ಆಗಿದೆ. ಇದರಲ್ಲಿ ವರ ಎಂದರೆ ಒಬ್ಬ ಉಪಾಧ್ಯಾಯನ ಮಗ. ವಧು ಎಂದರೆ ಒಬ್ಬ ಗುಮಾಸ್ತನ ಮಗಳು. ವರ ವಧು ಇಬ್ಬರೂ ತಮ್ಮ ಮದುವೆ ಬಹಳ ಕಡಿಮೆ ಖರ್ಚಿನಿಂದ ಆಗಬೇಕೆಂದು ಹೇಳಿದ್ದರು. ತಾಯಿ ತಂದೆಗಳು ಅವರನ್ನು ಅಮರಾವತಿಯ ಒಂದು ದೇವಾಲಯಕ್ಕೆ ಕರಕೊಂಡು ಹೋಗಿ, ಕಾಣಿಕೆ ಹಣ ಮತ್ತು ಪುರೋಹಿತನ ದಕ್ಷಿಣೆ ಎಂದು ಬರೇ ಹದಿನೆರಡಾಣೆಗಳಿಂದ ಈ ಮದುವೆ ಖರ್ಚನ್ನು ಮುಗಿಸಿಬಿಟ್ಟಿದ್ದಾರೆ.

ಸಿಂಹಮುಖದ ಇಕ್ಕುಳಗಳು

ಈಗ ಪಾಶ್ಚಾತ್ಯ ಶಸ್ತ್ರಚಿಕಿತ್ಸಕರು ಶಸ್ತ್ರಪ್ರಯೋಗದ ಕಾಲದಲ್ಲಿ ಉಪಯೋಗಿಸುವ ಇಕ್ಕುಳಗಳಂಥವುಗಳನ್ನು ಭಾರತೀಯ ಶಸ್ತ್ರಚಿಕಿತ್ಸಕರು ಸಾವಿರಾರು ವರ್ಷಗಳ ಹಿಂದೆಯೇ ಉಪಯೋಗಿಸಲಾರಂಭಿಸಿದ್ದರೆಂಬುದು ಚರಕ ಸಂಹಿತೆ ಮೊದಲಾದ ವೈದ್ಯ ಗ್ರಂಥಗಳಿಂದ ಗೊತ್ತಾಗುತ್ತದೆ. ಆಗಿನ ಸಿಂಹಮುಖದ ಇಕ್ಕುಳಗಳ ಹಾಗೆಯೇ ಈಗ ವೈದ್ಯರು ಉಪಯೋಗಿಸುವ ಇಕ್ಕುಳಗಳು ಇರುವವು. ಈಗಿನವರು ಅವನ್ನು ಹಿಂದಿನ ಹೆಸರುಗಳಿಂದಲೇ ಲಾಯನ್ ಫೋರ್ಸೆಪ್ಸ್ ಅಂದರೆ ಸಿಂಹಮುಖದ ಇಕ್ಕುಳಗಳೆಂದು ಕರೆದಿದ್ದಾರೆ.

BHUVANENDRA PRODUCTS LTD.,

KATAPADI, S K

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.

ಎಲ್ಲಾ ಬಗೆಯ ವಾತಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು:—

ಯು ಪಾಂಡುರಂಗ ನಾಯಕ್, ರಥವೀದಿ

ರಾಘವೇಂದ್ರ ರಂಗ ಶೈ, ರಥಬೀದಿ

ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಗಾಂಧಿಯವರ ಆಶ್ರಮದಲ್ಲಿ ಒಂದು ದಿನ.

ಶ್ರೀ. ಸಿದ್ಧವ್ವನಹಳ್ಳಿ ಕೃಷ್ಣಶರ್ಮರ ಭಾಷಣ

[ಬೆಂಗಳೂರಲ್ಲಿ ಮೊನ್ನೆ ವಸಂತ ಸಾಹಿತ್ಯೋತ್ಸವ ಜರಗಿತು; ಅದರಲ್ಲಿ ಒಂದು ದಿನದ ಭಾಷಣಕರ್ತರು ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರು; ಅವರ ಭಾಷಣದ ಸಾರವು ಈ ಕೆಳಗೆ ಕೊಡಲಾಗಿದೆ.]

ಗಾಂಧಿಯವರ ಆಶ್ರಮ ನಮ್ಮ ದೇಶದ ಒಂದು ದೊಡ್ಡ ಯಾತ್ರಾಸ್ಥಳದಂತೆ. ಅಲ್ಲಿಗೆ ದಿನದಿನವೂ ಹಲವಾರು ಮಂದಿ ಐರೋಪ್ಯರೂ ಭಾರತೀಯರೂ ಬಂದು ಗಾಂಧಿಯವರನ್ನು ಭೇಟಿಮಾಡಿಕೊಂಡು ಹೋಗುತ್ತಾರೆ. ಕೆಲವು ವೇಳೆ ಬೇರೆ ಬೇರೆ ದೇಶದ ಬೇರೆ ಬೇರೆ ವೃತ್ತಿಪ್ರವೃತ್ತಿಗಳ ಮನುಷ್ಯರು ಅವರ ಆಶ್ರಮದಲ್ಲಿ ಒಟ್ಟಿಗೆ ಕೂಡಿರುವುದನ್ನು ನೋಡಿದರೆ ಅದು ಮನುಷ್ಯ ಪ್ರಾಣಿಗಳ ಒಂದು ಸಂಗ್ರಹಾಲಯವೋ ಎನ್ನಿಸುತ್ತದೆ!

ಇಂಗ್ಲಿಷರು, ಅಮೆರಿಕನ್ನರು, ನೀಗ್ರೋಗಳು, ಚೀನೀಯರು, ಜಪಾನೀಯರು—ಮುಂತಾಗಿ ಹಲವು ಜನಾಂಗಗಳ ದೊಡ್ಡವರೆನ್ನಿಸಿಕೊಂಡವರು ಅಲ್ಲಿಗೆ ಹೋಗುತ್ತಾರೆ. ಗಾಂಧಿಯವರ ಆಶ್ರಮಕ್ಕೆ ಹೋಗುವುದೂ, ಅಲ್ಲಿ ಇರುವುದೂ ಅಲ್ಲಿನ ಜೀವನ ಒಗ್ಗದವರಿಗೆ ಬಹು ಕಷ್ಟದ ಕೆಲಸ. ಇಷ್ಟೆಲ್ಲ ಸಹಿಸಿಕೊಂಡು ಇಂಥವರೆಲ್ಲ ಅಲ್ಲಿಗೆ ಹೋಗಿ ಸಂತೋಷಚಿತ್ತರಾಗಿ ಹಿಂದಿರುಗುತ್ತಾರೆ.

ಗಾಂಧಿಯವರನ್ನು ನೋಡಹೋಗುವವರೆಲ್ಲರೂ ಅವರೊಡನೆ ರಾಜಕೀಯವೊಂದನ್ನು ಮಾತ್ರ ಕುರಿತು ಮಾತನಾಡಹೋಗುವುದಿಲ್ಲ. ರಾಜಕೀಯವನ್ನು ಅವರೊಡನೆ ಚರ್ಚಿಸುವವರು ಕೆಲವರು; ವೇದಾಂತ ವಿಚಾರಗಳನ್ನು ಚರ್ಚೆ ಮಾಡುವವರು ಕೆಲವರು; ರೋಗಿಗಳಿಗಾಗಿ ಉಪಚಾರ ಪಡೆಯುವವರು ಕೆಲವರು, ಕಲೆಕೆಟ್ಟು ಅಲ್ಲಿ ಶಾಂತಿಯನ್ನು ಅನಿಸಿಕೊಂಡು ಹೋಗುವವರು ಕೆಲವರು. ಒಟ್ಟಿನಲ್ಲಿ ಭಾವುಕರಿಗೂ ರಾಷ್ಟ್ರಾಭಿಮಾನಿಗಳಿಗೂ ಗಾಂಧಿಯವರ ಆಶ್ರಮ ಕಾಶೀ ರಾಮೇಶ್ವರಗಳ ಹಾಗೆ ಯಾತ್ರಾಸ್ಥಳವಾಗಿ ಪರಿಣಮಿಸಿದೆ.

ಗಾಂಧಿಯವರು ಮೊದಲು ಸಬರಮತಿಯಲ್ಲಿ ಒಂದು ಆಶ್ರಮ ತೆಗೆದರು. ಅದು ಬೇಗನೆ ಮುಚ್ಚಿತು. ಹಿಂದಿನ ಸತ್ಯಾಗ್ರಹವಾದ ಮೇಲೆ, ಜಮನ್‌ಲಾಲ ಬಜಾಜರ ಕೋರಿಕೆಯಂತೆ ಅದು ವರ್ಧಾ ನಗರಕ್ಕೆ ಬಂದು ನೆಲಸಿದರು. ಕಾಲಕ್ರಮದಲ್ಲಿ ಸೇವಾಗ್ರಾಮ ಹುಟ್ಟಿತು. ಅಲ್ಲಿ ಮೊದಲು ಅವರೊಡನೆ ನೆಲಸಿದವರೆಂದರೆ, ಅವರ ಹೆಂಡತಿ ಶ್ರೀಮತಿ ಕಸ್ತೂರಿಬಾಯಿಯವರು, ಶ್ರೀಮತಿ ಮೀರಾಬೆನ್ ಮತ್ತು ಪ್ಯಾರೆಲಾಲ್. ಇವರ ಗುಡಿಸಲುಗಳಲ್ಲದೆ, ಬರುತ್ತ ಬರುತ್ತ ಸುತ್ತಮುತ್ತ ಕೆಲವು ಗುಡಿಸಲುಗಳಾದುವು.

ಸೇವಾಗ್ರಾಮದಲ್ಲಿ ನಾವು 'ಶಾಂತಿನಿಕೇತನ'ದಲ್ಲಿ ಇರುವಂಥ ಸೌಂದರ್ಯವನ್ನಾಗಲಿ ರಮಣೀಯತೆಯನ್ನಾಗಲಿ ಕಲೆಯ ವಾತಾವರಣವನ್ನಾಗಲಿ ಕಾಣಲಾರೆವು. ಅಲ್ಲಿರುವವು ಹಳ್ಳಿಯ ಗುಡಿಸಲುಗಳು: ಸುತ್ತಮುತ್ತಿನ ವಾತಾವರಣ ಸಪ್ಪೆ ಸಪ್ಪೆ, ಬೋಳುಬೋಳು. ಅಲ್ಲಿರುವವರೆಲ್ಲಾ ಸದಾ ಕೆಲಸ ಮಾಡುತ್ತಲೇ ಇರುತ್ತಾರೆ. ಗಾಂಧಿಯವರ ಪ್ರವೃತ್ತಿಯೇ ಅದು; ಸದಾ ಕೆಲಸಮಾಡುತ್ತಿರುವುದು. ಯಜ್ಞಮಾಡದೆ ತಿನ್ನುವ ಹಾಗಿಲ್ಲ ಎಂದು ಭಗವದ್ಗೀತೆಯಲ್ಲಿ ಹೇಳಿರುವ ಮಾತಿನ 'ಯಜ್ಞ' ಎಂಬ ಪದಕ್ಕೆ ಗಾಂಧಿಯವರು ಒಂದು ಹೊಸ ಅರ್ಥವನ್ನು ಕಲ್ಪಿಸಿದ್ದಾರೆ. 'ಯಜ್ಞ' ಎಂದರೆ ದೇಹಶ್ರಮ, ದುಡಿಮೆ. ಈ ಅರ್ಥದ ದೃಷ್ಟಿಯಲ್ಲಿ ರಾಟೆ ನೂಲುವುದಕ್ಕೆ ಅವರು ಅಷ್ಟು ಪ್ರಾಧಾನ್ಯತೆಕೊಟ್ಟಿರುವುದು. ಮಾತಾಡುವಾಗ ಸಹ ಕಾಲಹರಣವಾಗಬಾರದೆಂದು ಅವರು ನೂಲುತ್ತಲೇ ಇರುತ್ತಾರೆ.

ಕವಯಿತ್ರಿಯಾದ ಸರೋಜಿನೀ ದೇವಿಯವರು ಗಾಂಧಿಯವರ ಕರ್ಮಪ್ರವೃತ್ತಿಯ ಮಹತ್ವವನ್ನು ಹೀಗೆ ವಿನೋದ ರೀತಿಯಲ್ಲಿ ಕೊಂಡಾಡಿದ್ದಾರೆ: ನಮ್ಮ ದೇಶದ ಮಹಾತ್ಮರು ಇಬ್ಬರು; ಒಬ್ಬರು ರಮಣ ಮಹರ್ಷಿಗಳು, ಇನ್ನೊಬ್ಬರು ಗಾಂಧಿ. ಈ ಮಹಾತ್ಮ—ಗಾಂಧಿ—ಯಾರನ್ನೂ 'ಶಾಂತಿ'ಯಲ್ಲಿರಗೊಡುವುದಿಲ್ಲ! ಆದರೆ, ಪರಿಣಾಮದಲ್ಲಿ ಇಬ್ಬರು ಕೊಡುವುದು ಶಾಂತಿಯೆ.

ಗಾಂಧಿಯವರ ಶಾಂತಿ ಕರ್ಮಶಾಂತಿ. ದುಡಿಯಬೇಕು, ಆದರೆ ಫಲದಲ್ಲಿ ಆಸೆಯಿರಕೂಡದು. ಇದೇ ಗಾಂಧಿಯವರು ಉಪದೇಶಮಾಡುವ ಅನಾಸಕ್ತಿಯೋಗ, ಅನಾಸಕ್ತಕರ್ಮ ಅಥವಾ ನಿಷ್ಕಾಮ ಕರ್ಮ. ನಿಜವಾದ ಶಾಂತಿ ದೊರೆಯುವುದು ಇದರಿಂದ.

ಆಶ್ರಮದಲ್ಲಿ ಗಾಂಧಿಯವರು ತಮ್ಮ ನಿತ್ಯಜೀವನದಲ್ಲಿ ಕಟ್ಟುನಿಟ್ಟುಗಳನ್ನು ಪಾಲಿಸುವುದಲ್ಲದೆ ಇತರರೂ ಪಾಲಿಸುವಂತೆ ಮಾಡುತ್ತಾರೆ. ಎಲ್ಲರೂ ಬೆಳಗ್ಗೆ ೪ಕ್ಕೆ ಏಳಬೇಕು; ೪—೨೦ಕ್ಕೆ ಸೇರಬೇಕು; ಎಲ್ಲರೊಡನೆ ಪ್ರಾರ್ಥನೆಯಾದ ಮೇಲೆ ೬ಕ್ಕೆ ಗಾಳಿಸವಾರಿ ಹೊರಡುತ್ತಾರೆ.

ಗಾಂಧಿಯವರ ಊಟ ವಿಚಿತ್ರ. ಊಟದಲ್ಲಿ ಇವರು ಹಲವು ಪ್ರಯೋಗಗಳನ್ನು ನಡೆಸಿದರು. ಗಾಂಧಿಯವರ ಸಂಕಲ್ಪಬಲವೇ ದೊಡ್ಡದು; ಊಟದ ವಿಚಾರದಲ್ಲಂತೂ ಅವರದ್ದು ಚಾಣಿಕ್ಯ ಸಂಕಲ್ಪವೇ! ನೆನೆದ ಕಡಲೆ, ನೆಲಗಡಲೆಕಾಯಿ, ಬೇವಿನಸೊಪ್ಪಿನ ಚಟ್ನಿ, ಬೆಳ್ಳುಳ್ಳಿ—ಮುಂತಾದ ಹಲವು ಪದಾರ್ಥಗಳನ್ನು ತಿನ್ನುವುದನ್ನು ಒಂದು ಸಾಧನೆಯಾಗಿ ಇಟ್ಟುಕೊಂಡಿದ್ದಾರೆ.

ರೋಗಿಗಳನ್ನು ಉಪಚರಿಸುವುದೆಂದರೆ ಅವರಿಗೆ ಬಹು ಪ್ರೀತಿ. ಇದು ಅವರಿಗೆ ಚಿಕ್ಕಂದಿನಿಂದ ಬಂದದ್ದು. ಅದನ್ನು ಈಗ ಅವರು ಒಂದು ದೊಡ್ಡ ಶಾಸ್ತ್ರವನ್ನಾಗಿ ಕಲೆಯನ್ನಾಗಿ ಮಾಡಿಕೊಂಡಿದ್ದಾರೆ. ಒಬ್ಬ ದೊಡ್ಡ ಶಾಸ್ತ್ರಪಂಡಿತರು—ಜ್ಯೋತಿಷ್ಯರು—ಗಾಂಧಿಯವರ ಬಳಿಗೆ ಬಂದರು. ಅವರ ಮೈಕೈಯೆಲ್ಲವೂ ಹುಳುಕುಹೋಗಿತ್ತು. ಗಾಂಧಿಯವರು ಸ್ವಲ್ಪವೂ ಅಸಹ್ಯಪಟ್ಟುಕೊಳ್ಳದೆ ಅವರ ಮೈಯಿಂದ ಹುಳುಗಳನ್ನು ತೆಗೆದು ಅವರಿಗೆ ಉಪಚರಿಸತೊಡಗಿದರು. ಗಾಂಧಿಯವರನ್ನು ನೋಡಿ ಇತರರೂ ಆ ರೋಗಿಯನ್ನು ಉಪಚರಿಸತೊಡಗಿದರು.

ಗಾಂಧಿಯವರ ಜೀವನ ಸರಸ ಜೀವನ, ಸರಳ ಜೀವನ—ಅವರ ತಪಸ್ಸು ಅಡಗಿರುವುದು ಅದರಲ್ಲಿಯೆ.

ಇವರ ಆಶ್ರಮದಲ್ಲಿ ಏನೂ ವಿಚಿತ್ರವಿಲ್ಲ. ಆದರೆ ಒಂದು ವಿಚಿತ್ರವಿದೆ: ಇವರ ಗುಡಿಸಲ ಗೋಡೆಯ ಮೇಲಿರುವ ಸಂಕೇತ ಚಿತ್ರ—ಒಂದು ಕಡೆ ತಾಳೆಮರ, ಇನ್ನೊಂದು ಕಡೆ ರಾಟೆ, ಇವುಗಳ ನಡುವೆ ಹಸುವಿನ ಮತ್ತು ಜೇನುನೊಣದ ಚಿತ್ರ. ತಾಳೆಯ ಮರದಿಂದ ಹೆಂಡ ಮಾಡುವುದು ತಪ್ಪಿಸಿ ಬೆಲ್ಲ ಮಾಡುವಂತೆ ಮಾಡಬೇಕು. ಕರ್ಮಜೀವನ ತಿರುಗುವಂತಾಗಬೇಕಾದರೆ, ಹಳ್ಳಿಯವರಿಗೆ ಹಣ ಸಂಪಾದನೆಯಾಗಬೇಕಾದರೆ, ರಾಟೆಯ ತಿರುಗುವಿಕೆಯಿಂದ ಮಾತ್ರ ಸಾಧ್ಯ. ಹಸು ಮತ್ತು ಜೇನುನೊಣ ಮನುಷ್ಯನಿಗೆ ಅಹಿಂಸೆ ಕಲಿಸಿರುವ ಪ್ರಾಣಿಗಳು. ಇದು ಚಿತ್ರದ ಅರ್ಥ.

ಇಂತಹ ದೊಡ್ಡ ವ್ಯಕ್ತಿಗಳಾದ, ಉದಾತ್ತಜೀವಿಗಳಾದ, ನಿಜವಾಗಿಯೂ ಮಹಾತ್ಮರಾದ ಗಾಂಧಿಯವರಿಂದ, ರಾಜಕೀಯದಲ್ಲಿ ಅವರ ದೃಷ್ಟಿಯನ್ನಿಟ್ಟುಕೊಂಡಿರದವರಿಗೂ ಕೂಡ ಸ್ಫೂರ್ತಿ ಶಾಂತಿಗಳು ದೊರೆಯುವುದರಲ್ಲಿ ಸಂದೇಹವಿಲ್ಲ.

ಈ ಅವಶ್ಯಕತೆಗಳಿಗಾಗಿ — ಮಕ್ಕಳ ವಿದ್ಯಾಭ್ಯಾಸಕ್ಕೆ ಕೂಡ—ನಿಮ್ಮ ಈಗಿನ ವರಮಾನವು ನಿಂತರೂ ನೀವು ಹಣ ಕೊಡಲೇಬೇಕು. ಆದುದರಿಂದ ಯಾವ ಹೆಚ್ಚಿಗೆ ಖರ್ಚುಗಳನ್ನು ನೀವು ಬಿಡಬಹುದೆಂಬುದನ್ನು ನೋಡಿಕೊಳ್ಳಿ, ಮತ್ತು ನಿಮ್ಮ ಸಂಪಾದನೆ ನಡೆಯುವವರೆಗೆ ಆ ಉಳಿದ ಹಣವನ್ನು ಬೇರೆ ಇಡುತ್ತ ಹೋಗಿರಿ.

ಭವಿಷತ್ತಿಗೆ ಉಳಿಸಿರಿ — ನಿಮ್ಮ ಸುರಕ್ಷತೆಯು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿಯೇ ಇದೆ.

ರೂ. ೪|| ಲಾಭ ಪ್ರತಿ ೧೦ ರೂ. ಗೆ Kn.S.I. 38.

HALFTONE & LINE
BLOCK MAKING
UNDERTAKEN
Sharada Press,
MANGALORE

ಲೀಲಾ ಚಿಟ್ನಿಸ್

ಬೊಂಬೇ ಟಾಕೀಸಿನೊಡನೆ ಮಾಡಿಕೊಂಡ ಕರಾರಿನಂತೆ ಲೀಲಾ ಚಿಟ್ನಿಸಳು ಇನ್ನೂ ಕೆಲ ಕಾಲದ ತನಕ ಅದರಲ್ಲಿ ಅಭಿನಯಿಸಬೇಕಾಗಿದೆ. ಕರಾರಿನ ಕಡೆಯ ವಾಯಿದೆ ೧೯೪೨ನೆಯ ಇಸವಿಯ ಮಾರ್ಚ ತನಕವಿದೆ.

ಶಾಂತಾಆಪ್ಟೆ ಮತ್ತು ಸೈಗಲ್ ಪಂಜಾಬಿ ಫಿಲ್ಮಿನಲ್ಲಿ

ಶಾಂತಾಆಪ್ಟೆ ಮತ್ತು ಸೈಗಲ್ ಇವರಿಬ್ಬರು ಪಂಚೋಲಿ ಆರ್ಟ ಪಿಕ್ಚರ್ಸ್ ಸಂಸ್ಥೆಯ ವ್ಯವಸ್ಥಾಪಕರೊಂದಿಗೆ ಕರಾರು ಮಾಡಿಕೊಂಡಿರುವರೆಂದು ಲಾಹೋರಿನಿಂದ ಸುದ್ದಿ ಬಂದಿದೆ.

ಶಾಂತಾಆಪ್ಟೆಗೆ ಪ್ರತಿಯೊಂದು ಚಿತ್ರಕ್ಕೆ ೩೫,೦೦೦ ರೂಪಾಯಿಗಳಷ್ಟು ಕೊಡಲಾಗುವುದೆಂದೂ ಸೈಗಲನಿಗೆ ಹಾಗೆಯೇ ೧೩,೦೦೦ ರೂಪಾಯಿಗಳು ಕೊಡಲ್ಪಾಗುವುದೆಂದೂ ವಾರ್ತೆ

೫ ಮಿಲಿಯನ ರೂಪಾಯಿಗಳ ಚಿತ್ರ

ಹೋಲಿವುಡ್ಡಿನಲ್ಲಿ ಮಿಲಿಯ ಡಾಲರುಗಳ ಚಿತ್ರಗಳು ತಯಾರಾಗುವಂತೆ ಭಾರತದಲ್ಲಿ ಮಿಲಿಯ-ರೂಪಾಯಿಗಳ ಚಿತ್ರವು ಬೇಗನೇ ತಯಾರಾಗಲಿದೆ. ಇಂತಹ ಕೀರ್ತಿಯು 'ಪುಕಾರ್' ಚಿತ್ರದ ರಚಕರಾದ ನಿರ್ದೇಶಕ ಮೋದಿಯವರಿಗೆ ಸಲುವುದು. 'ಮಹಾತ್ಮಾ ಅಲೆಗ್ಸಾಂಡರ್'' ಎಂಬೀ ಚಿತ್ರವನ್ನು ಅವರೀಗ ತಯಾರಿಸುತ್ತಿದ್ದಾರೆ. ಭಾರತದಲ್ಲಿ ಇಷ್ಟೊಂದು ವೆಚ್ಚಗಳನ್ನು ಮಾಡಿ ತಯಾರಿಸಿದ ಚಿತ್ರವು ಬೇರೊಂದು ಇರಲಾರದೆಂದು ಸ್ಟುಡಿಯೋ ಸಂದರ್ಶಿಸಿದವರೆಲ್ಲರೂ ಅಭಿಪ್ರಾಯಪಡುತ್ತಾರೆ.

ನಾರದ ನಾರದಿ

ಪಂಚೋಲಿ ಫಿಲ್ಮಿನವರು ಖಜಾಂಚಿ ಚಿತ್ರವನ್ನು ತಯಾರಿಸಿ, ಈಗ ನಾರದ ನಾರದಿ ಎಂಬ ಪೌರಾಣಿಕ ಚಿತ್ರದ ತಯಾರಿಕೆಯನ್ನು ಆರಂಭಿಸಿದ್ದಾರೆ. ಇದೊಂದು ಹಾಸ್ಯ ವಿಡಂಬನಾಮಯ ಚಿತ್ರವಾಗಿದೆ

ಸಿಕೋರ್ಗಿ ಪ್ರೊಡಕ್ಶನ್

ಸಿಕೋರ್ಗಿ ಪ್ರೊಡಕ್ಶನಿನ ಮೆನೇಜಿಂಗ್ ಡೈರೆಕ್ಟರ್ ಸ್ಥಾನಕ್ಕೆ ಚಿಮನ್‌ಲಾಲ ತ್ರಿವೇದಿಯವರು ರಾಜಿನಾಮೆಯಿತ್ತಿರುವರಾಗಿ ತಿಳಿಯುತ್ತದೆ.

ಭಗವಾನ್ ಬುದ್ಧನವರು

ನಿರ್ದೇಶಕ ಮೋದಿಯವರ ಮುಂದಿನ ಚಿತ್ರ 'ಭಗವಾನ್ ಬುದ್ಧ'ದ ತಯಾರಿಕೆಯ ಪ್ರಯತ್ನಗಳು ಈಗಾಗಲೇ ಪ್ರಾರಂಭವಾಗಿವೆ ಬಾಲ್ಯಕಾಲದ ಮತ್ತು ತಾರುಣ್ಯದ ಬುದ್ಧನನ್ನು ಹೋಲುವ ಒಂದೇ ತರದ ಇಬ್ಬರನ್ನು ಕಂಡು ಹುಡುಕುವ ಕೆಲಸವು ಆರಂಭವಾಗಿದೆ ಅವರು ಸಿಕ್ಕಿದ ಮೇಲಾದರೂ ಆರೇಳು ತಿಂಗಳ ತನಕ ಅವರಿಗೆ ಅಭ್ಯಾಸಬೇಕಾಗಬಹುದೆಂದು ತಿಳಿದುಬರುತ್ತದೆ.

ಬುದ್ಧನ ದಿನದ ಜೀವನವನ್ನು ಅನುಕರಿಸಬೇಕಾದರೆ ಅಸಾಧಾರಣವಾದ ಅಭ್ಯಾಸಬೇಕಾಗಬಹುದೆಂದು ಮೋದಿಯವರು ತಿಳಿದಿದ್ದಾರೆ.

ದೇವಿಕಾರಾಣಿ

ದೇವಿಕಾರಾಣಿಯನ್ನು ಬೇಗನೇ ಸಿನೆಮಾರಂಗದಲ್ಲಿ ಪುನಃ ಕಾಣಬಹುದಾಗಿದೆ. ಮುಂದಿನ ಚಿತ್ರದಲ್ಲಿ ಅಶೋಕ ಕುಮಾರ್ ಮತ್ತು ದೇವಿಕಾರಾಣಿ ಇವರು ನಾಯಕ ನಾಯಿಕೆಯರಾಗಿ ಅಭಿನಯಿಸುವರೆಂದು ಬೊಂಬಾಯಿಯಿಂದ ಸುದ್ದಿ ಬಂದಿದೆ

ಚಲನಚಿತ್ರವು ದಿನದ ಜೀವನದಲ್ಲಿ

ಖಾಂಡೇಕರರ ಅಭಿಮತ

ಇಪ್ಪತ್ತೈದನೆಯ ಮರಾಠೀ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ ಪ್ರಸಿದ್ಧ ಲೇಖಕಗ್ರಂಥಕರ್ತರಾದ ಶ್ರೀ ವಿ.ಎಸ್. ಖಾಂಡೇಕರರು ಸಿನಿಮಾಗಳು ಇಂದಿನ ಜನಜೀವನದಲ್ಲಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿವೆಯೆಂಬ ವಿಷಯವನ್ನು ಪ್ರಸ್ತಾಪಿಸುತ್ತಾ, ತನ್ನ ಮಗನು ೧೦೦ ರೂಪಾಯಿಗಳ ನೋಟೊಂದನ್ನು ಕದ್ದು ಆ ವಿಷಯದಲ್ಲಿ ಪ್ರಶ್ನಿಸಿದಾಗ 'ಗೀತಾ' ಚಿತ್ರದಲ್ಲಿ ಕದ್ದುಕೊಳ್ಳಲಿಲ್ಲವೇ ಎಂದು ಪ್ರಶ್ನಿಸಿದನೆಂದೂ, ಮಿನಾಕ್ಷಿಯು ಮಿಂಯುತ್ತಿದ್ದಾಗಿನ ಸ್ವರೂಪ ನೋಡುವ ಸಲುವಾಗಿ ಬಿಜಾಪುರದ ಒಬ್ಬನು ೪೨ ಸಲ ಆ ಚಿತ್ರವನ್ನು ನೋಡಿರುವನೆಂದೂ ಹೇಳಿದರು.

ಭಾರತೀಯರು ಸಮ್ಮತಿಸಲಾರರು

ಸ್ನೇಹಪ್ರಭೆಯು ಭಾರತೀಯ ನಟಿಯರ ಕುಲೀನತೆಯ ವಿಷಯದಲ್ಲಿ ಪುರುಷರ ವಿಮರ್ಶಕರು ಪಡುವ ಊಹಾಪೋಹೆಗಳ ಕುರಿತು ಒಂದು ಟೀಕಾತ್ಮಕ ಲೇಖನ ಬರೆದಿದ್ದಳು. ಅದಕ್ಕೆ ಉತ್ತರ ಕೊಡುತ್ತಾ ಅವ್ಯಕ ಒಜಾರ್ ಪತ್ರಿಕೆಯಲ್ಲಿ ಶ್ರೀ ಬನಬಿಹಾರಿಸೇನ ಗುಪ್ತರು, ಯಾವನೇ ಕುಲೀನ ಭಾರತೀಯನು ತನ್ನ ಹೆಂಡತಿ, ಸೋದರಿ, ಕುಮಾರಿಯರನ್ನು ಚಲನಚಿತ್ರದಲ್ಲಿ ಅಭಿನಯಿಸಲು ಬಿಡಲಾರನೆಂದೂ ಈ ವಿಷಯವು ಪುರುಷ ವಿಷಯದಲ್ಲಿಯೂ ಅನ್ವಯಿಸುತ್ತದೆಯೆಂದೂ ವಾದಿಸಿರುವರು

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S No 14/1941

ವಾದಿರು—1. ಜನಾರ್ದನ 2 ಗೋಪಾಲಕೃಷ್ಣ ಮಂಜುನಾಥ ಕಮ್ತಿರ ಮಗಂದಿರು—ಮ್ಯನರರು, ಕ್ಷೇಮಚಿಂತಕಳು ತಾಯಿ 3ನೆ ವಾದಿಳು 3. ಶೀಲಾವತಿ ಅಮ್ಮ ಸಹಿತ ಮಂಜುನಾಥ ಕಮ್ತಿರ ವಿಧವೆ ಉಡುಪಿ ತಾಲೂಕು ಬಾರಕೂರಲ್ಲಿ ರುವವರು

ಪ್ರತಿವಾದಿರು 1 ಮತಾಯಸ್ ಡಿ'ಸೋಜ 2 ಇನಾಸ್ ಡಿ'ಸೋಜ 3 ಶಿವಾನ್ ಡಿ'ಸೋಜ 4 ಮರಿಯಾನ ಡಿ ಸೋಜ, ಸಾಲೊಮ ಡಿ ಸೋಜರ ಮಗಂದಿರು—ಉಡುಪಿ ತಾಲೂಕು ಪಾಂಗಾಳ ಗ್ರಾಮದಲ್ಲಿ ರುವವರು

1, 3 4ನೇ ಪ್ರತಿವಾದಿಗೆ ತಿಳುಹಿಸುವುದೇನಂದರೆ—

ತಾ. 21—9—1920ರ ರಜಿಸ್ಟ್ರಿ ಮೂಲಗೇಣಿ ಎಮದುನಡಿಯ ಆಧಾರದ ಮೇಲೆ ಭೂಮಿ ಸ್ವಾಧೀನತೆಗೂ ಗೇಣಿ ವ ಹುಟ್ಟುವಳಿಗೂ ವಾದಿದ ಸದರಿ ದಾವೆಯನ್ನು ತಾರೀಕು 3—6—1941ಕ್ಕೆ ತನಕಿಗ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಉಜ್ರಗಳಿದ್ದರೆ ತನಕಿ ದಿವಸ ಯಾ ಮುಂದಾಗಿ ಕೋರ್ಟಿನ ಮುಂದೆ ಜಾಹೀರು ವಾಗತಕ್ಕದಾಗಿ ಈ ಮೂಲಕ ನಿಮಗೆ ತಿಳುಹಿಸಲಾಗಿಯದೆ ಇಲ್ಲವಾದರೆ ನಿಮ್ಮ ಗೈರ ಹಾಜರಿಯಿಂದ ನಿರ್ಣಯ ತೀರ್ಮಾನಿಸಲ್ಪಡುವುದು

20-4-41 ಕುಂದಾಪುರ

M. M. Ural, Advocate for Plaintiffs

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚುಬ್ಬುಗಳಿರುವದೇ ಚರ್ಮವು ಒರಟಾಗಿರುವುದೇ ಅದರ ಕುರಿಗಜ್ಜಿಯಿಂದ ಕೆಟ್ಟಿರುವುದೇ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ಕೈಲ್ಯ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticura Soap) ತೊಳೆಯಿರಿ

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಘಮಘಮಿಸುವ ಸಾಬೂನಾಗಿರುತ್ತದೆ, ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿ ಸೌಂದರ್ಯ ಮತ್ತು ಆರೋಗ್ಯಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ ಕುಟಿಕೂರಾ ಮುಲಾಮು (Cuticura Ointment) ನಿಂದ ಮುಜ್ಜಣ, ಕಜ್ಜಿ, ಗಜ್ಜಗಳನ್ನು ನಾಶಮಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನ್ನು ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಹಿತಕರವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು

ಕುಟಿಕೂರಾ ಸಾಬೂನು
Cuticura Soap

ಕುಟಿಕೂರಾ ಸಾಬೂನ ಈಗ ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಮುಖಕ್ಕೆ) ದೊರೆಯುತ್ತದೆ.

ಧ್ಯೇಯದ ಸಲುವಾಗಿ ಸಾಯುವುದೂ ಸುಖಕರವಾದುದು!

ವ್ಯಕ್ತಿ ಸಾಯಬಹುದು; ಜನಾಂಗ ಬಾಳಲೇ ಬೇಕು

ಭಾರತವು ಬಾಳುವುದು ಮಾತ್ರವಲ್ಲ—

ಸ್ವಾತಂತ್ರ್ಯ ಕೀರ್ತಿಗಳಿಂದ ಬೆಳಗುವುದು

ಬೋಸರ ಹಲವು ವಿಚಾರಭಾವನೆಗಳು

ಸುಬಾಸರು ಸರಕಾರಕ್ಕೆ ಬರೆದೊಂದು ಪತ್ರ

ಕಳೆದ ನವೆಂಬರ ಕಲ್ಕತ್ತ ಪ್ರೆಸಿಡೆನ್ಸಿ ಜೈಲಿನಲ್ಲಿ ಸುಬಾಸ ಬಾಬುಗಳನ್ನು ಸ್ಥಾನಬದ್ಧರಾಗಿಟ್ಟ ಸಂದರ್ಭ ಸರಕಾರದ ಆ ವರ್ತನೆಯ ಕುರಿತು ನೈತಿಕ ನಿಷೇಧವನ್ನು ವ್ಯಕ್ತಪಡಿಸುವ ಸಲುವಾಗಿ ಮರಣಾಂತ್ಯ ಉಪವಾಸ ಕೈಕೊಳ್ಳುವ ನಿರ್ಧಾರಮಾಡಿದಬೋಸರು ಬಂಗಾಳ ಸರಕಾರಕ್ಕೆ ಹಲವು ಪತ್ರಗಳನ್ನು ಬರೆದಿದ್ದರು. ಆ ಪತ್ರಗಳನ್ನು ಈಗ ಶ್ರೀ ಮುಕುಂದಲಾಲ ಸರ್ಕಾರರು ಪ್ರಕಟಿಸಿದ್ದಾರೆ. ಅದರಲ್ಲಿ ಸುಬಾಸರ ತಲೆಯ ಸುತ್ತ ಸುಳಿಯುತ್ತಿದ್ದ ಅಂದಿನಹಲವಾರುವಿಚಾರಗಳು ಹಾಗೂ ಆಕಸ್ಮಿಕ ಅದೃಶ್ಯದ ಸಂಗತಿಯ ಕಾರಣವೂ ಸೂಚಿತವಾಗುತ್ತದೆ.

ತನ್ನನ್ನು ಸೆರೆಗೆ ಸೇರಿಸಿದ ಕಾರಣಗಳನ್ನು ವಿವರಿಸುತ್ತಾ, ಸುಬಾಸರು ಈ ರೀತಿಯಾಗಿ ಬರೆಯುತ್ತಾರೆ:

'ಇಂದು ಒದಗಿರುವೀ ಪರಿಸ್ಥಿತಿಯಲ್ಲಿ ನನಗೆ ಬಾಳುವುದೇ ಅಸಾಧ್ಯ. ನಿಯಮರಹಿತತೆಯೊಡನೆ, ಅನ್ಯಾಯದೊಡನೆ ಸಮಾಧಾನ ಮಾಡಿಕೊಂಡು ಜೀವನ ಮಾಡುವುದೂ ನನಗೆ ಅಸಾಧ್ಯವೇ. ಈ ತರದ ಕಷ್ಟಸಹಿಷ್ಣುತೆಯ ಬದಲು ನಾನು ನನ್ನಜೀವನವನ್ನು ಕಳಕೊಳ್ಳುವುದೂ ಉಚಿತವೇ ಎನಿಸುತ್ತದೆ.

ಶಾಶ್ವತವಾದ ನಿಯಮ

'ಸರಕಾರವು ನನ್ನನ್ನುಪಶುಶಕ್ತಿಯಿಂದ ಸೆರೆಮನೆಯಲ್ಲಿ ಕೆಡಹಿದೆ. ನಾನು ಉತ್ತರವಾಗಿ ಹೀಗೆ ಹೇಳುತ್ತೇನೆ. 'ನನ್ನನ್ನು ಬಿಡುಗಡೆ ಮಾಡಿರಿ—ಇಲ್ಲವಾದರೆ ನಾನು ಬದುಕಲಾರೆ; ನಾನು ಬದುಕಬೇಕೋ ಸಾಯಬೇಕೋ ಎಂಬ ಕುರಿತು ನಿಶ್ಚಯ ಮಾಡುವ ಅಧಿಕಾರ ನನ್ನದಾಗಿರುತ್ತದೆ..

'ಈಗ ಇಲ್ಲಿ ಯಾವುದೇ ತರದ ಫಲವೂ ಕಾಣದಿದ್ದರೂ, ಬಲಿದಾನವು ಎಂದೂ ವ್ಯರ್ಥವಾಗುವುದಿಲ್ಲ. ಕಷ್ಟ ಸಹಿಷ್ಣುತೆ ಮತ್ತು ಬಲಿದಾನಗಳಿಂದಲೇ ಪ್ರತಿಯೊಂದು ಕಾಲದಲ್ಲೂ ಉದ್ದೇಶವು ಲಭಿಸುವುದು ಮತ್ತು ಅಭಿವೃದ್ಧಿಹೊಂದುವುದು. ಶಾಶ್ವತ ನಿಯಮವು ಹೀಗಿರುತ್ತದೆ!—'ವೀರನ ನೆತ್ತರಿನಲ್ಲಿ ದೇವಾಲಯದ ಬೀಜವು ಅಡಕವಾಗಿದೆ.'

'ಈ ಅಶಾಶ್ವತ ಜಗತ್ತಿನಲ್ಲಿ, ಪ್ರತಿಯೊಂದೂ ಮರಣೋನ್ಮುಖವಾದುದು; ಖಂಡಿತ ಮರಣಹೊಂದಲೇಬೇಕಾದುದು. ಆದರೆ ನಿಶ್ಚಿತ, ಧ್ಯೇಯ ಮತ್ತು ಆದರ್ಶಗಳು ಎಂದೂ ನಾಶವಾಗಲಾರವು. ಒಂದು ಆದರ್ಶದ ಸಲುವಾಗಿ, ಒಬ್ಬ ವ್ಯಕ್ತಿಯು ಸಾಯಲೂ ಬಹುದು; ಆದರೆ ಆತನ ಮರಣದ ನಂತರವೂ ಆ ಆದರ್ಶವು ಉಳಿಯುವುದು. ಆ ಆದರ್ಶವು ಸಾವಿರಾರು ರೂಪಗಳಲ್ಲಿಯೂ ಅವತಾರ ಹೊಂದುವುದು.

ಆತ್ಮತೃಪ್ತಿಯು ಎಲ್ಲಿ?

'ಒಂದು ಧ್ಯೇಯದ ಸಲುವಾಗಿ ಬದುಕಿದ್ದು ಅದಕ್ಕಾಗಿ ಸತ್ತನೆಂಬ ವಿಷಯದಲ್ಲಿರುವಷ್ಟು ಹೆಚ್ಚಿನ ಸಮಾಧಾನವು ಬೇರೆ ಇನ್ನು ಯಾತರಿಂದ ಲಭಿಸಕಕ್ಕದ್ದಿದೆ? ತನ್ನ ಶಕ್ತಿಯು ಹಲವು ಹೃದಯಗಳನ್ನು ಸ್ಫೂರ್ತಿಗೊಳಿಸಿ, ತಾನು ಮುಗಿಸದೆ ಅಪೂರ್ಣವಾಗಿಟ್ಟ ಕಾರ್ಯವನ್ನು ಆ ಶಕ್ತಿಯು ಪೂರ್ಣಗೊಳಿಸದೆ ಬಿಡದು ಎಂಬ ತಿಳುವಳಿಕೆಗಿಂತ ಹೆಚ್ಚಿನ ಆತ್ಮತೃಪ್ತಿಯು ಬೇರೆ ಯಾವುದು ಬೇಕಾಗಿದೆ? ತನ್ನ ಸಂದೇಶವು, ತನ್ನ ಭೂಮಿಯ ಮೂಲೆಮೂಲೆಗಳಲ್ಲಿ, ಗಿರಿಕಂದರಗಳಲ್ಲಿ, ವಿಶಾಲ ಬಯಲಿನಲ್ಲಿ ಮತ್ತೆ ಸಮುದ್ರದಾಚೆಗಳಲ್ಲಿಯೂ ಕೂಡಾ ಪಸರಿಸಬಲ್ಲುದೆಂಬ ಆತ್ಮಸಂತೋಷವಿರುವಲ್ಲಿ ಅದಕ್ಕಿಂತ ಹೆಚ್ಚಿನ ಬಹುಮಾನ ಯಾವುದು ದೊರಕಬೇಕಾಗಿದೆ? ತನ್ನ ಧ್ಯೇಯದ ಸಲುವಾಗಿ ಸಾವ ಸಂತೋಷಕ್ಕಿಂತ ಹೆಚ್ಚಿನ ಸಮಾಧಾನವು ಜೀವನದಲ್ಲಿ ಬೇರೆ ಏನಿದೆ?

'ಅದಕಾರಣ, ಕಷ್ಟಾನುಭವ ಹಾಗೂ ಬಲಿದಾನಗಳಿಂದ ಯಾವನಿಗೂ ಏನೂ ನಷ್ಟವಿಲ್ಲ. ಈ ಭೂಮಿಯಲ್ಲಿ ಆತನಿಗೆ ನಷ್ಟವೇ ಆಗುವುದಿದ್ದರೂ ಒಂದು ಅಮರ ಜೀವನದ ಪ್ರತಿನಿಧಿಯಾಗಿ ಉಳಿಯುವುದರಿಂದ ಆತನು ಪ್ರತಿಫಲವಾಗಿ ಹೆಚ್ಚಿನದನ್ನೇ ಹೊಂದುತ್ತಾನೆ.

"ಇದು ಆತ್ಮದ ಗುರಿ. ಪ್ರತಿಯೊಬ್ಬ ವ್ಯಕ್ತಿಯೂ ಸಾಯಲೇ ಬೇಕು. ಅದರಿಂದಲೇ ಜನಾಂಗವು ಬದುಕಿರಬೇಕಾಗಿದೆ. ಇಂದು ನಾನು ಸಾಯಲೇ ಬೇಕು. ಆದರೆ ಭಾರತವು ಬದುಕಿರಬೇಕು, ಮತ್ತು ಸ್ವಾತಂತ್ರ್ಯ ಕೀರ್ತಿಗಳನ್ನು ಪಡೆಯಲೇ ಬೇಕು.'

ಸುಭಾಸರು

CANARA BANK LIMITED

(Incorporated in British India with Limited Liability.)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6,00,000— 0— 0	Premises & Furniture	94,217— 6—8
Paid up	3,92,551—15—11	***Advances to Customers***	
Reserve Funds	4,50,000— 0— 0	Secured by Valuable	
Deposits	66,71,764— 2— 6	Securities	37,87,804—13—8
Due to Bankers	Nil	Secured by Bills of	
Sundries	7,98,533—14— 5	Exchange etc.	9,29,550— 0—6
Net Profits		***Investments***	20,34,328—12—9
Appropriation account 1,244—10— 6		***Sundries***	6,81,012— 5—7
Net Profit for the year 71,726— 5— 0		***Cash On Hand And at Call At***	
72,970—15— 6		***Bankers***	28,17,538— 5—7
Less amount transferred to Reserves 41,369—3—7	31,601—11—11		
Rs.	1,03,44,451—12— 9	Rs.	1,03,44,451—12 9

THE CANARA INDUSTRIAL & BANKING SYNDICATE, LIMITED.

(Incorporated in British India. Liability of shareholders limited)

Estd) (1925

Haed Office: UDIPI. S. India.

Authorised Capital	Rs. 50,00,000.
Subscribed Capital	Rs. 13,11,000.
Paid-up Capital	Rs. 5,50,000.
Reserves	Rs. 2,10,000.

35 Branches in the important commercial centres of Karnatak, Malabar and Rayalaseema Districts and in Bombay.

All kinds of Banking business transacted.

Our new issue of Rs. 40 lakhs of 5% Tax Free Cumulative Preference Shares of Rs. 10 each is an ideal form of safe and remunerative investment with unique features.

Apply for Prospectus.

ಗೊಬೆಲ್ಸನು ನೆಹರುಗಳನ್ನು ಸಂದರ್ಶಿಸಿದ ಸುದ್ದಿ ಸತ್ಯವಲ್ಲ

ಹಿಟ್ಲರನಿಂದ ಪತ್ರವೂ ಬಂದದ್ದಿಲ್ಲ

ಡಾ| ವಿದ್ಯಾಲಂಕಾರರ ಲೇಖನ ವಿವರವು ಸರಿಯಾಗಿಲ್ಲ

ವಿಜಯ ಲಕ್ಷ್ಮಿ ಪಂಡಿತರ ಲೇಖನ

ಪಂಡಿತ ನೆಹರುಗಳು ಮುಸಲಿನಿಯ ಆಮಂತ್ರಣವನ್ನು ತಿರಸ್ಕರಿಸಿದ್ದರೆಂದೂ, ಹಿಟ್ಲರನ ಭೇಟಿಯನ್ನು ಅಲ್ಲಗಳೆದಿದ್ದರೆಂದೂ ಕಳೆದ ತಿಂಗಳಲ್ಲಿ ಭಾರತದ ಹಲವು ಪತ್ರಿಕೆಗಳಲ್ಲಿ ಬಹಳ ರೋಮಾಂಚಕವಾದ ವಾರ್ತೆಯು ಹರಡಿತ್ತು. ಡಾ| ವಿದ್ಯಾಲಂಕಾರರೆಂಬವರು ಹಿಂದೀ ಪತ್ರಿಕೆಯೊಂದರಲ್ಲಿ ಬರೆದ ಲೇಖನದ ಅನುವಾದವೆಂದೂ ಅದು ಪ್ರಸಿದ್ಧವಾಗಿತ್ತು. ಡಾ| ವಿದ್ಯಾಲಂಕಾರರು ೧೯೩೮ರಲ್ಲಿ ಮ್ಯುನಿಕಿನಲ್ಲಿದ್ದರೆಂದೂ, ಆ ಸಮಯದಲ್ಲಿಯೇ ನೆಹರು ಇಳಿದಿದ್ದ ಹೊಟೆಲಿಗೆ ಡಾ| ಗೊಬೆಲ್ಸನು ಹಿಟ್ಲರನ ಮುದ್ರೆಯೊತ್ತಿದ ಆಮಂತ್ರಣ ಪತ್ರ ತಂದಿದ್ದನೆಂದೂ ಆ ಲೇಖನದಲ್ಲಿ ವರ್ಣಿತವಾಗಿತ್ತು. ಆ ವಿಷಯದಲ್ಲಿ ನೆಹರು ಸೋದರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಒಂದು ಲೇಖನ ಬರೆಯುತ್ತಾ, ಆ ಸುದ್ದಿಯು ಸತ್ಯವಲ್ಲವೆಂದೂ ನೆಹರುರವರೇ ಆ ಕುರಿತು ತನಗೆ ತಿದ್ದಿ ಬರೆಯಲು ಹೇಳಿರುವ ರೆಂದೂ ವಿವರಿಸುತ್ತಾರೆ.

ಅವರ ಲೇಖನದ ಅಭಿಪ್ರಾಯವಿಂತಿದೆ:

'ನೆಹರು ಮ್ಯುನಿಕಿಗೆ ಹೋದ ಸಂದರ್ಭದಲ್ಲಾಗಲಿ, ಅಥವಾ ಇನ್ನಿತರ ಬೇರೆ ಯಾವುದೇ ಸಮಯದಲ್ಲೇ ಆಗಲಿ ನೆಹರು ಡಾ| ಗೊಬೆಲ್ಸನನ್ನು ಕಂಡದ್ದು, ಆತನೊಡನೆ ಯಾವುದೇ ತರದ ವ್ಯವಹಾರ ಮಾಡಿದ್ದೂ ಇಲ್ಲ. ಆ ಸಮಯದಲ್ಲಾಗಲಿ, ಅದಕ್ಕಿಂತ ಹಿಂದೆಯಾಗಲಿ, ಮುಂದೆಯಾಗಲಿ, ನೆಹರು ಹೆರ್ ಹಿಟ್ಲರನಿಂದ ಯಾವುದೇ ತರದ ಪತ್ರವನ್ನೂ ಪಡೆದದ್ದಿಲ್ಲ.

'೧೯೩೮ನೆಯ ಇಸವಿಯ ಆಗಸ್ಟಿನಲ್ಲಿ ನನ್ನ ಸೋದರ ನೆಹರು ಮ್ಯುನಿಕಿಗೆ ಹೋದಾಗ ನಡೆದ ಸಂಗತಿಗಳ ಕುರಿತು ಡಾ| ನಾರಾಯಣದತ್ತ ವಿದ್ಯಾಲಂಕಾರರು ಹಿಂದೀ ಪತ್ರಿಕೆಯೊಂದರಲ್ಲಿ ಬರೆದ ಲೇಖನದ ಭಾಷಾಂತರಗಳನ್ನು ಹಲವು ಭಾರತೀಯ ಪತ್ರಿಕೆಗಳು ಪ್ರಕಟಿಸಿವೆ. ನನ್ನ ಸೋದರನು ಮ್ಯುನಿಕನ್ನು ಸಂದರ್ಶಿಸಿದ ಒಂದೆರಡು ವಾರಗಳ ನಂತರ ನಾನು ಆತನನ್ನು ಯೂರೋಪಿನಲ್ಲಿ ಕಂಡಿದ್ದೆನು. ಆಗ ಆತನು ನನಗೆ ಅಲ್ಲಿ ನಡೆದ ವಿಷಯಗಳೆಲ್ಲವನ್ನೂ ಹೇಳಿದ್ದನು.

ತಪ್ಪು ತಿದ್ದ ಹೇಳಿದ್ದಾನೆ

'ನನ್ನ ಅಂದಿನ ನೆನಪುಗಳನ್ನು ಮತ್ತು ಈ ಲೇಖನದ ವಿವರಗಳನ್ನು ಹೋಲಿಸಿ ನೋಡಿ ನಿಶ್ಚಿತಾಂಶವನ್ನು ತಿಳಿವ ಕುತೂಹಲದಿಂದ ನಾನು, ಮೊನ್ನೆ ನೆರೆಮನೆಯಲ್ಲಿ ಅವನ ಭೇಟಿ ತೆಗೆದುಕೊಂಡಾಗ ಡಾ| ವಿದ್ಯಾಲಂಕಾರರ ಲೇಖನದ ಕಡೆಗೆ ಅವನ ಗೋಚರವನ್ನು ಎಳೆದೆನು. ಅವನಿಗೆ ಆ ಲೇಖನದಲ್ಲಿರುವ ಹಲವು ಊಹನಾಮಯ ಅಸತ್ಯ ಸಂಗತಿಗಳ ಕುರಿತು ಆಶ್ಚರ್ಯವಾಯಿತು; ಅವನು ನನ್ನೊಡನೆ ಅದರಲ್ಲಿರುವ ತಪ್ಪುಗಳನ್ನು ತಿದ್ದಿ ಲೇಖನ ಬರೆಯಲು ಹೇಳಿದನು.

'೧೯೩೮ರಲ್ಲಿ ಯೂರೋಪಿಗೆ ತೆರಳುವ ಮುನ್ನ ಮತ್ತು ಲಂಡನಿನಲ್ಲಿರುವ ಸಮಯವೂ ಕೂಡಾ, ಜರ್ಮನ್ ಸರಕಾರದಿಂದ, ಅಧಿಕೃತವೂ ಸಂಪೂರ್ಣ ಅಧಿಕೃತವಲ್ಲದ್ದೂ ಆದ ಪತ್ರಗಳನ್ನು ಆತನು ಪಡೆದಿದ್ದನು. ಅದರಲ್ಲಿ ಆತನು ಜರ್ಮನಿಯನ್ನು ಸಂದರ್ಶಿಸಿ, ಅಲ್ಲಿ ಹೊಸ ಆಡಳಿತವು ಹೇಗೆ ನಡೆಯುತ್ತದೆ ಎಂಬುದನ್ನು ನೋಡಬೇಕಾಗಿ ಆಮಂತ್ರಣವಿದ್ದಿತು.

ಆತನ ಅಭಿಮತ ತಿಳಿದಿತ್ತು

'ಆತನು ನಾಜಿ ಆಡಳಿತ ವಿಷಯದಲ್ಲಿ ಬದ್ಧ ವಿರೋಧವಾದ ಅಭಿಮತವುಳ್ಳವನೆಂದು ಅವರಿಗೂ ತಿಳಿದಿತ್ತು. ಹಾಗಿದ್ದರೂ ಆತನಿಗೆ ಅಲ್ಲಿನ ವಿಷಯಗಳನ್ನು ಇಚ್ಛೆ ಬಂದಂತೆ ಪ್ರತ್ಯಕ್ಷವಾಗಿ ನೋಡಿ ತಿಳಿಯಲು ಅವರು ಆಮಂತ್ರಿಸಿದ್ದರು. ಅವನು ಜರ್ಮನಿಗೆ ಸರಕಾರದ ಅತಿಥಿಯಾಗಿಯೋ ಅಥವಾ ಇತರ ವಿಧದಿಂದಲೋ ಅವನಿಗೆ ಇಷ್ಟವಿದ್ದಂತೆ ಹೋಗಬಹುದಾಗಿತ್ತು. ಆಗ ಯೂರೋಪಿನಲ್ಲಿ ಪಸರಿಸಿದ್ದ ಪರಿಸ್ಥಿತಿಗಳ ಪರಿಶೀಲನೆಯಿಂದ ನನ್ನ ಸೋದರನಿಗೆ ಆಗ ಜರ್ಮನಿಯನ್ನು ಸಂದರ್ಶಿಸುವ ಅಭಿಲಾಷೆಯಿರಲಿಲ್ಲವಾಗಿ ತನ್ನ ಆ ಸಲದ ಯೂರೋಪ ಯಾತ್ರೆಯ ಸಮಯದಲ್ಲಿ ಜರ್ಮನಿಯನ್ನು ಸಂದರ್ಶಿಸಲು ತನಗೆ ಅನುಕೂಲವಾಗುವುದಿಲ್ಲವೆಂದೂ, ಈ ಬಗ್ಗೆ ಇತ್ತ ಆಮಂತ್ರಣದ ಬಗ್ಗೆ ತಾನು ಅಧಿಕಾರೀ ವರ್ಗದ ಉದಾರ ಹೃದಯವನ್ನು ಕೊಂಡಾಡುತ್ತೇನೆಂದೂ, ಹೀಗೆ ಆಮಂತ್ರಣಕ್ಕೆ ಸರಿಯಾಗಿ ನಡೆಯಲು ತೊಂದರೆಯಾದ ಬಗ್ಗೆ ವಿಷಾದಿಸುತ್ತೇನೆಂದೂ ಆತನು ತಿಳಿಸಿದ್ದನು.

ಭಾರತೀಯ ವಿದ್ಯಾರ್ಥಿಗಳೊಂದಿಗೆ

'೧೯೩೮ರ ಪ್ರಾರಂಭದಲ್ಲಿ ನನ್ನ ಸೋದರನು ತನ್ನ ಕುಮಾರಿಯೊಡನೆ ಪ್ಯಾರಿಸಿನಿಂದ ಪ್ರೇಗ ದಾರಿಯಾಗಿ ಹೊರಟಿದ್ದನು. ತನ್ನ ಇಷ್ಟ ಸಂದರ್ಶನ ಸ್ಥಳವಾದ ಮ್ಯುನಿಕಿನ ಡ್ಯುಚ ಮ್ಯೂಸಿಯಮನ್ನು, ತಿರಿಗಿ ಒಮ್ಮೆ ಮಗಳೊಂದಿಗೆ ಸಂದರ್ಶಿಸುವ ಕುತೂಹಲದಿಂದ ಮಧ್ಯ ಮಾರ್ಗದಲ್ಲಿ ಮ್ಯುನಿಕಿನಲ್ಲಿ ಎರಡು ದಿನಗಳ ತನಕ ಯಾತ್ರೆಯನ್ನು ತಡೆಯಬೇಕಾಯಿತು.

'ಈ ಸಂದರ್ಭದಲ್ಲಿ ಹೆಚ್ಚಿನ ಸಮಯವು ಮ್ಯೂಸಿಯಮ್ ಸಂದರ್ಶನದಲ್ಲಿಯೇ ಹೋಯಿತು. ಹಲವು ಕಲಾಮಂಟಪಗಳನ್ನು ನೋಡಿದ ಮೇಲೆ ಮತ್ತಿನ ಹೆಚ್ಚಿನ ಸಮಯ ಮ್ಯುನಿಕಿನಲ್ಲಿ ಕಲಿಯುತ್ತಿರುವ ಭಾರತೀಯ ವಿದ್ಯಾರ್ಥಿಗಳೊಡನೆ ಕಳೆದಿದ್ದನು.

ಗೋಬೆಲ್ಸನ ವಿಷಯವಿಲ್ಲ

'ಅಲ್ಲಿ ಗೋಬೆಲ್ಸನಾಗಲಿ ಆತನ ಕಡೆಯಿಂದ ಯಾರೇ ಆಗಲಿ ಬಂದಿರಲಿಲ್ಲ, ಹೆರ್ ಹಿಟ್ಲರನಿಂದ ಯಾವುದೇ ಪತ್ರವೂ ಬಂದಿರಲಿಲ್ಲ. ಮಾತ್ರವಲ್ಲದೆ ಆತನ ವಿಷಯದಲ್ಲಿ ಇದುವರೆಗೆ 'ಹೈಲ್ ಹಿಟ್ಲರ್' ಸಂಭವಿಸಿದ್ದೂ ಇಲ್ಲ. ಭಾರತೀಯ ವಿದ್ಯಾರ್ಥಿಗಳನ್ನು ಬಿಟ್ಟು ಅಲ್ಲಿ ಸಂದರ್ಶಿಸಿದ ಒಬ್ಬನೇ ಒಬ್ಬ ಜರ್ಮನನೆಂದರೆ, ಸ್ಥಳೀಯ ನಾಜೀ ಪತ್ರಿಕೆಯ ವರದಿಗಾರ ಪತ್ರಿಕೋದ್ಯಮಿಯೊಬ್ಬನು. ಆತನು ನನ್ನಣ್ಣನ ಸಮಯವನ್ನು ಹಾರೈಸಿ ಆತನಿಗೆ ಸ್ವಾಗತ ಹೇಳಲು ಬಂದಿದ್ದನು. ಆತನು ಪತ್ರವನ್ನಾಗಲಿ ಸಂದೇಶವನ್ನಾಗಲಿ ಯಾರಿಂದಲೂ ತಂದಿರಲಿಲ್ಲ. ಬಹುಶಃ ಡಾ| ವಿದ್ಯಾಲಂಕಾರರು ಈ ಸ್ಥಳೀಯ ಪತ್ರಿಕೋದ್ಯಮಿಯನ್ನೇ ಡಾ| ಗೋಬೆಲ್ಸನೆಂದು ವಿಚಾರಿಸಿರಬೇಕು.'



7 o'clock

7 ಒಕ್ಲೋಕ್

ಪೂಪ್ಯುಲರ್ ಟ್ರೇಜರ್ ಸೆಟ್

ನಿಮ್ಮ ಕ್ಷೌರದಲ್ಲಿಯೂ ಹಣವನ್ನು ಉಳಿಸಲು ನೋಡಿರಿ. ಅದರೂ ಬಹಳ ನಾಜೂಕಾಗಿ ನಿಮಗೆ ಕ್ಷೌರವಾಗಬೇಕಲ್ಲವೆ? ಹಾಗಾದರೆ 7 ಒಕ್ಲೋಕ್ ಟ್ರೇಜರ್ ಸೆಟ್ ಒಂದನ್ನು ಪಡೆಕೊಳ್ಳಿರಿ. ಹೊಸ ರೀತಿಯ ಬ್ಲೇಡುಗಳು ಇದರಲ್ಲಿ ಇವೆ. ಇದರ ಹಿಡಿಯೂ ಬಹಳ ಉತ್ತಮ ತರಹದ್ದಾಗಿರುತ್ತದೆ. ಎರಡು ಬದಿ ಹರಿತವಿರುವ ಎರಡು ಬ್ಲೇಡುಗಳೂ ಆ ಸೆಟ್ಟಿನೊಂದಿಗೇ ದೊರಕುವವು. ಆ ಸೆಟ್ಟಿರುವ ಪೆಟ್ಟಿಗೆಯು ಬಹಳ ಆರೋಗ್ಯಕರವಾದ ರೀತಿಯಲ್ಲಿ ತಯಾರಿಸಿದ್ದಾಗಿದೆ.

12 ಆಣೆ

ರಾತ್ರಿಕಾಲದ ಶೀತಬಾಧೆಯನ್ನು ದಿನನಿತ್ಯ ಪೆಪ್ಸನ್ನು ತೆಗೆದುಕೊಂಡು ಪರಿಹರಿಸಿಕೊಳ್ಳಿರಿ

ಪೆಪ್ಸ ಆವರ್ತನದ ಪ ಮಾತ್ರೆಯ ರೂಪದಲ್ಲಿ ... ಶ್ವಾಸನಾಳ ... ಸೈನಸ್ ... ಕೆಮ್ಮು



ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಧ್ಯೇಯದ ಸಲುವಾಗಿ ಸಾಯುವುದೂ ಸುಖಕರವಾದುದು!

ವ್ಯಕ್ತಿ ಸಾಯಬಹುದು; ಜನಾಂಗ ಬಾಳಲೇ ಬೇಕು.

ಭಾರತವು ಬಾಳುವುದು ಮಾತ್ರವಲ್ಲ---
ಸ್ವಾತಂತ್ರ್ಯ ಕೀರ್ತಿಗಳಿಂದ ಬೆಳಗುವುದು

ಬೋಸರ ಹಲವು ವಿಚಾರಭಾವನೆಗಳು

ಸುಬಾಸರು ಸರಕಾರಕ್ಕೆ ಬರೆದೊಂದು ಪತ್ರ

ಕಳೆದ ನವಂಬರ ಕಲ್ಕತ್ತ ಪ್ರೆಸಿಡೆನ್ಸಿ ಜೈಲಿನಲ್ಲಿ ಸುಭಾಸ ಬಾಬುಗಳನ್ನು ಸ್ಥಾನಬದ್ಧರಾಗಿಟ್ಟ ಸಂದರ್ಭ ಸರಕಾರದ ಆ ವರ್ತನೆಯನ್ನು ಕುರಿತು ನೈತಿಕ ನಿಷೇಧವನ್ನು ವ್ಯಕ್ತಪಡಿಸುವ ಸಲುವಾಗಿ ಮರಣಾಂತ್ಯ ಉಪವಾಸ ಕೈಕೊಳ್ಳುವ ನಿರ್ಧಾರಮಾಡಿದ ಬೋಸರು ಬಂಗಾಳ ಸರಕಾರಕ್ಕೆ ಹಲವು ಪತ್ರಗಳನ್ನು ಬರೆದಿದ್ದರು. ಆ ಪತ್ರಗಳನ್ನು ಈಗ ಶ್ರೀ ಮುಕುಂದಲಾಲ ಸರ್ಕಾರರು ಪ್ರಕಟಿಸಿದ್ದಾರೆ. ಅದರಲ್ಲಿ ಸುಬಾಸರ ತಲೆಯ ಸುತ್ತು ಸುಳಿಯುತ್ತಿದ್ದ ಅಂದಿನ ಹಲವಾರು ವಿಚಾರಗಳು ಹಾಗೂ ಆಕಸ್ಮಿಕ ಅದೃಶ್ಯದ ಸಂಗತಿಯ ಕಾರಣವೂ ಸೂಚಿತವಾಗುತ್ತದೆ.

ತನ್ನನ್ನು ಸೆರೆಗೆ ಸೇರಿಸಿದ ಕಾರಣಗಳನ್ನು ವಿವರಿಸುತ್ತಾ ಸುಬಾಸರು ಈ ರೀತಿಯಾಗಿ ಬರೆಯುತ್ತಾರೆ:

'ಇಂದು ಒದಗಿರುವೀ ಪರಿಸ್ಥಿತಿಯಲ್ಲಿ ನನಗೆ ಬಾಳುವುದೇ ಅಸಾಧ್ಯ. ನಿಯಮರಹಿತತೆಯೊಡನೆ, ಅನ್ಯಾಯದೊಡನೆ ಸಮಾಧಾನ ಮಾಡಿಕೊಂಡು ಜೀವನ ಮಾಡುವುದೂ ನನಗೆ ಅಸಾಧ್ಯವೇ. ಈ ತರದ ಕಷ್ಟಸಹಿಷ್ಣುತೆಯ ಬದಲು ನಾನು ನನ್ನ ಜೀವನವನ್ನು ಕಳೆಕೊಳ್ಳುವುದೂ ಉಚಿತವೇ ಎನಿಸುತ್ತದೆ.

ಶಾಶ್ವತವಾದ ನಿಯಮ

'ಸರಕಾರವು ನನ್ನನ್ನು ಪಶುಶಕ್ತಿಯಿಂದ ಸೆರೆಮನೆಯಲ್ಲಿ ಕೆಡಹಿದೆ. ನಾನು ಉತ್ತರವಾಗಿ ಹೀಗೆ ಹೇಳುತ್ತೇನೆ. 'ನನ್ನನ್ನು ಬಿಡುಗಡೆ ಮಾಡಿರಿ—ಇಲ್ಲವಾದರೆ ನಾನು ಬದುಕಲಾರೆ; ನಾನು ಬದುಕಬೇಕೋ ಸಾಯಬೇಕೋ ಎಂಬ ಕುರಿತು ನಿಶ್ಚಯ ಮಾಡುವ ಅಧಿಕಾರ ನನ್ನದಾಗಿರುತ್ತದೆ.

'ಈಗ ಇಲ್ಲಿ ಯಾವುದೇ ತರದ ಫಲವು ಕಾಣದಿದ್ದರೂ, ಬಲಿದಾನವು ಎಂದೂ ವ್ಯರ್ಥವಾಗುವುದಿಲ್ಲ. ಕಷ್ಟಸಹಿಷ್ಣುತೆ ಮತ್ತು ಬಲಿದಾನಗಳಿಂದಲೇ ಪ್ರತಿಯೊಂದು ಕಾಲದಲ್ಲೂ ಉದ್ದೇಶವು ಲಭಿಸುವುದು ಮತ್ತು ಅಭಿವೃದ್ಧಿಹೊಂದುವುದು. ಶಾಶ್ವತ ನಿಯಮವು ಹೀಗಿರುತ್ತದೆ:—'ವೀರನ ನೆತ್ತರಿನಲ್ಲಿ ದೇವಾಲಯದ ಬೀಜವು ಅಡಕವಾಗಿದೆ.'

'ಈ ಅಶಾಶ್ವತ ಜಗತ್ತಿನಲ್ಲಿ, ಪ್ರತಿಯೊಂದೂ ಮರಣೋನ್ಮುಖವಾದುದು; ಖಂಡಿತ ಮರಣಹೊಂದಲೇಬೇಕಾದುದು. ಆದರೆ ನಿಶ್ಚಿತ, ಧ್ಯೇಯ ಮತ್ತು ಆದರ್ಶಗಳು ಎಂದೂ ನಾಶವಾಗಲಾರವು. ಒಂದು ಆದರ್ಶದ ಸಲುವಾಗಿ, ಒಬ್ಬ ವ್ಯಕ್ತಿಯು ಸಾಯಲೂ ಬಹುದು; ಆದರೆ ಆತನ ಮರಣದ ನಂತರವೂ ಆ ಆದರ್ಶವು ಉಳಿಯುವುದು. ಆ ಆದರ್ಶವು ಸಾವಿರಾರು ರೂಪಗಳಲ್ಲಿಯೂ ಅವತಾರ ಹೊಂದುವುದು.

ಆತ್ಮತೃಪ್ತಿಯು ಎಲ್ಲಿ?

'ಒಂದು ಧ್ಯೇಯದ ಸಲುವಾಗಿ ಬದುಕಿದ್ದು ಅದಕ್ಕಾಗಿ ಸತ್ತನೆಂಬ ವಿಷಯದಲ್ಲಿರುವಷ್ಟು ಹೆಚ್ಚಿನ ಸಮಾಧಾನವು ಬೇರೆ ಇನ್ನು ಯಾತರಿಂದ ಲಭಿಸತಕ್ಕದ್ದಿದೆ? ತನ್ನ ಶಕ್ತಿಯು ಹಲವು ಹೃದಯಗಳನ್ನು ಸ್ಫೂರ್ತಿಗೊಳಿಸಿ, ತಾನು ಪೂರ್ಣಗೊಳಿಸದೆ ಅಪೂರ್ಣವಾಗಿಟ್ಟ ಕಾರ್ಯವನ್ನು ಆ ಶಕ್ತಿಯು ಪೂರ್ಣಗೊಳಿಸದೆ ಬಿಡದು ಎಂಬ ತಿಳುವಳಿಕೆಗಿಂತ ಹೆಚ್ಚಿನ ಆತ್ಮತೃಪ್ತಿಯು ಬೇರೆ ಯಾವುದು ಬೇಕಾಗಿದೆ? ತನ್ನ ಸಂದೇಶವು, ತನ್ನ ಭೂಮಿಯ ಮೂಲೆಮೂಲೆಗಳಲ್ಲಿ, ಗಿರಿಕಂದರಗಳಲ್ಲಿ, ವಿಶಾಲ ಬಯಲಿನಲ್ಲಿ ಮತ್ತೆ ಸಮುದ್ರದಾಚೆಗಳಲ್ಲಿಯೂ ಕೂಡಾ ಪಸರಿಸಬಲ್ಲುದೆಂಬ ಆತ್ಮಸಂತೋಷವಿರುವಲ್ಲಿ ಅದಕ್ಕಿಂತ ಹೆಚ್ಚಿನ ಬಹುಮಾನ ಯಾವುದು ದೊರಕಬೇಕಾಗಿದೆ? ತನ್ನ ಧ್ಯೇಯದ ಸಲುವಾಗಿ ಸಾವ ಸಂತೋಷಕ್ಕಿಂತ ಹೆಚ್ಚಿನ ಸಮಾಧಾನವು ಜೀವನದಲ್ಲಿ ಬೇರೆ ಏನಿದೆ?

'ಅದಕಾರಣ, ಕಷ್ಟಾನುಭವ ಹಾಗೂ ಬಲಿದಾನಗಳಿಂದ ಯಾವನಿಗೂ ಏನೂ ನಷ್ಟವಿಲ್ಲ. ಈ ಭೂಮಿಯಲ್ಲಿ ಆತನಿಗೆ ನಷ್ಟವೇ ಆಗುವುದಿದ್ದರೂ ಒಂದು ಅಮರ ಜೀವನದ ಪ್ರತಿನಿಧಿಯಾಗಿ ಉಳಿಯುವುದರಿಂದ ಆತನು ಪ್ರತಿಫಲವಾಗಿ ಹೆಚ್ಚಿನದನ್ನೇ ಹೊಂದುತ್ತಾನೆ.



ಸುಭಾಸರು

'ಇದು ಆತ್ಮದ ಗುರಿ. ಪ್ರತಿಯೊಬ್ಬ ವ್ಯಕ್ತಿಯೂ ಸಾಯಲೇ ಬೇಕು. ಅದರಿಂದಲೇ ಜನಾಂಗವು ಬದುಕಿರಬೇಕಾಗಿದೆ. ಇಂದು ನಾನು ಸಾಯಲೇ ಬೇಕು; ಆದರೆ ಭಾರತವು ಬದುಕಿರಬೇಕು, ಮತ್ತು ಸ್ವಾತಂತ್ರ್ಯ ಕೀರ್ತಿಗಳನ್ನು ಪಡೆಯಲೇ ಬೇಕು.'

CANARA BANK LIMITED

(Incorporated in British India with Limited Liability.)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6,00,000— 0— 0	Premises & Furniture	94,217— 6—8
Paid up	3,92,551—15—11	***Advances to Customers***	
Reserve Funds	4,50,000— 0— 0	Secured by Valuable	
Deposits	86,71,764— 2— 6	Securities	37,87,804—13—8
Due to Bankers	Nil	Secured by Bills of	
Sundries	7,98,533—14— 5	Exchange etc.	9,29,550— 0—6
Net Profits		***Investments***	20,34,328—12—9
Appropriation account 1,244—10— 6		***Sundries***	6,81,012— 5—7
Net Profit for the year 71,726— 5— 0		***Cash On Hand And At Call At***	
72,970—15— 6		***Bankers***	28,17,538— 5—7
Less amount transferred to Reserves 41,369—3—7	31,601—11—11		
Rs.	1,03,44,451—12— 9	Rs.	1,03,44,451—12 9

THE CANARA INDUSTRIAL & BANKING SYNDICATE, LIMITED.

(Incorporated in British India, Liability of shareholders limited)

Estd) (1925

Haed Office: UDIPI. S. India.

Authorised Capital	Rs. 50,00,000.
Subscribed Capital	Rs. 13,11,000.
Paid-up Capital	Rs. 5,50,000.
Reserves	Rs. 2,10,000.

35 Branches in the important commercial centres of Karnataka-Malabar and Rayalaseema Districts and in Bombay.

All kinds of Banking business transacted.

Our new issue of Rs. 40 lakhs of 5% Tax Free Cumulative Preference Shares of Rs. 10 each is an ideal form of safe and remunerative investment with unique features.

Apply for Prospectus.

ಗೋಬೆಲ್ಸನು ನೆಹರುಗಳನ್ನು ಸಂದರ್ಶಿಸಿದ ಸುದ್ದಿ ಸತ್ಯವಲ್ಲ

ಹಿಟ್ಲರನಿಂದ ಪತ್ರವೂ ಬಂದದ್ದಿಲ್ಲ

ಡಾ। ವಿದ್ಯಾಲಂಕಾರರ ಲೇಖನ ವಿವರವು ಸರಿಯಾಗಿಲ್ಲ

ವಿಜಯ ಲಕ್ಷ್ಮಿ ಪಂಡಿತರ ಲೇಖನ

ಪಂಡಿತ ನೆಹರುಗಳು ಮುಸಲಿನಿಯ ಆಮಂತ್ರಣವನ್ನು ತಿರಸ್ಕರಿಸಿದ್ದರೆಂದೂ, ಹಿಟ್ಲರನ ಭೇಟಿಯನ್ನು ಅಲ್ಲಗಳೆದಿದ್ದರೆಂದೂ ಕಳೆದ ತಿಂಗಳಲ್ಲಿ ಭಾರತದ ಹಲವು ಪತ್ರಿಕೆಗಳಲ್ಲಿ ಬಹಳ ರೋಮಾಂಚಕವಾದ ವಾರ್ತೆಯು ಹರಡಿತ್ತು. ಡಾ। ವಿದ್ಯಾಲಂಕಾರರೆಂಬವರು ಹಿಂದೀ ಪತ್ರಿಕೆಯೊಂದರಲ್ಲಿ ಬರೆದ ಲೇಖನದ ಅನುವಾದವೆಂದೂ ಆ ಸುದ್ದಿ ಪ್ರಸಿದ್ಧವಾಗಿತ್ತು. ಡಾ। ವಿದ್ಯಾಲಂಕಾರರು ೧೯೩೮ರಲ್ಲಿ ಮ್ಯುನಿಕಿನಲ್ಲಿದ್ದರೆಂದೂ, ಆ ಸಮಯದಲ್ಲಿಯೇ ನೆಹರು ಇಳಿದಿದ್ದ ಹೋಟೆಲಿಗೆ ಡಾ। ಗೋಬೆಲ್ಸನು ಹಿಟ್ಲರನ ಮುದ್ರೆಯೊತ್ತಿದ ಆಮಂತ್ರಣ ಪತ್ರ ತಂದಿದ್ದನೆಂದೂ ಆ ಲೇಖನದಲ್ಲಿ ವರ್ಣಿತವಾಗಿತ್ತು. ಆ ವಿಷಯದಲ್ಲಿ ನೆಹರು ಸೋದರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಒಂದು ಲೇಖನ ಬರೆಯುತ್ತಾ, ಆ ಸುದ್ದಿಯು ಸತ್ಯವಲ್ಲವೆಂದೂ ನೆಹರುಗಳೇ ಆ ಕುರಿತು ತನಗೆ ತಿದ್ದಿ ಬರೆಯಲು ಹೇಳಿರುವರೆಂದೂ ವಿವರಿಸುತ್ತಾರೆ.

ಅವರ ಲೇಖನದ ಅಭಿಪ್ರಾಯವಿಂತಿದೆ:

'ನೆಹರು ಮ್ಯುನಿಕಿಗೆ ಹೋದ ಸಂದರ್ಭದಲ್ಲಾಗಲಿ, ಅಥವಾ ಇನ್ನಿತರ ಬೇರೆ ಯಾವುದೇ ಸಮಯದಲ್ಲೇ ಆಗಲಿ ನೆಹರು ಡಾ। ಗೋಬೆಲ್ಸ್‌ನನ್ನು ಕಂಡದ್ದಿಲ್ಲ. ಆತನೊಡನೆ ಯಾವುದೇ ತರದ ಪತ್ರವ್ಯವಹಾರ ಮಾಡಿದ್ದೂ ಇಲ್ಲ. ಆ ಸಮಯದಲ್ಲಾಗಲಿ ಅದಕ್ಕಿಂತ ಹಿಂದೆಯಾಗಲಿ, ಮುಂದೆಯಾಗಲಿ, ನೆಹರು ಹೆರ್ ಹಿಟ್ಲರನಿಂದ ಯಾವುದೇ ತರದ ಪತ್ರವನ್ನೂ ಪಡೆದದ್ದಿಲ್ಲ.

'೧೯೩೮ನೆಯ ಇಸವಿಯ ಆಗಸ್ಟಿನಲ್ಲಿ ನನ್ನ ಸೋದರ ನೆಹರು ಮ್ಯುನಿಕಿಗೆ ಹೋದಾಗ ನಡೆದ ಸಂಗತಿಗಳ ಕುರಿತು ಡಾ। ನಾರಾಯಣದತ್ತ ವಿದ್ಯಾಲಂಕಾರರು ಹಿಂದೀ ಪತ್ರಿಕೆಯೊಂದರಲ್ಲಿ ಬರೆದ ಲೇಖನದ ಭಾಷಾಂತರಗಳನ್ನು ಹಲವು ಭಾರತೀಯ ಪತ್ರಿಕೆಗಳು ಪ್ರಕಟಿಸಿವೆ. ನನ್ನ ಸೋದರನು ಮ್ಯುನಿಕನ್ನು ಸಂದರ್ಶಿಸಿದ ಒಂದೆರಡು ವಾರಗಳ ನಂತರ ನಾನು ಆತನನ್ನು ಯೂರೋಪಿನಲ್ಲಿ ಕಂಡಿದ್ದೆನು. ಆಗ ಆತನು ನನಗೆ ಅಲ್ಲಿ ನಡೆದ ವಿಷಯಗಳೆಲ್ಲವನ್ನೂ ಹೇಳಿದ್ದನು.

ತಪ್ಪು ತಿದ್ದ ಹೇಳಿದ್ದಾನೆ

'ನನ್ನ ಅಂದಿನ ನೆನಪುಗಳನ್ನು ಮತ್ತು ಈ ಲೇಖನದ ವಿವರಗಳನ್ನು ಹೋಲಿಸಿ ನೋಡಿ ನಿಶ್ಚಿತಾಂಶವನ್ನು ತಿಳಿವ ಕುತೂಹಲದಿಂದ ನಾನು, ಮೊನ್ನೆ ಸೆರೆಮನೆಯಲ್ಲಿ ಅವನ ಭೇಟಿ ತೆಗೆದುಕೊಂಡಾಗ ಡಾ। ವಿದ್ಯಾಲಂಕಾರರ ಲೇಖನದ ಕಡೆಗೆ ಅವನ ಗೋಚರವನ್ನು ಎಳೆದೆನು. ಅವನಿಗೆ ಆ ಲೇಖನದಲ್ಲಿರುವ ಹಲವು ಊಹನಾಮಯ ಅಸತ್ಯ ಸಂಗತಿಗಳ ಕುರಿತು ಆಶ್ಚರ್ಯವಾಯಿತು; ಅವನು ನನ್ನೊಡನೆ ಅದರಲ್ಲಿರುವ ತಪ್ಪುಗಳನ್ನು ತಿದ್ದಿ ಲೇಖನ ಬರೆಯಲು ಹೇಳಿದನು.

'೧೯೩೮ರಲ್ಲಿ ಯೂರೋಪಿನ ಕಡೆ ಹೊರಡುವ ಮುನ್ನ ಮತ್ತು ಲಂಡನಿನಲ್ಲಿರುವ ಸಮಯವೂ ಕೂಡಾ, ಜರ್ಮನೀ ಸರಕಾರದಿಂದ, ಅಧಿಕೃತವೂ ಸಂಪೂರ್ಣ ಅಧಿಕೃತವಲ್ಲದ್ದೂ ಆದ ಪತ್ರಗಳನ್ನು ಆತನು ಪಡೆದಿದ್ದನು. ಅದರಲ್ಲಿ ಆತನು ಜರ್ಮನಿಯನ್ನು ಸಂದರ್ಶಿಸಿ, ಅಲ್ಲಿ ಹೊಸ ಆಧಿಕಾರವು ಹೇಗೆ ನಡೆಯುತ್ತದೆ ಎಂಬುದನ್ನು ನೋಡಬೇಕಾಗಿ ಆಮಂತ್ರಣವಿದ್ದಿತ್ತು.

ಆತನ ಅಭಿಮತ ತಿಳಿದಿತ್ತು

'ಆತನು ನಾಜಿ ಆಡಳಿತ ವಿಷಯದಲ್ಲಿ ಬದ್ಧ ವಿರೋಧವಾದ ಅಭಿಮತವುಳ್ಳವನೆಂದು ಅವರಿಗೂ ತಿಳಿದಿತ್ತು. ಹಾಗಿದ್ದರೂ ಆತನಿಗೆ ಅಲ್ಲಿನ ವಿಷಯಗಳನ್ನು ಇಚ್ಛೆ ಬಂದಂತೆ ಪ್ರತ್ಯಕ್ಷವಾಗಿ ನೋಡಿ ತಿಳಿಯಲು ಅವರು ಆಮಂತ್ರಿಸಿದ್ದರು. ಅವನು ಜರ್ಮನಿಗೆ ಸರಕಾರದ ಅಧಿತಿಯಾಗಿಯೋ ಅಥವಾ ಇತರ ವಿಧದಿಂದಲೋ ಅವನಿಗೆ ಇಷ್ಟವಿದ್ದಂತೆ ಹೋಗಬಹುದಾಗಿತ್ತು. ಆಗ ಯೂರೋಪಿನಲ್ಲಿ ಪಸರಿಸಿದ್ದ ಪರಿಸ್ಥಿತಿಗಳ ಪರಿಶೀಲನೆಯಿಂದ ನನ್ನ ಸೋದರನಿಗೆ ಆಗ ಜರ್ಮನಿಯನ್ನು ಸಂದರ್ಶಿಸುವ ಅಭಿಲಾಷೆಯಿರಲಿಲ್ಲವಾಗಿ ತನ್ನ ಆ ಸಲದ ಯೂರೋಪು ಯಾತ್ರೆಯ ಸಮಯದಲ್ಲಿ ಜರ್ಮನಿಯನ್ನು ಸಂದರ್ಶಿಸಲು ತನಗೆ ಅನುಕೂಲವಾಗುವುದಿಲ್ಲವೆಂದೂ, ಆ ಬಗ್ಗೆ ಇತ್ತ ಆಮಂತ್ರಣದ ಬಗ್ಗೆ ತಾನು ಅಧಿಕಾರೀ ವರ್ಗದ ಉದಾರ ಹೃದಯವನ್ನು ಕೊಂಡಾಡುತ್ತೇನೆಂದೂ, ಹೀಗೆ ಆಮಂತ್ರಣಕ್ಕೆ ಸರಿಯಾಗಿ ನಡೆಯಲು ತೊಂದರೆಯಾದ ಬಗ್ಗೆ ವಿಷಾದಿಸುತ್ತೇನೆಂದೂ ಆತನು ತಿಳಿಸಿದ್ದನು.

ಭಾರತೀಯ ವಿದ್ಯಾರ್ಥಿಗಳೊಂದಿಗೆ

'೧೯೩೮ರ ಪ್ರಾರಂಭದಲ್ಲಿ ನನ್ನ ಸೋದರನು ತನ್ನ ಕುಮಾರಿಯೊಡನೆ ಪ್ಯಾರಿಸ್ಸಿನಿಂದ ಪ್ರೇಗ್‌ದಾರಿಯಾಗಿ ಹೊರಟಿದ್ದನು. ತನ್ನ ಇಷ್ಟ ಸಂದರ್ಶನ ಸ್ಥಳವಾದ ಮ್ಯುನಿಕಿನ ಡ್ಯೂಚಸ್ ಮ್ಯೂಸಿಯಮನ್ನು ತಿರಿಗಿ ಒಮ್ಮೆ ಮಗಳೊಂದಿಗೆ ಸಂದರ್ಶಿಸುವ ಕುತೂಹಲದಿಂದ ಮಧ್ಯ ಮಾರ್ಗದಲ್ಲಿ ಮ್ಯುನಿಕಿನಲ್ಲಿ ಎರಡು ದಿನಗಳ ತನಕ ಯಾತ್ರೆಯನ್ನು ತಡೆಯಬೇಕಾಯಿತು.

'ಈ ಸಂದರ್ಭದಲ್ಲಿ ಹೆಚ್ಚಿನ ಸಮಯವು ಮ್ಯೂಸಿಯಮ್‌ನ ಸಂದರ್ಶನದಲ್ಲಿಯೇ ಹೋಯಿತು. ಹಲವು ಕಲಾ ಮಂಟಪಗಳನ್ನು ನೋಡಿದ ಮೇಲೆ ಮಿಕ್ಕಿನ ಹೆಚ್ಚಿನ ಸಮಯ ಮ್ಯುನಿಕಿನಲ್ಲಿ ಕಲಿಯುತ್ತಿರುವ ಭಾರತೀಯ ವಿದ್ಯಾರ್ಥಿಗಳೊಡನೆ ಕಳೆದಿದ್ದನು.

ಗೋಬೆಲ್ಸನ ವಿಷಯವಿಲ್ಲ

'ಅಲ್ಲಿ ಗೋಬೆಲ್ಸನಾಗಲಿ ಆತನ ಕಡೆಯಿಂದ ಯಾರೇ ಆಗಲಿ ಬಂದಿರಲಿಲ್ಲ; ಹೆರ್ ಹಿಟ್ಲರನಿಂದ ಯಾವುದೇ ಪತ್ರವೂ ಬಂದಿರಲಿಲ್ಲ. ಮಾತ್ರವಲ್ಲದೆ ಆತನ ವಿಷಯದಲ್ಲಿ ಇದುವರೆಗೆ 'ಹೈಲ್ ಹಿಟ್ಲರ್' ಸಂಭವಿಸಿದ್ದೂ ಇಲ್ಲ. ಭಾರತೀಯ ವಿದ್ಯಾರ್ಥಿಗಳನ್ನು ಬಿಟ್ಟು ಅಲ್ಲಿ ಸಂದರ್ಶಿಸಿದ ಒಬ್ಬನೇ ಒಬ್ಬ ಜರ್ಮನನೆಂದರೆ, ಸ್ಥಳೀಯ ನಾಜೀ ಪತ್ರಿಕೆಯ ವರದಿಗಾರ ಪತ್ರಿಕೋದ್ಯಮಿಯೊಬ್ಬನು; ಆತನು ಸನ್ನಣ್ಣನ ಸಮಯವನ್ನು ಹಾರೈಸಿ ಆತನಿಗೆ ಸ್ವಾಗತ ಹೇಳಲು ಬಂದಿದ್ದನು. ಆತನು ಪತ್ರವನ್ನಾಗಲಿ, ಸಂದೇಶವನ್ನಾಗಲಿ ಯಾರಿಂದಲೂ ತಂದಿರಲಿಲ್ಲ. ಬಹುಶಃ ಡಾ। ವಿದ್ಯಾಲಂಕಾರರು ಈ ಸ್ಥಳೀಯ ಪತ್ರಿಕೋದ್ಯಮಿಯನ್ನೇ ಡಾ। ಗೋಬೆಲ್ಸನೆಂದು ವಿಚಾರಿಸಿರಬೇಕು.'

ರಾತ್ರಿ ಕಾಲದ ಶೀತಬಾಧೆಯನ್ನು ದಿನನಿತ್ಯ ಪೆಪ್ಸನ್ನು ತೆಗೆದುಕೊಂಡು ಪರಿಹರಿಸಿಕೊಳ್ಳಿರಿ

ರಾತ್ರಿಗೆ ಎದೆ, ಶ್ವಾಸಕೋಶಗಳ ನೋವುಗಳಿಗೆ ಪೆಪ್ಸ ಅದ್ಭುತಕರ ... ಮಾತ್ರೆಯು ...

ಏಜೆಂಟ್ಸ್:—ಮೆಸರ್ಸ್ ... ಮತ್ತು ಕಂಪೆನಿ, ... ಮದ್ರಾಸು.



ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

7 o'clock

7 ಒಕ್ಲೋಕ್

ಪೊಪ್ಯುಲರ್ ರೇಜರ್ ಸೆಟ್

ನಿಮ್ಮ ಕ್ಷೌರದಲ್ಲಿಯೂ ಹಣವನ್ನು ಉಳಿಸಲು ನೋಡಿರಿ. ಆದರೂ ಬಹಳ ನಾಜೂಕಾಗಿ ನಿಮಗೆ ಕ್ಷೌರವಾಗಬೇಕಲ್ಲವೆ? ಹಾಗಾದರೆ 7 ಒಕ್ಲೋಕ್ ರೇಜರ್ ಸೆಟ್ ಒಂದನ್ನು ಪಡೆಕೊಳ್ಳಿರಿ. ಹೊಸ ರೀತಿಯ ಬ್ಲೇಡುಗಳು ಇವರಲ್ಲಿ ಇವೆ. ಇದರ ಹಿಡಿಯೂ ಬಹಳ ಉತ್ತಮ ತರಗತಿಯದಾಗಿರುತ್ತದೆ. ಎರಡು ಬದಿ ಹರಿತವಿರುವ ಎರಡು ಬ್ಲೇಡುಗಳೂ ಆ ಸೆಟ್ಟಿನೊಂದಿಗೇ ದೊರಕುವುವು. ಆ ಸೆಟ್ಟಿರುವ ಪೆಟ್ಟಿಗೆಯು ಬಹಳ ಆರೋಗ್ಯಕರವಾದ ರೀತಿಯಲ್ಲಿ ತಯಾರಿಸಿದುದಾಗಿದೆ.



12 ಆಣೆ

ವಿಜ್ಞಾನಯುಗ

ಗೇಸಿನಿಂದಲೇ ಚಲಿಸುವ ನೂತನ ವಿಮಾನ

ಈಗ ವಿಮಾನಗಳು ಚಲಿಸಬೇಕಾದರೆ, ಹಾರಾಡುತ್ತಿರಬೇಕಾದರೆ ಪೆಟ್ರೋಲು, ಕ್ರೂಡ್ ಆಯಿಲು ಮೊದಲಾದ ಎಣ್ಣೆಗಳು ಬಹಳ ದೊಡ್ಡ ಪರಿಮಾಣದಲ್ಲಿ ಬೇಕಾಗುತ್ತವೆ. ಆದ್ದರಿಂದ ಒಂದೊಂದು ವಿಮಾನವನ್ನು ಇಟ್ಟುಕೊಳ್ಳುವುದೆಂದರೆ ದೊಡ್ಡ ಆನೆಯೊಂದನ್ನು ಸಾಕಿದ ಹಾಗೆಯೇ ಸರಿ! ಯುದ್ಧಕಾಲದಲ್ಲಿ ಎಣ್ಣೆಯ ಅಭಾವದಿಂದಲೇ ವಿಮಾನಗಳು ಮೂಲೆಗುಂಪಾಗುವುದಿದೆ. ಈ ಕಷ್ಟವನ್ನು ನಿವಾರಿಸಿಕೊಳ್ಳುವುದಕ್ಕೋಸ್ಕರ ಇಟಲಿಯ ಕೆಲವು ತಜ್ಞರು ಹೊಸ ಜಾತಿಯ ಒಂದು ಹಗುರವಾದ ವಿಮಾನವನ್ನು ನಿರ್ಮಿಸಿದ್ದಾರೆ. ಇದಕ್ಕೆ ಎಣ್ಣೆ ಬೇಡ. ಇದು ಗೇಸಿನಿಂದಾಗಿಯೇ ನಡೆಸಲ್ಪಡುವುದು. ಮತ್ತು ವಿಶೇಷವೇನೆಂದರೆ ವಿಮಾನವು ಚಲಿಸುತಿದ್ದ ಹಾಗೆಯೇ ಅದರ ಚಲನೆಗೆ ಬೇಕಾದ ಗೇಸು ವಿಮಾನದಲ್ಲಿ ತಯಾರಾಗುವುದು. ಇದರಲ್ಲಿ ಬರೇ ೮೫ ಅಶ್ವಶಕ್ತಿಯ ಇಂಜಿನು ಇರುವುದು. ಆದ್ದರಿಂದ ಗೇಸಿಗೆ ಖರ್ಚು ಬಹಳ ಕಡಿಮೆ ಸಾಕು. ೨ ಗಂಟೆಯ ಹಾರಾಟಕ್ಕೆ ಬೇಕಾದ ಗೇಸನ್ನು ತಯಾರಿಸಲಿಕ್ಕೆ ಬರೇ ೯೦ ರಾತಲು ಇಂಧನವು ಇದ್ದರೆ ಸರಿ!

★

ಮಣ್ಣಿನಿಂದ ಕಾಗದ

ಕಾಗದವನ್ನು ತಯಾರಿಸಲಿಕ್ಕೆ ಮೆತ್ತಗಿನ ಜಾತಿಯ ಮರಗಳು, ಹುಲ್ಲು, ನಾರಿನ ಗಿಡ ಮೊದಲಾದವು ಬೇಕು. ಆದರೆ ಇವುಗಳ ಬೆಳೆಗೆ ಒಂದು ಮಿತಿ ಇದೆ. ಮತ್ತೆ ಅವು ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಬೆಳೆಯುವುದಿಲ್ಲ. ಕಾಗದದ ಬರಗಾಲ ಬಿದ್ದರೆ ಏನು ಮಾಡಬೇಕು? ಕಾಗದವಿಲ್ಲದೆ ನಾಗರಿಕ ಜೀವನವು ನಡೆಯುವ ಹಾಗೆಯೇ ಇಲ್ಲ. ಅದಕ್ಕೋಸ್ಕರ ವಿಜ್ಞಾನಿಗಳು ಕಾಗದ ತಯಾರಿಸುವ ಹೊಸ ಪ್ರಯೋಗಗಳನ್ನು ಮಾಡುತಿದ್ದಾರೆ. ಅವುಗಳಲ್ಲಿ ಕೆಲವು ಸಫಲವಾಗುವಂತಿವೆ. ಅಮೆರಿಕದ ಮಿನೆಸೊಟ್ಟಿನ ಔದ್ಯೋಗಿಕ ಸಂಸ್ಥೆಯ ವಿಜ್ಞಾನಿಗಳು ಮಣ್ಣಿನಿಂದ ಕಾಗದ ತಯಾರಿಸಬಹುದೆಂದಿದ್ದಾರೆ. ಇವರು ತಯಾರಿಸಿದ ಕಾಗದವು ನೀರನ್ನಾಗಲೀ ಬೇರೆ ಯಾವುದಾದರೂ ದ್ರವಪದಾರ್ಥವನ್ನಾಗಲೀ ಹೀರಿಕೊಳ್ಳುವುದಿಲ್ಲ. ಆದ್ದರಿಂದ ಈ ಕಾಗದದಿಂದ ತಯಾರಿಸಿದ ಅಗ್ಗವಾದ ಲೋಟ, ತಟ್ಟೆ, ಗಿಂಡಲು ಮೊದಲಾದ ಪಾತ್ರೆಗಳಲ್ಲಿ ಹಾಲು, ತುಪ್ಪ, ಮೊಸರು, ಮಜ್ಜಿಗೆಯನ್ನು ಕೊಂಡುಹೋಗಬಹುದು ಈ ಕಾಗದದಿಂದ ಚೀಲ ಮೊದಲಾದವನ್ನೂ ತಯಾರಿಸಲಿಕ್ಕಾಗುತ್ತದೆ.

★

ಪ್ಲೇಗಿಗೆ ದಿವ್ಯೌಷಧಿ

ಪ್ಲೇಗಿನ ಜನ್ಮವಾಗಿ ಕೆಲವು ಶತಮಾನಗಳು ಕಳೆದುಹೋಗಿವೆಯಾದರೂ, ಇಷ್ಟರ ತನಕ ಯಾರೂ ಅದಕ್ಕೆ ಬಹಳ ಪರಿಣಾಮಕಾರಿಯಾದ ಔಷಧಿಯನ್ನು ಕಂಡುಹಿಡಿದುದಿಲ್ಲ. ಈಗ ಬೊಂಬಾಯಿಯ ಹ್ಯಾಫಕಿನ್ ಇನ್ಸ್‌ಟಿಟ್ಯೂಟಿನವರು ಬಹಳ ಪರಿಶೋಧನೆಗಳನ್ನು ಮಾಡಿ ಒಂದು ದಿವ್ಯ ಔಷಧಿಯನ್ನು ಕಂಡುಹಿಡಿದಿದ್ದಾರಾಗಿ ತಿಳಿದುಬರುತ್ತದೆ. ಪ್ಲೇಗಿನ ಇಲಿಗಳ ಮೇಲೆ ಈ ಔಷಧಿ ಪ್ರಯೋಗ ಮಾಡಿದಾಗ ೧೦೦ರಲ್ಲಿ ೯೦ ಇಲಿಗಳು ಬದುಕಿದುವೆಂದು ಗೊತ್ತಾಗಿದೆ. ಸಲ್ಫಾಥಿಯೋಝೋಲ ಎಂಬುದು ಈ ಔಷಧಿಯ ಹೆಸರು. ಸಲ್ಫೋಪಿರಿಮಾಯಿಡ್ ಎಂಬುದೂ ಬಹಳ ಗುಣಕಾರಿಯಾಗಿದೆ. ಆದರೆ ಇದನ್ನು ಮಾತ್ರ ಹೆಚ್ಚು ದಿನಗಳ ತನಕ ಇಟ್ಟುಕೊಳ್ಳಲಿಕ್ಕಾಗುವುದಿಲ್ಲ. ಪ್ಲೇಗು ಬಂದಾಗ ಸೆಪ್ಟಿಸಿಮಿಯಾ ಅಂದರೆ ಒಂದು ಕ್ರಮದಿಂದ ರಕ್ತವು ವಿಷಮಯವಾಗಿ ರೋಗಿಯು ಸಾಯುತ್ತಾನೆ. ರಕ್ತವು ಹೀಗೆ ವಿಷಮಯವಾಗದಂತೆ ತಡೆಯುವುದೇ ಈ ಎರಡು ಔಷಧಿಗಳ ಗುಣಧರ್ಮವಾಗಿರುವುದು.

★

ಮಂಗಳನಲ್ಲಿ ಜನವಸತಿ ಇಲ್ಲ

ಸೂರ್ಯನಿಂದ ಸಿಡಿದುಹೋದ ಭೂಮಿಯ ಒಂದು ಅಂಶವೇ ಮಂಗಳನೆಂದು ಕೆಲವು ವಿಜ್ಞಾನಿಗಳ ಅಭಿಪ್ರಾಯವಿದೆ. ಆದ್ದರಿಂದಲೇ ಭೂಮಿಯಂತೆ ಮಂಗಳನಲ್ಲಿಯೂ ಜೀವಪ್ರಪಂಚ, ಜನವಸತಿ ಇರಬಹುದೆಂಬ ಊಹೆಗೆ ಕಾರಣವಾಯಿತು. ಮತ್ತು ಭೂಮಿಯಲ್ಲಿ ಜನಸಂಖ್ಯೆ ಅತಿರೇಕವಾದಾಗ ಮಂಗಳನಲ್ಲಿಗೆ ಬಿಡಾರ ಸಾಗಿಸಬಹುದೆಂದು ಕೆಲವರು ಅಲ್ಲಿಗೆ ಹೋಗುವ ಮಾರ್ಗಗಳನ್ನು ಹುಡುಕುತ್ತಲೂ ಇದ್ದರು. ಆದರೆ ಈಗ ನೋಡುವಾಗ ಈ ಪ್ರಯತ್ನಗಳೆಲ್ಲ ವ್ಯರ್ಥವಾಗುವ ಹಾಗೆ ಇವೆ. ಕೆಲಿಫೋರ್ನಿಯದ ವಿಲ್ಸನ್ ಒಬ್ಜರ್ವೇಟರಿಯ ತಜ್ಞರು ಹೇಳುವುದು ನಿಜವೆಂದಾಗುವದಾದರೆ ಮಂಗಳನಲ್ಲಿಯ ವಾತಾವರಣದಲ್ಲಿ ಶೇಕಡಾ ೫೦ರಷ್ಟು ತೇವವಿರಲಾರದು. ಇಷ್ಟು ಕಡಿಮೆ ತೇವವಿರುವ ವಾತಾವರಣದಲ್ಲಿ ಭೂಮಿಯ ಮೇಲಿನ ಯಾವ ಜೀವಿಯೂ ಸಸ್ಯವೂ ಬದುಕಲಾರದು. ಮನುಷ್ಯನು ಹೋಗಿ ಅಲ್ಲಿ ಸುಖಜೀವನ ನಡೆಸುವ ಮಾತು ದೂರವೇ ಆಯಿತು.

★

ವಿಮಾನಗಳಿಗೆ ದಿವ್ಯ ದೃಷ್ಟಿ

ಜರ್ಮನ್ ತಜ್ಞರು ತಮ್ಮ ವಿಮಾನಗಳಿಗೆ ಒಂದು ದಿವ್ಯ ದೃಷ್ಟಿಯನ್ನು ಕಂಡುಹಿಡಿದಿದ್ದಾರೆ. ಯುದ್ಧಕಾಲದಲ್ಲಿ ಬಾಂಬುಗಳನ್ನು ಸುರಿಯುವ ಬಾಂಬರು ವಿಮಾನಗಳಿಗೆ ಈ ದೃಷ್ಟಿಯಿರುವುದು ಬಹು ಪ್ರಯೋಜನಕರವಾಗಿದೆ. ಯಾಕ್ಸ್ ರೆ ಯಿಂದ ನೋಡಬಹುದಾದಂಥ ಈ ದೃಷ್ಟಿಯ ಮೂಲಕ ವೈಮಾನಿಕನು ದಟ್ಟವಾದ ಮೋಡಗಳಿಂದ ಆಚೆಗಿರುವ ವಸ್ತು ಪ್ರದೇಶಗಳನ್ನು ಬಹಳ ಸ್ಪಷ್ಟವಾಗಿ ಕಾಣಬಹುದು. ವಿಮಾನಗಳನ್ನು ಕೆಡಹಾಕಲಿಕ್ಕೆ ಶತ್ರುಪಕ್ಷದವರು ಕಟ್ಟಿದ ಬೆರೇಜು ಸರಿಗೆಗಳ ಸೂಕ್ಷ್ಮವಾದ ಬಲೆಯನ್ನೂ ಈ ದೃಷ್ಟಿಗಳ ಮೂಲಕ ದೂರದಿಂದಲೇ ಕಾಣಬಹುದು. ಆದ್ದರಿಂದ ಎಂಥ ಹವಾಮಾನದಲ್ಲಿಯೂ, ಎಷ್ಟು ತಗ್ಗಿನಲ್ಲಿದ್ದರೂ, ಈ ದೃಷ್ಟಿಸಾಧನವನ್ನು ಇಟ್ಟುಕೊಂಡ ವಿಮಾನಗಳು ಶತ್ರುಪ್ರದೇಶಗಳ ಮೇಲೆ ಅನಾಯಾಸವಾಗಿ ಧಾಳಿ ಮಾಡಿ ಸುರಕ್ಷಿತ ಸ್ಥಾನಗಳಿಗೆ ಮರಳಬಹುದು. ಜರ್ಮನರು ತಮ್ಮ ಪ್ರತಿಯೊಂದು ವಿಮಾನಕ್ಕೂ ಈ ದೃಷ್ಟಿಯನ್ನು ಇಡತೊಡಗಿದ್ದಾರೆ.

★

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

ದಕ್ಷಿಣಾಭಿಮುಖವಾಗಿ

ಜಪಾನು ದಂಡೆತ್ತಿ ತೆರಳುವುದೇ?

ಚೀನೀ ಸಾಗರದಲ್ಲಿ ಜಲಾಂತರ್ಗಾಮಿ ನಾವೆಗಳು

ಮತ್ಸೂಕರಿಗೆ ಹಿಟ್ಲರನ ಸಂದೇಶವೇನು?

ಜಪಾನಿನ ಪರದೇಶ ಸಚಿವರಾದ ಶ್ರೀ. ಮತ್ಸೂಕರವರು ಯೂರೋಪು ಸಂಚಾರ ಮುಗಿಸಿಬಂದ ತರುವಾಯ ಚೀನೀ ಸಮುದ್ರದಲ್ಲಿ ಜಪಾನಿನ ಸಮುದ್ರ ಪಡೆಗಳ ಚಲನ ವಲನಗಳು ಬಹಳ ಬೆಳೆದಿರುವವು ಸೇನಾಪಡೆಗಳೂ ಅಲ್ಲಿಂದಿತ್ತ, ಇಲ್ಲಿಂದತ್ತ ಸಂಚರಿಸತೊಡಗಿರುತ್ತವೆ. ದಕ್ಷಿಣ ಚೀನದಲ್ಲಿರುವ ಜಪಾನಿನ ಎಲ್ಲಾ ಸೇನೆಗಳ ಪುನರ್ಘಟನೆಯಾಗುತ್ತಲಿದೆ ಎಂದು ಒಂದು ಪ್ರಮುಖ ಚೀನೀ ಪತ್ರಿಕೆ ಬರೆದಿದೆ. ಚೀನೀ ಸಮುದ್ರದಲ್ಲಿ ದಕ್ಷಿಣಾಭಿಮುಖ ಆಕ್ರಮಣಕ್ಕೆ ಅನುಕೂಲವಾಗಿ ಜಪಾನಿನ ಜಲಾಂತರ್ಗಾಮಿಗಳು ಹೊರಟಿರುವವೆಂದು ಅದೇ ಪತ್ರಿಕೆ ಬರೆದಿದೆ. ಮತ್ತೆ ಫ್ರೆಂಚ್ ಇಂಡೋ ಚೀನದಿಂದ ಸ್ವಲ್ಪ ದೂರದಲ್ಲಿರುವ ಹೈನಾನ ದ್ವೀಪದಲ್ಲಿ ಜಪಾನೀ ಸೇನೆಗಳು ಕೇಂದ್ರೀಕರಿಸಲ್ಪಟ್ಟಿವೆ.

ಅಮೇರಿಕದಲ್ಲಿ ಚಿಂತಾಕುಲತೆ

ಜಪಾನಿನ ಈ ಎಲ್ಲ ಕಾರ್ಯಕಲಾಪಗಳಿಂದ ಅಮೇರಿಕದಲ್ಲಿ ಬಹಳ ಚಿಂತೆಯುಂಟಾಗಿದೆ. ಅಲ್ಲಿಯವರು ಶಾಂತಸಾಗರದೊಳಗಿನ ಪರಿಸ್ಥಿತಿಯ ಅತಿ ಸೂಕ್ಷ್ಮ ಮತ್ತು ಗಂಭೀರ ಆಲೋಚನೆ ಮಾಡತೊಡಗಿರುವರು ಮತ್ಸೂಕರ ಜರ್ಮನಿ ತನಕದ ಸಂಚಾರದ ರಹಸ್ಯವನ್ನು ಕುರಿತು ಅಮೇರಿಕಕ್ಕೆ ಹೆಚ್ಚಿನ ವಿಷಯವೇನೂ ತಿಳಿದಿರುವದಿಲ್ಲ ಆದರೂ ಜರ್ಮನಿ ಜಪಾನ ಇಟಲಿ ತ್ರಿರಾಷ್ಟ್ರಗಳು ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳಬೇಕಾದ ಅಗತ್ಯದ ಕಡೆಗೆ ಹಿಟ್ಲರನು ಮತ್ಸೂಕರ ದೃಷ್ಟಿಹರಿಸಿ, ಅಮೇರಿಕವು ಬ್ರಿಟನಿಗೆ ಕೊಡುವಷ್ಟಾದರೂ ಸಹಾಯವನ್ನು ಜಪಾನು ಜರ್ಮನಿ ಇಟಲಿಗಳಿಗೆ ಕೊಟ್ಟು ಯುದ್ಧಕಾರ್ಯವನ್ನು ಮುಂದೊತ್ತಬೇಕೆಂದು ಹಿಟ್ಲರನು ಮತ್ಸೂಕರಿಗೆ ಸಂದೇಶಕೊಟ್ಟಿರಬಹುದಾಗಿ ಅಮೇರಿಕವು ಎಣಿಸಿದೆ

ಸಿಂಗಾಪುರದ ಮೇಲೆ ಆಕ್ರಮಣ

ಜಪಾನು ಸಿಂಗಾಪುರವನ್ನಾಗಲೀ ಡಚ್ ಈಸ್ಟ್ ಇಂಡೀಸ್‍ಗಳನ್ನಾಗಲೀ ಆಕ್ರಮಿಸಲೇಬೇಕೆಂದು ಹಿಟ್ಲರನು ಜಪಾನಿಗೆ ಹೇಳದೆ ಇದ್ದಿರಬಹುದು. ಆದರೂ ಶಾಂತಸಾಗರದೊಳಗಿನ ಬ್ರಿಟಿಷ್ ಅಥವಾ ಅಮೇರಿಕದ ಹಡಗುಗಳ ಮೇಲೆ ಧಾಳಿಮಾಡಲಿಕ್ಕೆ ಅನುಕೂಲವಾಗಿ ಜಪಾನು ತನ್ನ ೨೦ ಅಥವಾ ೩೦ ದಾಳಿಗಳನ್ನು ಜರ್ಮನಿಗೆ ವರ್ಗಾಯಿಸಬೇಕೆಂದು ಹಿಟ್ಲರನು ಕೇಳಿರಬಹುದು, ಜಪಾನು ಅದಕ್ಕೆ ಒಪ್ಪಿರಲೂಬಹುದು ಆದ್ದರಿಂದಲೇ ಈಗೀಗ ಚೀನೀ ಸಾಗರದಲ್ಲಿ ಜಪಾನೀ ನಾವಿಕಪಡೆಗಳ ಅತಿಶಯ ಚಲನವಲನಕ್ಕೆ ಕಾರಣವೆಂದು ತಿಳಿಯಲಾಗುತ್ತದೆ.

ಅಮೇರಿಕದ ಸಿದ್ಧತೆ

ಅಮೇರಿಕವು ಮಾತ್ರ ಇದಕ್ಕೆ ಸಂಪೂರ್ಣ ಸಿದ್ಧವಾಗಿಯೇ ಇದೆ ಬ್ರಿಟಿಷ ಮತ್ತು ಅಮೇರಿಕದ ಸೇನಾಧಿಕಾರಿಗಳು ಇದಕ್ಕೆ ಮೊದಲೇ ವಿಚಾರವಿನಿಮಯ ಮಾಡಿಕೊಂಡಿರುವರು ಅಮೇರಿಕದ ೧೩ ದೊಡ್ಡ ಯುದ್ಧ ಹಡಗುಗಳು ಆಸ್ಟ್ರೇಲಿಯ ಮತ್ತು ನ್ಯೂಜೀಲೆಂಡಿನ ತನಕ ಸಂಚಾರಮಾಡಿ ಅಲ್ಲಿಯ ಸ್ಥಿತಿಗತಿಗಳ ಪ್ರತ್ಯಕ್ಷ ಅನುಭವ ಪಡೆದು. ಮುಂದಿನ ಜಪಾನಿನ ಧೂರ್ತತನದಿಂದಾಗುವ ಯಾವ ವಿಷಮ ಪರಿಸ್ಥಿತಿಯನ್ನು ಎದುರಿಸಲಿಕ್ಕಾದರೂ ಅಮೇರಿಕ ಸಿದ್ಧವಿದೆ ದಕ್ಷಿಣ ಶಾಂತಸಾಗರದ ಹಡಗು ಮಾರ್ಗವನ್ನು ಕಾಯಲಿಕ್ಕೂ ಅದರ ಮೇಲೆ ಶತ್ರುಪಕ್ಷದ ಆಕ್ರಮಣವಾಗದ ಹಾಗೆ ತಡೆಯಲಿಕ್ಕೂ ಎಲ್ಲಾ ಸಿದ್ಧತೆಗಳಾಗಿವೆ.

ರಶ್ಯದಲ್ಲಿ ಗಡಿಬಿಡಿ

ರಶ್ಯದಲ್ಲಿಯೂ ಗಡಿಬಿಡಿಯಾಗಿದೆ. ರಶ್ಯ ಜರ್ಮನ್ ಗಡಿಯ ಮೇಲೆ ಸ್ನಾಯುಗಳು ಕೋಟೆ ಕೊತ್ತಳಗಳನ್ನು ಕಟ್ಟಲಾರಂಭಿಸಿರುವರ ಆದ್ದರಿಂದ ರಶ್ಯ ಜರ್ಮನ್ ಸ್ನೇಹಾಚಾರದ ಕುಂಬಳಕಾಯಿ ಎಲ್ಲಿಯೋ ಕೊಳೆಯತೊಡಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಆದ್ದರಿಂದ ತಕ್ಕ ಸಮಯದಲ್ಲಿ ರಶ್ಯವು ಜರ್ಮನಿಗೆ ವಿರೋಧಿಯಾಗಲೂಬಹುದು ಅಥವಾ ತಟಸ್ಥವಾಗಿಯಾದರೂ ಉಳಿಯಬಹುದು ಆಗ ಜರ್ಮನಿಗೆ ಯುದ್ಧದಲ್ಲಿ ಗೆಲ್ಲುವದು ಬಹಳ ಕಠಿನವಾಗುವದು

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—5—1940

FROM

Sri K. Shivarama Nair,
Kerikcundah Estate,
Post Devegadabettu
KADUR DISTRICT

To,

The Joint Managers,
C. P. C. Motor Service Ltd,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. ೩-0-0 | ಅಂಚೆ ವೆಚ್ಚ ಸೇರಿ ರೂ. ೩-13-0 | Regd. No. M. 3460

ಸ್ವದೇಶಾಭಿಮಾನಿ

ಸಂಪುಟ 35] ತಾರೀಕು 2-5-1941 [ಸಂಚಿಕೆ 18]

The Bombay Life Assurance Company, Ltd.

(ESTABLISHED 1908)

Death! { is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,
The Bombay Life Building,
Gandhi Nagar, UDIPI.

OR AT ANY OF THEIR OFFICES AT:—

Puthiyara, Calicut. | Car Street, Mangalore. | Central Station Road, Trivandrum.

Gautam Nivas, Charni Road, Bombay No. 4. | Post Box No. 337 Mount Road, Madras. | Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಜತ್ತಿಗೆ, ಭುಜ, ಹಲ್ಲುವೇದನೆಗಳಿಂದ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮುದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

...ದಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ಚಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2-13-0 Regd. No. M. 346

ಸ್ವದೇಶಾಭಿಮಾನಿ

ಸಂಪುಟ 35] ತಾರೀಕು 2-5-1941 [ಸಂಚಿಕೆ 18]

The Bombay Life Assurance Company, Ltd.

(ESTABLISHED 1908)

Death! { is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT—

Puthiyara Calicut — Car Street, Mangalore — Central Station Road, Trivandrum.

Gautam Nivas, Churni Road, Bombay No 4 — Postl ox No 337 Mount Road, Madras — Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ವೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಹಿಟ್ಲರನು ಬಾಯಿಬಿಡುತ್ತಾನೆ!

ರಿಶ್‌ಸ್ಟಾಗಿನ ಸಭೆಯಲ್ಲಿ

ಬ್ರಿಟನು-ಅಮೇರಿಕಗಳ ಮೇಲೆ ಆರೋಪ

ಬಾಲ್ಕನ್ ಯುದ್ಧದ ವಿಷಯ

ರಿಶ್‌ಸ್ಟಾಗಿನ ಸಭೆಯಲ್ಲಿ ಭಾಷಣ ಮಾಡುತ್ತಾ—ಹಿಟ್ಲರನು ಇಂದಿನ ಯುದ್ಧಕ್ಕೆ ಬ್ರಿಟನು ಅಮೇರಿಕಗಳೇ ಕಾರಣವೆಂದನು. ಜರ್ಮನಿಯ ರಾಷ್ಟ್ರೀಯ ಸಮತಾವಾದಿ ಸರಕಾರವನ್ನು ನಾಶಗೊಳಿಸುವುದು ಶಕ್ಯವಿಲ್ಲವೆಂದನು. ಲಿಬಿಯದಲ್ಲಿ ಇಟಲಿ ಸೋಲಲು ಕಾರಣವೇನೆಂದು ತಿಳಿಸಿದನು. ಬಾಲ್ಕನಿನಲ್ಲಿ ಇಂದು ಇಟಲಿಗೆ ಪ್ರಾಧಾನ್ಯತೆ ಸಿಕ್ಕಿದೆಯೆಂದನು.

ಕಳೆದ ರವಿವಾರ ರಿಶ್‌ಸ್ಟಾಗ್ ಅಧಿವೇಶನದ ಮುಂದೆ ಹಿಟ್ಲರನು ಮಾಡಿದ ದೀರ್ಘ ಭಾಷಣದ ಕೆಲವಂಶವು ಹೀಗೆ ಕೊಡಲಾಗಿದೆ

'ಯುದ್ಧವು ಆರಂಭವಾದ ಕಾಲದಲ್ಲಿಯೇ ನಿಮಗೆ ಎಲ್ಲವನ್ನೂ ನಾನು ತಿಳಿಸಿದ್ದೇನೆ. ಬ್ರಿಟಿಷ್ ಮತ್ತು ಫ್ರಾನ್ಸಿನ ಒಳಸಂಚಿನಿಂದ ಶಾಂತಿಯ ಬಗ್ಗೆ ನಾವು ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಬ್ರಿಟನಿನೊಡನೆ ಶಾಶ್ವತ ಮೈತ್ರಿಯ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ನಾನು ನಿರಂತರವಾಗಿ ಯತ್ನಿಸಿದೆ.' ಆದರೆ ಉದ್ದೇಶ ಪೂರ್ವಕವಾಗಿ ಜರ್ಮನರ ಒಪ್ಪಂದದ ಯಾವ ಸೂಚನೆಯನ್ನೂ ಅವರು ಮನ್ನಿಸಲಿಲ್ಲ. ಯುದ್ಧ ಬೇಡ—ಅದರಿಂದ ಹಿತವಿಲ್ಲವೆಂದು ಬಹಳ ಆಸ್ಥೆಯಿಂದ ಕೇಳಿಕೊಂಡರೂ ಬ್ರಿಟನು ಒಪ್ಪಲಿಲ್ಲ. ಚರ್ಚಿಲ್ ಮತ್ತು ಅವರ ಹಿಂದಿನ ಅನುಯಾಯಿಗಳು ಅದನ್ನು ಅನುಮೋದಿಸದೆ ಪರಿಹಾಸ್ಯ ಗೈದರು

'ಫ್ರಾನ್ಸಿನ ಪತನವಾದ ನಂತರ ಯೂರೋಪಿನ ಸಮರ ಪ್ರಿಯರು ಯುದ್ಧವು ಮುಂದುವರಿಯುವಂತೆ ಜನರನ್ನು ಪ್ರೋತ್ಸಾಹಿಸಿದರು. ಮೊದಲಿನಂತೆ ರಕ್ತದ ಕಾಲುವೆಯು ಪ್ರಚಂಡವಾಗಿ ಹರಿಸಿದರು.

'ಪ್ರಜಾಪ್ರಭುತ್ವದ ವಿಷಯ ಚಳವಳ ಮಾಡಿ ಬೊಬ್ಬಾಟ ಮಾಡುವ ರಾಷ್ಟ್ರಗಳ ಕಠಿಣ ಪರಿಸ್ಥಿತಿಯನ್ನು ತಮ್ಮ ಭೌತಿಕ ಉತ್ಪನ್ನ ಮತ್ತು ಪದ್ಧತಿಯೊಡನೆ ತುಲನೆ ಮಾಡಿ ನೋಡಿದರೆ ೧೯೪೧ರಂಥ ಕೆಟ್ಟ ವರ್ಷವನ್ನು ಜರ್ಮನರು ಇನ್ನೆಂದೂ ಕಾಣರು ಎಂಬುದು ಅವರಿಗೆ ಗೊತ್ತಾಗದಿರದು

'ಲಿಬಿಯದಲ್ಲಿ, ಇಟಲಿಯನರಿಗೆ ಟೇಂಕುಗಳು ಮತ್ತು ಟೇಂಕು ವಿರೋಧಕ ತೋಪುಗಳಿಲ್ಲದಿದ್ದುದರಿಂದ ಅಪಜಯವಾಯಿತು ಗ್ರೀಕ್ ಜನಾಂಗದ ಮುಖಂಡರಲ್ಲಿ ಮತ್ತು ಅರಸನಲ್ಲಿ ಬಹಳ ವ್ಯತ್ಯಾಸವಿದೆ. ಗ್ರೀಕ್ ಅರಸನು ಬ್ರಿಟಿಷರ ಪಕ್ಷ ವಹಿಸಿ ಒಳಸಂಚು ನಡೆಸಿದನು.

'ಬಾಲ್ಕನ್ ಯುದ್ಧದಲ್ಲಿ ಈಗ ಕ್ರೋಟರು ಮ್ಯಾಸಿಡೋನಿಯರನ್ನು ಬಿಟ್ಟು ೬೨೪೮ ಸರ್ಬ ಮಂದಿ ಅಧಿಕಾರಿಗಳು ೩೪೩೦೦೦ಕ್ಕೆ ಮೇಲ್ಪಟ್ಟ ಸೈನಿಕರು ಸೆರೆಹಿಡಿಯಲ್ಪಟ್ಟಿದ್ದಾರೆ ಗ್ರೀಸಿನಲ್ಲಿ ೮೦೦೦ ಅಧಿಕಾರಿಗಳು ೨೧೦೦೦೦ ಮಂದಿ ಸೆರೆಹಿಡಿಯಲ್ಪಟ್ಟಿದ್ದಾರೆ ಕಳೆದ ಅಕ್ಟೋಬರ್ ತಿಂಗಳಿಂದ ಅನುಪಮ ತ್ಯಾಗಮಾಡಿ ರಕ್ತ ಸುರಿಸಿ ಅಚ್ಚಿನ ರಾಷ್ಟ್ರಗಳು ವಿಭಾಗ ಕಲ್ಯಾಣವಾಗುವಂತೆ ಪ್ರಯತ್ನಿಸಿದ್ದರಿಂದಲೇ ಈಗ ಬಾಲ್ಕನಿನಲ್ಲಿ ಇಟಲಿಗೆ ವಿಜಯ ದೊರತಿದೆ.'

ಸೌಂದರ್ಯ ಮತ್ತು ಮುಖಕಾಂತಿ।

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ ತಯಾರಿಸಿದ ಸ್ನೋ

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ-ಮುಖದ ಮೇಲಿನ ಯಾವತ್ತೂ ಕಲೆ, ಮುಖ ಛಿದ್ರ ಮುಂತಾದುವನ್ನು ಗುಣಪಡಿಸುತ್ತ।

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು — ಕೊರನೇಷನ್ ಟ್ರೇಡಿಂಗ್ ಕೊ ಮಹಮ್ಮದಾಲಿ ರೋಡ್, ಮಂಗಳೂರು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

THE

Canara Banking Corporation Limited

(In corporated in British India)

ESTD 1906.

HEAD OFFICE: **UDIPI**, *South Kanara.*

SEASON DEPOSITS

ARE now accepted at all our Offices at the following rates of interest:

2 & 3 months	...	...	3% p. a.
4 & 5 "	...	...	3½% p. a.

These deposits will not be allowed to run beyond September 1941.

ಭೂಮಿಯಿಂದ ಎತ್ತರದಲ್ಲಿ

ಭೂಮಿಯಿಂದ ಉತ್ತರಕ್ಕೆ ಹೋದ ಹಾಗೆ ಶೀತ ಜಾಸ್ತಿ ಆಗುವದೆನ್ನುವದು ಸಂಪೂರ್ಣ ಸತ್ಯವಲ್ಲ. ಭೂಮಿಯಿಂದ ಸುಮಾರು ೧೫ ಮೈಲು ಎತ್ತರಕ್ಕೆ ಹೋದ ತನಕ ಶಾಖ ಕಡಿಮೆಯಾಗುತ್ತಾ ಬರುತ್ತದೆ. ಮತ್ತೆ ಅದು ಪುನಃ ಏರುತ್ತ ಹೋಗಿ ೩೮ ಮೈಲು ಎತ್ತರದಲ್ಲಿ ಉಷ್ಣತೆಯು ೧೦೦° ಶತಮಾಂಶ ಇರುತ್ತದೆಂದೂ, ೬೦, ೭೦ ಮೈಲುಗಳ ಎತ್ತರದಲ್ಲಿ ೨೦° ಶತಮಾಂಶ ಇರುತ್ತದೆಂದೂ ಈಗ ಗೊತ್ತಾಗಿದೆ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

9—5—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೯—೫—೧೯೪೧

ಗಾಂಧಿಜಿ ಹಿಂದುಗಳ ಪ್ರತಿನಿಧಿಯಾಗಿ ಭೇಟಿಗೆ ಬರಬೇಕಂತೆ!

ಹಿಂದೂ-ಮುಸ್ಲಿಂ ಒಪ್ಪಂದ ಮಾತುಕತೆಗೆ-ಕ್ವಿದೇ ಅಜಾಮರು ಅಭಿಪ್ರಾಯಪಡುತ್ತಾರೆ

ಜಾತೀಯ ವೈಷಮ್ಯಕ್ಕೆ ಕಾರಣರು ಯಾರು?

ಗಾಂಧೀ – ಸಪ್ರು ಪತ್ರವ್ಯವಹಾರ

ಜಿನ್ನಾ ಮಹಾತ್ಮರನ್ನು ಭೇಟಿಮಾಡಿಸಿ ಹಿಂದೂಮುಸ್ಲಿಂಸಮಸ್ಯೆಯನ್ನು ಬಗೆಹರಿಸಬೇಕೆಂದು ಸಪ್ರುಗಳು ಪ್ರಯತ್ನಮಾಡಿದರು. ಆದರೆ ಜಿನ್ನರು ತಮ್ಮ ಸಂಕುಚಿತ ಧೋರಣ ದಹರವನ್ನು ಬಿಡಲಿಲ್ಲ. ಹಿಂದುಗಳ ಪ್ರತಿನಿಧಿಯೆಂದು ಗಾಂಧಿಜಿ ಬಂದರೆ ತಾನು ಮಾತುಕತೆ ನಡೆಸುವನೆಂದರು ಕ್ವಿದೇ ಅಜಾಮರು. ಹಿಂದು ಪ್ರತಿನಿಧಿಯಾಗಿ ತಾನು ಅವರೊಡನೆ ಮಾತುಕತೆ ನಡೆಸಲಾರೆನೆಂದರು ಗಾಂಧಿಜಿ. ಕೊನೆಗೆ ಗಾಂಧಿಜಿ, ಹಿಂದೂ ಮುಸ್ಲಿಂ ಒಪ್ಪಂದಕ್ಕೆ ಈಗ ಸಮಯವು ಕೂಡಿಬಂದಿಲ್ಲವೆಂದು ಸಪ್ರುಗಳಿಗೆ ಬರೆದರು. ಅವರೊಳಗೆ ನಡೆದ ದೀರ್ಘ ಪತ್ರವ್ಯವಹಾರವು ಈಗ ಪ್ರಕಟವಾಗಿದೆ.

ಅದರ ಸಾರಾಂಶವು ಹೀಗಿದೆ.——

ಗಾಂಧಿಜಿಯವರ ಪತ್ರ

‘ನಮ್ಮೊಳಗಿನ ಅಂತಃಕಲಹವನ್ನು ನಾವೇ ಪರಿಹರಿಸಿಕೊಳ್ಳಬೇಕೆಂದು ನಾನು ಒಪ್ಪುತ್ತೇನೆ. ಈ ವಿಶ್ವಾಸದಿಂದಲೇ ನಾನು ಮುಂಬಯಿಯಲ್ಲಿ ಜಿನ್ನರನ್ನು ಕಂಡೆ ನಾವು ಬಹಳ ಮಾತನಾಡಿದ್ದೆವು. ಆ ಮೇಲೆ ಸುಬಾಸರೂ ಮಾತನಾಡಿದರು. ಆದರೂ ನಮ್ಮಿಂದ ಮಾತುಕತೆ ಸಾಗಿಸುವುದೂ ಅಶಕ್ಯವಾಯಿತ್ತು. ಆ ಬಳಿಕ ಡಿಲ್ಲಿಯಲ್ಲಿ ಜಿನ್ನರನ್ನು ನಾನು ಮನೆಯಲ್ಲಿಯೇ ಕಂಡೆನು ನಮ್ಮ ಭೇದವನ್ನು ವೈಸರಾಯರ ಮುಂದಿಡಲು ನಾವು ಒಟ್ಟು ಹೋದಂತಾಯಿತು.

‘ನಮ್ಮ ಭೇಟಿಯಿಂದ ಜಿನ್ನರಿಗೆ ಬೇಸರವಿಲ್ಲವಾದರೆ ನಾನು ಮತ್ತೊ ಅವರನ್ನು ಕಾಣುವೆನು. ಎಲ್ಲಾ ಪಕ್ಷಗಳೂ ತಾವು ಹೇಳಿದಂತೆ ಕೇಳುವ ವರೆಗೆ ಅವರಿಗೆ ಒಪ್ಪಂದವು ಬೇಡವಂತೆ. ಈ ಬಗೆಯ ಮನೋಭಿಪ್ರಾಯವುಳ್ಳ ಅವರೊಡನೆ ನಾನು ಮಾತನಾಡುವುದು ಅಶಕ್ಯ. ಎಷ್ಟೋ ಸಲ ಜಿನ್ನರಿಗೆ ಬರೆಯಬೇಕೆಂದು ನಾನು ಮನ ಮಾಡಿದೆ; ಆದರೆ ನನಗೆ ಬರೆಯಲು ಧೈರ್ಯವಿಲ್ಲ.

ಸಪ್ರುಗಳ ಪತ್ರ

‘ಜಾತೀಯ ಸಮಸ್ಯೆ ಬಹಳ ಮಹತ್ವದ್ದು. ನಮ್ಮ ಒಟ್ಟು ಬೇಡಿಕೆಗಳನ್ನು ಬ್ರಿಟಿಷರು ಮನ್ನಿಸಲಿ ಮನ್ನಿಸದಿರಲಿ ನಾವು ಪ್ರಯತ್ನಿಸುವುದು ಅವಶ್ಯ. ಪಾಕಿಸ್ತಾನದ ವಿಷಯ ಜಿನ್ನರೊಡನೆ ನಾನಿನ್ನೂ ಮಾತುಕತೆ ನಡೆಸಿಲ್ಲ. ಪಾಕಿಸ್ತಾನವೆಂದರೆ ಹಿಂದುಸ್ಥಾನವನ್ನು ಎರಡು ಹೋಳು ಮಾಡುವುದೆಂದು ಅರ್ಥವಾದರೆ ನಾನದನ್ನು ವಿರೋಧಿಸುತ್ತೇನೆ. ಹೇಗಿದ್ದರೂ ಒಪ್ಪಂದ ಮಾತನಾಡುವಾಗ ಒಂದು ಜಾತಿಯವರು ಇನ್ನೊಂದು ಜಾತಿಯವರ ಮೇಲೆ ನಿರ್ಬಂಧ ಹೇರಿಸಿ ಮಾತನಾಡಲಾಗುವುದಿಲ್ಲ. ಜಿನ್ನರು ನಿಮ್ಮನ್ನು ಭೇಟಿಯಾಗಲು ಒಪ್ಪದಿದ್ದರೆ ಅದು ಅವರ ಒರಟುತನ ತೋರಿಸುತ್ತದೆ. ನೀವು ಅಪಾರ ಧೈರ್ಯವುಳ್ಳ ವ್ಯಕ್ತಿ. ಜಿನ್ನರಿಗೆ ಇನ್ನೊಮ್ಮೆ ಬರೆದು ವಿಚಾರ ವಿನಿಮಯ ಮಾಡಿ ಎಲ್ಲಾ ಪಕ್ಷಗಳಿಗೆ ಸಮ್ಮತಿಯಾಗುವ ಒಪ್ಪಂದಕ್ಕೆ ಯತ್ನಿಸಬಹುದು. ನಿಮ್ಮ ಅಥವಾ ಹಿಂದುಗಳ ಪ್ರತಿನಿಧಿಯಾಗಿ ನಾನು ಮಾತನಾಡುವುದು ಶಕ್ಯವಿಲ್ಲ. ಜಿನ್ನರು ನಿಮ್ಮ ಭೇಟಿಯಾಗುವಂತೆ ನಾನು ಬರೆಯಬಲ್ಲೆ. ಭಾರತ ಮಂತ್ರಿ ಹಾಗೂ ವೈಸರಾಯರು ಅಲ್ಪಸಂಖ್ಯಾಕರಿಗೆ ಘಟನಾತ್ಮಕ ಬೆಂಬಲ ಕೊಟ್ಟ ಬಗ್ಗೆ ಜೊಬ್ಬಾಟವೆಬ್ಬಿಸಬೇಕಾಗಿಲ್ಲ. ನಮ್ಮ ಮನೆಯನ್ನು ನಾವು ಚೊಕ್ಕಟವಾಗಿಟ್ಟರೆ ಯಾವುದೇ ಶಕ್ತಿ ನಮ್ಮನ್ನು ತಗ್ಗಿಸಲಾರದು. ಜಾತೀಯ ಒಪ್ಪಂದಕ್ಕೆ ನೀವು ಕೈ ಹಾಕುವುದಿದ್ದರೆ ನಾನು ಸಂಪೂರ್ಣ ನೆರವನ್ನು ಕೊಡುವೆನು.’

ಗಾಂಧಿಯವರ ಪತ್ರ

‘ನಾನು ಹಿಂದುಗಳ ಪರವಾಗಿ ಮಾತನಾಡಬೇಕೆಂದು ಜಿನ್ನರು ತಿಳಿಸುತ್ತಾರೆ. ನಾನು ಹಾಗೆ ಮಾಡಲಾರೆ. ಇಷ್ಟರಲ್ಲಿ ಶಾಸನ ಭಂಗ ಚಳವಳವು ಮುಸ್ಲಿಮರ ವಿರುದ್ಧವೆಂದು ಅಪಪ್ರಚಾರ ಸಾಧಿಸಿದ್ದು ನಿಮಗೆ ತಿಳಿದಿರಬಹುದು. ಆದ್ದರಿಂದ ಈ ವಿಷಯದಲ್ಲಿ ನಿಮಗೆ ಸರಿತೋರಿದಂತೆ ನೀವು ನಿಮಗೆ ಯೋಗ್ಯರೆನಿಸಿದವರನ್ನು ಕಂಡು ಯತ್ನಿಸುವುದು ಉಚಿತ.’

ಸಪ್ರುಗಳ ಉತ್ತರ

‘ಮುಂದಿನ ವಿಷಯದಲ್ಲಿ ನಾನು ನಡುವೆ ಬಾಯಿ ಹಾಕಲು ಯತ್ನಿಸುವುದಿಲ್ಲ. ಜಿನ್ನರು ನನಗೆ ಪತ್ರ ಬರೆದರೆ, ತೃಪ್ತಿಕರವೆಂದು ನನಗೆ ತೋರಿದರೆ ಆಗ ವಿವರವನ್ನು ನಿಮಗೆ ತಿಳಿಸುವೆನು ನಿಮ್ಮ ಮನಸ್ಸಿಗೆ ಸಂತೋಷದಂತೆ ಮಾಡಬಹುದು.’ ಆ ಮೇಲೆ ಸಪ್ರುಗಳು ಜಿನ್ನರಿಂದ ಬಂದ ಪತ್ರವನ್ನು ಗಾಂಧಿಜಿಗೆ ಕಳುಹಿಸಿ ನಿಮಗೆ ತೋರಿದಂತೆ ಮಾಡಬಹುದೆಂದು ಬರೆದಿದ್ದರು.

ಗಾಂಧಿಜಿಯ ಪತ್ರ

‘ನನ್ನ ಅಂಜಿಕೆಯನ್ನು ಜಿನ್ನರ ಪತ್ರವು ಖಂಡಿತಮಾಡಿತು ನಾನು ಹಿಂದು ಪ್ರತಿನಿಧಿಯಾಗಿ ಹೋದರೆ ಮಾತ್ರ ಅವರೊಡನೆ ಮಾತುಕತೆ ನಡೆಸಬಹುದಂತೆ ಇದನ್ನು ಮಾತ್ರ ನಾನು ಮಾಡಲಾರೆ ಜಿನ್ನರ ಪರಿಸ್ಥಿತಿ ಅಷ್ಟೊಂದು ಭದ್ರವಾಗಿಲ್ಲವೆಂದು ನನ್ನ ಅಭಿಪ್ರಾಯವಿದೆ ಇದನ್ನು ನೀವು ಒಪ್ಪುವುದಾದರೆ ಅವರಿಗೆ ತಿಳಿಸಬೇಕು. ಇಲ್ಲವಾದರೆ ನನ್ನನ್ನು ಪರಿವರ್ತನೆಮಾಡಿ ಹಿಂದುಗಳ ಪ್ರತಿನಿಧಿಯಾಗಿ ಮಾತನಾಡುವಂತೆ ಯತ್ನಿಸಬೇಕು.’

ಸಪ್ರುಗಳ ಉತ್ತರ

‘ಈ ಪ್ರಯತ್ನವು ಯಶಸ್ವಿಯಾಗುವುದೆಂದು ನನಗೆ ಅನಿಸುವುದಿಲ್ಲ ಹಿಂದುಗಳ ಪ್ರತಿನಿಧಿಯಾಗಿ ನೀವು ಜಿನ್ನರನ್ನು ಕಾಣಬೇಕೆಂದು ನಾನು ಹೇಳುವುದಿಲ್ಲ. ಜಿನ್ನರಾದರೂ ತಮ್ಮ ಹಠವನ್ನು ಬಿಡಬೇಕೆಂದು ಆಗ್ರಹಮಾಡಲಾರೆ. ಈ ವಿಚಾರ ನಾನು ತಿರಿಗಿ ಒಮ್ಮೆ ಆಲೋಚಿಸುವೆನು.

‘ಮುಂಬಯಿಯಲ್ಲಿ ಕೂಡಿದ ಪರಿಷತ್ತಿನವರಲ್ಲಿ ಕೆಲವರು ಸ್ವಾವ್ರ ಕೂಡಿ ನಿಮ್ಮನ್ನು ಜಿನ್ನರನ್ನೂ ಒಂದು ಸ್ಥಳದಲ್ಲಿ ಒಟ್ಟುಗೂಡಿಸಿ ಮಾತನಾಡಿಸಿದರೆ ಆಗಬಹುದೋ ಹೇಗೆ? ಈ ಪ್ರಯತ್ನವು ಕೇವಲ ಪರೀಕ್ಷಾರ್ಥ ನಿಮ್ಮ ಅಭಿಪ್ರಾಯವೇನೆಂದು ನೀವು ತಿಳಿಸಿರಿ.’

ಗಾಂಧಿಜಿ ಉತ್ತರ

‘ನೀವು ಆಮಂತ್ರಿಸಿದರೆ ನಾನು ಬರುವೆನು- ಆದರೆ ಆಮಂತ್ರಿಸುವ ಮೊದಲು ಹತ್ತುವು ಬಾರಿ ವಿಚಾರಿಸಿರಿ ಈ ಪ್ರಯತ್ನ ಯಶಸ್ವಿಯಾಗದಿದ್ದರೆ ಪರಿಣಾಮ ಕೆಡುವುದು. ಜಾತೀಯ ಬಿಕ್ಕಟ್ಟಿಗೆ ಇನ್ನೂ ಸಮಯ ಬಂದಿಲ್ಲ. ನನ್ನ ಈ ಮುಂಜಾಗ್ರತೆಯನ್ನು ನೀವು ಲಕ್ಷಿಸಬೇಕಾದ ಕಾರಣವೂ ಇಲ್ಲ.’

ಕೊನೆಗೆ ಸಪ್ರುಗಳು ಪತ್ರ ಬರೆದು ತಾನೀಗ ಅವಸರ ಮಾಡುವುದಿಲ್ಲವೆಂದು ಬರೆದರು.

THE PIE-MONEY BANK LTD.,
Maidan Road,—MANGALORE.
Undertakes all kinds of Banking Business. Current account at 2½% per annum, Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines. Unique Banking facilitie to Businessmen and interested Public.
Apply for particulars—
K. R. GURU, *Managing Director.*

ಸ್ವದೇಶಾಭಿಮಾನಿ

ತಾರೀಕು 9-5-1941

ಸಪ್ರು ನಿರಾಶರಾದರೆ?

ಸರ್ ತೇಜ್ ಬಹದ್ದೂರ್ ಸಪ್ರುಗಳು ಭಾರತದ ರಾಜಕೀಯ ಬಿಕ್ಕಟ್ಟಿನ ಪರಿಹಾರದ ಸಲುವಾಗಿ ಕಳೆದ ಕೆಲವು ಸಮಯಗಳಿಂದ ಮಾಡಿದ ಸಾಹಸಗಳು ಸರ್ವವಿದಿತವಾಗಿವೆ. ಒಂದು ಕಡೆಯಲ್ಲಿ ಕಾಂಗ್ರೆಸು ಮಂತ್ರಿಮಂಡಳಗಳು ರಾಜಿನಾಮೆಯಿತ್ತು ಸತ್ಯಾಗ್ರಹ ಹೂಡಿದಂದಿನಿಂದ ಉಂಟಾದ ಘಟನಾತ್ಮಕವಾದ ತೊಡಕು ಮತ್ತು ಅಶಾಂತಿ, ಮತ್ತೊಂದು ಕಡೆಯಲ್ಲಿ ಹಿಂದೂ ಮುಸ್ಲಿಂ ಮುಖಂಡರೊಳಗೆ ಭಿನ್ನಾಭಿಪ್ರಾಯವಾಗಿ ಒದಗುವ ವೈಷಮ್ಯ—ಈ ಎಲ್ಲಾ ವಿಷಯಗಳ ಪರಿಹಾರೋಪಾಯವೇನೆಂದು ಸಕಲರೂ ಚಿಂತಿಸುತ್ತಿದ್ದ ಕಾಲದಲ್ಲಿ, ದೇಶದ ಪ್ರಮುಖ ರಾಜಕೀಯ ಪಕ್ಷಗಳು ತಮ್ಮದೇ ಒಂದೊಂದು ಹಾದಿ ಹಿಡಿದು ಹೋಗುತ್ತಿರುವಲ್ಲಿ, ಸರಕಾರವಾದರೂ ತನ್ನೊಂದು ಕದಲದ ನಿಶ್ಚಯದಿಂದ ಮುನ್ನಡೆಯುತ್ತಿರುವಲ್ಲಿ ಮಂದಪಕ್ಷೀಯರು ಕೆಲವರು ಸಪ್ರುಗಳ ಮುಂದಾಳುತನದಿಂದ ಒಂದು ಸಂಧಿಸಾಧಕ ಯತ್ನವನ್ನು ಕೈಕೊಂಡರು. ಆದರೆ ಭಾರತ ಮಂತ್ರಿ ಅಮೆರಿಯವರ ಮಾತಿನಿಂದ ಘಟನಾತ್ಮಕ ತೊಡಕಿನ ಪರಿಹಾರದ ಸೂಚನೆಯೂ ಮತ್ತೆ ಗಾಂಧಿ ಸಪ್ರು ಪತ್ರವ್ಯವಹಾರದಿಂದ ಸ್ಪಷ್ಟವಾಗುವ ಜಿನ್ನರ ಹಟದ ಧೋರಣೆಯಿಂದ ಹಿಂದೂ ಮುಸ್ಲಿಂ ಐಕ್ಯ ಪ್ರಯತ್ನವೂ ವಿಫಲವಾಗಲು ಸಪ್ರುಗಳು ಇಂದು ತೀರಾ ನಿರಾಶರಾಗಿ ಹಿಂದೆ ಬೀಳುವ ಸಂದರ್ಭವೊದಗಿದೆಯೆನ್ನಬೇಕಾಗುತ್ತದೆ.

ಮುಂಬಯಿ ಪರಿಷತ್ತು

ಬೊಂಬಯಿ ಪರಿಷತ್ತಿನ ಸೂಚನೆಯು ಹೆಚ್ಚಿನ ಪರಿಣಾಮಕಾರಿಯಾಗಬಹುದೆಂದು ವಿಶೇಷವಾಗಿ ಯಾರೂ ವಿಚಾರಿಸಿದುದಿಲ್ಲ. ಆದರೂ ಸಪ್ರು ಸಮಿತಿಯವರು ಸರಕಾರದ ಮುಂದೆ ಒಂದು ಕಾರ್ಯಯೋಜನೆಯನ್ನು ಇಟ್ಟರು. ಕೇಂದ್ರ ಸರಕಾರದಲ್ಲಿ ಹಿಂದೀಯರಿಂದ ಕೂಡಿದ ಮಂತ್ರಿಮಂಡಳವನ್ನು ರಚಿಸುವುದಿದ್ದರೆ ಸರಕಾರದ ಸೂತ್ರವನ್ನು ಕೈಕೊಳ್ಳಲು ತಮ್ಮ ಸಹಕಾರವನ್ನು ವ್ಯಕ್ತಪಡಿಸಿದರು. ಆದರೆ ಅಮೆರಿಯವರು ಹಿಂದೀಯರ ಕೈಯಲ್ಲಿ ಅವರು ಕಾಂಗ್ರೆಸಿನವರಿರಲಿ, ಮುಸ್ಲಿಂ ಲೀಗಿನವರಿರಲಿ, ಸಪ್ರು ಸಮಿತಿಯವರಿರಲಿ, ಒಟ್ಟಿನಿಂದ ಹಿಂದೀಯರ ಕೈಯ್ಯಲ್ಲಿ ಅಧಿಕಾರವನ್ನು ಬಿಟ್ಟುಕೊಡಲು ನಿರಾಕರಿಸಿದರು. ಸರಕಾರದವರು ಅಧಿಕಾರ ತ್ಯಾಗಮಾಡುವರೋ ಇಲ್ಲವೋ ಎಂಬುದು ಇದರಿಂದಲೂ ಚೆನ್ನಾಗಿ ಪರೀಕ್ಷಿಸಲ್ಪಟ್ಟಿತು. ಸರಕಾರವು ಅಧಿಕಾರ ತ್ಯಾಗಮಾಡಲು ಸಿದ್ಧವಿದ್ದರೆ, ಕಾಂಗ್ರೆಸ್ಸಾಗಲಿ ಮುಸ್ಲಿಂ ಲೀಗಾಗಲಿ ಅದನ್ನು ತೆಕ್ಕೊಳ್ಳಲು ವಹಿಸಲು ಮುಂದೆ ಬರದಿದ್ದರೂ ಸಪ್ರು ಸಮಿತಿಯವರು ಪ್ರತ್ಯಕ್ಷ ಅದನ್ನು ನಡೆಸಲು ಸಮ್ಮತಿ ತೋರಿಸಿರುವಾಗ ಅಮೆರಿಯವರು ಆ ಕುರಿತು ಒಂದೇ ಒಂದು ಆಶಾದಾಯಕ ಸೂಚನೆ ಕೊಡದೆ ಇರುವುದು ಸಪ್ರುಗಳ ಪ್ರಯತ್ನವನ್ನು ವ್ಯರ್ಥಗೈದು ನಿರಾಶೆ ಹುಟ್ಟಿಸಿದಂತಲ್ಲದೆ ಬೇರೇನೂ ಅಲ್ಲ. ಆಯಾ ಪಕ್ಷದ ಧುರೀಣರಲ್ಲಿ ಒಪ್ಪಂದ ಮಾಡಬೇಕೆಂದು ಅಮೆರಿಯವರು ಸೂಚಿಸಿದ್ದಾರೆ. ಹಾಗೆ ಒಮ್ಮತಗೊಂಡ ಮೇಲಾದರೂ ಸರಕಾರದವರು ಮುಂಬರುವ ಸೂಚನೆಗಳನ್ನು ಎಷ್ಟರಮಟ್ಟಿಗೆ ಒಪ್ಪುವರೋ ಎಂಬುದು ಇಂದು ತೀರಾ ಸಂದೇಹಗ್ರಸ್ತವಾದ ವಿಷಯವಾಗಿದೆ. ಏಕೆಂದರೆ ಅಮೆರಿಯವರು ಮತ್ತೂ ಕಂಠೋಕ್ತವಾಗಿ ಹೇಳುವ ಮಾತೆಂದರೆ ಕಳೆದ ಅಗಸ್ಟ ತಿಂಗಳ ವೈಸರಾಯರ ಘೋಷಣೆಯ ವಿಷಯವಾಗಿ. ವೈಸರಾಯರ ಘೋಷಣೆಯನ್ನು ಸಕಲರೂ ಕೂಡಿಯೇ ನಿರಾಕರಿಸಿರುವಾಗ, ಆ ಘೋಷಣೆಯ ಅಂಶದಿಂದ ಹೆಚ್ಚಿನದೇನನ್ನೂ ಅಮೆರಿಯವರು ಹೇಳಲು ಸಿದ್ಧರಿಲ್ಲದಿರುವಾಗ, ಎಲ್ಲಾ ಪಕ್ಷಗಳು ಒಮ್ಮತಗೊಂಡಾದರೂ ಕೇಳುವ ಸೂಚನೆಗಳಿಗೆ ಅಮೆರಿಯವರು ಸಮ್ಮತಿಸುವರೆಂದು ಹೇಗೆ ನಿಶ್ಚಯ ಮಾಡಬಹುದು? ಈ ವಿಷಯದಲ್ಲಿ ಸಪ್ರುಗಳು ಮಾಡಿದ ಸಾಹಸವು ಇಲ್ಲಿಗೆ ಕೊನೆಗೊಂಡಿತೆಂದೇ ಕಾಣುತ್ತದೆ.

ಗಾಂಧಿ-ಜಿನ್ನ ಭೇಟಿ

ಗಾಂಧಿ ಮತ್ತು ಜಿನ್ನಾರನ್ನು ಭೇಟಿ ಮಾಡಿಸಿ ಹಿಂದೂ ಮುಸ್ಲಿಂ ಐಕ್ಯದ ಕುರಿತು ಮಾತುಕತೆ ನಡೆಸಬೇಕೆಂದೂ ಸಪ್ರುಗಳು ಸಾಹಸಪಟ್ಟರು. ಆ ವಿಷಯದಲ್ಲಿಯೂ ಅವರು ಕೃತಾರ್ಥರಾಗಲಿಲ್ಲ. ಇತ್ತೀಚೆಗೆ ಪ್ರಕಟವಾದ ಗಾಂಧಿ-ಸಪ್ರು ಪತ್ರವ್ಯವಹಾರವನ್ನು ಪರೀಕ್ಷಿಸಿದರೆ, ಸಪ್ರುಗಳು ಮಾಡಿದ ಈ ಪ್ರಯತ್ನದಲ್ಲಿ ಜಿನ್ನರು ಎಷ್ಟರಮಟ್ಟಿಗೆ ತನ್ನ ಸಂಕುಚಿತ ಬುದ್ಧಿಯ ಹಟವನ್ನು ತೋರಿಸಿದರೆಂಬುದು ವ್ಯಕ್ತವಾಗುತ್ತದೆ. ಹಿಂದೂ ಮುಸ್ಲಿಂ ಐಕ್ಯದ ವಿಷಯದಲ್ಲಿ ಪ್ರಯತ್ನಮಾಡುವ ವಿಷಯ ಸಪ್ರುಗಳ ಬಹಳ ಆಶಾವಾದಿಯಾಗಿ ಗಾಂಧಿಯವರೊಡನೆ ಮತ್ತು ಜಿನ್ನರೊಡನೆ ಪತ್ರವ್ಯವಹಾರ ಪ್ರಾರಂಭಿಸಿದರು. ಗಾಂಧಿಜಿ ಹಲವು ಸಲ ಈ ಕುರಿತು ಜಿನ್ನರೊಡನೆ ಮಾತುಕತೆ ನಡೆಸಿ ವಿಫಲರಾಗಿದ್ದರೂ ತಿರಿಗಿ ಭೂಾತನಾಡಲು ಮನಸ್ಸು ತೋರಿಸಿದ್ದರು. ಆದರೆ ಗಾಂಧಿಜಿಯವರು ಹಿಂದುಗಳ ಪ್ರತಿನಿಧಿಯಾಗಿ ಬಂದರೆ ಮಾತ್ರ ತಾನು ಅವರೊಡನೆ ಹಿಂದೂ ಮುಸ್ಲಿಂ ಐಕ್ಯದ ವಿಚಾರವಾಗಿ ಮಾತುಕತೆ ನಡೆಸಬಹುದಾಗಿ ಹೇಳಿದರು. ಗಾಂಧಿಜಿ ಅಷ್ಟೊಂದು ಸಂಕುಚಿತವಾದ ಜಾತೀಯ ಧೋರಣೆಯುಳ್ಳವರಲ್ಲವೆಂಬುದು ಇಡೀ ಪ್ರಪಂಚಕ್ಕೇ ಗೊತ್ತಿರುವಾಗ ಜಿನ್ನರು ಅವರನ್ನು ಆ ರೀತಿಯಲ್ಲಿ ಆಮಂತ್ರಿಸಿದ್ದು ಅವರ ಬುದ್ಧಿಯ ಅಲ್ಪತನವನ್ನೇ ತೋರಿಸುತ್ತದೆ. ಸಹಜವಾಗಿ, ಗಾಂಧಿಜಿ ಹಿಂದು ಪ್ರತಿನಿಧಿಯಾಗಿ ಮಾತನಾಡಲು ಹೋಗಲು ಇಷ್ಟಪಡದ ನಿಮಿತ್ತ ಸಪ್ರುಗಳು ಅವರಿಬ್ಬರನ್ನು ಭೇಟಿ ಮಾಡಿಸಿ ಐಕ್ಯಯತ್ನವನ್ನು ಮಾಡುವ ಸಾಹಸವೂ ಇಲ್ಲಿಗೆ ಈಗ ಮುಗಿಯಿತು.

ವಿಲಂಬವಿದೆ

ಸಪ್ರುಗಳು ಸಾರ್ವಜನಿಕ ಜೀವನದಲ್ಲಿ ಬಹಳವಾಗಿ ನುರಿತವರು. ಎಷ್ಟೆಷ್ಟು ಎಡರು ತೊಡರುಗಳು ಬಂದರೂ ನಿರಾಶರಾಗತಕ್ಕವರಲ್ಲ. ನಿಷ್ಫಲರಾಶಿಗಳ ಎಡೆಯಲ್ಲಿಯೂ ಆಶಾಬಿಂದುಗಳನ್ನು ಅವರು ಕಾಣುತ್ತಾರೆ. ಬಹಳ ಸಹನೆಯಿಂದ ಕೆಲಸಮಾಡುತ್ತಾರೆ. ಯಾವುದೇ ಒಂದು ಪಕ್ಷದ ನ್ಯಾಯಕ್ಕೆ ಕಟ್ಟುಬೀಳುವುದಿಲ್ಲ. ಇಂತಹವರ ಯತ್ನರಾಶಿಯೂ ಇಂದು ವಿಫಲವಾದುದನ್ನು ನೋಡುವಾಗ ಭಾರತದ ಭಾಗ್ಯೋದಯಕ್ಕೆ ಇನ್ನೂ ವಿಳಂಬವಿದೆ; ಬಹಳ ಕಾರ್ಯಗಳು ಮಾಡಲು ಉಳಿದಿವೆಯೆಂದೇ ಅರ್ಥಮಾಡಿಕೊಳ್ಳತಕ್ಕಬೇಕಾಗಿದೆ.

ಮತ್ಸೂಕರ ಮಾತುಗಳು

ಜಪಾನಿನ ವಿದೇಶಾಂಗ ಮಂತ್ರಿ ಮತ್ಸೂಕರು ಯೂರೋಪಿನ ಯಾತ್ರೆ ಮುಗಿಸಿ ಬಂದ ಕೂಡಲೇ, ಜಪಾನು, ಜರ್ಮನ್ ಇಟಲಿಗಳ ಬೆಂಬಲ ನಿಲ್ಲುವುದೆಂದು ಹೇಳಿದ್ದರು; ಆ ಮೇಲೆ ಈಗ ಜಪಾನು ಅಮೇರಿಕದೊಡನೆ ಶಾಂತಿಯಿಂದಿರಲು ಇಚ್ಛಿಸುತ್ತದೆಯೆಂದೂ ಹೇಳುತ್ತಾರೆ. ಈ ಎರಡು ಮಾತುಗಳೂ ಪರಸ್ಪರ ವಿರುದ್ಧವಾಗಿ ಕಂಡುಬರುತ್ತವೆ.

ಜರ್ಮನ್ ಇಟಲಿಗಳ ಸ್ನೇಹ ಸಂಬಂಧವನ್ನಿಟ್ಟುಕೊಂಡು ಅಮೇರಿಕದೊಡನೆ ಜಪಾನು ಶಾಂತಿಯನ್ನು ಬಯಸುವುದು ಹೇಗೆಂದು ತಿಳಿಯಲಾರದಾಗಿದೆ. ಮತ್ಸೂಕರು ತನ್ನ ಮನದ ಇಂಗಿತವನ್ನು ಈ ಮಾತುಗಳಿಂದ ಹೇಳಿದ್ದರೂ ಇರಬಹುದು. ಆದರೆ ಆ ಇಂಗಿತವೇನೆಂದು ತಿಳಿಯತಕ್ಕದ್ದೇ ಆಗಿದೆ.

ಅಮೇರಿಕದೊಡನೆ ಜಪಾನು ಶಾಂತಿಯಿಂದಿರುವುದೆಂದರೆ, ಏಶ್ಯಾದಲ್ಲಿ ಜಪಾನಿನ ಪ್ರಭುತ್ವವನ್ನು ಅಮೇರಿಕವು ಒಪ್ಪಿಕೊಳ್ಳಬೇಕೆಂಬ ಶರ್ತದ ಮೇಲೆಯೆ? ಪ್ರಬಲ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳನ್ನು ನುಂಗಿ ಇಡೀ ಪ್ರಪಂಚವನ್ನು ತಮ್ಮತಮ್ಮೊಳಗೆ ಹಂಚಿಕೊಳ್ಳುವ ಪ್ರಯತ್ನವನ್ನು ಮಾಡುವಲ್ಲಿ ಜಪಾನು ಸಹಜವಾಗಿ ಏಶ್ಯದ ಪ್ರಭುತ್ವಕ್ಕೆ ಇಚ್ಛಿಸುತ್ತದೆಯೆಂಬುದು ಸ್ಪಷ್ಟವೇ ಆದುದು. ಹಾಗಾದರೆ ರಶ್ಯವು ತನ್ನ ಮಟ್ಟಿಗೆ ಪ್ರತ್ಯೇಕ ರಾಷ್ಟ್ರವಾಗುವುದೆ? ಆಫ್ರಿಕದೊಡನೆ ಸೇರಿದ ಯುರೋಪು-ಜರ್ಮನಿಯ ಕೈಕೆಳಗೆ ಇರತಕ್ಕದ್ದೆ? ಸಂಯುಕ್ತ ರಾಷ್ಟ್ರವು ಎರಡು ಅಮೇರಿಕಗಳಲ್ಲಿ ತೃಪ್ತಿ ಹೊಂದಬೇಕೆ?—ಬಹುಶಃ ಹೀಗೆ ಹಂಚುವ ವಿಧಾನವನ್ನು ಕಲ್ಪಿಸಿಕೊಂಡು ನೀವು ನಿಮ್ಮ ಖಂಡದಲ್ಲಿ ತೃಪ್ತಿ ಪಟ್ಟು ಕೊಂಡಿದ್ದರೆ ನಿಮ್ಮಲಿ ನಮಗೆ ಜಗಳವಿಲ್ಲ ಎಂದು ಜಪಾನು ಹೇಳುತ್ತಿದೆಯೆ? ಮತ್ಸೂಕರ ಮಾತಿನ ಇಂಗಿತಾರ್ಥವು ಬೇರೇನು?

"ದಿ ಸೌತ್ ಕೆನರಾ ಎಯಿಡೆಡ್ ಸ್ಕೂಲ್ಸ್ ಫೆಡರೇಶನ್"

ದಕ್ಷಿಣ ಕನ್ನಡ ಜಿಲ್ಲೆಯ ಹಲವು ಮಂದಿ ಅನುಭವಸ್ಥರಾದ ವಿದ್ಯಾವಿಚಕ್ಷಣರು, ಯಾವುದೊಂದು ಮತಬೋಧಕರ ಕೈಕೆಳಗಿರದ ಶಾಲೆಗಳನ್ನು ಮುಖ್ಯವಾಗಿ ಪ್ರಾಥಮಿಕ ಶಾಲೆಗಳನ್ನು ಒಟ್ಟುಗೂಡಿಸಿ ಒಂದೇ ಆಡಳಿತದ ಕೈಕೆಳಗೆ ತರುವಂತಹ ಒಂದು ನವೀನವೂ ವಿಶಾಲವೂ ಆದ ಯೋಜನೆಯೊಂದನ್ನು ಕೈಕೊಳ್ಳುವರಾಗಿ ಸಂತೋಷದಾಯಕವಾದ ಸುದ್ದಿಯನ್ನು ನಾವು ಕೇಳುತ್ತೇವೆ. ಈ ಯೋಜನೆಯು ಯಶಸ್ವಿಗೊಳಿಸುವುದರಿಂದ ಶಾಲೆಗಳಲ್ಲಿ ಅನ್ಯೋನ್ಯ ಸಹಕಾರವು ಹೆಚ್ಚಿ ವಿದ್ಯಾಕ್ಷೇತ್ರದಲ್ಲಿ ಉತ್ತಮ ಕಾರ್ಯಗಳು ಕೈಗೂಡುವಂತಾಗುವುದೆಂಬುದರಲ್ಲಿ ಸಂಶಯವಿಲ್ಲ. ಹೆಚ್ಚಿನ ಅನುಭವಿಕರಾದ ವಿದ್ಯಾವಿಚಕ್ಷಣರೇ ಈ ಯೋಜನೆಯನ್ನು ತಯಾರಿಸುವ ಪ್ರಯತ್ನವನ್ನು ಕೈಕೊಂಡಿರುವುದರಿಂದ ಇದಕ್ಕೆ ಎಲ್ಲಾ ಕಡೆಯಿಂದಲೂ ಸಾಕಷ್ಟು ಬೆಂಬಲವೂ ಸಿಗುವಂತಾಗುವುದೆಂದು ನಾವು ನಂಬುತ್ತೇವೆ.

ದಕ್ಷಿಣ ಕನ್ನಡದಲ್ಲಿ ಇತ್ತೀಚೆಗೆ ವಿದ್ಯಾವಿಷಯವಾದ ಚಟುವಟಿಕೆಗಳು ವಿಶೇಷ ಉತ್ಸಾಹದಿಂದ ನೆರವೇರುತ್ತಿವೆ. ದೇಶವು ಉನ್ನತಿಯ ಹಾದಿಯನ್ನು ಹೊಂದುವ—ಹೊಂದಬೇಕೆಂದು ಹೋರಾಡುವ) ಈ ಕಾಲದಲ್ಲಿ ದೇಶದ ಶಿಕ್ಷಣಾಂಗವು ಮೊತ್ತಮೊದಲಾಗಿ ಸುಧಾರಿಸಬೇಕಾಗಿದೆ. ದೇಶಸರ್ವತ್ರ ಅಂತಹ ಜಾಗ್ರತಿ ಹುಟ್ಟಿರುವುದನ್ನು ಇಂದು ನಾವು ಕಾಣಬಹುದು. ದಕ್ಷಿಣ ಕನ್ನಡದ ವಿದ್ಯಾವಿಚಕ್ಷಣರೂ ಈ ಕಾರ್ಯಗಳಲ್ಲಿ ಹಿಂದುಳಿದಿಲ್ಲವೆಂಬುದು ಹೆಮ್ಮೆಯ ಮಾತಾಗಿದೆ.

ಯಾವುದೇ ಹೊಸ ವಿಚಾರವು ಹಳ್ಳಿಗೆ ಹೋಗಿ ಪ್ರಚಾರವಾಗುವುದು ಬಹಳ ಮೆಲ್ಲಗೆ. ನಮ್ಮಲ್ಲಿ ಹಳ್ಳಿಗಳಲ್ಲಿಯೇ ಹೆಚ್ಚಿನ ಶಾಲೆಗಳಿವೆ, ಮತ್ತು ವಿದ್ಯಾವಿಷಯಕವಾದ ಹೆಚ್ಚಿನ ಸಮಸ್ಯೆಗಳೂ ಹಳ್ಳಿಗಳಲ್ಲಿಯೇ ಕಂಡು ಬರುತ್ತವೆ. ಶಾಲೆಗಳ ಅನ್ಯೋನ್ಯ ಸಹಕಾರ ಮೊದಲಾದುವುಗಳ ವಿಷಯದಲ್ಲಿ ಯಾವುದೇ ನಿಶ್ಚಿತ ಯೋಜನೆಯನ್ನು ಇಂದು ಹಳ್ಳಿಗಳ ಶಾಲೆಗಳಲ್ಲಿ ಅನುಸರಿಸುವುದು ಬಹಳ ಕಷ್ಟಸಾಧ್ಯವಾಗಿದೆ. ಇಂತಹ ಸಂದರ್ಭದಲ್ಲಿ ಇಡೀ ಜಿಲ್ಲೆಯ ಶಾಲೆಗಳ ಹಾಗೂ ಪ್ರಾಥಮಿಕ ಶಾಲೆಗಳ ಸಹಕಾರ ಹಾಗೂ ಆಡಳಿತದ ವಿಶಾಲ ಕಾರ್ಯಕ್ಷೇತ್ರವನ್ನಿಟ್ಟು ಕೆಲಸಮಾಡಲು ಯೋಜನೆಯೊಂದನ್ನು ನಿಶ್ಚಯಿಸಿದ 'ದಿ ಸೌತ್ ಕೆನರಾ ಎಯಿಡೆಡ್ ಸ್ಕೂಲ್ಸ್ ಫೆಡರೇಶನ್ನಿನ ವಿಷಯದಲ್ಲಿ ಸಂಬಂಧಪಟ್ಟವರೆಲ್ಲರೂ ಆಗ್ರಹವಹಿಸಿ ಕೆಲಸಮಾಡುವುದು ಅವಶ್ಯವಿದೆಯೆಂದು ನಾವು ನಂಬುತ್ತೇವೆ.

ಯರವಾಡಾ ಸೆರೆಮನೆಯಲ್ಲಿ ಮಹಾತ್ಮರ 'ಬೋಧಿವೃಕ್ಷ'ವಿದೆ!

ಅದರ ಬುಡದಲ್ಲಿ ಇಂದಿನ ಸತ್ಯಾಗ್ರಹಿಗಳ ದಿನಚರಿ

ಪಟೇಲ ಮುನ್ಶಿ ಖೇರರೇ ಮೊದಲಾದವರ ಜೀವನ

ಯೆರವಾಡಾ ಸೆಂಟ್ರಲ್ ಜೈಲನ್ನು ಹೊಕ್ಕ ಕೂಡಲೇ ಸಿಗುವ ಎಡ ಬದಿಯ ಮೊದಲ ಅಂಗಳವು ಯೆರವಾಡಾ ಭವನವಾಗಿ— ರಾಜಕೀಯ ಕೈದಿಗಳಿಗೆ—ಪರಿಣಮಿಸಿದೆ ಈ ಭವನದಲ್ಲಿ ಒಂದು ಸಣ್ಣ ಮಾವಿನ ಮರವಿದೆ ಈ ಮರದ ಕಾಂಡವು ಗಂಟುಕಟ್ಟಿದಂತಿದ್ದು ಆ ಗಂಟಿನಿಂದ ಹಲವು ಗೆಲ್ಲುಗಳು ಹುಟ್ಟಿ ವಿಸ್ತಾರವಾಗಿದೆ ಅದೊಂದು ಚೆಲುವಾದ ಮಂಟಪದಂತೆ ತೋರುತ್ತದೆ. ಈ ಪ್ರಸಿದ್ಧವಾದ ವೃಕ್ಷದ ಕೆಳಗೆ ಕಳೆದ ಮಾರ್ಚ್ ೧೫ರ ತನಕ ತಾವು ವಾಸಿಸಿದ್ದೆನೆಂದು ಶ್ರೀ ಮುನ್ಶಿಯವರು ಒಂದು ಲೇಖನದಲ್ಲಿ ಬರೆದಿರುವರು ಅದರ ವಿವರ ಹೀಗಿದೆ:—

ಆ ಮರದ ನೆರಳಲ್ಲಿ ಹಿಂದೆ ಮಹಾತ್ಮಾಜಿಯವರು ಸುಖದಿಂದ ಕೂತು ನೂಲುತ್ತಿದ್ದರು, ಅನೇಕ ಲೇಖನಗಳನ್ನು ಬರೆದರು, ಪ್ರಾರ್ಥನೆ ನಡೆಸಿದ್ದೂ ಇದೆ, ಹಿಂದೂ ಸಮಾಜಗಳ ಐಕ್ಯಕ್ಕಾಗಿ ಅವರು ನಿರಶನ ವ್ರತವನ್ನು ಕೈಕೊಂಡುದು ಆ ವೃಕ್ಷದ ಬುಡದಲ್ಲಿ ಆ ಸಂಕಲ್ಪಕ್ಕಾಗಿ ದೇವರೊಡನೆ ಮಾತುಕತೆ ಬೆಳೆಸಿ ಹಲವು ಕಾಲ ಇಲ್ಲಿಯೇ ಅವರು ಕಳೆದಿದ್ದರು ಹೀಗಾಗಿ ನಮಗೆ ಅದು "ಬೋಧಿ" ವೃಕ್ಷವೇ ಸರಿ; ಅಷ್ಟು ಪಾವಿತ್ರ್ಯ ಅದಕ್ಕೆ ಬಂದಿದೆ ಇದೇ ಪವಿತ್ರ ಮಂಟಪದಲ್ಲಿ ಸಮಯ ಕಳೆದೆವು ಸರದಾರ ಪಟೇಲರು, ಬುಲಾಭಾಯಿ ದೇಸಾಯಿ, ಖೇರ, ಮಂಗಳದಾಸ್ ಪಾಕ್ವಾಸ, ಡಾ। ಗಿಲ್ಡರ್, ಜನಾಬ್ ನೂರಿ, ಪಾಟೀಲ ಮತ್ತು ನಾನೂ ಅಲ್ಲಿ ಜೊತೆಯಾಗಿದ್ದೆವು ಗಾಂಧಿಜಿಯವರ ೧೯೩೨ರ ಐತಿಹಾಸಿಕ ಉಪವಾಸದ ಕಾಲದ ಘಟನೆಗಳ ಸ್ಮರಣೆ ಪಟೇಲರಿಗೆ ಇನ್ನೂ ಅಚ್ಚಳಿಯದೆ ಇದೆ ಆ ಪವಿತ್ರಾಂಗಣಕ್ಕೆ ಸಂಬಂಧಿಸಿದ ಹಲವು ಕಥೆಗಳನ್ನು ನಮಗೆ ಅವರು ಹೇಳಿದರು ನಾವಲ್ಲಿ ಕೂತು ಪ್ರಾರ್ಥನೆ ನಡೆಸುತ್ತಿದ್ದಾಗ, ಜನಾಬ್ ನೂರಿಯವರು ಕುರಾನನ್ನು ಪಠಿಸುತ್ತಿದ್ದರು, ಡಾ। ಗಿಲ್ಡರರವರು ಗಾಢದಿಂದ ಪಾರಾಯಣ ಮಾಡುತ್ತಿದ್ದರು, ಖೇರರೂ ನಾನೂ ಗೀತೆಯನ್ನು ಓದುತ್ತಿದ್ದೆವು, "ರಘುಪತಿ ರಾಘವ ರಾಜಾ ರಾಮ್" ಭಜನೆಗೆ ನಾವು ತಾಳ ಹಾಕುತ್ತಿದ್ದೆವು. ಈ ಸಂದರ್ಭ—ಬಾಪೂಜಿಯವರು ಸಮ್ಮುಖದಲ್ಲಿ ಇದ್ದಂತೆಯೇ ನನಗೆ ಅನಿಸಿತು ಈ ವಿಶೇಷ ವೃಕ್ಷದ ನೆರಳಲ್ಲಿ, ಮತ, ಜಾತಿ, ವ್ಯತ್ಯಾಸಗಳಿಗೆ ಮೀರಿದ್ದ ಏಕಮಾತ್ರ ದೇವರಲ್ಲಿ ನಮ್ಮ ಆತ್ಮನು ಲೀನನಾದಂತೆ ಭಾಸವಾಯಿತು. ಅಜೇಯ ಹಾಗೂ ಕಲಹಪ್ರಿಯಯೋಧನೆಂದು ಭಾರತದಲ್ಲಿ ಪ್ರಸಿದ್ಧಿ ಪಡೆದ ವ್ಯವಹಾರಕುಶಲ ಪಟೇಲರಲ್ಲಿಯೂ ಆಗ ಹಿಂದು ಮತ ಶ್ರದ್ಧೆಯ ಅಂತಃಪ್ರವಾಹವು ಹರಿಯುತ್ತಿರುವುದನ್ನು ಕಂಡು ನಮಗೆ ಒಂದು ತೆರನ ಆಶ್ಚರ್ಯವೂ ಇನ್ನೊಂದು ತೆರನ ಆನಂದವೂ ಉಂಟಾಯಿತು. ಅವರ ಒರಟು ಸೂಕ್ಷ್ಮ ವಿಚಾರ ಅಥವಾ ಮನುಷ್ಯರಲ್ಲಿಯ ದೋಷ ದುರ್ಬಲತೆಗಳ ವಿಷಯ ಅವರಿಗಿರುವ ಪ್ರಾವೀಣ್ಯತೆ ಇವುಗಳು ಮಹಾತ್ಮರಲ್ಲಿ ಅವರಿಗುಂಟಾದ ಭಕ್ತಿ ವಿಶ್ವಾಸಗಳಿಗೆ ತೊಡಕು ಉಂಟುಮಾಡಿಲ್ಲ ಅದೊಂದು ತೆರನ ಅವರ ಆತ್ಮಸಮರ್ಪಣೆಯೇ ಆಗಿತ್ತು, ಅವರು ಸರ್ವಸ್ವವನ್ನೂ ಮಹಾತ್ಮರಿಗೆ ಅರ್ಪಿಸಿದ್ದರು ಪಟೇಲರು ಈ ವಿಷಯದಲ್ಲಿ ಶ್ರೀ ಕೃಷ್ಣನು ಹೇಳಿದ "ನಿಮಿತ್ತ ಮಾತ್ರಂ ಭವಸವ್ಯಸಾಚಿನ್" ಎಂಬ ವಚನವನ್ನು ಪಾಲಿಸಿದ್ದಾರೆಂದು ಹೇಳಬಹುದಾಗಿದೆ

ಖೇರರು ನನ್ನ ಹಳೆಯ ಮಿತ್ರರು. ಅವರು ಬಹು ಧರ್ಮಶ್ರದ್ಧರು. ಅವರಿಗೆ ಸಂಸ್ಕೃತ ಧರ್ಮ ಗ್ರಂಥಗಳ ಪರಿಚಯ ಚೆನ್ನಾಗಿದೆ. ದಿನದ ವಿಶೇಷ ಪಾಲನ್ನು ಅವರು ಗೀತಾಪಠನದಲ್ಲಿಯೇ ಕಳೆಯುತ್ತಿದ್ದರು. "ಆಶ್ರಮದ ಭಜನಾವಳಿ" ಯಂಥ ಅನೇಕ ಭಜನೆಯ ಹಾಡುಗಳನ್ನು ಅತ್ಯಂತ ಭಕ್ತಿಯಿಂದ ಹೇಳುತ್ತಿದ್ದರು

ಡಾ। ಗಿಲ್ಡರ್‌ರವರು ತನ್ನ ವೈದ್ಯಕೀಯ ಜೀವನದಿಂದ ದೇವರ ವಿಚಾರವಿಲ್ಲದವರು ಎಂಬ ವಿಷಯವನ್ನು ಅಸತ್ಯಮಾಡಿಬಿಟ್ಟಿದ್ದಾರೆ ನಮ್ಮೊಳಗೆ ಹಲವು ಕಾಲದಿಂದ ಮೈತ್ರಿಯಿದ್ದರೂ, ಅಷ್ಟು ಆಳವಾದ ಧರ್ಮವಿಶ್ವಾಸ ಅವರಲ್ಲಿತ್ತೆಂದು ನಾನು ತಿಳಿದಿರಲಿಲ್ಲ

ಜನಾಬ್ ನೂರಿಯವರು ಬಹು ಧಾರ್ಮಿಕ ಮುಸ್ಲಿಮರು. ಹೀಗಿದ್ದರೂ ಕಾಂಗ್ರೆಸ್ಸ ಮಂತ್ರಿಮಂಡಲದವರಲ್ಲಿ ಅವರೂ ಒಬ್ಬರಾಗಿರುವಾಗ, ಅವರ ಇತರ ಮುಸ್ಲಿಂ ಲೀಗ್ ಬಂಧುಗಳು, ನೂರಿಯವರನ್ನು "ಕಾಫರ್" ಎಂದು ಹಲವು ಸಲ ಟೀಕಿಸಿದ್ದುಂಟು ಅವರು ತಮ್ಮ ಕುರಾನ್ ಗ್ರಂಥವನ್ನು ಓದದೆ ಇರುತ್ತಿರಲಿಲ್ಲ ಈಗಲೂ ನಿತ್ಯ ಅದರಲ್ಲೇ ಮಗ್ನರಾಗಿ ಕಾಲಕಳೆಯುತ್ತಿದ್ದಾರೆ. ಮಹಮ್ಮದ ಪೈಗಂಬರರ ಜೀವನಚರಿತ್ರದ ಒಂದು ಮುಖ್ಯ ವಿಷಯವನ್ನೆತ್ತಿ ಗ್ರಂಥವೊಂದನ್ನು ಬರೆಯಲು ಪ್ರಾರಂಭಿಸಿರುವರು

ಪಾಟೀಲರು ಬಾಲ್ಯದಿಂದಲೇ ದೈವಭಕ್ತರು. ಮಹಾರಾಷ್ಟ್ರದ ಜ್ಞಾನೇಶ್ವರ ಮತ್ತು ತುಕಾರಾಮ ಮೊದಲಾದ ಸಂತರ ರಕ್ತವು ಅವರಲ್ಲಿ ಹರಿಯುತ್ತಿದೆ ಅವರ ಹೃದಯವು ಭಕ್ತಿಸಾಧನಗಳಿಗೆ ತವಕಪಡುತ್ತಿದೆ, ಭಾಗವತ ಮತ್ತು ತುಳಸಿದಾಸರ ರಾಮಾಯಣಗಳು ಅವರ ಮೆಚ್ಚಿನ ಪಠಣ ಗ್ರಂಥಗಳು.

ಮಂಗಲದಾಸ ಪಾಕ್ವಾಸರು ಇನ್ನೂ ಸನ್ಮಾನ್ಯ ಅಧ್ಯಕ್ಷರೇ ಆಗಿದ್ದಾರೆ ಅಧಿಕಾರ ಅಥವಾ ಸಂಬಳ ಅವರಿಗೆ ಈಗ ಇಲ್ಲವಾದರೂ ಅವರು ಅಧ್ಯಕ್ಷರ ರೀತಿಯನ್ನು ಅವರೂ ಬಿಟ್ಟಿಲ್ಲ ದಿನದಲ್ಲಿ ಅವರು ಕೆಲ ಸಮಯ ಇದಕ್ಕೆ ವಿನಿಯೋಗಿಸದೆ ಇರಲಾರರು ಗೀತೆಯನ್ನು ಓದುತ್ತ, ನಮ್ಮೊಂದಿಗೆ ಭಜನೆ ಮಾಡುತ್ತಿದ್ದರು

ಬುಲಾಭಾಯಿ ದೇಸಾಯಿಯವರು ನಮ್ಮೊಡನಿದ್ದು ಧಾರ್ಮಿಕ ಬುದ್ಧಿಯನ್ನು ಕೈವಶಕೊಂಡರೆಂದು ಅನಿಸುತ್ತದೆ ಅವರ ಜೀವನದಲ್ಲಿ ಸೋಲೆಂಬುದನ್ನು ಅವರು ಕಂಡಿಲ್ಲ ದಾರಿದ್ರ್ಯದ ಪರಿಚಯವೇ ಅವರಿಗೆ ಇಲ್ಲ ಹೀಗಿರುವಲ್ಲಿ ಮನಶ್ಶಾಂತಿಗೆ ಅಗತ್ಯವಿರುವ ಭಕ್ತಿಸಾಧನೆಗೆ ಹಾಗೂ ವ್ರತಾಚರಣೆಗೆ ಅವರಿಗೆ ದಾರಿಯೆಲ್ಲಿ? ಅವುಗಳ ಆವಶ್ಯಕತೆಯೇ ಅವರಿಗೆ ಬಿದ್ದಿರಲಿಲ್ಲ. ಆವರೂ ಕೂಡ ಧರ್ಮಶಾಸ್ತ್ರಗಳ ಕುರಿತು ವಿಚಾರಿಸತೊಡಗಿದರು; ಮತ್ತು ದಿನದಿನವೂ ಗೀತೆಯನ್ನು ಓದುತ್ತಲಿದ್ದು ಮನುಷ್ಯನ ನಿತ್ಯಜೀವನದಲ್ಲಿ ಅದು ಎಷ್ಟರ ಮಟ್ಟಿಗೆ ವ್ಯವಸಾಯಕವಾಗಿದೆ ಎನ್ನುವ ವಿಚಾರವನ್ನು ಮಾಡುತ್ತಿದ್ದರು

ನನ್ನ ಮಟ್ಟಿಗೂ ಕೆಲವು ಸಮಸ್ಯೆಗಳು ಇದ್ದುವು ಜೀವನದ ಮೂಲವನ್ನೇ ಪುನಃ ಸ್ಥಾಪಿಸುವುದು ಕಷ್ಟವಾಗಿ ತೋರಿತು ಇಂದಿನ ಭದ್ರವಿಲ್ಲದ ಪ್ರಕೃತದ ಔದ್ಯೋಗಿಕ ಹಾಗೂ ರಾಜಕೀಯ ಹೋರಾಟದಿಂದಾಗಿ ಹದಗೆಟ್ಟು ಹೋದ ಜೀವನದ ಪೂರ್ವಸ್ವರೂಪವನ್ನೂ ಬಲವನ್ನೂ ಪಡೆಯುವುದು ಹೇಗೆಂಬ ಪ್ರಶ್ನೆಯೇ ನನಗೆ ಭೀಷಣವಾಗಿ ತೋರಿತು

ಇದರಿಂದ ನಾವು ಎಲ್ಲರೂ ದೈವಭಕ್ತರ, ಸಂತಸಾಧುಗಳ ವರ್ಗಕ್ಕೇ ಸೇರಿದ್ದು ಭಗವದ್ಭಕ್ತರಾಗಿ ಮಾರ್ಪಾಟು ಹೊಂದಿ ಕ್ಷಣಕ್ಷಣವೂ ಪ್ರಾರ್ಥನೆಯ ಚಕ್ರವನ್ನೇ ತಿರುಗಿಸುತ್ತಲಿದ್ದೇವೆಂದು ಯಾರೂ ತಿಳಿಯಬಾರದು ಮನುಷ್ಯತ್ವವು ನಮ್ಮಿಂದ ಎಂದೂ ಮಾಯವಾಗಲಿಲ್ಲ ನಾವು ಎಲ್ಲರಂತೆ ಸಂಭಾಷಣೆ ಮಾಡಿಕೊಳ್ಳುತ್ತ, ಮತ್ತೆ ನಗುತ್ತಾ ನಂತರ ಹಾಡಿ ಹಾಡಿ ನೂಲುತ್ತಲೇ ಇದ್ದೆವು ನಮ್ಮಲ್ಲಿ ಕೆಲವರು ಇಸ್ಪೀಟು ಆಡುತ್ತಲೂ ಇದ್ದರು, ಬತ್ತಿ ಹೊಸೆಯುವುದೂ ಇತ್ತು, ಕಥೆಯನ್ನೂ ಹೇಳಿಕೊಳ್ಳುತ್ತಿದ್ದೆವು. ಆ ಕಥೆಗಳಿಗೆ ಮತಧರ್ಮದ ಗಂಧವೇ ಇರಲಿಲ್ಲ ಉತ್ಸಾಹದಿಂದ ಪತ್ರ ಪತ್ರಿಕೆಗಳನ್ನೂ ಓದುತ್ತಿದ್ದೆವು— ಜಗತ್ತಿನ ಸಮಾಚಾರವೇನ —ಎಂದು ತಿಳಕೊಳ್ಳಲು ಹುಚ್ಚರಾಗಿದ್ದೆವು ಸೈನ್ಯಗಳು ಜನಾಂಗಗಳು ಹೋರಾಡಿಕೊಂಡಿದ್ದು ಏನು ತೀರ್ಮಾನಿಸಿಕೊಂಡಿದ್ದರೆಂದು ಕಲಿತುಕೊಳ್ಳಲು ನಾವು ಮರೆಯಲಿಲ್ಲ. ಪಕ್ಷಿಗಳನ್ನು ಅಳಿಲುಗಳನ್ನು ಸಾಕುವುದೂ ನಮ್ಮದೊಂದು ವೃತ್ತಿಯಾಗಿತ್ತು ಮತ್ತು ಸೆರೆಮನೆಯ ಕೈದಿಗಳಂತೆ ಇತರ ಪ್ರಾಣಿಗಳಾದ ಬೆಕ್ಕು ಮೊದಲಾದವುಗಳೊಡನೆ ನಮ್ಮ ಪ್ರೇಮವು ಬಹಳವಾಗಿತ್ತು. ಅವುಗಳಲ್ಲಿ ಬೆಕ್ಕಿಗೇ ಮೊದಲ ಸ್ಥಾನವು ಸಿಗುತ್ತಿತ್ತು ಏಕೆಂದರೆ ೧೯೩೨ನೆಯ ಇಸವಿಯಲ್ಲಿ ಆ ಮರದ ನೆರಳಲ್ಲಿ ಗಾಂಧಿಜಿ ವಾಸಿಸಿದ್ದಾಗ ಅವರ ಮಡಿಲಲ್ಲಿ ಒಂದು ಬೆಕ್ಕು ಮರಿ ಮರಿ ಇಟ್ಟಿತ್ತು. ಈಗ ಇರುವ ಬೆಕ್ಕುಗಳೆಲ್ಲ ಆ ಬೆಕ್ಕಿನ ಸಂತತಿಗಳೆಂದೇ ನಮ್ಮ ಭಾವನೆಯಾಗಿತ್ತು.

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ
ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

HALFTONE & LIN
BLOCK MAKING
UNDERTAKEN
Sharada Press
MANGALOI

ಏಶ್ಯಾಖಂಡದ ಭವಿಷ್ಯವು

ಆ ರಣಧೀರನನ್ನು ಆಧರಿಸಿದೆ!

ಚೈನದ ದಳಪತಿ ಕೈಶೇಕರ ಸಾಹಸಗಳು

ಜಪಾನಿನ ಹೊಸ ಹಂಚಿಕೆಗಳೇನು?

'ಕಳೆದ ನವಂಬರದ ಅನಂತರ ಚೈನದೊಡನೆ ಜಪಾನು ಮಾಡುವ ಯುದ್ಧದಲ್ಲಿ ವಿಶೇಷ ವ್ಯತ್ಯಾಸವು ಕಂಡುಬರುತ್ತದೆ.'

ಚುಂಕಿಂಗಿಗೆ ಹಾಗೂ ಚೆಚ್ಯೂನ್ ಪ್ರಾಂತ್ಯಕ್ಕೆ ವಿಮಾನ ಧಾಳಿಯು ಕಡಿಮೆಯಾಗುತ್ತಾ ಬರುತ್ತದೆ. ಚೈನ್ಯದ ವೈಮಾನಿಕ ದಳವೂ ಕೂಡಾ ಮೊದಲಿಗಿಂತ ಇಂದು ಅರೆವಾಸಿಯಷ್ಟು ಕಡಿಮೆಯಾಗಿದೆ.

ಇದರ ಅರ್ಥವೇನು?

ಎ. ಜಿ. ಗಾರ್ಡಿನರೆಂಬವರು ಇದಕ್ಕೆ ಹೀಗೆಂದು ಉತ್ತರ ಕೊಡುತ್ತಾರೆ

ಮೊದಲನೆಯದಾಗಿ ಜಪಾನು ದುರ್ಬಲವಾಗುತ್ತಿದೆಯೆಂಬುದು ಇದರಿಂದ ತಿಳಿಯುವುದು ಏಕೆಂದರೆ ಈ ನಾಲ್ಕು ವರ್ಷಗಳ ನಿರಂತರ ಹೋರಾಟದಿಂದಲಾದರೂ ಚಿಯಾಂಗ್ ಕೈಶೇಕರನು ಶರಣಾಗತರನ್ನಾಗಿ ಮಾಡುವುದು ಜಪಾನಿನಿಂದ ಸಾಧ್ಯವಾಗಲಿಲ್ಲ. ಹಾಗಾದರೆ ಜಪಾನಿನ ಹಿಡಿತವು ಇಂದು ಸಡಿಲಿಸಿಹೋಗಿದೆಯೆ?

ಹಾಗೆನ್ನಲು ಬರುವುದಿಲ್ಲ. ಅದು ದಕ್ಷಿಣಾಭಿಮುಖವಾಗಿ ಮುನ್ನಡೆಯುತ್ತದೆ. ಅದು ಶಾಂತಸಾಗರದಲ್ಲಿ ತನ್ನ ಆಧಿಪತ್ಯವನ್ನು ಸ್ಥಾಪಿಸಲು ಇಂದು ಹೋರಾಡುತ್ತದೆ.

ಈಗಾಗಲೇ ಫ್ರಂಚ್ ಇಂಡೋ—ಚೈನಾ ಮತ್ತು ಸಯ್ಯಾಮಿನಲ್ಲಿ ಜಪಾನಿನ ಹಿಡಿತ ಹೆಚ್ಚಿದೆ. ಮಲಯ ದ್ವೀಪ ಮತ್ತು ಸಿಂಗಾಪುರಗಳನ್ನು ಹೊಡೆವಷ್ಟು ಹತ್ತಿರ ಬಂದಿದೆ. ಫಿಲಿಪಿನ್ ಮತ್ತು ಡಚ್ ಇಂಡೀಸುಗಳು ಜಪಾನಿನಿಂದ ಬೆದರಿಸಲ್ಪಟ್ಟಿವೆ.

ವ್ಲಾಡಿವೊಸ್ಟೋಕಿನಿಂದ ಓಶನಿಯದವರೆಗೆ ಸಾಮ್ರಾಜ್ಯವನ್ನು ಸ್ಥಾಪಿಸುವುದು ಅದರ ಬಯಕೆಯೆಂದು ಮತ್ಸೂಕರೇ ಸಾರಿದ್ದಾರೆ.

ಇದು ಜಪಾನಿನಿಂದ ಸಾಧ್ಯವಾಗುವುದಿದ್ದರೆ, ಶಾಂತಸಾಗರದ ಒಡೆತನವು ಜಪಾನಿಗೆ ಆಶ್ಯಾದ. ಸರ್ವಾಧಿಪತ್ಯವನ್ನು ಒದಗಿಸಿಕೊಡಬಹುದು.

ಜಪಾನು ಚಿಯಾಂಗ್ ಕೈಶೇಕರ ಧುರೀಣತೆಯನ್ನು, ಪಂಚಮದಲವನ್ನು ಕಳುಹಿಸಿ, ಅಲ್ಲಿ ಒಡಕು ಹುಟ್ಟಿಸುವ ಮೂಲಕ ತಲೆ ಕೆಳಗು ಮಾಡಲು ಯತ್ನಿಸುತ್ತಿದೆ.

ಹಿಟ್ಲರನು ಯೂರೋಪಿನ ಪಶ್ಚಿಮ ಕರಾವಳಿಯನ್ನು ಹಿಡಕೊಂಡಿರುವ ಹಾಗೆ ಜಪಾನು ಏಶ್ಯದ ಪೂರ್ವಕರಾವಳಿಯನ್ನು ಬಲಪಡಿಸಿಕೊಂಡಿದೆ.

ಆದರೆ ಒಂದು ಸಂಗತಿಯು ಎದ್ದು ತೋರುತ್ತದೆ. ಚೈನ ಹಾಗು ಏಶ್ಯಖಂಡದ ಭವಿಷ್ಯವು ಒಬ್ಬ ಮನುಷ್ಯನಲ್ಲಿ ಅಡಗಿದೆ. ಚಿಯಾಂಗ್ ಕೈಶೇಕರೊಬ್ಬರು ಮಾತ್ರ ಚೈನವನ್ನು ಒಂದಾಗಿ ಮಾಡಿ ಜಪಾನನ್ನು ಹಿಂಡಟ್ಟಬಲ್ಲವರಾಗಿದ್ದಾರೆ. ಜಪಾನು ಸೈನ್ಯವು ಸಯಾಮ್, ಬರ್ಮಾ, ಭಾರತಗಳ ಬಾಗಿಲುಗಳಿಗೆ ಬರುವುದನ್ನು ಅವರೊಬ್ಬರು ತಡೆಯುತ್ತಾರೆ. ಅವರ ಅಪಜಯವೆಂದರೆ ಏಶ್ಯದ ಗೋರಿಯು ಕಟ್ಟಲ್ಪಟ್ಟಂತೆಯೇ ಎನ್ನಬಹುದು. ಆದರೆ ಈ ಧೀರ ಪುರುಷನು ಶರಣು ಹೋಗುವುದು ಸಾಧ್ಯವಿಲ್ಲ. 'ಆತನಿಗೆ ಆಯುಧಕೊಡಿರಿ, ಆತನು ಮುಂದಿನ ಕಾರ್ಯ ನಡೆಸಬಲ್ಲನು.' ಹೀಗೆ ಚರ್ಚಿಲ್ಲರು ಒಮ್ಮೆ ಹೇಳಿದಂತೆ ಚಿಯಾಂಗ್ ಕೈಶೇಕರೂ ಅನ್ನುತ್ತಾರೆನಬಹುದು.

ಚೈನಕ್ಕೆ ಸಾಕಷ್ಟು ಆಯುಧ ಸಾಮಗ್ರಿಗಳು ಬೇಕು; ಇಂದು ಅದು ಅಲ್ಲಿ ಒಹೆಳವಾಗಿಲ್ಲ. ಮಶಿನುಗಳೆದುರು ರಕ್ತಮಾಂಸಕಳನ್ನೊತ್ತಿ ಕೈಶೇಕರರು ಕಾದಾಡುತ್ತಾರೆ. ಚೀನಿಯರಂತೆ ಕಷ್ಟಗಳನ್ನು ಸಹಿಸಿ ಕಾದಾಡಿದ ಜನತೆ ಇತಿಹಾಸದಲ್ಲಿಯೇ ಬೇರಿಲ್ಲ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧ

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲನ್ನು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ಹೊಲಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer Dr. D. N. JASANI, Vithalbhai Patel Road, BOMBAY 4.

Madras Agent. Appah & Co, China Bazar Madras.

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಗುಜರಾತಿಯಲ್ಲಿ

ಜಿಬ್ರಾಲ್ಟರನ್ನು ರಕ್ಷಿಸಲು ಸಿದ್ಧರು

ಸ್ಪೈನಿಗೆ ಜರ್ಮನಿಯ ಪ್ರೇರಣೆ

ಸ್ಪೈನನ್ನು ಯುದ್ಧಕ್ಕೆಳೆಯಲು ಜರ್ಮನಿಯು ಯತ್ನಿಸುತ್ತಿದೆ. ಸ್ಪೈನು ಜರ್ಮನ್ ಇಟೆಲಿಗಳೊಡನೆ ಸೇರಿ ಜಿಬ್ರಾಲ್ಟರನ್ನು ಮುತ್ತುವ ಪಕ್ಷದಲ್ಲಿಯೂ ನಾವು ಅದನ್ನು ಕಾಪಾಡಲು ಸಿದ್ಧರಿದ್ದೇವೆಯೆಂದು ಜಿಬ್ರಾಲ್ಟರಿನ ಗವರ್ನರರು ಹೇಳುತ್ತಾರೆ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. I. A. 100/1941

O S 309/1933

ಲಕ್ಷ್ಮಿ ಸೆಟ್ಟಿ . . ಅರ್ಜಿದಾರಳು.

ಸಂಕಪ್ಪ ಸೆಟ್ಟಿ . . ಎದ್ರಿ.

ಎದ್ರಿ ಸಂಕಪ್ಪ ಸೆಟ್ಟಿ ಲೋಕು ಸೆಟ್ಟಿ ಮಗ ಮೂಡಬಿದರೆ ತಾಲೂಕು ಅಮ್ಮ ಮೊಗರು ಗ್ರಾಮದ ಕೋಟೆದಡಿಯತ್ತು ಎಂಬಲ್ಲಿರುವವ.

ಸದ್ರಿ ಎದ್ರಿಯ ಮೇಲೆ ಪರ್ಸನೆಲ್ ಡಿಕ್ರಿ ಕೊಡಬೇಕಾಗಿ ಅರ್ಜಿದಾರಳು ಬರಕೊಂಡು ಮೊಕ್ಕಾಮಿಸಿದ ಅರ್ಜಿಯು ತನ್ನ ಬಗ್ಗೆ ಸದ್ರಿ ಕೋರ್ಟಿನಲ್ಲಿ 25-6-1941ಕ್ಕೆ ಇಟ್ಟಿರುವುದರಿಂದ ಸದ್ರಿ ಅರ್ಜಿಯ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಸದ್ರಿ ದಿನ ಹಗಲು 10 ಗಂಟೆಗೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಹೇಳಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಿಂದ ಸದ್ರಿ ಅರ್ಜಿಯು ಅರ್ಜಿದಾರಳ ಗುಣಕ್ಕೆ ತೀರ್ಮಾನಿಸಲ್ಪಡುವುದು. ಈ ಸಂಗತಿ ಕೋರ್ಟಿನ ಹುಕುಂ ಪ್ರಕಾರ ತಿಳಿಸೋಣಾಗುತ್ತದೆ.

ಕಾರ್ಕಳ }
2-5-'41 } K. Mahabala Hegde,
ಅರ್ಜಿದಾರಳ ವಕೀಲ್.

ಈ ವಾರದ ಕತೆ:

ಕಣ್ಣು ಬಂತು!

ವಾಸಂತಿ ಉಪ್ಪರಿಗೆಯ ನಿಟ್ಟಿಗೆಯಲ್ಲಿ ನಿಂತುಕೊಂಡು ಸಂಜೆಯ ಸೊಬಗನ್ನು ನೋಡುತ್ತಿದ್ದಳು. ಅವಳ ಮನಸ್ಸಿಗೆ ದೂರದ ನೆಲವು ಸುತ್ತಲೂ ಬೇಸರದ ನೆರಳನ್ನು ಬಳಸಿ ತರುವಂತೆ ತೋರಿತು. ಹಿತ್ತಿಲನ್ನು ಹೊಂದಿಕೊಂಡು ಹರಿದಾಡುವ ತೊರೆಯು ಗುಳುಗುಳು ಸದ್ದಿನೊಂದಿಗೆ ತಳಕುಮಿಣುಕಿನಲ್ಲಿ ಚೆಲ್ಲಾಟವಾಡುತ್ತ ದಂಡೆಗಪ್ಪಳಿಸಿ ತೆರೆಯೆದ್ದು ಮುಂದುವರಿಯುತ್ತಿತ್ತು. ಈಗ ಆಕೆಯ ಕನಸಿನೋಟವೂ ಹೀಗೇ ಎಡವುತ್ತ ಹೋದಂತೆ ಆ ಶೂನ್ಯಪಥದಲ್ಲಿ ನಿರ್ಧಾರವಿಲ್ಲದ ಹರಿದಾರಿ ಹಿಡಿದು ನಿರ್ಲಿಪ್ತ ಗುರಿಯನ್ನು ಮುಟ್ಟುತ್ತಿತ್ತು. ದಹಿಸಿದೊಡಲಿಗೆ ಸಂಜೆಯ ರಾಗ ನೀಲದಿಂದಲಾದರೂ ಏನಾದೀತು! ಸ್ವಪ್ನ ಸುಷುಪ್ತಿಯ ಜೀವನರಂಗದಲ್ಲಿ ಆ ಸೊಬಗಿಗೇನೂ ಇಂಬಿಲ್ಲ. ಏನಿದ್ದರೂ ಆಕೆಯ ಹೃದಯದಾವೇಗವುಕ್ಕಿ ಕಾಲುವೆ ಹರಿವಾಗ ಕತ್ತಲಿಡುವ ಕಣ್ಣುಗಳಿಗೆ ಯಾವುದೂ ಗೋಚರವಾಗುವಂತಿರಲಿಲ್ಲ.

'ವಾಸಂತೀ' ಎಂದು ಒಳಗಿನಿಂದ ಮಂದ ಸ್ವರವೊಂದು ಕೇಳಿಸಿತು. ವಾಸಂತಿ ಒಳಗೆ ಸರಿದಳು.

ಆಕೆಯ ಪತಿಯು ಕುರ್ಚಿಯಲ್ಲಿ ಕುಳಿತಿದ್ದನು. ಕಣ್ಣುಗಳಿಗೆ ಸುತ್ತಿದ ಬಟ್ಟೆಯನ್ನು ಸಡಿಲಿಸಲು ಸಂಜ್ಞೆ ಮಾಡಿ 'ವಾಸಂತೀ' ಎಂದು ಪ್ರೇಮಲತೆಯಂತೆ ಬಾಗಿದನು. ವಾಸಂತಿ ಒಡನೋಡಿ ಆತನ ತಲೆಯನ್ನು ತನ್ನೆದೆಯಲ್ಲಡಗಿಸಿ ಮೆಲ್ಲನೆ ಕಟ್ಟನ್ನು ಬಿಚ್ಚಿದಳು.

'ಲೇಪನವೊಡೆದಿಯೇನು?'

'ಇಲ್ಲ-'

'ಹಾಗಾದರೆ, ಇದ್ದ ಹಾಗೆ ಕಟ್ಟುತ್ತೀಯಾ?'

ವಾಸಂತಿ ಅದನ್ನು ಕಟ್ಟುವಾಗ ಕಂಬನಿಯೊಂದು ಹರಿದು ಗಲ್ಲವನ್ನು ಮುತ್ತಿಕ್ಕಿತು. 'ದೇವಾ! ನನ್ನ ಪತಿಯ ಕಣ್ಣುಗಳನ್ನು ಕರುಣಿಸು; ನಾನು ಧನ್ಯಳಾಗುವೆನು' ಎಂದು ಹಾರ್ದಿಕ ಪ್ರಾರ್ಥನೆ ಮಾಡಿದಳು. ತನ್ನ ಪ್ರೇಮಲ ಸ್ವಭಾವವೊಂದು ಎಂದೂ ಕಡಿಯದ ನಿರ್ಮಲತೆಯಿಂದ ಹೀಗೆ ಭಾವಿಸಿತು; ಈ ಸ್ವಾಮಿಯ ತಲೆಯನ್ನು ಬಹುಕಾಲ ಹೀಗೆ ಹಿಡಿದಿರುವಂತೆ ದೇವದೇವನು ನನಗೆ ಕರುಣಿಸಲಿ. 'ನಾನು ಆಹೊತ್ತು ಹೊಂದುವ ಸುಖದ ಲಾಸ್ಯವು ನನ್ನ ಹೃದಯವನ್ನು ನಲಿದು ಮುಖದಲ್ಲಿ ಮಿಂಚಿದಾಗ ನನ್ನಿಯನಿಗೆ ಅದನ್ನು ಕಂಡು ತಣಿಯುವ ಭಾಗ್ಯವನ್ನು ಕರುಣಿಸು ದೇವಾ!'

ಒಂದು ಹನಿ ಕಂಬನಿ ಆಕೆಯ ಗಲ್ಲವನ್ನು ಮೀರಿ ಶ್ರೀನಿವಾಸನ ಕೆನ್ನೆಯ ಮೇಲೆ ಉದುರಿ ಬಿತ್ತು. ಆದರೆ ಶ್ರೀನಿವಾಸನಿಗೆ ಕಣ್ಣೀರಿಡುವ ಭಾಗ್ಯವೂ ಇರಲಿಲ್ಲ. ಅದೆಲ್ಲದರ ಉರಿ ಅವನೆದೆಗೆ ಮಾತ್ರ ಹೆಚ್ಚುತ್ತಿತ್ತು.

'ವಾಸಂತೀ ನಿನಗೆ ಬಹಳ ದುಃಖವಾಗುತ್ತದಲ್ಲ! . ನನ್ನಿಂದ ನಿನ್ನ ಸುಖಸ್ವಪ್ನಗಳು ಬಯಲಾದುವು .. ನೀನು ಬಂದು ಹೆಚ್ಚು ದಿನಗಳಾಗುವ ಮೊದಲೇ ಈ ಕಷ್ಟ ಬಂತು. ದೇವರು ನಮ್ಮ ಪಾಲಿಗೆ ನಿಷ್ಕರುಣಿಯಾಗಿದ್ದಾನೆ.'

ಶ್ರೀನಿವಾಸನ ಮರುಕದ ದನಿ ವಾಸಂತಿಯ ಎದೆಗೆ ಚುಚ್ಚಿತು. ಅವಳ ಸರಲ ಸ್ವಭಾವ, ಗಾಳಿಗೊಡ್ಡಿದ ಲತೆಯಂತೆ ತಲ್ಲಣಿಸಿತು.

'ಹಾಗನ್ನಬಾರದು ದೇವರೇ! ಪರಮಾತ್ಮನು ನಿಷ್ಕರುಣಿಯಲ್ಲ. ಇದೆಲ್ಲಾ ಒಳಿತಕ್ಕಾಗಿಯೇ ಇರಬೇಕು ..'

'ನಿನಗೆಷ್ಟು ಸಂಕಟವಾಗುವುದೆಂದು ನಾನರಿಯಲಾರೆನೇನು? ನೀನು ಇನ್ನೂ ಸಣ್ಣ ಹುಡುಗಿ.. ಈ ನಿಷ್ಠುರವನ್ನು ಹೇಗೆ ಸಹಿಸುವೆಯೆಂದು ನನಗೆ ಯೋಚಿಸಲಾಗುವುದಿಲ್ಲ. ಎಲ್ಲ ನನಗಾಗಿ!'

'ಅದು ಎಷ್ಟಿದ್ದರೂ ನನ್ನ ಪಾಲಿನದಾಗಿದೆ. ತಂದೆ ತಾಯಿಗಳು ಮಗಳನ್ನು ಕೊಡುವಾಗಲೇ ಯೋಚಿಸುತ್ತಾರೆ; ಇನ್ನು ನಮ್ಮ ಮಗಳು ಅಲ್ಲಿಯ ಕಷ್ಟ ಹೇಗೆ ಸಹಿಸುತ್ತಾಳೆಯೋ ಎಂದು. ನಾವು ಗಂಡನ ಮನೆಗೆ ಬರುವಾಗ ಅಂಥ ಕಷ್ಟಸಹಿಷ್ಣುತೆಯನ್ನು ಹೊತ್ತೇ ಬರುತ್ತೇವೆ. ನನಗಿದೇನೂ ಕಷ್ಟವಾಗುವುದಿಲ್ಲ. ನಿಮ್ಮ ಸೇವೆ ಮಾಡುವುದು ನನ್ನ ಕರ್ತವ್ಯವೇ ಆಗಿದೆ . ಆದರೆ ಮಾತ್ರ, ನನ್ನ ಪಾಲಿಗೆ ಬರುವ ಸುಖ, ಸಂತಸದಲ್ಲಿ ನೀವು ಸಂಪೂರ್ಣ ಸಮಪಾಲುಗಾರರಾಗಲಿಲ್ಲವಲ್ಲಾ ಎಂದು ಚಿಂತಿಸುತ್ತೇನೆ.'

'ಅಮ್ಮಾ, ನಾನು ನಿನಗೆ ಹೆಚ್ಚು ಕಷ್ಟ ಕೊಡುತ್ತೇನೆ. ಒಬ್ಬಾಕೆಯನ್ನು ಬೇರೆ ಕೆಲಸಕ್ಕೆ ಮಾಡುತ್ತೇನೆ .. ನೀನು ನನಗೆ ಕತೆಗಳನ್ನು ಓದಿ ಹೇಳುತ್ತಿರು, ಪತ್ರಿಕೆಯ ವಿಚಾರ ಹೇಳು. ನಿನ್ನ ಚೆಂದುಟಿಗಳಲ್ಲಿ ಹರಿವ ಇಂಚರವನ್ನು ಕೇಳಿ ನಾನು ಆನಂದಪಡುತ್ತೇನೆ. . ಏನು? ವಾಸಂತೀ . .ನೀನು ದುಃಖಿಸಬೇಡ... ಎಲ್ಲಿ? ನಿನ್ನ ಕೈಕೊಡು'- ಶ್ರೀನಿವಾಸನು ವಾಸಂತಿಯ ಬಲಗೈಯನ್ನು ತನ್ನೆರಡೂ ಕೈಗಳಿಂದೆತ್ತಿ ಮುದ್ದಿಟ್ಟು ತನ್ನೆದೆಗೊತ್ತಿಕೊಂಡನು. ವಾಸಂತಿ ಆತನ ತೊಡೆಯಲ್ಲಿ ತನ್ನ ತಲೆಯನ್ನು ಇಟ್ಟು ಆತನ ಸನಿಹದಲ್ಲಿಯೇ ನೆಲದಲ್ಲಿ ಕುಳಿತುಕೊಂಡಳು.

'ಈಗ ನೀನೆಷ್ಟು ತೀರದವಳಿರುತ್ತೀ ನೋಡು! ನಮ್ಮಿಬ್ಬರ ಹೃದಯದರ್ಶನಕ್ಕೆ ಈ ಎರಡು ದೃಷ್ಟಿಗಳೇ ಆತಂಕವಾಗಿದ್ದವು. ಅವುಗಳ ಬೆಳಕಡಗಿದುದಾದರೂ ನನ್ನೆದೆಯ ಪ್ರೇಮಜ್ಯೋತಿಯು ಇನ್ನಷ್ಟು ಕಾಂತಿ ಸೌಂದರ್ಯದಿಂದ ಕೂಡಿ ಬೆಳಗುತ್ತಿದೆ' ಎನ್ನುತ್ತಾ ಶ್ರೀನಿವಾಸ ಆಕೆಯ ತಲೆಯ ಮೇಲೆ ತನ್ನ ತಲೆಯನ್ನಿರಿಸಿದನು.

★

ದಿನಹೋದಂತೆ, ಶ್ರೀನಿವಾಸನ ಉಳಿದ ಇಂದ್ರಿಯಗಳು ಹೆಚ್ಚು ಶಕ್ತಿಹೊಂದಿದಂತೆ ಮೊದಲು ಕಣ್ಣೀರಿಡುವಾಗಿನ ಸುಖಸೌಂದರ್ಯದ ರಾಗಭಾವಕ್ಕಿಂತಲೂ ಮಿಕ್ಕಿದ ಅನುಭವಗೊಳ್ಳುವಂತಾಯಿತು. ಆತನು ಶಬ್ದರಸಗಳಲ್ಲಿ ಹೆಚ್ಚು ಆಸಕ್ತಿದೋರಿದನು. ವಾಸಂತಿ ದಿನವಿಡೀ ಆತನ ಬಳಿಯಲ್ಲಿಯೇ ಕುಳಿತುಕೊಂಡು ಕತೆಕಾದಂಬರಿಗಳನ್ನು ಓದುತ್ತಿದ್ದಳು. ಬೇಸರು ಬಂದರೆ ಗ್ರಾಮಫೋನ್ ಪ್ಲೇಟುಗಳನ್ನಿಡುವಳು, ಇಲ್ಲವೆ ರೇಡಿಯೋ ಮುಳ್ಳು ತಿರುಗಿಸುವಳು. ಇದರಿಂದ ಶ್ರೀನಿವಾಸನಿಗೆಷ್ಟನ್ನೂ ಆನಂದವಾಗುತ್ತಿತ್ತು.

ಸ್ವರದ ತಾನದಲ್ಲಿಯೇ ಮನವನ್ನು ತೇಲಬಿಟ್ಟು, ಎಲ್ಲೆಲ್ಲಿಯೋ ಅಲೆಯುತ್ತ ಸುಖಸ್ವಪ್ನದಲ್ಲಿ ಸೌಂದರ್ಯರಾಶಿಯೊಡನೆ ಕೇಳಿಯಾಡುತ್ತಿದ್ದಂತೆ ಆತನ ಬುದ್ಧಿಯೂ ಒಂದಿಷ್ಟು ವಿಪರ್ಯಾಸವಾಗುತ್ತ ಬಂತು. ಇನ್ನು ತನ್ನ ಕಣ್ಣುಗಳು ಬರಲಾರವೆಂದು ಆತನ ನಿಶ್ಚಯವೂ ಇದಕ್ಕೆ ಕಾರಣವಾಗಿತ್ತು.

ಒಂದು ದಿನ ಡಾಕ್ಟರರು ಬಂದರು. ಆತನ ಲೇಪನವನ್ನು ಕಳಚಿ ನೋಡಿ ನಿಟ್ಟುಸಿರೊಂದನ್ನು ಬಿಟ್ಟು, ಅವರೂ ಆಸೆಯುಳಿದರು. ವಾಸಂತಿಗೆ ಇನ್ನೊಮ್ಮೆ ಮರುಕವಡೆ ಆಗಸವು ಕಳಚಿದಂತಾಯಿತು. ಶ್ರೀನಿವಾಸನು ಅದರಿಂದೇನೂ ಬೇಸರಿಸಲಿಲ್ಲ. 'ಎಲ್ಲವೂ ಒಳಿತಕ್ಕೇ' ಎಂದು ಅವನನುಸುರಿದನು. ವಾಸಂತಿ ಕಂಬನಿ ಮಿಡಿದಳು.

'ಒಬ್ಬ ದಾದಿಯನ್ನು ಕರೆಯುತ್ತೀಯಾ?' ಶ್ರೀನಿವಾಸನು ವಾಸಂತಿಯನ್ನು ಬರಸೆಳೆದು ಕೇಳಿದನು.

'ದಾದಿಯಿಂದೇನು? ನಾನಿರುವಾಗ ನನ್ನ ಕೆಲಸವನ್ನು ಇತರರು ಮಾಡಬೇಕಾಗಿಲ್ಲ' ಎಂದು ವಾಸಂತಿ ಹೃತ್ಪೂರ್ವಕವಾಗಿಯೇ ಹೇಳಿದಳು.

'ಎಲ್ಲಾ ಪತ್ನಿಯರಿಗೆ ಕುರುಡನ ಸೇವೆಯನ್ನು ಮಾಡುವುದಿರುವುದಿಲ್ಲ. ನೀನೂ ಹಾಗೆ ಅದನ್ನೊಪ್ಪಿಕೊಳ್ಳಬೇಕಾದುದಿಲ್ಲ. ನಿನ್ನ ಉಳಿದ ಸೇವೆಯನ್ನು ಪ್ರೀತಿಯಿಂದ ನಾನೊಪ್ಪುತ್ತೇನೆ. ಅದು ದಾದಿಯ ಕೆಲಸ. ದಾದಿಯೇ ಮಾಡಬೇಕು. ನಿನಗದರಿಂದ ಎಷ್ಟು ಕಷ್ಟವಾಗುತ್ತಿದೆ ಎಂದು ನನಗೆ ಗೊತ್ತು.'

'ನೀವು ಹಾಗನ್ನಬಾರದು ದೇವರೇ' ನಾನು ನಿಮ್ಮ ಯಾವ ಸೇವೆ ಮಾಡುವಾಗಲೂ ತೃಪ್ತಿಯಿಂದಲೇ ಮಾಡುತ್ತೇನೆ. ಆ ತೃಪ್ತಿಯಲ್ಲಿ ಉಳಿದ ಗರತಿಯರು ಹೊಂದುವ ಎಲ್ಲಾ ಆನಂದಕ್ಕಿಂತಲೂ ಹೆಚ್ಚಿನದನ್ನು ನಾನು ಪಡೆಯುತ್ತೇನೆ, ಪ್ರೇಮ ಪರಿಪೂರ್ಣತೆಯನ್ನು ಅದರಲ್ಲಿಯೇ ಕಾಣುತ್ತೇನೆ. ನನ್ನ ಈ ಪ್ರಾರ್ಥನೆಯನ್ನು ನಿರಾಕರಿಸಬಾರದು.'

'ಆದರೊಂದು ಮಾಡು. ನಿನ್ನ ಕೈಕೆಳಗೊಬ್ಬ ದಾಸಿಯನ್ನಾದರೂ ಕೇವಲ ನನಗಾಗಿ ಕರೆಯಬೇಕು. ಅದರಿಂದಾಗುವುದೇನು?'

ನಿರ್ವಿಷ್ಟ

ಆ ದಂಪತಿಗಳ ಪ್ರೇಮಾನುರಾಗದ ಹೃದಯದರ್ಶನದಲ್ಲಿ ಕರುಣೆ, ದಯೆ ಪ್ರೀತಿ ತುಂಬಿ ಹರಿಯುತ್ತಿತ್ತು!

★

ದಾಸಿಯ ನೇಮಕವಾದ ಮೇಲೆ ವಾಸಂತಿಯು ತನ್ನ ಸಹಕಾರ ಸಹಾನುಭೂತಿಯ ಆವಶ್ಯಕತೆ ಆತನಿಗಿರುವುದಿಲ್ಲವೆಂದು ನಿಶ್ಚಯಿಸಿಕೊಂಡಳು. ದಾಸಿಯೇ ರೇಡಿಯೋ ತಿರುಗಿಸುವಳು, ರಿಕಾರ್ಡುಗಳನ್ನಿಡುವಳು. ಮೊದಮೊದಲು ದಾಸಿ ಇತರ ಕೆಲಸ ಮಾಡುವಾಗ ವಾಸಂತಿ ಪತಿಯ ಮುಖವನ್ನು ತನ್ನೆದೆಗವಚಿ ಅದೆಷ್ಟೋ ಹೊತ್ತು ಏನೇನೋ ಮಕ್ಕಳಾಟಿಕೆಯ ಮಾತುಗಳನ್ನಾದರೂ ಆಡುತ್ತ ಆತನ ಸ್ನೇಹಭಾಗಿಯಾಗಿರುತ್ತಿದ್ದಳು. ದಿನವು ಕಳೆದಂತೆ ಆ ಕ್ರಮವು ತಪ್ಪುತ್ತ ಬಂದು ತನ್ನ ಕೋಣೆಯನ್ನು ಬಿಟ್ಟು ಹೊರಗೆ ಬರುವುದನ್ನೇ ಬಿಟ್ಟುಬಿಟ್ಟಳು. ಶ್ರೀನಿವಾಸನು ಅದರಿಂದೇನೂ ನಿಷ್ಠುರನಾಗಲಿಲ್ಲ.

(ಅನೆಯ ಪುಟವನ್ನು ನೋಡಿ)

ರಾಜವೈದ್ಯ ಭಾಬಾ ಗುಣೆ ಇವರ

"ಸುರಂಗಾ" ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ— ಕೂದಲು ಬೀಳುವಿಕೆ, ಅಥವಾ ಬಿಳಿದಾಗುವವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು.
ಅಲ್ಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ನಿವಾರಿಸುತ್ತದೆ.

೪ ಔನ್ಸಿನ ಬಾಟ್ಲಿಗೆ ರೂ. ೧—೦—೦.

Agents:
Anglo Oriental Pharmacy, Hampankatta.
Stocks also at:
R. V. Kamath & Co., Carstreet Mangalore.

ಸಮರಾಸಕ್ತ ರಾಷ್ಟ್ರಗಳ ಭವಿಷ್ಯ ಜೀವನವೆಲ್ಲಿದೆ?

[redacted]

ಅತ್ಲಾಂತಿಕ ಯುದ್ಧದಲ್ಲಿಯೆ?

ಚರ್ಚಿಲ್ಲರ ಭರವಸೆಯ ಕಾರಣ

ಬ್ರಿಟನಿನ ನೌಕಾಶಕ್ತಿಯ ಮೇಲೆ ಜಯವು ನೆಲಸಿದೆಯೆ?

ಬ್ರಿಟನು ಜರ್ಮನಿಗಳೊಳಗೆಯು ದ್ಧವಾಗಿರುವುದು ಇದು ಮೊದಲನೆಯ ಬಾರಿಯಲ್ಲ. ಅಥವಾ ಬ್ರಿಟನು ಬೇರೆ ರಾಷ್ಟ್ರಗಳೊಂದಿಗೆ ಯುದ್ಧಾಸಕ್ತವಾಗಿರುವುದೂ ಇದು ಮೊದಲನೆ ಬಾರಿ ಅಲ್ಲ. ಹಿಂದೆ ಅನೇಕ ಸಲ ಯುದ್ಧಗಳಾಗಿ ಬ್ರಿಟನು ಗೆದ್ದಿದೆ. ಅದರ ಗೆಲುವಿಗೆ ಈ ಎಲ್ಲಾ ಸಂದರ್ಭಗಳಲ್ಲಿ ಅದರ ನೌಕಾಬಲವೇ ಕಾರಣವಾಗಿದೆ. ಬ್ರಿಟನಿನ ವಿಜಯ ಜೀವನದ ಜೀವಾಳವೇ ಅದರ ನೌಕಾ ಬಲವಾಗಿರುವುದು.

ಕಳೆದ ಬಾರಿಯ ಲೋಕಯುದ್ಧ

ಇತಿಹಾಸದ ಹಿಂದಿನ ಯುದ್ಧ ವಿಷಯಗಳು ಹಾಗಿರಲಿ; ಕಳೆದ ಬಾರಿಯ ಲೋಕಯುದ್ಧವನ್ನು ತೆಗೆದುಕೊಂಡರೂ ಬ್ರಿಟನು ಅನೇಕ ಕಡೆಗಳಲ್ಲಿ ಜರ್ಮನಿಯಂಥ ಪ್ರಬಲ ಶತ್ರುವನ್ನು ಎದುರಿಸಿ ಹಿಮ್ಮೆಟ್ಟಿಸಿತು. ಆದರೂ ಅದು ಕೊನೆಗೆ ವಿಜಯ ಧ್ವಜವನ್ನು ಊರಿತು. ಯಾಕೆಂದರೆ ಬ್ರಿಟನಿನ ನೌಕಾಬಲವು ಅಪ್ರತಿಮವಾಗಿತ್ತು; ಅನುಪಮವಾಗಿತ್ತು. ಬ್ರಿಟನಿನ ಯುದ್ಧನಾವೆಗಳ ಪ್ರಬಲ ಮುತ್ತಿಗೆಯಿಂದ ಜರ್ಮನಿಯು ಕಂಗೆಟ್ಟು ಬ್ರಿಟನಿಗೆ ಸೋಲಬೇಕಾಯಿತು.

ಇಂದಿನ ಸ್ಥಿತಿ

ಆದರೆ ಕಳೆದ ಬಾರಿಯ ಯುದ್ಧದಲ್ಲಿ ಯೂರೋಪಿನ ಎಲ್ಲ ರಾಷ್ಟ್ರಗಳು ಬ್ರಿಟನಿನ ಕಡೆಗಿದ್ದುವು; ಜರ್ಮನಿಯೊಂದೇ ಇನ್ನುಳಿದ ಯೂರೋಪಿನೊಡನೆ ಹೋರಾಡಬೇಕಾಗಿದ್ದಿತು. ಈಗ ಪರಿಸ್ಥಿತಿ ವಿಪರೀತವಾಗಿದೆ. ಯೂರೋಪೆಲ್ಲ ಜರ್ಮನಿಯ ಕಡೆಗಿದೆ. ಕೇವಲ ಬ್ರಿಟನು ಏಕಾಂಗಿಯಾಗಿ ಜರ್ಮನಿಯೊಡನೆ ಹೋರಾಡಬೇಕಾಗಿದೆ. ಕಳೆದ ಬಾರಿ ಬ್ರಿಟನಿನ ಪಕ್ಷವಾಗಿದ್ದ ಜಪಾನೂ ಈ ಬಾರಿ ಜರ್ಮನಿಯನ್ನು ಸೇರಿಕೊಂಡಿದೆ ಎಂದು ಹೇಳಬಹುದು. ಇದು ನಿಜ. ಈಗ ಬ್ರಿಟನಿನ ಅದರಲ್ಲಿ ಅದರ ನೌಕಾಪಡೆಯ ಸತ್ವಪರೀಕ್ಷೆಯ ಕಾಲವು ಬಂದೊದಗಿದೆ. ಇದನ್ನು ಬ್ರಿಟನಿನ ರಾಜಕಾರಣಿಗಳೂ ತಿಳಿದಿದ್ದಾರೆ. ಆದುದರಿಂದಲೇ ಚರ್ಚಿಲ್ಲರು ಮೊನ್ನೆಯ ತಮ್ಮ ಭಾಷಣದಲ್ಲಿ 'ಮಿಕ್ಕುಳಿದ ಯಾವ ರಣಕ್ಷೇತ್ರದಲ್ಲಿ ಯಾರು ಸೋತರೂ ಯಾರೂ ಗೆದ್ದರೂ ಈ ಯುದ್ಧದ ಸೋಲು ಗೆಲವುಗಳ ಕೊನೆಯ ನಿರ್ಧಾರವಾಗುವುದಿಲ್ಲ. ಈ ನಿರ್ಧಾರವು ಅತ್ಲಾಂತಿಕ ಮಹಾಸಾಗರದಲ್ಲಿ ನೌಕಾಯುದ್ಧದ ಮೂಲಕವೇ ಆಗಬೇಕು' ಎಂದು ಹೇಳಿ 'ಈ ಯುದ್ಧದಲ್ಲಿ ನಾವು ಗೆದ್ದೇ ಗೆಲ್ಲುವೆವೆಂಬ ಭರವಸೆ ನಮಗಿದೆ. ಅಮೇರಿಕದ ಸಹಾಯವು ನಮಗೆ ಅಧಿಕಾಧಿಕ ದೊರೆಯುತ್ತಿರುವುದು' ಎಂದಿದ್ದಾರೆ. ನಿಜ. ಕಳೆದ ಬಾರಿ ಕೂಡ, ಯುದ್ಧದ ಕೊನೆಯ ದಿನಗಳಲ್ಲಿ ಅಮೇರಿಕದ ಸಹಾಯ ಸಹಕಾರಗಳನ್ನು ಪಡೆದೇ ಬ್ರಿಟನು ತನ್ನ ನೌಕಾಪಡೆಯ ಮೂಲಕ ಜರ್ಮನಿಯನ್ನು ಸೋಲಿಸಿದ್ದಿತು.

ಬ್ರಿಟನಿನ ನೌಕಾಪಡೆ

ಬ್ರಿಟನಿನ ನೌಕಾಪಡೆ ಈಗಲೂ ಅಜೇಯವಾಗಿದೆ. ಇಲ್ಲವಾದರೆ ಫ್ರಾನ್ಸಿನ ಪತನವಾಧಾಗಲೇ ಹಿಟ್ಲರನು ಬ್ರಿಟನನ್ನು ಮುತ್ತಿ ಅದನ್ನು ಕಬಳಿಸಿ ಹಾಕಬಹುದಾಗಿದ್ದಿತು. ಜರ್ಮನರ—ಹಿಟ್ಲರನು—ಯುರೋಪಿನ, ಆಫ್ರಿಕದ, ಏಸ್ಯದ ರಣರಂಗಗಳಲ್ಲಿ ವಿಜಯಿಯಾಗಿ ತನ್ನ ದಂಡಯಾತ್ರೆಯನ್ನು ಎಲ್ಲಿಗೆ ಬೇಕಾದರೂ ಕೊಂಡು ಹೋಗಬಾರದೇಕೆ? ಕೊನೆಗೆ ಬ್ರಿಟಿಷ್ ನೌಕಾಪಡೆಯ ಮುತ್ತಿಗೆಯಿಂದ ಜರ್ಮನಿಯ ಸಾಂಪತ್ತಿಕ ಸ್ಥಿತಿಯು ಕೆಟ್ಟು, ಅದರ ಮೂಲಕವಾಗಿಯೇ ಹಿಟ್ಲರನು ಕಡ್ಡಿ ತಿನ್ನಬೇಕು. ಆಧುನಿಕ ಯುದ್ಧಗಳ ಫಲಾಫಲಗಳು ರಾಷ್ಟ್ರಗಳ ಸಾಂಪತ್ತಿಕ ಸ್ಥಿತಿಯನ್ನು ಅವಲಂಬಿಸಿ ಇರುತ್ತವೆ. ಸಾಂಪತ್ತಿಕ ಸ್ಥಿತಿಯು ಕೆಟ್ಟುಹೋಗಿಯೇ ಜರ್ಮನಿಯು ಸೋಲಬೇಕು. ಸಾಂಪತ್ತಿಕ ಸ್ಥಿತಿ ಕೆಟ್ಟು ಬ್ರಿಟನು ಸೋಲುವ ಯಾವ ಲಕ್ಷಣವೂ ತೋರುವುದಿಲ್ಲ. ಅಮೇರಿಕದ ಸಂಪೂರ್ಣ ಸಹಾಯವು ಬ್ರಿಟನಿಗೆ ದೊರೆಯುವುದೇ ಇದಕ್ಕೆ ಕಾರಣವಾಗಿದೆ.

ಜರ್ಮನಿಯ ನೌಕಾಬಲ

ಜರ್ಮನಿಯ ನೌಕಾಬಲವು ಬ್ರಿಟನಿನಷ್ಟು ಇರುವುದಿಲ್ಲ. ಬ್ರಿಟನಿನೊಂದಿಗಿರುವ ನೌಕಾಬಲವು ಇಡೀ ಪ್ರಪಂಚದ ನೌಕಾಬಲದ ಅರೆವಾಸಿಯಷ್ಟು ಇರುತ್ತದೆ. ಮತ್ತೆ ಅಮೇರಿಕವು ಹೆಚ್ಚಿಗೆಯಾಗಿ ಕೊಡುತ್ತಿರುವ ನೌಕೆಗಳೂ, ಯುದ್ಧದಲ್ಲಿ ಫ್ರಾನ್ಸ್, ನೋರ್ವೆ, ಹೊಲ್ಲೆಂಡ್, ಗ್ರೀಸ್ ಮೊದಲಾದ ದೇಶಗಳಿಂದ ದೊರೆತ ನೌಕೆಗಳೂ ಅದರ ಬಳಿ ಇವೆ. ಜರ್ಮನಿ ಜಲಾಂತರ್ಗಾಮಿಗಳ ಮೂಲಕ ಎಷ್ಟು ನೌಕೆಗಳನ್ನು ಮುಳುಗಿಸಬಹುದೋ ಅದಕ್ಕೂ ಹೆಚ್ಚಾಗಿ ನೌಕೆಗಳನ್ನು ತನ್ನ ಬಂದರುಗಳಲ್ಲಿಯೂ ಅಮೇರಿಕದ ಯಾರ್ಡುಗಳಲ್ಲಿಯೂ ತಯಾರಿಸಿಕೊಳ್ಳುತ್ತಾ ಇದೆ. ಇನ್ನು ಒಂದೆರಡು ತಿಂಗಳುಗಳಲ್ಲಿ ಜರ್ಮನಿ ಬ್ರಿಟನಿನ ೧೦ ಮಿಲಿಯ ಟನ್ ಭಾರದ ಹಡಗುಗಳನ್ನು ಮುಳುಗಿಸಿದರೆ ಮಾತ್ರ ಬ್ರಿಟನು ಯುದ್ಧದಲ್ಲಿ ಸೋಲುವ ಸಂಭವವುಂಟು. ಆದರೆ ಇದು ಸಾಧ್ಯವೆಂದು ಜರ್ಮನಿ ಕನಸಿನಲ್ಲಿಯೂ ಹೇಳುವುದಿಲ್ಲ. ಕಾರಣ, ಅದರ ನೌಕಾ ಎಷ್ಟಿದೆ ಎಂದು ಅದಕ್ಕೆ ಚೆನ್ನಾಗಿ ತಿಳಿದಿದೆ.

ಕಣ್ಣು ಬಂತು!

(ಹಿಂದಿನ ಪುಟದಿಂದ ಮುಂದುವರಿದುದು)

ಆಕೆಗೆ ತನ್ನಿಂದಾದ ದುಃಖ ಶಮನವಾಗುವುದೆಂತು? ಎಂದು ಆತನೆದೆಯುಸಿರು ಬಿಡುತ್ತಿತ್ತು. ವಾಸಂತಿ ಎಲ್ಲಿಯಾದರೂ ದಿನಕ್ಕೆ ಒಂದು ಸಲ 'ಈಗ ಮನಸ್ಸು ಸ್ಥಿತಿಯಲ್ಲಿದೆಯೇನು? ದುಃಖಿಸಲೇಕೆ?' ಎಂದಿಷ್ಟೇ ಹೇಳಲು ಬರುತ್ತಿದ್ದಳು. ಶ್ರೀನಿವಾಸನಿಗೆ ಅಷ್ಟರಿಂದಲೇ ತೃಪ್ತಿಯಾಗುತ್ತಿತ್ತು.

ದಾಸಿಯ ಹೆಸರು ನಿರ್ಮಲ ಎಂದು. ಆಕೆ ಶ್ರೀನಿವಾಸನ ಆರೈಕೆಯನ್ನು ನೋಡುತ್ತ ಚಿಕ್ಕ ಮಗುವನ್ನು ನೋಡುವಂತೆ ಉಪಚರಿಸುತ್ತ ಬಂದಳು. ಶ್ರೀನಿವಾಸನಿಗೆ ಅವಳ ಉಪಕಾರವನ್ನು ನೆನೆವುದೇ ಹೊತ್ತು. ಏನೆಂದರೂ ಅವಳು ದಾಸಿಯಷ್ಟೆ! ಮತ್ತೆ 'ಹಣ ಕೊಟ್ಟರೆ ಕೆಲಸ ಮಾಡುತ್ತಾಳೆ ಇಲ್ಲದಿದ್ದರೆ ಹೋಗುತ್ತಾಳೆ' ಎಂದು ಆತನ ಮನದಹೇಟವಾಯಿತು. ಏನಿದ್ದರೂ ಆಕೆಯ ಕೆಲಸದಲ್ಲಿ ಸಂಕೋಚವಿರಲಿಲ್ಲ. ಗುರುಗಂಜಿತನವಿಲ್ಲ. ಪ್ರೀತಿಯಿಂದಲೇ ಎಲ್ಲಾ ಕೆಲಸಗಳನ್ನು ಅತೀವ ಉತ್ಸುಕತೆಯಿಂದ್ದೇ ನಿರ್ವಹಿಸುತ್ತಿದ್ದಳು. ಶ್ರೀನಿವಾಸನಿಗೆ ಆಕೆಯೆಂದರೆ ದೇವತೆಯೆಂದುಕೊಳ್ಳುವವರೆಗೆ ಮನಸ್ಸಿಗೆ ತೃಪ್ತಿಯುಂಟಾಯಿತು. ಆಕೆಯ ಸ್ವರೂಪವಾದರೂ ಹೇಗಿದ್ದೀತೆಂದು ನೋಡುವ ಆಸೆಯು ಉಂಟಾಯಿತು. ಹೊತ್ತುಹೊತ್ತಿಗೆ ಔಷಧಿ ಲೇಪನ ಕೊಟ್ಟು ಕೈಹಿಡಿದುಕೊಂಡು ಉಪ್ಪರಿಗೆಯಿಂದ ಮೇಲೆ ಕೆಳಗೆ ಸುತ್ತಾಡಿ ಬಿಡುವಳು. ಆವನಿಗಾಗ ಹೊಸ ದೃಷ್ಟಿಯನ್ನು ಪಡೆದವನಂತೆ ಅನಿಸುತ್ತಿತ್ತು. ನಿರ್ಮಲ ದೇವತೆ ಎಂದೇ ಅವನೆದೆಯ ಹಂಬಲ.

ಒಂದು ದಿನ ವಾಸಂತಿ ಹೊರಗೆ ಕ್ಲಬ್ಬಿಗೆ ಹೋಗಿ ಬರುವಾಗ ತನ್ನ ಕಾಲೇಜ ಸ್ನೇಹಿತರೊಡನೆ ಆಟ ನೋಟಗಳಾದ ಮೇಲೆ ಅಗಲೇ ಮನೆಗೆ ಹಿಂದಿರುಗಿದ್ದಳು. ತನ್ನ ಕೋಣೆಯಲ್ಲಿ ಕುಳಿತುಕೊಂಡು ಯಾವುದೋ ಒಂದು ಕಾದಂಬರಿಯನ್ನು ಓದುತ್ತಿದ್ದಂತೆ 'ವಾಸಂತಿ, ವಾಸಂತೀ' ಎಂದು ಶ್ರೀನಿವಾಸನ ಕೂಗು ಕೇಳಿಸಿತು.

ವಾಸಂತಿಯೆದ್ದು ತನ್ನ ಡ್ರೆಸ್ಸು ಬದಲಾಯಿಸಿಕೊಂಡು ಸ್ವಲ್ಪ ಸಾವಧಾನವಾಗಿಯೇ ಆತನನ್ನು ಕಾಣಲು ಹೋದಳು. ಶ್ರೀನಿವಾಸನಿಗಾಗಲೇ ಒಂದು ಕಣ್ಣು ಅದರ ಕಳೆದು ಹೋದ ಬೆಳಕನ್ನು ಮತ್ತೆ ಸ್ವಲ್ಪ ಕಾಣಿಸಿಕೊಂಡು ಲೋಕವನ್ನೆಲ್ಲ ಆ ಒಂದೇ ಮಿಣುಕಿನಿಂದ ಬೆಳಗಿದಾಗ ಸಂತಸದುಬ್ಬಿನಲ್ಲಿ ವಾಸಂತಿ ಎಂದವನು ಕೂಗಿದ್ದನು. ಆಕೆಯ ಬದಲು ನಿರ್ಮಲ ಹತ್ತಿರ ಇದ್ದಳು. ಕಳೆದು ಹೋದ ಬೆಳಕು ಮತ್ತೆ ಬಂದಾಗ ಆತನ ಸಂತೋಷವನ್ನು ಹೇಳತೀರದಾಗಿತ್ತು. ವಾಸಂತಿ ಬರುವ ತನಕ ಆತನಿಗೆ ತಡೆಯಲಾಗಲಿಲ್ಲ. ಹತ್ತಿರ ತನ್ನ ಕೈಹಿಡಿದು ನಿಂತಿದ್ದ ನಿರ್ಮಲೆಯನ್ನು ಬಿಗಿದಪ್ಪಿ ಮುದ್ದಿಸಿದನು. ಆಕೆಯೂ ಬಿಡಿಸಿಕೊಳ್ಳಲಿಲ್ಲ!

ವಾಸಂತಿ ಬಂದು ನೋಡುವಾಗ ಅವಳ ಕಣ್ಣುಗಳನ್ನು ನಂಬಲಾಗಲಿಲ್ಲ! ಅವಳೆದೆಯಲ್ಲಿ ಕಡುಬು ಹೆಚ್ಚಿತು, ಕ್ರೋಧ ಅಡರಿತು, ಮಾತು ಬೇರೆ ನಿಷ್ಠುರವನ್ನು ಹೇಳುವಂತಿತ್ತು. ಅಷ್ಟರಲ್ಲಿಯೇ 'ಕಣ್ಣು ಬಂತು ದೇವಿ!' ಎಂದು ಉಬ್ಬಿ ಕುಣಿದಾಡಿದನು. ಇನ್ನೊಂದು ಗಂಗೆಯಲ್ಲಿ ಮತ್ತೆ ಕತ್ತಲೆಯಲ್ಲಿ ಮುಳುಗಿ ಹೋದಂತಾಯಿತು! ಎಲ್ಲವೂ ಶೂನ್ಯವಾಯಿತು!

—ರಾ. ಕೃ. ಕೆ.

ಸೇವಿಸಿದಾಗಲೆಲ್ಲಾ ಸುಂದರ ರೂಪ

ಆಕೆ ಕಣ್ಣಾರೆ ನೋಡಿದ್ದಾಳೆ— ಜತೆ ಸ್ತ್ರೀಯರೆಷ್ಟೋ ಜನ 'ಲೋಧ್ರ' ಸೇವಿಸುವುದನ್ನು. ಹಾಗೆ ಸೇವಿಸಿದವರಿಗೆಲ್ಲಾ ಗರ್ಭಾಶಯ ರೋಗಗಳು ಗುಣವಾಗಿವೆ. ಕುಂಬಳಕಾಯಿಯಂತೆ ದೃಢವಾಗಿರುವ ಮಕ್ಕಳನ್ನು ಹಡೆದಿದ್ದಾರೆ. ಆದಕ್ಕಾಗಿಯೇ 'ಲೋಧ್ರ' ಸೇವಿಸುವಾಗಲೆಲ್ಲಾ ಒಂದು ಮೋಹನಾಕಾರವು ಆಕೆಯ ಕಣ್ಣಿಗೆ ಕಟ್ಟಿದಂತಾಗುವುದು!

'ಲೋಧ್ರ' ಸ್ತ್ರೀಯರಿಗೆ ಸಂಪೂರ್ಣ ಆರೋಗ್ಯವನ್ನು ಕೊಡುತ್ತೆ. ಗರ್ಭಾಶಯ ರೋಗಗಳನ್ನು ಹೊರದೂಡಿ ಸತ್ಸಂತಾನವನ್ನು ಕೊಡುತ್ತೆ. ಆದರಿಂದಲೇ ಎಂತಹ ರುಗ್ಣತೆಗಳಿಗೂ ಸ್ತ್ರೀಯರು 'ಲೋಧ್ರ'ವನ್ನು ಸೇವಿಸಬೇಕು.

'ಲೋಧ್ರ' ಎಲ್ಲಾ ಔಷಧದಂಗಡಿಗಳಲ್ಲಿಯೂ ಸಿಕ್ಕುತ್ತೆ

ತಯಾರಿಸುವವರು: ಕೇಸರಿ ಕುಟೀರಂ ಲಿಮಿಟೆಡ್—ಮದರಾಸು

ಜಿಲ್ಲಾ ಸಮಾಚಾರ

ಮಂಗಳೂರು

ಶ್ರೀ ಎಸ್. ಎನ್. ಹೊಳ್ಳರ ಸತ್ಯಾಗ್ರಹ

ಡಿ. ಬೋ. ಮೆಂಬರರೂ ಪ್ರಮುಖ ಕಾಂಗ್ರೆಸ್ ಕೆಲಸಗಾರರೊಬ್ಬರೂ ಆದ ಶ್ರೀ ಎಸ್. ಎನ್. ಹೊಳ್ಳರು ತಾ. ೭ರಂದು ಸಂಜೆ ಸ್ಥಳೀಯ ಮೈದಾನಿನಲ್ಲಿ ಯುದ್ಧವಿರೋಧ ಘೋಷಣೆಮಾಡಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸಲಾಗಿದೆ.

ಶ್ರೀ ಹೊಳ್ಳರ ಸತ್ಯಾಗ್ರಹದ ಸಮಯದಲ್ಲಿ ಮೈದಾನಿನಲ್ಲಿ ಸಾವಿರಾರುಮಂದಿ ನೆರೆದಿದ್ದರು. ಮಹಿಳೆಯರು ಕೆಂಪು ಪತಾಕೆಯೊಡನೆ ಗುಂಪು ಗುಂಪಾಗಿ ಬಂದಿದ್ದರು. ಶ್ರೀ ಹೊಳ್ಳರು ರಾಷ್ಟ್ರಧ್ವಜದಡಿಯಲ್ಲಿ ನಿಂತು ಪ್ರಕೃತದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಸ್ಫೂರ್ತಿಯುಕ್ತ ಭಾಷಣವನ್ನಿತ್ತರು. ಭಾಷಣವನ್ನು ಮುಗಿಸಿದ ಮೇಲೆ ಯುದ್ಧವಿರುದ್ಧ ಘೋಷಣೆಯನ್ನು ಕನ್ನಡ, ತುಳು ಇಂಗ್ಲಿಷುಗಳಲ್ಲಿ ಉಚ್ಚ ಧ್ವನಿಯಿಂದ ಉಚ್ಚರಿಸಿದರು. ಕೂಡಲೇ ಅವರನ್ನು ಪೋಲೀಸರು ಬಂಧಿಸಿ 'ಪೋಲೀಸು ಗಾಡಿ'ಯಲ್ಲಿ ತೆಕ್ಕೊಂಡು ಹೋದರು.

ಭಟ್ಕಳದಲ್ಲಿ ಬಂಧಿತರಾದ ಸತ್ಯಾಗ್ರಹಿಗಳು

೨-೪-೪೧ರಲ್ಲಿ ಪಾಣೆಮಂಗಳೂರಲ್ಲಿ ಸತ್ಯಾಗ್ರಹ ಮಾಡಿದ ಶ್ರೀ ಕೃಷ್ಣ ಶ್ರೀನಿವಾಸ ಪೈಗಳು ಮತ್ತು ಶ್ರೀ ಉಪೇಂದ್ರ ನಾಯ್ಕರು, ಕಲ್ಲಡ್ಕದಲ್ಲಿ ಸತ್ಯಾಗ್ರಹ ಮಾಡಿದ ಶ್ರೀ ಎಂ. ಸುಬ್ರಾಯನ್ ಇವರುಗಳನ್ನು ಭಟ್ಕಳದಲ್ಲಿ ತಾ. ೩೭ರಲ್ಲು ಬಂಧಿಸಿ ಹೊನ್ನಾವರದಲ್ಲಿ ತಾ. ೨೮-೪-೪೧ರಲ್ಲಿ ವಿಚಾರಣೆಯಾಗಿ ಪ್ರತಿಯೊಬ್ಬರಿಗೆ ನಾಲ್ಕು ನಾಲ್ಕು ತಿಂಗಳ ಸಾದಾ ಸಜೆ ವಿಧಿಸಿ ಬೆಳಗಾಂವಿಯ ಹಿಂಡಲ್ಗಿ ಸೆರೆಮನೆಗೊಯ್ದಿರುವರೆಂದು ತಿಳಿದಿದೆ.

ಡಾ. ಯು. ಪಿ. ಮಲ್ಯರನ್ನು ಕಣ್ಣಾನೂರಿಗೆ

ಸತ್ಯಾಗ್ರಹ ಹೂಡಿ ದಂಡನೆಗೆ ಗುರಿಯಾದ ಡಾ. ಯು. ಪಿ. ಮಲ್ಯರನ್ನ ಕಣ್ಣನೂರು ಸೆಂಟ್ರಲ್ ಜೈಲಿಗೊಯ್ಯಲಾಗಿದೆ.

ಗರ್ಲ್ಸ್ ಗೈಡ್ ಕೇಂಪ್

ದ. ಕ. ಜಿಲ್ಲಾ ಗರ್ಲ್ಸ್ ಗೈಡ್ ಎಸ್ಸೋಸಿಯೇಶನಿನ ಆಶ್ರಯದಲ್ಲಿ, ಉಪಾಧ್ಯಾಯಿನಿಯರ ತರಬೇತಿಯ ಬಗ್ಗೆ ಕಳೆದ ಎಪ್ರಿಲ್ ತಾ. ೬ರಲ್ಲಿ ಉರ್ವಲದಲ್ಲಿ ಒಂದು ಗರ್ಲ್ಸ್ ಗೈಡ್ ಟ್ರೈನಿಂಗ್ ಕೇಂಪ್ ತೆರೆದಿದ್ದು, ಸುಮಾರು ೩೫ ಉಪಾಧ್ಯಾಯಿನಿಯರಿಗೆ ಶಿಕ್ಷಣ ಕೊಡಲಾಯಿತು. ಮದ್ರಾಸ್ ಪ್ರೊವಿನ್ಶಿಯಲ್ ಟ್ರೈನರ್ ಶ್ರೀಮತಿ ಜೆ. ತಾಲೂಕ್ದಾರ್, ಶ್ರೀಮತಿ ಸ್ವಾಮಿದಾಸ್ ಮತ್ತು ಶ್ರೀಮತಿ ಸ್ವರ್ಣಂ ಶಿಕ್ಷಕರಾಗಿದ್ದು ಶಿಬಿರವು ತಾ. ೫ನೇ ಶನಿವಾರ ಕೊನೆಗೊಂಡಿತು.

ಮದ್ರಾಸ್ ಜಸ್ಟೀಸರ ಉದ್ಯೋಗ ನಿವೃತ್ತಿ

ಮದ್ರಾಸಿನ ಜಸ್ಟೀಸ್ ಪಾಂಡುರಂಗ ರಾವ್, ಐ. ಸಿ. ಎಸ್. ಇವರು ತಮ್ಮ ಉದ್ಯೋಗದಿಂದ ನಿವೃತ್ತರಾಗುವ ಸಂದರ್ಭದಲ್ಲಿ ಮದ್ರಾಸ್ ಬಾರ್ ಎಸೋಸಿಯೇಶನಿನವರು ಅವರ ಗೌರವಾರ್ಥವಾಗಿ ಒಂದು ಸಂತೋಷ ಕೂಟವನ್ನೇರ್ಪಡಿಸಿದ್ದರು. ಎಡ್ವೋಕೇಟ್ ಜನರಲಾದ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು ಜಸ್ಟೀಸರ ಗುಣಪ್ರಶಂಸೆ ಮಾಡಿದರು. ಜಸ್ಟೀಸರೂ ತಕ್ಕ ಉತ್ತರ ಹೇಳಿದರು. ಶ್ರೀ ರಾಯರು ನಮ್ಮ ಜಿಲ್ಲೆಯ ಸಾರಸ್ವತ ಸಮಾಜದ ಮಹನೀಯರು. ಈ ಜಿಲ್ಲೆಯ ಅದಿಕಾಲದ ಐ. ಸಿ. ಎಸ್. ಗಳಲ್ಲಿ ಒಬ್ಬರು.

ಎರಡು ಇಂಚು ಮಳೆ

ಕಳೆದ ಸುಮಾರು ಎರಡು ವಾರಗಳಿಂದ ವಿಶೇಷ ಸೆಕೆಯಿದ್ದು ತಾ. ೧ನೇ ರಾತ್ರಿ ವಿಶೇಷ ಗಾಳಿ ಮಳೆಯೂ, ಗುಡುಗು ಮಿಂಚುಗಳೂ ಇದ್ದುವು. ಬಿರುಗಾಳಿಯ ದೆಸೆಯಿಂದ ಅನೇಕ ಕಡೆಗಳಲ್ಲಿ ಮರಗಳ ಗೆಲ್ಲುಗಳು ಮುರಿದು ಬಿದ್ದಿವೆ. ಸುಮಾರು ೨ ಇಂಚು ಮಳೆ ಬಿದ್ದಿದೆ.

ಮಹಿಳೆಯರ ಶಾರೀರಕ ಶಿಕ್ಷಣ

ಉಪಾಧ್ಯಾಯಿನಿಯರ ಶಾರೀರಿಕ ಶಿಕ್ಷಣದ ತರಬೇತಿಯ ಕ್ಲಾಸು, ಕಳೆದ ತಾ. ೨ನೇ ಶುಕ್ರವಾರ ಮುಂಜಾನೆ ಕದ್ರಿ ರಾಸರ ಮಹಿಳಾ ಸೇವಾಶ್ರಮದ ವಠಾರದಲ್ಲಿ ಸ್ವಾಸ್ಥ್ಯ ಸಂಘದ ಆಶ್ರಯದಲ್ಲಿ ಆರಂಭವಾಯಿತು.

ಶ್ರೀ ಕಾರ್ಡ್‌ಮಾಸ್ಟರರ ಗೌರವಾರ್ಥ

ನ್ಯೂ ಇಂಡಿಯಾ ಎಶ್ಯೂರೆನ್ಸ್ ಕೋ. ಲಿಮಿಟೆಡ್ ಎಂಬೀ ಸಂಸ್ಥೆಯ ಲೈಫ್ ಮ್ಯಾನೇಜರರಾದ ಶ್ರೀ ಎಸ್. ಬಿ. ಕಾರ್ಡ್‌ಮಾಸ್ಟರ್ ಇವರು ಮಂಗಳೂರಿಗೆ ಬಂದಿದ್ದು ಈ ಅತಿಥಿಗಳ ಗೌರವಾರ್ಥವಾಗಿ ಮೆ: ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ (ಬೊಂಬಯಿ ಲೈಫ್ ಎಶ್ಯೂರೆನ್ಸ್ ಕೊ, ಲಿಮಿಟೆಡ್‌ನ ಚೀಫ್ ಏಜೆಂಟ್ಸ್)ನ ಡೈರೆಕ್ಟರರೂ ಚೆಯರ್‌ಮ್ಯಾನರೂ ತಾ. ೫ನೆ ಸಂಜೆ ೫ಗೆ ಲಾಲ್‌ಬಾಗ್ ಬಂಗಲೆಯಲ್ಲಿ ಒಂದು ಟೀ ಪಾರ್ಟಿ ಸಮಾರಂಭವನ್ನೇರ್ಪಡಿಸಿದ್ದರು. ನಗರದ ಹಲವು ಪ್ರಮುಖ ನಾಗರಿಕರು ಈ ಸಂತೋಷ ಕೂಟಕ್ಕೆ ದಯಮಾಡಿಸಿದ್ದರು.

ಅಮೆರಿ ನಿಷೇಧ ದಿನಾಚರಣೆ

ಅಮೆರಿಯವರು ಪಾರ್ಲಿಮೆಂಟಿನಲ್ಲಿ ಮೊನ್ನೆ ಮಾಡಿದ ಭಾಷಣವನ್ನು ಖಂಡಿಸಿ ಹಾಗೂ ಅದಕ್ಕೆ ಮಹಾತ್ಮಾ ಗಾಂಧಿಜಿಯವರಿತ್ತ ಉತ್ತರವನ್ನು ಪುಷ್ಟೀಕರಿಸಿ ಸಾರ್ವಜನಿಕ ಸಭೆಯೊಂದು ತಾ. ೯ರಂದು ಸಂಜೆ ಸ್ಥಳೀಯ ಮೈದಾನಿನಲ್ಲಿ ಶ್ರೀ ಕೆ. ಆರ್. ಆಚಾರರ ಅಧ್ಯಕ್ಷತೆಯಿಂದ ಸೇರಿತು. ಆ ದಿನ ಶ್ರೀಗಳಾದ ಕಯ್ಯಾರ ಕಿಞ್ಞಣ್ಣ ರೈ, ದಾಮೋದರ ಬಾಳಿಗ, ಕು. ಶಿವರಾಮು, ಎಂ. ಆರ್. ಭಟ್ಟ, ಇವರು ಭಾಷಣಗೈದಿತ್ತರು. ಅಮೆರಿ ಭಾಷಣವನ್ನು ನಿಷೇಧಿಸುವ, ಗಾಂಧಿಜಿಯವರ ಉತ್ತರವನ್ನು ಸಮರ್ಥಿಸುವ ನಿರ್ಣಯವೊಂದು ಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾಯಿತು.

ದ. ಕ. ಜಿಲ್ಲಾ ವಾರ್ ಫಂಡ್ ರೇಫಲ್

ಎಪ್ರಿಲ್ ೬ರಂದು ವಾರ್ ಫಂಡ್ ರೇಫಲ್ ತೆಗೆಯಲಾಗಿಯದೆ. ಅದರ ನಂಬರುಗಳು ಪ್ರಕಟವಾಗಿವೆ. ಇನಾಮು ಪಡೆದವರು ಮೇ ಹತ್ತರೊಳಗೆ ಅದನ್ನು ತಿಳಿಸತಕ್ಕದ್ದು. ಮೇ ೧೭ಕ್ಕೆ ಇನಾಮು ಹಂಚುವುದು. ತಮ್ಮ ಸಮೀಪದ ತಾಲೂಕು ಆಫೀಸುಗಳಲ್ಲಿ ಕಲೆಕ್ಟರರ ಆಫೀಸಿನಲ್ಲಿಯೂ ತಿಳಿಯಬಹುದು. ಮೊದಲನೆಯ ಬಹುಮಾನ ರೂ. ೨,೫೦೦ (ವಾರ್ ಬೋಂಡ್) I 5263 ನಂಬರಕ್ಕೂ ಎರಡನೆಯ ಬಹುಮಾನ ರೂ. ೫೦೦ (ವಾರ್ ಬೋಂಡ್) L 3093ಕ್ಕೂ ಸಿಕ್ಕಿದೆ. J 7362, G 7205, D 10878, J 10160, B 2237, I 7257, I 5688, E 8342, D 4580, N 3964, F 5192 ಈ ನಂಬರುಗಳಿಗೆ ಬಂಗಾರದ ಆಭರಣಗಳು ಸಿಕ್ಕಿವೆ.

ಸುರತ್ಕಲ್

ಇಲ್ಲಿಯ ಇದ್ಯ ವಿದ್ಯಾದಾಯಿನೀ ಶಾಲೆಯ ೨೪ನೇ ವರ್ಷ ವರ್ಧಂತ್ಯುತ್ಸವವು ೩-೪-೪೧ರಂದು ಶ್ರೀ ಉದಿಯಾವರ ಸದಿಯ ಸಾಹು[illegible]

ಕಾರ್ ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ದೇವತಾ ಪ್ರಾರ್ಥನೆ ನಡೆದ ಮೇಲೆ ಶಾಲೆಯ ಹಳೆ ವಿದ್ಯಾರ್ಥಿನಿಯಾದ ಶ್ರೀ ಕೆ. ಸುಶೀಲಾಬಾಯಿ (B. A. ವಿದ್ಯಾರ್ಥಿನಿ) ಯವರು ಶಾಲಾಭಿನಂದನನನ್ನು ಅತ್ಯುತ್ತಮ ಭಾಷಣದಲ್ಲಿ ಪೂರೈಸಿದರು. ಅನಂತರ ಶಾಲಾ ವಿದ್ಯಾರ್ಥಿಗಳು ಅಭಿನಯಗೀತ, ನಾಟಕ, ಪ್ರಹಸನ, ವ್ಯಾಯಾಮ ಇತ್ಯಾದಿ ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸಿದರು. ಶಾಲಾ ವರದಿ ವಾಚನ, ಇನಾಂ ಹಂಚೋಣ, ಇವುಗಳಾದ ಮೇಲೆ ಸಭಿಕರ ಭಾಷಣ, ಸಭಾಧ್ಯಕ್ಷರ ಭಾಷಣಗಳು ನಡೆದವು. ಶಾಲೆಗೆ ಸಹಾಯ ಧನವಾಗಿ ರೂ. ೫೫/- ಕೊಟ್ಟಿರುವರಲ್ಲದೆ ಬೇಗನೆ ಜರಗಲಿರುವ ಶಾಲಾ ರಜತ ಮಹೋತ್ಸವಕ್ಕೆ ಉದಾರ ಸಹಾಯವನ್ನೀಯಲಿರುವರೆಂದು ಕೃತಜ್ಞತೆಯಿಂದ ತಿಳಿಸಲು ಬಹಳ ಆನಂದವೆನಿಸುತ್ತದೆ.

ಇಚ್ಲಂಪಾಡಿ

ಇಚ್ಲಂಪಾಡಿ ಎಯ್ಡೆಡ್ ಎಲಿಮೆಂಟರಿ ಶಾಲೆಗಾಗಿ ಗ್ರಾಮಸ್ಥರ ಸಹಾಯದಿಂದ ಇದೇ ಗ್ರಾಮದ ಕಳತ್ತೂರು ಎಂಬಲ್ಲಿ ಕಟ್ಟಿಸಿದ ಹೊಸ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. ೨೯-೩-೪೧ರಲ್ಲು ಆ ಶಾಲಾ ಮೇನೇಜರರ ಸಕಲ ಪರಿಶ್ರಮದಿಂದಲೂ, ಕಾಸರಗೋಡು ರೇಂಜಿನ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರರವರ ಅಧ್ಯಕ್ಷತೆಯಿಂದಲೂ ಶಾಂತವಾಗಿ ಜರಗಿತು.

ಪುತ್ತೂರು

ಸಂಸ್ಕೃತ ಶಾಲೆಯ ವಸಂತೋತ್ಸವ

ಪುತ್ತೂರಿನ ಸಮೀಪ ಉಪ್ಪಳಿ ಎಂಬಲ್ಲಿ ಕಳೆದ ೬ ತಿಂಗಳುಗಳಿಂದ ಹೊಸತಾಗಿ ನಡೆಯುತ್ತಿರುವ ಎಲಿಮೆಂಟರಿ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ ತಾ. ೪ರಲ್ಲು ಸದ್ರಿ ಶಾಲೆಯ ಪ್ರಧಾನಾಧ್ಯಾಪಕರಾದ ಶ್ರೀ ಎಂ. ರಾಮಚಂದ್ರಾಚಾರ್, ಶಿರೋಮಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ನಿಯತ ವಿಷಯದಲ್ಲಿ ಕೆಲ ಶಾಲಾ ವಿದ್ಯಾರ್ಥಿಗಳ ಭಾಷಣಗಳಾದ ಮೇಲೆ ಅಧ್ಯಕ್ಷರು ಈದಿನ ಕಾಲದಲ್ಲಿ ಸಂಸ್ಕೃತ ಕಲಿಯಬೇಕಾದುದರ ಆವಶ್ಯಕತೆಯನ್ನು ಯುಕ್ತಿಯುಕ್ತವಾಗಿ ಸಾಧಿಸಿ ಭಾಷಣ ಕೊಟ್ಟರು.

ಅಜೆಕಾರು

ವರ್ಧಂತ್ಯುತ್ಸವ

ಸ್ಥಳೀಯ ಬೋ. ಎ. ಶಾಲೆಯ ವರ್ಧಂತಿ ಉತ್ಸವವು ತಾ. ೧ರಂದು ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಕೆ. ವಿಠಲ ಶೆಟ್ಟರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರ್ಥನೆಯಾಗಿ ಅಧ್ಯಕ್ಷರು ಪೀಠವನ್ನಲಂಕರಿಸಿ ಆಯ್ಕೆ ಕ್ರಮದಂತೆ ಶ್ರೀ ಎ. ಪಾಂಡುರಂಗ ಕಿಣಿಯವರು ವರದಿ ವಾಚನಮಾಗಿ ಶ್ರೀ ಎ. ವಿಠಲಶೆಟ್ರು ಸ್ವಸ್ತಿ ವಾಚನಗೈದು, ಪುರಸ್ಕಾರ ವಿತರಣಗಳಾದ ಮೇಲೆ, ಅಜೆಕಾರ ಪ. ಬೋ. ಪ್ರೆಸಿಡೆಂಟರಾದ ರೈ. ಸಾ. ಪ್ರಸ್. ಟಿ. ಡಿ. ಸೋಜರು, ಹೈಸ್ಕೂಲ್ ಅಧ್ಯಾಪಕರಾದ ರಾ. ಜೆ. ಮಿನೇಜಸರೂ ಸ್ಥಳೀಯ ಬೇಡಿಕೆಗಳ ಕುರಿತು ಮಾತನಾಡಿದರು. ಸಭಾಧ್ಯಕ್ಷರು ಭಾಷಣವಿತ್ತರು. ಬಳಿಕ ಮಕ್ಕಳ ವಿವಿಧ ವಿನೋದಾವಳಿ, ತುಳು ನಾಟಕ, ಸಂಗೀತ ನಾಟಕಗಳನ್ನು ಪ್ರದರ್ಶಿಸಲಾಯಿತು. ತರುವಾಯ ಧನ್ಯವಾದ ಸಮರ್ಪಣೆ, ವಂದೇ ಮಾತರಂ ಗೀತೆಯಾದ ಮೇಲೆ 'ಮಿತ್ರ ಭೋಜನ'ವಾಗಿ ಸಮಾರಂಭವು ಕೊನೆಗೊಂಡಿತು.

ಖಾಸಗಿ ಶಾಲೆಗಳ ವೃದ್ಧಿಗಾಗಿ ಯೋಜನೆ

ಮೊನ್ನೆ ೩ನೇ ತಂಜಾವೂರಿನಲ್ಲಿ ಭಾಷಣ ಮಾಡುತ್ತಾ ವಿದ್ಯಾಪ್ರಿಯರೂ ಅನುಭವಸ್ಥರೂ ಆದ ಮಾನ್ಯ ಶ್ರೀ ಶ್ರೀನಿವಾಸ ಶಾಸ್ತ್ರಿಯವರು ನಮ್ಮ ಪ್ರಾಂತ್ಯದ ಶಾಲೆಗಳಲ್ಲಿ ಪರಸ್ಪರ ಸಾಹಾಯ್ಯವು ಹೆಚ್ಚಬೇಕು, ಒಂದು ಶಾಲೆಗೆ ಇನ್ನೊಂದು ನೆರವಾಗಬೇಕು, ಎಂದು ಮುಂತಾದ ಅಮೂಲ್ಯವಾದ ಸಲಹೆಯೊಂದನ್ನಿತ್ತರು. ನಮ್ಮ ದಕ್ಷಿಣ ಕನ್ನಡದ ಶಾಲೆಗಳಿಗಾಗಿ, ಮುಖ್ಯವಾಗಿ ಪ್ರಾಥಮಿಕ ಶಾಲೆಗಳಿಗಾಗಿ ಅದೇ ಉದ್ದೇಶದಿಂದ ಒಂದು ಸಂಘವನ್ನು ಸ್ಥಾಪಿಸಬೇಕೆಂದು ಉತ್ಸಾಹಿಗಳಾದ ವಿದ್ಯಾಭಿಮಾನಿಗಳು ಕೆಲವು ತಿಂಗಳುಗಳಿಂದ ಪ್ರಯತ್ನಿಸುತ್ತಿದ್ದಾರೆ. ಅವರೊಳಗೆ ನಡೆದ ಸಂಭಾಷಣೆಯ ಫಲವಾಗಿ ಯಾವುದೊಂದು ಮತಬೋಧಕರ ಕೈಕೆಳಗೆ ಇಲ್ಲದ ಶಾಲೆಗಳನ್ನು ಒಟ್ಟುಗೂಡಿಸುವ ಪ್ರಯತ್ನವು ಯೋಗ್ಯವೆಂದೂ ಅಗತ್ಯವೆಂದೂ ನಿಶ್ಚಯವಾಗಿಯೂ ಎಲ್ಲಾ ಶಾಲೆಗಳನ್ನು ಒಂದೇ ಆಡಳಿತೆಯ ಕೈಕೆಳಗೆ ತಂದರೆ ನಿಜವಾಗಿ ಆಯಾ ಊರಿನ ಜನರ ಉತ್ಸಾಹವು ಕಡಿಮೆಯಾಗುವ ಸಂಭವವಿದೆ ಎಂದು ಅಂಥ ಕೆಲಸಕ್ಕೆ ಕೈ ಹಾಕದೆ ವಿವಿಧ ಶಾಲೆಗಳಲ್ಲಿ ಪರಸ್ಪರ ಸಹಕಾರ ಬೆಳೆಸುವ ಪ್ರತಿಯೊಂದು ಶಾಲೆಯ ಏಳ್ಗೆಗಾಗಿ ಪ್ರಯತ್ನಿಸುವ ಸಂಸ್ಥೆಯೊಂದು ಸ್ಥಾಪಿತವಾಗಬೇಕೆಂದು 'ದಿ ಸೌತ್ ಕೆನರಾ ಏಡೆಡ್ ಸ್ಕೂಲ್ಸ್ ಫೆಡರೇಶನ್' (The South Kanara aided Schools Federation) ಎಂಬ ಸಂಘವು ಸ್ಥಾಪನೆಯಾಗಲಿದೆ. ಜಿಲ್ಲೆಯ ಎಲ್ಲಾ ಶಾಲೆಗಳೂ ವಿದ್ಯಾಪ್ರಿಯರೂ ಇದಕ್ಕೆ ಬೆಂಬಲವೀಯಬೇಕೆಂದು ಅದರ ಸಂಚಾಲಕರು ವಿನಂತಿ ಮಾಡಿಕೊಳ್ಳುತ್ತಾರೆ. ಈ ವಿಷಯ ಹೆಚ್ಚಿನ ಅನುಭವ ಬೇಕಿದ್ದರೆ ಅಥವಾ ಸೂಚನೆಗಳನ್ನು ಕಳುಹಿಸಬೇಕಿದ್ದರೆ ಸಂಚಾಲಕ, ಸೌತ್ ಕೆನರಾ ಏಡೆಡ್ ಸ್ಕೂಲ್ಸ್ ಫೆಡರೇಶನ್, ಮಂಗಳೂರು ಎಂಬ ವಿಳಾಸಕ್ಕೆ ಬರೆಯಬಹುದು. ಈ ತಿಂಗಳ ೨೫ರಂದು ಮಂಗಳೂರಲ್ಲಿ ಆ ವಿಷಯ ಸಭೆಯೊಂದು ಜರಗಲಿದೆ.

ಎಮ್ಮಾರ್ಳ

ಅಧ್ಯಾಪಕರ ಸಭೆ

ತಾ. ೫ರಂದು ಎಮ್ಮಾರ್ಳು ಬೋ. ಹಾ. ಎ. ಶಾಲೆಯಲ್ಲಿ ಈ ಕೇಂದ್ರದ ಮೂಲಪಾಠ ಶಾಲಾಧ್ಯಾಪಕರ ಸಂಘದ ಪ್ರಥಮ ವಾರ್ಷಿಕೋತ್ಸವ ಸಮಾರಂಭವು ಉಡುಪಿ ರೇಂಜಿನ ಶಾಲೆಗಳ ಡಿ. ಇ. ರಾ. ಸಾ. ಶ್ರೀ ಪಿ. ವಿ. ರಮಣರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾ ಸಂಬಂಧ ವಸ್ತು ಪ್ರದರ್ಶನ, ವಾರ್ಷಿಕ ವರದಿ ವಾಚನ, ಮಕ್ಕಳ ವಿವಿಧ ವಿನೋದಾವಳಿ, ಉಪಹಾರ ಕೂಟ ಮುಂತಾದ ಕಾರ್ಯಕ್ರಮಗಳಿದ್ದವು.

ಕಾರ್ಕಳ

ತರಬೇತಿ ಭಾಷಣ

ತಾ. ೨೫ರಿಂದ ೫ ದಿನಗಳ ತನಕ ಇಲ್ಲಿ ನಡೆದ ಹಿಂದುಸ್ಥಾನ ಸ್ಕೌಟಿಂಗ್ ಪ್ಲೋಕಲೀಡರುಗಳ ತರಬೇತಿ ಕೇಂದ್ರದಲ್ಲಿ ಶ್ರೀಗಳಾದ ರಮಾಬಾಯಿ ಮಾಧವರಾವ್, ಎ. ಸಾವಿತ್ರಿಬಾಯಿ, ಯಂ. ಯಸ್. ಮಾಧವರಾವ್ ಮತ್ತು ಬಿ. ಯಂ. ಬಾಳಿಗರವರು ಬೇರೆ ಬೇರೆ ಸ್ಕೌಟ ವಿಷಯಗಳ ಕುರಿತಾಗಿಯೂ, ಶ್ರೀಗಳಾದ ಯು. ಕೃಷ್ಣರಾವ್, ಕೆ. ಶ್ರೀನಿವಾಸ ಹೆಗ್ಡೆ ಮತ್ತು ಕಟಪಾಡಿ ಶ್ರೀನಿವಾಸ ಶೆಣೈಗಳು ಕ್ರಮವಾಗಿ ಮಕ್ಕಳ ಮನೋವಿಜ್ಞಾನ, ಜೇನುನೊಣ ಸಾಕುವದು ಮತ್ತು ಮಕ್ಕಳ ಕತೆಗಳ ವಿಷಯವಾಗಿಯೂ ಭಾಷಣಗಳನ್ನು ಕೊಟ್ಟು ತರಬೇತಿ ನಡೆಸಿರುವರು.

ಚರ್ಚಿಲ್ಲರು ಅಮೇರಿಕಕ್ಕೆ ತೆರಳಿದರೆ?

ಇರಾಕ್-ಬ್ರಿಟನುಗಳೊಳಗೆ ಒಪ್ಪಂದದ ಯತ್ನ
ಅಡಿಸ್ ಅಬಾಬದಲ್ಲಿ ಅಬಿಸೀನಿಯ ಚಕ್ರವರ್ತಿ
ಚುಂಕಿಂಗಿಗೆ ಪುನಃ ಧಾಳಿಯಾಗಿದೆ

ಯುರೋಪಿನ ಯುದ್ಧವು ಪ್ರಚಂಡತೆಗೆ ಏರುತ್ತಾ ಇದೆ. ಇರಾಕು ಬ್ರಿಟನುಗಳೊಳಗೆ ಹೋರಾಟವಾಗುತ್ತಿದೆ. ಅಬಿಸೀನಿಯದಲ್ಲಿ ಇಟಲಿಯನರು ಸೋತುಹೋದರು. ಅಬಿಸೀನಿಯ ಚಕ್ರವರ್ತಿ ಅಡಿಸ್ ಅಬಾಬಕ್ಕೆ ಬಂದಿದ್ದಾನೆ. ಚರ್ಚಿಲ್ಲರು ಅಮೇರಿಕಕ್ಕೆ ತೆರಳಿದ್ದಾರಂತೆ. ಬ್ರಿಟಿಷ ಮಂತ್ರಿ ಮಂಡಳದಲ್ಲಿ ಬದಲಾವಣೆಯಾಗಿದೆ. ಅಮೇರಿಕವೂ ಯುದ್ಧಕ್ಕೆ ಸೇರುವುದೆಂದು ಸುದ್ದಿ. ಜಪಾನು ಅಮೇರಿಕದೊಡನೆ ಶಾಂತಿಯಿಂದಿರುವುದೆಂದು ಮತ್ಸೂಕರು ಹೇಳುತ್ತಾರೆ. ಚುಂಕಿಂಗಿಗೆ ತಿರುಗಿ ಜಪಾನು ಧಾಳಿಮಾಡಿದೆ. ಇರಾಕು ಬ್ರಿಟನುಗಳೊಳಗೆ ಟರ್ಕಿ ಒಪ್ಪಂದದ ಮಾತುಕತೆ ಮಾಡುವುದೆಂದು ತಿಳಿದಿದೆ.

ಇರಾಕ್ ಬ್ರಿಟನುಗಳ ನಡುವೆ ಒಪ್ಪಂದ
ಟರ್ಕಿ ಮಧ್ಯಸ್ಥಿಕೆ

ಟರ್ಕಿ ಸರಕಾರದವರು, ಇರಾಕ ಮತ್ತು ಬ್ರಿಟಿಷ್ ಸರಕಾರಗಳ ನಡುವೆ ಒಪ್ಪಂದದ ಮಾತುಕತೆಗಳನ್ನು ನಡೆಸಲು ಮುಂದೆ ಬಂದಿರುವರೆಂದು ತಿಳಿದಿದೆ.

ಇರಾಕ್ ಸೇನೆಯ ಬಹುಭಾಗ ನಾಶವಾಗಿದೆ

ಇರಾಕ್ ಸೇನೆಯ ಬಹುಭಾಗ ನಾಶವಾಗಿದೆಯೆಂದು ಪ್ರಕಟಣೆಯಿಂದ ತಿಳಿಯುತ್ತದೆ. ಬ್ರಿಟಿಷ್ ವೈಮಾನಿಕ ಸೈನ್ಯವು ಜೋರಿನಿಂದ ಕೆಲಸ ಮಾಡುತ್ತಿದೆ.

ಇರಾಕಿನ ಬಗ್ಗೆ ಬ್ರಿಟನಿನ ಚಿಂತೆ
ಒಪ್ಪಂದದ ಕರಾರುಗಳು ಪಾಲಿಸಲ್ಪಡಬೇಕು

ಇರಾಕಿನಲ್ಲಿರುವ ಸದ್ಯದ ಪರಿಸ್ಥಿತಿಯಿಂದ ಲಂಡನಿನಲ್ಲಿ ವಿಶೇಷ ಚಿಂತೆಗೆ ಕಾರಣವುಂಟಾಗಿದೆ. ಒಪ್ಪಂದದಂತೆ ಎಲ್ಲವೂ ಶಾಂತರೀತಿಯಿಂದ ಸಾಗಿದರೆ ಸಾಕೆಂದು ಬ್ರಿಟನು ಹೇಳುತ್ತಿದೆಯಂತೆ.

ಪ್ಯಾರಿಸಿಗೆ ಡಾರ್ಲನರ ಪ್ರಯಾಣ

ಡಾರ್ಲನರು ಪ್ಯಾರಿಸಿಗೆ ಪ್ರಯಾಣ ಬೆಳೆಸಿರುವರು. ಇದರಿಂದ ಫ್ರೆಂಚ್ ಜರ್ಮನ್ ಒಪ್ಪಂದದ ಹಾದಿಯು ಸುಗಮವಾಗುವುದೆಂದು ಊಹಿಸಲಾಗಿದೆ.

ಐದು ವರ್ಷಗಳ ತರುವಾಯ ಅಡಿಸ್ ಅಬಾಬಕ್ಕೆ ನೇಗಸರು

ಅಬಿಸೀನಿಯದ ಚಕ್ರವರ್ತಿ ನೇಗಸರು ತಿಂಗಳು ಈಗ ಅಡಿಸ್ ಅಬಾಬವನ್ನು ಪ್ರವೇಶಿಸಿರುವರೆಂದು ತಿಳಿದಿದೆ. ನಾಗರಿಕರು ಅವರನ್ನು ಅಪೂರ್ವ ವೈಭವದಿಂದ ಸ್ವಾಗತಿಸಿದರು.

೧೯೩೫ ಅಕ್ಟೋಬರ್ ೩ನೇ ತಾರೀಕಿನ ದಿನ ಇಟಲಿ ಅಬಿಸೀನಿಯಕ್ಕೆ ಧಾಳಿ ಮಾಡಿತು. ೧೯೩೬ ಮೇ ೯ರಂದು ಇಟಲಿ ಅರಸನು ಅಬಿಸೀನಿಯದ ದೊರೆಯಾದನು. ಆದರೆ ಇಂದು ಅದು ತಿರುಗಿ ಅವರ ಕೈವಶವಾಯಿತು.

ಮತ್ಸುವೋಕರು ಅಮೇರಿಕಕ್ಕೆ ಹೋಗುವರೆ?

ಜಪಾನಿನ ವಿದೇಶಾಂಗ ಮಂತ್ರಿ ಮತ್ಸುವೋಕರು ಅಮೇರಿಕಕ್ಕೆ ತೆರಳುವ ಸುದ್ದಿ ಬಂದಿದೆ.

ಸ್ಕಾಟ್ ಲೆಂಡಿನ ಮೇಲೆ ಧಾಳಿ

ಜರ್ಮನ್ ವಿಮಾನಗಳು ಸ್ಕಾಟ್ ಲೆಂಡಿನ ಮೇಲೆ ಧಾಳಿಮಾಡಿದವೆಂದು ತಿಳಿದಿದೆ.

ಅಮೆರಿಕ ಯುದ್ಧದಲ್ಲಿ ಭಾಗವಹಿಸುವುದು

ಅಮೇರಿಕವು ಇಂದಿನ ಯುದ್ಧದಲ್ಲಿ ಭಾಗವಹಿಸುವುದೆಂದು ಜನರಲ್ ಸ್ಮಟ್ಸರು ಹೇಳಿದರು.

ಚುಂಕಿಂಗಿನ ಮೇಲೆ ಧಾಳಿ

ಚುಂಕಿಂಗಿನ ಮೇಲೆ ಈ ವರ್ಷದ ಮೊದಲನೆಯ ಧಾಳಿ ಈ ವಾರ ನಡೆಯಿತು. ೮೦ ಜಪಾನ್ ವಿಮಾನಗಳು ಪಟ್ಟಣದ ಪಶ್ಚಿಮ ಉಪನಗರದ ಮೇಲೆ ಬಂದು ಬಾಂಬುಗಳ ಮಳೆಗರೆದವು. ಚೀನ ವಿಮಾನ ನಿರೋಧಕ ದಳದವರು ಗುಂಡುಹಾರಿಸಿ ಅವುಗಳನ್ನು ಹಿಂದಕ್ಕಟ್ಟಿದರು.

ಚರ್ಚಿಲ್ಲರು ಅಮೇರಿಕಕ್ಕೆ

ಚರ್ಚಿಲ್ಲರು ಇಷ್ಟರಲ್ಲಿಯೇ ಅಮೇರಿಕಕ್ಕೆ ತೆರಳಿರಬಹುದೆಂದು ತಿಳಿದುಬರುತ್ತದೆ.

ಯುದ್ಧಮಾಡಲು ಅಮೇರಿಕನರು ಸಿದ್ಧರು

ಉಡ್ರೋವಿಲ್ಸನರ ಸ್ಮಾರಕ ಸಮಾರಂಭದ ದಿನ ಭಾಷಣಮಾಡುತ್ತಾ ರೂಸ್‌ವೆಲ್ಟರು, ಪ್ರಜಾಪ್ರಭುತ್ವದ ಸಲುವಾಗಿ ಅಮೇರಿಕನರು ಅನೇಕ ಸಲ ಹೋರಾಡಿದ್ದಾರೆ; ಮುಂದಾದರೂ ಹೋರಾಡುವರು, ಎಂದು ಹೇಳಿದರು.

ಜಪಾನು ಮತ್ತು ಅಮೇರಿಕಾ

ಅಮೇರಿಕದೊಡನೆ ಸ್ನೇಹದಿಂದಿರಬೇಕೆಂದು ಜಪಾನಿಗೆ ಇನ್ನೂ ಮನಸ್ಸಿದೆಯೆಂದು ಜಪಾನು ವಿದೇಶ ಮಂತ್ರಿ ಮತ್ಸುವೋಕನು ಹೇಳಿದನು.

ಇಂಗ್ಲೆಂಡಿನಲ್ಲಿ ಜರ್ಮನ್ ವಿಮಾನಗಳ ಹಾವಳಿ

ಇಂಗ್ಲೆಂಡ್, ಸ್ಕಾಟ್ ಲೆಂಡ್ ಮತ್ತು ವೇಲ್ಸ್‌ಗಳ ಮೇಲೆ ವೈರಿವಿಮಾನಗಳ ಹಾವಳಿ ಜೋರಾಗಿದೆ. ಬಾಂಬುಗಳು ವಿಶೇಷ ಬಿದ್ದವು. ದಕ್ಷಿಣ ಮತ್ತು ಈಶಾನ್ಯ ಕರಾವಳಿಯ ಹಲವು ಪಟ್ಟಣಗಳ ಮೇಲೆ ಬಾಂಬು ಬಿದ್ದಿದೆ.

ಇರಾಕಿನ ಸೈನ್ಯ ಹಿಂದೂಡಲ್ಪಟ್ಟಿತು
ಬಸ್ರಾ—ಕಾಳಗ ವೈಮಾನಿಕ ಧಾಳಿ

ಇರಾಕಿನಲ್ಲಿ ಕಾಳಗವಾಗುತ್ತಿದೆ. ಬಸ್ರಾದಲ್ಲಿದ್ದ ಇರಾಕೀ ಸೈನ್ಯಗಳನ್ನು ಬ್ರಿಟಿಷ್ ಸೈನ್ಯಗಳು ಹಿಂದಕ್ಕೋಡಿಸಿದವು. ಆರ್. ಎ. ಎಫ್. ವಿಮಾನಗಳು ಇರಾಕಿ ಸೈನ್ಯಗಳ ಮೇಲೆ ವಿಮಾನಗೃಹಗಳ ಮೇಲೆ ಭಯಂಕರ ಧಾಳಿ ಮಾಡಿದವು.

ತೊಬ್ರುಕ ಆಸ್ಟ್ರಿಯನರ ವಶದಲ್ಲಿದೆ

ಆಸ್ಟ್ರೇಲಿಯನರು ತೋಬ್ರುಕನ್ನು ಇನ್ನೂ ಭದ್ರವಾಗಿ ಹಿಡಕೊಂಡಿರುವರು.

ವಾಲ್ಡಿಯಾ ವಶಪಡಿಸಿಕೊಂಡರು

ಸಾಮ್ರಾಜ್ಯ ದಲದವರು ಅಸ್ಮಾರಾ ಮಾರ್ಗದಲ್ಲಿ ಡೆಸ್ಸಿಯಿಂದ ಉತ್ತರಕ್ಕೆ ೫೦ ಮೈಲಿನ ದೂರದಲ್ಲಿರುವ ವಾಲ್ಡಿಯಾ ಎಂಬುದನ್ನು ಆಕ್ರಮಿಸಿರುವರು.

ಈಜಿಪ್ತಿಗೆ ದಕ್ಷಿಣ ಆಫ್ರಿಕದ ಸೈನ್ಯ

ಬ್ರಿಟಿಷ ಸರಕಾರದ ಹೇಳಿಕೆಯಂತೆ ಅಬಿಸೀನಿಯದಲ್ಲಿರುವ ದಕ್ಷಿಣ ಆಫ್ರಿಕನ್ ಸೈನಿಕರಲ್ಲಿ ಕೆಲವರನ್ನು ಈಗಾಗಲೇ ಈಜಿಪ್ತಿಗೆ ಕಳುಹಿಸಲಾಗಿದೆಯೆಂದು ತಿಳಿಯುತ್ತದೆ.

ಅಮೇರಿಕ ಯುದ್ಧಕ್ಕೆ ಸೇರಬೇಕು
ರಿಪಬ್ಲಿಕ್ ಪಕ್ಷದ ಹೇಳಿಕೆ

"ಅಮೇರಿಕವು ಯುದ್ಧಕ್ಕೆ ಸೇರಬೇಕೆಂಬುದಾಗಿ ಚಾರ್ಲ್ಸ್ ಮೋರನ್ ಸನ್ ಎಂಬ ಪ್ರಮುಖ ರಿಪಬ್ಲಿಕ್ ಪತ್ರಿಕೆ ಬರೆದಿದೆ. "ಬ್ರಿಟನು ಏಕಾಂಗಿಯಾಗಿ ನಿಲ್ಲಕೂಡದು" ಎಂದು ಅದು ಹೇಳುತ್ತದೆ.

ರಶ್ಯಾ-ಜರ್ಮನಿ ಸಂಬಂಧ ಕೆಡುತ್ತಿದೆ

ಯುಗಸ್ಲಾವಿಯದ ಮೇಲೆ ಜರ್ಮನರು ನಡೆಸಿದ ದಂಡಯಾತ್ರೆಯನ್ನು ಖಂಡಿಸಿ ಸ್ವೀಡನಿನ ಕಮ್ಯುನಿಸ್ಟ್ ಪಕ್ಷದ ಯುವಕನೊಬ್ಬನು ಒಂದು ಹೇಳಿಕೆ ಕೊಡುತ್ತಾ, ಇದರಿಂದ ರಶ್ಯಾ ಜರ್ಮನಿಗಳ ಸಂಬಂಧ ಕೆಡುವ ಸೂಚನೆ ಕಂಡುಬರುತ್ತದೆಯೆಂದಿರುವನು.

ಬ್ರಿಟನು-ಇರಾಕುಗಳಲ್ಲಿ ವೈಮಾನಿಕ ಯುದ್ಧ
ಎಣ್ಣೆ ಬಾವಿಗಳು ಇರಾಕಿಗಳ ಸ್ವಾಧೀನ

ಬ್ರಿಟನು ಇರಾಕಿಗಳೊಳಗೆ ಘನಘೋರ ಕಾಳಗವಾಯಿತು. ಇರಾಕಿ ಜನರು ಮೊಸಲ ಎಣ್ಣೆಯ ಕ್ಷೇತ್ರಗಳಲ್ಲಿ...

ಬಂದು ತುಂಬ ಹತ್ತಿರುವರೆಂದು ಅಂಕಾರಾ ರೇಡಿಯೋದಿಂದ ಗೊತ್ತಾಗಿದೆ.

ಯುಗಸ್ಲಾವಿಯವನ್ನು ಹರಿದು ಹಂಚಿಕೊಂಡರು

ಬಲ್ಗೇರಿಯಾ, ಹಂಗೇರಿ ಮತ್ತು ಇಟಲಿಗಳು ಯುಗಸ್ಲಾವಿಯವನ್ನು ಹರಿದು ಹಂಚಿಕೊಂಡಿವೆ.

ನೀವು ಚಿಲ್ಲರೆ ಅಂಗಡಿಗಾರರಾಗಿರಿ, ಇಲ್ಲವೇ ಕಾರ್ಖಾನೆ ಕೆಲಸಗಾರರೇ ಆಗಿರಿ, ಗುಮಾಸ್ತರೋ ಕೆಲಸಗಾರರೋ, ಆಗಿದ್ದರೆ ಮಲಬದ್ಧತೆ ಅಜೀರ್ಣಗಳಾಗದಂತೆ ನೀವು ಅವಶ್ಯ ನೋಡಿಕೊಳ್ಳಬೇಕು. ಅಂತಹ ರೋಗಗಳಿಂದ ನಿಮ್ಮ ಆರೋಗ್ಯವು ಕೂಡಲೇ ಕೆಟ್ಟುಹೋಗುವುದು. ನೀವು ದುರ್ಬಲರಾಗುವಿರಿ, ಕಾರ್ಯಶಕ್ತಿಯನ್ನು ಕಳೆಕೊಳ್ಳುವಿರಿ. ನಿಮ್ಮ ಮೆದುಳು ಬಲಹೀನವಾಗುವುದು. ದಿನನಿತ್ಯ ತಂಪುಕಾರಕವಾದ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳಿ. ನಿಮ್ಮ ಶರೀರದೊಳಗಡೆಯನ್ನೂ ನಿರ್ಮಲವಾಗಿರಿಸಿ, ಅಲ್ಲದೇ ನಿಮ್ಮ ಶರೀರ ಮತ್ತು ಮೆದುಳುಗಳನ್ನು ಚುರುಕಾಗಿ ಮಾಡುವುದು. ಆಂಡ್ರೂಸ್ ಉತ್ತಮ ಸ್ವಚ್ಛತೆಯನ್ನೊದಗಿಸುತ್ತದೆ.

ಅಂತರಂಗ ನೈರ್ಮಲ್ಯಕ್ಕೆ ದಿನನಿತ್ಯವು ಆಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ.

ಆರೋಗ್ಯಕರ, ಶಕ್ತಿಕರವಾದ ಪಾನೀಯವಿದು.

ANDREWS
LIVER SALT

ಹೊಟ್ಟೆನೋವು ... ತಂಪುಕೊಡುತ್ತ ... ಆನಂದವನ್ನು ... ಟುಮಾಡುತ್ತದೆ ... ಶಕ್ತಿಕೊಡುತ್ತದೆ ... ಸಣ್ಣ ಸೈಜಿಗೆ 11 ... ಆಣೆ. ದೊಡ್ಡ ... ಸೈಜಿಗೆ 1—4—0

ರೂಸ್‌ವೆಲ್ಟರ ಪುತ್ರನು ::: ::: ::: ಕಲ್ಕತ್ತೆಕ್ಕೆ ಬಂದನು.

ಸಪ್ರುಗಳ ಸಾಹಸವು ವ್ಯರ್ಥವಾಯಿತೆ?

ವೈಸರಾಯರು ಹೊಸತೊಂದು ಘೋಷಣೆ ಮಾಡುವರೆ?

ಸಪ್ರು ಗಾಂಧಿ ಪತ್ರವ್ಯವಹಾರ ಪ್ರಕಟವಾಗಿದೆ. ಜಿನ್ನರ ಹಟಮಾರಿತನದಿಂದ ಗಾಂಧಿ ಜಿನ್ನರು ಹಿಂದೂ ಮುಸ್ಲಿಂ ಐಕ್ಯವಮಾತುಕತೆಮಾಡಲು ಆಗಲಿಲ್ಲ.. ಕರ್ನಾಟಕದಲ್ಲಿ ಅಮೆರಿ ಭಾಷಣ ನಿಷೇಧ ದಿನಾಚರಣೆಎಲ್ಲೆಡೆ ಸ್ಥಳಗಳಲ್ಲಿಯೂ ಆಯಿತು. ವೈಸರಾಯರು ಬೇಗನೇ ಭಾರತದ ರಾಜಕೀಯದ ಕುರಿತು ಒಂದು ಪ್ರಕಟಣೆಹೊರಡಿಸುವರೆಂದು ತಿಳಿದಿದೆ ರೂಸ್‌ವೆಲ್ಟರ ಮಗನು ಕಲ್ಕತ್ತೆಗೆ ಬಂದಿದ್ದನು. ಮುಂಬಯಿ ಮೊದಲಾದ ಕಡೆಗಳಲ್ಲಿ ದಂಗೆಯು ತುಸು ಶಾಂತವಾಗಿದೆ. ಹಿಂಡಲ್ಗಿ ಜೈಲಿನಿಂದ ಕೆಲವು ಸತ್ಯಾಗ್ರಹಿಗಳನ್ನು ಯರವಾಡಕ್ಕೆ ಸ್ಥಳಾಂತರಿಸಿರುವರು.

ವೈಸರಾಯರ ಆಕಾಶವಾಣಿ ಮುಖಂಡರೊಡನೆ ಮಾತುಕತೆ

ವೈಸರಾಯರು ಭಾರತದ ವಿಷಯವಾಗಿ ಒಂದು ಆಕಾಶವಾಣಿ ಭಾಷಣ ಮಾಡುವರೆಂದು ತಿಳಿದಿದೆ ಅಮೆರಿಯವರ ಭಾಷಣದಿಂದ ಹಿಂದೀಯರಿಗೆ ಮಾತ್ರವಲ್ಲ ಬ್ರಿಟಿಷರಿಗೂ ಅಸಮಾಧಾನವಾಗಿರುವುದೇ ಇದಕ್ಕೆ ಕಾರಣವಂತೆ

ಸಪ್ರುಗಳು ವೈಸರಾಯರನ್ನು ಭೇಟಿಯಾದಾಗ ಅವರಲ್ಲಿ ಸೌಹಾರ್ದದ ಮಾತುಕತೆ ನಡೆಯಿತೆಂದೂ ಈ ಕುರಿತು ಇನ್ನೂ ಚರ್ಚೆಯಾಗಬಹುದೆಂದೂ ತಿಳಿದಿದೆ. ವೈಸರಾಯರು ಮಂತ್ರಿಗಳ ಸರಿಸಂಖ್ಯೆಯನ್ನು ಕೂಡಿಸುವ ಯತ್ನಮಾಡುವರೇ,ಎಂದೂ ಊಹಿಸಲಾಗಿದೆ.

ಸತ್ಯಾಗ್ರಹದ ಬಗ್ಗೆಯೂ ಸರಕಾರದವರು ಹೊಸ ಧೋರಣವಹಿಸಿ ಕಾಂಗ್ರೆಸಿನೊಡನೆ ಒಪ್ಪಂದಕ್ಕೆ ಬರಬಹುದೆಂದು ಊಹನೆಯೆದ್ದಿದೆ.

ಕಲ್ಕತ್ತೆಯಲ್ಲಿ ರೂಸ್‌ವೆಲ್ಟರ ಮಗ

ರೂಸ್‌ವೆಲ್ಟರ ಮಗ ಜೇಮ್ಸ್ ರೂಸ್‌ವೆಲ್ಟರು ಚೀನದಿಂದ ಮರಳಿದವರು ಕಲ್ಕತ್ತೆಕ್ಕೆ ಬಂದರು. ಚೀನರ ಸ್ವಾತಂತ್ರ್ಯಪ್ರೇಮವನ್ನು ಕೊಂಡಾಡಿ ಅಮೇರಿಕನಿಂದ ಈಗ ಸಾಕಷ್ಟು ಸಹಾಯವು ಚೀನೀಯರಿಗೆ ಸಿಗುವುದಿಲ್ಲವಾದರೂ ಮುಂದೆ ಸಿಗಬಹುದೆಂದು ನುಡಿದರು.

ಅವರು ಅಲ್ಲಿಂದ ಕೈರೋಗೆ ತೆರಳುವರು.

ಮೈಸೂರು ಶಾಸನಸಭೆಯ ಕಾಂಗ್ರೆಸ್ ಸದಸ್ಯರು

ಮೈಸೂರು ಶಾಸನಸಭೆಯ ಕಾಂಗ್ರೆಸ್ ಸದಸ್ಯರ ಸಭೆಯು ಬೆಂಗಳೂರಲ್ಲಿ ಸೇರಿ, ಹಿಂದಿನ ಚುನಾವಣೆಯಲ್ಲಿ ಸರಕಾರದವರು ವಹಿಸಿದ ಧೋರಣೆಯನ್ನು ಖಂಡಿಸಿ ಕಾಂಗ್ರೆಸ್ ಸಭಾಸದಸ್ಯರು ಅವರವರ ಕ್ಷೇತ್ರಗಳಲ್ಲಿ ವಿಧಾಯಕ ಕಾರ್ಯಕ್ರಮ ಮಾಡಬೇಕೆಂದು ಸೂಚಿಸಿ ಠರಾವುಗಳಾದವು

೧೦೦ ಸತ್ಯಾಗ್ರಹಿಗಳ ಸ್ಥಳಾಂತರ ಹಿಂಡಲ್ಗಿಯಿಂದ ಯರವಾಡಕ್ಕೆ

ಹಿಂಡಲ್ಗಿ ಜೈಲಿನಿಂದ ೧೦೦ ಸತ್ಯಾಗ್ರಹಿಗಳನ್ನು ಯೆರವಾಡ ಜೈಲಿಗೆ ಸ್ಥಳಾಂತರಿಸಿರುವರೆಂದು ತಿಳಿದು ಬರುತ್ತದೆ.

ಹಿಂದೂ ಮುಸ್ಲಿಂ ಐಕ್ಯಪ್ರಯತ್ನ ಗಾಂಧಿ–ಸಪ್ರು ಪತ್ರ ವ್ಯವಹಾರ

ಹಿಂದೂ ಮುಸ್ಲಿಂ ಐಕ್ಯದ ಬಗ್ಗೆ ಸಪ್ರುಗಳು ಗಾಂಧಿ ಜಿನ್ನರನ್ನು ಬೇಟಿ ಮಾಡಿಸುವ ಯತ್ನ ಗೈದರು ಆದರೆ ಜಿನ್ನರು ಗಾಂಧೀಜಿ ಹಿಂದೂ ಪ್ರತಿನಿಧಿಯಾಗಿ ಬಂದರೆ ಮಾತನಾಡಬಹುದೆಂದು ಸೂಚಿಸಿದರು ಅದಕ್ಕೆ ಗಾಂಧಿಜಿ ಒಪ್ಪಲಿಲ್ಲ ಹೀಗೆ ಆ ಮಾತುಕತೆ ನಿಂತಿತು.

ಅಮೆರಿ ಭಾಷಣ ನಿಷೇಧ

ಅಮೇರಿಯವರ ಭಾಷಣ ನಿಷೇಧ ಸಭೆಗಳು ಅಖಿಲ ಕರ್ನಾಟಕದಲ್ಲಿ ಎಲ್ಲಾ ಕಡೆಗಳಲ್ಲಿಯೂ ಜರಗಿವೆ.

ಅಹಮ್ಮದಾಬಾದ್ ದಂಗೆಯಲ್ಲಿ ಆಕ ಜನರ ಮರಣ

ಅಹಮ್ಮದಾಬಾದ್ ದಂಗೆಯಲ್ಲಿ ೮೩ ಜನರು ಮರಣ ಹೊಂದಿರುವರೆಂದು ಅನೇಕ ಲಕ್ಷ ಬೆಲೆಯ ಆಸ್ತಿ ಹಾಳು ಆಗಿರುವುದೆಂದು ತಿಳಿದಿದೆ

ಮುಂಬಯಿ ಪರಿಸ್ಥಿತಿ ಸುಧಾರಿಸಿದೆ

ಮುಂಬಯಿ ದಂಗೆಯ ಪರಿಸ್ಥಿತಿ ಸುಧಾರಿಸಿದೆ. ಕರ್ಫ್ಯೂ ಆರ್ಡರ್ ಅವಧಿ ಮುಂದುವರಿಸಿದೆ. ಸೈನಿಕರನ್ನು ಹಿಂತೆಗೆದುಕೊಳ್ಳಲಾಗಿದೆ.

ಜಿಲ್ಲಾ ಸಮಾಚಾರ ಎಡನೀರು

ಎಡನೀರು ಮಠದ ಶ್ರೀಪಾದಂಗಳವರು ನೂತನವಾಗಿ ಕಟ್ಟಿಸಿದ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. ೩ರಂದು ಉಡುಪಿ ಶ್ರೀ ಫಲಿಮಾರು ಮಠದ ಶ್ರೀ ಪಾದಂಗಳವರ ದಿವ್ಯ ಹಸ್ತದಿಂದ ನೆರವೇರಿತು ಆ ದಿನದ ಸಮಾರಂಭದ ಅಧ್ಯಕ್ಷತೆಯನ್ನು ಜಿ. ಬೋ. ಅಧ್ಯಕ್ಷರಾದ ಶ್ರೀ. ವಿಠ್ಠಲಶೆಟ್ಟರು ವಹಿಸಿದ್ದರು. ಊರ ಪರಊರ ಅನೇಕ ಮಹನೀಯರು ಬಂದಿದ್ದರು.

ಜಿಲ್ಲಾ ಬೋರ್ಡ್ ಸಭೆ

ತಾ. ೬ರಂದು ಎಡನೀರಿನಲ್ಲಿ ಜಿಲ್ಲಾ ಬೋರ್ಡ್ ಸಭೆಯು ಜರಗಿತು ಎಡನೀರು ಮಠದ ಪರವಾಗಿ ಸರ್ವರಿಗೂ ಸಂಭಾವನೆ ಸ್ವೀಕಾರವಿದ್ದಿತು

ನೋಟೀಸು

ಉಪ್ಪಿನ ಕಸ್ಬೆಯಲ್ಲಿರುವ ಮುಲ್ಕಿ ಶ್ರೀನಿವಾಸ ಕುಡುವರ ಮಗ ಗಣಪತಿಕುಡುವನು ಈ ಮೂಲಕವೆಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ ನಾನು, ನನ್ನ ತಮ್ಮನಾಮನಕುಡುವ ಮತ್ತು ನಮ್ಮ ತಂದೆ ಶ್ರೀನಿವಾಸ ಕುಡುವರು ಕೂಡಾ ಒಂದೇ ಅವಿಭಕ್ತ ಕುಟುಂಬದವರಾಗಿದ್ದೇವೆ. ನಮ್ಮ ಕುಟುಂಬಕ್ಕೆ ಸ್ಥಿರಾಸ್ತಿ, ಚರಸೊತ್ತುಗಳು ವ್ಯಾಪಾರದ ವಹಿವಾಟು, ಹೊರಗಿನಿಂದ ಬರತಕ್ಕ ಹಣಗಳು ಕೂಡಾ ಇರುತ್ತವೆ ಸ್ಥಿರ ಆಸ್ತಿಗಳು ಎಲ್ಲ ನಮ್ಮ ತಂದೆಯವರ ಹೆಸರು ಪಟ್ಟೆಯಲ್ಲಿರುತ್ತವೆ. ನಮ್ಮ ತಂದೆಯವರ ಹೆಸರಿನಲ್ಲಿರುವ ಸದ್ರಿ ಆಸ್ತಿಗಳಲ್ಲಾಗಲಿ ಈ ಕುಟುಂಬದ ಇತರ ಸೊತ್ತುಗಳಲ್ಲಾಗಲೀ, ವ್ಯಾಪಾರ ವಹಿವಾಟು, ಹೊರಗಿನಿಂದ ಬರತಕ್ಕ ಹಣಗಳಲ್ಲಾಗಲಿ, ಸದ್ರಿ ನಮ್ಮ ತಂದೆಯವರಿಗೆ ಏನೊಂದೂ ಸ್ವಂತ (Exclusive) ಹಕ್ಕು ವಹಿವಾಟು ಇರುವುದಿಲ್ಲ. ಅವುಗಳಿಗೆಲ್ಲಾ ನಮ್ಮ ಅವಿಭಕ್ತ ಕುಟುಂಬದ ಸಂಪೂರ್ಣ ಹಕ್ಕಿರುತ್ತದೆ.

ನಮ್ಮ ಕುಟುಂಬಕ್ಕೆ ಯಾವುದೊಂದೂ ಸಾಲವಿಲ್ಲ, ಸಾಲ ಮಾಡುವ ಅಗತ್ಯ ವ ಗರ್ಜು ಇರುವುದಿಲ್ಲ ನಮ್ಮ ತಂದೆಯವರ ಹೆಸರಲ್ಲಿರುವ ಎಲ್ಲಾ ಸ್ಥಿರಾಸ್ತಿಗಳು ಕುಟುಂಬದ ಜಾಯಿಂಟ್ ಆಗಿದ್ದು ಅವನ್ನು ಯಾವ ವಿಧದಲ್ಲೂ ಪರಾಧೀನ ಮಾಡುವ ಆವಶ್ಯ ವ ಗರ್ಜು ಇಲ್ಲ. ಯಾವ ತರದ ಪರಾಧೀನಕ್ಕೂ ಕುಟುಂಬದ ಇತರ ಮೆಂಬರರ ಒಪ್ಪಿಗೆಯಿಲ್ಲ. ಮತ್ತು ಯಾವ ರೀತಿ ಪರಾಧೀನ ಮಾಡಲಿಕ್ಕೂ ನಮ್ಮ ತಂದೆಯವರಿಗೆ ಹಕ್ಕಾಗಲೀ ಶಕ್ತಿಯಾಗಲಿ ಇಲ್ಲ.

ನಮ್ಮ ತಂದೆಯವರು ಈಗ ೭೫ ವರ್ಷ ಪ್ರಾಯದವರಾಗಿದ್ದು ಮನಸ್ಸಿನ ಸರಿಗಲಿಕೆಯಿಂದ ಬೇರೆಯವರಪ್ರೇರಣೆಗೆ ಸುಲಭವಾಗಿ ಒಳಗಾಗುವ ಸ್ಥಿತಿಯಲ್ಲಿರುತ್ತಾರೆ ಕುಟುಂಬದ ಆವರ ಸ್ವಂತ ವ್ಯಕ್ತಿಯಿಂದ ಕೂಡಾ ವಿವೇಚನಾ ಶಕ್ತಿಯಿರುವುದಿಲ್ಲ ಹೀಗಿರುವಲ್ಲಿ ಕುಟುಂಬದ ಆಸ್ತಿಯನ್ನು ಸುಳ್ಳುವಲ್ಲಿ ಎತ್ತಿ ಹಾಕಿ ದುರ್ಲಾಭ ಪಡೆಯುವ ಕೆಟ್ಟ ಇರಾದೆಯಿಂದ ನಮ್ಮ ತಂದೆಯವರ ಹೆಸರಲ್ಲಿ ಇರುವ ಆಸ್ತಿಯನ್ನು ಅವರು ಪರಾಧೀನ ಮಾಡುವಂತೆ ಬೇರೆಯವರು ಪ್ರೇರೇಪಿಸುತ್ತಾರೆಂತ ತಿಳಿಯಬರುತ್ತದೆ. ನಮ್ಮ ತಂದೆಯವರ ಹೆಸರಲ್ಲಿ ಇರುವ ಆಸ್ತಿ ಬಾಬ್ತು ಅವರು ಬರೆಕೊಡುವ ಯಾವತರ ಪತ್ರಗಳು ವ ದಸ್ತಾವೇಜುಗಳು, ಸದ್ರಿ ಆಸ್ತಿಯ ಮೇಲಾಗಲಿ, ಕುಟುಂಬದ ಮೇಲಾಗಲಿ ಏನೂ ನಡೆಯದೂ ಮಾನ್ಯತಕ್ಕದ್ದಲ್ಲವೆಂತ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ

ಮಂಗಳೂರು, ೬-೫-1941 } ಮುಲ್ಕಿ ಗಣಪತಿ ಶ್ರೀನಿವಾಸ ಕುಡ್ವ.

ಸತ್ಯಾಗ್ರಹ

ತಾ. ೪ರಂದು ಶ್ರೀ. ಕಂಪಾರ ರಾಮಣ್ಣ ಶೆಟ್ಟರು ವೆಂಕಟ್ರಮಣ ದೇವಸ್ಥಾನದ ಬಳಿ ಸತ್ಯಾಗ್ರಹ ಮಾಡಿದರು ಅವರು ಬಂಧಿಸಲ್ಪಟ್ಟಿಲ್ಲ

ಕೇರಳದಿಂದ ನಾಲ್ವರು ಸತ್ಯಾಗ್ರಹಿಗಳು ಬಂದರು

ಕೇರಳದಲ್ಲಿ ಸತ್ಯಾಗ್ರಹಮಾಡಿ ಕೈದಾದ ನಾಲ್ವರು ಸತ್ಯಾಗ್ರಹಿಗಳು ಮಂಗಳೂರಿಗೆ ಬಂದಿದ್ದಾರೆ. ಸ್ಥಳೀಕ ಸ್ಟೇಷನಲ್ಲಿ ಅವರಲ್ಲಿ ಒಬ್ಬರು ಮಲೆಯಾಳದಲ್ಲಿಯೂ ಒಬ್ಬರು ಇಂಗ್ಲಿಷಿನಲ್ಲಿಯೂ ಭಾಷಣಮಾಡಿ ಯುದ್ಧ ವಿರುದ್ಧ ಘೋಷಣೆಮಾಡಿದರು.

ಸ್ವತ್ಯಾಭ್ಯಾಸಕ್ಕಾಗಿ ಆಲ್ಮೋರಕ್ಕೆ ತೆರಳಿದರು.

ನೃತ್ಯಕಲೆಯಲ್ಲಿ ಉಚ್ಚಶಿಕ್ಷಣ ಪಡೆಯುವರೆ ಸ್ವಾಸ್ಥ್ಯ ಸಂಘದ ಸಂಚಾಲಕರಾದ ಶ್ರೀ. ಕೆ. ಕೃ. ಶೆಟ್ಟರು ಉದಯ ಶಂಕರರ ಆಲ್ಮೋರಕ್ಕೆ ತೆರಳುವರೆಂದು ತಿಳಿಯುತ್ತದೆ.

ನೋಟೀಸು

ಪುತ್ತೂರು ತಾಲೂಕು ನಂ. 168ನೇ ಪೆರುವಾಯು ಗ್ರಾಮದ ಪಳ್ಳತಡ್ಕ ತಿಮ್ಮಣ್ಣ ಭಟ್ಟರ ಮಗ ರಾಮಪ್ಪ ಭಟ್ಟನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ.

ನನ್ನ ಅವಿಭಕ್ತನಾಗಿರುವ ೨ನೆ ಮಗ ರಾಮಕೃಷ್ಣನು ಸುಮಾರು ಎಂಟು ವರ್ಷಗಳ ಲಾಗಾಯ್ತು ಬುದ್ಧಿ ಸ್ಥಿರತೆಯಿಲ್ಲದೆ ಯುಕ್ತಾಯುಕ್ತ ಯಾವದೊಂದು ವ್ಯವಹಾರಗಳನ್ನು ಮಾಡುವರೆ ಅಸಮರ್ಥನಾಗಿ ನನ್ನ ಆಶ್ರಯದೊಳಗೆ ಏಕಗೃಹ ಕೃತ್ಯದಲ್ಲಿರುವಲ್ಲಿ ಅವನಿಗೆ ಏನೊಂದು ಸಾಲ ವಗೈರೆ ಮಾಡುವ ಆವಶ್ಯಕತೆ ಮತ್ತು ಚೈತನ್ಯ ಕೂಡ ಇರುವದಿಲ್ಲವೆಂಬ ಸಂಗತಿ ಜನಜನಿತವಾಗಿರುತ್ತದೆ. ಹೀಗಿರುವಲ್ಲಿ ನಮ್ಮ ದ್ವೇಷಿಕ ಕುಟುಂಬ ದ್ರೋಹಕರಾದವರೂ ಸದ್ರಿಯವನಿಂದ ಪ್ರೋ. ನೋಟು ಕೈಕಾಗ್ದ ವಗೈರೆ ಯಾವ ತರದ ಏನೊಂದು ರಿಕಾರ್ಡುಗಳನ್ನು ಬರೆಸಿಕೊಂಡರೆ ಅವು ಯಾವತ್ತೂ ಮಂಜೂರಾಗತಕ್ಕವುಗಳಲ್ಲ. ವ ಅಂಥಾ ರಿಕಾರ್ಡು ವಗೈರೆ ಬರೆಸಿ ಯಾರಾದರೂ ಮೋಸದ ವ್ಯವಹರಣೆ ನಡೆಸಿದರೂ ಅಂಥವು ನನ್ನ ಪರೋಕ್ಷದಲ್ಲಿ ಎಂದಿಗೂ ಮಂಜೂರಾಗತಕ್ಕವುಗಳಲ್ಲವೆಂಬ ವಿಷಯವನ್ನು ಕೂಡ ಈ ಮೂಲಕ ಎಲ್ಲವರ ತಿಳುವಳಿಕೆ ಬಗ್ಗೆ ಪ್ರಕಟಿಸುತ್ತೇನೆ.

ಪೆರುವಾಯು

ಪಳ್ಳತಡ್ಕ } ಪ ರಾಮಪ್ಪ ಭಟ್ಟ

(ಒಂದನೇ ಪುಟದಿಂದ ಮುಂದುವರಿದುದು)

ವಿಚಿ ಸೂಚನೆಗೆ ಹಿಟ್ಲರನ ಉತ್ತರ

ಸದ್ಯದ ಯುದ್ಧದಲ್ಲಿ ಸಹಾಯಮಾಡಬೇಕೆಂದು ಜರ್ಮನಿಯು ಕೇಳಿದ್ದಕ್ಕೆ ವಿಚಿ ಸರಕಾರವು ಕಳಿಸಿದ ಉತ್ತರಕ್ಕೆ ಅಬೆಟ್ಸು ಇವರು ಜರ್ಮನಿಯಿಂದ ಹಿಟ್ಲರನ ಉತ್ತರ ತೆಗೆದುಕೊಂಡು ಬಂದಿದ್ದರೆಂದೂ ಆ ವಿಷಯವಾಗಿಯೇ ಚರ್ಚೆಯಾಯಿತೆಂದೂ ತಿಳಿಯುತ್ತದೆ

ಬ್ರಿಟಿಷ ಮಂತ್ರಿ ಮಂಡಳದಲ್ಲಿ ಬದಲಾವಣೆ

ಬ್ರಿಟಿಷ್ ಮಂತ್ರಿ ಮಂಡಳದಲ್ಲಿ ಕೆಲವು ಪ್ರಮುಖ ಬದಲಾವಣೆಗಳಾಗಿವೆ. ವಿಮಾನ ತಯಾರಿಕೆಯ ಮಂತ್ರಿ ಬೀವರ್‌ಬ್ರೂಕರು ಯುದ್ಧ ಮಂತ್ರಿ ಮಂಡಳದಲ್ಲಿ ಇಬ್ಬರಾಗಿದ್ದಾರೆ. ಹಡಗುಗಳ ಮಂತ್ರಿ ಆರ್ ಎಚ್. ಕ್ರಾಸರು ಆಸ್ಟ್ರೇಲಿಯ ಕಾಮನ್ ವೆಲ್ತಿನ ಹೈ ಕಮಿಶನರಾಗಿದ್ದಾರೆ.

ರಶ್ಯದ ಎಚ್ಚರಿಕೆ ಯುದ್ಧ ಸಾಮಗ್ರಿ ರಶ್ಯದ ಮೂಲಕ ಹೋಗಕೂಡದು

ರಶ್ಯದ ಪ್ರದೇಶಗಳ ಮೂಲಕ ಯಾವುದೇ ಯುದ್ಧಸಾಮಗ್ರಿಯಾಗಲಿ, ಗುಂಡು ಮದ್ದಾಗಲಿ, ಸ್ಫೋಟಕ ವಸ್ತುವಾಗಲಿ, ವಿಷವಸ್ತುವಾಗಲಿ, ವಿಮಾನಗಳ ಭಾಗಗಳಾಗಲಿ ಹಾದು ಹೋಗಕೂಡದೆಂದು ಮಾಸ್ಕೋವಿನಲ್ಲಿ ಹೊಸ ಆಜ್ಞೆ ಹೊರಟಿದೆ.

ಉತ್ತರ ಆಫ್ರಿಕದಲ್ಲಿ ಯುದ್ಧ

ಬ್ರಿಟಿಷ್ ಸೈನ್ಯವು ಈಜಿಪ್ಟಿನಲ್ಲಿ ಜರ್ಮನರ ಸೈನ್ಯವನ್ನು ಕಡೆಯುತ್ತಿದೆ.

ಶಾಲಾ ಪುಸ್ತಕಗಳು

*ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್ ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ. ಎರಡನೆಯ ಆವೃತ್ತಿಯು ಹೊರಬೀಳಲಿದೆ

ಬೆಲೆ ಒಂದೊಂದು ತರಗತಿಗೆ 0 6 0

ಶ್ರೀ ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕವನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು. ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು, ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ. ಶ್ರೀ ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು, ಬೋಧಪ್ರದಗಳೆಂದು.

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ ಬಿ ಶ್ರೀನಿವಾಸರಾವ್ ಮತ್ತು ಬಿ ದೂಮಪ್ಪನವರಿಂದ ರಚಿತವಾದದು

೪ನೆಯ ತರಗತಿಗೆ ಬೆಲೆ 0 4 0 ೫ನೆಯ ತರಗತಿಗೆ ಬೆಲೆ 0 5 0

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿದೆ. ಈ ಕ್ರಯದ ಹೊಸ ಸಾಹಸವಾಗಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮಾತ್ರ ಮೊದಲಾಗಿ ರಚಿತವಾದುವು. ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ. ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ

ಬೆಲೆ: ೪, ೫ನೆಯ ತರಗತಿಗೆ 0-1-6 *೬ನೆಯ 0-2-0
*೭ನೆಯ 0-2-6 *೮ನೆಯ 0-3-0

ಸಿರಿಗನ್ನಡ ಪಾಠಕಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ, ತದನಂತರ ಬರಹವನ್ನೂ ಕಲಿಯಬೇಕೆಂಬ ನಿಯಮಗಳನುಸಾರವಾಗಿ ಈ ಪಾಠಕದ ರಚನೆಯಾಗಿರುತ್ತದೆ.

ಬೆಲೆ 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 6

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ವಿ ಸೂ ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಪತ್ರವ್ಯವಹಾರ

[ಬಾತ್ಮಿದಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ. ಸಂ ಸ್ವ]

ಉಡುಪಿಯಲ್ಲಿ ರಸ್ಟೆಯ ಅಭಾವದಿಂದಾಗಿ ಬಡವರ ಗೋಳು

ಉಡುಪಿಯಲ್ಲಿ ಮೂವರು ಠಸ್ಸೆವೆಂಡರಿದ್ದವರು. ಆ ಮೂವರಲ್ಲಿ ಯಾರೊಬ್ಬರ ಹತ್ತಿರವೂ ರೂ. 2-8-0ರಿಗಿಂತ ಕಡಿಮೆ ಮೌಲ್ಯದ ಠಸ್ಸೆ ಕಾಗದಗಳು ಸುಮಾರು ಒಂದೂವರೆ ತಿಂಗಳಿಂದಲೂ ಇಲ್ಲ. ಉಡುಪಿ ಸಬ್ ಟ್ರೆಜರಿಯಲ್ಲಿಯೋ ಆ ಠಸ್ಸೆಗಳಿಲ್ಲವಂತೆ. ನಾಲ್ಕಾಣೆಯ ಕಾಗದವು ಸಾಕಾದ ದಸ್ತಾವೇಜನ್ನು ರೂ. 2-8-0ರ ಕಾಗದದಲ್ಲಿ ಬರೆಯಬೇಕಾಗಿದೆ. ನಕಲರ್ಜಿಯೊಂದಿಗೆ ಹಾಜರುಪಡಿಸಬೇಕಾದ ಹದಿನೆರಡಾಣೆ ಠಸ್ಸೆಯ ಬಗ್ಗೆ ಸಹ ರೂ. 2-8-0ರ ಠಸ್ಸೆಯನ್ನೆ ಕೊಳಬೇಕಾಗಿದೆ

ಕಾಲಸ್ಥಿತಿಯೆಂದಲೇ ದಾರಿದ್ರ್ಯದ ಹಿಡಿತದಿಂದ ಕಷ್ಟಪಡುವ ಬಡ ಜನರು ಇದೊಂದು ಅನಿರೀಕ್ಷಿತ ನಷ್ಟಕ್ಕೆ ಗುರಿಪಡಬೇಕಾಯಿತು. ಇದಕ್ಕೆ ಕಾರಣ ಯಾರಿರಬಹುದು? ಕಳೆದ ವಾರದ ನವಯುಗ ಸಂಚಿಕೆಯಲ್ಲಿ ನಾಗರಿಕರೊಬ್ಬರು ಈ ವಿಷಯವನ್ನು ಪ್ರಕಟಪಡಿಸಿಕೊಂಡಿರುವರಾದರೂ, ಸಂಬಂಧಪಟ್ಟ ಅಧಿಕಾರಿಗಳ ಗಮನವು ಅತ್ತಕಡೆ ಹೋದಂತಿಲ್ಲ. ಅನಿವಾರ್ಯವಾಗಿ ಆಗಬೇಕಾದ ಅನೇಕಾನೇಕ ದಸ್ತಾವೇಜುಗಳೂ ಠಸ್ಸೆಯ ಅಭಾವದಿಂದಾಗಿ ಆಗದೆ ಉಳಿದಿವೆ. ಹಲಕೆಲವು ದಸ್ತಾವೇಜುಗಳ ಬಗ್ಗೆ ಅವಶ್ಯವಿದ್ದುದಕ್ಕಿಂತ ಎಂಟು ಯಾ ಹತ್ತು ಪಾಲು ಹೆಚ್ಚಿಗೆ ಮೌಲ್ಯದ ಠಸ್ಸೆಗಳು ಉಪಯೋಗಿಸಲ್ಪಟ್ಟಿವೆ.

ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಮನಿಸುವರೇ?

T. Shrinivasa Holla

ಇರಾಕಿನೊಡನೆ ಯುದ್ಧ

ತಮಗೆ ಸಹಾಯ ಮಾಡಬೇಕೆಂದು ಜರ್ಮನಿಯೊಡನೆ ಇರಾಕು ಕೇಳಿತು

ಬ್ರಿಟನಿಗೆ ಸೇರಿದ ಹಬನಿಯ ವಿಮಾನ ನಿಲ್ದಾಣದ ಮೇಲೆ ಇರಾಕಿನವರು ಗುಂಡು ಹಾರಿಸಿದರು. ಪ್ರತಿ ಕಾರ್ಯಕ್ರಮ ನಡೆದು ಕಾಳಗವಾಗುತ್ತಿದೆ. ಇರಾಕಿನ ಬ್ರಿಟಿಷ್ ಸೈನ್ಯವು ಬಂದಿಳಿಯುವುದನ್ನು ತಡೆಗಟ್ಟುವ ಸಲುವಾಗಿ ಜರ್ಮನರ ಸಹಾಯಬೇಕೆಂದು ಇರಾಕಿನ ಮುಖ್ಯಮಂತ್ರಿ ರಶೀದ್ ಆಲಿಯು ಜರ್ಮನಿಯನ್ನು ಕೇಳಿರುವನು.

ಇರಾಕಿನಲ್ಲಿ ಪರಿಸ್ಥಿತಿ ವಿಷಮಗೊಳ್ಳುತ್ತಿದೆ. ಬ್ರಿಟಿಷ್ ಸೈನ್ಯವು ಬಂದುದಕ್ಕಾಗಿ ಇರಾಕಿನವರು ಆಕ್ಷೇಪಿಸಿದ್ದರು.

ಇರಾಕಿನ ಜನ ಸಂಖ್ಯೆ ೩೫ ಲಕ್ಷ. ಇರಾಕಿನ ಪ್ರಾಧಾನ್ಯತೆಯೆಂದರೆ ಅದರಲ್ಲಿ ಎಣ್ಣೆ ಬಾವಿಗಳು ಇವೆ, ಮೆಡಿಟರೇನಿಯನ್ ಕಡೆಗೆ ಭೂಮಿಯಲ್ಲಿ ತೆಗೆದುಕೊಂಡು ಹೋಗಿರುವ ಪೈಪ್ ಲೈನುಗಳು ಇವೆ.

ಇಲ್ಲಿ ಸಾಧಾರಣ ೨೦,೦೦೦ ಸೈನಿಕರಿರುವರು ೧೫೦೦೦ ಪೋಲೀಸರಿದ್ದಾರೆ.

೩೦೦೦ ಜನರ ಸೆರೆ

ತೋಬ್ರುಕ ಕದನದಲ್ಲಿ ಬ್ರಿಟಿಷರು ೩೦೦೦ ಜನರನ್ನು ಸೆರೆಹಿಡಿದರೆಂದು ತಿಳಿಯುತದೆ



ವಿಚಿತ್ರ ಪ್ರಪಂಚ

ಐದು ವರ್ಷಗಳಾದರೂ ಮುತ್ತು ಕೊಡಲಿಲ್ಲ

ಹೆರಾಲ್ಡ್ ಬೆಚ್ ಎಂಬವನೊಬ್ಬನು ನ್ಯೂಯೋರ್ಕಿನ ಒಂದು ಕೋರ್ಟಿನಲ್ಲಿ ಒಂದು ವಿಚಿತ್ರದಾವೆಯನ್ನು ತಂದಿದ್ದಾನೆ ಅವನು ಐದು ವರ್ಷಗಳ ಮೊದಲು ಒಂದು ಹೆಣ್ಣನ್ನು ಮದುವೆಯಾಗಿದ್ದ. ಅವಳ ಪ್ರೋತ್ಸಾಹದಿಂದಲೇ ಈ ಮದುವೆ ಆಗಿದ್ದಿತು. ಆದರೆ ಮದುವೆಯಾದ ಮೇಲೆ ಮಾತ್ರ ಅವಳು ಅವನೊಡನೆ ಯಾವ ಪ್ರೇಮ ವ್ಯವಹಾರವನ್ನು ಇಟ್ಟುಕೊಳ್ಳಲಿಲ್ಲ. ಮಾತ್ರವಲ್ಲ; ಅವನು ಅವಳೊಡನೆ ಪ್ರೇಮ ಭಿಕ್ಷೆಯನ್ನು ಕೇಳಹೋದ ಪ್ರತಿಯೊಂದು ಸಂದರ್ಭದಲ್ಲಿಯೂ 'ಈಗ ಬೇಡ, ಮತ್ತೆ ನೋಡೋಣ' ಎಂದು ತಿರಸ್ಕರಿಸುತಿದ್ದಳಂತೆ. ಮದುವೆಯಾದಾಗಲೇ ಹೆರಾಲ್ಡನಿಗೆ ಅವಳ ವಿಚಿತ್ರ ವರ್ತನದ ಕಟು ಅನುಭವವಾಯಿತು. ಅವರು ಪದ್ಧತಿಯಂತೆ ಪ್ರೇಮವಿಹಾರಕ್ಕೆ ಹೋಗಿದ್ದಾಗ 'ಇಲ್ಲಿ ಏನೂ ಬೇಡ, ಮನೆಗೆ ಹೋಗಿ ನೋಡೋಣ' ಅಂದಿದ್ದಳು. ಸ್ವಲ್ಪ ಸಾಹಸ ತೋರಿಸಿದಾಗ ಬೊಬ್ಬಿಟ್ಟು ದೂರಸರಿದಿದ್ದಳು ಅನಂತರ ಈ ಐದು ವರ್ಷಗಳಲ್ಲಿ ಅವನಿಗೆ ಅವಳ ಒಡನಾಟದ ಸುಖ ದೊರೆಯುವದಂತೂ ದೂರ ಉಳಿಯಿತು, ಈ ಅವಧಿಯಲ್ಲಿ ಅವಳು ಅವನಿಗೆ ಒಂದು ಚುಂಬನ ಕೂಡ ಕೊಟ್ಟಿಲ್ಲ ಆದುದರಿಂದಲೇ ಕೆಲಸಕ್ಕೆ ಬಾರದ ಈ ಹೆಂಡತಿ ನನಗೆ ಬೇಡ ಎಂದುಕೊಂಡು ಹೆರಾಲ್ಡನು ದಾಂಪತ್ಯ ವಿಚ್ಛೇದಕ್ಕೆ ದಾವೆ ಮಾಡಿದ್ದಾನೆ.

◊ ◊

ಹಲ್ಲಿ ಬಾಲದ ಅದ್ಭುತ ರಚನೆ

ಹಲ್ಲಿಯನ್ನು ಎಲ್ಲರೂ ನೋಡುತ್ತಾರೆ. ಆದರೆ ಅದರ ಬಾಲದ ವಿಚಿತ್ರ ರಚನೆಯನ್ನು ತಿಳಿದವರು ಕಡಿಮೆ ಹಲ್ಲಿಯ ಬಾಲವು ಅದರ ಜೀವರಕ್ಷಣೆಗೆ ಅನುಕೂಲವಾಗಿ ರಚಿಸಲ್ಪಟ್ಟಿದೆ. ಹಲ್ಲಿಗೂ ಹಾವಿಗೂ ಯಾವಾಗಲೂ ಎಣ್ಣೆ ಸೀಗೆ ಸಂಬಂಧ, ಹಾವು ಎಲ್ಲಿದ್ದರೂ ಬಂದು ಹಲ್ಲಿಯನ್ನು ಹಿಡಿದು ತಿನ್ನುವುದು ಆದುದರಿಂದ ಹಾವು ಹಲ್ಲಿಯನ್ನು ಬೆನ್ನಟ್ಟಿ ಬಂದಾಗ, ಬೇರೆ ಉಪಾಯಗಳಿಂದ ತನ್ನನ್ನು ಕಾಪಾಡಿಕೊಳ್ಳಲಿಕ್ಕೆ ಸಾಧ್ಯವಾಗದಿದ್ದರೆ, ಹಲ್ಲಿ ಒಂದು ಅದ್ಭುತ ಕೆಲಸವನ್ನು ಮಾಡುತ್ತದೆ. ಹಾವು ಹಲ್ಲಿಯನ್ನು ಹಿಡಿದೊಡನೆ ಹಲ್ಲಿ ತನ್ನ ಬಾಲವನ್ನು ಲಟಕ್ಕನೆ ಮುರಿದುಕೊಳ್ಳುತ್ತದೆ. ಮುರಿದ ಬಾಲ ಬಹಳ ಸಮಯದ ತನಕ ಒದ್ದಾಡಿಕೊಳ್ಳುತ್ತದೆ. ಹಾವು ಆ ಬಾಲವನ್ನೇ ಹಲ್ಲಿ ಎಂದು ಮೋಸಹೋಗಿ, ಅದನ್ನು ತಿಂದುಕೊಳ್ಳುವುದು ಹಾವಿನ ಬಾಯಿಯಿಂದ ತಪ್ಪಿಸಿಕೊಂಡ ಹಲ್ಲಿ ಎಲ್ಲಿಗೋ ತಪ್ಪಿಸಿಕೊಂಡು ಬೇರೆ ಬಾಲವನ್ನು ಬೆಳೆಯಿಸಿಕೊಳ್ಳುವುದು. ತನ್ನ ಜೀವಕ್ಕೆ ಅಪಾಯ ಬಂದಾಗಲೆಲ್ಲ, ಹಲ್ಲಿ ಹೀಗೇ ಮಾಡಿ ಬಾಲಮುರಿಸಿಕೊಳ್ಳುವುದು ಮತ್ತು ದಿಗ್ಭ್ರಮೆಯನ್ನು ಉಂಟುಮಾಡಿ ಶತ್ರುವಿನಿಂದ ತನ್ನನ್ನು ಕಾಪಾಡಿಕೊಳ್ಳುವುದು.

◊ ◊

ಒಂದು ವಿಚಿತ್ರ ವ್ಯಾಜ್ಯ

ಬ್ರಿಟನಿನ ಇತಿಹಾಸದಲ್ಲಿ ಹಿಂದೆ ಎಂದೂ ನಡೆಯದಂಥ ಒಂದು ಸಂಗತಿ ಈಗ ನಡೆದುಬಿಟ್ಟಿದೆ. ಸಸ್ತ್ರೀ ಪರಗಣೆಯಲ್ಲಿ ವಾಸವಾಗಿರುವ ಫ್ರೆಡರಿಕ್ ಎಂಬವನಿಗೆ ಮೇರಿ ಡಕ್ಸ್ ಎಂಬ ಅವಿವಾಹಿತ ಹುಡುಗಿ ಮಾತು ಕೊಟ್ಟಿದ್ದಳು-ತಾನು ಅವನನ್ನು ಮದುವೆಯಾಗುವೆನೆಂದು, ಮತ್ತು ಮದುವೆ ಆಗುವ ಆಸೆ ತೋರಿಸಿ ಅವನಿಂದ ಅವಳು ಬಹಳ ಹಣವನ್ನು ಪಡೆದುಕೊಂಡಿದ್ದಳು. ಈಗ ಯಾವ ಸಂಗತಿಯೂ ತನಗೆ ಗೊತ್ತಿಲ್ಲವೆಂದು ಅವಳು ಅವನನ್ನು ಮದುವೆಯಾಗಲಿಕ್ಕೆ ನಿರಾಕರಿಸಿದ್ದಾಳೆ. ಆದುದರಿಂದ ತನಗೆ ಅಪಮಾನವಾಯಿತು, ಹಣ ನಷ್ಟವಾಯಿತು ಪರಿಹಾರ ಕೊಡಬೇಕು ಎಂದು ಅವನು ಅಳೆಯ ಮೇಲೆ ದಾವೆ ತಂದಿದ್ದಾನೆ ಬ್ರಿಟನಿನ ಕೋರ್ಟುಗಳಲ್ಲಿ ಈ ತರದ ದಾವೆ ಇದುವರೆಗ ಬಂದುದಿಲ್ಲ'

◊ ◊

ಬಹು ಸಣ್ಣ ವರ್ತಮಾನ ಪತ್ರಿಕೆ

ಜಗತ್ತಿನಲ್ಲೆಲ್ಲ ಬಹು ಸಣ್ಣದಾದ ಒಂದು ವರ್ತಮಾನ ಪತ್ರಿಕೆ ಇದೆ ಇದನ್ನು ಬಿಮಿನಾಬಿಗುಲು ಎಂದು ಕರೆಯುತ್ತಾರೆ ಈ ಪತ್ರಿಕೆಯನ್ನು ಜೇಬಿನಲ್ಲಿ ಮಡಗಿಕೊಂಡು ಎಲ್ಲಿಗೆಬೇಕಾದರೂ ಹೋಗಬಹುದು ಇದು ಕೇವಲ ಅಂಗುಲಗಳಷ್ಟು ಅಗಲ ಮತ್ತು ನಾಲ್ಕುವರೆ ಅಂಗುಲಗಳಷ್ಟು ಉದ್ದವಾಗಿರುತ್ತದೆ. ಇದು ವಾರಕ್ಕೊಮ್ಮೆ ಪ್ರಕಟವಾಗುತ್ತದೆ. ಬಿಮಿನಿ ಎಂಬಲ್ಲಿಂದ ಪ್ರಕಟವಾಗುವುದರಿಂದ ಪತ್ರಿಕೆಗೆ ಆ ಹೆಸರು ಬಂದಿರುತ್ತದೆ. ಬಿಮಿನಿಯು ವೆಸ್ಟ್ ಇಂಡೀಸ್ ದ್ವೀಪ ಸಮುದಾಯದಲ್ಲಿ ಇದು ಒಂದು ಚಿಕ್ಕ ಊರಾಗಿದೆ.

◊ ◊

ಮರಳುಗಾಡಿನ ಅಗ್ನಿ ಪಕ್ಷಿ

ಅಗ್ನಿ ಪಕ್ಷಿ ಇದನ್ನು ಹಲವರು ಉಷ್ಟ್ರಪಕ್ಷಿ ಎಂದೂ ಕರೆಯುತ್ತಾರೆ. ಇದು ಆಫ್ರಿಕದ ಮರಳು ಕಾಡುಗಳಲ್ಲಿ ತುಂಬ ಇರುತ್ತದೆ. ಈ ಪಕ್ಷಿ ಬಹಳ ಎತ್ತರವಾಗಿರುತ್ತದೆ. ಪಕ್ಷಿಗಳೆಲ್ಲಲ್ಲ ಇದು ಬಹಳ ದೊಡ್ಡದು ಎಂದು ಹೇಳುತ್ತಾರೆ. ಇದರ ಕಾಲುಗಳೂ ಕತ್ತೂ ತೊಕ್ಕರೆ ಬಕಗಳಂತೆ ಬಹಳ ಉದ್ದ. ಆದರೆ ಅವುಗಳಿಗಿಂತ ಬಹಳ ಬಲಿಷ್ಠ ಮನುಷ್ಯನನ್ನು ಹೊಡೆದು ಕೆಡವಿಹಾಕುವ ಅಸಾಮಾನ್ಯ ಬಲವು ಅಗ್ನಿಪಕ್ಷಿಗೆ ಇರುತ್ತದೆ. ಇದು ಬಹಳ ವೇಗವಾಗಿ ಓಡುವುದು. ಆದರೂ ಬಹು ಸುಲಭದಲ್ಲಿ ಬೇಟೆಗಾರನಿಗೆ ಬಲಿಯಾಗುತ್ತದೆ' ಯಾಕೆಂದರೆ ಇದು ಯಾವಾಗಲೂ ಚಕ್ರಾಕಾರವಾಗಿ ಓಡುತ್ತದೆ. ಮತ್ತು ಶತ್ರು ಸಮೀಪಸಾರಿದನೆಂದ ಕೂಡಲೆ ತನ್ನ ತಲೆಯನ್ನು ಮರಳಿನೊಳಗೆ ಹುದುಗಿಸಿಕೊಂಡು ಸುಮ್ಮಗಿದ್ದು ಬಿಡುವುದು. 'ತಾನು ಶತ್ರುವನ್ನು ನೋಡದಿದ್ದರೆ, ಶತ್ರುವೂ ತನ್ನನ್ನು ನೋಡಲಾರ ನೆಂಬುದು ಅದರ ನಿಶ್ಚಿತ ಭಾವವಾಗಿರುತ್ತದೆ ಹೀಗೆ ಇತರರಿಗೆ ಮೋಸಕೊಡುವ ಉದ್ದೇಶದಿಂದ ತಾನೇ ಮೋಸ ಹೋಗಿ ಅದು ಸಾಯುವುದು. ಈ ಪಕ್ಷಿಗೆ ಮುಂಗಡೆ ಎರಡೇ ಬೆರಳುಗಳು ಇರುವವು. ಮತ್ತು ಇದರ ಮೊಟ್ಟೆ ಸೋರೆಕಾಯಿಯ ಹಾಗೆ ಬಹಳ ದೊಡ್ಡದಾಗಿರುತ್ತದೆ. ಆಫ್ರಿಕದ ಜನರು ಈ ಮೊಟ್ಟೆಗಳನ್ನು ನೀರಿನ ಬಾಟ್ಲಿಗಳಂತೆ ಉಪಯೋಗಿಸುತ್ತಾರೆ.

BHUVANENDRA PRODUCTS LTD.,
KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರನಾರಾಯಣತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.

ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು —
ಯು. ಪಾಂಡುರಂಗ ನಾಯಕ್, ರಥಬೀದಿ
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ। ಎಮ್. ಎನ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ.

ಕರ್ನಾಟಕದ ಕ್ರಾಂತಿಪುರುಷ ಶ್ರೀ ಬಸವೇಶ್ವರನ ಜಯಂತಿ

ಜಯಂತ್ಯುತ್ಸವವು ಎಲ್ಲೆಲ್ಲೂ ಆಚರಿಸಲ್ಪಟ್ಟಿತು!

ಕರ್ನಾಟಕದ ಮಾತ್ರವಲ್ಲ, ಅಖಿಲಭಾರತದ ವಿಭೂತಿ ಪುರುಷರಲ್ಲಿ ಶ್ರೀ ಬಸವೇಶ್ವರನು ಒಬ್ಬನು. ಆತನು ಧಾರ್ಮಿಕ ಮಹಾಪುರುಷನು ಮಾತ್ರವಾಗಿರದೆ ಸಾಮಾಜಿಕ ರಾಜಕೀಯ ಕ್ರಾಂತಿನಾಯಕನಾಗಿಯೂ ಮೆರೆದಿದ್ದಾನೆ. ಅಂತಹ ಮಹಾತ್ಮನ ಜಯಂತಿಯು ಈ ಸಲ ಎಪ್ರಿಲ್ ತಿಂಗಳ ಇಪ್ಪತ್ತೊಂಬತ್ತನೆಯ ದಿನಬಂದಿತು, ಅಖಿಲ ಕರ್ನಾಟಕದಲ್ಲಿ ಅಲ್ಲಲ್ಲಿ ಸಾಂಸ್ಕೃತಿಕ ಕೇಂದ್ರಗಳಲ್ಲಿ ಬಸವಜಯಂತ್ಯುತ್ಸವವು ವಿಶೇಷ ವಿಜೃಂಭಣೆಯಿಂದ ಜರಗಿತು; ಈ ಸಂದರ್ಭ ಆ ಮಹಾಪುರುಷನ ಪಾವನ ಜೀವನದ ರಮ್ಯ ಇತಿಹಾಸವನ್ನು ನೆನೆಯುವುದು ಕನ್ನಡಿಗರೆಲ್ಲರ ಕರ್ತವ್ಯವಾಗಿದೆ. ಇಂತಹ ನೆನಹು ನಮ್ಮಲ್ಲಿ ಅಂತಃಸ್ಫೂರ್ತಿಯನ್ನು ಹುಟ್ಟಿಸಲು ಸಹಾಯಕವಾಗಬಹುದಾಗಿದೆ.

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ವಿಜಾಪುರ ಜಿಲ್ಲೆಯ ಇಂಗಳೇಶ್ವರದ ಬಾಗೇವಾಡಿಯಲ್ಲಿ—ಮಾದಿರಾಜ-ಮಾದಲಾಂಬಿಕೆಯರೆಂಬ ಸ್ಮಾರ್ತ ಬ್ರಾಹ್ಮಣಕುಲದ ಪುಣ್ಯಾತ್ಮರಾದ ಪತಿಪತ್ನಿಯರ ಬಸುರಲ್ಲಿ ಶ್ರೀ ಬಸವೇಶ್ವರನು ಕ್ರಿ. ಶ. ೧೧೩೧ರಲ್ಲಿ ಹುಟ್ಟಿದನು. ಸುಮಾರು ೩೬ ವರ್ಷಗಳ ಕಾಲ ಮಾತ್ರ ಆಯುಷ್ಯಶಾಲಿಯಾಗಿದ್ದು ೧೧೬೭ರಲ್ಲಿ ಲಿಂಗೈಕ್ಯನಾದನೆಂದೂ ತಿಳಿದುಬರುತ್ತದೆ. ಬಸವೇಶ್ವರನಿಗೆ ನಾಗಲಾಂಬಿಕೆಯೆಂಬ ಹಿರಿಯ ಸೋದರಿಯಿದ್ದಳು. ಕಪ್ಪಡಿಯ ಸಂಗಮದ ಶಿವಸ್ವಾಮಿಯೆಂಬವನನ್ನು ಆಕೆ ಕೈ ಹಿಡಿದಿದ್ದು ಅವರ ಬಸುರಲ್ಲಿ ಹುಟ್ಟಿದವನೇ ಶ್ರೀ ಚೆನ್ನಬಸವೇಶ್ವರನು. ಬಸವೇಶ್ವರನು ಬಾಲ್ಯದಲ್ಲಿಯೇ ಎಂದರೆ ೧೫, ೧೬ ವರ್ಷ ಪ್ರಾಯದಲ್ಲಿಯೇ ಬಾಗೇವಾಡಿಯನ್ನು ಬಿಟ್ಟು ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮ ಸ್ಥಳವಾದ ಕಪ್ಪಡಿಗೆ ತೆರಳಿ, ಅಲ್ಲಿನ ಮಠಾಧ್ಯಕ್ಷರಾದ ಶ್ರೀ ಜಾತವೇದ ಮುನಿ ಅಥವಾ ಈಶಾನ ಮುನಿಗಳಲ್ಲಿ ವಿದ್ಯಾಭ್ಯಾಸ ಮಾಡಿದನು. 'ಕೂಡಲಸಂಗಮಯ್ಯ' ಎಂದು ಶ್ರೀ ಬಸವೇಶ್ವರನು ತನ್ನ ವಚನಗಳಲ್ಲಿ ಸಂಬೋಧಿಸುವ ಸಂಕೇತವು ಈ ಜಾತವೇದ ಮುನಿಯ ಅಂಕಿತವೆಂದು ಹಲವರ ಅಭಿಪ್ರಾಯವಾಗಿದೆ.

ಮುಂದೆ, ಬಸವೇಶ್ವರನು ಕಳಚುರ್ಯ ಬಿಜ್ಜಳರಾಯನ ಪ್ರಧಾನ ಮಂತ್ರಿಯಾದನು. ಬಸವೇಶ್ವರನ ಸೋದರಮಾವ ಬಲದೇವನು ಬಿಜ್ಜಳರಾಜಕಾರಣದಲ್ಲಿ ಬಹಳ ನೆರವಾಗಿದ್ದು ಬಸವೇಶ್ವರನ ಮೊದಲು ಪ್ರಧಾನಮಂತ್ರಿಯಾಗಿದ್ದುದರಿಂದ ಬಸವೇಶ್ವರನಿಗೂ ಆ

ಬಸವೇಶ್ವರನ ಜೀವನದ ಕೆಲವು ಘಟನೆಗಳು

ಪದವಿಗೇರಲು ಅನುಕೂಲವು ಒದಗಿರಬೇಕೆಂದು ತರ್ಕಿಸಲಾಗುತ್ತದೆ. ಬಸವೇಶ್ವರನಿಗೆ ಬಲದೇವನ ಪುತ್ರಿ ನಾಗಲಾಂಬಿಕೆಯು ಪತ್ನಿಯಾದಳು. ಆ ಮೇಲೆ ಬಸವೇಶ್ವರನು ನೀಲಾಂಬಿಕೆಯೆನ್ನುವ ಮತ್ತೋರ್ವ ವಿದುಷಿಯನ್ನೂ ವಿವಾಹವಾದನೆಂದು ತಿಳಿದುಬರುತ್ತದೆ. ನೀಲಾಂಬಿಕೆಯು ವಚನಕಾರಳು ವಿದ್ವಾಂಸಳೂ ಆಗಿದ್ದಳು. ಬಸವೇಶ್ವರನಿಗೆ ಬಾಲಸಂಗನೆಂಬ ಪುತ್ರನು ಹುಟ್ಟಿದರೂ ಆತನು ಬಾಲ್ಯದಲ್ಲಿಯೇ ಮೃತಿಹೊಂದಿದನೆಂದೂ ಇತಿಹಾಸವು ಹೇಳುತ್ತದೆ.

ಬಸವೇಶ್ವರನ ಕೀರ್ತಿಯು ಬೆಳಗಿದ್ದು ಆತನು ಕೈಕೊಂಡ ಹಲವಾರು ಸಾರ್ವಜನಿಕ ಕಾರ್ಯಗಳಿಂದ, ಆತನು ವೀರಶೈವ ಮತವನ್ನು ಉದ್ಧಾರಮಾಡಲು ಕೈಹಚ್ಚಿದನು. ಬಿಜ್ಜಳನ ಮಂತ್ರಿಯಾಗಿದ್ದುಕೊಂಡು ಈ ತರದ ಕಾರ್ಯವು ಆತನಿಗೆ ಬಹಳ ಸುಲಭವಾಗಿಯೇ ಸಾಗಿತು. "ಅನುಭವ ಮಂಟಪ"ವೆಂಬೊಂದು ಅಧ್ಯಾತ್ಮಿಕ ಸಂಘವನ್ನು ಸ್ಥಾಪಿಸಿ ಅದರ ಮೂಲಕ್ಕ ಮತ ಪ್ರಸಾರದ ಕಾರ್ಯವನ್ನು ನಿರಂತರವಾಗಿ ನಡೆಸಿದನು. ಈ ಧಾರ್ಮಿಕ ಕಾರ್ಯದಲ್ಲಿ ಹಲವರು ವಿದ್ವಾಂಸರು ಆತನಿಗೆ ನೆರವಾದರು.

ಅನುಭವ ಮಂಟಪದ ಮೂಲಕ ಬಸವೇಶ್ವರನು ಹಲವು ಸಾಮಾಜಿಕ ಧಾರ್ಮಿಕ ಕ್ರಾಂತಿಗಳನ್ನೇ ಉಂಟುಮಾಡಿದನು. ವೀರಶೈವರಲ್ಲಿ ಉಚ್ಚನೀಚ ಭೇದಭಾವಗಳಿರಕೂಡದೆಂದೂ, ಚತುರ್ವರ್ಣಾಶ್ರಮಗಳು ಆಚರಿಸಲ್ಪಡತಕ್ಕದಲ್ಲವೆಂದೂ, ಲಿಂಗವಂತರೆಲ್ಲರೂ ಏಕಕುಲಜರೆಂದೂ ಆತನು ಜಾತ್ಯೈಕ್ಯವನ್ನು ಬೋಧಿಸಿದನು. ಮಾತ್ರವಲ್ಲದೆ ಸಮಾಜೋನ್ನತಿಗೆ ಸಾಧಕವಾಗಿ ಪ್ರತಿಯೊಬ್ಬನೂ ಉದ್ಯೋಗತತ್ಪರನಾಗಿರಬೇಕೆಂದೂ ಇದರಿಂದ ಆತ್ಮೋನ್ನತಿ ದೇಶೋನ್ನತಿಗಳನ್ನು ಸಾಧಿಸಿ ಜೀವಿಸಬೇಕೆಂದೂ ಬೋಧಿಸಿದನು. ಅಸ್ಪೃಶ್ಯತೆಯು ಇರಕೂಡದೆಂದೂ ಎಲ್ಲರೂ ಶಿವದೀಕ್ಷೆಯಿಂದ ಪಾವನರಾಗುವರೆಂದೂ ತಿಳಿಸಿದನು. ಜನರಿಗೆ ಅಹಿಂಸಾತತ್ವವನ್ನು ಬೋಧಿಸಿದನು. ಮನುಷ್ಯನು ಸ್ವಾರ್ಥಕ್ಕಾಗಿ ಜೀವಿಸದಿದ್ದರೆ, ಸಂಸಾರವು ದುಃಖಮಯವಲ್ಲವೆಂದೂ ಶರೀರವು ಪಾಪರೂಪವಲ್ಲವೆಂದೂ ಸಾರಿಹೇಳಿದನು. ಒಟ್ಟಿನಿಂದ ಸಮಾಜದಲ್ಲಿದ್ದ ಉಚ್ಚನೀಚಭಾವ, ಅಸ್ಪೃಶ್ಯತಾಭಾವ, ವರ್ಣಾಶ್ರಮ ವಿಚಾರಗಳೇ ಮೊದಲಾದವುಗಳನ್ನು ಆತನು ತಡೆಗಟ್ಟಿ ಸಾಮಾಜಿಕ ಕ್ರಾಂತಿಯನ್ನೇ ಮಾಡಿದನೆನ್ನಬಹುದು.

ಕೊನೆಗೆ ಬಿಜ್ಜಳ ರಾಜನಿಗೂ ಬಸವೇಶ್ವರನಿಗೂ ಭಿನ್ನಾಭಿಪ್ರಾಯಗಳುಂಟಾಗಿ ವೈಷಮ್ಯವು ತಲೆದೋರಿತು. ಹರಳಯ್ಯ, ಮಧುವಯ್ಯ ಎಂಬ ಶಿವಶರಣರನ್ನು ಬಿಜ್ಜಳನು ಕಣ್ಣು ಕೀಳಿಸಿದ ನಿಮಿತ್ತ ಬಿಜ್ಜಳನನ್ನು ಜಗದೇವ, ಮಲ್ಲಿಬೊಮ್ಮಣ್ಣ ಎಂಬವರು ಕೊಲೆ ಮಾಡಲು ಬಿಜ್ಜಳನ ಮಗ ಕುಮಾರ ಬಿಜ್ಜಳನೊಡನೆ ಬಸವೇಶ್ವರನ ಅನುಯಾಯಿಗಳಿಗೆ ಕಾಳಗವಾಗಿ, ಬಸವೇಶ್ವರನು ಅಶಾಂತಿಯಿಂದ ಬೇಸರಗೊಂಡು ಕಪ್ಪಡಿ ಸಂಗಮಕ್ಕೆ ಬಂದು ಲಿಂಗೈಕ್ಯನಾದನೆಂದ ಇತಿಹಾಸವು ಹೇಳುತ್ತದೆ. ಆತನ ಅನಂತರವೂ ಮಾಚಿದೇವ, ರುದ್ರಮುನಿ, ಸಿದ್ಧರಾಮೇಶ್ವರರೇ ಮೊದಲಾದವರು ಧರ್ಮಪ್ರಚಾರ ಕಾರ್ಯವನ್ನು ಮುಂದುವರಿಸಿದರು.

ಬಸವೇಶ್ವರನಿಂದ ಕನ್ನಡ ಸಾಹಿತ್ಯಕ್ಕೂ ಅಮೋಘವಾದ ಉಪಕಾರವಾಗಿದೆ. ಬಸವೇಶ್ವರನ ವಚನಗಳು ಕನ್ನಡ ಸಾಹಿತ್ಯದಲ್ಲಿ ಬಹಳ ವಿಶೇಷವಾದ ವಾಣಿಗಳು. ಕನ್ನಡ ಸಾಹಿತ್ಯವು ಹೊಸತೊಂದು ಶಕ್ತಿಯನ್ನು ಹೊಸತೊಂದು ಬೆಳಕನ್ನು ಬಸವಣ್ಣನ ಕಾಲದಲ್ಲಿ ಪಡೆಯಿತು. ಸಮಾಜೋದ್ಧಾರಕನು ಮಾತ್ರವಲ್ಲದೆ ಬಸವೇಶ್ವರನು ಸಾಹಿತ್ಯ ಸಮಾರಾಧಕನೂ ಆಗಿದ್ದಾನೆ.

ಹೀಗೆ ಬಸವೇಶ್ವರನು ಕೇವಲ ಕನ್ನಡದ ವಿಭೂತಿ ಪುರುಷನು ಮಾತ್ರವಲ್ಲ ಭರತ ಖಂಡದಲ್ಲಿಯೇ ಪ್ರಸಿದ್ಧರಾದ ಮಹಾತ್ಮರಲ್ಲಿ ಒಬ್ಬನು, ಆತನು ಮಾಡಿದ ಪುಣ್ಯ ಕಾರ್ಯಗಳು ಹಲವಿವೆ. ಅವುಗಳ ವಿವರಗಳೆಲ್ಲವೂ ಆತನ ಶಿಷ್ಯರು ಬರೆದ ಬಸವಪುರಾಣಗಳಲ್ಲಿ ವಿಶದವಾಗಿ ತಿಳಿದುಬರುತ್ತವೆ.

K. K. Rai.



ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು

ಸೈಗಲನು ಈಗಲೂ ನ್ಯೂ ಥಿಯೇಟರ್ಸಿದಲ್ಲಿದ್ದಾನೆ.

ಸೈಗಲನು ನ್ಯೂ ಥಿಯೇಟರ್ಸನ್ನು ಬಿಟ್ಟು ಹೋಗಿರುವನೆಂಬ ವಿಚಾರವಾಗಿ ಕೆಲವು ಪತ್ರಿಕೆಗಳಲ್ಲಿ ಬಂದ ಸುದ್ದಿಯನ್ನು ಅಲ್ಲಗಳೆದು ನ್ಯೂ ಥಿಯೇಟರ್ಸಿನ ಆಡಳಿತಗಾರರಾದ ಸರ್ಕಾರರು, ಶ್ರೀ ಕುಂದನ್‌ಲಾಲ ಸೈಗಲ್, ಎಂಬ ನಟನು ಇನ್ನೂ ಕೂಡಾ ನ್ಯೂ ಥಿಯೇಟರ್ಸ್ ಕಂಪೆನಿಯ ಕಂಟ್ರಾಕ್ಟ್ ಪ್ರಕಾರ ಅದರಲ್ಲಿಯೇ ಇರುವನಾರೆ ಬರೆಯುತ್ತಾರೆ.

ಪಂಚೋಲ ಆರ್ಟ್ಸ್ ಪಿಕ್ಚರ್ಸಿನವರು ಶಾಂತಾ ಆಪ್ಟೆ, ಮತ್ತು ಸೈಗಲರೊಡನೆ ಕರಾರು ಮಾಡಿ ಕೊಂಡಿರುವರೆಂಬು ಕೆಲವು ಪತ್ರಿಕೆಗಳಲ್ಲಿ ಬಂದ ಸುದ್ದಿಯಿಂದಲಾಗಿ ಈ ಊಹಾಪೋಹಾಗಳಿಗೆ ಕಾರಣವುಂಟಾಗಿತ್ತು. ಪಂಚೋಲಿ ಆರ್ಟ್ಸ್ ಪಿಕ್ಚರ್ಸಿನವರು ಈ ಅಸತ್ಯ ಸುದ್ದಿಯನ್ನು ಅಲ್ಲಗಳೆದಿದ್ದಾರೆ.

ಸಂಗಿನಿ

ಬೊಂಬೇ ಟಾಕೀಸ್ ಚಿತ್ರ

ದೇವಿಕಾರಾಣಿ ಮತ್ತು ಅಶೋಕ ಕುಮಾರ ಇವರ ಅಭಿನಯದಿಂದ ಕೂಡಿದ

ಸಂಗಿನಿ ಎಂಬ ಹೊಸ ಚಿತ್ರವೊಂದನ್ನು ಬೊಂಬೆ ಟಾಕೀಸಿನವರು ತಯಾರಿಸಲಿರುವರೆಂದು ತಿಳಿದಿದೆ.

ಕಮಲೇಶ ಕುಮಾರಿ

ಕಮಲೇಶ ಕುಮಾರಿಯು ಸ್ವಲ್ಪ ಕಾಲದ ತನಕ ಹಾಲಿವುಡ್ಡಿನಲ್ಲಿ ವಾಸವಾಗಿರುವಳೆಂದು ತಿಳಿಯುತ್ತದೆ.

ಅನಿಸ್ ಖಾಟೂನ್

ಪ್ರಭಾತ ಚಿತ್ರ 'ಪಡೋಶಿ'ಯಲ್ಲಿ ಅಭಿನಯಿಸಿ ಹೆಸರು ಹೊಂದಿದ ಅನಿಸ್ ಖಾಟೂನಳು ಗುಣಸೇಮುಸೂನ್ ಎಂಬ ಕೃದಿ ಚಿತ್ರ ನಿರ್ದೇಶಕರಾದ ಎಸ್. ಎಫ್. ಹಸೇನರು ನಿರ್ದೇಶಿಸುವ ಚಿತ್ರದಲ್ಲಿ ಅಭಿನಯಿಸುವಳು.

ಸುಭದ್ರ

ಕನ್ನಡ ಚಲಚ್ಚಿತ್ರ ಸುಭದ್ರದ ಪೂರ್ಣತೆಯಾಗುತ್ತಾ ಬಂತು. ಬೇಗನೇ ಪ್ರದರ್ಶನಕ್ಕೆ ಸಿದ್ಧವಾಗುವುದಾಗಿ ತಿಳಿಯುತ್ತದೆ.

ಚಿಮನ್‌ಲಾಲ ದೇಸಾಯಿ

ಬೊಂಬೆ ನೇಶನಲ್ ಸ್ಟುಡಿಯೋ ಲಿಮಿಟೆಡಿನ ಡೈರೆಕ್ಟರ ಸ್ಥಾನಕ್ಕೆ ಶ್ರೀ. ಚಿಮನ್‌ಲಾಲ ದೇಸಾಯಿಯವರು ರಾಜಿನಾಮೆ ಕೊಟ್ಟಿರುವರೆಂದು ಸುದ್ದಿ.

ಚಿಮನ್‌ಲಾಲ ದೇಸಾಯಿಯವರ ಪುತ್ರ ಸುರೇಂದ್ರ ಸಿ. ದೇಸಾಯಿಯು ಪ್ರತ್ಯೇಕ ಕಂಪೆನಿಯೊಂದನ್ನು ಸ್ಥಾಪಿಸುವನೆಂದೂ, ತಂದೆಯೂ ಮಗನೂ ಆ ಕಂಪೆನಿಯಲ್ಲಿ ಕೆಲಸಮಾಡುವರೆಂದೂ ತಿಳಿದಿದೆ.

ಕಿಶೋರಿ ಶಾಹುವಿನ ಭಾಷಣ

ಜಬ್ಬಲ್ ಪುರದಲ್ಲಿ ನೆರೆದ ಕೇಂದ್ರ ಪ್ರಾಂತ ಮತ್ತು ಬೀಹಾರ್ ಪ್ರಾಂತಗಳ ವಿದ್ಯಾರ್ಥಿ ಸಾಂಸ್ಕೃತಿಕ ಪರಿಷತ್ತಿನಲ್ಲಿ ಸುಪ್ರಸಿದ್ಧ ಸಿನೆಮಾ ನಟ ಕಿಶೋರಿ ಶಾಹು ಸಾಂಸ್ಕೃತಿಯ ವಿಷಯವಾಗಿ ಒಂದು ಉದ್ದಾಮ ಭಾಷಣವಿತ್ತನು.

ತಮಿಳಿನಲ್ಲಿ ನರ್ಸಿ ಮೆಹತಾ

ಗುಜರಾಥಿನ ಪ್ರಸಿದ್ಧ ಸಂತ ನರ್ಸಿ ಮೆಹತನ ಜೀವನವನ್ನು ಚಿತ್ರಿಸಿ ಭಕ್ತ ಮೆಹತಾ ಎಂಬ ಹೆಸರಿನಿಂದ ತಮಿಳಿನಲ್ಲಿ ಒಂದು ಸಿನೆಮಾ ತಯಾರಾಗುತ್ತಿದೆ.

ಬೊಂಬೇವಾಲಿ

ವಾಡಿಯಾದವರು ನಾಡಿಯಾಳ ಅಭಿನಯದಿಂದ ಕೂಡಿದ ಬೊಂಬೇವಾಲೀ ಎಂಬ ಚಿತ್ರವನ್ನು ತಯಾರಿಸುತ್ತಿದ್ದಾರೆ.

ನೃತ್ಯವಿಲ್ಲದ ಸಾಧನಳ ಚಿತ್ರ

ನ್ಯೂಥಿಯೇಟರ್ಸಿನವರು ತಯಾರಿಸುವ ಸಾಧನಬೋಸಳ ಅಭಿನಯದಿಂದ ಕೂಡಿದ ಮುಂದಿನ ಚಿತ್ರದಲ್ಲಿ ನೃತ್ಯವು ಇರುವುದಿಲ್ಲವೆಂದು ತಿಳಿದುಬಂದಿದೆ.

ಚರ್ಮ ಮತ್ತು ಸಹಸ್ರೆಗಳನ್ನು ಸುಟ್ಟು ಜೀವನ

ಮೋತೀಲಾಲನ ಹೇಳಿಕೆ

ಮಿರರ್ ಪತ್ರಿಕೆಯಲ್ಲಿ ಪ್ರಸಿದ್ಧ ನಟನಾದ ಮೋತೀಲಾಲನು ಒಂದು ಲೇಖನ ಬರೆಯುತ್ತಾ, ಅವರಲ್ಲಿ ಸಿನೆಮಾ ನಟರು ಸಂತರಾಗಲಿ ಸಾಧುಗಳಾಗಲಿ ಅಲ್ಲ, ಅವರೂ ಇತರ ಮಾನವರಂತೆ ಮನುಷ್ಯ ಸಹಜವಾದ ಪ್ರಕೃತಿಯುಳ್ಳವರು. ತಮ್ಮ ಜೀವನಕ್ಕಾಗಿ ಮತ್ತು ಪ್ರೇಕ್ಷಕರ ಸೌಂದರ್ಯ ತೃಪ್ತಿಗಾಗಿ ತಾವು ಸ್ಟುಡಿಯೋದೊಳಗೆ ಚರ್ಮ ಮತ್ತು ಸಹಸ್ರೆಗಳನ್ನು ಸುಟ್ಟು ದಿನಕಳೆಯುತ್ತಾರೆ ಎಂದು ಬರೆಯುತ್ತಾನೆ.

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticura) Ointment) ತನ್ನ ವಾಸಿಮಾಡುವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲು ಹುಣ್ಣುಗಳನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು.

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಸಿಟ್ಟು ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮು (Cuticura Ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

THE BANK OF MANGALORE LIMITED.

HEAD OFFICE MANGALORE. ESTD. 1901.

Branches—MOODABIDRI & PADUBIDRI.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over.	5½ per cent
„ 1 „	4½ per cent
„ 6 months	3½ per cent
„ 3 „	3 per cent

Interest payable Quarterly

SAVINGS BANK DEPOSITS:

On daily balances on balances over Rs. 5 in multiples of Rs. 5 @ 3%.

All kinds of banking business transacted.

ದುರ್ಗಾಖೋಟೆ ಮತ್ತು ವನಮಾಲಾ ಅತ್ತೆ ಸೊಸೆಯರಾಗಿ

ಪ್ರಿನ್ಸಿಪಾಲ್ ಅತ್ರೆಯವರ ಹೊಸ ಚಿತ್ರ ಚರಣೋಕಿದಾಸಿಯಲ್ಲಿ ದುರ್ಗಾಖೋಟೆ ಮತ್ತು ವನಮಾಲಾ ಇವರು ಅತ್ತೆ ಮತ್ತು ಸೊಸೆಯರಾಗಿ ಅಭಿನಯಿಸುವರು. ಈ ಚಿತ್ರವು ಕೆಲವೇ ವಾರಗಳಲ್ಲಿ ಪ್ರದರ್ಶನಕ್ಕೆ ಸಿದ್ಧವಾಗುವುದಾಗಿ ತಿಳಿದಿದೆ.

ಆಸ್ಥಾನ ವಿದ್ವಾನ್ ದೇವೇಂದ್ರಪ್ಪ

ಪ್ರಸಿದ್ಧ ಸಂಗೀತಗಾರರಾದ ಮೈಸೂರಿನ ಆಸ್ಥಾನ ವಿದ್ವಾನ್ ದೇವೇಂದ್ರಪ್ಪನವರು ಸುಭದ್ರ ಕನ್ನಡ ಚಲಚಿತ್ರದಲ್ಲಿ ನಾರದನ ಪಾತ್ರವನ್ನು ಅಭಿನಯಿಸುತ್ತಾರೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ಭಾರತದ ಉನ್ನತಿಗೆ ಯಾವ ತೆರದ ಕೈಗಾರಿಕೆ ಬೇಕು?

ಕೇಂದ್ರೀಕೃತ ಉದ್ಯೋಗವೆ? — ಗ್ರಾಮೋದ್ಯೋಗಗಳೆ?

ಬಂಡವಾಳವಿಲ್ಲ — ಆದರೆ — ಜನಬಲವುಂಟು

ಶ್ರೀ. ಜೆ. ಸಿ. ಕುಮಾರಪ್ಪನವರ ಲೇಖನದಿಂದ

ವ್ಯಾಪಾರ ಕೈಗಾರಿಕೆಗಳಲ್ಲಿ ಆಸಕ್ತಿ ಇರುವ ಅನೇಕ ಸಂಸ್ಥೆಗಳು ಈಚೆಗೆ ಕೆಲವು ತಿಂಗಳುಗಳಿಂದ ಸಭೆ ಪರಿಷತ್ತುಗಳನ್ನು ಕೂಡಿಸಿ, ಮೊದಲು ವಿದೇಶಗಳಿಗೆ ರಫ್ತಾಗುತ್ತಿದ್ದು ಯುದ್ಧದ ದೆಸೆಯಿಂದ ರಫ್ತಾಗುವದು ನಿಂತು ಹೋದ ಹಸಿ ಪದಾರ್ಥಗಳನ್ನು ಇಲ್ಲಿಯೇ ಬೇರೆ ಬೇರೆ ಕೈಗಾರಿಕೆಗಳಲ್ಲಿ ಹೇಗೆ ವಿನಿಯೋಗಿಸಬಹುದೆಂಬುದನ್ನು ಪರ್ಯಾಲೋಚಿಸತೊಡಗಿವೆ. ದೇಶದಲ್ಲಿ ಕೈಗಾರಿಕೆಗಳ ಉನ್ನತಿಯಾಗಬೇಕು, ಅಧಲ್ಲವಾದರೆ ದೇಶದ ಅವನತಿಯಾಗುವುದು. ದೇಶದ ಉದ್ಧಾರಕ್ಕಾಗಿ ಕೇಂದ್ರೀಕೃತ ದೊಡ್ಡ ದೊಡ್ಡ ಕೈಗಾರಿಕೆಗಳು ಎಲ್ಲೆಡೆಗಳಲ್ಲೂ ಆರಂಭವಾಗಬೇಕು ಎಂಬುದೇ ಈ ಪರಿಷತ್ತುಗಳ ಅಭಿಪ್ರಾಯವಾಗಿದೆ.

ಈ ವರೆಗೆ ವಿದೇಶೀಯರು ನಮಗಾಗಿ ಮಾಡಿ ಕಳುಹಿಸುತ್ತಿದ್ದ ಸಿದ್ಧ ಸಾಮಗ್ರಿಗಳನ್ನು ಇನ್ನು ಮುಂದೆ ನಾವು ಸಿದ್ಧ ಮಾಡಬೇಕು. ಆದರೆ ಸರಕಾರದ ಆರ್ಥಿಕ ನೀತಿಯಲ್ಲಿ ದೇಶೀಯರ ಕೈ ಸದಾಕಾಲ ಇದ್ದ ಹೊರತು ಇದು ಅಸಾಧ್ಯವೆಂಬುದನ್ನು ಈ ಸಂಸ್ಥೆಗಳ ಸಂಚಾಲಕರು ಮರೆತ ಹಾಗೆ ಕಾಣುತ್ತದೆ. ಒಂದು ವೇಳೆ ಅಂಥ ರಾಜಕೀಯ ಸ್ವಾತಂತ್ರ್ಯವೂ ನಮಗೆ ಪ್ರಾಪ್ತವಾಯಿತೆಂದು ಇಟ್ಟುಕೊಂಡರೂ ಕೇಂದ್ರೀಕೃತ ದೊಡ್ಡ ಕೈಗಾರಿಕೆಗಳ ಬೆಳವಣಿಗೆಯಿಂದ ದೇಶದ ಉದ್ಧಾರವಾಗಬಹುದೆ? ಎಂದು ಶ್ರೀ. ಜೆ. ಸಿ. ಕುಮಾರಪ್ಪನವರು ಪ್ರಶ್ನಿಸಿ ಗ್ರಾಮೋದ್ಯೋಗ ಪತ್ರಿಕೆಯಲ್ಲಿ ಒಂದು ಮಹತ್ವದ ಲೇಖನವನ್ನು ಬರೆದಿರುತ್ತಾರೆ.

ಸ್ಥಾಯೀ ಪ್ರಯೋಜನವಿಲ್ಲ.

ಯೂರೋಪಿನ ರಾಜ್ಯಗಳು ಯುದ್ಧದಲ್ಲಿ ತೊಡಗಿ ತಮ್ಮ ಕೈಗಾರಿಕೆಗಳ ಕಡೆಗೆ ಹೆಚ್ಚು ಮನಸ್ಸು ಕೊಡಲಾರದವುಗಳಾಗಿರುವದರಿಂದ, ಅವುಗಳ ದುರವಸ್ಥೆಯ ಪ್ರಯೋಜನ ಪಡೆದು ನಾವು ಇಲ್ಲಿ ಅವರ ಕೈಗಾರಿಕೆಗಳನ್ನು ಆರಂಭಿಸುವುದು ವಿಶೇಷ ಪರವಾಗಲಿಕ್ಕಿಲ್ಲ. ಹೊಯಿಗೆಯ ಮೇಲೆ ಕಟ್ಟಿದ ಕಟ್ಟಡದ ಹಾಗೆ ಈ ಕೈಗಾರಿಕೆಗಳ ಸ್ಥಿತಿಯಾಗಬಹುದು. ಕೇಂದ್ರೀಕೃತ ದೊಡ್ಡ ಕೈಗಾರಿಕೆ ಮತ್ತು ಯುದ್ಧೋಪಕರಣಗಳು ಬಡತನ ಹಾಗೂ ರಾಜಕೀಯ ದಾಸ್ಯತೆಯನ್ನು ನಿವಾರಿಸುವುದಿಲ್ಲವೆಂದು ವಿಚಾರಿಗಳು ಹೇಳಲಾರಂಭಿಸಿದ್ದಾರೆ. ಯಾಕೆಂದರೆ ಕೇಂದ್ರೀಕೃತ ಕೈಗಾರಿಕೆಗಳಿಗೆ ಭಂಡವಾಳವು ಹೆಚ್ಚು ಬೇಕು; ಜನಬಲವು ಕಡಿಮೆ ಇದ್ದರೆ ಸಾಕು. ನಮ್ಮ ದೇಶದ ಸ್ಥಿತಿಯಾದರೋ ಇದಕ್ಕೆ ಸರಿ ಪ್ರತಿಕೂಲವಾಗಿದೆ. ಇಲ್ಲಿ ಭಂಡವಾಳದ ಕೊರತೆ ಉಂಟು; ಪರಂತು ಜನಬಲ ತುಂಬಾ ಇದೆ. ಇದನ್ನು ಸಿದ್ಧ ಮಾಡಲಿಕ್ಕೆ ನಾವು ಬಹಳ ಕಷ್ಟಪಡಬೇಕಾಗಿಲ್ಲ. ಸರಕಾರದ ಆಡಳಿತ ಅನುಕೂಲತೆಗಳೆಲ್ಲ ಬಹುಮಟ್ಟಿಗೆ ಪಟ್ಟಣವಾಸಿಗಳಿಗೋಸ್ಕರ ಇರುತ್ತವೆ. ಆದರೆ ಸರಕಾರದ ಬೊಕ್ಕಸಕ್ಕೆ ಹಣ ತುಂಬಿಸುವವರು ಹಳ್ಳಿಗರಾಗಿರುವರು. ಹೀಗೆ ನಮ್ಮ ದೇಶದಲ್ಲಿ ಬಹು ಸಂಖ್ಯಾಕರಾಗಿರುವ ಹಳ್ಳಿಗರು ಕಾಸುಕೊಟ್ಟು ಹೊಳೆ ಈಜುವ ದುರವಸ್ಥೆಯಲ್ಲಿದ್ದಾರೆ. ಇನ್ನು ಈಚೆಗೆ ನಡೆದ ಕೆಲವು ಲೆಕ್ಕಾಚಾರಗಳ ಮೇರೆಗೆ ಒಬ್ಬೊಬ್ಬ ಭಾರತೀಯನ ಸರಾಸರಿ ಆಯವು ವರ್ಷಕ್ಕೆ ೬೦ ರೂಪಾಯಿ ಎಂದರೂ ಅದು ತಿಂಗಳಿಗೆ ೫ ರೂಪಾಯಿ ಆಗುತ್ತದೆ. ಇದರಲ್ಲಿ ತಿಂಗಳಿಗೆ ಇಪ್ಪತ್ತು, ಮೂವತ್ತು ಸಾವಿರ ರೂಪಾಯಿ ಸಂಪಾದಿಸುವ ವ್ಯಾಸರಾಯಿ, ಗವರ್ನರ, ರಾಜಮಹಾರಾಜರ ಉತ್ಪತ್ತಿಯೂ ಸೇರಿಕೊಂಡಿದೆ. ಹೇಳುವ ತಾತ್ಪರ್ಯವೇನಂದರೆ ಒಬ್ಬೊಬ್ಬ ಭಾರತೀಯ ಹಳ್ಳಿಗನ ತಿಂಗಳ ಯಥಾರ್ಥ ಸಂಪಾದನೆಯು ಐದು ರೂಪಾಯಿಗಳಿಗೂ ಕಡಿಮೆ ಇರುತ್ತದೆ. ಇಂಥ ಜನರಿಂದ ದೊಡ್ಡ ಕೈಗಾರಿಕೆಗಳಿಗೆ ಬೇಕಾದ ಭಂಡವಾಳವು ಎಲ್ಲಿಂದ ಬರಬೇಕು? ಹೀಗೆ ಒಂದು ಕಡೆಯಿಂದ ಭಂಡವಾಳದ ಕೊರತೆ ಇರುವಾಗ ಇನ್ನೊಂದು ಕಡೆಯಿಂದ ಉದ್ಯೋಗದ ಅಭಾವವಿದೆ. ದೇಶೀಯರ ಬಡತನಕ್ಕೆ ಅವರ ನಿರುದ್ಯೋಗವು ಕಾರಣವಾಗಿದೆ. ಆದುದರಿಂದ ದೊಡ್ಡ ದೊಡ್ಡ ಕೈಗಾರಿಕೆಗಳ ಮೂಲಕ ದೇಶದ ಉದ್ಧಾರವಾಗುವ ಹಾಗಿಲ್ಲ. ಅವುಗಳ ಮೂಲಕ ದೇಶಕ್ಕೆ ಸ್ಥಾಯೀ ಪ್ರಯೋಜನ ದೊರೆಯುವ ಹಾಗಿಲ.

ನಮ್ಮ ನೀತಿ ಯಾವುದಿರಬೇಕು?

ಆದುದರಿಂದ ಭಂಡವಾಳವಿಲ್ಲದೆಯೇ ನಮ್ಮ ದೇಶೀಯರಿಗೆ ಉದ್ಯೋಗವನ್ನು ಕೊಡುವಂಥ ರೀತಿಯಲ್ಲಿ ನಾವು ಹೊಸ ಹೊಸ ಉದ್ಯಮಗಳನ್ನು ಆರಂಭಿಸಿ ನಡೆಯಿಸಿಕೊಂಡು ಹೋಗುವ ನೀತಿಯನ್ನು ಅವಲಂಭಿಸಬೇಕು. ಕೇಂದ್ರೀಕೃತ ಕೈಗಾರಿಕೆಗಳ ಉನ್ನತಿಯಿಂದ ದೇಶದೊಳಗಿನ ಕೆಲವರು ಮಾತ್ರ ಸಂಪನ್ನರಾಗುವರು; ಉಳಿದವರು ನಾಶಹೊಂದಬೇಕಾಗುವದು. ಅಷ್ಟುಮಾತ್ರವಲ್ಲ; ಸಾವಿನೊಂದಿಗೆ ಮನುಷ್ಯನ ಜೀವನದ ಸಮಸ್ಯೆಯನ್ನು ಬಿಡಿಸಬಹುದಾಗಿದ್ದರೆ ಆ ಮಾತು ಬೇರೆ. ಮನುಷ್ಯನ ನಿಜವಾದ ಉನ್ನತಿಯು ಹಣಕಾಸುಗಳಿಂದ ಮಾತ್ರವಲ್ಲ; ಆತ್ಮಿಕ ಮತ್ತು ನೈತಿಕ ದೃಷ್ಟಿಯಿಂದಲೂ ಆಗಬೇಕಾಗಿದೆ. ಆದುದರಿಂದ ಒಂದು ಕೈಗಾರಿಕೆಯನ್ನು ಆರಂಭಿಸಿದಾಗ, ಸಮಾಜದ ಮೇಲೆ ಅದರ ಸಾಂಪತ್ತಿಕ ಪರಿಣಾಮ ಏನಾಗಬಹುದೆಂಬುದನ್ನು ಮಾತ್ರವಲ್ಲ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಿಣಾಮ ಏನಾಗಬಹುದೆಂಬುದನ್ನೂ ಆಲೋಚಿಸಬೇಕು. ಕೇಂದ್ರೀಕೃತ ಕೈಗಾರಿಕೆಗಳಿಂದ ಧ ವಂತರು ತಮ್ಮ ಆತ್ಮವನ್ನು ಕಳಕೊ ಬಹುದಾದರೂ ಅವರು ಜಗತ್ತನ್ನೇ ಗೆ ಬಹುದು. ಆದರೆ ಇಂಥವರ ಸಂ ಬಹಳ ಕಡಿಮೆ ಇರುತ್ತದೆ. ಉ ಅಧಿಕ ಸಂಖ್ಯಾಕ ದರಿದ್ರರು ಈ ಕೈಗಾ ಕೆಗಳ ಪ್ರಚಾರದಿಂದ ಜಗತ್ತು ಮತ್ತ ಆತ್ಮ—ಎರಡನ್ನೂ ಕಳಕೊಂಡು ನಷ್ಟ ಭ್ರಷ್ಟರಾಗುವರು. ಅದರ ಬದಲಿ ಎಲ್ಲರಿಗೂ ಜೀವನೋಪಾಯವನ್ನು ಕಲ್ಪಿಸಿಕೊಡುವ ಒಂದು ದೇಶವ್ಯಾಪಿ ರಾಷ್ಟ್ರೀಯ ಯೋಜನೆಯನ್ನು ಕೈಕೊಂಡ ದಾದರೆ, ದೇಶದ ಭವಿಷ್ಯವು ಉಜ್ವಲ ವಾಗುವುದು ಖಂಡಿತ. ಅಖಿಲಭಾರತ ಗ್ರಾಮೋದ್ಯೋಗ ಸಂಘದ ನೀತಿಯು ಇದೇ ತತ್ವವನ್ನು ಅವಲಂಬಿಸಿರುತ್ತದೆ.

ಒಂದು ಪಾಠ

ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಪರಿಣಾಮಗಳ ಕಡೆಗೂ ನಾವು ದೃಷ್ಟಿ ಹರಿಸಿದ್ದಾದರೂ ಒಂದು ಒಳ್ಳೆಯ ಪಾಠವನ್ನು ಕಲಿಯಬಹುದು; ನಮ್ಮ ಕರ್ತವ್ಯ ಮಾರ್ಗವನ್ನು ಸುಗಮಮಾಡಿಕೊಳ್ಳಬಹುದು. ಕೇಂದ್ರೀಕೃತ ಕೈಗಾರಿಕೆಗಳಿಂದ ಸುಖ ಶಾಂತಿ ಇಲ್ಲವೆಂಬುದನ್ನು ಈ ಪರಿಸ್ಥಿತಿಯು ತಿಳಿಸುತ್ತದೆ. ಈ ಕೈಗಾರಿಕೆಗಳು ಪಾಶ್ಚಾತ್ಯ ರಾಷ್ಟ್ರಗಳ ಸುಖ ಶಾಂತಿಗೆ ಕಾರಣವಾಗುವುದರ ಬದಲಿಗೆ ಅವುಗಳ ನಾಶಕ್ಕೆ ಕಾರಣವಾಗಿದೆ. ಈ ಕೈಗಾರಿಕೆಗಳಲ್ಲಿ ಬಹಳ ಹೆಚ್ಚು ಉನ್ನತಿಯನ್ನು ಗಳಿಸಿ ಅತಿ ಸಂಪನ್ನವಾದ ಒಂದು ಹಿರಿಯ ರಾಷ್ಟ್ರವೇ ಇಂದು ಯುದ್ಧದ ಪ್ರಳಯಾಗ್ನಿಯಿಂದ ತನ್ನನ್ನು ಕಾಪಾಡು ಎಂದು ಜಗತ್ತನ್ನೇ ಮಂಡಿಯೂರಿ ಬೇಡಿಕೊಳ್ಳುವ ಕರುಣಾಜನಕ ದೃಶ್ಯವನ್ನು ನಾವು ನೋಡುತ್ತಿಲ್ಲವೆ? ಈ ಪರಿಸ್ಥಿತಿಯ ಕಡೆಗೆ ಕಣ್ಣುಮುಚ್ಚಿಕೊಂಡು ನಾವು ಇರುಳು ಕಂಡ ಬಾವಿಯಲ್ಲಿ ಹಗಲು ಹೋಗಿ ಬೀಳುವ ಶತಮೂರ್ಖರಾಗಬಹುದೆ? ಹಿಂದುಸ್ಥಾನದ ಉದ್ಧಾರವು ಕೇಂದ್ರೀಕೃತ ಉದ್ಯೋಗಗಳಿಂದ ಅಲ್ಲ, ಪರಂತು ಗ್ರಾಮೋದ್ಯೋಗಗಳ ಪ್ರಚಾರದಿಂದಷ್ಟೇ ಆಗಬಹುದಾಗಿದೆ.

CANARA BANK LIMITED

(Incorporated in British India with Limited Liability.)

ABSTRACT BALANCE SHEET

AS AT 31st DECEMBER 1940.

Capital		***Fixed Capital Expenditure***	
Subscribed	6,00,000— 0— 0	Premises & Furniture	94,217— 6—8
Paid up	3,92,551—15—11	***Advances to Customers***	
Reserve Funds	4,50,000— 0— 0		
Deposits	86,71,764— 2— 6	Secured by Valuable Securities	37,87,804—13—8
Due to Bankers	Nil		
Sundries	7,98,533—14— 5	Secured by Bills of Exchange etc.	9,29,550— 0—6
Net Profits		***Investments***	20,34,328—12—9
Appropriation account 1,244—10— 6		***Sundries***	6,81,012— 5—7
Net Profit for the year 71,726— 5— 0		***Cash On Hand And at Call At Bankers***	28,17,538— 5—7
72,970—15— 6			
Less amount transferred to Reserves 41,369—3—7	31,601—11—11		
Rs.	1,03,44,451—12—9	Rs.	1,03,44,451—12—9

WANTED

Secondary Grade Trained TWO Male teachers for the S. V. T. Higher Elementary School and ONE lady teacher for the Hindu Balika Patashala, Karkala.

Please apply with particulars as to previous service and minimum salary required.

Sri K. Krishna Pai,
President,
S. V. T. Board of Education,
KARKALA.

ಪುಸ್ತಕಾವಲೋಕನ:

ಚಿಕ್ಕ ದೊಡ್ಡವರು*

ಶ್ರೀ ಶಿವರಾಮ ಕಾರಂತರು ಬರೆದ ಹದಿನಾಲ್ಕು ಹರಟೆಗಳ ಸಂಗ್ರಹ ಪುಸ್ತಕವಿದು. ಮದ್ರಾಸಿನಲ್ಲಿ ನೆಲೆಸಿರುವ ಶ್ರೀ. ಕುಲಕರ್ಣಿ ಶ್ರೀನಿವಾಸರು ತಮ್ಮ ಪ್ರೇಮ ಪ್ರಕಟನಾಲಯದ ಹದಿನಾಲ್ಕನೆಯ ಪುಸ್ತಕವಾಗಿ ಇದನ್ನು ಪ್ರಕಾಶಿಸಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಕೆಲವು ಉತ್ತಮ ಕೃತಿಗಳನ್ನು ಬರೆದು ಮತ್ತು ಬರೆಯಿಸಿ ಒದಗಿಸಿಕೊಟ್ಟ ಶ್ರೀ. ಕುಲಕರ್ಣಿಯವರು ಶ್ರೀ. ಕಾರಂತರ ಪುಸ್ತಕವೊಂದನ್ನೂ ಸಂಪಾದಿಸಿ ಕನ್ನಡದ ಸಹೃದಯರಿಗೆ ಒಂದು ವಿಶೇಷವಾದ ಔತಣವನ್ನೇ ಉಂಟುಮಾಡಿದ್ದಾರೆನಬಹುದು.

ಈ ಪುಸ್ತಕವು ಎರಡು ಭಾಗಗಳಿಂದ ಕೂಡಿದೆ. ಮೊದಲನೆಯ 'ಚಿಕ್ಕ ದೊಡ್ಡವರು—ದೊಡ್ಡ ಚಿಕ್ಕವರು' ಎಂಬ ಭಾಗದಲ್ಲಿ ಹನ್ನೊಂದು ಹರಟೆಗಳಿವೆ; ಎರಡನೆಯ 'ವೈಲು ಕಲ್ಲಿನೊಡನೆ ಮಾತುಕತೆಗಳು' ಎಂಬ ಭಾಗದಲ್ಲಿ ಮೂರು ಹರಟೆಗಳಿವೆ. ಸಮಾಜವನ್ನು ಸೂಕ್ಷ್ಮಸೂಕ್ಷ್ಮವಾಗಿ ನಿರೀಕ್ಷಿಸಿ ಪರೀಕ್ಷಿಸಿ ಹೇಳಬಲ್ಲ ಶ್ರೀ. ಕಾರಂತರ ಕಥನಶಕ್ತಿಯನ್ನು ಈ ಹದಿನಾಲ್ಕು ಹರಟೆಗಳು ಬಹಳ ಚೆಲುವಾಗಿ ನಿರೂಪಿಸಿವೆ.

'ಲೇಖನಗಳು ನಿಜವಾದ ವ್ಯಕ್ತಿಗಳಿಗೇ ಸಂಬಂಧಿಸಿದ' ವಿದ್ದು 'ವ್ಯಕ್ತಿಗಳ ಹೆಸರನ್ನು ಬಯಲಿಗೆ ತರದೆ, ದೊಡ್ಡವರ ಚಿಕ್ಕತನವನ್ನು, ಚಿಕ್ಕವರ ದೊಡ್ಡತನವನ್ನು ತೋರಿಸಿ—ಜನಸಾಮಾನ್ಯರಲ್ಲಿಯೂ ಕಾಣಬಹುದಾದ ಸವಿಸೊಗಸು, ಕುಂದುಕೊರತೆಗಳನ್ನು ತೋರಿಸುವುವುಗಳೆಂದು ಪುಸ್ತಕದ ಪ್ರಾರಂಭದಲ್ಲಿಯೇ ಲೇಖಕರು ಸೂಚಿಸಿದ್ದಾರೆ. ಹಾಗಾಗಿ ಇಲ್ಲಿ ಬಯಲಿಗೆ ತರದೆ ಮುಚ್ಚಿಟ್ಟ ವ್ಯಕ್ತಿಗಳನ್ನು ಗುರುತಿಸಬಲ್ಲ ವಾಚಕರಿಗೆ ಸಹಜವಾಗಿ ಎಷ್ಟರ ಮಟ್ಟಿಗೆ ಬರೆಹಗಳು ರುಚಿಸುವವೋ ಅಷ್ಟು ಇತರರಿಗೆ ಸ್ವಾರಸ್ಯವೆನಿಸಲಾರವಾದರೂ, ಸಮಾಜದಲ್ಲಿ ಚಿಕ್ಕದೊಡ್ಡವರನ್ನು ಕಂಡು ಅನುಭವವುಳ್ಳ ಪ್ರತಿಯೊಬ್ಬ ವಾಚಕನಿಗೂ ಸಾಕಷ್ಟು ಸರಸವಾಗಿ ತೋರುವವೆಂದು ಸಂಕೋಚವಿಲ್ಲದೆ ಹೇಳಬಹುದು.

ಈ ಹರಟೆಗಳಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳಲ್ಲಿ ಯಾರು ದೊಡ್ಡವರು ಯಾರು ಚಿಕ್ಕವರು ಎಂದು ವಾಚಕರಿಗೆ ವಿಚಾರಿಸಲು ಕಷ್ಟವಾಗುತ್ತದೆ. ಏಕೆಂದರೆ ಲೇಖಕರು ಚಿಕ್ಕವರ ದೊಡ್ಡತನವನ್ನು, ದೊಡ್ಡವರ ಚಿಕ್ಕತನವನ್ನು ಮಿಶ್ರಮಾಡಿ ಒಂದು 'ಕಲಸು ಮೇಲೋಗರ' ಮಾಡಿದ್ದಾರೆ. ಹಾಗಾಗಿಯೇ ಈ ಲೇಖನಗಳಲ್ಲಿ ಒಂದು ನವೀನ ಸ್ವಾರಸ್ಯವು ಇದೆಯೆನಬಹುದು. 'ಒಟ್ಟು ಸಾಟಿ ಶಾಸ್ತ್ರಿಗಳು', 'ಪೀಕದಾನಿ ರಾಮಯ್ಯ' 'ಮುಸಲ್ ಮಾಧು' 'ವಿಳಿವಾರಿ ವಾಸುದೇವಯ್ಯ' 'ಪ್ರದರ್ಶನದ ಪಾಪಪ್ಪನವರು' 'ಬೇಟೆ ಬಂಡ್ಯಪ್ಪನವರು' ಈ ಶಿರೋಲೇಖಗಳೇ ಹಾಸ್ಯಮಯವಾಗಿದ್ದು ವಿಷಯಗಳು ಅವಕ್ಕೆ ಒಪ್ಪುವಂತೆ ಇರುತ್ತವೆ. ಪುತ್ತೂರಿನ ಕೆಲವು ಚಿಕ್ಕ ದೊಡ್ಡವರನ್ನು ಈ ಲೇಖಗಳಲ್ಲಿ ಚಿತ್ರಿಸಿದ್ದಾರೆಯೇ ಎಂದು ಊಹಿಸಲು ಸಾಕಷ್ಟು ಕಾರಣಗಳು ಕಂಡುಬರುತ್ತವೆ.

ಎರಡನೆಯ ಭಾಗದ 'ವೈಲುಕಲ್ಲಿನೊಡನೆ ಮಾತುಕತೆಗಳು' ಎಂಬುದು ಸಂಭಾಷಣೆಗಳ ರೂಪದಲ್ಲಿರುವ ಮೂರು ಹರಟೆಗಳು. 'ಮಾತು ಬಲ್ಲವನು ಮಾತನಾಡದೆ ಸುಮ್ಮನಿರಬಲ್ಲನೆ?' ಎಂಬುದು ಲೇಖಕರ ಪ್ರಶ್ನೆ. ಅದಕ್ಕೆ ಉತ್ತರರೂಪವಾಗಿ ಈ ಹರಟೆಗಳು ಬಂದಿವೆ. 'ಕನ್ನಡದಲ್ಲಿ ಈ ತರದ ಲೇಖಗಳು ಇನ್ನೂ ಕಡಿಮೆಯೆನಬಹುದು. 'ಗುಡಿಯೊಳ್ಳದ ಮಹಾಲಿಂಗ'ನೊಡನೆ 'ಪರಿತ್ಯಕ್ತ ದೀಪಸ್ತಂಭ'ದೊಡನೆ, 'ಮಿ. ದುಸ್ತುಬಿನ'ನೊಡನೆ ಲೇಖಕರು ಮಾತನಾಡುತ್ತಾರೆ. ಮಾತಿನ ಓಟದಲ್ಲಿ ಸಮಾಜದ ಹಲವು ಸೂಕ್ಷ್ಮಸೂಕ್ಷ್ಮ ವಿಷಯಗಳನ್ನು ಎತ್ತಿಕೊಂಡು ಅವುಗಳ ವಿಷಯ ಲೇಖಕರು ವ್ಯಂಗ್ಯವಾಗಿ ವಿಚಾರಧಾರೆಯನ್ನು ಹರಿಯಬಿಟ್ಟಿದ್ದಾರೆ.

ಹರಟೆಗಳನ್ನು, ವ್ಯಂಗಲೇಖನಗಳನ್ನು ಬರೆಯುವುದರಲ್ಲಿ ಶ್ರೀ ಕಾರಂತರದು ಸಿದ್ಧ ಹಸ್ತ. ಎಷ್ಟೆಷ್ಟು ವಿಷಯಗಳನ್ನು ಯಾವ ಯಾವ ರೀತಿಯಲ್ಲಿ ಮನೋರಂಜಕವಾಗಿ ವಾಚಕರ ಮುಂದಿಡಲು ಸಾಧ್ಯವೋ ಅವೆಲ್ಲವನ್ನೂ ಸಫಲವಾಗಿ ಬರೆಯಬಲ್ಲವರು ಶ್ರೀ ಕಾರಂತರು ಎಂಬುದು ಕನ್ನಡಿಗರೆಲ್ಲರಿಗೂ ಗೊತ್ತು. ಈ ಪುಸ್ತಕವೂ ಕನ್ನಡ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನವೊಂದನ್ನು ಪಡೆಯುವುದೆಂದು ನಾವು ನಂಬುತ್ತೇವೆ.

'ಶ್ರೀ ಕಾರಂತರ ಈ ಲೇಖನಗಳು ಪುಸ್ತಕರೂಪದಲ್ಲಿ ಇದೇ ಮೊದಲಿಗೆ ಪ್ರಕಟವಾಗುವುದಾದರೂ, ಕನ್ನಡ ವಾಚಕಲೋಕಕ್ಕೆ ಇವು ಹೊಸತಾಗಿರುವುದಿಲ್ಲ. ಕೆಲಸಮಯಗಳ ಹಿಂದೆ, ಈ ಲೇಖನಗಳು 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದ್ದು ಕನ್ನಡಿಗರನೇಕರು ಈ ಬರೆಹಗಳ ಸವಿಯನ್ನು ಕಂಡುಂಡಿದ್ದಾರೆ. ಇಂದೀಗ ಆ ಲೇಖನಗಳೆಲ್ಲವನ್ನು ಜತೆಗೂಡಿಸಿ ಅಂದವಾಗಿ ಸಚಿತ್ರವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ ಪ್ರಕಾಶಕರು ಪ್ರಶಂಸನೀಯ ಸಾಹಸಮಾಡಿದ್ದಾರೆ.

—ಕಯ್ಯಾರ.

* ಚಿಕ್ಕ ದೊಡ್ಡವರು:—ಲೇಖಕರು: ಶ್ರೀ ಶಿವರಾಮ ಕಾರಂತ. ೧/೮ ಆಕಾರದ ೬೩ ಪುಟಗಳು. ಬೆಲೆ ಎಂಟಾಣೆ. ಪ್ರಕಾಶಕರು: ಕುಲಕರ್ಣಿ ಶ್ರೀನಿವಾಸ ಬಿ. ಎ; ಪ್ರೇಮ ಪ್ರಕಟನಾಲಯ, ೩೯ ಅಂಡ್ರಸನ್ ಸ್ಟ್ರೀಟ್, ಜಿ. ಟಿ. ಮದ್ರಾಸು.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು, ಆರೋಗ್ಯವನ್ನೂ, ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ-ಡಾ। ಜೋಗೆಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ
— ಡಾಕ್ಕಾ, ಬಂಗಾಲ —
ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಷಾ ಕಂಪೆನಿ, ಹಂಪನಕಟ್ಟಾ ಮಂಗಳೂ

ನೆಸೆಟ್ ಡಿಲಕ್ಸ್



ವಿಲಾಯತಿಯಲ್ಲಿ ಮಾಡಿದುದು

ಈ ತರದ ರೇಜರುಗಳಿಗೆ

ಸುಖಮಯವಾದ ಕ್ಷೌರಕ್ಕೆ ಬಹಳ ಹೆಚ್ಚಿ ... ಖರ್ಚೇನೂ ಇರುವುದಿಲ್ಲ. ನೆಸೆಟ್ ... ಲಕ್ಸ್ ಬ್ಲೇಡುಗಳು ಬಹಳ ಹೆ... ಕ್ರಯದವುಗಳೇನೂ ಅಲ್ಲ. ಅ... ಕೂಡುಳ್ಳವುಗಳಾಗಿದ್ದು ಹಲವು... ಕ್ಷೌರಕ್ಕೆ ಉಪಯೋಗಿಸಲಬಹು... ವುಗಳಾಗಿವೆ. ಅವುಗಳು ... ಮತ್ತು ಬ್ಲಾಕ್ ಟೈಪ್ ರೇಜರು... ಗಳಿಗೂ ಅನುಕೂಲವಾಗಿ...

ಸ್ಲೊಟೆಡ್ ಬ್ಲೇಡುಗಳು

I.D.L.2.

ತೋಬ್ರುಕಿನಲ್ಲಿ ಭೀಕರ ಕದನ

ತೋಬ್ರುಕಿನಲ್ಲಿ ಬಲವಾದ ಧಾಳಿಯುಂಟಾಯಿತು. ಜರ್ಮನರು ಟೇಂಕುಗಳನ್ನು ಉಪಯೋಗಿಸುತ್ತಾರೆ. ಬ... ವರು ಪ್ರತಿಧಾಳಿ ಮಾಡಿ ಧಾಳಿ ಓಡಿಸಿದರು. ೨ ಜರ್ಮನ್ ವಿಮಾನಗ... ನಾಶಹೊಂದಿವೆ.

ವಿಜ್ಞಾನಯುಗ

ಗಣಿತಮಾಡುವ ಹೊಸ ಮೆಶಿನು

ಅಮೇರಿಕದ ಬೆಲ್ ಟೆಲಿಫೋನ್ ಕಂಪೆನಿಯವರು ಒಂದು ಅದ್ಭುತ ಯಂತ್ರ ಸಾಧನವನ್ನು ರಚಿಸಿದ್ದಾರೆ. ಇದು ಕೂಡಿಸುವ ಕಳೆಯುವ ಗುಣಾಕಾರ ಭಾಗಾಹಾರ-ಯಾವ ಜಾತಿಯ ಲೆಕ್ಕವನ್ನಾದರೂ ತಪ್ಪಿಲ್ಲದೆ ಒಂದು ನಿಮಿಷದಲ್ಲಿ ಮಾಡಿಬಿಡುವದು. ಆದ್ದರಿಂದ ಶಾಲೆಗೆ ಹೋಗುವ ಮಕ್ಕಳು ಇಂಥ ಒಂದೊಂದು ಯಂತ್ರವನ್ನು ಇಟ್ಟುಕೊಂಡರಾಯಿತು. ಅವರು ಲೆಕ್ಕಮಾಡುವ ಪ್ರಸಂಗವೇ ಇಲ್ಲವೆಂದು ನೀವು ಊಹಿಸಬಹುದು. ಆದರೆ ಅದು ಮಾತ್ರ ಸಾಧ್ಯವಾಗುವ ಹಾಗೆ ಇರುವದಿಲ್ಲ. ಯಾಕೆಂದರೆ ಈ ಒಂದೊಂದು ಯಂತ್ರವನ್ನು ರಚಿಸಲಿಕ್ಕೂ ಸಾವಿರಾರು ಪವನುಗಳು ವೆಚ್ಚವಾಗುವವು. ಆದರೆ ಈ ಯಂತ್ರದಲ್ಲಿ ಪ್ರತಿಯೊಂದು ಲೆಕ್ಕವನ್ನೂ ಏನೂ ತಪ್ಪಿಲ್ಲದೆ ಮಾಡಬಹುದು. ಸಣ್ಣ ತರಗತಿಯ ಒಬ್ಬ ಹುಡುಗನು 2×2 ಎಂದಿರುವ ಲೆಕ್ಕದ ಉತ್ತರ ನಾಲ್ಕು ಎಂದು ಹೇಳಲಿಕ್ಕೆ ಎಷ್ಟು ಸಮಯ ತೆಗೆಯಬಹುದೋ, ಅಂದರೆ ಒಂದು ನಿಮಿಷದಲ್ಲಿ ಈ ಯಂತ್ರವು ಗುಣ್ಯದಲ್ಲಿ ಗುಣಕದಲ್ಲಿಯೂ ೧೦, ೧೨ ಸ್ಥಾನಗಳಿರುವ ದೊಡ್ಡ ಸಂಖ್ಯೆಯ ಗುಣಾಕಾರದ ಉತ್ತರವನ್ನು ಹೇಳಿಬಿಡುವದು. ದೊಡ್ಡ ದೊಡ್ಡ ಕೈಗಾರಿಕೆ ಕರ್ಖಾನೆಗಳಲ್ಲಿ ಇಂಥ ಒಂದೊಂದು ಯಂತ್ರವನ್ನು ಇಟ್ಟುಕೊಳ್ಳುವ ಏರ್ಪಾಡು ಅಮೇರಿಕದಲ್ಲಾಗುತ್ತಲಿದೆ.

ವೇಗದ ವಾಯು ವಿಮಾನಗಳು

ವಾಯು ವಿಮಾನಗಳು ತಾಸಿಗೆ ಎಂಟು ನೂರು ಮೈಲುಗಳಿಗಿಂತಲೂ ಹೆಚ್ಚು ವೇಗವಾಗಿ ಹಾರಾಡಬಹುದೆಂದು ಯಾರೂ ಈ ತನಕ ಕಲ್ಪಿಸಿದುದಿಲ್ಲ. ಯಾಕೆಂದರೆ ಇಷ್ಟು ವೇಗದಿಂದ ಹಾರಾಡುವಾಗ ವಾಯುವಿನಲ್ಲಿ ಉಂಟಾಗುವ ಚಲನೆಯು ವಿಮಾನದ ವೇಗವನ್ನು ತಡೆಯುವದು. ಹಿಮಾಚ್ಛಾದಿತ ಪ್ರದೇಶವನ್ನು ಉಳುವದು ಹೇಗೆ ಕಷ್ಟವಾಗುತ್ತದೋ, ಇಷ್ಟು ವೇಗದಿಂದ ವಿಮಾನವನ್ನು ಹಾರಿಸುವದೂ ಕಷ್ಟವಾಗುತ್ತದೆ. ಆದರೆ ಅಮೇರಿಕದ ಲೋಕ್ ಹೀಡ್ ವಿಮಾನ ಕಂಪೆನಿಯ ಶ್ರೀ. ಜಾನ್ಸನ್ ಕೆನೆಡಿಯವರು ವಿಮಾನಗಳನ್ನು ತಾಸಿಗೆ ಸಾವಿರ ಮೈಲುಗಳಿಗಿಂತಲೂ ಹೆಚ್ಚು ವೇಗದಲ್ಲಿ ಹಾರಾಡಿಸಲಿಕ್ಕಾಗಬಹುದೆಂದು ಹೇಳಿ ಪ್ರಪಂಚವನ್ನು ಆಶ್ಚರ್ಯ ಸಾಗರದಲ್ಲಿ ಮುಳುಗಿಸಿದ್ದಾರೆ. ಹಿಮಾಚ್ಛಾದಿತ ಕಠಿನ ಪ್ರದೇಶಗಳನ್ನು ಉಳಲಿಕ್ಕೂ ಆಗುವ ನೇಗಿಲುಗಳನ್ನು ಕಂಡು ಹಿಡಿದಿರುವ ಹಾಗೆಯೇ ತಾಸಿಗೆ ಸಾವಿರ ಮೈಲು ಚಲಿಸುವ ವಿಮಾನಗಳನ್ನೂ ಸದ್ಯದಲ್ಲಿ ರಚಿಸಬಹುದೆಂದು ಅವರು ಭವಿಷ್ಯವನ್ನಾಡಿದ್ದಾರೆ.

ಹಲ್ಲಿನ ಬಾಳಿಕೆಗೆ ಗಟ್ಟಿನೀರು

ಪೇಟೆ ಪಟ್ಟಣಗಳಲ್ಲಿ ವಾಸವಾಗಿರುವವರಿಗಿಂತ ಹಳ್ಳಿಪಳ್ಳಿಗಳಲ್ಲಿ ವಾಸವಾಗಿರುವ ಜನರ ಹಲ್ಲುಗಳು ಹೆಚ್ಚು ಉತ್ತಮ ಸ್ಥಿತಿಯಲ್ಲಿ ಇರುತ್ತವೆ. ಪಟ್ಟಣ ವಾಸಿಗಳ ಹಲ್ಲುಗಳು ಹಳ್ಳಿವಾಸಿಗಳ ಹಲ್ಲುಗಳಿಗಿಂತ ಸೇಕಡಾ ೩೦ರಷ್ಟು ಕೆಟ್ಟಿರುತ್ತವೆಂದು ಅಮೇರಿಕದ ತಜ್ಞರು ವಿವಿಧ ಪರಿಶೋಧನೆಗಳಿಂದ ಕಂಡುಕೊಂಡಿದ್ದಾರೆ. ಹೀಗಾಗಲಿಕ್ಕೆ ಅವರು ಉಪಯೋಗಿಸುವ ನೀರು ಮುಖ್ಯ ಕಾರಣವಾಗಿದೆ ಎಂದು ಅವರು ಹೇಳಿರುವರು. ಗ್ರಾಮವಾಸಿಗಳು ಬಾವಿ, ಬುಗ್ಗೆಗಳ ನೀರನ್ನು ಉಪಯೋಗಿಸುತ್ತಾರೆ. ಈ ನೀರು ದಪ್ಪವಾಗಿರುತ್ತದೆ. ಪಟ್ಟಣವಾಸಿಗಳು ಹೊಳೆಕೆರೆಗಳ ನೀರನ್ನು ಉಪಯೋಗಿಸುತ್ತಾರೆ. ಈ ನೀರು ತೆಳ್ಳಗಿರುತ್ತದೆ. ತೆಳ್ಳಗಿನ ನೀರಿಗಿಂತ ದಪ್ಪವಾದ ನೀರು ಹಲ್ಲುಗಳ ಬಾಳಿಕೆಗೆ ಉತ್ತಮವಾಗಿರುವದೆಂದು ಈಗ ತಿಳಿದು ಬರುವದು. ಆದ್ದರಿಂದ ಅಮೇರಿಕದವರು ಚಿಕ್ಕ ಮಕ್ಕಳಿಗೆ ದಪ್ಪ ನೀರನ್ನು ಕೊಡಲಾರಂಭಿಸಿರುವರು.

ಶೀತ ಬಾಧೆಗೆ ರೆಡಿಯೋ ಚಿಕಿತ್ಸೆ

ಕೊಬ್ಬೈಟ್ ಎಂಬ ಒಂದು ಶೀತರೋಗವಿದೆ. ಈ ರೋಗ ಬಂದು ತಗಲಿದೊಡನೆ ಮನುಷ್ಯನಿಂದ ಯಾವ ಕೆಲಸವನ್ನೂ ಮಾಡಲಿಕ್ಕಾಗುವದಿಲ್ಲ. ಬ್ರಿಟನಿನಲ್ಲಿ ಈ ರೋಗದ ಪ್ರಾಬಲ್ಯ ಸಾಕಷ್ಟು ಇದೆ. ಅಲ್ಲಿ ಕಾರ್ಖಾನೆಗಳ ಕೆಲಸಗಾರರಿಗೆ ಈ ರೋಗ ಬಂದು ಅವರಿಂದ ಕೆಲಸ ಮಾಡಲಿಕ್ಕಾಗದೆ ದಿನ ಒಂದಕ್ಕೆ ೨೦೦೦೦ ಪವನುಗಳು ನಷ್ಟವಾಗುತ್ತದೆ. ಈಗ ಜೆ. ಪಿ. ಪಿ. ಸ್ಟಾಕ್ ಎಂಬವರು ಈ ರೋಗಕ್ಕೆ ಒಂದು ಚಿಕಿತ್ಸಾ ಕ್ರಮವನ್ನು ಕಂಡು ಹಿಡಿದಿದ್ದಾರೆ. ಅವರು ಅದಕ್ಕೆ ತಯಾರಿಸಿದ ಒಂದು ಸಾಧನವನ್ನು ರೋಗಿಯ ತಲೆಯ ಮೇಲಿಟ್ಟು ವಿದ್ಯುಚ್ಛಕ್ತಿಯನ್ನು ಅದರೊಳಗೆ ಹರಿಯಬಿಡುವದರಿಂದ, ರೋಗಿಯ ತಲೆಯು ಬೇಕಾದಷ್ಟು ಬಿಸಿಯಾಗುತ್ತ ಬಂದು ಶೀತ ಬಾಧೆಯು ಕೆಲವು ನಿಮಿಷಗಳಲ್ಲಿ ನಿಂತು ಹೋಗುವದು. ಈ ಸಾಧನವನ್ನು ಬ್ರಿಟನಿನ ಎಲ್ಲ ಕಾರ್ಖಾನೆಗಳಲ್ಲಿ ಬಳಕೆಗೆ ತರುವದಕ್ಕೋಸ್ಕರ ಬ್ರಿಟಿಷ ಸರಕಾರವು ಆಲೋಚಿಸಿಯದೆ.

ಹೊಳೆಯುವ ಪೈಂಟುಗಳ ಹೊಸ ಉಪಯೋಗ

ರಾತ್ರಿ ಕಾಲದಲ್ಲಿ ಸಮಯವನ್ನು ನೋಡಲಿಕ್ಕಾಗುವಂತೆ ಗಡಿಯಾರದ ಮುಖ ಬಿಲ್ಲೆಯ ಮೇಲೆ ರೇಡಿಯಂ ಎನ್ನುವಂಥ ಒಂದು ಹೊಳೆಯುವ ಬಣ್ಣವನ್ನು ಹಚ್ಚುತ್ತಾರಷ್ಟೆ. ಅದರಂತೆ ಹೊಳೆಯುವ ಇನ್ನೂ ಅನೇಕ ಪೈಂಟುಗಳು ಇರುತ್ತವೆ. ಯುದ್ಧ ಕಾಲದಲ್ಲಿ ಅವುಗಳ ಉಪಯೋಗವು ಇನ್ನೂ ಹಲವು ಕೆಲಸಗಳಿಗೆ ಆಗುವಂತಿದೆ. ವಿಮಾನ ದಾಳಿಗಳಿಂದ ಕಾಪಾಡಿಕೊಳ್ಳಲಿಕ್ಕೆ ಎಲ್ಲಿಯೂ ದೀಪಗಳನ್ನು ಉರಿಸುವದಿಲ್ಲ; ಕತ್ತಲು ಮಾಡುತ್ತಾರೆ. ಆ ಸಮಯದಲ್ಲಿ ವಾಹನಗಳ ಸಂಚಾರದಿಂದ ಅನೇಕ ಅಪಘಡಗಳು ಆಗುತ್ತವೆ. ಇದನ್ನು ದೂರಮಾಡಲಿಕ್ಕೆ ಈಗ ವಾಹನಗಳಿಗೆ ಕತ್ತಲಲ್ಲಿ ಹೊಳೆಯುವ ಪೈಂಟುಗಳನ್ನು ಹಚ್ಚತೊಡಗಿರುವರು. ಈ ಪೈಂಟುಗಳು ಹೊಳೆಯುವದರಿಂದ ರಾತ್ರಿ ಕಾಲದಲ್ಲಿ ಕತ್ತಲಲ್ಲಿ ಸಂಚರಿಸುವ ವಾಹನಗಳನ್ನು ಸ್ವಲ್ಪ ದೂರದಿಂದ ಕಾಣಬಹುದಾದರೂ, ಎತ್ತರದಲ್ಲಿ ಆಕಾಶದಿಂದ ಹಾರುವ ವಿಮಾನಗಳಿಂದ ಅವನ್ನು ನೋಡಲಿಕ್ಕಾಗುವದಿಲ್ಲ. ಇಂಥ ಹೊಳೆಯುವ ಕೆಲವು ಬಣ್ಣಗಳನ್ನು ಆಲಿಪುರದ ಸಂಶೋಧನಾಲಯದಲ್ಲಿ ಭಾರತೀಯ ವಿಜ್ಞಾನಿಗಳೂ ಕಂಡುಹಿಡಿದಿದ್ದಾರೆಂಬುದು ನಮಗೆ ಗೌರವಕರವಾಗಿದೆ. ಹೀಗಾದ್ದರಿಂದ ಈ ಬಣ್ಣಗಳಿಗಾಗಿ ನಾವಿನ್ನು ಪರದೇಶಿಯರನ್ನು ಅವಲಂಬಿಸಿರಬೇಕಾದ್ದು ತಪ್ಪಿತು.

ಮುಸ್ಲಿಂ ಲೀಗನ್ನು ಸೇರುವುದಕ್ಕಿಂತ ಮರಣವೇ ಲೇಸು

ಡಾ| ಖಾನ್ ಸಾಹೇಬರ ಹೇಳಿಕೆ

ಪಾಕಿಸ್ತಾನ ಯೋಜನೆಯ ಖಂಡನೆ

ಮುಸಲ್ಮಾನರ ಹಿತಾರ್ಥಗಳ ಸಂರಕ್ಷಣೆಗಾಗಿ ಯಾವ ಯಾವ ವ್ಯವಸ್ಥೆಯಾಗಬೇಕೆಂದು ಸಲಹೆ ಕೊಡಲಿಕ್ಕಾಗಿ, ಗಡಿನಾಡಿನಲ್ಲಿ ಕಾಂಗ್ರೆಸ ಮಂತ್ರಿಮಂಡಲವು ಅಧಿಕಾರದಲ್ಲಿದ್ದಾಗ ಅಲ್ಲಿಯ ಮುಸಲ್ಮಾನ ಪ್ರಮುಖರ ಒಂದು ಶಿಷ್ಟಮಂಡಲವು ಡಾಕ್ಟರ ಖಾನಸಾಹೇಬರಲ್ಲಿಗೆ ಹೋಗಿದ್ದಿತು. ಸಂಭಾಷಣೆಯ ಕಾಲದಲ್ಲಿ ಪಾಕಿಸ್ತಾನದ ಕುರಿತು ಮಾತುಕತೆಗಳೂ ಬಂದಿದ್ದುವು. ಆಗ ಡಾಕ್ಟರ ಖಾನಸಾಹೇಬರು ಪಾಕಿಸ್ತಾನದ ಯೋಜನೆಯ ಕುರಿತು ಶಿಷ್ಟಮಂಡಲಕ್ಕೆ ಹೇಳಿದ ಮಾತುಗಳನ್ನು ಅವರೀಗ ನೆನಪಿನಿಂದ ಬರೆದಿದ್ದಾರೆ.

ಶಿಷ್ಟಮಂಡಲಕ್ಕೆ ಡಾಕ್ಟರ್ ಖಾನ್ ಸಾಹೇಬರು ಹೇಳಿದ ಮಾತುಗಳು ಈ ಪ್ರಕಾರ ಇವೆ:— 'ಮುಸ್ಲಿಂ ಲೀಗ್ ಮತ್ತು ಅದಕ್ಕೆ ಸೇರಿದ ಮುಸಲ್ಮಾನ ಪ್ರಮುಖರು ತಯಾರಿಸಿದ ಪಾಕಿಸ್ತಾನದ ಯೋಜನೆಯು ಹುಚ್ಚುತನದ್ದಾಗಿದೆ. ಆದರೂ ಈ ಅವ್ಯವಹಾರಿಕ ಹುಚ್ಚು ಯೋಜನೆಗೆ ನಾವು — ಅಂದರೆ, ಗಡಿನಾಡಿನ ಮುಸಲ್ಮಾನರು ಬೆಂಬಲ ಕೊಟ್ಟದ್ದೇವೆಂದು ಅದರ ಸಮರ್ಥಕರಾದ ನವಾಬ ಯಾರ್ ಜಂಗಬಹಾದ್ದೂರರು ಹೇಗೆ ತಿಳಿದುಕೊಂಡರೋ ನನಗೆ ಗೊತ್ತಾಗುವದಿಲ್ಲ. ಮುಸಲ್ಮಾನರೊಳಗೆ ತಪ್ಪು ಭಾವನೆಯನ್ನು ಹರಡಿಸಿ, ಈ ಯೋಜನೆಗೆ ನಮ್ಮ ಬೆಂಬಲವಿದೆ ಎಂದು ಅವರನ್ನು ಮೋಸಗೊಳಿಸಲಿಕ್ಕಾಗಿಯೇ ಜಂಗಬಹಾದ್ದೂರರು ಹೇಳಿದ್ದಾರೆಂದು ನಾವು ಊಹಿಸಬೇಕಾಗಿದೆ. ಜನತೆಯ ಹಿತಾರ್ಥವಾಗಿ ಯಾವ ಕೆಲಸ ಕಾರ್ಯಗಳನ್ನೂ ಮಾಡುತ್ತಿರದೆ, ಕೇವಲ ಬಾಯಿಬಡಾಯಿ ಕೊಚ್ಚಿಕೊಂಡು, ದೇಶದ ಶಾಂತಿಯನ್ನೂ ನೆಮ್ಮದಿಯನ್ನೂ ಕೆಡಿಸುತ್ತಿರುವ ಮುಸ್ಲಿಂ ಲೀಗನ್ನು ಸೇರುವುದಕ್ಕಿಂತ ಮುಸಲ್ಮಾನರಿಗೆ ಮರಣವೇ ಹಿತಕರವಾಗಿದೆ. ಗಡಿನಾಡಿನ ಪ್ರತಿಯೊಬ್ಬ ಮುಸಲ್ಮಾನನಿಗೆ ದೇಶೋದ್ಧಾರಕ್ಕಾಗಿ ನಿಸ್ವಾರ್ಥ ಬುದ್ಧಿಯಿಂದ ಸರ್ವತ್ಯಾಗಮಾಡುವ ಕಾರ್ಯಕ್ರಮವು ಬೇಕಾಗಿದೆ— ಈ ಉಚ್ಚ ಧ್ಯೇಯಾದರ್ಶವು ಮುಸ್ಲಿಂ ಲೀಗಿಗೆ ಇರುವದಿಲ್ಲ.'

ಗಡಿನಾಡಿನಲ್ಲಿ ಮುಸಲ್ಮಾನರು ಅಧಿಕಸಂಖ್ಯಾಕರಾಗಿದ್ದಾರೆ— ಅಲ್ಲ, ಅಲ್ಲಿ ಅವರೇ ಅವರಾಗಿರುವರು ಎಂದು ಹೇಳಿದರೂ ಅತಿಶಯೋಕ್ತಿ ಆಗಲಾರದು. ಮತ್ತೆ ಖಾನ ಅಬ್ದುಲ್ ಗಫರ್ ಖಾನ್ ಮತ್ತು ಅವರ ಸಹೋದರರಾಗಿರುವ ಡಾಕ್ಟರ್ ಖಾನ್ ಸಾಹೇಬರೆಂದರೆ ಈ ಗಡಿನಾಡಿನ ಜನತೆಗೆ ಭಾಗ್ಯದೇವತೆಗಿಂತಲೂ ಹೆಚ್ಚಾಗಿರುವರು. ಅವರನ್ನು ಜನತೆಯು ಅಷ್ಟು ಶ್ರದ್ಧೆ ಭಕ್ತಿ ವಿಶ್ವಾಸಗಳಿಂದ ಪೂಜಿಸುತ್ತದೆ. ಅಂಥವರೇ ಪಾಕಿಸ್ತಾನ ಯೋಜನೆಯನ್ನು ಹುಚ್ಚು ಕಲ್ಪನೆ ಎಂದು ಹೇಳಿ ಅದನ್ನು ಖಂಡತುಂಡ ವಿರೋಧಿಸಿದ್ದಾರೆ. ಪಾಕಿಸ್ತಾನದಿಂದ ಹಿತವಾಗುವದಿದ್ದರೆ ಅದು ಪ್ರಥಮತಃ ಗಡಿನಾಡಿನ ಮುಸಲ್ಮಾನರಿಗೆ ಆಗಬೇಕು. ಈ ಯೋಜನೆಯನ್ನು ಸಮರ್ಥಿಸುವುದಿದ್ದರೆ ಅವರು ಸಮರ್ಥಿಸಬೇಕು. ಆದರೆ ಅವರೇ ಇದನ್ನು ತಮಗೆ ಬೇಡವೆಂದು ಹೇಳಿ— ಇದು ಮುಳ್ಳು ಕಳ್ಳಿಯ ಬೇಲಿ, ಇದರಲ್ಲಿ ಜನ್ಮ ಸಿಕ್ಕಿಬಿದ್ದರೆ ಮತ್ತೆ ಅದರೊಳಗಿನಿಂದ ಬದುಕಿ ಬರುವ ಉಪಾಯವಿಲ್ಲವೆಂದು ಹೇಳಿ— ಅದನ್ನು ತಿರಸ್ಕರಿಸಿದ್ದಾರೆ. ಅವರಿಗೆ ಬೇಡವಾದ ಪಾಕಿಸ್ತಾನದ ಅಪರಂಜಿ ಒಡವೆ ಹಿಂದುಸ್ತಾನದ ಉಳಿದ ಮುಸಲ್ಮಾನರಿಗೆ ಬೇಕಾಗಿದೆಯೆ?



ಡಾ| ಖಾನ್ ಸಾಹೇಬರು

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—3—1940

FROM:

Sri K. Shivarama Nair,
Kerikcundah Estate,
Post Devegadabettu,
KADUR DISTRICT.

o,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair

ವಾರ್ಷಿಕ ಚಂದಾ ರೂ. 2-0-0 ... ರೂ. 2-18-0 Regd. No. M. 3460

ಸ್ವದೇಶಾಭಿಮಾನಿ

ಸಂಪುಟ 36] ತಾರೀಕು 9-5-1941 [ಸಂಚಿಕೆ/19]

The Bombay Life Assurance Company, Ltd.

(ESTABLISHED 1908)

Death! { is not a matter of supposition / is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.

Car Street, Mangalore.

Central Station Road, Trivandrum.

Gautam Nivas, Charni Road, Bombay No. 4.

Post Box No. 337 Mount Road, Madras.

Visweswarapuram Circle, Bangalore City.

ಅಮೃತಾಂಜನ

ತಲೆನೋವು, ಶಿರೋವೇದನೆ, ಚಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಸ್ನಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ... ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ... ಕಂಪೆನಿಯಲ್ಲಿ ದೊರೆಯುವುದು.

ಒಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಆಯುರ್ವೇದಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಹನ್ನೆರಡು ಗಂಟೆಯ ತನಕ ನೆಲ ದಡಿಯಲ್ಲಿ ಯೋಗಿಯ ಆಶ್ಚರ್ಯಕರ ಜೀವನ

ಫೆರೋಜ್‌ಪುರದ ಸ್ವಾಮಿ ಭಗವಾನ್ ದಾಸಜಿ ಎಂಬವರು ಹನ್ನೆರಡು ತಾಸು ಗಳ ತನಕ ಗಾಳಿ ಸಂಚಾರವಾಗದಂತೆ ನೆಲದಡಿಯಲ್ಲಿ ಕುಳಿತಿದ್ದು ಮತ್ತೆ ಏನೊಂದೂ ಆಯಾಸವಿಲ್ಲದೆ ಹೊರಗೆ ಬಂದಿರುವುದರಿಂದ ಎಲ್ಲರೂ ಆಶ್ಚರ್ಯ ಪಡುವಂತಹ ಒಂದು ಪ್ರದರ್ಶನ ಮಾಡಿದರು.

ಬಂಗಾಳಿಯು ರಾಷ್ಟ್ರಭಾಷೆಯಾಗಿ ಭವಿಷ್ಯ ಭಾರತದಲ್ಲಿ

ಭವಿಷ್ಯ ಭಾರತದಲ್ಲಿ ರಾಷ್ಟ್ರ ಭಾಷೆಯಾಗಿ ಬಂಗಾಳೀ ಭಾಷೆಯನ್ನು ಪ್ರಚಾರ ಮಾಡಬೇಕೆಂಬ ಉದ್ದೇಶದಿಂದ ಕಮಿಟಿಯೊಂದು ಸ್ಥಾಪಿತವಾಗಿವೆ ಬಂಗಾಳೀತರ ಪ್ರಾಂತದವರಿಗೆ ಬಂಗಾಳಿ ಕಲಿಯುವ ಬಗ್ಗೆ ಒಂದು ಪ್ರಚಾರ ಸಮಿತಿ ಏರ್ಪಟ್ಟಿದೆ. ಪ್ರಾಮುಖ್ಯವಾಗಿ ಈ ಸಮಿತಿಯ ಉದ್ದೇಶವೆಂದರೆ ಬಂಗಾಳೀ ಭಾಷೆ ಮತ್ತು ಸಾಹಿತ್ಯಗಳನ್ನು ಎಲ್ಲೆಡೆಗಳಲ್ಲಿಯೂ ಪ್ರಚಾರ ಮಾಡುವುದು ಹಾಗೂ ಬಂಗಾಳೀ ಭಾಷೆಯನ್ನು ಭವಿಷ್ಯ ಭಾರತದ ರಾಷ್ಟ್ರಭಾಷೆಯಾಗುವಂತೆ ಪ್ರಚುರಪಡಿಸುವುದು.

ಜೈಲುಗಳ ಪರಿಸ್ಥಿತಿಯನ್ನು ಸುಧಾರಿಸಲು

ನ್ಯೂ ಡಿಲ್ಲಿಯಲ್ಲಿ ಸೇರಿದ ಜೈಲು ಸುಧಾರಣಾ ಸಮಿತಿಯ ಸಭೆಯಲ್ಲಿ, ಬರುವ ಜೂನ್ ತಿಂಗಳಲ್ಲಿ ಅಖಿಲ ಭಾರತ ಜೈಲು ಸುಧಾರಣೆಯ ಕಾನ್ಫರೆನ್ಸು ಒಂದನ್ನು ಕರೆಯುವ ನಿರ್ಣಯವಾಗಿದೆ. ಶ್ರೀ ಎ. ಸಿ. ದತ್ತ ಎಂ. ಎಲ್. ಎ. (ಸೆಂಟ್ರಲ್) ಎಸೆಂಬ್ಲಿ ಡೆಪ್ಯುಟಿ ಪ್ರೆಸಿಡೆಂಟ್ ಇವರನ್ನು ಅಧ್ಯಕ್ಷರನ್ನಾಗಿ ಕೇಳಿಕೊಳ್ಳಬೇಕೆಂದೂ ನಿರ್ಣಯವಾಗಿದೆ.

ಬೆಳ್ಳಿಯ ಬೈಸಿಕಲ್

ಕಳೆದ ಯುದ್ಧದ ಸಮಯದಲ್ಲಿ ಎಲ್ಲ ಶಸ್ತ್ರಾಸ್ತ್ರಗಳ ಪ್ರಾಮುಖ್ಯ ವಿಚಾರವನ್ನು ಪರಿಶೋಧಿಸುತ್ತಿದ್ದ ವಿಜ್ಞಾನಿಯೊಬ್ಬನಿಗೆ ಯುದ್ಧದಲ್ಲಿ ಜಯವಾದ ಮೇಲೆ ಅನೇಕ ಬಹುಮಾನಗಳನ್ನು ಕೊಡಲು, ಆತನು ಅವುಗಳೆಲ್ಲವನ್ನೂ ತಿರಸ್ಕರಿಸಿದ್ದನಂತೆ; ಏಕೆಂದರೆ ಆತನು ಮಾಡಿದ ಕೆಲಸಕ್ಕೆ ಬ್ರಿಟಿಷರಿಗೆ ಜಯ ಸಿಕ್ಕಿದ್ದೇ ಹೆಚ್ಚಿನ ಬಹುಮಾನವೆಂದೂ ತನಗೆ ಕೊಟ್ಟ ಸಂಬಳವು ತಕ್ಕ ಪ್ರತಿಫಲವಿತ್ತೆಂದೂ ಹೇಳಿ ತೃಪ್ತಿ ಪಟ್ಟನಂತೆ. ಮತ್ತೆ ತನಗೆ ಒಂದು ಬೈಸಿಕಲ್ ಬೇಕೆಂಬ ಆಶೆತೋರಿಸಿ ಆತನು ಮನೆಗೆ ಹೋಗಿದ್ದನಂತೆ.

ಮರುದಿನ ಮುಂಜಾನೆ ಆತನ ಮನೆಯ ಬಾಗಿಲಲ್ಲಿ ಒಂದು ಬೆಳ್ಳಿಯ ಬೈಸಿಕಲ್ ಇದ್ದಿತು. ಅದು ಸರಕಾರದ ಇನಾಮಾಗಿ ಆತನಿಗೆ ಕೊಡಲ್ಪಟ್ಟಿತು. ಇಡೀ ಬ್ರಿಟನಿನಲ್ಲಿ ಅದು ಒಂದೇ ಒಂದು ಬೆಳ್ಳಿಯ ಬೈಸಿಕಲ್ ಇದೆ.

ಕುರುಡನೊಬ್ಬನು ಮೂರು ಮಾಳಿಗೆಯ ಉಪ್ಪರಿಗೆ ಮನೆಯನ್ನು ಕಟ್ಟಿದನು

ಇಲಿನೋಯಿಸಿನ ಕುರುಡನಾದ ಫ್ರಾನ್ಸಿಸ್ ಬರ್ಡೆಟ್ಟನು ಒಂದು ನೂತನ ಮಾದರಿ ಮೂರು ಮಾಳಿಗೆ ಉಪ್ಪರಿಗೆ ಮನೆಯೊಂದನ್ನು ಕಟ್ಟಿ ಸರ್ವರೂ ದಿಗಿಲುಗೊಳ್ಳುವಂತೆ ಮಾಡಿದ್ದಾನೆ.

ತಾನು ಒಂದು ಹೊಸ ಮನೆಯನ್ನು ಕಟ್ಟುವೆನೆಂದು ಆತ ಹೇಳಿದಾಗ ಮನೆಯವರು ನಗಾಡಿದರಂತೆ. "ನೀನೆಲ್ಲಿಯಾದರೂ ಬಿದ್ದು ಸಾಯುವಿ" ಎಂದರು ಆದರೆ ಆತ ಕೇಳಲಿಲ್ಲ. ಮನೆಕಟ್ಟಲು ಸುರುಮಾಡಿದ.

ಎರಡು ವರ್ಷಗಳ ಮೇಲೆ ಒಂದು ದಿನ ಮನೆಯವರನ್ನೆಲ್ಲಾ ಕರಕೊಂಡು ಹೋದ. ಮೂರು ಮಾಳಿಗೆಯ ಏಳು ಕೋಣೆಗಳ ಒಂದು ಉಪ್ಪರಿಗೆ ಮನೆಯನ್ನು ಒಬ್ಬನೇ ಒಬ್ಬ ಕುರುಡ ಆತನು ಕಟ್ಟಿ ಮುಗಿಸಿದನು. ಎಲ್ಲರಿಗೂ ಅತ್ಯಾಶ್ಚರ್ಯವಾಯಿತು.

ಸಾದರ-ಸ್ವೀಕಾರ

ಪಥವಿಯೋಗ: [The Parting Of The Ways] ಗಾಂಧೀಜಿಯವರ ಮುನ್ನುಡಿಯುಳ್ಳ ಪಂಡಿತ ಜವಾಹರಲಾಲರ ಮೂಲ ಆಂಗ್ಲ ಲೇಖನವನ್ನು ಶ್ರೀ ದಾಮೋದರ ಬಾಳಿಗರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ. ಕ್ರೌನ್ ೧/೮ ಆಕಾರದ ೨೪+೪ ಪುಟಗಳಿವೆ. ಬೆಲೆ ಎರಡಾಣೆ ಸಿಗುವ ಸ್ಥಳ—ದಾಮೋದರ ಬಾಳಿಗ, ಪ್ರೆಸಿಡೆಂಟ್ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ, ಷೇರ್ಸ್ ಸ್ಟೈ ಬಜಾರ್, ಮಂಗಳೂರು.

1940ನೆಯ ಇಸವಿ ಆಗಸ್ಟ್ ತಿಂಗಳ 10ನೆಯ ತಾರೀಕಿನ ದಿನ ಪಂಡಿತ ನೆಹರುಗಳು ಈ ಲೇಖನವನ್ನು ಬರೆದರು ಈ ಲೇಖನವು ಆಗಿನ ಜವಾಹರಲಾಲರ ಹಾಗೂ ಕಾಂಗ್ರೆಸಿನ ಧ್ಯೇಯ ನೀತಿಗಳನ್ನು ಸ್ಪಷ್ಟವಾದ ಶಕ್ತಿವತ್ತಾದ ಶೈಲಿಯಲ್ಲಿ ವಿವರಿಸಿ ಹೇಳುತ್ತದೆ. ಪ್ರತಿಯೊಬ್ಬ ಭಾರತೀಯನೂ ಓದಬೇಕಾದ ಪುಸ್ತಕವಿದು. ಶ್ರೀ ಮಾನ್ ಬಾಳಿಗರು ಪಂಡಿತ ನೆಹರುಗಳ ಓಜಸ್ವೀ ಆಂಗ್ಲ ಭಾಷಾ ಶೈಲಿಯ ಶಕ್ತಿ ಸ್ಫುರಿಸುವಂತೆ ಪ್ರಯತ್ನಪೂರ್ವಕ ಇದನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿರುದು ಬಹಳ ಪ್ರಶಂಸನೀಯ ಸಾಹಸವಾಗಿದೆ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. E. P 802/1940
O. S. No. 240/1928

ಮಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರ/ಇವರ ಎಕ್ಸಿಕ್ಯೂಟಿವ್ ಆಫೀಸರ ಕೆ. ಪದ್ಮನಾಭ ಕಮ್ತಿ . ಅರ್ಜಿದಾರ.

ಮತ್ತು

1. ಅಬ್ದುಲ್ಲ ಬ್ಯಾರಿ, ಸಲಿಮಾನೆ ಸ್ಕೊಲಾರರ ಮಗ, 2 ಅಬ್ದುಲ್ಲ ಬ್ಯಾರಿ, 3 ಮೈದಿಂ ಕುಂಞ ಬ್ಯಾರಿ, ಮೊಂಮುಂಞ ಬ್ಯಾರಿ ಮಕ್ಕಳು. ಕಾಸರಗೋಡು ತಾಲೂಕು ಅಡ್ಕತಬೈಲು ಗ್ರಾಮ ವಲ್ಲಿರುವವರು . ರೆಸ್ಪೊಂಡೆಂಟರು.

ರೆಸ್ಪೊಂಡೆಂಟರಿಗೆ ಈ ಮೂಲಕ ತಿಳಿಸುವದೇನೆಂದ್ರೆ —

ಅರ್ಜಿದಾರ ಭಂಡಾರದವರು ಈ ಕೋರ್ಟಿನ O. S. No. 240/1928ನೇಗೆ ಪಡದ ಡಿಕ್ರಿಯ ಬ್ಯಾಲೇಜಿನ ವಸೂಲಿ ಬಗ್ಗೆ ಈಗ ನಡಿಸುತ್ತಾಯಲ್ಲಿ ದಾಖಲಿಯಿರುವ R. E. P. No. 802/1940ನೇ ಅಮ್ಲುಜಾರಿಯಲ್ಲಿ ರೆಸ್ಪೊಂಡೆಂಟರು ಭಂಡಾರದಿಂದ ಕಾಯಂ ಗೇಣಿಗೆ ಪಡೆದ ಸ್ಥಿರಾಸ್ತಿಯ ಕಾಯಂ ಗೇಣಿ ಅನುಭವದ ಹಕ್ಕವ ಕೃತಗಳ ಹಕ್ಕು ಏಲಮಿಗೆ ಅಪೇಕ್ಷಿಸಿ (ಸದ್ರಿ) ಅಮ್ಲುಜಾರಿಯು ಏಲಂ ಇಸ್ತಿಹಾರಿನ ಶರ್ತಗಳು ನಿರ್ಣಯಿಸುವ ಬಗ್ಗೆ ತಾರೀಕು 27–5–41ಕ್ಕೆ ಇಟ್ಟಿರುತ್ತದೆ ಈ ವಿಷಯದಲ್ಲಿ ಆಕ್ಷೇಪಯಿದ್ರೆ ರೆಸ್ಪೊಂಡೆಂಟರು ಆ ದಿವಸ ನ್ಯಾಯಕ್ಕಂಡ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಹೇಳತಕ್ಕದ್ದು. ತಪ್ಪಿದ್ದಲ್ಲಿ ಅವರ ಗೈರಹಾಜ್ರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲ್ಪಡುವುದು ಎಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

Kasaragod } K. P. Anantha Rao,
8–5–1941 } Advocate for Petitioner.

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE: ESTD. 1906 **CANARA BANK LIMITED.**

ರೋಗ ವಾಸಿಯಾದ ಕೂಡಲೇ, ದಿನನಿತ್ಯ ಓವಲ್‌ಟಿನನ್ನು ಕುಡಿದು ನಿಮ್ಮ ಹಿಂದಿನ ಆರೋಗ್ಯವನ್ನು ಪಡೆಯಿರಿ. ನೀವು ಅದರ ಹಿತಕರವಾದ ಸವಿಯನ್ನು ಕೊಂಡಾಡುವಿರಿ. ನಿಶ್ಶಕ್ತವಾದ ಶರೀರಕ್ಕೆ ದುರ್ಬಲವಾದ ನರಗಳಿಗೆ, ಅದು ತಿರಿಗಿ ಶಕ್ತಿಯನ್ನು ಉಂಟುಮಾಡಿ, ಸುಖ ನಿದ್ರೆಯನ್ನುಂಟು ಮಾಡುವುದಲ್ಲದೆ ಶರೀರವನ್ನು ಕ್ರಮಪ್ರಕಾರ ಬಲಗೊಳಿಸುವುದು.

ಓವಲ್‌ಟಿನ್ ಶುದ್ಧ, ಪೂರ್ಣ ನೈಸರ್ಗಿಕ ಆಹಾರವಾಗಿದೆ. ದಿನನಿತ್ಯ ಆರೋಗ್ಯದ ಸಲುವಾಗಿ ಅದನ್ನು ಕುಡಿಯಿರಿ ಇತರ ನಕಲಿ ಮಾಲುಗಳನ್ನು ಉಪಯೋಗಿಸದಿರಿ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಅಂಗಡಿಗಳಲ್ಲಿಯೂ ಇದು ಮಾರಾಟಕ್ಕಿದೆ.

ಡಿಸ್ಟ್ರಿಬ್ಯೂಟರ್ಸ್— ಗ್ರೆಹಮ್ಸ್ ಟ್ರೇಡಿಂಗ ಕಂಪೆನಿ (ಇಂಡಿಯಾ) ಲಿಮಿಟೆಡ್, ಬೊಂಬೆ, ಕಲ್ಕತ್ತ, ಮದ್ರಾಸು, ಕರಾಚಿ, ರಂಗೂನ್.

ಓವಲ್‌ಟಿನ್
OVALTINE

ಓವಲ್ಟಿನ್ ಬಿಸ್ಕತ್ತುಗಳು

ಕೆಲವು ಓವಲ್ಟಿನ್ ಬಿಸ್ಕತ್ತುಗಳನ್ನು ಉಪಯೋಗಿಸಿ ನೋಡಿರಿ- ಮಧುರವಾಗಿವೆ, ಜೀರ್ಣಕಾರಿಯಾಗಿವೆ; ಮತ್ತು ಆರೋಗ್ಯಕರವಾಗಿವೆ. ನಿಮಗೆ ಅತ್ಯಂತ ಯೋಗ್ಯವಾಗಿದೆ. ೪ ಔನ್ಸ್ ಮತ್ತು ೮ ಔನ್ಸ್‌ಗಳ ಪೆಕೇಟುಗಳಾಗಿಯೂ ಒಂದು ಗ್ರೈನ್ ಡಬ್ಬಿಗಳಾಗಿಯೂ ಮಾರಾಟಮಾಡಲಾಗುತ್ತವೆ.

OV/26/40

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

16-5-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೬—೫—೧೯೪೧

ರಾಜೇಂದ್ರ ಬಾಬುಗಳು ಬೀಹಾರಿನ ಶಾಂತಿದೂತರಾಗುವುದು

ಜಾತೀಯ ದೊಂಬಿಗಳನ್ನು ತಡೆಗಟ್ಟಲು

— ಮಹಾತ್ಮರ ಸೂಚನೆ —

ಅಹಿಂಸೆಯ ಶಕ್ತಿ ಹಿಂಸೆಯೊದಕ್ಕಿಂತ ಹೆಚ್ಚಿನದು

ಟೈಮ್ಸ್ ಪತ್ರಿಕೆಗೆ ಉತ್ತರ



ಬಿಹಾರ್ ಪ್ರಾಂತದಲ್ಲಿ ಉಂಟಾದ ಜಾತೀಯ ದೊಂಬಿಗಳ ವಿಷಯ ಮಹಾತ್ಮಾಜಿಯವರು ಪ್ರಕಟನೆಯೊಂದನ್ನು ಹೊರಡಿಸಿದ್ದಾರೆ. ಅದರಲ್ಲಿ ಹೀಗೆ ಬರೆದಿರುವರು:

"ಜಾತಿ ದೊಂಬಿಯ ವಾರ್ತೆಗಳನ್ನು ಓದಿ ಬಹಳ ಸಂಕಟವಾಗುತ್ತದೆ. ರಾಜೇಂದ್ರ ಬಾಬುಗಳು ಈಗಲೇ ಬಿಹಾರಿಗೆ ತೆರಳಿರುವರು. ಇವರು ಅಲ್ಲಿನ ಪರಿಸ್ಥಿತಿಯನ್ನು ಹತೋಟಿ ತರುವರೆಂದು ಭರವಸೆ ನನಗಿದೆ. ಪೋಲೀಸ್ ಮತ್ತು ಮಿಲಿಟರಿಯವರ ಸಹಾಯದಿಂದ ಇನ್ನೂ ಅಲ್ಲಿ ಶಾಂತಿ ಸ್ಥಾಪನೆಯಾಗದಿದ್ದರೆ ಆ ಕೆಲಸವು ಇವರಿಂದ ಆಗುವುದು. ಪೋಲೀಸರ ಶಾಂತಿಯು ಬಲತ್ಕಾರದ್ದು. ದೊಂಬಿಯ ನಿಜವಾದ ಕಾರಣಗಳನ್ನು ಶೋಧಿಸುವುದು ಪ್ರತಿಯೊಬ್ಬ ನಾಗರಿಕನ ಹಾಗೂ ಕಾಂಗ್ರೆಸಿನವನ ಕರ್ತವ್ಯವಿರುವಂತೆ ರಾಜೇಂದ್ರ ಬಾಬುಗಳ ಕರ್ತವ್ಯವೂ ಆಗಿದೆ. ಪಾಕಿಸ್ತಾನ ವಿರೋಧ ದಿನಾಚರಣೆಯು ಕಾರಣ ಅಲ್ಲಿ ದೊಂಬಿ ಸುರುವಾಯಿತೆಂದು ತಿಳಿದುಬರುತ್ತದೆ. ಪಾಕಿಸ್ತಾನ ಅಥವಾ ಪಾಕಿಸ್ತಾನ ವಿರೋಧ ದಿನಾಚರಣೆಗಳು ಈಗ ಪ್ರಚಾರವಾಗುತ್ತವೆ. ರಾಷ್ಟ್ರೀಯ ಜ್ಞಾನವು ಬೆಳೆದಂತೆ, ಮಹತ್ವಾಕಾಂಕ್ಷೆಗಳು ಹೆಚ್ಚಿದಂತೆ ಇಂಥ ದಿನಾಚರಣೆಗಳು ಒಂದೊಂದೇ ಹೆಚ್ಚುವವು. ಇವು ಇದ್ದರೂ ನಾವು ಸಭ್ಯನಾಗರಿಕರಂತೆ ಯಾಕೆ ವರ್ತಿಸಬಾರದು? ಸಹನಾಗುಣವನ್ನು ಮರೆತು ವನ್ಯಜನರೆಂದು ತೋರಿಸಿಕೊಳ್ಳಬೇಕೇಕೆ? ಅತ್ಯಂತ ಸಂಘಟಿತವಾದ ಹಾಗೂ ಜನಪ್ರಿಯ ಸಂಸ್ಥೆಯಾದ ಕಾಂಗ್ರೆಸ್ಸಿನ ಮೇಲೆ ಶಾಂತಿ ಸಂರಕ್ಷಣೆಯ ಭಾರವಿದೆಯೆಂದು ನನಗೆ ಅನಿಸುತ್ತದೆ. ಆದರೆ, ಅದು ಮುಸ್ಲಿಂ ಲೀಗ್, ಹಿಂದೂ ಮಹಾಸಭೆ, ಹಾಗೂ ಇತರ ಸಂಸ್ಥೆಗಳ ಸಹಾಯವನ್ನೂ ಕೇಳಿರುವದು. ಈ ಪಕ್ಷಗಳೆಲ್ಲ ತಮ್ಮ ತಮ್ಮ ರಾಜಕೀಯ ಕಾರ್ಯಕ್ರಮಗಳಿರುತ್ತವೆ. ಆದರೆ ನಮ್ಮ ಧ್ಯೇಯಗಳನ್ನು ಪರರ ಮೇಲೆ ಒತ್ತಾಯ ಮಾಡಿ ಇಂದಿನಂತೆ ದೊಂಬಿಯ ಸಹಾಯದಿಂದ ಹೇರಲು ಬಯಸದಿದ್ದರೆ ನಮ್ಮ ನಮ್ಮಲ್ಲಿಯ ಮತಭೇದಗಳನ್ನು ಪರಸ್ಪರ ವಿಚಾರ ವಿನಿಮಯದಿಂದ ಬಗೆಹರಿಸಿಕೊಳ್ಳಬಹುದು. ಇದರಲ್ಲಿ ಕಾಂಗ್ರೆಸಿಗೆ ಜಯ ದೊರೆಯಬಹುದು. ಆದರೆ ಅದೊಂದು ಉದಾತ್ತ ಅಪಯಶಸ್ಸು ಎಂದೆನಿಸುವುದು. ಆದರೂ ಅಹಿಂಸೆಗೆ ಏನಾದರೂ ಬೆಲೆಯಿದ್ದರೆ ಏಕೈಕ ವೀರನಾಗಿ ಕಾರ್ಯಪ್ರವೃತ್ತನಾಗಬೇಕು. ಬಿಹಾರ್ ಪ್ರಾಂತವು ಈಗ ಉಳಿದವುಗಳಿಗೆ ಮಾರ್ಗ ಹಾಕಿಕೊಡಬಹುದು. ಬಿಹಾರಿನಲ್ಲಿ ಎಲ್ಲಾ ರಾಜೇಂದ್ರ ಬಾಬುಗಳ ವರ್ಚಸ್ಸು ತುಂಬಾ ಇದೆ. ಭೂಕಂಪ ದಿನಗಳಲ್ಲಿ ಅವರು ಮುಂದುವರಿದು ದುಡಿದು ಹೆಸರು ಪಡೆದರು. ಆಗ ಭರತಖಂಡವು ಅವರಲ್ಲಿ ಪೂರ್ಣ ವಿಶ್ವಾಸವಿಟ್ಟು ಸಹಾಯ ಮಾಡಿತು. ಈಗ ಬಿಹಾರಿನ, ಆ ಮೂಲಕ ಭಾರತದ ಶಾಂತಿದೂತರಾಗುವ ಸೌಭಾಗ್ಯವೂ ಅವರಿಗೆ ಲಭಿಸಲಿ.

ಅಹಿಂಸೆಯ ಶಕ್ತಿ ಹಿಂಸೆಗಿಂತ ಹೆಚ್ಚಾಗಿದೆ

ಟೈಮ್ಸಿನ ಟೀಕೆಗೆ ಗಾಂಧೀಜಿಯ ಉತ್ತರ

ಭಾರತೀಯರನ್ನು ಅಸಹಾಯರನ್ನಾಗ ಮಾಡಿದರೆಂದು ಅಹಿಂಸೆಯ ಆರಾಧಕರಾದ ಗಾಂಧಿಯವರು ಅಮೇರಿಯವರ ಮೇಲೆ ದೂರು ಹೊರಿಸಿದ್ದನ್ನು ನೋಡಿದರೆ ಅಮೇರಿಯವರ ಭಾಷಣದಲ್ಲಿದ್ದ ನ್ಯೂನತೆಗಳು ಗಾಂಧೀಜಿಯವರ ಪ್ರಕಟಣೆಯಲ್ಲಿಯೂ ಇರುತ್ತವೆ.' ಎಂದು ಮುಂಬಯಿಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಅಗ್ರಲೇಖದಲ್ಲಿ ಬರೆದಿದೆ. ಗಾಂಧೀಜಿಯವರು ಅದಕ್ಕೆ ಉತ್ತರ ಕೊಡುತ್ತಾ ಈ ಕೆಳಗಿನಂತೆ ಉಲ್ಲೇಖಿಸಿರುವರು.

'ಜೀವ ರಕ್ಷಕ ಹಾಗೂ ಜೀವದಾತೃ ಸತ್ಯ ಅಹಿಂಸೆಗಳು ನನಗೆ ೧೯೦೮ರಲ್ಲಿ ಮೊದಲು ಹೊಳೆದವು. ಆಗಲೂ ಬ್ರಿಟಿಷರು ಭಾರತೀಯರ ಕೈಯಲ್ಲಿಯ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಂಡು ದೊಡ್ಡ ಅಪರಾಧವನ್ನು ಮಾಡಿದರೆಂದು ನಾನು ಬರೆದಿದ್ದೆನು. ೧೯೧೮ರಲ್ಲಿ ಬ್ರಿಟಿಷ್ ಸೈನ್ಯಕ್ಕೆ ಜನರನ್ನು ಆರಿಸುವಾಗ ಪುನಃ ಅದೇ ಮಾತನ್ನು ಒತ್ತಿ ಹೇಳಿದೆನು. ಆದರೆ ಆ ದಿನಗಳು ಕಳೆದುವು. ಕಾಲವು ಈಗ ಬದಲಾಗಿರುವುದು. ಆದುದರಿಂದ ನಾನು ಈಗ ಸಂಗತಿಗಳನ್ನು ಹೇಳಿದರೆ ಅವು ಅವಾಸ್ತವವೆನಿಸುವವು. ಅಹಿಂಸೆಯನ್ನು ಯಾರೊಬ್ಬರ ಮೇಲೆಯೂ ಹೇರಲಿಕ್ಕೆ ಬರುವುದಿಲ್ಲ. ಅದು ಹೃದಯದೊಳಗಿಂದ ತಾನೇ ಬರಬೇಕು. ಬ್ರಿಟಿಷ್ ಸರಕಾರದವರು ಕೈಕೊಂಡ ಯೋಜನೆಗಳಿಂದ ಬ್ರಿಟಿಷರ ರಕ್ಷಣೆಯಾಯಿತೇ ಹೊರತು ಉಳಿದವರನ್ನು ಅಹಿಂಸಾ ವಾದಿಗಳನ್ನಾಗಿ ಮಾಡಲಿಲ್ಲ. ಅವರನ್ನು ಷಂಡ ಹಾಗೂ ಧಾರ್ಷ್ಟ್ಯ ಪ್ರವೃತ್ತಿಯವರನ್ನಾಗಿ ಮಾಡಿತು. ಬ್ರಿಟಿಷ್ ಸರಕಾರದ ಪೂರ್ವ ಪ್ರತಿನಿಧಿಯು ಸಾವಿರಾರು ಜನರನ್ನು ಅಂಕಿತದಲ್ಲಿಟ್ಟುಕೊಳ್ಳುವನೆಂದು ಬಣ ಜಂಬ ಕೊಚ್ಚುವುದು ಸರಿಯಲ್ಲ. 'ಅಹಿಂಸೆಯಲ್ಲಿ ಎಲ್ಲಾ ಜನರಿಗೂ ಸ್ವಾಗತವಿದೆ. ಅಹಿಂಸೆಯು ಧೀರರ ಸೊತ್ತು; ಹೇಡಿಗಳದಲ್ಲವೆಂದು ನಿಮ್ಮಗೆ ಹತ್ತು ಸಾವಿರ ಸಲ ಹೇಳುತ್ತೇನೆ. ಪರಿಣಾಮ ಮತ್ತು ಗುಣದಲ್ಲಿ ಅಹಿಂಸೆಯು ಹಿಂಸೆಗಿಂತ ಬೇರೆ ಇದ್ದರೂ ಅದರ ಶಕ್ತಿ ಹಿಂಸೆಗಿಂತ ಅನೇಕ ಪಾಲು ಹೆಚ್ಚಾಗಿರುವುದು.'

THE

Canara Banking Corporation Limited

(Incorporated in British India)

ESTD: 1906.

HEAD OFFICE: UDIPI, South Kanara.

SEASON DEPOSITS

ARE now accepted at all our Offices at the following rates of interest:

2 & 3 months	... ...	3% p. a.
4 & 5 "	... ...	3½% p. a.

These deposits will not be allowed to run beyond September 1941.

ಸ್ವದೇಶಾಭಿಮಾನಿ

ತಾರೀಕು 16—5—1941

ಅಮೇರಿಕವು ರಣರಂಗಕ್ಕೆ ಇಳಿಯುವುದೇ?

ಅಮೇರಿಕವು ಇಂದಿನ ಮಹಾ ಯುದ್ಧದಲ್ಲಿ ಬ್ರಿಟನಿನ ಬೆಂಬಲವಾಗಿ ಪ್ರತ್ಯಕ್ಷ ಯುದ್ಧರಂಗಕ್ಕಿಳಿದು ಕಾದಾಡುವುದೇ ಎಂಬೀ ಪ್ರಶ್ನೆಯು ರಾಜನೀತಿಜ್ಞರಲ್ಲಿ ಇಂದು ತಲೆಯೆತ್ತಿದೆ. ಏಕಾಂಗಿಯಾಗಿ ಹೋರಾಡುವ ಬ್ರಿಟನಿನ ಪರಿಸ್ಥಿತಿಯು ದಿನದಿಂದ ದಿನಕ್ಕೆ ವಿಷಮವಾಗುತ್ತಾ ಬರುವಲ್ಲಿ, ಬ್ರಿಟನಿನ ಸಕಲ ಹಿತವನ್ನೂ ಬಯಸುವ ಅಮೇರಿಕವು ರಣರಂಗಕ್ಕೆ ಇಳಿಯದಿರುವುದು ಸಾಧ್ಯವಿಲ್ಲವೆಂದು ಹಲವರ ಅಭಿಪ್ರಾಯವಿದೆ. ಇಂದಿನ ಪರಿಸ್ಥಿತಿಯಲ್ಲಿ ಯುದ್ಧಕ್ಕೆ ಸೇರದೆ, ಅಮೇರಿಕವು ಎಷ್ಟರ ಮಟ್ಟಿಗೆ ಬ್ರಿಟನಿಗೆ ನೆರವಾಗಬಹುದೋ ಅಷ್ಟರ ಮಟ್ಟಿಗೆ ಯುದ್ಧಕ್ಕೆ ಸೇರಿದರೆ ಸಹಾಯವಾಗಲಾರದೆಂದು ಇನ್ನು ಕೆಲವರು ಅಭಿಪ್ರಾಯ ಪಡುತ್ತಿದ್ದಾರೆ. ಹೀಗೆ ಇವೆರಡು ಪ್ರಶ್ನೆಗಳೂ ರಾಜನೀತಿಜ್ಞರನ್ನು ಇಂದು ಬಹಳ ಗೂಢ ವಿಚಾರಕ್ಕೆ ಎಡೆಗೊಟ್ಟಿವೆ.

ಅಮೇರಿಕವು ಥಕ್ಕನೆ ಯುದ್ಧದಲ್ಲಿ ಧುಮುಕಿಬಿಡುವುದು ಸಾಧ್ಯವಿಲ್ಲ. ಇಂದಿನ ಯುದ್ಧವು ಬ್ರಿಟನು ಜರ್ಮನಿಗಳ ನಡುವೆ ಆಗಿರುವಾಗ, ಈ ಯುದ್ಧದಲ್ಲಿ ಪ್ರಜಾಪ್ರಭುತ್ವದ ಪ್ರಬಲ ಘಟನಾತ್ಮಕ ಸಂಬಂಧವುಳ್ಳ ಅಮೇರಿಕವು ಮುಂದಿನ ಕ್ಷಣದಲ್ಲಿಯೇ ಯುದ್ಧಕ್ಕಿಳಿವುದು ಅಸಾಧ್ಯವಾದ ಮಾತು. ಯುದ್ಧಕ್ಕಿಳಿಯಬೇಕಾದರೆ ಅಮೇರಿಕದ ಕಾಂಗ್ರೆಸ್ಸಿನಲ್ಲಿ ಆ ಪ್ರಶ್ನೆಯೂ ಸಮ್ಮತಿ ಪಡೆಯಬೇಕು; ಅಲ್ಲಿನ ಸರಕಾರಕ್ಕೆ ಸಂಪೂರ್ಣ ಧೈರ್ಯವಿರಬೇಕು. ಇಷ್ಟಾಗದೆ ಯುದ್ಧದಲ್ಲಿ ಅಮೇರಿಕವು ಸೇರಲಾರದು. ಈಗಾಗಲೆ, ಅಮೇರಿಕದ ಹಿಂದಿನ ಅಧ್ಯಕ್ಷರಾದ ಹರ್ಬರ್ಟ್ ಹೂವರವರು ಅಮೇರಿಕವು ಯುದ್ಧದಲ್ಲಿ ಧುಮುಕಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಮೇರಿಕವು ಯುದ್ಧಕ್ಕೆ ಧುಮುಕಿದ ಪಕ್ಷದಲ್ಲಿ ತನ್ನ ಸಂರಕ್ಷಣೆಯನ್ನು ಭದ್ರವಾಗಿ ನೋಡಿಕೊಂಡು ಬ್ರಿಟನಿಗೆ ಹೆಚ್ಚು ಹೆಚ್ಚು ಸಹಾಯವನ್ನೂ ಕಳುಹಿಸ ಬೇಕಾಗುತ್ತದೆ. ಇದು ಅನಾವಶ್ಯಕವಾದ ಪರಿಶ್ರಮವಿರುವುದರಿಂದ, ಅಮೇರಿಕವು ಯುದ್ಧಕ್ಕೆ ಸೇರದೆಯೇ ಬ್ರಿಟನಿಗೆ ಸಹಾಯ ಸಾಮಗ್ರಿಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಿಕೊಡಬಹುದೆಂಬುದು ಒಂದು ಅಭಿಪ್ರಾಯವಿರುತ್ತದೆ. ಮಾತ್ರವಲ್ಲದೆ, ಇಟಲಿ, ಜರ್ಮನಿಗಳೊಡನೆ ಜಪಾನು ಮಾಡಿಕೊಂಡ ಒಪ್ಪಂದದಂತೆ ಅಮೇರಿಕವು ಬ್ರಿಟನಿಗೆ ಪ್ರತ್ಯಕ್ಷವಾಗಿ ನೆರವಾದಲ್ಲಿ ಜಪಾನು ಅಮೇರಿಕವನ್ನು ಇದಿರಿಸಲು ಬರಬಹುದು. ಈ ಕಲಹವನ್ನು ಬೇಕೆಂದೇ ಆಹ್ವಾನಿಸಿದಂತೆ ಆಗುತ್ತದೆ. ಇದಕ್ಕೆಲ್ಲಾ ಸಾಕಷ್ಟು ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡೇ ಅಮೇರಿಕವು ಯುದ್ಧದಲ್ಲಿ ಪ್ರತ್ಯಕ್ಷ ಸೇರಬಹುದೆಂದು ಮತವಿರುತ್ತದೆ.

ಆದರೆ, ಇದು ಕೆಲವರಿಗೆ ಸಮ್ಮತವಿಲ್ಲ. ಸ್ವಿನ್ನನರು ಹೇಳುವಂತೆ, ಇಂದು ಬ್ರಿಟನು ಬಹಳ ಕಷ್ಟದಲ್ಲಿ ಇದ್ದಿರುವಾಗ ಅದಕ್ಕೆ ಧೈರ್ಯ ಬರುವಂತೆ ಅಮೇರಿಕವು ಪ್ರತ್ಯಕ್ಷ ಯುದ್ಧದಲ್ಲಿ ಸೇರದೆ ಉಳಿದರೆ ಮುಂದೆ ಗಂಡಾಂತರವೇ ಒದಗಬಹುದೆಂದು ಹಲವರ ಶಂಕೆಯಿದೆ. ಇಂದು ವಿಶ್ರಾಂತಿಯಿಲ್ಲದೆ ಯುದ್ಧ ಮಾಡಿ ಬೆಂಡಾಗುವ ಬ್ರಿಟನ್ನು ಇದೇ ರೀತಿಯಲ್ಲಿ ಮುಂದೆಯೂ ಯುದ್ಧವಾಗುವ ಪಕ್ಷದಲ್ಲಿ ಖಂಡಿತ ಧೈರ್ಯಗುಂದಲು ಎಡೆಯಿದೆ. ಬ್ರಿಟನಿಗೆ ಅಪಜಯವಾದ ಪಕ್ಷಕ್ಕೆ ಅಮೇರಿಕಕ್ಕೂ ಖಂಡಿತವಾಗಿ ಗಂಡಾಂತರವು ತಪ್ಪಿದ್ದಲ್ಲ. ಹೀಗಿರುವಾಗ, ಇಂಥೇ ಈ ವಿಚಾರಗಳನ್ನು ಚೆನ್ನಾಗಿ ಪರಿಶೀಲಿಸಿಕೊಂಡು ಬ್ರಿಟನಿಗೆ ಯುದ್ಧದಲ್ಲಿ ಇನ್ನಷ್ಟು ಹುರುಪು ಹುಟ್ಟುವಂತೆಯೂ, ಹಾಗೆ ಮಾಡಿ ಯುದ್ಧದಲ್ಲಿ ಜಯವು ಸಿಗುವಂತೆಯೂ ಅಮೇರಿಕವು ನಿಶ್ಚಯವಾಗಿ ಯುದ್ಧದಲ್ಲಿ ಸೇರಲೇಬೇಕೆಂದು ಹೇಳುವವರಿದ್ದಾರೆ.

ಹೀಗೆ ವಿಚಾರಗಳೆರಡರ ಘರ್ಷಣೆಯುಂಟಾಗಿದೆ. ಅಮೇರಿಕವು ಈ ವಿಚಾರಗಳೆಡೆಯಲ್ಲಿ ಸಿಲುಕಿ ಬಿದ್ದಿದೆ. ಜಗತ್ತೇ ಅಮೇರಿಕದ ಚಲನ ವಲನಗಳನ್ನು ನಿರೀಕ್ಷಿಸುತ್ತಿದೆ. ಮುಂದಿನ ಕೆಲವೇ ದಿನಗಳಲ್ಲಿ ಅಮೇರಿಕವು ಒಂದು ನಿಶ್ಚಯ ನಿರ್ಧಾರಕ್ಕೆ ಬರುವುದೆಂದು ನಾವು ನಿರೀಕ್ಷಿಸುತ್ತೇವೆ.

ಲಂಡನ್ ಧಾಳಿ

ಈ ವಾರ ಲಂಡನಿನ ಮೇಲೆ ಆದ ಜರ್ಮನರ ಧಾಳಿಯ ಭೀಷಣವಾದ ಸುದ್ದಿಯು ಅಖಿಲ ಜಗತ್ತಿನ ಹೃದಯವನ್ನು ಕಂಪಿಸುವಂತಿದೆ. ಸಾವಿರಾರು ವರ್ಷಗಳಿಂದ ಇತಿಹಾಸ ಪ್ರಸಿದ್ಧವಾದ ಕಟ್ಟಡಗಳು ನಿರ್ದಯ ಬಾಂಬುಗಳ ಹೊಡೆತಕ್ಕೆ ಕುಸಿದು ಬಿದ್ದುವು; ಪಾರ್ಲಿಮೆಂಟ್ ಭವನ, ವೆಸ್ಟ್‌ಮಿನ್‌ಸ್ಟರ್ ಅಬೆ, ಬ್ರಿಟಿಷ್ ವಸ್ತು ಸಂಗ್ರಹಾಲಯಗಳು ಸಾಕಷ್ಟು ನಾಶಕ್ಕೀಡಾಗಿವೆಯೆಂಬ ವಾರ್ತೆ ಅತ್ಯಂತ ದುಃಖದಾಯಕವಿದೆ. ಯುದ್ಧ ಪ್ರಾರಂಭವಾದ ಕಾಲದಲ್ಲಿ ಗಾಂಧಿಜಿ, ಯಾವ ದುಸ್ವಪ್ನವನ್ನು ಕಂಡು ಅದರ ವಿನಯ ಪ್ರೇಮ್ಮಲ ಪರರಾಗಿದ್ದರೋ, ಆ ಆಗಬಾರದ ಸಂಗತಿಗಳು ಈ ವಾರ ಸಂಭವಿಸಿದವು!

ಲಂಡನಿನ ಮೇಲೆ ಹಲವು ತಿಂಗಳ ವರೆಗೆ ಎಲ್ಲೆಲ್ಲಿಯೂ ಎತ್ತೆತ್ತಲೂ ಬಾಂಬುಗಳ ಜಡಿಮಳೆ ಸುರಿಯಿತು! ಎಷ್ಟರ ಮಟ್ಟಿಗೆ ಇದರಿಂದ ಅನಾಹುತವಾಗಿರಬಹುದೆಂಬ ವಿಷಯವನ್ನು ಊಹಿಸುವಾಗಲೇ ಸಂಕಟವಾಗುತ್ತದೆ. ಪಾರ್ಲಿಮೆಂಟಿನ ಚರ್ಚಾಭವನ, ವೆಸ್ಟ್‌ಮಿನ್‌ಸ್ಟರ್ ಅಬೆ, ಬ್ರಿಟಿಷ್ ವಸ್ತು ಸಂಗ್ರಹಾಲಯಗಳಂತಹ ಅಪೂರ್ವ ಮಂದಿರಗಳು ಮುರಿದು ಬೀಳುವ ದೃಶ್ಯವನ್ನು ಲಂಡನಿನ ನಿವಾಸಿಕರು ಯಾವ ಬಗೆಯಿಂದ ಸಹಿಸುವರೋ ಹೇಳಲಳವಲ್ಲ. ಆದರೆ, ಇದರಿಂದೆಲ್ಲಾ ಬ್ರಿಟಿಷರು ಧೈರ್ಯಗುಂದಲು ಸಾಧ್ಯವಿಲ್ಲ. ವೈರಿಯ ಈ ತೆರನ ಅಮಾನುಷ ಹಿಂಸೆಗಳಿಂದ ಆತನ ವಿಷಯದಲ್ಲಿ ರೋಷಾಗ್ನಿಯು ಹೆಚ್ಚು ಹೆಚ್ಚಾಗಿ ಕೆಡಿಕಾರುವುದೆಂಬುದು ಖಂಡಿತ. ಯುದ್ಧದಲ್ಲಿ ಎಂತಹ ಬಲಿದಾನವನ್ನು ಮಾಡಿಯಾದರು ಹಿಟ್ಲರನನ್ನು ಸೋಲಿಸಲೇ ಬೇಕೆಂದು ಬ್ರಿಟಿಷರು ಇದರಿಂದಲೂ ನಿರ್ಧಾರವನ್ನು ಮಾಡಿಕೊಳ್ಳುವಂತಾಗುವದು.

ಹಿಟ್ಲರನು ಇಂದು ಉನ್ಮತ್ತನಾಗಿ ಕಾದಾಡುತ್ತಾನೆ, ನ್ಯಾಯಾನ್ಯಾಯಗಳನ್ನು ವಿಚಾರಿಸುವಂತೆ ತೋರುವುದಿಲ್ಲ. ಇದರಿಂದ ಆತನು ಪ್ರಪಂಚದ ದೃಷ್ಟಿಯಲ್ಲಿ ಹೆಚ್ಚಿನ ಕ್ರೂರನೂ ಅನ್ಯಾಯಗಾರನೂ ಆಗುವನಲ್ಲದೆ ಬೇರೇನೂ ಅಲ್ಲ. ಲಂಡನಿನ ಮೇಲೆ ಆದ ಈ ವಾರದ ಈ ಭೀಷಣ ಧಾಳಿಯೂ ಅದೇ ಪರಿಣಾಮವನ್ನು ಹುಟ್ಟಿಸುವಂತಿದೆ.

ಜಾತೀಯ ದೊಂಬಿಗಳಲ್ಲಿ ಕಾಂಗ್ರೆಸಿನವರು

ಇಂದು ಭಾರತದಲ್ಲಿ ಹಲವೆಡೆಗಳಲ್ಲಿ ಜಾತೀಯ ದೊಂಬಿಗಳಂತಹ ಲಜ್ಜಾಸ್ಪದವಾದ ಕೃತ್ಯಗಳು ನಡೆಯುತ್ತವೆ. ಭಾರತವು ಪರಕೀಯರ ಪ್ರಭುತ್ವವನ್ನು ಅಲ್ಲಗಳೆದು ಸ್ವತಂತ್ರ ರಾಜ್ಯಭರಣವನ್ನು ಕೇಳುವ ಈ ಕಾಲದಲ್ಲಿ ನಮ್ಮ ನಮ್ಮೊಳಗೆ ಇರುವ ಇಂತಹ ದೌರ್ಬಲ್ಯ ಪ್ರದರ್ಶನವು ನಿಜವಾಗಿಯೂ ಇದ್ದು ವಿಷಾದಕರವೂ ಲಜ್ಜಾಸ್ಪದವೂ ಆದುದು. ಆದರೂ ಇಂತಹ ದೊಂಬಿಗಳು ದಿನದಿಂದ ದಿನಕ್ಕೆ ದೇಶ ಸರ್ವತ್ರ ಪಸರಿಸುತ್ತಿರುವಲ್ಲಿ ಇವುಗಳ ಬಗ್ಗೆ ಒಬ್ಬ ಕಾಂಗ್ರೆಸಿನವನು ಏನು ಮಾಡತಕ್ಕದ್ದು ಎಂಬ ವಿಚಾರವಾಗಿ ಗಾಂಧಿಜಿಯವರು ಒಂದು ಮಹತ್ವಪೂರ್ಣವಾದ ಲೇಖನವನ್ನು ಪ್ರಕಟಿಸಿದ್ದಾರೆ.

ಜಾತೀಯ ದೊಂಬಿಗಳ ಕಾಲದಲ್ಲಿ ಕಾಂಗ್ರೆಸಿನವರು ವೀರರಂತೆ ಅಹಿಂಸೆಯನ್ನು ಪಾಲಿಸಬೇಕಾಗಿದೆಯೆಂದು ಗಾಂಧಿಜಿ ಹೇಳುತ್ತಾರೆ. ಕಾಂಗ್ರೆಸು ದೇಶ ಸರ್ವತ್ರ ಇಷ್ಟೊಂದು ಸುಸಜ್ಜಿತವಾದ ಸುಸಂಘಟಿತವಾದ ಸಂಸ್ಥೆಯಾದರೂ ಜಾತೀಯ ದಂಗೆಗಳನ್ನು ತಡೆಯುವಲ್ಲಿ ಸಾಕಷ್ಟು ಪ್ರಭಾವಶಾಲಿಯಾಗಿಲ್ಲವೆಂದೂ ಇದಕ್ಕೆ ಕಾಂಗ್ರೆಸ್ಸು ಕೆಲಸಗಾರರಲ್ಲಿರುವ ಅಹಿಂಸೆಯ ದೌರ್ಬಲ್ಯವೇ ಕಾರಣವೆಂದೂ ತಿಳಿಸುತ್ತಾರೆ. ಕಾಂಗ್ರೆಸಿನವರು ಅಹಿಂಸೆಯನ್ನು ತಮ್ಮ ತತ್ವವಾಗಿ ಅಂಗೀಕರಿಸಿದುದು ಹೇಡಿತನದ ಕುರುಹಾಗಿಲ್ಲವೆಂದೂ ವೀರತ್ವದ ಕುರುಹಾಗಿರುವುದೆಂದೂ ಗಾಂಧಿಜಿ ಎಚ್ಚರಿಸುತ್ತಾರೆ. ದಂಗೆಗಳ ಕಾಲದಲ್ಲಿ ಕಾಂಗ್ರೆಸು ಕೆಲಸಗಾರರು ಶುದ್ಧ ಅಹಿಂಸಾ ಮಾರ್ಗದಿಂದ ಅವುಗಳನ್ನು ಎದುರಿಸಿ, ದಂಗೆಗಳಾಗದಂತೆ ತಡೆಯಲು ಮುಂದೆ ಬರಬೇಕೆಂದು ಅವರು ಅಭಿಪ್ರಾಯಪಡುತ್ತಾರೆ.

ಕಾಂಗ್ರೆಸ್ಸಿನವರು ಜಾತೀಯ ಭಾವನೆಗಳಿಂದ ದೂರವಿರಬೇಕು. ಅದೆ ಕಾರಣವೇ ಅವರಿಂದ ಜಾತೀಯ ದಂಗೆಗಳ ಕಾಲದಲ್ಲಿ ಶಾಂತಿಸ್ಥಾಪನೆಯ ಕಾರ್ಯವು ಸಾಧ್ಯವಿದೆಯೆಂದು ಗಾಂಧಿಜಿ ಹೇಳುವಂತೆ ಸಕಲರೂ ನಂಬಬಹುದಾಗಿದೆ. ಹಿಂದು ಮುಸಲ್ಮಾನ ಅಥವಾ ಇತರ ಯಾವುದೇ ಜಾತಿಯ ಸಂಕುಚಿತ ಭಾವನೆಯಿಲ್ಲದೆ ವೀರರಂತೆ ಅಹಿಂಸೆಯನ್ನು ಮುಂದಿಟ್ಟು ಆತ್ಮಬಲಿದಾನವನ್ನಾದರೂ ಕಾಂಗ್ರೆಸಿನವರು ಕೊಡಲು ಮುಂದೆ ಬರುವ ಸಂದರ್ಭದಲ್ಲಿ ಇಂದು ಅಲ್ಲಲ್ಲಿ ಉಂಟಾಗುವ ದಂಗೆಗಳು ಬಹಳ ಮಟ್ಟಿಗೆ ವಿಷಮರೂಪವನ್ನು ತಾಳಲಾರವೆಂಬುದು ಖಂಡಿತ. ಇಂದಿನ ಈ ರಾಷ್ಟ್ರೀಯತೆಯ ಯುಗದಲ್ಲಿ ಭಾರತೀಯರು ಜಾತೀಯ ಸಂಕೋಚ ಭಾವನೆಯನ್ನು ಬಿಟ್ಟು ಬಿಡದೆ ಇದ್ದರೆ ಅದಕ್ಕಿಂತ ಹೆಚ್ಚಿನ ದೌರ್ಬಲ್ಯ ಬೇರಿರಲಾರದು'

ಗಾಂಧಿಜಿಯವರ ಈ ಲೇಖನವು ಜಾತೀಯ ದಂಗೆಗಳ ಕಾಲದಲ್ಲಿ ಇತಿಕರ್ತವ್ಯ ಮೂಢರಾಗಿರುವ ಕಾಂಗ್ರೆಸ್ಸಿನವರಿಗೆ ಹೊಸ ಚೈತನ್ಯವನ್ನು ಹುಟ್ಟಿಸುವಂತಹುದಾಗುವುದು. ಜಾತೀಯ ದಂಗೆಗಳು ಇಂದು ಎಲ್ಲೆಡೆಗಳಲ್ಲೂ ಹಬ್ಬುತ್ತಿರುವುದನ್ನು ನಾವು ನೋಡುತ್ತೇವೆ ಅದನ್ನು ತಡೆಯಲು ಸಾಧ್ಯವಾದ ಯತ್ನ ಮಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಹಿಂಸಾ ಮೂಲಕವಾಗಿ ತಡೆಯುವುದರಿಂದ ದ್ವೇಷ ಭಾವನೆಯೇ ಬೆಳೆಯುವ ಅವಕಾಶವಿದೆ. ಆದಕಾರಣ, ಗಾಂಧಿಜಿಯು ಸಾರುವಂತೆ ಅಹಿಂಸಾ ಮಾರ್ಗದಲ್ಲಿ, ವೀರರಂತೆ, ಅದನ್ನು ಎದುರಿಸಲು ಕಾಂಗ್ರೆಸ್ ಕೆಲಸಗಾರರು ಮುಂದೆ ಬಂದಲ್ಲಿ ಜಾತೀಯ ದಂಗೆಗಳನ್ನು ಬಹುಪಾಲಿಗೆ ಹತೋಟಿಗೆ ತರಬಹುದಾಗಿ ನಾವು ನಂಬುತ್ತೇವೆ.

ಸಾದರ ಸ್ವೀಕಾರ

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ಇದರ ನವನು ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಮುಂಬಯಿಯಲ್ಲಿ ನೆಲೆನಿಂತ ಬಿಲ್ಲವ ಸಮಾಜದವರು ಮಾಡುವ ಹಲವಾರು ಸಾರ್ವಜನಿಕೋಪಯುಕ್ತ ಚಟುವಟಿಕೆಗಳು ಅತ್ಯಂತ ಶ್ಲಾಘನೀಯವಿವೆ. ನಾಟಕ, ಉತ್ಸವಾದಿಗಳನ್ನು ಆಚರಿಸುವುದು ಮಾತ್ರವಲ್ಲದೆ ಸ್ವಯಂಸೇವಕ ದಳವೊಂದನ್ನೂ ಸಂಘಟಿಸಿ ಸಮಾಜ ಹಿತಕಾರ್ಯಗಳನ್ನು ಮಾಡುವುದು, ಬಡ ವಿದ್ಯಾರ್ಥಿಗಳಿಗೆ ಸಹಾಯ ನೀಡುವುದೇ ಮೊದಲಾದ ಆದರ್ಶಕಾರ್ಯಗಳನ್ನು ಈ ಸಂಘದವರು ಮಾಡುತ್ತಾ ಇದ್ದಾರೆ. ಸಂಘವು ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ನಾವು ಹಾರೈಸುತ್ತೇವೆ.

ಜಾತೀಯ ದೊಂಬಿಗಳಲ್ಲಿ ಕಾಂಗ್ರೆಸಿನವರು ಏನು ಮಾಡಬೇಕು?

"ಸಾಕಷ್ಟು ಧೈರ್ಯ, ಸಾಹಸಗಳನ್ನು ತೋರಿಸದಿದ್ದರೆ, ಮತ್ತು ಶಕ್ತಿಮೀರಿ ಬಲಿದಾನ ಮಾಡದಿದ್ದರೆ ನಮಗೆ ಸ್ವಾತಂತ್ರ್ಯ ಖಂಡಿತ ಸಿಗುವದಿಲ್ಲ. ಜಾತೀಯ ಒಕ್ಕಟ್ಟೂ ಸಾಧಿಸುವದಿಲ್ಲ" ಎಂದು ಗಾಂಧಿಯವರು ಜಾತೀಯ ದಂಗೆಯ ಸಂಬಂಧವಾಗಿ ಹೊರಡಿಸಿರುವ ಒಂದು ದೀರ್ಘ ಪ್ರಕಟಣೆಯಲ್ಲಿ ಅಂದಿರುವರು.

"ಹಿಂದೂ—ಮುಸಲ್ಮಾನರ ಕಲಹಗಳನ್ನು ಬಗೆಹರಿಸಲು ಕಾಂಗ್ರೆಸ್ಸಿನಿಂದ ಏನೂ ಪ್ರಯೋಜನವಾದಂತೆ ಕಂಡುಬರುವದಿಲ್ಲ. ಈ ದಂಗೆ ನಡೆದ ಸ್ಥಳಗಳಲ್ಲಿ ನಾವು ಅಂದರೆ ಕಾಂಗ್ರೆಸ್ಸಿನವರು ಅನಾಗರಿಕರಂತೆ ಮತ್ತು ಹೇಡಿಗಳಂತೆ ವರ್ತಿಸಿದ್ದೇವೆ. ಕೊಲೆ ಸುಲಿಗೆಗಳಿಗೆ ತಡೆಯೇ ಇಲ್ಲದಂತಾಗಿದೆ; ಸಾವಿರಾರು ಸ್ತ್ರೀ—ಪುರುಷರು ಈ ಅತ್ಯಾಚಾರಗಳಿಗೆ ಆಹುತಿಯಾಗಿದ್ದಾರೆ. ಸಾವಿರಾರು ಜನರು ಪ್ರಾಣ ಭಯದಿಂದ ಮನೆಮಾರುಗಳನ್ನು ಬಿಟ್ಟು ಓಡಿಹೋಗಿದ್ದಾರೆ. ಈ ಹೃದಯದ್ರಾವಕ ಪರಿಸ್ಥಿತಿಯನ್ನು ಶಾಂತಮಾಡಲು ಕಾಂಗ್ರೆಸ್ಸಿನವರು ಏನು ಮಾಡಿದ್ದಾರೆ?

"ಕಾಂಗ್ರೆಸ್ ಪುಸ್ತಕಗಳಲ್ಲಿ ಸದಸ್ಯರು ಹೆಚ್ಚಿದ ಮಾತ್ರಕ್ಕೆ ಕಾಂಗ್ರೆಸ್ಸಿನ ವರ್ಚಸ್ಸು ಹೆಚ್ಚಿದೆಯೆಂದು ನಾವು ತಿಳಿಯಬಾರದು. ಕಾಂಗ್ರೆಸಿನವರ ಯೋಗ್ಯತೆಯ ಮೇಲೆಯೇ ಕಾಂಗ್ರೆಸಿನ ವರ್ಚಸ್ಸು ಅವಲಂಬಿಸಿದೆಯೆಂಬುದನ್ನು ಲಕ್ಷ್ಯದಲ್ಲಿಡಬೇಕು. ಆದರೆ ದೊಂಬಿ ಮುಂತಾದ ಪ್ರಸಂಗಗಳಲ್ಲಿ ಕಾಂಗ್ರೆಸ್ಸಿನವರ ವರ್ಚಸ್ಸು ತೀರ ನಿರುಪಯೋಗಿಯಾಗಿದೆಯೆಂದು ಕಂಡುಬರುತ್ತದೆ. ಕಾಂಗ್ರೆಸಿನವರಲ್ಲದ ಪ್ರಮುಖರ ವರ್ಚಸ್ಸಿನಿಂದಲೂ ಹಿಂದೂ ಮುಸಲ್ಮಾನ ಜನತೆಯ ಮೇಲೆ ವಿಶೇಷ ಪರಿಣಾಮವಾದಂತೆ ಕಂಡುಬರುವದಿಲ್ಲ. ಡಾಕಾ ಮತ್ತು ಅಹಮ್ಮದಾಬಾದಗಳಲ್ಲಿ ಮುಸಲ್ಮಾನ ಪುಂಡರು ಹಿಂದೂ ಜನರಿಗೆ ಅಪಾರಹಾನಿಯನ್ನುಂಟು ಮಾಡಿದರೆಂದು ನನಗೆ ಬಂದ ಸುದ್ದಿಗಳಿಂದ ತಿಳಿದುಬರುತ್ತದೆ. ಹಿಂದೂ ಜನರು ಗಟ್ಟಿ ಮನಸ್ಸು ಮಾಡಿ ಧೈರ್ಯದಿಂದ ಈ ಪುಂಡರನ್ನು ಎದುರಿಸಬೇಕಾಗಿತ್ತು.

ಅಶಕ್ತರಿಂದ ಏನು ಪ್ರಯೋಜನ?

ಆದರೆ ಅವರು ಗಾಬರಿಯಿಂದ ಓಡಿಹೋದರು; ಮನೆಮಾರುಗಳನ್ನು ಬಿಟ್ಟು ಹೋದರು; ಅವರಲ್ಲಿ ಕೆಲವರು ಪುಂಡರಂತೆಯೇ ವರ್ತಿಸಿದರು. ಕಾಂಗ್ರೆಸ್ಸಿನ ಅಹಿಂಸೆಯಿಂದ ಈ ಜನರ ಮೇಲೆ ಏನೂ ಪರಿಣಾಮವಾಗಿಲ್ಲ. ಆದರೆ ಕಾಂಗ್ರೆಸ್ ಸಭೆಗಳಿಗೆ ಹೆಚ್ಚಾಗಿ ಬರತಕ್ಕ ಜನರು ಇವರೇ. ಇಂಥ ಜನರನ್ನು ಹಿಡಿತದಲ್ಲಿಟ್ಟುಕೊಳ್ಳಲು ಕಾಂಗ್ರೆಸಿನವರಿಗೆ ಸಾಧ್ಯವಾಗದಿದ್ದರೆ ಅವರ ಅಹಿಂಸೆಯಿಂದ ಪ್ರಯೋಜನವಾದರೂ ಏನು?

ವೀರರಂತೆ ಅಹಿಂಸೆಯನ್ನು ಪಾಲಿಸಬೇಕು
ಅಶಕ್ತರ ಅಹಿಂಸೆಯಿಂದ ಸ್ವಾತಂತ್ರ್ಯ ಸಿಗದು
— ಮಹಾತ್ಮಾ ಗಾಂಧಿಯವರ ಲೇಖನ —

ಇಂಥ ಅಶಕ್ತ ಕಾಂಗ್ರೆಸ್ಸಿನವರು ಬ್ರಿಟಿಷರು ಈ ದೇಶವನ್ನು ಬಿಟ್ಟುಹೋದ ಮೇಲೆ, ಸರಕಾರವನ್ನು ನಡೆಸುವದು ಶಕ್ಯವಿಲ್ಲ.

ವೀರರಂತೆ ವರ್ತಿಸಬೇಕು.

ಜಾತೀಯ ದೊಂಬಿ ಮೊದಲಾದವುಗಳನ್ನು ಅಡಗಿಸಲು ಅಹಿಂಸೆಯಿಂದ ಸಾಧ್ಯವಾಗದಿದ್ದರೆ, ಸ್ವಾತಂತ್ರ್ಯವೂ ಅದರಿಂದ ಸಿಗುವದಿಲ್ಲ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ರಾಷ್ಟ್ರ ರಾಜ್ಯಭಾರ ಮಾಡುವ ಅಧಿಕಾರ ಮತ್ತು ಜವಾಬದಾರಿಗಳು ಕಾಂಗ್ರೆಸ್ಸಿನವರಿಗೆ ದೊರೆಯಬೇಕಾದರೆ ಇವು ದೊರೆಯಬೇಕಾಗಿದ್ದರೆ ಕಾಂಗ್ರೆಸ್ಸಿನವರು ಅಹಿಂಸೆಯನ್ನು ವೀರರಂತೆ ಪಾಲಿಸಬೇಕು. ಹೇಡಿಗಳಂತೆ ವರ್ತಿಸಬಾರದು. ಬ್ರಿಟಿಷ ಸಾಮ್ರಾಜ್ಯ ಶಾಹಿಯಂತೆ ನಾಜೀವಾದ ಮೊದಲಾದ ಹಿಂಸಾತ್ಮಕ ಚಳವಳಗಳನ್ನು ನಾವು ಅಹಿಂಸೆಯಿಂದಲೇ ಎದುರಿಸಬೇಕಾಗಿದೆ. ಆದರೆ ನಮಗೆ ಈಗಾಗಲೇ ಚಿರಪರಿಚಿತವಾಗಿರುವ ಬ್ರಿಟಿಷ ಸಾಮ್ರಾಜ್ಯಶಾಹಿಯನ್ನಾದರೂ ಅಹಿಂಸೆಯಿಂದ ಎದುರಿಸುವ ಶಕ್ತಿ ಕಾಂಗ್ರೆಸ್ಸಿಗಿರುವುದೆ?

ಐದು ಜನರಿಂದ ಕಾಂಗ್ರೆಸ್ಸನ್ನು ಪುನಃ ಕಟ್ಟಬಲ್ಲೆನು

ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಬ್ರಿಟಿಷರಿಗೆ ಸ್ವಲ್ಪವೂ ಮನಸ್ಸಿಲ್ಲ, ಈ ಮಾತು ಹಿಂದುಸ್ಥಾನದ ಪ್ರತಿಯೊಬ್ಬ ಮನುಷ್ಯನಿಗೂ ಗೊತ್ತಿದೆ. ಈಗ ಅಮೇರಿಯವರೂ ಅದೇ ಮಾತನ್ನು ಸ್ಪಷ್ಟವಾಗಿ ಬಾಯಿಬಿಟ್ಟು ಹೇಳಿದ್ದಾರೆ. ಆದುದರಿಂದ ನಾವು—ಹಿಂಸಾ ಮಾರ್ಗದಿಂದಾಗಲಿ, ಅಹಿಂಸಾ ಮಾರ್ಗದಿಂದಾಗಲಿ—ಹೋರಾಡಲೇ ಬೇಕು. ಕಾಂಗ್ರೆಸ್, ಲೀಗ್ ಮತ್ತು ಹಿಂದೂ ಮಹಾಸಭೆ ಮೊದಲಾದ ಎಲ್ಲಾ ಸಂಸ್ಥೆಗಳೂ ಹೋರಾಡಬೇಕು. ಆದರೆ ಜಾತೀಯ ಸಂಸ್ಥೆಗಳು ರಾಷ್ಟ್ರದ ಸ್ವಾತಂತ್ರ್ಯವನ್ನು ಗಳಿಸಲಾರವು. ರಾಷ್ಟ್ರದ ಒಕ್ಕಟ್ಟಿಗಾಗಿ ಮೊದಲಿನಿಂದ ಹೋರಾಡಿದ ಸಂಸ್ಥೆಯೆಂದರೆ ಕಾಂಗ್ರೆಸ್ಸೊಂದೇ. ಆದರೆ ಕಾಂಗ್ರೆಸ್ಸಿನವರು ತಮ್ಮ ತತ್ವಗಳಿಗನುಸಾರವಾಗಿ ನಡೆಯದಿದ್ದರೆ ಆ ಹೋರಾಟವೆಲ್ಲ ವ್ಯರ್ಥವಾದಂತಾಗುವದು. ಈಗ ಹಲವು ಕಾಂಗ್ರೆಸ್ಸಿನವರು ಜೈಲಿನಲ್ಲಿರಬಹುದು; ಹಲವರು ಕಾಂಗ್ರೆಸ್ಸನ್ನೇ ಬಿಟ್ಟು ಹೋಗಿರಬಹುದು. ಈ ಸಂಬಂಧವಾಗಿ ನಾನು ಸ್ವಲ್ಪವೂ ಚಿಂತೆ ಮಾಡುವದಿಲ್ಲ. ಜಾತೀಯ ಭಾವನೆಯಿಲ್ಲದ ಐದೇ ಜನ ನಿಜವಾದ ಕಾಂಗ್ರೆಸ್ಸಿನವರಿದ್ದರೂ, ಅವರಿಂದ ನಾನು ಕಾಂಗ್ರೆಸ್ಸನ್ನು ಪುನಃ ಕಟ್ಟಬಲ್ಲೆನು. ಜಾತಿ ಧರ್ಮಗಳು ವೈಯಕ್ತಿಕ ವಿಚಾರಗಳು. ರಾಜಕೀಯ ಕ್ಷೇತ್ರದಲ್ಲಿ ಅವನ್ನು ತರಕೂಡದು.

ದೊಂಬಿಯ ಕಾಲದಲ್ಲಿ ಏನು ಮಾಡಬೇಕು?

ದೊಂಬಿಯ ಕಾಲದಲ್ಲಿ ಕಾಂಗ್ರೆಸ್ಸಿನವರು ಯಾವ ಪಕ್ಷವನ್ನೂ ವಹಿಸಬಾರದು. ಸಂಕಟ ಗ್ರಸ್ತರನ್ನು ಸಂರಕ್ಷಿಸುವುದಕ್ಕಾಗಿ ಪ್ರಾಣವನ್ನಾದರೂ ಕೊಡಲು ಸಿದ್ಧರಾಗಬೇಕು. ಎಂಥ ಕಷ್ಟ ಬಂದರೂ ಹಿಂಸೆಗೆ ಕೈಹಾಕಬಾರದು. ಹೇಡಿಗಳಿಂದ ಶಾಂತಿ ಮತ್ತು ಸ್ವಾತಂತ್ರ್ಯಗಳು ದೊರೆಯಲಾರವು. ಆದುದರಿಂದ ಗಾಬರಿಯಿಂದ ಓಡಿ ಹೋಗಬಾರದೆಂದು ಅವರು ಜನತೆಗೆ ಹೇಳಬೇಕು. ಅವರ ಮಾತನ್ನು ಅವರು ಕೇಳದಿದ್ದರೆ, ಆತ್ಮರಕ್ಷಣೆಯ ಉಪಾಯಗಳನ್ನಾದರೂ ಅವರಿಗೆ ಹೇಳಿಕೊಡಬೇಕು.

ಇಂಥ ಕೆಲಸ ಮಾಡಲು ಮುಖ್ಯವಾಗಿ ಸಾಹಸಬೇಕು, ಧೈರ್ಯಬೇಕು. ಇಂಥ ಧೈರ್ಯ ಸಾಹಸಗಳನ್ನು ಬೇರೆಯವರು ಹೇಳಿಕೊಡಲು ಸಾಧ್ಯವಿಲ್ಲ. ಆದುದರಿಂದ ಅವನ್ನು ಬೇರೆಯವರು ಕಸಿದುಕೊಳ್ಳುವದೂ ಶಕ್ಯವಿಲ್ಲ. ಹಿಂಸಾಚರಣೆಯಲ್ಲಿಯೂ ಯೋಗ್ಯ ಮತ್ತು ಅಯೋಗ್ಯ ಮಾರ್ಗಗಳಿವೆ. ನಿರಪರಾಧಿ ಜನರನ್ನು ಕೊಲ್ಲುವುದು ಸಾಹಸವೆಂದು ಯಾರೂ ಅನ್ನಲಾರರು. ತಮ್ಮ ಜಾತಿಯವರಲ್ಲವೆಂಬ ಕಾರಣದಿಂದ ಬೇರೆಯವರ ಆಸ್ತಿಯನ್ನು ಸುಡುವುದು ಎಂದಿಗೂ ನ್ಯಾಯವೆನಿಸದು. ಹೀಗೆ ಮಾಡುವದರಿಂದ ಅವರ ಧರ್ಮಕ್ಕೆ ಮತ್ತು ರಾಷ್ಟ್ರದ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟುಮಾಡಿದಂತಾಗುವದು.

ಕಾಂಗ್ರೆಸ್ಸಿನವರಿಗೆ ವೈರಿಗಳಿಲ್ಲ

"ಕಾಂಗ್ರೆಸ್ಸಿನವರಿಗೆ ವೈರಿಗಳೆಂಬುವರೇ ಇಲ್ಲ. ಪೋಲೀಸ್ ಅಥವಾ ಸಿಪಾಯರಿಂದ ರಕ್ಷಣೆ ಪಡೆಯಲು ಅವರು ಪ್ರಯತ್ನಿಸುವದಿಲ್ಲ. ಆದರೆ ಪೋಲೀಸರ ಕಾರ್ಯಕ್ಕೆ ಅವರು ಅಡ್ಡಿಯನ್ನೂ ಮಾಡುವುದಿಲ್ಲ. ಪೋಲೀಸರು ಪಕ್ಷಪಾತಿಗಳಿರುವರೆಂದು ಅಥವಾ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವರೆಂದು ಕಂಡುಬಂದರೆ, ಕಾಂಗ್ರೆಸ್ಸಿನವರು ಅದನ್ನು ತಡೆಯಬೇಕು."



[redacted]

ಯುದ್ಧ ಪರಿಸ್ಥಿತಿಯನ್ನು ಚರ್ಚಿಲರು ಸ್ಪಷ್ಟೀಕರಿಸಿದರು!

ಹೋರ್ ಬೆಲಿಷರ ಟೀಕೆಗಳು--ಲಾಯಿಡ್ ಜಾರ್ಜರ ಸೂಚನೆಗಳು

ಬ್ರಿಟಿಷರ ಮುಂದಾಳುತನವು ಸಮರ್ಪಕವಾಗಿಲ್ಲ

ಪಾರ್ಲಿಮೆಂಟಿನಲ್ಲಿ ಪ್ರಬಲ ಚರ್ಚೆಯಾಯಿತು

ಪಾರ್ಲಿಮೆಂಟಿನ ಕಾಮನ್ಸ್ ಮತ್ತು ಲಾರ್ಡ್ಸ್ ಸಭೆಗಳಲ್ಲಿ ವಿಶೇಷ ವಿವಾದವು ಉಂಟಾಯಿತು. ಬ್ರಿಟಿಷರ ಅದೂರದೃಷ್ಟಿಯನ್ನು ಟೀಕಿಸಿ, ಹೆಚ್ಚು ಸುಧಾರಣೆಯಾಗಬೇಕೆಂಬುದು ಕುರಿತು ಹೋರ್ ಬೆಲಿಶರು ಕಾಮನ್ಸ್ ಸಭೆಯಲ್ಲಿ ಮಾತನಾಡಿದರು. ಅಂತೆಯೇ ಲಾರ್ಡ್ಸ್ ಸಭೆಯಲ್ಲಿಯೂ ತೀವ್ರ ಚರ್ಚೆ ನಡೆಯಿತು.

ಕಾಮನ್ಸ್ ಸಭೆಯಲ್ಲಿ ಲಾಯಿಡ್ ಜಾರ್ಜರು ಬ್ರಿಟಿಷ್ ಯುದ್ಧ ನೀತಿಯನ್ನು ಸ್ಪಷ್ಟೀಕರಿಸುವಂತೆ ಕೇಳಿಕೊಂಡು ಈ ವರೆಗಿನ ಅಪಜಯಗಳ ವಿಷಯದಲ್ಲಿ ಆದ ಬ್ರಿಟಿಷ್ ಧೋರಣದ ಲೋಪದೋಷಗಳನ್ನು ಹೊರಗೆಡವಿ ಅನೇಕ ಸಲಹೆಗಳನ್ನಿತ್ತರು. ಚರ್ಚಿಲ್ಲರು ಹೋರ್ ಬೆಲಿಶಾ ಮತ್ತು ಲಾಯಿಡ್ ಜಾರ್ಜರಿಗೆ ಉತ್ತರಕೊಡುತ್ತಾ ಯುದ್ಧದ ವಿಷಯ ವಿಸ್ತಾರವಾದ ಭಾಷಣವೊಂದನ್ನು ಮಾಡಿದರು.

ಹೋರ್ ಬೆಲಿಶರ ಟೀಕೆ

ಇಟಲಿಯ ಮೇಲೆ ಉಚಿತ ಸಮಯದಲ್ಲಿ ಧಾಳಿಮಾಡಿದ್ದರೆ, ಗ್ರೀಸಿನಲ್ಲಿ ಅಪಜಯವಾಗುತ್ತಿರಲಿಲ್ಲ. ಬ್ರಿಟಿಷರ ಸೇನೆ ಪರಿಪೂರ್ಣವಾಗಿಲ್ಲ. ಪರಿಪೂರ್ಣವಿದ್ದಿತೆಂಬುದು ತಪ್ಪು. ದಕ್ಷಿಣ ಆಫ್ರಿಕದಲ್ಲಿ ಜರ್ಮನರಿಗೆ ಬಲಬಂತು; ಇರಾಕಿನಲ್ಲಿಯೂ ನಾವು ಹಿಂದೆಯಬೇಕಾಯಿತು. ನಮ್ಮ ಯುದ್ಧ ಯತ್ನದ ಸಂಪೂರ್ಣ ಅಭಿವೃದ್ಧಿಯಾಗಬೇಕು. ವಿಮಾನ ಟ್ಯಾಂಕಂಗಳು ಹೆಚ್ಚಾಗಬೇಕು. ನಾವು ಸುಧಾರಿಸಿದ್ದು ಸಾಕಾಗಲಿಲ್ಲ.

ಲಾಯಿಡ್ ಜಾರ್ಜರ ಸೂಚನೆಗಳು

ಗ್ರೀಕರ ಶೌರ್ಯವು ಅನುಪಮವಾದುದು. ಅವರಿಗೆ ಬ್ರಿಟಿಷರು ಸಂಪೂರ್ಣ ಬೆಂಬಲ ಕೊಟ್ಟೇ ತೀರಬೇಕಾಗಿತ್ತು. ನಮ್ಮ ಮುಖಂಡತನದ ದುರ್ಬಲತೆಯಿಂದಲೇ ನಮಗೆ ಮಹತ್ವದ ಅಪಜಯವುಂಟಾಗಿದೆ. ಟರ್ಕಿಯ ವಿಷಯ ಬ್ರಿಟನಿನ ಧೋರಣೆಯೇನೆಂದು ತಿಳಿಯಬೇಕಾಗಿದೆ. ಜರ್ಮನ್ ಹಡಗುಗಳು ಹೋಗಲು ಟರ್ಕಿ ಹಾದಿ ಕೊಟ್ಟಿದೆಯೆಂದು ಸುದ್ದಿಯುಂಟು. ಜನರಿಗೆ ಸುದ್ದಿ ಸರಿಯಾಗಿ ತಿಳಿಯಬೇಕು. ಯುದ್ಧವು ಬಹುಕಾಲದವರೆಗೆ ಸಾಗಿದರೆ ನಮಗೆ ಜಯವುಂಟು. ಮುಂದಿನ ಧಾಳಿಗೆ ಜನರನ್ನು ಆಹಾರವನ್ನೂ ಸಿದ್ಧಮಾಡಿಡಬೇಕು. ಇದಕ್ಕೆಲ್ಲಾ ಪ್ರತ್ಯೇಕ ಒಂದು ಮಂತ್ರಿಮಂಡಳ ರಚಿಸಬೇಕು.

ಚರ್ಚಿಲ್ಲರ ಉತ್ತರ

ಎಂದೂ ನಿರೀಕ್ಷಿಸದಂತಹ ಅಪಾಯ ಮತ್ತು ಸಂಕಷ್ಟಗಳನ್ನು ನಾವು ಎದುರಿಸಿ ಪಾರಾದೆವು. ಸಹಿಸಲಶಕ್ಯವಾದ ಸಂಕಷ್ಟಗಳು ನಮಗೆ ಬಂದವು. ನಮ್ಮ ಸ್ವಾತಂತ್ರ್ಯ ಮತ್ತು ಅಸ್ತಿತ್ವದ ಬಗ್ಗೆ ನಾವು ಹೋರಾಡುತ್ತೇವೆ.

ಗ್ರೀಸಿನಲ್ಲಿ ಇಟಲಿಯನ್ನು ಒಳ್ಳೆಯ ಪರಾಕ್ರಮದಿಂದ ಹಿಮ್ಮೆಟ್ಟಿಸಿದ ಬಳಿಕ ಮುಂದಿನ ಭವಿಷ್ಯವನ್ನು ಖೇದದಿಂದ ನಿರೀಕ್ಷಿಸುವ ಸಂದರ್ಭವುಂಟಾಯಿತು. ಗ್ರೀಸಿಗೆ ಇನ್ನಾದರೂ ನಾವು ನೆರವಾಗಲು ಸಿದ್ಧರಿದ್ದೇವೆ.

ಜರ್ಮನರು ಎಷ್ಟು ಯತ್ನಿಸಿದರೂ ಹೊಸ ಯೂರೋಪನ್ನು ಕಟ್ಟುವುದು ಅವರಿಗೆ ಶಕ್ಯವಿಲ್ಲ. ಇತಿಹಾಸವು ಎಂದೂ ದ್ವೇಷಿಸದಷ್ಟು ದ್ವೇಷವನ್ನು ಪ್ರತಿಯೊಂದು ರಾಷ್ಟ್ರವೂ ಜರ್ಮನಿಯ ಮೇಲೆ ಇಟ್ಟಿದೆ.

ನಮಗೆ ಪ್ರಬಲವಾದ ಅಮೇರಿಕೆಯ ಸಹಾಯವಿದೆ. ಹೋರ್ ಬೆಲಿಶರು ಅಧಿಕಾರ ಬಿಡುವಾಗ ಎಷ್ಟು ಟ್ಯಾಂಕುಗಳಿದ್ದವೋ ಅಷ್ಟು ಈಗಲೂ ಇವೆ. ಈ ವರ್ಷ ಕೊನೆಗೊಳ್ಳುವುದರೊಳಗೆ ಅದರ ಇಮ್ಮಡಿಯಾಗಬಹುದು. ಸದ್ಯದ ಸರಕಾರ ಯಶಸ್ವಿಯಾಗಿ ಕೆಲಸಮಾಡುತ್ತದೆ. ಆದ್ದರಿಂದ ಅದನ್ನು ಬದಲಾವಣೆ ಮಾಡುವ ಅವಶ್ಯವಿಲ್ಲ.

ನಾವು ಜಲಯುದ್ಧ ವೈಮಾನಿಕ ಯುದ್ಧಗಳಲ್ಲಿ ಜಯಶೀಲರಾಗಬಹುದು. ನೈಲ್ ನದಿಯ ತಪ್ಪಲು, ಮಾಲ್ಟಾ, ಸುವೇಜ್ ಕಾಲುವೆ ಮೊದಲಾದ ಕಡೆಗಳಲ್ಲಿ ನಮಗೆ ವಿಶೇಷ ನಷ್ಟವಾಗಿದೆ. ಅಬಿಸೀನಿಯ ಮತ್ತು ಸೋಮಾಲಿಲೇಂಡುಗಳಲ್ಲಿ ಇಟಲಿಯನರು ಸೋಲುತ್ತಾ ಬಂದಿದ್ದಾರೆ.

ಲಾಯಿಡ್ ಜಾರ್ಜ್

ಜನರನ್ನು ದಿಗಿಲುಗೊಳಿಸುವ ರೀತಿಯ ಧೈರ್ಯದಿಂದ ಜರ್ಮನರು ಮುಂದೆ ಬಂದರು. ಆದರೆ ಈಜಿಪ್ಟಿನಲ್ಲಿ ಅವರಿಗೆ ಒಳ್ಳೆಯ ಪ್ರತಿಭಟನೆ ಸಿಕ್ಕಿ ಅವರು ಕಟ್ಟಿಸ್ತರಾಗಿದ್ದಾರೆ. ಈಜಿಪ್ತನ್ನು ಗೆಲ್ಲುವುದು ಸುಲಭವಲ್ಲ. ಕಡಲ ಮೇಲೆ ನಮ್ಮೊಡೆತನವಿರುವುದರಿಂದ ಆಫ್ರಿಕೆದಲ್ಲಿ ಎಂದೂ ಉಂಟಾಗದ ಅಪಜಯ ಜರ್ಮನರಿಗೆ ಆಗಿದೆ.

ಇರಾಕಿನಲ್ಲಿ ರಶೀಧ ಅಲಿಯನ್ನು ಹೊರಗೆ ಹಾಕುವಂತೆ ಇರಾಕಿನಾಗೆ ಸಹಾಯವಾಗಿ ಬೇಗನೇ ಯುದ್ಧದ ಒಡೆತನವನ್ನು ಕೊನೆಗೊಳಿಸಬೇಕೆಂದಿದೆ.

ಅತ್ಲಾಂತಿಕ ಯುದ್ಧದಲ್ಲಿ ಬಹಳ ನಷ್ಟವಾದರೂ ನಾವು ಮುಂದುವರಿದಿದ್ದೇವೆ. ಈ ವರ್ಷಕ್ಕಿಂತ ಮುಂದಿನ ವರ್ಷ ಹೆಚ್ಚಿನ ಶಸ್ತ್ರಾಸ್ತ್ರ ಸಜ್ಜಿತರಾಗುವೆವು. ಗ್ಲಾಸ್ಗೋರಲ್ಲಿ ನಮ್ಮ ಪರಿಸ್ಥಿತಿ ಬಹಳ ಸುಧಾರಿಸುವುದು. ನಾವೂ ದಿನದಿಂದ ದಿನಕ್ಕೆ ನಿಮಿಷ ನಿಮಿಷಕ್ಕೆ ಜೀವನ ಮರಣ ಸಂಗ್ರಾಮ ಮಾಡುತ್ತೇವೆ. ಹಿಟ್ಲರನಿಗೂ ಆ ಪರಿಸ್ಥಿತಿಯು ತಪ್ಪಲಿಲ್ಲ.

ಗಾಂಧಿ ಟೋಪಿಯ ಮೇಲೆ ನಿಷೇಧ

ಮೇಲಯದಲ್ಲಿ ಗಾಂಧಿ ಟೋಪಿ ಇಟ್ಟ ಬಗ್ಗೆ ಒಂದು ಕಲಹವಾಯಿತು. ಕೆಲಸಗಾರರು ಗಾಂಧಿ ಟೋಪಿ ಇಟ್ಟ ಬಗ್ಗೆ ನೋರ್ತ್ ಹಮ್ಮೋಕ್ ಎಸ್ಟೇಟಿನ ಮೇನೇಜ್‌ಮೆಂಟಿನವರು ಆಕ್ಷೇಪವೆತ್ತಲು ಕೆಲಸಗಾರರು ಮುಷ್ಕರ ಹಿಡಿದರು. ಅಲ್ಲಿನ ಗವರ್ನಮೆಂಟ್ ಏಜೆಂಟರಾದ ಶ್ರೀ. ಎನ್. ದತ್ತರು ಇದನ್ನು ಶಾಂತರೀತಿಯಿಂದ ರಾಜಿ ಮಾಡಿದರು. ಮೇನೇಜ್‌ಮೆಂಟಿನವರು, ಕೆಲಸಗಾರರು ಗಾಂಧಿ ಟೋಪಿ ಇಡಲು ಹಕ್ಕುಳ್ಳವರೆಂದು ಒಪ್ಪಿದ್ದಾರೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳಿಗನುಸಾರವಾಗಿ ನಡೆಯುವ ದೇಶಗಳಲ್ಲಿ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬೆಳೆಯುವ ಮುಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುವೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4.





ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.
ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜಂಟುಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜಂಟ್ ... ಕಂಪೆನಿ, ಹಂಪನಕಟ್ಟಾ ಮಂಗಳೂರು

ಈ ವಾರದ ಕತೆ:

ಮಂಗಲ ಪ್ರಭಾತ

ಲೇಖಕರು: ಕೆ. ಎಸ್. ಶರ್ಮ

ಮುಸ್ಸಂಜೆ. ಚಂದ್ರಮಂಡಲವು ಹೊಂಬಣ್ಣದಿಂದ ಬೆಳಗುತ್ತಿದೆ. ಪ್ರಕೃತಿದೇವಿಯು ಶಾಂತಿ ಸಾಮ್ರಾಜ್ಯದ ಸುಖಾನುಭವದಲ್ಲಿದ್ದಾಳೆ. ಭೂಮಾತೆಯು ಮಾನವ ಮುದ್ರೆಯಿಂದ ನವಡಿಸಿದ್ದಾಳೆ; ಆದರೆ ಶಾಂತಿಯಿಲ್ಲ. ಪುತ್ರರ ಅಭ್ಯುದಯವನ್ನೇ ಕೋರುವ ಪೂಜ್ಯ ಮಾತೆಯು ಕುಪಥದಲ್ಲಿ ಪ್ರವರ್ತಿಸುವ ತನ್ನ ಪ್ರೇಮಪುತ್ರರನ್ನು ಕಂಡು ಮರುಗುತ್ತಿದ್ದಾಳೆ.

ಆ ವೇಳೆಗೆ ಒಂದು ವ್ಯಕ್ತಿಯು ರಾಜಮಾರ್ಗವನ್ನು ಹಿಡಿದು ಬರುತಿತ್ತು. ಏನದು ಉಜ್ವಲಾಕಾರ. ವಿಕಟಹಾಸವು ಮುಖದಲ್ಲಿ ಆಗಾಗ ಮೂಡುತಿತ್ತು. ವ್ಯಕ್ತಿಯು ಯಾರು?

ಆತನೇ ಜಯರಾಮ. ಆತನೋರ್ವ ಹಿಂದೂ ಯುವಕ. ತನ್ನ ನೆತ್ತರನ್ನು ಸುರಿಸಿ ದಿನವಿಡೀ ದುಡಿಯುವ ಓರ್ವ ಕಷ್ಟಜೀವಿ. ಆದರೇನು? ಆ ಕಷ್ಟವೆಲ್ಲವನ್ನೂ ಹೋಗಲಾಡಿಸಲು ಆತನು ಸುರೆಯೇ ದೈವಿಕ ಶಕ್ತಿಯೆಂದು ಭಾವಿಸಿದ್ದ. ಪಾಪ ಆತನ ಜೀವನದಲ್ಲಿ ಇಂದಿನವರೆವಿಗೆ ಒಂದು ದಿನವಾದರೂ ಅವನ ಹೆಂಡಿರು ಮಕ್ಕಳು ಸುಖವನ್ನು ಕಂಡಿಲ್ಲ. ಆತನ ಕೋಪಕ್ಕೆ ಬಲಿಯಾಗದ ದಿನವಿಲ್ಲ ಆ ಬಡ ಜೀವಿಗಳು. ಸುಖದಿಂದ ಒಂದು ತುತ್ತೂ ಸಹ ಆ ಬಡ ಜೀವಿಗಳ ಹೊಟ್ಟೆಗೆ ಹೋದ ಹೊತ್ತಿಲ್ಲ.

ಜಯರಾಮನು ಬರುತ್ತಲೇ ಇದ್ದ. ಎಡವಿ ಎಡವಿ ಬೀಳುತ್ತಾ ಪೃಥ್ವೀಮಾತೆಯ ಮೇಲೆ ವಿಕಟವಾಗಿ ಉಗುಳುತ್ತಿದ್ದ. ಸುರೆಯು ಶಕ್ತಿಯೋ ದೈವಿಕ ಶಕ್ತಿಯೆಂದು ಬಗೆದ ಆ ವ್ಯಕ್ತಿಗೆ ಅದೇನು ಗೊತ್ತು ತಾನು ಅನ್ಯಾಯದ ದಾರಿ ಹಿಡಿದಿರುವೆನೆಂದು? ಆದರೆ ಸುರೆಯ ಅಮಲಿಳಿದ ಬಳಿಕ ಮಾತ್ರ ತಾನಿನ್ನು ಅನ್ಯಾಯದ ದಾರಿಹಿಡಿಯೆನೆಂದು ಅನ್ನುತ್ತಿದ್ದ. ಎಂದಿನಂತೆ ಸಾಯಂಕಾಲ ಹಿಂದಿನದೇ ಗತಿ.

ಬರಬರುತ್ತಾ ಜಯರಾಮನು ಮನೆಯನ್ನು ಹೊಕ್ಕನು. ಕೊಠಡಿಯಲ್ಲಿ ಜಯರಾಮನು ಯಾರನ್ನೂ ಕಾಣಲಿಲ್ಲ. ಸಿಟ್ಟಿನ ಭರದಿಂದ ಗಟ್ಟಿಯಾಗಿ ಪತ್ನಿಯನ್ನು ಕೂಗಿದ. ಮರುಕ್ಷಣದಲ್ಲೇ ಆಕೆಯು ಬಂದಳು. ಜಯರಾಮನು ಕೋಪದ ಪರಾಕಾಷ್ಠೆಯಲ್ಲಿದ್ದ. ಕಣ್ಣುಗಳು ಗರಗರನೆ ತಿರುಗುತ್ತಿದ್ದುವು. ಜಯರಾಮನು ಏನನ್ನೂ ಅನ್ನದೆ ಒಂದೆಡೆ ಬಿದ್ದುಬಿಟ್ಟನು.

ಉತ್ತರ ಕ್ಷಣದಲ್ಲೇ ಎದ್ದು ನೇರವಾಗಿ ಪತ್ನಿಯ ಬಳಿ ಬಂದ. ಕೋಪದಿಂದ ತೊದಲುತ್ತಾ 'ಎಲ್ಲಿ ಹೋಗಿದ್ದೆ?' ಎಂದು ಬಲವಾಗಿ ಕೇಳಿದ.

'ನಾನು ಎಲ್ಲೂ ಹೋಗಿಲ್ಲ. ಒಳಗೆನೇ ಇದ್ದೆ' ಭೀತಿಯಿಂದ ಹೇಳಿದಳಾಕೆ.

'ಎಲ್ಲೂ ಹೋಗಿಲ್ಲ. ಅಲ್ಲವೆ? ಬೇಗ ಹೇಳು' ಎಂದು ಆವೇಶದಿಂದ ಕೇಳಿದ.

'ನಾನು ಎಲ್ಲೂ ಹೋಗಿಲ್ಲ. ಮಗುವನ್ನು ತೂಗುತಿದ್ದೆ' ಎಂದಂದಳು. ಜಯರಾಮನು ಸಹಿಸದಾದ. ಸುರೆಯು ಅಮಲೇರಿದ ಆ ನರಪಿಶಾಚಿಯು ಪತ್ನಿಯನ್ನು ಬಲವಾಗಿ ಹೊಡೆದುಬಿಟ್ಟ.

ಭೀಕರವಾದ ಹೊಡೆತದಿಂದ ಆಕೆಯು ಮೂರ್ಛಿತಳಾದಳು. ಒಂದೆರಡು ಗಂಟೆ ಸ್ಮೃತಿಯೇ ಬರಲಿಲ್ಲ. ಕೆಲಕ್ಷಣದ ತರುವಾಯ ಆಕೆಯು ಮೆಲ್ಲಗೆ ಎದ್ದಳು. ರಾತ್ರಿಯು ಬಹಳವಾಗಿತ್ತು. ಮೈಕೈ ಎಲ್ಲಾ ನೋವು. ಕಣ್ಣುಗಳು ಅನಂತ ಅಶ್ರುಗಳನ್ನು ಸುರಿಸುತಿದ್ದುವು. ಮೆಲ್ಲನೆ ಒಳಬಂದಳು. ಒಂದೆಡೆ ಮಲಗಿಕೊಂಡಳು.

★

ಬೆಳಗ್ಗೆ ಜಯರಾಮನೆದ್ದ. ಹಿಂದಿನ ರಾತ್ರಿಯದ್ದನ್ನೆಲ್ಲಾ ಒಂದು ಬಾರಿ ಸ್ಮರಿಸಿದ. ಅತ್ಯಂತ ದುಃಖಗೊಂಡ. ನೇರವಾಗಿ ಪತ್ನಿಯ ಬಳಿ ಬಂದ.

ಜಯರಾಮನ ಕಣ್ಣುಗಳಿಂದ ಎರಡು ಬಿಂದು ಕಣ್ಣೀರು ಒಸರಿತು. ಹಿಂದೆ ತಾನು ಮಾಡಿದ ಅಪರಾಧಕ್ಕೆ ಪಶ್ಚಾತ್ತಾಪಪಟ್ಟ. ಇನ್ನು ಮುಂದೆ ತಾನು ಸುರೆಯನ್ನು ಸೇವಿಸಲಾರೆನೆಂದು ಪ್ರತಿಜ್ಞೆ ಮಾಡಿದ. ಜಯರಾಮನ ಪ್ರತಿಜ್ಞೆಯನ್ನು ಕೇಳಿ ಆತನ ಪತ್ನಿಯು ಆನಂದಿಸಿದಳು. ತನ್ನ ಜೀವನದಲ್ಲಿ ಇನ್ನು ಮುಂದೆ ಸೌಭಾಗ್ಯ ಸೂರ್ಯನನ್ನು ಕಾಣಬಹುದೆಂದು ಬಗೆದಳು. ಜಯರಾಮನು ತನ್ನ ಕೆಲಸಕ್ಕೆ ಹೊರಡಲು ಸಿದ್ಧನಾದ. ಆತನ ಪುಟ್ಟ ಮಗುವು ತಾಯಿಯ ಬಳಿಯಿಂದ ತಂದೆಯ ಬಳಿಗೆ ಓಡಿಬಂದಿತು. ಜಯರಾಮನು ಒಂದು ಬಾರಿ ಮುದ್ದಿಟ್ಟು ಹೊರಟುಬಿಟ್ಟ.

★

ಜಯರಾಮನು ಪ್ರತಿಜ್ಞೆ ಮಾಡಿ ಇಂದಿಗೆ ೫-೬ ದಿನಗಳಾಗಿವೆ. ಈ ದಿನಗಳಲ್ಲಿ ಆತನು ಸುರೆಯ ಅಂಗಡಿಗೆ ಹೋಗಲೂ ಇಲ್ಲ.

ಒಂದು ಸಂಜೆ! ಜಯರಾಮನು ಇನ್ನೂ ಬರಲಿಲ್ಲ. ಪ್ರೀತಿಯ ಪತ್ನಿಯು ಆತನಿಗಾಗಿ ಕಾಯುತ್ತಿದ್ದಾಳೆ. ಈ ವೇಳೆಗೆ ಸರಿಯಾಗಿ ಹೊರಗಿನಿಂದ ಜಯರಾಮನು ಗಟ್ಟಿಯಾಗಿ ಹೆಂಡತಿಯನ್ನು ಕರೆದ. ಆಕೆಯು ದಿಗಿಲಾದಳು. ಎಂದಿನಂತೆ ತನ್ನ ಪತಿಯು ಇಂದು ಪುನಃ ಸುರೆಯ ಅಂಗಡಿಗೆ ಕಾಲಿಟ್ಟನೆಂದು ಭಾವಿಸಿದಳು. ಹೆದರುತ್ತಾ ಹೊರಬಂದಳು. ಜಯರಾಮನು ಒಳಬಂದ. ತಂದೆಯನ್ನು ಕಂಡು ಆತನ ಪ್ರೀತಿಯ ಮಗನು ಓಡಿಬಂದನು. ಬಲವಾಗಿ ಅಪ್ಪಿಕೊಂಡನು. ಜಯರಾಮನು ಆವೇಶದಲ್ಲಿದ್ದ. ಕಣ್ಣುಗಳು ಆರಕ್ತವಾಗಿದ್ದುವು. ಸುರಾಪಿಶಾಚವು ಮನದಲ್ಲಿ ನಲಿಯುತಿತ್ತು. ತನ್ನನ್ನು ಬಲವಾಗಿ ಅಪ್ಪಿಕೊಂಡ ಮಗುವನ್ನು ಕಂಡು ಒಮ್ಮೆ ವಿಕಟವಾಗಿ ನಕ್ಕುಬಿಟ್ಟ. ಮರುಕ್ಷಣದಲ್ಲೇ ಆವೇಶಭರದಿಂದ ಬಲವಾಗಿ ಮಗುವನ್ನು ಬೀಸಿ ಹೊಡೆದುಬಿಟ್ಟ. ಮಗು ಚೀರಿ ಒಂದೆಡೆ ಬಿದ್ದಿತು. ಹೃದಯಭೇದಕ ಮಗುವಿನ ಆರ್ತಧ್ವನಿಯನ್ನು ಕೇಳಿ ಮಾತೃಹೃದಯವು ಕರಗಿ ನೀರಾಯಿತು. ಓಡಿಬಂದಳು. ಒಂದೇ ಬಾರಿ ಮಗುವನ್ನು ಬಹುಬಾರಿ ಚುಂಬಿಸಿದಳು. ಕರೆದಳು, ಮೈತಡವಿದಳು. ಆದರೆ, ಮಗುವು ಉಸಿರಲಿಲ್ಲ. ತಂದೆಯ ಕೋಪಕ್ಕೆ ಬಲಿಯಾಗಿದ್ದ ಆ ಮಗುವನ್ನು ಭೂದೇವಿಯು ತನ್ನ ಮಡಿಲನ್ನು ಸೇರಿಸಿಕೊಂಡಿದ್ದಳು. ಮಾತೃ ಹೃದಯವು ಒಂದೆಡೆ ಬಿದ್ದುಕೊಂಡಿತ್ತು.

★

ಪ್ರೇಮ ಪುತ್ರನ ಮರಣವು ಸುರೆಯು ಮರಳಿದ ಬಳಿಕ ಜಯರಾಮನಿಗೆ ತಿಳಿಯಬಂತು. ಏನು ಮಾಡಲೆಂದು ಆತನಿಗೆ ತಿಳಿಯಲಿಲ್ಲ. ಬಹು ಬಾರಿ ಆತನು ಪತ್ನಿಯ ಕೂಡೆ ಕ್ಷಮೆ ಕೇಳಿದನು. ದೇವರಲ್ಲಿ ತನ್ನ ತಪ್ಪನ್ನು ಹೇಳಿಕೊಂಡನು. ಆದರೇನು?

ಜಯರಾಮನಿಗೆ ಈಗ ಅದೊಂದು ವಿರಕ್ತಿ. ಯಾವ ಬಯಕೆಯೂ ಇಲ್ಲ. ಯಾರೊಡನೆಯೂ ಕೂಡಿ ಬಾಳಬೇಕೆಂಬ ಆಸೆಯಿಲ್ಲ ಅವನಿಗೆ.

ಒಂದು ಪ್ರಾತಃಕಾಲ. ಪ್ರಭಾತದೇವಿಯ ಕಮನೀಯ ನೋಟ. ಎಲ್ಲೆಲ್ಲೂ ನೀರವತೆ. ಶಾಂತಿ. ಜಯರಾಮ ನಿದ್ದೆಯಲ್ಲಿದ್ದ. ಸುಖ ನಿದ್ರೆಯಲ್ಲಿ ಇದ್ದ. ಅವನಿಗೊಂದು ಕನಸು. ಭೂದೇವಿಯು ಶಾಂತಮುದ್ರೆಯಿಂದ ಜಯರಾಮನ ಎದುರಿಗೆ ನಿಂತಿದ್ದಾಳೆ. ಪ್ರೀತಿಯ ನೋಟಗಳಿಂದ ನೋಡುತ್ತಾಳೆ.

'ಜಯರಾಮ, ಅದೇಕೆ ನಿನ್ನ ಜೀವನವು ಬೇಸರದಿಂದ ಕೂಡಿದೆ?'

ಜಯರಾಮ ಕಣ್ತೆರೆದು ನೋಡಿದ. ಇದೇನು ದಿವ್ಯಮಂಗಲ ಮೂರ್ತಿ.

'ತಾಯಿ, ನೀನಾರು? ಏಕೆ ಕರೆವೆ. ಅಪರಾಧಿಯನ್ನೇಕೆ ಕರೆವೆ?'

ಜಯರಾಮ ಮತ್ತೊ ಕಣ್ತೆರೆದ. ಸಂಕಲೆಯಿಂದ ಬಂಧಿತಳಾದ ತಾಯಿಯನ್ನು ಕಂಡ. ಕೈಮುಗಿದ.

'ಜಯರಾಮ, ಕಣ್ತೆರೆ. ಬೆಳಗಾಯಿತು. ಕಳೆದುದನ್ನು ಚಿಂತಿಸದಿರು. ನೀನು ಶಾಂತಿಯನ್ನು ಹೊಂದು. ನಿನ್ನಂತೆ ಸುರಪಾನ ಮಾಡಿದ್ದವರ ವ್ಯಸನವನ್ನು ಹೋಗಲಾಡಿಸುವುದರಮೂಲಕ ಶಾಂತಿಯನ್ನು ಪಡೆ. ಪರದಾಸಿಯಾದ ನಿನ್ನ ತಾಯಿಯ ಸ್ವಾತಂತ್ರ್ಯಕ್ಕಾಗಿ ಹೋರಾಡು. ಎದ್ದೇಳು.' ತಾಯಿ ಮರೆಯಾದಳು. ಜಯರಾಮನು ಎಚ್ಚತ್ತನು. ಆತನಲ್ಲಿ ಏನೋ ಒಂದು ಭಾವವು ಮೂಡಿತ್ತು. ಆತನು ಶಾಂತಿಯನ್ನು ಪಡೆದನು. ತಾಯಿಯನ್ನು ಕಂಡನು. ಪುಣ್ಯನಾದನು. ತಾಯಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಬದ್ಧಕಂಕಣನಾದನು. ತನ್ನ ಪ್ರಯತ್ನಕ್ಕೆ ಅಂದೇ 'ಮಂಗಲ ಪ್ರಭಾತ'ವೆಂದರಿತನು.

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director.*

ರಾಜವೈದ್ಯ ಬಾಬಾ ಗುಣೆ ಇವರ
"ಸುರಂಗಾ" ಎಣ್ಣೆ
ದಿವ್ಯ ಔಷಧಿಗಳಿಂದ ಕೂಡಿ— ಕೂದಲು ಬೀಳುವಿಕೆ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು. ಅಲ್ಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ವಿಹಾರಿಸುತ್ತದೆ.
೪ ಔನ್ಸಿನ ಬಾಟ್ಲಿಗೆ ರೂ. ೧—೦—೦.
Agents:
Anglo Oriental Pharmacy, Hampankatta.
Stocks also at:
R. V. Kamath & Co., Car-street Mangalore.

ಭಾರತೀಯನ ಬಾಳು ನಾಯಿಯದಕಿಂತಲೂ ಕೀಳು!

ಸಮುದ್ರದಾಚೆ ಬಿಡ ಭಾರತೀಯನು ಪಡುವ ಬವಣೆ

ಅಫ್ಘಾನರಿಗೆ ಅವನು ಮಾನವಜೀವಿಯೇ ಅಲ್ಲ!

ಆಳುವ ಸರಕಾರವು ಯೋಚಿಸುವುದಿಲ್ಲವೆ?

ಭಾರತದ ಹೊರಗೆ, ಪರದೇಶಗಳಲ್ಲಿ ವಾಸಿಸುತ್ತಿರುವ ನಮ್ಮ ಬಂಧುಗಳ ಸಂಖ್ಯೆಯೆಷ್ಟು?

೨,೫೦೫,೨೫೮!

ಇವರಿಷ್ಟು ಮಂದಿ ಜೀವಿಸುತ್ತಿರುವ ಜೀವನವಾವುದು? ನಾಯಿಯ ಜೀವನ! ನರಕದ ಜೀವನ!

'ಕರಿಯ! ಕರಿಯ!' ಎಂದು ಕರೆಸಿಕೊಂಡು, ಹೊಟೇಲುಗಳಲ್ಲಿ—ಕ್ಷೌರದಂಗಡಿಗಳಲ್ಲಿ—ಶಾಲೆಗಳಲ್ಲಿ ಪ್ರವೇಶ ಸಿಗದೆ ನಾಗರಿಕ ಹಕ್ಕುಬಾಧ್ಯತೆಗಳನ್ನು ಕಳೆದುಕೊಂಡು ಅವರು ಜೀವಿಸುತ್ತಾರೆ. ಭಾರತೀಯನಾದ, ಶ್ರೀ। ಸಿ. ವಿ. ರಾಮನರಿಗೆ ಫ್ರಾಂಕ್ಲಿನ್ ಮೆಡಲನ್ನು ಕೊಟ್ಟಿದ್ದರೂ ಕವೀಂದ್ರ ರವೀಂದ್ರರಿಗೂ ಜಗದೀಶಚಂದ್ರವಸುಗಳಿಗೂ ನೊಬೆಲ್ ಬಹುಮಾನಗಳು ಬಂದಿದ್ದರೂ, ಲೋಕವಿಖ್ಯಾತ ಮಹಾತ್ಮರನ್ನು ಪಡೆಯುವ ಸೌಭಾಗ್ಯ ಭಾರತಿಗಿದ್ದರೂ ನಮಗೆ, ಆ ಮಹಾನುಭಾವರ ದೇಶಬಾಂಧವರಿಗೆ ಬಿಳಿ (?) ಜನರ ವಸಾಹತುಗಳಲ್ಲಿನ ಶಾಲೆಗಳಲ್ಲಿ ಕೂಡಾ ಪ್ರವೇಶವಿಲ್ಲ! ಹಾಗೆಂದು ದ. ಆಫ್ರಿಕದಲ್ಲಿನ ಭಾರತದ ಹೈ ಕಮಿಶನರು ಶ್ರೀ। ಬೆನಗಲ್ ರಾಮರಾಯರು ಮೊನ್ನೆ ಗರ್ಜಿಸಿದರು.

ಂ ಂ ಂ

ಸಿಲೋನಿನಲ್ಲಿ ನಮ್ಮ ಸಮೀಪದ ಬಂಧುವಾದ ಸಿಂಹಳದಲ್ಲಿ, ಭಾರತೀಯನು ಪರದೇಶೀಯನಾಗಿ ಆದರಿಸಲ್ಪಡುತಿದ್ದಾನೆ. ಭಾರತೀಯರ ನಾಗರಿಕ ಹಕ್ಕುಗಳನ್ನೇ ಕಸಿದುಕೊಂಡು ಅವರು ಹಿಂತೆರಳುವಂತೆ ಮಾಡಿದ್ದರೆ, ಸ್ವಲ್ಪ ಸಮಯದಲ್ಲೇ ಸಿಲೋನೆಲ್ಲ ತಮಿಳ್‌ಮಯವಾಗುವುದೆಂದು ಸಿಂಹಳದ ಸರಕಾರದ ಅಭಿಪ್ರಾಯ. ಸಿಂಹಳದ ಪ್ರಗತಿಗೆ ಅದರ ಸಂಸ್ಕೃತಿಯ ಉನ್ನತಿಗೆ, ಆ ನಾಡಿನ ಮೇಲ್ಮೆಗೆ, ಭಾರತೀಯರ ಬೆವರು ಸುರಿದಿದೆಯೆಂದು ಅಧಿಕಾರಿಗಳು ಯೋಚಿಸುವುದಿಲ್ಲ.

ಂ ಂ ಂ

ಆಫ್ರಿಕದಲ್ಲಿ? ಅವರಿಗೆ ಸುಖವಿಲ್ಲ. ಒಂದೇ ಸ್ಥಳದಲ್ಲಿ ಹೆಚ್ಚು ದಿನ ಬಾಳುವ ಹಂಬಲಿಗೆ ಎಡೆಯಿಲ್ಲ. ಅವರ ಹಕ್ಕುಬಾಧ್ಯತೆಗಳನ್ನು ಅಲ್ಲಿನ ಅಧಿಕಾರಿಗಳು, ಪ್ರಜಾಸತ್ತೆಗಾಗಿ ಹೋರಾಡುವರು, ರಕ್ಷಿಸುತ್ತಿಲ್ಲ. ಯಾವ ವಿಧದ ಆಡಳಿತದಲ್ಲೂ ಅವರಿಗೆ ಸ್ಥಾನವಿಲ್ಲ. ಅವರೆಷ್ಟು ಅಸಮಾಧಾನ ನಿವೇದನೆಗಳನ್ನು ಪ್ರದರ್ಶಿಸಲಿ; ಅದನ್ನು ಕಿವಿಗೆ ಹಾಕಿಕೊಳ್ಳುವವರಿಲ್ಲ!

ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಭಾರತೀಯನಿಗಾಗುತ್ತಿರುವ ತೊಂದರೆಗಳನ್ನು ಅವಮಾನಗಳನ್ನು ಬರೆದು ತೀರುವಂತಿಲ್ಲ.

ಂ ಂ ಂ

ಇನ್ನೀಗ ಅಫ್ಘಾನಿಸ್ತಾನದ ಕುರಿತು. 'ಭಾರತೀಯ ವ್ಯಾಪಾರಕ್ಕೆ ಅಫ್ಘಾನರ ಬೆದರಿಕೆ' ಎಂಬೊಂದು ಲೇಖದಿಂದ ಕೆಳಗಿನವುಗಳನ್ನು ಎತ್ತಿ ಬರೆಯಲಾಗಿದೆ. ಅದು ೧೯೩೮ರಲ್ಲಿ ಪ್ರಕಟವಾದರೂ ಪರಿಸ್ಥಿತಿಯು ಇಂದಿಗೆ ಏನೇನೂ ಬದಲಾಯಿಸಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು.

೧ ಭಾರತದ ಕಾರುಗಳೂ ಭಾರತೀಯ ಡ್ರೈವರುಗಳೂ ಎಲ್ಲಾ ಮಾರ್ಗಗಳಲ್ಲಿ ವಾಹನಗಳನ್ನು ಚಲಿಸಲು ಸ್ವತಂತ್ರರಾಗಿಲ್ಲ.

೨ ಕಾಬೂಲಿನಲ್ಲಿ ಡ್ರೈವರುಗಳೆಲ್ಲ ಒಂದೇ ಕಡೆ ವಾಸಿಸಬೇಕು. ಇತರ ವಸತಿ ಗೃಹಗಳಲ್ಲಿ ಅವರಿಗೆ ಪ್ರವೇಶವಿಲ್ಲ. ಐದು ದಿನಗಳಿಗಿಂತ ಹೆಚ್ಚಾಗಿ ಅವರು ಅಲ್ಲಿ ವಾಸಿಸಕೂಡದು. ಪೋಲೀಸರು ಅವರ ಹಿಂದಿಂದಲೇ ಇರುವರು.

೩ ಭಾರತದ ವ್ಯಾಪಾರಿಗಳೂ ಸಂದರ್ಶಕರೂ ಅಫ್ಘಾನಿಸ್ತಾನದಲ್ಲಿ ತಾವು ಎಲ್ಲಿ ಇರುವುದೆಂಬುದನ್ನು ಪೋಲೀಸರಿಗೆ ಆಗಾಗ್ಗೆ ತಿಳಿಸುತ್ತಿರಬೇಕು. (ನಮ್ಮ ದೇಶದಲ್ಲಿ ರಾಜಕೀಯ ಬಂಧಿಗಳೂ ಕೇಡಿಗಳೂ ಕೆಲವು ವೇಳೆ ಮಾಡುತ್ತಿರುವಂತೆ!) ೧೫ ದಿನಗಳಿಗಿಂತ ಹೆಚ್ಚು ಅಲ್ಲಿ ವಾಸಿಸಕೂಡದು. ವಾಸಿಸಲೇಬೇಕಾದರೆ ವಿದೇಶಾಂಗ ಮಂತ್ರಿಯಿಂದ ಅಪ್ಪಣೆ ಪಡೆದುಕೊಳ್ಳಬೇಕು. ಹೀಗಾದರೆ ಒಂದು ವರ್ಷದ ತನಕ ಇರಬಹುದು.

೪ ಅಫ್ಘಾನಿಸ್ತಾನದಲ್ಲಿ ಭಾರತೀಯನಿಗೆ ಚರಸೊತ್ತುಗಳು ದೊರಕಲಾರವು.

೫ ವ್ಯಾಪಾರ ವಿಷಯಕವಾಗಿ ದೀರ್ಘವಾಗಿ ವಾಸಿಸಬೇಕಾದರೆ ವಿಶೇಷ 'ಲೈಸೆನ್ಸ್' ಬೇಕು.

೬ ಭಾರತದ ವ್ಯಾಪಾರಿಯೊಬ್ಬನು ಅಫ್ಘಾನಿಸ್ತಾನವನ್ನು ಬಿಡಲಿಚ್ಛಿಸಿದರೆ, ಅವನಿಂದ ಯಾರಿಗೂ ಸಾಲ ಬಾಕಿಯಿಲ್ಲವೆಂದು ಸರಕಾರವು ಸ್ವೀಕರಿಸಿದ ಪತ್ರ ಬೇಕು. (ಇಂತಹ 'ಕೇಸು'ಗಳಲ್ಲಿ ಸಿಕ್ಕಿ ಬೀಳುವುದಾದರೂ ಬಹಳೇ ಸುಲಭ) ಅಂತಹ ವ್ಯಾಪಾರಿಗಳು ಸಾಲಕೊಡಲಿಕ್ಕಿದ್ದವರು ಬಂಧಿಸಲ್ಪಟ್ಟು ಅನಿಶ್ಚಿತವಾಗಿ ಜೈಲಿನಲ್ಲಿಡಲ್ಪಡುವರು; ಹಣ ಕೊಟ್ಟ ಮೇಲೆಯೇ ವಿಮೋಚನೆ. ಆದರೆ ಅಫ್ಘಾನೀ ಪ್ರಜೆಗಳು ಭಾರತೀಯ ವ್ಯಾಪಾರಿಗಳಿಗೆ ವಿಲಿಯಗಟ್ಟಲೆಯಲ್ಲಿ ಹಣ ಕೊಡುವುದಕ್ಕಿದ್ದರೂ ಹೇಳುವ ಕೇಳುವವರಿಲ್ಲ. ಅವನ್ನು ವಸೂಲು ಮಾಡುವುದಂತೂ ಭಾರತೀಯರಿಂದ ಆಗುವ ಕೆಲಸವಲ್ಲ. ಭಾರತವನ್ನಾಳುವ ಬ್ರಿಟಿಷ್ ಸರಕಾರವಾದರೂ ಅವರಿಗೆ ಯಾವ ತರದ ಧನ ಸಹಾಯವನ್ನು ಕೊಡಲೂ ಶಕ್ತವಾಗಿಲ್ಲ! ಇಷ್ಟು ಮಾತ್ರವಲ್ಲದೆ ವ್ಯಾಪಾರವನ್ನು ಆರಂಭಿಸುವ ಮೊದಲು ಸರಕಾರಕ್ಕೆ ತುಂಬಾ ಹಣದ ವಿಶ್ವಾಸ ಧನವನ್ನು ಕೊಡಬೇಕು.

ಅಫ್ಘಾನಿ ಸರಕಾರವು ಇಂತಹ ಸಂಕಷ್ಟಗಳನ್ನು ತಂದೊಡ್ಡಿರುವುದಾದರೂ ಭಾರತೀಯರ ಮೇಲೆ ಮಾತ್ರ! ಇತರ ವಿದೇಶೀಯರು ಸ್ವತಂತ್ರರಂತೆಯೇ ಇದ್ದಾರೆ. ಈ ನಮ್ಮ ದೇಶದಲ್ಲಿ ಕೂಡಾ ಅಫ್ಘಾನಿನ ಜನರಿಗೂ ವ್ಯಾಪಾರಿಗಳಿಗೂ ಬೇಕಷ್ಟು ಸ್ವಾತಂತ್ರ್ಯವಿದೆ! ಚರಸೊತ್ತುಗಳನ್ನು, ಎಲ್ಲಿ ಬೇಕೋ ಅಲ್ಲಿ ಸ್ಥಾಪಿಸಿಕೊಳಿಸಲು ಅವರಿಗೆ ಅಧಿಕಾರವಿದೆ.

ಂ ಂ ಂ

ಇದರಿಂದ ವಿದಿತವಾಗುವುದೇನು? ಗ್ರೇಟ್ ಬ್ರಿಟನ್ ರಾಜ್ಯದ ಜನರು ಎಲ್ಲಿಗೆ ಹೋದರೂ ಗುಲಾಮರಾಗಿಯೇ ಜೀವಿಸಬೇಕಾಗುತ್ತದೆ ಎಂಬುದು. ನಮ್ಮನ್ನಾಳುವ ಘನವಾಂತ ಸರಕಾರವೂ ಅದರ ಚಕ್ರವರ್ತಿಗಳೂ ಈ ದೇಶದ ರಾಜಪ್ರತಿನಿಧಿಗಳೂ ಅವರ ಮಕ್ಕಳಂತಿರುವ ಪ್ರಜೆಗಳ ಸುಖಸಂತೋಷಕ್ಕಾಗಿ ಕೊಂಚ ಪ್ರಯತ್ನಿಸುವರೆಂದು ನಾವು ಎಣಿಸಬಹುದೆ? ಭಾರತಕ್ಕೆ ಈಗಾಗಲೇ ಸ್ವಾಯತ್ತ ರಾಜ್ಯದ ಪದವಿ ಸಿಕ್ಕಿಹೋಯಿತು ಎನ್ನುವ ಅಮೆರಿಯವರು ಇತರ ಸಾಮಂತ ರಾಜ್ಯಗಳಲ್ಲಿ ಭಾರತೀಯನಿಗೆ ರೌರವ ನರಕವು ಪ್ರಾಪ್ತವಾಗದಂತೆ ನೋಡಿಕೊಳ್ಳಲಾರರೆ?

ಅವರೇ ಹೇಳುವಂತೆ, ಇಂದಿನ ಯುದ್ಧಕ್ಕಾಗಿ ಭಾರತವು ಜನ-ಧನಗಳನ್ನು ಸುರಿಸುತ್ತಿದೆಯೆಂಬುದನ್ನೂ ಬ್ರಿಟಿಷರಿಗಾಗಿ ಭಾರತ ಪುತ್ರರು ಅನೇಕ ಯುದ್ಧಗಳನ್ನು ಜಯಿಸಿ, ಕೊಟ್ಟಿರುವರೆಂಬುದನ್ನೂ ಬ್ರಿಟಿಷರು— ನಮ್ಮನ್ನಾಳುವವರು— ಮರೆಯಕೂಡದು!

— ಕು. ಶಿ. ರಾಯ

ಸುಂದರ ಯುವತಿಯರು ನರಳಲಾಗದು

ಆದರೆ, ಹೆಂಗಸರು ಅವರಿಗೆ ವಿಚಿತ್ರವಾದ ವ್ಯಾಧಿಗಳಿಂದ ನರಳುತ್ತಿದ್ದರೆ ಸ್ವಾಭಾವಿಕ ಸೌಂದರ್ಯವನ್ನು ಗಳಿಸಲಾರರು, ಅಥವಾ ಉಳಿಸಿಕೊಳ್ಳಲಾರರು. ಸ್ವಭಾವಸಿದ್ಧ ಶಕ್ತಿಗಳೂ ಮತ್ತು ಆರೋಗ್ಯಯುತವಾದ ಕಾಂತಿಯೂ ಅವರ ಜನ್ಮಸಿದ್ಧ ಹಕ್ಕು.

ಅರುಣ

ಗರ್ಭಾಶಯಕ್ಕೆ ಅತ್ಯುತ್ತಮ ಟಾನಿಕ್

ಮುಟ್ಟುದೋಷಗಳನ್ನೆಲ್ಲಾ ಸರಿಪಡಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

K A 3

HALFTONE & LINE BLOCK MAKING UNDERTAKEN

Sharada Press, MANGALORE

ಜಿಲ್ಲಾ ಸಮಾಚಾರ



ಮಂಗಳೂರು

ದಕ್ಷಿಣ ಕನ್ನಡದಲ್ಲಿ ಅಕ್ಕಿಯ ಸಂಗ್ರಹ

—ಮಂಗಳೂರು ಕೆನರಾ ಚೇಂಬರ್ ಒಫ್ ಕೋಮರ್ಸಿನವರು ಕಲೆಕ್ಟರನ್ನು ಸಂದರ್ಶಿಸಿ, ಜಿಲ್ಲೆಯಲ್ಲಿ ಅಕ್ಕಿಯ ಅಭಾವದ ವಿಷಯದಲ್ಲಿ ಆದ ತೊಂದರೆಗಳನ್ನು ಕಲೆಕ್ಟರರ ಮುಂದಿಟ್ಟು ವಿಚಾರವಿನಿಮಯ ಮಾಡಿ ಅಕ್ಕಿಯ ಧಾರಣೆಯನ್ನು ಒಂದು ಮಿತಿಗೆ ತರುವಂತೆಯೂ, ಸರ್ಕಾರದಿಂದ 1000 ಟನ್ನು ಅಕ್ಕಿಯನ್ನು ತರುವಂತೆ ಅಧಿಕಾರಿಗಳನ್ನು ಕೇಳಿಕೊಳ್ಳುವ ನಿರ್ಣಯಮಾಡಿಕೊಂಡಿರುವರೆಂದು ಅದ್ದರಿಂದ ಸಾರ್ವಜನಿಕರು ಅಕ್ಕಿಯ ಧಾರಣೆಯ ವಿಷಯವಾಗಿ ಗಾಬರಿಗೊಳ್ಳಬೇಕಾದ ಅವಶ್ಯವಿಲ್ಲವೆಂದೂ ಚೇಂಬರಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಶ್ರೀ ಕೆ. ಈಶ್ವರ ಎಂ. ಎಲ್. ಎ ಇವರ ಬಿಡುಗಡೆ

ತಾ. ೧೭ಕ್ಕೆ ಬರುವರು

ದಕ್ಷಿಣ ಕನ್ನಡದ ಪ್ರಥಮ ಸತ್ಯಾಗ್ರಹಿ ಹರಿದಾಸ ಎಂ. ಎಲ್. ಎ.ಗಳಾದ ಶ್ರೀ ಕೆ. ಈಶ್ವರ ಇವರು ತಮ್ಮ ಶಿಕ್ಷೆಯ ಅವಧಿ ಮುಗಿಸಿ ತಾ. 16ಕ್ಕೆ ಬಿಡುಗಡೆ ಹೊಂದುವರೆಂದೂ ತಾ. 17ಯ ದಿನ ಮಂಗಳೂರಿಗೆ ಮಲಬಾರ್ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಬರುವರೆಂದೂ ತಿಳಿದಿದೆ.

ಕೈಯ್ಯೂರು ಪ್ರಕರಣ:- ಮಂಗಳೂರಲ್ಲಿ ಸಾರ್ವಜನಿಕ ಸಭೆ

ಮಲಬಾರ್ ಸ್ಪೆಶಲ್ ಪೋಲೀಸರನ್ನು ಹಿಂತೆಗೆಯಬೇಕು, ಸಾರ್ವಜನಿಕ ವಿಚಾರಣೆ ನಡೆಯಬೇಕು.—

ತಾ. 10ರಂದು ಮಂಗಳೂರು ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ರಂಗರಾವ್ ಲಚೇರಿಕರರ ಅಧ್ಯಕ್ಷತೆಯಿಂದ ಕೂಡಿ, ಕಾಸರಗೋಡು ತಾಲೂಕಿನ ಕೈಯ್ಯೂರು ಗ್ರಾಮದಲ್ಲಿ ಉಂಟಾದ ಪೋಲೀಸನೊಬ್ಬನ ಮರಣದ ಬಗ್ಗೆ ವಿಷಾದ ಸೂಚಿಸುವ, ಮತ್ತು ಅಲ್ಲಿ ಮಲಬಾರ್ ಸ್ಪೆಶಲ್ ಪೋಲೀಸ್ ದಳದವರು ಅನ್ಯಾಯಮಾಡುತ್ತಿರುವರೆಂದು ತಿಳಿದುಬರುವ ವಾರ್ತೆಗಳ ವಿಷಯ ಸಾರ್ವಜನಿಕ ವಿಚಾರಣೆಯಾಗಬೇಕೆನ್ನುವ ಹಾಗೂ ಮಲಬಾರ್ ಸ್ಪೆಶಲ್ ಪೋಲೀಸ್ ದಲದವರನ್ನು ಅಲ್ಲಿಂದ ಹಿಂತೆಗೆಯಬೇಕೆನ್ನುವ ನಿರ್ಣಯವೊಂದು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಅಂದಿನ ಸಭೆಯಲ್ಲಿ ಶ್ರೀಗಳಾದ ದಾಮೋದರ ಮಳ್ಳಿಗ, ಕಯ್ಯಾರ ಕಿಞ್ಞಣ್ಣ ರೈ, ಲಕ್ಷ್ಮಣದೇವ ಸ್ವಾಮಿ, ಕೃಷ್ಣರಾವ್ ಇವರು ಕೈಯ್ಯೂರು ಪ್ರಕರಣದ ಕುರಿತು ವಿವರಿಸಿ ಮಾತನಾಡಿದರು. ಶ್ರೀ ಕೆ. ಕೃಷ್ಣರಾಯರು ಕೈಯ್ಯೂರು ವರೆಗೆ ಹೋಗಬೇಕೆಂದು ಹೊರಟವರು ನೀಲೇಶ್ವರದಲ್ಲಿ ತಪ್ಪಿ ಮುಂದುವರಿಯಲು ತನಗೆ ಒದಗಿದ ಅನಾನುಕೂಲ, ಅಲ್ಲಿನ ಮಲಬಾರ್ ಸ್ಪೆಶಲ್ ಪೋಲೀಸ್ ದಲದವರು ಸಾರ್ವಜನಿಕರಲ್ಲಿ ಹುಟ್ಟಿಸಿದ ಪ್ರಚಂಡ ಭೀತಿ, ಹಾಗೂ ಸಾರ್ವಜನಿಕರ ತೊಂದರೆಗಳ ಕುರಿತು ಬಹಳ ಹೃದಯದ್ರಾವಕವಾದ ಸಂಗತಿಗಳನ್ನು ಹೇಳಿದರು.

ಭಟ್ಕಳದಲ್ಲಿ ಬಂಧನ

ಬಂಟ್ವಾಳದ ಶ್ರೀ ಕೃಷ್ಣರಾಯ ಬಾಳಿಗರನ್ನು ಭಟ್ಕಳದಲ್ಲಿ ಬಂಧಿಸಿರುವರೆಂದು ತಿಳಿದಿದೆ.

ಶ್ರೀ ಎಸ್. ಎನ್. ಹೊಳ್ಳರಿಗೆ ಶಿಕ್ಷೆ- ೬ ತಿಂಗಳ ಕಠಿಣ ಶಿಕ್ಷೆ ಮತ್ತು 'ಬಿ' ಕ್ಲಾಸು

ತಾ. ೭ನೇ ಸಂಜೆ ಮಂಗಳೂರಲ್ಲಿ ಸತ್ಯಾಗ್ರಹ ಮಾಡಿದ ಶ್ರೀ ಎಸ್. ಎನ್. ಹೊಳ್ಳ (ಡಿ. ಬೋ. ಮೆಂಬರ್) ಇವರಿಗೆ ಮರುದಿನ ಇವರ ವಿಚಾರಣೆಯಾಗಿ ಸಬ್ ಡಿ ಆಫೀಸರ್ ಶ್ರೀ ಕೆ. ಕೃಷ್ಣಯ್ಯನವರು ೬ ತಿಂಗಳ ಕಠಿನ ಸಜೆ ವಿಧಿಸಿದರು. ಇವರದು 'ಬಿ' ತರಗತಿ. ಇವರನ್ನು ಮರುದಿನ ಆಲೀಪುರಂ ಜೈಲಿಗೆ ಕರಕೊಂಡು ಹೋಗಲಾಗಿದೆ.

ಮಲಬಾರ್ ಸತ್ಯಾಗ್ರಹಿಗಳ ಸಂಚಾರ.

ಕ್ಯಾಲಿಂಡಿಯ ಶ್ರೀ ಪಿ. ಕೆ. ಗೋಪಾಲನ್, ಕುಟ್ಯಾಡಿಯ ಶ್ರೀ ಎ. ವಿ ಕುಂಞಿರಾಮನ್ ನಾಯರ್, ಕೆ ಪಿ. ಸಿ ಸಿ. ಮೆಂಬರ್, ಕಣ್ಣಾನ್ನೂರಿನ ಶ್ರೀ ವಿ ಕುಂಞರಾಮನ್ ಎಂಬೀ ಉತ್ತರ ಮಲಬಾರಿನ ಸತ್ಯಾಗ್ರಹಿಗಳು ದಾರಿಯಲ್ಲಿ ಯುದ್ಧವಿರುದ್ಧ ಪ್ರಚಾರಕಾರ್ಯವನ್ನು ನಡೆಸುತ್ತಾ ಈಗ ದಕ್ಷಿಣ ಕನ್ನಡ ಜಿಲ್ಲೆಗೂ ಬಂದು, ಇಲ್ಲಿ ಪಾದಚಾರಿಗಳಾಗಿ ಹಳ್ಳಿ ಹಳ್ಳಿಗಳಲ್ಲಿ ಹೋಗಿ ಅದೇ ಪ್ರಚಾರಮಾಡುತ್ತಿರುವರು.

ಸತ್ಯಾಗ್ರಹಗಳು

ಬಂಟ್ವಾಳದಲ್ಲಿ ಶ್ರೀ. ಜಿ. ವೆಂಕಟೇಶ ಭಟ್ಟರೂ, ಗಂಗೊಳ್ಳಿಯಲ್ಲಿ ಶ್ರೀ ಎನ್. ವೇಣುಗೋಪಾಲನಾಯಕರೂ, ಸತ್ಯಾಗ್ರಹಮಾಡಿದರು. ಕೈದಾಗಲಿಲ್ಲ.

ವರ್ಗ

ಶ್ರೀ ರಾ ವಿ. ಸೀತಾರಾಮರಾವ್ ಬಿ. ಎ. ಬಿ. ಎಲ್. ಇವರು ಗುರುಪುರದಿಂದ ಕಾರ್ಕಳದ ಮುನ್ಸೀಫರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಶ್ರೀ ಬಿ. ಎಸ್. ಕೇಶವ ವಿಠಲ ಟಿ. ಎಫ್. ಎಸ್ ಇವರು ವಿಶಾಖಪಟ್ಟಣದಿಂದ ಈ ಜಿಲ್ಲೆಗೆ ವರ್ಕಿಂಗ್ ಪ್ಲಾನು ಆಫೀಸರರಾಗಿ ನೇಮಿಸಲ್ಪಟ್ಟಿದ್ದಾರೆ.

ಈ ಜಿಲ್ಲೆಯ ಪಿ. ಡಬ್ಲ್ಯು. ಡಿ. ಅಸಿ ಇಂಜಿನಿಯರರಾಗಿ ಶ್ರೀ ಟಿ. ಯಂ. ಗೋವಿಂದ ಮೇನನ್‌ಗೂ, ಇಲ್ಲಿಂದ ಮಿ. ಜೆ. ಇ. ವಾಸ್ ಬಿ. ಇ. ಇವರು ಕಲ್ಲಿಕೋಟೆಯ ಪಿ. ಡಬ್ಲ್ಯು. ಡಿ. ಅಸಿ ಇಂಜಿನಿಯರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ರಾವ್‌ಸಾಹೇಬ್ ಎಂ. ಅನಂತ ನಾರಾಯಣ ರಾವ್ ಇವರು, ಮದ್ರಾಸಿನ ವೆಟರ್ನರಿ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕ ಹೊಂದಿರುವರು. ಇವರು ನಮ್ಮ ಜಿಲ್ಲೆಯವರು.

ನಮ್ಮ ಜಿಲ್ಲೆಯ ಒಫೀಶಿಯಲ್ ರಿಸೀವರರಾಗಿ ಶ್ರೀ ಜೆ ಯಂ. ಸಿಕೇರಾ, ಎಂ. ಎ, ಎಂ. ಎಲ್. ಇವರು ನೇಮಕ ಹೊಂದಿರುತ್ತಾರೆ.

ಕೈಯ್ಯೂರು ವಿಚಾರಣಾ ಕಮಿಟಿ

ಕಾಸರಗೋಡು ತಾಲೂಕಿನ ಕೈಯ್ಯೂರು ಗ್ರಾಮದಲ್ಲಿ ಆದ ಒಬ್ಬ ಪೋಲೀಸ್‌ಕೋನ್ಸ್ಟೇಬಲ್‌ನ ಮರಣದ ಸಂಬಂಧ ಅಧಿಕಾರಿಗಳು ಶಾಂತಿ ಸ್ಥಾಪನೆ ಬಗ್ಗೆ ಯೋಗ್ಯ ಏರ್ಪಾಡು ಮಾಡುವುದು ಆಗತ್ಯವಾದದ್ದೂ, ಈಗ ಅಲ್ಲಿ ಪೋಲೀಸರಿಂದ ಜನರಿಗೆ ಹಿಂಸೆಗಳಾಗುತ್ತಿವೆಯೆಂದು ವಾರ್ತೆಗಳು ಬರುತ್ತಿರುವುದರಿಂದ, ಪರಿಸ್ಥಿತಿಯ ನಿಜಾಂಶವನ್ನು ತಿಳಿದು, ಈಗ ಪ್ರಚಲಿತವಾಗಿರುವ ವಾರ್ತೆಗಳು ಸುಳ್ಳೆಂದಾದರೆ ಕೆಲ ಅಧಿಕಾರಿಗಳ ಮೇಲಿನ ಅಪವಾದಗಳು ತಪ್ಪುವಂತೆಯೂ, ಅವು ಸರಿಯೆಂದಾದರೆ ಸರಕಾರದವರು ಕಾಯಿದೆ ಕ್ರಮಗಳನ್ನು ನಮ್ಮ ಅಧಿಕಾರಿಗಳ ಮೇಲೂ ಜಾರಿಗೆ ತರುವುದು ಆಗತ್ಯವಿರುವದೆಂದು ಅವರ ಅವಗಾಹನೆಗೆ ತರುವಂತೆಯೂ ಶ್ರೀಗಳಾದ ಎ. ಶ್ರೀನಿವಾಸ ಪೈ, ಮೀನ್ ಒಸದೂರ್ ಮಹಮ್ಮದ್ ಶಹಬ್ಬಾಡ್, ಡಾ. ಕೆ ಪರಲ ಶೆಟ್ಟಿ, ಬಿ ನ್ಯಕುಂದ ಬಾಳಿಗ ಮತ್ತು ಮಿ. ಡಬ್ಲ್ಯು ಜೆಫ್ರಿಸ್ ಇವರಿಂದ ಕೂಡಿದ ಒಂದು ಕಮಿಟಿ ನೇಮಕವಾಗಿ ಅವರು ತಾ 11ರಂದು ವಿಚಾರಣೆಗಾಗಿ ಕೈಯ್ಯೂರಿಗೆ ತೆರಳಿರುವರು.

ಡಿ. ಲೇಬರ್ ಎಡ್ವೈಸರಿ ಕಮಿಟಿ

ದ. ಕನ್ನಡ ಜಿಲ್ಲಾ ಲೇಬರ್ ಎಡ್ವೈಸರಿ ಕಮಿಟಿ ಸಭೆಯು ತಾ. ೮ರಂದು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರುಗಿತು. ಉಡುಪಿ ಉಪ್ಪೂರು ಏಡೆಡ್ ಎಲಿಮೆಂಟರಿ ಶಾಲೆಯನ್ನು ಲೇಬರ್ ಡಿಪಾರ್ಟ್‌ಮೆಂಟಿನವರು ತೆಗೆದುಕೊಳ್ಳುವ ವಿಚಾರ ಜಿಲ್ಲಾ ವಿದ್ಯಾಧಿಕಾರಿಗಳ ಅಭಿಪ್ರಾಯವನ್ನು ಪಡೆದು ಇತರ ಎಲ್ಲಾ ವಿಷಯಗಳನ್ನು ಆಲೋಚಿಸುವುದಾಗಿ ಕಲೆಕ್ಟರವರು ಸೂಚಿಸಿದರು. ಲೇಬರ್ ಶಾಲೆಯ ಮಾಸ್ತರರಿಗೆ ಪ್ರತಿ ತಿಂಗಳ ಐದನೇ ತಾರೀಕಿನ ಒಳಗೆ ಸಂಬಳದ ಬಿಲ್ ಮಂಜೂರಾಗುವ ಏರ್ಪಾಡನ್ನು ಡಿ ಲೇಬರ್ ಆಫೀಸರರು ಮಾಡಿರುವಾಗಿಯೂ ಸಭೆಗೆ ತಿಳಿಸಲಾಯಿತು. ಎಲ್ಲೆಲ್ಲಿ ಲೇಬರ್ ಶಾಲೆಗಳಿಗೆ ಸ್ಕೂಲ್ ಕಮಿಟಿಗಳಿಲ್ಲವೋ ಅಂಥಲ್ಲಿ ಸ್ಕೂಲ್ ಕಮಿಟಿಗಳನ್ನು ನೇಮಕ ಮಾಡುವ ಏರ್ಪಾಡನ್ನು ಡಿ ಲೇಬರ್ ಆಫೀಸರರು ಮಾಡುವರಾಗಿಯೂ ತಿಳಿದು ಬಂತು.

ಕಾಸರಗೋಡಿನಲ್ಲಿ ತಹಸಿಲ್ದಾರರಾಗಿ ಜನಪ್ರಿಯರಾಗಿರುವ ಶ್ರೀ. ಗಣೇಶ, ಬಿ ಎ. ಇವರ ಪತ್ನಿ ಸೌ ಸುಶೀಲಮ್ಮ ಇವರು ಕೆಲವು ದಿನಗಳಿಂದ ಜ್ವರಪೀಡಿತರಾಗಿದ್ದು ತಾ ೧೫—೪—೪೧ರಂದು

ಬೆಳಿಗ್ಗೆ ತನ್ನ ೩೦ನೇ ವಯಸ್ಸಿನಲ್ಲಿ ಅಕಾಲ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವಿಯೋಗದಿಂದಾಗಿ ದುಃಖಿಸುತ್ತಿರುವ ಬಂಧುಗಳಿಗೆ ಚಿತ್ತಶಾಂತಿಯನ್ನು ಕರುಣಿಸಿ, ದಿವಂಗತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥನೆ.

ಪಣಂಬೂರು

ಇಲ್ಲಿಯ ಸಾರ್ವಜನಿಕ ವಾಚನಾಲಯದ ಚತುರ್ಥ ವರ್ಷದ ವಾರ್ಷಿಕೋತ್ಸವವು ತಾ. ೬ರಂದು ಶ್ರೀ. ಯಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿ ವಾಚನ, ಮಕ್ಕಳಿಂದ ವಿವಿಧ ವಿನೋದಗಳು ನಡೆದವು. ಶ್ರೀ. ಕಟೀಲು ಗಣಪತಿ ಶರ್ಮರು ಭಾಷಣ ವಿತ್ತರು. ಅಧ್ಯಕ್ಷರ ಭಾಷಣದ ನಂತರ ಏಕಾಂಕ ನಾಟಕವೊಂದು ಹೆಣ್ಮಕ್ಕಳಿಂದ ಅಭಿನಯಿಸಲ್ಪಟ್ಟಿತು.

ಬಿಕ್ಕರನಕಟ್ಟೆ ಪದವು ಹರಿಕಥೆ

ಇದೇ ತಾ. ೧೩ರಿಂದ ೨೦ರ ವರೆಗೆ ಸಾಹುಕಾರ ಮಿಜಾರಕಾರರ ಬೀಜದ ಕಾರ್ಖಾನೆಯ ಕಿಡ್ಡಿನಲ್ಲಿ ಪ್ರತಿ ದಿನ ರಾತ್ರಿ ೮ ಘಂಟೆಯಿಂದ ೧೨ ಘಂಟೆಯ ವರೆಗೆ "ಶ್ರೀ ವಿಷ್ಣು ದಶಾವತಾರ"ದ ಕಥೆಗಳನ್ನು ಹರಿದಾಸ ಬಿ. ಮಹದೇವನವರಿಂದ ಹರಿಕಥೆಯಾಗಿ ಜರುಗಿಸಲ್ಪಡುವದು. ಸರ್ವರಿಗೂ ಸ್ವಾಗತವಿದೆ.

[೧೦ನೆಯ ಪುಟವನ್ನು ನೋಡಿ]

ದಿವಸದ ಮಂಗಳೂರು ಪೇಟೆಯ ಧವಸ ಧಾನ್ಯ ವಗೈರೆಗಳ ಧಾರಣೆಗಳು.

		ರಿಂದ	ವರೆಗೆ
1. (a)	ಚಿತ್ತ ಅವ್ವಲ್ ತರದ ಗುಡ್ಡ ಮುಡಿಗೆ	2—2—0	—
(b)	,, ದುಯಂ ,, ,, ,,	2—4—0	—
2. (a)	ಅಕ್ಕಿ ಅವ್ವಲ್ ತರದ ಗುಡ್ಡ ಮುಡಿಗೆ	5—14—0	6—0—0
(b)	,, ದುಯಂ ,, ,, ,,	5—10—0	5—12—0
3. (a)	,, ಅವ್ವಲ್ ,, ಸುಗ್ಗಿ ,,	5—9—0	—
(b)	,, ದುಯಂ ,, ,, ,,	5—4—0	5—6—0
4. (a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	35—0—0	40—0—0
(b)	,, ಸಿಪ್ಪೆಯಿದ್ದದ್ದು ,,	37—8—0	42—8—0
5. (a)	ಕೊಬ್ಬರಿ ಆಫೀಸು ಖಂಡಿಗೆ	50—0—0	—
(b)	,, ದೀವಿ ,,	53—12—0	—
(c)	,, ದಿಲ್‌ಪಸಂದ್	53—12—0	—
6.	ತೆಂಗಿನ ಎಣ್ಣೆ ಮಣಕ್ಕೆ	3—10—0	—
7. (a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3—0—0	3—8—0
(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	105—0—0	115—0—0
	(ಹೊಸ್ತು)	100—0—0	110—0—0
8.	ಗೇರುಬೀಜ ಮುಡಿಗೆ	4—4—0	4—12—0
9.	ಕಬ್ಬಿನ ಬೆಲ್ಲ ಖಂಡಿಗೆ	22—8—0	27—8—0
10.	ಒಳ್ಳೆ ಮೆಣಸು ಹಂಡ್ರೆಡ್‌ವೇಟೇಗೆ	13—0—0	14—0—0
11. (a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5—0—0	7—8—0
(b)	ಹುಡಿಯ ,, ,,	6—8—0	8—8—0
12. (a)	ಮೈಸೂರು ಏಲಕ್ಕಿ ಮಣಕ್ಕೆ	—0—0	——0
(b)	ಕೊಡಗಿನ ,, ,,	60—0—0	62—8—0
13. (a)	ಕುಮಟೆಯ ಮೆಣಸು ಖಂಡಿಗೆ	67—8—0	77—8—0
(b)	ಕಾಸರಗೋಡು ,, ಮಣಕ್ಕೆ	3—2—0	—
(c)	ಊರಿನ ,, ,,	4—4—0	

ಹಿಟ್ಲರನ ಆಪ್ತ ಮಿತ್ರ ಹೆಸ್ಸನು ಸೆರೆಸಿಕ್ಕಿರುವನು!

ಆತನಿಗೆ ಹುಚ್ಚು ಹಿಡಿದಿತ್ತೆಂದು ಜರ್ಮನರ ಹೇಳಿಕೆ

ಪಾರ್ಲಿಮೆಂಟ್ ಭವನ-ವೆಸ್ಟ್‌ಮಿನ್‌ಸ್ಟರ್ ಅಬೆಗಳ ಭೀಷಣ ನಾಶ!

ಆದರೂ ಆಂಗ್ಲೇಯರು ಧೈರ್ಯಗುಂದಿಲ್ಲ

ಇರಾಕಿನಲ್ಲಿ ಕದನ ಸಾಗುತ್ತಿದೆ

ಲಂಡನಿಗೆ ಈ ವಾರ ಭೀಕರ ಧಾಳಿಯಾಯಿತು! ಪಾರ್ಲಿಮೆಂಟ್ ಭವನ ಹಾಗೂ ವೆಸ್ಟ್ ಮಿನಿಸ್ಟರ್ ಅಬೆಗಳು ಸಾಕಷ್ಟು ನಾಶವಾಗಿವೆ. ಆದರೂ ಲಂಡನರು ಧೈರ್ಯಗುಂದಿಲ್ಲ. ಹಿಟ್ಲರನ ಬಲಗೈಬಂಟನಂತಿದ್ದ ರುಡಾಲ್ಫ ಹೆಸ್ಸನು ಜರ್ಮನಿಯಿಂದ ಓಡಿಬಂದು ಇಂಗ್ಲಿಷರ ಸೆರೆಸಿಕ್ಕಿದ್ದಾನೆ. ಅಬಿಸೀನಿಯಕ್ಕೆ ಅಲ್ಲಿನ ಮೊದಲಿನ ಚಕ್ರವರ್ತಿ ಸೆಲಾಸಿಯು ಪ್ರವೇಶಿಸಿರುವನು. ಇರಾಕಿನಲ್ಲಿ ಕದನವು ನಡೆಯುತ್ತ ಇದೆ. ಅಮೇರಿಕವು ಬೇಗನೇ ಯುದ್ಧದಲ್ಲಿ ಸೇರುವುದೇ ಎಂದು ಹಲವರ ಊಹನೆಯಾಗಿದೆ.

ದಬ್ಬಾಳಿಕೆಯನ್ನು ಖಡ್ಗದಿಂದಲೇ ಇದಿರಿಸುವುದು

ಅಮೇರಿಕನರಿಗೆ ಇದೊಂದೇ ಮಾರ್ಗ

ಅಮೇರಿಕದ ನೌಕಾ ಮಂತ್ರಿ ಕರ್ನಲ್ ನಾಕ್ಸರು ಮಾತನಾಡುತ್ತಾ ದಬ್ಬಾಳಿಕೆಖೋರರನ್ನು ಖಡ್ಗದಿಂದಿರಿಸುವುದು ತಮಗೆ ಒಂದೇ ಮಾರ್ಗವೆಂದು ಹೇಳಿದರು.

ಹಿಟ್ಲರ್-ಡಾರ್ಲಾನ ಭೇಟಿ

ಫ್ರಾನ್ಸಿನ ನೌಕಾ ಮಂತ್ರಿ ಡಾರ್ಲಾನರೂ ಹಿಟ್ಲರನೂ ಭೇಟಿಯಾದರು ಏನು ನಡೆಯಿತೆಂದು ತಿಳಿದಿಲ್ಲ.

ಹಿಟ್ಲರನ ಬಲಗೈಬಂಟ ರುಡಾಲ್ಫ್ ಹೆಸ್ಸನು ಸೆರೆಸಿಕ್ಕಿದ್ದಾನೆ

ಜರ್ಮನಿಯಿಂದ ಪಲಾಯನ

ಹಿಟ್ಲರನ ಬಲಗೈ ಬಂಟನಾದ ಜರ್ಮನ್ ಸರಕಾರದ ಉಪನಾಯಕ ಮತ್ತೆ ರಾಷ್ಟ್ರೀಯ ಸಮತಾವಾದೀ ಪಕ್ಷದ ಮುಖಂಡ ರುಡಾಲ್ಫ ಹೆಸ್ಸನು ಜರ್ಮನಿಯಿಂದ ತಪ್ಪಿಸಿಕೊಂಡು ಬಂದು ಗ್ಲಾಸ್ಗೋದ ಹತ್ತಿರ ಒಂದು ಹಳ್ಳಿಯಲ್ಲಿ ವಿಮಾನ ಇಳಿಯಲು, ವಿಮಾನ ಕೊಡೆಯಿಂದ ಹಾರಿಕೊಂಡನೆಂಬ ಸಾಹಸವು ಯು ಸುದ್ದಿ ಬಂದಿದೆ ಆತನ ಕಾಲಿಗೆ ಪೆಟ್ಟಾಗಿರುವುದಂತೆ.

ಬಿದ್ದ ಹಳ್ಳಿಯ ಒಕ್ಕಲಿಗನು ಆತನನ್ನು ತನ್ನ ಮನೆಗೆ ಕರಕೊಂಡು ಹೋಗಿ ಚಾ ಕೊಡಲು ಆತನು ಕುಡಿಯದೆ, ಇಷ್ಟು ಹೊತ್ತಿಗೆ ತಾನು ಚಾ ಕುಡಿಯುವುದಿಲ್ಲವೆಂದು ಹೇಳಿದನಂತೆ, ತನ್ನ ಬಳಿಯಿದ್ದ ನಾಲ್ಕು ವರ್ಷ ಪ್ರಾಯದ ತನ್ನ ಮಗನ ಫೋಟೋ ನೋಡಿ, ಇಂದು ಬೆಳಿಗ್ಗೆ ಇವನನ್ನು ನೋಡಿದೆ, ಇನ್ನೆಂದು ನೋಡುವೆನೋ ಎಂದನಂತೆ.

ಆತನು ಒಂದೇ ದಿನದಲ್ಲಿ ೭೦೦ ಮೈಲುಗಳ ಸಂಚಾರ ಮಾಡಿ ಬಂದಿರುವನೆಂದು ತಿಳಿದಿದೆ.

ಜರ್ಮನರ ಪ್ರಕಟಣೆಯಂತೆ ಹೆಸ್ಸನ ತಲೆ ಕೆಟ್ಟಿತ್ತೆಂದೂ ಆದ್ದರಿಂದ ಅವನು ಅಕಸ್ಮಾತ್ ಓಡಿಹೋದನೆಂದೂ ತಿಳಿದಿದೆ.

ಆತನು ಈಗ ಗ್ಲಾಸ್ಗೋ ಆಸ್ಪತ್ರೆಯಲ್ಲಿರುವನಂತೆ.

ಪಾರ್ಲಿಮೆಂಟ್ ಭವನದ ಮೇಲೆ ಭೀಕರ ಧಾಳಿ

ವೆಸ್ಟ್‌ಮಿನ್‌ಸ್ಟರ್ ಅಬೆ ನಾಶಕ್ಕೀಡಾಯಿತು

ತಾ. ೧೧ರಂದು ಲಂಡನಿನ ಮೇಲೆ ಆದ ಜರ್ಮನರ ಪ್ರಚಂಡ ಧಾಳಿಯಿಂದ ವಿಶೇಷ ಹಾನಿಗಳಾಗಿವೆ. ಪಾರ್ಲಿಮೆಂಟ್ ಕಟ್ಟಡ, ವೆಸ್ಟ್ ಮಿನಿಸ್ಟರ್ ಅಬೆ ಮತ್ತು ಬ್ರಿಟಿಷ್ ವಸ್ತು ಸಂಗ್ರಹಾಲಯಗಳು ನಾಶಕ್ಕೀಡಾಗಿವೆ.

ಒಂದು ಸಾವಿರ ವರ್ಷಕ್ಕೆ ಹಿಂದಿನ ಇತಿಹಾಸ ಪ್ರಸಿದ್ಧ ಕಟ್ಟಡಗಳಾದ ಪಾರ್ಲಿಮೆಂಟು ಭವನ ಮತ್ತು ವೆಸ್ಟ್‌ಮಿನ್‌ಸ್ಟರ್ ಅಬೆಗಳ ನಾಶದಿಂದ ಬಹಳ ದುಃಖವಾಗಿದೆ.

ಪಾರ್ಲಿಮೆಂಟ್ ಭವನದ "ಬಿಗ್ ಬೆನ್" ಗಡಿಯಾರವು ನಾಶವಾಯಿತು. ಹೌಸ್ ಆಫ್ ಕಾಮನ್ಸಿನ ಚರ್ಚಾ ಭವನವು ನುಚ್ಚುನೂರಾಯಿತು. ಲಾರ್ಡ್ಸ್ ಭವನದ ರೆಸಿಡೆಂಟ ಸುಪರಿಂಟೆಂಡೆಂಟರು ಹತರಾದರು.

ದೇವರನ್ನು ಮನುಷ್ಯನು ಮರೆತಿದ್ದಾನೆ

ಕೇಂಟರ್ಬರಿಯ ಆರ್ಚ್ ಬಿಶೊಪರ ಭಾಷಣ

ಇಂದಿನ ಯುದ್ಧದಿಂದ ಆಗುವ ಪಾಶವೀ ನಾಶದ ವಿಷಯವನ್ನು ವರ್ಣಿಸುತ್ತಾ ಕೆಂಟರ್ಬರಿಯ ಆರ್ಚ್ ಬಿಶೋಪರು, ಮಾನವನು ಇಂದು ದೇವರನ್ನು ಮರೆತಿದ್ದಾನೆಯೆಂದರು.

ಸುವೇಜ್ ಕಾಲುವೆ ಮೇಲೆ ಧಾಳಿ

ಜರ್ಮನ್ ಬಾಂಬುಗಳು ಸುವೇಜ್ ಕಾಲುವೆ ಮೇಲೆ ಎರಡು ತಾಸುಗಳ ತನಕ ಬಾಂಬುಗಳನ್ನು ಸುರಿಸಿವೆಯೆಂದು ತಿಳಿಯುತ್ತದೆ.

ಇರಾಕ್ ಮಂತ್ರಿಯ ಸಂಧಾನ ವ್ಯರ್ಥವೆ?

ಇಂಗ್ಲೆಂಡ್ ಇರಾಕ್‌ಗಳೊಳಗೆ ಒಪ್ಪಂದವಾಗುವಂತೆ ಇರಾಕಿನ ಮುಖ್ಯ ಮಂತ್ರಿ ಶರತ್ ಆಲಿ ಮಾಡಿದ ಸಂಧಾನ ಯತ್ನ ವ್ಯರ್ಥವಾಯಿತೆಂದು ತಿಳಿದಿದೆ.

ಮೊಲೊಟೋವನ ಬದಲು ಸ್ಟಾಲಿನ್

ರಶ್ಯದ ಮುಖ್ಯ ಮಂತ್ರಿಯಾಗಿ

ರಶ್ಯದ ಮುಖ್ಯ ಮಂತ್ರಿ ಸ್ಥಾನಕ್ಕೆ ಮೊಲೊಟೋವನ ಬದಲು ಸ್ಟಾಲಿನನನ್ನು ಆರಿಸಲಾಗಿದೆಯೆಂದು ಸುದ್ದಿ.

ದಕ್ಷಿಣ ಸರ್ಬಿಯದಲ್ಲಿ ಸಾರ್ವತ್ರಿಕ ಕೊಲೆ

ಸರ್ಬಿಯನ್ ಅಧಿಕಾರಿಗಳಿಂದ

ಬಲ್ಗೇರಿಯನ್ ಅಧಿಕಾರಿಗಳು ದಕ್ಷಿಣ ಸರ್ಬಿಯದಲ್ಲಿ ಸಾರ್ವತ್ರಿಕ ಕೊಲೆಯನ್ನು ಆರಂಭಿಸಿರುವರು ಹಲವು ವಿದ್ಯಾರ್ಥಿಗಳನ್ನು ಕೈದು ಮಾಡಿ ಜರ್ಮನಿಗೆ ಒಯ್ಯಲಾಗಿದೆ.

ಇರಾಕಿನಲ್ಲಿ ಪಂಚಮದಲ

ಬ್ರಿಟಿಷ್ ಹಾಗೂ ರಶೀದ್ ಆಲಿಯವರ ನಡುವೆ ಕಲಹವಾಗುವಂತೆ ಪಂಚಮದಲದವರು ಕೆಲಸಮಾಡುತ್ತಿರುವರೆಂದು ವಾರ್ತೆ

ರಶೀದ ಆಲಿಗೆ ಜರ್ಮನ್ ಬೆಂಬಲವೆ?

ಸಿರಿಯಾದ ಮಾರ್ಗವಾಗಿ ಜರ್ಮನ್ ಸೈನ್ಯಗಳು ಬರುವವೆಂದೂ ರಶೀದ್ ಆಲಿಗೆ ಜರ್ಮನ್ ಸಹಾಯ ದೊರಕುವುದೆಂದೂ ಸುದ್ದಿ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಅಮೆರಿಕಕ್ಕೆ ಜರ್ಮನಿಯ ಪತ್ರ

ಬ್ರಿಟನಿಗೆ ಸಹಾಯ ಕೊಡದೆಂದು

ಅಮೇರಿಕವು ಬ್ರಿಟನಿಗೆ ಸಹಾಯ ಕೊಡುವುದನ್ನು ಆಕ್ಷೇಪಿಸಿ ಜರ್ಮನಿಯಿಂದ ಅಮೇರಿಕಕ್ಕೆ ಒಂದು ಪತ್ರ ಕಳಿಸಲಾಗಿದೆಯಂತೆ.

ಟರ್ಕಿ ಮಂತ್ರಿಮಂಡಳದ ಅವಸರದ ಸಭೆ

ಟರ್ಕಿ ಮಂತ್ರಿಮಂಡಳದ ಅವಸರದ ಸಭೆಯೊಂದು ಸೇರಿತು. ಇರಾಕಿನ ಪರಿಸ್ಥಿತಿ ಚರ್ಚಿಸಲಾಯಿತೆಂದು ತಿಳಿಯುತ್ತದೆ. ಹೆಚ್ಚಿನದು ಗುಪ್ತವಾಗಿಡಲಾಗಿದೆ.

ಚೀನದ ರಾಜಧಾನಿಯ ಮೇಲೆ ಬಾಂಬು

ಜಪಾನ್ ವೈಮಾನಿಕರು ಚೀನದ ರಾಜಧಾನಿಯ ಮೇಲೆ ಬಾಂಬುಗಳನ್ನೆಸೆದರು

ಬ್ರಿಟನು ಹಿಟ್ಲರಿಸಮಿನ ಹುಟ್ಟಡಗಿಸುವುದು

ಹೆಲಿಫಾಕ್ಸರ ಧೈರ್ಯ

ಹೆಲಿಫಾಕ್ಸರು ಮಾತನಾಡುತ್ತಾ ಬ್ರಿಟನು ಅಮೇರಿಕದ ಸಹಾಯದಿಂದ ಹಿಟ್ಲರಿಸಮಿನ ಹುಟ್ಟಡಗಿಸುವುದೆಂದು ಹೇಳಿದರು.

ಅಮೆರಿಕವು ಯುದ್ಧದಲ್ಲಿ ಸೇರಬಾರದು

ಈಗ ಯುದ್ಧದಲ್ಲಿ ಅಮೇರಿಕವು ಪ್ರವೇಶಿಸುವುದರಿಂದ ಪ್ರಭೆಯುತಂಗೂ ನಷ್ಟವಿದೆ. ಅಮೇರಿಕವು ಹೊರಗಿದ್ದರೆ ಹೆಚ್ಚಿನ ಸಹಾಯ ಮಾಡಬಹುದು ಎಂದು ಹಾರ್ಬರ್ಟ್ ಹೂವರು ಹೇಳುತ್ತಾರೆ

ಇರಾಕಿನಲ್ಲಿ ಶಾಂತವಾಗಿದೆ

ಇರಾಕಿನಲ್ಲಿ ಹಬ್ಬಾನಿಯಾ ಮತ್ತು ಬಸ್ರಾಗಳಲ್ಲಿ ಪರಿಸ್ಥಿತಿಗಳು ಶಾಂತವಾಗಿದೆಯೆಂದು ಸುದ್ದಿ

ಲಂಡನಿನ ಮೇಲೆ ಭೀಕರ ಧಾಳಿ

ಲಂಡನಿನ ಮೇಲೆ ಅನೇಕ ಸಾರಿ ಭಯಂಕರ ಧಾಳಿಯಾಗಿ ಅನೇಕ ನಷ್ಟವಾಗಿದೆಯೆಂದು ತಿಳಿಯುತ್ತದೆ

ಮೂರು ಬಣ್ಣಗಳಿಂದ ರಂಜಿತವಾದ

ತಿರುಪತಿ

ವೆಂಕಟರಮಣ

ದೇವರ ಭಾವಚಿತ್ರಗಳು!

ಭಗವದ್ಭಕ್ತರ ಮನೆಮನೆಗಳಲ್ಲಿ ಇದು ವಿರಾಜಿಸುವುದು ಅವಶ್ಯವಾಗಿದೆ

ವೆಂಕಟರಮಣ ದೇವರ ಚಿತ್ರಗಳಿಂದ ಕೂಡಿದ ಕೆಲೆಂಡರುಗಳೂ ಸಿಗುತ್ತವೆ.

ಮಾದರಿ ಪ್ರತಿಗಳನ್ನು ಬಯಸುವವರು ಐದು ಪಾವಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯುವುದು

ಮುಲ್ಕಿ ಗಣಪತಿ ಶ್ರೀನಿವಾಸ ಕಾಮತ್
ಜನರಲ್ ಮರ್ಚೆಂಟ್,
ಉಡುಪಿ ದ. ಕ.

ಫಜುಲುಲ್ ಹಕ್ಕರು ವೈಸರಾಯರ ಭೇಟಿಯಾದರು

ರಾಜಕೀಯ ಮಾತುಕತೆಗಾಗಿ

ದೊಂಬಿಗಳು ಅಲ್ಲಲ್ಲಿ ಶಾಂತವಾಗಿವೆ!

ಭಾರತದ ರಾಜಕೀಯದಲ್ಲಿ ಏನೂ ಪರಿಸ್ಥಿತಿಯು ಬದಲಾಗಲಿಲ್ಲ. ಜಾತೀಯ ದೊಂಬಿಗಳು ಈಗ ಅಲ್ಲಲ್ಲಿ ಶಾಂತವಾಗಿವೆ. ಸತ್ಯಾಗ್ರಹವು ಮುನ್ನಡೆಯುತ್ತಾ ಇದೆ. ಸರ್ ಮಿರ್ಜಾರವರು ಈ ತಿಂಗಳ ಅಂತ್ಯದಲ್ಲಿ ದಿವಾನಗಿರಿಯಿಂದ ಬಿಡುಗಡೆ ಹೊಂದುವರೆಂದು ತಿಳಿದಿದೆ. ಫಜುಲುಲ್ ಹಕ್ಕರು ವೈಸರಾಯರನ್ನು ಭೇಟಿಯಾಗಿ ಪ್ರಕೃತದ ರಾಜಕೀಯದ ವಿಷಯ ಮಾತುಕತೆ ನಡೆಸಿದರಂತೆ.

ಮೈಸೂರಿನಲ್ಲಿ ದಬ್ಬಾಳಿಕೆ ಇನ್ನೂ ಕಡಿಮೆಯಾಗಿಲ್ಲ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಸಿದ್ಧಯ್ಯನವರು ಒಂದು ಪ್ರಕಟಣೆ ಕೊಡುತ್ತಾ ಮೈಸೂರಲ್ಲಿ ಕಾಂಗ್ರೆಸಿನವರ ಮೇಲೆ ಸರಕಾರವು ನಡೆಸುವ ದಬ್ಬಾಳಿಕೆ ಇನ್ನೂ ಕಡಿಮೆಯಾಗಿಲ್ಲವೆಂದು ಬರೆಯುತ್ತಾರೆ.

ಹಿಂದುಸ್ಥಾನದಲ್ಲಿ ಯುದ್ಧ ಕೈದಿಗಳು

೮೪ ಸಾವಿರ ಯುದ್ಧ ಕೈದಿಗಳನ್ನು ಹಿಂದುಸ್ತಾನದಲ್ಲಿ ಇಡಬಹುದಾಗಿ ಸರಕಾರವು ಹೊಣೆಹೊತ್ತಿದೆಯಂತೆ, ೨೨೦೦೦ ಕೈದಿಗಳು ಬಂದಿರುವರಂತೆ. ಇವರಲ್ಲಿ ಜರ್ಮನರಾರೂ ಇಲ್ಲ.

ಹಕ್ ವೈಸರಾಯರ್ ಭೇಟಿ

ಬಂಗಾಳದ ಪ್ರಧಾನಿ ಹಕ್ಕರು ವೈಸರಾಯರನ್ನು ಭೇಟಿಯಾಗಿ ಬಂದರು. ಈಗಿನ ರಾಜಕೀಯ ತೊಡಕನ್ನು ನಿವಾರಿಸುವ ವಿಷಯ ಮಾತನಾಡಿದರಂತೆ.

ಬ್ರಿಟಿಷ್ ಸರಕಾರಕ್ಕೆ ಸಪ್ರುಗಳ ಎಚ್ಚರಿಕೆ

ಭಾರತವನ್ನು ಪಾಲು ಮಾಡಲು ಒಪ್ಪುವುದು ಅಕ್ಷಮ್ಯವಾದುದು

ಭಾರತವನ್ನು ಎರಡು ಭಾಗ ಮಾಡುವ ಜಿನ್ನರ ಪಾಕಿಸ್ತಾನ ಯೋಜನೆಗೆ ಬ್ರಿಟಿಷ್ ಸರಕಾರವು ಒಪ್ಪುವುದು ಅಕ್ಷಮ್ಯವಾದ ಮೋಸವೆಂದು ಸಪ್ರುಗಳು ಒಂದು ಪ್ರಕಟಣೆಯಲ್ಲಿ ಹೇಳುತ್ತಾರೆ.

ಆಲಿಪುರಂ ಜೈಲಿನಿಂದ ನಾಲ್ವರ ಪಲಾಯನ

ಶ್ರೀಗಳಾದ ಸುಬ್ರಹ್ಮಣ್ಯಂ, ವೆಂಕಟೇಶಯ್ಯ, ಜೋಸೆಫ್ ಮತ್ತು ಶಂಕರನ್ ಎಂಬೀ ನಾಲ್ವರು ರಾಜಕೀಯ ಕೈದಿಗಳು ಆಲಿಪುರಂ ಜೈಲಿನಿಂದ ತಪ್ಪಿಸಿ ಹೋಗಿರುವರು.

ಮುಗಲ್ ರಾಜವಂಶೀಯನಿಗೆ ಸತ್ಯಾಗ್ರಹದಲ್ಲಿ ಶಿಕ್ಷೆ

ಮುಗಲ್ ವಂಶದ ಕೊನೆಯ ಅರಸು ಬಹದ್ದೂರ್ ಶಹನ ಮೊಮ್ಮಗನಾದ ಶಹಜಾದ್ ಶಿಕಂದರ್ ಎಂಬ ಅಹ್ರಾರ್ ಮುಖಂಡರಿಗೆ ಸತ್ಯಾಗ್ರಹದ ಸಂಬಂಧ ಎರಡು ವರ್ಷಗಳ ಕಠಿಣ ಶಿಕ್ಷೆಯು ವಿಧಿಸಲಾಗಿದೆ.

ತಾನು ಸತ್ಯಾಗ್ರಹ ಮಾಡುವುದಾಗಿ ಅವರು ಒಂದು ಭಾಷಣದಲ್ಲಿ ಹೇಳಿದರಂತೆ. ಆ ಆಕ್ಷೇಪಕರ ಭಾಷಣಕ್ಕಾಗಿ ಸತ್ಯಾಗ್ರಹ ಮಾಡುವ ಮೊದಲು ಅವರನ್ನು ಬಂಧಿಸಲಾಗಿದೆ.

ಸರ್ ಮಿರ್ಜಾ ಇಸ್ಮಾಯಿಲರು ನಿವೃತ್ತರಾಗುತ್ತಾರೆ

ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ಮೇ ಅಂತ್ಯದೊಳಗೆ ನಿವೃತ್ತರಾಗುವರೆಂಬ ವಾರ್ತೆ ಬಂದಿದೆ.

ಭಿನ್ನಾಭಿಪ್ರಾಯವು ಇದಕ್ಕೆ ಕಾರಣವೆಂದು ವಾರ್ತೆ. ಸರ್ ಮಾಧವರಾಯರ ಹೆಸರು ದಿವಾನ ಪದವಿಗೆ ಸೂಚಿಸಲಾಗಿದೆಯೆಂದು ತಿಳಿದಿದೆ.

ರವೀಂದ್ರರಿಗೆ ಕೈಶೇಕರ ತಂತಿ ಜನ್ಮ ದಿನದ ಅಭಿವಂದನೆ

ಚೀನದ ಮತ್ತು ತನ್ನ ಪರವಾಗಿ ವಿಶ್ವಕವಿ ಠಾಗೂರರಿಗೆ ಚಿಯಾಂಗ್ ಕೈಶೇಕರು ಅಭಿನಂದನೆ ಕಳುಹಿಸಿರುವರು. ರವೀಂದ್ರರು ಅದಕ್ಕೆ ಉತ್ತರ ಬರೆದು 'ನೀವು ಸೂಚಿಸಿದ ಪ್ರೇಮದಿಂದ ನಾನು ಅತ್ಯಂತ ಆನಂದಗೊಂಡಿದ್ದೇನೆ' ಎಂದು ಬರೆದಿರುವರು.

ಸಾವರ್ಕಾರರ ಜನ್ಮ ದಿನ

ಮೇ ತಾರೀಕು ೨೮ಕ್ಕೆ ಹಿಂದೂ ಮಹಾಸಭೆಯ ಅಧ್ಯಕ್ಷ ಸಾವರ್ಕಾರರ ಜನ್ಮ ದಿನಾಚರಣೆಯು ಅಖಿಲ ಭಾರತದಲ್ಲಿ ಹಿಂದೂ ಮಹಾಸಭೆಯ ಪರವಾಗಿ ಆಚರಿಸಲ್ಪಡತಕ್ಕದ್ದೆಂದು ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ತಿರುಚಿನಾಪಳ್ಳಿ ಜೈಲಿನ ಪರಿಸ್ಥಿತಿ

ಜೈಲಿನಿಂದ ಬಿಡುಗಡೆ ಹೊಂದಿಬಂದ ಶ್ರೀ. ಕೆ. ಅಚ್ಯುತ ಮೇನನ್ ಇವರು ಒಂದು ಪ್ರಕಟಣೆಯಲ್ಲಿ ತ್ರಿಚಿನಾಪಳ್ಳಿ ಜೈಲಿನ ಪರಿಸ್ಥಿತಿಯನ್ನು ತಿಳಿಸಿದ್ದಾರೆ.

'ಜೈಲು ತುಂಬಿಹೋಗಿದೆ. ನೀರಿನ ಅಭಾವ ತುಂಬಾ ಇದೆ. ಉಪಯೋಗಿಸುವ ಅಕ್ಕಿ ತರಕಾರಿಗಳು ಬಹಳ ಅಪ್ರ[illegible]ದ್ದು. ಮಜ್ಜಿಗೆ ಹೆಸರಿಗೆ ಮಾತ್ರ. ಮೂರನೆಯ ತಾರೀಕಿನಿಂದ ರಾಜಕೀಯ ಕೈದಿಗಳನ್ನು ತೆಗೆದುಕೊಳ್ಳುವುದೇ ಇಲ್ಲ. ಮೂರು ತಿಂಗಳಿಗೊಮ್ಮೆ ಮಾತ್ರ ಕೈದಿಗಳ ಭೇಟಿ. ಯೋಗ್ಯ ಔಷಧ ಚಿಕಿತ್ಸೆ ಇಲ್ಲ.'

ಅಹಮದಾಬಾದ್ ದಂಗೆ ಮಹಾದೇವ ದೇಸಾಯಿಗಳ ವಿಚಾರಣೆ

ಅಹಮದಾಬಾದಿನಲ್ಲಿ ಕಳೆದ ತಿಂಗಳು ನಡೆದ ದಂಗೆಯ ಕುರಿತು ಶ್ರೀ. ಮಹಾದೇವ ದೇಸಾಯಿಯವರು ಬಂದು ತನಿಖೆ ನಡೆಸಿ ಹಿಂತೆರಳಿದರು.

ಹಿಂದುಸ್ಥಾನ ವಿಭಜನೆಗೆ ವಿರೋಧ

ಪ್ರಾಗತಿಕರ ಗೊತ್ತುವಳಿ

ಹಿಂದುಸ್ಥಾನವನ್ನು ವಿಭಾಗಿಸುವ ಯಾವುದೇ ಯೋಜನೆಯನ್ನು ತಲೆಯಲ್ಲಿ ಹಾಕಿಕೊಳ್ಳುವುದಿಲ್ಲವೆಂದು ಬ್ರಿಟಿಷ್ ಸರಕಾರದವರು ಬಹಿರಂಗವಾಗಿ ಜಾಹೀರಮಾಡಬೇಕೆಂದು ಪಂಡಿತ ಹೃದಯನಾಥ ಕುಂಜ್ರುರವರ ಅಧ್ಯಕ್ಷತೆಯಲ್ಲಿ ಸೇರಿದ ಪ್ರಾಗತಿಕರ ಸಭೆಯಲ್ಲಿ ಗೊತ್ತುವಳಿ ಸ್ವೀಕರಿಸಲ್ಪಟ್ಟಿತು. ಈ ಸಭೆಯಲ್ಲಿ ಮತ್ತೊಂದು ಗೊತ್ತುವಳಿಯನ್ನು ಸ್ವೀಕರಿಸಲಾಗಿದ್ದು ಅದರಲ್ಲಿ ಅಮೇರಿಯವರ ಭಾಷಣವನ್ನು ನಿಷೇಧಿಸಿರುವರಲ್ಲದೆ ಹಿಂದುಸ್ಥಾನದ ಪೂರ್ಣ ಸಹಾಯ ಸಿಗಬೇಕಿದ್ದರೆ ಮುಂಬಯಿ ಗೊತ್ತುವಳಿಗಳನ್ನು ಒಪ್ಪಿಕೊಳ್ಳುವುದು ಆವಶ್ಯವಿದೆಯೆಂದು ಹೇಳಲಾಗಿದೆ.

ಅಹಿಂಸಾತ್ಮಕ ಸೈನ್ಯ ಅವಶ್ಯವಿದೆ ಗಫರಖಾನರ ಭಾಷಣ

ಹಿಂದುಸ್ಥಾನಕ್ಕೆ ಈಗ ನಿಷ್ಕಲ್ಮಷ ಅಹಿಂಸಾತ್ಮಕ ಸೈನ್ಯವು ಅವಶ್ಯವಿದೆಯೆಂದು ಖಾನ ಅಬ್ದುಲ್ ಗಫರಖಾನರು ೮ ದಿನಗಳ ವರೆಗೆ ನಡೆದು ಇಂದು ಮುಕ್ತಾಯವಾದದ್ದು ಆಗ ಕೆಂಪಂಗಿ ಸ್ವಯಂ ಸೇವಕರ ಶಿಬಿರದಲ್ಲಿ ಭಾಷಣವನ್ನು ಮಾಡುತ್ತ ಹೇಳಿದರು. ಈ ಶಿಬಿರದವರು ಕೊನೆಯ ದಿನ ಸುತ್ತಲಿನ ಹಳ್ಳಿಗಳಿಗೆ ಹೋಗಿ ಸ್ವಚ್ಛ ಮಾಡುವ ಕೆಲಸವನ್ನು ಕೈಕೊಂಡಿದ್ದರಲ್ಲದೆ ರಾಟೆಯ ಮೇಲೆ ನೂಲುವ ಪ್ರದರ್ಶನವನ್ನೂ ಏರ್ಪಡಿಸಿದ್ದರು.

ದಕ್ಷಿಣ ಕನ್ನಡದ ಸತ್ಯಾಗ್ರಹಿಗಳು ಭಟ್ಕಳದ ಲಾಕಪ್ಪಿನಲ್ಲಿದ್ದಾರೆ

ದಕ್ಷಿಣ ಕನ್ನಡದ ಸತ್ಯಾಗ್ರಹಿಗಳಾದ ಶ್ರೀ. ಪಿ. ಎಸ್. ಕೃಷ್ಣಭಟ್ಟ (ಪಾಜಾಜೆ) ಶ್ರೀ. ಕೆ. ಟಿ. ಶಂಕರ (ಬದಿಯಡ್ಕ) ಶ್ರೀ. ಪಿ. ಕೆ. ವಿಶ್ವನಾಥಶೆಟ್ಟಿ, ಶ್ರೀ. ಸದಾನಂದ (ನಾಣಿ) ಇವರು ಭಟ್ಕಳದಲ್ಲಿ ತಾ. ೧೦ರಂದು ಬಂಧಿತರಾಗಿ ಲಾಕಪ್ಪಿನಲ್ಲಿರುತ್ತಾರೆ. ಇವರಲ್ಲಿ ಶ್ರೀ. ಪಿ. ಎಸ್. ಕೃಷ್ಣಭಟ್ಟರಿಗೆ ಜ್ವರ ಬರುತ್ತದೆಯೆಂದು ತಿಳಿದಿದೆ. ಅಲ್ಲಿನ ಲಾಕಪ್ಪಿನ ಪರಿಸ್ಥಿತಿ ಬಹಳ ಕೆಟ್ಟದಿರುತ್ತದೆಂದು ಸುದ್ದಿಯಿದೆ.

THE BANK OF MANGALORE LIMITED.

HEAD OFFICE MANGALORE. ESTD. 1901.

Branches:—MOODABIDRI & PADUBIDRI.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	5½ per cent
„ 1 „	4½ per cent
„ 6 months	3½ per cent
„ 3 „	3 per cent

Interest payable Quarterly

SAVINGS BANK DEPOSITS:

On daily balances on balances over Rs. 5 in multiples of Rs. 5 @

All kinds of banking business transacted.

NOTICE

The Ammembal Subba Rao Pai Memorial Fund.

Applications for loan stipends from the above fund should reach the undersigned on or before the 15th of June 1941. While granting stipends, first preference will be given to those who are already undergoing courses with aid from this fund. If funds permit after awarding these stipends, applications for technical courses will be considered. Applications for Arts Courses will be considered in cases of exceptional merit. Only Gowd Saraswath Brahmins need apply.

Blank application forms will be supplied at a cost of one anna for original ones and half an anna for renewals. If they are to be sent by post an additional three-fourth anna stamp should be sent. All correspondence will be attended to if a reply post card or an embossed cover is enclosed along with the letter or application.

Office of the A. S. R. P. M. Fund, Canara High School, Mangalore, 13th May, 1941.

J. Vasudeva Pai B. A., L. T., Hon. Secretary.

ಶಾಲಾ ಪುಸ್ತಕಗಳು

*ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ. ಎರಡನೆಯ ಆವೃತ್ತಿಯು ಹೊರಬೀಳಲಿದೆ.

ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ **ಬೆಲೆ 0-2-0**

ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ. **ಬೆಲೆ 0-2-6**

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕವನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು. ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು. ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ. ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು; ಬೋಧಪ್ರದಗಳೆಂದು.

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ. ಬಿ. ಶ್ರೀನಿವಾಸರಾವ್ ಮತ್ತು ಬಿ. ದೂಮಪ್ಪನವರಿಂದ ರಚಿತವಾದದು

೪ನೆಯ ತರಗತಿಗೆ **ಬೆಲೆ 0 4 0** ೫ನೆಯ ತರಗತಿಗೆ **ಬೆಲೆ 0 5 0**

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿದೆ. ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ.

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮಾತ್ರ ಮೊದಲಾಗಿ ರಚಿತವಾದುವು. ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ. ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ.

ಬೆಲೆ: ೪, ೫ನೆಯ ತರಗತಿಗೆ 0—1—6 *೬ನೆಯ 0—2—0
*೭ನೆಯ 0—2—6 *೮ನೆಯ 0—3—0

ಸಿರಿಗನ್ನಡ ಪಾಠಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ. ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮಶಃವಾಗಿ ಓದುಗಾರಿಕೆ, ತರುವಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪಾಠಕದ ರಚನೆಯಾಗಿರುತ್ತದೆ.

ಬೆಲೆ: 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೬ನೆಯ ತರಗತಿಗೆ 0 2 6 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿ ಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಶ್ರೀ ಉಳ್ಳಾಲ ತುಕ್ರಣ್ಣನವರ ಸತ್ಯಾಗ್ರಹ

ಶ್ರೀ. ಉಳ್ಳಾಲ ತುಕ್ರಣ್ಣನವರು ತಾ. ೯ರಂದು ಬೆಳಿಗ್ಗೆ ಉಳ್ಳಾಲದಲ್ಲಿ ಸತ್ಯಾಗ್ರಹ ಮಾಡಿದರು. ಅವರನ್ನು ಬಂಧಿಸಲಿಲ್ಲ. ಡಿಲ್ಲಿಯ ಕಡೆ ಪಯಣ ಬೆಳೆಸಿದ್ದಾರೆ.

ಶ್ರೀ. ತುಕ್ರಣ್ಣನವರು ಸುಮಾರು ೫೦ ವರ್ಷ ಪ್ರಾಯದ ಮುದುಕರು. ಹಿಂದಿನ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಸೆರೆಮನೆವಾಸವನ್ನನುಭವಿಸಿದವರು. ಅವರ ಸತ್ಯಾಗ್ರಹಕ್ಕೆ ಪ್ರಚಂಡ ಜನ ಸಂದಣಿ ಸೇರಿತ್ತು. ವಾದ್ಯಘೋಷ ಮೊದಲಾದವುಗಳಿಂದ ಸಂಭ್ರಮಪೂರ್ಣ ಗೌರವ ಸಲ್ಲಿಸಲಾಗಿತ್ತು.

ಪಡುಬಿದ್ರೆ

ಸತ್ಯಾಗ್ರಹಿಗಳ ಪ್ರಚಾರ

ನಮ್ಮ ಜಿಲ್ಲೆಯಲ್ಲಿ ಪ್ರಥಮವಾಗಿ ವಾಕ್ ಸ್ವಾತಂತ್ರ್ಯವನ್ನು ಪಡೆದು ಮುಂದೆ ಹೊರಟಿದ್ದ ಶ್ರೀಯುತ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಕಾರ್ಕಳ, ಕುಂದಾಪುರ, ಉಡುಪಿ ಈ ತಾಲೂಕುಗಳ ನೂರಾರು ಹಳ್ಳಿಗಳನ್ನು ಸಂಚರಿಸಿ, ಸಾರ್ವಜನಿಕ ಸಭೆಗಳನ್ನು ಜರಗಿಸಿ, ಯುದ್ಧವಿರುದ್ಧ ಘೋಷಣೆಯನ್ನು ಹೇಳಿ, ಅದನ್ನು ಹೇಳುವ ಕಾರಣವನ್ನು ಸ್ಪಷ್ಟಪಡಿಸಿ ಕಾಂಗ್ರೆಸಿನ ಪ್ರಚಾರ ಕಾರ್ಯ ಮಾಡುತ್ತಾ ಪಡುಬಿದ್ರೆ ಹೆಜಮಾಡಿಗಳ ವರೆಗೆ ಬಂದಿರುವರು.

ಕಾರ್ಕಳ

ಸತ್ಯಾಗ್ರಹ ಸಮಾಚಾರಗಳು

ಬಂಧನಕ್ಕೊಳಗಾಗದ ಸತ್ಯಾಗ್ರಹಿಗಳಾದ ಶ್ರೀಗಳಾದ ಚಿಕ್ಕಯ್ಯ ನಾಯ್ಕ, ವರದರಾಯ ಪ್ರಭು ವೆಂಕಟೇಶ ಭಟ್ಟ, ಸದಾನಂದ ಪೈ, ಕೆ. ಟಿ. ಶಂಕರ, ಎ. ಕೆ. ವಿಶ್ವನಾಥ ಶೆಟ್ಟಿ ಮೊದಲಾದವರು ಇಲ್ಲಿಗೆ ಬಂದು ಯುದ್ಧವಿರೋಧ ಘೋಷಣೆಗಳ ಮೂಲಕ ಸತ್ಯಾಗ್ರಹ ಸಂದೇಶವನ್ನು ಕೊಟ್ಟರು. ಇನ್ನೊಬ್ಬ ಸತ್ಯಾಗ್ರಹಿ ಶ್ರೀ. ಕೆ. ವಾಮನ ಶರ್ಮರು ಕೇಂದ್ರಗಳಲ್ಲಿ ಸಂಚಾರಕ್ಕೆ ಹೊರಟಿದ್ದಾರೆ.

ಪುತ್ತೂರು

ಶ್ರೀ. ಸಂಜೀವ ಶೆಟ್ಟಿಗಳ ಸತ್ಯಾಗ್ರಹ

ಪುತ್ತೂರಲ್ಲಿ ತಾ. ೯ರಂದು ಶ್ರೀ. ಸಂಜೀವ ಶೆಟ್ಟಿಗಳು ಯುದ್ಧವಿರೋಧ ಘೋಷಿಸಿ ಸತ್ಯಾಗ್ರಹ ಮಾಡಿದರು. ಅವರನ್ನು ಕೈದುಮಾಡಿ ತಾ. ೧೫ರ ವರೆಗೆ ರಿಮಾಂಡಿನಲ್ಲಿಡಲಾಗಿದೆ.

ಅಂಕೋಲೆಯಲ್ಲಿ ದಕ್ಷಿಣ ಕನ್ನಡದ ಸತ್ಯಾಗ್ರಹಿಗಳಿಗೆ ಶಿಕ್ಷೆ.

ಮೂಡಬಿದ್ರಿಯ ಶ್ರೀ. ನರಸಿಂಹ ರಾವ್ ಅಂಕೋಲೆಕರ್, ಉಡುಪಿಯ ಶ್ರೀ. ಕೆ. ಸೀತಾರಾಮ ನಾಯಕ, ಬ್ರಹ್ಮಾವರದ ಬಿ. ಗೋವಿಂದ ಶೆಟ್ಟಿ, ನಗರದ ವೇಣುಗೋಪಾಲ ನಾಯಕ, ಪುತ್ತೂರಿನ ಕೆ. ಚಿಕ್ಕಯ ನಾಯ್ಕ ಇವರನ್ನು ಅಂಕೋಲೆಯಲ್ಲಿ ಕೈದುಮಾಡಿ ಮೊದಲನೆಯವರಿಗೆ ನಾಲ್ಕು ತಿಂಗಳ ಸಾದಾ ಶಿಕ್ಷೆ ಉಳಿದವರಿಗೆ ಮೂರು ತಿಂಗಳ ಶಿಕ್ಷೆ ವಿಧಿಸಿರುವರು.

ಸಿದ್ದಾಪುರದಲ್ಲಿ ದಕ್ಷಿಣ ಕನ್ನಡದ ಸತ್ಯಾಗ್ರಹಿಗಳು ಬಂಧಿತರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾಗದೆ ಇದ್ದು ಡಿಲ್ಲಿಯ ಕಡೆಗೆ ಪ್ರಯಾಣ ಮಾಡುತ್ತಿದ್ದ ಶ್ರೀಗಳಾದ ಪಿ. ವಿ. ಕಳಂಬಿತ್ತಾಯ (ಕಾಸರಗೋಡು), ಮಟ್ಟಿ ರಂಗನಾಥ ಪ್ರಭು (ಪಡುಬಿದ್ರೆ) ಪಿ. ಎಂ. ಕೆ. ರಾಮನ್ (ಕಾಸರಗೋಡು) ಈ ಮೂವರು ಸತ್ಯಾಗ್ರಹಿಗಳು ತಾ. ೯ರಂದು ಸಿದ್ದಾಪುರದಲ್ಲಿ ಯುದ್ಧವಿರುದ್ಧ ಘೋಷಣೆಮಾಡಿ ಬಂಧಿತರಾದರು. ಸಿರ್ಸಿಯಲ್ಲಿ ತಾ. ೬ಕ್ಕೆ ವಿಚಾರಣೆಯಾಗಿ ಪ್ರತಿಯೊಬ್ಬರಿಗೂ ೪ ತಿಂಗಳ ಸಾದಾ ಸಜೆ ವಿಧಿಸಿ ಹಿಂಡಲ್ಗ ಸೆರೆಮನೆಗೆ ಕೊಂಡೊಯ್ಯುತ್ತಾರೆ.

ವಿಚಿತ್ರ ಪ್ರಪಂಚ

ಶಿಲಾ ಪ್ರತಿಮೆಯೊಡನೆ ಮದುವೆಯಾದ!

ರೊಜರ್ ಪ್ರೊನ್ಸೆ ಎಂಬಾತ ಫ್ರಾನ್ಸಿನ ಸುಪ್ರಸಿದ್ಧ ಶಿಲ್ಪಿ. ಆತನಿಗೆ ಒಬ್ಬ ಸುಂದರಿಯ ಮೇಲೆ ಮನಸ್ಸಾಯಿತು. ಆದರೆ ಆಕೆ ಅವನಿಗೆ ಮಾತುಕೊಟ್ಟು ಮೋಸಮಾಡಿದಳು. ನಿರಾಶಗೊಂಡ ಅವನು ಅವಳ ಶಿಲಾ ಪ್ರತಿಮೆಯನ್ನೇ ರಚಿಸಿ ಅದಕ್ಕೆ ಪೆನೆಲೊಪ ಎಂಬ ಮೋಹಕ ಹೆಸರನ್ನು ಇಟ್ಟು ಅದನ್ನೇ ಪ್ರೀತಿಸತೊಡಗಿದ. ಸಾವಿರಾರು ಪವನು ಖರ್ಚುಮಾಡಿ ಆ ಪ್ರತಿಮೆಗೆ ಅತ್ಯುತ್ತಮ ಉಡುಗೆ ತೊಡುಗೆಗಳನ್ನು ತಯಾರಿಸಿ ಅವಳೊಡನೆ ತನ್ನ ಮದುವೆಯೆಂದು ಜಾಹೀರುಮಾಡಿದ. ಮದುವೆಗೆ ಮಿತ್ರರನ್ನೆಲ್ಲ ಆಮಂತ್ರಿಸಿದ. ಇಗರ್ಜಿಯಲ್ಲಿ ಈ ವಧುವಿನ ಸಮ್ಮತಿಯು ಬೇಕಾಗಿದ್ದಾಗ ಪ್ರತಿಮೆಯ ಮೌನವೇ ವಧುವಿನ ಸಮ್ಮತಿಯೆಂದು ಮದುವೆ ರಿಜಿಸ್ಟ್ರಿಯಲ್ಲಿ ಬರೆಕೊಳ್ಳಲಾಯಿತು. ಈ ಪ್ರಕಾರ ಮದುವೆ ಆಗಿ, ಈಗ ಈ ಶಿಲ್ಪಿ ಆ ಪ್ರತಿಮೆಯೊಡನೆಯೇ ತನ್ನ ಎಲ್ಲಾ ಪ್ರಣಯವನ್ನು ಇಟ್ಟುಕೊಂಡು ದಾಂಪತ್ಯ ಜೀವನವನ್ನು ನಡೆಯಿಸಿಕೊಂಡು ಬರುತ್ತಿದ್ದಾನೆ.

ಗರ್ಭ ಬೆಳೆಯದಿದ್ದುದಕ್ಕೆ ಡಾಕ್ಟರನ ಮೇಲೆ ದಾವೆ!

ಶ್ರೀಮತಿ ಪೌಲಿನ ಸ್ಪೆನ್ಸರ ಎಂಬಾಕೆ ಅಮೇರಿಕದ ನಾರ್ತಬ್ರನ್ಸಿಕ್ಕಿನ ಒಬ್ಬ ೦ ವರ್ಷ ಪ್ರಾಯದ ಮುದುಕಿ. ಅವಗೆ ನಾಲ್ಕಾರು ಮಕ್ಕಳಾಗಿದ್ದುವು. ಊನೆಯದಾದ ಹೆಣ್ಣುಮಗು ಹುಟ್ಟಿ ೧೭ ವರ್ಷಗಳಾದುವು. ಕನ್ಯಾಹ್ನ ಅವಳು ಸಂಸಾರ ಮಾಡಿಕೊಂಡಿದ್ದಳಾದರೂ ಗರ್ಭಿಣಿಯಾಗಿರಲಿಲ್ಲ. ಆದ್ದರಿಂದ ಅವಳು ಹೆರುವ ಪ್ರಾಯವು ಮೀರಿಹೋಯಿತೆಂದು ಎಲ್ಲರೂ ಗ್ರಹಿಸಿದ್ದರು. ಆದರೆ ಮೊನ್ನೆ ಮಾತ್ರ ಹೊಟ್ಟೆ ಬೆಳೆಯುತ್ತ ಬಂದ ಹಾಗೆ ಕಂಡಿತು. ಆದ್ದರಿಂದ ಒಬ್ಬ ಡಾಕ್ಟರನ ಬಳಿಗೆ ಹೋದಳು. ಹೊಟ್ಟೆಯಲ್ಲಿ ಕುರು ಆಗಿದೆಯೆಂದು ಅದಕ್ಕೆ ಚಿಕಿತ್ಸೆಯಾಯಿತು. ಹೀಗಾದರೂ ಹೊಟ್ಟೆ ಬೆಳೆದು ದೊಡ್ಡದಾಗುವುದು ಮಾತ್ರ ನಿಲ್ಲಲಿಲ್ಲ. ಚಿಕಿತ್ಸೆ ನಡೆದ ನಾಲ್ಕು ತಿಂಗಳ ಅನಂತರ ಅವಳು ಒಂದು ಗಂಡು ಮಗುವನ್ನು ಹೆತ್ತಳು. ಪ್ರಾರಬ್ಧಕ್ಕೆ ಹುಟ್ಟಿದ ಮಗು ಪೂರ್ಣ ಬೆಳೆದಿರಲಿಲ್ಲ. ಕೃಶವಾಗಿಯೂ ಹೆಡ್ಡಾಗಿಯೂ ಇತ್ತು. ಡಾಕ್ಟರನ ಔಷಧಿಯ ಕಾರಣದಿಂದಲೇ ಮಗು ಹೀಗಾಗಿ ಹುಟ್ಟಿತೆಂದು ಈಗ ಆ ಮಹಿಳೆ ಆ ಡಾಕ್ಟರನ ಮೇಲೆ ದಾವೆ ಮಾಡಿದ್ದಾಳೆ! ಮುಂಕು ಮಗುವಿನ ಪೋಷಣೆಗೆ ೧೫೦೦೦ ಡಾಲರ್ ಮತ್ತು ಔಷಧಿ ಕೊಟ್ಟು ಅದರ ಜೀವನ ಹಾಳುಮಾಡಿದುದಕ್ಕೆ ೩೫೦೦೦ ಡಾಲರ್. ಹೀಗೆ ಒಟ್ಟು ೫೦೦೦೦ ಡಾಲರ್ ನಷ್ಟ ಕೊಡಿಸಬೇಕೆಂದು ಅವಳು ಕೋರ್ಟನ್ನು ಕೇಳಿಕೊಂಡಿದ್ದಾಳೆ.

ಬಲ್ಬಿನಾಕೃತಿಯ ಮೊಟ್ಟೆ

ವಾಷಿಂಗ್ಟನ ನಗರದ ಸಮೀಪದಲ್ಲಿ ಹೊಲಮನೆ ಮಾಡಿಕೊಂಡು ವಾಸವಾಗಿದ್ದ ಅಲ್ಬರ್ಟ ಕ್ಲಾರ್ಕ ಎಂಬ ಕೃಷಿಕನ ಕೋಳಿಗೂಡಿಗೆ ಒಂದು ವಿದ್ಯುಚ್ಛಕ್ತಿಯ ಬಲ್ಬು ಇತ್ತು. ಅದರೊಳಗಿನ ಹೇಂಟೆ ಯಾವತ್ತು ಸಮಯ ಅದೇ ಬಲ್ಬನ್ನು ನೋಡುತ್ತ ಇರುತಿತ್ತಂತೆ. ಅದರ ಪರಿಣಾಮವಾಗಿ ಆ ಹೇಂಟೆ ಬಲ್ಬಿನಾಕೃತಿಯ ಮೊಟ್ಟೆಗಳನ್ನು ಇಟ್ಟಿರುವದಾಗಿ ಪ್ರಕಟವಾಗಿದೆ. ಈ ಮೊಟ್ಟೆಗಳನ್ನು ಅಲ್ಲಿಯ ವಿದ್ಯುತುತ್ಪಾದಕ ಕಂಪೆನಿಯವರು ಪರೀಕ್ಷೆಗಾಗಿ ತಮ್ಮ ಬಳಿ ಇಟ್ಟುಕೊಂಡಿದ್ದಾರೆ. ಮನೋವಾಂಛಿತ ಸಂತತಿಯನ್ನೇ ಪಡೆಯಲಿಕ್ಕೆ ಈ ಘಟನೆಯಿಂದ ವಿಜ್ಞಾನಿಗಳು ಏನನ್ನಾದರೂ ಹೇಳದೆ ಇರಬಹುದೆ?

ಅಜ್ಜನ ಹಣ ಮೊಮ್ಮಗನಿಗೆ ಸಲ್ಲಿಸಿದನು!

ಅಮೇರಿಕದ ಜೂನಿಯರ್ ಚೇಂಬರ್ ಆವ್ ಕಾಮರ್ಸಿನ ಡೈರೆಕ್ಟರನಾದ ಸಿ. ರೆನ್ನೋಲ್ಡ್ಸ ವಾಮರ್ ಎಂಬವರು ಮೊನ್ನೆ ಒಂದು ದಿನ ತಮ್ಮ ಕೋಣೆಯಲ್ಲಿ ಕೂತಿದ್ದರು. ಆಗಲೇ ಒಬ್ಬ ಆಗಂತುಕನು ಬಂದು—"ತಾವು ದಿವಂಗತ ಡಾಕ್ಟರ ವಾಮರರ ಮೊಮ್ಮಕ್ಕಳೆ?" ಎಂದು ಕೇಳಿದ. 'ಹೌದು' ಎಂದು ಅವರು ಉತ್ತರವನ್ನು ಕೊಡಲು, ಆಗಂತುಕನು ೮ ಡಾಲರುಗಳನ್ನು ಮೇಜಿನ ಮೇಲಿಟ್ಟು, "ಇದು ನನ್ನ ಅಜ್ಜನಿಂದ ನಿಮ್ಮ ಅಜ್ಜನಿಗೆ ಸಲ್ಲಬೇಕಾದ ಹಣ ತೆಗೆದುಕೊಳ್ಳಬೇಕು" ಎಂದ. ೬೫ ವರ್ಷಗಳ ಮೊದಲು ಆಗಂತುಕನ ಚಿಕಿತ್ಸೆ ಮಾಡಿದುದಕ್ಕೆ ಅವನು ಡಾಕ್ಟರ ವಾಮರನಿಗೆ ೧೧ ಡಾಲರುಗಳನ್ನು ಕೊಡಬೇಕಾಗಿತ್ತು. ಆದರೆ ಮೂರು ಡಾಲರುಗಳನ್ನು ಕೊಟ್ಟಿರುವಷ್ಟರಲ್ಲಿ ಅವನು ಸತ್ತುಹೋದ. ಆತನ ಹೆಂಡತಿ ಉಳಿದ ಹಣವನ್ನು ಕೊಡಬೇಕೆಂದು ಆಗಾಗ ಬಹಳ ಪ್ರಯತ್ನಗಳನ್ನು ಮಾಡಿದ್ದಳು. ಬಡತನದ ಮೂಲಕ ಸಾಧ್ಯವಾಗಲಿಲ್ಲ. ಮೊನ್ನೆ ಅವಳು ತೀರಿಹೋದಳು. ಈಗ ಅವಳ ಮೊಮ್ಮಗನು ಆ ಬಾಕಿ ಹಣವನ್ನು ತಂದು ದಿವಂಗತ ಡಾಕ್ಟರರ ಮೊಮ್ಮಗನಿಗೆ ಪಾವತಿಮಾಡಿದ್ದಾನೆ. ಪ್ರಾಮಾಣಿಕತೆ ಅಂದರೆ ಹೀಗಿರಬೇಕು.

ಅನಾಥರ ಸಹಾಯಕ್ಕೆ ಧನವಂತರ ಗುಪ್ತ ಸಂಘ

ಅಮೇರಿಕದ ಕೆಲವು ಧನವಂತ ವ್ಯಾಪಾರಿಗಳೂ ಇತರ ಸೇವಾಸಕ್ತರೂ ಸದಸ್ಯರಾಗಿರುವ ಒಂದು ಗುಪ್ತ ಸಂಘವು ನ್ಯೂಯೊರ್ಕ ನಗರದಲ್ಲಿರುವದೆಂದು ಈಗ ತಾನೇ ಪೋಲೀಸರ ತಿಳುವಳಿಕೆಗೆ ಬಂದಿದೆ. ಈ ಸಂಘದ ಅನೇಕ ಶಾಖೆಗಳು ಅಮೇರಿಕದ ಬೇರೆ ಬೇರೆ ಕೇಂದ್ರಗಳಲ್ಲಿ ಯಾರಿಗೂ ತಿಳಿಯದ ಹಾಗೆ ಕೆಲಸಮಾಡಿಕೊಂಡಿರುವವು. ಅನಾಥರ, ಅದರಲ್ಲೂ ಮುಖ್ಯವಾಗಿ ಗರ್ಭಿಣಿ ಸ್ತ್ರೀಯರ ಮತ್ತು ಚಿಕ್ಕ ಮಕ್ಕಳ ಸಹಾಯ ಮಾಡುವುದೇ ಈ ಸಂಘದ ಧ್ಯೇಯವಾಗಿದೆ. ಈ ಸಂಘದ ಸದಸ್ಯರು ೨೫ ಸೆಂಟು ಸದಸ್ಯತನದ ಫೀಸುಕೊಡಬೇಕು. ಮತ್ತು ತಾವು ಈ ಸಂಘದ ಸದಸ್ಯರು ಎಂದು ಗೊತ್ತಾಗುವದಕ್ಕೆ ಗುಂಡಿಗಳಲ್ಲಿ ಸೂಜಿಗಳನ್ನು ಇರಿಸಿಕೊಳ್ಳಬೇಕು. ಹೆರಲಿಕ್ಕಿರುವ ಗರ್ಭಿಣಿಯರಿಗೂ, ಆಗ ತಾನೇ ಹೆತ್ತ ಮಕ್ಕಳಿಗೂ ಬೇಕಾದ ಅರಿವೆ, ಅಂಗಿ, ಹಾಸಿಗೆ ತಲೆಗಿಂಬು ಮೊದಲಾದವನ್ನು ಶೇಖರಿಸಿ, ಹೊಲಿದು, ಮಾಡಿಕೊಟ್ಟು ಅವರಿಗೆ ಗುಪ್ತ ದಾನಮಾಡುವದೇ ಇವರ ಮುಖ್ಯ ಕೆಲಸ.

BHUVANENDRA PRODUCTS LTD.,

KATAPADI, S K

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.

ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರ —

ಯು. ಪಾಂಡುರಂಗ ನಾಯಕ್, ರಥಬೀದಿ.

ರಾಘವೇಂದ್ರ ರಂಗ ಶೈ, ರಥಬೀದಿ.

ಡಾ। ಎಮ್. ಎನ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ

ಭುವನೇಂದ್ರ ಪ್ರೊಡಕ್ಟ್ ಲಿಮಿಟೆಡ್,

ಅದ್ವೈತದ ಅಮೃತ ಸಂದೇಶವನ್ನು ಜಗತ್ತಿಗೆ ಸಾರಿದರು

ಶ್ರೀ ಶಂಕರಾಚಾರ್ಯರ ಉಜ್ವಲ ಸನ್ಯಾಸ ಜೀವನ

ಧಾರ್ಮಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದ ಬಾಲ ಯೋಗಿ!

ಒಂದು ಸಾವಿರ ವರ್ಷಗಳ ಹಿಂದೆ ಬೌದ್ಧ ಮೀಮಾಂಸಕರ ಪ್ರಾಬಲ್ಯದಿಂದ ಹಿಂದೂ ಧರ್ಮವು ಅವನತಾವಸ್ಥೆಗಿಳಿದಿತ್ತು; ಆಗ ಧಾರ್ಮಿಕ ಕ್ರಾಂತಿ ಕಾರಕನಾಗಿ, ಹಿಂದೂ ಧರ್ಮದ ಉದ್ಧಾರಕರಾಗಿ, ಅದ್ವೈತ ಶುದ್ಧ ತತ್ವಪ್ರಚಾರಕರಾಗಿ ಶ್ರೀ. ಶಂಕರಾಚಾರ್ಯರು ಜನ್ಮವೆತ್ತಿ ಬಂದರು. ಕೇವಲ ಮೂವತ್ತೆರಡು ವರ್ಷಗಳ ತನ್ನಾಯುಸ್ಸಿನ ಅವಧಿಯಲ್ಲಿಯೇ ಅದ್ವೈತ ಸಿದ್ಧಾಂತವನ್ನು ಸಾಕಷ್ಟು ಪ್ರಬಲವಾಗಿ ಪ್ರಚಾರಪಡಿಸಿ ಹಿಂದೂ ಧರ್ಮದ ಸಾರ ಸರ್ವಸ್ವವನ್ನು ಸಾರಿದ ಸಾಮರ್ಥ್ಯ ಶ್ರೀ. ಶಂಕರಾಚಾರ್ಯರದು. ತತ್ವ ಶಾಸ್ತ್ರ ಪರಿಶೋಧಕರಾದ ಇಂದಿನ ನವನವೀನರಾದರೂ ಶ್ರೀ. ಆಚಾರ್ಯರ ವಿಚಾರವಾಹಿನಿಗೆ ತಲೆದೂಗುತ್ತಾರೆ. ಅಂತಹ ಪುಣ್ಯ ಪುರುಷರ ಜನ್ಮ ಜಯಂತಿ ಮೇ ತಿಂಗಳ ಮೊದಲನೆಯ ವಾರ ಬಂದಿತ್ತು. ಈ ಸಂದರ್ಭದಲ್ಲಿ ಅವರ ಜೀವನದ ಪುಣ್ಯ ಸ್ಮರಣೆ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಧಾರ್ಮಿಕ ವಿಚಾರವಂತರಿಗೆ ಶ್ರೀ ಶಂಕರಾಚಾರ್ಯರ ಜೀವನೇತಿಹಾಸವು ಪರಮ ಆಪ್ಯಾಯನವಾಗಿದೆ

ಶುದ್ಧವಾದ ತರ್ಕ ಸರಣಿಯಲ್ಲಿ, ಪಕ್ವವಾದ ವಿಚಾರ ವಾಹಿನಿಯಲ್ಲಿ, ಸರಲವಾದ ಅಭಿಪ್ರಾಯ ಪ್ರಕಾಶನದಲ್ಲಿ ಶಂಕರಾಚಾರ್ಯರನ್ನು ಸರಿಹೋಲುವ ಧಾರ್ಮಿಕ ತತ್ವಜ್ಞರು ಕೆಲವರೇ ಸಿಗಬಹುದು. ತನ್ನ ಪ್ರತಿಭಾ ಸಂಪನ್ನ ವ್ಯಕ್ತಿತ್ವದಿಂದ ಬಾಲಸನ್ಯಾಸಿಯಾಗಿದ್ದೇ ಅವರು ಧಾರ್ಮಿಕ ಲೋಕದಲ್ಲಿ ಮಹಾಂದೋಲನವನ್ನುಂಟುಮಾಡಿದರು. ಸಂಸ್ಕೃತಿಯ ಪ್ರವಾಹವನ್ನು ಹರಿಸಿದರು. ಭರತ ಭೂಮಿಗೆ ಹೊಸ ಮತ್ತು ಚಿರಂತನವಾದೊಂದು ತತ್ವದ ದರ್ಶನವಾಯಿತು. ಉಪನಿಷತ್ತು, ಗೀತಾ, ವೇದಾಂತ ಸೂತ್ರಗಳ ಸಾರ ಸರ್ವಸ್ವವನ್ನು ಹೀರಿ ಅವರು ಅದ್ವೈತದ ಉಜ್ವಲತತ್ವಗಳನ್ನು ಜಗತ್ತಿಗೆ ಕಾಣಿಕೆಯಾಗಿತ್ತರು

ಜನ್ಮಕಾಲ

ಆಗ ಬೌದ್ಧರು ಬಹಳ ಪ್ರಭಾವದಲ್ಲಿದ್ದರು. ಶ್ರೀ ಶಂಕರಾಚಾರ್ಯರೇ ತಮ್ಮ ಬ್ರಹ್ಮ ಸೂತ್ರ ಭಾಷ್ಯದಲ್ಲಿ ಬೌದ್ಧರಿಂದ ಭೂಮಿಯು ಆಕ್ರಮಿತವಾಗಿದೆಯೆಂದು ಉಲ್ಲೇಖಿಸಿರುತ್ತಾರೆ. ಶಂಕರಾಚಾರ್ಯರ ಜನ್ಮಕಾಲದ ಕುರಿತು ಸಂಶೋಧಕರಲ್ಲಿ ಚರ್ಚೆಯಿದೆ. ಕ್ರಿಸ್ತ ಪೂರ್ವಕಾಲವೆಂದು ಕೆಲವರು ಸಿದ್ಧಾಂತಿಸುತ್ತಾರೆ. ಕ್ರಿಸ್ತಶಕ ಎಂಟೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅಂತೂ ಇಂದಿಗೆ ಸಾವಿರಾರು ವರ್ಷಗಳ ಹಿಂದೆ ಅವರು ಜನ್ಮವೆತ್ತಿದರು.

ಪಶ್ಚಿಮ ಕರಾವಳಿಯು ಅನೇಕ ಸಾಧು ಸಂತರಿಗೆ ಜನ್ಮಭೂಮಿಯಾಗಿದೆ. ಶ್ರೀ ಮಧ್ವಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಶಂಕರಾಚಾರ್ಯರೆಂದು ಈ ತ್ರಿಮತಸ್ಥಾಪಕರೂ ಪಶ್ಚಿಮ ಕರಾವಳಿಯಲ್ಲಿಯೇ ಹುಟ್ಟಿ ಬಂದವರು. ಶ್ರೀ ಶಂಕರಾಚಾರ್ಯರು ತಿರುವಾಂಕೂರಿಗೆ ಸೇರಿದ ಕಾಲಾದಿಯೆಂಬ ಊರಲ್ಲಿ ಧಾರ್ಮಿಕರೂ ನೀತಿಸಂಪನ್ನರೂ ಆದ ಬ್ರಾಹ್ಮಣ ದಂಪತಿಗಳ ಬಸುರಲ್ಲಿ ಜನ್ಮ... ಮನೋಹರಾಕೃತಿಯ ಆ ಪುಣ್ಯ ಶಿಶುವು ನಿರ್ಮಲ ವಾತಾವರಣದಲ್ಲಿ ಬೆಳೆಯಿತು!

ಸುವರ್ಣವೃಷ್ಟಿ

ಮಹಾತ್ಮರ ಜೀವನಕ್ಕೆ ಸಂಬಂಧಿಸಿ ಅನೇಕ ಪವಾಡಗಳು ಪ್ರಸಿದ್ಧವಾಗಿರುತ್ತವೆ. ಶ್ರೀ ಶಂಕರಾಚಾರ್ಯರ ಜೀವಿತದಲ್ಲಿಯೂ ಅಂತಹವುಗಳು ಇಲ್ಲದಿಲ್ಲ. ಎಂದಿನಂತೆ, ಬ್ರಹ್ಮಚಾರಿಯಾದ ಶಂಕರನು ಭಿಕ್ಷೆಗಾಗಿ ಹೊರಹೋಗಿದ್ದನು. ಒಬ್ಬ ಬಡ ಹೆಂಗುಸಿನ ಮನೆಯ ಬಾಗಿಲಿಗೆ ಬಂದನು. ಆಕೆ ತನ್ನ ದರಿದ್ರಾವಸ್ಥೆಗಾಗಿ ಬಹಳ ನೊಂದುಕೊಂಡಳು! ಮನೆಯಲ್ಲಿ ವಸ್ತು ಒಡವೆಗಳೇನೂ ಇರಲಿಲ್ಲವಾದುದರಿಂದ ಒಂದು ನೆಲ್ಲಿಕಾಯಿಯನ್ನು ಆಕೆ ಬ್ರಹ್ಮಚಾರಿಗೆ ದಾನವಾಗಿತ್ತಳು. ಬ್ರಹ್ಮಚಾರೀ ಶಂಕರನು ಅಲ್ಲಿಯೇ ಕನಕಧಾರಾಸ್ತೋತ್ರವನ್ನು ರಚಿಸಿ ಹಾಡಿದನು. ಭಾಗ್ಯಲಕ್ಷ್ಮಿ ಕಣ್ತೆರೆದಳು! ಬಂಗಾರದ ಸುರಿಮಳೆ ಸುರಿಯಿತು! ಬಡ ಹೆಂಗುಸು ತುಂಬಿದ ಸಿರಿವಂತಳಾದಳು! ಮಹಾತ್ಮರಿಗೆ ಯಾವುದೂ ಅಸಾಧ್ಯವೆನಲಾಗುವುದಿಲ್ಲ. ವಿಶೇಷ ಕೃತಿಗಳನ್ನು ಮಾಡುವುದರಿಂದಲ್ಲವೇ ಅವರು ಮಹಾತ್ಮರೆನಿಸಿ ಜಗತ್ತಿಗೆ ಪೂಜ್ಯರಾಗುತ್ತಾರೆ?

ಸನ್ಯಾಸ ಸ್ವೀಕಾರ

ಬಾಲ್ಯದಿಂದಲೇ ಶಂಕರಾಚಾರ್ಯರಿಗೆ ಸನ್ಯಾಸ ಜೀವನದ ಕಡೆಗೆ ಒಲವು ಇತ್ತು. ಆದರೆ ಹೆತ್ತ ತಾಯಿಯ ಅನುಮತಿಯನ್ನು ಪಡೆವುದು ಅವರಿಗೆ ಅಸದಳವಾಯಿತು. ಒಮ್ಮೆ ಸ್ನಾನಕ್ಕೆಂದು ನದಿಗೆ ಹೋದರು. ಮೊಸಳೆಯು ಅಲ್ಲಿ ಶಂಕರಾಚಾರ್ಯರ ಕಾಲನ್ನು ಹಿಡಿದೆಳೆಯಿತು. ತಾನು ಸನ್ಯಾಸಿಯಾಗಲು ತಾಯಿ ಅನುಮತಿಯಿತ್ತರೆ ಮೊಸಳೆಯು ತನ್ನನ್ನು ಬಿಡಬಹುದಾಗಿಯೂ, ಅದಕ್ಕೆ ತಾಯಿ ಸಮ್ಮತಿಸಬೇಕಾಗಿಯೂ ಅವರು ದೀನರಾಗಿ ಬೇಡಿಕೊಂಡರು ಮಾತೆ ಸಮ್ಮತಿಸಿದ ಮೇಲೆ ಮೊಸಳೆಯು ಅವರನ್ನು ಬಿಟ್ಟು ಬಿಟ್ಟಿತು. ಮೊಸಳೆಯ ಬಾಯಿಂದ ಮರಳಿ ಬಂದಾಗ ಅವರು ಮೊದಲನೆಯ ಜನ್ಮವನ್ನು ನೀಗಿ ತಿರುಗಿ ಸನ್ಯಾಸವೆಂಬ ಎರಡನೆಯ ಜನ್ಮದಲ್ಲಿ ಜೀವಿಸಿ ಬಂದರೆಂದು ಇದಕ್ಕೆ ಅರ್ಥ ಮಾಡುತ್ತಾರೆ.

ಸಾರಿದ ತತ್ವ

ಶ್ರೀ ಶಂಕರಾಚಾರ್ಯರು ಅದ್ವೈತದ ಅಮೃತ ಸಂದೇಶವನ್ನು ಜಗತ್ತಿಗೆ ಸಾರಿದರು. ಜೀವಾತ್ಮ ಪರಮಾತ್ಮಗಳು ಅಭಿನ್ನವಾದ ಏಕವೆಂಬುದು ಅವರ ಸಿದ್ಧಾಂತ! ಸಣ್ಣ ಬೆಳಕು ಬೃಹತ್ ಜ್ಯೋತಿಯಲ್ಲಿ ಲೀನವಾಗುವಂತೆ—ಐಕ್ಯಗೊಳ್ಳುವಂತೆ ಜೀವಾತ್ಮನು ಪರಮಾತ್ಮನಲ್ಲಿ ಮುಕ್ತಿ ಪಡೆದು ನೆಲೆನಿಲ್ಲುತ್ತಾನೆಂದು ಅವರು ತಿಳಿಸಿದರು. ಎರಡಿಲ್ಲವೆಂಬುದೇ ಅದ್ವೈತ ಶಬ್ದದ ಅರ್ಥವಾಗಿದೆ ಇದರ ವಿವರಣೆಗಾಗಿ ಭಾಷ್ಯವನ್ನು ಪ್ರಸ್ಥಾನವನ್ನು ಬರೆದರು, ಉಪನಿಷತ್ತು ಗೀತೆಗಳನ್ನು ವ್ಯಾಖ್ಯಾನಿಸಿದರು

ಸ್ಥಾಪಿಸಿದ ಮಠಗಳು

ಶ್ರೀ ಶಂಕರಾಚಾರ್ಯರು ಶೃಂಗೇರಿ, ದ್ವಾರಕಾ, ಬದ್ರಿ, ಪುರಿಗಳಲ್ಲಿ ಚತುರ್ಮಠಗಳನ್ನು ಸ್ಥಾಪಿಸಿದರು. ಮೂವತ್ತೆರಡನೆಯ ವಯಸ್ಸಿನೊಳಗೇ ಅವರು ಅಖಿಲಭಾರತವನ್ನು ಸುತ್ತಿ ತತ್ವ ಪ್ರಚಾರ ಮಾಡಿದರು ಅಲ್ಲಲ್ಲಿ ವಾಗ್ವಾದಮಾಡಿ ವಿರುದ್ಧ ಮತದವರನ್ನು ಸೋಲಿಸಿದರು. ಅದ್ವೈತ ತತ್ವದ ದಿಗ್ವಿಜಯ ಮಾಡಿ ಮೂವತ್ತ ಮೂರನೆಯ ವಯಸ್ಸಿನಲಿ ಕೈಲಾಸವಾಸಿಗಳಾದರು. ಇಷ್ಟು ಅಲ್ಪ ಆಯುಸ್ಸಿನಲ್ಲಿಯೇ ಅಷ್ಟೊಂದು ಅದ್ಭುತ ಕಾರ್ಯಗಳನ್ನು ಸಾಧಿಸಿ ಅವರು ಅಪಾರ ಕೀರ್ತಿಯನ್ನು ಗಳಿಸಿದರು.

ಶಾಂಕರ ಕೃತಿಗಳು

ಶಂಕರಾಚಾರ್ಯರ ಕೃತಿಗಳು ಸಂಸ್ಕೃತ ಸಾಹಿತ್ಯದಲ್ಲಿ ಅಪೂರ್ವ ಸಾಹಿತ್ಯ ರತ್ನಗಳು. ಅವರ ಭಾಷೆ ಹೃದಯಂಗಮವಾದುದು. ಅವರ ಶೈಲಿ ಶುದ್ಧ, ಸರಲ ಮನೋಹರವಾದುದು. ಅವರ ನುಡಿಗಳು ಅರ್ಥಗರ್ಭಿತವಾಗಿದ್ದು ಮೋಹಕವಾದುವು. ಹೃದಯವೇ ನುಡಿದಂತೆ ಬರೆವ ಅಂತಹ ಅದ್ಭುತ ಲೇಖನಶಕ್ತಿ ಹೆಚ್ಚಿನ ತಪಸ್ಸಾಧನೆಯಿಲ್ಲದೆ ಸಾಮಾನ್ಯರಿಗೆ ದೊರಕುವಂತಹುದಲ್ಲವೆನ್ನಬೇಕು.

ಅವರು ಮಹಾಕವಿಗಳಾಗಿದ್ದರು; ಪ್ರಚಂಡವಾಗ್ಮಿಗಳಾಗಿದ್ದರು. ಪ್ರತಿಭಾ ಸಂಪನ್ನರಾದ ಲೇಖಕರಿದ್ದರು; ಮಹಾಮೇಧಾವಿಯಾಗಿದ್ದರು; ಅಗಾಧ ತತ್ವಜ್ಞಾನಿಯಿದ್ದರು; ನಿಶ್ಚಲ ಸನ್ಯಾಸಿಯಾಗಿದ್ದರು, ಉತ್ತಮ ಉಪದೇಶಕಾರರಾಗಿದ್ದರು; ಪರಮ ದೇವಭಕ್ತರಿದ್ದರು. ಹೀಗೆ ಶ್ರೀ ಶಂಕರಾಚಾರ್ಯರ ಜೀವನವು ಭವ್ಯವೂ ರಮಣೀಯವೂ ಸುಂದರವೂ ಆಗಿದೆ

K. K. Rai

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —
ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.—
ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ
ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು,— ಕೊರನೇಷನ್ ಟ್ರೇಡಿಂಗ್ ಕೊ.

ಸಿನಿಮಾ ಸುದ್ದಿ

ಸೈಗಲನ ಸುದ್ದಿ

ಸ್ವಲ್ಪ ಸಮಯಗಳ ಹಿಂದೆ ಸೈಗಲ್ ನ್ಯೂಥಿಯೇಟರ್ಸಿನ ಮಾಲಕರಾದ ಸರ್ಕಾರರ ಕೂಡೆ ಪಂಜಾಬಿ ಚಿತ್ರದಲ್ಲಿ ಅಭಿನಯಿಸಲು ಅನುಮತಿ ಕೇಳಿದ್ದನೆಂದೂ, ಅದಕ್ಕೆ ಅವರು ಮುಗುಳ್ನಗೆ ಮಾಡಿದರೆಂದೂ, ಆ ಮೇಲೆ ಸರ್ಕಾರರೆ ಪ್ರಕಟಣೆಯಂತೆ ಪಂಚೋಲಿ ಪಿಕ್ಚರ್ಸಿನವರು ಸರ್ಕಾರರಲ್ಲಿ ಹೋಗಿದ್ದಾರೆಂದೂ ಆದರೂ ಅವರ ಯಾವುದೇ ತರದ ಒಂದು ಕ್ಲಿಪ್ತಂದವಾಗಲಿಲ್ಲವೆಂದೂ ಇಷ್ಟರಲ್ಲಿ ಸೈಗಲನು ಯಾರಿಗೂ ತಿಳಿಸದೆ ಕಂಪೆನಿಯನ್ನು ಬಿಟ್ಟು ಹೋದನೆಂದೂ ತಿಳಿಯುತ್ತದೆ.

ಆದರೆ ಕೆಲವು ಸಮಯಗಳ ನಂತರ ಆತನು ಸರ್ಕಾರರನ್ನು ಕಂಡು ಮಾತನಾಡಿ ನಾಲ್ಕು ತಿಂಗಳ ರಜೆ ಪಡೆದು ಹೋಗಿರುವನೆಂದೂ ಬೇರೆ ಚಿತ್ರಕಂಪೆನಿಯಲ್ಲಿ ಅಭಿನಯಮಾಡುವುದಾಗಿ ಅಲ್ಲಿಂದ ಎಡ್ವಾನ್ಸ್ ಪಡಕೊಂಡಿರುವನೆಂದೂ ತಿಳಿದಿದೆ

ಜವಾಹರರ ಫಿಲ್ಮು

ಅಮೇರಿಕದಲ್ಲಿ ಪ್ರಕಟವಾಗುವ ಜವಾಹಿರಲಾಲರ ಆತ್ಮಕಥ "ಸ್ವಾತಂತ್ರ್ಯದ ಕಡೆಗೆ" ಎಂಬ ಪುಸ್ತಕವು ಆಟ್ಲಾಗಿದ್ದು ಅದರ ಫಿಲ್ಮು ತೆಗೆಯುವ ಒಂದು ಏರ್ಪಾಡು ಆಗುತ್ತಿದೆಯೆಂದು ಸುದ್ದಿ.

ಇನ್ನೊಂದು ಸುದ್ದಿಯೆಂದರೆ ಮದ್ರಾಸಿನಲ್ಲಿ ಹುಟ್ಟಿ ರಷ್ಯಾದಲ್ಲಿ ಬೆಳೆದ ೧೯ ವರ್ಷದ ನಟಿಯೊಬ್ಬಳು ಅಮೇರಿಕದಲ್ಲಿ ವಿಷ ತಿಂದಳೆಂದು.

ಆಕೆ ಸಾಯುವ ಅವಸ್ಥೆಯಲ್ಲಿರುವಾಗ ಸಾಬುವನ್ನು ಅಗಲಿರುವ ಜೀವನವು ವ್ಯರ್ಥವೆಂದು ಚಡಪಡಿಸುತ್ತಿದ್ದಳಂತೆ ಆದರೆ ಸಾಬುವಿಗೆ ಆಕೆಯ ಪರಿಚಯವೇ ಇಲ್ಲವೆಂದು ತಿಳಿದಿದೆ. ಸಾಬು ಅಭಿನಯಿಸುವ ಕೋರ್ಡಾ ಚಿತ್ರದಲ್ಲಿ ತನಗೆ ಒಂದು ಪಾತ್ರ ಕೊಡಬೇಕೆಂದು ಆಗಾಗ ಸಾಬುವನ್ನು ಆ ಹುಡುಗಿ ಟೆಲಿಫೋನಿನ ಮೂಲಕ ಕೇಳಿಕೊಳ್ಳುತ್ತಿದ್ದಳಂತೆ

ಸ್ನೇಹಪ್ರಭಾ ಪ್ರಧಾನ

ಚಿಮನ್‌ಲಾಲ ದೇಸಾಯಿಯವರ ಚಿತ್ರ 'ಹೋರಾಟ' ಎಂಬುದರಲ್ಲಿ ಸ್ನೇಹಪ್ರಭಾ ಪ್ರಧಾನಳು ಪಾತ್ರವಹಿಸುವಳು.

ಪ್ರಭಾತ ವಾರ್ತೆ

ಉಮರ್ ಖಯ್ಯಾಂ ಚಿತ್ರದ ತಯಾರಿಕೆಗೆ ಎಲ್ಲವೂ ಒದಗಿಸಲ್ಪಟ್ಟಿದ್ದರೂ, ಶಾಂತಾರಾಮರು ಅಮೃತಮಂಥನ ಮತ್ತು ಆನ್‌ಎಕ್ಸ್‌ಪೆಕ್ಟೆಡ್ ಚಿತ್ರಗಳ ಲೇಖಕರಾದ ಆಪ್ಟೆಯವರ ಸಾಮಾಜಿಕ ಕಥೆಯೊಂದನ್ನು ಚಿತ್ರ ತಯಾರಿಸಲಿರುವರಂತೆ.

ಸಿಂಹದ ಗೂಡಿಗೆ ಹೋಗಲು ಹೆದರಿದಳು

ನಟಿಯು ಮುಖ್ಯ ಪಾತ್ರವನ್ನು ಕಳಕೊಂಡಳು

ಪೆರಮೌಂಟ್ ಚಿತ್ರದವರು 'ಸರ್ಕಸ್ ಹುಡುಗಿ' ಎಂಬ ಚಿತ್ರವೊಂದನ್ನು ತಯಾರಿಸುತ್ತಾರೆ ಅದರಲ್ಲಿ ಮುಖ್ಯ ಪಾತ್ರ ಮಿಸ್ ರೋಮಿಲಾ ಇವಳಿಗೆ ಇತ್ತು. ಅದರಲ್ಲಿ ಸಿಂಹದ ಗೂಡಿಗೆ ಹೋಗಬೇಕಾದ ಒಂದು ಪ್ರದರ್ಶನದ ಸಮಯ ರೋಮಿಲಾ ಅಂಜಿ ಹಿಂದೆ ನಿಂತದ್ದರಿಂದ, ಆ ಕಂಪೆನಿಯಲ್ಲಿರುವ ಹೆದರಿಕೆಯಿಲ್ಲದ ಹುಡುಗಿ ಮಿಸ್ ಮೋತಿಗೆ ಆ ಪಾತ್ರವನ್ನು ಕೊಡಲಾಯಿತು

ಆದ್ಮಿ ಚಿತ್ರವನ್ನು ಹೋಲಿವುಡ್ಡಿನಲ್ಲಿ ಹೊಗಳಿದರು

ಹಾಲಿವುಡ್ಡಿನಲ್ಲಿರುವ ಭಾರತೀಯ ಪತ್ರಿಕೋದ್ಯಮಿ ರಾಮಭಾಗಾಯಿಯವರು ಪ್ರಭಾತದ ಆದ್ಮಿ ಚಿತ್ರದ ನಕಲೊಂದನ್ನು ಅಲ್ಲಿಗೆ ಕೊಂಡೊಯ್ದಿದ್ದರು ಅಲ್ಲಿ ಅದನ್ನು ಪ್ರಸಿದ್ಧ ನಟ ಚಾರ್ಲ್ಸ್ ಚಾಪಿನ್ ಮತ್ತು ಪ್ರಖ್ಯಾತ ಸಿನೆಮಾ ನಿರ್ಮಾತೃ ಮತ್ತು ಗ್ರಂಥಕರ್ತ ಆರ್ಡಸ್ ಹಕ್ಸ್ಲೆ, ವಿಲಿಯಮ್ ಡಘುಟ್ರೆಲ್ ಮೊದಲಾದ ನಟರೂ ಬಹಳ ಕೊಂಡಾಡಿರುವರೆಂದೂ ಅದನ್ನು ಇಂಗ್ಲಿಷ್ ಶಿರೋನಾಮದೊಡನೆ ಅಮೇರಿಕೆದಲ್ಲಿ ತೋರಿಸಬಹುದೆಂದೂ ಅಭಿಪ್ರಾಯಪಟ್ಟಿರುವರಂತೆ.

ಚಿತ್ರಾ ಪ್ರೊಡಕ್ಟನಿನವರಿಗೆ ಸಂಸ್ಕೃತಿಯುಳ್ಳ ನಟ ವರ್ಗ ಬೇಕಂತೆ!

ವಿದ್ಯಾವಂತರಾದ ಸಂಸ್ಕೃತರಾದ ಸ್ತ್ರೀಪುರುಷ ನಟವರ್ಗದವರನ್ನೇ ಆರಿಸಿಕೊಂಡು ತಮ್ಮ ಚಿತ್ರಗಳನ್ನು ತಯಾರಿಸಬೇಕೆಂದು ಚಿತ್ರ ಕಂಪೆನಿಯ ಸರ್ದಾರ್ ಚಂದೂಲಾಲ ಶಹ ಮತ್ತು ಸಿ ಆರ್. ಗ್ವಾಲಿಯಾನಿಯವರು ಆಲೋಚಿಸುತ್ತಿರುವರು. ೧೯೪೧-೪೨ನೆಯ ವರ್ಷಗಳಲ್ಲಿ ತಯಾರಿಸಬೇಕೆಂದಿರುವ ಚಿತ್ರಗಳ ಪಟ್ಟಿಯೊಂದನ್ನು ಮೇ ತಿಂಗಳಲ್ಲಿ ಪ್ರಕಟಿಸಲಿರುವರೆಂದು ತಿಳಿದಿದೆ. ಇವೆಲ್ಲವರಲ್ಲಿಯೂ ಕುಲೀನರಾದ ವಿದ್ಯಾವಂತ ತರುಣತರುಣಿಯರೇ ಅಭಿನಯಿಸಲಿರುವರೆಂದು ತಿಳಿದಿದೆ.

ಶಾಂತಾಆಪ್ಟೆಯ ಸುದ್ದಿ

ಸೈಗಲನೊಡನೆ ಶಾಂತಾಆಪ್ಟೆ ಜತೆ ನಟಿಯಾಗಿ ಅಭಿನಯಿಸುವಳೆಂದು ಹಿಂದೆ ಯೊಂದು ಸುದ್ದಿ ಪ್ರಕಟವಾಗಿತ್ತಷ್ಟೆ? ಆದರೆ ಅದು ಆಧಾರಪೂರ್ವಕವಾದುದಲ್ಲವೆಂದು ಈಗ ತಿಳಿದುಬಂದಿದೆ. ಶಾಂತಾಆಪ್ಟೆ ಪಂಚೋಲಿ ಚಿತ್ರ ಕಂಪೆನಿಯ ಒಂದು ಹಿಂದೀ ಚಿತ್ರದಲ್ಲಿ ಅಭಿನಯಿಸುವ ಕರಾರು ಮಾಡಿಕೊಂಡಿರುವಳೆಂದೂ ಅದು ಸಿರ್ಕೋ ಕಂಪೆನಿಯ ಅಪ್ನಾಸರ್ ಚಿತ್ರದ ಜೊತೆಯಲ್ಲಿ ಬೊಂಬಾಯಿಯಲ್ಲಿ ತಯಾರಾಗುವುದೆಂದೂ ತಿಳಿದುಬರುತ್ತದೆ.

ಕಾಂಚನ್

ಲೀಲಾ ಚಿಟ್ನಿಸಳ ಹೊಸ ಚಿತ್ರ 'ಕಾಂಚನ್' ಈಗ ತಯಾರಾಗುತ್ತಿದೆ.

ಚರಣೋಕಿದಾಸಿ

ಚಿತ್ರ ಪಿಕ್ಚರ್ಸಿನವರ ಚರಣೋಕಿದಾಸಿಯಲ್ಲಿ ಕುಸುಮ ದೇಶಪಾಂಡೆ ಮತ್ತು ಗಜಾನನ ಜಾಗೀರ್ದಾರರು ಅಭಿನಯಿಸುತ್ತಾರೆ. ಅದು ಪ್ರದರ್ಶನಕ್ಕೆ ಸಿದ್ಧವಾಗಿದೆ.

ನೇಶನಲ್ ಸ್ಟುಡಿಯೋದಿಂದ

ಆರ್ಥಿಕ ಮುಗ್ಗಟ್ಟಿನ ನಿಮಿತ್ತವಾಗಿ ನೇಶನಲ್ ಸ್ಟುಡಿಯೋದಲ್ಲಿ ಕೆಲಸಮಾಡುವ ಹಲವರಿಗೆ ನೋಟೀಸು ಕೊಟ್ಟಿದೆಯೆಂದು ಬೊಂಬಾಯಿಯ ವರದಿ.

ಮಾತೆಯೇ, ಮಕ್ಕಳು ರಾತ್ರಿಯಲ್ಲಿ ಎಚ್ಚತ್ತು ಅಳುತ್ತಿದೆಯೆ?

ತುರಿಸುವಿಕೆ ಮತ್ತು ತುರಿಗಜ್ಜಿಗಳೇ ಇದಕ್ಕೆ ಕಾರಣ.

ಮಗುವನ್ನು ಮೀಯಿಸಿದ ನಂತರ ಇದೀ ರೀತಿಗೆ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಸವರಿರಿ, ಆಗ ಮಗುವಿಗೆ ರಾತ್ರಿ ಎಚ್ಚರವಾಗದು — ಅಂದರೆ ನೀವು ಕೂಡಾ ತೊಂದರೆಯಾಗದೆ ನಿದ್ರೆ ಹೋಗುವಿರಿ. ಕುಟಿಕೂರಾ ಟಾಲ್ಕಮಿನ ಗುಣವು ಎಲ್ಲ ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ, ತುರಿಸುವಿಕೆ ಯಾ ತುರಿಗಜ್ಜಿಗಳಿಂದ ಮಗುವಿನ ನಿದ್ರೆಯು ಹಾನಿಯಾಗದು. ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಪರಿಮಳವನ್ನು ಕೊಡುವುದು. ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನು (Cuticura Talcum) ಶಿಫಾರಸು ಮಾಡುತ್ತಾರೆ. ತುರಿಗಜ್ಜಿ ಮತ್ತು ತುರಿಸುವಿಕೆಯನ್ನು ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ.

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿ ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿರಿಸುವುದು. ಕುಟಿಕೂರಾ ಮುಲಾಮು (Cuticura Ointment) ಗಾಯಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಮುಕ್ಕಾಲಿನೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಒಂದು ಜಾತಿಗೆ ಪೌರುಷ ಪ್ರತಿಭೆಗಳು ಬೇಕೆಂಧರೆ

ಬಲವಿರಬೇಕು
ಜಾತಿಯು ನಿಸ್ತೇಜವಾದರೆ
ಜಾತೀಯತೆಯಿರಲಾರದು
ಜೀವವಿರಲಾರದು
ಭಾರತೀಯರು
ಬಲಪೌರುಷ ಪ್ರತಿಭೆಗಳನ್ನು
ಗಳಿಸಬೇಕಾದರೆ

ಎಲ್ಲರಿಗೂ ಸಹಜವಾಗಿ ಒಲಿದಿರುವ, ಅಂಥವರು ಅಮೃತ ಸೇವಿಸಲೇ ಬೇಕು "ಅಮೃತ" ಆರೋಗ್ಯಕ್ಕೂ ಬಲಕ್ಕೂ, ಇಷ್ಟೇ ಹೆಸರು

ಆರೋಗ್ಯಕ್ಕೂ ಬಲಕ್ಕೂ ಅಮೃತ

ಕೇಸರಿಕುಟೀರಂ–ಮದ್ರಾಸು.

ಜರ್ಮನಿಯ ಮುಂದಿರುವ ಆರೇಳು ಗಂಡಾಂತರಗಳು!

ವಿಜಯಿಶಾಲಿಯೆಂದು ಹಿಟ್ಲರನು ಹಿಗ್ಗಬೇಕಾಗಿಲ್ಲ

ಇತಿಹಾಸವು ಪುನರಾವರ್ತನೆ ಹೊಂದುವುದು

ಯುರೋಪಿನ ರಣರಂಗದಲ್ಲಿ ಇಷ್ಟರ ತನಕ ದೊರೆತ ವಿಜಯದಿಂದ ಜರ್ಮನಿ ಗರ್ವೋನ್ಮತ್ತವಾದ ಹಾಗೆ ತೋರುತ್ತದೆ. ಅದು ಪರಿಸ್ಥಿತಿಯನ್ನು, ತನ್ನ ಶಕ್ತಿಯ ಹಿಂದೆ ಅಡಗಿರುವ ದುರ್ಬಲತೆಯನ್ನು ನೋಡಲಾರದಾಗಿದೆ; ವಿಜಯ ಮದದಿಂದ ಜರ್ಮನಿ ಅಂಧವಾಗಿದೆ. ಜರ್ಮನಿಯು ಅಜೇಯವಾಗಿದೆ. ಅದರಲ್ಲಿ ಕೊರತೆಯೇ ಇಲ್ಲವೆಂದು ಅದು ಜಗತ್ತಿಗೆ ಸಾರುತ್ತ ಬಂದಿದೆ. ಜಗತ್ತೂ ನಂಬುತ್ತ ಬಂದಿದೆ. ಆದರೂ ಗಂಭೀರವಾಗಿ ಆಲೋಚಿಸಿದರೆ ಜರ್ಮನಿಯ ಪ್ರಬಲ ಶಕ್ತಿಯ ಮರೆಯಲ್ಲಿ ಅದರ ಕೆಲವು ದುರ್ಬಲ ಸ್ಥಾನಗಳನ್ನು ನೋಡಬಹುದು. ಈ ಸ್ಥಾನಗಳಿಗೇ ಹೊಡೆತ ಬೀಳುವದರಿಂದ ಜರ್ಮನಿಯು ಮುಗ್ಗುರಿಸಿ ಬೀಳಲಿದೆ.

ಮೊದಲನೆಯ ದೌರ್ಬಲ್ಯ

ಜರ್ಮನಿಯ ಮೊದಲನೆಯ ದೌರ್ಬಲ್ಯವೆಂದರೆ ಬ್ರಿಟಿಷರ ನೈತಿಕ ಸ್ಥೈರ್ಯವನ್ನು ಕುಂದಿಸಿ ಅವರಲ್ಲಿ ಭಯಹುಟ್ಟಿಸಬಹುದೆಂದು ಹಿಟ್ಲರನು ನಂಬಿರುವುದು. ನೈತಿಕ ಸ್ಥೈರ್ಯವಿಲ್ಲದಿರುವದರಿಂದಲೇ ಫ್ರಾನ್ಸು ಮೊದಲಾದವು ಸೋತವು. ಹಿಟ್ಲರನು ಈ ರಾಷ್ಟ್ರಗಳನ್ನು ಯುದ್ಧಮಾಡಿ ಗೆಲ್ಲಲಿಲ್ಲ. ಆದರೆ ಅವರ ಮಾನಸಿಕ ಬಲವನ್ನು ಕುಂದಿಸಿ ಅವರು ರಣಕ್ಷೇತ್ರದಿಂದ ಪಲಾಯನ ಮಾಡುವಂತೆ ಅವನು ಮಾಡಿದ್ದನು. ಇದೇ ರೀತಿ ಬ್ರಿಟಿಷರೂ ಸೋಲಬಹುದೆಂದು ಹಿಟ್ಲರನು ನಂಬಿದ್ದಾನೆ. ಆದರೆ ಇದುಮಾತ್ರ ಸರ್ವಥಾ ಸಾಧ್ಯವಲ್ಲ. ಬ್ರಿಟಿಷರ ನೈತಿಕ ಬಲವು ಜರ್ಮನರಿಗಿಂತಲೂ ಉತ್ಕೃಷ್ಟವಾದ್ದು. ಕಳೆದ ಬಾರಿಯ ಲೋಕ ಯುದ್ಧದಲ್ಲಿ ಜರ್ಮನರು ಸೋಲಲಿಕ್ಕೆ ಅವರ ನೈತಿಕ ಬಲವು ಬ್ರಿಟಿಷರಿಗಿಂತ ಕಡಿಮೆ ತರದ್ದಾಗಿದ್ದುದೇ ಕಾರಣವಾಗಿತ್ತು. ಈ ಬಾರಿ ಕೂಡ ಅದೇ ರೀತಿ ಆಗುವ ಸಂಭವವಿದೆ. ಯಾಕೆಂದರೆ ಚರಿತ್ರೆಯು ಪುನರಾವರ್ತನವಾಗುವದು ಪ್ರಸಿದ್ಧ ವಿಷಯವು.

ಎರಡನೆಯ ದೌರ್ಬಲ್ಯ

ಎರಡನೆಯ ದೌರ್ಬಲ್ಯವೆಂದರೆ ಹಿಟ್ಲರನು ಇಟಲಿಯ ಬಲದ ಮೇಲಿಟ್ಟ ಮಿತಿ ಮೀರಿದ ವಿಶ್ವಾಸ. ಗ್ರೀಸಿನ ಪ್ರಕರಣದಿಂದ ಇಟಲಿಯ ಸೈನಿಕ ಶಕ್ತಿ ಎಷ್ಟು ಕೀಳು ದರ್ಜೆಯದು ಎಂಬುದು ಎಲ್ಲರಿಗೆ ಗೊತ್ತಾಗಿದೆ. ಇಟಲಿಯು ಹಿಟ್ಲರನಿಗೆ ಸಹಾಯಕವಾಗುವುದರ ಬದಲಿಗೆ ಅದು ಅವನಿಗೆ ಕೊರಳ ಕೊರಡೆಯಾಗಿ ಪರಿಣಮಿಸಿದೆ. ಈ ಕೊರಡೆಯನ್ನು ಈಗ ತೆಗೆದು ದೂರ ಬಿಸಾಡಲಿಕ್ಕೂ ಇಲ್ಲ ಎಂಬಂತಾಗಿರುವದು. ಈಗ ಹಿಟ್ಲರನು ನಿರುಪಾಯನಾಗಿ ತಾನೇ ಭೂಮಧ್ಯ ಸಮುದ್ರದ ಯುದ್ಧದಲ್ಲಿ ತನ್ನ ಶಕ್ತಿಯನ್ನು ವೆಚ್ಚ ಮಾಡಬೇಕಾಗಿ ಬಂದಿದೆ. ಆದರೂ ಈ ಯುದ್ಧದ ಜಯಾಪಜಯಗಳ ಮೇಲೆ ಅವನ ಭಾಗ್ಯ ನಿರ್ಣಯವು ಆಗುವದಿಲ್ಲ.

ಮೂರನೆಯ ದೌರ್ಬಲ್ಯ

ಮೂರನೆಯ ದೌರ್ಬಲ್ಯವೆಂದರೆ ಹಿಟ್ಲರನು ಸ್ವಾತಂತ್ರ್ಯಾಪಹಾರ ಮಾಡಿದ ಫ್ರಾನ್ಸ್, ಬೆಲ್ಜಿಯಂ, ಹೊಲ್ಲಂಡ, ಮೊದಲಾದ ರಾಷ್ಟ್ರಗಳಲ್ಲಿರುವ ಜನತೆಯ ಅಸಂತುಷ್ಟಿ ಮತ್ತು ಅವರಿಗೆ ನಾಝಿಗಳ ಮೇಲೆ ಇರುವ ವಿರೋಧ. ಈ ರಾಷ್ಟ್ರಗಳ ಜನತೆಯು ನಾಝಿಗಳ ಶಾಸನವನ್ನು ಆತ್ಮ ಸಂತೋಷದಿಂದ ಒಪ್ಪಿ ಕೊಂಡದ್ದಿಲ್ಲ. ಆಗಾಗ ಜನತೆ ಮತ್ತು ನಾಝಿ ಸೇನೆಯೊಂದಿಗೆ ಸಂಘರ್ಷವಾಗುತ್ತಾ ಉಂಟು. ಈಗ ಸಣ್ಣರೂಪದಲ್ಲಿರುವ ಈ ಸಂಘರ್ಷವು ಯಾವಾಗ ದೊಡ್ಡ ಬಂಡಾಯದ ರೂಪವನ್ನು ತಾಳುವದೋ ಹೇಳಲಿಕ್ಕೆ ಬರುವದಿಲ್ಲ.

ನಾಲ್ಕನೆಯ ದೌರ್ಬಲ್ಯ

ಮತ್ತೆ ನಾಲ್ಕನೆಯದಾಗಿ ಹಿಟ್ಲರನು ಫ್ರಾನ್ಸಿನ ವಿಚಿ ಸರಕಾರವನ್ನು ತನ್ನ ಸೂತ್ರದ ಗೊಂಬೆಯಾಗಿ ಮಾಡಲಿಕ್ಕೆ ಇನ್ನೂ ಅಸಮರ್ಥನಾಗಿದ್ದಾನೆ. ವಿಚಿ ಸರಕಾರವು ಈಗಲಾದರೂ ತನ್ನ ಸೇನೆ ಮತ್ತು ನಾವಿಕ ಪಡೆ ಹಾಗೂ ಬಂದರುಗಳನ್ನು ಹಿಟ್ಲರನ ಯುದ್ಧ ಕಾರ್ಯಕ್ಕೆ ಕೊಡಲು ಒಪ್ಪುವದಿಲ್ಲ. ಭೂಮಧ್ಯ ಸಮುದ್ರದಲ್ಲಿ ಇಟಲಿಯ ಸ್ಥಿತಿ ಹೀಗಾಗುತ್ತಿತ್ತು, ತಾನೇ ಹೋಗಿ ಅಲ್ಲಿ ಬ್ರಿಟನನ್ನು ಎದುರಿಸಬೇಕಾಗುವದು ಎಂದು ಹಿಟ್ಲರನು ಮೊದಲೇ ತಿಳಿದಿದ್ದರೆ, ಫ್ರಾನ್ಸು ಶರಣಾಗತವಾದಾಗ ಅವನು ಅದರ ಭೂಮಧ್ಯ ಸಮುದ್ರದ ಬಂದರು, ಹಡಗು ಮೊದಲಾದುವನ್ನು ತಾನು ಉಪಯೋಗಿಸುವ ಶರತವನ್ನು ಹಾಕುತ್ತಿದ್ದನು. ಆದರೆ ಈಗ ಪರಿಸ್ಥಿತಿ ಅವನಿಗೆ ತುಂಬಾ ಪ್ರತಿಕೂಲವಾಗಿರುವದು.

ಐದನೆಯ ದುರ್ಬಲತೆ

ಐದನೆಯದಾಗಿ ಬ್ರಿಟಿಷರ ಸಮುದ್ರಾಂತರದ ದಿಗ್ಬಂಧನವಿದೆ. ಅಮೆರಿಕದ ಸಹಾಯ ಮತ್ತು ಹೆಚ್ಚುತ್ತಿರುವ ಸಹಕಾರದಿಂದ ಈ ದಿಗ್ಬಂಧನವು ದಿನೇದಿನೇ ಬಹಳ ಪರಿಣಾಮಕಾರಿಯಾಗುತ್ತ ನಡೆದಿರುವದು. ಜರ್ಮನರು ಇದರ ಪರಿಣಾಮವನ್ನು ಈಗೀಗ ಬಹು ಚೆನ್ನಾಗಿ ಅನುಭವಿಸತೊಡಗಿದ್ದಾರೆ. ಈಗ ಜರ್ಮನಿಯ ಯುದ್ಧೋಪಕರಣಗಳ ಉತ್ಪತ್ತಿಯು ಅತ್ಯುನ್ನತ ಸ್ಥಿತಿಗೆ ಬಂದುಮುಟ್ಟಿದೆ. ಆದರೂ ಹಿಟ್ಲರನಿಗೆ ಬ್ರಿಟನನ್ನು ಸೋಲಿಸುವದು ಇನ್ನೂ ಕನಸಿನ ಮಾತಾಗಿ ಉಳಿದಿದೆ. ಅಮೆರಿಕದ ಸಹಾಯಸಹಕಾರಗಳಿಂದ ದಿನೇ ದಿನೇ ಬೆಳೆದು ಬರುತ್ತಿರುವ ಬ್ರಿಟನಿನ ಶಕ್ತಿಯನ್ನು ಇನ್ನು ಮುಂದೆ ಯಾವಾಗಲಾದರೂ ಮುರಿಯಬಹುದೆಂಬುದು ಹುಚ್ಚುತನವೇ ಸರಿ.

ಆರನೆಯ ದುರ್ಬಲತೆ

ಬ್ರಿಟನಿಗೆ ಅಮೆರಿಕದ ಸಹಾಯವು ಜರ್ಮನಿಗೆ ಕಠೋರ ಘಾತವಾಗಿರುವದು. ಜರ್ಮನಿಯ ಯುದ್ಧೋಪಕರಣಗಳ ಉತ್ಪತ್ತಿಯು ಈಗಿಗಿಂತ ಇನ್ನು ಹೆಚ್ಚಾಗಲಿಕ್ಕಿಲ್ಲ. ಆದರೆ ಅಮೆರಿಕದಲ್ಲಿ ಇವಕ್ಕೆ ಇನ್ನೂ ಬಹಳ ಅವಕಾಶವಿದೆ. ಮಾತ್ರವಲ್ಲ, ಅಲ್ಲಿಯ ಯುದ್ಧೋಪಕರಣಗಳ ಕಾರ್ಖಾನೆಗಳ ವೈಮಾನಿಕ ದಾಳಿಗಳಿಂದ ಬಹುದೂರ, ಸುರಕ್ಷಿತ ಸ್ಥಾನದಲ್ಲಿರುವದರಿಂದ ಅವುಗಳಿಗೆ ಏನಾದರೂ ಹಾನಿಯಾಗುವ ಭಯವಿಲ್ಲ. ಆದರೆ ಜರ್ಮನಿಯ ಅತಿ ದೊಡ್ಡ ಕೇಂದ್ರವಾದ ರೂರ್ ಪ್ರದೇಶಕ್ಕೆ ಯಾವಾಗಲೂ ಬ್ರಿಟನಿನ ವೈಮಾನಿಕ ದಾಳಿಯ ಭಯವಿದೆ.

ಕೊನೆಯ ದೌರ್ಬಲ್ಯ

ಮತ್ತೆ ಕೊನೆಯದಾಗಿ ದಿನಹೋಗುತ್ತಿದ್ದ ಹಾಗೆ ಜರ್ಮನಿಯು ಕಾಯಬೇಕಾದ ಸಮುದ್ರ ಕರಾವಳಿಯ ಪ್ರದೇಶವು ಹೆಚ್ಚಾಗುತ್ತ ಹೋಗುತ್ತಲಿದೆ. ಇದು ಜರ್ಮನಿಗೆ ಕಠಿನವಾಗಿದೆ. ಬ್ರಿಟನಿಗೆ ಈ ಕರಾವಳಿಯ ಮೇಲೆ ವೈಮಾನಿಕ ಧಾಳಿಮಾಡುವದು ಅತ್ಯಂತ ಸುಲಭವಾಗಿದೆ. ಜರ್ಮನಿಯು ಸೇನೆಯೆಲ್ಲ ರಷ್ಯ, ಬಾಲ್ಕನಿನ ಕಡೆಗೆ ಹೋದ ಸಂದರ್ಭದಲ್ಲಿ ನೋರ್ವೆಯಂಥ ಪಶ್ಚಿಮ ಪ್ರದೇಶಗಳ ಮೇಲೆ ದಾಳಿ ಮಾಡುವದು ಬ್ರಿಟನಿಗೆ ಸುಲಭ. ಜರ್ಮನಿ ಒಂದು ಕಡೆಯಿಂದ ಕೊಳ್ಳುತ್ತ ಬರುವಾಗ ಇನ್ನೊಂದು ಕಡೆಯಿಂದ ಕೊಡುತ್ತ ಬರಬೇಕಾಗುವದು. ಕೊಟ್ಟುಕೊಳ್ಳುವ ಈ ವ್ಯಾಪಾರದಲ್ಲಿ ಜರ್ಮನಿಗೆ ಆದಿಯಿಂದ ಅಂತ್ಯದ ತನಕ ನಷ್ಟವೇ ಇದೆ. ಯಾಕಂದರೆ ಈ ಪ್ರದೇಶಗಳಿಂದ ಅದಕ್ಕೆ ದೊರೆಯುವ ಹಸಿ ಪದಾರ್ಥಗಳ ಪುರವಠೆ ನಿಂತು ಹೋಗಿ ಯುದ್ಧ ಕಾರ್ಯದಲ್ಲಿ ಅದರ ಕೈ ಕಟ್ಟಿಹೋಗುವದು.

ನಿಮ್ಮ ಸೆಂಟುಕಪ್ಪು

ರೂ. ೯೦ ಇರಲಿ

ಅಥವಾ ರೂ. ೧೦೦ ಇರಲಿ

ನೀವು ಕೊಳ್ಳಬಹುದು

ಒಂದು ಲಾಭಕರ ಧನ ಸಂಚಯ

ಈಗಿನ ನಿಮ್ಮ ವರಮಾನವು, ವ್ಯವಹಾರ, ಉದ್ಯೋಗ ಅಥವಾ ಧನಸಂಚಯ ಯಾವುದೇ ರೂಪದಲ್ಲಿರಲಿ ಭವಿಷ್ಯದಲ್ಲಿ ನೀವು ಆದಾಯವನ್ನು ಎದುರಿಸಲಾರಿರಿ. ನಿಮಗೆ ಸುರಕ್ಷಿತಬೇಕು ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣವನ್ನು ವಿನಿಯೋಗಿಸುವದಕ್ಕಿಂತ ಬೇರೆ ಯಾವ ಕ್ಷೇಮಕರವಾದ ಮಾರ್ಗವೂ ಇಲ್ಲ. ಪೋಸ್ಟಾಫೀಸನಲ್ಲಿ ಒಕ್ಕೆ ರೂ. ೧೦ಕ್ಕೆ ಮಾರುತ್ತೆ, ಮತ್ತು ರೂ. ೩/೯ ಲಾಭವನ್ನು ಹತ್ತು ವರ್ಷಗಳ ಕೊನೆಯಲ್ಲಿ ಆದಾಯ ತೆರಿಗೆ ವಿನಾಯಿತಿಯಿಂದ ದೊರೆಯುತ್ತೆ. ಬೇಕಾದಾಗ ಹಣವನ್ನು ಅದು ಗಳಿಸಿದ ಬಡ್ಡಿಯನ್ನೂ ವಾಪಸು ಕೊಡಲಾಗುತ್ತೆ.

ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳು ಉಳಿಸಲು ಸಹಾಯ ಮಾಡುತ್ತವೆ

ಪೋಸ್ಟಾಫೀಸ್‌ನಲ್ಲಿ ಮಾರುವ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಆದರ್ಶವಾದ ಸುರಕ್ಷಿತೆಯಾಗಿದೆ, ಇವನ್ನು ಕದಿಯಲು ಅವಕಾಶವಿಲ್ಲ, ಮೌಲ್ಯದಲ್ಲಿ ತಗ್ಗುವದಿಲ್ಲ. ಈಗಲೇ ಉಳಿಸಲು ಆರಂಭಿಸಿ. ನಿಮಗೆ ರೂ. ೧೦ನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಆಣೆ ೪, ಆಣೆ ೮ ಅಥವಾ ೧ ರೂ ನ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್‌ಗಳನ್ನು ಕೊಳ್ಳಿರಿ ಮತ್ತು ಅವನ್ನು ಕಾರ್ಡ್ ಮೇಲೆ ಅಂಟಿಸಿರಿ— ಇವು ಉಚಿತವಾಗಿ ದೊರೆಯುತ್ತವೆ. ನಿಮ್ಮಲ್ಲಿ ರೂ. ೧೦ ಬೆಲೆ ಬಾಳುವ ಸ್ಟಾಂಪ್‌ಗಳಾದ ಕೂಡಲೆ ಅವನ್ನು ಪೋಸ್ಟಾಫೀಸನಲ್ಲಿ ಸರ್ಟಿಫಿಕೇಟ್‌ಗೆ ಬದಲಿಸಿರಿ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

GI. KN. 37

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ಬ್ರಿಟನು ಸೋತರೆ ಯುದ್ಧವು ಅಮೆರಿಕದ ಬಾಗಿಲಿಗೆ ಬರುವುದು

ಸ್ವಾತಂತ್ರ್ಯಕ್ಕಾಗಿ ಅಮೆರಿಕನರು ಹೋರಾಡುವರು

ದೇಶದ ಹಿತದಲ್ಲಿ ಭಿನ್ನಾಭಿಪ್ರಾಯಗಳಿಲ್ಲ

ಸಂಸ್ಕೃತಿ, ಭಾಷೆ, ಸಾಹಿತ್ಯ ಇತ್ಯಾದಿ ವಿಷಯುಗಳಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳು ಬಹು ಮಟ್ಟಿಗೆ ಬ್ರಿಟನಿನ ಸಂಬಂಧವುಳ್ಳದ್ದಾದರೂ ಹೆಸರು ಸೂಚಿಸುವಂತೆ ಅದು ಒಂದೇ ಜಾತಿ ಅಥವಾ ಒಂದೇ ದೇಶದ ಜನರ ಒಂದು ಜನಾಂಗವುಳ್ಳದ್ದಾಗಿರುವದಿಲ್ಲ. ಸಣ್ಣ ದೊಡ್ಡ ಅನೇಕ ಅಲ್ಪ ಸಂಖ್ಯಾಕ ಜಾತಿಗಳ ಒಂದು ಸಂಯುಕ್ತ ಜನಾಂಗವೇ ಅಮೇರಿಕದ ನಿವಾಸಿಗಳೆಂದು ಹೇಳಬಹುದು. ಈ ರಾಜ್ಯದ ಜನರಲ್ಲಿ ಒಂದು ದೊಡ್ಡ ಅಂಶವು ವಿದೇಶದಿಂದ ಬಂದ, ಅಥವಾ ಮಿಶ್ರವಿವಾಹದಿಂದ ಆ ರಾಜ್ಯದಲ್ಲೇ ಹುಟ್ಟಿದ ಸಂತತಿಯವರದ್ದು ಇರುತ್ತದೆ. ಜನಸಂಖ್ಯೆಯನ್ನು ನೋಡುವದಾದರೆ ನಿಗ್ರೋಗಳೇ ಅಧಿಕ ಸಂಖ್ಯಾಕರಾಗಿ ಇದ್ದಾರೆ. ಅನಂತರ ಕ್ರಮವಾಗಿ ಜರ್ಮನ್, ಇಟಾಲಿಯನ್, ಬ್ರಿಟಿಷ್, ಪೋಲಿಷ್, ಕೆನಾಡಿಯನ್, ಸ್ಕಾಂಡಿನೇವಿಯನ್, ಐರಿಷ್, ರಶ್ಯನ್, ಮೆಕ್ಸಿಕನ್, ಜೆಕ್, ಆಸ್ಟ್ರಿಯನ್, ಹಂಗೇರಿಯನ್, ಯುಗೊಸ್ಲಾವಿಯನ್, ಫ್ರೆಂಚ್ ಮೊದಲಾದವರು ಇರುತ್ತಾರೆ. ಆಶ್ಚರ್ಯವೆಂದರೆ ಈ ೨೦-೩೦ ವಿಜಾತಿಗಳ ಜನರು ಎಲ್ಲರು ಜಂಟಾಗಿ ಕಲೆತು ಏಕ ರಾಷ್ಟ್ರವಾಗಿ ಇರುವದು!

ಅಮೆರಿಕದ ಯುದ್ಧಾಸಕ್ತಿ

ಅಮೆರಿಕದ ಸಂಯುಕ್ತ ಸಂಸ್ಥಾನಗಳ ಹೆಚ್ಚಿನ ವಿದೇಶಿಯರು ಯುರೋಪಿನಿಂದ ಬಂದವರು. ಆದರೆ ಈ ರಾಜ್ಯದ ಇತಿಹಾಸದಲ್ಲಿ ಇದು ಸುಮಾರು ನೂರು ವರ್ಷಗಳ ತನಕ ಯೂರೋಪಿನೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಲಿಲ್ಲ. ಯೂರೋಪಿನ ಯಾವ ಪ್ರಸಂಗಗಳಲ್ಲಿಯೂ ಅದು ಕೈಹಾಕಲಿಲ್ಲ. ಅದಕ್ಕೆ ಮೊದಲು ಅದು ಸ್ವಾತಂತ್ರ್ಯ ಸಂಪಾದನೆ ಮತ್ತು ಅದರ ರಕ್ಷಣೆಗಾಗಿ ಯೂರೋಪಿನೊಡನೆ ಹಲವು ಯುದ್ಧಗಳಲ್ಲಿ ಭಾಗಿಯಾಗಿದ್ದಿತು. ಅನಂತರ ಯುದ್ಧದಲ್ಲಿ ಸೇರಿದುದೆಂದರೆ ಕಳೆದ ಬಾರಿಯ ಲೋಕಯುದ್ಧದಲ್ಲಿಯೇ! ಅನಂತರ ಈ ಬಾರಿಯ ಲೋಕಯುದ್ಧದಲ್ಲಿಯೂ ಅದು ಹೆಚ್ಚೆಚ್ಚು ಆಸಕ್ತವಾಗುವಂತೆ ಕಾಣುತ್ತದೆ. ಪ್ರೆಸಿಡೆಂಟ ರೂಸ್‌ವೆಲ್ಟರು ಮೂರನೆಯ ಬಾರಿಗೂ ಅಧ್ಯಕ್ಷರಾಗಿ ಆರಿಸಿ ಬಂದುದು ಅಮೆರಿಕಾನರ ಪ್ರಬಲವಾಗುತ್ತಿರುವ ಯುದ್ಧಾಸಕ್ತಿಯನ್ನು ತೋರಿಸುವದು. ಅಮೆರಿಕದಲ್ಲಿ ಕೊಟ್ಟುಕೊಳ್ಳುವ ಕಾಯದೆಯು ಆದದ್ದು, ಬ್ರಿಟನಿಗೆ ಯುದ್ಧದಲ್ಲಿ ಸೈನ್ಯ ಬಿಟ್ಟು ಇತರ ಎಲ್ಲಾ ಸಹಾಯಗಳನ್ನು ಕೊಡಲೊಪ್ಪಿದ್ದು, ಮತ್ತೆ ಈ ಸಹಾಯವನ್ನು ತನ್ನ ಸಂರಕ್ಷಣೆಯಲ್ಲಿಯೇ ಬ್ರಿಟನಿಗೆ ಮುಟ್ಟಿಸುವದನ್ನು ಆಲೋಚಿಸುತ್ತಿರುವದು—ಇವೆಲ್ಲ ಅಮೆರಿಕವು ಇನ್ನು ಸಮೀಪದಲ್ಲಿಯೇ ಯುದ್ಧಭಾಗಿಯಾಗುವ ಲಕ್ಷಣಗಳನ್ನು ತೋರಿಸುತ್ತದೆ.

ಹೀಗೇಕೆ?

ಅಮೆರಿಕದ ಜನಮತವು ತೀವ್ರ ಗತಿಯಿಂದ ಬದಲಾಗುತ್ತಲಿದೆ. ಮೊದಲು ಬ್ರಿಟನಿಗೆ ಯಾವ ಸಹಾಯವನ್ನು ಕೊಡದೆ ಅನ್ಯದೇಶದ ರಾಜಕೀಯಗಳಿಂದ ಸಂಪೂರ್ಣ ನಿರ್ಲಿಪ್ತರಾಗಿರಬೇಕೆಂದು ಹೇಳುತ್ತಿದ್ದ ಅಮೆರಿಕದ ಪ್ರಮುಖರೇ, ಈಗ ಬ್ರಿಟನಿಗೆ ಸರ್ವ ಸಹಾಯವನ್ನೂ ಕೊಡಬೇಕು; ಅಗತ್ಯ ಬಿದ್ದರೆ, ಜರ್ಮನಿಯ ವಿರುದ್ಧ ಯುದ್ಧ ಸಾರಲಿಕ್ಕೂ ಹಿಂಜರಿಯಬಾರದು ಎಂದು ಅನ್ನತೊಡಗಿದ್ದಾರೆ. ಹೀಗೇಕೆ? ನಿಗ್ರೋಗಳನ್ನು ಬಿಟ್ಟರೆ ಅಮೆರಿಕದಲ್ಲಿ ಜರ್ಮನರ ಸಂಖ್ಯೆಯೇ ಹೆಚ್ಚು. ಆದರೂ ಕೂಡ ಅಮೆರಿಕಾನರು ಜರ್ಮನಿಯನ್ನು ಹಿಟ್ಲರನನ್ನು ಅಷ್ಟು ದ್ವೇಷಿಸುತ್ತಿರುವದೇಕೆ? ಅಮೆರಿಕಾನರು ಯಾವ ದೇಶದಿಂದ ಬಂದವರಾದರೂ ಅಮೆರಿಕವನ್ನು ತಮ್ಮ ಪಿತೃಭೂಮಿ ಎಂದು ತಿಳಕೊಳ್ಳುತ್ತಾರೆ. ಅವರಿಗೆ ಅಮೆರಿಕದ ಸ್ವಾತಂತ್ರ್ಯ ರಕ್ಷಣೆಯು ಸರ್ವಸ್ವವಾಗಿದೆ. ಒಬ್ಬನು ಅಮೆರಿಕಕ್ಕೆ ಹೋಗಿ, ಅಮೆರಿಕದವನಾಗಿ ಬಿಟ್ಟ ಮೇಲೆ ಅವನ ಪ್ರೇಮ, ವಾತ್ಸಲ್ಯ ಅಭಿಮಾನ ಗೌರವಗಳು ಅಮೆರಿಕದ ಮೇಲೆಯೇ ಆಗಿಬಿಡುತ್ತವೆ. ಅಮೆರಿಕದ ಜರ್ಮನನು ತನ್ನನ್ನು ಜರ್ಮನನೆಂದು ತಿಳಕೊಳ್ಳುವದಿಲ್ಲ. ಅಮೆರಿಕಾನನೆಂದೇ ತಿಳಕೊಳ್ಳುತ್ತಾನೆ. ಸ್ವತಂತ್ರ ವಾತಾವರಣದಲ್ಲಿ ಬಂದು, ಹುಟ್ಟಿ ಬೆಳೆದವರು ಹೀಗಾಗುವದು ಆಶ್ಚರ್ಯವಲ್ಲ.

ಬ್ರಿಟನು ಪರಾಜಿತವಾದರೆ

ಯೂರೋಪಿನಲ್ಲಿ ಜರ್ಮನಿ ಮೊದಲಿನಿಂದಲೂ ಜಗಳಗಂಟಿ ದೇಶ. ಬೇಕು ಬೇಕೆಂದೇ ಅದು ಇತರ ರಾಷ್ಟ್ರಗಳನ್ನು ಯುದ್ಧಕ್ಕೆ ಕರೆಯುವದು. ಯುದ್ಧವಿಲ್ಲದೆ ಅದರ ಜೀವನವಾಗುವದಿಲ್ಲ. ಯುದ್ಧವೇ ಜರ್ಮನರ ಜೀವನವಾಗಿದೆ. ಅಂಥ ಜರ್ಮನಿಯ ಅನ್ಯಾಯ ಯುದ್ಧಾಕ್ರಮಣಗಳನ್ನು ತಡೆಯುವ ಶಕ್ತಿ ಯೂರೋಪಿನ ಯಾವ ರಾಷ್ಟ್ರಕ್ಕಾದರೂ ಇರುವದಾದರೆ ಅದು ಬ್ರಿಟನಿಗೊಂದೇ. ಲೋಕಯುದ್ಧದಲ್ಲಿ ಬ್ರಿಟನು ಜರ್ಮನಿಯೊಡನೆ ಸೋತು ಹೋದುದಾದರೆ, ಆಗ ಜರ್ಮನಿ ಯೂರೋಪಿನ ಒಂದೇ ಒಂದು ಪ್ರಬಲ ರಾಷ್ಟ್ರವಾಗುವದು. ರಶ್ಯವನ್ನೂ ಅದು ಸುಲಭದಲ್ಲಿ ಮುರಿದುಹಾಕಬಹುದು. ಆ ಸಂದರ್ಭದಲ್ಲಿ ಯುದ್ಧವು ಅಮೆರಿಕದ ಮನೆಬಾಗಿಲಿಗೇ ಬರುವದು. ಆಗ ಜರ್ಮನ್ ದಾಳಿಗಳಿಂದ ತನ್ನ ಸ್ವಾನಮಾನ್ಯ ಸ್ವಾತಂತ್ರ್ಯಗಳನ್ನು ಕಾಯ್ದುಕೊಳ್ಳುವದು ಅಮೆರಿಕಕ್ಕೆ ಈಗಿಗಿಂತ ಬಹಳ ಬಹಳ ಕಠಿನವಾಗುವದು. ಆದುದರಿಂದ ಬ್ರಿಟನಿನ ಹಿತಕ್ಕಾಗಿ ಮಾತ್ರವಲ್ಲ, ತನ್ನ ಹಿತಕ್ಕಾಗಿಯೂ ಅಮೆರಿಕವು ಈ ಯುದ್ಧದಲ್ಲಿ ಬ್ರಿಟನಿಗೆ ಸಹಾಯ ಮಾಡಬೇಕಾಗಿ ಬಂದಿದೆ; ಲೋಕಕಂಟಕನಾದ ಹಿಟ್ಲರನನ್ನು ಮಣ್ಣುಗೂಡಿಸಬೇಕಾಗಿ ಬಂದಿದೆ.

ಅಮೆರಿಕ ಯುದ್ಧಕ್ಕೆ ಸಮೀಪವಾಗುತ್ತಿದೆ

ಅಮೆರಿಕದ ಜನರಲ್ಲಿ ಈ ಅಭಿಪ್ರಾಯದ ವಿಶೇಷ ಪ್ರಚಾರವಾಗಿದೆ. ಅಮೆರಿಕವು ಯುದ್ಧಕ್ಕೆ ಸಮೀಪವಾಗುತ್ತಿದೆ. ಅತ್ಲಾಂತಿಕದ ಅಮೆರಿಕದಿಂದ ಸಾವಿರ ಮೈಲು ದೂರದ ಸಮುದ್ರ ಭಾಗವನ್ನೆಲ್ಲ ಅದು ತನ್ನ ಸೈನಿಕ ಶಕ್ತಿಯಿಂದ ಕಾಪಾಡಲೊಪ್ಪಿದೆ. ಅತ್ತ ಜಪಾನಿನ ಆಕ್ರಮಣವನ್ನು ತಡೆಯಲಿಕ್ಕೆ ಚೀನಕ್ಕೆ ಹೆಚ್ಚೆಚ್ಚು ಸಹಾಯಮಾಡಲಾರಂಭಿಸಿದೆ. ಜಪಾನು ಅಥವಾ ಜರ್ಮನಿ ಇಟಲಿಗಳು ಎಲ್ಲಿಯಾದರೂ ಒಂದು ಕಡೆ ಅಮೆರಿಕನ್ ಹಡಗು ಸೊತ್ತುಗಳ ಮೇಲೆ ಸ್ವಲ್ಪ ಮಾತ್ರ ಆಕ್ರಮಣ ಮಾಡಿದರೆ ಸಾಕು; ಕೂಡಲೇ ಅವುಗಳ ವಿರುದ್ಧ ಯುದ್ಧವನ್ನು ಸಾರುವ ಸ್ಥಿತಿಯಲ್ಲಿ ಇಂದು ಅಮೆರಿಕವು ಇದೆ.



ಮಲಬದ್ಧತೆಯಿಂದ ನರಳಿದನು
ಶಕ್ತಿ ಚೈತನ್ಯ ಕುಂದಿತು—ಪುಸ್ತಕದಲ್ಲಿ ಮಗ್ನನಾದನು
ಬಾಳುವೆ ಬೇಸರವಾಯಿತು.

ಸಾವಿರಾರು ಮಂದಿ ಮಲಬದ್ಧತೆಯಿಂದ ನರಳುತ್ತಿದ್ದಾರೆ. ಅಜೀರ್ಣ ಅಗ್ನಿಮಾಂದ್ಯಗಳು ಉಂಟಾಗುತ್ತವೆ. ಅವರ ಕೆಲಸವು ಚೆನ್ನಾಗುವುದಿಲ್ಲ, ಅವರಿಗೆ ನೌಕರಿ ಉಳಿಯುವುದೇ ಕಷ್ಟವಾಗುತ್ತದೆ. ಅವರ ಸುಖ ಜೀವನವು ಹಾಳಾಗುತ್ತದೆ. ಅವರ ಈ ಸಂಕಷ್ಟ ಅವರ ಶರೀರದೊಳಗೆ ಇರುವ ಕೆಟ್ಟ ವಸ್ತುಗಳಿಂದಲೇ ಆಗಿದೆ. ಈ ವಿಷಗಳನ್ನು ತೊಳೆದುಬಿಡಿರಿ. ಹಾಗೆ ಮಾಡಿ ಬದ್ಧತೆಯನ್ನು ಮತ್ತು ಶರೀರವನ್ನು ತೀಕ್ಷ್ಣಗೊಳಿಸಿರಿ. ತಂಪಾದ, ಹಿತವಾದ ಎಂಡ್ರೂಸ್ ಲಿವರ್ ಸಾಲ್ಟನ್ನು ದಿನನಿತ್ಯ ಒಂದು ಗ್ಲಾಸು ತೆಗೆದುಕೊಳ್ಳುವುದರಿಂದ ನಿಮ್ಮ ಉದರವು ಕ್ರಮವಾಗಿ ಶುಚಿಯಾಗಿ ಇರುತ್ತದೆ. ಅಂತರಂಗ ನೈರ್ಮಲ್ಯವುಂಟಾಗುತ್ತದೆ. ಹೊಟ್ಟೆಯು ಆ ವ್ಯವಸ್ಥೆಯನ್ನು ನೀಗುತ್ತದೆ. ಇಡೀ ಶರೀರವೇ ತಿರುಗಿ ಶಕ್ತಿ ಚೈತನ್ಯಗಳಿಂದ ಕೂಡುತ್ತದೆ.

ನಿಮ್ಮ ದೇಹದೊಳಗಿನ ನೈರ್ಮಲ್ಯಕ್ಕೆ ದಿನನಿತ್ಯ ಎಂಡ್ರೂಸ್ ಲಿವರ್ ಸಾಲ್ಟನ್ನು ಕುಡಿಯಿರಿ.

ANDREWS
LIVER SALT

ಆರೋಗ್ಯಕರ ಪಾನೀಯ—
ಉತ್ತಮವಾದ ಪಾನೀಯ—
ನೈರ್ಮಲ್ಯ—ತಂಪು—ಹಿತ—ಶಕ್ತಿ ದಾಯಕವಿದು.



ದೊಡ್ಡ ಸೈಜಿಗೆರೂ. 1-4-0

ವಿಜ್ಞಾನಯುಗ

ವಾಹನಗಳಿಗೆ ಗಾಜಿನ ಟಯರು

ಈಗ ಮೋಟರು ಮೊದಲಾದ ವಾಹನಗಳಿಗೆ ರಬ್ಬರಿನ ಟಯರುಗಳನ್ನು ಉಪಯೋಗಿಸುತ್ತಿದ್ದಾರಷ್ಟೆ. ಒಂದಾನೊಂದು ದಿನ ಈ ರಬ್ಬರಿನ ಟಯರುಗಳ ಬದಲಿಗೆ ಗಾಜಿನ ಟಯರುಗಳನ್ನು ಉಪಯೋಗಿಸಬಹುದೆಂದು ವಿಜ್ಞಾನಿಗಳು ಊಹಿಸಿದ್ದಾರೆ. ಮೋಟರು ಕೈಗಾರಿಕೆಯಲ್ಲಿ ತಜ್ಞರಾದವರು ಹೇಳುವ ಪ್ರಕಾರ ಟಯರುಗಳು ತಾಳಿಕೆ ಮತ್ತು ಬಾಳಿಕೆಯುಳ್ಳವುಗಳಾಗಿ ಹಗುರವಾಗಿದ್ದರೆ, ವಾಹನಗಳಿಗೆ ಈಗಿನವುಗಳಿಗಿಂತ ಹೆಚ್ಚು ಉಪಯೋಗವಾಗಬಹುದು. ಯಾಕೆಂದರೆ ಟಯರುಗಳು ಹಗುರ ಮತ್ತು ತೆಳ್ಳಗಾಗಿದ್ದಷ್ಟು ಅವು ಚಲಿಸುವಾಗ ಉಂಟಾಗುವ ಘರ್ಷಣೆಯಿಂದ ಹುಟ್ಟುವ ಕಾವು ಕಡಿಮೆಯಾಗಿ ಅವು ಸವೆಯುವದೂ ಕಡಿಮೆಯಾಗುತ್ತದೆ. ಈ ದೃಷ್ಟಿಯಿಂದ ಪರೀಕ್ಷಿಸಿದಾಗ ಗಾಜಿನ ಟಯರುಗಳು ಹೆಚ್ಚು ಕಾಲ ತಾಳಬಹುದು ಮತ್ತು ಬಾಳಬಹುದು ಎಂದು ಕಾಣುತ್ತದೆ. ಗಾಜನ್ನು ಬೇಕಾದಂತೆ ಜಗ್ಗಿಸಲಿಕ್ಕಾಗುವ ರೀತಿಯಲ್ಲಿ ಹದಗೊಳಿಸಿ ಅದರಿಂದ ಟಯರು ಮಾಡುವ ವಿಚಾರ ನಡೆದಿದೆ. ಇದರಂತೆ ಟಯರುಗಳಿಗಾಗಿ ಉಕ್ಕು, ಕಬ್ಬಿಣ, ಹತ್ತಿ ಮೊದಲಾದ ಬೇರೆ ಕೆಲವು ಪದಾರ್ಥಗಳನ್ನು ವಿಜ್ಞಾನಿಗಳು ಪರೀಕ್ಷಿಸುತ್ತಿದ್ದಾರೆ.

ಮಯಣದ ಮೋಟರುಗಳು

ಅಮೇರಿಕದ ಪೋರ್ಡ ಮೋಟಾರ ಕಂಪೆನಿಯವರು ಮೋಟರುಗಳನ್ನು ತಯಾರಿಸಲಿಕ್ಕಾಗುವ ಒಂದು ಜಾತಿಯ ಮಯಣವನ್ನು ಹದಗೊಳಿಸಿದ್ದಾರೆ. ನಾನಾ ವಸ್ತುಗಳ ಸಮ್ಮಿಶ್ರಣ ಮತ್ತು ಸಂಯೋಗದಿಂದ ತಯಾರಾದ ಈ ಮಯಣವು ನೋಡಲಿಕ್ಕೆ ಬಹಳ ಮೆತ್ತಗಾಗಿರುವದಾದರೂ, ಅದು ಎಂಥ ಕಠಿನ ಪೆಟ್ಟನ್ನಾದರೂ ಸಹಿಸಲಿಕ್ಕೆ ಸಮರ್ಥವಾಗಿರುತ್ತದೆ. ಆದರೂ ಉಕ್ಕು, ಕಬ್ಬಿಣಗಳಂತೆ ಅದು ಬಿರುಸಾಗಿರುವದಿಲ್ಲ; ಒಡೆದು ಚೂರಾಗುವದೂ ಇಲ್ಲ; ಆದರೆ ಆ ಲೋಹಗಳಂತೆ ಈ ಮಯಣವನ್ನು ಹಾಳೆಗಳಾಗಿ ಒಡೆಯಲಿಕ್ಕೂ, ಸರಿಗೆಯಾಗಿ ಎಳೆಯಲಿಕ್ಕೂ ಆಗುತ್ತದೆ. ಈ ಮಯಣವು ಲೋಹಾದಿಗಳಿಗಿಂತ ಅಗ್ಗವಾಗಿಯೂ ಇರುತ್ತದೆ. ಒಂದು ಮಿಲಿಯ ಮೋಟರುಗಳನ್ನು ತಯಾರಿಸಲಿಕ್ಕೆ ಬೇಕಾಗುವಷ್ಟು ಮಯಣವನ್ನು ಐವತ್ತು ಸಾವಿರ ಟನ್ ಕೃಷಿ ಉತ್ಪತ್ತಿಗಳಿಂದ ಸಿದ್ಧಗೊಳಿಸಬಹುದು. ಅಂತರ್ರಾಷ್ಟ್ರೀಯ ಪರಿಸ್ಥಿತಿಯು ಅನುಕೂಲವಾಗಿದ್ದರೆ, ಇನ್ನು ಮೂರೇ ವರ್ಷಗಳ ಒಳಗಾಗಿ ಈ ಮಯಣದ ಮೋಟಾರುಗಳನ್ನು ಮಾರಾಟಕ್ಕೆ ಕಳುಹಿಸುವ ವ್ಯವಸ್ಥೆಯಾಗುವದು.

ಚಾ ಎಲೆಯ ಪುನಃ ಉಪಯೋಗ

ಚಾ ಮಾಡಲಿಕ್ಕೆ ಒಂದು ಸಲ ಬೇಯಿಸಿ ತೆಗೆದ ಮೇಲೆ ಚಾ ಎಲೆಯನ್ನು ಚೆಲ್ಲಿಬಿಡುವರು. ಅಥವಾ ಗುಲಾಬಿ ಮೊದಲಾದ ಕೆಲವು ಜಾತಿಯ ಹೂಗಿಡಗಳಿಗೆ ಅದನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ. ಅಷ್ಟೇ ಅಲ್ಲದೆ ಅವುಗಳಿಂದ ಬೇರೆ ಉಪಯೋಗವಾಗಬಹುದೆಂದು ಯಾರೂ ಎಣಿಸಿರಲಿಲ್ಲ. ಈಗ ಮಾತ್ರ ಬ್ರಿಟನಿನ ಕೆಲವು ಜನ ವಿಜ್ಞಾನಿಗಳು ಬೇರೆ ಬೇರೆ ಪ್ರಯೋಗಗಳನ್ನು ಮಾಡಿ ಉಪಯೋಗಿಸಿದ ಚಾ ಎಲೆಗಳನ್ನು ಒಣಗಿಸಿ ಅವನ್ನು ಕೆಲವು ದ್ರಾವಕಗಳಲ್ಲಿಟ್ಟು ಹದಮಾಡುವದರಿಂದ, ಚಾ ತಯಾರಿಸಲಿಕ್ಕಾಗಿಯೇ ಆ ಎಲೆಗಳನ್ನು ಪುನಃ ಉಪಯೋಗಿಸಲಿಕ್ಕಾಗುತ್ತದೆಂದು ಕಂಡು ಹಿಡಿದಿದ್ದಾರೆ. ಮಾತ್ರವಲ್ಲ, ಸಾಧಾರಣ ಬೇಯಿಸುವದರಿಂದ ನೀರಿನಲ್ಲಿ ಸೇರಿಕೊಳ್ಳದಂಥ ಕೆಲವು ಪೌಷ್ಟಿಕ ಆಹಾರ ಪದಾರ್ಥಗಳನ್ನು ಈ ರೀತಿ ಹದಗೊಳಿಸಿದ ಚಾ ಎಲೆಗಳಿಂದ ಸುಲಭದಲ್ಲಿ ಹೊರ ಹೊರಡಿಸಬಹುದೆಂದೂ ಅವರು ಕಂಡುಕೊಂಡಿರುವರು. ಈ ಶೋಧನೆಯು ಯುದ್ಧ ಕಾಲದಲ್ಲಿ ಬಹಳ ಪ್ರಯೋಜನಕಾರಿಯಾಗಿ ತಿಳಿದುಬಂದಿದೆ. ಸೇನೆಗಳಲ್ಲಿ ಚಾ ಖರ್ಚು ಅರ್ಧದಷ್ಟು ಕಡಿಮೆಯಾಗುವದು. ಬ್ರಿಟಿಷ ಸೇನೆಯಲ್ಲಿ ದಿನ ಒಂದರ ೧೬ ಟನ್ನುಗಳಷ್ಟು ಚಾ ಎಲೆಯು ಉಪಯೋಗವಾಗುತ್ತದೆ. ಸರಕಾರವು ಈ ಹೊಸ ಶೋಧನೆಯ ಪ್ರಯೋಜನ ಪಡೆಯಲು ಆಲೋಚಿಸುತ್ತಲಿದೆ.

ಹಿಮ ಸಾಗರಕ್ಕೆ ಪ್ರಯಾಣ

ಹಿಮ ಸಾಗರಗಳಲ್ಲಿ ಪ್ರಯಾಣ ಮಾಡುವದು ಬಹಳ ಕಠಿನವಾಗಿದೆ. ಅದರಲ್ಲಿ ಪ್ರಾಣಾಪಾಯವೂ ಬಹಳ ಉಂಟು. ಸಾಗರದಲ್ಲಿ ಚಲಿಸುವ ಹಡಗುಗಳು ದೊಡ್ಡದೊಡ್ಡ ಹಿಮಗಡ್ಡೆಗಳಿಗೆ ಅಪ್ಪಳಿಸಿ ಹಡಗುಗಳು ಚೂರುಚೂರಾಗಿ ಒಡೆದು ಹೋಗುವವು; ಪ್ರಾಣಹಾನಿ, ಧನಹಾನಿ, ಸಮಯ ನಷ್ಟ ಎಲ್ಲಾ ಆಗುವವು. ಆದರೆ ಈ ಹಿಮಗಡ್ಡೆಗಳು ನೀರಮೇಲೆ ತೇಲಿಕೊಂಡಿರುವವು. ಅವುಗಳ ಅಡಿಯಲ್ಲಿ ಆಳದ ತನಕ ನೀರೇ ನೀರು ಇರುತ್ತದೆ. ಆದುದರಿಂದ ಜಲಾಂತರ್ಗಾಮಿ ಅಥವಾ ಸಬ್‌ಮೇರಿನುಗಳ ಮೂಲಕ ಹಿಮಾಚ್ಛಾದಿತ ಸಾಗರಗಳಲ್ಲಿ ಸಂಚಾರ ಮಾಡಲಿಕ್ಕಾಗಬಹುದೆಂದು ರಷ್ಯದ ಒಬ್ಬ ವಿಜ್ಞಾನಿಯು ಆಲೋಚಿಸಿದ್ದಾನೆ. ಸರ್ ಹ್ಯೂಬರ್ಟ ಎಂಬ ವಿಜ್ಞಾನಿಯು ೧೯೩೧ರಲ್ಲಿಯೇ ಇಂಥ ಒಂದು ಪ್ರಯತ್ನವನ್ನು ಮಾಡಿದ್ದನು. ಆದರೆ ಕೃತಕೃತ್ಯನಾಗಿರಲಿಲ್ಲ. ಈಗ ಟೆಲಸಾಫ್ ಎಂಬ ಆ ರಷ್ಯದ ವಿಜ್ಞಾನಿಯು ಹೊಸ ರೀತಿಯಲ್ಲಿ ಒಂದು ಜಲಾಂತರ್ಗಾಮಿಯನ್ನು ರಚಿಸಿದ್ದಾನೆ. ಇದು ನೀರಡಿಯಲ್ಲಿ ಚಲಿಸುತ್ತಿದ್ದ ಹಾಗೆಯೇ ಸುತ್ತಮುತ್ತಲಿರುವ ಹಿಮಗಡ್ಡೆಗಳನ್ನು ಕತ್ತರಿಸಿ ಅಥವಾ ಕರಗಿಸಿ ಮುಂದೆ ಹೋಗಲಿಕ್ಕೆ ದಾರಿಮಾಡಿಕೊಳ್ಳುತ್ತದೆ. ಆದುದರಿಂದ ಈ ಜಲಾಂತರ್ಗಾಮಿಯ ಮೂಲಕ ನೀರಡಿಯಲ್ಲೂ ನೀರ ಮೇಲೂ ಹಿಮಸಾಗರದಲ್ಲಿ ಸಂಚರಿಸಬಹುದು. ಇದರಲ್ಲಿ ಕುಳಿತು ಆ ವಿಜ್ಞಾನಿಯು ಉತ್ತರ ಧ್ರುವಕ್ಕೆ ಹೋಗುವ ಆಲೋಚನೆ ಮಾಡಿದ್ದಾನೆ.

ಬಕಾಸುರ ಜಾತಿಯ ಮೀನುಗಳು

ತಿಮಿಂಗಿಲ, ಶಾರ್ಕ ಮೊದಲಾದ ಬಹು ದೊಡ್ಡ ಜಾತಿಯ ಮೀನುಗಳು ಆಳವಾದ ಸಮುದ್ರಗಳಲ್ಲಿ ವಾಸವಾಗಿರುತ್ತವೆ. ಇವನ್ನು ಮೀನುಗಳನ್ನುವದಕ್ಕಿಂತ ಪ್ರಾಣಿಗಳೆಂದೇ ಕರೆಯಬಹುದು. ಯಾಕಂದರೆ ಆಕಾರದಲ್ಲಿ ಮಾತ್ರ ಇವು ಮೀನುಗಳಂತೆ ಇರುತ್ತವೆ. ಆದರೆ ಈ ಪ್ರಾಣಿಗಳು ಬಕಾಸುರನಂತೆ ಹೊಟ್ಟೆಬಾಕ ಆಗಿರುವವು. ಒಂದೊಂದು ತಿಮಿಂಗಿಲ ಅಥವಾ ಶಾರ್ಕ ಮೀನು ತನ್ನ ಹೊಟ್ಟೆಯ ಪರಿಮಾಣಕ್ಕಿಂತ ನಾಲ್ಕೈದು ಪಾಲು ದೊಡ್ಡವಾದ ಇತರ ಜೀವಿಗಳನ್ನು ಕಬಳಿಸಿಬಿಡುತ್ತದೆ. ಒಂದು ೩೧ ಅಡಿ ಉದ್ದವಾದ ತಿಮಿಂಗಿಲದ ಹೊಟ್ಟೆಯಲ್ಲಿ ಒಂದು ಬಾರಿ ೧೪ ಸೀಲ್ ಮೀನುಗಳು ಇತರ ಸಮುದ್ರ ಜೀವಿಗಳೂ ಇದ್ದುವಂತೆ. ಮತ್ತೆ ೩೦ ಅಡಿ ಉದ್ದವಾದ ಒಂದು ಶಾರ್ಕ ಮೀನಿನ ಹೊಟ್ಟೆಯಲ್ಲಿ ಒಂದು ಬಾರಿ ೧೦೦ ರಾತಲು ಭಾರವಾದ ಒಂದು ಇಡಿಯ ಸೀರು ಸಿಂಹವು ಇದ್ದಿತಂತೆ.

ಹಾಲು ರೋಗನಿವಾರಕವಾಗಿದೆ

ಹಾಲು ಉತ್ತಮವಾಗಿರುವುದರಿಂದ ಮಾತ್ರ ಅದನ್ನು ಧಾರಾಳವಾಗಿ ಸೇವಿಸಬೇಕಾದ್ದಲ್ಲ. ಅದರಲ್ಲಿ ರೋಗನಿವಾರಕ ಗುಣವೂ ಇರುವದರಿಂದ ಅದನ್ನು ಕುಡಿಯಬೇಕಾಗಿದೆಯೆಂದು ಡಾಕ್ಟರ್ ಜೋಬಿಯವರು ಹೇಳುತ್ತಾರೆ. ಕೆಲವು ಜಾತಿಯ ರೋಗಾಣುಗಳಿಗೆ ಹಾಲಿನೊಳಗಿನ ಕೆಲವು ಪದಾರ್ಥಗಳು ವಿಷವಾಗಿರುವದರಿಂದ, ಶರೀರದೊಳಗಿದ್ದ ಈ ರೋಗಾಣುಗಳು ಹಾಲಿನ ಸೇವನೆಯಿಂದ ನಾಶವಾಗುವವು.

ಜರ್ಮನರು ನರಭಕ್ಷಕರಾಗಿದ್ದರಂತೆ!

ಸಂಶೋಧಕರ ಸಮಾಚಾರಗಳು

ಇಂದಿಗೂ ಅವರ ರಕ್ತದಾಹ ಇಳಿದಿಲ್ಲವೇನು?

ಜರ್ಮನರು ಬಹಳ ಕ್ರೂರ ಜನರು ಎಂದು ಜಗತ್ಪ್ರಸಿದ್ಧರಾಗಿರುವರು. ಹಿಟ್ಲರನು ಅಧಿಕಾರಕ್ಕೆ ಬಂದು ಒಂದೆರಡು ವರ್ಷಗಳು ಕಳೆಯಬೇಕಾದರೆಯೇ ಅವನು ಕೇವಲ ಸಂದೇಹದ ಮೇಲೆ ಸುಮಾರು ಇನ್ನೂರು ಮಂದಿ ಮುಂದಾಳುಗಳನ್ನು ಬಂದೂಕಿನಿಂದ ಸುಟ್ಟಿಟ್ಟು ಕೊಂದು ಹಾಕಿದನು. ಈ ಹತ್ಯಾಕಾಂಡದ ಸಮಾಚಾರವನ್ನು ಕೇಳಿ ಇಡೀ ಜಗತ್ತು ರೋಮಾಂಚನಗೊಂಡಿತ್ತು. ಆದರೂ ಈ ರೀತಿಯ ಕ್ರೂರಾಚಾರವು ಜರ್ಮನಿಯಲ್ಲಿ ಸರ್ವಸಾಧಾರಣವಾಗಿದೆ. ಅದು ದಿನಂಪ್ರತಿ ನಡೆಯುವಂತಹುದುದಾಗಿದೆ. ಹಿಟ್ಲರನು ಇದೇ ಜರ್ಮನರ ಪ್ರತಿನಿಧಿಯಾಗಿದ್ದಾನೆ.

ಜರ್ಮನಿಯಲ್ಲಿ ಹಿಂದೆ ಅನೇಕ ಮಂದಿ ನರಭಕ್ಷಕ ಅಪರಾಧಿಗಳು ಇದ್ದರು. ಇವರು ಮನುಷ್ಯರನ್ನು, ಅದರಲ್ಲೂ ಮುಖ್ಯವಾಗಿ ಕಿಶೋರ ವಯಸ್ಕರಾದ ಹುಡುಗರನ್ನು ಕೊಂದು ಅವರ ಮಾಂಸವನ್ನು ತಿನ್ನುತ್ತಿದ್ದರು. ಈಚೆಗೆ ಅನ್ವೇಷಕರು ಒಂದು ಹೊಸ ವಿಷಯವನ್ನು ಕಂಡು ಹಿಡಿದಿದ್ದಾರೆ. ಡೆನ್ಮಾರ್ಕಿನ ಅಧ್ಯಾಪಕರಾದ ಕಿಶರ್ ಮೋಲರ್ ಮತ್ತು ಜೊಹೊಲ್ಮ್ ಎಂಬಿಬ್ಬರು ಅನೇಕ ಶೋಧನೆಗಳನ್ನು ಮಾಡಿ ಪ್ರಾಚೀನಕಾಲದ ಜರ್ಮನ್ ಆರ್ಯರು ಮನುಷ್ಯ ಮಾಂಸವನ್ನು ತಿನ್ನುತ್ತಿದ್ದರೆಂದು ಸಿದ್ಧಮಾಡಿದ್ದಾರೆ.

ಪರಿಶೋಧನೆಗಳ ಪರಿಣಾಮ

ಈ ಇಬ್ಬರು ಅಧ್ಯಾಪಕರು ಮೆಲಿಬಿಯ ಮತ್ತು ಲಾಂಗ್ಲಾಂಡದ ಭಗ್ನಾವಶೇಷಗಳನ್ನೂ ಭೂಖಂಡಗಳನ್ನೂ ಪ್ರಾಚೀನ ಗೋರಿಗಳನ್ನೂ ಅಗೆದು ನೋಡಿದರು. ಜರ್ಮನರು ನಾಗರಿಕರಾಗಿದ್ದ ಸಮಯದಲ್ಲಿ ಕೂಡ ಅವರು ಮನುಷ್ಯ ಮಾಂಸವನ್ನು ತಿನ್ನುತ್ತಿದ್ದರು. ಅವರು ತಮ್ಮ ದೇವತೆಗಳನ್ನು ಪ್ರಸನ್ನರನ್ನಾಗಿ ಮಾಡುವದಕ್ಕೋಸ್ಕರ ನರಬಲಿಗಳನ್ನು ಕೊಡುತ್ತಿದ್ದರು. ಮಾತ್ರವಲ್ಲ ಬಲಿದಾನ ಮಾಡಿದ ಆ ಮನುಷ್ಯರನ್ನು, ಆ ಜರ್ಮನರು ಬಾಯಿ ಚಪ್ಪರಿಸಿ ತಿನ್ನುತ್ತಿದ್ದರು ಎಂದು ಅವರಿಗೆ ಆಗ ಗೊತ್ತಾಯಿತು.

ಗೋರಿಯಲ್ಲಿ ಮೂಳೆಗಳು

ಮೆಲೇಬಿಯದ ಒಂದು ಗೋರಿಯಲ್ಲಿ ಐದು ಮಂದಿ ಮನುಷ್ಯರ ಮೂಳೆಗಳು ದೊರೆತಿವೆ. ಇವರಲ್ಲಿ ಒಬ್ಬಳು ಹೆಂಗಸಿದ್ದಾಳೆ. ಅವಳ ಪ್ರಾಯ ೨೦ ಇಂದ ಮಧ್ಯ ಇರಬಹುದು. ಈ ಎಲ್ಲರೂ ಒಂದು ಬಲಿವೇದಿಯ ಸಮೀಪ ಹೂಳಲ್ಪಟ್ಟಿರುವರು. ಈ ಗೋರಿಯಲ್ಲಿ ಸಿಕ್ಕಿದ ಪ್ರಮಾಣಗಳಿಂದ ಈ ಐವರನ್ನು ಜರ್ಮನರು ಬಲಿಕೊಟ್ಟಿದ್ದರೆಂದೂ, ಆ ಮೇಲೆ ಅವರ ಮಾಂಸವನ್ನು ತಿಂದು ಮೂಳೆಗಳನ್ನು ಭೂಮಿಯಲ್ಲಿ ಹೂತಿಟ್ಟರೆಂದೂ ನಿಶ್ಚಯವಾಗಿ ಹೇಳಬಹುದು.

ಸ್ವಜಾತಿಯ ಬಲಿಯಿಲ್ಲ

ಜರ್ಮನರು ಸ್ವಜಾತಿಯವರನ್ನು ಬಲಿಕೊಡುತ್ತಿರಲಿಲ್ಲವೆಂದೂ ಮೆಲೇಬಿಯದ ಆ ಗೋರಿಯಿಂದ ಗೊತ್ತಾಗಿದೆ. ಜರ್ಮನರ ಗೋರಿಗಳ ಆಕಾರ ಪರಿಮಾಣಗಳು ಬೇರೆಯಾಗಿವೆ. ಅವು ನರಬಲಿ ಕೊಟ್ಟವರ ಗೋರಿಗಳಿಗಿಂತ ದೊಡ್ಡವೂ ಸುಂದರವೂ ಆಗಿವೆ. ನರಬಲಿ ಕೊಡಲ್ಪಡುವ ಜನರ ಸೊಂಟವು ಬಹಳ ಸಣ್ಣದಾಗಿರುತ್ತಿತ್ತು. ಆದ್ದರಿಂದ ಇವರು ಬೇರೆ ಜಾತಿಯವರನ್ನೇ ಹಿಡಿದುತಂದು ಬಲಿಕೊಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಈ ಜಾತಿಯನ್ನು ಜರ್ಮನರು ಪ್ರಾಯಶಃ ಗೆದ್ದುಕೊಂಡಿರಬೇಕು. ಮತ್ತು ಬೇಕುಬೇಕಾದಾಗ ಅವರನ್ನು ಹಿಡಿದುತಂದು ಜರ್ಮನರು ಬಲಿಕೊಡುತ್ತಿರಬೇಕು. ಮತ್ತೆ ಉಳಿದ ಸಮಯಗಳಲ್ಲಿ ಅವರನ್ನು ಗುಲಾಮರನ್ನಾಗಿ ಇಟ್ಟುಕೊಂಡಿರಲೂಬಹುದು.

ಇತರ ಕಡೆಗಳಲ್ಲಿ

ಮೇಲೆ ಹೇಳಿದ ಎರಡು ಸ್ಥಾನಗಳಲ್ಲಿ ಮಾತ್ರ ಬಲಿಕೊಡಲ್ಪಟ್ಟವರ ಗೋರಿಗಳು ಸಿಕ್ಕಿವೆಯೆಂದಲ್ಲ, ಗ್ಲಾಮ್ಸ್ಲೊ ಎಂಬಲ್ಲಿ ದೊರೆತ ಒಂದು ಗೋರಿಯಲ್ಲಿ ಬಲಿಯಾದ ಇಬ್ಬರ ಮೂಳೆಗಳು ಸಿಕ್ಕಿವೆ. ಇವರ ಮಾಂಸವನ್ನು ಪರೀಕ್ಷೆಮಾಡಿ ಭೂರಿಭೋಜನದಲ್ಲಿ ಬಳಸಿರುವ ಹಾಗೆ ಕಂಡುಬಂದಿದೆ. ಹಾಗಾ ಎಂಬ ಇನ್ನೊಂದು ಸ್ಥಳದಲ್ಲಿಯೂ ಬಲಿದು ತಲೆಬುರುಡೆ ದೊರೆತಿದ ಆ ತಲೆಬುರುಡೆಯು ಒಡೆದು ಹೋಗಿರುವ ರೀತಿಯನ್ನು ನೋಡಿದರೆ, ಜರ್ಮನರು ಅದರೊಳಗಿನ ಮೆದುಳನ್ನು ತಿನ್ನಲಿಕ್ಕಾಗಿಯೇ ಅವರು ಅದನ್ನು ಹಾಗೆ ಒಡೆದಿರಬೇಕೆಂದು ತೋರುತ್ತದೆ. ಸ್ವೀಡನ್ ಕಾಲ್ಮಾರ್ ಮತ್ತು ಕ್ಯೂರವಾರದ ಗವಿಗಳಲ್ಲಿಯೂ ದೊರೆತ ಮೂಳೆಗಳನ್ನು ನೋಡುವಾಗ ಸುಮಾರು ಒಂದು, ಒಂದೂವರೆ ಸಾವಿರ ವರ್ಷಗಳ ಹಿಂದಿನ ತನಕ ಜರ್ಮನರು ನರಭಕ್ಷಕರಾಗಿದ್ದರು ಮತ್ತು ಬಾಯಿರುಚಿಗಾಗಿ ಮನುಷ್ಯ ಮಾಂಸವನ್ನು ತಿನ್ನುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಅಂದಿನ ಜರ್ಮನರು ಆ ರಾಕ್ಷಸೀ ಸ್ವಭಾವ ಮತ್ತು ರಕ್ತದಾಹವು ಇಂದೂ ಅವರಲ್ಲಿ ಪ್ರಬಲವಾಗಿದೆ ಎಂದು ಹೇಳಬಹುದು. ಯೂರೋಪಿನ ಯುದ್ಧದಲ್ಲಿ ಅವರು ಮಾಡುತ್ತಿರುವ ಕ್ರೂರನರಹತ್ಯೆಯನ್ನು ನೋಡುವಾಗ ಇದು ಯಾರಿಗೂ ಬೋಧವಾಗಬಹುದು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಇಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADAPETTU
9—7—1940

FROM:

Sri K. Shivarama Nair,
Kerikcundah Estate,
Post Devegadabettu,
KADUR DISTRICT.

To,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3—13—0 | Regd. No. M. 3460

ಸ್ವದೇಶಾಭಿಮಾನಿ

ಸಂಪುಟ ೨-೫] ತಾರೀಕು 16—5—1941 [ಸಂಚಿಕೆ 20]

The Bombay Life Assurance Company, Ltd.

(ESTABLISHED 1908)

Death! { is not a matter of supposition / is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ, ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಪತ್ರವ್ಯವಹಾರ

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ—ಸಂ, ಸ್ವ.]

ಶಾಲೆಗಳ ಉನ್ನತಿಯೂ ಉಪಾಧ್ಯಾಯರೊಳಗಿನ ಸೌಹಾರ್ದವೂ

ಪ್ರಾಥಮಿಕ ಶಾಲೆಗಳ ಉನ್ನತಿಯಾಗಬೇಕು, ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರ ಪ್ರಸಾರಗಳಾಗಬೇಕು, ಪ್ರಾಥಮಿಕ ಶಿಕ್ಷಣವು ಉತ್ತಮಗೊಳ್ಳಬೇಕು ಎಂಬ ಕೂಗು ಎಲ್ಲೆಡೆಗಳಿಂದ ಪ್ರತಿಧ್ವನಿಸುತ್ತದೆ. ಮತ್ತು ಈ ಉದ್ದೇಶ ಸಾಧನೆಗಾಗಿ ಅನೇಕರು ಅನೇಕ ಉಪಾಯಗಳನ್ನು ಸೂಚಿಸುತ್ತಾರೆ. ಹೆತ್ತವರ ಸಹಕಾರ, ಸರಕಾರದ ಸಹಾಯ, ಸಮಾಜ ಪ್ರಮುಖರ ಸಹಾನುಭೂತಿ ಇವೆಲ್ಲ ಬೇಕಾದದ್ದೆ. ಆದರೆ ಶಾಲೆಗಳ ಉನ್ನತಿಯಾಗಬೇಕಾದರೆ ಶಾಲೆಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರೊಳಗೆ ಸೌಹಾರ್ದವೂ ಇರಬೇಕೆಂಬುದರ ಕಡೆಗೆ ಜನರ ಸಾಕಾದಷ್ಟು ಲಕ್ಷ್ಯವು ಹೋದಂತೆ ಕಾಣುವುದಿಲ್ಲ

ಜಿಲ್ಲಾ ಬೋರ್ಡಿನ ಒಂದು ಶಾಲೆಯಲ್ಲಿ ನಡೆದ ಒಂದು ಘಟನೆಯನ್ನೇ ತೆಗೆದುಕೊಳ್ಳೋಣ. ಆ ಶಾಲೆಯ ಮುಖ್ಯೋಪಾಧ್ಯಾಯರನ್ನು ಬೋರ್ಡಿನವರು ಒಂದು ನಿರ್ದಿಷ್ಟ ಅವಧಿಗೆ ಬೇರೊಂದು ಶಾಲೆಗೆ ಕಳುಹಿಸಿದ್ದರು. ಆ ಅವಧಿಯು ಮುಗಿದ ಬಳಿಕ ಮುಖ್ಯೋಪಾಧ್ಯಾಯರು ತಮ್ಮ ಮೊದಲಿನ ಶಾಲೆಗೆ ಬಂದು, ತಮ್ಮ ಬದಲಿ ನೋಡುತಿದ್ದ ಪ್ರಥಮ ಸಹಾಯಕರಿಂದ ಚಾರ್ಜು ಕೇಳಿದರು. ಆದರೆ ಖಾಸಗಿ ದ್ವೇಷಾಸೂಯೆಗಳಿದ್ದುದರಿಂದ ಚಾರ್ಜು ಕೊಡಲಿಕ್ಕೆ ಬೋರ್ಡಿನ ಅಪ್ಪಣೆ ಇಲ್ಲವೆಂದು ನಿರಾಕರಿಸಿದರು. ಮಾತ್ರವಲ್ಲ ಅವಧಿ ಮುಗಿದ ಬಳಿಕ ಮುಖ್ಯೋಪಾಧ್ಯಾಯರು ತಮ್ಮ ಮೊದಲಿನ ಶಾಲೆಗೇ ಮರಳಬೇಕೆಂಬ ಅರ್ಥವು ಬೋರ್ಡಿನ ಆಜ್ಞಾಪತ್ರದಿಂದ ಧ್ವನಿತವಾಗುತ್ತದೆಂದು ರೇಂಜಿನ ಡಿಪ್ಟಿ ಇನ್ಸ್‌ಪೆಕ್ಟರರೆ ಎಷ್ಟು ಸ್ಪಷ್ಟೀಕರಿಸಿ ಸಮಜಾಯಿಸಿದರೂ ಕೂಡ ಆ ಸಹಾಯಕರು ತಮ ಛಲವನ್ನು ಬಿಡಲಿಲ್ಲ. ಶಾಲೆ ಎಂಬುದು ಶಿಕ್ಷಣ ಸಂಸ್ಥೆಯಾಗಿರುವುದರ ಬದಲಿಗೆ ಕೆಲವರ ಚಾಣಕ್ಯನೀತಿಯ-ಪ್ರಯೋಗಸ್ಥಾನವಾಗಿ ಪರಿಣಮಿಸಿದೆ.

ಸಾರ್ವಜನಿಕ ಹಣದ ಈ ರೀತಿ ದುರುಪಯೋಗವಾಗುವ ಮತ್ತು ಶಿಕ್ಷಣ ಪ್ರಚಾರಕ್ಕೆ ಕೊರತೆಬೀಳುವ ಇಂಥ ಪ್ರಸಂಗಗಳನ್ನು ನೋಡಿ ಯಾವ ವಿದ್ಯಾಭಿಮಾನಿಗೆ ತಾನೇ ವ್ಯಸನ ಪಶ್ಚಾತ್ತಾಪಗಳಾಗದಿರವು? ಉಪಾಧ್ಯಾಯರೊಳಗೆ ಪರಸ್ಪರ ಸೌಹಾರ್ದವಿದ್ದರೆಯೇ ಶಿಕ್ಷಣ ಕಾರ್ಯವು ವಿಘ್ನಬಾಧೆಗಳಿಲ್ಲದೆ ಉತ್ತಮ ರೀತಿಯಿಂದ ನಡೆದೀತು. ಅದು ಹಾಗೆ ನಡೆಯುವಂತೆ ಸಂಬಂಧಪಟ್ಟವರು ತಕ್ಕ ವ್ಯವಸ್ಥೆ ಮಾಡುವುದು ಅಗತ್ಯವಾಗಿದೆ.

—ವಿದ್ಯಾಭಿಮಾನಿ

ಇಂದಿನಿಂದಲೇ ಅವುಗಳಿಗೆ

ಓವಲ್ಟಿನ್

ಕೊಟ್ಟರೆ, ಅವು ಆರೋಗ್ಯವಾಗಿ ಬಲಶಾಲಿಗಳಾಗುವುವು

ಮಕ್ಕಳು ಬೆಳೆಯುವ ಸಮಯದಲ್ಲಿ ಅವುಗಳಿಗೆ ತಕ್ಕುದಾದ ಮತ್ತು ಸರಿಯಾದ ಪೋಷಣೆಯು ಅವಶ್ಯಕತೆ ಇದೆ. ಈ ಬೆಳವಣಿಗೆಯ ಸಮಯ ಅವುಗಳು ಬೇಗನೇ ತಮ್ಮ ಶಕ್ತಿಯನ್ನು ವ್ಯಯಮಾಡುವುವು. ಅವು ಆರೋಗ್ಯವಂತರಾಗಿಯೂ ಬಲಶಾಲಿಗಳಾಗಿಯೂ ಇರಬೇಕಾದರೆ ಈ ವ್ಯಯವನ್ನು ಕೂಡಲೇ ಭರ್ತಿಮಾಡಬೇಕು.

ಈ ವ್ಯಯವಾದ ಶಕ್ತಿಯನ್ನು ಭರ್ತಿಮಾಡಿ ಬಲವನ್ನೂ, ಸುಖವನ್ನೂ, ಆರೋಗ್ಯವನ್ನೂ ಕೊಡಲು ದೇಹದಾರ್ಢ್ಯಕ್ಕೆ ಉತ್ತಮ ಪೋಷಣೆಯ ಗುಣವುಳ್ಳ 'ಓವಲ್ಟಿನ್' ಒಂದು ಅಮೂಲ್ಯ ಆಹಾರಪಾನೀಯವಾಗಿರುತ್ತದೆ.

'ಓವಲ್ಟಿನ್' ಒಂದು ಉತ್ತಮವಾದ ನೈಸರ್ಗಿಕ ಆಹಾರ—ನೆನೆಹಾಕಿ ಮಾಗಿದ ಬಾರ್ಲಿ, ಹಸಿಹಾಲಿನ ಕೆನೆ, ಅಮೂಲ್ಯ ನೈಸರ್ಗಿಕ ವಿಟಾಮಿನುಗಳು ಮತ್ತು ಇನ್ನಿತರ ಆಹಾರವಸ್ತುಗಳ ತಯಾರಿಕೆಯಾಗಿರುತ್ತದೆ. ಮಕ್ಕಳು ಇದರ ರುಚಿಯನ್ನು ಬಹಳವಾಗಿ ಮೆಚ್ಚುತ್ತವೆ. ಇತರ ನಕಲಿ ಪಾನೀಯಗಳನ್ನು ವರ್ಜಿಸಿರಿ; 'ಓವಲ್ಟಿನ್'ನ್ನೇ ಕೊಂಡುಕೊಳ್ಳಿರಿ.

'ಓವಲ್ಟಿನ್' ಒಂದು ಆಹಾರಪಾನೀಯವಾಗಿದ್ದು ಬಿಸಿಯಾ ತಣ್ಣಗಾಗಿ ಸೇವಿಸಬಹುದು. ಇದನ್ನು ತಯಾರಿಸುವ ಕ್ರಮವು ಬಹಳ ಸುಲಭ. ಮತ್ತು ಕ್ರಮವು ಪ್ರತೀ ಒಂದು ಟಿನ್ನಿನೊಂದಿಗಿದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್‌ಟಿನ್'

'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಡಿಸ್ಟ್ರಿಬ್ಯೂಟರ್ಸ್:—

ಗ್ರೆಹಮ್ಸ್ ಟ್ರೇಡಿಂಗ್ ಕೋ. [ಇಂಡಿಯಾ] ಲಿಮಿಟೆಡ್,

16 ಬೇಂಕ್ ಸ್ಟ್ರೀಟ್, ಬೊಂಬಾಯಿ, ಹಾಗೂ ಕಲ್ಕತ್ತಾ, ಮದ್ರಾಸು, ಕರಾಚಿ ಮತ್ತು ರಂಗೂನು.

'ಓವಲ್ಟಿನ್ ಬಿಸ್ಕುಟುಗಳು'—ರುಚಿಕರ, ಜೀರ್ಣಕರ ಮತ್ತು ಪೋಷಣಾಯುಕ್ತ 'ಓವಲ್ಟಿನ್' ಬಿಸ್ಕುಟುಗಳು ಬಹಳ ಉತ್ತಮ. ಅವುಗಳಲ್ಲಿ ಅಮೂಲ್ಯ ಗುಣದ ಓವಲ್ಟಿನ್ ಸೇರಿದೆ. 4 ಔನ್ಸು, 8 ಔನ್ಸಿನ ಪೆಕೆಟುಗಳಲ್ಲಿಯೂ, 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV/42/40

WANTED

A Secondary Grade Trained Teacher for the Muduperar Higher Ele. School.

For particulars apply to—

"X"

Swadeshabhimani

Mangalore

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

HALFTONE & LINE BLOCK MAKING UNDERTAKEN

Sharada Press, MANGALORE

"ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

23—5—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೩—೫—೧೯೪೧

ಮಂಗಳೂರಲ್ಲಿ ಜಾತೀಯ ಕಲಹವಾಗಲು ಕಾರಣಗಳಿಲ್ಲ!

ಜವಾಬ್ದಾರಿಯಿಲ್ಲದ ಜನರ ಸುದ್ದಿಯನ್ನು ಸಾರ್ವಜನಿಕರು ನಂಬತಕ್ಕದ್ದಲ್ಲ.

ಮಂಗಳೂರಿನ ಎಲ್ಲಾ ಜಾತಿಮತಗಳ ಗೃಹಸ್ಥರು ಪ್ರಕಟಿಸುತ್ತಾರೆ.

ಡಾ। ಕೆ. ವಿಟ್ಠಲಶೆಟ್ರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು

ಭಾರತದ ಬೇರೆ ಬೇರೆ ಭಾಗಗಳಲ್ಲಿ ಇತ್ತೀಚೆಗೆ ಉಂಟಾದ ಜಾತೀಯ ಕಲಹಗಳ ನಿಮಿತ್ತವಾಗಿ ಮಂಗಳೂರಲ್ಲಿಯೂ ಜವಾಬ್ದಾರಿಯಿಲ್ಲದ ಜನರು ಹೇಳುತ್ತಿರುವ ಅನೇಕ ವಿಧದ ಸುಳ್ಳು ಸುದ್ದಿಗಳಿಂದ ನಾಗರಿಕರು ಗಾಬರಿಗೊಂಡಿರುವ ಕಾರಣ ಅದನ್ನು ಪರಿಹರಿಸುವ ಸಲುವಾಗಿ, ಮಂಗಳೂರಲ್ಲಿ ಉಂಟಾದ ಅಲ್ಲಸಲ್ಲದ ಸುದ್ದಿಗಳಿಗೆ ಯಾವ ಆಧಾರವೂ ಆಸ್ಪದವೂ ಕಾರಣವೂ ಇಲ್ಲವೆಂದು ತಾ. ೨೧ರಂದು ಸಂಜೆ ೫-೩೦ಕ್ಕೆ ಡಿ। ಬೋ। ಆಫೀಸಿನಲ್ಲಿ ಪ್ರೆಸಿಡೆಂಟ್ ಡಾ। ಕೆ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಸೇರಿದ ನಗರದ ಪ್ರಮುಖ ನಾಗರಿಕರು, ಎಲ್ಲ ಮತಗಳ ಮುಖಂಡ ಸದ್ಗೃಹಸ್ಥರೂ ಕೂಡಿ ನಿರ್ಣಯ ಮಾಡಿದರು. ಮಾತ್ರವಲ್ಲದೆ ಜಾತೀಯ ಕಲಹಗಳಂತಹ ದುರ್ಘಟನೆಗಳು ನಮ್ಮ ಜಿಲ್ಲೆಯಲ್ಲಿ ಸಂಭವಿಸದಂತೆ ತಡೆಗಟ್ಟುವ ಸಲುವಾಗಿ ಶಾಂತಿ ಸ್ಥಾಪನೆಗಾಗಿ, ಎಲ್ಲಾ ಜಾತಿ ಮತಗಳ ಗೃಹಸ್ಥರಿಂದ ಕೂಡಿದ ಒಂದು ಕಮಿಟಿಯು ಏರ್ಪಟ್ಟು ಕೆಲಸ ಮಾಡುವುದಾಗಿ ನಿಶ್ಚಯವಾಯಿತು.

ಡಿ। ಬೋ। ಪ್ರೆಸಿಡೆಂಟರಾದ ಡಾ। ಕೆ. ವಿಟ್ಠಲ ಶೆಟ್ಟರು ಪರಿಸ್ಥಿತಿಯನ್ನು ಪರ್ಯಾಲೋಚಿಸಿಕೊಂಡು ಅದನ್ನು ಶಾಂತರೀತಿಯಿಂದ ನಿವಾರಿಸುವ ಯತ್ನಮಾಡಬೇಕೆಂಬ ಉದ್ದೇಶದಿಂದ, ಮಂಗಳೂರ ಹಿಂದೂ ಮುಸ್ಲಿಂ ಪ್ರಮುಖರಿಗೆ ಮಾತ್ರವಲ್ಲದೆ ಇತರ ಬೇರೆ ಬೇರೆ ಮತಗಳ ಗೃಹಸ್ಥರಿಗೆ ಆಮಂತ್ರಣ ಕಳುಹಿಸಿದ್ದಂತೆ ಸುಮಾರು ನೂರು ಮಂದಿ ನಾಗರಿಕ ಸದ್ಗೃಹಸ್ಥರು ಬಂದು ನೆರೆದಿದ್ದರು. ಸಭಾರಂಭದಲ್ಲಿ ಡಾ। ಕೆ. ಶೆಟ್ಟರು ಸಭೆ ಕರೆದ ಉದ್ದೇಶವನ್ನು ತಿಳಿಸಿ, ಆ ವಿಷಯದಲ್ಲಿ ಇತರರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕೆಂದು ಕೇಳಿಕೊಂಡರು.

ಅನಂತರ ಶ್ರೀ. ವೈಕುಂಠ ಬಾಳಿಗರು ಮಾತನಾಡಿ ನಮ್ಮ ಜಿಲ್ಲೆ ಬಹಳ ಬಡತನವಿದ್ದು ಅದರ ಮೇಲೆ ಇಲ್ಲಿ ಜಾತೀಯ ಕಲಹವೂ ಉಂಟಾದರೆ ನಮ್ಮ ಜೀವನಕ್ಕೆ ಎಂತಹ ಅಪಘಾತವು ಬರಬಹುದೆಂಬುದನ್ನು ಹೇಳುತ್ತಾ ಜಾತೀಯ ಕಲಹವಾಗದಂತೆ ಕೆಲಸ ಮಾಡುವರೆ ಒಂದು ಸಮಿತಿಯನ್ನು ಏರ್ಪಡಿಸಬೇಕೆಂದರು. ಬಳಿಕ ದ. ಕ. ಜಿಲ್ಲಾ ಮುಸ್ಲಿಂ ಲೀಗಿನ ಸೆಕ್ರೆಟರಿಗಳಾದ ಶ್ರೀ. ಯು. ಹಮ್ಮಬ್ಬನವರು ಮಾತನಾಡುತ್ತಾ ಜನರು ಅಲ್ಲಸಲ್ಲದ ಸುದ್ದಿಗಳನ್ನು ಹರಡಿಸುತ್ತಿರುವರೆಂದೂ ಮುಸಲ್ಮಾನರು ಜಗಳ ಮಾಡಲು ಮನಸ್ಸು ಮಾಡಿಲ್ಲವೆಂದೂ ಈ ವಿಷಯದಲ್ಲಿ ಸರಿಯಾದ ಪ್ರಚಾರ ಮಾಡಬೇಕೆಂದೂ ಹೇಳಿದರು. ಬಳಿಕ ಶ್ರೀ. ಜಿನರಾಜ ಹೆಗ್ಡೆಯವರು ಮಾತನಾಡಿ ಮುಸ್ಲಿಂ ಲೀಗು, ಹಿಂದೂ ಮಹಾಸಭೆಗಳಂತಹ ಸಂಸ್ಥೆಗಳು ರಾಜಕೀಯ ಭಿನ್ನಾಭಿಪ್ರಾಯಗಳಿಟ್ಟುಕೊಂಡಿರಬಹುದಾದರೂ ಅದರ ಮುಖಂಡರು ಅನ್ಯೋನ್ಯ ಪ್ರೀತಿಯಿಂದಲೇ ಇದ್ದಾರೆಂದೂ ಆದ ಕಾರಣ, ಮುಸ್ಲಿಂ ಲೀಗು ಹಿಂದೂ ಮಹಾಸಭೆಗಳಂತಹ ಸಂಸ್ಥೆಗಳ ಬೆಳವಣಿಗೆಯಿಂದ ಜಾತೀಯ ಕಲಹವನ್ನು ಹುಟ್ಟಿಸುವ ಗೊಂದಲವೆಬ್ಬಿಸುವುದು ಸರಿಯಲ್ಲವೆಂದೂ ಹೇಳಿದರು. ಮತ್ತೆ ರಾವ್‌ಬಹದೂರ್ ಆನಂದರಾಯರು ಮಾತನಾಡಿದರು. ಶ್ರೀ. ಎಚ್. ಕೆ. ತಿಂಗಳಾಯರು ಮಾತನಾಡುತ್ತಾ ಮೊಗವೀರರು ಜಗಳ ಮಾಡಲು ಸಿದ್ಧತೆ ಮಾಡುತ್ತಿರುವರೆಂಬ ಸುದ್ದಿ ಸಂಪೂರ್ಣ ನಿರಾಧಾರವಾದುದೆಂದು ಹೇಳಿದರು. ಅದಕ್ಕಾಗಿ ಸಾರ್ವಜನಿಕ ಸಭೆ ಕರೆದು ಜನರಲ್ಲಿರುವ ಅಂತಹ ಅಪಪ್ರಚಾರವನ್ನು ತಡೆಯಬೇಕೆಂದರಲ್ಲದೆ ಮತ್ತೆ ಶ್ರೀ. ಅಬ್ದುಲ್ ರಹಿಮರು ಸ್ಫೂರ್ತಿಯುತವಾಗಿ ಮಾತನಾಡಿ ಜಾತಿಗಳೊಳಗೆ ಜಗಳವಾಗದಂತೆ ಜವಾಬ್ದಾರಿಯುಳ್ಳ ಮುಖಂಡರು ಮುಂದೆ ಬಂದು ಸರ್ವ ಯತ್ನಗಳನ್ನು ಮಾಡುವುದು ಅವಶ್ಯವೆಂದರು. ಆ ಬಳಿಕ ಹಿಂದೂ ಮುಸ್ಲಿಂ ಒಗ್ಗಟ್ಟಿನ ವಿಷಯವಾಗಿ ಶ್ರೀಗಳಾದ ಬಿ. ಶಿ. ಬಾಳಿಗ, ಎಸ್. ನಾಗರಾಜಯ್ಯ, ರಂಗನಾಥ ಪ್ರಭು, ಜಾರ್ಜ್ ಹರ್ಬರ್ಟ್, ಕುಂಞಮ್ಮ ಸಾಹೇಬ್, ಎಂ. ರಾಘವೇಂದ್ರಪೈ, ಎಂ. ವೆಂಕಟೇಶ ಪೈ ಇವರು ಭಾಷಣಗಳನ್ನು ಮಾಡಿದರು.

ಒಟ್ಟಿನಲ್ಲಿ ಎಲ್ಲಾ ಭಾಷಣ ಕರ್ತರೂ ಹೇಳಿದ ಅಭಿಪ್ರಾಯದ ಸಾರಾಂಶವೆಂದರೆ, ಮಂಗಳೂರಲ್ಲಿ ಹುಟ್ಟಿದ ಜಾತೀಯ ಕಲಹದ ಸುದ್ದಿಯು ಸಂಪೂರ್ಣ ನಿರಾಧಾರವಾದದ್ದೂ, ನಿಷ್ಕಾರಣವಾದುದೂ, ಜವಾಬ್ದಾರಿಯಿಲ್ಲದ ಜನರಿಂದ ಪ್ರಚಾರವಾಗುವಂತಹುದೂ ಆಗಿದ್ದು, ಅಂತಹ ವಿಷಯಗಳನ್ನು ಸಾರ್ವಜನಿಕರು ನಂಬತಕ್ಕದ್ದಲ್ಲವೆಂದೂ, ಎಲ್ಲಿಯಾದರೂ ಜಾತೀಯ ದಂಗೆಗಳು ಪುಂಡರಿಂದ ಮಾಡಲ್ಪಟ್ಟಲ್ಲಿ ಅದನ್ನು ಹಬ್ಬಗೊಡದೆ, ಕೂಡಲೇ ತಡೆಗಟ್ಟಬೇಕೆಂದೂ, ಯಾವುದೇ ಒಂದು ಜಾತಿಯವನಿಗೆ ಇನ್ನೊಂದು ಜಾತಿಯವನು ಹೊಡೆದರೆ, ತಪ್ಪು ಮಾಡಿದರೆ, ತಪ್ಪುಮಾಡಿರುವವನನ್ನು ಪೋಲೀಸರ ವಶ ಒಪ್ಪಿಸಲು ಸಹಾಯಮಾಡಬೇಕಲ್ಲದೆ, ಅದು ಜಾತೀಯ ಕಲಹವಾಗದಂತೆ ನೋಡಿಕೊಳ್ಳಬೇಕೆಂದೂ ಆಗಿದೆ. ಈ ಬಗ್ಗೆ ಸಭೆಯಲ್ಲಿ ಸೇರಿದ ಎಲ್ಲಾ ಜಾತಿಗಳ ಮುಖಂಡರು ಒಂದೇ ಅಭಿಪ್ರಾಯವುಳ್ಳವರಾಗಿ ಜಾತೀಯ ಕಲಹವಾಗದಂತೆ ಪ್ರಯತ್ನಮಾಡಲು ಸರ್ವ ಸಹಕಾರಗಳನ್ನೂ ಕೊಡಲು ಒಪ್ಪಿದ್ದಾರೆ. ಸಭೆಗೆ ಬಂದವರಲ್ಲಿ ಎಲ್ಲಾ ಜಾತಿಗಳವರೂ ಇದ್ದರು. ಕಾಂಗ್ರೆಸು, ಮುಸ್ಲಿಂ ಲೀಗು ಹಿಂದೂ ಮಹಾಸಭೆಗಳ ಮುಖಂಡರೂ ಇದ್ದರು. ಅವರೆಲ್ಲರೂ ಕೂಡಿ ಇಂತಹ ಇತ್ಯರ್ಥಕ್ಕೆ ಬಂದಿರುತ್ತಾರೆ. ನಗರದ ಶಾಂತಿಯು ಯಾವುದೇ ರೀತಿಯಿಂದ ಕೆಡಬಾರದೆಂದು ಅವರೆಲ್ಲರೂ ಹೃತ್ಪೂರ್ವಕವಾಗಿ ಹಾರೈಸುತ್ತಾರೆ.

ಈ ಕುರಿತು, ನಗರದಲ್ಲಿ ಶಾಂತಿಭಂಗವಾಗದಂತೆ ಯತ್ನಿಸುವ ಬಗ್ಗೆಯೂ, ಈಗ ಹರಡಿದ ಅಲ್ಲಸಲ್ಲದ ಸುದ್ದಿಗಳೂ ನಿರಾಧಾರವೂ ನಿಷ್ಕಾರಣವೂ ಆದುದೆಂದು ಸಾರ್ವಜನಿಕರಿಗೆ ತಿಳಿಸುವ ಬಗ್ಗೆಯೂ ಪ್ರಮುಖ ಸದ್ಗೃಹಸ್ಥರಿಂದ ಕೂಡಿದ ಒಂದು ಕಮಿಟಿಯು ಏರ್ಪಟ್ಟು ಅವರು ಕರಪತ್ರಗಳನ್ನು ಹಂಚುವುದರ ಮೂಲಕ, ಹಾಗೂ ಅಲ್ಲಲ್ಲಿ ಜನರಿಗೆ ತಿಳಿಯಹೇಳುವುದರಿಂದ ಕೂಡಲೇ ಶಾಂತಿಯತ್ನವನ್ನು ಮಾಡಬೇಕಾಗಿ ನಿರ್ಣಯವಾಯಿತು. ಈ ಕಮಿಟಿಯಲ್ಲಿ ಶ್ರೀಗಳಾದ ಡಾ। ಕೆ. ವಿಟ್ಠಲ ಶೆಟ್ಟಿ, ಕುಂಞಮ್ಮ ಸಾಹೇಬ್, ಹಸನ್ ಸಾಹೇಬ್, ಶಮ್ಶಾದ್ ಸಾಹೇಬ್, ಬಿ. ವಿ. ಬಾಳಿಗ, ಕೆ. ಆರ್. ಆಚಾರ್, ಎಸ್. ಎಸ್. ಸುವರ್ಣ, ಎಚ್. ಕೆ. ತಿಂಗಳಾಯ, ಎಂ. ವೆಂಕಟೇಶ ಪೈ, ಡಾ। ಎಚ್. ವಿ. ಆಚಪ್ಪ ಮೊದಲಾದ ಸುಮಾರು ನಾಲ್ವತ್ತು ಮಂದಿ ಮೆಂಬರರು ಇದ್ದಾರೆ.

ಕಯ್ಯೂರು ಪ್ರಕರಣದಲ್ಲಿ ಡಿ। ಬೋ। ಸದಸ್ಯರ ವಿಚಾರಣಾ ಸಮಿತಿ

ನೊಮಲು ತಿಳಿದಂತೆ ಕಯ್ಯೂರಿನಲ್ಲಿ ಮಲಬಾರ್ ಸ್ಪೆಶಲ್ ಪೋಲೀಸಿನವರ ಆಪಾತದ ವಿಷಯವಾಗಿ ಜನರಲ್ಲಿ ಹರಡಿರುವ ಭೀತಿಯ ಸುದ್ದಿಯ ವಿಷಯ ವಿಚಾರ ಮಾಡುವರೆ ಡಿ। ಬೋ। ಪ್ರೆಸಿಡೆಂಟರು ಹಾಗೂ ಇತರ ಸದಸ್ಯರು ಮತ್ತು ಶ್ರೀಗಳಾದ ಜಿನರಾಜ ಹೆಗ್ಡೆ, ಎಂ. ಎಲ್. ಎ. (ಕೇಂದ್ರ) ಅಮ್ಮೆಂಬಳ ಶ್ರೀನಿವಾಸ ಪೈ, ಮೊದಲಾದವರಿಂದ ಕೂಡಿದ ವಿಚಾರಣಾ ಸಮಿತಿಯು ಅಲ್ಲಿನ ಆಸುಪಾಸುಗಳಿಗೆ ಹೋಗಿ ಹಲವರಿಂದ ಲಿಖಿತ ಹೇಳಿಕೆಗಳನ್ನು ಪಡಕೊಂಡು ಮರಳಿ ಬಂದಿರುವುದಾಗಿ ತಿಳಿದು ಬರುತ್ತದೆ.

ಸ್ವದೇಶಾಭಿಮಾನಿ

ತಾರೀಕು 28—5—1941

ಸಿಮ್ಲದ ಸುದ್ದಿ

ಯೂರೋಪಿನ ಯುದ್ಧವು ಭಾರತದ ಹತ್ತಿರ ಹತ್ತಿರ ಬರುತ್ತಲಿದೆ. ಭಾರತ ಸರಕಾರವಾದರೂ ತಟಸ್ಥವಾಗಿರಲು ಸಾಧ್ಯವಿಲ್ಲ. ಭಾರತದ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಸುಮ್ಮಗಿರುವುದು ಉಚಿತವಾಗುವುದಿಲ್ಲ. ಇರಾಕಿನಲ್ಲಿ ಸಿಡಿವ ಗುಂಡುಗಳಿಂದ ಭಾರತದಲ್ಲಿ ಕಾವು ಹುಟ್ಟದಿರದು. ಇದರಿಂದ ಸಿಮ್ಲದಲ್ಲಿ ವಿಚಾರವಾಹಿನಿಗಳುಂಟಾಗುವುದು ತೀರಾ ಸಂಭವವೆನ್ನಲು ಅಡ್ಡಿಯಿಲ್ಲ. ಭಾರತದ ಬಿಕ್ಕಟ್ಟು ಬಗೆಹರಿಯಬೇಕೆಂದು ಮುಖಂಡರು ಯತ್ನಮಾಡುವುದರೊಡನೆ, ಲಂಡನ್ ಟೈಮ್ಸ್ ಮೊದಲಾದ ಪತ್ರಿಕೆಗಳು ಅದೇ ಕೂಗೆಬ್ಬಿಸಿವೆ. ಮತ್ತೆ ಬಂಗಾಳದ ಪ್ರಧಾನರಾದ ಹಕ್ಕರು ವೈಸರಾಯರನ್ನು ಕಂಡು ಸಂಧಿಯ ಸಾಹಸ ಮಾಡುತ್ತಿದ್ದಾರೆ.

ಭಾರತದ ರಾಜಕೀಯದ ಬಗ್ಗೆ ಸಿಮ್ಲಾದಲ್ಲಿ ಅನೇಕ ವಿಧದ ಊಹಾಪೋಹಗಳುಂಟಾಗಿವೆಯೆಂದು ಪತ್ರಿಕೆಗಳಲ್ಲಿ ಸುದ್ದಿ ಬರುತ್ತಿದೆ. ಬಿಕ್ಕಟ್ಟನ್ನು ಬಗೆಹರಿಸಲು ವೈಸರಾಯರು ತಟಸ್ಥರಾಗಿರುವರೇ, ಮತ್ತೇನಾದರೂ ಕೆಲಸವನ್ನು ಮಾಡುವರೇ ಎಂದು ಎಲ್ಲರೂ ಕುತೂಹಲಗೊಂಡಿದ್ದಾರೆ. ಅಮೇರಿಯವರ ಭಾಷಣದಿಂದ ಭಾರತದ ರಾಜಕೀಯ ರಂಗದಲ್ಲಿ ಎಷ್ಟರ ಮಟ್ಟಿಗೆ ಅಸಂತುಷ್ಟಿಯುಂಟಾಗಿದೆಯೆಂಬುದನ್ನು ಇಷ್ಟರಲ್ಲಿಯೇ ವೈಸರಾಯರು ಮನವರಿಕೆ ಮಾಡಿಕೊಂಡಿರಬಹುದು, ಅಂತೆಯೇ ಪಾರ್ಲಿಮೆಂಟಿಗೆ ತಿಳಿಸಿರಬಹುದೆಂದು ಹಲವರು ಅಭಿಪ್ರಾಯ ಪಡುತ್ತಾರೆ.

ಮುಂಬಯಿ ಪರಿಷತ್ತಿನ ಮುಖಂಡರು ವೈಸರಾಯರನ್ನು ಭೇಟಿಯಾದಾಗ ಅವರೊಡನೆ ಆಶಾದಾಯಕವಾದ ಉತ್ತರವಿತ್ತಿರುವರೆಂದು ತಿಳಿದುಬಂದಿದೆ. ಆ ಮಧ್ಯೆ ಭಾರತದ ಮಂತ್ರಿಗಳ ಭಾಷಣವಾಗಿ ರಾಜಕೀಯ ಕ್ಷೇತ್ರದಲ್ಲಿ ತೀರಾ ಅಸಂತುಷ್ಟಿ ಹೆಚ್ಚಿದರೂ ವೈಸರಾಯರು ಹಕ್ಕರೇ ಮೊದಲಾದವರನ್ನು ಕರೆಸಿ ಈಗ ಮಾತುಕತೆ ನಡೆಸುತ್ತಿರುವರು. ಇನ್ನೂ ಹಲವು ಮುಖಂಡರನ್ನು ವೈಸರಾಯರು ಬೇಗನೇ ಕಂಡು ಮಾತನಾಡಬಹುದೆಂದು ವದಂತಿಯಿದೆ. ಮಾತ್ರವಲ್ಲದೆ, ವೈಸರಾಯರು ಭಾರತ ಮಂತ್ರಿಗಳಿಗೆ ಇಲ್ಲಿನ ಪರಿಸ್ಥಿತಿಯ ಬಗ್ಗೆ ಒಂದು ಪತ್ರ ಬರೆದು, ಅದರ ಪರಿಣಾಮವಾಗ, ಇಂಗ್ಲೆಂಡಿನಿಂದ ಒಂದು ಪಾರ್ಲಿಮೆಂಟರಿ ಶಿಷ್ಟ ಮಂಡಳಿವು ಭಾರತಕ್ಕೆ ಬರಬಹುದಾಗಿಯೂ ಕೆಲವರು ಅಭಿಪ್ರಾಯ ಪಡುತ್ತಿದ್ದಾರೆ.

ಸತ್ಯಾಗ್ರಹ ಆಂದೋಲನದ ವಿಷಯದಲ್ಲಿಯಾದರೂ ಸರಕಾರವು ಕಠೋರ ನೀತಿಯನ್ನು ಕೈಕೊಂಡಿರುವುದಿಲ್ಲ. ಕೆಲವು ಪ್ರಾಂತಗಳಲ್ಲಿ ಸತ್ಯಾಗ್ರಹಿಗಳನ್ನು ಬಿಟ್ಟುಬಿಡುವ ಯೋಚನೆಯಿದೆಯೆಂದು ತಿಳಿದುಬರುತ್ತದೆ. ಇದರಿಂದ ಭಾರತದಲ್ಲಿ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬೇಕೆಂದು ವೈಸರಾಯರಿಗೆ ಸಂಕಲ್ಪವಿದ್ದಂತೆ ತೋರುತ್ತದೆಯೆಂದು ಅಭಿಪ್ರಾಯ ಮಾಡಲು ಅವಕಾಶವಿರುತ್ತದೆ.

ಬಂಗಾಳದ ಹಕ್ಕರು ವೈಸರಾಯರನ್ನು ಕಂಡು ಮಾತನಾಡಿದ ವಿಷಯವು ಎಲ್ಲದಕ್ಕಿಂತಲೂ ಪ್ರಾಮುಖ್ಯವಾಗಿದೆ. ಭಾರತದ ಬಿಕ್ಕಟ್ಟನ್ನು ಬಗೆಹರಿಸಲು ತಾನು ಸರ್ವಸಾಹಸಗಳಿಂದ ಯತ್ನಿಸುವುದಾಗಿ ಅವರೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಭಾರತದ ಮುಂದಿನ ರಾಜ್ಯಾಂಗ ಘಟನೆಯು ಎಲ್ಲಾ ಜಾತಿಗಳೊಳಗೆ ಅನ್ಯೋನ್ಯ ಸ್ನೇಹಸೌಹಾರ್ದಗಳಿಂದ ಆಗಬೇಕೆಂದು ಅವರು ಬಯಸುತ್ತಾರೆ. ಇದರಿಂದ ಜಿನ್ನರ ಪಾಕಿಸ್ತಾನ ಕೂಗಿಗೆ ವಿಶೇಷವಾಗಿ ಯಾರೂ ಬೆಲೆ ಕೊಡುವಂತೆ ಕಂಡುಬರುವುದಿಲ್ಲ. ಮುಖ್ಯ ಮಂತ್ರಿಗಳ ಪರಿಷತ್ತೊಂದನ್ನು ಕರೆಯಬೇಕೆಂದು ಸಿಕಂದರರು ಸೂಚನೆಯಿತ್ತಿದ್ದಾರೆ. ಮುಖ್ಯ ಮಂತ್ರಿಗಳು ವಿಚಾರ ವಿನಿಮಯ ಮಾಡಿ ಕೇಂದ್ರದಲ್ಲಿ ಬಲವಾದ ರಾಷ್ಟ್ರೀಯ ಸರಕಾರವೊಂದನ್ನು ಸ್ಥಾಪಿಸುವ ಪ್ರಯತ್ನಕ್ಕೆ ಎಲ್ಲರೂ ಈಗ ಸಮ್ಮತಿಸಿದಂತೆ ತೋರುತ್ತದೆ. ಕಾಂಗ್ರೆಸಾದರೂ ಈ ಅಭಿಪ್ರಾಯವನ್ನು ಮೊದಲಿಂದಲೇ ಸಾರುತ್ತಿತ್ತು. ಭಾರತೀಯರ ಕೈಯಲ್ಲಿ ಸಂರಕ್ಷಣೆ ಮತ್ತು ಆರ್ಥಿಕ ಖಾತೆಗಳ ಅಧಿಕಾರವನ್ನು ವಹಿಸಿಕೊಡುವುದರಿಂದ ಯುದ್ಧಯತ್ನಕ್ಕೆ ಹೆಚ್ಚಿನ ಸಹಾಯವೂ ದೊರಕುವುದಲ್ಲದೆ ಭಾರತದ ಜನಮತವೂ ಬೆಂಬಲವೀಯಲು ಆಸ್ಪದವುಂಟೆಂದು ವಿಚಾರಿಸಬೇಕಾಗಿದೆ.

ಇಂತಹ ವಿಚಾರವಾಹಿನಿಗಳು ಇಂದು ಸಿಮ್ಲಾದಲ್ಲಿ ಹುಟ್ಟಿ ಹರಡಿವೆಯೆಂದು ಸುದ್ದಿಗಳು ಬರುತ್ತಿವೆ.

ಮೈಸೂರು ದಿವಾನರು

ಕಳೆದ ಹದಿನೈದು ವರ್ಷಗಳಿಂದ ದಿವಾನರಾಗಿ ಹೆಸರು ಪಡೆದ ಸರ್ ಮಿರ್ಜಾ ಇಸ್ಮಾಯಿಲರು ರಾಜಕೀಯ ಭಿನ್ನಾಭಿಪ್ರಾಯದ ನಿಮಿತ್ತವಾಗಿ ತಮ್ಮ ಅಧಿಕಾರದ ಅವಧಿಯು ಮುಗಿಯುವ ಮೊದಲೇ ನಿವೃತ್ತರಾಗುವರೆಂಬ ಸುದ್ದಿಯನ್ನು ಕೇಳಿ ಎಲ್ಲೆಡೆಗಳಲ್ಲಿಯೂ ಬಹಳ ಕಳವಳವುಂಟಾಗಿತ್ತು. ಆದರೆ, ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ಯಾವಾಗಲೂ ಬರಲಿಕ್ಕೆ ಆಸ್ಪದವಿರಲು, ಅಂತಹ ಭಿನ್ನಾಭಿಪ್ರಾಯಗಳಿಂದ ಸರ್ ಮಿರ್ಜಾ ಇಸ್ಮಾಯಿಲರು ನಿವೃತ್ತರಾಗುವ ಸಂದರ್ಭದಲ್ಲಿಯೂ ಮೈಸೂರಿನ ಏಳಿಗೆಗೆ ಅವರ ಈ ತೆರದ ಅಧಿಕಾರ ನಿವೃತ್ತಿಯು ಯಾವುದೇ ರೀತಿಯಿಂದ ಆತಂಕ ತಂದೊಡ್ಡುವಂತಹುದಾಗಲಾರದೆಂದು ನಾವು ಭರವಸೆಪಡಬೇಕಾಗಿದೆ.

ಹೊಸ ದಿವಾನರಾಗಿ ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಶ್ರೀ. ಮಾಧವರಾಯರು ನೇಮಕ ಹೊಂದಿದ್ದಾರೆಯೆಂಬುದು ತುಂಬಾ ಸಂತೋಷದ ಸುದ್ದಿಯಿದೆ. ಯಾರೋ ಒಬ್ಬ ಐರೋಪ್ಯರನ್ನು ಮತ್ತು ಸರ್ ಷಣ್ಮುಖಂ ಚೆಟ್ಟಿಯವರನ್ನು, ಹೀಗೆ ಮೈಸೂರಿನ ಮಾಹಿತಿಯಿಲ್ಲದ ಹೊರಗಿನ ಯಾರನ್ನೋ ತಂದು ಅಧಿಕಾರದಲ್ಲಿ ಏರಿಸುವರೆಂಬ ಅಂಜಿಕೆಯಿದ್ದಿರುವಾಗ, ಮೈಸೂರಲ್ಲಿ ಅಧಿಕಾರದಲ್ಲಿದ್ದು ಜನಪ್ರಿಯರೇ ಆಗಿರುವ ಕನ್ನಡಿಗರಾದ ಶ್ರೀ. ಮಾಧವ ರಾಯರನ್ನು ದಿವಾನ ಪದವಿಗೇರಿಸಿದ್ದು ಸರ್ವಥಾ ಉಚಿತವೆನಿಸದಿರಲಾರದು.

ಸರ್ ಮಿರ್ಜಾ ಇಸ್ಮಾಯಿಲರು ರಾಜಕೀಯವೊಂದನ್ನುಳಿದು ಮಿಕ್ಕೆಲ್ಲಾ ವಿಷಯಗಳಲ್ಲಿ ಜನಪ್ರಿಯರಾದ ದಿವಾನರಾಗಿದ್ದರೆನ್ನಲು ಯಾವ ಅಡ್ಡಿಯೂ ಇಲ್ಲ. ಮೈಸೂರನ್ನು ಸರ್ವ ವಿಧದಿಂದಲೂ ಮಾದರಿಯ ಸಂಸ್ಥಾನವನ್ನಾಗಿ ಮಾಡಬೇಕೆಂದು ಅವರು ನಿರಂತರ ಸಾಹಸಪಡುತ್ತಿದ್ದ ವಿಷಯವು ಎಲ್ಲರಿಗೂ ತಿಳಿದುದೇ ಆಗಿದೆ. ಆದರೆ ಮೈಸೂರು ಕಾಂಗ್ರೆಸಿನ ವಿಚಾರದಲ್ಲಿ, ರಾಜಕೀಯದಲ್ಲಿ ಅವರು ವಹಿಸಿದ ಧೋರಣೆಯು ಅಖಿಲ ಭಾರತದ ನಿಂದೆಗೆ ಗುರಿಯಾಗಿದೆಯೆಂದು ಮಾತ್ರ ವಿಷಾದದಿಂದ ಹೇಳಬೇಕಾಗಿದೆ.

ಇಂದಿನ ಹೊಸ ದಿವಾನರ ಮುಂದೆ ಹಿಂದಿನ ದಿವಾನರ ಕಾರ್ಯಗಳು ಮಾದರಿಯಾಗಿ ಇರಬೇಕಾಗಿದೆ. ಅವರಲ್ಲಿರುವ ಒಳಿತು ಕೆಡುಕುಗಳನ್ನು ಚನ್ನಾಗಿ ಪರಿಶೀಲಿಸಲು ಈಗ ಆಸ್ಪದವಿದೆ. ಇವರ ದಿವಾನಗಿರಿಯಲ್ಲಿ ಪ್ರಜೆಗಳಿಗೆ ಸರಕಾರದೊಡನೆ ಇನ್ನಷ್ಟು ಮಧುರ ಸಂಬಂಧವುಂಟಾಗಿ ಮೈಸೂರಿನ ಕೀರ್ತಿ ಬೆಳಗುವಂತಾಗಲಿ ಎಂದು ನಾವು ಹಾರೈಸುತ್ತೇವೆ.

THE
Canara Banking Corporation Limited
(In corporated in British India)
ESTD: 1906
HEAD OFFICE: **UDIPI**, *South Kanara.*

SEASON DEPOSITS

ARE now accepted at all our Offices at the following rates of interest:

2 & 3 months	... ...	3% p. a.
4 & 5 „	... ...	3½% p. a.

These deposits will not be allowed to run beyond September 1941.

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲ್ಲಾಲ, ಶಿವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಹೆಸ್ಸನ ಪಲಾಯನದ ಗುಟ್ಟೇನು?

ಹಿಟ್ಲರ್—ಹೆಸ್ಸರಿಗೆ ಮತಭೇದವೆಲ್ಲಿ?

ಜರ್ಮನಿಯಲ್ಲಿ ಹಿಟ್ಲರನ ಅನಂತರ ಪ್ರಸಿದ್ಧನೂ ಜನಪ್ರಿಯನೂ ಆದ ಮುಖಂಡನೆನಿಸಿದ, ಹಿಟ್ಲರನ ಉತ್ತರಾಧಿಕಾರಿಯಾಗಿ ನಿಯುಕ್ತನಾದ ಹೆಸ್ಸನು ಅಲ್ಲಿಂದ ಪಲಾಯನ ಮಾಡಿ ಇಂಗ್ಲೆಂಡಿಗೆ ಬಂದಿಳಿದು, ಬ್ರಿಟಿಷರ ಕೈಸೆರೆ ಸಿಲುಕಿರುವ ವಾರ್ತೆ ಅತ್ಯಂತ ಆಶ್ಚರ್ಯಜನಕವೂ ಕುತೂಹಲಾತ್ಮಕವೂ ಆಗಿದೆ. ಆತನು ಇಂಗ್ಲೆಂಡಿಗೆ ಯಾತಕ್ಕಾಗಿ ಬಂದನು? ಪ್ರಪಂಚ ಯುದ್ಧದ ಈ ವಿಷಮ ಸಂಧಿಕಾಲದಲ್ಲಿ ಹೆಸ್ಸನ ಪಲಾಯನದಿಂದ ಏನಾದರೂ ಪರಿಣಾಮವಿಲ್ಲವೆ? ಹೆಸ್ಸನನ್ನು ಕಳಕೊಂಡು ಜರ್ಮನಿ ನಷ್ಟ ಹೊಂದಿ ಕೈಸೆರೆ ಹಿಡಕೊಂಡು ಬ್ರಿಟಿಷರಿಗೆ ಲಾಭವುಂಟೆ? ಎಂಬೀ ವಿಚಾರಗಳು ಪ್ರತಿಯೊಬ್ಬನನ್ನೂ ಇಂದು ಯೋಚನೆಗೀಡುಮಾಡಿವೆ.

ಹೆಸ್ಸನು ಯಾರು?

೧೮೯೪ನೆಯ ಇಸವಿಯಲ್ಲಿ ಹೆಸ್ಸನು ಅಲೆಗ್ಸಾಂಡ್ರಿಯಾದಲ್ಲಿ ಜನ್ಮವೆತ್ತಿದನು. ಅಲ್ಲಿಯೇ ಆತನ ಶಿಕ್ಷಣವೂ ನಡೆಯಿತು. ಕೆಲಕಾಲದ ಮೇಲೆ ಆತನು ಜರ್ಮನಿಗೆ ಬಂದನು. ಕಳೆದ ಮಹಾಯುದ್ಧದಲ್ಲಿ ದುಡಿದನು. ಯುದ್ಧವು ಮುಗಿದ ಬಳಿಕ, ಜರ್ಮನಿಯಲ್ಲಿ ನಾಜೀ ಪಕ್ಷವನ್ನು ಸ್ಥಾಪಿಸಲು ಬಹಳವಾಗಿ ಪ್ರಯತ್ನಪಟ್ಟನು. ಹಿಟ್ಲರನಲ್ಲಿ ಹೆಸ್ಸನಿಗೆ ಅತ್ಯಂತ ಭಕ್ತಿ ವಿಶ್ವಾಸಗಳಿದ್ದವು. ಆತನನ್ನು ನೆರಳಿನಂತೆ ಬೆನ್ನು ಬಿಡುತ್ತಿರಲಿಲ್ಲ. ೧೯೨೦ರಲ್ಲಿ ಹಿಟ್ಲರನ ಕಾರ್ಯದರ್ಶಿಯಾಗಿದ್ದನು. ಹಿಟ್ಲರನೊಡನೆ ಸೆರೆಮನೆಯಲ್ಲಿಯೂ ಸೇರಿ ಕಷ್ಟಪಟ್ಟಿದ್ದನು. ಹಿಟ್ಲರನ ಆತ್ಮಚರಿತೆಯನ್ನು ಬರೆವುದರಲ್ಲಿ ಆತನಿಗೆ ನೆರವಾಗಿದ್ದನು. ಜರ್ಮನಿಯಲ್ಲೆಲ್ಲಾ ಸಂಚಾರ ಮಾಡಿ ನಾಜೀ ಪಕ್ಷವನ್ನು ಸ್ಥಾಪಿಸಲು ಹೆಣಗಾಡಿದ್ದನು. ಹೆಸ್ಸನು ಆಡಂಬರವಿಲ್ಲದೆ ಬಹಳ ಚುರುಕಾಗಿ ಕೆಲಸಮಾಡುವವನು. ನಾಜೀ ಪಕ್ಷದ ಮುಖ್ಯಾಧಿಕಾರಿಯನ್ನಾಗಿ ಹೆಸ್ಸನನ್ನು ೧೯೩೨ರಲ್ಲಿ ನೇಮಿಸಲಾಯಿತು. ಹಿಟ್ಲರನು ಅಧಿಕಾರಕ್ಕೆ ಬಂದ ಮೇಲೆ (೧೯೩೩) ಹೆಸ್ಸನು ಜರ್ಮನ್ ಸರಕಾರದ ಮಂತ್ರಿಗಳಲ್ಲೊಬ್ಬನಾದನು. ಹೆಸ್ಸನಿಗೆ ಸರಕಾರೀ ಕೆಲಸಕ್ಕಿಂತ ಹಿಟ್ಲರನ ಕೆಲಸವೇ ಬಹಳವಿತ್ತು. ಹಿಟ್ಲರನ ಗುಟ್ಟೆಲ್ಲ ಹೆಸ್ಸನಿಗೆ ಗೊತ್ತಿತ್ತು. ಹಿಟ್ಲರನು ಆದ್ದರಿಂದಲೇ ಹೆಸ್ಸನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ್ದನು.

ಇಂಗ್ಲೆಂಡಿಗೆ ಬಂದ ಕಾರಣ

ಇಂತಹ ಅಚಲ ನಾಜೀ ಭಕ್ತ ಹಿಟ್ಲರ್ ಸೇವಕನು ಜರ್ಮನಿಯನ್ನು ಬಿಟ್ಟು ಇಂಗ್ಲೆಂಡಿಗೆ ಬಂದನೇಕೆ ಎಂಬುದು ಬಹಳ ಆಶ್ಚರ್ಯದ ವಿಷಯವಲ್ಲವೆ? ಈಗಾಗಲೇ ಈ ವಿಷಯದಲ್ಲಿ ಅನೇಕ ಊಹಾಪೋಹೆಗಳು ಎದ್ದಿವೆ. ಅನೇಕರು ಅನೇಕ ಕಾರಣಗಳನ್ನು ಹೇಳುತ್ತಿದ್ದಾರೆ. ಹೆಸ್ಸನ ತಲೆಕೆಟ್ಟಿತ್ತೆಂದೂ, ಆತನು ಯಾರ ಮಾತೂ ಕೇಳದೆ ವಿಮಾನ ಕೊಂಡೊಯ್ಯಲು ಆದರಿಂದ ಜಾರಿಬಿದ್ದನೆಂದು ಜರ್ಮನರು ಸಾರಿದ್ದಾರೆ. ಆದರೆ ಹೆಸ್ಸನ ತಲೆಕೆಟ್ಟಿಲ್ಲವೆಂದೂ, ನಾಜೀ ಮುಖಂಡರಲ್ಲಿ ಅಂತಃಕಲಹಗಳೆದ್ದ ಕಾರಣ ಹೆಸ್ಸನು ಓಡಿಬಂದನೆಂದೂ ಬ್ರಿಟಿಷರು ಅಭಿಪ್ರಾಯಪಡುತ್ತಾರೆ. ಕೆಲವರು ಇದು ಬಹಳ ಆಕಸ್ಮಿಕ ಘಟನೆಯೆನ್ನುತ್ತಾರೆ. ಆದರೂ ನಾವೀ ವಿಚಾರಗಳನ್ನು ವಿಮರ್ಶಿಸಬೇಕಾಗಿದೆ.

ಹೆಸ್ಸನಿಗೆ ಹುಚ್ಚು ಹಿಡಿದಿಲ್ಲವೆಂದು ಡಾಕ್ಟರರು ಪರೀಕ್ಷೆಮಾಡಿ ಹೇಳುತ್ತಾರೆ. ಮಾತ್ರವಲ್ಲದೆ ಒಂದು ವಾರದ ಹಿಂದೆ ಸ್ಪೈನಿಗೆ ಹೋಗಿ ಆತನು ಹಿಟ್ಲರನ ಕಾರಭಾರ ಮಾಡಿ ಬಂದವನಿಗೆ ಈ ವಾರವೇ ಹುಚ್ಚು ಹಿಡಿದಿದೆಯೆನ್ನಲಾಗುವುದಿಲ್ಲ. ಅದುವಲ್ಲದೆ ಹುಚ್ಚು ಹಿಡಿದವನು ಒಂದೇ ದಿನದಲ್ಲಿ ೭೦೦ ಮೈಲುಗಳಿಂದ ಮಿಕ್ಕಿ ವಿಮಾನವೇರಿ ಹಾರಿಬರುವುದೂ ಸಾಧ್ಯವಿಲ್ಲ. ಡ್ಯೂಕ್ ಆಫ್ ಹೆಮಿಲ್ಟನರೊಡನೆ ಕೆಲದಿನಗಳಿಂದ ನಡೆಸಿದ ಪತ್ರವ್ಯವಹಾರಗಳ ಮೂಲಕ ಆವನಿಗೆ ಪ್ರಾಮುಖ್ಯ ರಾಜಕೀಯ ಕೆಲಸವಿತ್ತೆಂದು ತಿಳಿಯಲು ಆಧಾರವಿದೆ. ಆದರೆ ಜರ್ಮನಿ ಬ್ರಿಟನುಗಳೊಡನೆ ರಾಜಿಮಾಡಲು ಹೆಸ್ಸನು ಬಂದಿರುವುದಾಗಿ ಊಹಿಸಲು ಆಗುವುದಿಲ್ಲ. ಏಕೆಂದರೆ ಹೆಸ್ಸನಂತಹ ಪ್ರಾಮುಖ್ಯ ವ್ಯಕ್ತಿಯು ರಾಜಿಗಾಗಿ ಬರುವುದಿದ್ದರೆ ಹೀಗೆ ಓಡಿಬರಬೇಕಾದ ಅವಶ್ಯಕತೆಯೇ ಇಲ್ಲ. ಅದುವಲ್ಲದೆ ಜರ್ಮನಿಯಲ್ಲಿ ರಾಜಿಯ ಸಿದ್ಧತೆಗಳೇನೂ ಕಂಡುಬರುವುದಿಲ್ಲ.

ಹಿಟ್ಲರನೊಡನೆ ಅಂತಃಕಲಹವೆ?

ಹೆಸ್ಸನಿಗೆ ಹಿಟ್ಲರನೊಡನೆ ಅಂತಃಕಲಹವೆದ್ದು ಆತನು ಅಲ್ಲಿಂದ ಓಡಿಬಂದಿರುವನೇ ಎಂದೂ ಊಹಿಸಲು ಅಸ್ಪದವಿದೆ. ಹಿಟ್ಲರನು ನಾಜಿ ತತ್ವಗಳ ಮೂಲ ತತ್ವಗಳಿಗೆ ವಿರುದ್ಧವಾಗಿ ನಡೆಯುವುದರಿಂದ ತಾನು ಅವನಿಂದ ಬೇರೆಯಾಗಬೇಕಾಯಿತೆಂದು ಹೆಸ್ಸನು ಜರ್ಮನಿಯಲ್ಲಿ ಬಿಟ್ಟ ಪತ್ರವೊಂದರಲ್ಲಿ ಬರೆದಿರುವನಂತೆ. ಇವುಗಳ ವಿಷಯ ಸ್ಪಷ್ಟೀಕರಣವೇನೂ ತಿಳಿದು ಬಂದಿಲ್ಲ. ಕಳೆದ ವಾರ ರಶ್ಯದಲ್ಲಿಯೂ ಬಹಳ ಬದಲಾವಣೆಯಾಯಿತು. ಮುಖ್ಯಮಂತ್ರಿ ಮೊಲೊಟೋವನ ಬದಲು ಸ್ಟಾಲಿನನೇ ಅಧಿಕಾರ ವಹಿಸಿದ್ದಾನೆ. ರಶ್ಯ-ಜರ್ಮನಿಗಳ ಸಂಬಂಧದಲ್ಲಿ ಹಿಟ್ಲರ ಹೆಸ್ಸರಿಗೆ ಮತಭೇದವಿದ್ದಿರಬಹುದೇ? ಸ್ಟಾಲಿನ್ ಮೊಲಟೋವರಿಗೆ ಮತಭೇದವಿದ್ದಿರಬಹುದೆ? ಇಂತಹ ಸಹಕಾರವು ಅನ್ಯೋನ್ಯ ತತ್ವಗಳಿಗೆ ಸಮರ್ಪಕವಾಗಿಲ್ಲವೆ? ಇಂತಹ ಸಂದರ್ಭದಲ್ಲಿ ಹಿಟ್ಲರನೊಡನೆ ಭಿನ್ನಾಭಿಪ್ರಾಯಮಾಡಿ ಬದುಕಿ ಜರ್ಮನಿಯಲ್ಲಿರಲು ಸಾಧ್ಯವಿಲ್ಲವೆಂದು ಹೆಸ್ಸನು ಓಡಿಬಂದಿರಬಹುದೆ?

ಆದರೆ ಇದರಿಂದ ಜರ್ಮನಿಗೆ ಮಹತ್ವದ ನಷ್ಟವೊದಗಿದರೂ, ಬ್ರಿಟಿಷರಿಗೆ ಅತ್ಯಂತ ಶ್ರೇಷ್ಠವಾದ ಪರಿಣಾಮವೇನೂ ಕಂಡುಬರುವುದಿಲ್ಲ. ಇಂದಿನ ಯುದ್ಧದಲ್ಲಿ ಹೆಸ್ಸನ ಪಲಾಯನವು ಯಾವ ಪರಿಣಾಮವನ್ನು ಹುಟ್ಟಿಸುವಂತೆ ತೋರುವುದಿಲ್ಲ.

ಈ ಸ್ಟಾಂಪುಗಳು

ಹಣ ಉಳಿಸಲು ನಿಮಗೆ ಸಹಾಯ ಮಾಡುವುವು.

ಯಾವುದಾದರೊಂದು ಪೋಸ್ಟಾಫೀಸಿನಲ್ಲಿ ಸೇವಿಂಗ್ಸ್ ಕಾರ್ಡ್ ಕೇಳಿ ತೆಗೆದುಕೊಳ್ಳಿ. ಅದರ ಮೇಲೆ ೪ ಆಣೆ, ೮ ಆಣೆ ಅಥವಾ ೧ ರೂಪಾಯಿನ ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪುಗಳನ್ನು ಅಂಟಿಸಿರಿ.

ನಿಮ್ಮ ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆಯ ಸ್ಟಾಂಪುಗಳು ಅಂಟಿಸಲ್ಪಟ್ಟಮೇಲೆ ಆಕಾರ್ಡನ್ನು ಪೋಸ್ಟಾಫೀಸಿನಲ್ಲಿ ಕೊಟ್ಟು ಅದರ ಬದಲು ಒಂದು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಿ. ಅದು ಹತ್ತು ವರ್ಷಗಳಲ್ಲಿ ರೂ. ೧೪|| ಬೆಲೆಯುಳ್ಳದ್ದಾಗುತ್ತದೆ.

ನೀವು ಕೇಳಿದಾಗ ಹಣವನ್ನೂ ಆ ವರೆಗಿನ ಬಡ್ಡಿಯನ್ನೂ ಸೇರಿಸಿ ಹಿಂದಕ್ಕೆ ಕೊಡಲಾಗುವುದು.

ರಕ್ಷಣೆಗಾಗಿ ಉಳಿಸಿರಿ

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳು ನಿಯಮಗಳನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲವೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದ್ದುದರಿಂದಲೂ, ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಅದುದರಿಂದ ಬೆಳೆಯುವ ಮುಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

೪ ಸೇರಿಗೆ ರೂ. ೪



ಅಧ್ಯಕ್ಷ ಡಾ| ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್: ಮಾ ಕಂಪೆನಿ, ಹಂಪನಕಟ್ಟಾ, ಮಂಗಳೂರು.

ಈ ವಾರದ ಕತೆ:

ಬಂಧು ಪ್ರೇಮ!

ಕತೆಗಾರ: ದುರ್ಗಾ ತನಯ; ಕಾಸರಗೋಡು

ನಾನು ನೆರೆಮನೆಯ ಶಾಂತಳಲ್ಲಿ ಚಿಕ್ಕಂದಿನಿಂದಲೂ ಸಹೋದರೀ ಪ್ರೇಮವನ್ನು ಬೆಳೆಸಿದ್ದೆ; ಕೊನೆಗೆ ನಮ್ಮ ಸಾರುವಿಕೆಯು ಮತ್ತಷ್ಟು ಸಮೀಪವಾಯಿತು. ಇದರಿಂದ ನಮ್ಮ ಅವ್ಯಾಜ್ಯ ಪ್ರೇಮವು ಇನ್ನಷ್ಟು ವಿಪರೀತವಾಗಿ ಮೇರೆ ಮೀರಿ ಬೆಳೆಯಿತು. ಹಿಂದೆ ಸಲಿಗೆಯಿಂದ ವರ್ತಿಸುತ್ತಿದ್ದ ಶಾಂತೆಯು ಇಂದು ಪ್ರೌಢಾವಸ್ಥೆಗೆ ಕಾಲಿಟ್ಟವಳಾದರೂ, ನಮ್ಮಲ್ಲಿ ಯಾವ ಭೇದಭಾವಕ್ಕೂ ಆಸ್ಪದವಿದ್ದಿಲ್ಲ. ನಮ್ಮ ಈ ವಿಧದ ಅಖಂಡ ಪ್ರೀತಿಯ ದೆಸೆಯಿಂದಾಗಿ ಶಾಂತಳ ಮನೆಯವರಿಗೆ ಅನುಮಾನವು ತಲೆದೋರಿತೆಂದು ನನಗೆ ಮುಂದೆ ತಿಳಿಯಬಂತು. ಆ ಮೇಲೆ ನಾನು ಶಾಂತಳ ಭೇಟಿಗಾಗಿ ಹಾರೈಸುತ್ತಿದ್ದೆನಾದರೂ, ಕೊನೆಗೆ ನಮ್ಮಿಬ್ಬರ ಮಿಲನವು ಪಾಪಮಯವೆಂದೂ, ನನ್ನೊಡನೆ ಮಾತಾಡಕೂಡದಾಗಿಯೂ ಶಾಂತಳ ಮನೆಯವರು ಕಟ್ಟಪ್ಪಣೆ ಮಾಡಿರುವುದಾಗಿ ಅವಳ ಪತ್ರದಿಂದಲೇ ತಿಳಿದುಬಂತು. ಅದರಲ್ಲಿ ಅವಳು ತನ್ನ ಹಿರಿಯರ ಮೂಢ ಮತ್ತು ಭಿನ್ನಾಭಿಪ್ರಾಯವನ್ನು ಖಂಡಿಸಿ ತನ್ನ ಅಸಂತುಷ್ಟಿ ಮತ್ತು ವ್ಯಸನವನ್ನು ಸಹಾ ವ್ಯಕ್ತಪಡಿಸಿದ್ದಳು. ಅದಕ್ಕೆ ತಕ್ಕಂತೆ ನಾನು ಸಹ ಸರಳ ಉತ್ತರವನ್ನು ಬರೆದಿದ್ದೆ. ಆ ಮೇಲೆ ಬಂದ ಅವಳ ಕಾಗದವು ಹೀಗಿತ್ತು:

ಸಹೋದರ ಸಮಾನನಿಗೆ,

ನಾನು ನಿನ್ನ ಪತ್ರವನ್ನು ಓದುತ್ತಿದ್ದಾಗ ತಂದೆಯವರು ಅಕಸ್ಮಾತ್ತಾಗಿ ಅಲ್ಲಿಗೆ ಬಂದರು. ಮೊದಲೇ ಮನೆಯವರ ಮನಸ್ಸನ್ನು ಸಂಶಯ ಪಿಶಾಚಿಯು ಆವರಿಸಿ ತಾಂಡವವಾಡುತ್ತಿತ್ತು. ಆಗ ನಾನು ತಂದೆಯನ್ನು ನೋಡಿ ದಿಗಿಲುಬಿದ್ದೆ! 'ಪ್ರಣಯ ಪತ್ರವೋ'? ಎಂದು ಕೇಳಿದರು. ಏನನ್ನೂ ತಿಳಿಯದ ನಾನು ನನ್ನ ಮಿತ್ರ ಮೀರಳ ಕಾಗದವೆಂದು ಹೇಳಿ ಕಾಗದವನ್ನು ಅಲ್ಲಿಯೇ ಹರಿದು ಬಿಸಾಡಿದೆ. ಅನುಮಾನವು ಯಾರಲ್ಲಿ ತವರುಮನೆಯಾಗಿತ್ತೋ, ಅವರಿಗೆ ನನ್ನ ಈ ವರ್ತನೆಯಿಂದ ಸಂಶಯವು ಮತ್ತಷ್ಟು ಬಲವಾಯಿತು. ಅಂದಿನ ನನ್ನ ವಿಧಿಯನ್ನು ವಿವರಿಸಲು ಅಸಾಧ್ಯ. ಆದರೆ ನಿನ್ನ ಮೇಲೆ ಬರಬಹುದಾದ ಅಪವಾದವನ್ನು ನೆನಸಿದರೆ ರೋಮಾಂಚನವಾಗುತ್ತದೆ. ನನ್ನ ಅಜಾಗರೂಕತೆಯೇ ಈ ಅನರ್ಥಕ್ಕೆಲ್ಲಾ ಕಾರಣ.

ನಾನು ಎಂಥಾ ಪ್ರಮಾದವನ್ನು ಮಾಡಿದೆ, ನೀನು ನನ್ನನ್ನು ಹಳಿಯಬೇಕು. ನಿನ್ನ ಪ್ರೇಮ ಪಾಶದಿಂದ ನಾನು ಇಷ್ಟರೊಳಗಾಗಿಯೇ ದೂರವಾಗುವ ಕಾರ್ಯವನ್ನು ಮಾಡಿದ್ದೇನೆ. ನನ್ನ ಮೂರ್ಖತನವನ್ನು ಮನ್ನಿಸುವಿಯಾಗಿ ಕರಮುಗಿದು ಬೇಡಿಕೊಳ್ಳುವ ನಿನ್ನ ಅತ್ಯಾತುರ ನಿರ್ಭಾಗ್ಯ ಸಹೋದರಿ

ಶಾಂತೆ.

ಕಾಗದವನ್ನು ಓದಿ ನನಗೆ ಆಕಾಶವೇ ಕಳಚಿ ಬಿದ್ದಂತಾಯಿತು. ನಾನು ಕನಸಿನಲ್ಲಿಯೂ ಗ್ರಹಿಸದ ಕಾರ್ಯವು ಘಟಿಸಿಹೋದುದಕ್ಕೆ ಮನದಲ್ಲಿಯೇ ನೊಂದುಕೊಂಡೆನು. ಮೂರ್ಖ ಸಮಾಜದ ಅಪಪ್ರಚಾರಕ್ಕೂ, ವಿವೇಕ ಶೂನ್ಯತೆಗೂ ಹಳಿದೆನು. ಶಾಂತಳ ಅಂಜುಬುರುಕತನಕ್ಕೆ ನಾಚಿಕೊಂಡು ಕೆಳಗಿನಂತೆ ಉತ್ತರ ಬರೆದೆನು.

ಭಗಿನಿ ಶಾಂತೆಗೆ,

ಯಂತಹ ಪ್ರವಾಹದಲ್ಲಿ ನಮ್ಮ ಸ್ನೇಹಲತೆಯು ಸಿಲುಕಿತು. ನೀನು ಕಾಗದವನ್ನು ತಂದೆಗೆ ಕೊಡುತ್ತಿದ್ದರೆ ಅವರ ಸರ್ವ ಸಂಶಯಗಳು ನಿವಾರಣೆಹೊಂದುತ್ತಿದ್ದವು. ಅದರಲ್ಲಿ ನಮ್ಮ ಬಂಧು ಪ್ರೇಮವನ್ನು ಬಿಚ್ಚಿ ಬರೆದಿದ್ದೆ. ನಮ್ಮ ನಿಷ್ಕಾಮ ಪ್ರೇಮವು ಅವರನ್ನು ದೂಷಿಸುವಂತೆ ಅಡಕವಾಗಿತ್ತು. ಕಳೆದ ಆ ಸಂದರ್ಭವು ನಮಗೆ ಇನ್ನು ಎಂದಿಗೂ ದೊರೆಯಲಾರದು. ಪಾಪ! ನಮ್ಮದು ಅವ್ಯಾಜ ಪ್ರೀತಿಯೆಂದು ನಿನ್ನ ಹಿರಿಯರಿಗೆ ಹೇಗೆ ತಿಳಿಯಬೇಕು? ಆದರೂ ನಮ್ಮ ಅನುರಾಗವನ್ನು ವಿಮರ್ಶಿಸಿ ನೋಡಬಹುದಿತ್ತು. ಆದರೆ ತನ್ನಂತೆ ಪರರನ್ನೂ ತಿಳಿಯುವುದು ಮನುಷ್ಯ ಜಾತಿಯ ಸ್ವಭಾವ, ಹಾ ತಂಗಿ! ನಮ್ಮ ಬಂಧು ಪ್ರೇಮದರಿವು ಯಾರಿಗೂ ಆಗದೆ ಹೋಯಿತಲ್ಲವೇ? ಲೋಕದಲ್ಲಿ ಎಷ್ಟು ಅನಾಚಾರಗಳಿಲ್ಲ; ಹಾಗೆ ನಿನ್ನ ಮನೆಯವರು ನಮ್ಮಲ್ಲಿ ತಪ್ಪು ಗ್ರಹಿಕೆಯನ್ನು ತರುವುದು ಸ್ವಾಭಾವಿಕ. ಅರಿವಿಲ್ಲದ ಮೂಢ ಜನರಿಗೆ ಪ್ರಾಯಕ್ಕೆ ಬಂದ ನಮ್ಮಂಥವರ ಸಮ್ಮಿಲನವನ್ನು ಪಾಪಮಯವೆಂದು ತಿಳಿದು ಗೊಂದಲವೆಬ್ಬಿಸುವುದು ಸಹಜ. ದೇವಾ! ನಮ್ಮ ನಿಷ್ಕಳಂಕ ಪ್ರೇಮಕ್ಕೆ ಭಂಗ, ಅದಕ್ಕೂ ನಾನು ಚಿಂತಿಸುವುದಿಲ್ಲ. ಆದರೆ ನಿನ್ನ ಭಾವೀ ಜೀವನಕ್ಕೆ ಕಳಂಕ ಬಂದುದಕ್ಕಾಗಿ ಮಾತ್ರ ಹಂಬಲಿಸುತ್ತೇನೆ. ಇನ್ನಾದರೂ ನನ್ನನ್ನು ಮರೆತುಬಿಡು. ನನ್ನ ಕೊನೆಯ ಒಂದು ಕೋರಿಕೆ- ಹಿರಿಯರಿಗೆ ಅವಿಧೇಯತೆಯನ್ನು ಎಂದೂ ತೋರಿಸಿ ಅವರಿಗೆ ತ್ರಾಸ ಉಂಟುಮಾಡಬೇಡ. ಇನ್ನು ನಿನಗೆ ನಾನು ಪುನಃ ಬರೆಯಲಾರೆ ಇದೇ ಕೊನೆಯ . . . ?

ಇತೀ ಹತಭಾಗ್ಯ ಸಹೋದರ

ಪ್ರಭಾಕರ

ನನ್ನ ಜನ್ಮದಲ್ಲಿ ಇದೊಂದು ಬಗೆಯ ಹೊಸ ನಡತೆ ಎಷ್ಟೋ ವರ್ಷಗಳಿಂದ ನಾನು ಶಾಂತಳ ನೆರೆಮನೆಯವನಾಗಿದ್ದು ಅವಳ ಸಮೀಪದ ಬಂಧುವಿನಂತೆ ಅವಳೊಡನೆ ವರ್ತಿಸುತ್ತಿದ್ದೆ; ಆದರೆ ನಾನು ಈಗ ನಮ್ಮ ಮನೆಯನ್ನು ಬೇರೆ ದೂರದ ಗಲ್ಲಿಗೆ ಸಾಗಿಸಿರುವೆನು. ನನಗೆ ಮನಶ್ಶಾಂತಿ ಇಲ್ಲ. ಪಾಪ! ಎಲ್ಲಿಯಾದರೂ ಶಾಂತಳು ಅಪರೂಪವಾಗಿ ಭೇಟಿಯಾದರೆ ನಿಟ್ಟುಸಿರನ್ನು ಬಿಡುವಳೋ ಎಂಬಂತೆ ಭಾಸವಾಗುತ್ತದೆ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ

ಜಗತ್ಪ್ರಸಿದ್ಧವಾದ ಔಷಧ

GONO KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು-ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ; ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜ್ 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** Vithalbhai Patel Road, BOMBAY 4.

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

The Hindusthan Cinema Ltd.,

(In Liquidation)

NOTICE

Is hereby given that the right to collect the amount due by contributories (about Rs. 1099-12-0) will be sold by public auction by the Liquidator at his office in Car-street, Mangalore on 1-6-'41 at 8-30 A. M. The Liquidator does not undertake to accept the highest or any bid, and the successful bidder should deposit the amount forthwith & get a proper deed of conveyence at his own expense. The bidders may inspect the books etc at the liquidators' office on 31-5-1941 between 8-30 and 10-30 A. M. and bidders must take all risks, as to title etc and neither the Liquidator nor the Company is responsible in any manner for any defect in title or any other matter.

Mangalore 19-5-'41

M. Keshava Pai, Advocate, Liquidator.

ಜಿಲ್ಲಾ ಸಮಾಚಾರ

ಮಂಗಳೂರು

ಬಿಸೆಂಟ್ ನೇಶನಲ್ ಗರ್ಲ್ಸ್ ಸ್ಕೂಲ್

ಈ ಸ್ಕೂಲಿಗೆ ಈ ವರ್ಷದ ಜೂನಿನಲ್ಲಿ IV ಫೋರ್ಮ್ ತೆರೆಯುವರೆ ಇಲಾಖೆಯ ಅನುಮತಿ ದೊರೆತಿದೆ ಎಂದು ತಿಳಿದುಬಂದಿದೆ. ಭಾಷೇತರ ಪಾಠಗಳನ್ನು ಕನ್ನಡದಲ್ಲಿ ಕಲಿಸುವ, ಇತರ ವಿಧಗಳಿಂದ ಹಿಂದೂ ಹುಡುಗಿಯರ ಆಚಾರ ವಿಚಾರಗಳಿಗೆ ಗಮನ ಕೊಡುವ ಹುಡುಗಿಯರ ಹೈಸ್ಕೂಲೆಂದರೆ ಜಿಲ್ಲೆಯಲ್ಲಿ ಇದೊಂದೇ. ಊರ ಹೊರಗಿಂದ ಬರುವ ವಿದ್ಯಾರ್ಥಿನಿಯರ ಸೌಕರ್ಯಕ್ಕೆ "ಪದ್ಮವಿಹಾರವೆಂಬ ಹೊಸ್ಟೆಲು" ಶಾಲೆಗೆ ಕೂಡಿದೆ. ದೇಶವಾತ್ಸಲ್ಯವುಳ್ಳ ಹಿತ್ತವರು ಈ ಶಾಲೆಗೆ ಸಕಲ ವಿಧದ ಸಹಾಯ ಕೊಡುವರೆಂದು ಕೋರಲಾಗಿದೆ.

ಸೈ. ಎ. ಕಾಲೇಜಿನ ಇಂಟರ್ ಪರೀಕ್ಷೆಯ ಫಲಿತಾಂಶ

ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನಿಂದ ಇಂಟರ್‌ಮೀಡಿಯೇಟ್ ಪರೀಕ್ಷೆಗೆ ಹೋಗಿದ್ದ ೧೦೭ ಮಂದಿ ವಿದ್ಯಾರ್ಥಿಗಳಲ್ಲಿ ೯೦ ಮಂದಿ ಕೃತಾರ್ಥರಾಗಿರುವರು. ಇವರಲ್ಲಿ ಫಸ್ಟ್ ಕ್ಲಾಸ್ ೪೧, ಸೆಕೆಂಡ್ ಕ್ಲಾಸ್ ೪೯. ಪಾಸಿನ ಸೇಕಡ ೮೪.

ವರ್ಗ—ನೇಮಕ

ರಜೆಯಿಂದ ಹಿಂದಿರುಗಿದ ಬಳಿಕ ಮಿ. ಜೆ. ಎಲ್. ಡಿಸೋಜ ಬಿ. ಎ. ಇವರು ಮಂಗಳೂರಿನ ತಹಶಿಲ್ದಾರರಾಗಿ ನೇಮಕ ಹೊಂದಿದ್ದಾರೆ. ಶ್ರೀ. ಯಮ್. ಜನಾರ್ಧನ್ ಬಿ. ಎ. ಈಗಿನ ಇಲ್ಲಿನ ತಹಶಿಲ್ದಾರರು, ರಜೆಗೆ ಅಪೇಕ್ಷಿಸಿದ್ದಾರೆ.

ನಮ್ಮ ಡಿ. ಮೆಡಿ. ಆಫೀಸರಾದ ಕೆಪ್ಟನ್ ಸಿ. ರಂಗಭಾಷ್ಯಂನಾಯ್ಡುರವರು ತಮ್ಮ ಉದ್ಯೋಗದಿಂದ ನಿವೃತ್ತರಾಗುವುದರಿಂದ ಅವರ ಸ್ಥಾನಕ್ಕೆ ಉಡುಪಿಯಿಂದ ಕೆಪ್ಟನ್ ಸಿ. ಕೃಷ್ಣ ಮೆನೋನ್ ಎಂ. ಬಿ. ಬಿ. ಎಸ್. ಇವರು ನೇಮಿಸಲ್ಪಟ್ಟಿದ್ದಾರೆ.

ಮಂಗಳೂರು ರೇಂಜಿಗೆ ಶಾಲೆಗಳ ಜೂನಿಯರ್ ಡೆ. ಇನ್‌ಸ್ಪೆಕ್ಟರಾದ ಶ್ರೀ. ಅದೂರು ಸುರೇಂದ್ರನಾಥ ಬಿ. ಎ. ಎಲ್. ಟಿ. ಇವರು ಕಾಸರಗೋಡಿನಿಂದ ಇತ್ತ ವರ್ಗಾಯಿಸಲ್ಪಟ್ಟಿದ್ದಾರೆ.

ಕುಂದಾಪುರ ಸರಕಾರಿ ಆಸ್ಪತ್ರೆಯ ಒನರೆರಿ ಮೆಡಿಕಲ್ ಆಫೀಸರಾದ ಡಾ. ವೈ. ರಾಜ ಶೆಟ್ಟಿ, ಇವರ ಬದಲಿಗೆ ಡಾ. ಎಸ್. ಆರ್. ಹೆಗ್ಗಡೆಯವರು ನೇಮಿಸಲ್ಪಟ್ಟಿದ್ದಾರೆ.

ತಿರುವಾಂಕೂರಿಗೆ

ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯದರ್ಶಿಗಳೂ, 'ಕಂಠೀರವ' ಪತ್ರಿಕೆಯ ಕಲಾ ಸಂಪಾದಕರೂ ಆದ ಶ್ರೀ. ವಿ. ಆರ್. ಕ್ಯಾಲೂರ್‌ಕರ್ (ಕುಮಾರ ವೆಂಕಣ್ಣ) ರವರು ಕಥಕ್ಕಳಿ ಮತ್ತು ಭರತನಾಟ್ಯಗಳ ಅಭ್ಯಾಸಕ್ಕಾಗಿ ತಿರುವಾಂಕೂರಿನಲ್ಲಿರುವ ಶ್ರೀ. ಗೋಪಿನಾಥರ ನೃತ್ಯಕಲಾ ಕೇಂದ್ರಕ್ಕೆ ತಾ. ೧೪ರಂದು ಹೊರಟು ಹೋಗಿದ್ದಾರೆ. ಜಿಲ್ಲೆಯ ಯಕ್ಷಗಾನ ನೃತ್ಯದ ಅಭ್ಯಾಸಮಾಡಿ, ವಿವಿಧ ಜಾನಪದ ನೃತ್ಯಗಳನ್ನು ಕಲಿತ ಇವರ ಈ ಸಾಹಸವು ಶ್ಲಾಘನೀಯವೂ ನಾಡಿಗೆ ಕೀರ್ತಿ ತರುವಂತಹುದೂ ಆಗಿದೆ. ಶ್ರೀಯುತರ ಸಾಹಸವು ಸಫಲವಾಗಲೆಂದು ಹಾರೈಸುವೆವು.

ಭಟ್ಕಳದಲ್ಲಿ ಕೇರಳ ಮತ್ತು ದ. ಕ. ಜಿಲ್ಲಾ ಸತ್ಯಾಗ್ರಹಿಗಳಿಗೆ ಶಿಕ್ಷೆ

ಕೇರಳದಲ್ಲಿ ಸತ್ಯಾಗ್ರಹ ಮಾಡಿ ಕೈದಾಗದ ದಕ್ಷಿಣ ಕನ್ನಡ ಜಿಲ್ಲೆಯ ದಾರಿಯಾಗಿ ದಿಲ್ಲಿಯತ್ತ ತೆರಳುತ್ತಿದ್ದ ಸತ್ಯಾಗ್ರಹಿಗಳು ಶ್ರೀಗಳಾದ ಎಂ. ಕುಮಾರನ್, ಕುಂಞರಾಮನ್, ಪಿ. ಕೆ. ಗೋಪಾಲನ್, ಎ. ವಿ. ಕುಂಞರಾಮನ್ ನಾಯರ್ ಇವರಿಗೂ ದಕ್ಷಿಣಕನ್ನಡದಲ್ಲಿ ಸತ್ಯಾಗ್ರಹ ಮಾಡಿ ಕೈದಾಗದೆ ದಿಲ್ಲಿಯತ್ತ ತೆರಳುವ ಶ್ರೀಗಳಾದ ಕೆ. ಟಿ. ಶಂಕರ (ಬದಿಯಡ್ಕ) ಬುಡೋಳಿ ಸದಾನಂದ ಪೈ, ಎ. ಕೆ. ವಿಶ್ವನಾಥ ಶೆಟ್ಟಿ, ಇವರಿಗೂ ಭಟ್ಕಳದಲ್ಲಿ ಕೈದಾಗಿ ಕುಮಟಾದಲ್ಲಿ ವಿಚಾರಣೆಯಾಗಿ ಪ್ರತಿಯೊಬ್ಬರಿಗೂ ಆರಾರು ತಿಂಗಳ ಕಠಿನ ಶಿಕ್ಷೆ ವಿಧಿಸಿ ಸೆರೆಮನೆಗೆ ಸೇರಿಸಿರುವರು.

ಪರೀಕ್ಷಾ ಫಲಿತಾಂಶ

ಇಲ್ಲಿಯ ಶ್ರೀ. ಕೆ. ಸದಾನಂದ ನಾಯಕರು ಮದ್ರಾಸು ಯುನಿವರ್ಸಿಟಿಯ ಈ ಬಾರಿಯ ಎಲ್. ಟಿ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದ ಮೂವರಲ್ಲಿ ಒಬ್ಬರಾಗಿದ್ದಾರೆ. ಶ್ರೀ. ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯ ಅಧ್ಯಾಪಕರಾದ ಶ್ರೀ. ಕೆ. ಮಾಧವ ಜೋಯಿಸರು ಮತ್ತು ಕೆ. ರಮಾನಂದ ಭಟ್ಟರು ಕನ್ನಡ ವಿದ್ವಾನ್ ಪರೀಕ್ಷೆಯಲ್ಲಿಯೂ ಶ್ರೀಗಳಾದ ಅಣ್ಣಪ್ಪ ಪಾವಂಜಸ್ಕೈ, ಲೋಕಯ್ಯ ಶೆಟ್ಟಿ, ರಘುಚಂದ್ರ ಶೆಟ್ಟಿ, ಸಗ್ರಿತಾಯ, ರಾಮಕೃಷ್ಣ ಜೋಯಿಸಿ, ಶ್ರೀಕಂಠ ಶೆಣೈ, ಜನಾರ್ದನ ಪ್ರಭುಗಳವರು ಶಿರೋಮಣಿಯಲ್ಲಿಯೂ ತೇರ್ಗಡೆಯಾಗಿದ್ದಾರೆ. ಶ್ರೀ. ಕೆ. ಪಾಂಡುರಂಗ ಭಟ್ಟರು ವಿದ್ವಾನ್ ಪ್ರಿಲಿಮಿನರಿ ಉತ್ತೀರ್ಣರಾಗಿರುವರು.

ಶ್ರೀ. ಕೆ. ಈಶ್ವರ ಎಂ. ಎಲ್. ಎ. ಇವರಿಗೆ ಸ್ವಾಗತ

ದ. ಕ. ಜಿಲ್ಲೆಯ ಮೊದಲನೆಯ ಸತ್ಯಾಗ್ರಹಿ ಹಾಗೂ ಹರಿಜನ ಎಂ. ಎಲ್. ಎ. ಗಳಾದ ಶ್ರೀ. ಕೆ. ಈಶ್ವರರವರು ತಾ. ೧೮ನೇ ಶುಕ್ರವಾರ ತಿರುಚಿನಾಪಳ್ಳಿ ಜೈಲಿನಿಂದ ಬಿಡುಗಡೆ ಹೊಂದಿ, ತಾರೀಕು ೧೭ನೇ ಶನಿವಾರ ಇಲ್ಲಿಗೆ ಬಂದರು. ರೈಲ್ವೇ ಸ್ಟೇಶನಿನಲ್ಲಿ ಕಾಂಗ್ರೆಸ್ ಪ್ರಮುಖರು ಹಾಗೂ ಕೆಲಸಗಾರರು ಅವರನ್ನು ಸ್ವಾಗತೀಕರಿಸಿದರು. ಸಂಜೆಗೆ ಮೈದಾನದಲ್ಲಿ ಶ್ರೀ. ಕೊಂಚಾಡಿ ಕೇಶವ ಶೆಣೈಯವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಜರುಗಿತು. ಶ್ರೀ. ಕೆ. ಈಶ್ವರನವರು ತಮ್ಮ ಜೈಲಿನ ಅನುಭವವನ್ನು ಕೊಟ್ಟರು. ಶ್ರೀಗಳಾದ ವಿ. ಆರ್. ಕ್ಯಾಲೂರ್‌ಕರ್, ಎಸ್. ಜಿ ಸಾಲ್ಡನ್ಹ, ಬಿ. ದಾಮೋದರ ಬಾಳಿಗರು ಮತ್ತು ಕೆ. ಕೃಷ್ಣರಾಯರು ಮಾತನಾಡಿದರು.

ಶ್ರೀ. ಸಂಜೀವ ಶೆಣೈಗಳಿಗೆ ಶಿಕ್ಷೆ

೬ ತಿಂಗಳ ಕಠಿನ ಸಜೆ ೫೦೦ ರೂಪಾಯಿ ದಂಡನೆ

ಯುದ್ಧವಿರುದ್ಧ ಘೋಷಣೆ ಮಾಡಿದ ಸಂಬಂಧ ಕಳೆದ ತಾ. ೧೦ರಲ್ಲಿ ಪುತ್ತೂರಲ್ಲಿ ದಸ್ತಗಿರಿ ಮಾಡಲ್ಪಟ್ಟ ಶ್ರೀ. ವೈ. ಸಂಜೀವ ಶ್ಯಾನಭಾಗರ ವಿಚಾರಣೆಯು ಪುತ್ತೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ನಡೆದು ಅವರಿಗೆ ೬ ತಿಂಗಳ ಕಠಿನ ಸಜೆಯೂ ೫೦೦ ರೂ. ಜುಲ್ಮಾನೆಯೂ, ಜುಲ್ಮಾನೆ ತೆರದಿದ್ದಲ್ಲಿ ತಿರುಗಿ ೩ ತಿಂಗಳ ಶಿಕ್ಷೆಯೂ ವಿಧಿಸಲ್ಪಟ್ಟಿತು. ಅವರನ್ನು 'ಬಿ' ಕ್ಲಾಸಿನಲ್ಲಿಟ್ಟಿರುತ್ತಾರೆ. ತಾ. ೩೦ರಂದು ಇವರನ್ನು ಆಲಿಪುರಂ ಜೈಲಿಗೆ ಕೊಂಡೊಯ್ಯಲಾಯಿತು.

ದ. ಕ. ಜಿಲ್ಲಾ ಸತ್ಯಾಗ್ರಹ

ನಮ್ಮ ಜಿಲ್ಲೆಯಿಂದ ಸತ್ಯಾಗ್ರಹಿಗಳ ಐದು ಪಟ್ಟಿಗಳು ಮಂಜೂರಾಗಿ ಬಂದಿವೆ. ಮಂಜೂರಾದ ಯಾವತ್ತು ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡಬಹುದಾಗಿ ಪ್ರತಿಯೊಬ್ಬ ಸತ್ಯಾಗ್ರಹಿಗೆ ತಿಳಿಸಿದ್ದರೂ ಕೆಲವರು ಬಾಕಿ ಉಳಿದಿದ್ದಾರೆ. ೪ನೇ ಮತ್ತು ೫ನೇ ಪಟ್ಟಿಗಳಿಗೆ ಕೊನೆಯ ತಾರೀಕು ನಿಷ್ಕರ್ಷೆಯಾಗದಿದ್ದರೂ ಮಂಜೂರಾದ ಎಲ್ಲಾ ಸತ್ಯಾಗ್ರಹಿಗಳು ಕೂಡಲೇ ಸತ್ಯಾಗ್ರಹ ಮಾಡಲು ಯಾವ ಪ್ರತಿಬಂಧಕವೂ ಇಲ್ಲವೆಂಬುದು ಸ್ಪಷ್ಟವಾಗಿಯೇ ಇದೆ. ಮೂರನೆಯ ಪಟ್ಟಿಯವರು ಸತ್ಯಾಗ್ರಹ ಮಾಡುವ ವರೆಗೆ ನಾಲ್ಕನೆ ಐದನೆ ಪಟ್ಟಿಯವರು ಕಾದುಕೊಂಡಿರಬೇಕು; ಮತ್ತು ಅವರು ಸತ್ಯಾಗ್ರಹ ಮಾಡಲಾರರೆಂಬುದು ಶುದ್ಧ ಭ್ರಮೆಯೇ ಆಗಿದೆ ಹೊರತು ಆ ಅಭಿಪ್ರಾಯಕ್ಕೆ ಯಾವ ಆಧಾರವೂ ಆಸ್ಪದವೂ ಇಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಬಿ. ದಾಮೋದರ ಬಾಳಿಗರು ತಿಳಿಸುತ್ತಾರೆ.

ಬಿ. ಓ. ಎಲ್. ಪರೀಕ್ಷೆ

ಶ್ರೀಮತಿ ಪದ್ಮಾವತಿ ದೇವಿಯವರೂ ಶ್ರೀ. ಟಿ. ನಾರಾಯಣ ಭಟ್ಟರೂ ಈ ಸಲದ ಮದ್ರಾಸು ಯುನಿವರ್ಸಿಟಿಯ ಬಿ. ಓ. ಎಲ್. ಡಿಗ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಕಟೀಲು

ಸ್ಥಳೀಯ ಶ್ರೀ ದುರ್ಗಾ ಪರಮೇಶ್ವರಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. ೧೧ರಂದು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಪಿ. ವೇಲುರ ಮನ್ನಾಡಿಯಾರ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸ್ಟಾಫ್ ದಳವರ ಧ್ವಜವಂದನೆಯಾಯಿತು. ಈ ಶಾಲಾ ಮಾಜಿ ಮೆನೇಜರ್ ಶ್ರೀ. ಕೆ. ಕೋಟಿ ಶೆಟ್ರಿ ಭಾವ ಚಿತ್ರವನ್ನು ಸಭಾ ಸದನದಲ್ಲಿ ಶ್ರೀ. ಎಚ್. ರಾಮರಾಯರು ಅನಾವರಣ ಮಾಡಿದರು. ಶ್ರೀ. ಕೆ. ಶ್ರೀನಿವಾಸ ಉಡುಪರು ದಿವಂಗತರ ಗುಣಕಥನವನ್ನು ಮಾಡಿದರು. ಮಕ್ಕಳಿಗೆ ಇನಾಂ ಹಂಚುವುದು, ಶಾಲಾ ವರದಿ ಓದುವುದು ಇತ್ಯಾದಿ ಕಾರ್ಯಗಳಾದ ಮೇಲೆ ಹೆಣ್ಣು ಮಕ್ಕಳು "ಶ್ರೀ ಕೃಷ್ಣಲೀಲಾ" ಎಂಬ ಸಂಗೀತ ನಾಟಕವನ್ನು ಅಭಿನಯಿಸಿದರು.

"ಕೌರವ ಘೋಷಯಾತ್ರೆ" ಯೆಂಬ ಯಕ್ಷಗಾನ ಪ್ರಸಂಗವನ್ನು ಗಂಡು ಮಕ್ಕಳು ನಟಿಸಿ ತೋರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಕ್ಕಳ ಅಭಿನಯ ಕುರಿತು ತುಂಬಾ ಸಂತೋಷ ವ್ಯಕ್ತಪಡಿಸಿದ್ದಲ್ಲದೆ ಈ ರೀತಿಯಲ್ಲಿ ಮಕ್ಕಳನ್ನು ಶಾಲೆಗಳಲ್ಲಿ ತರಬೇತಿ ಮಾಡುವುದರಿಂದ ವಿದ್ಯೆಯ ಗುರಿಯು ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲವೆಂದೂ, ಈ ಭಾಗದಲ್ಲಿ ಈ ಶಾಲೆಯು ಮಾದರಿಯಾಗಿದೆಯೆಂದೂ ಅಭಿಪ್ರಾಯ ಪಟ್ಟರು.

ಶ್ರೀ. ಎಚ್. ರಾಮರಾಯರೂ, ಬಾಗ್ಲೋಡಿ ಕೃಷ್ಣರಾಯರೂ ಶ್ರೀ. ಎ. ರಾಮಚಂದ್ರ ಹೆಗ್ಗಡೆಯವರೂ ಮಾತನಾಡಿದರು.

ಕಾರ್ಕಳ

ಸ್ಕೌಟರುಗಳ ತರಬೇತಿ

ಹಿಂದುಸ್ಥಾನ ಸ್ಕೌಟ ಎಸೋಸಿಯೇಶನಿನ ಕಬ್ ಮಾಸ್ತರುಗಳ ತರಬೇತಿ ಕೇಂದ್ರವು ತಾ. ೯ರ ದಿನವೂ ರೋವರ್ಸ ಲೀಡರುಗಳ ತರಬೇತಿ ಕೇಂದ್ರವು ತಾ. ೧೪ರ ದಿನವೂ ಕ್ರಮವಾಗಿ ಶ್ರೀ. ಯಸ್. ಯಸ್. ಮಾಧವರಾವ್ ಮತ್ತು ಶ್ರೀ. ಕಾರ್ಕಳ ಸದಾಶಿವರಾವ್ ಇವರಿಂದ ಶ್ರೀ. ಶ್ರೀನಿವಾಸ ಆಶ್ರಮದಲ್ಲಿ ತೆರೆಯಲ್ಪಟ್ಟು ೪-೪ ದಿನಗಳ ತನಕ ನಡೆಯಿತು. ಶ್ರೀ. ವಿ. ಯಸ್. ರತ್ನ ಸಭಾಪತಿ ಬಿ. ಟಿ. ಯವರು ಪ್ರಧಾನ ಶಿಕ್ಷಕರಾಗಿಯೂ ಶ್ರೀ. ಬಿ. ಯಂ. ಬಾಳಿಗರವರು ಅವರ ಸಹಾಯಕರಾಗಿಯೂ ಇದ್ದರು. ಶ್ರೀಗಳಾದ ಯು. ಕೃಷ್ಣರಾವ್ ಬಿ. ಎ. ಎಲ್. ಟಿ. ಕೆ. ಶ್ರೀನಿವಾಸ ಹೆಗ್ಡೆ, ಗುರುಪಾದಿ ಶ್ರೀನಿವಾಸ ಶೆಣೈ, ಪಿ. ವಿ. ಉಪಾಧ್ಯಾಯ, ಬಿ. ಸದಾರಾಮ

(೧೧ನೆ ಪುಟ ನೋಡಿ)

ಮಂಗಳೂರು ಪೇಟೆಯ ದವಸ ಧಾನ್ಯ ವಸ್ತುಗಳ ಧಾರಣೆಗಳು

			ರಿಂದ	ವರೆಗೆ
1.	(a)	ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	—	—
	(b)	,, ಮಧ್ಯಂ ,, ,, ,,	—	—
2.	(a)	ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	5—12—0	5—14—0
	(b)	,, ಮಧ್ಯಂ ,, ,, ,,	5— 8—0	5—10—0
3.	(a)	,, ಅವ್ವಲ್ ,, ಸುಗ್ಗಿ ,,	5—10—0	—
	(b)	,, ಮಧ್ಯಂ ,, ,, ,,	5— 4—0	5— 6—0
4.	(a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	35— 0—0	40— 0—0
	(b)	,, ಸಿಪ್ಪೆಯಿದ್ದದ್ದು ,,	37— 8—0	42— 8—0
5.	(a)	ಕೊಬ್ಬರಿ ಆಫೀಸು ಖಂಡಿಗೆ	50— 0—0	—
	(b)	,, ದೀವಿ ,,	—	—
	(c)	,, ದಿಲ್‌ಪಸಂದ್ ,,	53—12—0	—
6.		ತೆಂಗಿನ ಎಣ್ಣೆ ಮಣಕ್ಕೆ	3—10—0	—
7.	(a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3— 4—0	3—12—0
	(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	100— 0—0	110— 0—0
		(ಹೊಸ್ತು)	90— 0—0	100— 0—0
8.		ಗೇರುಬೀಜ ಮುಡಿಗೆ	4— 4—0	4—12—0
9.		ಕಬ್ಬಿನ ಬೆಲ್ಲ ಖಂಡಿಗೆ	22— 8—0	27— 8—0
10.		ಒಳ್ಳೆ ಮೆಣಸು ಹಂಡ್ರೆಡ್ ವೇಟ್‌ಗೆ	13— 0—0	14— 0—0
11.	(a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5— 8—0	7— 8—0
	(b)	ಹುಡಿಯ ,, ,,	6— 8—0	8— 8—0
12.	(a)	ಮೈಸೂರು ಏಲಕ್ಕಿ ಮಣಕ್ಕೆ	— 0—0	— 0—0
	(b)	ಕೊಡಗಿನ ,, ,,	60— 0—0	62— 8—0
13.	(a)	ಕುಮಟೆಯ ಮೆಣಸು ಖಂಡಿಗೆ	67— 8—0	77— 8—0
	(b)	ಕಾಸರಗೋಡು ,, ಮಣಕ್ಕೆ	3— 0—0	—
	(c)	ಊರಿನ ,, ,,	4— 2—0	—

ಸಿರಿಯದ ಮೇಲೆ ಜರ್ಮನ್ ಧಾಳಿಯು ಸಂಭವ?

ಕ್ರೀಟದಲ್ಲಿ ಗಾಳಿಕೊಡೆಗಳಿಂದ ಬಂದಿಳಿದರು

ಮಧ್ಯ ಏಶ್ಯದಲ್ಲಿ ರಶ್ಯ-ಜರ್ಮನ್ ಚಟುವಟಿಕೆಗಳೆ?

ಅಮೇರಿಕದ ಅಧ್ಯಕ್ಷರು ಮಹತ್ವದ ನಿರ್ಣಯ ಮಾಡುವರು

ಯೂರೋಪಿನ ರಾಜಕಾರಣವು ತೀರಾ ವಿಷಮವಾಗುತ್ತಾ ಬರುತ್ತದೆ. ಇರಾನಿನ ಗಡಿಯಲ್ಲಿ ರಶ್ಯನ್ ಸೈನ್ಯಗಳು ಬಂದಿವೆಯಂತೆ. ಮಧ್ಯ ಏಶ್ಯದಲ್ಲಿ ರಶ್ಯ ಜರ್ಮನಿಗಳು ಒಟ್ಟಿಗೆ ಮುಂದಡಿಯಿಡುವವೆಂದು ಸುದ್ದಿಯಿದೆ. ಅಬಿಸೀನಿಯದಲ್ಲಿ ಇಟಲಿಯನರು ತೀರಾ ಪರಾಜಯ ಹೊಂದಿದರೆಂದು ವಾರ್ತೆಯಿದೆ. ಮಹತ್ವವಾದೊಂದು ನಿರ್ಣಯವನ್ನು ಅಮೇರಿಕದ ಅಧ್ಯಕ್ಷರು ಈ ವಾರ ಮಾಡುವರಂತೆ. ಜರ್ಮನ್ ಸೈನ್ಯವು ಸಿರಿಯಾವನ್ನು ಧಾಳಿಮಾಡುವಸಂಭವವಿದೆ. ಕ್ರೀಟದಲ್ಲಿ ಕೊಡೆ ವಿಮಾನಗಳಿಂದ ಸೈನಿಕರು ಇಳಿದಿದ್ದಾರೆ. ಹೆಸ್ಸನು ಬರೆಯುವುದರಲ್ಲಿ ನಿರತನಾಗಿದ್ದಾನಂತೆ.

ಬಾಲ್ಟಿಕ್ ಮತ್ತು ಕಪ್ಪು ಸಮುದ್ರಗಳ ನಡುವೆ ಕಾಲುವೆ

ಬಾಲ್ಟಿಕ್ ಮತ್ತು ಕಪ್ಪು ಸಮುದ್ರಗಳನ್ನು ಕಾಲುವೆಯಿಂದ ಜೋಡಿಸಲಾಗಿದೆಯೆಂದು ಸುದ್ದಿ. ಈ ಕಾಲುವೆಯನ್ನು ಹಡಗು ಸಂಚಾರಕ್ಕೆ ಈಗ ತೆರೆದಿಡಲಾಗಿದೆಯಂತೆ.

ಇರಾನ್ ಗಡಿಯಲ್ಲಿ ರಶ್ಯನ್ ಸೈನ್ಯಗಳು

ರಶ್ಯ-ಜರ್ಮನಿಗಳ ಸಹಕಾರ

ರಶ್ಯ ಇರಾನ್ ಗಡಿನಾಡಿನ ಹತ್ತಿರ ಇರುತಿಸ್ಕೇಂತ ಎಂಬಲ್ಲಿ ಅನೇಕ ರಶ್ಯನ್ ಸೈನ್ಯಗಳು ಸಂಗ್ರಹವಾಗಿವೆ. ಮಧ್ಯ ಏಶಿಯದಲ್ಲಿ ರಶ್ಯ ಜರ್ಮನರೀರ್ವರೂ ಒಟ್ಟಿಗೆ ಮುಂದಡಿಯಿಡುತ್ತವೆ ಎಂದು ಸುದ್ದಿ. ಇರಾಕ್ ಇರಾನ್‌ಗಳಿಗೆ ಯುದ್ಧ ಸಾಮಗ್ರಿಗಳನ್ನು ಕಳುಹಿಸಲು ಕಪ್ಪು ಸಮುದ್ರದಲ್ಲಿರುವ ರಶ್ಯನ್ ಹಡಗುಗಳನ್ನು ಕೊಡಬೇಕೆಂದು ಜರ್ಮನಿ ರಶ್ಯವನ್ನು ಕೇಳುವುದಂತೆ.

ಜರ್ಮನ್ ಕೊಡೆವಿಮಾನ ಸೈನಿಕರು ಕ್ರೀಟದಲ್ಲಿ ಇಳಿದರು

ಸಿರಿಯಾದ ಮೇಲೆ ಧಾಳಿಯೆ?

ಕ್ರೀಟದ ಮೇಲೆ ಜರ್ಮನ್ ಕೊಡೆ ವಿಮಾನಗಳ ಸೈನಿಕರು ಬಂದಿಳಿದರು. ಸಿರಿಯಾದ ಮೇಲೆ ಜರ್ಮನಿಯು ಧಾಳಿ ಮಾಡುವುದೇ ಎಂದು ಊಹಿಸಲಾಗಿದೆ.

ಸೋಲಂ ಬ್ರಿಟಿಷ್ ವಶ

ಸೋಲಂ ಮತ್ತು ಅದರ ಸಮೀಪದ ಇನ್ನೆರಡು ಸ್ಥಳಗಳು ಬ್ರಿಟಿಷರ ವಶವಾಯಿತು.

ವಿಛಿಯನ್ನು ನಿರಾಕರಿಸಿರಿ

ಸಿರಿಯಾದಲ್ಲಿರುವ ಫ್ರೆಂಚರು ಪರಕೀಯರ ಆಡಳಿತವನ್ನು ಕಿತ್ತೊಗೆದು ಜರ್ಮನರನ್ನು ಓಡಿಸಬೇಕೆಂದು ಜೇರಾ ಟ್ರೋರವರು ಹೇಳಿದರು.

ಅಬಿಸೀನಿಯದಲ್ಲಿ ಹೆಚ್ಚಿನ ಜಯ

ಅಬಿಸೀನಿಯದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಹೆಚ್ಚಿನ ಜಯ ಸಿಗುತ್ತಿದೆಯೆಂದು ಸುದ್ದಿ.

ಬ್ರಿಟನಿಗೆ ಸಾಮಾನುಗಳನ್ನು ಸಾಗಿಸಬೇಕು

ಕ. ನಾಕ್ಸರ ಸ್ಪಷ್ಟೋಕ್ತಿ

ಬ್ರಿಟಿಷರಿಗೆ ಸುರಕ್ಷಿತವಾಗಿ ನಾವು ಸಾಮಾನುಗಳನ್ನು ಸಾಗಿಸಿಕೊಡಬೇಕೆಂದು ಅಮೇರಿಕದ ನೌಕಾ ಮಂತ್ರಿ ಕ. ನಾಕ್ಸರು ಹೇಳಿದರು.

ವಿಛಿಯ ವರ್ತನೆಯನ್ನು ಅಮೇರಿಕದ ಅಧ್ಯಕ್ಷರು ಖಂಡಿಸಿದರು

ಸಿರಿಯಾದಲ್ಲಿ ವಿಛಿ ಸರಕಾರದ ಕೃತ್ಯದ ಬಗ್ಗೆ ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರು ಮಾತನಾಡುತ್ತ ವಿಛಿ ವರ್ತನೆಯನ್ನು ಖಂಡಿಸಿ ಮಾತನಾಡಿದರು. ಇದರಿಂದ ವಿಛಿ ಅಮೇರಿಕಾಗಳ ಸಂಬಂಧ ಕಡಿದು ಹೋಗಬಹುದೆಂಬ ಊಹೆಗೆ ಬಲವಾದ ಆಧಾರವುಂಟಾಗಿದೆ.

ಅಮೇರಿಕದ ಈ ಮನೋಭಾವದ ಬಗ್ಗೆ ವಿಛಿಯು ಆಶ್ಚರ್ಯಗೊಂಡಿದೆಯಂತೆ. ಅಮೇರಿಕನ್ ರಾಯಭಾರಿಯನ್ನು ವಿಛಿಯಿಂದ ತಿರುಗಿ ಕರೆಸಿಕೊಳ್ಳಲಾಗಿದೆ.

ಜಪಾನಿಗೆ ಅಪಜಯ ಖಂಡಿತ

ಚೀನಕ್ಕೆ ಅಮೇರಿಕ ಸಹಾಯವಿತ್ತರೆ

ಅಮೇರಿಕದಿಂದ ಬೇಗನೇ ಪರಿಣಾಮಕಾರಿಯಾದ ಸಹಾಯ ಬಂದರೆ, ಜಪಾನನ್ನು ಬೇಗನೇ ಸೋಲಿಸಲು ಸಾಧ್ಯವಾಗುವದು ಎಂದು ಚಿಯಾಂಗ್ ಕೈಶೇಕರು ಭಾಷಣಮಾಡುತ್ತಾ ಹೇಳಿದರು.

ಇಟಲಿಯನರ ಸೋಲು

ಅಂಬಾ ಅಲಗಿ ಪ್ರದೇಶದಲ್ಲಿ ಇಟಲಿಯನರು ಸೋತು ಹೋಗಿರುವುದಾಗಿ ಸುದ್ದಿ.

ಸಿರಿಯಾದ ಮೇಲೆ ಜರ್ಮನ್ ಕಣ್ಣು

ಜರ್ಮನಿಯು ಸಿರಿಯಾದ ಕಡೆ ತನ್ನ ವಕ್ರ ದೃಷ್ಟಿ ಹರಿಸಿದೆಯೆಂದೂ ಅದರ ಮೂಲಕ ಈಜಿಪ್ಟಿಗೆ ಧಾಳಿ ನಡೆಸುವುದೆಂದೂ ಟರ್ಕಿಯ ಪತ್ರಿಕೆಯೊಂದರಲ್ಲಿ ಬಂದಿದೆ.

ಜರ್ಮನಿಯಲ್ಲಿ ಅನೇಕ ಜನರ ಕೈ ಸೆರೆ

ಹೆಸ್ಸನ ಪತ್ನಿಯನ್ನು ಸೆರೆಹಿಡಿದರು

ಹಿಟ್ಲರನ ಡೆಪ್ಯೂಟಿಯಾಗಿದ್ದ ಹೆಸ್ಸನು ಓಡಿಹೋದ ನಿಮಿತ್ತವಾಗಿ ಜರ್ಮನಿಯಲ್ಲಿ ಕಳವಳವುಂಟಾಗಿದೆಯೆಂದೂ, ಹೆಸ್ಸನ ಅನೇಕ ಅನುಯಾಯಿಗಳನ್ನು ಸೆರೆ ಹಿಡಿದಿರುವರೆಂದೂ, ಕೆಲವರನ್ನು ಅವರಲ್ಲಿ ಕೊಂದಿರುವರೆಂದೂ ಲಂಡನಿನ ಸುದ್ದಿ. ಹೆಸ್ಸನ ಹೆಂಡತಿಯನ್ನು ಸೆರೆ ಹಿಡಿಯಲಾಗಿದೆಯಂತೆ; ತನ್ನ ಸಹೋದ್ಯೋಗಿಗಳಲ್ಲಿ ಯಾರೂ ಇನ್ನು ಮುಂದೆ ಪ್ರವಾಸಕ್ಕೆ ಹೋಗಬಾರದೆಂದು ಹಿಟ್ಲರನು ಆಜ್ಞೆ ಹೊರಡಿಸಿದ್ದರಿಂದ ಗೋರಿಂಗನು ಬೇಟೆಗೆ ಹೋಗುವುದನ್ನೂ ನಿಲ್ಲಿಸಿದನಂತೆ.

ಶಾಂಸಿಯಲ್ಲಿ ಘೋರ ಕಾಳಗ

ದಕ್ಷಿಣ ಶಾಂಸಿ ಪ್ರಾಂತದಲ್ಲಿ ಸುಮಾರು ಹತ್ತು ದಿನಗಳಿಂದ ಘೋರ ಕಾಳಗ ನಡೆಯುತ್ತಿದೆ. ಹಳದಿ ನದಿಯ ಉತ್ತರ ದಂಡೆಯ ಮೇಲೆ ಬೀಡು ಬಿಟ್ಟಿದ್ದ ಚೀನೀ ದಂಡುಗಳನ್ನು ಜಪಾನರು ಮೂರು ದಿಕ್ಕಿನಿಂದ ಸುತ್ತುಗಟ್ಟಿದ್ದಾರೆ.

ಸುನೇರನ ರಾಜಿನಾಮೆ

ಸ್ಪೈನಿನ ವಿದೇಶ ಮಂತ್ರಿ ಸಿನಾರ್ ಸುನೇರನು ರಾಜಿನಾಮೆ ಕೊಟ್ಟಿರುವನೆಂದೂ ಆದರೆ ಜನರಲ್ ಫ್ರಾಂಕೊ ಅದನ್ನು ಅಂಗೀಕರಿಸಲಿಲ್ಲವೆಂದೂ ತಿಳಿದಿದೆ.

ಅಂತರಂಗ ನೈರ್ಮಲ್ಯವೇ ಆರೋಗ್ಯದ ಪ್ರಥಮ ಸೂತ್ರವೆಂದು ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಕಲಿಸಿರಿ

ದೇಹದ ಒಳಭಾಗವನ್ನು ನೈರ್ಮಲ್ಯವಾಗಿರಿಸಲು ಯಾವಾಗಲೂ ಅವುಗಳಿಗೆ ಒಂದು ಗ್ಲಾಸು ಎಂಡ್ರೂಸ್ ಲಿವರ್ ಸಾಲ್ಟನ್ನು ಕೊಡಿ. ಎಂಡ್ರೂಸ್ ಲಿವರ್ ಸೋಲ್ಟ್ ಹೊಟ್ಟೆಯನ್ನು ಹಗುರವಾಗಿಯೂ ಸ್ವಚ್ಛವಾಗಿಯೂ ಶುಚಿಗೊಳಿಸಿ ಮಲಬದ್ಧತೆ ಮತ್ತು ಇನ್ನಿತರ ಬಾಧೆಗಳಿಗೆ ಕಾರಣವಾದ ಮಲಿನತೆಯನ್ನು ಹೊರಗೆ ದಬ್ಬುತ್ತದೆ. ಮಕ್ಕಳಿಗೆ ಉತ್ತೇಜನವನ್ನೂ, ಬಲವನ್ನೂ ಕೊಟ್ಟು ಮುಖ ಮತ್ತು ಕಣ್ಣುಗಳ ಸೌಂದರ್ಯವನ್ನೂ ಹೆಚ್ಚಿಸಿ ಸುಖವನ್ನೀಯುವುದು.

ಅಂತರಂಗ ನೈರ್ಮಲ್ಯಕ್ಕೆ ಯಾವಾಗಲೂ ಸೇವಿಸಿರಿ

ಎಂಡ್ರೂಸ್ ಲಿವರ್ ಸಾಲ್ಟ್

ANDREWS LIVER SALT



ಆರೋಗ್ಯ ಪಾನೀಯ ಮತ್ತು ವಿರೇಚಕವೊನಿರು ನೈರ್ಮಲ್ಯ, ತಂಪು ದಣುವಾರಿಸು, ವುದು

ಸ. ಸ್ಟ. 11ಅ.
ದೊ. ಸ್ಟ. 11ಛ

ಸೇವಿಸಿದಾಗಲೆಲ್ಲಾ ಸುಂದರ ರೂಪ

ಆಕೆ ಕನ್ನಡಿ ನೋಡಿದ್ದಾಳೆ—ಜತೆ. ಸ್ತ್ರೀಯರೆಷ್ಟೋ ಜನ 'ಲೋಧ್ರ' ಸೇವಿಸುವುದನ್ನು. ಹಾಗೆ ಸೇವಿಸಿದವರಿಗೆಲ್ಲಾ ಗರ್ಭಾಶಯ ರೋಗಗಳು ಗುಣವಾಗಿವೆ. ಕುಂಬಳಕಾಯಿಯಂತೆ ದೃಢವಾಗಿರುವ ಮಕ್ಕಳನ್ನು ಹಡೆದಿದ್ದಾರೆ. ಆದ್ದರಿಂದಾಗಿಯೇ 'ಲೋಧ್ರ' ಸೇವಿಸುವಾಗಲೆಲ್ಲಾ ಒಂದು ಮೋಹನಾಕಾರವು ಆಕೆಯ ಕಣ್ಣಿಗೆ ಕಟ್ಟಿದಂತಾಗುವುದು.

'ಲೋಧ್ರ' ಸ್ತ್ರೀಯರಿಗೆ ಸಂಪೂರ್ಣಾರೋಗ್ಯವನ್ನು ಕೊಡುತ್ತೆ. ಗರ್ಭಾಶಯ ರೋಗಗಳನ್ನು ಹೊರದೂಡಿ ಸತ್ಸಂತಾನವನ್ನು ಕೊಡುತ್ತೆ. ಆದರಿಂದಲೇ ಎಂತಹ ರುಗ್ಣತೆಗಳಿಗೂ ಸ್ತ್ರೀಯರು 'ಲೋಧ್ರ'ವನ್ನು ಸೇವಿಸಬೇಕು.

'ಲೋಧ್ರ' ಎಲ್ಲಾ ಔಷಧದಂಗಡಿಗಳಲ್ಲಿಯೂ ಸಿಕ್ಕುತ್ತೆ.

ತಯಾರಿಸುವವರು: ಕೇಸರಿ ಕುಟೀರಂ ಲಿಮಿಟೆಡ್-ಮದರಾಸು

ಶ್ರೀನಿವಾಸ ಅಯ್ಯಂಗಾರರ ನಿಧನಕ್ಕಾಗಿ ದೇಶದ ದುಃಖೋದ್ಗಾರ!

ಭಾರತದ ಪ್ರಸಿದ್ಧ ದೇಶಭಕ್ತರಾದ ಶ್ರೀನಿವಾಸ ಅಯ್ಯಂಗಾರರ ಮರಣದಿಂದ ಇಡೀ ದೇಶವೇ ದುಃಖಸಾಗರದಲ್ಲಿ ಅದ್ದಿದೆ.

ಗಾಂಧಿ ವೈಸರಾಯರು ಭೇಟಿಯಾಗುವರೆ?

ಪ್ರಧಾನ ಮಂತ್ರಿಗಳ ಪರಿಷತ್ತು ಕೂಡಿಸಬೇಕು

ಲಾಹೋರು ಹೈಕೋರ್ಟಿನ ಮಹತ್ವದ ನಿರ್ಣಯ

ಸಿಮ್ಲಾದ ಸುದ್ದಿಯಂತೆ ಗಾಂಧಿ ವೈಸರಾಯರು ಬೇಗನೇ ಭೇಟಿಯಾಗುವ ಸಂಭವವಿರುವುದಾಗಿ ತಿಳಿಯುತ್ತದೆ. ಫಜಲುಲ್ ಹಕ್ಕರು ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆ ಹರಿಸಲು ಪಣತೊಟ್ಟಿದ್ದಾರೆ. ಆದರೆ ಕಾರ್ಯಕಲಾಪಗಳೇನೂ ಕಂಡುಬರುವುದಿಲ್ಲ. ಲಾಹೋರಿನ ಹೈಕೋರ್ಟು ತೀರ್ಪಿನಂತೆ ಹಲವು ಮಂದಿ ಸತ್ಯಾಗ್ರಹಿಗಳು ಬಿಡುಗಡೆಹೊಂದುತ್ತಿರುವರೆಂದು ತಿಳಿದಿದೆ. ಮಿಕ್ಕ ಎಲ್ಲೆಡೆಗಳಲ್ಲಿಯೂ ಸತ್ಯಾಗ್ರಹವು ನಡೆಯುತ್ತಿದೆ. ಜಾತೀಯ ಕಲಹಗಳು ಇತ್ತೀಚೆಗೆ ಎಲ್ಲೆಲ್ಲೂ ಶಾಂತವಾಗುತ್ತಾ ಬರುತ್ತವೆ.

ಗಾಂಧಿ-ಲಿನ್‌ಲಿತ್‌ಗೋ ಭೇಟಿ?

ಅಂತರ್ ರಾಷ್ಟ್ರೀಯ ಪರಿಸ್ಥಿತಿಯು ಬಿಕ್ಕಟ್ಟಾಗುವ ಕಾರಣ ಸರಿಯಾದ ವಾತಾವರಣವನ್ನು ನಿರ್ಮಿಸುವ ನಿಮಿತ್ತ ಲಿನ್‌ಲಿತ್‌ಗೋ ಗಾಂಧಿ ಇವರ ಭೇಟಿಯಾಗುವುದು ಸಂಭವವೇ ಎಂದು ಸಿಮ್ಲಾದ ಸುದ್ದಿ.

ಶ್ರೀ ಎಸ್. ಶ್ರೀನಿವಾಸ್ ಅಯ್ಯಂಗಾರರ ನಿಧನ

ಕಾಂಗ್ರೆಸಿನ ಮಾಜಿ ಅಧ್ಯಕ್ಷರು

ಕಾಂಗ್ರೆಸಿನ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ಶ್ರೀನಿವಾಸ್ ಅಯ್ಯಂಗಾರರು ತಾ. ೧೯ರಂದು ಬೆಳಗ್ಗೆ ೭ ಗಂಟೆಗೆ ಮದ್ರಾಸಿನ ತನ್ನ ಮನೆಯಲ್ಲಿ ನಿಧನ ಹೊಂದಿದ ವಿಷಾದಕರ ವಾರ್ತೆ ಬಂದಿದೆ. ಶ್ರೀ ಅಯ್ಯಂಗಾರರಿಗೆ ಕಳೆದ ಮೂರು ವರ್ಷಗಳಿಂದ ಅನಾರೋಗ್ಯ ಪ್ರಾರಂಭವಾಗಿತ್ತು. ಶ್ರೀ ಅಯ್ಯಂಗಾರರಿಗೆ ಸಾಯುವಾಗ ೬೭ ವರ್ಷ ಪ್ರಾಯ. ಅವರು ೧೯೨೭ರಲ್ಲಿ ಗೌಹಾತಿ ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು.

[ಶ್ರೀ ಎಸ್. ಎಸ್. ಅಯ್ಯಂಗಾರರು ೧೮೭೪ನೇ ಸಪ್ಟಂಬರದ ೧೧ನೆಯ ದಿನ ಪ್ರಸಿದ್ಧ ಕುಟುಂಬದಲ್ಲಿ ಜನ್ಮವೆತ್ತಿದರು. ಬಿ. ಎ. ಬಿ. ಎಲ್. ಪಾಸಾಗಿ ಪ್ರಸಿದ್ಧ ವಕೀಲರಾದರು. ಚಿಕ್ಕಂದಿನಲ್ಲಿ ರಾಜಕಾರಣದ ಕಡೆಗೆ ಮನವೊಲಿದು ಗತಿಸಿದ ಸಿ. ಆರ್. ದಾಸರ ನೇತೃತ್ವದಲ್ಲಿ ಸ್ವರಾಜ್ಯ ಪಾರ್ಟಿಯನ್ನು ಸೇರಿದರು. ಕೇಂದ್ರ ಶಾಸನಸಭೆಗೆ ಸೇರಿ ಸ್ವರಾಜ್ಯ ಪಾರ್ಟಿಯ ಉಪಧುರೀಣರಾದರು. ೧೯೨೭ರಲ್ಲಿ ಗೌಹಾತಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸಿನ ಅಧ್ಯಕ್ಷರಾದರು. ೧೯೩೦ರಲ್ಲಿ ಸತ್ಯಾಗ್ರಹ ಸಮರದ ಕಾಲದಲ್ಲಿ ರಾಜಕಾರಣದಿಂದ ಹಿಂದೆ ಸಂತರು. ೧೯೩೯ರಲ್ಲಿ ಸುಭಾಸರು ಕಾಂಗ್ರೆಸಿನ ಅಧ್ಯಕ್ಷರಾದ ವೇಳೆ ಅವರ ಸಹಾಯಕರಾಗಿದ್ದರು. ಅವರು ಹಲವು ಸಂಸ್ಥೆಗಳ ಸಭಾಸದರಿದ್ದರು. ಕಾಯಿದೆ ಮತ್ತು ರಾಜಕಾರಣದ ವಿಷಯವಾಗಿ ಪುಸ್ತಕಗಳನ್ನು ಬರೆದಿದ್ದಾರೆ.]

ಗಾಂಧಿಜಿ ಲೇಖನವನ್ನು ಪ್ರಕಟಿಸಲು ತೊಂದರೆಗಳಿರಬಾರದು

ಸಂಪಾದಕರ ಸಮ್ಮೇಲನದ ಸೂಚನೆ

ಪತ್ರಿಕಾ ಸಂಪಾದಕರ ಸಮ್ಮೇಳನದ ಸ್ಟೇಂಡಿಂಗ್ ಕಮಿಟಿ ಸಿಮ್ಲಾದಲ್ಲಿ ಸೇರುವುದು. ಅದರಲ್ಲಿ ಗಾಂಧಿಜಿಯವರ ಲೇಖನವನ್ನು ಪ್ರಕಟಿಸುವ ಬಗ್ಗೆ ಸರಕಾರವು ಮಾಡುವ ತಡೆಯ ವಿಷಯ ವಿಚಾರಮಾಡಲಾಗುವುದು. ಸರಕಾರದ ಚೀಫ್ ಎಡ್ವೈಸರರು ಗಾಂಧಿಜಿಯವರ ಲೇಖನವನ್ನು ಪ್ರಕಟಿಸಲು ವಿಳಂಬ ಮಾಡುವುದು ಬಹಳ ತೊಂದರೆಗೆ ಕಾರಣವಾಗುತ್ತದೆ, ಇದ್ದರಿಂದ ಅದನ್ನು ಯಾವ ಸಿಬಂಧವು ಇಲ್ಲದೆ ಕೂಡಲೇ ಕೆಂಬ ವಿಚಾರವಾಗಿಯೂ, ನ್ಯಾಶನಲ್ ಹೆರಾಲ್ಡ್ ಪತ್ರಿಕೆಗಳ ಮೇಲೆ ಸರಕಾರವು ವಹಿಸುವ ಧೋರಣೆಯ ವಿಷಯವೂ ವಿಚಾರಮಾಡಲಾಗುವುದು.

ಪ್ರಾಂತಗಳ ಮುಖ್ಯಮಂತ್ರಿಗಳ ಸಮ್ಮೇಳನ

ಸರ್ ಸಿಕಂದರರ ಸೂಚನೆ

ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಇಂಡಿಯಾ ಕರೆಸ್ಪಾಂಡೆಂಟರಿಗೆ ಪಂಜಾಬಿನ ಪ್ರಧಾನರಾದ ಸರ್ ಸಿಕಂದರರು ಉತ್ತರಕೊಡುತ್ತಾ ಭಾರತದ ಬಿಕ್ಕಟ್ಟನ್ನು ಬಗೆಹರಿಸಲು ಎಲ್ಲಾ ಪ್ರಾಂತಗಳ ಮುಖ್ಯ ಮಂತ್ರಿಗಳ ಸಮ್ಮೇಳನವೊಂದನ್ನು ಕರೆಯಬೇಕೆಂದು ಸೂಚನೆಯೊಂದನ್ನು ಕೊಟ್ಟಿರುವರು.

ರಾಜಕೀಯ ಬಿಕ್ಕಟ್ಟು ಪರಿಹರಿಸಲು ಸರ್ವ ಪ್ರಯತ್ನ ಮಾಡುತ್ತೇನೆ

ಹಕ್ಕರ ಹೇಳಿಕೆ

ಭಾರತದ ರಾಜಕೀಯ ಬಿಕ್ಕಟ್ಟನ್ನು ಏನಾದರೂ ಮಾಡಿ ಪರಿಹರಿಸಲೇಬೇಕು. ಇದಕ್ಕಾಗಿ ನಾನು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ; ಭಾರತದ ಮುಂದಿನ ರಾಜ್ಯಾಂಗದ ರಚನೆಯನ್ನು ಪರಸ್ಪರ ಸ್ನೇಹಸೌಹಾರ್ದದಿಂದ ರಚಿಸಬೇಕು ಎಂದು ಬಂಗಾಳದ ಪ್ರಧಾನರಾದ ಹಕ್ಕರು ಒಂದು ಹೇಳಿಕೆ ಕೊಟ್ಟಿರುತ್ತಾರೆ.

ಸತ್ಯಾಗ್ರಹಿಗಳ ಬಿಡುಗಡೆ

ಸತ್ಯಾಗ್ರಹ ಮಾಡುವೆನೆಂದು ಮ್ಯಾಜಿಸ್ಟ್ರೇಟರಿಗೆ ನೋಟೀಸು ಕೊಟ್ಟದ್ದಕ್ಕಾಗಿ ಶಿಕ್ಷಿಸಿದ್ದು ಸರಿಯಲ್ಲವೆಂದು ಲಾಹೋರ್ ಹೈಕೋರ್ಟಿನ ತೀರ್ಮಾನದಂತೆ ಪಂಜಾಬು ಸರಕಾರವು ೩೦೦ ಸತ್ಯಾಗ್ರಹಿಗಳನ್ನು ಬೇಗನೇ ಬಿಡುಗಡೆ ಮಾಡುವರೆಂದು ವಾರ್ತೆ.

ಬೊಂಬಯಿ ನಿರ್ಣಯಕ್ಕೆ ಬೆಂಬಲ ಗಳಿಸಬೇಕು

ಬೊಂಬಯಿ ಸಮ್ಮೇಳನದ ಸ್ಟೇಂಡಿಂಗ್ ಕಮಿಟಿ ಮೆಂಬರರಾದ ಶ್ರೀ ಎಂ. ಎಸ್. ಅಣೆ, ಕಸ್ತೂರ್ ಸರ್ ಮಹಾರಾಜಸಿಂಗ್, ಪಂಡಿತ ಕುಂಜ್ರು, ಬಿ. ಶಿವರಾಮ ಇವರುಗಳನ್ನು ಸಿಮ್ಲಾದಲ್ಲಿ ಸಭೆ ಸೇರಿ ದೇಶ ಸರ್ವತ್ರ ಬೊಂಬಯಿ ನಿರ್ಣಯಕ್ಕೆ ಬೆಂಬಲ ಗಳಿಸಲು ಚಳವಳಿಮಾಡಬೇಕೆಂದು ನಿರ್ಣಯಮಾಡಿದರು.

ಇರಾಕಿನಿಂದ ಕರಾಚಿಗೆ ಬಂದವರು

೨೦೦ ಭಾರತೀಯ ನಿರಾಶ್ರಿತರು

ಇರಾಕಿನಲ್ಲಿದ್ದ ೨೦೦ ಮಂದಿ ಭಾರತೀಯ ನಿರಾಶ್ರಿತರು ಕರಾಚಿಗೆ ಬಂದಿಳಿದರು.

NACET BLADES

ಮೂರು ಗೂಟದ ರೇಜರುಗಳಿಗೆ



ನೆಸೆಟು ಬ್ಲೇಡುಗಳು

ನಿಜವಾದ ಕ್ಷೌರಸುಖಕ್ಕೆ ಹರಿತವಾದ ಅಲಗುಗಳು, ಬೇಗನೇ ಉತ್ತಮವಾಗಿ ಆಶ್ಚರ್ಯಕರ ರೀತಿಯಲ್ಲಿ ನಯವಾದ ಕ್ಷೌರವು ಬೇಕಾದಲ್ಲಿ ಅತೀ ಕಡಿಮೆ ಕ್ರಯದ ನೆಸೆಟು ಬ್ಲೇಡುಗಳಲ್ಲಿ ಭರವಸೆಯನ್ನಿಡಿರಿ.

INRI

ವಿಷಪ್ರಾಯವಾದ ಕಡಿತಗಳ ವಿಷಯ ಜಾಗರೂಕರಾಗಿರಿ.

ಜಾಂಬಕನ್ನು ಸವರಿಸಿ ತೊಡಕನ್ನು ನಿವಾರಿಸಿರಿ.

ಎಲ್ಲಾ ಔಷಧಿ ವ್ಯಾಪಾರಿಗಳು ಜಾಂಬಕನ್ನು ರೂ. 1 ಮತ್ತು ರೂ. 2-4-0ರಂತೆ ಮಾರುತ್ತಾರೆ.

ಏಜಂಟ್ಸ್—

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್ ಟೌನ್ ಮದ್ರಾಸು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿ ಕೊಬ್ಬುಗಳಿಂದ ವಿರಹಿತವಾದದ್ದು

ಶಾಲಾ ಪುಸ್ತಕಗಳು

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಿಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ. ಎರಡನೆಯ ಆವೃತ್ತಿಯು ಹೊರಬೀಳಲಿದೆ.

ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0

ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕಥನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು, ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ. ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು; ಅನೇಕ ಸುಂದರ ಚಿತ್ರಗಳಿಂದ, ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ. ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು; ಮೋದಬೋಧಪ್ರದಗಳೆಂದು.

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ. ಬಿ. ಶ್ರೀನಿವಾಸರಾವ್ ಮತ್ತು ಬಿ. ಧೂಮಪ್ಪನವರಿಂದ ರಚಿತವಾದದು

೪ನೆಯ ತರಗತಿಗೆ ಬೆಲೆ 0 4 0 ೫ನೆಯ ತರಗತಿಗೆ ಬೆಲೆ 0 5 0

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ. ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿದೆ. ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ. ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ.

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ.

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮೊತ್ತ ಮೊದಲಾಗಿ ರಚಿತವಾದುವು. ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ. ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ, ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ. ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ. ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ.

ಬೆಲೆ: ೪, ೫ನೆಯ ತರಗತಿಗೆ 0—1 6 *೬ನೆಯ 0—2—0
*೭ನೆಯ 0—2—6 *೮ನೆಯ 0—3—0

ಸಿರಿಗನ್ನಡ ಪಾಠಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ. ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ, ತರುವಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪಾಠಕದ ರಚನೆಯಾಗಿರುತ್ತದೆ.

ಬೆಲೆ: 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು

*ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

*ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6.

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ವಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ರಾವ್, ಡಾಕ್ಟರ ಪಿ. ಭವಾನಿ ರಾವ್, ಕೆ. ಸದಾಶಿವ ರಾವ್, ಕೆ. ಕೇಶವ ಮೆನನ್, ಬಿ. ಸೂರ್ಯನಾರಾಯಣ ರಾವ್ ಮೊದಲಾದವರು ಭಾಷಣಗಳನ್ನು ಕೊಟ್ಟರು.

ಮಂಗಳೂರು

ಜಾತೀಯ ಕಲಹದ ಸುದ್ದಿ ಮಾತನಾಡ ಕೂಡದು

ಮಂಗಳೂರಲ್ಲಿ ಜಾತೀಯ ಕಲಹವುಂಟಾಗುವುದೆಂದು ಜನರು ಅಲ್ಲಲ್ಲಿ ಸೇರಿ ಮಾತನಾಡಿದರೆ ಕೂಡಲೇ ಅವರನ್ನು ಕೈದುಮಾಡಲಾಗುವುದೆಂದು ಮಂಗಳೂರು ನಗರದಲ್ಲಿ ಟಾಂಟಾಂ ಮೂಲಕ ಸಂಗುರ ಸಾರಲಾಗಿದೆ.

ಕೈಯ್ಯೂರು ಪ್ರಕರಣದಲ್ಲಿ: ಸಭೆ

ಮೂಡಬಿದ್ರೆಯಲ್ಲಿ ಸಾರ್ವಜನಿಕ ಸಭೆಯೊಂದು ಕೈಯ್ಯೂರಿನ ಪ್ರಕರಣದಲ್ಲಿ ಸೇರಿ, ಕೊಲ್ಲಲ್ಪಟ್ಟ ಮಲಬಾರ್ ಸ್ಪೆಶಲ್ ಪೋಲೀಸರನ್ನು ...ತೆಗೆಯಬೇಕೆಂದೂ, ಸಾರ್ವಜನಿಕ ವಿಚಾರಣೆ ನಡೆಯಬೇಕೆಂದೂ ನಿರ್ಣಯಗಳಾದುವು. ಶ್ರೀ. ಕೆ. ಕೃಷ್ಣರಾಯರು ಅಲ್ಲಿನ ಪರಿಸ್ಥಿತಿಯ ಕುರಿತು ಮಾತನಾಡಿದರು.

ಡಾ॥ ಎಂ. ಕೇಶವ ಪೈಗಳಿಗೆ ಸತ್ಕಾರ

ಕಳೆದವಾರ ಬೊಂಬಾಯಿಯ ದಿ. ಜಿ. ಎಸ್. ಬಿ. ಸಭಾ ಮತ್ತು ಜಿ. ಎಸ್. ಬಿ. ಎಸ್. ಲೀಗಿನವರು ಬೊಂಬ್ಬಾ ಕ್ರಾನಿಕಲಿನ ಉಪಸಂಪಾದಕರಾದ ಶ್ರೀ. ಆರ್. ಕೆ. ಪ್ರಭುಗಳ ಅಧ್ಯಕ್ಷತೆಯಲ್ಲಿ ಡಾ॥ ಎಂ. ಕೇಶವ ಪೈಗಳಿಗೆ, ಡಾ॥ ಎ. ಬಾಳಿಗರು ಬೆಳ್ಳಿಯ ಕರಂಡಿಗೆಯಲ್ಲಿ ಒಂದು ಮಾನ ಪತ್ರವನ್ನಿತ್ತು ಸತ್ಕರಿಸಿದರು. ಅದರಲ್ಲಿ ಡಾ॥ ಪೈಗಳ ಉದಾರ ದಾನಗಳನ್ನು ಪ್ರಶಂಸಿಸಿರುವರು. ಇವರು ಇತ್ತೀಚೆಗೆ ಕೆನರಾ ಹೈಸ್ಕೂಲಿನ ಸುವರ್ಣೋತ್ಸವದ ಸಲುವಾಗಿ ಟೀಚರ್ಸ್ ಗಿಳ ಶಿಕ್ಷಣಕ್ಕೆ "ದಿ ಸರಸ್ವತಿ ಟ್ರೈನಿಂಗ್ ಫಂಡ್" ಎಂಬ ಹೆಸರಲ್ಲಿ ೧೧೦೦೦ ರೂಪಾಯಿಗಳ ಉದಾರ ದಾನವಿತ್ತಿರುವರು.

ಸುರತ್ಕಲ್

ಅಭಿನಂದನೆ

ಇಲ್ಲಿಯ ಶ್ರೀ. ಯಂ. ವಾಸುದೇವರಾವ್ ಬಿ. ಎ. ಎಲ್. ಟಿ. ಇವರು ಈ ಸಲದ ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ಎಂ. ಎ. ಡಿಗ್ರಿ ಪರೀಕ್ಷೆಯಲ್ಲಿ ದ್ವಿತೀಯಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು. ಅವರು ಕಳೆದ ವರ್ಷ ಮದ್ರಾಸ್ ವಿ. ವಿ. ನಿಲಯದಲ್ಲಿ ಭೂಗೋಳ ಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ಹೊಂದಿ ಆ ಕುರಿತು ಡಿಪ್ಲೊಮಾ ಕೂಡಾ ಪಡೆದಿರುತ್ತಾರೆ.

ಹಿಂದೂ ವಿದ್ಯಾದಾಯಿನಿ ಸಂಘ

ಇದರ ಮಹಾಸಭೆಯು ತಾ॥ ೧೮ರಂದು ಇವಿ. ಶಾಲಾ ಮಂದಿರದಲ್ಲಿ ಸೇರಿ, ಹಿಂದಿನ ವರ್ಷಗಳ ಲೆಕ್ಕಪತ್ರಗಳ ಅಂಗೀಕಾರ, ಹೊಸ ವರ್ಷದ ಅಂದಾಜುಪಟ್ಟಿಯ ಮಂಜೂರಾತಿ, ಮತ್ತು ಹೊಸ ...

...ಚುನಾವಣೆ ಮುಂತಾದ ಕಾರ್ಯಕ್ರಮಗಳು ಯಥಾರೀತಿ ನಡೆದವು. ಈ ಸಂಸ್ಥೆಯೂ, ಇದರ ಶಿಶುವಾದ ಇಷ್ಟ ವಿದ್ಯಾದಾಯಿನೀ ಶಾಲೆಯೂ ಸ್ಥಾಪಿತವಾಗಿ ಇದೀಗ ೨೫ ವರ್ಷಗಳಾಗುತ್ತಾ ಬರುವುದರಿಂದ ಆ ಕುರಿತು "ರಜತ ಮಹೋತ್ಸವ"ವನ್ನು ವಿಜೃಂಭಣೆಯಿಂದ ಆಚರಿಸುವ ಬಗ್ಗೆ ಅನೇಕ ಮಹನೀಯರಿಂದೊಡಗೂಡಿದ ಒಂದು ವಿಶೇಷ ಸಮಿತಿಯನ್ನು ನೇಮಿಸಲಾಯಿತು.

ಮೂಡಬಿದ್ರೆ

ವಾರ್ಷಿಕೋತ್ಸವ

ಮೂಡಬಿದ್ರೆ ವಾಚನಾಲಯದ ...ನೆಯ ವಾರ್ಷಿಕೋತ್ಸವವು ಶ್ರೀ. ಕೃಷ್ಣರಾವ್, ಬಿ. ಎ. ಇವರ ಅಧ್ಯಕ್ಷತೆಯಿಂದ ಜರಗಿತು. ವರದಿ ವಾಚನ, ಭಾಷಣಗಳಾದ ಮೇಲೆ ಅಧ್ಯಕ್ಷರು ವಾಚನಾಲಯದ ಮಹತ್ವದ ಕುರಿತು ಬೋಧಪರ ...

ಯುರೋಪಿಯನರೊಬ್ಬರು ಶ್ರೀ ರಾಮನ ಭಕ್ತರಾದರು!

ಹತ್ತೊಂಭತ್ತನೆಯ ಶತಮಾನದ

ಒಂದು ರೋಮಾಂಚಕಾರಿ ಇತಿಹಾಸ

ಮಧುರಾಂತಕಂ ಎಂಬುದು ಮದ್ರಾಸಿನಿಂದ ಪಾಂಡಿಚೇರಿಗೆ ಹೋಗುವ ದಾರಿಯಲ್ಲಿ ಚೆಂಗಲ್ ಪಟ್ಟು ಜಿಲ್ಲೆಯ ಒಂದು ಊರು. ಅಲ್ಲಿ ಶ್ರೀ. ರಾಮಚಂದ್ರನ ಒಂದು ಸಣ್ಣದಾದ ದೇವಾಲಯವಿದೆ. ಅದರ ಸಮೀಪದಲ್ಲಿ ಒಂದು ದೊಡ್ಡ ಸರೋವರವೂ ಇದೆ. ಮದ್ರಾಸಿನಿಂದ ಪಾಂಡಿಚೇರಿಗೆ ಹೋಗುವಂತವರು ಇದೇ ಸರೋವರಕ್ಕೆ ಕಟ್ಟಿದ ಅಣೆಕಟ್ಟಿನ ಮೇಲಿರುವ ರಸ್ತೆಯಿಂದಾಗಿ ಹೋಗಬೇಕು. ಸರೋವರ ಎಷ್ಟು ಭವ್ಯ ಮತ್ತು ಮನೋಹರವಾಗಿರುವದೆಂದರೆ, ಒಂದು ಬಾರಿಗೆ ನೋಡಿದಾಗಲೇ ಅದರ ಸುಂದರ ಚಿತ್ರವು ಸ್ಮೃತಿಪಟಲದ ಮೇಲೆ ಅಂಕಿತವಾಗದೆ ಇರುವದಿಲ್ಲ. ಆ ಸರೋವರ ಮತ್ತು ಅಲ್ಲಿಯ ಆ ರಾಮ ಮಂದಿರದ ಕುರಿತು ಒಂದು ಬೋಧಪ್ರದವಾದ ಸತ್ಯಕತೆ ಇರುತ್ತದೆ. ಅಲ್ಲಿಯೇ ಒಬ್ಬ ಕ್ರೈಸ್ತಮತದ ಇಂಗ್ಲೀಯನು ರಾಮ ಭಕ್ತನಾದನೆಂದೂ ಅವನಿಗೆ ಶ್ರೀರಾಮಚಂದ್ರನು ಪ್ರತ್ಯಕ್ಷ ಕೂಡ ಆಗಿದನೆಂದೂ ತಿಳಿದುಬರುತ್ತದೆ.

೧೮೩೨ರ ಕತೆ

ಇದು ಸುಮಾರು ೧೦೦ ವರ್ಷಗಳ ಹಿಂದಿನ ಅಂದರೆ ೧೮೩೨ರ ಕತೆ. ಆ ಸಮಯ ಲಿಯೊನಾಲ್ ಪ್ಲ್ಯಾಸ ಎಂಬವನು ಚೆಂಗಲ್ಪಟ್ಟು ಜಿಲ್ಲೆಯ ಕಲೆಕ್ಟರನಾಗಿದ್ದನು. ಅವನಿಗೆ ಮಧುರಾಂತಕದ ಈ ಸರೋವರವನ್ನು ನೋಡಬೇಕೆಂಬ ಬಹಳ ಆಸೆಯಾಯಿತು. ಮೊದಲು ಹೇಳಿದಂತೆ ಸರೋವರವು ದೊಡ್ಡದಾಗಿತ್ತು. ನೀರಿನ ಆಶ್ರಯವು ಬಹು ಚೆನ್ನಾಗಿತ್ತು. ಸಾವಿರಾರು ಎಕ್ರೆ ಭೂಮಿಯಲ್ಲಿ ಬೆಳೆಯಾಗಬಹುತ್ತಿತ್ತು. ಆದರೆ ಪ್ರತಿವರ್ಷವೂ ಮಳೆಕಾಲದಲ್ಲಿ ಈ ಸರೋವರದ ಕಟ್ಟವು ಕಡಿದು ಹೋಗುತ್ತಿತ್ತು. ಮತ್ತು ಸರೋವರದ ನೀರು ಬರಿದಾಗುತ್ತಿತ್ತು. ಪ್ರತಿವರ್ಷವೂ ಜನರು ಕಟ್ಟವನ್ನು ಕಾಣುತ್ತಿದ್ದರು, ಪ್ರತಿವರ್ಷವೂ ಮಳೆಕಾಲದಲ್ಲಿ ಅದು ಕಡಿದು ಹೋಗುತ್ತಿತ್ತು. ೧೮೩೨ರಲ್ಲಿಯೂ ಹೇಗೆಯೇ ಆಗ ಕಟ್ಟವನ್ನು ಕಟ್ಟಿಸುವ ಕೆಲಸವು ಆರಂಭವಾಯಿತು. ಪ್ಲ್ಯಾಸನು ಅದನ್ನು ನೋಡಲಿಕ್ಕೆ ಹೋದನು.

ಮಂದಿರ ನಿರೀಕ್ಷಣೆ

ಕಟ್ಟದ ಕೆಲಸಗಳನ್ನು ನೋಡುತ್ತಿದ್ದಂತೆಯೇ ಸಮೀಪದಲ್ಲಿದ್ದ ಆ ಪುರಾತನ ರಾಮ ಮಂದಿರವನ್ನೂ ನೋಡಬೇಕೆಂಬ ಮನಸ್ಸು ಕಲೆಕ್ಟರನಿಗಾಯಿತು. ಅವನು ಅಲ್ಲಿದ್ದ ಬ್ರಾಹ್ಮಣರ ಅನುಮತಿ ಪಡೆದು ಮಂದಿರದ ಒಳಗೆ ಹೋದನು. ಎಲ್ಲವನ್ನೂ ನೋಡಿಯಾದ ಮೇಲೆ ಅಂಗಳದ ಒಂದು ಮೂಲೆಯಲ್ಲಿ ಕಲ್ಲುಗಳ ಸಾಧಾರಣ ದೊಡ್ಡ ರಾಶಿ ಬಿದ್ದಿರುವದನ್ನು ನೋಡಿ ಅದೇನೆಂದು ಕೇಳಿದನು. 'ದೊರೆಗಳೇ! ಸೀತಮ್ಮನ ಗುಡಿಯನ್ನು ಕಟ್ಟಿಸಲಿಕ್ಕೆ ಈ ಕಲ್ಲುಗಳನ್ನು ತಂದೆವು. ಆದರೆ ಕಟ್ಟದ ಕಟ್ಟಿಸಲಿಕ್ಕೆ ಹಣದ ಅಭಾವ ವಾಹುನ...

...ರಿಂದ ಕೆಲಸ ಹಾಗೆಯೇ ಬಾಕಿ ಉಳಿದಿದೆ' ಎಂದರವರು ಮತ್ತೂ ಅವರು ತಮ್ಮ ತಮ್ಮ ಮನೋವೃತ್ತಿಗೆ ಅನುಸಾರವಾಗಿ ಭಗವಾನ್ ಶ್ರೀರಾಮಚಂದ್ರ ಮತ್ತು ಸೀತಾದೇವಿಯ ಗುಣ ಶ್ಲಾಘನೆ ಮತ್ತು ಮಹಿಮೆಯ ವರ್ಣನೆಮಾಡುತ್ತ ರಾಮನು ಭಕ್ತಶ್ರೇಷ್ಠರ ಮನೋವಾಂಛಿತ ಕೆಲಸಗಳನ್ನು ಖಂಡಿತವಾಗಿಯೂ ಸಫಲ ಮಾಡಿಕೊಡುವನೆಂದರು

ಕಲೆಕ್ಟರನು ಕೇಳಿದ.—"ದೇವಿಯು ಭಕ್ತರ ಇಷ್ಟಾರ್ಥಗಳನ್ನು ಪೂರೈಸುವದು ಸಂಪೂರ್ಣ ನಿಜವೆ?"

ಬ್ರಾಹ್ಮಣರು ದೃಢತೆಯಿಂದ ಹೇಳಿದರು.—"ಖಂಡಿತಕ್ಕೂ!"

ಆಗ ಕಲೆಕ್ಟರ ಪುನಃ ಹೇಳಿದ.—'ನೀವು ಹೇಳುವದು ನಿಜವಾದರೆ, ನಾನು ನಿಮ್ಮ ದೇವಿಯೊಡನೆ ಒಂದು ಪ್ರಾರ್ಥನೆಯನ್ನು ಮಾಡುತ್ತೇನೆ. ಪ್ರತಿವರ್ಷ ದುರುಸ್ತಿ ಮಾಡುತ್ತಿದ್ದರೂ ಪ್ರತಿವರ್ಷ ಮಳೆಗಾಲದಲ್ಲಿ ಕಡಿದುಹೋಗುತ್ತಿರುವ ಈ ಸರೋವರದ ಕಟ್ಟವು ಈ ವರ್ಷ ಕಡಿದು ಹೋಗದಿದ್ದರೆ, ನಾನೇ ನನ್ನ ಸ್ವಂತ ಖರ್ಚಿನಿಂದ ದೇವಿಗ ಒಂದು ಗುಡಿಯನ್ನು ಕಟ್ಟಿಸಿಕೊಡುವೆನು.' ಹೀಗೆ ಕೈಮುಗಿದು ಪ್ರಾರ್ಥಿಸಿ ಅವನು ಮನೆಗೆ ಹೋದನು.

ಕಟ್ಟು ಕಡಿಯಲಿಲ್ಲ

ಮಳೆಗೆ ಆರಂಭವಾಯಿತು. ಮುಸಲಧಾರೆಯಾಗಿ ಮಳೆ ಬರಲಾರಂಭಿಸಿತು. ಸರೋವರವು ತುಂಬಿ ತುಳುಕಾಡತೊಡಗಿತು. ಇನ್ನೇನ ಇನ್ನುಸ್ವಲ್ಪ ಮಳೆ ಹೆಚ್ಚಾಯಿತೆಂದರೆ ಕಟ್ಟವನ್ನು ಮೀರಿ ನೀರು ಹರಿದು ಕಟ್ಟವು ಮೊದಲಿನ ಹಾಗೆಯೇ ಕಡಿದುಹೋಗಲಿಕ್ಕಿತ್ತು. ಕಲೆಕ್ಟರನು ಬಹಳ ಚಿಂತಾತುರನಾಗಿದ್ದನು. ಅವನು ಇಬ್ಬರು ನೌಕರರನ್ನು ಕರಕೊಂಡು ಅಲ್ಲಿಗೆ ಹೋದನು. ಆದರೆ ದೇವಿಯ ಮಹಿಮೆಯಿಂದ ಕಟ್ಟವು ಕಡಿದುಹೋಗಿರಲಿಲ್ಲ. ಅವನಿಗೆ ಪರಮಾಶ್ಚರ್ಯವಾಯಿತು ಅವನು ಆನಂದ ಸಾಗರದಲ್ಲಿ ಮುಳುಗಿ ಏಳತೊಡಗಿದನು. ಅದೇ ಸಮಯದಲ್ಲಿ ದೊಡ್ಡ ಗುಡುಗು ಗುಡುಗಿಸಿತು. ಮಿಂಚು ಮಿಂಚಿತು, ಒಂದು ಕ್ಷಣಕಾಲಕ್ಕೆ ನಾಲ್ಕು ದಿಕ್ಕುಗಳು ಪ್ರಕಾಶಮಾನವಾದುವು ಕಲೆಕ್ಟರ ದೊರೆ ಕಣ್ಣು ಬಿಟ್ಟು ನೋಡಿದ—ಆ ಪ್ರಕಾಶದಲ್ಲಿ ಧನುರ್ಬಾಣ ಧಾರಿಯಾದ ಎರಡು ತೇಜಃಪುಂಜ ಭವ್ಯ ಮೂರ್ತಿಗಳು ಅವನಿಗೆ ಕಾಣಿಸಿಕೊಂಡು ತಕ್ಷಣ ಮಾಯವಾದುವು ಅವುಗಳಲ್ಲಿ ಒಂದು ಶಾಮ ವರ್ಣದ್ದು. ಇನ್ನೊಂದು ಗೌರಕಾಯದ್ದು. ಸಾಹೇಬನು ಕೈಯಲ್ಲಿದ್ದ ಟೊಪ್ಪಿ ಮತ್ತು ಕೊಡೆ ಎರಡನ್ನೂ ದೂರಕ್ಕೆ ಒಗೆದು ಸಾಷ್ಟಾಂಗ ಮಾಡಿದ

ನೌಕರರ ಆಶ್ಚರ್ಯ

ತಮ್ಮ ದೊರೆಯ ಈ ವಿಚಿತ್ರ ವರ್ತನವನ್ನು ಕಂಡು ಸಮೀಪದಲ್ಲಿದ್ದ ನೌಕರರ ಆಶ್ಚರ್ಯಕ್ಕೆ ಮೇರೆ ಉಳಿಯಲಿಲ್ಲ. ಅವರು ಅದೇಕೆ ಹಾಗೆ ಮಾಡಿದಿರೆಂದು ಆತನನ್ನು ಕೇಳಿದರು ಅವನು—"ನೀವು ನೋಡಲಿಲ್ಲವೆ? ನನಗೆ ಮಿಂಚಿನ ಪ್ರಕಾಶದಲ್ಲಿ ಶ್ರೀರಾಮ ಲಕ್ಷ್ಮಣರ ಸಾಕ್ಷಾತ್ಕಾರವಾಯಿತು. ಅವರ ಕೃಪೆಯಿಂದಲೇ ಎಂದಿಗಿಂತ ಹೆಚ್ಚು ಮಳೆ ಬಂದರೂ ಕಟ್ಟು ಕಡಿಯಲಿಲ್ಲ' ಎಂದನು. ಚಾಕರರು 'ನಾವು ಪಾಪಿಗಳು, ಆದುದರಿಂದ ನಮಗೆ ದೇವರು ಕಾಣಿಸಲಿಲ್ಲ' ಎಂದು ತಮ್ಮನ್ನು ತಾವು ಹಳಿಯತೊಡಗಿದರು.

ಪ್ಲ್ಯಾಸನು ತಾನು ಮೊದಲು ಪ್ರಾರ್ಥಿಸಿದ ಮೇರೆಗೆ ತನ್ನ ಸ್ವಂತ ಖರ್ಚಿನಿಂದಲೇ ಮಧುರಾಂತಕದ ಶ್ರೀರಾಮ ಮಂದಿರದ ಸಮೀಪ ಸೀತಾದೇವಿಯ ಗುಡಿಯನ್ನು ಕಟ್ಟಿಸಿಕೊಟ್ಟನು. ಕೆಲಸವು ಕೂಡಲೇ ಆರಂಭವಾಯಿತು. ಗುಡಿಯ ಕೆಲಸವು ಮುಗಿಯುವ ತನಕ ಸಾಹೇಬನು ಮಧುರಾಂತಕದಿಂದ ಬೇರೆ ಕಡೆ ಹೋಗಲಿಲ್ಲ. ಸರೋವರದ ಕಟ್ಟವು ಕಡಿದು ಹೋಗದ ಆ ದಿನದಿಂದ ಶ್ರೀರಾಮ ಚಂದ್ರನಿಗೆ 'ಏರಿಕಾತ್ತ ಪೆರುಮಾಳ್' ಅಂದರೆ 'ಸರೋವರವನ್ನು ಕಾಪಾಡಿದ ಭಗವಾನ' ಎಂಬ ಹೆಸರು ಬಂದಿತು

ಸ್ಮಾರಕ ಶಿಲೆ

ಸೀತಾದೇವಿಯ ಗುಡಿಯ ಒಂದು ಕಲ್ಲಿನ ಮೇಲೆ ಈ ಕೆಳಗಿನ ಕೆಲವು ಅಕ್ಷರಗಳು ತಮಿಳು ಭಾಷೆಯಲ್ಲಿ ಕೆತ್ತಿರುವುದನ್ನು ನಾವು ಈಗಲೂ ಕಾಣಬಹುದು— "ಈಸ್ಟ್ ಇಂಡಿಯಾ ಕಂಪನಿಯ ಜಾಗೀರ ಕಲೆಕ್ಟರನಾದ ಲಿಯೊನಾಲ್ ಪ್ಲ್ಯಾಸನ ಧರ್ಮಕಾರ್ಯ" ಒಬ್ಬ ಆಂಗ್ಲೀಯ ಕ್ರೈಸ್ತನು ಶ್ರೀರಾಮಚಂದ್ರನ ಭಕ್ತನಾಗಿ ಅವನ ದರ್ಶನ ಪಡೆದನು ಮತ್ತು ಸೀತಾದೇವಿಗ ಗುಡಿ ಕಟ್ಟಿಸಿ ಕೊಟ್ಟನು ಎಂಬುದು ಈ ವಿಚಿತ್ರ ಘಟನೆಯಿಂದ ತಿಳಿಯುತ್ತದೆ. ಮನುಷ್ಯನು ಯಾವ ಕುಲ-ಜಾತಿ-ಮತ ಸಂಪ್ರದಾಯದವನೇ ಆಗಿರಬಾರದೇಕೆ, ಅವನು ಭಗವಂತನ ನಿಜ ಭಕ್ತ ಮತ್ತು ಆತನ ಮೇಲೆ ಸಂಪೂರ್ಣ ವಿಶ್ವಾಸವನ್ನಿಡುವವನಾಗಿರುವನಾದರೆ, ದಯಾಸಿಂಧು ಪರಮಾತ್ಮನ ಕೃಪೆಯು ಅವನ ಮೇಲೆ ಸಂಪೂರ್ಣವಾಗಿ ಇರುತ್ತದೆಂಬುದು ಇದರಿಂದ ಸ್ಪಷ್ಟವಾಗುವುದು

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE: ESTD. 1906 CANARA BANK LIMITED

ಮೂರು ಬಣ್ಣಗಳಿಂದ ರಂಜಿತವಾದ

ತಿರುಪತಿ

ವೆಂಕಟರಮಣ

ದೇವರ ಭಾವಚಿತ್ರಗಳು!

ಭಗವದ್ಭಕ್ತರ ಮನೆಮನೆಗಳಲ್ಲಿ ಇದು ವಿರಾಜಿಸುವುದು ಅವಶ್ಯವಾಗಿದೆ

ವೆಂಕಟರಮಣ ದೇವರ ಚಿತ್ರಗಳಿಂದ ಕೂಡಿದ ಕೆಲೆಂಡರುಗಳೂ ಸಿಗುತ್ತವೆ.

ಮಾದರಿ ಪ್ರತಿಗಳನ್ನು ಬಯಸುವವರು ಐದು ಆಣೆಯ ಸ್ಟಾಂಪುಗಳನ್ನು ಕೆಳಗಿನ ವಿಳಾಸಕ್ಕೆ ಕಳಿಸಿಯಬೇಕು.

ಮುಲ್ಕಿ ಗಣಪತಿ ಶ್ರೀನಿವಾಸ ಕುಡ್ವ

ಜನರಲ್ ಮರ್ಚೆಂಟ್,

ಉಡುಪಿ ದ. ಕ.

ರಫ್ತು ಹೆಚ್ಚಾದರೆ ದೇಶವು ಸಂಪನ್ನವಾಯಿತೆ?

ನಮ್ಮ ಬಡತನಕ್ಕೆ ರಫ್ತು ಹೆಚ್ಚಾದುದೇ ಕಾರಣ

ಲೇಖಕರು: ಭರತನ್ ಕುಮಾರಪ್ಪನವರು

ಈಗ ಅನೇಕ ವರ್ಷಗಳಿಂದ ನಮ್ಮ ಹಿಂದೂದೇಶವು ಆಮದು ಮಾಡುವುದಕ್ಕಿಂತ ರಫ್ತು ಮಾಡುವುದು ಹೆಚ್ಚಾಗಿದೆ. ನಮ್ಮ ದೇಶವು ಸಂಪತ್ಸಮೃದ್ಧವಾಗುತ್ತಾ ಇದೆ ಎಂಬುದಕ್ಕೆ ಇದು ಒಂದು ಪ್ರಮಾಣ ಎಂದು ಅನೇಕರು ಹೇಳುವರು. ಆಮದು ಮಾಡುವ ವಸ್ತುಗಳು ದೇಶಕ್ಕೆ ಬೇಕಾದುವುಗಳು, ಮತ್ತು ರಫ್ತು ಮಾಡುವ ವಸ್ತುಗಳು ದೇಶಕ್ಕೆ ಬೇಡವಾಗಿ ಹೆಚ್ಚಿಗೆ ಉಳಿದಂಥವುಗಳು ಎಂದು ಊಹಿಸುವುದಾದರೆ, ರಫ್ತು ಮಾಡುವುದಕ್ಕಿಂತ ಕಡಿಮೆಯಾಗಿ ಆಮದು ಮಾಡುವ ದೇಶವು ಸಂಪನ್ನವಾಗಿದೆ ಎಂದು ಹೇಳಬಹುದು. ಏಕೆಂದರೆ ಆ ದೇಶವು ತನಗೆ ಬೇಕಾದುದಕ್ಕಿಂತ ಹೆಚ್ಚಿಗೆ ಉತ್ಪನ್ನ ಮಾಡುತ್ತದೆ, ಅದರ ದೇಣಿಗೆಗಳಿಗಿಂತ ಮೂಲವು ಜಾಸ್ತಿಯಾಗಿದೆ ಎಂದು ಅರ್ಥವಾಗುತ್ತದೆ.

ಆದರೆ ಇಂಥ ಮಾತುಗಳು ಎಷ್ಟು ಕರ್ಣಮಧುರವಾಗಿರಬಹುದಾದರೂ, ಅವನ್ನು ಸಂಪೂರ್ಣ ಸತ್ಯವೆಂದು ಸ್ವೀಕರಿಸುವುದು ಮೂರ್ಖತನವಾಗಿದೆ. ದೇಶವು ನಿಜವಾಗಿ ಸಂಪನ್ನವಾಗಿರುವುದಾದರೆ, ಆ ಸಂಪನ್ನತೆಯನ್ನು ನಾವು ದೇಶನಿವಾಸಿಗಳ ಜೀವನದಲ್ಲಿ ಕಾಣಬೇಕು. ನಮ್ಮ ದೇಶದ ನಿವಾಸಿಗಳು ಅರ್ಥಾತ್ ಹಳ್ಳಿಗರು ನಿಜಕ್ಕೂ ಸಂಪನ್ನರಾಗಿದ್ದಾರೆಯೆ? ಅವರ ಹೊಟ್ಟೆಬಟ್ಟೆಗೆ ಬೇಕಾದಷ್ಟು ಅವರಿಗೆ ದೊರೆಯುತ್ತಲಿದೆಯೆ? ಅವರು ತಮ್ಮ ಸಾಲ ಸೋಲುಗಳಿಂದ ಮುಕ್ತರಾಗುತಿದ್ದಾರೆಯೆ? ಅವರ ಸ್ಥಾನಮಾನಗಳು ಬೆಳೆಯುತ್ತಲಿವೆಯೆ? ಅವರ ಗುಡಿಕೈಗಾರಿಕೆಗಳು ಉನ್ನತವಾಗುತ್ತಿವೆಯೆ? ನಮ್ಮ ಪೇಟೆ ಪಟ್ಟಣಗಳು ಅವರ ಸಾಹಿತ್ಯ ಸಾಮಗ್ರಿಗಳಿಂದ ತುಂಬಿವೆಯೆ? ಇವೇ ಮೊದಲಾದ ಪ್ರಶ್ನೆಗಳಿಗೆ ಇಲ್ಲವೆಂಬುದು ಉತ್ತರವಾದರೆ, ರಫ್ತು ಹೆಚ್ಚಾದುದರಿಂದ ದೇಶವು ಸಂಪನ್ನವಾಗಿದೆ ಎಂದು ಹೇಳುವ ಮಾತು ಸುಳ್ಳು; ಅದು ಬರೀ ಕಣ್ಣುಕಟ್ಟು ಎಂಬುದು ನಿಜವಾಗಿದೆ.

ನಾವೇನು ಮಾಡುತಿದ್ದೇವೆ?

ಆಮದು ರಫ್ತುಗಳ ವಿಚಾರವನ್ನು ಬಿಟ್ಟು ನಾವು ಸ್ವಲ್ಪ ಆಳವಾಗಿ ಆಲೋಚಿಸಿದರೆ ದೇಶದ ನಿಜಸ್ಥಿತಿಯು ನಮಗೆ ಗೊತ್ತಾಗುವುದು. ನಾವು ನಮಗೆ ಬೇಕಾಗಿ ಖರ್ಚು ಮಾಡಿ ಉಳಿದುದನ್ನು ರಫ್ತು ಮಾಡುತ್ತಿರುವೆವಾದರೆ ಆ ಮಾತು ಬೇರೆ. ಅದರ ಬದಲಿಗೆ ನಮ್ಮ ನಿತ್ಯಜೀವನಕ್ಕೆ ಬೇಕಾದುವುಗಳನ್ನೇ ನಾವು ರಫ್ತು ಮಾಡುತ್ತಿರುವುದಾದರೆ, ದೇಶವು ಸಂಪನ್ನವಾಗುತ್ತಿರುವುದಿಲ್ಲ. ಅದು ಇನ್ನಷ್ಟು ಬಡವಾಗುತ್ತಾ ಬರುತ್ತಿದೆಯೆಂದು ಧಾರಾಳವಾಗಿ ಹೇಳಬಹುದು. ಸರಕಾರದವರೇ ಪ್ರಕಟಿಸಿದ ನಾವು ರಫ್ತು ಮಾಡುವ ಸಾಹಿತ್ಯ ಸಾಮಗ್ರಿಗಳ ಪಟ್ಟಿಯನ್ನು ನೋಡಿದರೆ ಎಲುಬು, ಬಣ್ಣ ಕೊಡುವ ಮತ್ತು ಚರ್ಮ ಹದಮಾಡಲಿಕ್ಕೆ ಬೇಕಾದ ಸಾಮಗ್ರಿಗಳು, ಮೇವು ಹುಲ್ಲು, ಹಸುರು ತರಕಾರಿ, ದವಸಧಾನ್ಯ, ಚರ್ಮ, ಧಾತುಗಳು, ಲೋಹಗಳು, ಎಣ್ಣೆಕಾಳುಗಳು, ಹಿಂಡಿ, ಸಂಬಾರ ಜೀನಸು, ಹತ್ತಿ, ನಾರು, ಉಣ್ಣೆ, ಲೋಪಿನಮರ ಇವೇ ಮೊದಲಾದುವನ್ನು ನಾವು ರಫ್ತುಮಾಡುತಿದ್ದಂತೆ ತೋರುತ್ತದೆ.

ಅರೆಹೊಟ್ಟೆ ಉಣ್ಣುತ್ತಿರುವ ನಮ್ಮ ದೇಶದ ಹಳ್ಳಿಗರು ತಮಗೆ ಜಾಸ್ತಿಯಾಗಿ ಅಥವಾ ಬೇಡವಾಗಿ, ತರಕಾರಿ, ದವಸಧಾನ್ಯ ಎಣ್ಣೆ ಕಾಳುಗಳು ಮತ್ತು ಸಂಬಾರ ಜೀನಸುಗಳನ್ನು ಹೊರದೇಶಗಳಿಗೆ ಕಳುಹಿಸಿಕೊಡುತ್ತಾರೆಂದು ಸರ್ವಥಾ ಹೇಳಲಿಕ್ಕೆ ಬರುವುದಿಲ್ಲ. ಎಲುಬು, ಹಿಂಡಿಗಳನ್ನು ರಫ್ತು ಮಾಡುವುದೆಂದರೆ, ಮೊದಲೇ ನಿಸ್ಸಾರವಾದ ನಮ್ಮ ಭೂಮಿಯನ್ನು ಮತ್ತಷ್ಟು ನಿಸ್ಸಾರಮಾಡಲಿಕ್ಕೆ ನಾವು ಸೊಂಟಕಟ್ಟಿದ್ದೇವೆಂದು ಅರ್ಥವಾಗುತ್ತದೆ. ಕೃಷಿಯನ್ನೇ ಹೊಂದಿಕೊಂಡಿರುವ ನಾವು ಈ ಸಾಮಾನುಗಳನ್ನು ರಫ್ತು ಮಾಡುವುದು ಆತ್ಮಘಾತಕ ಮಾಡಿಕೊಳ್ಳುವುದಾಗಿದೆ. ಮತ್ತೆ ಮೇವು, ಹಿಂಡಿಗಳನ್ನು ರಫ್ತು ಮಾಡುವುದೆಂದರೆ, ಕೃಷಿ ಕಾರ್ಯಕ್ಕೆ ಅನಿವಾರ್ಯವಾಗಿರುವ ನಮ್ಮ ದನಕರುಗಳನ್ನು ಉಪವಾಸ ಹಾಕುವುದೆಂದೇ ಅರ್ಥ. ದನಕರುಗಳು ಉಪವಾಸ ಬಿದ್ದರೆ ನಮಗೆ ಹಾಲು ದೊರೆಯುವುದಾದರೂ ಎಲ್ಲಿಂದ? ನಾವು ಸ್ವಲ್ಪ ಹತ್ತಿಬಟ್ಟೆಗಳನ್ನು ರಫ್ತು ಮಾಡುವುದು ನಿಜ. ಆದರೆ ಅದಕ್ಕೂ ಹೆಚ್ಚಿಗೆಯಾಗಿ ಹತ್ತಿಯನ್ನೂ ಉಣ್ಣೆಯನ್ನೂ ರಫ್ತು ಮಾಡುತ್ತೇವೆ. ಮತ್ತೆ ನಾವು ರಫ್ತು ಮಾಡುವ ಬಣ್ಣದ ಸಾಮಾಗ್ರಿಗಳು, ಖನಿಜಗಳು, ಲೋಪಿನ ಮರಗಳು, ಚರ್ಮ ಸ್ವಲ್ಪವಾಗಿಲ್ಲ. ಜನರ ಅಥವಾ ದೇಶದ ಕೈಗಾರಿಕೆಯ ಉನ್ನತಿಗೆ ಅತ್ಯಂತ ಆವಶ್ಯಕವಾದ ಈ ಪದಾರ್ಥಗಳನ್ನು ಪರದೇಶಗಳಿಗೆ ಕಳುಹಿಸಿಕೊಡುವುದರಲ್ಲಿ ಏನರ್ಥ? ಇವು ನಮಗೆ ಹೆಚ್ಚಾಗಿ ನಾವು ಇವನ್ನು ರಫ್ತುಮಾಡುತ್ತಿದ್ದೇವೆಯೆ? ಅಥವಾ ಇವುಗಳಿಂದ ಸಿದ್ಧ ಸಾಮಾಗ್ರಿಗಳನ್ನು ತಯಾರಿಸಲಿಕ್ಕೆ ಅಸಮರ್ಥರಾಗಿ ನಾವು ಹೀಗೆ ಮಾಡುತ್ತಿದ್ದೇವೆಯೆ? ನಮ್ಮ ದೇಶದ ಜನರು ಬಡವರಾಗಿದ್ದಾರಾದರೆ ಅದಕ್ಕೆ ಅವರು ನಿರುದ್ಯೋಗಿಗಳಾಗಿರುವುದು ಪ್ರಬಲ ಕಾರಣವಾಗಿದೆ. ಅಲ್ಲವಾದರೆ ನಾವೆಂದೂ ಈ ಕಚ್ಚಾ ಪದಾರ್ಥಗಳನ್ನು ರಫ್ತು ಮಾಡುತ್ತಿದ್ದಿಲ್ಲ.

ಯುದ್ಧಕಾಲದ ಸಂಪತ್ತಿ

ಯುದ್ಧಕಾಲವಾದ್ದುದರಿಂದ ನಮ್ಮ ವ್ಯಾಪಾರವು ಬೆಳೆದು ನಾವು ಸಂಪನ್ನರಾಗುತ್ತಿದ್ದೇವೆಂದು ಹೇಳುತ್ತಾರೆ. ನಮ್ಮ ರಫ್ತು ಎಷ್ಟು ಜಾಸ್ತಿಯಾಗಿರುವದೆಂದರೆ ರೈಲ್ವೆ ಮತ್ತು ಸ್ಟೀಮರುಗಳಿಗೆ ಸೊಂಟ ಮುರಿದು ಹೋಗುವಷ್ಟು ಕೆಲಸವಾಗಿದ್ದೆಯಂತೆ. ಸಾಧಾರಣ ಸ್ಥಿತಿಯಲ್ಲಿದ್ದರೆ ಇದು ನಮ್ಮ ಸಂಪನ್ನತೆಯ ಲಕ್ಷಣವೆಂದೇ ಹೇಳಬಹುದಾಗಿತ್ತು. ಆದರೆ ನಮ್ಮ ದೇಶದ ನಿಜ ಪರಿಸ್ಥಿತಿಯನ್ನು ಕಾಣುವಾಗ— ಇದು ನಮ್ಮ ಜೀವವನ್ನೇ ಹಿಂಡಿ ತೆಗೆಯುವ ಒಂದು ಉಪಾಯವೆಂದು ಹೇಳಬೇಕಾಗುತ್ತದೆ. ಈ ರೀತಿ ನಮ್ಮ ಅಸಿದ್ಧ ಪದಾರ್ಥಗಳು ಪರದೇಶಕ್ಕೆ ರಫ್ತಾಗುವದರಿಂದ ನಾವು ಈಗಿರುವುದಕ್ಕಿಂತ ಮತ್ತಷ್ಟು ಬಡವರಾಗುವ ಭಯವಿದೆ.

ರಫ್ತು ಸಂಪನ್ನತೆಯ ಲಕ್ಷಣವಲ್ಲ

ಆದುದರಿಂದ ಕೇವಲ ರಫ್ತು ಜಾಸ್ತಿಯಾಗುವದು ಸಂಪನ್ನತೆಯ ಲಕ್ಷಣವಾಗದು; ಈಗಿನ ಪರಿಸ್ಥಿತಿಯಲ್ಲಿ ಅದು ನಮ್ಮ ಬಡತನವು ಬೆಳೆಯುತ್ತಿರುವ ಕುರುಹು ಎಂದೇ ಹೇಳಬಹುದು. ನಾವು ಹೆಚ್ಚೆಚ್ಚು ಪದಾರ್ಥಗಳನ್ನು ಬೆಳೆಸಿ ಅವನ್ನು ನಮಗಾಗಿಯೇ ಉಪಯೋಗಿಸಬೇಕು. ಮತ್ತು ಆ ಪದಾರ್ಥಗಳನ್ನು ಕಡಿಮೆ ಕಡಿಮೆ ರಫ್ತು ಮಾಡಬೇಕು— ಆಗ ಮಾತ್ರ ನಾವು ಸಂಪನ್ನರಾಗುತ್ತಿದ್ದೇವೆಂದು ಹೇಳಬಹುದು.

ಆದುದರಿಂದ ರಫ್ತು ಮಾಡಲಿಕ್ಕಾಗಿ ಸಾಮಗ್ರಿಗಳನ್ನು ಬೆಳೆಸುವ ಚಿಂತೆ ಪ್ರಯತ್ನಗಳು ನಮಗೆ ಬೇಕಾಗಿಲ್ಲವೆಂದು ನಾವು ನಮ್ಮ ಹಳ್ಳಿಗರಿಗೆ ತಿಳಿಯುವಂತೆ ಸ್ಪಷ್ಟಮಾಡೋಣ. ಜೀವನಕ್ಕೆ ಬೇಕಾದುದನ್ನು ಧಾರಾಳವಾಗಿ ಬೆಳೆಸಿ ಅವನ್ನು ಸ್ವಂತಕ್ಕೆ ಉಪಯೋಗಿಸುವುದೇ ನಮ್ಮ ಧ್ಯೇಯವಾಗಿರಬೇಕು. ಹಣಕ್ಕಾಗಿ ಬೆಳೆ ಮಾಡುವುದನ್ನು ಬಿಟ್ಟು ರೈತರು ಆಹಾರಕ್ಕಾಗಿ ಬೆಳೆಮಾಡಲಿ. ಮತ್ತೆ ತಮಗೆ ಬೇಕಾಗಿ ಜಾಸ್ತಿಯಾದದ್ದನ್ನು ಅಲ್ಲದೆ, ಉಳಿದುದನ್ನು ಯಾವ ಸಂದರ್ಭದಲ್ಲಿಯೂ ಮಾರದಂತೆ ಅವರು ಜಾಗ್ರತೆ ತೆಗೆದುಕೊಳ್ಳಲಿ. ಈ ರೀತಿ ಮಾಡುವುದರಿಂದಲೇ ನಮ್ಮ ಬಡತನವು ದೂರವಾಗುವುದು. ಅದು ದೂರವಾಗುವ ಬೇರೆ ಯಾವ ಉಪಾಯವೂ ಇರುವುದಿಲ್ಲ.



ಶರಚ್ಚಂದ್ರರ ಕಥೆಗಳು

ಬಂಗಾಳದ ಪ್ರಸಿದ್ಧ ಕಥೆಗಾರರಾದ ಡಾ। ಶರಚ್ಚಂದ್ರ ಚೋಸರ ವಿಪ್ರದಾಸ, ನಿಷ್ಕೃತಿ ಎಂಬೀ ಗ್ರಂಥಗಳನ್ನು ಚಲಚಿತ್ರದಲ್ಲಿ ಪ್ರದರ್ಶಿಸುವರೆ ನ್ಯೂಥಿಯೇಟರ್ಸಿನವರು ಹಕ್ಕು ಪಡಕೊಂಡಿರುವರೆಂದು ಗೊತ್ತಾಗಿದೆ. 'ಬಡೀ ದೀದಿ'ಯನ್ನು ನಿರ್ದೇಶಿಸಿದ ಅಮರನಲ್ಲಿಕರೇ ವಿಪ್ರದಾಸವನ್ನು ನಿರ್ದೇಶಿಸುವರು.

ಅಮೃತ

ಖಾಂಡೇಕರರ 'ಅಮೃತ' ಚಿತ್ರದ ಪ್ರಥಮ ಪ್ರದರ್ಶನವು ಕಳೆದ ವಾರ ಆಯಿತು. ಇದರಲ್ಲಿ ಲಲಿತಾ ಪವಾರ್, ವಿನಾಯಕ್, ಮೀನಾಕ್ಷಿ, ಮಾಸ್ಟರ್ ವಿಟ್ಠಲ್ ಇಗ್ನೂ ಅಣ್ಣಾ ಮಾಳ್ವಂಕರ್ ಮೊದಲಾದವರು ಅಭಿನಯಿಸುತ್ತಾರೆ.

ಆಶಾ

ನ್ಯಾಶನಲ್ ಸ್ಟುಡಿಯೋದವರು ತಯಾರಿಸುವ 'ಆಶಾ' ಎಂಬೀ ಚಿತ್ರವು ಬೇಗನೇ ಪ್ರದರ್ಶನಕ್ಕೆ ಸಿದ್ಧವಾಗಲಿದೆ ಇದರಲ್ಲಿ ಸದಾಶಿರ್ ಅಖ್ತಾರರು ಮುಖ್ಯ ಪಾತ್ರ ಪಾತ್ರವಹಿಸುವರು.

ಎರಡು ಚಿತ್ರಗಳು

ಇದೇ ಕಂಪೆನಿಯವರು ತಯಾರಿಸುವ 'ಸೋದರಿ' ಮತ್ತು ಕಸೌತಿ ಎಂಬೀ ಚಿತ್ರಗಳು ಪೂರ್ತಿಯಾಗುತ್ತಾ ಬರುತ್ತವೆ. ಶೇಖ್ ಮುಖ್ತಾರ್, ನಲಿನೀ ಜಯಂತ್ ಮೊದಲಾದವರು ಇದರಲ್ಲಿ ಅಭಿನಯಿಸುವರು

ಮುಂದಿನ ಮೂರು ಚಿತ್ರ

ಈ ವರ್ಷದಲ್ಲಿ ನೇಶನ್ ಸ್ಟುಡಿಯೋದವರು 'ನಿರ್ದೋಷ' 'ರೋಟಿ' ಮತ್ತು 'ಗರೀಬ' ಎಂಬೀ ಮೂರು ಚಿತ್ರಗಳನ್ನು ತಯಾರಿಸುವ ಯೋಜನೆಯಲ್ಲಿರುವರೆಂದು ತಿಳಿದಿದೆ

'ಗರೀಬ'ವನ್ನು ರಾಮಚಂದ್ರ ಠಾಕೂರರೂ, 'ರೋಟಿ'ಯನ್ನು ಮೆಹಬೂಬರೂ 'ನಿರ್ದೋಷ'ವನ್ನು ವಿರೇಂದ್ರ ದೇಸಾಯಿಯವರೂ ನಿರ್ದೇಶಿಸುವರೆಂದು ತಿಳಿದಿದೆ

'ನಿರ್ದೋಷ'ದ ಹಿಂದೀ ಮರಾಠೀ ಪ್ರತಿಗಳಲ್ಲಿ ನಲಿನಿ ಜಯವಂತಳೇ ಅಭಿನಯಿಸುತ್ತಾಳೆ 'ರೋಟಿ'ಯಲ್ಲಿ ಚಂದ್ರಮೋಹನ ಮತ್ತು ಶೇಖ ಮುಖ್ತಾರರು ಅಭಿನಯಿಸುತ್ತಾರೆ 'ಗರೀಬ'ದಲ್ಲಿ ಸುರೇಂದ್ರ ಮತ್ತು ರೋಸ್ ಇವರು ನಟಿಸುವರು.

ಸಾಧನಾ ಬೋಸಳು ನ್ಯೂ ಥಿಯೇಟರ್ಸಿಗೆ

ನ್ಯೂ ಥಿಯೇಟರ್ಸಿನಲ್ಲಿ ಸಾಧನಾ ಬೋಸಳು ತನ್ನ ಪತಿಯೊಂದಿಗೆ ಬಂದು ಸೇರಿರುವಳು ಮನ್ಮಥ ರೈಯವರು ಬರೆದ ಒಂದು ಸಾಮಾಜಿಕ ಕಥೆಯಲ್ಲಿ ಅಭಿನಯಿಸುವಳು ಅವಳ ಪತಿ ಮಾಧು ಬೋಸರೇ ಅದನ್ನು ನಿರ್ದೇಶಿಸುವರು. 'ರಾಜ ನರ್ತಕಿ'ಯಲ್ಲಿ ಸಾಧನಾ ಬೋಸಳೊಡನೆ ನಟಿಸಿದ ಜ್ಯೋತಿ ಪ್ರಕಾಶಳೆಂಬ ನಟಿಯು ಸಾಧನಳೊಡನೆ ಇದರಲ್ಲಿಯೂ ನಟಿಸುವಳು ಅಹೀನ್ ಚೌಧರಿಯು ಈ ಚಿತ್ರಪಟದಲ್ಲಿ ಕೆಲಸ ಮಾಡುವನು.

ಮಂಥನ್

ವಾಡಿಯಾದವರು ಬಹು ವೆಚ್ಚಮಾಡಿ ತಯಾರಿಸಿದ ಚಿತ್ರ 'ಮಂಥನ'ವು ಈ ವಾರ ಪ್ರದರ್ಶಿತವಾಗುವುದು. ರಾಜಕುಮಾರಿ, ದಲಪತ್, ಸರದಾರ ಮನ್ಸೂರ್ ಇವರು ಮುಖ್ಯ ಪಾತ್ರ ವಹಿಸುವರು

ನೋಟೀಸು

ಸೌತ್ ಕೆನರಾ ಡಿಸ್ಟ್ರಿಕ್ಟ್ ರ್‍ಯಾಫಳಿನಲ್ಲಿ ಇನಾಮುಗಳನ್ನು ಪಡೆದಿರುವ ಯಾವತ್ತೂ ಜನರು ತಮ್ಮ ಕ್ಲೈಮ್ ಟಿಕೇಟುಗಳನ್ನು ಹಾಜರುಪಡಿಸಿ ಇನಾಮುಗಳನ್ನು 1941ನೇ ಜೂನ್ ತಾರೀಕು 2ರೊಳಗಾಗಿ ಮಂಗಳೂರು ಹಜೂರು ಕಛೇರಿಯಲ್ಲಿರುವ ಗೊನರರಿ ಟ್ರೆಜರರಿಂದ ಪಡಕೊಳ್ಳಬೇಕೆಂದು ಈ ಮೂಲಕ ಪ್ರಕಟಿಸಲಾಗುತ್ತದೆ — ಇದಕ್ಕೆ ತಪ್ಪಿದಲ್ಲಿ ಇನಾಮುಗಳು ದ. ಕ. ಜಿಲ್ಲಾ ಯುದ್ಧನಿಧಿಗೆ ಜಮಾ ಮಾಡಲ್ಪಡುವುವು ಇನಾಮು ಹೊಂದಿದವರಿಗೆ ಸ್ವತಹಾ ಬರಲು ಅನುಕೂಲವಾಗದೆ ಇದ್ದಲ್ಲಿ ಅವರು ತಮ್ಮ ಸ್ನೇಹಿತರನ್ನಾಗಲಿ ಸಂಬಂಧಿಕರನ್ನಾಗಲಿ ತಮ್ಮ ಇನಾಮುಗಳನ್ನು ಮಂಗಳೂರಲ್ಲಿ ಪಡೆಯಲು ತಕ್ಕ ಅಧಿಕಾರವನ್ನು ಕೊಡಬಹುದು ಇಂಥಾ ಅಧಿಕಾರ ಪತ್ರಗಳಿಗೆ ಕನಿಷ್ಠ ಪಕ್ಷ ಗ್ರಾಮ ಮೆಜಿಸ್ಟ್ರೇಟರುಗಳಿಗಿಂತ ಕಡಿಮೆ ತರಗತಿಯವರಲ್ಲದ ಸರಕಾರಿ ಆಫೀಸರರ ಸಾಕ್ಷಿ ಇರತಕ್ಕದ್ದು.

S. K. Dt Raffle Office Mangalore 19 5 1941 — Hon Treasurer, South Kanara District Raffle

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ —

ಬಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ, ಬೊಕ್ಕೆ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ

ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ ಮಹಮ್ಮದಾಲಿ ರೋಡ್, ಮಂಗಳೂರು.

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟು ಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನಿನ (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧೀಕರಿಸಿರುತ್ತದೆ ಈ ಸಾಬೂನಿನಿಂದ ಹೊರಟ ಮಹತ್ತಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ

ಕುಟಿಕೂರಾ ಸಾಬೂನು (Cuticura Soap) ಔಷಧಯುಕ್ತಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನು ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು ಮುಖ್ಯ. ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು

CUTICURA SOAP

ವಿಚಿತ್ರ-ಪ್ರಪಂಚ

ಬಹು ಹಗುರನಾದ ಮನುಷ್ಯ

ನ್ಯೂಯೋರ್ಕ ನಗರದಲ್ಲಿ ಕ್ಲೆಬ್ರುಕ್ ಎಂಬ ಒಬ್ಬ ವಿಚಿತ್ರ ಮನುಷ್ಯನು ಇದ್ದಾನೆ. ಇವನು ಪ್ರಪಂಚದಲ್ಲೀ ಬಹಳ ಹಗುರನಾದ ಮನುಷ್ಯನಾಗಿರುವನು. ಜನರು ಇವನನ್ನು ಮನುಷ್ಯ ರೂಪದ ವಾಯುಚೀಲ ಎಂದು ಅಡ್ಡ ಹೆಸರಿಟ್ಟು ಕರೆಯಲಾರಂಭಿಸಿದ್ದಾರೆ. ಇವನ ಹಗುರತೆಯ ಕಾರಣವೇನೆಂಬುದು ಯಾರಿಗೂ ತಿಳಿದಿಲ್ಲ. ತಜ್ಞ ಡಾಕ್ಟರರಿಗೆ ಕೂಡ ಈ ರಹಸ್ಯವು ಗೊತ್ತಾಗಿರುವದಿಲ್ಲ. ಪರೀಕ್ಷೆಗಾಗಿ ಒಬ್ಬ ಡಾಕ್ಟರನು ಇವನ ಕುತ್ತಿಗೆಗೆ ಗಟ್ಟಿಯಾದ ರಬ್ಬರ ಪಟ್ಟಿಗೆಗಳನ್ನು ಕಟ್ಟಿ ನೀರಿಗೆ ದೂಡಿದನು. ಕ್ಲೆಬ್ರುಕನು ಮುಳುಗಿ ಸಾಯುವನೆಂದು ಎಲ್ಲರೂ ಎಣಿಸಿದ್ದರು. ಆದರೆ ಆಗಲೂ ಅವನು ತೇಲಾಡಿರುವದನ್ನು ನೋಡಿ ಪ್ರೇಕ್ಷಕರ ಆಶ್ಚರ್ಯಕ್ಕೆ ಪಾರವೇ ಉಳಿಯಲಿಲ್ಲ. ಈಗ ಈ ಮನುಷ್ಯನನ್ನು ಯಾವ ಪ್ರಕಾರ ನೀರಿನಲ್ಲಿ ಮುಳುಗುವಂತೆ ಮಾಡಬಹುದು ಎಂಬ ಯೋಚನೆಯು ಅನೇಕ ಮಂದಿಗೆ ನಿದ್ರೆ ಹತ್ತದಂತೆ ಮಾಡಿದೆ.

ಮನೆಯ ಕೆಲಸಕ್ಕೆ ಪ್ರಾಣಿಗಳು

ರಷ್ಯದಲ್ಲಿ ವ್ಲಾಡಿಮಿರ್ ಡೊರೋವ್ ಎಂಬ ಹೆಸರಿನ ಒಬ್ಬ ಪ್ರೊಫೆಸರರು ಇದ್ದಾರೆ. ಅವರ ಮನೆಯಲ್ಲಿ ನೌಕರಿ ಚಾಕರಿ ಸೇವೆ ಶುಶ್ರೂಷೆ ಮಾಡಲಿಕ್ಕೆ ನೌಕರ ಚಾಕರಿಯ ಸ್ತ್ರೀ ಪುರುಷರು ಇರುವದಿಲ್ಲ. ಈ ಎಲ್ಲಾ ಕೆಲಸಗಳನ್ನು ಅವರು ಪಳಗಿಸಿ ಸಾಧುಮಾಡಿದ ಪ್ರಾಣಿಗಳೇ ಮಾಡುತ್ತವೆ. ಅವರ ದೊಡ್ಡ ಕರಡಿಯು ಮರವನ್ನು ಕಡಿಯುತ್ತದೆ ಮತ್ತು ಹೊಲವನ್ನು ಶುಚಿಯಾಗಿಡುತ್ತದೆ. ಒಂದು ಮುಳ್ಳುಹಂದಿ ಧಾನ್ಯರಾಶಿಯ ಮೇಲೆ ಹೊರಳಾಡಿ ಕೋಳಿಗಳ ಮುಂದೆ ನಿಲ್ಲುತ್ತದೆ; ಆಗ ಅದರ ಮುಳ್ಳುಗಳ ನಡುವೆ ಸಿಕ್ಕಿದ್ದ ಕಾಳುಗಳನ್ನು ಕೋಳಿಗಳು ಹೆಕ್ಕಿ ತಿನ್ನುತ್ತವೆ. ಒಂದು ನಾಯಿ ಮನೆಯನ್ನು ಕಾಯುತ್ತದೆ; ಮತ್ತೊಂದು ಆಹಾರವನ್ನು ಒಯ್ಯುವ ಕೆಲಸ ಮಾಡುತ್ತದೆ. ಆದರೆ ಡೊರೊವರಂತೆ ಪ್ರತಿಯೊಬ್ಬನು ಸಾಧುಮಾಡಿದ ಪ್ರಾಣಿಗಳಿಂದ ತನ್ನ ಮನೆ ಕೆಲಸಗಳನ್ನು ಮಾಡಿಸಿಕೊಳ್ಳುವನಾದರೆ ಮತ್ತೆ ನೌಕರ ಚಾಕರರಿಗೆ ಕೆಲಸವೆಲ್ಲಿ? ಆದುದರಿಂದ ಅದು ಕೂಡದೆಂದು ಸೋವಿಯಟ್ ಸರಕಾರವು ಡೊರೊವರನ್ನು ನಿಷೇಧಿಸಿದೆ.

ತಿರುಗುವ ದ್ವೀಪಗಳು

ಲೂಫ ಕ್ವೆನ್ಲಿನ್ ಎಂಬಲ್ಲಿ ಒಂದು ವಿಶಾಲವಾದ ಸುಂದರ ಸರೋವರವಿರುತ್ತದೆ. ಈ ಸರೋವರದಲ್ಲಿ ಕೆಲವು ದ್ವೀಪಗಳು ಇರುವವು. ಆಶ್ಚರ್ಯವೇನೆಂದರೆ ಪ್ರಾಣಿ ಪಕ್ಷಿಗಳು ಈಜಾಡಿ ಹೋಗುವಂತೆ ಈ ದ್ವೀಪಗಳು ಸರೋವರದಲ್ಲಿ ಈಜಾಡಿ ಒಂದು ಕಡೆಯಿಂದ ಒಂದು ಕಡೆಗೆ ಹೋಗುವವು. ತಮ್ಮ ಈಜಾಟವು ಮುಗಿದ ಬಳಿಕ ಅವುಗಳು ತಮ್ಮ ಮೊದಲಿನ ಸ್ಥಾನವನ್ನೇ ಬಂದು ಸೇರುವವು. ಹೀಗೆ ಇವು ತಿರುಗುತ್ತಿರುವದನ್ನು ಕಳೆದ ಈಸ್ಟರ ಹಬ್ಬದ ಕಾಲದಲ್ಲಿಯೂ ಜನರು ನೋಡಿದರು. ಇವು ಈಜಾಟವನ್ನು ಆರಂಭಿಸುವಾಗ ದೊಡ್ಡ ಬಿರುಗಾಳಿ ಎದ್ದು, 'ಮರಗಳು ಉರುಳಿ ಬಿದ್ದ ಶಬ್ದವಾಗುವದು. ಮತ್ತೆ ಎಲ್ಲವೂ ನಿಶ್ಶಬ್ದವಾದಾಗ ಇವು ಸ್ವಸ್ಥಾನಕ್ಕೆ ಬಂದು ಸೇರುತ್ತವೆ! ಈ ಅದ್ಭುತವು ಹೇಗಾಗುತ್ತದೆ ಎಂಬುದು ಈ ತನಕ ಯಾರಿಗೂ ತಿಳಿದಿರುವದಿಲ್ಲ.

ವಿಜ್ಞಾನಯುಗ

ದೊಡ್ಡ ಕುಟುಂಬದ ಮಕ್ಕಳು ಸುಳ್ಳುಗಾರರಾಗುತ್ತಾರೆ

ಅಮೆರಿಕದ ಕೆಲವು ವಿಜ್ಞಾನಿಗಳು ಈ ಒಂದು ತತ್ವವನ್ನು ಹುಡುಕಿ ತೆಗೆದು ಅದನ್ನು ಅಂಕೆ ಸಂಖ್ಯೆಗಳ ಮೂಲಕ ಸಿದ್ಧಾಂತ ಮಾಡಿರುವರು. ಬೋಸ್ಟನದ ಮಾನಸಿಕ ರೋಗಗಳ ಆಸ್ಪತ್ರೆಯ ಚಿಕಿತ್ಸಕರಾದ ಡಾಕ್ಟರ ನೀಲ ಎ. ಡೇಟನ್ ಎಂಬವರು ಅಮೆರಿಕದ ಮನಸ್ತತ್ವ ಸಮಿತಿಯ ಮುಂದೆ ಸಾಕ್ಷಿ ಕೊಡುತ್ತಾ—'ದೊಡ್ಡ ಮನೆತನಗಳ ಮಕ್ಕಳು ಗಣಿತದಲ್ಲಿ ಬಹಳ ಕುಶಲರಾಗಿ ಇರುತ್ತಾರೆ. ಅವರು ವಿಧೇಯರೂ ಸರಳರೂ ಆಗಿರುತ್ತಾರೆ. ಆದರೆ ಅವರಲ್ಲಿ ಕೆಲವು ದೋಷಗಳೂ ಕಂಡುಬಂದಿವೆ. ಅವರು ಸುಳ್ಳುಗಾರರೂ ಜಗಳ ಗಂಟಿಗಳೂ ಹಟವಾದಿಗಳೂ ಆಗಿ ಇರುತ್ತಾರೆ ಎಂದಿರುವರು

ಎಂದೂ ನಿಲ್ಲದ ಗಡಿಯಾರ

ಮನುಷ್ಯನ ಬಹುದಿನಗಳ ಆಸೆಯು ಈಗ ಪೂರ್ತಿಯಾದಂತಾಯಿತು. ಗಡಿಯಾರ ತಯಾರಿಸುವವರು ಈಗ ಎಂದೂ ನಿಲ್ಲದ ಒಂದು ಗಡಿಯಾರವನ್ನು ತಯಾರಿಸಿರುವರು. ಈ ಗಡಿಯಾರಕ್ಕೆ ಅಟ್ಮಸ್ ಎಂದು ಹೆಸರಿಟ್ಟಿದ್ದಾರೆ. ರಚನಾಕ್ರಮದಲ್ಲಿ ಇದಕ್ಕೂ ಸರ್ವಸಾಧಾರಣ ಮಾರಲಿಕ್ಕೆ ಸಿಗುವ ಗಡಿಯಾರಗಳಿಗೂ ಯಾವ ಸಂಬಂಧವೂ ಇರುವದಿಲ್ಲ. ಈ ಹೊಸ ಗಡಿಯಾರಕ್ಕೆ ಕೀ ಕೊಡುವ ಅಥವಾ ವಿದ್ಯುಚ್ಛಕ್ತಿಯ ಅಗತ್ಯವಿಲ್ಲ. ವಾತಾವರಣದ ಕಾವಿನಿಂದಲೇ ಗಡಿಯಾರದ ಚಲನೆಗೆ ಬೇಕಾದ ಚೈತನ್ಯವು ಶಕ್ತಿಯು ದೊರೆಯುತ್ತದೆ. ವಾತಾವರಣ ಕಾವಿನ ಹೆಚ್ಚು ಕಡಿಮೆಯಿಂದ ಇದು ಸದಾಕಾಲ ನಡೆಯುತ್ತದೆ. ಆದರೂ ಕೂಡ ಇದರ ರಚನೆಯು ಬಹಳ ಸುಲಭವೂ ಸರಲವೂ ಆಗಿದೆ. ಇದರಲ್ಲಿ ಕೇವಲ ೧೧ ಚಕ್ರಗಳು ಇರುತ್ತವೆ. ಇವು ಬಹು ನಿಧಾನವಾಗಿ ಚಲಿಸುತ್ತಿರುವದರಿಂದ ನೂರಾರು ವರ್ಷಗಳು ಕಳೆದುಹೋದರೂ ಸವೆದು ಹೋಗುವ ಭಯವಿರುವದಿಲ್ಲ. ಈ ಗಡಿಯಾರದ ಮೋಟರವಾದರೋ ಇನ್ನೂ ಸುಲಭವಾಗಿರುವದು. ಮೋಟರಿನಲ್ಲಿ ಮೂರೇ ಮೂರು ವಸ್ತುಗಳು ಇವೆ. ಅವುಗಳಲ್ಲಿ ಒಂದು ಮಾತ್ರ ಚಲನೆಯುಳ್ಳದ್ದಾಗಿರುವುದು. ಇದು ಉಷ್ಣಮಾಪಕ ಯಂತ್ರದ ಹಾಗೆ ಒಂದು ಗಾಜಿನ ಕೊಳವೆಯಾಗಿದೆ. ಮತ್ತು ಅದರೊಳಗೆ ಸ್ವಲ್ಪ ಪಾದರಸವು ಇರುತ್ತದೆ. ಈ ಗಡಿಯಾರವು ಎಲ್ಲಾ ಋತುಮಾನಗಳಲ್ಲಿ ಎಲ್ಲ ಪ್ರದೇಶಗಳಲ್ಲಿ ಕೈಯಿಂದ ಮುಟ್ಟದೇನೇ ಸರಿಯಾದ ಸಮಯವನ್ನು ಕೊಡುತ್ತದೆ.

ರೇಡಿಯೋದ ಹೊಸ ಚಮತ್ಕಾರ

ಸಾಮಾನ್ಯ ರೇಡಿಯೋಗಳಿಂದ ಒಂದೇ ವರ್ತಮಾನಗಳನ್ನು ಕಳುಹಿಸಬಹುದು ಅಥವಾ ಕೇಳಬಹುದು, ವಿನಾ ಒಂದು ಯಂತ್ರದಿಂದ ಈ ಎರಡೂ ಜಾತಿಯ ಕೆಲಸಗಳನ್ನು ಮಾಡಲಿಕ್ಕಾಗುವುದಿಲ್ಲ. ಆದರೆ ಈಗ ತಾನೇ ಕಂಡು ಹಿಡಿದ ಒಂದು ಯಂತ್ರವು ಈ ಎರಡೂ ಕೆಲಸಗಳನ್ನು ಮಾಡುವುದು. ಆದರೆ ಕೇವಲ ಮೂರು ಮೈಲುಗಳ ಅಂತರದಲ್ಲಿ ಮಾತ್ರ ಇದರ ಕೆಲಸವು ನಡೆಯುತ್ತದೆ. ಈ ಅಂತರವನ್ನು ಹೆಚ್ಚಿಸಲಿಕ್ಕಾಗಿ ಆ ವಿಜ್ಞಾನಿಯು ಪುನಃ ಪ್ರಯತ್ನಶೀಲನಾಗಿರುವನು. ಇದು ಸಾಧ್ಯವಾದರೆ ಬಹಳ ಅನುಕೂಲವಾಗುವುದು. ಯಂತ್ರದ ಭಾರವು ಕೇವಲ ಹನ್ನೊಂದು ಸೇರು ಇರುತ್ತದೆ. ಪೋಲೀಸರು, ಅಗ್ನಿಶಾಮಕರು, ಗೂಢಚಾರರು ಮತ್ತು ಮಿಲಿಟರಿ ಇವರಿಗೆ ಬಹಳ ಪ್ರಯೋಜನಕಾರಿಯಾಗಿರುವುದು.

BHUVANENDRA PRODUCTS LTD.,

Head Office and Factory:

KATAPADI S. Kanara.

Depots:

1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea. Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟಾಕಿಸ್ಟರು —

ಯು. ಪಾಂಡುರಂಗ ನಾಯಕ್, ರಥಬೀದಿ.

ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.

ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಳಿ

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರಾಜವೈದ್ಯ ಬಾಬಾ ಗುಣೆ ಇವರ

"ಸುರಂಗಾ" ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ— ಕೂದಲು ಬೀಳುವಿಕೆ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು. ಅಲ್ಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ವಿಹಾರಿಸುತ್ತದೆ.

೪ ಔನ್ಸಿನ ಬಾಟ್ಲಿಗೆ ರೂ. ೧—೦—೦.

Agents:

Anglo Oriental Pharmacy, Hampankatta.

Stocks also at:

R. V. Kamath & Co, Car-street Mangalore

THE PIE-MONEY BANK LTD.,

Maidan Road, MANGALORE

Undertakes All kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines Unique Banking facilitie to Businessmen and interested Public

Apply for particulars—

K R. GURU, *Managing Director*

THE BANK OF MANGALORE LIMITED

HEAD OFFICE MANGALORE ESTD 1901

Branches —MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5½ per cent
1	4½ per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3%

All kinds of banking business transacted

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—1—1940

FROM

Sri K. Shivarama Nair,
Kerikcundah Estate,
Post Devegadabettu
KADUR DISTRICT

TO,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಕ್ರಯ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—12—0   Regd. No. M. 3

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 23—5—1941   [ಸಂಚಿಕೆ 21]

The Bombay Life Assurance Company, Ltd.,
(ESTABLISHED 1908)

Death! { is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.
MADRAS BRANCH SECRETARIES,
The Bombay Life Building,
Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.
Car Street, Mangalore.
Central Station Road, Trivandrum.
Gantam Nivas, Churni Road, Bombay No. 4.
Post Box No. 337, Mount Road, Madras.
Visweswarapuram Circle, Bangalore City.

(Regd)

ಅಮೃತಾಂಜನ

ಕಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI



KANNADA ILLUSTRATED WEEKLY

ಬಿಡಿ ಸಂಚಿಕೆ ಬೆಲೆ ಒಂದಾಣೆ ವಾರ್ಷಿಕ ವಂದಾ ರೂ. 2-0-0 ಅಂಚೆ ವೆಚ್ಚ ಸೇರಿ ರೂ. 2—12—0 Regd. No. M. 348

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 23—5—1941 [ಸಂಚಿಕೆ 21]

The Bombay Life Assurance Company, Ltd.

(ESTABLISHED 1908)

Death! { is not a matter of supposition / is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection.

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.

Gautam Nivas, Churni Road, Bombay No. 4.

Car Street, Mangalore.

Post Box No. 337 Mount Road, Madras.

Central Station Road, Trivandrum.

Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಶ್ವಾಸ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಆ) ಮುಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮುಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, M...

Estd 1906

ಸ್ವದೇಶಾಭಿಮಾನಿ

SWADESHABHIMANI



KANNADA ILLUSTRATED WEEKLY

ಬೆಳಕು ಉಪಯೋಗಿಸುವ ಬಗ್ಗೆ

ದ. ಕ. ಜಿಲ್ಲಾ ಕಲೆಕ್ಟರರ ಪ್ರಕಟಣೆ

ಡಿಫೆನ್ಸ್ ಓಪ್ ಇಂಡಿಯಾ ನಿಬಂಧನೆಗನುಸಾರವಾಗಿ

ತಾ. ೧-೬-೧೯೪೧ರಲ್ಲು ಮತ್ತು ಆ ಲಾಗ್ಯಾತು—

೧. ಸಾಧಾರಣ ಎಣ್ಣೆಯ ದೀಪದ ಅಥವಾ ಮೇಣದ ಬತ್ತಿಯ ದೀಪದ ಬೆಳಕಿಗಿಂತ ಹೆಚ್ಚಿಗೆ ಪ್ರಭೆಯುಳ್ಳ ದೀಪಗಳು ಯಾವುದೇ ಕೋಣದಲ್ಲಿ ಅವುಗಳ ಬೆಳಕು ಕಿರಣ ಇತ್ಯಾದಿಗಳು ಕಟ್ಟೋಣದ ಹೊರಗಡೆಯಲ್ಲಿ ದೃಷ್ಟಿಗೆ ಬೀಳದಂತೆ, ಯಾವ ವಿಧದಲ್ಲಿಯೂ ಕಪ್ಪು ಅಥವಾ ನಸುಕಪ್ಪು ಮರೆಗಳಿಂದ ಅಡ್ಡಮಾಡಲ್ಪಡತಕ್ಕದ್ದು. ಸಮುದ್ರದ ಕಡೆಗೆ ಮುಖವಾದಿದ್ದ ಕಟ್ಟೋಣ ಅಥವಾ ವಠಾರಗಳಲ್ಲಿ ಸಾಮಾನ್ಯ ಎಣ್ಣೆಯ ದೀಪ ಅಥವಾ ಮೇಣಬತ್ತಿಯ ದೀಪಕ್ಕಿಂತ ಹೆಚ್ಚಿಗೆ ಪ್ರಭೆಯು ದೀಪವನ್ನು, ಅದಕ್ಕೆ ಅಡ್ಡಮಾಡಿದ ಹೊರತು, ಉಪಯೋಗಿಸಕೂಡದು.

೨. ಅಲಂಕಾರದ ಉದ್ದೇಶದಿಂದ, ಅಥವಾ ಜಾಹೀರಾತು ಮತ್ತಿನ್ನಿತರ ಬಗ್ಗೆ ಯಾವುದೇ ಕಟ್ಟಡದಲ್ಲಿ ಅಥವಾ ಪ್ರದೇಶದ ಹೊರಭಾಗದಲ್ಲಿ ಯಾವ ದೀಪವನ್ನೂ ಪ್ರದರ್ಶಿಸಲಾಗದು.

೩. ರಸ್ತೆ ಹಾದಿಗಳಲ್ಲಿರುವ ಅಥವಾ ಸಾರ್ವಜನಿಕ ಸ್ಥಳಗಳಲ್ಲಿರುವ ಯಾವತ್ತು ದೀಪಗಳನ್ನು ಡಿ. ಮೆಜಿಸ್ಟ್ರೇಟರ ಅಥವಾ ಸಬ್ ಡಿವಿಜನಲ್ ಮೆಜಿಸ್ಟ್ರೇಟರ, ಆಯಾ ತಾಲೂಕು ಮೆಜಿಸ್ಟ್ರೇಟರ ಅಥವಾ ಸಬ್ ಮೆಜಿಸ್ಟ್ರೇಟರ, ಇಲ್ಲವೆ ಪೋಲೀಸು ಇಲಾಖೆಯ ಸಬ್ ಇನ್ಸಪೆಕ್ಟರರ ಅಥವಾ ಅವರಿಗೆ ಮೇಲ್ಪಟ್ಟ ಹುದ್ದೆಯವರ ಮುನಾಸಬಿಗೆ ಅನುಸಾರವಾಗಿ, ಅಂಥಹ ರಸ್ತೆ ಹಾದಿ ಅಥವಾ ಸ್ಥಳದ ಮತ್ತು ಮಹಾಜನರ ಭದ್ರತೆಗೆ ಎಷ್ಟು ಅವಶ್ಯವಿದೆಯೋ ಅಷ್ಟು ಮಟ್ಟಿಗೆ ಮಾತ್ರ ಉಪಯೋಗಕ್ಕೆ ಬರುವಂತೆ ಕನಿಷ್ಟ ಮಿತಿಯಷ್ಟು ಇಟ್ಟುಕೊಳ್ಳತಕ್ಕದು. ಕಟ್ಟಡಗಳ ವಿಚಾರದಲ್ಲಿ ಈ ಕ್ರಮದ ಉದ್ದೇಶವು ಮೇಲೆ ೧ನೇ ಕ್ರಮದಲ್ಲಿ ಹೇಳಿದ ಉದ್ದೇಶವೇ ಆಗಿದೆ.

೪. ಯಾವ ಬೀದಿಯಲ್ಲಿಯೂ ಅಥವಾ ಬಯಲು ಸ್ಥಳದಲ್ಲಿಯೂ ಎಣ್ಣೆಯ ದೀಪಕ್ಕಿಂತ ಅಥವಾ ಮೇಣದ ಬತ್ತಿಯ ದೀಪಕ್ಕಿಂತ ಹೆಚ್ಚಿಗೆ ಬೆಳಕು ಕೊಡತಕ್ಕ ಯಾವುದೇ ದೀಪವನ್ನು ಇಡಲೂ ಕೂಡದು, ಒಯ್ಯಲೂ ಕೂಡದು. ಇದು ಖಾಸಗಿಗೂ ಸಾರ್ವಜನಿಕಕ್ಕೂ ಲಗಾವಿದೆ. ಬಾಣ ಬಿರುಸುಗಳು ವಜನೆಗಳು ಕೂಡ ನಿಷೇಧಿಸೋಣಾಗಿವೆ.

೫. ಎಣ್ಣೆಯ ದೀಪ ಅಥವಾ ಗಾಡಿಗಳಿಗೆ ಉಪಯೋಗಿಸುತ್ತಿರುವ ಮೇಣದ ಬತ್ತಿಯ ದೀಪಗಳ ಬೆಳಕಿಗಿಂತ ಹೆಚ್ಚಿನ ಬೆಳಕು ಕೊಡುವ ಯಾವತ್ತೂ ವಾಹನ ದೀಪಗಳನ್ನು, ಅವು ಉರಿಯುವ ಸಮಯದಲ್ಲಾಗಲಿ ಇತರ ಸಮಯದಲ್ಲಾಗಲಿ, ಅವುಗಳ ಪ್ರಭೆ ಕಡಿಮೆಯಾಗುವಂತೆ ಮತ್ತು ಕಿರಣಗಳು ವ್ಯಾಪಿಸದಂತೆ ಅಥವಾ ಕಿರಣಗಳು ಬೀರದಂತೆ ಅಡ್ಡ ಅಥವಾ ಮರೆಮಾಡತಕ್ಕದು.

ಆದರೆ, ಮೋಟರ ವಾಹನಗಳ ದೀಪಗಳು, ಅವು ಬೆಳಗುವ ಅಥವಾ ಬೆಳಗದಿರುವ ಸಮಯದಲ್ಲಿಯಾದರೂ, ಈ ಕೆಳಗಿನ ನಿಬಂಧನೆಗಳಿಗನುಸಾರವಾಗಿ ಮರೆಮಾಡಲ್ಪಡತಕ್ಕದು.

೬ (೧) ಲೈಸೆನ್ಸು ಕೊಡತಕ್ಕ ಅಧಿಕಾರಿಯ ಪ್ರತ್ಯೇಕ ಅನುಮತಿಯಿಲ್ಲದೆ ಮೋಟರ ವಾಹನದ ಎದುರುಗಡೆಯಲ್ಲಿ ಸಾದಾ (ಬಿಳಿ) ದೀಪವಲ್ಲದೆ ಇತರ ದೀಪವನ್ನು ಒಯ್ಯಕೂಡದು.

(೨) ಮೋಟರ್ ವಾಹನಗಳ ಎದುರು ಕಡೆಯ ದೀಪವು ಕಿರಣಗಳನ್ನು ಬೀರುವ ಪಕ್ಷದಲ್ಲಿ ಕೆಳಗೆ ಹೇಳಿದ ರೀತಿಯಲ್ಲಿ ಮರೆಮಾಡಲ್ಪಡಬೇಕು.

ಕಂದು ಬಣ್ಣ (Brown)ದ ಕಾಗದದ ಒಂದು ಹಾಳೆಯಿಂದ ಇಡೀ ಗಾಜನ್ನು ಒಮ್ಮೆ ಮುಚ್ಚಬೇಕು, ನಂತರ ಅದರ ಅರೆವಾಸಿಯಷ್ಟು ಮೇಲ್ಭಾಗವನ್ನು ಕಂದು ಬಣ್ಣದ ಮತ್ತೊಂದು ತೆಳ್ಳಗಿನ ಕಾಗದದಿಂದ, ಒಮ್ಮೆ ಮುಚ್ಚಿದಂತೆಯೇ, ಪುನಹ ಮುಚ್ಚಬೇಕು.

(೩) ೩೬ ವೋಲ್ಟಿನ ಬಲ್ಬುಗಳಿಗಿಂತಲೂ ಹೆಚ್ಚಿನ ಬಲ್ಬುಗಳನ್ನು ಉಪಯೋಗಿಸಕೂಡದು.

೭. ಸಬ್—ಡಿವಿಜನಲ್ ಮೆಜಿಸ್ಟ್ರೇಟರು ತಾಲೂಕು ಮೆಜಿಸ್ಟ್ರೇಟರು ಅಥವಾ ಸಬ್ ಮೆಜಿಸ್ಟ್ರೇಟರು, ಇಲ್ಲವೆ ಸಬ್ ಇನ್ಸಪೆಕ್ಟರರ ಯಾ ಅವರಿಗಿಂತಲೂ ಮೇಲು ಹುದ್ದೆಯ ಪೋಲೀಸು ಅಧಿಕಾರಿಯು ಯಾವುದೇ ಸ್ಥಳ, ಕಟ್ಟೋಣ, ವಠಾರ ಅಥವಾ ವಾಹನದಲ್ಲಿಯ ದೀಪವನ್ನು ಮೇಲಿನ ಕ್ರಮಗಳಂತೆ ಚಿಕ್ಕದು ಮಾಡಲಿಕ್ಕೆ, ಅಡ್ಡ ಮಾಡಲಿಕ್ಕೆ ಆಯಾ ಮನುಷ್ಯನಿಗೆ ಸೂಚನೆ ಕೊಡಬಹುದು. ಈ ಹುಕುಮಿನ ಅನುಸಾರವಾಗಿ ಒಂದು ದೀಪವನ್ನು ಇಡಲಿಲ್ಲವೆಂದು ಆ ಉದ್ಯೋಗಸ್ಥರಿಗೆ ಕಂಡುಬಂದರೆ ಅಂತಹ ದೀಪವನ್ನು ತೆಗೆಯಲಿಕ್ಕೆ ಅಥವಾ ನೊಂದಿಸಲಿಕ್ಕೆ ಹುಕುಂ ಮಾಡಬಹುದು.



ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 86 of 1941
in
O. S. No. 113 of 1940.

ಯಲ್. ಯಂ. ಕಾರ್ಲೊ—ವಾದಿ, ಅರ್ಜಿದಾರ

ರಾಮಚಂದ್ರ ಶ್ಯಾನುಭಾಗ ಕೂಡಾ—

—ಪ್ರತಿವಾದಿರು

೧ನೇ ರೈಸ್ಪಾಂಡೆಂಟ ರಾಮಚಂದ್ರ ಶ್ಯಾನುಭಾಗ, ಪಿಟ್ಲ ಶ್ಯಾನುಭಾಗರ ಮಗ ಮಂಗಳೂರು ಶ್ಯಾಹಾರು ಪೈಕಿ ಮಾರ್ಕೆಟ್ ಭಳ್ಳಿ, ೩ನೇ ರೈಸ್ಪಾಂಡೆಂಟ ಸುಬ್ರಾಯ ಕಾಮತ್ ವ್ಯಾಪಾರಸ್ಥ ಸ್ವಸ್ತಿಕ ಕಾಫಿವರ್ಕ್ಸ ಬಂದರ ಮಂಗಳೂರು ಟೌನು—ಇವರಿಗೆ,

1940ನೇ ಇಸವಿ ಕ್ರಮನಂಬ್ರ ೧೧೩ನೇ ವ್ಯಾಜ್ಯದ ಡಿಕ್ರಿಯ ಅಮಲ್ದಾರಿ ಬಗ್ಗೆ ಅರ್ಜಿದಾರನು ಮೇಲ್ಕಂಡ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾನೆ. ಆದುದರಿಂದ ಅಮಲ್ದಾರಿಯು ಯಾಕೆ ನಡಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1941ನೇ ಇಸವಿ ಜೂನು ತಿಂಗಳು ೫ನೇ ತಾರೀಕಿನಲ್ಲಿ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗ ಬೇಕೆಂತ ಇದರಿಂದ ನಿಮಗೆ ನೋಟೀಸು ಕೊಡೋಣಾಗುತ್ತದೆ. ಹಾಗೆ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ನಿಮ್ಮನ್ನು ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವದು.

Mangalore 26-5-1941 } U. Krishna Shetty, Advocate for Petitioner

ನೋಟೀಸು

ದ. ಕ. ಸಬೋರ್ಡಿನೇಟು ಜಡ್ಜರವರ ಕೋರ್ಟಿನಲ್ಲಿ

ಕ್ರಮ ನಂಬ್ರ 21/1940.

ಕುಸುಮ — ವಾದಿ.

ಯಚ್. ಪಿ. ಎ ಜೈನ್ ಕೂಡಾ—

ಪ್ರತಿವಾದಿರು.

ಹಾಲಿ ಮೃತಪಟ್ಟ ಕಲ್ಲೆ ಪೂವಣಿ ಹೆಗ್ಗಡೆಯವರ ಸೊತ್ತುಗಳ ಎಡ್‌ಮಿನಿಸ್ಟ್ರೇಶನ್ ಬಗ್ಗೆ ಮಾಡಿದ ಮೇಲಿನ ವ್ಯವಹರಣೆಯಲ್ಲಿ 29-11-1940ರಲ್ಲಾದ ಪ್ರಿಲಿಮಿನರಿ ಡಿಕ್ರಿ ವಿಧಿ ಮೇರೆಗೆ ನನ್ನನ್ನು ರಿಸೀವರನನ್ನಾಗಿ ನೇಮಿಸಿರುವುದರಿಂದ ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ:—

1. ಸದ್ರಿ ಪೂವಣಿ ಹೆಗ್ಗಡೆರ ಆಸ್ತಿಯ ಮೇಲೆ ಡಿಕ್ರಿಪಡೆದು ಸಂಪೂರ್ಣ ಸಂದಾಯವಾಗದಿರುವ ಡಿಕ್ರಿದಾರರು ವ ಇತರ ಸಾಲಗಾರರು ತಮಗೆ ಬಹಾ ಆವೇಜನ್ನು ರುಜುಪಡಿಸತಕ್ಕದ್ದು.

2. ಸದ್ರಿ ಪೂವಣಿ ಹೆಗ್ಗಡೆರ ಸ್ಥಿರ ಚರ ಸೊತ್ತುಗಳಿಂದ ತಮಗೆ ಬಹಾ ಯಾವತ್ತೂ ಸಲುವಳಿಕೆಗಳನ್ನು ರುಜು ಪಡಿಸತಕ್ಕದ್ದು.

3. ಸದರಿ ಸಾಲಗಾರರು ವ ಸಲುವಳಿಕೆಗಳನ್ನು ಹೊಂದತಕ್ಕವರು ಇದೇ 1941ನೇ ಜೂನ್ ತಾ. 1೦ರ ತಾ. 30ರ ಒಳಗೆ ನನ್ನ ಪುತ್ತೂರು ಆಫೀಸಿನಲ್ಲಿ ಸ್ವತಹಾ ಯಾ ವಕೀಲರ ಯಾ ಅಧಿಕಾರ ಹೊಂದಿದ ಏಜಂಟರ ದ್ವಾರ ತಮ್ಮ ಸಾಲ ಯಾ ಸಲುವಳಿಕೆಗಳನ್ನು ರುಜು ಮಾಡಬಹುದು.

4. ನೋಟೀಸಿನಂತೆ ತಮಗೆ ಬರತಕ್ಕದ್ದನ್ನು ರುಜುಪಡಿಸಲಿಕ್ಕೆ ತಪ್ಪಿದರೆ ಅವರಿಗೆ ಸಲಲಿಕ್ಕೆ ಇದ್ದಿರಬಹುದಾದ್ದು ಸಂದದೆ ಎಂತ ಎಣಿಸಲಾದೀತು.

ಪುತ್ತೂರು 20-5-41 } ಮೊಳಹಳ್ಳಿ ಶಿವರಾವ್, ರಿಸೀವರ್ (ಪ್ಲೀಡರ್)

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

30-5-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೩೦-೫-೧೯೪೧

ದಕ್ಷಿಣ ಕನ್ನಡದಲ್ಲಿ ಅಕ್ಕಿಯ ಸಂಗ್ರಹವು ಕಡಿಮೆಯಾಗದು

ಧಾರಣೆಯು ಮಿತಿಮೀರುವ ಗಾಬರಿಯಿಲ್ಲ

ಮಹಾಜನರು ಅವಶ್ಯ ಗಮನಿಸಬೇಕಾಗಿರುವುದು

ಈ ವರ್ಷ ದಕ್ಷಿಣ ಕನ್ನಡದಲ್ಲಿ ಅಕ್ಕಿಯ ವಿಷಯದಲ್ಲಿ ಸ್ವಲ್ಪ ಗಾಬರಿಗೊಳ್ಳುವ ಪರಿಸ್ಥಿತಿಯುಂಟಾಯಿತು. ಇದಕ್ಕೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಲೋಕ ಯುದ್ಧವೇ ಕಾರಣವಾಗಿದೆ. ಅಕ್ಕಿಯ ಬೆಲೆ ಏರಿದ ನಿಮಿತ್ತವೆಂದರೆ, ನಮ್ಮ ಜಿಲ್ಲೆಗೆ ಸಾಕಾಗುವಷ್ಟು ಅಕ್ಕಿಯ ಸಂಗ್ರಹ ಇಲ್ಲವೆಂಬ ಸಂಶಯವೇ ಆಗಿರುವುದು. ಆದರೆ, ಪರಿಸ್ಥಿತಿಗಳನ್ನೆಲ್ಲ ಪರ್ಯಾಲೋಚಿಸಿ, ದಕ್ಷಿಣ ಕನ್ನಡ ಜಿಲ್ಲಾ ಚೆಂಬರ್ ಓಫ್ ಕಾಮರ್ಸಿನವರು ನಮ್ಮ ಜಿಲ್ಲೆಗೆ ಸಾಕಾಗುವಷ್ಟು ಅಕ್ಕಿಯ ಸಂಗ್ರಹವು ಇದೆಯೆಂದೂ ಆ ವಿಷಯ ಗಾಬರಿಗೊಳ್ಳುವ ಕಾರಣವಿಲ್ಲವೆಂದೂ ಈಗ ಪ್ರಕಟಿಸಿದ್ದಾರೆ.

ದಕ್ಷಿಣ ಕನ್ನಡವು ಅಕ್ಕಿಯನ್ನು ಬೆಳೆಸುವ ಜಿಲ್ಲೆ. ಹಿಂದೆ ೧೯೨೬ರಿಂದ ೩೦ರ ವರೆಗೆ ನಮ್ಮ ಜಿಲ್ಲೆಯಿಂದ ಹೊರ ದೇಶಕ್ಕೂ, ಅಂದರೆ ಗೋವಾ ಮಲಬಾರುಗಳಿಗೂ ಅಕ್ಕಿ ರಫ್ತು ಮಾಡಲಾಗುತ್ತಿತ್ತು. ಆದರೆ, ಕಳೆದ ಹದಿನೈದು ವರ್ಷಗಳಿಂದ ಹೊರಗಡೆಗೆ ಅಕ್ಕಿ ಹೋಗುವುದು ಕಡಿಮೆಯಾಗಿ, ಗಾಟನಿಂದ ಇಲ್ಲಿಗೆ ಅಕ್ಕಿ ಆಮದಾಗಿ ಬರುತ್ತಿತ್ತು.

೧೯೩೬ರಿಂದ ೧೯೩೮ರ ವರೆಗೆ ನಮ್ಮ ಜಿಲ್ಲೆಯ ಅಕ್ಕಿಯ ಉತ್ಪತ್ತಿಯು ಸರಾಸರಿ ಉತ್ಪತ್ತಿಗಿಂತ ಕಡಿಮೆಯಾಗಿದ್ದರೂ ೧೯೩೯ರಿಂದ ೧೯೪೦ರ ವರೆಗೆ ಸರಾಸರಿ ಉತ್ಪತ್ತಿಗಿಂತ ಮಿಗಿಲೇ ಆಗಿದೆ. ಈ ವರ್ಷವಾದರೂ ಸರಾಸರಿ ಉತ್ಪತ್ತಿಗಿಂತ ಕಡಿಮೆಯಾಗಿಲ್ಲವೆಂದು ತಿಳಿದುಬರುತ್ತದೆ.

೧೯೪೦ನೆಯ ವರ್ಷದಲ್ಲಿ ಅಕ್ಕಿಯ ಸಂಗ್ರಹ ಹೆಚ್ಚಾಗಿ ಇದ್ದ ಕಾರಣ, (ಎಂದರೆ ೧೯೩೯–೧೯೪೦ರ ಉತ್ಪತ್ತಿ ಹೆಚ್ಚಿದ್ದುದರಿಂದ) ಮತ್ತು ಯುದ್ಧದ ನಿಮಿತ್ತ ಬರ್ಮಾ ಅಕ್ಕಿಯ ಆಮದು ಕಡಿಮೆಯಾದುದರಿಂದ, ಈ ಜಿಲ್ಲೆಯಿಂದ, ಅಕ್ಕಿ ಮತ್ತು ಇತರ ಕೆಲವು ಹೊಸ ದವಸಗಳು ಮಲಬಾರ್ ಮತ್ತು ಕೊಚ್ಚಿನ್‌ಗಳಿಗೆ ಕಳುಹಿಸಲಾಗಿತ್ತು. ಇದರಿಂದ ಕೃಷಿಕರಿಗೆ ಲಾಭವೇ ಆಗಿದೆಯೆನ್ನಬಹುದು.

ಈ ವರ್ಷದ ಉತ್ಪತ್ತಿ ಸರಾಸರಿಗಿಂತ ಹೆಚ್ಚಾಗಿಲ್ಲವಾದರೂ, ಘಾಟಿನ ವ್ಯಾಪಾರಸ್ಥರ ಮುಖಾಂತರ ತಿಳಿದು ಬರುವುದೇನೆಂದರೆ ನಮ್ಮ ಊರಿಗೆ ಬೇಕಾದಷ್ಟು ಅಕ್ಕಿ ಬರಲು ಸಾಧ್ಯವಿದೆ ಮಾತ್ರವಲ್ಲದೆ, ಹಳ್ಳಿಯಲ್ಲಿ ಜುಲೈ ಮತ್ತು ಸಪ್ಟೆಂಬರಗಳ ಒಳಗೆ ಅಕ್ಕಿ ಮಾರಾಟವಾಗುವ ಮುಖ್ಯ ಕೇಂದ್ರಗಳಾದ ಮುಲ್ಕಿ, ಮೂಡಬಿದ್ರಿ, ಕಾರ್ಕಳ ಮತ್ತು ಬಂಟವಾಳಗಳಲ್ಲಿ ಸಾಕಷ್ಟು ಅಕ್ಕಿಯ ಸಂಗ್ರಹವಿರುವುದರಿಂದ ಈ ವರ್ಷದ ಮಳೆಗಾಲದಲ್ಲಿ ಅಕ್ಕಿಯ ಕೊರತೆಯು ನಮ್ಮ ಜಿಲ್ಲೆಯಲ್ಲಿ ಉಂಟಾಗುವ ಸಂಭವವು ಇರುವುದಿಲ್ಲ.

ಅಕ್ಕಿಯು ಮಳೆಗಾಲದಲ್ಲಿ ಕಾಸರಗೋಡು ಹೊಸದುರ್ಗ ಪ್ರಾಂತಗಳಿಗೆ ಪ್ರತಿವರ್ಷ ಹೋಗತಕ್ಕದ್ದು. ಅದು ಮಂಗಳೂರಿಂದಲೇ ಹೋಗಬೇಕಾಗಿರುವುದರಿಂದ, ಇದು ಕೇವಲ ೨೦ರಿಂದ ೨೫ ಸಾವಿರ ಚೀಲ ಅಕ್ಕಿಗಳಷ್ಟು ಮಾತ್ರವಾಗಿರುವ ಕಾರಣ ಅಷ್ಟರ ಮಟ್ಟಿಗೆ ಮಂಗಳೂರಲ್ಲಿ ಸಂಗ್ರಹವಾಗಿ ಅಕ್ಕಿಯನ್ನು ಇಡಲು ಸಾಧ್ಯವಾಗಬಹುದೆಂದು ತಿಳಿಯುತ್ತದೆ. ಈ ಮಟ್ಟಿಗೆ ತೊಂದರೆಯಾಗದಂತೆ ಸಾವಕಾರರು ಹಾಗೂ ಸರಕಾರದವರೂ ಸಾಕಷ್ಟು ಎಚ್ಚರವನ್ನು ಈಗಾಗಲೇ ತೆಗೆದುಕೊಂಡಿರುವರೆಂದು ಕೇಳಿಬರುತ್ತದೆ. ಮಾತ್ರವಲ್ಲದೆ ಜನವರಿಯಿಂದ ಮೇ ವರೆಗೆ ಅಕ್ಕಿಯ ಮಾರಾಟದಲ್ಲಿ ವಿಶೇಷ ಬೆಲೆ ಏರದಿರುವ ಕಾರಣ ಮಳೆಗಾಲದಲ್ಲಿ ಅಕ್ಕಿಗೆ ಬೆಲೆ ಹೆಚ್ಚಾಗಬಹುದೆಂದು ಅಲ್ಲಲ್ಲಿ ಸಂಗ್ರಹಿಸಿಟ್ಟವರು ಒಮ್ಮೆಗೇ ನಿರಾಶೆಯಿಂದ ಕಡಿಮೆ ಬೆಲೆಗೇ ಕೊಡಬಹುದಾದ ಕಾರಣ ಮಳೆಗಾಲದಲ್ಲಿ ಅಕ್ಕಿಯ ಬೆಲೆ ಮಿತಿಯಲ್ಲಿದೆ ಏರಬಹುದೆಂದು ತಿಳಿಯಲು ವಿಶ್ವಾಸಾರ್ಹ ಆಧಾರ ಇರುವುದಿಲ್ಲ.

ಈಗಾಗಲೇ ಬರ್ಮಾ ಮೊದಲಾದ ಕಡೆಗಳಲ್ಲಿ ಅಕ್ಕಿಯ ಬೆಲೆಯು ಬಹಳ ಕಡಿಮೆಯಾಗಿರುತ್ತದೆ. ಮಾತ್ರವಲ್ಲದೆ ಅಕ್ಕಿಯ ಸಂಗ್ರಹವು ಎಲ್ಲಿಯಾದರೂ ಕಡಿಮೆಯಾಗಿ, ತೊಂದರೆಯುಂಟಾಗದಂತೆ ವ್ಯಾಪಾರಸ್ಥರು ಅಕ್ಕಿಯನ್ನು ಸಂಗ್ರಹಿಸಿಡಲು ಬೇಕಾದಷ್ಟು ಜಾಗರೂಕತೆ ವಹಿಸಿಕೊಳ್ಳುತ್ತಿರುವರು.

ಹಾಗಾಗಿ ಮಹಾ ಜನರು ಮಳೆಗಾಲದಲ್ಲಿ ಅಕ್ಕಿಯ ತೊಂದರೆಯುಂಟಾಗಬಹುದೆಂಬ ವಿಚಾರ ಗಾಬರಿಗೊಳ್ಳಬೇಕಾದ ಅವಶ್ಯವಿಲ್ಲವೆಂದು ಹೇಳಬಹುದಾಗಿದೆ.

THE

Canara Banking Corporation Limited

(Incorporated in British India)

ESTD: 1906.

HEAD OFFICE: **UDIPI,** *South Kanara.*

SEASON DEPOSITS

ARE now accepted at all our Offices at the following rates of interest :

2 & 3 months	... ...	3% p. a.
4 & 5 ,,	... ...	3½% p. a.

These deposits will not be allowed to run beyond September 1941.

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸ್ವದೇಶಾಭಿಮಾನಿ

ತಾರೀಕು 30—5—1941

ಜಿಲ್ಲೆಯಲ್ಲಿ ಹಿಂದು ಮುಸ್ಲಿಂ ಸೌಹಾರ್ದ

ಭಾರತದ ಬೇರೆ ಬೇರೆ ಕಡೆಗಳಲ್ಲಿ ಇತ್ತೀಚೆಗೆ ಸಂಭವಿಸುತ್ತಿರುವ ಜಾತೀಯ ಕಲಹಗಳಂತೆ ದಕ್ಷಿಣ ಕನ್ನಡದಲ್ಲಿ ಪ್ರಾಮುಖ್ಯವಾಗಿ ಮಂಗಳೂರಲ್ಲಿ ಜಾತೀಯ ಕಲಹವು ಉಂಟಾಗಲಿರುವದೆಂದು ಕೆಲವು ದಿನಗಳ ಹಿಂದೆ ಗಾಬರಿಗೊಳಿಸುವ ಸುದ್ದಿ ಹರಡಿದ್ದು, ಆ ಬಗ್ಗೆ ಸರಕಾರದವರೂ ಜಾಗರೂಕತೆ ವಹಿಸಿಕೊಂಡಿರಲು, ಈ ವಿಷಯದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ| ಕೆ. ವಿಟ್ಠಲ ಶೆಟ್ರು ಜಿಲ್ಲೆಯ ಪ್ರಮುಖರ ಒಂದು ಸಭೆಯನ್ನು ಕರೆದು, ಮಂಗಳೂರಲ್ಲಿ ಹಾಗೂ ಜಿಲ್ಲೆಗಳ ಇತರ ಕೆಲವು ಭಾಗಗಳಲ್ಲಿ ಹರಡಿದ್ದ ಆ ಸುದ್ದಿಯು ಕೇವಲ ನಿರಾಧಾರದ್ದೆಂದೂ ಜನತೆ ಜವಾಬ್ದಾರಿಯಿಲ್ಲದ ಜನರು ಹರಡುವ ಸುದ್ದಿಯನ್ನು ನಂಬತಕ್ಕದ್ದಲ್ಲವೆಂದೂ ಆ ಸಭೆಯಲ್ಲಿ ತೀರ್ಮಾನ ಮಾಡಿದ ವಿಷಯವು ನಮ್ಮ ಜಿಲ್ಲೆಯ ಸಾರ್ವಜನಿಕರಿಗೆ ಇಷ್ಟರಲ್ಲಿಯೇ ವಿದಿತವಾಗಿರಬಹುದೆಂದು ನಾವು ನಂಬುತ್ತೇವೆ. ನಮ್ಮ ಜಿಲ್ಲೆಯಲ್ಲಿ ಅಂತಹ ಸುದ್ದಿ ಹುಟ್ಟಿದ್ದು ನಿರಾಧಾರವಾದದ್ದೆಂದು ತಿಳಿಸುವುದರೊಡನೆ ಹಿಂದುಗಳೂ ಮುಸ್ಲಿಮರೂ ಹೆಚ್ಚಿನ ಸೌಹಾರ್ದ ಭಾವನೆಯಿಂದ ಇದ್ದು ಶಾಂತಿ ಜೀವನ ನಡೆಸುವಂತೆ ಪ್ರಚಾರ ಮಾಡುವ ಬಗ್ಗೆ ನೇಮಕವಾದ ಹಿಂದೂ-ಮುಸ್ಲಿಂ ಪ್ರಮುಖ ಗೃಹಸ್ಥರಿಂದ ಕೂಡಿದ ಸೌಹಾರ್ದ ಸಮಿತಿಯೊಂದು ಈ ವಾರ ಮಂಗಳೂರಲ್ಲಿಯೂ ನೆರೆಯ ಇತರ ಕಡೆಗಳಲ್ಲಿಯೂ ಯಶಸ್ವಿಯಾದ ಪ್ರಚಾರವನ್ನು ಮಾಡಿ ಜನತೆಯ ಮನಸ್ಸಿನಲ್ಲಿದ್ದ ಕಳವಳವನ್ನು ಪರಿಹರಿಸಿದರು.

ಹಿಂದು-ಮುಸ್ಲಿಂ ಸೌಹಾರ್ದ ಪ್ರಚಾರ ಮಾಡುವ ಸಭೆಗಳು ಎಲ್ಲಾ ಕಡೆಗಳಲ್ಲಿಯೂ ಬಹಳ ಯಶಸ್ವಿಯಾಗಿ ಕೂಡಿದವು. ಮಹಾಜನರು, ಉಭಯ ಜಾತಿಗಳ ಮುಖಂಡರು ಹಾಗೂ ಜನಸಾಮಾನ್ಯರು ತುಂಬಾ ಆಸಕ್ತಿಯಿಂದ ಸಭೆಗಳಲ್ಲಿ ನೆರೆದು ವಿಚಾರವಂತರಾದ ಮುಂದಾಳುಗಳು ಹೇಳುವ ಮಾತುಗಳನ್ನು ಅತ್ಯಾದರದಿಂದ ಕೇಳುತ್ತಿದ್ದರು. ರಾಷ್ಟ್ರದ ಬೇರೆ ಭಾಗಗಳಲ್ಲಿ ಜಾತೀಯ ಕಲಹದಿಂದಾಗಿ ನಿತ್ಯ ಜೀವನಕ್ಕೆ ಒದಗಿದ ಅನರ್ಥ ಪರಂಪರೆಗಳು ಹಾಗೂ ಹಾಗೆ ಮಾಡುವುದರಿಂದ ದೇಶದ ಕಲ್ಯಾಣಕ್ಕೆ ಒದಗುವ ಆತಂಕಗಳು ಜನತೆಗೆ ಚೆನ್ನಾಗಿ ಮನವರಿಕೆಯಾಗಿದೆಯೆಂದು ಸಭೆಗಳಲ್ಲಿ ಅವರು ಶ್ರದ್ಧೆಯಿಂದ ಭಾಗವಹಿಸುತ್ತಿದ್ದುದನ್ನು ನೋಡಿದರೆ ಪ್ರತ್ಯಕ್ಷವಾಗುವಂತಿತ್ತು. ಜಿಲ್ಲೆಯ ಹಿಂದೂ ಮುಸ್ಲಿಂ ಪ್ರಮುಖರು ಒಂದಾಗಿ ಹೋಗಿ ಜನರಿಗೆ ಉಪದೇಶಗಳನ್ನು ಕೊಡುತ್ತಿದ್ದರು. ಹಿಂದು ಮುಸ್ಲಿಂ ಜನತೆ ಒಟ್ಟಾಗಿ ಕುಳಿತು ಅವರ ಮಾತುಗಳನ್ನು ಆದರಪೂರ್ವಕ ಕೇಳುತ್ತಿತ್ತು. ಮುಸ್ಲಿಮರ ಮಸೀದಿಯ ಬಳಿಯಲ್ಲಿಯೂ, ಹಿಂದುಗಳ ದೇವಾಲಯದ ಬಳಿಯಲ್ಲಿಯೂ ಸಭೆಗಳು ಜರಗುತ್ತಿದ್ದು ಉಭಯ ಜಾತಿಯ ಜನರೂ ಅನ್ಯೋನ್ಯ ಮಿತ್ರಭಾವದಿಂದ ಕಲೆತು ಕೇಳುತ್ತಿದ್ದ ದೃಶ್ಯವು ಜಿಲ್ಲೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾಗಿದೆ.

ಇದರಿಂದ ನಮ್ಮ ಜಿಲ್ಲೆಯಲ್ಲಿ ಅಲ್ಪಸಲ್ಪದ ಸುದ್ದಿ ಹುಟ್ಟಿ ಗಾಬರಿಗೊಂಡು, ಗಾಬರಿಯಿಂದಲೇ ಗಲಭೆ ಹುಟ್ಟುವಂತಹ ಪರಿಸ್ಥಿತಿ ಬಂದಿದ್ದರೂ ಅದು ಈಗ ಶಾಂತವಾಗಿರುವುದಾಗಿ ನಾವು ನಂಬುತ್ತೇವೆ. ಜಿಲ್ಲೆಯ ಶಾಂತಿರಕ್ಷಣೆಗೆ ಸಹಕರಿಸಿ ಇಂತಹ ಸಭೆಗಳನ್ನು ಕರೆದ ಸಂಚಾಲಕರೂ, ಸೌಹಾರ್ದ ಸಮಿತಿಯ ಸದಸ್ಯರೂ ಅವರೊಡನೆ ಸಹಕರಿಸಿದ ಮಹಾಜನರೂ ಅಧಿಕಾರಿಗಳೂ, ಜಿಲ್ಲೆಗೆ ಕೀರ್ತಿ ತರುವಂತಹ ಪ್ರಶಂಸನೀಯವಾದ ಕಾರ್ಯವನ್ನು ಮಾಡಿದ್ದಾರೆಂದು ನಾವು ಹೇಳದಿರಲಾರೆವು.

ಈ ಸಂದರ್ಭದಲ್ಲಿ ಸೌಹಾರ್ದ ಸಮಿತಿಯ ಸದಸ್ಯರಿಗೆ ನಾವು ಕೆಲವು ಸೂಚನೆಗಳನ್ನು ಕೊಡಲು ಮರೆಯಲಾರೆವು. ಇದುವರೆಗಿನ ಕೆಲಸವೆಂದರೆ, ಜನರು ಹಿಂದು ಮುಸ್ಲಿಂ ಕಲಹವಾಗುವುದೆಂದು ಗಾಬರಿಗೊಳ್ಳಲು ಕಾರಣವಿಲ್ಲವೆಂದು ತಿಳಿಸಿದ್ದು ಹಾಗೂ ಹಿಂದುಗಳೂ ಮುಸ್ಲಿಮರೂ ಕಲಹಮಾಡಬಾರದೆಂದೂ ಹೇಳಿದ್ದಾಗಿದೆ. ಇದು ತಾತ್ಕಾಲಿಕವಾಗಿ ಪರಿಣಾಮಕಾರಿಯಾಗಿದೆಯೆಂಬುದು ನಿಶ್ಚಯ. ಆದರೆ ದೇವಾಲಯ ಮಸೀದಿಗಳ ಮುಂದೆ ವಾದ್ಯ ಮೆರವಣಿಗೆ ಭಜನೆಗಳಾಗುವ ಸಂದರ್ಭದಲ್ಲಿ ಹೆಚ್ಚಾಗಿ ಕಲಹವುಂಟಾಗುತ್ತದೆ. ಇದರ ಬಗ್ಗೆ ಒಂದು ಇತ್ಯರ್ಥವನ್ನು, ನಮ್ಮ ಜಿಲ್ಲೆಯ ಮಟ್ಟಿಗಾದರೂ ಉಭಯ ಮತಗಳ ಮುಂದಾಳುಗಳು ನಿಶ್ಚಯಿಸಿ ಜನತೆಗೆ ಸಾರುವುದು ಅವಶ್ಯವೆಂದು ನಾವು ಅಭಿಪ್ರಾಯಪಡುತ್ತೇವೆ. ಮಾತ್ರವಲ್ಲದೆ, ಇಂದಿನ ಲೋಕಯುದ್ಧದ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಪರಿಣಾಮದಿಂದ ದೇಶದ ಆರ್ಥಿಕ ಪರಿಸ್ಥಿತಿಯು ಭೀಷಣವಾಗಿದೆ; ಬಡತನ ನಿರುದ್ಯೋಗ ಹೆಚ್ಚಿದೆ; ರಾಷ್ಟ್ರದ ಸತ್ವ ಶೋಷಣೆಯಾಗಿದೆ. ಇಂತಹ ಸಂದರ್ಭದಲ್ಲಿ ನಿರುದ್ಯೋಗಿಗಳು, ಬಡತನದಿಂದ ಕಂಗೆಟ್ಟವರು ಹೆಚ್ಚಾಗಿ ದಂಗೆಗಳಲ್ಲಿ ದುಮುಕಲು ಅವಕಾಶವುಂಟು. ಸೌಹಾರ್ದ ಸಮಿತಿಯ ಸದಸ್ಯರು ಈ ಆರ್ಥಿಕ ವಿಷಯವನ್ನು ಪರ್ಯಾಲೋಚಿಸಬೇಕು. ಕೂಲಿಗಾರರಿಗೆ ಉದ್ಯೋಗವಿಲ್ಲದ ಜನರಿಗೆ ಉದ್ಯೋಗಗಳನ್ನು ಕಲ್ಪಿಸುವ ಯೋಜನೆಗಳನ್ನು ಮಾಡಬೇಕು. ಇದರಿಂದ ಶಾಶ್ವತ ಶಾಂತಿ ಸ್ಥಾಪಿತವಾಗಬಹುದು. ಸೌಹಾರ್ದಸಮಿತಿಯ ಸದಸ್ಯರು ಸಮಾಜದಲ್ಲಿ ಪ್ರಭಾವಶಾಲಿಗಳಾದ ಮುಂದಾಳುಗಳೇ ಇರುವುದರಿಂದ ಅವರಿಗೆ ಈ ವಿಷಯದಲ್ಲಿ ಕಾರ್ಯವನ್ನು ಕೈಕೊಳ್ಳುವರೆ ಬೇಕಾದ ಸಕಲ ಸಹಾಯಗಳೂ ಸಿಗದಿರಲಾರವೆಂದು ನಾವು ಭರವಸೆಪಡುತ್ತೇವೆ. ಈ ವಿಷಯಗಳು ವಿಚಾರಣೀಯವಾದವುಗಳೇ ಅಲ್ಲವೇ ಎಂಬುದನ್ನು ಸೌಹಾರ್ದ ಸಮಿತಿಯವರು ಪರ್ಯಾಲೋಚಿಸುವರೆಂದು ನಾವು ನಂಬುತ್ತೇವೆ.

ಶ್ರೀ ಶ್ರೀನಿವಾಸ ಅಯ್ಯಂಗಾರರು

ಶ್ರೀ ಶ್ರೀನಿವಾಸ ಅಯ್ಯಂಗಾರರ ನಿಧನದಿಂದ ಭರತಮಾತೆಯು ಪ್ರೀತಿಯ ಪುತ್ರರತ್ನವೊಂದನ್ನು ಕಳಕೊಂಡಳು. ಭಾರತದ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ, ಹೆಚ್ಚಾಗಿ ರಾಜಕೀಯ ಕ್ಷೇತ್ರದಲ್ಲಿ ಹೆಸರಾಂತ ದೇಶಭಕ್ತರಾಗಿದ್ದು, ಸುಪ್ರಸಿದ್ಧ ನ್ಯಾಯವಾದಿಗಳಾಗಿದ್ದು, ಅತ್ಯುಚ್ಚ ಮೇಧಾಶಾಲಿಯಾಗಿದ್ದ ಶ್ರೀನಿವಾಸ ಅಯ್ಯಂಗಾರರು ಉಚ್ಚಶ್ರೇಣಿಯ ಜನತಾಧುರೀಣರೆನಿಸಿದ್ದರು. ದೇಶಕ್ಕೆ ದೇಶವೇ ಅವರ ಮರಣದ ಬಗ್ಗೆ ಸಂತಾಪವನ್ನು ಸೂಚಿಸಿತು.

ಅಯ್ಯಂಗಾರರ ಜೀವನವು ಮೊದಲಿಂದ ಕಡೆಯ ವರೆಗೆ ಕೀರ್ತಿಯಿಂದ ಕೀರ್ತಿಗೆ ಏರಿತ್ತು. ಆಗರ್ಭ ಶ್ರೀಮಂತರಾಗಿ ಅವರು ಹುಟ್ಟಿದರು. ಪ್ರೌಢ ವಿದ್ಯಾಭ್ಯಾಸವನ್ನು ಪಡೆದು ಹೆಸರಾಂತ ವಕೀಲರಾದರು. ಸಾಕಷ್ಟು ಧನಾರ್ಜನೆ ಮಾಡಿದರು. ರಾಜಕೀಯ ಕ್ಷೇತ್ರಕ್ಕೆ ಧುಮುಕಿ ಅದರಲ್ಲಿಯೂ ಅಪ್ರತಿಮರಾಗಿ ಮೆರೆದರು. ಸ್ವರಾಜಿಸ್ಟ್ ಪಕ್ಷದ ನಾಯಕರಾಗಿ ಗತಿಸಿದ ದಾಸರ, ನೆಹರುಗಳ ಸಹೋದ್ಯೋಗಿಗಳಾಗಿ ಚುನಾವಣೆಗಳಲ್ಲಿ ಎದುರು ಪಕ್ಷವನ್ನು ನೆಲಕ್ಕಪ್ಪಳಿಸಿದರು. ಚುನಾವಣೆಯ ಕಾಲದಲ್ಲಿ ದ್ರವ್ಯವನ್ನು ನೀರಿನಂತೆ ವೆಚ್ಚಮಾಡಿದರು. ಮದ್ರಾಸಿನ ಜಸ್ಟಿಸ್ ಪಾರ್ಟಿಗೆ ಮೊದಲನೆಯ ವಜ್ರಾಘಾತವಿತ್ತ ರಣಧೀರರೆಂದರೆ ಶ್ರೀನಿವಾಸ ಅಯ್ಯಂಗಾರರು. ಕಾಂಗ್ರೆಸಿನ ರಾಜಕೀಯದಲ್ಲಿ ಅವರಿಗೆ ಹೆಚ್ಚಿದ ವರ್ಚಸ್ಸು ಗೌಹಾತಿಯಲ್ಲಿ ರಾಷ್ಟ್ರವು ಅರ್ಪಿಸಿದ ಕಾಂಗ್ರೆಸ್ ಅಧ್ಯಕ್ಷಪದವಿಯಿಂದ ಅಖಿಲಭಾರತಕ್ಕೇ ವಿದಿತವಾಯಿತು.

ಮುಂದೆ ಗಾಂಧಿಜಿಯವರೊಡನೆ ಅಯ್ಯಂಗಾರರಿಗೆ ಭಿನ್ನಾಭಿಪ್ರಾಯವುಂಟಾಯಿತು. ಭಿನ್ನಾಭಿಪ್ರಾಯವುಂಟಾದರೂ ಮತ್ತೆ ರಾಜಿಮಾಡಿಕೊಳ್ಳಲು ಅವರು ಇಚ್ಛಿಸಲಿಲ್ಲ. ಗಾಂಧಿಜಿಯವರೊಡನೆ ಒಪ್ಪಂದವಿದ್ದಿದ್ದರೆ ಅವರು ಕಾಂಗ್ರೆಸಿನಲ್ಲಿ ಮತ್ತಷ್ಟು ಕೀರ್ತಿಗಳಿಸಬಹುದಾಗಿತ್ತು. ಆದರೂ ಅಯ್ಯಂಗಾರರು ತನ್ನ ಅಭಿಮತವನ್ನು ಬೇರೊಬ್ಬನ ಅಭಿಮತಕ್ಕೆ ಶರಣಗೊಡಲು ಒಪ್ಪಲಿಲ್ಲ. ಅದು ಅವರ ವ್ಯಕ್ತಿತ್ವದಲ್ಲಿ ಕಾಣುವ ಒಂದು ಅಪೂರ್ವವಾದ ವಿಷಯವಾಗಿದೆ.

ರಾಷ್ಟ್ರದ ರಾಜಕೀಯದ ವಿಷಯ ಕೊನೆಗಾಲದ ವರೆಗೆ ಅಯ್ಯಂಗಾರರು ಅತ್ಯಂತ ಆಸಕ್ತಿ ವಹಿಸುತ್ತಿದ್ದರು. ಆಗಾಗ ರಾಜಕೀಯ ಪರಿಸ್ಥಿತಿಯ ಕುರಿತು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಅಯ್ಯಂಗಾರರ ವಿಚಾರಗಳಲ್ಲಿ ಗಾಢವಾದ ಬುದ್ಧಿಪ್ರಯೋಗವಿದ್ದಿತೆಂದು ಅವರ ಲೇಖನ ಭಾಷಣಗಳನ್ನು ಓದಿದವರೆಲ್ಲರೂ ಒಪ್ಪಲೇಬೇಕು. ಶ್ರೀನಿವಾಸ ಅಯ್ಯಂಗಾರರಿಂದ ಭಾರತದ ಭವಿಷ್ಯತ್ತಿಗೆ ಹೆಚ್ಚಿನ ಸಹಾಯ ಒದಗಬೇಕಾಗಿತ್ತು; ಅವರ ವಿಚಾರಶಕ್ತಿಯು ಸ್ವತಂತ್ರ ರಾಷ್ಟ್ರದ ನಿರ್ಮಾಣ ಮಾಡುವ ಕಾಲದಲ್ಲಿ ಹೆಚ್ಚಿನ ಸಹಕಾರಿಯಾಗುತ್ತಿತ್ತು. ಆದರೆ ವಿಧಿಯು ಅವರನ್ನು ಅಕಸ್ಮಾತ್ ಕಣ್ಮರೆ ಮಾಡಿಸಿ ಅಖಿಲಭಾರತವನ್ನೇ ದುಃಖ ಸಾಗರದಲ್ಲಿ ಅದ್ದುವಂತೆಸಗಿದನು!

ನವ ಚೈತನ್ಯಕ್ಕೆ
'ಓಂಪೊನಾ'
ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.
ಸ್ಟಾಕಿಸ್ಟರು:—
ದಿ ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು.

Stockists:—
The Popular Stores, MANGALORE.

ದೊಂಬಿಗಳ ಮಧ್ಯದಿಂದ ಓಡಿಹೋಗುವುದು ಹೇಡಿತನ!

ಪುಂಡಶಾಹಿಯನ್ನು ಎದುರಿಸಲೇಬೇಕು

ಜನತೆಗೆ ಮಹಾತ್ಮರ ಅಮೂಲ್ಯ ಸೂಚನೆಗಳು

ಕಾಂಗ್ರೆಸಿನವರು ಅಹಿಂಸೆಯನ್ನು ಪಾಲಿಸತಕ್ಕದ್ದು

'ಪುಂಡಜನರಿಗೆ ಅಂಜಿ ಓಡಿಹೋಗುವುದನ್ನು ಯಾರೂ ಸಹಿಸರು. ಈ ಪುಂಡಶಾಹಿಯನ್ನು ಯಾವ ರೀತಿಯಿಂದಲಾದರೂ ಎದುರಿಸಬೇಕು. ಅಹಿಂಸೆಯಿಂದ ಸಾಧ್ಯವಾಗದಿದ್ದರೆ ಹಿಂಸೆಯಿಂದಾದರೂ ಅದನ್ನು ಎದುರಿಸಲೇ ಬೇಕು. ಕಾಂಗ್ರೆಸ್ಸು ಮತ್ತು ಕಾಂಗ್ರೆಸ್ಸಿನವರು ನಾನು ಹೇಳಿದ ಅಹಿಂಸಾ ಮಾರ್ಗದಲ್ಲಿ ನಡೆದರೆ ಅವರಿಗೆ ಖಂಡಿತ ಜಯ ಸಿಗುವುದು. ಆದರೆ ಜನರು ಅಂಜಿಕೆಯಿಂದ ಓಡಿಹೋಗುವುದನ್ನು ತಪ್ಪಿಸಬೇಕು. ಏಕೆಂದರೆ ಹಾಗೆ ಹೋಗುವುದು ಹೇಡಿತನ. ಆದುದರಿಂದ ಅಹಿಂಸೆಯಿಂದ ಆಗದಿದ್ದರೆ ಹಿಂಸೆಯಿಂದಲಾದರೂ ಪುಂಡರನ್ನು ಎದುರಿಸಬೇಕು. ಹೀಗೆ ಎದುರಿಸುವದು ತಪ್ಪೇನೂ ಅಲ್ಲ.'

ಎಂದು ಮಹಾತ್ಮಾ ಗಾಂಧಿಯವರು ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.

ಆ ಪತ್ರದಲ್ಲಿ ಮಹಾತ್ಮರು ಮತ್ತೆ ಹೀಗೆಂದಿರುವರು:—

'ಜಾತೀಯ ದೊಂಬಿಗಳ ಬಗ್ಗೆ ಕಾಂಗ್ರೆಸ್ಸು ಏನು ಮಾಡಿತು, ಏನು ಮಾಡಲಿಲ್ಲ ಮತ್ತು ಮುಂದೆ ಅದು ಏನು ಮಾಡಬೇಕು ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿರುವದೆಂದು ನನಗೆ ತಿಳಿದುಬರುತ್ತದೆ. ಅದು ಏನೇ ಇರಲಿ, ಸದ್ಯಕ್ಕೆ ಒಂದು ಶೋಧಕ ಸಮಿತಿಯನ್ನು ನಿಯಮಿಸಿ ಅದರ ಸಲಹೆಯಂತೆ ನಡೆಯಬೇಕು. ಈ ಸಮಿತಿಯಲ್ಲಿ ಶ್ರೀ. ಮಹಾದೇವ ದೇಸಾಯಿಯರನ್ನು ಕೂಡಿಸಿದ್ದೇನೆ. ಅವರು ಯಾವಾಗಲೂ ಅಲ್ಲಿರಲಾರರು. ಆದರೆ ನಿಮಗೆ ಅವಶ್ಯವೆನಿಸಿದಾಗ ಬಂದು ಸಹಾಯಮಾಡುವರು

'ಹಿಂಸೆಯಿಂದ ಪುಂಡರನ್ನು ಅಡಗಿಸಬೇಕೆಂಬ ಅಭಿಪ್ರಾಯ ಎಷ್ಟು ಜನರಿಗಿದೆ ಮತ್ತು ಅಹಿಂಸೆಯಿಂದಲೇ ಎದುರಿಸಬೇಕೆಂಬ ಅಭಿಪ್ರಾಯ ಎಷ್ಟು ಜನರಿಗಿದೆ ಎಂಬುದನ್ನು ಮೊದಲು ಕಂಡುಹಿಡಿಯಬೇಕು. ಹಿಂಸೆಯನ್ನು ಅನುಮೋದಿಸುವವರು ಕಾಂಗ್ರೆಸ್ಸಿನಿಂದ ಹೊರಗೆ ಹೋಗಿ, ತಮ್ಮ ಮಾರ್ಗದಲ್ಲಿಯೇ ಕೆಲಸಮಾಡಬೇಕು. ಈ ವಿಷಯದಲ್ಲಿ ಕಾಂಗ್ರೆಸ್ಸು ತನ್ನ ಧೋರಣವನ್ನು ಸ್ಪಷ್ಟವಾಗಿ ತಿಳಿಸದಿದ್ದರೆ ಅದು ನಿರುಪಯೋಗಿ ಸಂಸ್ಥೆಯಾಗುವದು.

'ಅತ್ಯಾಚಾರವನ್ನು ಹಿಂಸೆಯಿಂದ ಎದುರಿಸುವುದು ತಮ್ಮ ಕರ್ತವ್ಯವೆಂದೂ ಕಾಂಗ್ರೆಸಿನ ಧ್ಯೇಯಕ್ಕೆ ಅದು ಅಕ್ರಮವಾಗುವದಲ್ಲೆಂದೂ ಬಹುಸಂಖ್ಯಾಕ ಕಾಂಗ್ರೆಸ್ಸಿನವರು ಅಭಿಪ್ರಾಯ ಪಡುವುದೇ ಆದರೆ ಅವರು ಆ ರೀತಿ ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ಪ್ರಕಟಮಾಡಿ ಜನರಿಗೆ ಆ ಪ್ರಕಾರ ಹಾದಿತೋರಿಸಬೇಕು. ನಮ್ಮ ಮುಖಂಡರು ಈಗ ಸೆರೆಮನೆಯಲ್ಲಿರುವರೆಂಬ ಕಾರಣದಿಂದ ಯಾರೂ ಈ ವಿಪತ್ತಿನಲ್ಲಿ ತಮ್ಮ ಅಭಿಪ್ರಾಯ ಪ್ರಕಟಪಡಿಸಲು ಹಿಂದೆಗೆಯಕೂಡದು. ಒಟ್ಟಿನ ಮೇಲೆ ಯಾರೂ ಅನಿಶ್ಚಿತತೆಯಲ್ಲಿ ಇರತಕ್ಕದ್ದಲ್ಲ. ಯಾವತ್ತೂ ಕಾಂಗ್ರೆಸ್ಸಿನವರು ತಮ್ಮ ಕರ್ತವ್ಯವನ್ನು ಮಾಡಿದ್ದರೆ ಇತ್ತೀಚಿಗೆ ಸಂಭವಿಸಿದ ಪುಂಡರ ಆಳಿಕೆಗೆ ನಾವು ಒಳಗಾಗುತ್ತಿರಲಿಲ್ಲವೆಂದು ನನಗೆ ಎನಿಸುತ್ತದೆ. ಪುಂಡರ ಆಳ್ವಿಕೆಯನ್ನು ಹಿಂಸೆಯಿಂದಾಗಲಿ ಅಹಿಂಸೆಯಿಂದಾಗಲಿ ಎದುರಿಸಲು ಜನರು ಸಮರ್ಥರಿರಬೇಕು. ಕಾಂಗ್ರೆಸ್ ಜನರು ಸರಕಾರಿ ಪೋಲೀಸರು ಅಥವಾ ಮಿಲಿಟರಿ ಜನರ ಸಹಾಯ ಕೇಳಲಾರರು. ಹಿಂಸಾತ್ಮಕ ಪ್ರತೀಕಾರದ ಶಿಕ್ಷಣ ಕೊಡುವ ಗರಡಿಮನೆಯಲ್ಲಿ ಕಾಂಗ್ರೆಸ್ಸಿನವರು ಪ್ರತ್ಯಕ್ಷವಾಗಿ ಭಾಗವಹಿಸದಿರಬಹುದು. ಆದರೆ ನಾನು ಹಿಂಸಾತ್ಮಕ ಪ್ರತೀಕಾರದಲ್ಲಿ ವಿಶ್ವಾಸವಿದ್ದವರಿಗೂ ಕೆಲವು ನಿರ್ಬಂಧಕ ನಿಯಮಗಳನ್ನು ಪಾಲಿಸಲು ಕೇಳಿಕೊಳ್ಳುವೆನು. ಹಿಂಸಾತ್ಮಕ ಪ್ರತೀಕಾರದಲ್ಲಿಯೂ ಕೆಲವೊಂದು ಸಭ್ಯತೆ ಇರಬೇಕಾಗುತ್ತದೆ. ಮುಖ್ಯವಾಗಿ ಜನರು ಲಕ್ಷ್ಯದಲ್ಲಿಡತಕ್ಕ ಸಂಗತಿಯೆಂದರೆ ಅವರು ಯಾವ ಪ್ರಸಂಗದಲ್ಲಿಯೂ ಹೇಡಿ ಅಥವಾ ಷಂಢರಂತೆ ವರ್ತಿಸಕೂಡದು.

'ಕಾಂಗ್ರೆಸ್ಸಿನವನು ಮನಸಿನಲ್ಲಿ ಯಾವದೇ ತೆರದ ದ್ವೇಷಭಾವನೆಗೆ ಅವಕಾಶ ಕೊಡದೆ, ಶಾಂತತೆಯ ರಕ್ಷಣಾರ್ಥವಾಗಿ ಮುಸ್ಲಿಂ ಲೀಗ್, ಹಿಂದೂ ಮಹಾಸಭೆ ಮತ್ತು ಇತರ ಸಂಸ್ಥೆಗಳ ಸದಸ್ಯರನ್ನು ತನ್ನ ರೀತಿ ಪ್ರಕಾರ ಕಂಡು, ಕಾದುಕತನವನ್ನು ಹೋಗಲಾಡಿಸಲು ಸಹಕರಿಸಲು ಮನವೊಲಿಸಬೇಕು. ರಾಜಕೀಯ ಮತಭೇದಗಳು ಎಷ್ಟೇ ಇದ್ದರೂ ಅವುಗಳನ್ನು ಗಣಿಸತಕ್ಕದ್ದಲ್ಲ. ದೊಂಬಿಗಳಲ್ಲಿ ಸಂಭವಿಸಿದ ನಷ್ಟದ ಸಂಬಂಧದಲ್ಲಿ ಕಾಂಗ್ರೆಸ್ಸು ಪರಿಹಾರ ಕೇಳಲಾರದು. ನಮ್ಮ ರಕ್ಷಣೆಗಾಗಿ ನಾವು ಭಯ್ಯಾ ಜನರು, ಸೀಖರು ಅಥವಾ ಠಾಕುರರು ಇವರ ಸಹಾಯವನ್ನು ಅವಲಂಬಿಸುವುದು ಭಯಂಕರವಾಗಿರುವದು.

'ಮಧ್ಯಮ ವರ್ಗದ ವ್ಯಾಪಾರಿಗಳಲ್ಲಿಯ ಪ್ರತಿಯೊಬ್ಬ ತರುಣನು ಹಿಂಸೆಯಿಂದಾಗಲಿ ಅಹಿಂಸೆಯಿಂದಾಗಲಿ ತನ್ನನ್ನು ಸಂರಕ್ಷಿಸಿಕೊಳ್ಳುವ ಶಿಕ್ಷಣ ಪಡೆದಿರಲೇಬೇಕು. ಮುಸಲ್ಮಾನ ಓಣಿಗಳಲ್ಲಿ ಇರುವ ಹಿಂದೂಜನರು ಆ ಓಣಿಗಳನ್ನು ತ್ಯಜಿಸತಕ್ಕದ್ದಲ್ಲ. ಜೀವ ಹೋಗುವ ಪ್ರಸಂಗ ಬಂದರೂ ಅಲ್ಲಿಯೇ ಇರತಕ್ಕದ್ದು. ಇದರಂತೆ ಹಿಂದೂ ಓಣಿಗಳಲ್ಲಿ ಇರುವ ಮುಸಲ್ಮಾನರು ಹಿಂದುಗಳ ಮೇಲೆ ವಿಶ್ವಾಸವಿಟ್ಟು ಅಲ್ಲಿಯೇ ನೆಲಸಬೇಕು. ಗಲಭೆಯ ಸುದ್ದಿ ಕಿವಿಗೆ ಬಿದ್ದ ಕೂಡಲೆ ಅಂಗಡಿ ಮೊದಲಾದುವುಗಳನ್ನು ಮುಚ್ಚುವ ರೂಢಿಯನ್ನು ಇನ್ನು ಬಿಟ್ಟುಬಿಡಬೇಕು.'

ದಂಗೆಗಳ ಮಧ್ಯದಿಂದ ಓಡಿ ಹೋಗಕೂಡದು

ಕಾಂಗ್ರೆಸಿನವರಿಗೆ ಮಹಾತ್ಮರ ಸೂಚನೆ

'ದೊಂಬಿಗಳ ಮಧ್ಯದಿಂದ ಕಾಂಗ್ರೆಸ್ ಜನರು ಹೇಡಿಗಳಂತೆ ಓಡಿಹೋದದ್ದಾದರೆ ಅವರು ಇದ್ದೂ ಇಲ್ಲದಂತೆಯೇ ಆಗುವುದು. ಆದುದರಿಂದ ಜಾತೀಯ ದೊಂಬಿಗಳಲ್ಲಿ ಅವರ ಒಂದೇ ಒಂದು ಕರ್ತವ್ಯವು ಹಿಂಸೆಯನ್ನು ಬಿಟ್ಟು, ಆರಂಭದಿಂದಲೂ ನಾನು ಪ್ರಯತ್ನಿಸುತ್ತ ಬಂದ ಅಹಿಂಸೆಯಿಂದ ಆ ಪುಂಡಾಟಿಕೆಯನ್ನು ಎದುರಿಸುವುದಿರುತ್ತದೆ' ಎಂಬುದಾಗಿ ಮಹಾತ್ಮಾ ಗಾಂಧಿಯವರು ವರ್ಧಾಗಂಜದ ರಾಷ್ಟ್ರೀಯ ಯುವಕರ ಶಿಕ್ಷಣಶಿಬಿರದಲ್ಲಿ ಭಾಷಣ ಮಾಡುತ್ತ ಹೇಳಿದರು.

ಮುಂದುವರಿಸಿ ಅವರು ಈ ರೀತಿ ಹೇಳಿದರು. 'ಈಗ ಅಹಮ್ಮದಾಬಾದ್, ಢಾಕಾ, ಬಿಹಾರ್, ಮುಂಬಯಿ ಮೊದಲಾದವುಗಳಲ್ಲಿ ಜಾತೀಯ ದ್ವೇಷಾಗ್ನಿ ಮತ್ತು ಮುಷ್ಕರಗಳು ನಡೆದಿರುವದರಿಂದ ಈ ಶಿಬಿರದಿಂದ ಅನೇಕ ಕಾರ್ಯಗಳು ಆಗಬೇಕಾಗಿದೆ. ಹಿಂದುಸ್ಥಾನದಲ್ಲಿ ಈಗ ದೊಂಬಿ ಮೊದಲಾದವು ನಡೆದಿದ್ದು ಅವುಗಳ ಕಡೆಗೆ ಕಿವಿಗೊಡದೆ ಇರಬೇಡಿರಿ. ದೊಂಬಿಗಳಲ್ಲಿ ಪುಂಡರು ಧಾಳಿಮಾಡಿದರೆ ಓಡಿಹೋಗುವುದು ಮನುಷ್ಯತ್ವವೆನಿಸುವುದಿಲ್ಲ. ಅಂಥ ಪರಿಸ್ಥಿತಿಯನ್ನು ಎದುರಿಸಲು ಎರಡೇ ಮಾರ್ಗಗಳಿರುವವು. ಒಂದು ಹಿಂಸೆಯಿಂದ ಹಿಂಸೆಯನ್ನು ಎದುರಿಸುವುದು. ಇದು ಸಾಂಪ್ರದಾಯಿಕವೂ ಸಾರ್ವತ್ರಿಕವೂ ಬಹಳ ಕಾಲದಿಂದ ನಡೆಯುತ್ತ ಬಂದದ್ದೂ ಇರುತ್ತದೆ. ಎರಡನೆಯದು ಈ ತರದ ಗಂಡಾಂತರಗಳನ್ನು ಅಹಿಂಸೆಯಿಂದ ಎದುರಿಸುವದಾಗಿದೆ. ಇದು ಹೊಸ ಕಲೆ. ನಿಮ್ಮ ಮೇಲೆ ಧಾಳಿಮಾಡಿದವನನ್ನು ಕೊಲ್ಲಬೇಡಿರಿ. ಅವನು ಕೊಡುವ ಪೀಡೆ ಸಹಿಸಿಕೊಳ್ಳಿರಿ. ಇಷ್ಟೇ ಏಕೆ ಜಾತೀಯ ಐಕ್ಯದ ಸಲುವಾಗಿ ಪ್ರಾಣವನ್ನು ಅರ್ಪಿಸಲೂ ಸಿದ್ಧರಾಗಿರಿ.

ಈಗ ಕಾಂಗ್ರೆಸ್ಸಿನವರ ಸತ್ವಪರೀಕ್ಷೆಯ ಕಾಲವು ಬಂದಿರುವದು. ಅವರು ಧೈರ್ಯ ಮತ್ತು ಗಂಡಸುತನದಿಂದ ಈ ತರದ ಗಂಡಾಂತರ, ದೊಂಬಿ ಅಥವಾ ಪುಂಡಾಟಿಕೆಯನ್ನು ಅಹಿಂಸೆಯಿಂದ ಎದುರಿಸದೆ ಹೋದರೆ ಕಾಂಗ್ರೆಸ್ಸು ರಾಷ್ಟ್ರೀಯ ಸಂಸ್ಥೆಯಾಗಿ ಉಳಿಯುವ ತನ್ನ ಹಕ್ಕನ್ನು ತಾನೇ ಕಳೆದುಕೊಂಡಂತಾಗುವುದು. ಪುಂಡರನ್ನು ದಂಡಿಸುವದು ಅಥವಾ ಹಿಂಸೆಯಿಂದ ಅದನ್ನು ಹತ್ತಿಕ್ಕುವದು ಜಗತ್ತಿನ ಕ್ರಮವಾಗಿದ್ದರೂ ನಾನು ನಿಮಗೆ ಅದನ್ನು ಶಾಂತ ಹಾಗು ಅಹಿಂಸಾತ್ಮಕ ರೀತಿಯಿಂದ ಎದುರಿಸಲು ಮತ್ತು ಅದರಿಂದ ನಿಮ್ಮ ಅಸ್ತಿತ್ವವನ್ನು ಹಾಗು ಅದರಂತೆ ರಾಷ್ಟ್ರೀಯ ಸಂಸ್ಥೆ ಕಾಂಗ್ರೆಸ್ಸಿನ ಅಸ್ತಿತ್ವವನ್ನು ಸಾರ್ಥಕ ಮಾಡಿಕೊಳ್ಳಲು ವಿನಂತಿ ಮಾಡಿಕೊಳ್ಳುತ್ತೇನೆ.'

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE. ESTD. 1906 CANARA BANK LIMITED

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ವಾರದ ಕತೆ:

ಚಂಪೆಯ ದುರ್ಗತಿ!

(—ಶ್ರೀ 'ಕತೆಗಾರ')

ಚಂಪೆ ಅತ್ತಳು; ಕಾಲಿಗೆ ಬಿದ್ದು ಗೋಳಿಟ್ಟಳು. 'ಅಮ್ಮಾ! ನಿಮಗೆ ಸ್ವಲ್ಪವಾದರೂ ಕನಿಕರವಾಗುವುದಿಲ್ಲವೆ? ಈ ನಡುರಾತ್ರಿಯಲ್ಲಿ ಎಲ್ಲಿಗೆ ಹೋಗಲಿ? ಏನು ಮಾಡಲಿ? ಸ್ವಲ್ಪ ದಯೆ ತೋರಿಸಿ. ನಾಳೆಗೇ ಊರಿಗೆ ಹೋಗುವೆನು. ಅಮ್ಮಾ! ಅವರು ನಿಮ್ಮ ಮಕ್ಕಳಾಗಿದ್ದಂತೆ, ನನಗೂ ದೇವರಾಗಿದ್ದರಲ್ಲವೆ? ನಾನೇನು ಮಾಡಿದೆ? ಅಮ್ಮಾ! ಹೊರಗೆ ಜೋರು ಮಳೆ ಬರುತ್ತದೆ; ಮಿಂಚು ಮಿಂಚುತ್ತದೆ. ಈಗಲೇ ಮನೆಯಿಂದ ಹೋಗಲಿಕ್ಕೆ, ಅಮ್ಮಾ! ನಾನೇನು ಅಪರಾಧ ಮಾಡಿದೆ?'

ಸಿಟ್ಟಿನಿಂದ ನಡುಗುತ್ತ ಸಂತಪ್ತಳಾಗಿದ್ದ ಕಾವೇರಿ ಅಂದಳು—'ಇಲ್ಲ, ನಿನ್ನ ದೋಷವೋ ಅಪರಾಧವೋ, ಅದು ನನಗೆ ಯಾವದೂ ಗೊತ್ತಿಲ್ಲ. ಮನೆಗೆ ಮಾರಿ ಹೊಕ್ಕಂತೆ ಬಂದಿ; ಗಂಡನನ್ನು ತಿಂದು ಹಾಕಿದ್ದು ಸಾಲದೆ, ಈಗ ಮೈದುನನನ್ನು ತಿನ್ನ ಹೊರಟಿದ್ದಿ! ಅಯ್ಯಾಸ್ವಾ! ಯಾವ ಸಮಯಕ್ಕೆ ಸುಟ್ಟ ಮೋರೆಯವಳನ್ನು ಮನೆಗೆ ಕರತಂದೆನೊ?'

ಚಂಪೆಯ ಕಂಠವು ಬಿಗಿದು ಬಂದಿತು. ಅವಳು ಮದುವೆಯಾಗಿ ಬಂದ ಮೇಲೆ ಒಂದು ದಿನವಾದರೂ ಸುಖ ಕಾಣಲಿಲ್ಲ. ಇತ್ತ ಕ್ಷಯ ಹಿಡಿದ ಗಂಡನ ಸೇವೆ; ಅತ್ತ ಕಣ್ಣಲ್ಲಿ ನೆತ್ತರಿಲ್ಲದ ಅತ್ತೆಯ ಕಾಟ—ಇವೆರಡರ ನಡುವೆ ಸಿಕ್ಕಿ ಅವಳು ಬಳಲಿ ಬೆಂಡಾಗಿದ್ದಳು; ಸೋತು ಸುಣ್ಣವಾಗಿದ್ದಳು. ಕುರುಪಿನ ಮೇಲೆ ಬೊಕ್ಕೆ ಎದ್ದ ಹಾಗೆ ಅದರ ಮೇಲೆ ಈ ಹಾಳು ವೈಧವ್ಯದ ದುರ್ದೈವ! ಚಂಪೆ ಪುನಃ ಕಾಲುಗಳ ಮೇಲೆ ಬಿದ್ದು ಕಣ್ಣೀರ ಕಾಲುವೆಯನ್ನು ಹರಿಸಿದಳು. ಆದರೂ ಕಾವೇರಿಯ ಪಾಷಾಣ ಹೃದಯ ಕರಗದು.

ಊರಿನಲ್ಲಿ ರಾಮಣ್ಣ ಭಟ್ಟರೆಂದರೆ, ಮಕ್ಕಳಿಗೂ ಗೊತ್ತು, ಅವರು ಯಾರೆಂದು! ಯಂತ್ರಮಂತ್ರ, ಮಾಟಮೋಡಿ, ನಿಮಿತ್ತಫಲ, ಜಾತಕಸ್ಫುಟ ಯಾವದು ಆಗಬೇಕಾದರೂ ಊರವರಿಗೆ ಅವರೊಬ್ಬರೇ ಆಗಿದ್ದರು. ಅದ್ದರಿಂದ ಎಲ್ಲರೂ ಅವರಿಗೆ ಗೆಳೆಯರು, ಮಿತ್ರರು; ದ್ವೇಷಿಗಳು ಒಬ್ಬರೂ ಇಲ್ಲ. ಕಾವೇರಿಯ ಮನೆಯಲ್ಲಿಯೂ ಅವರಿಗೆ ಅಡಿಗೆ ಮನೆ, ಬಚ್ಚಲು ಮನೆತನಕ ಪ್ರವೇಶವಿದ್ದಿತು. ಚಂಪೆಯ ಗಂಡ, ಕ್ಷಯದಿಂದ ತೀರಿದ ಮೇಲೆ ಹದಿನಾಲ್ಕನೆಯ ದಿನ ಅವರು ಬಂದು—'ಕಾವೇರಿ! ದೇವರೇ ನಿಮ್ಮನ್ನು ಕಾಪಾಡಬೇಕು!' ಎಂದು ಒಂದು ಬಿಸಿ ಉಸಿರು ಬಿಟ್ಟರು. ಕಾವೇರಮ್ಮನ ಹೃದಯ ಢಗಢಗಿಸಿತು. 'ರಾಮಣ್ಣ! ಏನು ಮಾತು, ಹೇಳಬಾರದೆ?' ಎಂದು ಕೇಳಿದಳು.

ರಾಮಣ್ಣ—'ಕಾವೇರಿ! ಹೇಳಲಿಕ್ಕೆ ಭಯವಾಗುತ್ತದೆ. ಆದರೂ ನಿಮ್ಮ ಉಪ್ಪನ್ನು ತಿಂದಿದ್ದೇನೆ. ಹೇಳದೆ ನಿರ್ವಾಹವಿಲ್ಲ!'

ಕಾವೇರಿ—'ಹೇಳು, ಹೇಳು, ಬೇಗ ಹೇಳು.'

ರಾಮಣ್ಣ—'ಕಾವೇರಿ! ನಿನ್ನೆಯ ಕ್ರಿಯಾಕರ್ಮಗಳು ಮುಗಿದ ಮೇಲೆ, ಪಂಚಾಂಗ ತೆಗೆದು ನೋಡಿದೆ. ನಿನ್ನ ಮಗನು ಹೊರಟು ಹೋದ ಸಮಯ ಬಹಳ ಕೆಟ್ಟದು; ಈ ಮನೆಯ ಮೇಲೆ ಕಾಳಿಯ ದೃಷ್ಟಿ ಇದೆ. ಅದ್ದರಿಂದ ನಿನ್ನ ಚಿಕ್ಕ ಮಗ . . . . . !'

ಕಾವೇರಿಗೆ ಆ ಕ್ಷಣವೇ ಅರ್ಥವಾಯಿತು, ಅವಳು ಹೇಳಿದಳು—'ರಾಮಣ್ಣ! ಕುಜರಾಹು ಸಂಧಿ. ಅಲ್ಲವಾದರೆ ನಾನು ಅವಳನ್ನು ಮನೆಗೆ ಕರೆತರುತಿದ್ದನೆ? ಅವಳ ಮೋರೆ ನೋಡಿದಾಗಲೇ ನಮಗೆ ಹೀಗಾದೀತೆಂಬ ಶಂಕೆ ನನಗೆ ಆಗಲೇ ಉಂಟಾಗಿದ್ದಿತು.'

ಮೊದಲಿನಿಂದಲೂ ಕಾವೇರಮ್ಮನಿಗೆ ಚಂಪೆ ಅಂದರೆ ಎಣ್ಣೆ ಸೀಗೆ ಇದ್ದ ಹಾಗೆ. ಈಗಂತೂ ಉರಿಯುವ ಬೆಂಕಿಗೆ ತುಪ್ಪ ಹಾಕಿದಂತಾಯಿತ್ತು. ಅವಳ ದೊಡ್ಡ ಮಗ ಹೊರಟುಹೋದ ಮೇಲೆ ಚಿಕ್ಕ ಮಗ, ಮೋಹನನೂ ಅವನ ದಾರಿ ಹಿಡಿಯಲಿದ್ದ. ಅವನಿಗೂ ಬೆಳಗ್ಗೆ ಸಾಯಂಕಾಲ ಜ್ವರ ಬರಲಾರಂಭಿಸಿತ್ತು. ಇದಕ್ಕೆಲ್ಲ ಕಾರಣ ಚಂಪೆಯೇ ಎಂದು ಈಗ ಅವಳು ಧಾರಾಳ ನಂಬಿದಳು ಮತ್ತು ಅಂದು ರಾತ್ರೆಯೇ ತವರು ಮನೆಗೆ ಹೊರಟುಹೋಗಬೇಕೆಂದು ಕಟ್ಟುನಿಟ್ಟಾಗಿ ಹೇಳಿದಳು. ಚಂಪೆಗೋಳಿಟ್ಟಳು; ಗಂಗಾ ಯಮುನಾ ಪ್ರವಾಹ ಹರಿಸಿದಳು. ಆದರೆ ಅವಳ ಯಾವ ಆಟವೂ ನಡೆಯಲಿಲ್ಲ. ಹೊರಗೆ ಮುಸಲಧಾರೆಯ ಮಳೆ ಬರುತ್ತಿದ್ದರೂ ಅವಳು ಚಂಪೆಯನ್ನು ಹೊರಗೆ ದೂಡಿ ಬಾಗಿಲು ಹಾಕಿಕೊಂಡಳು.

ಈಗ ಚಂಪೆ ಏನು ಮಾಡಬೇಕು? ಎಲ್ಲಿಗೆ ಹೋಗಬೇಕು? ಮದುವೆಯಾಗಿ ಎರಡು ತಿಂಗಳುಗಳು ಕೂಡ ಆಗಿರಲಿಲ್ಲ; ಊರಲ್ಲಿ ಅವಳಿಗೆ ಯಾರ ಪರಿಚಯವೂ ಇದ್ದಿಲ್ಲ. ದುರ್ದೈವವು ಅವಳನ್ನು ಕರೆದೊಯ್ಯಲಾರಂಭಿಸಿತು. ಅವಳು ನೆನೆಯುತ್ತ, ನೆನೆಯುತ್ತ ಹೊರಟಳು.

ದಾರಿಯಲ್ಲಿ ರಾಮಣ್ಣ ಭಟ್ಟರು ಕೊಡೆ ಹಿಡಿದು ಬರುತಿದ್ದರು. ಎಲ್ಲವನು ತಿಳಿದವರಿದ್ದರೂ ಏನೂ ತಿಳಿಯದವರಂತೆ ನಾಲ್ಕು ಪ್ರಶ್ನೆಗಳನ್ನು ಕೇಳಿ ಅವರು ಎಲ್ಲವನ್ನು ತಿಳಕೊಂಡರು. ಮತ್ತು ಕಾವೇರಮ್ಮನನ್ನು ಸಮಜಾಯಿಸಿ ಅವಳು ಪುನಃ ಕರಕೊಂಡು ಹೋಗುವಂತೆ ಮಾಡುತ್ತೇನೆಂದು ಮಾತಿನ ಭರವಸೆ ಕೊಟ್ಟು ತಮ್ಮ ಮನೆಗೆ ಕರಕೊಂಡು ಹೋದರು.

ಏಳು ದಿನಗಳು ಕಳೆದುವು. ಭಟ್ಟರು ಪ್ರತಿದಿನ ಬಂದು ಚಂಪೆಯನ್ನು ಸಮಜಾಯಿಸಿ ಹೋಗುವರು; ಆದರೆ ಚಂಪೆ ಅತ್ತೆ ಮನೆಗೆ ಹೋಗುವದು ಯಾವಾಗ ಎಂಬುದನ್ನು ಮಾತ್ರ ಅವರು ಹೇಳುವದಿಲ್ಲ. ಈಗ ಅವಳಿಗೆ ಸ್ವಲ್ಪ ಸ್ವಲ್ಪ ಅರ್ಥವಾಗ ತೊಡಗಿತು; ಭಟ್ಟರ ಮಾತುಗಳಿಂದ ಅವಳು ಮಾಡಿದ ಅರ್ಥವು ಸ್ಪಷ್ಟವಾಗ ತೊಡಗಿತು. ರಾಮಣ್ಣ ಭಟ್ಟರೇ ತನ್ನ ದುರ್ದೈವದ ಪ್ರತಿಮೂರ್ತಿಯಾಗಿ ನಿಂತಿರುವದು ಅವಳಿಗೆ ಗೊತ್ತಾಗಹತ್ತಿತು.

ಎಂಟನೆ ದಿನ ರಾಮಣ್ಣ ಭಟ್ಟರು ಬಂದು ಹೇಳಿದರು—'ಚಂಪೆ, ಬಹಳ ಪ್ರಯತ್ನ ಮಾಡಿದೆ, ಸಾಧ್ಯವಾಗಲಿಲ್ಲ. ಏನು ಮಾಡೋಣ. ಈಗ ನಿನ್ನನ್ನು ನಿನ್ನ ತವರು ಮನೆಗೆ ಮುಟ್ಟಿಸುವುದೊಂದೇ ಉಪಾಯ ಉಳಿದಿದೆ. ಬಾ, ಹೋಗೋಣ.'

ಚಂಪೆಗೆ ಸಂದೇಹದಲ್ಲಿ ಸ್ವಲ್ಪ ಸಮಾಧಾನ ಅನ್ನಿಸಿತು. ಇಬ್ಬರೂ ಸ್ಟೇಶನಿನ ಕಡೆಗೆ ಹೊರಟರು. ಭಟ್ಟರು ಬೆಂಗಳೂರು ಕಡೆಗೆ ಟಿಕೇಟು ತೆಗೆದುಕೊಂಡು ಬಂದರು. ಆಗಲೇ ಚಂಪೆಗೆ ಪುನಃ ಸಂದೇಹವಾಗಿ 'ಭಟ್ಟರೇ, ನಾವು ಎಲ್ಲಿಗೆ ಹೋಗುವುದು?' ಎಂದು ಕೇಳಿದಳು.

'ಚಂಪಾ! ಒಂದು ಸಂಗತಿ ಹೇಳಲಿಕ್ಕೆ ಮರೆತೆ. ನಿನ್ನ ತಮ್ಮನಿಗೆ ಮದುವೆ ನಿಶ್ಚಯವಾಗಿದೆ. ನಿನ್ನನ್ನು ಅಲ್ಲಿಗೇ ಕರಕೊಂಡು ಬರಬೇಕೆಂದು ತಂದೆಯವರು ಕಾಗದ ಬರೆದಿದ್ದಾರೆ.'

ಇಬ್ಬರೂ ರೈಲು ಹತ್ತಿ ಹೊರಟರು. ರಾತ್ರಿ ಕಳೆಯುತ್ತ ಬಂದಿತ್ತು. ಆದರೂ ಚಂಪೆಗೆ ನಿದ್ದೆ ಬಂದಿರಲಿಲ್ಲ. ಕಣ್ಣುಗಳನ್ನು ಮಾತ್ರ ಮುಚ್ಚಿಕೊಂಡಿದ್ದಳು. ಭಟ್ಟರು ಯಾರೋ ಅಪರಿಚಿತನೊಡನೆ ಮಾತನಾಡುವುದು ಅವಳಿಗೆ ಕೇಳಿಸಿತು. 'ಹೂಂ ಇನ್ನು ಜಾಗ್ರತೆಯಿಂದ ಇರಬೇಕು. ನಾನು ಹೋಗುತ್ತೇನೆ'.

ರೈಲು ಒಂದು ಸ್ಟೇಶನಿಗೆ ಬಂದಿದ್ದಿತು. ಎಲ್ಲರೂ ಕೆಳಗಿಳಿದರು. ಚಂಪೆ ಶೌಚಕ್ಕೆ ಹೋಗುವ ನೆವನ ಮಾಡಿ ಮರೆಯಾದಳು. ಅಲ್ಲಿಂದ ಅವಳ ತವರು ಮನೆಗೆ ಆರೇಳು ಮೈಲುಗಳ ದೂರವಿದ್ದಿತು. ಅವಳು ಒಬ್ಬಳೇ ಆ ದಾರಿ ಹಿಡಿದಳು. ಉಳಿದವರು ಕಾದರು, ಹುಡುಕಿದರು; ಚಂಪೆ ಎಲ್ಲಿಯೂ ಕಾಣಸಿಗಲಿಲ್ಲ. ನಿರಾಶರಾಗಿ ಬಂದ ದಾರಿಹಿಡಿದರು.

ಚಂಪೆ ತವರುಮನೆ ಮುಟ್ಟುವಾಗ ಬೆಳಗಾಗಿದ್ದಿತು. ಅಂಗಳದಲ್ಲಿ ಅವಳ ತಂದೆ, ಒಬ್ಬರೇ ಹುಲ್ಲು ಕೀಳುತಿದ್ದರು. ದೂರದಲ್ಲಿ ಬರುವ ಚಂಪೆಯನ್ನು ನೋಡಿದಾಕ್ಷಣ ಅವರು ಎತ್ತಿದ್ದ ಮೋರೆಯನ್ನು ತಗ್ಗಿಸಿದರು.

'ಅಪ್ಪಾ! ನಾನು ಬಂದಿದ್ದೇನೆ',

ಅವರು ಮಾತನಾಡಲಿಲ್ಲ.

'ಅಪ್ಪಾ! ನಾನು ಬಂದಿದ್ದೇನೆ' ಎಂದು ಅವಳು ಪುನಃ ಹೇಳಿದಳು.

ಅವರು ಮೋರೆಯನ್ನು ಎತ್ತಿದರು. ಕಣ್ಣುಗಳು ಕೆಂಪುಕೆಂಪಾಗಿದ್ದುವು. ತುಟಿಗಳು ನಡುಗುತಿದ್ದುವು. ಹೇಳಿದರು—'ದುಷ್ಟೆ! ಎದುರು ನಿಲ್ಲಬೇಡ! ತೊಲಗು, ದೂರವಾಗು! ಎರಡೂ ಕುಟುಂಬಗಳಿಗೆ ಕಳಂಕ ತಂದಿ. ಹಾದರಗಿತ್ತಿಯಾಗಿ ಮನೆಬಿಟ್ಟು ಓಡಿದಿ. ಈಗ ಯಾರೂ ಕೈಗೆ ಸಿಕ್ಕದಿರಲು ಇಲ್ಲಿಗೆ ಬಂದಿಯಲ್ಲವೆ? ಇಲ್ಲಿಗೆ ಬಂದಿಯಲ್ಲವೆ? ಇಲ್ಲಿ ನಿನಗೆ ಯಾರೂ ಇಲ್ಲ. ಹೋಗು.'

ತಂದೆ ಮತ್ತು ಮಗಳು—ಇಬ್ಬರೊಳಗೆ ಬಹಳ ಮಾತುಕತೆಗಳಾದುವು. ಆದರೆ ಹತ್ತಿಪ್ಪತ್ತು ಮೈಲು ನಡೆದುಬಂದ ಚಂಪೆಗೆ 'ನೀರು ಬೇಕೆ!' ಎಂದು ಕೂಡ ಕೇಳದೆ ತಂದೆ ಅವಳನ್ನು ಹೊರಗೆ ಹಾಕಿ ಬಾಗಿಲು ಮುಚ್ಚಿದ. ಹಾಳು ವೈಧವ್ಯವು ಅವಳನ್ನು ಎಲ್ಲ ಕಡೆಗಳಿಂದಲೂ ತಿರಸ್ಕೃತಳನ್ನಾಗಿ ಮಾಡಿತು. ಈಗ ಅವಳಿಗೆ ಯಾರು ಗತಿ? ಅವಳು ಈ ಪ್ರಪಂಚದಲ್ಲಿ ಯಾರಿಗೂ ತನ್ನ ಮೋರೆಯನ್ನು ತೋರಿಸಲಿಕ್ಕಿಲ್ಲ—ದುರ್ದೈವವು ಅವಳನ್ನು ಹಾಗೆ ಮಾಡಿತ್ತು.

ಮರುದಿನ ಹೆಂಗುಸಿನ ಒಂದು ಶವವು ಊರ ಕೆರೆಯಲ್ಲಿ ತೇಲುತಿದ್ದುದನ್ನು ಬಟ್ಟೆ ಒಗೆಯಲಿಕ್ಕೆ ಹೋದವರು ಮೇಲಕ್ಕೆ ಎತ್ತಿ ಹಾಕಿದರು.

ಒಂದು ಜಾತಿಗೆ ಪೌರುಷ ಪ್ರತಿಭೆಗಳು ಬೇಕೆಂದರೆ

ಬಲವಿರಬೇಕು
ಜಾತಿಯು ನಿಸ್ತೇಜವಾದರೆ
ಜಾತೀಯತೆಯಿರಲಾರದು
ಜೀವವಿರಲಾರದು
ಭಾರತೀಯರು
ಬಲಪೌರುಷ ಪ್ರತಿಭೆಗಳನ್ನು
ಗಳಿಸಬೇಕಾದರೆ

ಎಲ್ಲರಿಗೂ ಸಹಜವಾಗಿ ಬಲವಿರದು. ಅಂಥವರು "ಅಮೃತ" ಸೇವಿಸಲೇ ಬೇಕು. "ಅಮೃತ" ಆರೋಗ್ಯಕ್ಕೂ ಬಲಕ್ಕೂ, ಇಟ್ಟದ್ದೇ ಹೆಸರು.

ಆರೋಗ್ಯಕ್ಕೂ ಬಲಕ್ಕೂ ಅಮೃತ

ಕೇಸರಿಕುಟೀರಂ—ಮುದ್ರಾಸು.

ಜಿಲ್ಲಾ ಸಮಾಚಾರ

ಜಿಲ್ಲೆಯಲ್ಲಿ ಹಿಂದು ಮುಸ್ಲಿಂ ಸೌಹಾರ್ದ ಹೆಚ್ಚುವಂತೆ--

ಮುಖಂಡರು ಸಂಯುಕ್ತ ಪ್ರಚಾರಕಾರ್ಯ ಮಾಡುತ್ತಾರೆ

ಹಿಂದೂ-ಮುಸ್ಲಿಂ ಸೌಹಾರ್ದ ಪ್ರಚಾರ

ಮಂಗಳೂರು ಹಾಗೂ ಜಿಲ್ಲೆಯ ಇತರ ಭಾಗಗಳಲ್ಲಿ ಹಿಂದೂ-ಮುಸ್ಲಿಂ ಸೌಹಾರ್ದವು ಹೆಚ್ಚುವಂತೆ ಪ್ರಯತ್ನಿಸುವ ಸಲುವಾಗಿ ಕಳೆದ ಶುಕ್ರವಾರ ಡಿ. ಬೊ. ಆಫೀಸಿನಲ್ಲಿ ಡಾ. ವಿಟ್ಠಲ ಶೆಟ್ರ ಅಧ್ಯಕ್ಷತೆಯಿಂದ ಸಭೆಕೂಡಿ, ಬೇರೆ ಬೇರೆ ಕಡೆಗಳಲ್ಲಿ ಸಭೆಗಳನ್ನು ಜರಗಿಸಿ ಜನತೆಗೆ ಸೌಹಾರ್ದದಿಂದಿರುವಂತೆಯೂ, ಜವಾಬ್ದಾರಿಯಿಲ್ಲದ ಜನರು ಹೇಳುವ ನಿರಾಧಾರವಾದ ಸುದ್ದಿಯನ್ನು ನಂಬಬಾರದೆಂದು ತಿಳಿಸುವಂತೆಯೂ ಪ್ರಚಾರ ಕಾರ್ಯವನ್ನು ಮಾಡುವರೆ ಕಾರ್ಯಕ್ರಮವೊಂದು ರಚಿತವಾಯಿತು.

ಮಂದಿನ ಬುಧವಾರ ಮಂಗಳೂರಿನಲ್ಲಿ ಕೆನರಾ ಚೇಂಬರ್ ಒಫ್ ಕಾಮರ್ಸಿನಲ್ಲಿ ಶ್ರೀ ಎಂ. ಅಣ್ಣಪ್ಪ ನಾಯ್ಕರ ಅಧ್ಯಕ್ಷತೆಯಿಂದ ಹಿಂದೂ ಮುಸ್ಲಿಂ ವರ್ತಕರ ಸಭೆಯು ಕೂಡಿ, ಅದರಲ್ಲಿ ಸೌಹಾರ್ದದ ಅವಶ್ಯಕತೆಯ ಕುರಿತು ಶ್ರೀಗಳಾದ ಜಿನರಾಜ ಹೆಗ್ಡೆ ಮತ್ತು ಅಬ್ದುಲ್ ರಹೀಮರು ಭಾಷಣಗಳನ್ನಿತ್ತರು.

ಕಳೆದ ಶನಿವಾರ ಸಂಜೆಗೆ ಉಳ್ಳಾಲದಲ್ಲಿ ಶಿಲಿ ಚಾಮುಂಡಿ ದೈವಸ್ಥಾನದಲ್ಲಿ ಅಲ್ಲಿನ ಮೊಗವೀರರೇ ಮೊದಲಾದ ಹಿಂದುಗಳ ಮಹಾಸಭೆಯೊಂದು ಕೂಡಿದ್ದು, ಅದರಲ್ಲಿ ಶ್ರೀ ಹಾಜಿ ಹುಸೇನ್ ಸಾಹೇಬರ ಅಧ್ಯಕ್ಷತೆಯಿಂದಲೂ, ಆ ಸಭೆ ಮುಗಿದ ಬಳಿಕ ಉಳ್ಳಾಲ ಮಾಪಿಳಾ ಬೋರ್ಡು ಎಲಿಮೆಂಟರಿ ಶಾಲೆಯ ವಠಾರದಲ್ಲಿ ಶ್ರೀ -ಕಾರ್ಕಳ ಸದಾಶಿವರಾಯರ ಅಧ್ಯಕ್ಷತೆಯಿಂದಲೂ ಎರಡು ಸಭೆಗಳು ಜರುಗಿದುವು. ಎರಡೂ ಸಭೆಗಳಲ್ಲಿಯೂ ತುಂಬಾ ಮುಸಲ್ಮಾನರೂ ಹಿಂದುಗಳೂ ಸಮ್ಮಿಶ್ರರಾಗಿದ್ದರು.

ಮರುದಿನ ಆದಿತ್ಯವಾರ ಮಂಗಳೂರು ಸೆಂಟ್ರಲ್‌ವಾರ್ಡ್ ಮುನ್ಸಿಪಲ್ ಬಾಲಿಕಾ ಪಾಠಶಾಲೆಯ ವಠಾರದಲ್ಲಿ ಹಿಂದುಗಳ ಬೃಹತ್ ಸಭೆಯು ಕೂಡಿತ್ತು. ಶ್ರೀ ರಂಗನಾಥ ಪುಂಜರ ಅಧ್ಯಕ್ಷತೆ ವಹಿಸಿದ್ದರು.

ಮರುದಿನ ಸೋಮವಾರ ಬೋಳೂರು ಬತ್ತೇರಿಯ ಹತ್ತಿರ ಮೊಗವೀರ ಬಂಧುಗಳ ಮಹಾಸಭೆ ಶ್ರೀ. ಆನಂದರಾಯರ ಅಧ್ಯಕ್ಷತೆಯಲ್ಲಿ ಮಂಗಳವಾರ-ಜಮ್ಮ ಮಸೀದಿಯ ಹತ್ತಿರ ಮಾಪಿಳ್ಳಾ ಬಂಧುಗಳ ಮಹಾಸಭೆ ಡಾ. ಕೆ. ವಿಟ್ಠಲ್ ಶೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿತು. ಈ ಸಭೆಗಳಲ್ಲೆಲ್ಲಾ ಶ್ರೀಗಳಾದ ನಾಗರಾಜಯ್ಯ, ಅಬ್ದುಲ್ ರಹೀಮ್, ಹಮ್ಮಬ್ಬ, ಒಜೆಯತ್, ಎಂ. ಆರ್. ಭಟ್, ರಂಗನಾಥ ಪುಂಜ, ವೈಕುಂಠ ಬಾಳಿಗ, ಎಚ್. ಕೆ. ತಿಂಗಳಾಯ, ಕುಂಞಂಬು ಸಾಹೇಬ್, ಅಬ್ದುಲ್ ಹಜೀಜ್, ಬಿ. ಡಿ. ಬಾಳಿಗ, ಆನಂದರಾವ್, ಬಿ. ಎಲ್. ವಿದ್ಯಾರ್ಥಿ, ವಹಿಸು ಹಮ್ಮದ್, ನಿರಳ್ಳೆ ಮಾಧವ್‌ಜಿ ಮೊದಲಾದ ಹಿಂದೂ ಮುಸ್ಲಿಂ ಗೃಹಸ್ಥರನೇಕರು ಜಾತೀಯ ಸೌಹಾರ್ದದ ಅವಶ್ಯಕತೆಯ ಕುರಿತು ಬೋಧಪ್ರದವಾಗಿ ಭಾಷಣಗಳನ್ನಿತ್ತರು.

ಈ ತರದ ಪ್ರಚಾರದಿಂದ ಹಿಂದೆ ಹುಟ್ಟಿದ ಗಾಬರಿಗೊಳಿಸುವ ಸುದ್ದಿ ಕಡಿಮೆಯಾಗಿ ನಗರದಲ್ಲಿ ಶಾಂತತೆ ನೆಲಸಿದಂತಾಗಿದೆ.

ರಾಜಕೀಯ ಬಿಕ್ಕಟ್ಟು ಬಗೆ ಹರಿಸಬೇಕು

ಕೆನರಾ ಚೇಂಬರ್ ಓಫ್ ಕಾಮರ್ಸಿನ ನಿರ್ಣಯ

ದಿ ಕೆನರಾ ಚೇಂಬರ್ ಓಫ್ ಕಾಮರ್ಸಿನವರು ಇಂದಿನ ಅಂತರ್ ರಾಷ್ಟ್ರೀಯ ಹಾಗೂ ಭಾರತದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ, ಭಾರತದ ಬಿಕ್ಕಟ್ಟಿನಂಥ ಅನರ್ಥವಾಗುವುದೆಂದೂ, ಈಗ ಪ್ರಾತಿನಿಧಿಕ ರಾಷ್ಟ್ರೀಯ ಸರಕಾರದ ನಿರ್ಮಾಣವಾಗುವಂತೆ ಸರಕಾರದವರು ಕೂಡಲೇ ಯತ್ನಿಸಬೇಕೆಂದು ಬಿನ್ನವಿಸಿಕೊಳ್ಳುವ ನಿರ್ಣಯವೊಂದನ್ನು ಮಾಡಿ, ಈ ರೀತಿಯ ಪ್ರಯತ್ನಕ್ಕೆ ತಮ್ಮ ಸಹಾಯ ಸಹಕಾರಗಳನ್ನು ನೀಡುವುದಾಗಿ ವ್ಯಕ್ತಪಡಿಸಿದ್ದಾರೆ.

ಶ್ರೀ ಬಿ. ಜಿ. ಕಾಮತರ ಬಿಡುಗಡೆ

ತಾ. 31—1—1941ರಲ್ಲಿ ಬಾರ್ಕೂರಿನಲ್ಲಿ ಸತ್ಯಾಗ್ರಹಮಾಡಿ ನಾಲ್ಕು ತಿಂಗಳ ಕಠಿನ ಸಜೆಗೆ ಗುರಿಯಾದ ಬಾರ್ಕೂರು ಗೋಪಾಲಕೃಷ್ಣ ಕಾಮತರು ಇದೇ ತಾ. 23-5-41ರಲ್ಲಿ ಕಣ್ಣಾನೂರು ಜೈಲಿನಿಂದ ಬಿಡುಗಡೆ ಹೊಂದಿ ಬಂದಿರುವರು.

ಶ್ರೀ ಪದ್ಮನಾಭ ಆಳ್ವರ ಬಿಡುಗಡೆ

ಪುತ್ತೂರಲ್ಲಿ ಸತ್ಯಾಗ್ರಹ ಮಾಡಿ 8 ತಿಂಗಳ ಸಜೆಗೆ ಗುರಿಯಾದ ಶ್ರೀ ಕುಕ್ಕಾಲು ಪದ್ಮನಾಭ ಆಳ್ವರವರು ಕಣ್ಣಾನೂರು ಜೈಲಿನಿಂದ ತಾ. 23-5-41ರಲ್ಲಿ ಬಿಡುಗಡೆಹೊಂದಿ, ಅಂದೇ ರಾತ್ರಿ ಮಂಗಳೂರಿಗೆ ತಲಪಿರುವರು.

ಇತರ ಸತ್ಯಾಗ್ರಹಿಗಳ ಬಿಡುಗಡೆ

ಶ್ರೀ ಕೆ. ವಾಮನ ಪೈಯವರೂ, ಶ್ರೀ ಕೆ. ಪಾಂಡುರಂಗ ಪೈಯವರು, ಇದೇ ತಿಂಗಳ ತಾ. 28ಕ್ಕೆ ಬಿಡುಗಡೆ ಹೊಂದುವರು, ಶ್ರೀ ಬಾಡೂರು ಜಗನ್ನಾಥ ರೈಗಳವರು ಇದೇ ತಾ. 29ಕ್ಕೆ ಬಿಡುಗಡೆ ಹೊಂದುವರೆಂದೂ ಶ್ರೀ ಎಸ್. ಶೇಷಗಿರಿರಾಯರು ತಾ. 7-6-41ರಲ್ಲಿ ಬಿಡುಗಡೆ ಹೊಂದುವರೆಂದೂ ಶ್ರೀ ಬೋಳ ನಾರಾಯಣರಾಯರು ತಾ. 25—6—41ರಲ್ಲಿ ಬಿಡುಗಡೆ ಹೊಂದುವರೆಂದೂ ತಿಳಿದಿದೆ. ಇವರೆಲ್ಲ ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲಿರುವರು.

ಭಟ್ಕಳದಲ್ಲಿ ದ. ಕ. ಸತ್ಯಾಗ್ರಹಿಗಳ ಬಂಧನ

ನಮ್ಮ ಜಿಲ್ಲೆಯ ಸತ್ಯಾಗ್ರಹಿಗಳಲ್ಲಿ ಶ್ರೀಗಳಾದ ಕೆ. ವಾಮನ ಶರ್ಮಾ (ಕಾರ್ಕಳ), ಪಿ. ಎಸ್. ಕೃಷ್ಣ ಭಟ್ಟ (ಪಾಣಾಜೆ), ಮಹಾಬಲಶೆಟ್ಟಿ (ಕೊಕ್ಕೈಲ್), ಶಂಭುಶೆಟ್ಟಿ (ಮೂಲ್ಕಿ), ಸುಬ್ಬಣ್ಣ ಗುಪ್ತ (ಕುಂದಾಪುರ), ರಾಮಣ್ಣ ಶೆಟ್ಟಿ (ಕಂದಾವರ), ಕೆ. ವರದರಾಯ ಪ್ರಭು ಮತ್ತು ಬಿ. ವೆಂಕಟೇಶ ಭಟ್ ಇವರನ್ನು ಭಟ್ಕಳದಲ್ಲಿ ಬಂಧಿಸಿ ವಿಚಾರಣೆಯ ಕೊನೆಗೊಂಡಲ್ಲಿ ತಾ. 22 ಮತ್ತು 24ರನ್ನು ಜರಗಿ ಪ್ರತಿಯೊಬ್ಬರಿಗೆ ಆರಾರು ತಿಂಗಳ ಕಠಿಣ ಸಜೆ ವಿಧಿಸಲಾಯಿತೆಂದು ಹಿಂಡಲ್ಗಿ ಜೈಲಿಗೆ ಕಳುಹಿಸಲಾಗಿದೆಯೆಂದೂ ತಿಳಿದುಬರುತ್ತದೆ.

(ಭಟ್ಕಳದಲ್ಲಿ ಬಂಧಿತರಾದ ಸತ್ಯಾಗ್ರಹಿ ಶ್ರೀ ವಾಮನ ಶರ್ಮರು)

ಶ್ರೀ ಈಶ್ವರ ಎಂ. ಎಲ್. ಎ. ಇವರಿಗೆ ಸತ್ಕಾರಕೂಟ

ಸತ್ಯಾಗ್ರಹ ಮಾಡಿ ಸೆರೆಮನೆಯಿಂದ ಬಿಡುಗಡೆ ಹೊಂದಿದ ಶ್ರೀ ಕೆ. ಈಶ್ವರ ಎಂ. ಎಲ್. ಎ. ಇವರಿಗೆ 'ಹರಿಜನ ಲೇಬರ್ ಲೀಗಿ'ನವರು ತಾ. ೨೫ರಂದು ಸಂಜೆ, ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಿದರು. ಹರಿಜನ ಲೇಬರ್ ಲೀಗಿನ ಪರವಾಗಿ ಶ್ರೀ ಈಶ್ವರನವರು ಮಾಡಿದ ಕೆಲಸ, ಅವರ ದೇಶ ಸೇವಾಕಾಂಕ್ಷೆಗಳನ್ನು ಕೊಂಡಾಡಿ ಲೀಗಿನ ಸದಸ್ಯರು ಮತ್ತು ಇತರ ಮಹನೀಯರು ಮಾತನಾಡಿದ ಬಳಿಕ ಈಶ್ವರನವರು ಸಮುತ್ತರವಿತ್ತರು.

ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸನಾಯ್ಕರಿಗೆ ಶಿಕ್ಷೆ

ದ. ಕ. ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರು

(೧೦ನೆಯ ಪುಟವನ್ನು ನೋಡಿ)

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.

		ರಿಂದ	ವರೆಗೆ
1. (a)	ಬೆಳ್ತಿ ಅವ್ವಲ್ ತರದ ಗುಡ್ಡು ಮುಡಿಗೆ	—	—
(b)	,, ದುಯ್ಯಂ ,, ,, ,,	—	—
2. (a)	ಅಕ್ಕಿ ಅವ್ವಲ್ ತರದ ಗುಡ್ಡು ಮುಡಿಗೆ	5—12—0	—
(b)	,, ದುಯ್ಯಂ ,, ,, ,,	5— 8—0	
3. (a)	,, ಅವ್ವಲ್ ,, ಸುಗ್ಗಿ ,,	5—10—0	—
(b)	,, ದುಯ್ಯಂ ,, ,, ,,	5— 4—0	5— 6—0
4. (a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	35— 0—0	40— 0—0
(b)	,, ಸಿಪ್ಪೆಯಿದ್ದದ್ದು ,,	37— 8—0	42— 8—0
5. (a)	ಕೊಬ್ಬರಿ ಆಫೀಸು ಖಂಡಿಗೆ	51— 0—0	—
(b)	,, ದೇಶಿ ,,	—	—
(c)	,, ದಿಲ್‌ಪಸಂದ್ ,,	—	—
6.	ತೆಂಗಿನ ಎಣ್ಣೆ ಮಣಕ್ಕೆ	3—10—0	—
7. (a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3— 4—0	3—12—0
(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	100— 0—0	110— 0—0
	(ಹೊಸ್ತು)	90— 0—0	100— 0—0
8.	ಗೇರುಬೀಜ ಮುಡಿಗೆ	4— 0—0	4—10—0
9.	ಕಬ್ಬಿನ ಬೆಲ್ಲ ಖಂಡಿಗೆ	25— 0—0	30— 0—0
10.	ಒಳ್ಳೆ ಮೆಣಸು ಹಂಡ್ರೆಡ್‌ವೇಟಿಗೆ	13— 0—0	13— 8—0
11. (a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5— 8—0	7— 8—0
(b)	ಹುಡಿಯ ,, ,,	7— 0—0	9— 0—0
12. (a)	ಮೈಸೂರು ಏಲಕ್ಕಿ ಮಣಕ್ಕೆ	— 0—0	— 0—0
(b)	ಕೊಡಗಿನ ,, ,,	60— 0—0	62— 8—0
13. (a)	ಕುಮಟೆಯ ಮೆಣಸು ಖಂಡಿಗೆ	67— 8—0	77— 8—0
(b)	ಕಾಸರಗೋಡು ,, ಮಣಕ್ಕೆ	3— 0—0	—
(c)	ಊರಿನ ,, ,,	[illegible]— 2—0	—

ಜಗತ್ತಿನಲ್ಲಿ ಹೆಸರಾಂತ ಚರ್ಮರೋಗ ನಿವಾರಿಣಿ ಜ್ಯಾಂಬಕು ಒಂದೇ ಒಂದು!

ನೀವು ಇಕ್ಸೆಮಾ, ವ್ರಣ, ವಿಷದ ಕ್ರಿಮಿಕ ಅಥವಾ ಕಾಲಿನ ಬಾಧೆಯಿಂದ ನರಳುತ್ತಿರುವಿರಾದರೆ ಜ್ಯಾಂಬಕನ್ನು ಖಂಡಿತವಾಗಿಯೂ ಉಪಯೋಗಿಸಿರಿ. ಅದರಲ್ಲಿರುವ ಶುದ್ಧಮಾಡಲ್ಪಟ್ಟ ಗಿಡಮೂಲಿಕೆಗಳ ಎಣ್ಣೆಯು ಚರ್ಮದೊಳಗೆ ಎಳೆಯಲ್ಪಟ್ಟು ನೋವನ್ನೂ, ಬಾತುವಿಕೆಯನ್ನೂ ಕಡಿಮೆಮಾಡಿ, ವ್ರಣ, ಗಾಯಗಳಿಂದ ಬರುತ್ತಿರುವ ರಸಿಗೆಯನ್ನು ಒಣಗಿಸುತ್ತದೆ. ಗಾಯ, ಪರೆಚುವಿಕೆ, ಸುಟ್ಟಗಾಯಗಳು ಮುಂತಾದವುಗಳಿಗೂ ಉತ್ತಮ. ಜ್ಯಾಂಬಕವು ವಿಷಕ್ರಿಮಿಗಳನ್ನು ನಾಶಮಾಡಿ, ಒಂದೂ ಗಾಯವು ಉಳಿಯದಂತೆ ಗುಣಪಡಿಸುತ್ತದೆ. ಬೆಲೆ ರೂಪಾಯಿಗೆ ಮತ್ತು ೨-೪-೦. ಎಲ್ಲಾ ವ್ಯಾಪಾರಗಳಲ್ಲಿ ಮಾರಲ್ಪಡುತ್ತದೆ.

ಏಜಂಟ್ಸ್:—ಮೆಸರ್ಸ್ ದಾಥಾ ಮತ್ತು ಕಂಪೆನಿ, ಓ. ಟಿ. ಮದ್ರಾಸು.

ಯಾವಾಗಲೂ ಜ್ಯಾಂಬಕ್ ಮುಲಾಮನ್ನೇ ಉಪಯೋಗಿಸಿರಿ.

ZAM-BUK

ಹುಡ್ ಮತ್ತು ಬಿಸ್ಮಾರ್ಕ್ ಹಡಗುಗಳು ಮುಳುಗಿದುವು

ಕ್ರೀಟಿನಲ್ಲಿ ಘನಘೋರ ಕಾಳಗ. ನಡೆಯುತ್ತಿದೆ. ಜರ್ಮನರು ಬಹಳ ಉನ್ಮತ್ತ ಸಾಹಸದಿಂದ ಕಾದಾಡುತ್ತಾರೆ. ಇಲ್ಲಿನ ಜಯಾಪಜಯಗಳು ಯೂರೋಪಿನ ಭವಿಷ್ಯದಲ್ಲಿ ಮಹತ್ವವಾಗಲಿದೆ. ಬ್ರಿಟಿಷರ 'ಹುಡ್' ಹಡಗವೂ, ಜರ್ಮನರ 'ಬಿಸ್ಮಾರ್ಕ್' ಹಡಗವೂ ಮುಳುಗಿದವು. ಇದರಿಂದ ಇಕ್ಕಡೆಗೂ ಅಪಾರ ನಷ್ಟವೊದಗಿದೆ. ಇರಾಕಿನ ರಶೀದ್ ಅಲಿಯು ಪಲಾಯನ ಮಾಡಿರುವನೆಂದು ಹೇಳಲಾಗಿದೆ. ಗ್ರೀಸಿನ ಅರಸನೂ ಓಡಿ ಹೋಗಿರುವನಂತೆ. ಎಲ್ಲೆಲ್ಲಿಯೂ ಯುರೋಪಿನಲ್ಲಿ ಶಾಂತಿ ವಿಶ್ರಾಂತಿಗಳಿಲ್ಲ.

ಡೆನ್ಮಾರ್ಕಿನಲ್ಲಿ ಬಳಿ ನೌಕಾಯುದ್ಧ

'ಹುಡ್'ನ್ನು ಮುಳುಗಿಸಿದ 'ಬಿಸ್ಮಾರ್ಕ್' ಮುಳುಗಿತು

ಬ್ರಿಟಿಷರ 'ಹುಡ್' ಎಂಬ ಹಡಗವನ್ನು ಮುಳುಗಿಸಿದ 'ಬಿಸ್ಮಾರ್ಕ್' ಎಂಬ ಜರ್ಮನ್ ಹಡಗವನ್ನು ಡೆನ್ಮಾರ್ಕ್ ಕರಾವಳಿಯ ಹತ್ತಿರ ಬ್ರಿಟಿಷ್ ನೌಕಾ ಪಡೆಯವರು ಬೆನ್ನಟ್ಟಿ ಮುಳುಗಿಸಿದರು.

ಬ್ರಿಟಿಷ್ ಸರಕಾರಕ್ಕೆ ಡಿವೆಲರ ವಿರೋಧ

ಒತ್ತಾಯ ಮಾಡಿದರೆ ಅನರ್ಥವಾದೀತು

ಉತ್ತರ ಅಯರ್ಲೆಂಡಿನಲ್ಲಿ ಒತ್ತಾಯದಿಂದ ಸೈನಿಕರನ್ನು ಸಂಗ್ರಹಿಸಬೇಕೆಂದು ಬ್ರಿಟಿಷ್ ಸರಕಾರದವರು ನಿರ್ಧರಿಸಿರುವರೆಂಬ ಸುದ್ದಿಯಿಂದ ಅಯರ್ಲೆಂಡಿನಲ್ಲಿ ಕೋಲಾಹಲವುಂಟಾಗಿದೆ. ಅಯರ್ಲೆಂಡಿನ ಮುಖ್ಯ ಮಂತ್ರಿ ಡಿವೆಲರರು ಅಯರಿಶ್ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಬ್ರಿಟಿಷ್ ಸರಕಾರದ ವಿಚಾರವನ್ನು ವಿರೋಧಿಸಿ, ಒಂದು ರಾಷ್ಟ್ರದ ಅಧೀನವಿರಲು ಮನಸ್ಸಿಲ್ಲದವರನ್ನು ಆ ರಾಷ್ಟ್ರದ ಸಲುವಾಗಿ ಯುದ್ಧ ಮಾಡಿರೆಂದು ಒತ್ತಾಯಪಡಿಸುವುದು ಸರಿಯಲ್ಲವೆಂದೂ, ಹಾಗೆ ಮಾಡುವುದರಿಂದ ಮನುಷ್ಯತ ಮೂಲಭೂತ ಹಕ್ಕನ್ನು ಕಸಿದುಕೊಂಡಂತಾಗುವುದೆಂದೂ, ಇದಕ್ಕಿಂತ ಘೋರ ಧಾಳಿ ಬೇರಿಲ್ಲವೆಂದೂ, ಒತ್ತಾಯದಿಂದ ಹಾಗೆ ಮಾಡಿದರೆ ಅನರ್ಥವಾದೀತೆಂದೂ ಎಚ್ಚರಿಸಿದರು.

ಗ್ರೀಕ್ ಅರಸರ ಪಲಾಯನ

ಕ್ರೀಟಿನಲ್ಲಿ ಉಗ್ರ ಕದನ

ಗ್ರೀಕ್ ಅರಸರು ಮತ್ತು ಗ್ರೀಕ್ ಸರಕಾರದವರು ಕ್ರೀಟದಿಂದ ಈಜಿಪ್ತಕ್ಕೆ ಬಂದಿರುವರು.

ಕ್ರೀಟಿನಲ್ಲಿ ದಿನದಿಂದ ದಿನಕ್ಕೆ ಮಹೋಗ್ರ ಕದನವಾಗುತ್ತಿದೆ. ಜರ್ಮನ್ ಸೈನಿಕರು ಮತ್ತು ಬಂದಿಳಿಯುತ್ತಿ

ಒತ್ತಾಯದಿಂದ ಸೈನ್ಯಸಂಗ್ರಹ ಕೂಡದು

ಬ್ರಿಟಿಷ್ ಸರಕಾರಕ್ಕೆ ಡಿವೆಲರ ಎಚ್ಚರಿಕೆ

ಕ್ರೀಟಿನಲ್ಲಿ ಘನಘೋರ ಕಾಳಗ

ರಶೀದ್ ಅಲ್ಲಿಯ ಪಲಾಯನ

ರಶೀದ್ ಅಲ್ಲಿಯ ಸರಕಾರದ ಸದಸ್ಯರು ಟರ್ಕಿ ಮೊದಲಾದ ಕಡೆಗಳಿಗೆ ಓಡಿಹೋಗುತ್ತಿರುವರೆಂದು ಸುದ್ದಿ. ರಶೀದ್ ಅಲಿಯ ಸೇನೆಯಲ್ಲಿಯೇ ಕ್ರಾಂತಿಯೆದ್ದಿರುವುದರಿಂದ ರಶೀದ ಅಲ್ಲಿಯೂ ಓಡಿ ಹೋಗಿರುವನಂತೆ.

ಸೈಪ್ರಸ್ ಮೇಲೆ ಧಾಳಿಯೆ?

ಸೈಪ್ರಸ್ ದ್ವೀಪವನ್ನು ಹಿಡಿಯಲು ಜರ್ಮನರು ಸದ್ಯದಲ್ಲಿಯೇ ಪ್ರಯತ್ನ ಮಾಡುತ್ತಿರುವರೆಂದು ತಿಳಿದುಬಂದಿದೆ.

ಇರಾನಿನ ಬಳಿ ರಶ್ಯನ್ ಸೇನೆ

ಇರಾನಿನ ಸರಹದ್ದಿನಲ್ಲಿ ರಶ್ಯನ್ ಸೇನೆಯ ಕೇಂದ್ರೀಕರಣೆಯು ನಡೆಯುತ್ತಿದೆಯೆಂದು ಸುದ್ದಿ.

ಹೆಮಲ್ಸಿನರು ಹೆಸ್ಸನನ್ನು ಗುರುತಿಸಲಿಲ್ಲ

ಅವರೊಳಗೆ ಪತ್ರ ವ್ಯವಹಾರ ನಡೆದಿಲ್ಲ

ಹೆಸ್ಸ್ ಮತ್ತು ಹೆಮಲ್ಸಿನರೊಳಗೆ ಪತ್ರವ್ಯವಹಾರ ನಡೆದ ಸುದ್ದಿ ಸುಳ್ಳೆಂದೂ, ಹೆಮಲ್ಸಿನಿಗೆ ಹೆಸ್ಸನ ಪರಿಚಯವು ಆಗ ಇಲ್ಲವೆಂದೂ ಕಾಮನ್ಸ್ ಸಭೆಯಲ್ಲಿ ಹೇಳಲಾಗಿದೆ.

ಕ್ರಿಟಿನಲ್ಲಿ ಕದನ

ಕ್ರೀಟಿನಲ್ಲಿ ಜರ್ಮನರು ಪ್ರಚಂಡ ಧಾಳಿ ಮಾಡುತ್ತಾರೆ. ಮಲೇಮಿ ಜರ್ಮ
ನರ ವಶವಾಗಿದೆ. ೧೫೦೦ ಜನ ಜರ್ಮನ್
ಸೈನಿಕರು ಅಲ್ಲಿಗೆ ಬಂದಿಳಿದರು. ಅವ
ಅನೇಕ ಸ್ಥಳಗಳನ್ನು ಹಿಡಿದರು. ಕ್ರೀಟ
ಮತ್ತು ಜರ್ಮನ್ ಸೈನಿಕರು ಬರುತ್ತಿ
ವರೆಂದು ತಿಳಿದಿದೆ.

ಲಕ್ಷ ಫ್ರೆಂಚ್ ಕೈದಿಗಳನ್ನು ಬಿಟ್ಟರು

ಜರ್ಮನಿಯ ರಿಯಾಯಿತಿ

ಒಂದು ಲಕ್ಷಕ್ಕೆ ಮಿಕ್ಕಿದ ಫ್ರೆಂಚ ಯುದ್ಧ ಕೈದಿಗಳನ್ನು ಜರ್ಮನರು ಬಿಡುಗಡೆಮಾಡುವ ರಿಯಾಯಿತಿ ತೋರಿಸಿ ರೆಂದು ತಿಳಿಯುತ್ತದೆ.

ಝುಂಝುಂ ಹಡಗ ಮುಳುಗಿತ

ಜರ್ಮನಿಯು ಇಜಿಪ್ತಿನ ಝುಂಝುಂ ಎಂಬ ಹಡಗವನ್ನು ಮುಳುಗಿಸಿತು.

ರುಬಿ ಜನರಲ್ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್.

ಡೈರೆಕ್ಟರರು:

ಬಿ. ಎಮ್. ಬಿರ್ಲಾ, ಎಸ್ಕ್ವೈಯರ್
ಚೆಯರ್‌ಮೇನ್, ಕಲ್ಕತ್ತಾ ಬೋರ್ಡ್ ಓಫ್ ರಿಸರ್ವ್ ಬೇಂಕ್ ಮೆಂಬರ್, ಸೆಂಟ್ರಲ್ ಬೋರ್ಡ್, ರಿಸರ್ವ್ ಬೇಂಕ್.

ಡಾ। ನರೇಂದ್ರನಾಥ ಲೊ,
ಎಮ್. ಎ. ಬಿ. ಎಲ್., ಬಿ. ಆರ್. ಎಸ್, ಪಿ.ಎಚ್. ಡಿ., ಮೆಂಬರ್, ಕಲ್ಕತ್ತಾ ಬೋರ್ಡ್ ರಿಸರ್ವ್ ಬೇಂಕ್.

ಗುರುಪ್ರತಾಪ ಪೊದಾರ್,
ಎಸ್ಕ್ವೈಯರ್ ಮರ್ಚೆಂಟ್.

ಎಮ್. ಆರ್. ಸೊಂತಾಲಿಯಾ,
ಎಸ್ಕ್ವೈಯರ್, ಮೆಂಬರ್, ಲೋಕಲ್ ಎಡ್ವಾಯಸರಿ ಬೋರ್ಡ್, ಸೆಂಟ್ರಲ್ ಬೇಂಕ್ ಓಫ್ ಇಂಡಿಯಾ ಲಿಮಿಟೆಡ್.

ರಾಮೇಶ್ವರ ದಾಸ್ ಮಾಧವ,
ಎಸ್ಕ್ವೈಯರ್, (ಪೊಲಿಸಿದಾರರ ಡೈರೆಕ್ಟರರು).

ಘನಶ್ಯಾಮ ದಾಸ್ ಲೊಯಲ್ಕ,
ಎಸ್ಕ್ವೈಯರ್, (ಪೊಲಿಸಿದಾರರ ಡೈರೆಕ್ಟರರು).

ಮೂಲಧನ

ಅಧಿಕರಿಸಲ್ಪಟ್ಟದ್ದು:
ರೂ. 1,00,00,000

ವಂತಿಗೆಯಾದದ್ದು:
ರೂ. 45,00,000

ತೆತ್ತದ್ದು:
ರೂ. 14,40,000

ಜುಮ್ಲಾ ಫಂಡು:
ರೂ. 18,43,000

ಹೆಡ್ ಆಫೀಸು:
8 ರೊಯಲ್ ಎಕ್ಸ್‌ಚೇಂಜ್ ಪ್ಲೇಸ್,
ಕಲ್ಕತ್ತಾ.

ರೂ. 30 ಲಕ್ಷದ ವಹಿವಾಟು ನಾವು ಜೀವವಿಮೆಯನ್ನು ಪ್ರಾರಂಭಿಸಿದ ಮೊದಲನೇಯ ವರ್ಷದಲ್ಲಿ ನಡೆದಿದೆ.

★

ಈ 3 ಅವಲೋಕಗಳು
ನಿಮಗೆ
ನಂಬಿಕೆಯನ್ನೀಯುವುವು

ಲೈಫ್, ಬೆಂಕಿ, ಮೋಟಾರು, ಮೆರಿನ್ ಮತ್ತು ಡಬ್ಲ್ಯು. ಸಿ. ಇನ್ಶುರೆನ್ಸುಗಳು

ಮದ್ರಾಸು ಬ್ರಾಂಚ್:
12 ತಂಬು ಚೆಟ್ಟಿ ಸ್ಟ್ರೀಟ್
ಮೆನೇಜರ್: ಇ. ನಟೇಶನ್

ಪೋಸ್ಟ್ ಬೋಕ್ಸ್ 195 ಫೋನ್ 3581

ಸಬ್ ಆಫೀಸು.
ಮೆನೇಜರ್: ಟಿ. ವಿ. ರಾಘವನ್,
ಟವರ್ ಬಿಲ್ಡಿಂಗ್ ವರೈಟಿ ಹೋಲ್ ರೋಡ್
ಕೊಯಂಬತ್ತೂರು.

ಚೀಫ್ ಏಜಂಟ್:
ಮಿ. ಎನ್. ಕೆ. ಬಂಗೇರಾ,
ಹೊಯ್ಗೆ ಬಜಾರ್
ಮಂಗಳೂರು.

ಸಪ್ರುಗಳು ತಿರಿಗಿ ವೈಸರಾಯರನ್ನು ಸಂದರ್ಶಿಸುವರೆ?

ಸಂಧಾನ ಪ್ರಯತ್ನಕ್ಕಾಗಿ

ಬ್ರಿಟಿಷ್ ರಾಜಕಾರಣಿಗಳು ಭಾರತಕ್ಕೆ ಬರುವರು

ಸತ್ಯಾಗ್ರಹಿಗಳನ್ನು ಆರಿಸುವ ಹೊಸ ಕ್ರಮ

ಭಾರತದ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಸತ್ಯಾಗ್ರಹ ಆಂದೋಲನವು ಬಿಡದೆ ನಡೆಯುತ್ತಿದೆ. ಸರಕಾರದವರು ಸತ್ಯಾಗ್ರಹೀ ಕೈದಿಗಳ ವಿಷಯ ಆಗಾಗ ನೀತಿ ಬದಲಾವಣೆ ಮಾಡುತ್ತಾರೆ. ಕೆಲವರನ್ನು ಬಿಡುತ್ತಾರೆ. ಸಪ್ರು ಮಂಡಳಿಯವರು ತಿರಿಗಿ ಒಮ್ಮೆ ಪ್ರಯತ್ನ ಮಾಡುವರೆಂದು ಸುದ್ದಿ. ಹಕ್ಕರ ಪ್ರಯತ್ನವೂ ನಡೆದೇ ಇದೆ. ಬ್ರಿಟಿಷ್ ಸರಕಾರವು ಯಾವದೇ ಇಂಗಿತವನ್ನೂ ತೋರ್ಪಡಿಸಲಿಲ್ಲ. ಬೊಂಬಯಿಯಲ್ಲಿ ಈ ವಾರ ತಿರಿಗಿ ದಂಗೆ ಎದ್ದಿದೆ. ಸಿಂಹಳ ದ್ವೀಪದಲ್ಲಿ ನೆರೆಯಿಂದ ಹೆಚ್ಚು ಹಾವಳಿಯಾಯಿತು.

ಸಪ್ರು ವೈಸರಾಯ್ ಭೇಟಿ

ಸಪ್ರುರವರು ತಿರಿಗಿ ಒಮ್ಮೆ ಸಂಧಾನ ಪ್ರಯತ್ನ ಮಾಡುವರೆಂದೂ ಆ ಬಗ್ಗೆ ವೈಸರಾಯರನ್ನು ಭೇಟಿಯಾಗುವರೆಂದೂ ಅಲ್ಲಾದ ಸುದ್ದಿ.

ಸಿಲೋನಿನಲ್ಲಿ ನೆರೆ

ಸಿಲೋನಿನಲ್ಲಿ ನೆರೆ ಬಂದು ಮಹಾನಷ್ಟವಾಗಿದೆ. ೧೬ ಜನರು ಮರಣಹೊಂದಿ ೫೦೦೦ ಜನರು ನಿರಾಶ್ರಿತರಾಗಿದ್ದಾರೆ.

ಸತ್ಯಾಗ್ರಹಿಗಳನ್ನು ಆರಿಸುವ ಕ್ರಮ

ಮಹಾತ್ಮರ ಹೊಸ ನಿಯಮಗಳು ಪ್ರತಿಯೊಬ್ಬ ಸತ್ಯಾಗ್ರಹಿಯೂ ಇಡೀ ದಿವಸ ರಾಷ್ಟ್ರಕಾರ್ಯ ಮಾಡತಕ್ಕದ್ದು. ಅವನು ತನ್ನ ನಿತ್ಯ ನೈಮಿತ್ತಿಕ ಕಾರ್ಯಗಳನ್ನು ಒಂದು ದಿನಚರಿಯಲ್ಲಿ ಬರೆದಿಡಬೇಕು. ಆ ದಿನಚರಿಯನ್ನು ಪ್ರತಿ ಹದಿನೈದು ದಿನಗಳಿಗೊಮ್ಮೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕಳುಹಿಸಿಕೊಡತಕ್ಕದ್ದು. ಬಳಿಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಆ ದಿನಚರಿಯನ್ನು ಮಹಾತ್ಮಾಜಿಯವರೆಡೆಗೆ ಕಳುಹಿಸುವರು. ಮಹಾತ್ಮರು ಆ ದಿನಚರಿಯನ್ನು ನೋಡಿ ಸತ್ಯಾಗ್ರಹಕ್ಕೆ ಅನುಮತಿ ಕೊಡುವರು. ಹೀಗೆ ಮಹಾತ್ಮರು ಇನ್ನು ಮುಂದೆ ಸತ್ಯಾಗ್ರಹಿಗಳನ್ನಾರಿಸುವಲ್ಲಿ ಹೊಸ ಪದ್ಧತಿ ಮಾಡಿರುವರೆಂದು ತಿಳಿದಿದೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಚೀನಕ್ಕೆ ಹೋಗುವರು

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಚೀನಕ್ಕೆ ಹೋಗಬಹುದೆಂದು ಸಂಯುಕ್ತ ಪ್ರಾಂತ ಸರಕಾರದವರು ಅವರಿಗೆ ಸಮ್ಮತಿ ಕೊಟ್ಟಿದ್ದಾರೆ. ಪ್ರಾಯಶಃ ಇನ್ನೊಂದು ತಿಂಗಳೊಳಗೆ ಅವರು ಹೊರಡಬಹುದೆಂದು ತಿಳಿದಿದೆ.

ಮುಂಬಯಿಯಲ್ಲಿ ಗಲಭೆ ಯೆದ್ದಿತು

ಅನೇಕ ಮಂದಿ ಸತ್ತರು ಹಲವರಿಗೆ ಗಾಯ

ಕಳೆದ ವಾರ ಮುಂಬಯಿ ನಗರದಲ್ಲಿ ತಿರಿಗಿ ದೊಂಬಿ ಸುರುವಾಗಿದೆ. ಪೋಲೀಸಿನವರು ವಿಶೇಷ ಎಚ್ಚರಿಕೆ ತೆಗೆದುಕೊಂಡಿರುವರು. ಪೋಲೀಸಿನವರಿಗೂ ಗಾಯವಾಗಿದೆ. ಸುಮಾರು ೭೦೦ಕ್ಕೆ ಮಿಕ್ಕಿ ಜನರನ್ನು ಬಂಧಿಸಿರುವರು.

ಹಿಂಡಲ್ಗಿ ಜೈಲಿನಿಂದ ೧೦೦ ಸತ್ಯಾಗ್ರಹಿಗಳನ್ನು ಬಿಡುಗಡೆ

ಹಿಂಡಲ್ಗಿ ಜೈಲಿನಿಂದ ಮತ್ತೆ ನೂರು ಸತ್ಯಾಗ್ರಹಿ ಕೈದಿಗಳನ್ನು ಬಿಡುಗಡೆ ಮಾಡಿದ್ದಾರೆ. ಬಿಡುಗಡೆ ಹೊಂದಿದವರಲ್ಲಿ ಶ್ರೀ. ಶೀನಶೆಟ್ಟಿ ಮೊದಲಾದ ಹನ್ನೊಂದು ಮಂದಿ ದಕ್ಷಿಣ ಕನ್ನಡದವರಿದ್ದರೆಂದೂ ತಿಳಿದಿದೆ.

> ### ಸುಭಾಷರು ಯುರೋಪಿನಲ್ಲಿರುವರೆ?
>
> #### ಕರಪತ್ರವು ಜಪ್ತಿಯಾಗಿದೆ
>
> ಬಾಬು ಸುಭಾಷಚಂದ್ರ ಬೋಸರ ಹೆಸರಲ್ಲಿ ಪ್ರಸಿದ್ಧವಾದ ಒಂದು ಕರಪತ್ರದಲ್ಲಿ ಆಕ್ಷೇಪಕರವಾದ ಸುದ್ದಿಗಳಿರುವುದೆಂದು ಬೀಹಾರ್ ಸರಕಾರವು ಅದನ್ನು ಜಪ್ತಿಮಾಡಿದೆ. ಆ ಕರಪತ್ರವನ್ನು ಸುಭಾಷರು ಯುರೋಪಿನಲ್ಲಿ ಎಲ್ಲಿಯೋ ಒಂದು ಕಡೆ ಪ್ರಸಿದ್ಧಿಸಿರುವರೆಂದು ಅದರಲ್ಲಿ ಹೇಳಲಾಗಿದೆಯಂತೆ.

ಭಾರತದ ಬಿಕ್ಕಟ್ಟನ್ನು ಬಿಡಿಸಲು ಬ್ರಿಟಿಷ ತಜ್ಞನು ಯತ್ನಿಸುವನೆ?

ಬ್ರಿಟಿಷ್ ಸರಕಾರದ ವಿದೇಶಾಂಗದ ಮುಖ್ಯ ಸಲಹೆಗಾರ ಸರ್ ರಾಬರ್ಟ್ ವ್ಯಾನ್ಸಿಟಾರ್ಟರು ಒಂದು ಮಹತ್ವದ ರಾಜಕಾರಣದ ಸಲುವಾಗಿ ಭಾರತಕ್ಕೆ ಬರಲಿರುವರೆಂದು ತಿಳಿಯುತ್ತದೆ.

ಯುದ್ಧ ಕೈದಿಗಳು ಭಾರತಕ್ಕೆ ಪುನಃ ೧೯೦೦ ಮಂದಿ

ಯುರೋಪಿನ ಯುದ್ಧದಲ್ಲಿ ಸೆರೆಹಿಡಿದ ೧೯೦೦ ಮಂದಿ ಇಟಲಿ ಸೈನಿಕರ ತಂಡವೊಂದನ್ನು ಬೊಂಬಯಿಯಲ್ಲಿ ತಂದಿಳಿಸಿರುವರು.

ಹಿಂದುಗಳೂ-ಮುಸ್ಲಿಮರೂ ಕೂಡಿ ಮಾತೃಭೂಮಿಯನ್ನು ರಕ್ಷಿಸಬೇಕು

ನಾನು ಲೀಗಿಗೆ ವಿರೋಧಿಯಲ್ಲ ಹಕ್ಕರ ಹೇಳಿಕೆ

ಮುಸ್ಲಿಂ ಲೀಗಿಗೆ ತಾನು ವಿರೋಧಿಯಾಗಿಲ್ಲವೆಂದೂ, ಲೀಗಿನ ಸದಸ್ಯನಿರುವೆನೆಂದೂ, ಆದರೆ ಶತ್ರುವು ಹತ್ತಿರ ಬರುತ್ತಿರುವುದರಿಂದ ಭಾರತದ ರಕ್ಷಣೆಯ ವಿಚಾರದಲ್ಲಿ ಪ್ರಯತ್ನ ಮಾಡುತ್ತೇನೆಂದೂ ಹಿಂದುಗಳೂ ಮುಸ್ಲಿಮರೂ ಕೂಡಿ ಮಾತೃಭೂಮಿಯನ್ನು ರಕ್ಷಿಸಬೇಕೆಂದೂ ಹಕ್ಕರು ಒಂದು ಹೇಳಿಕೆ ಕೊಟ್ಟಿರುವರು.

ಮದ್ರಾಸು ಮೇಯರರ ನಿಧನ

ಮದ್ರಾಸಿನ ಮೆಯರರಾದ ಶ್ರೀ. ಬಸುದೇವನವರು ತಾ. ೨೧ರಂದು ಸ್ವರ್ಗಸ್ಥರಾದರು.

ಕರ್ಷಕ ಸಂಘಗಳ ಪ್ರತಿಬಂಧ

ದ. ಕ. ಜಿಲ್ಲೆ ಮತ್ತು ಮಲಬಾರಿನ ಕರ್ಷಕ ಸಂಘಗಳು ನ್ಯಾಯಬಾಹಿರವಾದವುಗಳೆಂದು ಸರಕಾರವು ಪ್ರಕಟಪಡಿಸಿದೆ.

ಮುಖ್ಯಮಂತ್ರಿಗಳ ಸಮ್ಮೇಳನ

ಭಾರತದ ಬಿಕ್ಕಟ್ಟನ್ನು ಬಗೆಹರಿಸುವರೆ ಮುಖ್ಯಮಂತ್ರಿಗಳ ಸಮ್ಮೇಳನವೊಂದನ್ನು ಸದ್ಯದಲ್ಲಿಯೇ ಕೂಡಿಸುವ ಯೋಚನೆಯಿಂದ ಬಂಗಾಳದ ಪ್ರಧಾನರಾದ ಹಕ್ಕರು ಯತ್ನಿಸುತ್ತಿರುವರು. ಪಂಜಾಬಿನ ಪ್ರಧಾನ ಸಿಕಂದರರೂ ಅದೇ ವಿಚಾರವನ್ನು ಹೇಳುತ್ತಿದ್ದಾರೆ.

ಇರಾಕಿಗೆ ಮುಸ್ಲಿಂ ಯಾತ್ರಿಕರು ಹೋಗಕೂಡದು

ಇರಾಕಿನ ಪರಿಸ್ಥಿತಿ ಕಳವಳವಾಗಿರುವುದರಿಂದ ಅಲ್ಲಿರುವ ಮುಸ್ಲಿಂ ಪುಣ್ಯ ಕ್ಷೇತ್ರಗಳಿಗೆ ಭಾರತದಿಂದ ಮುಸ್ಲಿಮರು ಈಗ ಹೋಗಕೂಡದೆಂದು ಪ್ರಕಟಣೆ.

ದ. ಕ. ಜಿಲ್ಲಾ ಕಾಂಗ್ರೆಸಿಗೆ ಉದಾರ ದಾನ

ಕುಂದಾಪುರ ವಿಠ್ಠಲ್ ರಾವ್ ಇವರ ವಿಧವೆ ಭವಾನಿಬಾಯಿ ಯಾನೆ ದುಗ್ಗಾಬಾಯಿಯವರು ರೂಪಾಯಿ ಐವತ್ತನ್ನು ಕಾಂಗ್ರೆಸ್ ಫಂಡಿಗೆ ಉದಾರ ದಾನ ಮಾಡಿರುವರೆಂಬುದು ಬಹಳ ಸ್ತುತ್ಯವಾದ ಕಾರ್ಯವಾಗಿದೆ.



LOST-REWARD

of Rs. 15 (Rupees fifteen only) offered. A gold chain weighing three soverigns and a pendant (Ruby Pathakam) lost on 23—5—'41. Finder please return it to the undersigned.

K. N. LAKSHMI KUTTY,
C/o *Sevashram,*

ಶಾಲಾ ಪುಸ್ತಕಗಳು

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ ಎ, ಎಲ್ ಟಿ ಇವರಿಂದ ವಿರಚಿತ

*ಪ್ರಾಥಮಿಕ ಲಘುವಿಜ್ಞಾನ

೬, ೭ಮತ್ತು೮ನೆಯ ತರಗತಿಗಳಿಗೆ

ಈ ಪುಸ್ತಕಗಳು ಸುಲಭ ಕನ್ನಡ ಶೈಲಿಯಲ್ಲಿದ್ದು, ಉಪಾಧ್ಯಾಯರಿಗೆ, ಕಲಿಸಲು ಬಹಳ ಅನುಕೂಲವಾಗುವಂತೆಯೂ, ವಿದ್ಯಾರ್ಥಿಗಳಿಗೆ, ತಿಳಕೊಳ್ಳಲು ಅತ್ಯಂತ ಸುಲಭವಾಗುವಂತೆಯೂ, ಹಳ್ಳಿಯ ಶಾಲೆಗಳಲ್ಲಾದರೂ ಮಾಡಿ ತೋರಿಸಬಹುದಾದ ಪ್ರಯೋಗ ವಿಚಾರಗಳನ್ನೊಳಗೊಂಡಿವೆ. ವಿಜ್ಞಾನ ಅಧ್ಯಾಪಕರಾಗಿ ಅನುಭವಶಾಲಿಗಳಾದ ಶ್ರೀಮಾನ್ ಆಚಾರ್ಯರ ಪುಸ್ತಕವೆಂಬುದರಿಂದಲೇ ಪುಸ್ತಕದ ಉತ್ಕೃಷ್ಟತೆಯು ಎಲ್ಲರಿಗೂ ವ್ಯಕ್ತವಾಗುವುದು. ಮೊದಲನೆಯ ಆವೃತ್ತಿಯು ಈಗಾಗಲೇ ಮುಗಿಯುತ್ತಿದೆ ಎರಡನೆಯ ಆವೃತ್ತಿಯು ಹೊರಬೀಳಲಿದೆ

ಬೆಲೆ. ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0

ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಶಿಶುಗೀತೆಗಳು, ಚುಟುಕಗಳು, ಅಭಿನಯ ಗೀತೆಗಳು, ಕಥಾಕವನಗಳು ಮತ್ತು ಅನೇಕ ಇತರ ಸುಂದರ ಪದ್ಯಗಳು ಹೊಸ ಪಾಠಪಟ್ಟಿಗೆ ಅನುಗುಣವಾಗಿ ರಚಿತವಾದ ಹೊಸ ಪುಸ್ತಕ. ಮಕ್ಕಳು ಹಾಡಿ ಹಾಡಿ ಕುಣಿಯುವಂತಹ ಹಲವು ಹಾಡುಗಳು, ಅನೇಕ ಸುಂದರ ಚಿತ್ರಗಳಿಂದ ಕೂಡಿದ್ದು ಪುಸ್ತಕವು ಬಾಹ್ಯಾಂತರಗಳೆರಡರಲ್ಲಿಯೂ ಆಕರ್ಷಣೀಯವೇ ಇದೆ ಶ್ರೀ. ರೈಗಳ ಪದ್ಯಗಳೆಂದರೆ ಕನ್ನಡಿಗರೆಲ್ಲರಿಗೂ ಗೊತ್ತು, ಬಹಳ ಸ್ವಾರಸ್ಯವಾದುವುಗಳೆಂದು, ಮೋದಬೋಧಪ್ರದಗಳೆಂದು

ಪ್ರಾಥಮಿಕ ಲಘು ಗಣಿತ

ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ವರ್ಗದ

ಶ್ರೀ. ಬಿ ಶ್ರೀನಿವಾಸರಾವ್ ಮತ್ತು ಬಿ ದೂಮಪ್ಪನವರಿಂದ ರಚಿತವಾದದು

೪ನೆಯ ತರಗತಿಗೆ ಬೆಲೆ 0 4 0 ೫ನೆಯ ತರಗತಿಗೆ ಬೆಲೆ 0 5 0

ಗಣಿತ ಪುಸ್ತಕಗಳಿಗೆ ಕ್ರಯವು ಬಹಳ ಹೆಚ್ಚಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಅಸಾಧ್ಯವಾಗಿ, ಅವರು ಕಷ್ಟಪಡುತ್ತಿರುವುದು ಎಲ್ಲೆಲ್ಲಿಯೂ ಕಂಡು ಬರುತ್ತಿದೆಯಷ್ಟೆ ಇಂತಹ ವಿದ್ಯಾರ್ಥಿಗಳ ವಿಪತ್ತನ್ನು ಪರಿಹರಿಸುವ ಸಲುವಾಗಿ ಇಬ್ಬರು ನುರಿತ ಅಧ್ಯಾಪಕರಿಂದ ರಚಿತವಾದೀ ಗಣಿತ ಪುಸ್ತಕಗಳು ಹೊಸ ಪಾಠಪಟ್ಟಿಯ ಅಭ್ಯಾಸಗಳನ್ನು ಸಂಪೂರ್ಣ ಒಳಗೊಂಡಿದ್ದು ಸರ್ವ ಜನಾದರಣೀಯವಾಗಿದೆ ಈ ತರದ ಹೊಸ ಸಾಹಸ ಮಾಡಿದ ಬಗ್ಗೆ ಅನೇಕ ಶಾಲಾಧ್ಯಾಪಕರು ಬಹಳ ಮೆಚ್ಚುಗೆಯ ಮಾತುಗಳನ್ನೇ ಹೇಳಿದ್ದಾರೆ ಜಿಲ್ಲೆಯ ವಿದ್ಯಾಕ್ಷೇತ್ರದಲ್ಲಿ ಇದೂ ಒಂದು ಚಿರಸ್ಮರಣೀಯವಾದ ಮತ್ತು ಪ್ರಶಂಸನೀಯವಾದ ಕ್ರಾಂತಿಯೆಂದು ಕೊಂಡಾಡಿದ್ದಾರೆ

ಶ್ರೀ. ಕೆ ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

*ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಶಿಕ್ಷಣ ಕ್ಷೇತ್ರದಲ್ಲಿ ಈ ಮಾದರಿಯ ಪುಸ್ತಕಗಳು ಇವೇ ಮಾತ್ರ ಮೊದಲಾಗಿ ರಚಿತವಾದುವು ವ್ಯಾಕರಣವೆಂದರೆ ಉಪಾಧ್ಯಾಯರಾಗಲಿ, ವಿದ್ಯಾರ್ಥಿಗಳಾಗಲಿ ಬೆಚ್ಚಿ ಬೀಳಬೇಕಾಗಿಲ್ಲ ಸೂತ್ರಗಳನ್ನು ಬಾಯಿಪಾಠ ಕಲಿಸುವ ಕ್ರಮವು ಇಂದಿನದಲ್ಲ. ಪ್ರತ್ಯಕ್ಷ ಬೋಧನಾ ಕ್ರಮದಿಂದ ವಿದ್ಯಾರ್ಥಿಗಳಿಗೆ ಮನೋರಂಜಕವಾಗುವಂತೆ ವ್ಯಾಕರಣ ವಿಷಯವನ್ನಾದರೂ ಸುಲಭವಾಗಿಯೂ, ಗ್ರಾಹ್ಯವಾಗಿಯೂ ಶುದ್ಧವಾಗಿಯೂ ವಿವರಿಸಿ ಈ ಪುಸ್ತಕಗಳಲ್ಲಿ ಬರೆದಿದೆ ಪ್ರಬಂಧ ಬರೆಯಲೂ ಒಂದು ರೀತಿಯುಂಟಲ್ಲವೇ? ಅದು ಯಾವುದು ಎಂಬುದು ಈ ಪುಸ್ತಕಗಳ ಎರಡನೆಯ ಭಾಗದಲ್ಲಿ ಹಲವು ಅಭ್ಯಾಸ ಉದಾಹರಣೆಗಳೊಡನೆ ಕ್ರಮವಾಗಿ ೪ನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಶಾಸ್ತ್ರೀಯವಾಗಿ, ಪಾಠಪಟ್ಟಿಗೆ ಸರಿಯಾಗಿ ತಿಳಿಸಲು ಅನುಕೂಲವಾಗುವಂತೆ ಬರೆಯಲಾಗಿದೆ ಶ್ರೀಮಾನ್ ರೈಗಳ ಈ ನೂತನ ಪುಸ್ತಕಗಳ ಕುರಿತು ಹಲವು ವಿದ್ವಾಂಸರು ಉತ್ತಮ ಅಭಿಪ್ರಾಯಪಟ್ಟಿದ್ದಾರೆ

ಬೆಲೆ: ೪, ೫ನೆಯ ತರಗತಿಗೆ 0—2—0 *೬ನೆಯ 0—2—0
*೭ನೆಯ 0—2—6 *೮ನೆಯ 0—3—0

ಸಿರಿಗನ್ನಡ ಪಾಠಾವಳಿ

(ಮೊದಲನೆಯ ಪುಸ್ತಕ)

ಬಂಟ್ವಾಳ ಎಸ್ ವಿ. ಎಸ್ ಹೈಸ್ಕೂಲ್ ಅಧ್ಯಾಪಕರಾದ

ಶ್ರೀ. ಬಿ ಆರ್. ಕಾಮತ್ ಮತ್ತು ಬಿ. ಜಿ. ಪ್ರಭುಗಳಿಂದ ವಿರಚಿತವಾದುದು

ಚಿಕ್ಕವರಿಗೆ ಏಕಕಾಲದಲ್ಲಿ ಭಾಷಾಜ್ಞಾನದೊಂದಿಗೆ ಓದುಗಾರಿಕೆ ಹಾಗೂ ಬರಹ ಪಾಠವನ್ನು ಕಲಿಸಲು, ಅತ್ಯಂತ ಅನುಕೂಲವಾಗುವಂತೆಯೂ, ಮಗುವು ಶಾಲೆಗೆ ಸೇರಿದ ಎರಡು ತಿಂಗಳುಗಳ ಸಮಯದಲ್ಲಿ ಭಾಷಾಜ್ಞಾನವನ್ನೂ ಅನಂತರ ಕ್ರಮವಾಗಿ ಓದುಗಾರಿಕೆ, ತದುಪಾಯ ಬರಹವನ್ನೂ ಕಲಿಯಬೇಕೆಂಬ ನಿಯಮಗಳಿಗನುಸಾರವಾಗಿ ಈ ಪಾಠಕದ ರಚನೆಯಾಗಿರುತ್ತದೆ.

ಬೆಲೆ 0 2 0

1939ನೇ ಇಸವಿಯಲ್ಲಿ ಸರಕಾರದಿಂದ ಹೊರಡಿಸಲ್ಪಟ್ಟ ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಅನುಗುಣವಾಗಿ ಬರೆಯಲ್ಪಟ್ಟು, ಸರಕಾರದ ಮಂಜೂರಾತಿಯನ್ನು ಪಡೆದ ನಮ್ಮ ಇತರ ಪುಸ್ತಕಗಳು

*ಸಿವಿಕ್ಸ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

*ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ವಿ. ಸೂ ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ನಾ. ೨೨ರಲ್ಲಿ ಶಿರ್ವಾ, ಬಂಟಕಲ್ ಕೇಂದ್ರದಲ್ಲಿ ಯುದ್ಧವಿರುದ್ಧ ಘೋಷಿಸಿ ಸತ್ಯಾಗ್ರಹ ಮಾಡಿದರು. ಇವರನ್ನು ಕೈದು ಮಾಡಿ ಕುಂದಾಪುರ ಸಬ್ ಕಲೆಕ್ಟರರು ೩ ತಿಂಗಳ ಕಠಿಣ ಶಿಕ್ಷೆ ೫೦ ರೂ ದಂಡ ವಿಧಿಸಿರುವರು 'ಎ' ತರಗತಿ ಕೊಡಲಾಗಿದೆ.

ಮಂಗಳೂರಿಗೆ ಎರಡು ಮುನ್ಸೀಫ್ ಕೋರ್ಟುಗಳು

ಮಂಗಳೂರಿಗೆ ಇನ್ನೊಂದು ಹೊಸ ಮುನ್ಸೀಫ್ ಕೋರ್ಟು ತಾತ್ಕಾಲಿಕವಾಗಿ ಮಂಜೂರಾದ್ದು, ಕಾಸರಗೋಡಿನ ಮುನ್ಸೀಫರಾದ ಶ್ರೀ. ಕೃಷ್ಣ ಮೂರ್ತಿ ಇವರು ಇಲ್ಲಿನ ಪ್ರಧಾನ ಮುನ್ಸೀಫರಾಗಿ ನೇಮಿಸಲ್ಪಟ್ಟು, ಅವರು ತಾ. ೯ರಿಂದ ತಮ್ಮ ಆ ಕಾರ್ಯಭಾರವನ್ನು ನಿರ್ವಹಿಸುವರು.

ವಿಕ್ಟೋರಿಯಾ ಜುಬಿಲಿ ಸ್ಕಾಲರ್ ಶಿಪ್

ಈ ಸಲ ಮೇಲಿನ ನಿಧಿಯಿಂದ ಎರಡು ಸ್ಕಾಲರ್‌ಶಿಪುಗಳು, ಒಂದು ಬ್ರಾಹ್ಮಣ ವರ್ಗದ ವಿದ್ಯಾರ್ಥಿಗೂ ಇನ್ನೊಂದು ಕ್ರೈಸ್ತ ಜಾತಿ ವಿದ್ಯಾರ್ಥಿಗೂ ಕೊಡಲಾಗುವುದು ವೇತನ ಪಡೆಯಲು ಈ ಕೆಳಗಿನ ವಿಷಯಗಳನ್ನು ಕಲಿಯಬೇಕು. ಸಿವಿಲ್, ಮುನ್ಸಿಪಲ್, ಇಲೆಕ್ಟ್ರಿಕಲ್, ಮೆಕೇನಿಕಲ್, ಮರೈನ್, ಸ್ಯಾನಿಟರಿ ಇಂಜಿನಿಯರಿಂಗ್, ಎಗ್ರಿಕಲ್ಚರಲ್, ಮೈನಿಂಗ್ ಮತ್ತು ಮೆಟಲರ್ಜಿ ಈ ಪೈಕಿ ಯಾವುದಾದರೊಂದನ್ನು ಕಲಿಯಬೇಕು ವೇತನ ತಿಂಗಳಿಗೆ ೧೫ ರೂಪಾಯಿಯಾಗಿದ್ದು ೫ ವರ್ಷಗಳ ತನಕ ಕೊಡಲಾಗುವುದು ಉಮೇದ್ವಾರರು ಮದ್ರಾಸು ಎಸ್. ಎಸ್ ಎಲ್ ಸಿ ಪಾಸಾದವರಾಗಿದ್ದು ೧೬ ವರ್ಷಕ್ಕಿಂತ ಮೇಲೆ ೨೧ ವರ್ಷದೊಳಗಿನವರಿರಬೇಕು. ಅಂಗೀಕೃತ ವಿಶ್ವವಿದ್ಯಾಲಯಗಳ ಪದವೀಧರರು ಅರ್ಜಿ ಹಾಕುವುದಿದ್ದರೆ ಅವರು ೨೪ ವರ್ಷ ತುಂಬುವುದರೊಳಗೆ ಅರ್ಜಿ ಹಾಕಬೇಕು, ೧೯೪೧ನೆಯ ಜೂನ್ ೨೩ನೆಯ ಪೂರ್ವಾಹ್ನ ೧೧ ಗಂಟೆಗೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಪರೀಕ್ಷೆ ನಡೆಯುವುದು. ನಿಶ್ಚಿತ ಫಾರ್ಮಿನಲ್ಲಿ ಜೂನ್ ೧೫ರ ಒಳಗೆ ಜಿಲ್ಲಾ ಕೋರ್ಟಿನಲ್ಲಿ ಅರ್ಜಿಗಳು ಸ್ವೀಕರಿಸಲ್ಪಡುವವು ಅರ್ಜಿ ಫಾರ್ಮುಗಳನ್ನು ಪರೀಕ್ಷಾ ನಿಯಮಗಳನ್ನು ಕ್ರಮವಾಗಿ ಒಂದಾಣೆ ಎರಡಾಣೆ ಕೊಟ್ಟು ಜಿಲ್ಲಾ ಕೋರ್ಟಿನಿಂದ ಆಫೀಸಿನ ಸಮಯದಲ್ಲಿ ಪಡೆಯಬಹುದು

ಕಾಸರಗೋಡು ಹರಿಜನ ಸೇವಕ ಸಂಘ

ಇದರ ಸಲುವಾಗಿ ಶ್ರೀ ಎಸ್ ಎಸ್. ಶೆಟ್ಟಿಯವರು ಕಾಸರಗೋಡು ತಾಲೂಕಿನ ಕೆಲವು ಗ್ರಾಮಗಳಲ್ಲಿ ಶ್ರೀಗಳಾದ ಬಿ ಎಸ್. ಕಕ್ಕಿಲ್ಲಾಯ, ಬಾಬು ಶೆಟ್ಟಿ, ಐ, ಕೃಷ್ಣ ಭಟ್ಟರೇ ಮೊದಲಾದ ಪೋಷಕನೀಯರೊಂದಿಗೆ ಸಂಚರಿಸಿ ಸುಮಾರು ೩೦೦ ರೂ ಗಳಷ್ಟು ಧನಸಂಗ್ರಹ ಮಾಡಿರುವರೆಂದು ತಿಳಿದಿದೆ.

ಕಾರ್ಕಳ ಶುದ್ಧಿ ಸಮಾಚಾರ

ಪಡುಮಾರ್ನಾಡು ಗ್ರಾಮದ ಬನ್ನಡ್ಕದಲ್ಲಿ ಮೇಸ್ತ್ರಿ ಜರಮಿಯಾ ಸೆಟ್ಟಿಯಾನ್ ಮತ್ತು ಇವರ ಪತ್ನಿ ರೂಥ್‌ರಮಣಿ ಇವರು ತಮ್ಮ ಮಕ್ಕಳೊಂದಿಗೆ ಬಂಟಸಮಾಜದ ಹತ್ತು ಸಮಸ್ತರ ಮುಂದೆ ಪುತ್ತಿಗೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಕಳೆದ ತಾ 17ರಲ್ಲಿ ವಿಧಿಪೂರ್ವಕ ಶುದ್ಧಿಹೊಂದಿ ಹಿಂದೂ ಮತವನ್ನು ಸ್ವೀಕರಿಸಿದರು ಜರಮಿಯಾ ಸೆಟ್ಟಿಯಾನರು ಮತ್ತು ಅವರ ಪತ್ನಿ ರೂಥ್‌ರಮಣಿ ಮೊದಲು ಬಂಟ ಸಮಾಜಕ್ಕೆ ಸೇರಿದವರಾಗಿದ್ದು 1920ರಲ್ಲಿ ಪ್ರೊಟೆಸ್ಟಾಂಟ್ ಮತವನ್ನು ಅಂಗೀಕರಿಸಿದ್ದರು. ಜರಮಿ ಸೆಟ್ಟಿಯಾನರ ಮೊದಲ ಹೆಸರು ದೇಜು ಸೆಟ್ಟಿ. ಇವರು ಹೇರೂರು ಕಲ್ಲಗುಡ್ಡೆ ವೆಂಕ್ಟಯ್ಯ ಸೆಟ್ರ ಅಳಿಯ ರೂಥ್‌ರಮಣಿಯರ ಮೊದಲ ಹೆಸರು ನಾಗಮ್ಮ) ಇವರು ಮೂಲ್ಕಿ ಶಿಮಂತೂರುಭಾವದ ಕೆಳಗಿನ ಮನೆ ದೇಜು ಸೆಟ್ರ ಸೊಸೆ

ವಿದಾಯ ಸತ್ಕಾರ

ಮೂಲ್ಕಿ ಹೈಸ್ಕೂಲಿಗೆ ವರ್ಗವಾಗಿರುವ ಸ್ಥಳೀಯ ಬೋರ್ಡ್ ಹೈಸ್ಕೂಲಿನ ಅಧ್ಯಾಪಕ ಶ್ರೀ ಕಟೀಲು ಗಣಪತಿ ಶರ್ಮ ಮತ್ತು ಶ್ರೀ ಎ. ಶಾಂತಪ್ಪನವರನ್ನು ಬೀಳ್ಕೊಡುವದಕ್ಕೋಸ್ಕರ ಒಂದು ಸತ್ಕಾರ ಕೂಟ ನಡೆಯಿತು

ಇರಾಕಿನ ಮೇಲೆ ಹಿಟ್ಲರನ ವಕ್ರದೃಷ್ಟಿಯೇಕೆ?

ಕರ್ನಲ್ ಣ್ಣೆಯು ಸ್ವಾಧೀನತೆಗಾಗಿ--

ಪೀಕ್ ಪಾಶಾ ಬ್ರಿಟಿಷರ ಜೀವನಾಡಿಯ ಸಂರಕ್ಷಕನು

ಆತನ ಸಾಹಸಮಯ ಜೀವನ

ಇರಾಕಿನಲ್ಲಿ ಬ್ರಿಟಿಷರ ಜೀವನಾಡಿಗಳೆಂದರೆ ಅಲ್ಲಿರುವ ಕಲ್ಲೆಣ್ಣೆಯ ಬಾವಿಗಳು. ಮತ್ತು ಆ ಬಾವಿಗಳಿಂಥ ಭೂಮಧ್ಯ ಸಾಗರದ ಬಂದರುಗಳಿಗೆ ಎಣ್ಣೆಯನ್ನು ತರುವ ನಳ್ಳಿಗಳು. ಪೀಕ್ ಪಾಶಾ ಈ ಜೀವನಾಡಿಗಳ ಸಂರಕ್ಷಕನಾಗಿರುವದು ಮಾತ್ರವಲ್ಲದೆ, ಇರಾಕಿನ ಪಶುಸ್ವಭಾವದ ಜನರ ರೀತಿನೀತಿಗಳನ್ನು ಸುಧಾರಿಸುವುದರಲ್ಲಿಯೂ ಆತನು ಬಹಳ ಕೃತಕೃತ್ಯನಾಗಿದ್ದಾನೆ. ಈಗ ಬ್ರಿಟಿಷರ ಇದೇ ಜೀವನಾಡಿಗಳ ಮೇಲೆ ಹಿಟ್ಲರನ ವಕ್ರದೃಷ್ಟಿ ಬಿದ್ದಿದೆ; ಮತ್ತು ಆ ಜೀವನಾಡಿಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವದಕ್ಕೋಸ್ಕರ ಆತನು ಚತುರೋಪಾಯಗಳಿಂದ ಪ್ರಯತ್ನಿಸುತ್ತಿದ್ದಾನೆ.

ಇರಾಕಿನ ಮೇಲೆ ಹಿಟ್ಲರನ ದೃಷ್ಟಿ

ಹಿಟ್ಲರನ ದೃಷ್ಟಿಯು ಈಗ ಇರಾಕಿನ ಕಡೆಗೆ ಹೊರಳಿದೆ. ಈಜಿಪ್ತ ಮತ್ತು ಇತರ ಪೌರ್ವಾತ್ಯ ದೇಶಗಳಲ್ಲಿ ಅವನು ಜಯಶಾಲಿನಾಗಬೇಕಾದರೆ ಇರಾಕಿನ ಎಣ್ಣೆ ಬಾವಿಗಳ ಮೇಲೆ ಆತನ ಅಧಿಕಾರ ಸ್ಥಾಪನೆಯಾಗಬೇಕಾದ್ದು ಅಗತ್ಯ. ಆದರೆ ಬ್ರಿಟಿಷರು ಅವನ ಆಕ್ರಮಣಕ್ಕೆ ಎದೆಕೊಡಲಿಕ್ಕೆ ಅಂದಿನಿಂದಲೂ ಸಿದ್ಧತೆ ಮಾಡಿಕೊಂಡಿರುವರು. ಇರಾಕಿನೊಳಗಣ ಅವರ ಒಂಟೆ ಸೇನೆಗೆ ಮಿಗಿಲಾದ ಸೇನೆ ಬೇರೆ ಇಲ್ಲ. ಮತ್ತೆ ಈ ಸೇನೆಯ ಹಿಂದುಗಡೆ ಪೀಕ್ ಪಾಶಾ ಇದ್ದಾನೆ. ಇರಾಕ್ ಮತ್ತು ಟ್ರಾನ್ಸಜೋರ್ಡಾನ ಪ್ರದೇಶಗಳಲ್ಲಿ ಪೀಕ್ ಪಾಶಾನ ಹೆಸರು ಸರ್ವಶ್ರುತವಾಗಿರುವುದು. ಅಲ್ಲಿಯ ಜನರು ಅವನನ್ನು ಒಬ್ಬ ಕಾರಣಿಕ ಪುರುಷನೆಂದೇ ಭಾವಿಸಿದ್ದಾರೆ. ಅರೇಬಿಯದ ಲೋರೆನ್ಸನನ್ನು ತಿಳಿದವರು ಆತನನ್ನು ಎರಡನೆಯ ಲಾರೆನ್ಸನೆಂದು ಕರೆಯುತ್ತಾರೆ.

ಪೀಕ್ ಪಾಶಾ ಯಾರು?

ಹೆಸರಿನಿಂದ ಅವನು ಯಾರಾದರೂ ಅರೇಬಿಯದ ಒಬ್ಬನಾಗಿರಬಹುದೆಂದು ಊಹಿಸಬಹುದು. ಆದರೆ ಅವನೊಬ್ಬ ಆಂಗ್ಲೇಯ. ಆತನ ಹೆಸರು ಲೆಫ್ಟಿನೆಂಟ್ ಕರ್ನಲ್ ಫ್ರೆಡರಿಕ್ ಜಿಂರಾರ್ಡ ಪೀಕ್ ಎಂದು. ಅರಬರು ಅವನನ್ನು ಪಾಶಾ ಎಂದು ಕರೆಯುತ್ತಾರೆ. ಆರಡಿ ಎತ್ತರದ ಮನುಷ್ಯ. ಅರೇಬಿಯರಿಗಿಂತಲೂ ಚೆನ್ನಾಗಿ ಅರಬೀ ಭಾಷೆಯನ್ನಾಡುವನು. ಒಮ್ಮೆ ಇರಾಕಿನ ಕೆಲವು ಡಕಾಯಿತರು ಅವನನ್ನು ಆಕ್ರಮಿಸಿದ್ದರು. ಆಗ ಅವನು ಅಮೀರ ಅಬ್ದುಲ್ಲನ ಸಲಹೆಗಾರನಾಗಿದ್ದ. ಡಕಾಯಿತರು ಆತನ ಹತ್ತಿರ ಇದ್ದುದನ್ನೆಲ್ಲ ಕೇಳತೊಡಗಿದರು. ಆದರೆ ಆತನು ಒಂದನ್ನೂ ಕೊಡಲೊಪ್ಪಲಿಲ್ಲ. ಅವರು ಬಲತ್ಕಾರ ಮಾಡತೊಡಗಿದಾಗ ಆತನು ಅವರ ಕಡೆಗೆ ಪಿಸ್ತೂಲನ್ನು ಎತ್ತಿ ಹಿಡಿದು ಅರಬ್ಬಿಯಲ್ಲಿ ಕೆಲವು ಮಾತುಗಳನ್ನು ಆಡಿದ. ಆತನ ಅರಬ್ಬಿ ಭಾಷೆಯ ವಾಕ್ಪ್ರವಾಹವನ್ನು ಕಂಡು ಡಕಾಯಿತರು ಬೆಚ್ಚಿ ಬಿದ್ದರು. ಸ್ವಲ್ಪ ದೂರ ಹೋಗಿ ತಮ್ಮೊಳಗೆ ಆಲೋಚಿಸಿದರು. ಮರಳಿ ಬಂದು 'ನೀವು ಪೀಕ್ ಪಾಶಾರೆ?' ಎಂದು ಪ್ರಶ್ನಿಸಿದರು. ಆತನು ನಸುನಗುತ್ತ 'ಹೌದು' ಎನ್ನಲು ಅವರು ಒಬ್ಬೊಬ್ಬರಾಗಿ ಪಲಾಯನ ಮಾಡಿದರು. ಪೀಕ್ ಪಾಶಾ ಅನೇಕ ಸಂದರ್ಭಗಳಲ್ಲಿ ನಿರಾಯುಧನಾಗಿಯೇ ಸಂಚರಿಸುತ್ತ, ಜನರ ಕಷ್ಟ ಕತೆಗಳನ್ನು ಕೇಳುತ್ತ, ಅವನ್ನು ನಿವಾರಿಸುವ ಭಗೀರಥ ಪ್ರಯತ್ನಗಳನ್ನು ಮಾಡುತ್ತ ದಿಗಂತವ್ಯಾಪ್ತ ಕೀರ್ತಿಯನ್ನು ಪಡೆದಿದ್ದಾನೆ.

ಇಂಗ್ಲಿಷರ ಜೀವನಾಡಿ

ಈಗ ಪೀಕ್ ಪಾಶಾ ಇಂಗ್ಲಂಡಿನಿಂದ ಮರಳಿ ಪುನಃ ಇರಾಕಿಗೆ ಬಂದಿದ್ದಾನೆ. ಈ ಜೀವನಾಡಿಗಳ ಸಂರಕ್ಷಣೆ ಮತ್ತು ಕಾವಲಿಗೆ ಅವನು ಅತ್ಯಂತ ಪ್ರವೀಣ ಸೇನೆಯನ್ನು ವ್ಯವಸ್ಥೆಗೊಳಿಸಿರುವನು. ಕಳೆದ ಬಾರಿಯ ಯುದ್ಧದಲ್ಲಿ ಪೀಕ್ ಪಾಶಾನು ಈಜಿಪ್ತಿನ ಸೇನೆಯಲ್ಲಿ ಒಬ್ಬ ಅಧಿಕಾರಿಯಾಗಿದ್ದ. ಮತ್ತೆ ಲೋರೆನ್ಸನೊಡಗೂಡಿ ಅರೇಬಿಯಕ್ಕೆ ಬಂದ. ಅಲ್ಲಿಯ ತರುಣರನ್ನು ಆರಿಸಿ ತೆಗೆದು ತನ್ನದೇ ಒಂದು ಸೇನೆಯನ್ನು ಮಾಡಿದ. ಈ ಸೇನೆಯು ಅರೇಬಿಯದಲ್ಲಿ ಶಾಂತಿ ಮತ್ತು ವ್ಯವಸ್ಥೆಯನ್ನು ಕಾದುದು ಮಾತ್ರವಲ್ಲದೆ ಬ್ರಿಟಿಷರ ಜೀವನಾಡಿಗಳನ್ನು ಸಂರಕ್ಷಿಸಿತು. ಈಗ ಈ ಸೇನೆಯು ಎಷ್ಟು ದೊಡ್ಡದಾಗಿದೆ ಎಂದು ಹೇಳಬರುವದಿಲ್ಲ. ಆದರೂ ಇದರಲ್ಲಿ ೧೫೦೦ಕ್ಕಿಂತ ಹೆಚ್ಚು ಮಂದಿ ಇರಬಹುದಾಗಿ ಎಣಿಸಲಾಗಿದೆ. ಈ ಸೇನೆಯು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿರುತ್ತದೆ. ದೇಶದ ಪರಿಸ್ಥಿತಿಯ ಜ್ಞಾನವು ಈ ಸೇನೆಗೆ ಬಹು ಚೆನ್ನಾಗಿ ಇದೆ. ಆದ್ದರಿಂದ ಇದನ್ನು ಸೋಲಿಸುವುದು ಹಿಟ್ಲರನ ಪ್ರಚಂಡ ಸೇನೆಗೂ ಅಸಾಧ್ಯವಾಗಿದೆ.

ಜೀವನದ ಕೆಲವು ಘಟನೆಗಳು

ಒಮ್ಮೆ ಪೀಕ್ ಪಾಶಾ ವಿಮಾನವನ್ನು ನಡೆಸುತ್ತಿದ್ದಾಗ ಅದು ಮುರಿದುಬಿದ್ದಿತು. ಪೀಕ್ ಪಾಶಾನ ನಾಲ್ಕು ಪಕ್ಕೆಲುಬುಗಳು ಮುರಿದು ಹೋದುವು. ಆದರೂ ಅವನು ಧೈರ್ಯಗೆಡಲಿಲ್ಲ. ವಿಮಾನವು ಹೀಗೆ ಮುರಿದು ಹೋಗುವಾಗ ನಾಲ್ಕೇ ನಾಲ್ಕು ಪಕ್ಕೆಲುಬುಗಳು ಮುರಿದುಹೋಗುವದಾದರೆ ವಿಮಾನ ಸಂಚಲನವು ಎಷ್ಟು ಸುಲಭವಾಗಿದೆ ಎಂದು ಅವನು ಅಂದುಕೊಂಡನಂತೆ.

ಒಮ್ಮೆ ಕುಮಾರಿ ಮೆಕ್ಲೀನ್ ರೀಟ ಎಂಬ ಸ್ಕೊಟ್ಲೆಂಡಿನ ಒಬ್ಬ ಯುವತಿ ತನ್ನ ಸಹೋದರಿಯನ್ನು ಕಾಣಲಿಕ್ಕೆ ಅರೇಬಿಯಕ್ಕೆ ಹೋಗಿದ್ದಳು. ಮರಳು ಕಾಡಿನ ಪ್ರದೇಶದಲ್ಲಿ ಆಕೆ ಈತನನ್ನು ಕಂಡಳು. ಮಾತುಕತೆ ಆಯಿತು. ಪ್ರೇಮ ಬೆಸುಗೆ; ಒಂದೆರಡು ತಿಂಗಳುಗಳಲ್ಲಿಯೇ ಆಕೆಯೊಡನೆ ಪೀಕ್ ಪಾಶಾನ ವಿವಾಹವಾಯಿತು. ಇವರ ದಾಂಪತ್ಯ ಜೀವನವು ಎಲ್ಲರೂ ಅಸೂಯೆ ಪಡುವಂತಹದಾಗಿದೆ. ಈಗ ಪೀಕ ಪಾಶಾನಿಗೆ ೫೦ ವರ್ಷ ಪ್ರಾಯ. ಕಾರ್ಯದಿಂದ ನಿವೃತ್ತನಾಗಬೇಕೆಂದು ಇಂಗ್ಲಂಡಿಗೆ ಮರಳಿದ್ದನಾದರೂ, ಇರಾಕಿನೊಳಗಿನ ಇಂಗ್ಲೀಷರ ಜೀವನಾಡಿಗಳ ಮೇಲೆ ಆಪತ್ತು ಬಂದಿರುವುದನ್ನು ನೋಡಿ ಪುನಃ ಅತ್ತ ಸರಿದ್ದಾನೆ.

ಸೌಂದರ್ಯ ಮತ್ತು
ಮುಖಕಾಂತಿಗೆ
ಹಿಮಾನಿ ಸ್ನೋ
ಹಿಂದೂದೇಶದಲ್ಲಿ ಪ್ರಪ್ರಥಮವಾಗಿ
— ತಯಾರಿಸಿದ ಸ್ನೋ —
ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಯಾವತ್ತೂ ಕಲೆ, ಮುಚ್ಚಿ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ
ಹಿಮಾನಿ ಗ್ಲಿಸರಿನ್ ಸಾಬೂನುಗಳು
ಪಾರದರ್ಶಕ—ಶುದ್ಧ
ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ
ಮಹಮ್ಮದಾಲಿ ರೋಡ್, ಮಂಗಳೂರು.

ಸಾದರ-ಸ್ವೀಕಾರ

The Onward: Editor, K. Shiva Rau, Published by The Students' Union, Nileshwar. Price two annas.

ನೀಲೇಶ್ವರ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇಂಗ್ಲಿಷು ಭಾಷೆಯಲ್ಲಿ ಸಂಪಾದಿಸಲ್ಪಟ್ಟ ಇದೊಂದು ಸಂಚಿಕೆ ಹೊರಬಿದ್ದಿದೆ. ಕಾಸರಗೋಡು ತಾಲೂಕು ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷ ಶ್ರೀ. ಕೆ. ಸಾಯುರರ ಭಾಷಣ, ಆ ಪರಿಷತ್ತಿನ ವರದಿ, ಅದೇ ಪರಿಷತ್ತಿನಲ್ಲಿ ಜನಾಬ್ ಉಮರ್ ಖೊಯ್ಯರವರ ಭಾಷಣ, ಶ್ರೀ. ಕೆ. ಕೃಷ್ಣರಾಯರ ಭಾಷಣ ಶ್ರೀ. ಎಂ. ಆರ್. ಪೂಂಜರ ಭಾಷಣ, ಪರಿಷತ್ತಿಗೆ ಬಂದ ಸಂದೇಶಗಳು, ಪರಿಷತ್ತಿನ ನಿರ್ಣಯಗಳು, ಇನ್ನೂ ಹಲವು ಉಪಯುಕ್ತ ಲೇಖನಗಳಿಂದೊಡಗೂಡಿದ ಈ ಸಂಚಿಕೆಯು ವಿದ್ಯಾರ್ಥಿವರ್ಗದ ಅತ್ಯಂತ ಉತ್ಸಾಹವನ್ನು ತೋರಿಸುತ್ತದೆ. ಅನೇಕ ಚಿತ್ರಗಳಿಂದ ಹಾಗೂ ವ್ಯಂಗಚಿತ್ರದಿಂದ ಸಂಚಿಕೆ ಅಂದವಾಗಿದೆ. ಇದನ್ನು ಸಂಪಾದಿಸಿದವರ ಸಾಹಸವು ಸ್ತುತ್ಯವಿದೆ. ನೀಲೇಶ್ವರ ವಿದ್ಯಾರ್ಥಿ ಸಂಘದ ಈ ತರದ ಚಟುವಟಿಕೆಯನ್ನು ನಾವು ಅಭಿನಂದಿಸುತ್ತೇವೆ.

HALFTONE & LINE BLOCK MAKING UNDERTAKEN

Sharada Press, MANGALORE

ಯುದ್ಧಾವಸಾನದ ವರೆಗೂ ರಶ್ಯವು ತಟಸ್ಥವಾಗಿರುವುದೆ?

ಮೊಲೊಟೋವನಿಂದ ಸ್ಟಾಲೀನನು ಅಧಿಕಾರ ಕಿತ್ತುದೇಕೆ?

ರಾಜಕಾರಣಿಗಳ ಹಲವು ಊಹಾಪೋಹಗಳು

ರಶ್ಯದ ಸರ್ವಾಧಿಕಾರಿ ಸ್ಟಾಲೀನನು ಮಂತ್ರಿ ಮಂಡಲದಲ್ಲಿ ಯಾವ ಅಧಿಕಾರ ಪದವಿಯನ್ನು ಸ್ವೀಕರಿಸಿದಲಿಲ್ಲ. ಅವನು ರಶ್ಯದ ಕಮ್ಯುನಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿಯಾಗಿದ್ದ. ಸರಕಾರದ ಶಾಸನ ಧೋರಣೆಯು ಕಮ್ಯುನಿಸ್ಟ್ ತತ್ವ ಸಿದ್ಧಾಂತಗಳಿಗೆ ವಿರೋಧಬಾರದ ಹಾಗೆ ರೂಪಿಸಲ್ಪಡುವಂತೆ ಮಾತ್ರ ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದನು. ವಿದೇಶ ವ್ಯವಹಾರಗಳೆಲ್ಲ ಮೊಲೊಟೊವನ ಕೈಯಲ್ಲಿದ್ದುವು. ಆದರೆ ಈಗ ಸ್ಟಾಲೀನನು ತಾವಾಗಿ ಮುಂದೆ ಬಂದು ಸರಕಾರದ ಮುಖ್ಯ ಮಂತ್ರಿ ಪದವಿಯನ್ನು ತಾನಾಗಿ ಕೈಗೆ ತೆಗೆದುಕೊಂಡಿದ್ದಾನೆ. ಮಂತ್ರಿಮಂಡಲದಲ್ಲಿ ಈ ಒಂದು ಬದಲಾವಣೆಯಾದುದರಿಂದಲೂ, ಸ್ಟಾಲೀನನು ಮೊಲೊಟೊವನನ್ನು ಅಧಿಕಾರ ಪದವಿಯಿಂದ ದೂರವಿಟ್ಟಿರುವುದರಿಂದಲೂ ಅಂತರಾಷ್ಟ್ರೀಯ ರಾಜಕಾರಣಿಗಳಲ್ಲಿ ಅನೇಕಾನೇಕ ಊಹಾಪೋಹಗಳು ಎದ್ದಿವೆ.

ಯುದ್ಧದಲ್ಲಿ ತಟಸ್ಥವಾದ ರಶ್ಯ

ಯೂರೋಪಿನಲ್ಲಿ ನಡೆದಿರುವ ಲೋಕ ಯುದ್ಧದಲ್ಲಿ ರಶ್ಯವು ಯುದ್ಧವಾರಂಭವಾದಂದಿನಿಂದಲೂ ತಟಸ್ಥ ಧೋರಣೆಯನ್ನು ಅವಲಂಬಿಸಿದೆ. ಯುದ್ಧದಲ್ಲಿ ಬ್ರಿಟಿಷರ ಕಡೆಗಿದ್ದು ಹೋರಾಡಬೇಕೆಂಬ ಅಭಿಪ್ರಾಯವನ್ನಿಟ್ಟುಕೊಂಡಿದ್ದ ಲಿಟ್ವಿನೋಫನನ್ನು ವಿದೇಶ ಮಂತ್ರಿಪದವಿಯಿಂದ, ಯುದ್ಧವಾರಂಭವಾದೊಡನೆಯೇ ಸ್ಟಾಲೀನನು ಹೊರಹಾಕಿದ್ದು ಯುದ್ಧದಲ್ಲಿ ರಶ್ಯವು ತಟಸ್ಥವಾಗಿರಬೇಕೆಂಬುದಕ್ಕಾಗಿಯೇ! ಲಿಟ್ವಿನೋಫನು ಬ್ರಿಟಿಷರ ಮೇಲೆ ಸಹಾನುಭೂತಿಯುಳ್ಳವನಿದ್ದನು. ಅವನು ಅಧಿಕಾರದಲ್ಲಿದ್ದುದಾದರೆ, ರಶ್ಯವು ಬ್ರಿಟಿಷರ ಕಡೆಯಿಂದ ಯುದ್ಧಕ್ಕೆ ಸೇರುವ ಏನಾದರೊಂದು ಸೂತ್ರಸಂಚಾಲನವು ಆಗಿಯೇ ಆಗುತಿತ್ತು. ಅಮೇರಿಕ ಜಪಾನುಗಳು ಬ್ರಿಟಿಷ್ ಮತ್ತು ಜರ್ಮನರ ಕಡೆಯಿಂದ ಯುದ್ಧಕ್ಕೆ ಸೇರಲಿಕ್ಕೆ ಸಮಯಕಾದಿರುವುದು ಕೂಡ ಇದೇ ಉದ್ದೇಶದಿಂದ ಎಂಬುದು ಸ್ಟಾಲೀನನ ಅಭಿಪ್ರಾಯವಾಗಿದೆ. ಯುದ್ಧಾರಂಭದಲ್ಲಿ ಜರ್ಮನಿಯೊಡನೆ ಒಡಂಬಡಿಕೆ ಮಾಡಿಕೊಂಡು ಫಿನ್ಲೆಂಡ್, ಪೋಲಾಂಡ್ ಮೊದಲಾದವು ಕೆಲವು ಪ್ರದೇಶಗಳನ್ನು ರಶ್ಯವು ತನ್ನ ರಾಜ್ಯಕ್ಕೆ ಸೇರಿಸಿಕೊಂಡಿದೆ. ಆದರೆ ಸಾಮ್ರಾಜ್ಯತೃಷ್ಣೆಯಿಂದ ಅದು ಹೀಗೆ ಮಾಡಿರುವುದಲ್ಲ. ಆ ದಾಹವು ರಶ್ಯಕ್ಕೆ ಇರುತಿದ್ದರೆ ಜರ್ಮನಿಯೊಡನೆ ಕೂಡಿಕೊಂಡು ಅದು ತನ್ನ ಸಾಮ್ರಾಜ್ಯ ವಿಸ್ತಾರ ಮಾಡಬಹುದಿತ್ತು; ಬಾಲ್ಕನ್ ರಾಷ್ಟ್ರಗಳನ್ನು ಸುಲಭದಲ್ಲಿ ನುಂಗಬಹುದಿತ್ತು. ಫಿನ್ಲಾಂಡ್ ಪೋಲಾಂಡ್ ಮೊದಲಾದ ಕೆಲವು ಪ್ರದೇಶಗಳನ್ನು ತೆಗೆದುಕೊಂಡಿರುವುದು ತನ್ನ ಭದ್ರತೆಗಾಗಿ ಮಾತ್ರವಿರುತ್ತದೆ. ಈ ಪ್ರದೇಶಗಳ ಮೇಲೆ ಅದರ ನ್ಯಾಯೋಚಿತ ಅಧಿಕಾರವು ಮೊದಲಿನಿಂದಲೂ ಇತ್ತು. ರಶ್ಯವು ಸಾಮ್ರಾಜ್ಯವಾದದ ಪ್ರಬಲ ಶತ್ರುವಾಗಿದೆ. ಆದುದರಿಂದ ಸಾಮ್ರಾಜ್ಯವಾದದ ರಕ್ಷಣೆಗಾಗಿರುವ ಈ ಯುದ್ಧದಲ್ಲಿ ಕೊನೆತನಕವೂ ತಟಸ್ಥವಾಗಿರಬೇಕೆಂಬುದು ರಶ್ಯದ ಪ್ರಬಲ ಇಚ್ಛೆಯಾಗಿದೆ.

ರಶ್ಯದ ಧೋರಣೆ ಏನು?

ಪ್ರಪಂಚದಲ್ಲೆಲ್ಲ ಸಮಾಜವಾದ ಹರಡಬೇಕೆಂಬುದು ರಶ್ಯದ ಆಸೆ. ಆದರೆ ಈ ಆಸೆಯನ್ನು ಪೂರ್ತಿಮಾಡಲಿಕ್ಕೆ ಅದು ಶಸ್ತ್ರಾಸ್ತ್ರಗಳನ್ನು ಕೈಯಲ್ಲಿ ಹಿಡಿಯುವುದಿಲ್ಲ. ಶಾಂತಿಯಿಂದಲೇ ಅದು ಈ ಧ್ಯೇಯವನ್ನು ಸಾಧಿಸುವುದು. ಯುದ್ಧವು ಪ್ರಬಲಹೊಂದಷ್ಟು, ಬ್ರಿಟನು ಜರ್ಮನಿಗಳಲ್ಲಿ ಯಾವುದು ಸೋತರೂ, ಯಾವುದು ಗೆದ್ದರೂ ಸಾಮ್ರಾಜ್ಯವಾದದ ನಿರ್ನಾಮವಾಗಿ ಅದರ ಸ್ಥಾನದಲ್ಲಿ ಸಮಾಜವಾದ ರಾಜ್ಯಸ್ಥಾಪನೆಯಾಗುವುದು ಖಂಡಿತ. ಆದುದರಿಂದ ಸ್ಟಾಲೀನನು ಯುದ್ಧಕ್ಕೆ ಸೇರದೆ, ಉಪಾಯದಿಂದಲೇ ತನ್ನ ಕಾರ್ಯಗಳನ್ನು ಸಾಧಿಸಿಕೊಳ್ಳುವ ಧೋರಣೆಯನ್ನು ಇಟ್ಟುಕೊಂಡಿದ್ದಾನೆ. ಅವನಿಗೆ ಬ್ರಿಟನೂ ಬೇಡ, ಜರ್ಮನಿಯೂ ಬೇಡ. ಅವುಗಳ ಸ್ನೇಹದ ಕಟು ಅನುಭವವು ಸ್ಟಾಲೀನನಿಗೆ ಚೆನ್ನಾಗಿ ಆಗಿದೆ. ತನ್ನ ಕಾರ್ಯಸಾಧನೆಗಾಗಿ ಮಾತ್ರ ಅವನು ಬ್ರಿಟನಿನೊಡನೆಯೂ ಜರ್ಮನಿಯೊಡನೆಯೂ ಸಂದರ್ಭೋಚಿತ ಸಂಬಂಧ ಕಟ್ಟಿಕೊಳ್ಳುವನು.

ವಿಷಮ ಪರಿಸ್ಥಿತಿ

ಈಗ ಅಂತರಾಷ್ಟ್ರೀಯ ಪರಿಸ್ಥಿತಿಯು ಬಹಳ ವಿಷಮವಾಗಿದೆ. ಅಮೇರಿಕವು ಯಾವಾಗ ಬೇಕಾದರೂ ಜರ್ಮನಿಯ ವಿರುದ್ಧ ಯುದ್ಧ ಸಾರಬಹುದು. ಆಗಲೇ ಜಪಾನು ಜರ್ಮನಿಯ ಪಕ್ಷ ಸೇರಿ ಕತ್ತಿ ಎತ್ತಬಹುದು. ಈ ಸ್ಥಿತಿಯಲ್ಲಿ ಅತ್ಯಂತ ಬುದ್ಧಿವಂತಿಕೆಯ ತೀವ್ರ ನಿರ್ಣಯಗಳನ್ನು ಮಾಡುವ ಅಗತ್ಯ ಬೀಳುತ್ತದೆ. ಆಯಾಯಿದ ಪ್ರಕಾರ ಎಲ್ಲಾ ವಿಧಿಗಳನ್ನು ಅನುಸರಿಸಿ ಪರಸ್ಪರಸಮಾಲೋಚನೆಗೆ, ಸಲಹೆ ಕೇಳಲಿಕ್ಕೆ, ಈ ಸ್ಥಿತಿಯಲ್ಲಿ ಸಮಯ ದೊರೆಯುವುದಿಲ್ಲ. ಆದುದರಿಂದಲೇ ಬ್ರಿಟಿಷರ ಅಥವಾ ಜರ್ಮನರ ಅನುಕೂಲ ಧೋರಣೆಯನ್ನೇನೂ ಇಟ್ಟುಕೊಳ್ಳದ ಮೊಲೊಟೊವನಿಂದಲೂ ವಿದೇಶ ಮತ್ತು ಪ್ರಧಾನ ಮಂತ್ರಿಯ ಅಧಿಕಾರಗಳನ್ನು ತನ್ನ ಕೈಗೆ ತೆಗೆದುಕೊಳ್ಳುವ ಅಗತ್ಯವನ್ನು ಸ್ಟಾಲೀನನು ಕಂಡುಕೊಂಡನು. ಈ ರೀತಿ ಅಧಿಕಾರವನ್ನು ತೆಗೆದುಕೊಂಡುದರಿಂದ ರಶ್ಯದ ಧೋರಣೆಯಲ್ಲಿ ಏನೂ ಬದಲಾವಣೆಯಾಗಿಲ್ಲ; ಮಾತ್ರವಲ್ಲ ಯುದ್ಧದಲ್ಲಿ ತಟಸ್ಥವಾಗಿರಬೇಕೆಂಬ ಅದರ ಪೂರ್ವ ಧೋರಣೆಯು ಇನ್ನು ದೃಢವಾಗಿದೆ ಎಂಬುದು ಈ ಘಟನೆಗಳಿಂದ ಸ್ಪಷ್ಟವಾಗುತ್ತದೆ.

ಸಮಾಜವಾದವನ್ನು ಹರಡಿಸುವುದೆ?

ಅಮೇರಿಕ ಜಪಾನುಗಳೂ ಯುದ್ಧಕ್ಕೆ ಸೇರಿದ ಬಳಿಕ, ಪ್ರಪಂಚದ ಪ್ರಬಲ ರಾಷ್ಟ್ರಗಳಲ್ಲಿ ರಶ್ಯವೊಂದೇ ಯುದ್ಧದಿಂದ ಹೊರಗಿದ್ದಂತಾಗುವುದು. ಪ್ರಪಂಚವೆಲ್ಲ ಪ್ರಳಯಕಾರಿ ಯುದ್ಧದಿಂದ ಸುಟ್ಟುಸುಣ್ಣವಾದಾಗ ರಶ್ಯವು ಸಂಪತ್ಸಮೃದ್ಧವಾಗಿರುವುದನ್ನು ಕಂಡು, ಪ್ರಪಂಚವು ತಾನಾಗಿ ಮುಂದೆ ಬಂದು ಸಮಾಜವಾದಕ್ಕೆ ಸ್ವಾಗತಕೊಟ್ಟು ಅದನ್ನು ಸ್ವೀಕರಿಸಬಹುದು. ಆದುದರಿಂದ ಸ್ಟಾಲೀನನು ಯುದ್ಧದಲ್ಲಿ ಸಂಪೂರ್ಣ ತಟಸ್ಥವಾಗಿರುವ ಧೋರಣೆಯನ್ನು ಕೈಕೊಂಡಿದ್ದಾನೆಂದು ರಾಜಕಾರಣಿಗಳು ತರ್ಕಿಸುತ್ತಾರೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ, ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ.

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಸಾ ಕಂಪೆನಿ, ಹಂಪನಕಟ್ಟಾ ಮಂಗಳೂರು

WANTED

A Secondary Grade Trained Teacher for the Muduperar Higher Ele. School.

For particulars apply to:—
"X"
Swadeshabhimani
Mangalore

ಮೂರು ಬಣ್ಣಗಳಿಂದ ರಂಜಿತವಾದ

ತಿರುಪತಿ

ವೆಂಕಟರಮಣ

ದೇವರ ಭಾವಚಿತ್ರಗಳು!

ಭಗವದ್ಭಕ್ತರ ಮನೆಮನೆಗಳಲ್ಲಿ ಇದು ವಿರಾಜಿಸುವುದು ಅವಶ್ಯವಾಗಿದೆ.

ವೆಂಕಟರಮಣ ದೇವರ ಚಿತ್ರಗಳಿಂದ ಕೂಡಿದ ಕೆಲೆಂಡರುಗಳೂ ಸಿಗುತ್ತವೆ.

ಮಾದರಿ ಪ್ರತಿಗಳನ್ನು ಬಯಸುವವರು ಐದು ಪಾವಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯುವುದು.

ಮುಲ್ಕಿ ಗಣಪತಿ ಶ್ರೀನಿವಾಸ ಶುದ್ಧ
ಜನರಲ್ ಮರ್ಚೆಂಟ್,
ಉಡುಪಿ ದ. ಕ.

ಸಿನೆಮಾ ಸುದ್ದಿ

ಸೈಗಲ್ ನ್ಯೂಥಿಯೇಟರ್ಸಿನಲ್ಲಿ

ಪಂಚೋಲಿ ಆರ್ಟ್ ಪಿಕ್ಚರ್ಸ್ ಮತ್ತು ಸೈಗಲರ ವ್ಯವಹಾರವು ಈಗ ರಾಜಿಯಿಂದ ಪರ್ಯವಸಾನ ಹೊಂದಿತೆಂದು ತಿಳಿದ್ದಿದೆ.

ನ್ಯೂಥಿಯೇಟರ್ಸಿನ ನಿಶ್ಚಿತ ಸಿನೆಮಾಗಳು ಆದ ಕೂಡಲೇ ಪಂಚೋಲಿ ಚಿತ್ರದಲ್ಲಿ ಸೈಗಲನು ಅಭಿನಯಿಸಲು ಸರ್ಕಾರರು ಒಪ್ಪಿರುವರಂತೆ ನ್ಯೂಥಿಯೇಟರ್ಸಿನವರ ಮುಂದಿನ ಎರಡು ಚಿತ್ರಗಳಲ್ಲಿ ಸೈಗಲ್ ಅಭಿನಯಿಸಬೇಕಾಗಿದ್ದು ಇದಕಡಿಮೆಯೆಂದರೆ ಒಂದುವರಿ ವರ್ಷಗಳ ಅವಧಿ ಬೇಕಾಗಬಹುದೆಂದು ಗೊತ್ತಾಗಿದೆ

ನಿರ್ದೇಶಕ ಆಚಾರ್ಯ

ಬೊಂಬೇ ಟಾಕೀಸಿನ ನಿರ್ದೇಶಕ ಆಚಾರ್ಯರು ಸರಸ್ವತಿ ಸಿನೆಟೋನನ್ನು ಎರಡು ವರ್ಷಗಳ ಕರಾರಿನ ಮೇಲೆ ಸೇರಿರುವರು.

ಸುರೇಂದ್ರ

ಸುರೇಂದ್ರನು ತಿರಿಗಿ ಸಿನೆಮಾದಲ್ಲಿ ಅಭಿನಯಿಸಲಿರುವನು ರಾಮಚಂದ್ರ ಠಾಕೂರರ ಹೊಸ ಚಿತ್ರ ಗರೀಬದಲ್ಲಿ ಮಿಸ್ ರೋಸಳೊಡನೆ ಆತನು ಅಭಿನಯಿಸುವನಂತೆ

'ರೋಟಿ'ಗೆ ನಾಯಕಿ ಬೇಕು

ನಿರ್ದೇಶಕ ಮೆಹಬೂಬರು ರೋಟಿ ಚಿತ್ರದ ತಯಾರಿಕೆಯಲ್ಲಿದ್ದಾರೆ ಚಂದ್ರಮೋಹನ ಮತ್ತು ಶೇಖ್ ಮುಖ್ತಾರರು ಮುಖ್ಯ ಎರಡು ಪುರುಷ ಪಾತ್ರಗಳನ್ನು ವಹಿಸುವರು ಆದರೆ ಇದುವರೆಗೆ ಮೆಹಬೂಬರು ನಾಯಿಕಾ ಪಾತ್ರವನ್ನು ನಿಶ್ಚಯಿಸಿಲ್ಲವೆಂದು ತಿಳಿದಿದೆ ಹೊಸ ನಾಯಿಕೆಯೊಬ್ಬಳು, ಸುಂದರಿ, ಗಾಯಕಿ, ನಟನಾಚತುರೆ, ಹೊಸ ತರೆಯುಳ್ಳ ತರುಣಿಯನ್ನು ಅವರು ಹುಡುಕುತ್ತಿದ್ದಾರಂತೆ

ಕಾಂಚನದಲ್ಲಿ ಚಿಟ್ನಿಸಳು

"ನಾನು ಹಲವು ಚಿತ್ರಗಳಲ್ಲಿ ಅಭಿನಯಿಸಿದ್ದರೂ, ಇದ ವರೆಗೆ ಕಾಂಚನದಲ್ಲಿ ಅಭಿನಯಿಸಿದಂತೆ ಆನಂದಭರಿತಳಾಗಿ, ರಸಾವೇಶವುಳ್ಳವಳಾಗಿ ಇನ್ನಾವುದರಲ್ಲಿಯು ಅಭಿನಯಿಸಿಲ್ಲ. ಕಾಂಚನ್ ನನ್ನ ಜೀವನದ ನಟನಾ ಚಿತ್ರಗಳಲ್ಲಿ ಅತ್ಯುತ್ತಮ" ಎಂದು ಲೀಲಾಚಿಟ್ನಿಸಳು ಪತ್ರಿಕೋದ್ಯಮಿಯೊಡನೆ ಹೇಳಿದಳು

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು

ಕುಟಿಕೂರಾ ಮುಲಾಮು (Cuticura) Ointment) ತನ್ನ ವಾಸಿಮಾಡುವಗಾಯುದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗ ವೇದನೆಗೊಳಿಸಿ ಪೀಡಾಡಿಸುವ ದೀರ್ಘಕಾಲದ ಕಾಲುಳುಕನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಘಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಡದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು ಇದು ಗುಣಗೊಳಿಸುವುದು ಮತ್ತು ಕ್ರಿಮಿ ನಾಶಕ ಗುಣ ಉಳ್ಳದ್ದು.

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪೆಟ್ಟು ಪರಚುವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮು (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ನಾಸೀಮ್

ನೇಶನಲ್ ಸ್ಟುಡಿಯೋಸ್, ಜಗತ್ ಟಾಕೀಸ್, ರಣಜಿತ್ ಈ ಮೂರು ಕಂಪೆನಿಗಳು ನಾಸೀಮಳ ಸಲುವಾಗಿ ಪ್ರಯತ್ನ ಮಾಡುತ್ತಿವೆಯೆಂದು ಸದ್ದಿ

ಡಂಗನ್'ರ ಮುಂದಿನ ಚಿತ್ರ

ಕಲ್ಕತ್ತದ ಫಿಲ್ಮ್ ಕಾರ್ಪರೇಶನ್ ಓಫ್ ಇಂಡಿಯಾದವರ ಸಲುವಾಗಿ ತಮಿಳು ಚಿತ್ರಗಳ ಪ್ರಸಿದ್ಧ ಅಮೇರಿಕನ್ ನಿರ್ದೇಶಕರಾದ ಎಲಿಸ್, ಆರ್ ಡಂಗನರು ಬೇಗನೇ ಒಂದು ತಮಿಳು ಸಾಮಾಜಿಕ ಚಿತ್ರವನ್ನು ತಯಾರಿಸುವರೆಂದು ತಿಳಿದಿದೆ

ಸಿನೆಮಾದವರು ನಾಟಕವಾಡುವರು

ಬಂಗಾಳದ ಬಿ ಎನ್. ಸರ್ಕಾರ್, ಎ ಎಸ್ ಬೋಸ್, ಎಚ್. ವಾಲ್, ಮನೋರಂಜನ್ ಘೋಸ್ ಪ್ರಭೃತಿಗಳು ಲಕ್ಷಾಂತರ ರೂಪಾಯಿಗಳನ್ನು ಹಾಕಿ ಒಂದು ನಾಟಕ ಕಂಪೆನಿಮಾಡುವರೆಂದು ಸುದ್ದಿ.

ಹಿಂದುಸ್ತಾನಿ ಹಿಟ್ಲರ್

ಹಳೆಯ ಇಂಪೀರಿಯಲಿನ ಖಾನ್ ಬಹದ್ದೂರ್ ಆರ್ದೇಶಿರ್ ಎಂ ಇರಾನಿಯು 'ಹಿಂದುಸ್ತಾನಿ ಹಿಟ್ಲರ್' ಎಂಬ ಚಿತ್ರವೊಂದನ್ನು ತಯಾರಿಸುವನೆಂದು ತಿಳಿಯಲ್ಪಟ್ಟಿದೆ

ಪಾಲ್ ಮುನಿ ಜವಾಹಿರನಾಗಿ

ಅಮೇರಿಕದಲ್ಲಿ ತಯಾರಾಗುವ ಜವಾಹರರ ಜೀವನ ಚರಿತ್ರೆಯ ಸಿನೆಮಾದಲ್ಲಿ ಪಾಲ್ ಮುನಿಯು ಜವಾಹಿರರ ಪಾತ್ರವಹಿಸುವನೆಂದು ತಿಳಿದಿದೆ' ಮಾತ್ರವಲ್ಲದೆ ಕಳೆದ ಸತ್ಯಾಗ್ರಹ ಸಮಯದಲ್ಲಿ ಚವಾತಿಯಲ್ಲಿ ಸತ್ಯಾಗ್ರಹಿಗಳ ಮೇಲೆ ಆಂಗ್ಲೋ ಇಂಡಿಯನ್ ಸಾರ್ಜೆಂಟರು ಹೊಡೆದ ದೃಶ್ಯವನ್ನು ತೋರಿಸಲು, ಕೆಲವು ಆಂಗ್ಲೋ ಇಂಡಿಯನರನ್ನು ಕೆಲವು ಕಾಂಗ್ರೆಸಿನವರನ್ನೂ ಅಲ್ಲಿಗೆ ಕರೆಸಲಾಗುವುದಂತೆ.



ಈ ಅವಶ್ಯಕತೆಗಳಿಗಾಗಿ — ಮಕ್ಕಳ ವಿದ್ಯಾಭ್ಯಾಸಕ್ಕೆ ಕೂಡ— ನಿಮ್ಮ ಈಗಿನ ವರಮಾನವು ನಿರಂತರೂ ನೀವು ಹಣ ಕೊಡಲೇಬೇಕು. ಆದುದರಿಂದ ಯಾವ ಹೆಚ್ಚಿಗೆ ಖರ್ಚುಗಳನ್ನು ನೀವು ಬಿಡಬಹುದೆಂಬುದನ್ನು ನೋಡಿಕೊಳ್ಳಿ, ಮತ್ತು ನಿಮ್ಮ ಸಂಪಾದನೆ ನಡೆಯುವವರೆಗೆ ಆ ಉಳಿದ ಹಣವನ್ನು ಬೇರೆ ಇಡುತ್ತ ಹೋಗಿರಿ.

ಭವಿಷತ್ತಿಗೆ ಉಳಿಸಿರಿ — ನಿಮ್ಮ ಸುರಕ್ಷತೆಯು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿಯೇ ಇದೆ.

ರೂ. ೩|೯ ಲಾಭ ಪ್ರತಿ ೧೦ ರೂ. ಗೆ

KH G 1, 38

ವಿಚಿತ್ರ-ಪ್ರಪಂಚ

ಗಂಡು ಗಂಡುಗಳ ಮದುವೆ

ಗಂಡು ಹೆಣ್ಣುಗಳೊಡನೆ ಅಥವಾ ಹೆಣ್ಣು ಗಂಡುಗಳೊಡನೆ ಮದುವೆಯಾಗುವದು ಸಾಮಾನ್ಯ ವಿಷಯ. ಆದರೆ ಗಂಡು ಗಂಡುಗಳೊಡನೆ ಅಥವಾ ಹೆಣ್ಣು ಹೆಣ್ಣುಗಳೊಡನೆ ಮದುವೆಯಾಗುವದನ್ನು ನೀವು ಕೇಳಿರಲಾರಿರಿ. ಇಂಥ ಒಂದು ಮದುವೆಯು ಹಂಗೇರಿಯಲ್ಲಿ ಆಗಿಬಿಟ್ಟಿದೆ. ಜೋಸೆಫನೆಂಬವನು ಮೇರಿಯೆಂಬ ಸುಂದರಿಯನ್ನು ಮದುವೆಯಾಗಿ ಸುಖವಾಗಿದ್ದ. ಆದರೆ ತಾನು ಹೆಣ್ಣನ್ನು ಮಾತ್ರವಲ್ಲ ಗಂಡನ್ನೂ ಮದುವೆಯಾಗಿ ಇರಬಲ್ಲನೆಂದು ಒಂದು ದಿನ ಅವನು ತನ್ನ ಸ್ನೇಹಿತರೊಂದಿಗೆ ಪಂಥಹಾಕ ಬೇಕಾಯಿತು. ಅದಕ್ಕೋಸುಗ ಜೋಸೆಫನು ಹೆಣ್ಣಿನ ವೇಷಹಾಕಿಕೊಂಡು ಒಬ್ಬ ಗಂಡಸಿನ ಮನವೊಲಿಸಿ ಆತನನ್ನು ಮದುವೆಯಾದ. ಮತ್ತೆ ಆತನು ತನ್ನ ನಿಜವಾದ ಹೆಂಡತಿಯ ಮನೆಯಲ್ಲಿಯೇ ಇದ್ದು ಆ ಹೊಸ ಗಂಡನನ್ನು ರಮಿಸುತ್ತಿದ್ದ, ಸ್ವಲ್ಪದಿನಗಳಲ್ಲಿ ಈ ವಿಷಯವು ಮೇರಿಗೆ ತಿಳಿದು ಗುಟ್ಟು ಹೊರ ಬೀಳದಿರುತ್ತಿದ್ದರೆ ಜೋಸೆಫನು ಹೆಣ್ಣಿನ ವೇಷದಲ್ಲಿ ಕೊನೆತನಕವೂ ಆ ಪಾಪದವನ ಹೆಂಡತಿಯಾಗಿ ಇರುತ್ತಿದ್ದನೋ ಏನೊ? ಹೇಗೂ ಅವನು ಪಂಥದಲ್ಲಿ ಗೆದ್ದನು. ಮತ್ತೆ ಇತರ ಹುಡುಗರೂ ಹೀಗೆ ಹುಡಿಗಿಯರ ವೇಷಹಾಕಿಕೊಂಡು ಮೋಸಮಾಡಬಹುದೆಂಬುದರಿಂದ ನರ್ತನಕ್ಕೆ ಹೋಗುವ ಹುಡುಗರು ಚೆನ್ನಾಗಿ ಪರೀಕ್ಷಿಸಿ ನಿಜಕ್ಕೂ ಹೆಣ್ಣು ಹೌದು ಎಂದು ತಿಳಿದ ಬಳಿಕವೇ ತಮ್ಮ ಸಂಗಾತಿನಿಯರನ್ನು ನರ್ತನಕ್ಕೆ ಆರಿಸಿಕೊಳ್ಳುತಿದ್ದರಂತೆ. ಹೀಗಾಗಿ ಹುಡುಗಿಯರು ತಾವು ಹುಡುಗಿಯರು ಹೌದೆಂದು ಪ್ರಮಾಣ ಮಾಡಲಿಕ್ಕೆ ಬಹಳವಾಗಿ ಶೇಚಾಡುತಿದ್ದರಂತೆ!

ಮಾತಾಡುವ ಶಿಲಾ ಪ್ರತಿಮೆ

ಈಜಿಪ್ಟಿನಲ್ಲಿ ನೈಲನದಿ ಹರಿಯುತ್ತದೆಯಷ್ಟೆ! ಅದು ಸಮುದ್ರಕ್ಕೆ ಸೇರುವಲ್ಲಿಂದ ಒಂದು ಮೈಲು ಹಿಂದೆ ಅದರ ಎರಡು ದಂಡೆಗಳ ಮೇಲೆ ೬೪ ಅಡಿ ಎತ್ತರದ ಎರಡು ಶಿಲಾ ಪ್ರತಿಮೆಗಳು ಎದುರುಬದುರಾಗಿ ನಿಂತಿವೆ. ಇವು ಬಹು ದೊಡ್ಡವಾಗಿ ಭವ್ಯವಾಗಿವೆ. ಅಮನ್ನೊಫ ಎಂಬ ಒಬ್ಬ ಪುರಾತನ ಅರಸನ ಪ್ರತಿಮೆಗಳೆಂದು ಇವನ್ನು ಅಲ್ಲಿಯ ಜನರು ಹೇಳುತ್ತಾರೆ. ಇವುಗಳಲ್ಲಿ ಒಂದು ಪ್ರತಿಮೆ ಮಾತನಾಡುವದಿಲ್ಲ, ಆದರೆ ಇನ್ನೊಂದು ಮಾತನಾಡುತ್ತದೆ! ಈ ಪ್ರತಿಮೆಯ ಮಾತನಾಡುವ ಸ್ವರವು ವೀಣೆಯ ತಂತಿಯನ್ನು ಮಿಂಟಿದ ಹಾಗೆಯೂ, ಹಿತ್ತಾಳಿಯ ತಗಡನ್ನು ಬಡಿದ ಹಾಗೆಯೂ ಇರುತ್ತದೆ. ಪ್ರತಿವರ್ಷ ಫೆಬ್ರವರಿ ಮಾರ್ಚ ತಿಂಗಳುಗಳಲ್ಲಿ, ಸೂರ್ಯನ ಬೆಳಕು ಈ ಪ್ರತಿಮೆಯ ಮುಖದ ಮೇಲೆ ತುಂಬಾ ಬಿದ್ದಿರುವಾಗ ಅದು ಮಾತನಾಡುವದು ಚೆನ್ನಾಗಿ ಗೊತ್ತಾಗುತ್ತದೆ:— ಹೀಗೆಂದು ಅನೇಕ ಬಾರಿ ಅದನ್ನು ನೋಡಿದವರು ಅದರ ಪದ ತಲದಲ್ಲಿ ಬರೆದು ಹಾಕಿದ್ದಾರೆ. ಆದರೆ ಈಗ ಮಾತ್ರ ಈ ಪ್ರತಿಮೆ ಮಾತನಾಡುವದೇ ಇಲ್ಲವಂತೆ!

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

ವಿಜ್ಞಾನಯುಗ

ಬಳ್ಳಿಯಲ್ಲಿ ಬಂಗಾರ

ಅಮೇರಿಕದ ಸಂಯುಕ್ತ ಸಂಸ್ಥಾನ ಮತ್ತು ಕೆನಡ ರಾಜ್ಯಗಳಲ್ಲಿ ಬೆಳೆಯುವ ಒಂದು ಬಳ್ಳಿಯು ಬಂಗಾರವನ್ನು ಹೀರುತ್ತದೆಂದು ಅಲ್ಲಿಯ ಕೆಲವರು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಈ ಬಳ್ಳಿಯನ್ನು ಬಂಗಾರ ಮಿಶ್ರವಾಗಿರುವ ಮಣ್ಣಿನಲ್ಲಿ ನಟ್ಟರೆ ಅದು ತನ್ನ ಬೇರುಗಳ ಮೂಲಕ ಮಣ್ಣಿನೊಳಗಿನ ಬಂಗಾರವನ್ನು ಇತರ ಆಹಾರ ಪದಾರ್ಥಗಳೊಂದಿಗೆ ಕರಗಿಸಿ ಹೀರುವದು. ಹೀಗೆ ಹೀರಿದ ಒಂದು ಟನ್ ಭಾರದ ಬಳ್ಳಿಗಳನ್ನು ಸುಟ್ಟು ಬೂದಿ ಮಾಡಿದರೆ ಆ ಬೂದಿಯಿಂದ ಸುಮಾರು ೪॥ ಔನ್ಸ್ ತೂಕದ ಬಂಗಾರವು ಅನಾಯಾಸವಾಗಿ ದೊರೆಯುವದು ಬಂಗಾರವನ್ನು ಹುಡುಕಿ, ಸಂಗ್ರಹಿಸುವವರಿಗೆ ಇದೊಂದು ಬಹಳ ಅನುಕೂಲ ಸಾಧನವಾಗಿದೆ. ವಿಜ್ಞಾನಿಗಳು ಈ ಬಳ್ಳಿಗೆ ಹೊರ್ಸಟ್ಯಾಲ್ ವೀಡ ಎಂದು ಹೆಸರಿಟ್ಟಿರುವರು.

ಚಿಕ್ಕ ಜಾತಿಯ ದನಗಳು

ಇಂಗ್ಲಾಂಡಿನ ವಿಜ್ಞಾನಿಯು ಹಸುರು ಬಣ್ಣದ ಹೆಗ್ಗಣಗಳನ್ನು ಕಂಡುಹಿಡಿದ ಹಾಗೆ ಬಕ್ಲೊಹೆವರ್ ಎಂಬಲ್ಲಿಯ ಗೋಶಾಲೆಯಲ್ಲಿ ಒಟ್ಟೋಗ್ರೇ ಎಂಬಾತನು ವಿವಿಧ ಪ್ರಯೋಗಗಳನ್ನು ಮಾಡಿ, ಬೇರೆ ಬೇರೆ ಜಾತಿಯ ದನ ಮತ್ತು ಬಸವಗಳ ಜೋಡಣೆಯಿಂದ ಅತಿ ಚಿಕ್ಕ ಜಾತಿಯ ದನಗಳನ್ನು ಪಡೆದಿದ್ದಾನೆ. ಇವು ಎರಡೂವರೆಯಿಂದ ಮೂರಡಿ ತನಕ ಎತ್ತರವಾಗಿವೆ. ಭಾರದಲ್ಲಿ ಸಾಮಾನ್ಯ ದನಗಳಿಗಿಂತ ಅರ್ಧದಷ್ಟು ಇವೆ. ಸಾಕಣೆ ಖರ್ಚು ಬಹಳ ಕಡಿಮೆ. ಆದರೆ ಧಾರಾಳವಾಗಿ ಹಾಲನ್ನು ಕೊಡುವವು.

ಹಸುರು ಹೆಗ್ಗಣಗಳು

ಡಾಕ್ಟರ ಹೊನ್ಸಲೆನ್ ಬ್ರೂಸ ಎಂಬ ಇಂಗ್ಲಾಂಡಿನ ಒಬ್ಬ ವಿಜ್ಞಾನಿಯು ಅನೇಕ ಪ್ರಯೋಗಗಳನ್ನು ಮಾಡಿ ಹಸುರು ಬಣ್ಣದ ಒಂದು ಹೆಗ್ಗಣವನ್ನು ಹುಟ್ಟಿಸಿದ್ದಾನೆ. ಆಗಲಿಕ್ಕೆ ಇದು ಹೆಣ್ಣು ಹೆಗ್ಗಣ. ಆದರೆ ಇದರಿಂದ ಹುಟ್ಟುವ ಮರಿ ಹೆಗ್ಗಣಗಳು ಹಸುರು ಬಣ್ಣದವುಗಳೇ ಆಗಿ ಇರಬಹುದೆಂಬ ಧೈರ್ಯ ಬ್ರೂಸನಿಗೆ ಇಲ್ಲ. ಆದ್ದರಿಂದ ಹಸುರು ಬಣ್ಣದ ಹೆಗ್ಗಣಗಳ ಒಂದು ಜಾತಿಯನ್ನೇ ನಿರ್ಮಿಸಲಿಕ್ಕೆ ಅವನು ಇನ್ನೂ ಪ್ರಯತ್ನ ಶೀಲನಾಗಿರುವನು. ಒಂದು ಹೆಗ್ಗಣವನ್ನು ಹಸುರ ಬಣ್ಣದಲ್ಲಿ ಹುಟ್ಟಿಸಿದವರಿಗೆ, ಅದರ ಒಂದು ಜಾತಿಯನ್ನೇ ಮಾಡಲಿಕ್ಕೆ ಆಗುವದಿಲ್ಲ ಎಂದು ಯಾರೂ ಹೇಳಲಾರರು. ಇನ್ನು ಸ್ವಲ್ಪ ಸಮಯದಲ್ಲಿ ನಾವು ಹಸುರು ಹೆಗ್ಗಣಗಳನ್ನು ಎಲ್ಲೆಲ್ಲಿಯೂ ಕಾಣುವಂತಾಗಬಹುದ?

ವೈಮಾನಿಕನಿಲ್ಲದೆ ವಿಮಾನ ಹಾರಿಸಬಹುದು.

ಹತ್ತು ವರ್ಷಗಳ ಸತತ ಪ್ರಯತ್ನ ಮಾಡಿ ಅಮೇರಿಕದ ವಿಜ್ಞಾನಿಗಳು ಇದೊಂದು ಜಾತಿಯ ವಿಮಾನವನ್ನ ರಚಿಸುವದರಲ್ಲಿ ಈಗ ಸಫಲರಾಗಿದ್ದಾರೆ. ಇದು ಇಂಗ್ಲಾಂಡಿನಲ್ಲಿ ಈಗ ಬಳಕೆಯಲ್ಲಿರುವ ಕ್ವೀನ್ ಬೀ ಎಂಬ ವಿಮಾನಕ್ಕಿಂತಲೂ ಕೆಲವು ವಿಷಯಗಳಲ್ಲಿ ಬಹಳ ಹೆಚ್ಚು ಉಪಯುಕ್ತವಾಗಿ ಕಂಡುಬಂದಿದೆ. ಈ ವಿಮಾನವು ರೇಡಿಯೋ ಕಿರಣಗಳ ಬಲದಿಂದ ನಡೆಯುವುದು. ಆದುದರಿಂದ ಇದಕ್ಕೆ ವೈಮಾನಿಕನ ಅಗತ್ಯ ಇರುವದಿಲ್ಲ. ಮಾತ್ರವಲ್ಲ, ಇದನ್ನು ಬೇಕಾದಲ್ಲಿಗೆ ಕಳುಹಿಸಿ, ಅಲ್ಲಿ ಅದು ನಿರ್ದಿಷ್ಟ ಸ್ಥಾನಗಳ ಮೇಲೆ ಬಾಂಬು ಚೆಲ್ಲಿ, ಸ್ವಸ್ಥಾನಕ್ಕೆ ಮರಳುವಂತೆ, ಕೆಳತಲ್ಲಿಂದಲೇ ಬೇಕಾದ ಚಲನ ವ್ಯತ್ಯಾಸಗಳನ್ನು ಇದರಲ್ಲಿ ಮಾಡಲಿಕ್ಕೆ ಬರುತ್ತದೆ.

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

-Economical in use. Cheapest in value.
Genuine in quality and choiced by all.
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರಾಜಾವೈದ್ಯ ಬಾಬಾ ಗುಣೆ ಇವರ

"ಸುರಂಗಾ"/ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ— ಕೂದಲು ಬೀಳುವಿಕೆ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು ಅಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ವಿಹಾರಿಸುತ್ತದೆ.

೪ ಔನ್ಸಿನ ಬಾಟ್ಲಿಗೆ ರೂ. ೧—೦—೦.

Agents:

Anglo Oriental Pharmacy, Hampankatta.

Stocks also at:

R. V. Kamath & Co., Car-street Mangalore

THE PIE-MONEY BANK LTD.,

Maidan Road, MANGALORE

Undertakes all kinds of Banking Business, Current account at 2½%per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs 5000 run regularly on systematic lines Unique Banking facilities to Businessmen and interested Public.

Apply for particulars-

K R. GURU, *Managing Director*

THE BANK OF MANGALORE LIMITED

HEAD OFFICE MANGALORE ESTD 1901

Branches — MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5½ per cent
" 1 "	4½ per cent
" 6months	3¾ per cent
3 "	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of R 5 @ 3%

All kinds of banking business transacted.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—1—1940

FROM:

Sri K. Shivarama Nair,
Kerikcundah Estate,
Post Devegadabettu.
KADUR DISTRICT.

To,

The Joint Managers,
C. P. C. Motor Service Ltd,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. ೩-0-0   ಅಂಚೆ ವೆಚ್ಚ ಸೇರಿ ರೂ. ೩-13-0   Regd. No. M. 346

ಸ್ವದೇಶಾಭಿಮಾನಿ

[ಸಂಪುಟ ೩೫]   ತಾರೀಕು 30-5-1941   [ಸಂಚಿಕೆ 22]

The Bombay Life Assurance Company, Ltd.

(ESTABLISHED 1908)

Death! { is not a matter of supposition / is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES.

The Bombay Life Building,

Gandhi Nagar, UDIPI.

OR AT ANY OF THEIR OFFICES AT—

Puthiyara, Calicut — Car Street, Mangalore. — Central Station Road, Trivandrum

Gautam Nivas Curry Road, Bombay No 4 — Post Box No 337 Mount Road, Madras — Visweswarapuram Circle, Bangalore City

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಏದೆನೋವು ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆತುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ [illegible] ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

സ്വദേശാഭിമാനി

Swadeshabhimani. Estd 1906



ಪತ್ರವ್ಯವಹಾರ

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ—ಸಂ.ಸ್ವ]

ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಒದಗಿರುವ ವಿಪತ್ತು

ಇತ್ತೀಚಿಗೆ ಸರಕಾರದವರು ಹಾ. ಎ. ಶಾಲೆಯಲ್ಲಿ ಅಥವಾ ಖಾಸಗಿಯಾಗಿ ಕಲಿತ ವಿದ್ಯಾರ್ಥಿಗಳು ಹೈಸ್ಕೂಲುಗಳಲ್ಲಿ III ಫೋರ್ಮಿಗೇನೆ ಸೇರ ಬೇಕಲ್ಲದೆ ಮೊದಲಿನಂತೆ IV ಫೋರ್ಮಿಗೆ ಸೇರಕೂಡದೆಂದು ನಿರ್ಬಂಧ ಹಾಕಿರುವುದರಿಂದ ಹಾ. ಎ. ಶಾಲೆಗಳಿಗಾದ ಕೆಲವು ಸಂಕಷ್ಟಗಳನ್ನಿಲ್ಲಿ ಸೂಚಿಸಲಪೇಕ್ಷಿಸುತ್ತೇನೆ.

೧. ಹಾ. ಎ ಶಾಲೆಯಲ್ಲಿ ೭ನೇ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಕೂಡಾ ಹೈಸ್ಕೂಲಿನ ೭ನೇ ತರಗತಿಯಾದ III ಫೋರ್ಮಿಗೇನೆ ಸೇರಬೇಕಾದ ಕಾರಣ, ಆ ಬಗ್ಗೆ ಒಂದು ವರ್ಷದ ಶಿಕ್ಷಣ ಖರ್ಚು ಹೆಚ್ಚಾಗುವುದಲ್ಲದೆ ವಿದ್ಯಾರ್ಥಿಗಳಿಗೆ ಒಂದೇ ತರಗತಿಯಲ್ಲಿ ಎರಡು ವರ್ಷಗಳಿರ ಬೇಕಾಗುವುದು.

೨. ಇದರಿಂದ ನಮ್ಮ ಮಕ್ಕಳಿಗೆ ಪ್ರೌಢ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಬಯಸುವ ರಕ್ಷಕರು ಅಂಥ ಮಕ್ಕಳನ್ನು ಹಾ ಎ. ಶಾಲೆಗಳಿಂದ ೭ನೇ ತರಗತಿ ಮುಗಿದೊಡನೆಯೇ ಹೈಸ್ಕೂಲಿಗೆ ಸೇರಿಸ ತೊಡಗಿರುವರು ಇದರಿಂದ ೮ನೇ ತರಗತಿಯ ಮಕ್ಕಳ ಸಂಖ್ಯೆಯು ಬಹಳ (ನೇ ೪ಂದ ವರೆಗೂ) ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಹೀಗೆ ಅನುಕೂಲಸ್ಥರ ಮಕ್ಕಳೂ, ವಿದ್ಯಾಭ್ಯಾಸದಲ್ಲಿ ಸಾಧಾರಣ ಉತ್ತಮವಾಗಿರುವ ವಿದ್ಯಾರ್ಥಿಗಳೂ ಶಾಲೆಯನ್ನು ಮಧ್ಯೆ ಬಿಡುವಂತಾಗುವುದರಿಂದ ೮ನೇ ತರಗತಿಯಲ್ಲಿ ಉಳಿಯುವ ವಿದ್ಯಾರ್ಥಿಗಳು ತೀರಾ ಸಾಮಾನ್ಯ ತರಗತಿಯವರೆಂದು ಬೇರೆ ಹೇಳಬೇಕಾಗಿಲ್ಲ. ಇದರಿಂದ ಶಾಲೆಯ ಶಿಕ್ಷಣದೇಳಿಗೆಗೂ ತೊಡಕಾಗದಿರದು.

೩. ಇದರ ಜೊತೆಗೆ ಇದೀಗ ಸರಕಾರವು ಪ್ರಾರಂಭಿಸಲಿರುವ E. S. L. C. ಪರೀಕ್ಷಾಕ್ರಮವು ೮ನೇ ತರಗತಿಯಲ್ಲಿ ಹೀಗೆ ಉಳಿದು ನಿಂತವರಿಗೆ ಮಾತ್ರ ಅನ್ವಯಿಸುವುದರಿಂದ, ಅಂಥ ಪರೀಕ್ಷೆಯ ಫಲಿತಾಂಶ—ಪ್ರಯೋಜನಗಳು ಹೇಗೆ ನಿಲ್ಲುವವೋ ಎಂಬುದೂ ಸಂದೇಹಾಸ್ಪದವಾಗಿದೆ.

ಒಟ್ಟಾರೆ, ೮ನೇ ತರಗತಿಯ ಮಕ್ಕಳ ಸಂಖ್ಯೆ ಕಡಿಮೆಯಾಗುವ ಸಂದರ್ಭ ಒಂದು ಕಡೆ, ಪ್ರೌಢ ವಿದ್ಯಾಭ್ಯಾಸಕ್ಕಾಗಿ ಶಾಲೆ ಬಿಟ್ಟು ಹೋಗಿ ಉಳಿದವರನ್ನು ಸರಕಾರಿ ಪರೀಕ್ಷೆಯ ಚೌಕಟ್ಟಿಗೆ ತಯಾರಿಸುವ ಸಮಸ್ಯೆ ಒಂದು ಕಡೆ,—ಇವುಗಳಿಂದ ಹಾ ಎ. ಶಾಲೆಗಳ ಕಷ್ಟನಷ್ಟವನ್ನು ಹೇಳತೀರದು. ಹೀಗಿರುತ್ತಾ ೮ನೇ ತರಗತಿಯವರೆಗಾದರೂ ವಿದ್ಯಾರ್ಥಿಗಳು ಹಾ. ಎ ಶಾಲೆಗಳಲ್ಲಿಯೂ ನಿಲ್ಲುವಂತೆ, ವಿದ್ಯಾ ಇಲಾಖೆಯವರು ತಕ್ಕ ಗಮನವಿಡುವುದು ಅತ್ಯಗತ್ಯ. ಮುಂದೆ ಬರಲಿರುವ E. S. L C ಸರಕಾರಿ ಪರೀಕ್ಷೆಗೆ, ಇಂಗ್ಲಿಷನ್ನು ಒಂದು ಐಚ್ಛಿಕ ವಿಷಯವನ್ನಾಗಿರಿಸಿ, ಹಾಗೆ ಇಂಗ್ಲೀಷಿನಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ IV ಫೋರ್ಮಿಗೆ ಪ್ರವೇಶ ಸಿಗುವಂತೆ ಏರ್ಪಡಿಸುವುದರಿಂದ ಹಾ ಎ ಶಾಲೆಗಳಿಗೆ ಒದಗಿದ ಸಂಕಷ್ಟವು ನಿವಾರಣವಾಗಬಹುದೆಂದು ತೋರುತ್ತದೆ. ಅಲ್ಲದೆ, ಹಾ. ಎ. ಶಾಲೆಗಳಿಗೂ ಸೆಕೆಂಡರಿ ಶಾಲೆಗಳಿಗೂ ಇರುವ ವ್ಯತ್ಯಾಸಾಂತರಗಳನ್ನು ಈಗಿನಂತೆ ಇನ್ನಷ್ಟು ಪ್ರಬಲಗೊಳಿಸುವುದರಿಂದ ಜನಾಂಗದ ವಿದ್ಯಾಭಿವೃದ್ಧಿಗೆ ಹಿತವೆನಿಸದು. ಆದುದರಿಂದ ಮೇಲಿನ ವಿಚಾರಗಳಲ್ಲಿ ಸಂಬಂಧಪಟ್ಟವರು ಶೀಘ್ರದಲ್ಲಿಯೇ ಬೇಕಾದ ಹೊಸ ಏರ್ಪಾಡುಗಳನ್ನು ಮಾಡಿ ಹಾ. ಎ. ಶಾಲೆಗಳು ಅನಾವಶ್ಯಕ ಕಷ್ಟಕ್ಕೀಡಾಗುವುದನ್ನು ನಿಲ್ಲಿಸುವರೆಂದು ವಿನಯದಿಂದ ಆಶಿಸುವ

ವಿದ್ಯಾಪಕ್ಷಪಾತಿ

ಗಂಟಲು ಮತ್ತು ಶ್ವಾಸಕೋಶಗಳನ್ನು ರೋಗ ತಗಲದಂತೆ ಕಾಯಿರಿ

ಗಂಟಲು, ಎದೆ, ಶ್ವಾಸಕೋಶಗಳ ಬೇನೆಗಳಿಗೆ ಪೆಪ್ಸ್ ತಕ್ಕದಾದ ಗುಣಕಾರಿ ಔಷಧಿ ಎಲ್ಲಾ ಕಡೆಗಳಲ್ಲಿಯೂ ಬಾಟ್ಲಿಗೆ ರೂ 1ರಂತೆ ಮಾರಲ್ಪಡುತ್ತದೆ

ಪೆಪ್ಸನ್ನು ಸೇವಿಸಿರಿ

PEP.S

ಶ್ವಾಸನೀಯ ಮಾತ್ರೆಗಳು

ಸಮಶೀತಲವಾದ ರುಚಿಕರ ಓವಲ್‌ಟಿನ್

ಬಿಸಿಲು ದಿನಗಳಲ್ಲಿ ಒಂದು ಗ್ಲಾಸ್ ತಣ್ಣನೆಯ ಓವಲ್‌ಟಿನ್ ರುಚಿಕರವಾದ ಪಾನೀಯವಾಗಿರುವುದಲ್ಲದೆ ಇದೀ ದೇಹಕ್ಕೆ ಪೋಷಣೆಯನ್ನೂ ಚೈತನ್ಯವನ್ನೂ ಕೊಡುತ್ತದೆ ಇದನ್ನು ತಯಾರಿಸುವುದು ಬಹು ಸುಲಭ. ಒಂದು ಗ್ಲಾಸ್ ತಣ್ಣನೆಯ ಹಾಲಿಗೆ ಸುಮ್ಮನೆ ಎರಡು ಟೀ ಚಮಚದಷ್ಟು "ಓವಲ್‌ಟಿನ್" ಅದನ್ನು ಸೇರಿಸಿ ಮತ್ತು ನಿಮಗೆ ಬೇಕಾದರೆ ಸಕ್ಕರೆಯನ್ನು ಬೆರಸಿ, ನಂತರ ಚೆನ್ನಾಗಿ ಕಲಕಬಿಡಿ ನೆನಪಿನಲ್ಲಿಡಿ, ಬಿಸಿ 'ಓವಲ್‌ಟಿನ್' ನಿಮಗೆ ಎಷ್ಟು ಒಳ್ಳೆಯದೋ ತಣ್ಣನೆಯ "ಓವಲ್‌ಟಿನ್" ಅಷ್ಟು ಒಳ್ಳೆಯದು ಅದೇ ಪೋಷಣೆ ಕೊಡುತ್ತ ಆನಂದದಾಯಕ, ಚೈತನ್ಯದಾಯಕವಾಗಿದ್ದು ಎಲ್ಲಾ ಔಷಧ ಮಾರುವವರಲ್ಲೂ ಮತ್ತು ಅಂಗಡಿಗಳಲ್ಲೂ ದೊರೆಯುತ್ತದೆ.

ಓವಲ್‌ಟಿನ್
OVALTINE

ಹಂಚುವವರು, ಗ್ರಹಾಂಸ್ ಟ್ರೇಡಿಂಗ್ ಕಂ. [ಇಂಡಿಯಾ]ಲಿ. ಬಾಂಬೆ, ಕಲ್ಕತ್ತಾ, ಕರಾಚಿ, ರಂಗೂನ್, ಮತ್ತು ಮದ್ರಾಸು.

"ಓವಲ್‌ಟಿನ್" ಬಿಸ್ಕತುಗಳು

ರುಚಿಕರ, ಜೀರ್ಣಕರ, ಮತ್ತು ಪುಷ್ಟಿದಾಯಕ. ನೀವು ಕೊಳ್ಳಬಹುದಾದ ಬಿಸ್ಕತುಗಳಲ್ಲಿ "ಓವಲ್‌ಟಿನ್" ಬಿಸ್ಕತುಗಳು ಶ್ರೇಷ್ಠವಾದವು. ಅವುಗಳಲ್ಲಿ "ಓವಲ್‌ಟಿನ್" ಸೇರಿದೆ. ೪ ಔನ್ಸ್, ೮ ಔನ್ಸ್ ಪಕೇಟ್‌ಗಳಲ್ಲಿ ಮತ್ತು ಗಾಲ್ಪೌಂಡ್ ಡಬ್ಬಿಗಳಲ್ಲಿ ಮಾರುತ್ತವೆ.

OV/18/40

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧವಾದ ಔಷಧ.

GONO KILLER ORIGINAL

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದ, ಸಾವಿರಾರು ಗಿರಾಕಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊಕೊಕಸ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. ೩-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer. **Dr. D. N. JASANI,** Vithalbhai Patel Road, BOMBAY 4.

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

6-6-1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೬-೬-೧೯೪೧

ಬರ್ಮಾ-ಭಾರತಗಳಿಗೆ ಜಪಾನಿನ ಧಾಳಿ ಸಂಭವಿಸುವುದೆ?

ಜಪಾನಿನ ಹಲವು ಉಪಾಯಗಳು

ರಾಜಕೀಯ ದೃಷ್ಟಿಯಿಂದ ಬರ್ಮಾವು ಭಾರತದಿಂದ ಪ್ರತ್ಯೇಕವಾಗಿದೆ. ಆದರೂ ಸಾಮ್ರಾಜ್ಯ ಸಂರಕ್ಷಣೆಯ ದೃಷ್ಟಿಯಿಂದ ಅವೆರಡೂ ದೇಶಗಳು ಒಂದಾಗಿರಬೇಕಾಗಿದೆ. ಯಾಕಂದರೆ ಜಪಾನಿನ ವಕ್ರದೃಷ್ಟಿ ಎರಡೂ ದೇಶಗಳ ಮೇಲೆ ಸಮಾನವಾಗಿದೆ. ಒಂದರ ಮೇಲೆ ಅಧಿಕಾರ ಸ್ಥಾಪಿಸಿದ ಬಳಿಕ, ಜಪಾನಿಗೆ ಇನ್ನೊಂದರ ಮೇಲೆ ಅಧಿಕಾರ ಸ್ಥಾಪಿಸುವುದು ಕಷ್ಟವಾಗಲಾರದು. ಜಪಾನು ಚೀನದೊಡನೆ ಯುದ್ಧಾಸಕ್ತವಾಗಿದೆ. ಇಂಡೋ ಚೀನದಲ್ಲಿ ಅದು ಕಾಲೂರಿ ನಿಂತಿದೆ. ಥ್ಯಾಲೇಂಡಿನಲ್ಲಿ ಅದಕ್ಕೆ ಅನೇಕ ಸೌಲಭ್ಯ ಅನುಕೂಲತೆಗಳು ದೊರೆತಿವೆ. ಆದುದರಿಂದ ಬರ್ಮಾ ಭಾರತಗಳಿಗೆ ಜಪಾನ ಧಾಳಿಯ ಅಪಾಯ ಉಂಟೇ ಉಂಟು ಎಂದು ಮಾರ್ಕ್ಸ್ ಷ್ಲೆಮಿಂಗರು ಒಂದು ಲೇಖನದಲ್ಲಿ ಬರೆಯುತ್ತಾರೆ. ಅವರು ಮತ್ತೆ ಹೀಗಂದಿರುವರು:

ಬಹಳ ದೂರದ ತನಕ ಚೀನ ಬರ್ಮಗಳ ಎಲ್ಲೆಯು ಒಂದೇಯಾಗಿದೆ. ದಕ್ಷಿಣದಲ್ಲಿ ಇಂಡೋ ಚೀನ ಮತ್ತು ಥ್ಯಾಲೇಂಡುಗಳೊಡನೆ ಬರ್ಮದ ಸಾಮಾನ್ಯ ಎಲ್ಲೆಗಳಿವೆ. ಈ ಭಾಗಗಳಿಂದ ಜಪಾನು ಯಾವಾಗಲಾದರೂ ಬರ್ಮದ ಒಳನುಗ್ಗಬಹುದು. ಈಗ ಚೀನವು ಜಪಾನನ್ನು ಜೀವಕೊಟ್ಟು ತಡೆದು ಹಿಡಿದಿದೆ. ಇಲ್ಲವಾದರೆ ಜಪಾನು ಬರ್ಮವನ್ನು ಆಕ್ರಮಿಸಿ ಎಷ್ಟೋ ದಿನಗಳಾಗುತ್ತಿದ್ದುವು. ಸಾಮ್ರಾಜ್ಯ ರಕ್ಷಣೆಯ ದೃಷ್ಟಿಯಿಂದ ಬ್ರಿಟನು ಚೀನಕ್ಕೆ ಸಹಾಯ ಮಾಡಬೇಕಾದ ಅಗತ್ಯವು ಇಲ್ಲಿ ಸ್ಪಷ್ಟವಾಗುತ್ತದೆ. ಈಶಾನ್ಯದಲ್ಲಿ ಹಿಮಾಲಯಗಳಿರುವುದರಿಂದ ನಮಗೆ ಸ್ವಾಭಾವಿಕ ರಕ್ಷಣೋಪಾಯವಿದೆ ಎನ್ನಬಹುದು. ಆದರೆ ಬರ್ಮದ ಮೂಲಕ ಹಿಂದುಸ್ಥಾನವನ್ನು ಆಕ್ರಮಿಸುವ ಗಂಡಾಂತರವು ಯಾವ ಸಮಯಕ್ಕಾದರೂ ಬರಲಿಕ್ಕಿದೆ. ಬರ್ಮ ಚೀನಗಳ ಜೀವನಾಡಿಯಂತಿರುವ ಬರ್ಮ ರಸ್ತೆಗೆ ಕೊಡುವ ಪ್ರಾಮುಖ್ಯತೆಯು ಇದನ್ನು ತಿಳಿಸುವುದು.

ಹಿಂದುಸ್ಥಾನಕ್ಕೆ ಭಯ

ಈ ಬರ್ಮಾ ರಸ್ತೆಯ ಮೇಲೆ ಜಪಾನು ಅಧಿಕಾರ ಸ್ಥಾಪಿಸಬಲ್ಲುದಾದರೆ, ಬಂಗಾಳ ಆಖಾತದಲ್ಲಿ ಜಪಾನಿನ ಶಕ್ತಿ ಸಂಚಯವಾಗುವುದು. ಆಗ ಅದು ಕಲ್ಕತ್ತಾದ ಮೇಲೆ ಏನೂ ಪ್ರಯಾಸವಿಲ್ಲದೆ ಬಾಂಬಿನ ಸುರಿಮಳೆಗರೆಯಬಹುದಲ್ಲದೆ ಹಿಂದುಸ್ಥಾನದ ಪೂರ್ವ ಸಮುದ್ರ ಕರಾವಳಿಗೆ ಅದು ಬೆದರಿಕೆ ಹಾಕಬಹುದು. ಆಗ ಹಿಂದುಸ್ಥಾನಕ್ಕೆ ಹಿಮಾಲಯಗಳಿಂದ ದೊರೆಯುವ ಸಂರಕ್ಷಣೆ ವ್ಯರ್ಥವಾಗುವುದು. ಬರ್ಮಾದಲ್ಲಿ ವೈರಿಗಳನ್ನು ತಡೆಯುವಂಥ ಕೋಟೆಕೊತ್ತಳ ಮೊದಲಾದುವೇನೂ ಇರುವುದಿಲ್ಲ. ಬರ್ಮವನ್ನು ತನ್ನ ಅಂಕಿತಕ್ಕೆ ತಂದ ಜಪಾನಿಗೆ ಬಂಗಾಳ ಆಖಾತದಲ್ಲಿ ಉತ್ತಮ ನೌಕಾ ಠಾಣೆ ಮತ್ತು ವಿಮಾನ ನಿಲ್ದಾಣಗಳನ್ನಾಗಿ ರೂಪಿಸಲಿಕ್ಕೆ ಬರುವ ಕೆಲವು ಮೊದಲನೆ ವರ್ಗಕ್ಕೆ ಸೇರಿದ ಬಂದರುಗಳೂ ಹಡಗು ದಾಣಗಳೂ ಸಿಕ್ಕುವುವು. ಈಗ ಜಪಾನಿನ ಶಕ್ತಿ ಅಪ್ರತಿಹತವಾಗುವುದು.

ಹಿಂದುಸ್ಥಾನಕ್ಕೆ ಇನ್ನೊಂದು ಕಡೆಯಿಂದಲೂ ಜಪಾನಿನ ಆಕ್ರಮಣದ ಭಯವಿದೆ. ಸಯಾಮು ಕೊಲ್ಲಿಯಿಂದ ಬಂಗಾಳ ಆಖಾತಕ್ಕೆ ಒಂದು ಕಾಲುವೆಯನ್ನು ತೋಡುವ ವಿಚಾರ ಜಪಾನಿಗಿದೆ. ವ್ಯಾಪಾರದ ಅನುಕೂಲತೆಗಾಗಿ ಈ ಕಾಲುವೆಯು ಪ್ರಯೋಜನಕ್ಕೆ ಬೀಳುವುದು ನಿಜವಾದರೂ ಜಪಾನು ಅದಕ್ಕಾಗಿಯೇ ಈ ಕಾಲುವೆಯನ್ನು ಕಡಿಯುವ ಯೋಜನೆಯಲ್ಲಿ ಆಸಕ್ತಿಯನ್ನು ತೋರಿಸಿರುವುದಲ್ಲ. ಕಾಲುವೆಯನ್ನು ಕಡಿದಲ್ಲಾದರೆ ಮತ್ತೆ ಜಪಾನಿಗೆ ಬ್ರಿಟಿಷರ ಸಿಂಗಾಪುರದ ಭಯವೇ ಇಲ್ಲ. ಈ ಕಾಲುವೆಯನ್ನು ಒಂದೆರಡು ತಿಂಗಳುಗಳಲ್ಲಿ ಕಡಿಯಲಿಕ್ಕೆ ಬರುವುದಲ್ಲವಾದರೂ, ಇಂಡೋ ಚೀನ ಮತ್ತು ಥ್ಯಾಲೇಂಡುಗಳು ಅದರ ಸ್ವಾಧೀನತೆಗೆ ಒಳಪಟ್ಟ ಅನಂತರ ಅದನ್ನು ಕಡಿಯಲಿಕ್ಕೆ ಜಪಾನಿಗೆ ಮೊದಲಿನ ಹಾಗೆ ಅಂಥ ದೊಡ್ಡ ತಡೆಗಳೇನೂ ಇಲ್ಲ. ಹಿಂದುಸ್ಥಾನವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸುವ ಯಾವ ಮಹತ್ವಾಕಾಂಕ್ಷೆಯು ಹಿಂದೆ ನೆಪೋಲಿಯನ್, ಕೈಸರ ಮೊದಲಾದವರಿಗಿದ್ದುದೋ, ಈಗ ಹಿಟ್ಲರನಿಗಿದೆಯೋ, ಅದು ಜಪಾನಿಗೂ ಕರತಲಾಮಲಕವಾಗುವುದು.

ಮೊದಲು ಜಪಾನಿನ ಯಾವ ಪ್ರದೇಶವೂ ಸಿಂಗಾಪುರದಿಂದ [illegible] ಮೈಲಿನ ಹತ್ತಿರದಲ್ಲಿರಲಿಲ್ಲ. ಈಗ ಇಂಡೋ ಚೀನ ಥ್ಯಾಲೇಂಡುಗಳಲ್ಲಿ ಅಧಿಕಾರ ಸ್ಥಾಪಿಸಿದ ಬಳಿಕ ಜಪಾನು ಸಿಂಗಾಪುರಕ್ಕೆ ಕೇವಲ [illegible] ಮೈಲುಗಳ ದೂರದಲ್ಲಾಗುವುದು.

ಬರ್ಮಾವು ಭಾರತದಿಂದ ಪ್ರತ್ಯೇಕವಾಗಲ್ಪಟ್ಟಿದ್ದರೂ ಮಿಲಿಟರಿ ದೃಷ್ಟಿಯಿಂದ ಅವೆರಡೂ ಒಂದಾಗಿರಬೇಕಾದುದು ಆವಶ್ಯಕವಾಗಿದೆ. ಯಾಕೆಂದರೆ ಜಪಾನಿನಂಥ ಪ್ರಬಲ ಶತ್ರು ಆಕ್ರಮಣವನ್ನು ತಡೆಯಲಿಕ್ಕೆ ಜಲ, ನೆಲ ಮತ್ತು ವಾಯು ಸೇನೆಯು ಬಹು ದೊಡ್ಡ ಪ್ರಮಾಣದಲ್ಲಿ ಬೇಕಾಗುವುದು. ಇದು ಆರ್ಥಿಕ ದೃಷ್ಟಿಯಿಂದ ಭಾರತ ಬರ್ಮಾಗಳು ಪ್ರತ್ಯೇಕ ಪ್ರತ್ಯೇಕವಾಗಿದ್ದು ಎಂದೂ ಸಾಧ್ಯವಾಗಲಾರದು.



ನವ ಚೈತನ್ಯಕ್ಕೆ
'ಓಂಪೋನಾ'
ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.
ಸ್ಥಳೀಯ ಸ್ಟಾಕಿಸ್ಟರು:-
ದಿ ಪೊಪ್ಯುಲರ ಸ್ಟೋರ್ಸ್, ಮಂಗಳೂರು.
Stockists:—
Messrs. Dadha & Co., MADRAS.

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಸ್ವದೇಶಾಭಿಮಾನಿ

ತಾರೀಕು 6—6—1941

ದುರಾರೋಪಗಳು

'ಬ್ರಿಟಿಷ್ ಮಹಿಳೆಯೊಬ್ಬಳು, ಎಲಿನರ್ ರಥ್‌ಬೋನಳೆಂಬವಳು ಹಿಂದೀಯ ಮಿತ್ರರಿಗೆ ಬರೆದೊಂದು ಪತ್ರದಲ್ಲಿ, ವಿಕಾರ ವಶವಾದ ವಾಣಿಯಲ್ಲಿ, ಕಾಂಗ್ರೆಸಿನ ಇಂದಿನ ಹೆಜ್ಜೆಯನ್ನು ಟೀಕಿಸಿ, ಕಾಂಗ್ರೆಸಿನವರ ಮೇಲೆ ದುರಾರೋಪಗಳನ್ನು ಹೊರಿಸಿದ್ದಾಳೆ ಇಂದಿನೀ ಭೀಷಣ ಯುದ್ಧ ಪ್ರಸಂಗದಲ್ಲಿ, ತಮ್ಮ 'ಸಂಕಷ್ಟ ಕಾಲದಲ್ಲಿ ತಮಗೆ ನೆರವಾಗಬೇಕೆಂದು ಬ್ರಿಟಿಷರು ಬೇಡಿಕೊಳ್ಳುವುದು ಸಹಜವಾಗಿದ್ದರೂ, ಕಾಂಗ್ರೆಸಿನವರನ್ನು ಸರ್ವಾಧಿಕಾರಿಗಳ ಮಿತ್ರರೆಂದು ದೂರಿ, ಅವರು ಕೈಕೊಂಡ ಅಸಹಕಾರವು ತಿಳಿದೇ ಮಾಡುವ ತಪ್ಪೆಂದು ಸಾರಿ, ತಾವು ಮಾಡಿದ ತಪ್ಪಿಗಾದರೂ ಕ್ಷಮೆಯಿದೆಯೆಂಬಂತೆಯೂ, ಕಾಂಗ್ರೆಸಿನವರು ತಮಗೆ ನೆರವಾಗದುದು ಅಕ್ಷಮ್ಯವಾದ ತಪ್ಪೆಂದೂ ಹೇಳುವಂತೆ, ಕರ್ಕಶ ವಾದೀ ತೆರದ ತರ್ಕ ಸರಣಿಯನ್ನು ಹಿಡಿದು ಆಕೆ ವಾದಿಸಿದ್ದು ಬಹಳ ಉದ್ಧಟತನವೆನ್ನಬೇಕು

ಬ್ರಿಟಿಷ್ ರಾಜಕಾರಣರಲ್ಲಿ ಎಲಿನರ್ ರಾಥ್‌ಬೋನಳಂತಹ ಸಾಮಾನ್ಯ ಮಹಿಳೆಯೊಬ್ಬಳ ಮಾತಿಗೆ ಹೆಚ್ಚಿನ ಗೌರವವುಂಟೆಂದೂ ನಾವು ಭಾವಿಸುವುದಿಲ್ಲ. ಆದರೂ, ತಾನೂ ಬ್ರಿಟಿಷ್ ಮಹಿಳೆಯಾಗಿರುವ ಹಕ್ಕಿನಿಂದ, ಭಾರತದ ಮೇಲೆ ಅಧಿಕಾರ ನಡೆಸುವ ಜನಾಂಗಕ್ಕೆ ಸೇರಿದವಳೆಂಬ ದರ್ಪದಿಂದ, ಭಾರತದ ಮುಖಂಡರನ್ನು ಟೀಕಿಸುವ ಸೌಲಭ್ಯಗಳನ್ನು ಪಡೆದವಳೆಂಬ ಪರಾಕ್ರಮದಿಂದ ತನ್ನೀ ಬಗೆಯು ಶಿಷ್ಟವಲ್ಲದಿದ್ದರೂ ದುಷ್ಟವಾದ ದುರಾರೋಪಗಳಸುರಿವ ಳಿಯಿಂದ ನೆಹರು ಮೊದಲಾದ ಅಂತರ್ ರಾಷ್ಟ್ರೀಯ ಕೀರ್ತಿಶಾಲಿಗಳಾದ ಮುಖಂಡರನ್ನೇ ನಿಂದಿಸತೊಡಗಿದ ಅವಳೀ ರೀತಿಯು ನಿಜವಾಗಿಯೂ ಸ್ವಾಭಿಮಾನಿಯಾದ ಭಾರತೀಯನಿಗೆ ಅಸಹನೀಯವಾದುದು

ಭಾರತದ ಬಿಕ್ಕಟ್ಟನ್ನು ಬಗೆಹರಿಸಿ, ಪ್ರಜಾಪ್ರಭುತ್ವಕ್ಕೆ ವಿಜಯವನ್ನು ಸಾಧಿಸಬೇಕೆಂದು ಮನಃ ಪೂರ್ವಕವಾಗಿ ಹಂಬಲಿಸುವ ಹೃದಯದ ಆ ಕಾಂಕ್ಷೆಗೂ, ಈ ಕೆರಳಿ ಕಟುವಾದ ನಿಂದೆಗೂ, ಅರ್ಥಾರ್ಥ ಸಂಬಂಧವೇನೂ ಇಲ್ಲವೆಂದು ಆ ಪತ್ರದ ಪರಿಶೀಲನೆಯಿಂದ ತಿಳಿಯ ಬಹುದು ಇದು ಭಾರತದ ಸಹಕಾರವನ್ನು, ಜನತೆಯ ಮೈತ್ರಿಯನ್ನು ಬೆಳೆಸುವ ಸಾಧನಕ್ಕಿಂತಲೂ, ಕಾಂಗ್ರೆಸಿನ ಮೇಲೆ ತಪ್ಪುಗಳನ್ನು ಹೊರಿಸುವ ಪ್ರಚಾರದ ಕಾರ್ಯವೇ ಆಗಿದೆಯಲ್ಲದೆ ಬೇರೇನೂ ಇದಲ್ಲ. ಇಂತಹ ಪ್ರಚಾರ ಕಾರ್ಯದಿಂದ ಖಂಡಿತವಾಗಿ ಬ್ರಿಟನಿಗೆ ಯಾವ ಪ್ರಯೋಜನವೂ ಸಿಗುವುದು ಸಾಧ್ಯವಿಲ್ಲ. ಮಾತ್ರವಲ್ಲದೆ, ನಿಂದಿಸಿ ಯಾರನ್ನು ಒಲಿಸುವುದೂ ಯಾರಿಂದಲೂ ಸಹಕಾರ ಪಡೆವುದೂ ಅಸಂಭವವಿರುವಾಗ, ತನ್ನೀ ರೀತಿಯ ವಿಕಾರ ವಶವಾದ ಹೇಳಿಕೆಯಿಂದ, ಈಕೆಯೊಬ್ಬಳು ಯಾಕೆ ಒಂದು ಕೆಟ್ಟ ಹೆಸರನ್ನು ಶಾಶ್ವತವಾಗಿ ಗಳಿಸಿಕೊಳ್ಳಲು ಮುಂದೆ ಬಂದಳೋ ನಮಗೆ ತಿಳಿಯಲಾಗಿದೆ

ಬ್ರಿಟನಿಗೆ ಗೆಲುವಾಗಲೆಂದು ಕಾಂಗ್ರೆಸಿನವರು ಗಾಂಧಿಜಿಯಿಂದ ಆರಂಭಿಸಿ ಸರ್ವರೂ ಹಾರೈಸುತ್ತಾರೆ. ಆದರೆ ಕಾಂಗ್ರೆಸು ಯಾವ ನ್ಯಾಯಕ್ಕಾಗಿ ಕಳೆದ ಅರ್ಧ ಶತಮಾನದಿಂದ ಹೋರಾಡಿತೋ ಅದನ್ನು ದುರ್ಲಕ್ಷಿಸಿ ಬ್ರಿಟನು ಸ್ವೇಚ್ಛೆಯಿಂದ ಭಾರತದಲ್ಲಿ ಯುದ್ಧ ಕಾರ್ಯಕ್ರಮಗಳನ್ನು ಮಾಡಿದರೆ, ಜನತಾಭಿಪ್ರಾಯವನ್ನು ಮನ್ನಿಸದಿದ್ದರೆ, ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮುಂದಡಿಯಿಟ್ಟ ಕಾಂಗ್ರೆಸುಸಂಸ್ಥೆಗೆ ತಾನು ಜೀವಂತವಿರುವ ಸ್ಥಿತಿಯನ್ನು ತೋರಿಸದೆ ಬೇರೆ ನಿರ್ವಾಹವಿಲ್ಲದಿರಲು, ವಾಕ್ ಸ್ವಾತಂತ್ರ್ಯದ ಆಂದೋಲನ ಆರಂಭಿಸಬೇಕಾಯಿತೆಂದು ಅದರ ಮುಂದಾಳುಗಳು ಹೇಳಿದ್ದಾರೆ. ಹೀಗಿರುವಾಗ, ಕಾಂಗ್ರೆಸು ಸರ್ವಾಧಿಕಾರಿಗಳ ಮಿತ್ರನಂತೆ ನಡೆದಿದೆಯೆಂದೂ, ಶಾಂತವಾಗಿದ್ದ ಪರಿಸ್ಥಿತಿಯನ್ನು ಕಾಂಗ್ರೆಸು, ಬ್ರಿಟನಿನ ಕಷ್ಟಕಾಲದಲ್ಲಿಯೇ ಕದಡಿಸಿದ ಭಾರತದಲ್ಲಿ ಅಶಾಂತಿ ಹೆಚ್ಚಿಸಿತೆಂದೂ ಹೇಳುವುದರಲ್ಲಿ ಏನು ಸ್ವಾರಸ್ಯವುಂಟು?

ವ್ಯರ್ಥವಾಗಿ ನಿಂದಿಸಿ, ಟೀಕಿಸಿ ಇಂದು ಬ್ರಿಟಿಷ ಮಹನೀಯರಿಗೆ ಹಾಗೂ ಮಹಿಳೆಯರಿಗೆ ಭಾರತದ ನೆರವನ್ನು ಸಂಪಾದಿಸಿಕೊಳ್ಳುವುದು ಖಂಡಿತ ಸಾಧ್ಯವಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಭಾರತದ ನೆರವು ಬೇಕಾದರೆ ಅದಕ್ಕೆ ಉಚಿತ ಮಾರ್ಗವೇನೆಂದು, ತಪ್ಪು ಎಲ್ಲಿದೆಯೆಂದು, ಉಭಯತರೂ ವಿಚಾರವಿನಿಮಯಮಾಡಿ ನಿಷ್ಕರ್ಷೆಗೆ ಬರಬೇಕು ಅದಕ್ಕೆ ಎಲಿನರ್ ರೋಥ ಬೋನಳಂತಹವರೂ ಅವಳಿಗಿಂತಲೂ ಹೆಚ್ಚಿನ ಯೋಗ್ಯತೆಯ ಬ್ರಿಟನಿನ ಮಹಿಳೆಯರೂ ಮಹನೀಯರೂ ಬಹಳ ಶಾಂತ ಬುದ್ಧಿಯಿಂದ ಮುಂದೆ ಬಂದು ಬೇಗನೇ ವಿಚಾರಮಾಡಬೇಕು ಸ್ವತ. ಚರ್ಚಿಲ್ಲರು, ಅಮೆರಿಯಂತಹವರೇ ಭಾರತದ ಬಗ್ಗೆ ಮನಸ್ಸು ಮೃದುಮಾಡಬೇಕು. ಸ್ವಾತಂತ್ರ್ಯಕ್ಕಾಗಿ ಕಾದಾಡುವುದಿದ್ದರೆ ಭಾರತದ ಬಗ್ಗೆ ಆ ತತ್ವವನ್ನು ಸಾಕಷ್ಟು ಸ್ಪಷ್ಟಗೊಳಿಸಬೇಕು ಭಾರತದ ಸ್ವಾತಂತ್ರ್ಯದ ನಿರ್ಧಾರವು ಆಗಬೇಕು ಭಾರತದ ಜನಮತವನ್ನು ಆ ಮೂಲಕ ತೃಪ್ತಿಪಡಿಸಬೇಕು. ಅಂತಹ ವಾತಾವರಣವುಂಟಾಗಿ ಬ್ರಿಟನಿಗೂ ಭಾರತಕ್ಕೂ ಮಧುರ ಸಂಬಂಧವು ಹೆಚ್ಚಾಗಿ ಇಂದಿನ ಲೋಕ ಯುದ್ಧದಲ್ಲಿ ಪ್ರಜಾಪ್ರಭುತ್ವಕ್ಕೆ ಜಯವನ್ನು ತರಲು ಉಭಯ ರಾಷ್ಟ್ರಗಳೂ ಸಂಪೂರ್ಣ ನೆರವಾಗಲೆಂದು ನಾವು ಹಾರೈಸುತ್ತೇವೆ.



ಮೂರು ಬಣ್ಣಗಳಿಂದ ರಂಜಿತವಾದ

ತಿರುಪತಿ ವೆಂಕಟರಮಣ

ದೇವರ ಭಾವಚಿತ್ರಗಳು!

ಭಗವದ್ಭಕ್ತರ ಮನೆಮನೆಗಳಲ್ಲಿ ಇದು ವಿರಾಜಿಸುವುದು ಅವಶ್ಯವಾಗಿದೆ

ವೆಂಕಟರಮಣ ದೇವರ ಚಿತ್ರಗಳಿಂದ ಕೂಡಿದ ಕೆಲೆಂಡರುಗಳೂ ಸಿಗುತ್ತವೆ.

ಮಾದರಿ ಪ್ರತಿಗಳನ್ನು ಬಯಸುವವರು ಐದು ಪಾವಾಣೆ ಸ್ಟಾಂಪನ್ನು ಕೆಳಗಿನ ವಿಳಾಸಕ್ಕೆ ಬರೆಯುವುದು.

ಮುಲ್ಕಿ ಗಣಪತಿ ಶ್ರೀನಿವಾಸ ಕುಡ್ವ
ಜನರಲ್ ಮರ್ಚೆಂಟ್,
ಉಡುಪಿ ದ. ಕ.

ಕಾಂಗ್ರೆಸಿನವರು ಸರ್ವಾಧಿಕಾರಿಗಳ ಮಿತ್ರರಂತೆ!

ಅಸಹಕಾರಿಗಳನ್ನು ಆಂಗ್ಲ ಮಹಿಳೆ ಜರೆಯುತ್ತಾಳೆ

'ಹಿಂದಿನ ಹಾಗೂ ಇಂದಿನ- ಅನ್ಯಾಯಗಳನ್ನು ಕ್ಷಮಿಸಬೇಕೆನ್ನುತ್ತಾಳೆ

— ಎಲೀನರ್ ರಾಥ್‌ ಬೋನಳ ಬಹಿರಂಗ ಪತ್ರ —

'ಅಸಹಕಾರ ಚಳವಳಿಯ ಮುಂದಾಳುಗಳು ನಾಜೀ ಮತ್ತು ಫೆಸಿಸ್ಟ್ ಆಕ್ರಮಣವನ್ನು ಕಟುವಾಗಿ ಖಂಡಿಸಿದರು, ಜನರನ್ನು ಹಿಂಸಿಸಿದಾಗ ಅವರ ಕಾರ್ಯವನ್ನು ಟೀಕಿಸಿ, ಬಲಿಯಾದವರ ಪರವಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸಿದವರು. ಅಲ್ಲದೆ ಯುದ್ಧದ ಪೂರ್ವದಲ್ಲಿ ಮಂಚೂರಿಯಾ, ಅಬಿಸೀನಿಯಾ, ಸ್ಪೈನ್, ಝೆಕೊಸ್ಲೊವಾಕಿಯಾ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಯುದ್ಧವನ್ನು ತಪ್ಪಿಸಿಕೊಳ್ಳುವದಕ್ಕೆ ಬ್ರಿಟನ್ ತನ್ನ ಧೋರಣೆಯನ್ನು ಬದಲಾಯಿಸಿದುದನ್ನು ಕಟುವಾಗಿ ನಿಷೇಧಿಸಿದವರು. ಈಗಂತೂ ನಾವು ಈ ಆಕ್ರಮಣಕಾರಿಗಳಾದ ಸರ್ವಾಧಿಕಾರಿಗಳ ವಿರುದ್ಧ ಯುದ್ಧ ಹೂಡಿದ್ದೇವೆ. ಆದರೆ ಈ ಮುಖಂಡರು ಹಾಗೂ ಅವರ ಅನುಯಾಯಿಗಳು ತಮ್ಮ ಕೈಯಲ್ಲಿ ಶಕ್ಯವಿದ್ದಷ್ಟು ಯುದ್ಧ ಪ್ರಯತ್ನವನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಯುದ್ಧ-ಪ್ರಯತ್ನವಲ್ಲಿ ನಾಶಗೊಳಿಸದಿರುವುದಲ್ಲದೆ ಶಾಸನ ಭಂಗವಾದಿ ವ್ಯವಸ್ಥಿತ ಸರಕಾರವು ಕಾರಭಾರಕ್ಕೆ ಅಡಚಣೆಯನ್ನುಂಟು ಮಾಡುತ್ತಿದ್ದಾರೆ. ಹೀಗೆಂದು ಆಂಗ್ಲ ಮಹಿಳೆ ಎಲೀನರ್ ರಾಥ್‌ ಬೋನಳು ತನ್ನ ಭಾರತದ ಮಿತ್ರರಿಗೆ ಬರೆದ ಬಹಿರಂಗ ಪತ್ರದಲ್ಲಿ ಕಾಂಗ್ರೆಸಿನ ಧೋರಣವನ್ನು ಕಟುವಾಗಿ ಟೀಕಿಸಿದ್ದಾಳೆ. ಆ ಪತ್ರದ ವಿವರ ಹೀಗಿದೆ

'ಅವರ ವರ್ತನೆಯ ಪರಿಣಾಮವು ಏಟಷ್ಟುವಲ್ಲ. ಅವರು ಆಕ್ರಮಣಕಾರಿಗಳಾದ ಸರ್ವಾಧಿಕಾರಿಗಳ ಅಹಿಂಸಾವಾದಿ ಮಿತ್ರರು. ಅವರ ಉದ್ದೇಶವು ಹಾಗಿರದಿದ್ದರೂ, ಈ ರೀತಿ ಹೇಳಬೇಕಾಗಿದೆ. ಹಿಂದುಸ್ಥಾನದ ಒಪ್ಪಿಗೆ ಇಲ್ಲದೆ ಸಮರಸಕ್ತ ರಾಷ್ಟ್ರವೆಂದು ಸಾರಿದುದನ್ನು ಪ್ರತಿಭಟಿಸುವುದೇ ಅವರ ಗುರಿ ಅದೇ ಉದ್ದೇಶವೆಂದು ತಿಳಿದುಕೊಂಡರೂ ಹಿಂದುಸ್ಥಾನದವರನ್ನು ಮೊದಲೇ ವಿಚಾರಿಸಿದಲ್ಲಿ ಯಾವ ನಿರ್ಧಾರವನ್ನು ಮಾಡುತ್ತಿದ್ದರು ಎಂಬುದು ಮುಖ್ಯ ಪ್ರಶ್ನೆ. ಹಾಗೆ ವಿಚಾರಿಸಿದಲ್ಲಿ ನೀವು ಸಹಕರಿಸಲು ಪ್ರವೃತ್ತರಾಗುತ್ತಿದ್ದಿರೆಂದು ಭಾವಿಸೋಣ. ಹಾಗೆ ಮಾಡದಿದ್ದದ್ದು ದೊಡ್ಡ ಅಪರಾಧ ಅಕ್ಷಮ್ಯವಾದ ಅಪರಾಧವೆಂದು ನಾವು ಭಾವಿಸಿದರೂ ಬ್ರಿಟನ್ ಕಷ್ಟಕಾಲದಲ್ಲಿರುವಾಗ ನಮ್ಮ ಧೋರಣೆಯಲ್ಲಿ ಬದಲಾವಣೆ ಮಾಡಿ ನಮ್ಮ ಪ್ರಬಲ ಮಿತ್ರರಾಗುವುದಲು ನೀವು ಆಕ್ರಮಣಕಾರಿಗಳಾದ ಸರ್ವಾಧಿಕಾರಿಗಳ ಮಿತ್ರರಾಗಬೇಕೆಂದಿರುವುದೇ? ನಿಮ್ಮ ವರ್ತನೆಯ ಪರಿಣಾಮವಂತೂ ಹಾಗಿದೆ. ನೀವು ನಮ್ಮೊಡನೆ ಸಹಕರಿಸುವುದಿಲ್ಲವೆಂದು ಹೇಳುವುದಾದರೆ ನೀವು ಮೊದಲು ನಮ್ಮ ಧೋರಣೆಯನ್ನು ಖಂಡಿಸಿದುದರ ಉದ್ದೇಶವೇನು? ಹಿಂದುಸ್ಥಾನಕ್ಕೆ ಮೊತ್ತಮೊದಲು ಸ್ವರಾಜ್ಯ ಆ ಮೇಲೆ ನಮ್ಮ ಸಹಕಾರವೆಂದು ನೀವು ಹೇಳಿದ್ದಾಗಿದ್ದರೆ, ನಮ್ಮ ಮೇಲೆ ಯಾವ ಸ್ವಾರ್ಥದ ಆರೋಪವನ್ನು ನೀವು ಹೊರಿಸಿದ್ದೀರೋ ಆ ಆರೋಪಕ್ಕೆ ನೀವೂ ಗುರಿಯಾಗುವಿರಿ.

ಅಸಹಕಾರ ತತ್ವ?

ಅಸಹಕಾರಿಗಳು ಪ್ರತೀಕಾರದ ತೀವ್ರ ವಿರೋಧಿಗಳು ಎಂದು ನಾನು ಬಲ್ಲೆ. ಸರಿ ಇಂಗ್ಲಂಡಿನ ದುಸ್ಥಿತಿಯ ಲಾಭವನ್ನು ಮಾಡಿಕೊಳ್ಳಲು ನೀವು ಈಗ ಹೊರಟಿರುವಿರಿ

ಸ್ವತಃ ಪಂಡಿತ ನೆಹರೂ ಅವರು ತಮ್ಮ ಇತ್ತೀಚೆಯ ಲೇಖನದಲ್ಲಿ ಅಂದಿನಿಂದ ಇಂದಿನ ವರೆಗೆ ಆದ ಅನ್ಯಾಯ ಪರಂಪರೆಗಳನ್ನು ಉಲ್ಲೇಖಿಸಿ ಇವೆಲ್ಲವನ್ನು ನಾವು ಮರೆಯುವಂತಿಲ್ಲವೆಂದು ಹೇಳಿದ್ದಾರೆ. ಅಮೃತಸರದ ಕೊಲೆ ಪಂಜಾಬಿನ ದಂಡಿನ ಆಳಿಕೆ ಮೊದಲಾದವನ್ನೆಲ್ಲ ಉಲ್ಲೇಖಿಸಿ ಕಳೆದ ಸಾರಿ ಯುದ್ಧದಲ್ಲಿ ಸಹಕರಿಸಿದುದಕ್ಕೆ ಇದು ನಮಗೆ ದೊರಕಿದ ಪ್ರತಿಫಲವೆಂದು ಹೇಳಿದುದು ಸರಿಯೋ? ಇತ್ತೀಚೆಗೆ ಭಾರತದ ರಾಜ್ಯಘಟನೆಯನ್ನು ಭಾರತೀಯರೇ ಸಿದ್ಧಗೊಳಿಸಲಿ ಎಂದು ಹೇಳಿದ ಮಾತು ಪೂರ್ಣ ಬೇಡಿಕೆಗಳಿಗೆ ಎಷ್ಟೇ ಕಡಿಮೆಯಾದರೂ ಗಣನೀಯವಾದುದಲ್ಲವೇ? ಸವಿನಯ ಶಾಸನಭಂಗ ಚಳವಳಿಯು ಯುದ್ಧದ ಪೂರ್ವದಲ್ಲಿ ಶಾಂತಿಯ ಸಲುವಾಗಿ ನಾವು ಪ್ರಯತ್ನಿಸುವಾಗ ಸಂಪೂರ್ಣವಾಗಿ ನಿಂತಿತ್ತು ಎಂದು ತಿಳಿದುಕೊಳ್ಳಬಹುದೇ?

ಪಂಡಿತ ನೆಹರೂ ಮತ್ತು ಅವರ ಅನುಯಾಯಿಗಳು ಇಂಗ್ಲಂಡಿನ ಗುಣಗಳಾಗಲಿ ಸಾಕಷ್ಟು ಕಾರಣಗಳಿವೆ. ನಿಮ್ಮ ಬುದ್ಧಿಯು ಇಂಗ್ಲಂಡಿನವರಿಂದ ವಿಕಾಸಗೊಂಡಿತು. ಇದರಿಂದ ಪರಸ್ಪರ ಸೌಹಾರ್ದತೆ ಬೆಳೆಯಲು ಅನುಕೂಲವಾಗುವುದೆಂದು ಅನೇಕರು ಯೋಚಿಸಬಹುದಾಗಿತ್ತು. ಆದರೆ ಅವಲ ನಿಮ್ಮ ಅತ್ಯಾವೇಶವನ್ನು ಕಡಿಮೆ ಮಾಡುವಂತೆ ತೋರು-ವುದಿಲ್ಲ. ಹಿಂದುಸ್ಥಾನದ ಪ್ರಶ್ನೆ ಮಾತ್ರ ಮೊದಲು ಎಂಬ ನಿಮ್ಮ ಬೇಡಿಕೆಗೆ ನಾವು ನಿಮ್ಮನ್ನು ದೂರುವುದಿಲ್ಲ. ಈಗ ನೀವು ಯುದ್ಧ ಪ್ರಯತ್ನದ ವಿರೋಧಿಗಳಾಗಿ ಹಿಂದುಸ್ಥಾನಕ್ಕೆ ಯಾವ ಬಗೆಯ ಸೇವೆ ಮಾಡಿದಂತಾಯಿತು? ನಿಮ್ಮ ಈ ಬಗೆಯ ಧೋರಣೆಯಿಂದ ನಮಗೆ ಪರಾಜಯವಾಗಿ ಜರ್ಮನಿ, ಇಟಲಿ ಮತ್ತು ಜಪಾನುಗಳಿಗೆ ವಿಜಯವಾದಲ್ಲಿ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಮತ್ತು ಸ್ವರಾಜ್ಯ ದೊರಕಿದಂತಾಯಿತೇ?

ಸಹಾಯವಿಲ್ಲದಿದ್ದರೂ

ನಿಮ್ಮ ಸಹಾಯವಿಲ್ಲದಿದ್ದರೂ ನಾವು ಯುದ್ಧದಲ್ಲಿ ಗೆಲ್ಲುವೆವು. ನಮಗೆ ನಿಮ್ಮ ಅಭಿಪ್ರಾಯವನ್ನು ಸಮ್ಮತಿಸದ ಬೇರೆ ಜಾತೀಯವರಿಂದ ಸಾಕಷ್ಟು ಸಹಾಯವು ದೊರೆತಿದೆ. ಆದರೆ ನೀವೂ ನಮ್ಮೊಡನೆ ಸಹಕರಿಸಬೇಕೆಂದು ನಮ್ಮ ಉದ್ದೇಶವಿದೆ. ನಮ್ಮ ಗಂಡಾಂತರದ ಕಾಲದಲ್ಲಿ ನಮ್ಮ ಪರಾಜಯವನ್ನು ನೀವು ಸಾಧಿಸಿದಿರಿ ಎಂದು ಭಾವಿಸಿರಿ. ನಾವೆಲ್ಲ ವ್ಯಕ್ತ್ಯವಿನ ದವಡೆಯಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳುವ. ಪ್ರತಿನಿತ್ಯ ನಮ್ಮಲ್ಲಿ ಅತ್ಯುತ್ತಮರೆನಿಸಿದ ತರುಣ ಯೋಧರು ಅಸಂಖ್ಯರಾಗಿ ಸಾಯುತ್ತಿದ್ದಾರೆ. ನಿಮ್ಮ ಸಹಾನುಭೂತಿಯನ್ನು ದೊರಕಿಸಿಕೊಳ್ಳುವ ಬಗ್ಗೆ ನಾನು ಈ ಮಾತನ್ನು ಅನ್ನುವದಿಲ್ಲ. ಆದರೆ ನಮ್ಮ ದುರಂತ ಪರಿಸ್ಥಿತಿ ಹಾಗು ನಿಮ್ಮ ಧೋರಣೆ ಇವೆರಡು ನಿಮ್ಮ ವಿರುದ್ಧವಾಗಿವೆ. ನಮ್ಮವರು ಗಂಭೀರವಾಗಿ ಎಲ್ಲವನ್ನು ಸಹಿಸಿಕೊಂಡು ಹೋರಾಡುತ್ತಿದ್ದಾರೆ. ರಾಜಕೀಯದಲ್ಲಿ ಸ್ವಲ್ಪವೂ ಸುರಿಯದ ಜನಸಾಮಾನ್ಯರು ಸಹ ನಮಗೆ ಪರಾಜಯವಾದಲ್ಲಿ ನಮಗೆ ಹಾಗು ಅರ್ಧ ಭೂಭಾಗಕ್ಕೆ ದಾಸ್ಯವಲ್ಲದೆ ಅನ್ಯಥಾ ಮಾರ್ಗವಿಲ್ಲವೆಂದು ತಿಳಿದುಕೊಂಡಿದ್ದಾರೆ. ನಮ್ಮ ಸುತ್ತಮುತ್ತ ಸಂಕಟವು ನಮ್ಮನ್ನು ಆವರಿಸಿಕೊಂಡಿದ್ದರೂ ಅಂತರ್‌ರಾಷ್ಟ್ರೀಯ ಮನೋವೃತ್ತಿಯುಳ್ಳ ನಾವು ಮೊದಲಿಗಿಂತ ಈಗ ಉಲ್ಲಾಸದಿಂದಿರುವೆವು. ಆಗ್ಗೆ ನಮ್ಮವರ ಧೋರಣೆಯಿಂದ ನಮಗೆ ನಾಚಿಕೆ ಅನಿಸುತ್ತಿತ್ತು. ಈಗ ನಿಮ್ಮ ಧೋರಣೆಯು ಸ್ವಾರ್ಥದ್ದು, ಸಂಕುಚಿತವಾದದ್ದು ಹಾಗು ಹೃದಯ ವೈಶಾಲ್ಯವಿಲ್ಲದ್ದು ಎಂದು ನಮಗನಿಸಿದ್ದರಿಂದ ನಮ್ಮ ಧೋರಣೆಯ ಬಗ್ಗೆ ನಮಗೆ ಅತಿಶಯವಾದ ಹೆಮ್ಮೆ ಅನಿಸುತ್ತದೆ. ಪಾಪಕ್ಕಾಗಿನದ ತಕ್ಕವನ್ನೆಂದು ಇರುವದಾದರೆ ಬಿಟ್ಟವು ಈಗ ಪಾಪಕ್ಕಾಗಿನ ಹೊಣೆಕೊಂಡಂತಾಯಿತು. ಆದರೂ ನಾವು ಒಳ್ಳೆ ಚಿಕಿತ್ಸಕ ಬುದ್ಧಿಯಿಂದ ಮುಂಜಾಗರೂಕತೆಯಿಂದ ಎಲ್ಲವನ್ನು ನಿರೀಕ್ಷಿಸುತ್ತಿದ್ದೇವೆ. ಹಿಂದಾದ ತಪ್ಪುಗಳು ಮುಂದೆ ಆಗಬಾರದೆಂಬುದು ನಮ್ಮ ಉದ್ದೇಶವಿದೆ.

ನಮಗೆ ಜಯವಾದರೆ

ಈ ಯುದ್ಧದಲ್ಲಿ ನಮಗೆ ವಿಜಯವಾದರೆ ಇದರ ಪರಿಣಾಮವು ನಿಮ್ಮ ಮೇಲೆ ವಿಪರೀತವಾಗುವದು. ವಿಜಯಗಳಿಸಿದ ಮಿತ್ರರಾಷ್ಟ್ರಗಳು ತಮಗೆ ತೊಂದರೆಕೊಟ್ಟು ವಿಜಯಯಾತ್ರೆಗೆ ನೆರವಾಗದವರನ್ನು ಲಕ್ಷಿಸಲಿಕ್ಕಿಲ್ಲ. ಯುದ್ಧದಲ್ಲಿ ನಾವು ಸೋತರೆ ಆಕ್ರಮಣಕಾರಿಗಳಾದ ರಾಷ್ಟ್ರಗಳಿಂದ ನಿಮಗೆ ಸಿಗುವ ಲಾಭವಾದರೂ ಅಷ್ಟಕಷ್ಟೇ ಇದೆ. ನಮ್ಮಷ್ಟಕ್ಕೆ ನಾವು ಮಾತ್ರ ಎಂಬ ಧೋರಣೆಯಿಂದ ಹಿಂದುಸ್ಥಾನದ ಹಿತವಾಗಲಿಕ್ಕಿಲ್ಲ. ಅಲ್ಲದೆ ನಿಮ್ಮ ಉದ್ದೇಶದಂತೆ ಹಿಂದುಸ್ಥಾನದಲ್ಲಿ ಎಲ್ಲ ಸಾಗುವುದು ಶಕ್ಯವಿಲ್ಲ. ನಮ್ಮ ಆತ್ಮಸಂಶೋಧನೆಯನ್ನು ನಾವು ಮಾಡಿಕೊಳ್ಳುವಂತೆ ನಿಮ್ಮ ಆತ್ಮಸಂಶೋಧನೆಯನ್ನು ನೀವು ಮಾಡಿಕೊಳ್ಳಬಹುದು. ಹಿಂದುಸ್ಥಾನದ ಬಿಕ್ಕಟ್ಟನ್ನು ಬಗೆಹರಿಸಲು ನೀವಾದರೂ ಏನು ಮಾಡಿದ್ದೀರಿ? ನೀವು ವಾಸ್ತವವಾದಿಗಳಾಗಿ ಇವನ್ನೆಲ್ಲ ಸ್ಥಾಪಿಸುತ್ತಿರುವಿರೋ ಹೇಗೆ? ಪರಿಸ್ಥಿತಿ ಮತ್ತು ಸಂದರ್ಭವನ್ನು ನೀವು ಸ್ವಲ್ಪ ಯೋಚಿಸಿರಿ. ಇಂಥ ಸಂಕಷ್ಟಕಾಲದಲ್ಲಿ ನಿಮಗೆ ಹಿಂದೆ ಆದ ಹಾಗು ಇಂದು ನಿಮ್ಮನ್ನು ಎದುರಿಸುತ್ತಿರುವ ಅನ್ಯಾಯವನ್ನು ಮರೆಯಬಾರದೇಕೆ? ಇನ್ನಿತರ ಹಿಂದೀಯರನ್ನು ಜೊತೆಗೊಂಡು ನಮ್ಮೊಡನೆ ಸಹಕರಿಸಿ ಶತ್ರುವನ್ನು ಎದುರಿಸಿರಿ. ಆ ಬಳಿಕ ನಿಮ್ಮ ದೇಶದ ಬೇಡಿಕೆಯನ್ನು ಮಂಡಿಸಿ ಅದರ ಭವಿತವ್ಯವನ್ನು ಹಾಗು ನೀವು ನೆರವಾಗಿ ಜಯಶೀಲವಾದ ಜಗತ್ತಿನ ಭವಿತವ್ಯವನ್ನು ನೀವೇ ನಿರ್ಧರಿಸುವಿರಿ."

THE

Canara Banking Corporation Limited

(Incorporated in British India)

ESTD. 1906.

HEAD OFFICE: **UDIPI**, *South Kanara*

SEASON DEPOSITS

ARE now accepted at all our Offices at the following rates of interest :

2 & 3 months	... ...	3% p. a.
4 & 5 "	... ...	$3\frac{1}{2}$% p. a.

These deposits will not be allowed to run beyond September 1941.

ಈ ವಾರದ ಕತೆ:

ಕುರುಡಿ ಹುಚ್ಚಿ!

ಜಬಲ್‌ಪುರದಿಂದ ಮೂರು ಮೈಲು ದೂರದಲ್ಲಿ ನರ್ಮದಾ ಎಂಬ ನದಿ ಹರಿಯುತ್ತದೆ. ಅದರ ದಂಡೆಯ ಮೇಲೆ ತುಳಸೀಘಟ್ಟ ಎಂಬ ಒಂದು ಬಹು ರಮಣೀಯ ಸ್ಥಾನವಿದೆ. ಅಲ್ಲಿಯೇ ಈಗ ಸ್ವಲ್ಪ ಸಮಯದಿಂದ ಕೆಲವು ಜನ ಸಾಧುಸಂತರು ಇರತೊಡಗಿದ್ದಾರೆ. ಅವರು ಯಥಾರ್ಥವಾಗಿಯೂ ಸಾಧುಗಳು, ಸಂತರು! ಇವರೊಳಗೆ ಒಬ್ಬ ಗ್ರಾಜುವೇಟ್ ಸಾಧುವೂ ಬಂದು ನೆಲಸಿದ್ದಾನೆ. ಬಿ.ಎ. ಪಾಸು ಮಾಡಿದ ಅನಂತರವೂ ಅವನಿಗೆ ಈ ಪ್ರಪಂಚವು ನೀರಸವಾಗಿ ಕಂಡುಬಂದಿದೆ. ಪ್ರಪಂಚದೊಳಗಿನ ಯಾವತ್ತು ಜೀವಜಂತುಗಳ ಮೇಲೆ ಅವನಿಗೆ ಅತಿಶಯ ಪ್ರೇಮವಿದೆ. ಅವನ ಪಾಲಿಗೆ ಪ್ರೇಮವೇ ದೇವರು, ದೇವರೇ ಪ್ರೇಮ. ಹಳ್ಳಿ ಜನರ ಮೇಲೆ ಅವನ ಈ ಪ್ರೇಮಮಯ ಜೀವನದ ತುಂಬಾ ಪ್ರಭಾವ ಬಿದ್ದಿದೆ. ಅವರೂ ಪ್ರೇಮಿಗಳಾಗಿದ್ದಾರೆ. ಸುಂದರಕಾಯನೂ ಹೃಷ್ಟಪುಷ್ಟನೂ ಆಗಿರುವ ಈ ಮಹಾಸಾಧುವನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಗಿದೆ. ಅನೇಕರು ನಾನಾ ಬಗೆಯ ಭಾವನೆಗಳನ್ನು ಮನಸ್ಸಿನೊಳಗೆ ತಂದಿದ್ದಾರೆ. ಈ ತರುಣ ಸಾಧುವು ಯಾರಿರಬಹುದು? ಎಲ್ಲಿಂದ ಬಂದಿರಬಹುದು? ಯಾಕೆ ಇಲ್ಲಿ ಬಂದಿರಬಹುದು? ಎಂದು ತರ್ಕವಿತರ್ಕಗಳು ನಡೆಯತೊಡಗಿವೆ.

★

ಪ್ರಾತಃಕಾಲದ ಸಮಯ. ಆಗ ತಾನೇ ಸೂರ್ಯೋದಯವಾಗಿತ್ತು ಮಾತ್ರ. ಎಲ್ಲೆಲ್ಲೂ ಸೌಂದರ್ಯದ, ರಮಣೀಯತೆಯ ದಿವ್ಯ ನೃತ್ಯವಾಗುತ್ತಿತ್ತು. ಒಂಭತ್ತು ಗಂಟೆ ಆಗಿರಬಹುದು. ಆಗಲೇ ಊರಿನ ಇಬ್ಬರು ಮೂವರು ಮಾನ್ಯಜನರು ಬಂದು 'ಮಹಾರಾಜ! ತಮ್ಮ ಆಗಮನವಾದ ಮೇಲೆ ನಮ್ಮೊಳಗೆ ಕಲಹವಾದುದೇ ಇಲ್ಲ. ಆದರೆ ಈಗ ಮಾತ್ರ'

'ಏನು, ಕಲಹವಾಗುತ್ತಿದೆಯೆ? ಪರಸ್ಪರ ಪ್ರೇಮದಿಂದಿರಬೇಕಾದ್ದನ್ನು ಮರೆತಿರಾ?' ಎಂದ ಸಾಧು ಕೇಳಿದ.

'ಇಲ್ಲ, ಮಹಾರಾಜ! ನಮ್ಮಗಳ ಮನೆ ಹೆಂಗಸರು ಉನ್ಮತ್ತರಾಗಿದ್ದಾರೆ. ಅವರು ತಾವು ಜಗಳಾಡುತ್ತಾರೆ, ಮತ್ತೆ ನಮ್ಮನ್ನು ಜಗಳ ಮಾಡಿಸುತ್ತಾರೆ.'

'ಕಾರಣ?'

'ಮಹಾರಾಜ! ನರ್ಮದಾತೀರಕ್ಕೆ ಒಬ್ಬ ಹುಚ್ಚಿ ಬಂದಿದ್ದಾಳೆ. ಅವಳು ಹುಚ್ಚಿಯಷ್ಟೇ ಅಲ್ಲ, ಕುರುಡಿಯೂ ಆಗಿದ್ದಾಳೆ. ಹೆಂಗಸರಿಗೆ ಅವಳ ಮೇಲೆ ಶ್ರದ್ಧೆ ಉಂಟಾಗಿದೆ. ಬೆಳಗ್ಗೆ ಸಾಯಂಕಾಲ ಅವಳ ಬಳಿಗೆ ಹೋಗುತ್ತಾ ಬರುತ್ತಾ ಇದ್ದಾರೆ.'

'ಹುಚ್ಚಿ! ಯಾರವಳು?'

'ಮಹಾರಾಜ, ಅದು ನಮಗೆ ತಿಳಿ ಕೇಳಿ ಹೇಳುವೆವು.'

★

ರುದಿನ—

ಬ್ಬ ವ್ಯಕ್ತಿಯು ಬಂದು ಹೇಳಿದ—

'ಮಹಾರಾಜ, ನನ್ನಾಕೆ ಅವಳ ಉಪದೇಶವನ್ನು ಕೇಳಿದ್ದು ಮಾತ್ರವಲ್ಲ, ಚರಿತ್ರವನ್ನೂ ತಿಳಿದಿದ್ದಾಳೆ'.

'ಏನನ್ನುತ್ತಾಳೆ, ಅವಳು?'

'ಅವಳು ಒಬ್ಬ ಬ್ರಾಹ್ಮಣನ ಮಗಳಂತೆ. ಆತ ಕಚೇರಿಯಲ್ಲಿ ನೌಕರಿ ಮಾಡುತ್ತಿದ್ದ. ಅವಳ ಅಣ್ಣ ಅಲಹಾಬಾದಿನಲ್ಲಿ ಬೇರಿಸ್ಟರನಾಗಿದ್ದಾನೆ ಹೌದು. ಅವಳು ಆ ಬೇರಿಸ್ಟರನ ತಂಗಿ. ಅಲ್ಲಿ ಅವಳು ಮೆಟ್ರಿಕ್ ಪರೀಕ್ಷೆಗೆ ಓದುತ್ತಿದ್ದಳು. ಆದರೆ ಯಾಕಾಗಿಯೋ ಅಪಸ್ಮಾರ ರೋಗ ಬಂದಿತಂತೆ. ತಾಯಿ ತಂದೆಗಳು ಇವಳ ಓದನ್ನು ನಿಲ್ಲಿಸಿದರು. ಆದರೆ ಓದುತ್ತಿದ್ದಾಗ ಅವಳಿಗೆ ಒಬ್ಬ ಕಾಯಸ್ಥ ಕುಮಾರನ ಮೇಲೆ ಪ್ರೇಮವಾಯಿತಂತೆ. ಆದರೆ ತಾಯಿತಂದೆಗಳು ವಿವಾಹಕ್ಕೆ ಒಪ್ಪಲಿಲ್ಲ. ಕಾನ್ಯಕುಬ್ಜ ಜಾತಿ, ಮೇಲಿನದ್ದು. ಕಾಯಸ್ಥ ಜಾತಿ ಕೀಳಾದ್ದು. ಮೇಲು ಜಾತಿಯ ಹೆಣ್ಣನ್ನು ಕೀಳು ಜಾತಿಯವನಿಗೆ ಕೊಡುವುದು ಹೇಗೆ? ಅವಳು ಮನೆಯಲ್ಲೇ ಇರತೊಡಗಿದಳು. ಅಪಸ್ಮಾರವು ಚಿಕಿತ್ಸೆಯಿಂದ ಗುಣವಾಗುತ್ತಿದ್ದ ಹಾಗೆ ಅವಳಿಗೆ ಉನ್ಮಾದವು ಉಂಟಾಯಿತು. ಯಾವಾಗಲೂ ಅವಳು 'ಅವನು ನನ್ನವನು, ಅವನು ಬಂದೇ ಬರುವನು' ಎಂದು ಮಣಮಣಿಸುತ್ತಿದ್ದಳು. ಆದರೆ ಈ ಮಾತಿನ ಅರ್ಥ ಯಾರಿಗೂ ತಿಳಿದಿರಲಿಲ್ಲ. ಯಾರಾದರೂ ಅದನ್ನು ತಿಳಿಯುವ ಪ್ರಯತ್ನಕ್ಕೆ ಹೋಗಲೂ ಇಲ್ಲ.

'ಹೀಗೆ ಆಶೆನಿರಾಶೆಗಳಲ್ಲಿ ಅವಳ ಜೀವನದ ನಾಲ್ಕು ವರ್ಷಗಳು ಕಳೆದುವು. ಆ ಸಮಯಕ್ಕೆ ಸಿಡುಬು ಆಗಿ ಅವಳ ಎರಡು ಕಣ್ಣುಗಳೂ ಹೋದುವು. ಅವಳು ಕುರುಡಿಯಾದಳು. ಹುಚ್ಚಿಯೂ ಕುರುಡಿಯೂ ಆದ ಅವಳು ಒಂದು ದಿನ ರಾತ್ರಿ ಮನೆಯಿಂದ ಹೊರಬಿದ್ದಳು. ಗಂಗಾತೀರಕ್ಕೆ ಹೋದಳು. ಅದರಲ್ಲಿ ಹಾರಿದಳು. ಮರುದಿನ ತಾನು ಜೀವಿಸಿರುವುದನ್ನು ಅನುಭವಕ್ಕೆ ತಂದು ಅವಳಿಗೆ ಪರಮಾಶ್ಚರ್ಯವಾಯಿತಂತೆ. ಎದ್ದಾಗ ಒಬ್ಬ ವ್ಯಕ್ತಿ ಅವಳನ್ನು ತಡೆದ. 'ನೀನು ಯಾರು?' ಎಂದು ಅವಳು ಪ್ರಶ್ನಿಸಿದಳು.

'ನಾನು ಒಬ್ಬ ಸಾಧು.'

'ಇಲ್ಲಿಗೆ ಹೇಗೆ ಬಂದೆ?'

'ಗಂಗಾ ತೀರಕ್ಕೆ ಸ್ನಾನಕ್ಕೆ ಹೋಗಿದ್ದಾಗ ನೀನು ಮೂರ್ಛೆಗತಳಾಗಿ ಬಿದ್ದಿರುವುದನ್ನು ನೋಡಿದೆ. ಆದುದರಿಂದ ಎತ್ತಿಕೊಂಡು ಇಲ್ಲಿಗೆ ತಂದೆ.'

'ಈಗ ಎಲ್ಲಿಗೆ ಹೋಗುವಿ?'

'ನಾಳೆ ತುಳಸೀಘಟ್ಟದಲ್ಲಿ ದೊಡ್ಡ ಜಾತ್ರೆ. ಅಲ್ಲಿಗೇ ಹೋಗುವ ವಿಚಾರ ಉಂಟು.'

ಆಗ ಅವಳು 'ನಾನೂ ಒಬ್ಬ ಸಾಧು. ನನ್ನನ್ನೂ ಕರಕೊಂಡು ಹೋಗು' ಎಂದಳಂತೆ. ಇಬ್ಬರೂ ತುಳಸೀಘಟ್ಟಕ್ಕೆ ಬಂದರು. ಮತ್ತೆ ಆ ಸಾಧು ಎಲ್ಲಿಯೋ ಅದೃಶ್ಯನಾದ. ಅವಳೀಗ ಹುಚ್ಚಳಂತೆ— 'ನರ್ಮದಾ ನ. ಮರ್ದಾ' ಎಂದು ಜಪ ಮಾಡುತ್ತಾಳೆ. ಅವಳ ಮುಗ್ಧತೆಯನ್ನು ನೋಡಿ ನಮ್ಮ ಹೆಂಗಸರಿಗೆ ಗಂಡಸರಾದ ನಮ್ಮ ಮೇಲೆ ಕ್ರೋಧ ಉಂಟಾಗಿದೆ. ಅವರು ಮುಯ್ಯಿಗೆ ಮುಯ್ಯಿ ತೀರಿಸುವ ಪಂಥ ಹಾಕಿದ್ದಾರೆ.'

'ಅವಳು ಉದ್ದಗೆ, ತೆಳ್ಳಗಿನ ಪ್ರಕೃತಿಯವಳಾಗಿದ್ದಾಳೆಯೆ? ಗೌರವರ್ಣವಾಗಿದ್ದಾಳೆಯೆ? ನೋಡಲಿಕ್ಕೆ ಸುರೂಪಿಯಾಗಿದ್ದಾಳೆಯೆ?' ಎಂದು ಸಾಧು ಕತೆಯನ್ನು ಕೇಳಿ ಬಹಳ ಕಳವಳಿಸಿದ ಹಾಗೆ ಒಂದರ ಹಿಂದೆ ಅನೇಕ ಪ್ರಶ್ನೆಗಳನ್ನು ಕೇಳಿದ. ಪ್ರಶ್ನೆಗಳನ್ನು ಕೇಳುತ್ತಿದ್ದ ಹಾಗೆ ಅವನ ಕಣ್ಣುಗಳು ನೀರನ್ನು ತೊಟ್ಟಿಕ್ಕಿದುವು. ಬಂದ ಹಳ್ಳಿಗ ಹೇಳಿದ 'ಮಹಾರಾಜ, ಹೌದು, ಅವಳು ನೀವು ಹೇಳಿದ ಹಾಗೆಯೇ ಇದ್ದಾಳೆ! ಈಗ ಬಹಳ ರಾತ್ರಿಯಾಯಿತು. ನಾಳೆ ನೀವೇ ಹೋಗಿ ನೋಡಬೇಕು. ಆಗ ನಿಮಗೆ ನಾವು ಹೇಳುವುದರ ಸತ್ಯ ತಿಳಿಯುತ್ತದೆ.'

★

ರಾತ್ರಿ ಎರಡು ಗಂಟೆಯಾಗಿತ್ತಾದರೂ ತರುಣ ಸಾಧುವಿಗೆ ನಿದ್ದೆ ಬರಲಿಲ್ಲ. ಅವನ ಹೃದಯಸಾಗರದಲ್ಲಿ ನಾನಾ ಪ್ರಕಾರದ ವಿಚಾರತರಂಗಗಳು ಏಳುತ್ತಿದ್ದುವು. ಅವನು ಎದ್ದನು. ಮತ್ತು ಅಂಗೋಪಾಂಗಗಳನ್ನು ಮರಕಟ್ಟಿಸುವ ಚಳಿಯಲ್ಲಿ ತತ್ತರಿಸುತ್ತ ಆ ಹುಚ್ಚಿ ಇದ್ದಲ್ಲಿಗೆ ಹೋದ. ಆಗಲೂ ಅವಳು 'ಅವನು ಬರುವನು ಬಂದೇ ಬರುವನು' ಎಂದು ಮಣಮಣಿಸುತ್ತಿದ್ದಳು. ಅದನ್ನು ನೋಡಿ ಅವನ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿದು ಹೋಗಿ ಉಟ್ಟ ಕಾವಿ ಬಟ್ಟೆಯು ಮಳೆಯಲ್ಲಿ ನೆನೆದ ಹಾಗೆ ತೋಯಿಸಿತು. ಓಡಿಹೋಗಿ ಅವನು ಅವಳ ಚರಣಪ್ರದೇಶಗಳ ಮೇಲೆ ತನ್ನ ಮಸ್ತಕವನ್ನಿಟ್ಟು ಅಪರಾಧವನ್ನು ಕ್ಷಮಿಸಬೇಕೆಂದು ಕೈಮುಗಿದು ಬೇಡಿದ.

'ಈ ಅಪರ ರಾತ್ರಿಯಲ್ಲಿ ನೀನು ಯಾರು?' ಎಂದು ಕೇಳಿದಳು.

'ನಾನು, ಅವನೇ, ನಿನ್ನನ್ನು ಪ್ರೇಮಿಸಿದ ಸಹಚಾರಿ ನರ್ಮದಾ.'

'ಯಾರು? ನಿಜವಾಗಿಯೂ ನೀನು, ಅವನೇ ನ. ಮ. ದಾ. ಕುಮಾರನೆ?'

'ಹೌದು ಕೃಷ್ಣಾಕುಮಾರಿ!'

★

ಮರುದಿನ ನರ್ಮದಾ ತೀರದ ಮೇಲೆ ಬಹಳ ಜನಸಂದಣಿ. ಒಂದು ಮಹಾ ಜಾತ್ರೆಗೆ ಕೂಡುವುದಕ್ಕಿಂತಲೂ ಹೆಚ್ಚಾದ ಸ್ತ್ರೀಪುರುಷ ಮಕ್ಕಳು ಅಲ್ಲಿ ನೆರೆದಿದ್ದರು. ಆ ಜನಸಮೂಹದ ನಡುವೆ ತರುಣ ಸಾಧು ಮತ್ತು ಮತ್ತು ಕುರುಡಿ ಹುಚ್ಚಿ ಒಂದು ಸಿಂಹಾಸನದ ಮೇಲೆ ಆಸೀನರಾಗಿದ್ದರು. ಇಬ್ಬರ ಮೋರೆಯ ಮೇಲೆ ಅಪೂರ್ವ ಪ್ರಸನ್ನತೆಯು ಪ್ರಕಾಶಮಾನವಾಗಿ ಪ್ರಕಾಶಿಸುತ್ತಿತ್ತು. ಜನರಿಗೆ ಈಗ ಖಚಿತವಾಯಿತು. 'ಇವರು ಪೂರ್ವ ಜನ್ಮದಲ್ಲಿ ಪತಿಪತ್ನಿಯರಾಗಿದ್ದರು. ಈಗ ಹಾಗೆಯೇ ಆದರು.'

—'ಯುಗಾಂತರ'

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE: ESTD. 1906 CANARA BANK LIMITED

HALFTONE & LINE BLOCK MAKING UNDERTAKEN

Sharada Press, MANGALORE

ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರ ಸಭೆ

ಮಂಗಳೂರು ನಗರ ಸಭೆಯು ವೈಸ್ ಚೇರ್ ಮೇನ್ ಶ್ರೀ ಎಲ್. ಸಿ. ಪಾಯಿಸರ ಅಧ್ಯಕ್ಷತೆಯಲ್ಲಿ ತಾ. ೩ರಂದು ಸೇರಿತು. ದಿವಂಗತ ಶ್ರೀನಿವಾಸ ಅಯ್ಯಂಗಾರರ ಹಾಗೂ ಮದ್ರಾಸು ಮೇಯರರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವುಗಳು ಮಂಜೂರಾದುವು.

ಮುನ್ಸಿಪಲ್ ಪ್ರಾವಿಡೆಂಟ್ ಫಂಡಿನ ರೂ. ಮೂರು ಸಾವಿರವನ್ನು ಇಂಡಿಯಾ ಸರಕಾರದ ಡಿಫೆನ್ಸ್ ಬಾಂಡಿನಲ್ಲಿ ವಿನಿಯೋಗಿಸುವ ಬದಲು ದ. ಕ. ಸೆಂಟ್ರಲ್ ಕೋಪರೇಟಿವ್ ಬೇಂಕಿನಲ್ಲಿ ವಿನಿಯೋಗಿಸುವಂತೆ ನಿರ್ಧಾರವಾಯಿತು.

ಚಯರ್‌ಮ್ಯಾನರಾಗಿದ್ದ ಶ್ರೀ. ವೆಂಕಟ್ರಾಯ ಬಾಳಿಗರು ಸತ್ಯಾಗ್ರಹದಿಂದ ಕಾರಾಗ್ರಹ ವಾಸಿಗಳಾಗಿ ಮೀಟಿಂಗುಗಳಿಗೆ ಹಾಜರಿಲ್ಲದ ನಿಮಿತ್ತ ಅವರ ಸದಸ್ಯತನ ರದ್ದಾಗುವುದೆಂದು ಸರಕಾರೀ ನಿಯಮವಿದ್ದ ಬಗ್ಗೆ ಶ್ರೀ. ಕ್ರೀಷ್ಮರು ವಾದಿಸಿದರು. ಬಾಳಿಗರು ಇನ್ನೂ ಮುನ್ಸಿಪಲ್ ಕೌನ್ಸಿಲರಾಗಿಯೇ ಇರುವರೆಂದು ಶ್ರೀ. ಎಂ. ಆರ್. ಭಟ್ಟರು ತಂದ ಠರಾವು ಡಾ. ವಿಟ್ಠಲ ಶೆಟ್ರ ಅನುಮೋದನೆಯಿಂದ ಮಾನ್ಯವಾಯಿತು.

ಟ್ರಾಫಿಕ್ ಕೇಂದ್ರದಲ್ಲಿ ಪೋಲಿಸರಿಗೆ ಸಣ್ಣ ಪ್ಲಾಟ್ ಫಾರ್ಮು ಕಟ್ಟಬೇಕೆಂಬ ಕುರಿತು ಅಂದಾಜು ಪಟ್ಟಿ ಕೇಳಲಾಯಿತು.

ಕ್ರೋಟಿಸ್ಸರ ಸಿಬಂದಿಗೆ ಉಚಿತ ಉಡಿಗೆಗಳನ್ನು ಕೊಡುವರೆ ರೂ. ೪೭೦ ಮಂಜೂರಾಯಿತು.

ವಿವೇಕಾನಂದ ಸಭೆ

ಪ್ರವಚನಗಳು:—೧-೬-೪೧. ಸ್ವಾಮಿ ಸಂಬುದ್ಧಾನಂದಜಿ 'ಶ್ರೀ. ರಾಮಕೃಷ್ಣ ಪರಮಹಂಸರ ಹೊಸ ಪಂಥವು'; ೮-೬-೪೧ ವೇ॥ ಕುಮಟಿ ನಾರಾಯಣ ಆಚಾರ್ಯ—ಗೀತಾ ಅಧ್ಯಾಯ ೪, ಶ್ಲೋಕ ೧೧. ೧೫-೬-೪೧ ಶ್ರೀ. ಎಸ್. ರಾಮಚಂದ್ರ ಅಯ್ಯರ್, ಗೀತೆಯ ೩, ೪ನೆಯ ಅಧ್ಯಾಯಗಳನ್ನನುಸರಿಸಿ ಪಾರಮಾರ್ಥಿಕ ಜೀವನದ ಪ್ರಥಮ ಸೋಪಾನಗಳು. ೨೨-೬-೪೧ ಶ್ರೀ. ಎಂ. ನರಸಿಂಗರಾವ್, ಗೀತಾ ಅಧ್ಯಾಯ ೪, ಶ್ಲೋಕ ೧೧. ೨೯-೬-೪೧ ವೇ॥ ಗೋಕರ್ಣ ಮಾಧವ ಭಟ್ಟ, ಗೀತಾ ಅಧ್ಯಾಯ ೯ ಶ್ಲೋಕ ೩೪. ಸರ್ವರಿಗೂ ಸ್ವಾಗತವಿದೆ.

ರೆಡ್ ಕ್ರಾಸ್ ಸೊಸೈಟಿ

ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಮಂಗಳೂರು ಜಿಲ್ಲಾ ಶಾಖೆಯ ವಾರ್ಷಿಕ ಸಭೆಯು ತಾ. ೩ರಂದು ಸಂಘದ ಅಧ್ಯಕ್ಷ ಶ್ರೀ. ನ್ಯಂ. ವೆಂಕಟೇಶ ಪೈಗಳ ಅಧ್ಯಕ್ಷತೆಯಿಂದ ಜರಗಿತು. ವರದಿ ವಾಚನ, ಲೆಕ್ಕಪತ್ರ ಪರಿಶೋಧನೆಗಳಾಗಿ ಸಂಘದ ಹೊಸ ನಿಯಮಾವಳಿಗಳು ಮಂಜೂರಾಗಿ ಹೊಸ ಕಾರ್ಯಕಾರೀ ಮಂಡಳಿಯು ಸ್ಥಾಪಿತವಾಯಿತು.

ಶ್ರೀ. ಎಚ್. ವಿ. ಕಾಮತರ ಆಗಮನ

ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಜನರಲ್ ಸೆಕ್ರೆಟರಿಗಳಾದ ಶ್ರೀ. ಯಂದಿ ವಿಷ್ಣು ಕಾಮತರು (ಐ. ಸಿ. ಎಸ್. ಕೆಲಸಕ್ಕೆ ರಾಜಿನಾಮೆ ಕೊಟ್ಟವರು) ತಮ್ಮೂರಾದ ಮಂಗಳೂರಿಗೆ ಬಂದಿರುವರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನ

ಬಾವಟೆ ಗುಡ್ಡೆಯಲ್ಲಿ (ಮಹಿಳಾ ಸಭೆಯ ಎದುರು) ಜೂನ್ ೬ನೆಯ ತಾರೀಕಿನಿಂದ ಬಂಟರ ಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನವು ಸ್ಥಾಪಿತವಾಗುವುದು.

ರಾಜಿನಾಮೆ

ಡಾ॥ ಕೆ. ಕೆ. ಹೆಗ್ಗಡೆಯವರೂ ಶ್ರೀಮತಿ ನಾಡಮ್ಮನವರೂ ಮಂಗಳೂರು ಬೆಂಚ್ ಕೋರ್ಟಿನ ತಮ್ಮ ಗೌರವ ಮೆಜಿಸ್ಟ್ರೇಟರ ಸ್ಥಾನಗಳಿಗೆ ರಾಜಿನಾಮೆ ಕೊಟ್ಟಿರುವರೆಂದು ತಿಳಿದಿದೆ.

ವರ್ಗ

ಕಾಸರಗೋಡು ಮುನ್ಸಿಫರಾಗಿ ಶ್ರೀ. ಜಿ. ನಾಗೀ ರೆಡ್ಡಿ ಬಿ. ಎ. ಬಿ. ಎಲ್. ಇವರು ವಿಜಯನಗರದಿಂದಲೂ, ಕಾರ್ಕಳದ ಮುನ್ಸಿಫರಾಗಿ ಶ್ರೀ. ಕೆ. ಆರ್. ಕೃಷ್ಣಯ್ಯ ಶೆಟ್ಟಿ ಬಿ. ಎ. ಬಿ. ಎಲ್. ಇವರು ನಂದ್ಯಾಲದಿಂದಲೂ ವರ್ಗಾಯಿಸಲ್ಪಟ್ಟಿರುವರು.

ಡಾ॥ ಬಿ. ಎಂ. ಬಾಳಿಗರು ದೇವಿಕೋಟೆಯಿಂದ ಮಂಗಳೂರು ಆಸ್ಪತ್ರೆಗೆ ಅಸಿ॥ ಮೆಡಿಕಲ್ ಆಫೀಸರರಾಗಿಯೂ, ಶ್ರೀ. ಎಚ್. ನಾಗಪ್ಪ ಬಿ. ಎ. ಇವರು ಬೈಂದೂರು ರೇಂಜಿನ ಎಕ್ಸೈಸ್ ಸಬ್ ಇನ್ಸ್‌ಪೆಕ್ಟರರ ಸ್ಥಾನದಿಂದ ಕಾರ್ಕಳ ತಾಲೂಕಿನ ಅಸಿ ಕಮರ್ಶಿಯಲ್ ಆಫೀಸರರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಶ್ರೀ. ಪಿ. ಅರ್. ನ್ಯಾಕ ಐ. ಸಿ. ಎಸ್. ಇವರು ಇಂಡಿಯಾ ಸರಕಾರದ (ಯುದ್ಧ ಶಾಖೆ) ಸ್ಟೋರ್ ಡಿಪಾರ್ಟ್‌ಮೆಂಟಿನ ಡೆಪ್ಯುಟಿ ಡೈರೆಕ್ಟರರಾಗಿ ಇಲ್ಲಿಗೆ ಕರಾಚಿಯಿಂದ ವರ್ಗಾಯಿಸಲ್ಪಟ್ಟಿದ್ದಾರೆ.

ಕೈಯ್ಯೂರು ಘಟನೆಯ ತನಿಕೆಗೆ ಸ್ಪೆಶಲ್ ಮ್ಯಾಜಿಸ್ಟ್ರೇಟರು

ಕೈಯ್ಯೂರು ಘಟನೆಯ ತನಿಖೆ ನಡೆಯಿಸಲು, ಕುಂದಾಪುರದ ತಹಶಿಲ್‌ದಾರರಾದ ಶ್ರೀ. ಎಮ್. ಬಿ. ಶಂಕರರಾವ್ ಬಿ. ಎ. ಇವರನ್ನು ಸ್ಪೆಶಲ್ ಮ್ಯಾಜಿಸ್ಟ್ರೇಟರಾಗಿ ನೇಮಕ ಮಾಡಲಾಗಿದೆ. ಇದು ವರೆಗೆ ಪೋಲೀಸರವರು ೬೧ ಜನಗಳ ಮೇಲೆ 'ಚಾರ್ಜ್ ಶೀಟು' ಹಾಗಿರುತ್ತಾರೆ. ಮತ್ತು ಅವರಲ್ಲಿ ೫೫ ಜನಗಳು ಕೈದಾಗಿ ರಿಮಾಂಡಿನಲ್ಲಿರಿಸಲ್ಪಟ್ಟಿರುವರು.

ಅವಗಡ

ಇಲ್ಲಿಯ ಟೌನ್ ಪೋಲೀಸ್ ಸ್ಟೇಶನಿನ ಎಸ್. ಎಚ್. ಓ. ಗಳಾದ ಶ್ರೀ. ಅಂತಪ್ಪ ಬಿ. ಎ. ಬಿ. ಎಲ್. ಇವರು ಕಳೆದ ಸೋಮವಾರ ರಾತ್ರಿ ಕೋರನೇಶನ್ ಗಾರ್ಡನ್ ಬಳಿ ರಸ್ತೆಗಳು ಕೂಡುವಲ್ಲಿ ಒಂದು ಕಾರಿನ ಅವಗಡಕ್ಕೆ ಸಿಕ್ಕಿ, ಜಕಂಗಳಾಗಿ, ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಗಾಗಿದ್ದಾರೆ. ಕಾರು ನಡೆಸುತ್ತಿದ್ದ ಶ್ರೀ. ಪದ್ಮನಾಭನ್ ಎಂಬಾತನ ಮೇಲೆ ತಕ್ಕ ಕಾರ್ಯಕ್ರಮಗಳನ್ನು ಜರಗಿಸಲಾಗಿದೆ.

ಅತೃಪ್ತಿ ಸೂಚನೆಯ ಸಭೆ

ಶ್ರೀ. ಎಸ್. ಎನ್. ಹೊಳ್ಳರಿಗೆ ಸತ್ಯಾಗ್ರಹದ ಸಂಬಂಧ ಸಜೆಯಾಗಿ ಅವರಿಗೆ ನ್ಯಾಯಾಧೀಶರು "ಬಿ" ತರಗತಿ ಕೊಟ್ಟಿದ್ದರೂ ಆಲಿಪುರಂ ಜೈಲಲ್ಲಿ ಅವರನ್ನು "ಸಿ" ಕ್ಲಾಸ್ ಕೈದಿಯಂತೆ ನಡೆಸುವ ಬಗ್ಗೆ ಅತೃಪ್ತಿ ಸೂಚಿಸಲು ನಿನ್ನೆ ಸಂಜೆ ಮೈದಾನಿನಲ್ಲಿ ಒಂದು ಸಾರ್ವಜನಿಕ ಸಭೆ ಶ್ರೀ. ಕೆ. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ. ಕೇಶವ ಕಾಮತ್ ಮೊದಲಾದವರು ಭಾಷಣ ಮಾಡಿದರು.

ರಿಜರ್ವ್ ಕಾಡುಗಳ ವಿಚಾರ

ದ. ಕ. ಜಿಲ್ಲಾ ಕಲೆಕ್ಟರರ ಪ್ರಕಟಣೆ

ರಿಜರ್ವ್ ಕಾಡುಗಳಿಗೆ ೧ ಫರ್ಲಾಂಗ್ ದೂರ ನಿಲ್ಲುವವರು, ತಮ್ಮ ನಿವಾಸದಿಂದ ಫರ್ಲಾಂಗ್ ಫಾಸಲೆಯೊಳಗಿರುವ ರಿಜರ್ವ್ ಅರಣ್ಯಗಳಿಂದ ಮರಮಟ್ಟು ಕಡಿದು ಸ್ವಂತ ಮನೆಗಾಗಿ ಅಥವಾ ಬೇಸಾಯಕ್ಕಾಗಿ ಉಪಯೋಗಿಸಿಕೊಳ್ಳಬಹುದು. ಆದರೆ ಅರಣ್ಯ ಕಾಯುವವರಿಗೆ ಅಗತ್ಯವಾದ ಮನ್ನು ಅವರಿಗೆ ಒದಗಿಸಿಕೊಡಬೇಕು. ಕಡಿದ ಮರಗಳನ್ನು ಒಲೆ ಉರಿಸುವ ಸೌದೆಯಾಗಿ ಉಪಯೋಗಿಸಬಾರದು. ರಿಜರ್ವ್ ಅಲ್ಲದ ಕಾಡುಗಳಲ್ಲಿಯೂ ಇದೇ ರೀತಿಯ ಹಕ್ಕು ಕೊಡಲಾಗಿದೆ. ಮೇರೆಗೆ ಮೀರಿದ ಸ್ಥಳಗಳ ವಿಷಯದಲ್ಲಿ ಅಧಿಕಾರಿಗಳಿಂದ ತಿಳಿದು ವರ್ತಿಸಬೇಕು ಎಂದು ಮುಂತಾಗಿ ದ. ಕ. ಜಿಲ್ಲಾ ಕಲೆಕ್ಟರರ ಪ್ರಕಟನೆ.

ಸೆಂಟ್ರಲ್ ಟಾಕೀಸ್

ಮೊದಲಿನ ಕೃಷ್ಣ ಸಿನೆಮಾದ ಸ್ಥಳದಲ್ಲಿ ಹೊಸತಾಗಿ ಭವ್ಯವಾಗಿ ಕಟ್ಟಿಸಿದ ನೂತನ ಸಿನೆಮಾ ಮಂದಿರ ಸೆಂಟ್ರಲ್ ಟಾಕೀಸಿನಲ್ಲಿ ಬೇಗನೆ ಸಿನೆಮಾ ಪ್ರದರ್ಶನವು ಆರಂಭವಾಗುವುದಾಗಿ ನಾವು ಕೇಳುತ್ತೇವೆ. ಅತ್ಯುತ್ತಮವಾದ ಮೆಶಿನರಿಗಳಿಂದ ಕೂಡಿದ್ದು, ಮಂಗಳೂರಿನ ಕೇಂದ್ರ ಸ್ಥಳದಲ್ಲಿರುವ ಈ ಸಿನೆಮಾ ಮಂದಿರವು ಎಲ್ಲಾ ವಿಧದ ಸಾಕರ್ಯಗಳುಳ್ಳದ್ದಾಗಿ ಹೆಚ್ಚಿನ ಜನಪ್ರಿಯವಾಗುವುದೆಂದು ನಾವು ತಿಳಿಯುತ್ತೇವೆ. ಉತ್ತಮ ಚಿತ್ರವೊಂದು ಸದ್ಯದಲ್ಲಿಯೇ ಪ್ರದರ್ಶಿತವಾಗಲಿದೆ.

ದಕ್ಷಿಣ ಕನ್ನಡ ಸೌಹಾರ್ದ ಮಂಡಳಿ

ಇದರ ಸಭೆಯೊಂದು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಡಾ॥ ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಸೇರಿ, ಹಿಂದೂ ಮುಸ್ಲಿಂ ಗಲಭೆಯಾಗದಂತೆ ಸ್ಥಾಪಿತವಾದೀ ಸಂಘವನ್ನು ಶಾಶ್ವತ ಸಂಘವನ್ನಾಗಿ ಮಾಡಬೇಕೆಂದೂ, ಅದರ ನಿಬಂಧನಾವಳಿಗಳನ್ನು ರಚಿಸಬೇಕೆಂದೂ ನಿರ್ಣಯವಾಯಿತು. ಅಲ್ಲಲ್ಲಿ ನಗರದ ವಿಭಾಗಗಳಲ್ಲಿಯೂ ತಾಲೂಕು ಕೇಂದ್ರಗಳಲ್ಲಿಯೂ ಗ್ರೂಪ್ ಕಮಿಟಿಗಳನ್ನು ಏರ್ಪಡಿಸಲಾಯಿತು.

ಸೌಹಾರ್ದ ಮಂಡಳಿಯ ವಿಷಯದಲ್ಲಿ ಸಾರ್ವಜನಿಕ ಮೈದಾನಿನಲ್ಲಿ ಭಾಷಣವೇರ್ಪಡಿಸಬೇಕೆಂಬ ವಿಚಾರ ಬಹಳ ದೀರ್ಘ ಚರ್ಚೆ ನಡೆಯಿತು. ಶ್ರೀಗಳಾದ ಎಂ. ಆರ್. ಭಟ್, ಜನರಾಜ ಹೆಗ್ಡೆ ಮತ್ತು ಮುಹಮ್ಮದ್ ರಹಮಾನ್ ಮೈದಾನು ಭಾಷಣದ ಬಗ್ಗೆ ಆರಿಸಿದರು. ಶ್ರೀಗಳಾದ ಕಾರ್ಕಳ ಸದಾಶಿವ ರಾವ್, ವೈಕುಂಟ ಬಾಳಿಗ ಮತ್ತು ರಂಗನಾಥ ಪೂಂಜರು ಅದನ್ನು ವಿರೋಧಿಸಿ ಮಾತನಾಡಿದರು. ಕಡೆಗೆ ತತ್ಕಾಲಕ್ಕೆ ಅದು ಅಗತ್ಯವಿಲ್ಲವೆಂದೂ ಸಮ್ಮ ಸಂಘದ ನಿಶ್ಚಿತ ಕಾರ್ಯಕ್ರಮಗಳನ್ನು ಗೊತ್ತು ಮಾಡಿಕೊಂಡು ಸಾರ್ವಜನಿಕವಾಗಿ ಮೈದಾನಿನಲ್ಲಿ ಭಾಷಣಗಳ ನ್ನೇರ್ಪಡಿಸಬಹುದೆಂದೂ ಇತ್ಯರ್ಥವಾಯಿತು.

ಪಾಣೆಮಂಗಳೂರು

ಜಿಲ್ಲೆಯೊಳಗೆ ಪ್ರಥಮ ವಾಕ್ ಸ್ವಾತಂತ್ರ ಪಡೆದು ಅನೇಕ ಹಳ್ಳಿಗಳನ್ನು ಸಂದರ್ಶಿಸಿ ಇತ್ತ ಬಂದ ಸತ್ಯಾಗ್ರಹಿ ಶ್ರೀ. ಮುದ್ರಾಡಿ ಕೃಷ್ಣಯ್ಯ ಶೆಟ್ಟರು ತಾ. ೩ರ ಸಾಯಂಕಾಲ ಶ್ರೀ. ಉಪೇಂದ್ರ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಯುದ್ಧವಿರುದ್ಧ ಭಾಷಣಘೋಷಣ ಮಾಡಿದರು.

ಪಡುಕೋಣೆ, ಕೆಮ್ಮಣ್ಣು

ಇಲ್ಲಿಯ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದವರು ತಾ. ೨೮-೫-೪೧ರಲ್ಲಿ ಸದರಿ ಶಾಲೆಯ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ "ಪ್ರತೀಕಾರ" ಅಥವಾ "ಜಯದ್ರಥ ವಧೆ" ಎಂಬ ಬೆನಿಫಿಟ್ ನಾಟಕವನ್ನು ನಟಿಸಿದರು.

ಕಾರ್ಕಳ

ಸಹಕಾರಿಗಳ ಸಭೆ

ಕಾರ್ಕಳ ನಂಬ್ರ ೧೦೧೫ನೇ ಪರಸ್ಪರ ಸಹಕಾರ ಸಂಘದ ಸದಸ್ಯರ ವಾರ್ಷಿಕ ಸಭೆಯು ತಾ. ೧-೬-೯೪೧ರ ದಿನ ಬೋರ್ಡುಮೈನ ಎಲಿಮೆಂಟರಿ ಶಾಲೆಯಲ್ಲಿ ಡಾಕ್ಟರ ಯನ್. ಯಂ. ಅಧ್ಯರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಾಜು ಪಟ್ಟಿ, ಸ್ವಂತ ಕಟ್ಟಡಕ್ಕೆ ಹಣ, ಉಪನಿಬಂಧನೆಗಳ ಕೆಲವು ತಿದ್ದುಪಡಿ ಹೊಸ

[೧೦ನೆಯ ಪುಟ ನೋಡಿ]

ನಲವತ್ತು ವರ್ಷಗಳ ಪ್ರಖ್ಯಾತಿ

ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ

ಸ್ತ್ರೀಯರಿಗುಂಟಾಗುವ ಋತುಶೂಲೆ, ಋತುಬ್ಬುಗದಿರುವಿಕೆ, ಅಕಾಲ ಬಹಿಷ್ಠೆ, ಋತುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾವಾಯು, ಕೀಲುಗಳಲ್ಲಿ ನೋವು, ಅಂಗೈ ಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವಜ್ವರನಿವಾರಿಣಿ

ಆಹಾರ, ವಿಹಾರ, ಋತುಭೇದ ದೋಷಗಳಿಂದ ಆಮಾಶಯದಲ್ಲಿ ಕ್ರಿಮಿಗಳು ಸೇರಿ ನಾನಾ ವಿಧವಾದ ಜ್ವರಗಳು ಸಂಭವಿಸುತ್ತವೆ. ವಾತಜ್ವರ, ಪಿತ್ಥಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಮಜ್ವರಗಳನ್ನೂ, ಹೊಟ್ಟೆಯಲ್ಲಿಯ ಜ್ವರಗಡ್ಡೆಯನ್ನೂ ವಾಸಿಮಾಡುತ್ತೆ.

ರಕ್ತಶುದ್ಧಿ ದ್ರಾವಕ

ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಸೋಮಾರಿತನ, ಮೇಹ ವ್ರಣಗಳು, ಸುಖ ಸಂಕಟಗಳು, ಬಲಹೀನತೆ, ಹೊಟ್ಟೆಯಲ್ಲಿ ಉರಿ ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ, ಮುಖಕ್ಕೆ ತೇಜಸ್ಸನ್ನೂ ಕೊಡುತ್ತೆ. ಈ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್

ರಾಯಪೇಟ :: ಮದರಾಸು.

ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

ಸಿರಿಯಕ್ಕೆ ಜರ್ಮನರ ದಂಡು ಹೊರಟಿದೆ!

ಕ್ರೀಟಿನಿಂದ ಬ್ರಿಟಿಷರು ಹಿಂತೆರಳಿದರು

ಹಿಟ್ಲರ್ ಮುಸಲಿನಿ ಭೇಟಿಯಾದರು!

ಕ್ರೀಟಿನ ರಣರಂಗವು ಕೆಲವು ದಿನಗಳಿಂದ ಪ್ರಪಂಚದ ದೃಷ್ಟಿಯನ್ನು ತನ್ನ ಕಡೆಗೆ ಸೆಳೆದಿತ್ತು. ಜರ್ಮನರು ಅಲ್ಲಿ ಎಂತಹ ಉಗ್ರ ಧಾಳಿಯನ್ನು ಮಾಡುತ್ತಾ ಮುಂದುವರಿದರೆಂಬುದು ದಿಗಿಲುಗೊಳಿಸುವಂತಹ ಸುದ್ದಿಯಾಗಿದ್ದರೂ, ಕ್ರೀಟನ್ನು ಹಿಡಿಯುವುದು ಜರ್ಮನರಿಗೆ ಸಾಧ್ಯವಿಲ್ಲವೆಂದೂ ಮುಂದಿನ ಯೂರೋಪು ಯುದ್ಧದ ಭವಿಷ್ಯವು ಕ್ರೀಟ್ ಕಾಳಗದಲ್ಲಿ ಅಡಕವಾಗಿದೆಯೆಂದೂ ಹಲವು ರಾಜಕಾರಣಿಗಳು ಸಾರಿದ್ದರು. ಆದರೆ, ಕ್ರೀಟು ಇಂದಿನ ಜರ್ಮನರ ವಶವಾಗಿ, ಬ್ರಿಟಿಷರು ಅಲ್ಲಿಂದ ಕಾಲ್ತೆಗೆವ ವಿಷಮ ಪ್ರಸಂಗ ಬಂದಿದೆಯೆಂದು ಆಶ್ಚರ್ಯಕರವಾದ ಸುದ್ದಿ ಬಂದಿದೆ. ಜರ್ಮನ್ ಸೈನ್ಯವು ಸಿರಿಯಾವನ್ನು ನುಗ್ಗಿರುವುದಂತೆ!

ಕ್ರೀಟ್ ಕಾಳಗ ಕೊನೆಗೊಂಡಿತು

ಬ್ರಿಟಿಷ್ ಸೈನ್ಯಗಳು ಕ್ರೀಟಿನಿಂದ ಹಿಂತಿರುಗಿದವರೆಂದು ತಿಳಿದಿದೆ. ೧೫೦೦೦ ಸೈನಿಕರನ್ನು ಇಜಿಪ್ತಿನ ಕಡೆ ಸುರಕ್ಷಿತವಾಗಿ ಸಾಗಿಸಲಾಯಿತಂತೆ.

ಯುದ್ಧ ಕಚೇರಿಯಿಂದ ಪ್ರಕಟಣೆ ಹೊರಟದ್ದು ಹೀಗಿದೆ:

ಇಂದಿನ ಮಹಾಯುದ್ಧದಲ್ಲಿ ಅತ್ಯಂತ ಭೀಕರವೆನಿಸಿದ ಕ್ರೀಟ್ ಕಾಳಗದಲ್ಲಿ ಹನ್ನೆರಡು ದಿನಗಳ ವರೆಗೆ ಕಾದಿದೆವು. ಆದರೆ ಇನ್ನು ಮುಂದೆ ಯುದ್ಧ ಮಾಡಿ ಪ್ರಯೋಜನವಿಲ್ಲವೆಂದು ತೋರಿದ್ದರಿಂದ ನಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಸಬೇಕಾಯಿತು. ಕ್ರೀಟಿನಲ್ಲಿ ಜರ್ಮನರಿಗೆ ಅಪಾರ ಹಾನಿಯಾಗಿದೆ. ನಮ್ಮ ಸೈನ್ಯ ಮತ್ತು ಹಡಗುಗಳು ಅಲ್ಲಿ ಬಹಳ ಹೊತ್ತು ನಿಲ್ಲಲಾರದಾದವು. ವೈರಿಯೊಡನೆ ಕ್ರೀಟಿನಲ್ಲಿ ಇನ್ನು ಮುಂದೆ ಯುದ್ಧ ಮಾಡುವುದು ಅಶಕ್ಯವೆಂದು ಅನಿಸಿತು. ಕ್ರೀಟಿನಲ್ಲಿ ನಮಗೂ ಅಪಾರ ಹಾನಿಯಾಗಿದೆಯೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು.

ಕ್ರೀಟಿನಲ್ಲಿ ಬ್ರಿಟಿಷರಿಗೆ ವಿಮಾನಗೃಹಗಳಿಲ್ಲವಾಗಿ ಅವರು ಅತಿ ದೂರದ ಆಫ್ರಿಕೆಯ ಕೇಂದ್ರಗಳಿಂದ ಯುದ್ಧ ಮಾಡಬೇಕಾಗಿದ್ದರಿಂದ, ಈ ಪರಿಸ್ಥಿತಿಯಲ್ಲಿ ಬಹಳ ದಿನ ಯುದ್ಧ ಮಾಡುವುದು ಶಕ್ಯವಿರಲಿಲ್ಲವಾಗಿ ಬ್ರಿಟಿಷರು ಹಿಂತೆರಳಬೇಕಾಯಿತಂತೆ.

ಜರ್ಮನರ ಮುಂದಿನ ಧಾಳಿ?

ಸಿರಿಯಾಕ್ಕೆ ಧಾಳಿ?

ಜರ್ಮನಿಯು ಮುಂದಕ್ಕೆ ಸಿರಿಯಾವನ್ನು ಧಾಳಿಯಿಡಲು ಮನಸ್ಸು ಮಾಡಿರುವುದೇ ಎಂದು ಈಗ ಅಲ್ಲಿನ ಚಟುವಟಿಕೆಗಳನ್ನು ಪರಿಶೀಲಿಸುತ್ತಿರುವವರು ಅಭಿಪ್ರಾಯ ಪಡುತ್ತಾರೆ. ಸಿರಿಯಾದಲ್ಲಿ ಜರ್ಮನ್ ಚಟುವಟಿಕೆಗಳು ಜೋರಾಗಿವೆ. ಅಸಂಖ್ಯ ಜರ್ಮನ್ ವಿಮಾನಗಳು ಸಿರಿಯಾದ ಕಡೆ ಹೊರಟಿವೆಯೆಂದು ಸುದ್ದಿ. ಅಲ್ಲಿ ಯುದ್ಧ ಸಿದ್ಧತೆ ನಡೆಯುತ್ತದೆ. ಜರ್ಮನ ದಂಡು ಸಿರಿಯಕ್ಕೆ ಬಂದಿಳಿದಿದೆಯಂತೆ.

ಹಿಟ್ಲರ್ ಮುಸಲೋನಿ ಭೇಟಿ

ಹಿಟ್ಲರ್ ಮುಸಲಿನಿಗಳು ತಿರಿಗಿ ಬ್ರೆನ್ನರ್ ಕಣಿವೆಯಲ್ಲಿ ಭೇಟಿಯಾಗಿರುವರೆಂದು ತಿಳಿದಿದೆ.

ಉತ್ತರ ಆಯರ್ಲೆಂಡಿನಲ್ಲಿ ಒತ್ತಾಯದ ಸೈನ್ಯ ರದ್ದಾಯಿತು

ಉತ್ತರ ಆಯರ್ಲೆಂಡಿನಲ್ಲಿ ಬ್ರಿಟಿಷರು ಒತ್ತಾಯದ ಸೈನ್ಯ ಶಿಕ್ಷಣ ಕೊಡಲು ನಿರ್ಧರಿಸಿದ್ದರಷ್ಟೆ? ಆ ಬಗ್ಗೆ ಡಿವೆಲರರು ತೀವ್ರ ಪ್ರತಿಭಟನೆ ತೋರಿಸಿದ್ದರು. ಅದುದರಿಂದ ಬ್ರಿಟಿಷರು ರದ್ದು ಮಾಡಿರುವರೆಂದು ತಿಳಿದುಬರುತ್ತದೆ.

ಇಂಗ್ಲೆಂಡಿಗೆ ಜರ್ಮನ್ ವಿಮಾನ ಧಾಳಿ

೨೦ ಚರ್ಚ್‌ಗಳ ನಾಶ

ಜರ್ಮನ್ ವಿಮಾನಗಳು ತಿರಿಗಿ ಇಂಗ್ಲೆಂಡಿಗೆ ಧಾಳಿಮಾಡಿವೆ. ಅನೇಕ ಕಟ್ಟಡಗಳು ಚರ್ಚುಗಳು ನೆಲಸಮವಾಗಿವೆಯಂತೆ. ಲಂಡನಿನ ಇನ್ನರ್ ಟೆಂಪಲ್ ಎಂಬ ಐತಿಹಾಸಿಕ ಪ್ರಸಿದ್ಧ ಕಟ್ಟಡವೂ ನೆಲಕ್ಕುರುಳಿತು.

ಕ್ರೀಟಿನಿಂದ ಹಿಂದೆಗೆಯುವಾಗ ಬ್ರಿಟಿಷರಿಗೆ ತೊಂದರೆ

ಕ್ರೀಟಿನಿಂದ ಈಜಿಪ್ತಿಗೆ ಹಿಂತೆರಳುವಾಗ ಜರ್ಮನ್ ವಿಮಾನಗಳು ಬ್ರಿಟಿಷ್ ಸೈನ್ಯಕ್ಕೆ ಬಹಳ ತೊಂದರೆ ಕೊಟ್ಟವೆಂದು ತಿಳಿದಿದೆ.

ಇಂಗ್ಲೆಂಡಿಗೆ ಧಾಳಿಯ ಭಯವುಂಟು

ಇಂಗ್ಲೆಂಡಿನ ಮೇಲೆ ಜರ್ಮನ್ ಧಾಳಿಯ ಭಯವು ಇದ್ದೇ ಇರುತ್ತದೆಯೆಂದು ಅಟ್ಲೀಯವರು ಹೇಳುತ್ತಾರೆ.

ಸಿರಿಯವು ಜರ್ಮನಿಯ ವಶವಾದರೆ-

ಟರ್ಕಿ ಧಾಳಿ ಮಾಡಬೇಕು

ವಿಚೀನ ಸರಕಾರವು ಸಿರಿಯವನ್ನು ಒಪ್ಪಿಸಿದರೆ ಟರ್ಕಿಯೂ ಸಿರಿಯದ ಮೇಲೆ ಧಾಳಿಮಾಡಬೇಕೆಂದು ಟರ್ಕಿಯ ವೃತ್ತಪತ್ರಿಕೆಗಳಲ್ಲಿ ಹಲವರು ಸೂಚನೆ ಮಾಡಿರುವರು.

ಬಳ್ಳಾರಿ ಜೈಲಿನಲ್ಲಿ ಸತ್ಯಾಗ್ರಹಿಯ ಮರಣ

ಮುಂಡಪಾಕ ರಂಗಯ್ಯ ನಾಯುಡ

ಕಾಕಿನಾಡ ನಗರಸಭೆಯ ಉಪಾಧ್ಯ ರಾಗಿದ್ದು ಸತ್ಯಾಗ್ರಹ ಹೂಡಿ ಆಲಿಪುರ ಸೆರೆಮನೆಯೊಳಗಿದ್ದ ಶ್ರೀ. ಮುಂಡಪಾ ರಂಗಯ್ಯ ನಾಯುಡು ಇವರು ತಾ. (ರಂದು ಅಕಸ್ಮಿಕ ನಿಧನ ಹೊಂದಿದರು ಈ ದುಃಖ ವಾರ್ತೆಯನ್ನು ಕೇಳಿ ಪು ಜನರು ಗುಂಪುಗುಂಪಾಗಿ ಬಂದು ಬಹ ವಿಜೃಂಭಣೆಯ ಮೆರವಣಿಗೆಯೊಂ ಈ ದೇಶವೀರನ ಶವಸಂಸ್ಕಾರಾದಿಗಳಲ್ಲಿ ಭಾಗವಹಿಸಿದರು.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ

— ತಯಾರಿಸಿದ ಸ್ನೋ —

ಆದಿನಿಂದಲೂ ಶ್ರೇಷ್ಠವಾಗಿಯೇ ಇದೆ.—ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ ಮಹಮ್ಮದಾಲಿ ರೋಡ್, ಮಂಗಳೂರು.

ಸಾರ್ವಜನಿಕ ವಿಶ್ವಾಸವೇ

"ಓರಿಯಂಟಲ್"ನ್ನು

ಹಿಂದೂದೇಶದ ಪ್ರಮುಖ ಜೀವಸಂಸ್ಥೆಯನ್ನಾಗಿ ಮಾಡಿತು!

ಚಾಲ್ತಿಯಲ್ಲಿರುವ ಪೋಲಿಸಿಗಳು	31-12-39	ರೂ. 79¼ ಕೋಟಿಗಿಂತ ಮಿಕ್ಕಿದ
ಫಂಡುಗಳು	,,	ರೂ. 25¼ ,, ,,
ವಾರ್ಷಿಕ ಆದಾಯ	,,	ಸುಮಾರು ರೂ. 4¼ ಕೋಟಿಗೂ ,,

ನಮ್ಮ ಅತ್ಯಂತ ಆಕರ್ಷಕ ಯೋಜನೆಗಳ ವಿವರವನ್ನು ಕೊಡುವ ಪ್ರೊಸ್ಪೆಕ್ಟಸಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಧಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

	ಅ	ಧಿ ಇನ್‌ಸ್ಪೆಕ್ಟರ್
ಸೌತ್ ಪರೇಡ್,	ಥ	ಕಾನ್ಸಾರ್ಡ್ ಸದಾಶಿವರಾವ್ ರೋಡ್,
ಬೆಂಗಳೂರು.	ವಾ	ಮಂಗಳೂರು.

ಹೆಡ್ ಆಫೀಸು: ಬೊಂಬಾಯಿ. 1874ರಲ್ಲಿ ಭಾರತದಲ್ಲಿ ಸ್ಥಾಪಿತವಾದುದು

ಜಮನಾಲಾಲ ಬಜಾಜರು ಬಂಧನದಿಂದ ಬಿಡುಗಡೆಯಾದರು!

ಭಾರತದ ರಾಜಕೀಯದಲ್ಲಿ ಮಹ ಪರಿವರ್ತನೆಗಳೇನೂ ನಡೆದಿಲ್ಲ. ತ್ಯಾಗ್ರಹ ಆಂದೋಲನವು ನಡೆ ಯತ್ತಾ ಇದೆ. ದೇಶಬಾಂಧವರನೇಕ ನ್ನು ಸರಕಾರದವರು ಬಂಧಿಸಿ ಮನೆಯೊಳಗೆ ಸೇರಿಸುತ್ತಾ ದ್ದಾರೆ. ಬಜಾಜರ ಆರೋಗ್ಯ ಸ್ಥಾಗಿಲ್ಲದಿದ್ದರಿಂದ ಅವರನ್ನು ಡುಗಡೆ ಮಾಡಲಾಗಿದೆ. ಮುಂದಿ ತಿಂಗಳಲ್ಲಿ ಪಕ್ಷವಿಲ್ಲದ ಮುಖಂ ಪರಿಷತ್ತು ಸೇರುವುದೆಂದು ದ್ದಿ. ಈ ವಾರ ದೊಂಬಿಗಳ ದ್ದಿ ಕಡಿಮೆಯಿದೆ.

'ಸೈನಿಕ' ಪತ್ರಿಯ ಆಜ್ಞೆ ಹಿಂತೆಗೆಯಬೇಕು

ಅಖಿಲ ಭಾರತ ಪತ್ರಿಕಾ ಸಂಪಾದಕ ಪತ್ತಿನವರು ಸಿಮ್ಲಾದಲ್ಲಿ ಸೇರಿ ಗ್ರಾದ ಸೈನಿಕ ಪತ್ರಿಕೆಯಿಂದ ೬೦೦೦ . ಜಾಮಿನು ಕೇಳಿದ್ದು ಕಾರಣರಹಿತ ದುದೆಂದೂ, ಆ ಹುಕುಮನ್ನು ರದ್ದು ಡುವ ಬದಲು ಜಮೀನನ್ನು ಇಳಿ ದ್ದು ಸರಿಯಲ್ಲವೆಂದೂ ಸೈನಿಕ ಪತ್ರಿ ಯ ವಿಷಯ ಹೊರಡಿಸಿದ ಇತೀ ಕುವನ್ನು ರದ್ದು ಪಡಿಸದೆ ಸಚಗೆ ಮಾಧಾನವಿಲ್ಲವೆಂದೂ ನಿರ್ಣಯ ಮಾಡಿರುವರು.

ಳಿದ ಹುಕುಮು ಹೊರಡಿಸ ಕೂಡದು

ಪತ್ರಿಕಾ ಸಲಹೆಗಾರ ಮಂಡಳಗಳಿ ವ ಕಡೆಯಲ್ಲಿ ಅವುಗಳೊಡನೆ ಕೇಳದೆ ತ್ರಿಕೆಗಳ ಹಕ್ಕು ಬಾಧ್ಯತೆಗಳಿಗೆ ಆತಂಕ ರುವ ಯಾವುದೇ ಹುಕುಮನ್ನು ಹೊರ ಸಕೂಡದೆಂದೂ, ಈಗ ಹೊರಡಿಸಿದ್ದ ಹುಕುಮಿನ ಬಗ್ಗೆ ಕೂಡಲೇ ಪ್ರಾಂತಿಕ ಲಹೆಗಾರ ಮಂಡಳದೊಡನೆ ಆಲೋ ಸಬೇಕೆಂದೂ ಅ.ಭಾ. ಪತ್ರಿಕಾ ಸಂಪಾ ಕ ಪರಿಷತ್ತು ನಿರ್ಣಯಿಸಿದೆ

'ಹರಿಜನ' ಪತ್ರಿಕೆ ವಿಷಯ

ಹರಿಜನವನ್ನು ಹೊರಡಿಸಲು ಗಾಂಧಿ ಯವರು ಒಮ್ಮೆ ನಿಶ್ಚಯಿಸಿದ್ದರೂ, ನಂತರ ಸರಕಾರದೊಡನೆ ನಡೆದ ಪತ್ರ ವ್ಯವಹಾರಗಳ ಪರಿಣಾಮವಾಗಿ ಅವರು ಮ್ಮ ಆ ನಿಶ್ಚಯವನ್ನು ಒದಲಾಯಿಸ ಬೇಕಾಯಿತೆಂದು ಮಹಾದೇವ ದೇಸಾ ಯಿಯವರು ಅ. ಭಾ. ಪ. ಸಂ ಪರಿ ಷತ್ತಿನ ಸಭೆಯಲ್ಲಿ ಹೇಳಿದರು.

ಕರ್ನಾಟಕದಲ್ಲಿ ೧೦೧೮ ಜನರ ಸತ್ಯಾಗ್ರಹ

೨೦೨೦೫ ರೂ. ಜುಲ್ಮಾನ

ಕರ್ನಾಟಕದಲ್ಲಿ ಇದುವರೆಗೆ ೧೦೧೮ ಜನರು ಸತ್ಯಾಗ್ರಹ ಮಾಡಿದರು. ಅವ ರಲ್ಲಿ ೯೮೮ ಜನರಿಗೆ ಶಿಕ್ಷೆವಿಧಿಸಲಾಗಿದೆ. ೩೦ ಜನರು ಬಂಧಿಸಲ್ಪಟ್ಟಿಲ್ಲ. ೨೦೨೦೫ ರೂ. ಜುಲ್ಮಾನೆವಿಧಿಸಲಾಗಿದೆ. ೮ ಜನರು ಎರಡು ಸಲ ಸತ್ಯಾಗ್ರಹ ಮಾಡಿದರು.

ಪಕ್ಷವಿಲ್ಲದ ಮುಖಂಡರು ಸಭೆ ಸೇರುವರು

ಅಖಿಲಭಾರತ ಪತ್ರಿಕಾ ಸಂಪಾದಕರ ಸಭೆ ಸೇರಿತು

ಕರ್ನಾಟಕದಲ್ಲಿ ೧೦೧೮ ಜನರ ಸತ್ಯಾಗ್ರಹ

ಶಿಕ್ಷೆ ಗುರಿಯಾದವರಲ್ಲಿ ಬೆಳಗಾವಿ ೩೬೦, ಧಾರವಾಡ ೨೫೮, ವಿಜಾಪುರ ೧೯೩, ಮಂಗಳೂರು ೩೩, ಕಾರವಾರ ೮೧, ಬಳ್ಳಾರಿ ೩೦, ಕೊಡಗು ೧೫, ಬೆಂಗಳೂರು ಕೆಂಟೋನ್‌ಮೆಂಟ್ ೧೮ ಮತ್ತು ಸಂಸ್ಥಾನಗಳು ೮

ಮುಂಬಯಿ ದಂಗೆ ಪರಿಸ್ಥಿತಿ ಶಾಂತವಾಗಿದೆ

ದಂಗೆಯ ಪರಿಸ್ಥಿತಿ ಈಗ ಸ್ವಲ್ಪ ಶಾಂತ ವಾಗಿದೆಯೆಂದು ಸುದ್ದಿ. ಪೋಲೀಸರ ಕಾವಲು ಎಂದಿನಂತೆ ಇದೆ.

ಮಿರ್ಜಾ ಇಸ್ಮಾಯಿಲರು ನಿವೃತ್ತರಾದರು

ಮೈಸೂರು ದಿವಾನ್ ಮಿರ್ಜಾ ಇಸ್ಮಾಯಿಲರು ತಾ. ೨೧ರಂದು ತಮ್ಮ ಹುದ್ದೆಯನ್ನು ಶ್ರೀ. ಎನ್. ಮಾಧವರಾಯರಿಗೆ ಸಮರ್ಪಿಸಿದರು.

ಬಳ್ಳಾರಿಯಲ್ಲಿ ಪಿಸ್ತೂಲ್ ಶೋಧ

ಬಳ್ಳಾರಿಯಿಂದ ೮೩ ಮೈಲು ದೂರದ ಹಳ್ಳಿಯೊಂದರಲ್ಲಿ ನಾರಾಯಣ ಅಸಾರಿ ಯೆಂಬವನ ಬಳಿ ಪಿಸ್ತೂಲುಗಳೆರಡನ್ನು ಪೋಲೀಸರು ಶೋಧಮಾಡಿರುವರು. ಆತನು ಪಿಸ್ತೂಲು ಮಾಡಿ ಮಾರಾಟ ಮಾಡುತ್ತಿದ್ದನಂತೆ.

ಮಲಬಾರಿನಲ್ಲಿ ಮಹಾ ನೆರೆ

ನೂರಾರು ಮನೆಗಳು ಹಾಳಾದವು

ಸುಮಾರು ೩೫೦೦೦ ರೂ. ಬೆಲೆ ಬಾಳುವ ೧೪ ದೋಣಿಗಳು ಗಾಳಿ ಮತ್ತು ಪ್ರವಾಹಕ್ಕೆ ನೀರು ಪಾಲಾದವು. ಅದರಲ್ಲಿದ್ದ ಸುಮಾರು ೩೭೫೦೦ ರೂ. ಬೆಲೆ ಬಾಳುವ ಸರಕುಗಳು ಹೋದವು. ಸಾವಿರಾರು ಜನರು ನಿರಾಶ್ರಿತರಾಗಿರುವರು.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ

ರುಬಿ ಜನರಲ್ ಇನ್ಸುರೆನ್ಸ್ ಕಂಪೆನಿ, ಲಿಮಿಟೆಡ್.

ಡೈರೆಕ್ಟರರು:

ಬಿ. ಎಮ್. ಬಿರ್ಲಾ, ಎಸ್ಕ್ವಾಯರ್
ಚೆಯರ್‌ಮೇನ್, ಕಲ್ಕತ್ತಾ ಬೋರ್ಡ್ ಓಫ್ ರಿಸರ್ವ್ ಬೇಂಕ್ ಮೆಂಬರ್, ಸೆಂಟ್ರಲ್ ಬೋರ್ಡ್, ರಿಸರ್ವ ಬೇಂಕ್.

ಡಾ। ನರೇಂದ್ರನಾಥ ಲೊ,
ಎಮ್. ಎ. ಬಿ. ಎಲ್. ಬಿ. ಆರ್. ಎಸ್. ಪಿ. ಎಚ್. ಡಿ., ಮೆಂಬರ್, ಕಲ್ಕತ್ತಾ ಬೋರ್ಡ್ ರಿಸರ್ವ್ ಬೇಂಕ್.

ಗುರುಪ್ರತಾಪ್ ಪೊದಾರ್,
ಎಸ್ಕ್ವಾಯರ್ ಮರ್ಚೆಂಟ್

ಎಮ್. ಆರ್. ಸೊಂತಾಲಿಯಾ,
ಎಸ್ಕ್ವಾಯರ್, ಮೆಂಬರ್, ಲೋಕಲ್ ಎಡ್ವಾಯಸರಿ ಬೋರ್ಡ್, ಸೆಂಟ್ರಲ್ ಬೇಂಕ್ ಓಫ್ ಇಂಡಿಯಾ ಲಿಮಿಟೆಡ್.

ರಾಮೇಶ್ವರ ದಾಸ್ ಮಾಧವ,
ಎಸ್ಕ್ವಾಯರ್, (ಪೋಲಿಸಿದಾರರ ಡೈರೆಕ್ಟರರು)

ಘನಶ್ಯಾಮ ದಾಸ್ ಲೊಯಲ್ಕ,
ಎಸ್ಕ್ವಾಯರ್, (ಪೋಲಿಸಿದಾರರ ಡೈರೆಕ್ಟರರು)

ಈ 3 ಅವಲೋಕಗಳು ನಿಮಗೆ ನಂಬಿಕೆಯನ್ನೀಯುವುವು

ಮೂಲಧನ
ಅಧಿಕರಿಸಲ್ಪಟ್ಟದ್ದು ರೂ. 1,00,00,000
ವಂತಿಗೆಯಾದದ್ದು ರೂ. 15,00,000
ತೆತ್ತದ್ದು ರೂ. 14,10,000
ಜುಮ್ಲಾ ಫಂಡು ರೂ. 18,43,000

ಹೆಡ್ ಆಫೀಸು:
8 ರೊಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

ರೂ. 30 ಲಕ್ಷದ ವಹಿವಾಟು ನಾವು ಜೀವವಿಮೆಯನ್ನು ಪ್ರಾರಂಭಿಸಿದ ಮೊದಲನೇಯ ವರ್ಷದಲ್ಲಿ ನಡೆದಿದೆ
★

ಫ್ಯಾಕ್, ಬೆಂಕಿ, ಮೋಟಾರು, ಮೆರಿನ್ ಮತ್ತು ಡಬ್ಲ್ಯು. ಸಿ ಇನ್ಸುರೆನ್ಸುಗಳು

ಮದ್ರಾಸು ಬ್ರಾಂಚ್:
12 ತಂಬು ಚೆಟ್ಟಿ ಸ್ಟ್ರೀಟ್
ಮೆನೇಜರ್ ಇ. ನಟೇಶನ್

ಪೋಸ್ಟ್ ಬೋಕ್ಸ್ 195 — ಫೋನ್ 3561

ಸಬ್ ಆಫೀಸು:
ಮೆನೇಜರ್: ಟಿ. ವಿ. ರಾಘವನ್,
ಟವರ್ ಬಿಲ್ಡಿಂಗ್ ಪೆರೈಟ ಹೋಲ್ ರೋಡ್
ಕೊಯಂಬುತ್ತೂರು.

ಚೀಫ್ ಏಜಂಟ್:
ಬಿ. ಎಸ್. ಕೆ. ಬಂಗೇರಾ,
ಹೊಯ್ಗೆ ಬಜಾರ್
ಮಂಗಳೂರು.

ಶಾಲಾ ಪುಸ್ತಕಗಳು

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ಶೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಶ್ರೀ. ಕೆ. ಕೆ. ಶೈ, ವಿದ್ವಾನ್ ಇವರಿಂದ ರಚಿತವಾದ

ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಬೆಲೆ: ೪, ೫ನೆಯ ತರಗತಿಗೆ 0-2-0 ೭ನೆಯ 0-2-0
೬ನೆಯ 0-2-6 ೮ನೆಯ 0-3-0

ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

[೭ನೆಯ ಪುಟದಿಂದ ಮುಂದುವರಿದುದು]

ಲೊವವು ಮಂಜೂರಾದ ತರುವಾಯ ಡೈರೆಕ್ಟರ ಮಂಡಳಿಯಿಂದ ನಿವೃತ್ತಿ ಹೊಂದಿದ, ಡಾಕ್ಟರ ಅದ್ಯಂತಾಯ ಮತ್ತು ಶ್ರೀ. ವಕೀಲ ಕೆ. ವಾಸುದೇವ ಕಾಮತರು ಪುನಃ ಅದೇ ಸ್ಥಾನಕ್ಕೆ ಸರ್ವಾನುಮತಿಯಿಂದ ಆರಿಸಲ್ಪಟ್ಟರು. ಅನಂತರ ಕಾರ್ಕಳ ಕೋಓಪರೇಟಿವ್ ಯೂನಿಯನಿಗೆ ಶ್ರೀಗಳಾದ ಎ. ಯನ್. ಯಸ್. ಅಚಾರ್ ಮತ್ತು ಯಫ್. ಎ. ಸುಕುದರವರೂ, ರಿಜರ್ವ್ ಬೇಂಕಿಗೆ ಡಾಕ್ಟರ ಅದ್ಯಂತಾಯರೂ, ಮದ್ರಾಸು ಯೂನಿಯನಿಗೆ ಶ್ರೀ. ಕೆ. ಲಕ್ಷ್ಮಣ ಕುಡ್ವರೂ ಉಡುಪಿ ಕೃಷಿ ಸಂಘಕ್ಕೆ ಶ್ರೀ. ಮಿರ್ ಹೈದರ ಸಾಹೇಬರೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು.

ಅಹಿಂಸಾ ಪ್ರಚಾರ

ತಾ. ೨೮ರ ದಿನ ಕಾರ್ಕಳದಲ್ಲಿ ನಡೆದ ಮಾರಿಜಾತ್ರೆಯ ಹಿಂಸಾತ್ಮಕ ಪೂಜೆಯನ್ನು ನಿಷೇಧಿಸಿ ಎಲ್ಲರೂ ಅಹಿಂಸಾತ್ಮಕ ಸಾತ್ವಿಕ ಪೂಜೆಯನ್ನು ಮಾಡಬೇಕೆಂದು ಆರ್ಯ ಸಮಾಜದ ಶ್ರೀ. ಆರ್. ಮಂಜುನಾಥ ಶೆಣೈಯವರೂ ಶ್ರೀ. ಕೇಶವ ರಾಮಚಂದ್ರ ಶೆಣೈಯವರೂ ಸಾರ್ವಜನಿಕ ಸಭೆಗಳನ್ನು ಕೂಡಿಸಿ ಧರ್ಮಬೋಧೆ ಮಾಡಿದರು.

ಪದ್ಮಸಾಲೀ ಸಮಾಜ

ಸ್ಥಳೀಯ ಪದ್ಮಸಾಲಿ ಸಮಾಜಸೇವಾ ಸಂಘದ ಮುಂದುವರಿಸಲ್ಪಟ್ಟ ಮಹಾಸಭೆಯು ಕಳೆದ ತಾ. ೨೮ರಲ್ಲಿ ಜರಗಿ, ಗತವರ್ಷದ ಕಾರ್ಯಕಾರಿ ಮಂಡಳಿಯೇ ಈ ವರ್ಷವೂ ಬದಲಾವಣೆಯೊಂದಡೆ ಇರಬೇಕಾಗಿಯೂ, ಚಾಲ್ತಿ ವರ್ಷದ ವಾರ್ಷಿಕ ವರ್ಧಂತಿಯನ್ನು ದಶಂಬರ ಅಂತ್ಯಕ್ಕೆ ಜರಗಿಸಬೇಕಾಗಿಯೂ ನಿರ್ಣಯವಾಯಿತು.

ಉಡುಪಿ

ಶ್ರೀ ಪದ್ಮಶಾಲಿ ವೈಶ್ಯ ಸಮಾಜಸೇವಾ ಸಂಘದ ಪ್ರಥಮ ವಾರ್ಷಿಕೋತ್ಸವವು ಶಿರ್ವಮುಳ್ಳಿ ಶ್ರೀ. ವೀರಭದ್ರ ದೇವಾಲಯದ ಶೃಂಗಾರ ಮಂಟಪದಲ್ಲಿ ಕಳೆದ ಆದಿತ್ಯವಾರ ಶ್ರೀ. ಕಾರ್ಕಳ ಮುತ್ತಯ್ಯ ಶೆಟ್ಟಿಗಾರರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಸ್ವಾಗತ ಭಾಷಣ, ವರದಿ ವಾಚನ, ಭಾಷಣ ಸಂದೇಶ ವಾಚನಗಳಾಗಿ ವಿವಿಧ ವಿನೋದಾವಳಿ ಉಪಾಹಾರಾದಿಗಳೊಂದಿಗೆ ಮುಕ್ತಾಯವಾಯಿತು.

ಸಂಘದ ಚಾಲ್ತಿ ವರ್ಷದ ಕಾರ್ಯಕಾರಿ ಸಮಿತಿಯು ಶ್ರೀಗಳಾದ ಬನ್ನಂಜೆ ಬೂದ ಸೆಟ್ಟಿಗಾರ್ ಅಧ್ಯಕ್ಷ, ಯು. ಕೆ. ರಾಮಚಂದ್ರ ಮತ್ತು ತಿಮ್ಮಪ್ಪ ಶೆಟ್ಟಿಗಾರ್ ಜೊತೆ ಕಾರ್ಯದರ್ಶಿಯರು ಗಂಗಯ್ಯ ಶೆಟ್ಟಿಗಾರ್ ಕೋಶಾಧಿಕಾರಿ, ರಾಮ ಮುದ್ದಣ್ಣ, ಲಕ್ಷ್ಮಣ, ಸುಬ್ಬ ಮತ್ತು ಬಿ. ಎಸ್. ಶೆಟ್ಟಿಗಾರರು ಸಮಿತಿ ಸದಸ್ಯರಾಗಿ ಆರಿಸಲ್ಪಟ್ಟರು.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ವಿದ್ಯಾರ್ಥಿ ವೇತನ

ಈ ಮೇಲಿನ ಸಂಸ್ಥೆಯಿಂದ ವೇತನವನ್ನು ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಬರುವ ತಾ. ೩೦-೬-೪೧ರ ಒಳಗೆ ಕೆಳಗೆ ನಮೂದಿಸಿದ ಪ್ರಶ್ನೆಗಳಿಗೆ ಉತ್ತರ ಸಮೇತ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡಲ್ಲಿ, ವೇತನವನ್ನು ಪಡೆಯಲು ಅರ್ಹರೆಂದು ಕಂಡುಬಂದವರಿಗೆ ವೇತನವನ್ನು ಕೊಡಲಾಗುವುದು. ಕೋಲೇಜು ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ.

(೧) ವಿದ್ಯಾರ್ಥಿಯ ಸಂಪೂರ್ಣ ಹೆಸರು, (೨) ತಂದೆ ಯಾ ರಕ್ಷಕನ ಹೆಸರು. (೩) ಇತರ ಸಂಬಂಧಿಕರ ಹೆಸರು (೪) ಕಲಿಯತಕ್ಕ ಶಾಲೆಯ ಮತ್ತು ದರ್ಜೆಯ ಹೆಸರು, (೫) ಕಳೆದ ಪರೀಕ್ಷೆಯ ಮಾರ್ಕುಪಟ್ಟಿ, (೬) ವಿದ್ಯಾರ್ಥಿಯ ಗುಣನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ, (೭) ಶಾಲಾ ಸಂಬಳ (೮) ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು ಊರಿನ ಮೆಜಿಸ್ಟ್ರೇಟರ ಅಥವಾ ಪ್ರಸಿದ್ಧ ವಕೀಲರ ಯಾ ಗ್ರಾಮದ ಪಟೇಲರ ಪತ್ರ.

ಎಸೋಸಿಯೇಶನಿನಿಂದ ಗತವರುಷ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳು ಈ ವರುಷ ಸಹ ವಿದ್ಯಾರ್ಥಿ ವೇತನ ಪಡೆಯಲಿಚ್ಛಿಸುವುದಾದರೆ, ತಾ. ೩೦-೬-೪೧ರ ಒಳಗೆ ಅರ್ಜಿ ಕಳುಹಿಸಿ ಕೊಡತಕ್ಕದ್ದು.

ವಿಳಾಸ:— ಮಾನಾರ್ಹ ಜನರಲ್ ಕಾರ್ಯದರ್ಶಿ ಬಿಲ್ಲವರ ಎಸೋಸಿಯೇಶನ್, C/o. ದಫ್ತರಿ ಫಕೀರ ಮತ್ತು ದಿವಾನ್, 13/19 ಮಿದೇಸ್ ಸ್ಟ್ರೀಟ್, ಫೋರ್ಟ್ ಮುಂಬಾಯಿ.

ಕ್ರೀಟ್ ಕಾಳಗದ ವಿವರಗಳು

ಇರಾಕ್ ಸಿರಿಯಗಳ ಕಡೆಗೆ ಧಾಳಿ ಮಾಡಲು ದಂಡೆಯಾತ್ರೆಗೆ ಹೊರಟಿದ್ದ ಜರ್ಮನರು ಒಮ್ಮೆಲೇ ತಮ್ಮ ಆಕ್ರಮಣ ನೀತಿಯನ್ನು ಬದಲಾಯಿಸಿ ಕ್ರೀಟಿಗೆ ಬಂದು ಬಿದ್ದರು. ಹೀಗೆ ಯಾತಕ್ಕಾಗಿ ಧಾಳಿ ಮಾಡಿದರೆಂದು ಎಲ್ಲರನ್ನೂ ದಿಗಿಲುಗೊಳಿಸಿತು. ಕ್ರೀಟಿನ ಸ್ಥಾನ ಮಹತ್ವಗಳನ್ನು ಪರಿಶೀಲಿಸಿದರೆ ಜರ್ಮನರು ಅಷ್ಟು ಆಕಸ್ಮಿಕವಾಗಿ ಕ್ರೀಟನ್ನು ವಶಪಡಿಸಲು ಬಂದ ವಿಷಯವು ಸ್ಪಷ್ಟವಾಗದಿರದು.

ಪೂರ್ವ ಭೂಸಾಗರದಲ್ಲಿ ಕ್ರೀಟು ಒಂದು ಪ್ರಾಮುಖ್ಯ ದ್ವೀಪವಾಗಿದೆ. ಇದು ಈಜಿಯನ್ ಸಮುದ್ರದ ದ್ವಾರದಲ್ಲಿದೆ. ಈಜಿಯನ್ ಸಮುದ್ರದಲ್ಲಿರುವ ದ್ವೀಪಗಳನ್ನು ಭೂಮಧ್ಯ ಸಾಗರದಿಂದ ಇದು ಬೇರ್ಪಡಿಸುತ್ತದೆ. ಗ್ರೀಸಿನ ಮೇಲೆ ಧಾಳಿಯಿಟ್ಟು ಅದನ್ನು ಆಕ್ರಮಿಸಿದ ಬಳಿಕ ಈಜಿಯನ್ ಸಮುದ್ರದಲ್ಲಿರುವ ದ್ವೀಪಗಳು ಜರ್ಮನರ ಸ್ವಾಧೀನವಾಯಿತು. ಕಪ್ಪು ಸಮುದ್ರದಲ್ಲಿರುವ ದ್ವೀಪಗಳು ಜರ್ಮನರ ಸ್ವಾಧೀನವಾಯಿತು. ಟರ್ಕಿಯನ್ನು ಸುತ್ತುಕಟ್ಟಿದಂತಾಯಿತು. ಕಪ್ಪು ಸಮುದ್ರದಿಂದ ಈಜಿಯನ್ ಸಮುದ್ರಕ್ಕೆ ಬರಲು ಅನುಕೂಲವೂ ಆಯಿತು. ಸಿರಿಯಾ ಇರಾಕ್‌ಗಳಿಗೆ ಹೋಗುವ ದಾರಿಯೂ ಸುಗಮವಾಯಿತು. ಕ್ರೀಟು, ಈಜಿಪ್ಟ್, ಪೆಲೆಸ್ತಾನ್, ಸುವೇಜ್ ಕಾಲುವೆಗಳಿಗೂ ಸಮೀಪವಾಗಿದೆ. ಈ ಕಾರಣಗಳಿಂದಾಗಿ ಕ್ರೀಟನ್ನು ಕೂಡಲೇ ಆಕ್ರಮಿಸಲು ಹಿಟ್ಲರನು ನಿಶ್ಚಯಿಸಿದನೆಂದು ಯಾರಾದರೂ ತಿಳಕೊಳ್ಳಬಹುದಾಗಿದೆ.

ಬ್ರಿಟಿಷರು ಕ್ರೀಟಿನಲ್ಲಿ ಹನ್ನೆರಡು ದಿವಸಗಳ ತನಕ ಪ್ರಚಂಡ ಸಾಹಸದಿಂದ ಕಾದಾಡಿದರು. ಬ್ರಿಟಿಷರಿಗೆ ಅಲ್ಲಿ ಅನಾನುಕೂಲವಾಗಲು ಅಲ್ಲಿಂದ ಹಿಂತೆರಳಬೇಕಾಯಿತೆಂದು ಬ್ರಿಟಿಷ್ ಮಿಲಿಟರಿ ಪ್ರಕಟಣೆಯು ಹೇಳುತ್ತದೆ.

ರೂಸ್‌ವೆಲ್ಟರು ಹೇಳುತ್ತಾರೆ:—

ಅಮೆರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಕಳೆದ ವಾರದಲ್ಲಿ ಒಂದು ದೀರ್ಘ ಭಾಷಣವನ್ನಿತ್ತು, ಬ್ರಿಟನಿಗೆ ಸಂಪೂರ್ಣ ಬೆಂಬಲ ಕೊಡಲು ತನಗಿರುವ ಉತ್ಕಟವಾದ ಅಪೇಕ್ಷೆಯನ್ನು ವ್ಯಕ್ತಮಾಡಿದರೆಂಬುದು ತೃಪ್ತಿಯ ವಿಷಯವಾದರೂ ಯುದ್ಧದಲ್ಲಿ ತೀವ್ರವಾಗಿ ದುಮ್ಮಿಕ್ಕುವ ವಿಷಯದಲ್ಲಿ ಏನೂ ಸ್ಪಷ್ಟವಾದ ಮಾತನ್ನು ಹೇಳಲಿಲ್ಲವಾಗಿ ಹಲವರಲ್ಲಿ ನಿರಾಶೆ ಉಂಟಾಗಿರುತ್ತದೆ. ಅವರು ತಮ್ಮ ಭಾಷಣದಲ್ಲಿ ಇಂದು ಪ್ರಪಂಚದ ಪ್ರಜಾಪ್ರಭುತ್ವವನ್ನು ನಡುಗಿಸಿ ಬರುವ ನಾಜಿಸಮ್ಮಿನ ಅನರ್ಥವನ್ನು ವಿವರಿಸಿ ಅದನ್ನು ಸರ್ವಥಾ ತಡೆಯಬೇಕೆಂದೂ, ಬ್ರಿಟನಿಗೆ ಬೆಂಬಲಕೊಡುವಂತೆ, ಸಮುದ್ರದ ಸ್ವಾಮಿತ್ವವು ಅಮೇರಿಕಕ್ಕೆ ಉಳಿವಂತೆ ಹೆಚ್ಚಿನ ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅತ್ಯಾವಶ್ಯವೆಂದು ತಿಳಿಸಿದರು.

ಕೈಸರನ ಮರಣ!

ಹಿಂದಿನ ಜರ್ಮನ್ ಚಕ್ರವರ್ತಿಯಾದ ಕೈಸರನು ಶೀತ ಮತ್ತು ಕರುಳಿನ ಬೇನೆಯಿಂದ ನರಳುತ್ತಿದ್ದು ಸತ್ತುಹೋದನು. ಇವನಿಗೆ ೮೨ ವರ್ಷ ಪ್ರಾಯವಾಗಿರಬಹುದು.

ಇಂಗ್ಲೆಂಡಿನ ರಾಜ್ಯವ್ಯವಸ್ಥೆಯು ಹೇಗಿರುತ್ತದೆ?

ಪ್ರಜಾಪ್ರಭುತ್ವ ಸರಕಾರದ ಮೂಲ ತತ್ವಗಳು

ಶ್ರೀ. ಡಿ. ವಿ. ಗುಂಡಪ್ಪನವರ ಭಾಷಣದಿಂದ

"ರಾಜ್ಯ ಶಾಸ್ತ್ರವು ನಮ್ಮ ದೇಶಕ್ಕಿಂತಲೂ ಹೆಚ್ಚಾಗಿ ಯುರೋಪು ದೇಶದಲ್ಲಿ ಬೆಳೆದು ಬಂದಿದೆ. ನಮ್ಮವರು ಆಧ್ಯಾತ್ಮ ವಿಚಾರಗಳಲ್ಲಿ ಹೆಚ್ಚು ಗಮನ ಕೊಡುತ್ತಿದ್ದು ರಾಜ್ಯ ಶಾಸ್ತ್ರವನ್ನು ಅಷ್ಟಾಗಿ ಗಮನಿಸುತ್ತಿರಲಿಲ್ಲವೆಂದು ತೋರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ರಾಜ್ಯ ಶಾಸ್ತ್ರವು ಮೊದಲು ಬೆಳೆದುದು ಗ್ರೀಸಿನಲ್ಲಿ. ರೋಂ ದೇಶದಲ್ಲಿ ಶಾಸನವು ಹೆಚ್ಚಾಗಿ ಬೆಳೆದು ಪ್ರಸಿದ್ಧವಾಗಿದೆ. ಬ್ರಿಟನಿನಲ್ಲಿ ರಾಜ್ಯ ಶಾಸ್ತ್ರವು ಇಂದಿಗೂ ಸಜೀವ ಶಾಸ್ತ್ರವಾಗಿ ನಡೆದುಕೊಂಡು ಬಂದಿದೆ" ಹೀಗೆಂದು ಶ್ರೀ. ಡಿ. ವಿ. ಗುಂಡಪ್ಪನವರು ಬೆಂಗಳೂರಿನಲ್ಲಿ ಇಂಗ್ಲೆಂಡಿನ ಸರಕಾರದ ವಿಷಯವಾಗಿ ಇತ್ತ ಭಾಷಣವೊಂದರಲ್ಲಿ ಹೇಳಿದರು. ಅದರ ವಿವರ ಕೆಳಗೆ ಕೊಡಲಾಗಿದೆ.

ಇಂಗ್ಲೆಂಡಿನಲ್ಲಿ ಆಡಳಿತ ದೃಷ್ಟಿಯಲ್ಲಿ ರಾಜ, ಶ್ರೀಮಂತ ವರ್ಗ ಮತ್ತು ಮಠಾಧಿಪತಿಗಳು ಮತ್ತು ಪ್ರಜಾ ವರ್ಗ—ಈ ರೀತಿ ವಿಂಗಡಣೆಯಿದೆ. ಪೂರ್ವದಲ್ಲಿ ರಾಜರಿಗೂ, ಶ್ರೀಮಂತ ವರ್ಗದ ಮತ್ತು ಮಠಾಧಿಪತಿಗಳಿಗೂ ಘರ್ಷಣೆಯುಂಟಾಗಿ, ರಾಜನ ಅಧಿಕಾರವು ಕಡಿಮೆಯಾಯಿತು ಮತ್ತು ಪ್ರಜಾ ವರ್ಗದ ಅಧಿಕಾರವು ಹೆಚ್ಚಾಯಿತು. ಈ ಘರ್ಷಣೆಗಳ ಪರಿಣಾಮವಾಗಿ ಇಂದು ಇಂಗ್ಲೆಂಡಿನ ಮಹತ್ವಪೂರಿತವಾದ ಪ್ರಜಾಪ್ರಭುತ್ವ ವ್ಯವಸ್ಥೆಯಿದೆ. ಈ ವ್ಯವಸ್ಥೆಯ ಮಾದರಿಯೇ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿಯೂ, ಬ್ರಿಟಿಷ್ ಡೊಮಿನಿಯನ್ನುಗಳಲ್ಲಿಯೂ ಇದೆ.

ನಾನಾ ಪ್ರಭುತ್ವಗಳ ಸ್ವರೂಪ

ಪ್ರಪಂಚದ ಸುಮಾರು ಹತ್ತು ರೀತಿಯ ಪ್ರಭುತ್ವಗಳು ಕಂಡುಬರುತ್ತವೆ: ೧. ಕುಲವೃದ್ಧ ಪ್ರಭುತ್ವ—ಹಿರಿಯರು ಹೇಳಿದಂತೆ ಕೇಳುವ ಮನೋವೃತ್ತಿಯ ಆಧಾರದ ಮೇಲಿನದು. ೨. ಯುದ್ಧವೀರ ಪ್ರಭುತ್ವ—ಹೋರಾಟದಲ್ಲಿ ವಿಜಯಿಯಾದವನಲ್ಲಿ ನಂಬಿಕೆಯಿಟ್ಟು ಆತನ ಆಡಳಿತವನ್ನು ಒಪ್ಪಿಕೊಳ್ಳುವುದು. ೩. ಗುರು ಪುರೋಹಿತರ ಪ್ರಭುತ್ವ—ಮಠಾಧಿಪತಿಗಳನ್ನು ನಂಬಿಕೊಳ್ಳುವುದು. ೪. ಶ್ರೀಮಂತ ಪುರುಷ ಪ್ರಭುತ್ವ—ಶ್ರೀಮಂತರನ್ನು ಹಿಂಬಾಲಿಸುವುದು. ೫. ಸಾಂಕುಶ ರಾಜ ಪ್ರಭುತ್ವ—ಜನಾಭಿಪ್ರಾಯವನ್ನು ಅನುಸರಿಸಿ ರಾಜನು ರಾಜ್ಯಭಾರ ಮಾಡುವುದು. ೬. ನಿರಂಕುಶ ರಾಜ ಪ್ರಭುತ್ವ—ಜನಾಭಿಪ್ರಾಯವನ್ನು ಧಿಕ್ಕರಿಸಿ ತನಗೆ ತೋರಿದಂತೆ ರಾಜನು ಆಳುವುದು. ೭. ಬ್ಯೂರೋಕ್ರೆಸಿ ಅಂದರೆ ರಾಜ್ಯ ಶಾಸ್ತ್ರವನ್ನು ಚೆನ್ನಾಗಿ ತಿಳಿದುಕೊಂಡವರ ಸಮೂಹದವರ ಕೈವಾಡ. ೮. ಸಾಮಾನ್ಯ ಪ್ರಜಾಡಳಿತ—ಗ್ರೀಸ್ ದೇಶದಲ್ಲಿನಂತಹುದು. ೯. ಏಕನಾಯಕ ಪ್ರಭುತ್ವ—ಸಲಹೆಗಳನ್ನು ಯಾರು ಬೇಕಾದರೂ ಕೊಡಬಹುದು, ಆದರೆ ಅಂತ್ಯ ತೀರ್ಮಾನವು ಪ್ರಮುಖ ಮುಖಂಡನದ್ದೇ. ಅವನು ಹೇಳಿದಂತೆಯೇ ಇಡೀ ಆಡಳಿತ ಚಕ್ರವು ತಿರುಗಬೇಕು.

ನಿರ್ದಿಷ್ಟ ವರ್ಗಗಳ ಕೆಲಸ

ಇಂಗ್ಲೆಂಡಿನಲ್ಲಿರುವ ರಾಜ್ಯ ವ್ಯವಸ್ಥೆಯಲ್ಲಿ ರಾಜರಿಗೂ, ಶ್ರೀಮಂತ ವರ್ಗದ ಮತ್ತು ಮಠಗಳ ಆಚಾರ್ಯರಿಗೂ, ಸಾಮಾನ್ಯ ಪ್ರಜಾ ವರ್ಗಕ್ಕೂ, ಸಿವಿಲ್ ಸರ್ವಿಸಿನವರಿಗೂ, ನಿರ್ದಿಷ್ಟ ಕೆಲಸಗಳಿವೆ.

ಶ್ರೀಮಂತ ವರ್ಗದವರು ಮತ್ತು ಮಠಗಳ ಆಚಾರ್ಯರು ಇರುವ ಹೌಸ್ ಆಫ್ ಲಾರ್ಡ್ಸ್ ಮತ್ತು ಸಾಮಾನ್ಯ ಪ್ರಜೆಗಳ ಪ್ರತಿನಿಧಿಗಳಿರುವ ಹೌಸ್ ಆಫ್ ಕಾಮನ್ಸ್ ಸಭೆಗಳು (ಕಾಮನ್ಸಿಗೆ ಲಾರ್ಡ್ಸ್ ಸಭೆಗಿಂತ ಹೆಚ್ಚು ಅಧಿಕಾರವಿದೆ) ಆಡಳಿತದ ಸೂತ್ರಗಳನ್ನು ನಿರ್ದೇಶಿಸುವುವು. ಇವೇ ಕಾನೂನುಗಳನ್ನು ಮಾಡುವುವು. ಈ ಸಭೆಗಳಿಗೆ ಜವಾಬ್ದಾರರಾಗಿ ಮಂತ್ರಿಮಂಡಳವಿರುವುದು. ಸರಕಾರದ ದಿನವಹಿ ಕೆಲಸಗಳನ್ನು ನಡೆಸಿಕೊಂಡು ಬರುವುದು ಮತ್ತು ಶಾಸನಮಂಡಲಗಳ ತೀರ್ಮಾನಗಳನ್ನು ಜಾರಿಗೆ ತರುವುದು ಸಿವಿಲ್ ಸರ್ವಿಸಿನ ಜವಾಬ್ದಾರಿ. ಇದರ ಜೊತೆಗೆ ನ್ಯಾಯಾಂಗವೂ ಇದೆ.

ಪ್ರಜಾಪ್ರಭುತ್ವ ಸರಕಾರವು ಸುವ್ಯವಸ್ಥಿತವಾಗಿ ಜನಹಿತದಲ್ಲಿಯೇ ಕೆಲಸ ಮಾಡಬೇಕಾದರೆ, ದೇಶದಲ್ಲಿ ಒಂದಕ್ಕಿಂತ ಹೆಚ್ಚು ಪಕ್ಷಗಳಿರಲೇ ಬೇಕು. ಯಾವ ಪಕ್ಷವು ಶಾಸನ ಮಂಡಲದಲ್ಲಿ ಪ್ರಜಾ ಬೆಂಬಲದ ದೆಸೆಯಿಂದ ಬಹುಸಂಖ್ಯೆಯ ಸ್ಥಾನಗಳನ್ನು ಪಡೆಯುವುದೋ ಅದು ಸರಕಾರವನ್ನು ನಡೆಸುವುದು, ಅದರ ಲೋಪದೋಷಗಳನ್ನು ತೋರಿಸಿಕೊಟ್ಟು ಅದು ಸರ್ವಹಿತವನ್ನು ಮರೆಯದೆ ಲಕ್ಷಿಸುವಂತೆ ಮಾಡಲು ಪ್ರತಿಪಕ್ಷವು ಬೇಕು. ಆ ಪಕ್ಷಗಳು ವಿಪತ್ಕಾಲದಲ್ಲಿ ಸಣ್ಣ ಸಣ್ಣ ಭಿನ್ನಾಭಿಪ್ರಾಯಗಳನ್ನು ಮೂಲೆಗೊತ್ತಿ ಒಗ್ಗಟ್ಟಿನಿಂದ ದೇಶವನ್ನು ರಕ್ಷಿಸಿಕೊಳ್ಳುವುವು.

ದೇಶದ ಪ್ರತಿನಿಧಿ

ಶಾಸನ ಮಂಡಳದಲ್ಲಿ ಪ್ರಜಾ ಪ್ರತಿನಿಧಿಗಳು ಇಡೀ ದೇಶದ ಪ್ರತಿನಿಧಿಗಳಂತೆ ಕೆಲಸಮಾಡಬೇಕೇ ವಿನಾ ತಾವು ಯಾವ ಯಾವ ಕ್ಷೇತ್ರದಿಂದ ಚುನಾಯಿತರಾದರೋ ಆಯಾ ಕ್ಷೇತ್ರಗಳ ಪ್ರತಿನಿಧಿಗಳು ಮಾತ್ರ ಎಂದು ತಿಳಿದುಕೊಂಡು ಕೆಲಸ ಮಾಡಬಾರದು. ಅವನು ತನ್ನ ಕ್ಷೇತ್ರಕ್ಕೆ ಸಂಬಂಧಪಡದೆಯೇ ಇರುವ ವಿಷಯವನ್ನು ಕುರಿತು ತನ್ನ ಅಭಿಪ್ರಾಯವನ್ನು ಕೊಡಲು ಸಂಪೂರ್ಣ ಹಕ್ಕುಳ್ಳವನು. ಅವನು ವಿವೇಕಿಯೆಂದೂ, ಅನುಭವಿಯೆಂದೂ ಮತ್ತು ತಮ್ಮ ಹಿತವನ್ನು ರಕ್ಷಿಸುವನೆಂದೂ ತಿಳಿಯಲ್ಪಟ್ಟ ಮತದಾರರಿಂದ ಚುನಾಯಿತನಾಗುವನು.

ಸರಕಾರವನ್ನು ನಡೆಸುತ್ತಿರುವ ಪಕ್ಷವು ತನ್ನ ಬಹುಮತದ ದೆಸೆಯಿಂದ ಇತರ ಪಕ್ಷಗಳನ್ನು ನಿರ್ಲಕ್ಷಿಸುವುದಿಲ್ಲ. ಅಲ್ಪಸಂಖ್ಯೆಯಲ್ಲಿರುವ ಪಕ್ಷಗಳ ಅಭಿಪ್ರಾಯವು ಅನೇಕ ವೇಳೆ ದೇಶದ ಹಿತದೃಷ್ಟಿಯಲ್ಲಿ ಉಚಿತವೆನಿಸಬಹುದಲ್ಲವೇ? ಸರ್ವರಿಗೂ ಹಿತವಾಗಬೇಕೆಂಬ ದೃಷ್ಟಿಯಿಂದಲೇ ಸರಕಾರವು ಕೆಲಸ ಮಾಡಬೇಕಾದರೆ, ಅದು ಸರ್ವಪಕ್ಷಗಳ ಅಭಿಪ್ರಾಯಗಳನ್ನೂ ತೂಗಿ ನೋಡಿ, ತಕ್ಕ ತೀರ್ಮಾನಕ್ಕೆ ಬರಬೇಕು. ಹಾಗೆ ಮಾಡದಿದ್ದರೆ ಅಧಿಕಾರದಲ್ಲಿರುವ ಪಕ್ಷವೇ ಏಳಿಗೆ ಹೊಂದುವುದು ಅಸಂಭವ.

ಲಾರ್ಡ್ಸ್ ಸಭೆಯು ಕಾಮನ್ಸಿನಿಂದ ಅಂಗೀಕೃತವಾದ ಮಸೂದೆಗಳನ್ನು ಪರಿಶೀಲಿಸಿ ತನ್ನ ಸಲಹೆಗಳನ್ನು ಕೊಡುತ್ತದೆ. ಎರಡನೆಯದಾಗಿ, ಅದು ಕಾಮನ್ಸಿನ ಆತುರವನ್ನು ತಡೆದು ಅನರ್ಥವನ್ನು ತಪ್ಪಿಸುವುದೂ ಉಂಟು.

ಮಂತ್ರಿಮಂಡಳದ ಜವಾಬ್ದಾರಿ

ಮಂತ್ರಿ ಮಂಡಳದಲ್ಲಿ ಮುಖ್ಯ ಮಂತ್ರಿಯೇ ಮೂಲ. ಅವನೇ ಇತರ ಮಂತ್ರಿಗಳನ್ನು ಚುನಾಯಿಸಿಕೊಳ್ಳತಕ್ಕವನು. ಯಾವ ಪಕ್ಷವು ಶಾಸನಸಭೆಯಲ್ಲಿ ಬಹುಸಂಖ್ಯೆಯಾಗುವುದೋ ಅದರ ಮುಖಂಡನೇ ಮುಖ್ಯ ಮಂತ್ರಿಯಾಗುವನು.

ಈ ಮಂತ್ರಿಮಂಡಳಕ್ಕೆ ಛಾಯಾ ಮಂತ್ರಿಮಂಡಳವೂ ಉಂಟು. ಮಂತ್ರಿಮಂಡಳವು ಯಾವಾಗಲಾದರೂ ಶಾಸನಸಭೆಯಲ್ಲಿ ಅಪಜಯ ಹೊಂದಿದರೆ, ಈ ಛಾಯಾ ಮಂತ್ರಿಮಂಡಳವು ತನ್ನ ಛಾಯೆಯನ್ನು ಬಿಟ್ಟು ನಿಜ ಸ್ವರೂಪವನ್ನು ತಾಳುವುದು. ಈ ಮಂತ್ರಿಮಂಡಳಗಳು ವೈರಿಗಳಲ್ಲ, ಆದರೆ ಭಿನ್ನಾಭಿಪ್ರಾಯಗಳನ್ನು ಹೊಂದಿರುವುವು—ಆಂತರಿಕ ಸಾಮಾನ್ಯ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಪಕ್ಷಗಳವರೆಲ್ಲರೂ ಸೌಹಾರ್ದದಿಂದಲೇ ಇರುವರು. ಇದು ಇಂಗ್ಲೆಂಡಿನ ಸಾರ್ವಜನಿಕ ಜೀವನದ ಸೌಂದರ್ಯ.

ಮಂತ್ರಿಮಂಡಳದ ನಿರ್ಣಯಕ್ಕೆ ಎಲ್ಲ ಮಂತ್ರಿಗಳೂ ಬಾಧ್ಯರು. ಆದರೆ ಯಾವುದಾದರೂ ನಿರ್ಣಯವನ್ನು ಯಾವ ಮಂತ್ರಿಯಾದರೂ ಒಪ್ಪದಿದ್ದರೆ ಆತನು ರಾಜೀನಾಮೆ ಕೊಡಬೇಕು. ಅಥವಾ ಅವನು ವಜಾ ಮಾಡಲ್ಪಡುವನು. ಮುಖ್ಯಮಂತ್ರಿಗೆ ಮಂತ್ರಿಗಳಿಂದ ಬಹುಮತ ಬೆಂಬಲ ದೊರೆಯದಿದ್ದರೆ, ಅವನು ಆ ಸರಕಾರವನ್ನು ವಿಸರ್ಜನೆ ಮಾಡಿ, ಹೊಸ ಸರಕಾರವನ್ನು ರಚಿಸುವನು.

ರಾಜನ ಪ್ರಭಾವ

ಇಂಗ್ಲೆಂಡಿನ ರಾಜನಿಗೆ ಕಾನೂನು ಸಮ್ಮತವಾದ ಶಕ್ತಿಯಿಲ್ಲ, ಆದರೆ ಪ್ರಭಾವವಿದೆ. ವಿಶೇಷ ಸಂದರ್ಭಗಳಲ್ಲಿ ಅವರು ದೇಶದ ಏಕೈಕ ಪ್ರತಿನಿಧಿ; ಮರ್ಯಾದೆ ಮುಂತಾದ ವಿಚಾರಗಳಲ್ಲಿ ಆತನಿಗೆ ಅಗ್ರಸ್ಥಾನ. ಮುಖ್ಯ ಮಂತ್ರಿಯು ರಾಜೀನಾಮೆ ಕೊಟ್ಟರೆ ಅದನ್ನು ರಾಜನು ತೆಗೆದುಕೊಳ್ಳಬೇಕು ಮತ್ತು ಇನ್ನೊಬ್ಬ ಮುಖ್ಯ ಮಂತ್ರಿಯು ನೇಮಕವಾಗುವವರೆಗೆ ಆತನೇ ಮುಖ್ಯಾಧಿಕಾರಿ. ಸರಕಾರವನ್ನು ರಚಿಸತಕ್ಕವರಾರು ಎಂಬುದನ್ನು ಗೊತ್ತು ಮಾಡುವ ಹಕ್ಕು ರಾಜನಿಗೆ ಸೇರಿದೆ. ಈ ಹಕ್ಕು ಎಷ್ಟು ಜವಾಬ್ದಾರಿಯುತವೋ ಅಷ್ಟು ದೊಡ್ಡದು.

NACET
BLADES

ನೇಸೆಟ್ ಬ್ಲೇಡುಗಳು

ತೃಪ್ತಿಕರವಾಗಿ ಮುಖಕ್ಷೌರವಾಗಬೇಕಾದರೆ ಹರಿತ, ಸುಖ ಮತ್ತು ನಯ ಇವು ಮೂರು ಗುಣಗಳು ಇರಬೇಕು. ನೇಸೆಟ್ ಬ್ಲೇಡುಗಳು ಬಹಳ ಆಶ್ಚರ್ಯಕರವಾಗುವಷ್ಟು ಕಡಿಮೆ ಕ್ರಯದ್ದು, ಈ ಮೂರು ಗುಣಗಳನ್ನೂ ಕೊಡುತ್ತವೆ. ಪ್ರತಿಯೊಂದು ಬ್ಲೇಡಿನಿಂದ ಎಷ್ಟು ಸಲ ಕ್ಷೌರವಾಡಬಹುದಾಗಿದೆಯೆಂಬುದನ್ನು ನೋಡಿ ನೀವು ಆಶ್ಚರ್ಯಪಡಲಿರುವಿರಿ.



ಪುಸ್ತಕಾವಲೋಕನ:

ಬಿಡುಗಡೆಯ ಬೆಲೆ*

“ತಾಯಿನಾಡಿನ ಬಿಡುಗಡೆಗಾಗಿ ರಾಷ್ಟ್ರೀಯ ಚಳವಳದಲ್ಲಿ ತೊಡಗಿದವನಿಗೆ ಪ್ರಾಪ್ತವಾಗುವ ವಿಶಿಷ್ಟ ರೀತಿಯ ಸಂಕಟಗಳೆನಿಸಿಕೊಳ್ಳಬಹುದಾದ ಸನ್ನಿವೇಶದ ಸರಸ ವರ್ಣನೆಯಿದು....ಎಷ್ಟೋ ಜನ ಯುವಕರು ಶಾಲೆ ಕಾಲೇಜುಗಳಿಗಿಂತ ಓದು ಹೊಟ್ಟೆಗಿಂತ ಹೆಚ್ಚೆಂದು ತಿಳಿದ ಹಾದಿಗಾಗಿ ಅತಿಶಯ ತ್ಯಾಗ ಮಾಡಿದ್ದಾರೆ; ತಮಗೆ ಹೇಳಿದ ರಾಷ್ಟ್ರೀಯ ಕರ್ತವ್ಯಗಳನ್ನು ಪಾಲನೆ ಮಾಡಿದ್ದಾರೆ; ನಾಡಿನ ಕರೆಗೆ ಓ ಕೊಟ್ಟಿದ್ದಾರೆ; ಇಷ್ಟೆಲ್ಲಾ ಮಾಡಿ ಕೊನೆಗೆ ಮಾಡಲು ಕೆಲಸವಿಲ್ಲದೆ ನೆರವಾಗುವ ದಿಕ್ಕಿಲ್ಲದೆ ಬಿಕ್ಕೆ ಬೇಡುವ ಹಾಗಾಗಿದ್ದಾರೆ.... ಬಾಳು ಘೋರ ವಿಷಾದವಾಗಿ ಕಾಣುತ್ತದೆ” —ಹೀಗೆಂದು ಈ ಪುಸ್ತಕದ ಮುನ್ನುಡಿ ಬರೆದ ಶ್ರೀ. ಪಟ್ಟಾಭಿ ಸೀತಾರಾಮಯ್ಯನವರು ಪುಸ್ತಕದ ವಿಷಯವನ್ನು ಕೊಂಚದರಲ್ಲಿಯೇ ಹೃದಯಂಗಮವಾಗಿ ತಿಳಿಸಿದ್ದಾರೆ.

“೧೯೩೦ನೆಯ ವರ್ಷದಲ್ಲಿ ಉಪ್ಪಿನ ದಂಡಯಾತ್ರೆಯನ್ನೂ ಅಸಹಕಾರ ಚಳವಳನ್ನೂ ಆ ವರ್ಷದ ವೈಭವವನ್ನೂ ಸಂಕಟವನ್ನೂ ಚಿತ್ರಿಸುವ ‘ಬಿಡುಗಡೆಯ ಬೆಲೆ’ಯು....‘ಕ’ ವರ್ಗದಲ್ಲಿ ಸೆರೆಯಾಳಾಗಿ ಪರಿಪರಿಯಾಗಿ ಅನುಭವಿಸಿದ ಸಹಸ್ರಾವಧಿ ಅನಾಮಿಕರ ಕೈಪಿಡಿಯಾಗಿದೆ.” ಹೀಗೆಂದು ಇದಕ್ಕೆ ಇನ್ನೊಂದು ಮುನ್ನುಡಿ ಬರೆದ ಶ್ರೀ. ಗೋಕಾಕರು ಬರೆಯುತ್ತ, ‘ಬಿಡುಗಡೆಯ ಬೆಲೆಯು ಒಬ್ಬ ಕಲಾವಿದರ ಕಲಾಕೃತಿ’ಯೆಂದೂ, ‘ಕಾವ್ಯದಲ್ಲಿ ಕಲಿಸಬೇಕಾದ ಪಾಠವನ್ನು ತಾಪತ್ರಯಗಳಲ್ಲಿ ಕಲೋಪಾಸಕರು ಕಲಿಸುತ್ತಾರೆ’ಂದೂ ಅಭಿಪ್ರಾಯವಿತ್ತಿದ್ದಾರೆ.

ಈ ಎರಡು ಮುನ್ನುಡಿಗಳ ಮಾತುಗಳನ್ನುದ್ಧರಿಸಿ ಕೊಟ್ಟುದರಿಂದಲೇ ವಾಚಕರಿಗೆ ಪುಸ್ತಕದ ಸ್ವರೂಪ ವಿಷಯಗಳ ಪರಿಚಯವಾಗಬಹುದು. ಒಬ್ಬ ಸ್ವಯಂ ಸೇವಕನ ಸತ್ಯಾಗ್ರಹಿಯ ದಿನಚರಿಯಿದು. ಇದನ್ನು ಬರೆದ ವಡಗೇನಹಳ್ಳಿ ಅಶ್ವತ್ಥ ನಾರಾಯಣ ರಾಯರು ೧೯೩೦ರ ಸತ್ಯಾಗ್ರಹ ಕಾಲದಲ್ಲಿ ರಾಷ್ಟ್ರಸೇವೆಗೆ ‘ತಮ್ಮ’ ಬಲಿದಾನವನ್ನು ಕೊಟ್ಟ ಒಬ್ಬ ‘ಸ್ವಯಂ ಸೇವಕರು’; ಆದರಿಂದ ಜೀವನದ ವಿಷಾದತೆಯನ್ನು ಕಂಡುಂಡ ಸತ್ಯಾಗ್ರಹಿಗಳು. ತಮ್ಮ ಆ ಅನುಭವಗಳನ್ನು ಬಹಳ ಮಾರ್ಮಿಕವಾಗಿ ಇಲ್ಲಿ ಬಣ್ಣಿಸಿದ್ದಾರೆ. ಗ್ರಂಥಕರ್ತರು, ಈ ಕೃತಿಯನ್ನು ಹಿಂದೂಸ್ಥಾನೀ ಸೇವಾದಲದ ಸೇನಾನಿ ಡಾ। ಹರ್ಡಿಕರರಿಗೆ ಅರ್ಪಿಸಿದ್ದಾರೆ.

ಭಾರತದ ರಾಷ್ಟ್ರೀಯ ಆಂದೋಲನವು ತಿರಿಗಿ ಇಂದು ವಿರಾಡ್ರೂಪವನ್ನು ಹೊಂದುತ್ತಿರುವೀ ಕಾಲದಲ್ಲಿ ರಾಷ್ಟ್ರೀಯ ಜೀವನದ ಕಟು ಪರಿಚಯ ಕೊಡುವ ಈ ತೆರನ ಸಾಹಿತ್ಯಗಳ ಬಗ್ಗೆ ಜನತೆಯು ಹೆಚ್ಚಿನ ಆಸಕ್ತಿ ತೋರಿಸುವುದು ಸಹಜವಿದೆ. ಭಾರತದ ಇಂದಿನ ಮತ್ತು ಹಿಂದಿನ ಹೋರಾಟಗಳಲ್ಲಿ ಎಷ್ಟು ಎಷ್ಟೋ ಹೃದಯಗಳು, ಮೂಕಮೌನದಿಂದ ಸಹಿಸಿದ ಸಂಕಟಗಳ ವಿವರವು ರಮ್ಯ ರೋಮಾಂಚಕ ರಾಷ್ಟ್ರೀಯ ಇತಿಹಾಸವಾಗಿದೆ. ಅಂತಹ ಬೃಹತ್ ಇತಿಹಾಸದಲ್ಲಿ ಸೇರಲರ್ಹತೆಯುಳ್ಳ ಮಹತ್ವದೊಂದು ಅಧ್ಯಾಯವಿದು—ಈ ಪುಸ್ತಕದ ವಿವರವಾಗಿದೆ.

ರಾಷ್ಟ್ರಾಭಿಮಾನಿಯಾದ ವಿದ್ಯಾವಂತ ಯುವಕನೊಬ್ಬನು (ವಡಗೇನಹಳ್ಳಿ ಅಶ್ವತ್ಥ ನಾರಾಯಣರಾಯರು?) ಸುತ್ತಲೂ ಎದ್ದ ರಾಷ್ಟ್ರೀಯ ಆಂದೋಲನದ ಹುರುಪಿನಿಂದ ಹುರಿಗೊಂಡನು. ಚಳವಳದಲ್ಲಿ ಧುಮುಕಿದನು. ಬಡತಾಯಿಯೊಡನೆ ತಾನು ಹೋಗುವ ಭೀಷಣ ಕಾರ್ಯದ ವಿಷಯ ಸತ್ಯವನ್ನು ಹೇಳಲಾರದೆ ಸತ್ಯಾಗ್ರಹಕ್ಕೆ ಹೊರಡಬೇಕಾಯಿತು. ಅಜ್ಞಾತವಾಸ ಮಾಡಬೇಕಾಯಿತು. ಆಂದೋಲನ ಬಲಪಡಿಸಬೇಕಾಯಿತು. ಜೈಲಿನಲ್ಲಿ ‘ಸಿ’ ವರ್ಗದಲ್ಲಿ ಕೊಳೆಯಬೇಕಾಯಿತು. ಭಯಂಕರ ‘ಜೈಲು ರೋಗ’ಕ್ಕೆ ತುತ್ತಾಗಬೇಕಾಯಿತು; ಹೊಟ್ಟೆಯ ಪಾಡಿಗಾಗಿ ಮತ್ತೆ ಉದ್ಯೋಗ ಬೇಡ ಹೋಗಿ, ಅಧಿಕಾರಿಗಳಿಂದ ಅಪಮಾನ ಪಡೆಯಬೇಕಾಯಿತು! ಜೀವನದ ಘೋರ ಭೀಷಣ ಅನುಭವವನ್ನು ಆ ಸ್ವಯಂ ಸೇವಕನು ಅನುಭವಿಸಿದನು. ಸಹಿಸಲಾರದೆ ಸಹಿಸಲು ಶಕ್ತಿಯಿಲ್ಲದಿದ್ದರೂ ಸಹಿಸಿದನು. ಅಂತಹ ದಿನಚರಿಯ ಬರವಣಿಗೆಯಾದೀ ಪುಸ್ತಕದ ಶೈಲಿಯು ತೀಕ್ಷ್ಣತೆಯು ಹೃದಯವನ್ನು ಕೊರೆಯುತ್ತದೆ. ಅನುಭವಗಳನ್ನು ಇಷ್ಟು ಹೃದಯಂಗಮವಾಗಿ ಬರೆವ ಶಕ್ತಿಯು ಸಾಮಾನ್ಯವಾದುದೆನ್ನಲಾಗುವುದಿಲ್ಲ.

ಗಾಂಧಿ ನೆಹರುಗಳಂಥವರ ಜೀವನ ಚರಿತ್ರೆಗಳಲ್ಲಿ ನಾವು ಇತಿಹಾಸ ಪ್ರಸಿದ್ಧರೆನಿಸುವ ಉದಾತ್ತ ಪುರುಷರ ಜೀವಿತ ಘಟನೆಗಳನ್ನೋದುತ್ತೇವೆ; ಬೆರಗಾಗುತ್ತೇವೆ. ಶ್ರೀ ದಿವಾಕರರ ಸೆರೆಯ ಮರೆಯಲ್ಲಿ ನಾವು ಪ್ರಥಮವರ್ಗದ ಮುಂದಾಳುವಿನ ರಾಜಕೀಯ ಜೀವನ ಸಾಧನೆಗಳನ್ನು ಕಾಣುತ್ತೇವೆ; ಮೆಚ್ಚುತ್ತೇವೆ. ಆದರೆ ದೇಶ ಸರ್ವತ್ರ ನಡೆದ ಅಂತಹ ಮಹಾಂದೋಲನದಲ್ಲಿ ‘ಸಿ’ ವರ್ಗಕ್ಕೆ ಸೇರಿದ ಸಾವಿರಾರು ಮಂದಿ ಅಜ್ಞಾತವೀರ ಸತ್ಯಾಗ್ರಹಿಗಳ ಮೌನ ಸಂಕಷ್ಟಗಳ ವಿವರವನ್ನು ಶ್ರೀ ಅಶ್ವತ್ಥ ನಾರಾಯಣರಾಯರ ‘ಕೃತಿ’ಯಲ್ಲಿ ಅತ್ಯಂತ ಹೃದಯಸ್ಪರ್ಶಿಯಾಗಿ ನಾವು ನೋಡಬಹುದಾಗಿದೆ.

—ಕಯ್ಯಾರ.

* ಬಿಡುಗಡೆಯ ಬೆಲೆ, ಬರೆದವರು ವಡಗೇನಹಳ್ಳಿ ಅಶ್ವತ್ಥ ನಾರಾಯಣರಾವ್, ಧಾರವಾಡದ ಮನೋಹರ ಗ್ರಂಥಮಾಲೆಯ ೪೬ನೆಯ ಕುಸುಮ, ಬೆಲೆ ಹದಿನಾಲ್ಕಾಣೆ, ಪುಟಗಳು ೧೪೫+೮.



ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

THE CANARA INDUSTRIAL & BANKING SYNDICATE, LIMITED.

(Incorporated in British India. Liability of shareholders limited)

Estd) (1925

Head Office: UDIPI. S. India.

Authorised Capital	Rs. 50,00,000.
Subscribed Capital	Rs. 13,11,000.
Paid-up Capital	Rs. 5,50,000.
Reserves	Rs. 2,10,000.

35 Branches in the important commercial centres of Karnatak, Malabar and Rayalaseema Districts and in Bombay.

All kinds of Banking business transacted

Our new issue of Rs. 40 lakhs of 5% Tax Free umulative Preference Shares of Rs. 10 each is an ideal form of safe and remunerative investment with unique features.

Apply for Prospectus.

ಸಿನೆಮಾ ಪುಟ

ನಟನಟಿಯರ ಕುರಿತು-

ಕೆಲವು ಅಂಕೆ ಸಂಖ್ಯೆಗಳು

ನಟನಟಿಯರ ವಯಸ್ಸು ರೂಪಲಾವಣ್ಯ, ಕುಲಗೋತ್ರ ಮುಂತಾದುವುಗಳನ್ನು ತಿಳಿದು ಕೊಳ್ಳಬೇಕೆಂಬ ಅಪೇಕ್ಷೆ ಸಾಮಾನ್ಯವಾಗಿ ಪ್ರತಿಯೊಬ್ಬ ಚಲಚ್ಚಿತ್ರ ಪ್ರೇಮಿಗೂ ಇದೆ

ಡಾ। ಲಿಯೋರಾಸ್ಟನ್ ಎಂಬವರು ಹಾಲಿವುಡ್ಡಿನ ೩೦೨ ಮಂದಿ ನಟನಟಿಯರ ವಿಷಯವಾದ ಕೆಲವು ಅಂಕೆ ಸಂಖ್ಯೆಗಳಿಂದ ಸ್ವಾರಸ್ಯವಾದ ವಿಷಯಗಳು ಹೊರಬಿದ್ದಿವೆ

ಈ ೩೩೦ ಮಂದಿ ನಟನಟಿಯರಲ್ಲಿ ೪೫ ಮಂದಿ ಮಾತ್ರ ಕಳೆದ ೨೦ ವರ್ಷಗಳಿಗಿಂತ ಹೆಚ್ಚಾಗಿ ಚಲಚ್ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ, ೭೮ ಮಂದಿ ೧೯೨೦ ರಿಂದ ೧೯೨೯ ನೇ ಇಸವಿಯೊಳಗೆ ಚಲಚ್ಚಿತ್ರರಂಗಕ್ಕೆ ಪ್ರವೇಶಿಸಿದರು

ಚಲಚ್ಚಿತ್ರಗಳಲ್ಲಿ ಅಭಿನಯಿಸುವ ಸ್ತ್ರೀಯರ ಸರಾಸರಿ ವಯಸ್ಸು ಗಂಡಸರ ವಯಸ್ಸಿಗಿಂತ ಸಾಮಾನ್ಯವಾಗಿ ಕಡಿಮೆಯಾಗಿದೆ

ಅಭಿನೇತ್ರಿಯರಲ್ಲಿ ಸೇಕಡಾ ೨೦ಕ್ಕಿಂತ ಹೆಚ್ಚಾಗಿ ೨೫ ವರ್ಷ ವಯಸ್ಸಾಗದವರಿದ್ದಾರೆ

ಆದರೆ ೩೦ ವರ್ಷ ವಯಸ್ಸಾಗದ ನಟರ ಸೇಕಡಾ ೬೦ರಷ್ಟು ಮಾತ್ರವಿದ್ದಾರೆ. ಸೇಕಡಾ ೬೫ ಮಂದಿ ಅಭಿನೇತ್ರಿಯರಿಗೆ ೪೦ ವರ್ಷ ವಯಸ್ಸಾಗಲಿಲ್ಲ ಆದರೆ ನಲವತ್ತು ವರ್ಷ ವಯಸ್ಸಾಗದ ನಟರು ಸೇ ೩೯ರಷ್ಟು ಮಾತ್ರ ಇದ್ದಾರೆ

ಮೊದಲು ನಾಟಕಗಳಲ್ಲಿದ್ದು ಅನಂತರ ಚಲಚ್ಚಿತ್ರ ರಂಗವನ್ನು ಪ್ರವೇಶಿಸಿದ ೨೧೨ ಮಂದಿ ನಟನಟಿಯರಲ್ಲಿ ೬೦ ಜನ ಮಾತ್ರ ರಂಗಭೂಮಿಗೆ ಹಿಂದಿರುಗಿದರು ಉಳಿದವರೆಲ್ಲಾ ಚಲಚ್ಚಿತ್ರಗಳಲ್ಲೇ ಉಳಿದುಕೊಂಡಿದ್ದಾರೆ

ಇದರಿಂದ ಚಲಚ್ಚಿತ್ರಗಳ ಪ್ರಾಮುಖ್ಯತೆಯ ಫಲವಾಗಿ ನಾಟಕಗಳಿಗೆ ಮನ್ನಣೆ ಕಡಿಮೆಯಾಗಿರುವುದೂ, ನಟನಟಿಯರಿಗೆ ನಾಟಕಗಳಲ್ಲಿ ಅಭಿನಯಿಸುವುದಕ್ಕಿಂತ ಚಲಚ್ಚಿತ್ರಗಳಲ್ಲಿ ಅಭಿನಯಿಸುವುದರಲ್ಲಿ ಹೆಚ್ಚು ಅಭಿರುಚಿಯಿರುವುದೂ ವ್ಯಕ್ತವಾಗುತ್ತವೆ

ನನಗೆ ಪ್ರಶಸ್ತಿ ಬೇಡ

ಚಾಪ್ಲಿನ್ ಹೇಳಿದ

ನ್ಯೂಯಾರ್ಕಿನ ಚಲಚ್ಚಿತ್ರ ವಿಮರ್ಶಕರು ಪ್ರತಿ ವರುಷವೂ ಆ ವರ್ಷದ ಉತ್ತಮ ನಟನಿಗಾಗಿ ಅಥವಾ ನಟಿಗಾಗಿ ಒಂದು ಪ್ರಶಸ್ತಿಯನ್ನು ಏರ್ಪಡಿಸಿದ್ದಾರೆ ಕಳೆದ ವರ್ಷದಲ್ಲಿ ಚಾರ್ಲಿ ಚಾಪ್ಲಿನನ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರವು ಅತ್ಯುತ್ತಮವೆಂದು ಚಾಪ್ಲಿನ್ ಅದರಲ್ಲಿ ಉತ್ತಮವಾಗಿ ನಟಿಸಿರುವನೆಂದೂ ಅದಾಗಿ, ಅವನಿಗೆ ಆ ಪ್ರಶಸ್ತಿಯನ್ನು ಕೊಡುವುದೆಂದೂ ಅವರೆಲ್ಲರೂ ಕೂಡಿ ನಿಷ್ಕರ್ಷಿಸಿದರು- ಆದರೆ ಚಾಪ್ಲಿನನು ತನಗೆ ಆ ಪ್ರಶಸ್ತಿ ಬೇಡವೆಂದು ಹೇಳಿದನು.

'ನಾನು ಪ್ರಶಸ್ತಿಯನ್ನು ಸ್ವೀಕರಿಸಿದರೆ, ಆ ಬಹುಮಾನಕ್ಕಾಗಿ ನಟನಟಿಯರು ಸ್ಪರ್ಧೆ ನಡೆಸುತ್ತಿದ್ದಾರೆಂಬ ದಣಿ ಒಂಬಲ ಕೊಟ್ಟಂತಾಯಿತು. ಇಂಥ ಸ್ಪರ್ಧೆ ಇರುವುದು ಒಳಿತಲ್ಲ ಜನರ ಜನರಿಗಾಗಿ ಚಿತ್ರವನ್ನು ತಯಾರಿಸಿದೆ. ಜನರಂಜನೆಯೇ ಪ್ರತಿಯೊಬ್ಬ ನಟನ ಉದ್ದೇಶ'' ಹೀಗೆಂದು ಚಾಪ್ಲಿನ್ ಹೇಳಿದ

ಕಲ್ಕತ್ತೆಯಲ್ಲಿ

ಕಾರ್ಟೂನ್ ಚಿತ್ರಗಳನ್ನು ತಯಾರಿಸುವರೆ-

ಒಂದು ಹೊಸ ಸಂಸ್ಥೆಯನ್ನು ಏರ್ಪಡಿಸಿರುವರು ದೀಪಿಕಾ ಪಿಕ್ಚರ್ಸ್ ಎಂದು ಈ ಸಂಸ್ಥೆಯ ಹೆಸರು — ಈಗಾಗಲೇ ಈ ಸಂಸ್ಥೆಯವರು ೬೦ ಸಾವಿರ ಅಡಿಗಳಷ್ಟು ಕಾರ್ಟೂನ್ ಚಿತ್ರಗಳನ್ನು ತಯಾರಿಸಿದ್ದಾರೆಂದು ತಿಳಿದುಬಂದಿದೆ

ಕಾಲಹರಣ ಮಾಡುತ್ತಾರೆ

ಹಾಲಿವುಡ್ಡಿನ ಅನೇಕ ಪ್ರಖ್ಯಾತ ನಟನಟಿಯರು ಕೆಲವರು ಈಗ ಮಾಡತಕ್ಕ ಕೆಲಸಗಳೇನೂ ಇಲ್ಲದೆ ವ್ಯರ್ಥ ಕಾಲಹರಣ ಮಾಡುತ್ತಿದ್ದಾರಂತೆ ಆದರೆ ಅಲ್ಲಿನ ಚಲಚ್ಚಿತ್ರ ನಿರ್ಮಾಪಕರು ಉತ್ತಮ ನಟನಟಿಯರು ಬೇಕಾಗಿದ್ದಾರೆಂದು ಹಾಹಾಕಾರ ಕೊಡುತ್ತಿದ್ದಾರೆ.

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ರಕ್ತ ವಿಪ್ಲವವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಆದುದರಿಂದ ಒಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)

ಆಯುರ್ವೇದ ಶಾಸ್ತ್ರಿ,

ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ-ಔಷಧಾಲಯ

ಡಾಕ್ಕಾ, ಬಂಗಾಲ

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರಿನ ಏಜೆಂಟ್ ಶಾ ಕಂಪೆನಿ, ಹಂಪನಕಟ್ಟಾ ಮಂಗಳೂರು



ನಾವೆಲ್ಲರೂ ಅದನ್ನು ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬೇಕಾಗಿದೆ ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೆ ಶಿಫಾರಸು ಮಾಡುತ್ತಾರೆ ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ವಾಳುವುದು

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ ಸ್ನಾನಾನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಪುಸ್ತಕಾವಲೋಕನ:

ಬಿಡುಗಡೆಯ ಬೆಲೆ*

"ತಾಯಿನಾಡಿನ ಬಿಡುಗಡೆಗಾಗಿ ರಾಷ್ಟ್ರೀಯ ಚಳವಳದಲ್ಲಿ ತೊಡಗಿದವನಿಗೆ ಪ್ರಾಪ್ತವಾಗುವ ವಿಶಿಷ್ಟ ರೀತಿಯ ಸಂಕಟಗಳೆನಿಸಿಕೊಳ್ಳಬಹುದಾದ ಸನ್ನಿವೇಶದ ಸರಸ ವರ್ಣನೆಯಿದು....ಎಷ್ಟೋ ಜನ ಯುವಕರು ಶಾಲೆ ಕಾಲೇಜುಗಳಿಗಿಂತ ಓದು ಹೊಟ್ಟೆಗಿಂತ ಹೆಚ್ಚೆಂದು ತಿಳಿದ ಹಾದಿಗಾಗಿ ಅತಿಶಯ ತ್ಯಾಗ ಮಾಡಿದ್ದಾರೆ; ತಮಗೆ ಹೇಳಿದ ರಾಷ್ಟ್ರೀಯ ಕರ್ತವ್ಯಗಳನ್ನು ಪಾಲನೆ ಮಾಡಿದ್ದಾರೆ; ನಾಡಿನ ಕರೆಗೆ ಓ ಕೊಟ್ಟಿದ್ದಾರೆ; ಇಷ್ಟೆಲ್ಲಾ ಮಾಡಿ ಕೊನೆಗೆ ಮಾಡಲು ಕೆಲಸವಿಲ್ಲದೆ ನೆರವಾಗುವ ದಿಕ್ಕಿಲ್ಲದೆ ಬಿಕ್ಕೆ ಬೇಡುವ 'ಹಾಗಾಗಿದ್ದಾರೆ .... ಬಾಳು ಘೋರ ವಿಷಾದವಾಗಿ ಕಾಣುತ್ತದೆ" -ಹೀಗೆಂದು ಈ ಪುಸ್ತಕದ ಮುನ್ನುಡಿ ಬರೆದ ಶ್ರೀ. ಪಟ್ಟಾಭಿ ಸೀತಾರಾಮಯ್ಯನವರು ಪುಸ್ತಕದ ವಿಷಯವನ್ನು ಕೊಂಚದರಲ್ಲಿಯೇ ಹೃದಯಂಗಮವಾಗಿ ತಿಳಿಸಿದ್ದಾರೆ.

"೧೯೩೦ನೆಯ ವರ್ಷದಲ್ಲಿ ಉಪ್ಪಿನ ದಂಡಯಾತ್ರೆಯನ್ನೂ ಅಸಹಕಾರ ಚಳವಳಿವನ್ನೂ ಆ ವರ್ಷದ ವೈಭವವನ್ನೂ ಸಂಕಟವನ್ನೂ ಚಿತ್ರಿಸುವ 'ಬಿಡುಗಡೆಯ ಬೆಲೆ'ಯು....'ಕ'ವರ್ಗದಲ್ಲಿ ಸೆರೆಯಾಳಾಗಿ ಪರಿಪರಿಯಾಗಿ ಅನುಭವಿಸಿದ ರಹಸ್ಯಾವಧಿ ಅನಾಮಿಕರ ಕೈಪಿಡಿಯಾಗಿದೆ." ಹೀಗೆಂದು ಇದಕ್ಕೆ ಇನ್ನೊಂದು ಮುನ್ನುಡಿ ಬರೆದ ಶ್ರೀ ಗೋಕಾಕರು ಬರೆಯುತ್ತಾ, 'ಬಿಡುಗಡೆಯ ಬೆಲೆ'ಯು ಒಬ್ಬ ಕಲಾವಿದರ ಕಲಾಕೃತಿ'ಯೆಂದೂ, 'ಕಾವ್ಯದಲ್ಲಿ ಕಲಿಸಬೇಕಾದ ಪಾಠವನ್ನು ಕಾವ್ಯಪಾತ್ರಗಳಲ್ಲಿ ಕಲೋಪಾಸಕರು ಕಲಿಸುತ್ತಾರೆ'ಂದೂ ಅಭಿಪ್ರಾಯಪಟ್ಟಿದ್ದಾರೆ.

ಈ ಎರಡು ಮುನ್ನುಡಿಗಳ ವಾಕ್ಯಗಳನ್ನುದ್ಧರಿಸಿ ಕೊಟ್ಟುದರಿಂದಲೇ ವಾಚಕರಿಗೆ ಪುಸ್ತಕದ ಸ್ವರೂಪ ವಿಷಯಗಳ ಪರಿಚಯವಾಗಬಹುದು. ಒಬ್ಬ ಸ್ವಯಂಸೇವಕ, ಸತ್ಯಾಗ್ರಹಿಯ ದಿನಚರಿಯಿದು. ಇದನ್ನು ಬರೆದ ವಡಗೇನಹಳ್ಳಿ ಅಶ್ವತ್ಥ ನಾರಾಯಣ ರಾಯರು ೧೯೩೦ರ ಸತ್ಯಾಗ್ರಹ ಕಾಲದಲ್ಲಿ ರಾಷ್ಟ್ರಸೇವೆಗೆ ತಮ್ಮ ಬಲಿದಾನವನ್ನು ಕೊಟ್ಟ ಒಬ್ಬ ಸ್ವಯಂಸೇವಕರು; ಆದರಿಂದ ಜೀವನದ ವಿಷಾದತೆಯನ್ನು ಕಂಡುಂಡ ಸತ್ಯಾಗ್ರಹಿಗಳು. ತಮ್ಮ ಆ ಅನುಭವಗಳನ್ನು ಬಹಳ ಮಾರ್ಮಿಕವಾಗಿ ಇಲ್ಲಿ ಬಣ್ಣಿಸಿದ್ದಾರೆ. ಗ್ರಂಥಕರ್ತರು, ಈ ಕೃತಿಯನ್ನು ಹಿಂದೂಸ್ತಾನೀ ಸೇವಾದಳದ ಸೇನಾನಿ ಡಾ॥ ಹರ್ಡೀಕರರಿಗೆ ಅರ್ಪಿಸಿದ್ದಾರೆ.

ಭಾರತದ ರಾಷ್ಟ್ರೀಯ ಆಂದೋಲನವು ತಿರಿಗಿ ಇಂದು ವಿರಾಡ್ರೂಪವನ್ನು ಹೊಂದುತ್ತಿರುವೀ ಕಾಲದಲ್ಲಿ ರಾಷ್ಟ್ರೀಯ ಜೀವನದ ಕಟು ಪರಿಚಯ ಕೊಡುವ ಈ ತೆರನ ಸಾಹಿತ್ಯಗಳ ಬಗ್ಗೆ ಜನತೆಯು ಹೆಚ್ಚಿನ ಆಸಕ್ತಿ ತೋರಿಸುವುದು ಸಹಜವಿದೆ. ಭಾರತದ ಇಂದಿನ-ಮತ್ತು ಹಿಂದಿನ ಹೋರಾಟಗಳಲ್ಲಿ ಎಷ್ಟು ಎಷ್ಟೋ ಹೃದಯಗಳು, ಮೂಕಮೌನದಿಂದ ಸಹಿಸಿದ ಸಂಕಟಗಳ ವಿವರವು ರಮ್ಯ ರೋಮಾಂಚಕ ರಾಷ್ಟ್ರೀಯ ಇತಿಹಾಸವಾಗಿದೆ. ಅಂತಹ ಬೃಹತ್ ಇತಿಹಾಸದಲ್ಲಿ ಸೇರಲರ್ಹತೆಯುಳ್ಳ ಮಹತ್ವದೊಂದು ಅಧ್ಯಾಯವಿದು—ಈ ಪುಸ್ತಕದ ವಿವರವಾಗಿದೆ.

ರಾಷ್ಟ್ರಾಭಿಮಾನಿಯಾದ ವಿದ್ಯಾವಂತ ಯುವಕನೊಬ್ಬನು (ವಡಗೇನಹಳ್ಳಿ ಅಶ್ವತ್ಥ ನಾರಾಯಣರಾಯರು?) ಸುತ್ತಲೂ ಎದ್ದ ರಾಷ್ಟ್ರೀಯ ಆಂದೋಲನದ ಹುರುಪಿನಿಂದ ಹುರಿಗೊಂಡವನು ಚಳವಳದಲ್ಲಿ ಧುಮುಕಿದನು. ಬಡತಾಯಿಯೊಡನೆ ತಾನು ಹೋಗುವ ಭೀಷಣ ಕಾರ್ಯದ ವಿಷಯ ಸತ್ಯವನ್ನು ಹೇಳಲಾರದೆ ಸತ್ಯಾಗ್ರಹಕ್ಕೆ ಹೊರಡಬೇಕಾಯಿತು. ಅಜ್ಞಾತವಾಸ ಮಾಡಬೇಕಾಯಿತು. ಆಂದೋಲನ ಬಲಪಡಿಸಬೇಕಾಯಿತು. ಜೈಲಿನಲ್ಲಿ 'ಸಿ'ವರ್ಗದಲ್ಲಿ ಕೊಳೆಯಬೇಕಾಯಿತು. ಭಯಂಕರ 'ಜೈಲು ರೋಗ'ಕ್ಕೆ ತುತ್ತಾಗಬೇಕಾಯಿತು; ಹೊಟ್ಟೆಯ ಪಾಡಿಗಾಗಿ ಮತ್ತೆ ಉದ್ಯೋಗ ಬೇಡ ಹೋಗಿ, ಅಧಿಕಾರಿಗಳಿಂದ ಅಪಮಾನ ಪಡೆಯಬೇಕಾಯಿತು! ಜೀವನದ ಘೋರ ಭೀಷಣ ಅನುಭವವನ್ನು ಆ ಸ್ವಯಂಸೇವಕನು ಅನುಭವಿಸಿದನು. ಸಹಿಸಲಾರದೆ ಸಹಿಸಲು ಶಕ್ತಿಯಿಲ್ಲದಿದ್ದರೂ ಸಹಿಸಿದನು. ಅಂತಹ ದಿನಚರಿಯ ಬರವಣಿಗೆಯಾದೀ ಪುಸ್ತಕದ ಶೈಲಿಯು ತೀಕ್ಷ್ಣತೆಯು ಹೃದಯವನ್ನು ಕೊರೆಯುತ್ತದೆ. ಅನುಭವಗಳನ್ನು ಇಷ್ಟು ಹೃದಯಂಗಮವಾಗಿ ಬರೆವ ಶಕ್ತಿಯು ಸಾಮಾನ್ಯವಾದುದೆನ್ನಲಾಗುವುದಿಲ್ಲ.

ಗಾಂಧಿ ನೆಹರುಗಳಂಥವರ ಜೀವನಚರಿತ್ರೆಗಳಲ್ಲಿ ನಾವು ಇತಿಹಾಸ ಪ್ರಸಿದ್ಧರೆನಿಸುವ ಉದಾತ್ತ ಪುರುಷರ ಜೀವಿತ ಘಟನೆಗಳನ್ನೋದುತ್ತೇವೆ, ಬೆರಗಾಗುತ್ತೇವೆ. ಶ್ರೀ ದಿವಾಕರರ ಸೆರೆಯ ಮರೆಯಲ್ಲಿ ನಾವು ಪ್ರಥಮವರ್ಗದ ಮುಂದಾಳುವಿನ ರಾಜಕೀಯ ಜೀವನ ಸಾಧನೆಗಳನ್ನು ಕಾಣುತ್ತೇವೆ; ಮೆಚ್ಚುತ್ತೇವೆ. ಆದರೆ ದೇಶ ಸರ್ವತ್ರ ನಡೆದ ಅಂತಹ ಮಹಾಂದೋಲನದಲ್ಲಿ 'ಸಿ' ವರ್ಗಕ್ಕೆ ಸೇರಿದ ಸಾವಿರಾರು ಮಂದಿ ಅಜ್ಞಾತವೀರ ಸತ್ಯಾಗ್ರಹಿಗಳ ಮೌನ ಸಂಕಷ್ಟಗಳ ವಿವರವನ್ನು ಶ್ರೀ ಅಶ್ವತ್ಥ ನಾರಾಯಣರಾಯರ 'ಈ ಕೃತಿ'ಯಲ್ಲಿ ಅತ್ಯಂತ ಹೃದಯಸ್ಪರ್ಶಿಯಾಗಿ ನಾವು ನೋಡಬಹುದಾಗಿದೆ.

—ಕಡಸ್ಕಾರ.

* ಬಿಡುಗಡೆಯ ಬೆಲೆ, ಬರೆದವರು ವಡಗೇನಹಳ್ಳಿ ಅಶ್ವತ್ಥ ನಾರಾಯಣರಾವ್, ಧಾರವಾಡದ ಮನೋಹರ ಗ್ರಂಥಮಾಲೆಯ ೪೬ನೆಯ ಕುಸುಮ. ಬೆಲೆ ಹದಿನೆಂಟಾಣೆ. ಪುಟಗಳು ೧೪೫+೮.

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆ ಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕ್ಕೊಂದು ಸಂಜೀವಿನಿ.

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್.

K.A 2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

THE CANARA INDUSTRIAL & BANKING SYNDICATE, LIMITED.

(Incorporated in British India Liability of shareholders limited)

Estd) (1925

Head Office: UDIPI. S. India.

Authorised Capital	Rs. 50,00,000.
Subscribed Capital	Rs. 13,11,000.
Paid-up Capital	Rs. 5,50,000.
Reserves	Rs. 2,10,000.

35 Branches in the important commercial centres of Karnatak, Malabar and Rayalaseema Districts and in Bombay.

All kinds of Banking business transacted.

Our new issue of Rs. 40 lakhs of 5% Tax Free umulative Preference Shares of Rs. 10 each is an ideal form of safe and remunerative investment with unique features.

Apply for Prospectus.

ಸಿನೆಮಾ ಪುಟ

ನಟನಟಿಯರ ಕುರಿತು-

ಕೆಲವು ಅಂಕಿ ಸಂಖ್ಯೆಗಳು

ನಟನಟಿಯರ ವಯಸ್ಸು ರೂಪಲಾವಣ್ಯ, ಕುಲಗೋತ್ರ ಮುಂತಾದುವುಗಳನ್ನು ತಿಳಿದು ಕೊಳ್ಳಬೇಕೆಂಬ ಅಪೇಕ್ಷೆ ಸಾಮಾನ್ಯವಾಗಿ ಪ್ರತಿಯೊಬ್ಬ ಚಲಚ್ಚಿತ್ರ ಪ್ರೇಮಿಗೂ ಇದೆ.

ಎ. ಲಿಯೋರಾಸ್ಟನ್ ಎಂಬವರು ಹಾಲಿವುಡ್ಡಿನ ೩೦೦ ಮಂದಿ ನಟನಟಿಯರ ವಿಷಯವಾದ ಕೆಲವು ಅಂಕೆ ಸಂಖ್ಯೆಗಳಿಂದ ಸ್ವಾರಸ್ಯವಾದ ವಿಷಯಗಳು ತೋರಬಿದ್ದಿವೆ.

ಈ ೩೩೦ ಮಂದಿ ನಟನಟಿಯರಲ್ಲಿ ... ಮಂದಿ ಮಾತ್ರ ಕಳೆದ ೨೦ ವರ್ಷಗಳಿಗಿಂತ ಹೆಚ್ಚಾಗಿ ಚಲಚ್ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ, ೭೮ ಮಂದಿ ೧೯೨೦ ರಿಂದ ೧೯೨೯ ನೇ ಇಸವಿಯೊಳಗೆ ಚಲಚ್ಚಿತ್ರರಂಗಕ್ಕೆ ಪ್ರವೇಶಿಸಿದರು

ಚಲಚ್ಚಿತ್ರಗಳಲ್ಲಿ ಅಭಿನಯಿಸುವ ಸ್ತ್ರೀಯರ ಸರಾಸರಿ ವಯಸ್ಸು ಗಂಡಸರ ವಯಸ್ಸಿಗಿಂತ ಸಾಮಾನ್ಯವಾಗಿ ಕಡಿಮೆಯಾಗಿದೆ

ಅಭಿನೇತ್ರಿಯರಲ್ಲಿ ಸೇಕಡಾ ೨೦ಕ್ಕಿಂತ ಹೆಚ್ಚಾಗಿ ೨೫ ವರ್ಷ ವಯಸ್ಸಾಗದವರಿದ್ದಾರೆ

ಆದರೆ ೩೦ ವರ್ಷ ವಯಸ್ಸಾಗದ ನಟರು ಸೇಕಡಾ ೬ರಷ್ಟು ಮಾತ್ರವಿದ್ದಾರೆ. ಸೇಕಡಾ ೬೫ ಮಂದಿ ಅಭಿನೇತ್ರಿಯರಿಗೆ ೪೦ ವರ್ಷ ವಯಸ್ಸಾಗಲಿಲ್ಲ. ಆದರೆ ನಲವತ್ತು ವರ್ಷ ವಯಸ್ಸಾಗದ ನಟರು ಸೇ. ೩೯ರಷ್ಟು ಮಾತ್ರ ಇದ್ದಾರೆ

ಮೊದಲು ನಾಟಕಗಳಲ್ಲಿದ್ದು ಅನಂತರ ಚಲಚ್ಚಿತ್ರ ರಂಗವನ್ನು ಪ್ರವೇಶಿಸಿದ ೨೧೨ ಮಂದಿ ನಟನಟಿಯರಲ್ಲಿ ೬೦ ಜನ ಮಾತ್ರ ರಂಗಭೂಮಿಗೆ ಹಿಂದಿರುಗಿದರು ಉಳಿದವರೆಲ್ಲಾ ಚಲಚ್ಚಿತ್ರಗಳಲ್ಲೇ ಉಳಿದುಕೊಂಡಿದ್ದಾರೆ

ಇದರಿಂದ ಚಲಚ್ಚಿತ್ರಗಳ ಪ್ರಾಮುಖ್ಯತೆಯು ಫಲವಾಗಿ ನಾಟಕಗಳಿಗೆ ಮನ್ನಣೆ ಕಡಿಮೆಯಾಗಿರುವುದೂ, ನಟನಟಿಯರಿಗೆ ನಾಟಕಗಳಲ್ಲಿ ಅಭಿನಯಿಸುವುದಕ್ಕಿಂತ ಚಲಚ್ಚಿತ್ರಗಳಲ್ಲಿ ಅಭಿನಯಿಸುವುದರಲ್ಲಿ ಹೆಚ್ಚು ಅಭಿರುಚಿಯಿರುವುದೂ ವ್ಯಕ್ತವಾಗುತ್ತದೆ

ನನಗೆ ಪ್ರಶಸ್ತಿ ಬೇಡ

ಚಾಪ್ಲಿನ್ ಹೇಳಿದ

ನ್ಯೂಯಾರ್ಕಿನ ಚಲಚ್ಚಿತ್ರ ವಿಮರ್ಶಕರು ಪ್ರತಿ ವರುಷವೂ ಆ ವರ್ಷದ ಉತ್ತಮ ನಟನಿಗಾಗಿ ಅಥವಾ ನಟಿಗಾಗಿ ಒಂದು ಪ್ರಶಸ್ತಿಯನ್ನು ಏರ್ಪಡಿಸಿದ್ದಾರೆ ಕಳೆದ ವರ್ಷದಲ್ಲಿ ಚಾರ್ಲಿ ಚಾಪ್ಲಿನನ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರವು ಅತ್ಯುತ್ತಮವೆಂದು ಚಾಪ್ಲಿನ್ ಅದರಲ್ಲಿ ಉತ್ತಮವಾಗಿ ನಟಿಸಿರುವನೆಂದೂ, ಅದಾಗಿ, ಅವನಿಗೆ ಆ ಪ್ರಶಸ್ತಿಯನ್ನು ಕೊಡುವುದೆಂದೂ ಅವರೆಲ್ಲರೂ ಕೂಡಿ ನಿಷ್ಕರ್ಷಿಸಿದರು— ಆದರೆ ಚಾಪ್ಲಿನನು ತನಗೆ ಆ ಪ್ರಶಸ್ತಿ ಬೇಡವೆಂದು ಹೇಳಿದನು.

'ನಾನು ಪ್ರಶಸ್ತಿಯನ್ನು ಸ್ವೀಕರಿಸಿದರೆ, ಆ ಬಹುಮಾನಕ್ಕಾಗಿ ನಟನಟಿಯರು ಸ್ಪರ್ಧೆ ನಡೆಸುತ್ತಿದ್ದಾರೆಂಬ ದಕ್ಕೆ ... ಲ ಕೊಟ್ಟಂತಾಯಿತು. ಇಂಥ ಸ್ಪರ್ಧೆ ಇರುವುದು ಒಳಿತಲ್ಲ ಜನರು ಜನಗಾಗಿ ಚಿತ್ರವನ್ನು ತಯಾರಿಸಿದೆ. ಜನರು ಜನಿಯೇ ಪ್ರತಿಯೊಬ್ಬ ನಟನ ಉದ್ದೇಶ' ಹೀಗೆಂದು ಚಾಪ್ಲಿನ್ ಹೇಳಿದ

ಕಲ್ಕತ್ತೆಯಲ್ಲಿ

ಕಾರ್ಟೂನ್ ಚಿತ್ರಗಳನ್ನು ತಯಾರಿಸುವರು—

ಒಂದು ಹೊಸ ಸಂಸ್ಥೆಯನ್ನು ಏರ್ಪಡಿಸಿರುವರು. ದೀಪಿಕಾ ಪಿಕ್ಚರ್ಸ್ ಎಂದು ಈ ಸಂಸ್ಥೆಯ ಹೆಸರು. ಈಗಾಗಲೇ ಈ ಸಂಸ್ಥೆಯವರು ೬೦ ಸಾವಿರ ಅಡಿಗಳಷ್ಟು ಕಾರ್ಟೂನ್ ಚಿತ್ರಗಳನ್ನು ತಯಾರಿಸಿದ್ದಾರೆಂದು ತಿಳಿದುಬಂದಿದೆ

ಕಾಲಹರಣ ಮಾಡುತ್ತಾರೆ

ಹಾಲಿವುಡ್ಡಿನ ಅನೇಕ ಪ್ರಖ್ಯಾತ ನಟನಟಿಯರ ಕೆಲಸರು ಈಗ ಮಾಡತಕ್ಕ ಕೆಲಸಗಳೇನೂ ಇಲ್ಲದೆ ವ್ಯರ್ಥ ಕಾಲಹರಣ ಮಾಡುತ್ತಿದ್ದಾರಂತೆ ಆದರೆ ಅಲ್ಲಿನ ಚಲಚ್ಚಿತ್ರ ನಿರ್ಮಾಪಕರು ಉತ್ತಮ ನಟನಟಿಯರು ಬೇಕಾಗಿದ್ದಾರೆಂದು ಜಾಹೀರಾತು ಕೊಡುತ್ತಿದ್ದಾರೆ

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವ್ರತ ಪಾಲನೆಯು ಕ್ಷೀಣಿಸಿದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿದ್ದಾರೆ, ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಅದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಅದರ ಮಹತ್ವವನ್ನು ತಿಳಿಯಿರೆಂಬುದೇ ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು

½ ಸೇರಿಗೆ ರೂ 4



ಅಧ್ಯಕ್ಷ ಡಾ. ಜೋಗೇಶ್ ಚಂದ್ರಘೋಷ್, ಎಂ ಎ, ಎಫ್ ಸಿ ಎಸ್ (ಲಂಡನ್) ಎಂ ಸಿ ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ

ಮಂಗಳೂರಿನ ಏಜೆಂಟ್ ಶಾ ಕಲಿಶೆಸಿ, ಹಂಪನಕಟ್ಟಾ ಮಂಗಳೂರು



ನಾವೆಲ್ಲರೂ ಅದನ್ನು ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಕಲರಿಗೂ ತಮ್ಮ ಶರೀರ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ ಇದಕ್ಕೆ ಇದರ ಔಷಧೀಯ ಕ್ರಿಯಾಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜಿಗಳುಂಟಾದಲ್ಲಿ ಇದ ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನು ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ವಿಚಿತ್ರ ಪ್ರಪಂಚ

ಹಕ್ಕಿಗಳ ಪ್ರಣಯ ಕ್ರಮ

ಹಕ್ಕಿಗಳ ಪ್ರಣಯ ಕ್ರಮವು ಬಹಳ ವಿಚಿತ್ರವಾಗಿದೆ. ಅದು ಮನುಷ್ಯನ ನಾನಾ ವಿಧ ಪ್ರಣಯ ಕ್ರಮಗಳಿಗಿಂತಲೂ ವಿಚಿತ್ರವಾಗಿರುತ್ತದೆ. ಅದನ್ನು ನೋಡುವಾಗ ಪ್ರಣಯ ಬೀರುವ ಕ್ರಮಗಳನ್ನು ಮನುಷ್ಯನು ಹಕ್ಕಿಗಳಿಂದಲೇ ಕಲಿತುಕೊಂಡನೋ ಎಂಬ ಸಂದೇಹವೂ ಉಂಟಾಗುತ್ತದೆ. ಪೆಂಗ್ವಿನ್ ಎಂಬ ಹಕ್ಕಿಯ ಪ್ರಣಯ ಕ್ರಮವು ಬಹಳ ಮನಮೋಹಕವಾಗಿರುವುದು. ಆ ಜಾತಿಯ ಗಂಡು ಹಕ್ಕಿಯು ಆ ಜಾತಿಯ ಯಾವುದಾದರೂ ಹೆಣ್ಣು ಹಕ್ಕಿಯನ್ನು ಕಂಡು ಮೋಹಗೊಂಡಿತೆಂದರೆ, ಅದು ಒಂದು ಸುಂದರವಾದ ಗೋಲಾಕಾರದ ಸಣ್ಣ ಕಲ್ಲು ಹರಳನ್ನು ತನ್ನ ಕೊಕ್ಕಿನಲ್ಲಿ ಎತ್ತಿಕೊಂಡು ಅತ್ಯಂತ ಅಭಿಮಾನ ಮತ್ತು ಒನಪಿನಿಂದ ನಡೆಯುತ್ತ ಹೆಣ್ಣು ಹಕ್ಕಿಯ ಮುಂದೆ ಪ್ರೀತಿಯಿಂದ ತಂದಿಡುತ್ತದೆ. ಹೆಣ್ಣು ಹಕ್ಕಿ ಗಂಡಿನ ಮನೋಭಾವನೆಯನ್ನು ತಿಳಿದು ಆ ಕಲ್ಲನ್ನು ತನ್ನ ಕೊಕ್ಕಿನಲ್ಲಿ ಎತ್ತಿಕೊಂಡರೆ ಅವೆರಡೂ ಜತೆಯಾಗಿ ಗಂಡಹೆಂಡಿರಾಗಿ ಸಂಸಾರ ಮಾಡಿಕೊಳ್ಳುವುವು. ಹೆಣ್ಣು ಹಕ್ಕಿ ಆ ಕಲ್ಲನ್ನು ಕೊಕ್ಕಿನಲ್ಲಿ ಎತ್ತಿಕೊಳ್ಳದಿದ್ದರೆ ಗಂಡು ಅದನ್ನು ಎತ್ತಿಕೊಂಡು ಪುನಃ ತನ್ನ ಮನ ಒಪ್ಪುವ ಬೇರೆ ಹಕ್ಕಿಯ ಕಡೆಗೆ ಹೋಗುವುದು. ಈ ಹಕ್ಕಿಗಳ ಮಿಲನಕ್ಕೆ ಪರಸ್ಪರ ಪ್ರೇಮಭಾವನೆಯೇ ಮುಖ್ಯವಾಗಿದೆ.

ರಕ್ತ ಪರೀಕ್ಷೆಯಿಂದ ಹೆತ್ತವರ ನಿಶ್ಚಯ

ಎಲ್ಲರ ರಕ್ತ ಕೆಂಪು; ಅದರಲ್ಲೇನು ಭೇದವಿದೆ ಎಂದು ಸಾಮಾನ್ಯವಾಗಿ ಜನರೆಲ್ಲರೂ ಆಡಿಕೊಳ್ಳುತ್ತಾರೆ. ಆದರೆ ಬೇರೆ ಬೇರೆಯವರ ರಕ್ತವು ಬೇರೆ ಬೇರೆ ವಿಶಿಷ್ಟ ಗುಣವುಳ್ಳದಾಗಿದೆ ಎಂದು ವಿಜ್ಞಾನಿಗಳು ಹೇಳುವರು. ಅನೇಕ ಬಾರಿ ಒಂದು ಮಗುವಿನ ತಾಯಿತಂದೆ ಯಾರೆಂದು ತಿಳಿಯುವ ಅಗತ್ಯ ಬೀಳುತ್ತದೆ. ಇಷ್ಟರ ತನಕ ಅಂಥ ಸಂದರ್ಭದಲ್ಲಿ ಮಗುವಿನ ಮುಖ, ಕಣ್ಣು, ಬೆರಳು ಮೊದಲಾದ ಅಂಗಪರೀಕ್ಷೆ ಮಾಡಿ ಅದರ ತಾಯಿತಂದೆ ಯಾರಿರಬಹುದೆಂದು ಊಹಿಸಿ ಹೇಳುತಿದ್ದರು. ಆದರೆ ಅಮೇರಿಕದ ಒಬ್ಬ ಶರೀರ ವಿಜ್ಞಾನಿಯು ರಕ್ತ ಪರೀಕ್ಷೆಯ ಮೂಲಕ ಮಗುವಿನ ತಾಯಿತಂದೆಗಳನ್ನು ಖಂಡಿತ ಗುರುತಿಸಲಿಕ್ಕಾಗುತ್ತದೆಂದು ಅಂದಿದ್ದಾನೆ. ಆದರೆ ಭಾರತೀಯರು ಮಾತ್ರ ಈ ವಿಷಯವನ್ನು ಬಹಳ ಪುರಾತನ ಕಾಲದಲ್ಲೂ ತಿಳಿದಿದ್ದರೋ ಏನೋ? ತಾಯಿತಂದೆಗಳ ಗುಣಸ್ವಭಾವವನ್ನೇ ಒಂದು ಮಗುವು ತೋರಿಸಿದಾಗ ಅದು ರಕ್ತದ ಗುಣ ಎಂದು ಆಡಿಕೊಳ್ಳುವ ಪರಿಪಾಟಿ ನಮ್ಮಲ್ಲಿ ಬಹಳ ಹಿಂದಿನಿಂದ ನಡೆದುಬಂದಿದೆ.

ಮಕ್ಕಳನ್ನು ಮಾಡಿದರೆ ಸಾಲ ತೀರುತ್ತದೆ!

ಜಪಾನಿಗೆ ಜನಸಂಖ್ಯೆ ಬೆಳೆಯಬೇಕಾಗಿದೆ. ಆದುದರಿಂದ ಜನರ ಸಾಲವನ್ನು ತೀರಿಸುವ ಒಂದು ಅದ್ಭುತ ಕ್ರಮವನ್ನು ಅದು ಕೈಕೊಂಡಿದೆ. ಅವಿವಾಹಿತ ಹುಡುಗಿಯರು ಮದುವೆಯಾದೊಡನೆ ಸರಕಾರವೇ ಹಣ ಮುಂಗಡ ಕೊಟ್ಟು ಆ ಹಿಂದಿನ ಸಾಲವನ್ನು ತೀರಿಸುವುದು. ಅನಂತರ ಆ ದಂಪತಿಗಳಿಗೆ ಒಂದು ಮಗು ಹುಟ್ಟಿದಾಗ, ಅವರು ಸರಕಾರಕ್ಕೆ ಕೊಡಬೇಕಾದ ಮುಂಗಡ ಹಣದ ಸೇಕಡ ೨೦ರಷ್ಟು ಮಾಫಿಯಾಗುತ್ತದೆ. ಹೀಗೆ ಪ್ರತಿ ಒಂದು ಮಗು ಹುಟ್ಟುವಾಗ ಸೇಕಡಾ ೨೦ರಷ್ಟು ಮಾಫಿಯಾಗುತ್ತ ಬಂದು ಆ ದಂಪತಿಗಳು ೫ ಮಕ್ಕಳ ತಾಯಿತಂದೆಯರಾದೊಡನೆ ಅವರು ಸರಕಾರಕ್ಕೆ ಕೊ…

ವಿಜ್ಞಾನಯುಗ

ಆತ್ಮಹತ್ಯೆಯೂ ರೋಗ

ಅಜೀರ್ಣ, ಕ್ಷಯ ಮೊದಲಾದವುಗಳಂತೆ ಆತ್ಮಹತ್ಯೆ ಮಾಡಿಕೊಳ್ಳುವುದೂ ಒಂದು ರೋಗವಾಗಿದೆ; ಅದು ಮನಸ್ಸಿಗೆ ಸಂಬಂಧಪಟ್ಟದ್ದು ಎಂದು ಅಮೇರಿಕದ ಹಾರ್ವಾರ್ಡ್ ವಿಶ್ವವಿದ್ಯಾಲಯದ ಒಬ್ಬ ವಿಜ್ಞಾನಿಯು ಹೇಳಿದ್ದಾನೆ. ಅವನ ಅಭಿಪ್ರಾಯದಂತೆ ಈ ರೋಗವು ದೇಹಶ್ರಮ ಜಾಸ್ತಿಯಾದರೂ ಮಾನಸಿಕ ವ್ಯಾಕುಲತೆ ಹೆಚ್ಚಾದರೂ ಬರುವುದು. ಈ ರೋಗಕ್ಕೆ ಔಷಧಿಯೇನೂ ಇರುವುದಿಲ್ಲ. ಆದುದರಿಂದ ಇದನ್ನು ಗುಣಪಡಿಸಲಿಕ್ಕೆ ಆಗುವುದಿಲ್ಲ. ಆದರೆ ಇದನ್ನು ನಿವಾರಿಸಲಿಕ್ಕೆ ಆಗುತ್ತದೆ. ಸ್ಫೂರ್ತಿ ಉತ್ಸಾಹವನ್ನುಂಟು ಮಾಡುವ ಲೇಖನ, ಕಾವ್ಯ ಪುಸ್ತಕಾದಿಗಳನ್ನು ಓದುವುದರಿಂದಲೂ, ಗುರುಹಿರಿಯರು ಮತ್ತು ಬಂಧು ಮಿತ್ರರೊಡನೆ ಸಂಭಾಷಿಸುವುದರಿಂದಲೂ ಈ ರೋಗದ ನಿವಾರಣೆ ಮಾಡಬಹುದು. ಹೊಟ್ಟೆ ತುಂಬಾ ಸ್ವಾದಿಷ್ಟ ಭೋಜನ ಮಾಡುವುದರಿಂದಲೂ ರೋಗದ ನಿವಾರಣೆಯಾಗುತ್ತದೆ ಎಂದು ಆ ವಿಜ್ಞಾನಿಯು ಹೇಳಿದ್ದಾನೆ.

ಹಿಟ್ಲರನ ತಲೆಸಿಡಿತ

ಅಮೇರಿಕದ ವಿಜ್ಞಾನಿಗಳು ಒಂದು

ಡಬೇಕಾದ ಎಲ್ಲ ಹಣ ಮಾಫಿಯಾಗುವುದು. ವಿವಾಹಿತರು ಸರಕಾರದಿಂದ ಮುಂಗಡ ಪಡೆಯದಿದ್ದರೂ, ಐದಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದರೂ, ಆ ಮಕ್ಕಳ ಸಂಖ್ಯೆಗೆ ಅನುಸಾರವಾಗಿ ಅವರು ಸರಕಾರದಿಂದ ಬಹುಮಾನಕ್ಕೆ ಪಾತ್ರರಾಗುವರು. ದಂಪತಿಗಳಿಗೆ ಮಕ್ಕಳಾಗದಿದ್ದರೆ ಮಾತ್ರ ಅವರು ಸರಕಾರದಿಂದ ಪಡೆದ ಹಣವನ್ನು ಒಂದು ನಿರ್ದಿಷ್ಟ ಸಮಯದ ಅನಂತರ ಕಂತು ಪ್ರಕಾರ ಮರಳಿ ಕೊಡಬೇಕು.

ಅದ್ಭುತ ವಿಮಾನವನ್ನು ಕಟ್ಟಿ ಅದಕ್ಕೆ ಹಿಟ್ಲರನ ತಲೆಸಿಡಿತವೆಂದು ತಮಾಷೆಯ ಹೆಸರಿಟ್ಟಿರುವರು. ಇದರ ಕೆಲಸಗಳನ್ನು ನೋಡುವಾಗ ಹಿಟ್ಲರನಿಗೆ ನಿಜವಾಗಿಯೂ ತಲೆಸಿಡಿತ ಉಂಟಾಗಬೇಕು. ಹಾಗಿದೆ ಈ ವಿಮಾನ! ಈ ವಿಮಾನಕ್ಕೆ ಸತಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾದ ೧೨೫ ಸೈನಿಕರನ್ನೂ ೧೮ ಟನ್ ಭಾರದ ಟಾಂಬುಗಳನ್ನೂ ೧೦ ಟನ್ ಭಾರದ ಇತರ ಆಯುಧಗಳನ್ನೂ ಹೇರಿಕೊಂಡು ೭೫೦೦ ಮೈಲುಗಳ ತನಕ ಹಾರಾಡಿ ಬರುವ ಶಕ್ತಿಯು ಈ ವಿಮಾನಕ್ಕೆ ಇರುತ್ತದೆ. ಇದರಲ್ಲಿ ೬೦೦೦ ಕುದುರೆ ಶಕ್ತಿಯ ೪ ಇಂಜಿನುಗಳು ಇವೆ. ಇದನ್ನು ತಯಾರಿಸಲಿಕ್ಕೆ ೫೦೦ ವಿಜ್ಞಾನಿಗಳು ೪ ವರ್ಷಗಳ ತನಕ ಭಗೀರಥ ಪ್ರಯತ್ನಗಳನ್ನು ಮಾಡಿದರು.

ನೆಲದ ಮೇಲೂ ಇಳಿತ ಭರತಗಳ ಪರಿಣಾಮ

ಚಂದ್ರ ಸೂರ್ಯರ ಆಕರ್ಷಣ ಮೂಲಕವಾದ ಇಳಿತ ಭರತಗಳ ಪರಿಣಾಮವು ಭೂಮಿಯ ಮೇಲೆ ಸಾಗರ ಸಮುದ್ರಗಳಂಥ ಜಲ ಪ್ರದೇಶಗಳ ಮೇಲೆ ಮಾತ್ರ ಕಂಡುಬರುವುದೆಂದು ಎಣಿಸಿದ್ದರು. ಆದರೆ ಚೀನದ ಒಂದು ಪರಿಶೋಧನಾಲಯದಲ್ಲಿ ನಡೆದ ಶೋಧನೆಗಳ ಮೇಲಿಂದ ಹೇಳುವುದಾದರೆ ಈ ಇಳಿತ ಭರತಗಳ ಪರಿಣಾಮವು ನೆಲದ ಮೇಲೂ ಕಂಡುಬರುತ್ತದೆಂದು ತಿಳಿಯಬೇಕು. ಅಲ್ಲಿಯ ಒಬ್ಬ ವಿಜ್ಞಾನಿಯು ಹೇಳಿದಂತೆ ತಿಂಗಳ ಕೆಲವು ದಿನಗಳಲ್ಲಿ ಲಂಡನ್–ಶಾಂಘಾಯಿ ಪಟ್ಟಣಗಳ ಅಂತರವು ೬೦ ಅಡಿಗಳಷ್ಟು ಹೆಚ್ಚುವುದು; ಮತ್ತೆ ಬೇರೆ ಕೆಲವು ದಿನಗಳಲ್ಲಿ ಆ ಅಂತರವು ಅಷ್ಟೇ ಕಡಿಮೆಯಾಗುವುದು. ಇದಕ್ಕೆ ನೆಲದ ಪ್ರದೇಶದ ಮೇಲಾಗುವ ಇಳಿತ ಭರತಗಳೇ ಕಾರಣವೆಂದು ಅವನು ಅಂಬುವನು.

BHUVANENDRA PRODUCTS LTD.,

Head Office and Factory:
KATAPADI S. Kanara.

Depots:
1. Maharatha Galli, Hubli.
2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಪಿ. ಪಿ. ಸಿ. ಬಿಲ್ಡಿಂಗ್ಸ್.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ರಾಜವೈದ್ಯ ಬಾಬಾ ಗುಣೆ ಇವರ

"ಸುರಂಗಾ" ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ— ಕೂದಲು ಬೀಳುವಿಕೆ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು. ಅಲ್ಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ನಿವಾರಿಸುತ್ತದೆ.

೪ ಔನ್ಸಿನ ಬಾಟ್ಲಿಗೆ ರೂ. ೧—೨—೦.

Agents:

Anglo Oriental Pharmacy, Hampankatta.

Stocks also at:

R. V. Kamath & Co., Car-street Mangalore.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilitie to Businessmen and interested Public.

Apply for particulars—

K. R. GURU, *Managing Director.*

THE BANK OF MANGALORE LIMITED.

HEAD OFFICE MANGALORE. ESTD. 1901.

Branches:— MOODABIDRI & PADUBIDRI.

NOTICE

On and from 1st January 1941 the following are the revised rates of interest on deposits:

FIXED DEPOSITS:

For 5 years or over	5½ per cent
„ 1 „	4½ per cent
„ 6 months	3½ per cent
„ 3 „	3 per cent

Interest payable Quarterly

SAVINGS BANK DEPOSITS:

On daily balances on balances over Rs. 5 in multiples of Rs. 5 @ 3%.

All kinds of banking business transacted.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—3—1940

FROM:

Sri K. Shivarama Nair,
Kerikcundah Estate,
Post Devegadabettu,
KADUR DISTRICT.

To,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2—12—0   Regd. No. M. 34(

ಸ್ವದೇಶಾಭಿಮಾನಿ

ಸಂಪುಟ 35]   ತಾರೀಕು 6—6—1941   [ಸಂಚಿಕೆ 23]

The Bombay Life Assurance Company, Ltd.,

(ESTABLISHED 1908)

Death! { is not a matter of supposition
is a matter of Certainty

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,
The Bombay Life Building,
Gandhi Nagar, UDIPI.

OR AT ANY OF THEIR OFFICES AT:—

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ, ಮುಂಕಾಲ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಹಿಟ್ಲರನ ಶೀತಕಾಲದ ಕಾರ್ಯಕ್ರಮ?

ಸಿರಿಯವನ್ನು ಆಕ್ರಮಿಸುವ ಮಹಾ ಯೋಜನೆ

ಫ್ರೆಂಚ್ ಸೇನಾಸಾಮಗ್ರಿಯನ್ನು ಸ್ವಾಧೀನಪಡಿಸುವ ಸಂಚು

ಡೈಲಿ ಮೈಲ್ ಪತ್ರಿಕೆಯ ಸುದ್ದಿಗಾರನು ಇಸ್ತಾಂಬೂಲಿನಿಂದ ಕಳುಹಿಸಿಕೊಟ್ಟ ತಂತಿ ಸಮಾಚಾರದ ಮೇರೆಗೆ ಹಿಟ್ಲರನು ಕೆಳಗೆ ಬರೆದ ಪ್ರಕಾರ ಶೀತಕಾಲದ ಯುದ್ಧ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾನಾಗಿ ತಿಳಿದುಬರುತ್ತದೆ ಯೋಜನೆಯು ನಾಲ್ಕು ಅಂಶಗಳಲ್ಲಿ ವಿಭಕ್ತವಾಗಿದೆ

೧) ಬ್ರಿಟನಿನ ಮೇಲೆ ಮಿಂಚುಗತಿಯ ವೈಮಾನಿಕ ಧಾಳಿ. ಇದು ಈಗಲೂ ನಡೆಯುತ್ತಾ ಇದೆ.

೨) ಜಿಬ್ರಾಲ್ಟರನ್ನು ಆಕ್ರಮಿಸುವುದಕ್ಕೋಸ್ಕರ ಫ್ರಾನ್ಸ್ ಮತ್ತು ಸ್ಪೈನಿಗಾಗಿ ಸೇನೆಯನ್ನು ಕಳುಹಿಸುವುದು.

೩) ಪೆಲಿಸ್ತೀನಿನಿಂದ ಸುಯೇಜಿಗೆ ಹೋಗುವುದಕ್ಕೋಸ್ಕರ ಸಿರಿಯದ ಮೇಲೆ ಅಧಿಕಾರ ಸ್ಥಾಪಿಸುವುದು.

೪) ಬ್ರಿಟಿಷ್ ಸಾಮ್ರಾಜ್ಯ ಸಂರಕ್ಷಣೆಯ ವ್ಯವಸ್ಥೆಯನ್ನು ದುರ್ಬಲ ಮತ್ತು ಶಿಥಿಲಗೊಳಿಸುವುದಕ್ಕೋಸ್ಕರ ಏಶಿಯದಲ್ಲಿ ಆಕ್ರಮಣಕಾರಿ ನೀತಿಯನ್ನು ಅನುಸರಿಸಲು ರಶ್ಯವನ್ನು ಒತ್ತಾಯಪಡಿಸುವುದು

ಈ ಯೋಜನೆಯ ಮೂರನೆಯ ಮತ್ತು ನಾಲ್ಕನೆಯ ಅಂಶಗಳು ಸಫಲವಾಗಬೇಕಾದರೆ ಟರ್ಕಿಯು ಹಿಟ್ಲರನ ಸೂತ್ರದ ಗೊಂಬೆಯಾಗಬೇಕಾಗುವುದು ಆದುದರಿಂದ ಟರ್ಕಿಯು ಈ ವಿಷಯವಾಗಿ ಈಗಾಗಲೇ ಬಹಳ ಸಂದೇಹ ತಾಳಿದೆ

ಫ್ರೆಂಚ್ ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ಸಂಚು

ಸಿರಿಯದಲ್ಲಿರುವ ಫ್ರೆಂಚ್ ಸೇನೆಗಳು ಧೈರ್ಯ ಸ್ಥೈರ್ಯಗಳನ್ನು ಕಳೆಕೊಂಡಿವೆ ಎಂದು ಆ ಕಡೆಯಿಂದ ಬಂದ ಯಾತ್ರಿಕರು ಹೇಳುತ್ತಾರೆ ಆದುದರಿಂದ ಈ ಸೇನೆಗಳಿಂದ ಬಹಳ ಪ್ರಯೋಜನವಾಗುವ ಹಾಗೆ ಇಲ್ಲ ಹಿಟ್ಲರನಿಗೆ ತನ್ನ ಅಸಂಖ್ಯಾತ ವಿಮಾನಗಳ ಮೂಲಕ ಸಿರಿಯಕ್ಕೆ ನಾಜಿ ಸೇನೆಯನ್ನು ಕಳುಹಿಸಿಕೊಡುವುದು ಕಷ್ಟವಾಗಲಾರದು. ಆದರೆ ಭಾರವಾದ ಯುದ್ಧ ಸಾಮಗ್ರಿಗಳನ್ನು ಅಲ್ಲಿಗೆ ಕಳುಹಿಸಿಕೊಡುವುದು ಹೇಗೆಂಬುದೇ ಅವನಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ ಯಾಕೆಂದರೆ ಈ ಭಾರವಾದ ಯುದ್ಧ ಸಾಮಗ್ರಿಗಳನ್ನು ಕೊಂಡೊಯ್ಯುವ ಹಡಗುಗಳನ್ನು ಬ್ರಿಟಿಷ್ ನೌಕಾಪಡೆಯು ಭೂಮಧ್ಯಸಾಗರದಲ್ಲಿ ಸುಲಭವಾಗಿ ಮುಳುಗಿಸಿಬಿಡುವುದು ಆದ್ದರಿಂದ ಸಿರಿಯದೊಳೆ ಕಿತ್ತುಕೊಳ್ಳುವ ಷಡ್ಯಂತ್ರವನ್ನು ನಾಝಿ ೧೭ ದವಿಜನುಗಳಿಗೆ ಸಾಕಾಗುವಷ್ಟು ಸ್ಥಳ ಸ್ವತಂತ್ರ ಫ್ರಾನ್ಸಿನ ಸರ್ವಸೇನಾಧಿ
ನಿನ ಫ್ರೆಂಚ ಸೇನೆಯ ಹತ್ತಿರ ಇರುವ ಗಳು ಮಾಡಿದ್ದಾರೆ. ಈ ಯುದ್ಧ ಸಾಮ ಇರುತ್ತವೆಂದು ಹೇಳುತ್ತಾರೆ. ಆದರೆ ಈ ಪತಿ ಜನರಲ್ ಡಿ ಗೋಲೆಯು
ಭಾರವಾದ ಯುದ್ಧ ...

ಓವಲ್ಟಿನು ನಿಮಗೆ
ಶಕ್ತಿ ಮತ್ತು ಆರೋಗ್ಯವನ್ನು
ಕೊಡುತ್ತದೆ

ನಿಮ್ಮ ಶರೀರವನ್ನು ಬಲಪಡಿಸಿಕೊಂಡರೆ ನೀವು ಶಕ್ತಿಶಾಲಿಗಳಾಗಿ ಸುಖದಿಂದ ಇರಬಹುದು ಒಳ್ಳೆಯ ಆಹಾರದಿಂದ ಬುದ್ಧಿಯೂ ಬಲಗೊಳ್ಳುತ್ತದೆ

ದಿನನಿತ್ಯ ಒಂದು ಕಪ್ಪು ಓವಲ್ಟಿನು ತೆಗೆದುಕೊಳ್ಳುವುದರಿಂದ ಶರೀರವು ಬಲಗೊಳ್ಳಲು ಬೇಕಾದ ಸತ್ವಗಳು ಸಿಗುತ್ತವೆ. ಹಾಗಾಗಿಯೇ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಸಾವಿರಾರು ಮನೆಗಳಲ್ಲಿ ಓವಲ್ಟಿನನ್ನೇ ಉಪಯೋಗಿಸುತ್ತಾರೆ ಅದರಿಂದ ಅವರಿಗೆ ಆರೋಗ್ಯ, ಬಲ ಶಕ್ತಿಗಳು ಕೂಡುತ್ತವೆ ಕೆಲ ದಿನಗಳ ತನಕ ಓವಲ್ಟಿನನ್ನು ಸೇವಿಸಿ ನೋಡಿ ಮತ್ತೆ ಬಿಡುವಿರಿ ಅನಾರೋಗ್ಯವನ್ನು ತಡೆಯಲು ಓವಲ್ಟಿನನ್ನು ಅತ್ಯಗತ್ಯ.

ಓವಲ್ಟಿನು ಶುದ್ಧ ನೈಸರ್ಗಿಕ ಆಹಾರ. ಇದನ್ನು ಬಾರ್ಲಿ ಹಾಲು ಮತ್ತು ಅನೇಕ ಉತ್ತಮ ಆಹಾರ ಸತ್ವಗಳನ್ನು ಸೇರಿಸಿ ತಯಾರಿಸಲಾಗಿದೆ ಕೃತ್ರಿಮವಾದವುಗಳನ್ನು ಕೊಂಡುಕೊಳ್ಳಬೇಡಿರಿ

ಓವಲ್ಟಿನು ಹಿತಕರವಾದ ಆರೋಗ್ಯಕರ ಪಾನೀಯ ಇದನ್ನು ತಣುವಾಗಲಿ ಬಿಸಿಯಾಗಲಿ ತಗೆದುಕೊಳ್ಳಬಹುದು. ಇದನ್ನು ತಯಾರಿಸುವುದೂ ಬಹು ಸುಲಭ. ತಯಾರಿಸುವ ರೀತಿಯು ಪ್ರತಿಯೊಂದು ಡಬ್ಬಿಯಲ್ಲಿಯೂ ಬರೆದಿದೆ

ಎಲ್ಲಾ ಔಷಧ ವ್ಯಾಪಾರಿಗಳಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.

ಡಿಸ್ಟ್ರಿಬ್ಯೂಟರ್ ಗ್ರಹಮ್ಸ್ ಟ್ರೇಡಿಂಗ್ ಕೊ (ಇಂಡಿಯಾ) ಲಿಮಿಟೆಡ್
ಕೃಥೆನೆಸ್ ಹೋಲ್, 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದರಾಸು ಹಾಗೂ ಕಲ್ಕತ್ತ, ಬೊಂಬಾಯಿ, ಕರಾಚಿ ಮತ್ತು ರಂಗೂನ್

'ಓವಲ್‌ಟಿನ್'
'OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು'

ಓವಲ್ಟಿನ್ ಬಿಸ್ಕುಟುಗಳು:

ಓವಲ್ಟಿನ್ ಬಿಸ್ಕುಟುಗಳು ಹಿತಕರ, ಜೀರ್ಣಕರ ಮತ್ತು ಆರೋಗ್ಯಕರ ಇರುವ ಬಿಸ್ಕುಟುಗಳಲ್ಲೆಲ್ಲಾ ಹೆಸರು ಪಡೆದದ್ದು ಅದರಲ್ಲಿ ಪ್ರತ್ಯೇಕ ಗುಣವೇ ಇದೆ 4 ಔನ್ಸಿನ ಮತ್ತು 8 ಔನ್ಸಿನ ಕಟ್ಟುಗಳು ಮತ್ತು 1 ರಾತಲು ಟಿನ್ನುಗಳಲ್ಲಿ ಸಿಕ್ಕುತ್ತವೆ.

OV. 49/40

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

13—6—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೩—೬—೧೯೪೧

ಕಾಂಗ್ರೆಸಿನವನಾಗಿದ್ದೇನೆ - ಕಾಂಗ್രೆಸಿನವನಾಗಿಯೇ ಸಾಯುವೆನು

ಲೀಗಿನಲ್ಲಿ ಪ್ರೇಮಸಂಬಂಧವನ್ನು ಕಾಣುವುದಿಲ್ಲ

ಮೌಲಾನಾ ಒಬೇದುಲ್ಲಾ ಸಿಂಧಿಯವರ ಹೇಳಿಕೆ

"ನಿರ್ವಾಸಿತನಾಗಿದ್ದ ನಾನು, ನನ್ನ ಮಾತೃಭೂಮಿಗೆ ಮರಳುವಾಗ ಪವಿತ್ರ ಮಕ್ಕದಲ್ಲಿ ನನ್ನ ರಾಜಕೀಯ ವಿಶ್ವಾಸದ ಪ್ರತಿಜ್ಞೆಯನ್ನು ತೆಗೆದುಕೊಂಡೆನು. ಕಾಂಗ್ರೆಸನ್ನು ಸೇರಿ ಕಾಂಗ್ರೆಸಿನವನಾಗಿ ಇರುವೆನೆಂಬುದೇ ನನ್ನ ಅಂದಿನ ಪ್ರತಿಜ್ಞೆ ಆಗಿತ್ತು. ಆ ಪ್ರತಿಜ್ಞೆಯನ್ನು ಮುರಿಯುವುದು ಸಾಧ್ಯವಲ್ಲ. ನನ್ನ ವಿಶ್ವಾಸದಲ್ಲಿ ಪರಿವರ್ತನೆಯೂ ಆಗಲಾರದು. ಲೀಗನ್ನು ಸೇರಲಿಕ್ಕೆ, ನಾನು ಅದರಲ್ಲಿ ಅಂಥ ಪ್ರೇಮ ಸಂಬಂಧವನ್ನು ಕಾಣುವುದಿಲ್ಲ. ಹಿಂದುಸ್ಥಾನದಲ್ಲಿ ಬ್ರಿಟಿಷ ಸರಕಾರದ ಸ್ಥಾನವನ್ನು ಭಾರತೀಯ ರಾಷ್ಟ್ರೀಯ ಮಹಾಸಭೆಯು ಮಾತ್ರ ತೆಗೆದುಕೊಳ್ಳಬಲ್ಲದು." ಎಂದು ಮುಸಲ್ಮಾನರ ಒಬ್ಬ ಗಣನೀಯ ಮುಖಂಡರಾದ ಮೌಲಾನಾ ಒಬೇದುಲ್ಲಾ ಸಿಂಧಿಯವರು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಒಂದು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಪಾಕಿಸ್ತಾನದ ವಿರೋಧ

ಮೌಲಾನಾ ಸಿಂಧಿಯವರು ಮುಸ್ಲಿಂ ಲೀಗಿನ ಧೋರಣೆ ಮತ್ತು ಅದರ ಪಾಕಿಸ್ತಾನದ ಯೋಜನೆಯೊಂದಿಗೆ ಸಹಾನುಭೂತಿಯುಳ್ಳವರಾಗಿದ್ದಾರೆಂದು ಮೂರೋ ಕೆಲವು ಜನಹಿತ ಪತ್ರಗಳು ಪ್ರಕಟಿಸಿದ ಸಮಾಚಾರವನ್ನು ಸಿಂಧಿಯವರು ಸುಳ್ಳೆಂದು ಹೇಳಿ ಆ ಪತ್ರಗಳ ಈ ಅಪಪ್ರಚಾರವನ್ನು ಕಟುಶಕ್ತಿಗಳಿಂದ ಖಂಡಿಸಿದ್ದಾರೆ. ಮೊದಲು ಪ್ರಕಟವಾದಂತೆ ಅವರಿಗೂ ಜಿನ್ನಾ ಸಾಹೇಬರಿಗೂ ಯಾವ ಪತ್ರವ್ಯವಹಾರವೂ ಇದ್ದಿಲ್ಲ. "ಮುಸ್ಲಿಂ ಲೀಗಿನ ಪಾಕಿಸ್ತಾನದ ಯೋಜನೆಯು ಮೂರ್ಖತನದ್ದಾಗಿದೆ. ಕಾಂಗ್ರೆಸಿನ ಕಳೆದ ೫೦ ವರ್ಷಗಳ ಕಾರ್ಯಕ್ರಮದಿಂದ ಉಂಟಾದ ರಾಷ್ಟ್ರೀಯ ಮತ್ತು ರಾಜಕೀಯ ಜಾಗೃತಿಗೆ ತಡೆಹಾಕುವ ಉದ್ದೇಶದಿಂದಲೇ ಪಾಕಿಸ್ತಾನದ ಪ್ರಚಾರವು ಜರಗುತ್ತಲಿದೆ. ಪಾಕಿಸ್ತಾನದ ಯೋಜನೆಯು ಎಂಥ ಹುಚ್ಚುತನದ್ದಾಗಿರುವದೆಂದರೆ, ಅದರ ಪುರಸ್ಕರ್ತರಿಗೆ ಕೂಡ ಆ ಯೋಜನೆಯ ಸ್ಪಷ್ಟ [illegible] ಇಲ್ಲ. ಕೆಲವು ಬ್ರಿಟಿಷ ರಾಜನೀತಿಜ್ಞರು ಸ್ವಾರ್ಥಾಂಧರಾಗಿ ಈ ಯೋಜನೆಯನ್ನು ಸಮರ್ಥಿಸಬಹುದಾದರೂ, ಬ್ರಿಟಿಷ ಪಾರ್ಲಿಮೆಂಟು ಅದನ್ನು ತಿರಸ್ಕರಿಸುವದು ಖಂಡಿತ.

ಲೀಗಿನ ದ್ರೋಹ

"ಜನರನ್ನು ತಪ್ಪುದಾರಿಗೆ ಕೊಂಡೊಯ್ಯುವದಕ್ಕೋಸ್ಕರ ಮುಸ್ಲಿಂ ಲೀಗು ಜನರ ಧಾರ್ಮಿಕ ವಿಶ್ವಾಸದ ದುರುಪಯೋಗವ ಮಾಡಿಕೊಳ್ಳುತ್ತಾ ಇದೆ. ಲೀಗಿಗೆ ಒಂದು ಧ್ಯೇಯವು, ಒಂದು ಆದರ್ಶವು, ಒಂದು ಉದ್ದೇಶ, ಒಂದು ಕಾರ್ಯಕ್ರಮ ಯಾವುದೂ ಇರುವದಿಲ್ಲ. ಅವರ ವಿನಾಶಕ ಕಾರ್ಯ ಪ್ರವೃತ್ತಿಯು [illegible] ತಗಲಿ. ಜಿನ್ನರು ಬಹಳ ಹೆಚ್ಚೆಂದರೆ ಒಬ್ಬ ಲಿಬರಲ್ ಅಥವಾ [illegible] ರಾಗಬಹುದು. ಆದ್ದರಿಂದ ಅವರಿಗೂ ನನಗೂ ಯಾವದಾದರೂ [illegible] ಸಂಬಂಧವಿರುವದು ಸಾಧ್ಯವಿಲ್ಲ!" ಎಂದು ಮೌಲಾನಾ ಸಿಂಧಿಯವರು ಹೇಳಿರುವರು.

ಮುಸ್ಲಿಂ ಆಕ್ರಮಣಕಾರಿಗಳನ್ನು ನಾನೊಬ್ಬನಾದರೂ ವಿರೋಧಿಸುವೆನು

ಹಿಂದುಸ್ಥಾನದ [illegible] ಕುರಿತು ಮೌಲಾನರು ಇನ್ನು ಹೇಳಿರುವದೇನಂದರೆ— "ಯುದ್ಧಾನಂತರದ ಜಗತ್ತಿನ ಪುನರ್ನಿರ್ಮಾಣದ ಕಾಲಕ್ಕೆ ಹಿಂದುಸ್ಥಾನವು ತನ್ನ ಪ್ರಭಾವವನ್ನು ತೋರಿಸಬಹುದು. ಹಿಂದುಸ್ಥಾನದ ಬಂಧವಿಮೋಚನೆಗೆ ಯಾವುದೇ ವಿದೇಶೀ ಸರಕಾರದ ಸಹಾಯವನ್ನು ನೋಡುವವರಲ್ಲಿ ನಾನೊಬ್ಬನಿರುವುದಿಲ್ಲ. ಮುಸಲ್ಮಾನ ರಾಷ್ಟ್ರಗಳೊಂದಿಗೆ ಸ್ವತಂತ್ರ ಹಿಂದುಸ್ಥಾನದ ಬಹಳ ಸ್ನೇಹಸಂಬಂಧ ಇರುವುದನ್ನೇ ನಾನು ಬಯಸುವೆನು. ಆದರೆ ಹಿಂದುಸ್ಥಾನದಲ್ಲಿ ನಮ್ಮದೇ ಆದ ಸ್ವತಂತ್ರ ಸರಕಾರವು ಇರುವುದು. ಅಂಥ ಸರಕಾರದ ಮೇಲೆ ಆಕ್ರಮಣಕ್ಕೆ ಮುಸಲ್ಮಾನರೇ ಬಂದರೂ ಕೂಡ, ಅವರನ್ನು ತಡೆಯುವವರಲ್ಲಿ ನಾನೇ ಮೊದಲಿಗನಾಗುವೆನು."

THE
Canara Banking Corporation Limited
(Incorporated in British India).
ESTD: 1906.
HEAD OFFICE: UDIPI, South Kanara.

SEASON DEPOSITS

ARE now accepted at all our Offices at the following rates of interest :

2 & 3 months	3% p. a.
4 & 5 „	3½% p. a.

These deposits will not be allowed to run beyond September 1941.

ನವ ಚೈತನ್ಯಕ್ಕೆ
'ಒಂಪೋನಾ'
ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.
ಸ್ಥಳೀಯ ಸ್ಟಾಕಿಸ್ಟರು:
[illegible]
ಮಂಗಳೂರು.
Stockists:—
Messrs. Dadha & Co., MADRAS.

ಸ್ವದೇಶಾಭಿಮಾನಿ

ತಾರೀಕು 13—6—1941

ಜಿಲ್ಲೆಯಲ್ಲಿ ನೆರೆಹಾವಳಿ

ಮಳೆಗಾಲವು ಪ್ರಾರಂಭವಾಯಿತೆನ್ನುವಾಗಲೇ, ಅನಿರೀಕ್ಷಿತವಾಗಿ, ನಮ್ಮ ಜಿಲ್ಲೆಗಳ ಹಲವು ನದಿಗಳಲ್ಲಿ ನೆರೆಯ ನೀರು ಉಕ್ಕಿಬಂದು, ಆಸ್ತಿ ಪಾಸ್ತಿಗಳಿಗೆ, ಮನೆ ಮಂದಿಗಳಿಗೆ ಹಾನಿಯೊದಗಿ ಬಂದಿಂಬೀ ವಿಷಾದಕರವಾದ ವಿಷಯವು ಸರ್ವರಿಗೂ ಸಂಕಟವನ್ನುಂಟುಮಾಡಿದೆ ಆಕಸ್ಮಾತ್ತಾಗಿ ಬಂದ ಈ ವಿಪತ್ತಿನಿಂದ ಹಲವರು ಅನೇಕ ರೀತಿಯ ಕಷ್ಟ ನಷ್ಟಗಳಿಗೆ ಗುರಿಯಾಗಿ ಕಂಗೆಟ್ಟಿರುತ್ತಾರೆ ಗುರುಪುರ ನೇತ್ರಾವತಿ ಸೀರೆ ಮೊದಲಾದ ನದಿಗಳ ದಂಡೆಗಳಲ್ಲಿರುವ ಹಲವು ಮನೆಗಳು, ಮನುಷ್ಯ ಮಂದಿಗಳು ನೆರೆಯ ನೀರಿಗೆ ಕೊಚ್ಚಿ ಹೋಗಿರುವವೆಂದು ತಿಳಿದು ಬಂದಿದೆ ಕಳೆದ ಗೀನೆಯ ದೊಡ್ಡ ನೆರೆಯು ಬಳಿಕ ಇಷ್ಟು ಪ್ರಬಲವಾದ ನೆರೆಯು ಈ ತನಕ ಬಂದಿಲ್ಲವೆಂದೇ ಹೇಳಬಹುದಾಗಿದೆ

ಇದರಿಂದ ತೊಂದರೆಗೀಡಾದವರ ಸಂಕಷ್ಟಗಳನ್ನು ಜಿಲ್ಲೆಯ ಮಹಾಜನರು ಹಾಗೂ ಅಧಿಕಾರಿಗಳು ಗಮನಕ್ಕೆ ತಂದುಕೊಳ್ಳಬೇಕೆಂದು ನಾವು ಈ ಮೂಲಕ ಬಿನ್ನಹಮಾಡುತ್ತೇವೆ ಕೃಷಿಯ ಕೆಲಸವು ಈಗ ತಾನೇ ಪ್ರಾರಂಭವಾಗಿದ್ದು ಗದ್ದೆಗಳಿಗೆ ಹಾಕಿದ್ದ ಸೊಪ್ಪು ಗೊಬ್ಬರ ಮೊದಲಾದವುಗಳು ಒಯಲುಗಳಲ್ಲಿದ್ದ ನೇಜಿನಟ್ಟಿ ಮೊದಲಾದವುಗಳು ಸಂಪೂರ್ಣವಾಗಿ ನೆರೆಯ ಪ್ರವಾಹಕ್ಕೆ ಕೊಚ್ಚಿ ಹೋಗಿವೆ ಹಲವರು ಸಾಗುವಳಿ ಮಾಡಲು ಎತ್ತು ಕೋಣಗಳಿಲ್ಲದೆ ಕಂಗೆಡುವಂತಾಗಿದ್ದೆ ಅನೇಕರ ಮನೆ ಗುಡಿಸಲುಗಳೇ ನೆರೆಗೆ ಕೊಚ್ಚಿಹೋಗಿರಲು ನಿರ್ಗತಿಕರಾಗಿ ಅನಾಥರಾಗಿದ್ದಾರೆ ಒಟ್ಟಿನಿಂದ ನದಿಗಳ ದಂಡೆಗಳಲ್ಲಿ ವಾಸವಾಗಿರುವ ಜನರು ಹೆಚ್ಚಾಗಿ ಹಳ್ಳಿಯ ಒಕ್ಕಲುಗಾರರು ಇವರಿಂದ ಸಹಿಸಲಾರದ ಸಂಕಷ್ಟಗಳಿಗೆ ತುತ್ತಾಗಿರುವರು

ಇವರೆಲ್ಲರಿಗೂ ಯೋಗ್ಯವಾದ ಎಲ್ಲಾ ರೀತಿಯ ನೆರವು ಅವಶ್ಯವಾಗಿ ಒದಗಬೇಕಾಗಿದೆ. ಇಲ್ಲದಿದ್ದಲ್ಲಿ ಮೊದಲೇ ದಾರಿದ್ರ್ಯದಿಂದ ಬಳಲುತ್ತಿದ್ದ ಜನರು ಮತ್ತಷ್ಟು ದರಿದ್ರರಾಗಿ ಕಂಗೆಡುವ ಅನರ್ಥಕ್ಕೆ ತುತ್ತಾಗುವರು ಈ ಸಮಯದಲ್ಲಿ ಸರಕಾರದ ಅಧಿಕಾರಿಗಳು, ಹಣವಂತರು, ಹಾಗೂ ಸಾಹುಕಾರರು ಮಾತ್ರವಲ್ಲದೆ ಸಾರ್ವಜನಿಕ ಕಾರ್ಯಗಳಲ್ಲಿ ಆಸಕ್ತಿಯುಳ್ಳ ಜಿಲ್ಲೆಯ ಮುಖಂಡರು ಮತ್ತು ಮಹಾ ಜನರು ನೆರೆಯಿಂದ ಹಾನಿಹೊಂದಿ

ಮೈಸೂರಲ್ಲಿ ರಾಜಕೀಯ ಸುಧಾರಣೆ

ಮೈಸೂರು ಪ್ರಭುತ್ವದವರು ಮಾಡಿದ ರಾಜಕೀಯ ಸುಧಾರಣೆಯ ವಿಷಯವು ಈಗಾಗಲೇ ಪ್ರಚಾರವಾಗಿದೆ. ಶಾಸನ ಸಭೆಯಲ್ಲಿ ಪ್ರಬಲವಾದ ಹಾಗೂ ಸುವ್ಯವಸ್ಥಿತವಾದ ಕಾಂಗ್ರೆಸ್ ಪಕ್ಷವಿರುತ್ತಿರಲು ಸರಕಾರದವರು ಸುಧಾರಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಇರುವಿಕೆಯನ್ನು ಅಲ್ಲಗಳೆದಂತೆ ವರ್ತಿಸಿರುವರೆಂಬ ವಿಷಯವು ಜವಾಬ್ದಾರೀ ಸರಕಾರದ ಅನುಮೋದಕರಿಗೆ ಯಾರಿಗಾದರೂ ಅತೃಪ್ತಿಯನ್ನು ಹುಟ್ಟಿಸದೆ ಇರಲಾರದು.

ಯಾವುದೇ ಮಂತ್ರಿಮಂಡಳವಾದರೂ ದ ಸ್ಥಳಗಳಿಗೆ ಹೋಗಿ ಅಲ್ಲಿನ ಜನರ ವಿಚಾರಗಳನ್ನು ತಿಳಿದುಕೊಂಡು ಸಾಧ್ಯವಾದ ಸಕಲ ಸಹಾಯಗಳನ್ನೂ ಒದಗಿಸುವಂತೆ ಸರ್ವ ಪ್ರಯತ್ನಗಳನ್ನು ಮಾಡುವುದು ಅತ್ಯಗತ್ಯವಾದುದು ಮತ್ತು ಪುಣ್ಯದಾಯಕವಾದುದೆಂದು ತಿಳಿಸಲು ನಾವು ಮರೆಯಲಾರೆವು

ಶಾಸನ ಸಭೆಯ ಬೆಂಬಲವನ್ನು ಹೊಂದಬೇಕಾದರೆ ಅಧಿಕ ಪಕ್ಷದವರು ಮಂತ್ರಿಮಂಡಳವನ್ನೇರ್ಪಡಿಸುವುದು ಯುಕ್ತವಾಗಿದೆಯೆಂದೂ, ಇದರಿಂದ ಸರಕಾರದ ಕಾರ್ಯಗಳು ಸಾಂಗವಾಗಿ ನೆರವೇರುವದೆಂದೂ ಹಾಗಾದಲ್ಲಿ ಮಾತ್ರ ಪ್ರಜಾಹಿತವು ಪೂರೈಸುವುದೆಂದೂ ರಾಜನೀತಿಯನ್ನು ಬಲ್ಲವರೆಲ್ಲರೂ ಅರಿತಿರಲೇಬೇಕು. ಹೀಗಿರುತ್ತಾ ಮೈಸೂರು ಪ್ರಭುತ್ವದವರು ಕಾಂಗ್ರೆಸು ಪಕ್ಷವನ್ನು ಅಲ್ಲಗಳೆದು ವರ್ತಿಸಿದ ಉದ್ದೇಶವೇನೆಂದು ತಿಳಿಯುವುದಿಲ್ಲ. ಕಾಂಗ್ರೆಸಿನ ಬಗ್ಗೆ ಮೈಸೂರು ಪ್ರಭುತ್ವವು ವಹಿಸುತ್ತಾ ಬಂದಿರುವ ಧೋರಣೆಗಳು ಅಖಿಲ ಭಾರತದಲ್ಲಿ ಉಗ್ರ ಟೀಕೆಗೆ ಹಿಂದೆಯೇ ಗುರಿಯಾಗಿದ್ದು, ಮೈಸೂರು ಕಾಂಗ್ರೆಸಿನ ಇತಿಹಾಸದಲ್ಲಿ ಹಲವು ದುರ್ಘಟ ಪ್ರಸಂಗಗಳೂ ಸಂಭವಿಸಿದ್ದು ಪ್ರಜಾ ವರ್ಗದವರ ಮನಶ್ಶಾಂತಿಯು ಕದಡಿಹೋದ ಸಂದರ್ಭಗಳೂ ಕೆಲವೊಮ್ಮೆ ಹುಟ್ಟಿರುತ್ತದೆ ಹೀಗಿದ್ದರೂ ಇಂದಿನ ನೂತನ ಸುಧಾರಣೆಯಲ್ಲಿ, ನವ ಪ್ರಭುಗಳ ಅಧಿಕಾರದ ಕಾಲದಲ್ಲಿ ಹಿಂದಿನವುಗಳೆಲ್ಲಾ ಮರೆತು ಹೋಗುವಂತೆ ಪ್ರಭುಗಳಿಗೂ ಪ್ರಜೆಗಳಿಗೂ ಪ್ರೀತಿಯ ಸಂಬಂಧಗಳು ಹೆಚ್ಚಾಗುವಂತೆ ಯೋಜನೆಗಳೇರ್ಪಡುವವೆಂದು ಅನೇಕರು ಹಾರೈಸಿದ್ದರು. ಅಂತಹ ಉತ್ಕಟವಾದ ಹಾರೈಕೆಗೆ ಇಂದು ಅತೃಪ್ತಿಯ ವ್ಯವಸ್ಥೆಯು ಸ್ವಲ್ಪ ನಿರಾಶೆಯನ್ನೇ ಹುಟ್ಟಿಸಿದೆಯೆಂದು ಹೇಳಬೇಕಾಗಿದೆ

ಸಿರಿಯಾದಲ್ಲಿ

ಸಿರಿಯಾದಲ್ಲಿ ಈಗ ಯುದ್ಧವು ಆರಂಭವಾಗಿದೆ ಸಿರಿಯಾವನ್ನು ಜರ್ಮನರು ಆಕ್ರಮಿಸಿದರು. ಸ್ವತಂತ್ರ ಫ್ರೆಂಚ್ ಜೊಡಗೂಡಿ ಬ್ರಿಟಿಷ ದಂಡು ಜರ್ಮನರನ್ನು ಎದುರಿಸಲು ಮುನ್ನುಗ್ಗಿರುವುದು. ಇಷ್ಟರಲ್ಲಿಯೇ ಅಲ್ಲಿ ಭೀಷಣ ಸಂಗ್ರಾಮವು ಆರಂಭವಾಗಿರಬೇಕು ಸಿರಿಯವು ಕದನ ಕೋಲಾಹಲದ ಕುರುಕ್ಷೇತ್ರವಾಗಿ ಪರಿಣಮಿಸಿ ಜಗತ್ತಿನ ನೋಟವು ಅಲ್ಲಿ ಇಂದು ಕೇಂದ್ರೀಕೃತವಾಗಿದೆ

ಸಿರಿಯಾದ ಯುದ್ಧವು ಮಹತ್ವದ ಯುದ್ಧವಾಗಿದೆ ಸಿರಿಯವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದು ಇಂದು ಉಭಯ ಪಕ್ಷದವರ ಪಂಥಕ್ಕೂ ಜೀವಂತ ಪ್ರಶ್ನೆಯಾಗಿದೆ ಮುಂದಿನ ಯುದ್ಧ ಗತಿಯಲ್ಲಿ ಸಿರಿಯದ ಜಯಾಪಜಯಗಳು ಹೆಚ್ಚಿನ ಗಣನೀಯ ವಿಷಯಗಳಾಗಿ ಪರಿಣಮಿಸುವವೆಂದು ಇಕ್ಕಡೆಯವರೂ ಅಭಿಪ್ರಾಯಪಟ್ಟಿದ್ದಾರೆ

ಫ್ರೆಂಚ್ ಸೈನ್ಯವು ಸಿರಿಯಾದಲ್ಲಿ ಬಹಳ ಇದೆಯೆಂದು ತಿಳಿದುಬರುತ್ತದೆ ಸ್ವತಂತ್ರ ಫ್ರೆಂಚರ ವಿಷಯವಾಗಿ ಡಿಗೋಲೆಯು ಸಿರಿಯ ನರಿಗೆ ಹುರುಪು ಹುಟ್ಟುವಂತೆ ಸಂದೇಶವಿತ್ತಿದ್ದಾನೆ ಸಿರಿಯಕ್ಕೆ ಸಂಪೂರ್ಣ ಸ್ವಾತಂತ್ರ್ಯವು ಕೊಡಲಾಗಿದೆಯೆಂದು ಸಾರಿರುತ್ತಾನೆ ಜನರಲ್ ವೇವೆಲ್ಲರು ಸಿರಿಯ ನರಿಗೆ ಬ್ರಿಟಿಷರ ಬೆಂಬಲವಾಗಿ ನಿಲ್ಲುವ ಸಂದೇಶ ಕಳುಹಿಸಿದ್ದಾರೆ

ಬ್ರಿಟಿಷ್ ಸರಕಾರದವರ ಗೀಯಾರೆನೆ ಇಸವಿ ಜುಲಾಯಿ ತಿಂಗಳಲ್ಲಿ ಸಿರಿಯದ ಲೆಬಾನನಲ್ಲಿ ಯಾವುದೇ ವಿರೋಧಿ ರಾಷ್ಟ್ರವು ಆಕ್ರಮಣ ಮಾಡಿದರೆ, ಅವುಗಳನ್ನು ಸ್ವಾಧೀನ ಪಡಿಸಿಕೊಂಡು, ಮಧ್ಯಪೂರ್ವದ ಯಾವುದೇ ರಾಷ್ಟ್ರಕ್ಕೆ ಧಾಳಿ ಮಾಡದಂತೆ ಫ್ರೆಂಚರಿಗೆ ಜಾಹೀರು ಮಾಡಿದ್ದರು. ಆದರೆ ವಿಚಿ ಸರಕಾರವು ಜರ್ಮನರೊಡನೆ ಸೇರಿಕೊಂಡು ಇರಾಕಿನ ದಂಗೆಗಾರರಿಗೆ ಸಹಾಯವಿತ್ತರು ಇಂತಹ ಸಂದರ್ಭದಲ್ಲಿ ಜರ್ಮನರು ಸಿರಿಯಾಕ್ಕೆ ಮುಂದೊತ್ತಿ ಬರುವಾಗ ವಿಚಿ ಸರಕಾರವು ಸಹಕರಿಸುತ್ತಲಿದೆ. ಬ್ರಿಟಿಷ ಸರಕಾರವು ವಿಚಿ ಸರಕಾರದ ಈ ಧೋರಣೆಗಾಗಿ ಖತಿಗೊಂಡಿರುತ್ತದೆ

ಸಿರಿಯಾದಲ್ಲಿ ಭೀಷಣ ರಣರಂಗವು ನಡೆಯುತ್ತಲಿದೆ

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳನುಸಾರವಾಗಿ ನಡೆಯುವ ದೇಶ ಪ್ರತಿರ್ಬಿಬ್ಬ, ಭಾರತೀಯರ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿದ್ದಾರೆ, ಪ್ರಾಚೀನ ಸಂಸ್ಕೃತಿಯು ತಿಳಿವೇ ಇಲ್ಲದುದರಿಂದಲೂ ಸಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ

ಇದರಿಂದ ಬಳಲುವ ಮಂದಿಗಳಲ್ಲಿ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ಪರೀಕ್ಷಿಸಿರಿ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4





ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ ಎ, ಎಫ್ ಸಿ. ಎಸ್ (ಲಂಡನ್) ಎಂ ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು

ಪ್ರಮುಖ ಆಯುರ್ವೇದಿಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು, ಪ್ರಪಂಚದಲ್ಲೆಲ್ಲಾ ಇವೆ-

ಮಂಗಳೂರಿನ ಏಜೆಂಟ್ ಷಾ ಕಂಪೆನಿ, ಹಂಪನಕಟ್ಟಾ ಮಂಗಳೂರು

ರತ್‌ಬೋನಳಿಗೆ ಕವೀಂದ್ರ ಠಾಗೂರರು ಉತ್ತರ ಕೊಡುತ್ತಾರೆ!

ರತ್‌ಬೋನಳೆಂಬ ಬ್ರಿಟಿಷ ಮಹಿಳೆಯು ಭಾರತಥ ರಾಜಕೀಯದ ವಿಷಯದಲ್ಲಿ ಒಂದು ಹೇಳಿಕೆ ಕೊಟ್ಟಿದ್ದಳಷ್ಟೆ! ಕವಿವರ್ಯ ಠಾಗೂರರು ಅದಕ್ಕೆ ಉತ್ತರವಾಗಿ ಒಂದು ಪ್ರಕಟಣೆ ಹೊರಡಿಸಿ ರತ್‌ಬೋನಳ ಪ್ರಲಾಪಗಳನ್ನು ಬಯಲಿಗೆಳೆದಿದ್ದಾರೆ ಇಂತಹ ಅಪಪ್ರಲಾಪದಿಂದ ರತ್‌ಬೋನಳು ಇಡೀ ಬ್ರಿಟಿಷ ಕುಲಕ್ಕೆ ಗೌರವ ತಂದುಕೊಂಡಿದ್ದಾಳೆಂದು ಅವರು ಅದರಲ್ಲಿ ಹೇಳಿದ್ದಾರೆ ಠಾಗೂರರು ತಮ್ಮ ಹೇಳಿಕೆಯಲ್ಲಿ ಹಿಂದೀಯರ ಅಸಹಾಯಕತೆಗಳನ್ನು ಬಹು ಮಾರ್ಮಿಕವಾಗಿ ವರ್ಣಿಸಿದ್ದಾರೆ

ಅದರ ಸಾರಾಂಶವು ಇಂತಿದೆ:—

‘ರತ್‌ಬೋನಳು ತನ್ನ ಹೇಳಿಕೆಯಲ್ಲಿ ಹಲವು ಅಸಂಬದ್ಧ ವಿಚಾರಗಳನ್ನು ಹೇಳಿದ್ದಾಳೆ. ಭಾರತೀಯರ ಮೇಲೆ ಕುತ್ಸಿತ ಆರೋಪ ಮಾಡಿದ್ದಾಳೆ. ‘ಇಂಗ್ಲಿಷನ್ನು ಕಲಿತು ಹೊಂದಿದ ಸಂಸ್ಕೃತಿಯಲ್ಲಿ ಭಾರತೀಯರು ಇಂದು ಇಂಗ್ಲಿಷರಿಗೆ ಕೃತಘ್ನರಾಗಿ ಎದುರು ನಿಲ್ಲುವುದೆ?’’ ಎಂದು ಆಕೆ ಹೇಳಿದ್ದಾಳೆ ಇಂಗ್ಲಿಷ ಭಾಷೆಯನ್ನು ಕಲಿತು ಸ್ವಲ್ಪ ಇಂಗ್ಲಿಷ್ ಸಂಸ್ಕೃತಿಯನ್ನು ಪಡೆದ ಮಾತ್ರದಿಂದ ಭಾರತೀಯರು ದೇಶಾಭಿಮಾನವನ್ನು ಬಿಟ್ಟುಬಿಡಬೇಕೆ? ನಮ್ಮ ದರಿದ್ರ ದೇಶದ ಸಲುವಾಗಿ ನಾವು ಕಿಂಚಿತ್ತಾದರೂ ಯೋಚಿಸಬೇಡವೆ? ಇಂಗ್ಲಿಷು ಸಂಸ್ಕೃತಿಯು ಹಲವು ವಿಚಾರಗಳಲ್ಲಿ ಉಚ್ಚ ಪಾಶ್ಚಾತ್ಯ ನಾಗರಿಕತೆಯಲ್ಲಿದೆಯೇನೋ ಸರಿ. ಆದರೆ ಇಲ್ಲಿ ಒಂದು ನೆನಪಿಡಬೇಕಾಗಿದೆ ಬ್ರಿಟಿಷ್ ಸರಕಾರದ ಅಧಿಕಾರಿಗಳು ನಮ್ಮನ್ನು ಹಾದಿ ತಪ್ಪಿಸಲು ಅಶಿಕ್ಷಿತರನ್ನಾಗಿ ಮಾಡಲು ಎಷ್ಟೋ ಪ್ರಯತ್ನ ಮಾಡಿದರೂ ಭಾರತೀಯರಲ್ಲಿ ಹಲವರು ಅದನ್ನು ಲಕ್ಷಿಸದೆ ಇಂಗ್ಲಿಷ ಸಂಸ್ಕೃತಿಯ ಲಾಭ ಪಡೆದರು. ಇನ್ನೊಂದು ವಿಚಾರವೆಂದರೆ ಭಾರತೀಯರಿಗೆ ಬೇರೊಂದು ಭಾಷೆಯ ಮೂಲಕ ಪಾಶ್ಚಾತ್ಯ ನಾಗರಿಕತೆಯನ್ನು ಕಲಿಯಲು ಸಾಧ್ಯವಾಗಿತ್ತು. ಇಂಗ್ಲಿಷ್ ಭಾಷೆ ಇರದಿದ್ದರೆ ನಮ್ಮ ಉದ್ಧಾರವಾಗುತ್ತಿರಲಿಲ್ಲವೆ? ಲೋಕದ ಜನಾಂಗಗಳೆಲ್ಲಾ ಇಂಗ್ಲಿಷ್ ಭಾಷೆಯ ಮೂಲಕವೇ? ಉದ್ಧಾರವಾಗಿರುವರೆ?

ಕೂಲಸನ್ನು ಕೊಟ್ಟರು.

ಭಾರತದಲ್ಲಿ ಬ್ರಿಟಿಷ ಅಧಿಕಾರಿಗಳು ಭಾರತದ ವಿದ್ಯಾರ್ಥಿಗಳಿಗೆ ಉಚ್ಚ ಇಂಗ್ಲಿಷ್ ಸಂಸ್ಕೃತಿಯನ್ನು ಕಲಿಸಿದರೆಂದು ನಾನು ಒಪ್ಪುವುದಿಲ್ಲ. ಉಚ್ಚ ಆಂಗ್ಲ ಸಂಸ್ಕೃತಿಯನ್ನು ಅವರು ಖಂಡಿತವಾಗಿ ನಮಗೆ ಕೊಡಲಿಲ್ಲ. ಆ ಸಂಸ್ಕೃತಿಯ ಕೂಲಸನ್ನು ಕೊಟ್ಟರು; ಅದನ್ನು ಶಾಲೆಗಳಲ್ಲಿ ಕಲಿಸಿದರು. ಇಂಗ್ಲಿಷ್ ಭಾಷೆಯಿಂದಾದರೂ ನಮಗೆ ಆಗಿರುವುದೇನು? ನಾಲ್ಕಾರು ಶತಮಾನಗಳಿಂದ ನಡೆದ ಬ್ರಿಟಿಷರ ಆಳ್ವಿಕೆಯಲ್ಲಿ ನೂರಕ್ಕೆ ಒಬ್ಬರಿಗೆ ಇಂಗ್ಲಿಷ್ ಬರುತ್ತಿತ್ತೆಂದು ೧೯೩೧ರ ಜನಗಣನೆಯಿಂದ ತಿಳಿದುಬಂದಿದೆ ಆದರೆ ರಶ್ಯದಲ್ಲಿ ಕೇವಲ ಹದಿನೈದು ವರ್ಷಗಳಲ್ಲಿ ೧೦೦ಕ್ಕೆ ೯೮ರಂತೆ ಜನರು ಸುಶಿಕ್ಷಿತರಾಗಿದ್ದಾರೆ:

ಬ್ರಿಟಿಷರು ಭಾರತೀಯರಿಗೆ ಏನು ಮಾಡಿದ್ದಾರೆ?

ನಾವು ನಿರಾಯುಧರಾಗಿರುವೆವು!

ಶಿಕ್ಷಣ ಸಂಸ್ಕೃತಿಗಳ ವಿಚಾರವಂತಿರಲಿ ಹೊಟ್ಟೆಪಾಡಿನ ವಿಚಾರ ಮಾಡುವ. ಹೊಟ್ಟೆಪಾಡಿನ ವ್ಯವಸ್ಥೆಯು ಮೇಲಲ್ಲವೇ ಸಂಸ್ಕೃತಿಯ ಮಾತು. ನಮ್ಮ ದೇಶದ ಬೊಕ್ಕಸವನ್ನು ತಮ್ಮ ಕೈಯಲ್ಲಿಟ್ಟುಕೊಂಡು ನಮ್ಮ ದೇಶದ ಸಂಪತ್ತನ್ನು ಶೋಷಿಸುತ್ತಿರುವ ಬ್ರಿಟಿಷರು ನಮ್ಮ ಜನರ ಸಲುವಾಗಿ ಏನು ಮಾಡಿದ್ದಾರೆ? ನನ್ನ ಸುತ್ತಲೂ ನೋಡಿದರೆ ಹಸಿವೆಯಿಂದ ಕಂಗೆಟ್ಟಿರುವ ಮುಖಗಳುಗಳು ಕಂಡುಬರುತ್ತವೆ ಹೊಟ್ಟೆಗಿಲ್ಲದೆ ಗೋಳಿಡುತ್ತಿರುವ ದೇಶಬಾಂಧವರ ಆರ್ತನಾದವು ಕೇಳಿಬರುತ್ತದೆ

ಸಹಾನುಭೂತಿಯಿದೆ

ಇಂಗ್ಲೆಂಡಿನಲ್ಲಿರುವ ಜನರಿಗೂ ಇಂದು ಹೊಟ್ಟೆಗಿಲ್ಲದೆ ಸಾಯುವ ಕಾಲ ಬಂದೊದಗಿದೆ. ಇದು ನನಗೆ ಗೊತ್ತಿದೆ. ಅವರ ವಿಷಯ ನನಗೆ ತುಂಬಾ ಸಹಾನುಭೂತಿಯಿದೆ. ಆದರೆ ಪ್ರಚಂಡ ನೌಕಾಬಲವು ದೇಶ ವಿದೇಶಗಳಿಂದ ಆಹಾರ ಸಾಮಗ್ರಿಗಳನ್ನು ಹೊತ್ತು ತಂದು ತಮ್ಮ ಜನರಿಗೆ ಅಲ್ಲಿ ಕೊಡುತ್ತಿವೆಯಲ್ಲವೆ? ಆದರೆ ನಮ್ಮ ದೇಶದಲ್ಲಿ ನಮ್ಮ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ ನೆರೆ ಜಿಲ್ಲೆಯಿಂದ ಒಂದು ಗಾಡಿ ಅಕ್ಕಿ ಸಹಿತ ತರಲು ಅನುಮತಿ ಕೊಡುವುದಿಲ್ಲ ಬ್ರಿಟನಿನಲ್ಲಿರುವ ಬ್ರಿಟಿಷರ ರೀತಿಯೇ ಬೇರೆ, ಭಾರತದಲ್ಲಿರುವ ಬ್ರಿಟಿಷರ ರೀತಿಯೇ ಬೇರೆ ಎಂದು ನಾವು ತಿಳಿಯದೆ ಸಾಧ್ಯವುಂಟೆ? ಇಂಥ ಬ್ರಿಟಿಷರಿಗೆ ನಾವು ಕೃತಜ್ಞರಾಗಿರಬೇಕೆ? ಹೊಟ್ಟೆಗೆ ಹಾಕದಿದ್ದರೂ ದೇಶದಲ್ಲಿ ಶಾಂತತೆಯನ್ನು ಕಾಪಾಡಿರೆಂದು ನಾವು ಜನರಿಗೆ ಹೇಳಬೇಕೆ?

ಯೋಗ್ಯತೆಯಿಲ್ಲ!

ದೊಂಬಿಗಳಲ್ಲಿ, ದಂಗೆಗಳಲ್ಲಿ ಅಸಂಖ್ಯ ಹಿಂದೀಯರು ಸಾಯುತ್ತಾರೆ ಅವರ ಹಾನಿಯಾಗುತ್ತದೆ ಆದರೆ ನಮ್ಮನ್ನಾಳುವ ಪ್ರಬಲ ಬ್ರಿಟಿಷ ಸರಕಾರವು ಒಂದಡಿಯನ್ನೂ ಮುಂದಿಡುವುದಿಲ್ಲ. ಇದೇ ಸಮಯದಲ್ಲಿ ಸಮುದ್ರದಾಚೆಯಲ್ಲಿರುವ ಬ್ರಿಟಿಷರು ನಮ್ಮನ್ನು ಬಯ್ಯುತ್ತಾರೆ. ನಿಮ್ಮ ಮನೆಯನ್ನು ಸರಿಪಡಿಸಲು ನಿಮಗೆ ಯೋಗ್ಯತೆಯಿಲ್ಲವೆನ್ನುತ್ತಾರೆ

ಆದರೆ ಇಂದಿನ ಯುದ್ಧದಲ್ಲಿ ನಾವು ನೋಡುವುದೇನು? ವೈರಿಗಳ ಮುಂದೊತ್ತುವಿಕೆಯನ್ನು ಎದುರಿಸಲಾರದ ವೀರರೆನಿಸಿಕೊಳ್ಳುವ ಬ್ರಿಟಿಷರು ಫ್ರೆಂಚರು ಮತ್ತು ಗ್ರೀಕ ಸೈನಿಕರು ರಣಭೂಮಿಗಳಿಂದ ಓಡಿಬರಲಿಲ್ಲವೆ? ಆದರೆ, ನಮ್ಮ ದೇಶದಲ್ಲಿ ನಿರಾಯುಧರಾದ ಬಡ ರೈತರು ಸಶಸ್ತ್ರ ಪುಂಡರನ್ನು ಎದುರಿಸಲಾರದೆ ಮನೆಮಾರುಗಳನ್ನು ಬಿಟ್ಟು ಓಡಿ ಹೋಗುವಾಗ ಜನರು ಹೇಡಿಗಳೆಂದು ಬ್ರಿಟಿಷ್ ಅಧಿಕಾರಿಗಳು ಬಹುಶಃ ನಗಬಹುದ

ನಮ್ಮ ಜನರು ನಿರಾಯುಧರು

ಇಂಗ್ಲೆಂಡಿನಲ್ಲಿ ತನ್ನ ಮನೆಮಾರುಗಳನ್ನು ಉಳಿಸಿಕೊಳ್ಳಲು ಪ್ರತಿಯೊಬ್ಬನಿಗೆ ಶಸ್ತ್ರಾಸ್ತ್ರಗಳನ್ನು ಕೊಡಲಾಗಿದೆ. ಆದರೆ ಭಾರತದಲ್ಲಿ ಮಾತ್ರ ದೊಣ್ಣೆಯನ್ನು ಹಿಡಿಯಲಿಕ್ಕೂ ಅನುಮತಿಯಿಲ್ಲ. ಲಾಠಿ ಹಿಡಿಯಕೂಡದೆಂದು ಸರಕಾರದ ಆಜ್ಞೆಯಿದೆ ನಮ್ಮ ಜನರನ್ನು ಒಟ್ಟಿನಿಂದ ನಿರಾಯುಧರನ್ನಾಗಿ ಮಾಡಲಾಗಿದೆ ನಾವು ಕಡೆ ತನಕ ಹೇಳಿದಂತೆ ಕೇಳಬೇಕೆಂದು ನಮನ್ನು ದುರ್ಬಲರನ್ನಾಗಿ ಮಾಡಲಾಗಿದೆ. ಜರ್ಮನರ ಲೋಕ ಪ್ರಭುತ್ವವನ್ನು ಎದುರಿಸುವ ಸಲುವಾಗಿ ಮಾತ್ರ ಬ್ರಿಟಿಷರು ಜರ್ಮನರನ್ನು ದ್ವೇಷಿಸುತ್ತಾರೆ. ನಮ್ಮನ್ನು ದಾಸ್ಯ ಶೃಂಖಲೆಯಿಂದ ಬಿಗಿದ ಬ್ರಿಟಿಷರ ಕಾಲ್ಕೆಳಗೆ ನಾವು ದಾಸರಂತೆ ಕುಳಿತು ಅವರ ಕೈಯನ್ನು ಕಾಯಬೇಕೆಂದು ರತ್‌ಬೋನಳು ಹೇಳುತ್ತಾಳೆ. ಸರಕಾರದ ಯೋಗ್ಯತೆ ಅದರ ಪ್ರತಿನಿಧಿಯ ಮಾತಿನಿಂದ ಗೊತ್ತಾಗುವುದಿಲ್ಲ; ಸರಕಾರವು ಜನರಿಗೆ ಏನು ... ತಿಳಿಯುತ್ತದೆ.



ಪಾರಶ ಕತೆ:

ಮಂಗಳಾ

ಕತೆಗಾರ:— ಕೆ. ಎಸ್. ಶರ್ಮಾ

ಯಮುನಾ ನದಿಯ ವಿಶಾಲವಾದ ಒಂದು ತೀರ. ಸಮೀಪದಲ್ಲೊಂದು ಕಮನೀಯವನ. ಆಗಾಗ ನದಿಯ ತರಂಗಗಳು ರಮ್ಯವಾಗಿ ತೀರಕ್ಕೆ ಬಡಿದು ಮರಳಿ ಹೋಗುತಿದ್ದುವು.

ಮಧ್ಯಾಹ್ನದ ಸಮಯ. ವನದ ಒಂದೆಡೆ ಪುರದ ನೆರಳಲ್ಲಿ ಯುವಕನೊಬ್ಬನು ಮಲಗಿದ್ದ. ಅಗಲವಾದ ಹಣೆ, ಕಳೆತುಂಬಿದ ಮುಖ. ತಣ್ಣೆಲರು ಬೀಸುತ್ತಿದ್ದಾಗ ಆತನ ಮುಂಗುರುಳುಗಳು ಅತ್ತಿತ್ತ ಅಲೆದಾಡುತ್ತಲಿದ್ದುವು. ಸಮೀಪದಲ್ಲೇ ಕುದುರೆಯೊಂದು ಮೇಯುತಿತ್ತು.

ಕೇವಲ ಹದಿನೆಂಟು ವರ್ಷದ ಓರ್ವ ಯುವತಿಯು ನದೀ ತೀರಕ್ಕೆ ಬಂದಳು. ಕೈಯಲ್ಲೊಂದು ಕೊಡ ಹಿಡಕೊಂಡಿದ್ದಳು. ತರುಣಿಯು ಮುಂದುವರಿಯುತ್ತಾ ಬಂದಳು. ನದಿಯ ದಡಿಯಲ್ಲಿ ನಿಂತು ಒಮ್ಮೆ ವಿಶಾಲವಾಗಿ ಸುತ್ತಲೂ ನೋಡಿದಳು. ತಟ್ಟನೆ ಎರಡು ಬಿಂದು ಅಶ್ರುಗಳು ಆಕೆಯ ಕಣ್ಣುಗಳಿಂದ ಉದುರಿದ್ದುವು. ಕೊಡವನ್ನು ಮೆಲ್ಲಗೆ ಮುಳುಗಿಸಿದಳು ತುಂಬಿದ ಕೊಡವನ್ನು ಕಂಕುಳಲ್ಲಿರಿಸಿ ಮತ್ತೆ ಹಿಂತಿರುಗಿದಳು

ತರುಣನು ನಿದ್ದೆಯಿಂದ ಎದ್ದನು ಒಮ್ಮೆ ಸುತ್ತಲೂ ನೋಡಿದ ಆತನ ದೃಷ್ಟಿಗೆ ಆ ತರುಣಿಯು ಕಾಣಬಂದಳು ಸುಂದರಿಯನ್ನು ಕಂಡು ಆತನಿಗೆ ಕುತೂಹಲವಾಯಿತು. ಎದ್ದು ಕುದುರೆಯ ಮೇಲೇರಿದನು ಕುದುರೆಯನ್ನು ಮುಂದುವರಿಸಿದನು ಕುದುರೆಯು ತರುಣಿಯನ್ನು ಹಿಂಬಾಲಿಸಿತು ತರುಣಿಯು ಪಕ್ಕನೆ ಹಿಂತಿರುಗಿ ನೋಡಿದಳು ತೀರಾ ಸಮೀಪದಲ್ಲೇ ತನ್ನೆಡೆಗೆ ಬರುತ್ತಿರುವ ಅಶ್ವಾರೋಹಿಯನ್ನು ಕಂಡಳು, ಆಕೆಯು ಅವಕ್ಕಾದಳು. ಯುವಕನು ಕುದುರೆಯಿಂದಿಳಿದು ಅವಳ ಬಳಿಗೆ ಬಂದ. ತರುಣಿಯು ಮುಖವನ್ನು ತಗ್ಗಿಸಿಯೇ ಇದ್ದಳು. ಆತನು ಮಾತ್ರ ಧೈರ್ಯದಿಂದ ಕೇಳಿದನು.

'ಈ ವನವಾಸಿನಿ ನೀನಾರು?'

ತರುಣಿಯು ಮಾತನಾಡಲಿಲ್ಲ, ಆದರೆ ಒಂದು ಮುಗುಳ್ನಗುವನ್ನು ಮಾತ್ರ ಬೀರಿದಳು. ತರುಣನು ಮತ್ತೂ ಕುತೂಹಲಿಯಾದ. ದೂರದಲ್ಲಿ ಕುದುರೆಯ ಕಾಲ ಸಪ್ಪಳವು ಕೇಳಬಂತು. ತರುಣನು ತಲೆಯೆತ್ತಿ ನೋಡಿದ. ದೂರದಿಂದ ಕೆಲ ಕುದುರೆಗಳೂ ಕಾಣಬಂದುವು. ತರುಣಿಯು ಹೆದರಿದರೂ ಆತನೊಡನೆ ಅಡಗಿರುವಂತೆ ಹೇಳಿದಳು. ಏನನ್ನೂ ತಿಳಿಯದೆ ಆತನು ಕುದುರೆಯೊಂದಿಗೆ ಹಿಂದಕ್ಕೆ ತೆರಳಿದ.

ಕುದುರೆಗಳು ತೀರಾ ಸಮೀಪಿಸಿದುವು. ಒಬ್ಬೊಬ್ಬರೇ ಕೆಳಗಿಳಿದರು. ಸಮೀಪದಲ್ಲೇ ಇರುವ ಒಂದು ಗುಡಿಸಲ ಬಳಿ ಬಂದರು.

ಸವಾರರಲ್ಲಿ ಒಬ್ಬನಾದ ಮಾನಸಿಂಹನು ಮೆಲ್ಲಗೆ ಗುಡಿಸಲಿಗೆ ಬಂದನು. ಬಾಗಿಲ ಬಳಿಯಿಂದಲೇ 'ಭವಾನಿ' ಎಂಬುದಾಗಿ ಕರೆದನು. ಸುಮಾರು ೩೦ ವರ್ಷ ಪ್ರಾಯದ ಓರ್ವ ಸ್ತ್ರೀಯು ಹೊರಬಂದಳು. ಮಾನಸಿಂಹನು ಗಂಭೀರವಾಗಿ 'ಭವಾನೀ, ಮಂಗಳೆಯ ವಿಷಯದಲ್ಲಿ ನೀನು ನಡೆಸುತ್ತಿರುವ ಕಾರಸ್ಥಾನವು ಹೇಗಾಯಿತು?' ಎಂದು ಕೇಳಿದನು.

'ಎಷ್ಟು ಹೇಳಿದರೂ ಆಕೆಯು ಬಾದಶಹರನ್ನು ಒಲ್ಲೆನೆಂದೇ ಅನ್ನುವಳು. ಅಷ್ಟೂ ಅಲ್ಲದೆ, ನೀಚನಾದ ಬಾದಶಹನನ್ನು ಕಣ್ಣೆತ್ತಿ ನೋಡಲಾರೆನೆಂದೇ ಹೇಳುವಳು'. ಆಕೆ ಮರುನುಡಿದಳು. ಮಾನಸಿಂಹನು ಸಹಿಸದಾದ. ಬಾದಶಹರ ಸಂಪತ್ತಿನ ಸವಿದೊರಕಬೇಕಾಗಿದ್ದರೆ ಮಂಗಳೆಯನ್ನು ಸಮರ್ಪಿಸದೆ ಮಾನಸಿಂಹನಿಗೆ ಬೇರೆ ದಾರಿಯಿರಲಿಲ್ಲ.

'ಭವಾನಿ, ಹೇಗಾದರೂ ವಶಪಡಿಸು. ಇಂದು ಸಂಜೆಗೆ ಬಾದಶಹರ ಸೇನಾಪತಿ ಬರುವನು. ಆತನೇ ಇವಳನ್ನು ಒಯ್ಯುವನು ಆಗಲೂ ಆಕೆಯು ಅತೃಪ್ತಿಯನ್ನು ಪಡುವುದಾದರೆ ಮಾತ್ರ ಬಾದಶಹರು ಸಹಿಸಲಾರರು.' ಭವಾನಿಯು ನಿರುತ್ತರಳಾದಳು. ಒಳಕ್ಕೆ ತೆರಳಿದಳು. ಮಾನಸಿಂಹನು ತನ್ನೊಂದಿಗೆ ಬಂದ ಸೇನಾನಾಯಕರನ್ನು ತೆರಳುವಂತೆ ಆಜ್ಞಾಪಿಸಿದ 'ಮಂಗಳೆ ಮಂಗಳೆ' ಎಂದು ಗಟ್ಟಿಯಾಗಿ ಕರೆದ. ಹೆದರುತ್ತಾ ಮಂಗಳೆಯು ಬಂದಳು

'ಮಂಗಳೇ ಸಂಪತ್ತಿನ ರಾಶಿಯಲ್ಲಿ ಮೆರೆಯುವ ಭಾಗ್ಯವನ್ನು ನೀನೊಲ್ಲೆಯಾ?'

'ಮಾವ, ನಾನೊಲ್ಲೆ, ಬಾದಶಹರ ಭಾಗ್ಯವನ್ನು ನಾನೊಲ್ಲೆ. ಬಡವನಾದೊಬ್ಬ ವೀರ ರಜಪೂತನಿಗೆ ಕೊಟ್ಟರೆ ನಾನದನ್ನೇ ಭಾಗ್ಯವೆಂದನ್ನುವೆ. ಅದೇ ನನ್ನ ಆಶೆ.'

'ಮಂಗಳೆ, ಇದು ಸಾಧ್ಯವಿಲ್ಲ. ನೀನೊಲ್ಲೆಯಾದರೂ, ನಾನು ಇದನ್ನು ಸಾಧಿಸಿಯೇ ಸಾಧಿಸುವೆನು.' ಆಗ ಮಾತ್ರ ಮಂಗಳೆಯು ಸಹಿಸಲಿಲ್ಲ. 'ಮಾವ, ನೀವು ಹಿಂಸಿಸಿರಿ, ಕೊಲ್ಲಿರಿ. ಆದರೂ ನಾನು ಸಹಿಸುವೆನು. ಮೊದಲೇ, ನನ್ನ ತಂದೆ ತಾಯಿಯರನ್ನು ಕಾರಣಾಂತರದಿಂದ ಕೊಂದಿರಿ. ಅದೇ ಪಾಪವು ತಮ್ಮಲ್ಲಿದೆ. ಅದರ ಮೇಲೆ ಇದು ಹೆಚ್ಚಿನದಲ್ಲ, ಆದರೆ ಒಂದು ಹೇಳುತ್ತೇನೆ, ರಾಜ್ಯದಾಶೆಗಾಗಿ ಇಂತಹ ಹೇಯ ಕೃತ್ಯವನ್ನು ಮಾಡಬಾರದು, ದೇವರು ನೋಡುತ್ತಾನೆ' ಎನ್ನುತ್ತಾ ಬಲವಾಗಿ ರೋದಿಸಿದಳು. ಮಾನಸಿಂಹನಿಗೆ ಕೋಪವು ನೆತ್ತಿಗೇರಿ ಕಾಲಿನಿಂದ ಮಂಗಳೆಗೆ ಒದೆದುಬಿಟ್ಟನು! ಇದೆಲ್ಲವನ್ನೂ ನೋಡುತಿದ್ದ ತರುಣನು ಈಗ ಮಾತ್ರ ಕಿಡಿಗೊಂಡನು. ಧಾವಿಸಿ ಬಂದ ತರುಣನನ್ನು ಕಂಡು ಮಾನಸಿಂಹನಿಗೆ ದಿಗಿಲು ಹುಟ್ಟಿತು. ತಟ್ಟನೆ ಕೈಯ ಖಡ್ಗವನ್ನು ಎತ್ತಿ ಎದ್ದು ನಿಂತನು.

'ನೀಚಾ, ನೀನೀಗ ಏನ ಮಾಡಬಯಸ್ಸಿರುವೆ. ರಜಪೂತ ಕುಲದಲ್ಲಿ ಜನ್ಮವೆತ್ತಿ, [illegible] ತರುಣನು ಆರ್ಭಟಿಸಿದನು. ಮಾನಸಿಂಹನು ಉರಿದೆದ್ದನು. ಕೆಲಕಾಲ ಇಬ್ಬರೂ ಕಾದಾಡಿದರು. ಮಾನಸಿಂಹನು ತನ್ನ ಖಡ್ಗದಿಂದ ಒಂದು ಬಾರಿ ಬಲವಾಗಿ ತರುಣನನ್ನು ಹೊಡೆದನು. ತರುಣನು ಕೆಡೆದು ಬಿದ್ದನು. ಮಾನಸಿಂಹನು ತರುಣನು ಮಡಿದನೆಂದು ಭಾವಿಸಿ ಅಲ್ಲಿಂದ ತೆರಳಿದನು.

ಆ ತರುಣನು ಓರ್ವ ರಜಪೂತ ಸರದಾರನು. ವೀರಸಿಂಹನೆಂದು ಅವನ ಹೆಸರಾಗಿತ್ತು. ಕಾರಣಾಂತರದಿಂದ ಆತನು ಆ ಕಾಡಿಗೆ ಬಂದಿದ್ದನು. ಮಂಗಳೆಯನ್ನು ಆಕೆಯ ತಂದೆ ತಾಯಿಯರು ವೀರಸಿಂಹನಿಗೇ ಕೊಡಬೇಕೆಂದಿದ್ದರು. ಮಂಗಳೆಯ ಮಾವನಾದ ಮಾನಸಿಂಹನು ರಾಜ್ಯದ್ದಾಸೆಯಿಂದ, ಮಂಗಳೆಯ ಮಾತಾಪಿತೃಗಳನ್ನು ಕೊಂದು, ಆಕೆಯನ್ನು ಕಾಡಿಗೊಯ್ದನು.

ಖಡ್ಗಾಘಾತದಿಂದ ಕೆಡೆದು ಬಿದ್ದ ವೀರಸಿಂಹನು ಸ್ವಲ್ಪ ಸಮಯದಲ್ಲೇ ಎಚ್ಚೆತ್ತನು. ಎದ್ದು ನೋಡಿದಾಗ ಗುಡಿಸಲು ಶೂನ್ಯವಾಗಿತ್ತು ಕುದುರೆಯನ್ನು ಹತ್ತಿ ಶೀಘ್ರವಾಗಿ ತೆರಳಿದನು. ವೀರಸಿಂಹನು ಬಹು ದೂರ ಬಂದನು. ಹೋಗುಹೋಗುತ್ತಿರುವಂತೆಯೇ ಸಂಜೆಯಾಯಿತು. ಕೆಲ ದೂರದಲ್ಲೇ ಆರೋ ಹೋಗುತ್ತಿರುವಂತೆ ತೋರಿತು. ವೀರಸಿಂಹನು ಮುಂದೊತ್ತಿ ಬಂದು ಅವರ ಮಧ್ಯಕ್ಕೆ ನೆಗೆದು ವೀರನಂತೆ ಕಾದಲಾರಂಭಿಸಿದ. ಸರದಾರರೂ ಹೆದರಲಿಲ್ಲ ಕಾದಾಡಿದರು. ವೀರಸಿಂಹನ ಖಡ್ಗವು ಕೆಳಬಿತ್ತು. ಸರದಾರರು ಬಂಧಿಸಿದರು. ಮಂಗಳೆಯು ಅಶ್ರುವನ್ನು ಸುರಿಸಿದಳು ಜಗತ್ತನ್ನೇ ಭಯಂಕರವನ್ನಾಗಿ ಕಂಡಳು. ಆದರೆ ಕೇಳುವವರಾರು? ಸರದಾರರು ಶೀಘ್ರವಾಗಿ ಬಾದಶಹರಲ್ಲಿಗೆ ಅವರನ್ನು ಒಯ್ದರು

ಬಾದಶಹರ ಆಸ್ಥಾನವು ಜನರಿಂದ ಕಿಕ್ಕಿರಿದಿತ್ತು. ಎತ್ತರದಲ್ಲಿ ಬಾದಶಹರು ಮಂಡಿಸಿದ್ದರು. ಎದುರು ಪಕ್ಕದಲ್ಲಿ ಮಾನಸಿಂಹನು ಕುಳಿತಿದ್ದ ಮಂಗಳೆಯು ನಿಂತಿದ್ದಳು ಪಕ್ಕದಲ್ಲಿಯೇ ವೀರಸಿಂಹನು ಬಂಧಿತನಾಗಿ ನಿಂತಿದ್ದ. 'ಮಂಗಳೆಯ ಅಪಹರಣದಲ್ಲಿ ತೊಂದರೆ ಮಾಡಿದವನು ಇವನಾಗಿರಬಹುದು, ಅಲ್ಲವೆ? ಇರಲಿ. ನೀವು ಬಹಳ ಕುಶಲರಾಗಿಯೇ ಕಾರ್ಯವನ್ನು ಸಾಧಿಸಿದಿರಿ' ಎಂದರು ಬಾದಶಹರು.

'ಬಾದಶಹರೆ, ದೀನಳಾದ ನನ್ನೊಂದು ಬಿನ್ನಹವಿದೆ. ದಯವಿಟ್ಟು ಕೇಳಬೇಕು. ರಜಪೂತನಾದ ಈ ವೀರಸಿಂಹನನ್ನು ವರಿಸಬೇಕೆಂದಿದ್ದ ನನ್ನನ್ನು, ಓರ್ವ ಅಬಲೆಯನ್ನು ನನ್ನ ಮಾವನು, ಮಾರಬಯಸಿದನು.' ಅದರೊಂದಿಗೆ, ವಿವಿಧ ಹಿಂಸೆಯಿಂದ ನನ್ನ ಮಾತಾಪಿತೃಗಳನ್ನು ಕೊಂದನು. ನನ್ನನ್ನು ನಿರಾಶ್ರಯಳನ್ನಾಗಿ ಮಾಡಿ, ಕಟ್ಟಕಡೆಗೆ ಕುಲಭ್ರಷ್ಟಳನ್ನಾಗಿಯೂ ಮಾಡಬಯಸಿದನು. ಆದರೆ ತಾವು, [illegible] ಜಾತಿಯ ಅಭಿಮಾನವಿದೆ. ತಾವು ಈ ನನ್ನ ದೀನಾವಸ್ಥೆಯಲ್ಲಿ ದಯೆಯನ್ನು ತೋರಿಸಲಾರಿರಾ? ಕುಲಭ್ರಷ್ಟಳನ್ನಾಗಿ ಮಾಡಬಯಸುವಿರಾ? ತಮ್ಮ ಒಬ್ಬ ಮಗಳಿಗೆ ಈ ಗತಿ ಬಂತೆಂದರೆ ತಾವು ಸಹಿಸುವಿರಾ? ಬಾದಶಹರೆ, ಬಡವಳ ಈ ಬಿನ್ನಹವನ್ನು ರಾಜ್ಯವನ್ನು ಪರಿಪಾಲಿಸುವ ನೀವೂ ಕೇಳಲಾರಿರಾ?' ಹೀಗೆನ್ನುತ್ತಾ ಮಂಗಳೆ ಕಂಬನಿಸುರಿಸಿದಳು. ಬಾದಶಹನು ವಿಕಲನಾದನು. ಹೃದಯದಲ್ಲಿ ನೆಲೆಗೊಂಡಿದ್ದ ಕಾಮುಕತ್ವವು ಕಳಚಿ ಹೋಯಿತು. ತಲೆಯನ್ನು ನಾಚಿಕೆಯಿಂದ ತಗ್ಗಿಸಿದನು. ಅಬಲೆಯೋರ್ವಳ ಅಭಿಮಾನದ [illegible]ರೋದ್ಗಾರವು ಬಾದಶಹನ ಹೃದಯವನ್ನು ನಡುಗಿಸಿತು. 'ತಾಯೆ, ಸುಖವಾಗಿ ಹೋಗು. ನಿನ್ನ ಗೌರವವನ್ನು ಹಾಳು ಮಾಡಲಾರೆ. ಸಂತೋಷದಿಂದ ನೀನು ವೀರಸಿಂಹನನ್ನೇ ವರಿಸು. ವೀರಸಿಂಹ, ನೀನು ಮಂಗಳೆಯ ಪತಿಯಾಗಿ ಸುಖವಾಗಿರು. 'ಸೈನಿಕರೆ, ವೀರಸಿಂಹ ಮಂಗಳೆಯರನ್ನು ಗೌರವದಿಂದ ಕಳುಹಿಸಿರಿ. ಜಾತಿಯ ಅಭಿಮಾನವು ಎಲ್ಲರಿಗೂ ಒಂದೇ, ತಾಯೇ ಸುಖವಾಗಿ ಹೋಗು ನಿನಗೆ ಮಂಗಲವಾಗಲಿ' ಎಂದು ಬಾದಶಹನು ಹೇಳಿದನು ಬಾದಶಹನು ಮತ್ತೆ ಗಂಭೀರವಾಗಿ 'ಸೈನಿಕರೇ ನೀಚನಾದ ಈ ಮಾನಸಿಂಹನ ತಲೆಯನ್ನು ಹಾರಿಸಿರಿ. ಅಭಿಮಾನವಿಲ್ಲದ ಮಾನವನು ಬದುಕಿರುವುದು ನ್ಯಾಯವಲ್ಲ' ಎಂದೆಂದನು. ಮಾನಸಿಂಹನ ತಲೆ ಹಾರಿಸಿತು. ಮಂಗಳಾ ವೀರಸಿಂಹರು ಆನಂದಬಾಷ್ಪ ಸುರಿಸಿದರು ಸಭೆಯು ಬಾದಶಹನ ಧರ್ಮಬುದ್ಧಿಯನ್ನು ನೋಡಿ ತಲೆದೂಗಿತು.

ಮೂರು ಬಣ್ಣಗಳಿಂದ ರಂಜಿತವಾದ

ತಿರುಪತಿ

ವೆಂಕಟರಮಣ

ದೇವರ ಭಾವಚಿತ್ರಗಳು

ಭಗವದ್ಭಕ್ತರ ಮನೆಮನೆಗಳಲ್ಲಿ ಇನ್ನು ವಿರಾಜಿಸುವುದು ಅವಶ್ಯವಾಗಿದೆ.

ವೆಂಕಟರಮಣ ದೇವರ ಚಿತ್ರಗಳಿಂದ ಕೂಡಿದ ಕೆಲೆಂಡರುಗಳೂ ಸಿಗುತ್ತವೆ.

ಮಾದರಿ ಪ್ರತಿಗಳನ್ನು ಒಯಸುವವರು ಐದು ಪಾವಾನೆ ಸ್ಟಾಂಪುಟ್ಟು ಕೆಳಗಿನ ವಿಳಾಸಕ್ಕೆ ಬರೆಯುವುದು

ಮುಲ್ಕಿ ಗಣಪತಿ ಶ್ರೀನಿವಾಸ ಕುಡ್ವ

ಜನರಲ್ ಮರ್ಚೆಂಟ್,

ಉಡುಪಿ ದ. ಕ.

HALFTONE & LINE
BLOCK MAKING
UNDERTAKEN
Sharada Press,
MANGALORE

ಮಂಗಳೂರು

ದಕ್ಷಿಣ ಕನ್ನಡದಲ್ಲಿ ನೆರೆಹಾವಳಿ

ಜಿಲ್ಲೆಯ ಹಲವು ನದಿಗಳಲ್ಲಿ ವಿಪರೀತ [illegible]ರೆಯು ಬಂದು ನೆರೆಕರೆಯ ಊರುಗಳಿಗೆ [illegible]ಂಬಾ ಹಾವಳಿಯಾಗಿದೆ. ಗುರ್ಪುರದ ಮಾರ್ಗ[illegible]ಲ್ಲಿ ನೋಟಿನ ಸಂಚಾರಕ್ಕೆ ತೊಂದರೆಯಾಗಿದೆ. [illegible]ರೆ ನದಿಯಲ್ಲಿಯೂ ನೀರು ಬಹಳವಾಗಿ ಬಂ[illegible] ಮನೆಮಂದಿಗಳನ್ನು ಕೊಚ್ಚಿಕೊಂಡು ಹೋ[illegible]. ನೇತ್ರಾವತೀ ನದಿಯಲ್ಲಿಯೂ ಚೆನ್ನಾಗಿ [illegible] ನೆರೆಬಂದಿದೆ. ನದಿಗಳಲ್ಲಿ ಅನಿರೀಕ್ಷಿತವಾಗಿ [illegible]ರು ಉಕ್ಕಿಬಂದು ಈ ಅನರ್ಥವುಂಟಾಯಿತು. [illegible]ಲ್ಲಿ ಕೆಲವು ಪ್ರಾಣಹಾನಿಗಳೂ ಆಗಿವೆಯೆಂ[illegible] ತಿಳಿಯುತ್ತದೆ.

ವೇಣೂರಿನಲ್ಲಿ ಇಡೀ ಗ್ರಾಮವೇ ನೆರೆಗೆ ಕೊಚ್ಚಿ[illegible]ಹೋಗಿ ಕೇವಲ ಒಂದು ಮನೆಯು ಮಾತ್ರ [illegible]ಉಳಿದುಕೊಂಡಿತ್ತದೆ.

[illegible]ರೆಯಿಂದ ಸಂಕಷ್ಟಕ್ಕೊಳಗಾದವ[illegible]ರಿಗೆ ಸಹಾಯ ಮಾಡಿರಿ

ಕಾಂಗ್ರೆಸ್ ಕೆಲಸಗಾರರ [illegible] ಬಿನ್ನಹ

ವೇಣೂರು ಮೊದಲಾದ ಜಿಲ್ಲೆಯ ಹಲವು [illegible]ಡೆಗಳಲ್ಲಿ ಅನಿರೀಕ್ಷಿತವಾಗಿ ಒದಗಿದ ನೆರೆಯ [illegible]ಹಾವಳಿಗೆ ತುತ್ತಾಗಿ ಅನ್ನ ಬಟ್ಟೆಗಳಿಲ್ಲದೆ, ಮನೆ [illegible]ಯಿಲ್ಲದೆ ಅನಾಥರಾಗಿರುವ ಹಲವು ಮನೆ [illegible]ಮಂದಿಗಳಿಗೆ ಸಹಾಯ ಮಾಡುವ ಸಲುವಾಗಿ [ಕಾ]ಂಗ್ರೆಸ್ ಕೆಲಸಗಾರರು ಅಲ್ಲಿಗೆ ಹೋಗಿ [ಸಂ]ಕಷ್ಟ ನಿವಾರಣೆಯ ಕಾರ್ಯವನ್ನು ಭರದಿಂದ [ಮಾ]ಡಲು ತೊಡಗಿರುವರು. ಜಿಲ್ಲೆಯ ಮಹಾ[ಜ]ನರುಗಳಾಗಿರುವ ನಮ್ಮ ಜಿಲ್ಲೆಯ ಬಾಂಧ[ವ]ರಿಗೆ ನೆರವಾಗುವ ಸಲುವಾಗಿ ಉದಾರವಾದ [ಸ]ಹಾಯಗಳನ್ನು ಕೊಡಬೇಕಾಗಿ ದಕ್ಷಿಣ ಕನ್ನಡ [ಜಿ]ಲ್ಲಾ ಕಾಂಗ್ರೆಸು ಕೆಲಸಗಾರರು ಪ್ರಾರ್ಥಿಸಿ[ಕೊ]ಳ್ಳುತ್ತಾರೆ. ಈಗಾಗಲೇ ಇದರ ಸೇವಾ[ಕಾ]ರ್ಯ ಪ್ರಾರಂಭವಾಗಿ ಅನೇಕರು ಸಹಾಯವಿ[ತ್ತಿ]ರುವರು. ಸಹಾಯ ಮಾಡಲು ಮನಸ್ಸುಳ್ಳ[ವ]ರು ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಗೆ [ಹ]ಣ, ವಸ್ತ್ರಗಳ ರೂಪದಲ್ಲಿ ಸಹಾಯ ಕಳುಹಿಸ[ಬೇ]ಕಾಗುವದೆಂದು ನೆರೆಯ ಸಂಕಷ್ಟ ನಿವಾರಣೆಗೆ [ದು]ಡಿವ ಕಾಂಗ್ರೆಸು ಕೆಲಸಗಾರರ ಪರವಾಗಿ [ಜಿ]ಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ. [ದಾ]ಮೋದರ ಬಾಳಿಗರು ವಿನಂತಿಸಿಕೊಳ್ಳುತ್ತಾರೆ.

[illegible]ನೇ ಪಟ್ಟಿಯ ಸತ್ಯಾಗ್ರಹಿಗಳಿಗೆ

[illegible] ಮತ್ತು [illegible]ನೇ ಪಟ್ಟಿಯ ಸತ್ಯಾಗ್ರಹಿಗ[ಳೆ]ಲ್ಲರೂ ಇದೇ ಜುಲೈ ತಾ. [illegible]ರೊಳಗೆ ಸತ್ಯಾ[ಗ್ರ]ಹ ಮಾಡಬೇಕೆಂದು ಕರ್ನಾಟಕ ಪ್ರಾಂತಿಕ [ಕಾ]ಂಗ್ರೆಸ್ ಕಮಿಟಿಯವರು ಪ್ರಕಟಣೆ ಹೊರಡಿ[ಸಿ]ರುವರೆಂದು ಅಧಿಕೃತವಾಗಿ ತಿಳಿದುಬಂದಿದೆ.

ದ. ಕ. ಜಿಲ್ಲಾ ಸತ್ಯಾಗ್ರಹ ವರದಿ

ಒಟ್ಟು ಜಿಲ್ಲೆಯಲ್ಲಿ ಇದುವರೆಗೆ [illegible] ಜನ [ಸತ್ಯಾ]ಗ್ರಹ ಮಾಡಿರುವರು. ಅವರಲ್ಲಿ [illegible] ಜನರು [illegible]ಯಲ್ಲಿ ಬಂಧಿತರಾಗಿರುವರು; [illegible] ಮಂದಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಂಧಿತರಾಗಿರುವರು. ಒಬ್ಬರು ರಿಮಾಂಡಿನಲ್ಲಿರುವರು. [illegible] ಮಂದಿ ಕೈದಾಗದ ಸತ್ಯಾಗ್ರಹಿಗಳು ಯುದ್ಧವಿರುದ್ಧ ಪ್ರಚಾರ ಕಾರ್ಯ ಮಾಡುತ್ತಿರುವರು. ಬಂಧಿತರಾದವರಲ್ಲಿ [illegible] ಮಂದಿ ಶಿಕ್ಷೆಯ ಅವಧಿ ತೀರಿಸಿ ಬಂದಿರುವರು. ಒಟ್ಟು [illegible] ರೂಪಾಯಿಗಳು ದಂಡ ವಿಧಿಸಲಾಗಿದೆ. ಅದರಲ್ಲಿ [illegible] ರೂಪಾಯಿಗಳು ಮಾತ್ರ ವಸೂಲಾಗಲಿಲ್ಲ.

ಸತ್ಯಾಗ್ರಹಿಗಳ ಆಗಮನ

ಶ್ರೀಗಳಾದ ಸಿ. ಕೇಳಪ್ಪನ್, ಯಂ. ಪಿ. ನಾರಾಯಣನ್, ಕುಂಬಳು ವಿಶ್ವಕರ್ಮಾಚಾರಿ ಎಂಬೀ ಈ ಮೂವರು ಕೇರಳದ ಸತ್ಯಾಗ್ರಹಿಗಳು ದಿಲ್ಲಿಯ ಕಡೆಗೆ ಸಂಚಾರ ಮಾಡುತ್ತಾ ಕಳೆದ ತಾ. [illegible]ನೇ ಸಂಜೆ ಮಂಗಳೂರಿಗೆ ಬಂದರು. ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಿತು. ಸತ್ಯಾಗ್ರಹಿಗಳು ಕೈಯ್ಯೂರಿನಲ್ಲಿ ತಾವು ಪಡೆದ ಅನುಭವಗಳ ಕುರಿತೂ ಪ್ರಸ್ತುತದ ಯುದ್ಧದ ವಿಷಯವಾಗಿಯೂ ಭಾಷಣಗಳನ್ನಿತ್ತು ಸತ್ಯಾಗ್ರಹವನ್ನು ಬೆಳಸಿದರು. ಭಟ್ಕಳ ಮಾರ್ಗವಾಗಿ ಮುಂದೊತ್ತಲಿರುವರು.

ಶ್ರೀ ಎನ್. ಶೇಷಗಿರಿರಾಯರ ಬಿಡುಗಡೆ

ಶ್ರೀ ಎನ್. ಶೇಷಗಿರಿರಾಯರು ಕಣ್ಣನ್ನೂರು ಜೈಲಿನಿಂದ ತಾ. [illegible]ರಂದು ಬಿಡುಗಡೆಹೊಂದಿದರು.

ಜಿಲ್ಲಾ ಸಮಾಚಾರ

ದಕ್ಷಿಣ ಕನ್ನಡದಲ್ಲಿ ನೆರೆಯ ಹಾವಳಿ ಉಂಟಾಗಿದೆ!

ಮನೆ ಮಂದಿಗಳಿಗೆ ಅಪಾರ ಹಾನಿಯೊದಗಿರುವುದು!

ಸತ್ಯಾಗ್ರಹಿಗಳ ವರದಿಯನ್ನು ಒಪ್ಪಿಸಬೇಕು

ಸತ್ಯಾಗ್ರಹಿಗಳು ಹಳ್ಳಿಗಳಲ್ಲಿ ವಿಧಾಯಕ ಕಾರ್ಯಕ್ರಮವನ್ನು ಮಾಡಿದ ವಿಷಯಕ್ಕೆ ಪ್ರತಿದಿನ ಅದ ಕಾರ್ಯವನ್ನು ಪ್ರಾಂತೀಯ ಸಮಿತಿಯ ಮುಖಾಂತರವಾಗಿ ಮಹಾತ್ಮಾ ಗಾಂಧೀಯವರಿಗೆ ಕಳಿಸಬೇಕಾಗುವದೆಂದು ಮಹಾರಾಷ್ಟ್ರ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಗೋಸ್ವಾಮಿಯವರ ಪ್ರಕಟಣೆಯಲ್ಲಿ ಕಾಣಿಸಿದ ಸಂಗತಿಗಳು ಎಲ್ಲ ಪ್ರಾಂತಗಳಿಗೂ ಅನ್ವಯಿಸುವವೆಂದು ಮಹಾತ್ಮರಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಬರೆದುಬಂದಿದೆ. ಅದರಂತೆ ಸಕಾಲದಲ್ಲಿ ಸತ್ಯಾಗ್ರಹವನ್ನು ಆಚರಿಸದೇ ಇದ್ದವರ ಹೆಸರುಗಳನ್ನು ಸತ್ಯಾಗ್ರಹಿಯ ಪಟ್ಟಿಯೊಳಗಿಂದ ತಗೆದು ಹಾಕಬೇಕೆಂದು ಮಹಾತ್ಮರು ತಿಳಿಸಿದ್ದಾರೆ ಎಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ತಾ. [illegible]ಕ್ಕೆ ಒಂದು ಪ್ರಕಟಣೆ ಹೊರಡಿಸಿದೆ.

ಶ್ರೀ ಜತ್ತಪ್ಪ ರೈಗಳಿಗೆ ರಿಮಾಂಡು

ಜಿಲ್ಲಾ ಬೋರ್ಡ್ ಮೆಂಬರರಾದ ಶ್ರೀ ಜತ್ತಪ್ಪ ರೈ ಇವರು ಪುತ್ತೂರಿನಲ್ಲಿ ಸತ್ಯಾಗ್ರಹ ಮಾಡಿ ಬಂಧಿತರಾದನಂತರ ಯುದ್ಧವಿರೋಧ ಘೋಷಣೆಯ ಕರಪತ್ರಗಳನ್ನು ಮಂಗಳೂರಲ್ಲಿ ಹಂಚುತ್ತಿದ್ದರೆಂಬ ಆರೋಪದಿಂದ [illegible] ಸಬ್ ಡಿವಿಜನಲ್ ಮಜಿಸ್ಟ್ರೇಟರಾದ ಶ್ರೀ ಕೆ. ಕೃಷ್ಣಯ್ಯ ಬಿ. ಎ. ಇವರ ಮುಂದೆ ಆವರು ಹಾಜರು ಮಾಡಲ್ಪಟ್ಟು [illegible] ದಿನಗಳ ರಿಮಾಂಡಿಗೆ ಗುರಿಯಾಗಿ ಮಂಗಳೂರು ಸಬ್ ಜೈಲಿನಲ್ಲಿರುವರು.

ಜಿಲ್ಲಾ ಹರಿಜನ ಸೇವಕ ಸಂಘ ಮಂಗಳೂರು

ತಾ [illegible]ನೇ ಸಾಯಂಕಾಲ [illegible] ಘಂಟೆಗೆ ಮಂಗಳೂರು ಡಿ. ಸಿ. ಮಿಶನಿನಲ್ಲಿ ಸಂಘದ ಕಮಿಟಿ ಸಭೆಯು ಡಾ। ಆಚಾರರ ಅಧ್ಯಕ್ಷತೆಯಲ್ಲಿ ಕೂಡಿತು. ಜಿಲ್ಲೆಯ ನಾನಾ ಕಡೆಗಳಲ್ಲಿ ಸಂಘದ ವತಿಯಿಂದ ನಡೆಯುತ್ತಿರುವ ಹರಿಜನ ಕಾರ್ಯಕ್ಷೇತ್ರಗಳ, ವಿದ್ಯಾರ್ಥಿ ಭವನಗಳ, ಮಧ್ಯಾಹ್ನದ ಊಟದ ವ್ಯವಸ್ಥೆಯ, ವಸ್ತ್ರ ಮತ್ತು ಪುಸ್ತಕಗಳನ್ನು ಕೊಡುವ, ಹಾಗೂ ಇನ್ನಿತರ ಸಹಾಯಗಳನ್ನು ಕೊಡುವ ಕೆಲಸದ ಕುರಿತು ಆಲೋಚನೆ ನಡೆಸಿದ್ದಲ್ಲದೆ, ಆ ಸಂಬಂಧವಾಗಿ ಬಂದಿರುವ ಅರ್ಜಿಗಳ ತನಿಖೆ ನಡೆಸಿ ಸಾಮಾನ್ಯ ರೂ. ೪೦೦/–ರ ಮೇಲೆ ಆ ಬಗ್ಗೆ ಸೇಂಕ್ಷನ್ ಮಾಡಿರುತ್ತದೆ.

ವಸ್ತುಗಳ ಬೆಲೆ ಇಳಿಸಬೇಕು

ಮಂಗಳೂರು ಮೈದಾನಿನಲ್ಲಿ ಮಹಾಜನರ ಹಾಗೂ ಮಜೂರರ ಮಹಾ ಸಭೆಯು ಜನಾಬ್ ಅಮ್ಮದ್ ಬಾವಾರವರ ಅಧ್ಯಕ್ಷತೆಯಲ್ಲಿ ನೆರೆತು, ಶ್ರೀಗಳಾದ ಕೇಶವ ಕಾಮತ್, ಗೋಪಾಲ ಸಾಲಿಯನ್ನ ಮತ್ತು ಕೆ. ಕೃಷ್ಣದಾಸ್ ಇವರುಗಳು ಈಗ ಅಕ್ಕಿಯೇ ಮೊದಲಾದ ಆಹಾರ ವಸ್ತುಗಳಿಗೆ ಬೆಲೆಯು ಇನ್ನೂ ಹೆಚ್ಚಾಗಿಯೇ ಇದೆಯೆಂದೂ, ಈಗಲೇ ಹೀಗಿದ್ದರೆ ಇನ್ನು ಮಳೆಗಾಲದಲ್ಲಿ ಮತ್ತಷ್ಟು ಬೆಲೆಯೇರುವ ಸಂಭವವಿದೆಯೆಂದೂ, ರಂಗೂನಿನಿಂದ ಅಕ್ಕಿಯು ಬಂದಿದ್ದರೂ ಅದು ಬೆಲೆಯಿಳಿಯುವಂತೆ ಮಾಡಿಲ್ಲವೆಂದೂ ಹೇಳಿದರು. ಮತ್ತು ನ್ಯಾಯವಾದ ಬೆಲೆಯನ್ನು ಸರಕಾರದವರು ನಿಶ್ಚಯಮಾಡಿ ಅಗತ್ಯ ತೋರಿದಲ್ಲಿ ಡಿಪೋಗಳನ್ನು ನಿರ್ಮಿಸಬೇಕೆಂದೂ ಸೂಚಿಸಿದರು. ಜೂನ್ ಹದಿನೈದರೊಳಗೆ ಮಹಾ ಜನರ ಬೇಡಿಕೆಯನ್ನು ಮಾನ್ಯ ಕಲೆಕ್ಟರ್ ದೊರೆಗಳು ಪೂರೈಸಬೇಕೆಂದು ಪ್ರಾರ್ಥಿಸಿ ಅಧ್ಯಕ್ಷರು ವಂದನೆ ಸಮರ್ಪಣದೊಂದಿಗೆ ಸಭೆ ಮಂಜೂರಾಯಿತು.

ಬಂಟರ ಯಾನೆ ನಾಡವರ ಸಂಘದ ಮಹಾ ಸಭೆ

ತಾ [illegible]ನೇ ಬೆಳಿಗ್ಗೆ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ, ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾ ಸಭೆಯು ಶ್ರೀ ಕೆ. ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಘದ ಕಾರ್ಯದರ್ಶಿಯವರಾದ ಶ್ರೀ ಕೆ. ಉಗ್ಗಪ್ಪ ಶೆಟ್ಟಿಯವರು ವಾರ್ಷಿಕ ವರದಿಯನ್ನು, ಖಜಾಂಚಿಯವರಾದ ಶ್ರೀ. ಎ. ವಿಠಲ ಪ್ರೊಂಜರು ಲೆಕ್ಕಪತ್ರಗಳನ್ನೂ ಒಪ್ಪಿಸಿ, ಅವು ಮಂಜೂರು ಮಾಡಲ್ಪಟ್ಟವು. ಶ್ರೀ. ಎಚ್. ದಾಸಣ್ಣಾಳ್ವರು, ಬಡ ವಿದ್ಯಾರ್ಥಿ ನಿಧಿಯ ವರದಿ ಮತ್ತು ಲೆಕ್ಕಗಳನ್ನು ಒಪ್ಪಿಸಿ ಅವು ಮಂಜೂರು ಮಾಡಲ್ಪಟ್ಟವು.

ಶ್ರೀ. ಕೆ. ಟಿ. ಆಳ್ವರು ಸಂಘವನ್ನು ಇನ್ನಷ್ಟು ಬಲಪಡಿಸಿ, ಇದರ ಚಟುವಟಿಕೆಗಳನ್ನು ಮುಂದೊತ್ತುವಂತೆ ಭಾಷಣವಿತ್ತರು. ಹೊಸ ವರ್ಷದ ಬಗ್ಗೆ ಕಾರ್ಯಕಾರಿ ಮಂಡಲವನ್ನು, ಈ ಕೆಳಗಿನ ಅಧಿಕಾರಿಗಳನ್ನೂ ಚುನಾಯಿಸಲಾಯಿತು. ಶ್ರೀ. ಕೆ ಟಿ. ಆಳ್ವ ಅಧ್ಯಕ್ಷ, ಶ್ರೀ. ಪಿ. ಆರ್. ರಂಗನಾಥ ಪ್ರೊಂಜ, ಉಪಾಧ್ಯಕ್ಷ, ಶ್ರೀ. ಕೆ. ಸದಾನಂದ ಹೆಗಡೆ ಕಾರ್ಯದರ್ಶಿ ಮತ್ತು ಶ್ರೀ. ಎ. ವಿಠಲ ಪ್ರೊಂಜ, ಖಜಾಂಚಿ

ಡಾ ಕೆ ವಿಠಲ ಶೆಟ್ಟಿಯವರು, ಧನ್ಯವಾದಗಳನ್ನರ್ಪಿಸಿ ಸಭಾಂತ್ಯವಾಯಿತು.

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು.		ರಿಂದ	ವರೆಗೆ
1. (a)	ಚಿತ್ತ ಅವ್ವಲ್ ತರದ ಸುಧ್ಧ ಮುಡಿಗೆ		
(b)	,, ಮಯಂ ,, ,, ,,	—	—
2. (a)	ಅಕ್ಕಿ ಅವ್ವಲ್ ತರದ ಗುಡ್ಡ ಮುಡಿಗೆ	5—12—0	5—14—0
(b)	,, ಮಯಂ ,, ,, ,,	5—10—0	
3. (a)	,, ಅವ್ವಲ್ ,, ಸುಗ್ಗಿ ,,	5—12—0	—
(b)	,, ಮಯಂ ,, ,, ,,	5— 8—0	5—10—0
4. (a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	32— 8—0	37— 8—0
(b)	,, ಸಿಪ್ಪೆಯಿದ್ದದ್ದು ,,	35— 0—0	40— 0—0
5 (a)	ಕೊಬ್ಬರಿ ಆಫೀಸು ಖಂಡಿಗೆ	51— 4—0	—
(b)	,, ದೀವಿ ,,	—	—
(c)	,, ದಿಲ್‌ಪಸಂದ್ ,,	—	—
6.	ತೆಂಗಿನ ಎಣ್ಣೆ ಮಣಕ್ಕೆ	8—10—0	—
7. (a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3— 4—0	3— 8—0
(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	100— 0—0	110— 0—0
	(ಹೊಸ್ತು)	90— 0—0	100— 0—0
8.	ಗೇರುಬೀಜ ಮುಡಿಗೆ	4— 0—0	4— 8—0
9.	ಕಬ್ಬಿನ ಬೆಲ್ಲ ಖಂಡಿಗೆ	27— 8—0	32— 8—0
10.	ಒಳ್ಳೆ ಮೆಣಸು ಹಂಡ್ರೆಡ್‌ವೇಟಿಗೆ	13— 0—0	13— 8—0
11. (a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	5—12—0	7— 8—0
(b)	ಹುಡಿಯ ,,	5— 8—0	7— 8—0
12. (a)	ಮೈಸೂರು ಏಲಕ್ಕಿ ಮಣಕ್ಕೆ	[illegible]—0—0	[illegible]—0—0
(b)	ಕೊಡಗಿನ ,, ,,	60— 0—0	65— 0—0
13. (a)	ಕುಮಟೆಯ ಮೆಣಸು ಖಂಡಿಗೆ	70— 0—0	80— 0—0
(b)	ಕಾಸರಗೋಡು ,, ಮಣಕ್ಕೆ	3— 0—0	—
(c)	ಕಾಂಚನ ,, ,,	4— 0—0	—

ವರ್ಗ

ಎಕ್ಸೈಜ್ ಖಾತೆಯ ಇನೆಸ್ಪೆಕ್ಟರ್ ಶ್ರೀ. ಕೆ. ಎಸ್. ಪೊನ್ನಪ್ಪನವರು, ಇದೇ ತಾ [illegible]ರಲ್ಲಿ ಕಾಸರಗೋಡು ಸರ್ಕಲಿನಿಂದ "ರಿಟೈರ್" ಆಗುವುದರಿಂದ, ಆ ಸರ್ಕಲಿನ ಇನಸ್ಪೆಕ್ಟರರಾಗಿ ಮಂಗಳೂರು ಸರ್ಕಲಿನ ಇನಸ್ಪೆಕ್ಟರ್ ಶ್ರೀ ಕೆ. ಗೋವಿಂದನ್ ನಂಬಿಯಾರರು ವರ್ಗಾಯಿಸಲ್ಪಟ್ಟು ಮಂಗಳೂರು ಸರ್ಕಲ್ ಇನಸ್ಪೆಕ್ಟರರಾಗಿ ಶ್ರೀ. [illegible] ರಾಘವೇಂದ್ರ ರಾಯರು ನೇಮಕ ಹೊಂದಿರುವರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಆರಂಭೋತ್ಸವ

ತಾ. [illegible]ನೇ ಸಂಜೆ, ಬಂಟರ ಯಾನೆ ನಾಡವರ ಸಂಘದವರು, ತಮ್ಮ ಸಮಾಜದ ಮಂಗಳೂರಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರಿಗೋಸ್ಕರ ಸ್ಥಾಪಿಸಿದ "ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನ"ವೆಂಬ ಹಾಸ್ಟೆಲಿನ ಉದ್ಘಾಟನಾ ಸಮಾರಂಭವು, ಶ್ರೀಮತಿ ಎಮ್. ಪಿ. ಸುಬ್ಬಮ್ಮನವರ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀಮತಿ ಶಾರದಾ ಆರ್. ಪ್ರೊಂಜ ಇವರು ಬಂದ ಅತಿಥಿಗಳಿಗೆ ಸ್ವಾಗತವಿತ್ತು, ಬಂಟರ ಸಂಘವು, ತಮ್ಮ ಹುಡುಗಿಯರಿಗೋಸ್ಕರ ಒಂದು ಹಾಸ್ಟೆಲನ್ನು, ಅನೇಕ ವರುಷಗಳಿಂದ ಸ್ಥಾಪಿಸಬೇಕೆಂದಿರುವುದಾದರೂ, ಹುಡುಗಿಯರಿಗೆ ಇಂಥ ಅನುಕೂಲತೆಯನ್ನು ಇದುವರೆಗೆ ಒದಗಿಸಲಾಗಲಿಲ್ಲವೆಂದೂ, ಸಂಘವು ಸ್ಥಾಪನೆಯಾಗಿ [illegible] ವರ್ಷಗಳು ಕಳೆದ ಮೇಲಾದರೂ, ಈ ಸಂಸ್ಥೆಯನ್ನು ತೆರೆದುದು ಅಭಿನಂದನೀಯವೆಂದೂ ಹೇಳಿದರು.

ಶ್ರೀ. ಶಂಕರಾಳ್ವರು, ಈ ಸಂದರ್ಭದಲ್ಲಿ ಬಂದ ಸಂದೇಶಗಳನ್ನು ಓದಿ ಹೇಳಿ, ಶ್ರೀಮತಿ ನಾಗಮ್ಮ ಅತ್ಯಂತಾಯರು ಮತ್ತು ಶ್ರೀ ಕುಂದಪ್ಪ ಗುಡ್ಡಪ್ಪ ರೈಗಳು [illegible] ರೂಪಾಯಿ [illegible]ರಂತೆ ಹಾಸ್ಟೆಲಿಗೆ ಸಹಾಯ ಧನವಿತ್ತಿರುವದಾಗಿ ತಿಳಿಸಿದರು.

ಮಹಿಳಾ ಸೇವಾಶ್ರಮದ ಮೇಲಧಿಕಾರಿಣಿಯಾದ ಶ್ರೀಮತಿ ಶಾಂತಾಬಾಯಿಯವರು, ಸ್ತ್ರೀಯರ ಒಗ್ಗೆ ಹಾಸ್ಟೆಲ್ ನಡೆಸುವುದರಲ್ಲಿ ತನಗಿರುವ ಅನುಭವವನ್ನು ಹೇಳಿ, ಇದರಲ್ಲಿ ಬಾಳುವ ವಿದ್ಯಾರ್ಥಿನಿಯರು, ಶಿಸ್ತಿನ ಕಡೆಗೆ ಹೆಚ್ಚಿನ ಗಮನ ಕೊಡುವ ಅವಶ್ಯಕತೆಯನ್ನು ವಿವರಿಸಿದರು.

ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಕೆ. ಟಿ. ಆಳ್ವರು, ಹಾಸ್ಟೆಲನ್ನು ಯಶಸ್ವಿಯಾಗಿ ನಡೆಯಿಸುವುದರಲ್ಲಿ, ಎಲ್ಲರೂ ಸಹಕರಿಸಬೇಕಾಗಿ ವಿನಂತಿ ಮಾಡಿದರು.

ಕುಮಾರಿ ಸೀತಮ್ಮ ರೈಯವರು, ಹಿಂದೀ ಭಾಷೆಯಲ್ಲಿ, ರಾಷ್ಟ್ರೀಯ ವಿದ್ಯಾಭ್ಯಾಸದ ಧ್ಯೇಯಗಳನ್ನು ಸರಸವಾಗಿ ವಿವರಿಸಿದರು.

ಕುಮಾರಿ ಕಾವೇರಿಯವರ ಸಂಗೀತವೂ, ಕುಮಾರಿ ಸರಳಾದೇವಿಯ ನರ್ತನವೂ ಇದ್ದಿತು

[೧೧ನೆಯ ಪುಟವನ್ನು ನೋಡಿ]

ಮೂರು ದಿಕ್ಕಿನಿಂದ ಸಿರಿಯದ ಮೇಲೆ ಮುತ್ತಿಗೆಯಾಗಿದೆ!

ಸಿರಿಯವು ಈಗ ಸಮರದ ಕುರುಕ್ಷೇತ್ರವಾಗಿದೆ. ಜರ್ಮನ್ ಸೈನ್ಯವು ಸುತ್ತಲೂ ಮುತ್ತಿ ಬಂದಿರುವುದು. ಸ್ವತಂತ್ರ ಫ್ರೆಂಚ್ ಸೈನ್ಯದೊಡನೆ ಬ್ರಿಟಿಷ್ ದಂಡು ಅದನ್ನು ಎದುರಿಸಲು ಸಾಗಿ ಹೋಗಿರುವುದು. ಇಲ್ಲಿಯೂ ದುರಂತ ಯುದ್ಧ ಸಂಭವಿಸಲಿದೆ. ಮಹಾ ಸಂಗ್ರಾಮವನ್ನು ವಿಜಯದಿಂದಲೇ ಕೊನೆಗಾಣಿಸಬೇಕೆಂದೂ, ಹೆದರದೆ ಹಿಮ್ಮೆಟ್ಟದೆ, ಹೊಡೆದಾಡಬೇಕೆಂದೂ ಇಕ್ಕಡೆಯವರೂ ನಿರ್ಧಾರ ಮಾಡಿಕೊಂಡಿದ್ದಾರೆ. ಹೆಚ್ಚು ಕೂಲಿಯು ಸಿಗಬೇಕೆಂದು ಅಮೇರಿಕದಲ್ಲಿ ಹಡಗು ಕಟ್ಟುವ ಹಾಗೂ ವಿಮಾನ ಕಟ್ಟುವ ಕಾರ್ಖಾನೆಗಳವರು ಮುಷ್ಕರ ಹೂಡಿದ್ದಾರೆ. ಜರ್ಮನರು ಸೈಪ್ರಸ್ ನದಿಯ ಸುತ್ತಲೂ ತೋಟೆಗಳನ್ನು ಹಾಕಿರುತ್ತಾರೆ.

ಶಿಷ್ಯರನ್ನು ಚನ್ನಾಗಿ ತರಬೇತಿ ಮಾಡಿದ್ದೇವೆ

ಕೈಸರನು ಹೇಳಿದ್ದನು

ಹಿಟ್ಲರನು ಹೋದ ವರ್ಷ ಫ್ರಾನ್ಸಿನ ಮೇಲೆ ಮಾಡಿದ ಧಾಳಿಯನ್ನು ನೋಡಿ ಗತಿಸಿದ ಕೈಸರನು ಹೀಗೆ ಹೇಳಿದನೆಂದು ಬರ್ಲಿನಿನಲ್ಲಿರುವ ಅಮೆರಿಕನ್ ಸುದ್ದಿಗಾರನೊಬ್ಬನು ಬರೆಯುತ್ತಾನೆ.

"ಹಿಟ್ಲರನು ಮಾಡಿದ ಯೋಜನೆಗಳು ಕೈಸರನಿಗೆ ತಿಳಿಸಲಾಗಿತ್ತು. ಕೈಸರನು ಅದನ್ನು ಕೇಳಿ ಭುಜ ತಿಕ್ಕಿ ಕಳೆದ ಮಹಾಯುದ್ಧದಲ್ಲಿ ನಮ್ಮ ಶಿಷ್ಯರನ್ನು ಹೇಗೆ ತರಬೇತಿ ಮಾಡಿರುವೆವೆಂಬುದನ್ನು ಇದು ಸ್ಪಷ್ಟ ಪಡಿಸುತ್ತದೆಯೆಂದನು."

ಸಿರಿಯಕ್ಕೆ ಪ್ರವೇಶ

ಸಿರಿಯವನ್ನು ಜರ್ಮನರು ತಮ್ಮ ಸ್ವಾ

ಜರ್ಮನರನ್ನು ಸೋಲಿಸಬೇಕೆಂದು ಬ್ರಿಟಿಷರ ನಿರ್ಧಾರ

ಅಮೇರಿಕದಲ್ಲಿ ಕೂಲಿಗಾರರು ಮುಷ್ಕರ ಹೂಡಿದ್ದಾರೆ!

ಹಿಟ್ಲರನ ವಿಷಯ ಕೈಸರನು ಅಭಿಮಾನಪಟ್ಟಿದ್ದಾನೆ?

ನಾ ನೆಲೆಯನ್ನಾಗಿ ಮಾಡಿಕೊಳ್ಳುವುದನ್ನು ತಪ್ಪಿಸುವುದೇ ಸಿರಿಯಾಕ್ಕೆ ಸ್ವತಂತ್ರ ಫ್ರೆಂಚ್ ಸೈನ್ಯದೊಡನೆ ಬ್ರಿಟಿಷ್ ಸೇನೆ ಪ್ರವೇಶಿಸಿರುವ ಕಾರಣವೆಂದು ತಿಳಿದಿದೆ. ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಗಳು ಪೇಲಿಸ್ಟೈನ್, ಟ್ರಾನ್ಸ್ ಜಾರ್ಡಾನ್‌ಗಳಿಂದ ಪ್ರವೇಶಿಸಿವೆ.

ಸಿರಿಯಕ್ಕೆ ಜರ್ಮನ್ ಸೇನಾ ಪ್ರವೇಶವು ಬಹಳ ತೀವ್ರದಾಗಿರುತ್ತದೆ.

ಸಿರಿಯಕ್ಕೆ ಬ್ರಿಟಿಷ್ ಸೇನಾ ಪ್ರವೇಶ

ಸ್ವತಂತ್ರ ಫ್ರೆಂಚ್ ಸೈನ್ಯದೊಡನೆ ಬ್ರಿಟಿಷ್ ಸಾಮ್ರಾಜ್ಯ ಸೈನ್ಯವು ಜರ್ಮನರು ಮುತ್ತಿದ ಸಿರಿಯಕ್ಕೆ ಬೆಂಬಲ ಕೊಡಲು ಹೋಗಿದೆ.

ಪಿಟೆನ್-ಡಾರ್ಲಾನ್ ಭೇಟಿ

ಇವರು ಭೇಟಿಯಾಗಿ 'ಸಿರಿಯವನ್ನು ರಕ್ಷಿಸುವ' ವಿಚಾರ ಮಾತನಾಡಿದರೆಂದು ತಿಳಿಯುತ್ತದೆ.

ಬ್ರಿಟನಿನಮೇಲೆ ಧಾಳಿಮಾಡುವ ಕಾಲ ಸಮೀಪಿಸುತ್ತದೆ.

ಎಂದು ಲಾರ್ಡ್ ಬ್ರೀವರ್ ಬುಕ್ಕರವರು ಮಾತನಾಡುತ್ತಾ ಹೇಳಿದರು. ಇದನ್ನು ಎದುರಿಸಲು ಬ್ರಿಟಿಷರು ಸಿದ್ಧರಿರಬೇಕೆಂದೂ ಅವರು ಅಭಿಪ್ರಾಯವಿತ್ತರು.

ಸೈಪ್ರಸ್ ಸುತ್ತಲೂ ಜರ್ಮನ್ ತೋಟೆಗಳು

ಸೈಪ್ರಸ್ ನದಿಯ ಸುತ್ತಲೂ ಜರ್ಮನರು ತೋಟೆಗಳನ್ನು ಹಾಕಿರುತ್ತಾರೆ.

೩ ಹೊಸ ಯುದ್ಧ ಹಡಗಗಳು ಸಮುದ್ರಕ್ಕಿಳಿಸಲಾಗಿವೆ.

ಸೌತ್ ಡೊಕೋಟಾ ಎಂಬ ಹಡಗವೂ, ಕ್ರೀಲ್ ಎಂಬ ಕ್ರೂಜರೂ ಸಮುದ್ರದಲ್ಲಿ ಬಿಡಲ್ಪಟ್ಟಿವೆ. ಕ್ರೀಲ್ ೧೦ ಸಾವಿರ ಟನ್ ಭಾರದ್ದು. ಸೌತ್ ಡೊಕೋಟಾಕ್ಕೆ ೧೦ ಲಕ್ಷ ಪೌಂಡುಗಳು ವ್ಯಯವಾಗಿದೆ.

ಕ್ರೀಟ್ ಕಾಳಗ

ಪಾರ್ಲಿಮೆಂಟ್ ಚರ್ಚೆ

ಪಾರ್ಲಿಮೆಂಟ್ ಸಭೆಯಲ್ಲಿ ಈ ಸಲ ಕ್ರೀಟ್ ಕಾಳಗದ ವಿಷಯ ಚರ್ಚೆಯಾಗುವುದು.

ಅಲೆಕ್ಸಾಂಡ್ರಿಯ ಮೇಲೆ ದಾಳಿ ಪ್ರಾಣಕ್ಕೂ ಆಸ್ತಿಗಳಿಗೂ ಅಪಾರ ನಷ್ಟ

ಜರ್ಮನಿಗೆ ಈಜಿಪ್ಟಿನ ಪ್ರತಿಭಟನೆ

ಅಲೆಕ್ಸಾಂಡ್ರಿಯದ ಮೇಲೆ ಶತ್ರು ವಿಮಾನ ದಾಳಿ ನಡೆದು ವಿಶೇಷ ನಷ್ಟವೂ ಅಪಾಯ ಅಪಘಾತವೂ ಉಂಟಾಗಿರುತ್ತವೆ.

ನಾಗರಿಕ ಜನ ಸಮುದಾಯದ ಮೇಲೆ ಬಾಂಬಿಂಗ್ ನಡೆಸಿರುವುದಕ್ಕಾಗಿ ಈಜಿಪ್ಟ್ ಸರಕಾರ ಜರ್ಮನಿಗೆ ಪ್ರತಿಭಟನೆ ಕಳಿಸದೆ.

ಆಸ್ತಿಪಾಸ್ತಿಗಳಿಗೂ ಪ್ರಾಣಗಳಿಗೂ ಉಂಟಾಗಿರುವ ನಷ್ಟವನ್ನು ಈಜಿಪ್ಟಿನಲ್ಲಿ ನಿರ್ಬಂಧಿಸಲ್ಪಟ್ಟಿರುವ ಜರ್ಮನ್ ಮತ್ತು ಇಟಾಲಿಯನ್ನರುಗಳಿಂದ ವಸೂಲ್ಮಾಡಲಾಗುವುದು ಎಂಬುದಾಗಿ ತಿಳಿದಿದೆ.

ಅಲೆಕ್ಸಾಂಡ್ರಿಯದಲ್ಲಿ ಒಂದು ಶತ್ರು ವಿಮಾನವನ್ನು ಹೊಡೆದು ಕೆಡವಲಾಯಿತು.

ಅಲೆಕ್ಸಾಂಡ್ರಿಯದಲ್ಲಿ ನಡೆದ ಶತ್ರು ವಿಮಾನ ದಾಳಿಯ ಫಲವಾಗಿ ಜನ ಅ... ಕ ಸಮೂಹಗಳಲ್ಲಿ ಬೇರೆ ಕಡೆಗಳಿಗೆ ಹೋಗುತ್ತಿರುವರಂತೆ ಕಾಣುತ್ತದೆ.

ಡೋವರಿನಲ್ಲಿ ವಿಮಾನ ಧಾಳಿ

ಡೋವರಿನ ಮೇಲೆ ಭಯಂಕರ ವಿಮಾನ ಧಾಳಿ ನಡೆದಿದೆ.

ಕ್ರೀಟ್ ಪತನದ ಬಗ್ಗೆ

ಬ್ರಿಟಿಷ್ ಪತ್ರಿಕೆಗಳು ದೂರುತ್ತವೆ

ಕ್ರೀಟ್ ಪತನದ ಬಗ್ಗೆ ಬ್ರಿಟಿಷ್ ಪತ್ರಿಕೆಗಳು ಬಹಳ ಉಗ್ರ ಟೀಕೆ ಮಾಡಿದೆ. ನಾವು ಎಂದಿಗೆ ಈ ಸೋಲಿನಿಂದ ಓಡು... ಪ್ರಯತ್ನವನ್ನು ಬಿಟ್ಟುಬಿಡುವೆವೆಂದು ಟೀಕಿಸುತ್ತವೆ.

೪೦೦೦೦ ಚೀನಿ ಸೈನಿಕರ ನಿಧನ

ಶಾಂಸಿ ಪ್ರಾಂತದಲ್ಲಿ ಜಪಾನರು ೪೦,೦೦೦ ಸಾವಿರ ಚೈನೀ ಸೈನಿಕರನ್ನು ಕೊಂದಿರುವರು.

ಹಿಟ್ಲರ್ ಡಾರ್ಲಾನನರ ಒಪ್ಪಂದವೆ?

ಹಿಟ್ಲರ್ ಮತ್ತು ಡಾರ್ಲಾನ್ನರಲ್ಲಿ ಒಪ್ಪಂದ ಮಾತುಕತೆ ನಡೆಯಿತೆಂದೂ, ವಿಶಿ ಮಂತ್ರಿ ಮಂಡಳಿಯ ಸಭೆ ಸೇರಿ ಆ ಕುರಿತು ವಿಚಾರವಿನಿಮಯ ಮಾಡಲಾಯಿತೆಂದೂ ಸುದ್ದಿ.

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE. ESTD. 1906 CANARA BANK LIMITED

ಕಾಲುನೋವಿನಿಂದ ನರಳಬೇಡಿರಿ

ಜ್ಯಾಂಬಕ್ ನೋವನ್ನು ಕಡಿಮೆಮಾಡುತ್ತದೆ

ಮಂತ್ರೌಷಧಿಯಂತೆ ಗುಣಪಡಿಸುತ್ತದೆ

ಜ್ಯಾಂಬಕ್ ಹೇಗೆ ನೋವನ್ನು ಗುಣಪಡಿಸುತ್ತದೆಯೆಂಬುದನ್ನು ಕೇಳಿ ನೀವು ಆಶ್ಚರ್ಯಪಡುವಿರಿ. ... ಕಾಲುನೋವು ಮೊದಲಾದ ... ಳಲ್ಲಿ ಅದು ಅತ್ಯುತ್ತಮ ಔಷಧಿಯಾಗಿದೆ. ವ್ರಣದ ಮೇಲೆ ಜ್ಯಾಂಬಕ್ ದಪ್ಪವಾಗಿ ಹಚ್ಚಿರಿ ಮತ್ತು ... ಯಾಗಿ ಕಟ್ಟಿರಿ. ಜ್ಯಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು ಚರ್ಮಕ್ಕೆ ಬೇಗನೇ ... ಕೊಳ್ಳುತ್ತದೆ. ಹಾಗಾಗಿ ನೋವು ಮತ್ತು ಬಾವುಗಳು ಕೂಡಲೇ ಕಡಿಮೆಯಾಗುತ್ತವೆ. ಕಲೆ ಸಹಿತ ಉಳಿಯದಂತೆ ಜ್ಯಾಂಬಕ್ ಗುಣಪಡಿಸುತ್ತದೆ.

ಜ್ಯಾಂಬಕ್ ಮುಲಾಮಿಗೆ ಒಂದು ರೂಪಾಯಿ ಆ... ರೂ. ೨-೪-೦. ಸೋಪಿಗೆ ಒಂದು ರೂಪಾಯಿ, ಪೌಡ... ಒಂದು ರೂಪಾಯಿ.

ಏಜೆಂಟರು:— ಮೆಸರ್ಸ್ ದಾಧಾ ಮ... ಕಂಪೆನಿ, ಪಿ. ಟಿ. ಮದರಾಸು

ಯಾವಾಗಲೂ ಜಾಂಬಕು ಉಪಯೋಗಿಸಿ

ZAM-BUK

ಪ್ರಾಣಕೊಬ್ಬು ವಿರಹಿತವಾದುದು

ಅಹಮ್ಮದಾಬಾದ್ ದಂಗೆಯಿಂದ ಸರ್ದಾರರಿಗೆ ಕಳವಳವಾಗಿದೆ!

ಭಾರತದ ರಾಜಕೀಯದಲ್ಲಿ ಹೆಚ್ಚಿನ ಘಟನೆಗಳೇನೂ ನಡೆದಿಲ್ಲ. ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ಯಶಸ್ವೀ ಪ್ರಯತ್ನಗಳಾವುವೂ ಆಗಿಲ್ಲ. ಸರಕಾರದವರಾದರೂ ಆ ವಿಷಯದಲ್ಲಿ ಆಗ್ರಹ ತೋರಿಸುವಂತೆ ಕಂಡುಬರುವುದಿಲ್ಲ. ವೈಸರಾಯರು ಬೇಗನೇ ಒಂದು ಘೋಷಣೆ ಮಾಡತಕ್ಕವರಿದ್ದಾರೆಂದು ಸುದ್ದಿ ಹುಟ್ಟಿದೆ. ಬ್ರಿಟಿಷರ ಯುದ್ಧ ಪ್ರಯತ್ನಕ್ಕೆ ವಿರುದ್ಧ ಪ್ರಚಾರದೊಡನೆ ಸತ್ಯಾಗ್ರಹಾಂದೋಲನವು ಭರದಿಂದ ಸಾಗುತ್ತಿದೆ. ಮೈಸೂರಿನ ಹೊಸ ಸುಧಾರಣೆಯಲ್ಲಿ ಬಹುಮತದ ಕಾಂಗ್ರೆಸಿನವರಿಗೆ ಮಾನ್ಯತೆ ಕೊಡದೆ ಮಂತ್ರಿಮಂಡಲವೇರ್ಪಡಿಸಿದ ವಿಷಯದ ಹಲವು ಕಡೆಗಳಿಂದ ಅತೃಪ್ತಿ ಸೂಚನೆಗಳು ಬಂದಿವೆ. ಭಾರತದ ಬೇರೆ ಬೇರೆ ಕಡೆಗಳಲ್ಲಿ ನೆರೆಹಾವಳಿಯುಂಟಾಗಿದೆ. ಶಾಂತತೆ ಹೊಂದಿವೆ. ಖಾಕ್‌ಸರ ಸಂಸ್ಥೆಗಳು ಅಕ್ರಮ ಕೂಟಗಳೆಂದು ಸರಕಾರವು ಸಾರಿದೆ.

ವೈಸರಾಯರು ಇನ್ನೊಂದು ಘೋಷಣೆ ಮಾಡುವರೆ?

ಖಾಕ್‌ಸರ ಸಂಸ್ಥೆಗಳು ಅಕ್ರಮಕೂಟಗಳಾಗಿವೆ

ಬಿಕ್ಕಟ್ಟು ಬಿಡಿಸುವ ಇನ್ನೊಂದು ಪ್ರಯತ್ನ

ವೈಸರಾಯರು ಮತ್ತೊಂದು ಘೋಷಣೆ ಮಾಡುವರೆ?

ಇತ್ತೀಚೆಗೆ ಉಂಟಾದ ಹಿಂದೂಸ್ಥಾನದ ರಾಜಕೀಯ ಬಿಕ್ಕಟ್ಟಿನ ವಿಚಾರವಾಗಿ ಇನ್ನೊಂದು ಪ್ರಯತ್ನ ನಡೆಯುತ್ತದೆಯೆಂದೂ ವೈಸರಾಯರು ಈ ವಿಷಯ ಬೇಗನೇ ಒಂದು ಘೋಷಣೆ ಕೊಡಲಿರುವುದೆಂದೂ ಸುದ್ದಿ. ಆದರೆ ಸಿಮ್ಲಾದಲ್ಲಿ ಬಿಟ್ಟಿನಿಂದ ಈ ವಿಚಾರದಲ್ಲಿ ನಿರಾಶೆಯ ವಾತಾವರಣವಿದೆ.

ಖಾಕ್ಸಾರರ ಸಂಘಗಳು ಅಕ್ರಮ ಕೂಟ

ಖಾಕ್ಸಾರರ ಬಂಧನ

ಖಾಕ್ಸಾರರ ಸಂಘಗಳು ಅಖಿಲಭಾರತದಲ್ಲಿ ಅಕ್ರಮ ಕೂಟಗಳಾದುವೆಂದು ಸರಕಾರವು ಪ್ರಕಟಪಡಿಸಿದೆ. ಅಲ್ಲದೆ ಅಲ್ಲಲ್ಲಿ ಅನೇಕ ಮಂದಿ ಖಾಕ್ಸಾರರನ್ನು ಕೈದು ಮಾಡಲಾಗಿದೆ.

ಶ್ರೀಮತಿ ಕಮಲಾ ದೇವಿಯವರು

ಜುಲ್ಯೆಯಲ್ಲಿ ಬರುವರು

ಅಮೇರಿಕದಿಂದ ಆಶ್ಯಾದ ಕಡೆಗೆ ಬಂದಿರುವ ಶ್ರೀಮತಿ ಕಮಲಾ ದೇವಿಯವರು ಜುಲೈ ತಿಂಗಳಲ್ಲಿ ಭಾರತ ದೇಶಕ್ಕೆ ಬರಲಿರುವರೆಂದು ತಿಳಿದಿದೆ.

ಮಹಾದೇವ ದೇಸಾಯಿಯವರು ರಾಜಿಕೊಟ್ಟರು

ಪತ್ರಿಕಾಕರ್ತರ ಸ್ಥಾಯೀ ಸಮಿತಿಗೆ ಮಹಾದೇವ ದೇಸಾಯಿಯವರು ರಾಜಿ ಕೊಟ್ಟರು. ಗಾಂಧಿಜಿಯವರ ಹೇಳಿಕೆಗಳನ್ನು ಪ್ರೆಸ್ ಸಲಹೆಗಾರರಿಗೆ ತಿಳಿಸದೆಯೇ ಪ್ರಕಟಿಸಬೇಕೆಂದು ಅವರ ಅಭಿಪ್ರಾಯವಿದ್ದಂತೆ.

ಅಹಮ್ಮದಾಬಾದ್ ದಂಗೆಯ ವಿಷಯ ಕೇಳಿ

ಸರ್ದಾರ್ ಪಟೇಲರು ದುಃಖಿಸಿದರು

ಅಹಮ್ಮದಾಬಾದಿನ ದಂಗೆಯ ವಿಷಯವನ್ನು ಕೇಳಿ ಸರ್ದಾರ ಪಟೇಲರು ಈ ರೀತಿಯಾಗಿ ಹೇಳಿರುವರು:

'ನನ್ನ ಸೋದರನು ಸಾಯುವಾಗ ನಾನು ಸೆರೆಮನೆಯೊಳಗಿದ್ದೆ; ನನ್ನ ಸೊಸೆ ಸಾಯುವಾಗಲೂ ನಾನು ಸೆರೆಯೊಳಗಿದ್ದೆ ನನ್ನ ಮಿತ್ರರನೇಕರು ಮಡಿದಾಗ ನಾನು ಸೆರೆಯಲ್ಲಿಯೇ ಇದ್ದೆ. ಆದರೆ ಅಹಮ್ಮದಾಬಾದ್ ದಂಗೆಯ ಸುದ್ದಿ ಕೇಳಿದಾಗ ನನಗೆ ಆದಷ್ಟು ವ್ಯಥೆ ಆ ಹಿಂದಿನ ಅನುಭವಗಳಿಂದಲೂ ಆಗಲಿಲ್ಲ.'

ಹೀಗೆಂದು ಸರ್ದಾರರು ಮಹಾದೇವ ದೇಸಾಯಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿರುವರು.

೫೦೦೦ ಮಂದಿ ಮೃತಿಹೊಂದಿದರು

ಬಾರಿಸಾಲ್ ಜಿಲ್ಲೆಯಲ್ಲಿ ಬಿರುಗಾಳಿಯಿಂದ

ಕಲ್ಕತ್ತೆಯ ಬಾರಿಸಾಲ್ ಜಿಲ್ಲೆಯಲ್ಲಿ ಬಲವಾದ ಬಿರುಗಾಳಿ ಬಂದು ೫೦೦೦ ಮಂದಿ ಮೃತರಾದರು.

ರಾತ್‌ಬೋನಳ ಪತ್ರದ ವಿಷಯ ಗಾಂಧಿಜಿ—

ಮಾತನಾಡುತ್ತಾ, ಆವಳ ಅಸಂಬದ್ಧ ವಚನಕ್ಕೆ ರವೀಂದ್ರನಾಥರಿಗಿಂತ ಯೋಗ್ಯ ಉತ್ತರವನ್ನು ಕಾಸೆನು ಕೊಡಲಿ ಎಂದರು.



ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಮುಟ್ಟು ನೋವು, ಮುಟ್ಟಾಗದಿರುವಿಕೆ, ಅಕಾಲ ಬಹಿಷ್ಟೆ, ಋತುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತ ಹೀನತೆ, ಮಲಬದ್ಧ, ಸೂತಿಕಾವಾಯು, ಕೀಲುಗಳಲ್ಲಿ ನೋವು, ಅಂಗೈ ಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವ ಜ್ವರ ನಿವಾರಿಣಿ
ಆಹಾರ, ವಿಹಾರ, ಋತು ಭೇದ ಮೊದಲಾದ ಕಾರಣಗಳಿಂದ ಆನ್ನಾಶಯದಲ್ಲಿ ಕ್ರಿಮಿಗಳು ಸೇರಿ ನಾನಾ ವಿಧವಾದ ಜ್ವರಗಳು ಸಂಭವಿಸುತ್ತದೆ. ವಾತಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಮಜ್ವರಗಳನ್ನೂ, ಹೊಟ್ಟೆಯಲ್ಲಿಯ ಜ್ವರಗಡ್ಡೆಯನ್ನೂ ನಾಶಮಾಡುತ್ತೆ.

ರಕ್ತಶುದ್ಧಿ ದ್ರಾವಕ
ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಸೋಮಾರಿತನ, ಮೇಹ ವ್ರಣಗಳು, ಸುಖ ಸಂಕಟಗಳು, ಬಲಹೀನತೆ, ಹೊಟ್ಟೆಯಲ್ಲಿ ಉರಿ ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ, ಮುಖಕ್ಕೆ ತೇಜಸ್ಸನ್ನೂ ಕೊಡುತ್ತೆ. ಈ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್
ರಾಯಪೇಟೆ :: ಮದರಾಸು.

ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ. —

ಆಂದಿನಿಂದಲೂ ಶ್ರೇಷ್ಠವಾಗಿಯೇ ಇದೆ.— ಮುಖದ ಮೇಲಿನ ಮಾನತ್ತು ಕಲೆ, ಮುಖಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಸೌತ್ ಇಂಡಿಯಾ ಡಿಸ್ಟ್ರಿಬ್ಯೂಟರರು— ಕೊರನೇಷನ್ ಟ್ರೇಡಿಂಗ್ ಕೊ

ಮಹಮ್ಮದಾಲಿ ರೋಡ್, ಮಂಗಳೂರು.

ಶಾಲಾ ಪುಸ್ತಕಗಳು

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು.]

ಶ್ರೀ. ... ಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೩, ೭ ಮತ್ತು ೮ನೆಯ ತರಗತಿಗಳಿಗೆ

ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0

ಎರಡನೆಯ ಪುಸ್ತಕ, ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಬೆಲೆ: ೪, ೫ನೆಯ ತರಗತಿಗೆ 0—2—0 ೬ನೆಯ 0—2—0

೭ನೆಯ 0—2—6 ೮ನೆಯ 0—3—0

ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6.

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ

ವಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

[೩ನೆಯ ಪುಟದಿಂದ ಮುಂದುವರಿದುದು]

ಆ ಬಳಿಕ ಶ್ರೀಮತಿ ಎಮ್. ವಿ. ಸುಬ್ರಹ್ಮಣ್ಯಂನವರು, ಹಾಸ್ಟೆಲಿನ ಉದ್ಘಾಟನಾ ಸಮಾರಂಭವನ್ನು ಜರಗಿಸಿದರು.

ಶ್ರೀ. ಶಂಕರಾಳ್ವರು, ಧನ್ಯವಾದಗಳನ್ನರ್ಪಿಸುತ್ತ, ಶ್ರೀಮತಿ ಬಿಳ್ಳಿಪಾಡಿ ಲಕ್ಷ್ಮೀ ರೈಗಳು, ಶಾಲೆಯನ್ನು ಬಿಟ್ಟು ಬಂದು, ಹಾಸ್ಟೆಲಿನ ಮುಖ್ಯ ಅಧಿಕಾರಿಣೀ ಕೆಲಸವನ್ನು ವಹಿಸಿಕೊಂಡಿದ್ದಕ್ಕೆ ವಿಶೇಷ ಪ್ರಶಂಸೆ ಸಲ್ಲಿಸಿದರು.

ಪುತ್ತೂರು

ಕಳವು

ಕಳೆದ ತಾ. ೧೦ರಲ್ಲಿ ಇಲ್ಲಿಯ ಮಹಾಲಿಂಗೇಶ್ವರ ದೇವಸ್ಥಾನದ ಪೌಳಿಯಲ್ಲಿ ಮೈಸೂರಿನಿಂದ ಯಾತ್ರಿಕರಾಗಿ ಬಂದಿದ್ದ ಶ್ರೀ. ರಾಜೇರಾಯ ಶಿಂಬೋರ್ವರು ರಾತ್ರಿ ನಿದ್ರಿಸಿದ್ದ ವೇಳೆ ಅವರ ಬಳಿಯಲ್ಲಿದ್ದ ಪೆಟ್ಟಿಗೆಯನ್ನು ಯಾರೋ ಅಪಹರಿಸಿದ್ದಾರೆಂದೂ ಚಿನ್ನಾಭರಣ ನಗದು ಸೇರಿ ರೂ. ೫೦೦ರಷ್ಟು ಮಿಕ್ಕಿ ನಷ್ಟವಾಗಿದೆಯೆಂದೂ ತಿಳಿದು ಬಂದಿದೆ.

ಉಡುಪಿ

ಬೆಂಕಿ

ಕಳೆದ ತಾ. ೯ರಲ್ಲಿ "ಸೆಂಟ್ರಲ್ ವಾರ್ಡಿನಲ್ಲಿ ಒಂದು ಮನೆಗೆ ಬೆಂಕಿ ತಗಲಿ ಸಾಧಾರಣ ಐನೂರು ರೂಪಾಯಿಗಳಷ್ಟು ನಷ್ಟವಾಗಿದೆ

ಕಾಂಗ್ರೆಸ್ ಪ್ರಚಾರ ಸಭೆ

ಕಾರ್ಕಳದ ಸತ್ಯಾಗ್ರಹಿ ಶ್ರೀ. ರಾಮ ಪ್ರಭು ವರಳರು ಕಾಂಗ್ರೆಸಿನ ಧೋರಣೆಯ ವಿಷಯ ಭಾಷಣ ಮಾಡಿದರು.

ಸಹಕಾರೀ ಭಂಡಸಾಲೆ

ಪೆರ್ಡೂರು ಕೇಂದ್ರಕ್ಕೊಂದು ಕೋಆಪರೇಟಿವ್ ಸ್ಟೋರ್ಸ್ ಕಳೆದ ತಾ. ೨೮ರಲ್ಲಿ ಕೋಆಪರೇಟಿವ್ ಇನ್‌ಸ್ಪೆಕ್ಟರ್ ಮಿ! ಸಾಲಿನ್ಸರಿಂದ ತೆರೆಯಲ್ಪಟ್ಟಿತು.

ಬ್ರಹ್ಮಾವರ

ಸಾವರ್ಕಾರರವರ ಜನ್ಮದಿನಾಚರಣೆ

ಹಿಂದೂ ಮಹಾ ಸಭೆಯವರಿಂದ ಆಚರಿಸಲ್ಪಟ್ಟಿತು. ಜಿಲ್ಲಾ ಕಮಿಟಿಯ ಅಪೇಕ್ಷೆ ಮೇರೆಗೆ ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವೀರ ಸಾವರ್ಕಾರರಿಗೆ ದೀರ್ಘಾಯುರಾರೋಗ್ಯವನ್ನು ಕೋರಿ ಅಭಿಷೇಕ ಪೂಜಾದಿಗಳೂ ಪ್ರಾರ್ಥನಾದಿಗಳೂ ನಡೆದುವು. ಸಂಜೆ ಇಲ್ಲಿಯ ಸ್ವರಾಜ್ಯ ಮೈದಾನಿನಲ್ಲಿ ಶ್ರೀ ಬಿ. ವಿ. ಮಾಧವ ರಾವ್ ಆನರು ವೀರ ಸಾವರ್ಕಾರರ ಜನ್ಮ ಚರಿತ್ರೆಯನ್ನು ವಿಶದವಾಗಿ ತಿಳಿಸಿದರು. ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವಮಾನವನ್ನೇ ಅರ್ಪಿಸಿರುವ ಶ್ರೀಯುತರಿಗೆ ದೀರ್ಘಾಯುಸ್ಸನ್ನೂ ಶಕ್ತಿಯನ್ನೂ ದಯಪಾಲಿಸಬೇಕಾಗಿ, ದೇವರನ್ನು ಪ್ರಾರ್ಥಿಸಲಾಯಿತು.

ಕಾರ್ಕಳ

ಉಪಾಧ್ಯಾಯರ ಸಭೆ

ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ತಾ. ೭ರಲ್ಲು ಶ್ರೀ. ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಯಂ. ಸರ್ವೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು.

ಹೆಲ್ತ್ ಕಮಿಟಿ

ಸ್ಥಳೀಯ ಪಬ್ಲಿಕ್ ಹೆಲ್ತ್ ಕಮಿಟಿಯ ಒಂದು ಸಭೆಯು ಬೋರ್ಡ್ ನ್ಯೂ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಡಾಕ್ಟರ ಎಸ್. ಎಸ್. ಅನಂತರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಊರಿನಲ್ಲಿ ಹೆಚ್ಚಿಗೆ ಕಸಮರಿಗೆಗಳನ್ನು ಇಡುವ, ಬಸ್ ಸ್ಟೇಂಡ ಮತ್ತು ಸಂತೆಕಟ್ಟೆಯ ಪಾಯಖಾನೆಗಳನ್ನು ಏರ್ಪಡಿಸುವ, ಮತ್ತು ಸಾರ್ವಜನಿಕ ಆರೋಗ್ಯ ರಕ್ಷಣೆಯ ಬಗ್ಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಕೈಕೊಳ್ಳುವ ಕುರಿತು ಪಂಚಾಯತ ಬೋರ್ಡನ್ನು ವಿನಂತಿಸುವ ಠರಾವು ಸರ್ವಸಮ್ಮತಿಯಿಂದ ಮಂಜೂರಾಯಿತು.

ಪರೀಕ್ಷೆಯಲ್ಲಿ ಸಫಲತೆ

ಇಲ್ಲಿಯ ಶ್ರೀ. ಕೆ. ವೇದವ್ಯಾಸ ಜ್ಯೋತಿಯವರು ಮೈಸೂರು ಸರಕಾರದ ಎಲ್. ಎಜಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕರ್ನಾಟಕ

ಬಳ್ಳಾರಿ

ಕನ್ನಡ ಶಿಕ್ಷಣ ಮಾಧ್ಯಮವಿಲ್ಲ

ಕಳೆದ ತಾ. ೨೮ನೇ ಸಾಯಂಕಾಲ ಬಳ್ಳಾರಿ ಮುನಿಸಿಪಲ್ ಕೌನ್ಸಿಲಿನ ಸಭೆಯು ಮಿ. ಡಿ. ಎ. ರಹೂಫ್, ಯಂ. ಎಲ್. ಎ., ಚೇರ್‌ಮನ್ ಅವರ ಅಧ್ಯಕ್ಷತೆಯಲ್ಲಿ ಸೇರಿತು. ಕಳೆದ ವರ್ಷ ಬಳ್ಳಾರಿ ಮುನಿಸಿಪಲ್ ಹೈಸ್ಕೂಲಿನ IVನೇ ಫಾರ್ಮಿನಲ್ಲಿ ಕನ್ನಡದಲ್ಲಿ ಶಿಕ್ಷಣ ಮಾಧ್ಯಮದ ಏರ್ಪಾಡಾಗಿತ್ತು. ಅದನ್ನು ತೆಗೆದು ಹಾಕಿ ಈ ವರ್ಷದಿಂದ ಇಂಗ್ಲಿಷಿನಲ್ಲಿಯೇ ಪುನಃ ಕಲಿಸುವ ಏರ್ಪಾಡು ಮಾಡಬೇಕೆಂದು ಠರಾವು ಬಹುಮತದಿಂದ ಮಂಜೂರಾಯಿತು!

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಮೈಸೂರು

ಮೈಸೂರಿನ ಮಂತ್ರಿ ಮಂಡಳಿ

ಶ್ರೀಮನ್ಮಹಾರಾಜರ ಘೋಷಣೆ

ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಒಂದು ಘೋಷಣೆಯನ್ನು ಹೊರಡಿಸಿ ಅದರಲ್ಲಿ ಶ್ರೀ ಎನ್. ಮಾಧವರಾಯರನ್ನು ದಿವಾನ್ ಪದವಿಗೆ ನೇಮಿಸಿರುವುದಾಗಿ ತಿಳಿಸಿದ್ದಾರೆ.

ಶ್ರೀಗಳಾದ ಕೆ. ವಿ. ಅನಂತ ರಾಮನ್ (ರೆವಿನ್ಯು), ಎ. ವಿ. ರಮಣನಾಥನ್ (ನ್ಯಾಯ), ಕೆ. ಯಂ. ಇನಾಮ್ (ವಿದ್ಯಾ) ಎಚ್. ಬಿ. ಗುಂಡಪ್ಪ ಗೌಡ (ಆರೋಗ್ಯ), ಈ ೪ ಮಂದಿ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು.

ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರ್‌ಶಿಪ್ ಲೀಗ್: ಬೊಂಬಯಿ

ಹೈಸ್ಕೂಲಿನಲ್ಲಿ ಕಲಿವ ದ. ಕ. ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗೌಡ ಸಾರಸ್ವತ ಬ್ರಾಹ್ಮಣ ಜಾತಿಯ ವಿದ್ಯಾರ್ಥಿಗಳಿಂದ ಸಹಾಯಾರ್ಥ ಅರ್ಜಿಗಳು ಆಶಿಸಲಾಗಿದೆ. ಅರ್ಜಿಯು ಜೂನ್ ೩೦ರ ಒಳಗೆ, ಜನರಲ್ ಸೆಕ್ರೆಟರಿ, ಗೌಡ ಸಾರಸ್ವತ ಬ್ರಾಹ್ಮಣ ಸ್ಕಾಲರ್‌ಶಿಪ್ ಲೀಗ್, C/. ಸಾರಸ್ವತ ಬ್ರಾಹ್ಮಣ ಸಮಾಜ, ನಿಕಾತ್ ಲೇನ್, ಗಿರಿಗಾಂವ್, ಬೊಂಬೇ ಈ ವಿಳಾಸಕ್ಕೆ ತಲಪಬೇಕು. ಈ ವರ್ಷಕ್ಕೆ ರೂ. ೨೦ರ ದಾಂಗ ಮೆಮೋರಿಯಲ್ ಪ್ರೈಸಿಗೆ, ಬೊಂಬಾಯಿ ಪ್ರಾಂತದಲ್ಲಿ ಟೆಕ್ನಿಕಲ್ ಅಥವಾ ಇಂಡಸ್ಟ್ರಿಯಲ್ ಶಾಲೆಗಳಲ್ಲಿ ಕಲಿವ ಗೌ. ಸಾ. ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಶಿಸಲಾಗಿದೆ. ತಿಂಗಳ ರೂ. ೫ರ ಇಂಡಸ್ಟ್ರಿಯಲ್ ಸ್ಕಾಲರ್‌ಶಿಪ್ಪಿಗೆ ಸಹಾಯಾರ್ಥ ಅರ್ಜಿಯು ಸರಕಾರದಿಂದ ಮಂಜೂರಾತಿಯಾದ ಬೊಂಬಾಯಿ ಪ್ರಾಂತದ ಇಂಡಸ್ಟ್ರಿಯಲ್ ಶಾಲೆಯಲ್ಲಿ ಕಲಿವ ಗೌ. ಸಾ. ಸಮಾಜದ ವಿದ್ಯಾರ್ಥಿಗಳಿಂದ ಆಶಿಸಲಾಗಿದೆ.

ಅಹಿಂಸೆಯಲ್ಲಿ ತಳಹದಿಯಲ್ಲಿ ನೂತನ ಸಮಾಜ ನಿರ್ಮಾಣ

ಗಾಂಧಿಜಿಯು ಕಾಣುವ ಭವ್ಯ ಭವಿಷ್ಯಲೋಕ

ದಾರಿದ್ರ್ಯವಿಲ್ಲ — ಕ್ರಾಂತಿಯಿಲ್ಲ — ಸಂಗ್ರಾಮವಿಲ್ಲ

ಗಾಂಧಿಜಿ ಪಾದಸ್ಪರ್ಶದಿಂದ ಬತ್ತಿದ ಬಾವಿಯಲ್ಲಿ ನೀರು ಉಕ್ಕಿತು!

ಲೋಕದ ಮುಂದಿನ ಗತಿಯೇನು?-ಈ ವಿಷಯವಾಗಿ ಈಗ ನಡೆಯುತ್ತಿರುವಷ್ಟು ವಿಚಾರ ತರ್ಕಗಳು ಬೇರೆ ಯಾವ ಸಮಯದಲ್ಲೂ ನಡೆದಿರಲಾರದು. ಜಗತ್ತು ಯಾವಾಗಲೂ ಹಿಂಸಾಮಯವಾಗಿ ಇರುವುದೇ? ಜಗತ್ತಿನಲ್ಲಿ ಯಾವಾಗಲೂ ಬಡತನ, ಉಪವಾಸ, ದುಃಖಗಳ ತಾಂಡವ ನೃತ್ಯವಾಗುವುದೆ? ದೇವರ ಅಸ್ತಿತ್ವದ ಕುರಿತು ಜಗತ್ತಿನ ವಿಶ್ವಾಸವು ದೃಢವಾಗುವುದೇ ಅಥವಾ ಜಗತ್ತು ನಾಸ್ತಿಕವಾಗುವುದೆ? ಜಗತ್ತಿನ ಸಮಾಜ ರಚನೆಯಲ್ಲಿ ದೊಡ್ಡ ಪರಿವರ್ತನವಾಗುವುದಾದರೆ ಅದು ಹೇಗೆ—ಅಹಿಂಸೆಯಿಂದಲೆ? ಹಿಂಸೆಯಿಂದಲೆ? ಯುದ್ಧದಿಂದಲೆ? ಕ್ರಾಂತಿಯಿಂದಲೆ?

ಮಹಾತ್ಮರ ಉತ್ತರ

ಬೇರೆ ಬೇರೆ ಜನರು ಈ ಪ್ರಶ್ನೆಗಳಿಗೆ ಬೇರೆ ಬೇರೆ ಪ್ರಕಾರ ಉತ್ತರ ಕೊಡುವರು. ಅವರವರ ಆಸೆ ಕಾಂಕ್ಷೆಗಳಿಗನುಸಾರ ಅವರು ಕೊಡುವ ಉತ್ತರಗಳು ಇರುತ್ತವೆ. ಆದರೆ ಗಾಂಧಿಯವರು ಕೊಡುವ ಉತ್ತರವು ಅವರಿಗೆ ತಮ್ಮ ಮಾತಿನ ಮೇಲಿರುವ ದೃಢ ವಿಶ್ವಾಸವನ್ನು ತೋರಿಸುತ್ತದೆ. ಗಾಂಧಿಜಿಯವರು ಕೊಡುವ ಉತ್ತರವು ಹೀಗಿದೆ. ಅವರು ಲಂಡನಿನ ಲಿಬರ್ಟಿ ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ—ಮುಂದಿನ ಪ್ರಪಂಚವು ಅಹಿಂಸೆಯ ಅಸ್ತಿವಾರದ ಮೇಲೆ ಕಟ್ಟಲ್ಪಡುವುದು. ಅಹಿಂಸೆಯೇ ಈ ಭವಿಷ್ಯ ಪ್ರಪಂಚದ ಮೊದಲನೆಯ ಕಾಯಿದೆ. ಅದರ ಮೂಲಕ ಪ್ರಪಂಚದಲ್ಲಿ ಶಾಶ್ವತ ಸುಖಶಾಂತಿಗಳು ನೆಲಸುವುವು. ಇದು ನಿಕಟ ಭವಿಷ್ಯದಲ್ಲಿ ಸಾಧ್ಯವಲ್ಲ ಎಂದು ಸಂದೇಹಿಸುವವರು ಇರಬಹುದು. ಆದರೆ ಅದು ಅಸಂಭವವೂ ಅಸಾಧ್ಯವೂ ಅಲ್ಲ. ಮನಸ್ಸಿದ್ದರೆ ಅಹಿಂಸಾತ್ಮಕ ಸಮಾಜವನ್ನು ಇಳೆಯಲ್ಲಿಯೇ ರಚಿಸಬಹುದು. ಸಮಾಜದೊಳಗಿನ ಒಬ್ಬ ವ್ಯಕ್ತಿಯು ಅಹಿಂಸಾಮಯ ಜೀವನವನ್ನು ನಡೆಸಬಲ್ಲನಾದರೆ, ಸಮಾಜವು ಅಂಥ ಜೀವನವನ್ನು ಯಾಕೆ ನಡೆಸಬಾರದು? ವ್ಯಕ್ತಿಗೆ ಸಾಧ್ಯವಾದದ್ದು ಸಮಾಜಕ್ಕೂ ರಾಷ್ಟ್ರಕ್ಕೂ ಸಾಧ್ಯವಾಗುವುದು. ಸಂದೇಹವು ಮನುಷ್ಯನ ಉನ್ನತಿಗೆ ತಡೆಯಾಗಿದೆ. ಆದರೆ ಪ್ರತಿಯೊಬ್ಬ ಮನುಷ್ಯನು ತನ್ನ ಸಂದೇಹ ಪ್ರವೃತ್ತಿಯನ್ನು ನಾಶಮಾಡಿ ಉನ್ನತಿಯನ್ನು ಪಡೆಯಲಾಪನು.

ಭವಿಷ್ಯ ಪ್ರಪಂಚದ ಎರಡನೆಯ ಕಾಯಿದೆ

ಗಾಂಧಿಯವರ ಭವಿಷ್ಯ ಪ್ರಪಂಚದ ಎರಡನೆಯ ಕಾಯಿದೆ ಎಂದರೆ—ಸಮಾನ ಹಂಚಿಕೆ. ಇದು ಅಹಿಂಸೆಯಿಂದ ಸಾಧ್ಯವಿದೆ. ಪ್ರಪಂಚದ ಎಲ್ಲಾ ಸಂಪತ್ತನ್ನು ಎಲ್ಲರೊಳಗೆ ಸರ್ವ ಸಮಾನ ಹಂಚಿಕೊಡುವುದು ಇದರ ಅರ್ಥವಲ್ಲ. ಸಮಾಜದೊಳಗಿನ ಒಬ್ಬನಿಗೆ ವಾರಕ್ಕೆ ಒಂದು ಸೇರು ಅಕ್ಕಿ, ಇನ್ನೊಬ್ಬನಿಗೆ ಏಳು ಸೇರು ಅಕ್ಕಿ ಬೇಕಾದರೆ, ಎಲ್ಲರಿಗೆ ಒಂದು ಸೇರು ಅಥವಾ ಏಳು ಸೇರು ಅಕ್ಕಿಯನ್ನು ಹಂಚಿಕೊಡುವುದು ಸಮಾನ ಹಂಚಿಕೆ ಅನ್ನಿಸಿಕೊಳ್ಳಲಾರದು. ಅವರವರಿಗೆ ಬೇಕಾದಷ್ಟನ್ನು ಅವರವರು ಸುಲಭದಲ್ಲಿ ಸಂಪಾದಿಸುವ ವ್ಯವಸ್ಥೆಯನ್ನು ಮಾಡುವುದೇ ಸಮಾನ ಹಂಚಿಕೆಯಾಗಿರುವುದು. ಇದನ್ನು ಹೇಗೆ ಸಾಧ್ಯಗೊಳಿಸಬಹುದು? ಧನಹೀನರಾದವರಿಗೆ ಕೊಡುವದಕ್ಕೋಸ್ಕರ ಧನವಂತರನ್ನು ಬಲಾತ್ಕರಿಸಬೇಕೆ?

ಮನುಷ್ಯ ಸ್ವಭಾವದಲ್ಲಿ ವಿಶ್ವಾಸ

ಹಾಗೆ ಬಲಾತ್ಕಾರ ಮಾಡಕೂಡದೆಂದು ಅಹಿಂಸೆಯು ಅನ್ನುತ್ತದೆ. ಹಿಂಸೆಯಿಂದ ಯಾವ ಶಾಶ್ವತ ಪರಿಣಾಮವೂ ಆಗುವುದಿಲ್ಲ. ಧನವಂತರನ್ನು ಬಲಾತ್ಕರಿಸುವುದು ಹಿಂಸೆಯ ಒಂದು ಕ್ರಮ. ಧನವಂತರನ್ನು ಲುಟಾಯಿಸಿದರೆ, ಅವರಿಂದ ಕಲಿತುಕೊಳ್ಳಬಹುದಾದ ಹಣಸಂಪಾದನೆಯ ಅನೇಕ ಒಳ್ಳೆಯ ಪಾಠಗಳನ್ನು ಕಲಿತುಕೊಳ್ಳಲಿಕ್ಕಾಗುವುದಿಲ್ಲ. ಧನವಂತರು ಸಮಾಜದ ಮಹೋಪಕಾರಿಗಳಾಗಬಹುದು. ಧನವಂತನು ತನ್ನ ಧನದಲ್ಲಿ ತನಗೆ ಬೇಕಾದಷ್ಟನ್ನು ಉಪಯೋಗಿಸಿ ಉಳಿದುದನ್ನು ಸಮಾಜದ ಸೊತ್ತಾಗಿ ತನ್ನ ಬಳಿ ಇಟ್ಟುಕೊಳ್ಳುವಂತೆ ಮಾಡಬಹುದು. ಹೀಗೆ ತನ್ನ ಉಳಿಕೆ ಹಣವನ್ನು ಸಮಾಜದ ಸೊತ್ತೆಂದು ತಿಳಿಕೊಳ್ಳುವ ಅನೇಕ ಶ್ರೀಮಂತರು ಇದ್ದಾರೆ. ಎಲ್ಲ ಶ್ರೀಮಂತರು ಅವರಂತೆ ಆಗುವುದು ಸಾಧ್ಯ. ನಾವು ಮನುಷ್ಯ ಸ್ವಭಾವದ ಮೇಲೆ ವಿಶ್ವಾಸವಿಟ್ಟು ಮುನ್ನಡೆಯಬೇಕು. ತಾನು ಸಮಾಜದ ಒಬ್ಬ ಸೇವಕ, ತಾನು ಸಂಪಾದಿಸುವುದೆಲ್ಲ ಸಮಾಜಕ್ಕಾಗಿ, ಖರ್ಚು ಮಾಡುವುದೂ ಸಮಾಜಕ್ಕಾಗಿ ಎಂದು ತಿಳಕೊಂಡಿರುವ ಶ್ರೀಮಂತರಿಂದ ಸಮಾಜಕ್ಕೆ ಹಾನಿಯಿಲ್ಲ. ಅವನ ಸಂಪಾದನೆಯೂ ಉದ್ಯೋಗ ವ್ಯವಹಾರಗಳೂ ಸಮಾಜದ ಕಲ್ಯಾಣಕ್ಕಾಗಿ ಇರುವುವು.

ಐತಿಹಾಸಿಕ ಆಧಾರ

ಆದರೆ ಇದೆಲ್ಲ ಮಾನವ ಸ್ವಭಾವದಲ್ಲಿ ಬದಲಾವಣೆಯನ್ನು ತೋರಿಸುವುದಿಲ್ಲವೆ? ಹೀಗೆ ಬದಲಾವಣೆಯಾಗಿರುವುದಕ್ಕೆ ಐತಿಹಾಸಿಕ ಆಧಾರಗಳಿವೆಯೆ? ಹೌದು. ಪರಮ ಸ್ವಾರ್ಥಿಯಾಗಿ ಕೋಟ್ಯಂತರ ರೂಪಾಯಿಗಳನ್ನು ಸಂಪಾದಿಸಿ ಕಡಿದಹಾಕಿದ ಕೋಟ್ಯಾಧೀಶನು ತನ್ನದೆಲ್ಲವನ್ನು ಸಮಾಜಕ್ಕೆ ಧಾರೆ ಎರೆದು ಕೊಟ್ಟ ಉಜ್ವಲ ದೃಷ್ಟಾಂತಗಳಿರುವುವು. ಇಂಥ ಪರಿವರ್ತನೆಯು ಒಬ್ಬನಲ್ಲಿ ಆಗಿರುವುದಾದರೆ, ಅದು ಅನೇಕರಲ್ಲಿ ಆಗುವುದು ಸಾಧ್ಯವಿದೆ.

ಅಹಿಂಸೆಯ ಭಿತ್ತಿಯ ಮೇಲೆ ರಚಿತವಾದ ಭವಿಷ್ಯ ಪ್ರಪಂಚದಲ್ಲಿ ದುಃಖ ದಾರಿದ್ರ್ಯ, ಸಂಗ್ರಾಮ ಕ್ರಾಂತಿ ರಕ್ತ ಚೆಲ್ಲಾಟ ಯಾವುವೂ ಇರಲಾರವು. ಮತ್ತೆ ಆ ಪ್ರಪಂಚದಲ್ಲಿ ಹಿಂದೆ ಎಂದೂ ಇರಲಾರದಷ್ಟು ದೇವರ ಮೇಲೆ ವಿಶ್ವಾಸವು ಕಂಡುಬರುವುದು. ಧರ್ಮಾಸಕ್ತಿಯೂ ಆಗ ವ್ಯಕ್ತವಾಗಿ ದೃಢವಾಗುವುದು. ಯಾಕೆಂದರೆ ಪ್ರಪಂಚದ ಅಸ್ತಿತ್ವವು ಧರ್ಮದ ಮೇಲೆ ನಿರ್ಭರವಾಗಿದೆ. ಧರ್ಮದ ನಾಶಕ್ಕಾಗಿ ಮಾಡುವ ಎಲ್ಲ ಪ್ರಯತ್ನಗಳು ವ್ಯರ್ಥವಾಗುವುವು.

ಗಾಂಧಿಜಿಯ ಪಾದ ಸ್ಪರ್ಶದಿಂದ

ಬತ್ತಿದ ಬಾವಿಯಲ್ಲಿ ನೀರು ಉಕ್ಕಿತು!

ಭಾರತದ ಮಹಾ ಪುರುಷರಲ್ಲಿ ಅಗ್ರಗಣ್ಯನೆಂದರೆ ಗಾಂಧಿಜಿ. ಮಿಲಿಯಾಂತರ ಮಂದಿ ಅವರನ್ನು ಅವತಾರ ಪುರುಷನೆಂದೇ ಆರಾಧಿಸುತ್ತಾರೆ. ಇಂತಹ ಒಂದು ಸಂಗತಿಯು ಕೆಳಗೆ ಕೊಡಲಾಗಿದೆ. ಗಾಂಧಿ ಮಾತ್ರ ತನಗೆ ಯಾವುದೇ ತರದ ದೈವಿಕ ಕಲೆ ಮುಂಟೆಂಬುದನ್ನು ಒಪ್ಪುವುದಿಲ್ಲ.

ಒಂದು ಸಂಜೆ ಹಳ್ಳಿಯ ಒಂದು ಗುಂಪು ಅವರ ಗುಡಿಸಲ ಬಾಗಿಲಿಗೆ ಬಂತು. ಅವರು ಹಣ್ಣು ಹಂಪಲುಗಳನ್ನು ಹಣ ಚೀಲವನ್ನು ಹೊತ್ತು ತಂದಿದ್ದರು.

ಅವರ ಮುಖ್ಯಸ್ಥನು ಅವುಗಳನ್ನು ಗಾಂಧಿಜಿಯ ಕಾಲಬುಡದಲ್ಲಿಟ್ಟು ಕೈಮುಗಿದು ಹೇಳಿದನು. "ಗಾಂಧಿಜಿ, ನಿಮ್ಮ ಪವಿತ್ರ ಪಾದ ಸ್ಪರ್ಶವು ನಮ್ಮ ಹಳ್ಳಿಗೆ ಆಯಿತು. ಬತ್ತಿಹೋದ ಬಾವಿಯೊಂದರಲ್ಲಿ ನೀರು ಉಕ್ಕಿಬಂತು. ನಾವು ನಿಮ್ಮನ್ನು ಪ್ರಾರ್ಥಿಸುತ್ತೇವೆ."

ಗಾಂಧಿಜಿ ಹೇಳಿದರು "ನೀವು ಹುಚ್ಚರು. ಅದು ಏನೋ ಒಂದು ಆಕಸ್ಮಿಕವಾಗಿರಬೇಕು. ನಿಮಗಿಂತ ಹೆಚ್ಚಿನ ಶಕ್ತಿಯಾಗಲಿ ದೈವ ಸಾಕ್ಷಾತ್ಕಾರವಾಗಲಿ ನನ್ನಲ್ಲಿ ಇಲ್ಲ."

ಆ ಮೇಲೆ ಗಾಂಧಿಜಿ ಮುಗುಳ್ನಗೆ ಮಾಡುತ್ತಾ ಹಳ್ಳಿಯ ಜನರಿಗೆ ಅರ್ಥವಾಗುವ ಸರಳ ಶುದ್ಧ ವಚನದಲ್ಲಿ ಲೋಕದ ವಿಚಾರಗಳನ್ನು ವಿವರಿಸಿ ಹೇಳಿದರು.

ಗಾಂಧಿಜಿಯ ಜೀವನದಲ್ಲಿ ಹಲವು ಇಂತಹ ಅನುಭವಗಳನ್ನು ನಾವು ಆಗಾಗ ಕಾಣಬಹುದು. ಆದರೆ ಅವರು ಮಾತ್ರ ತನ್ನಲ್ಲಿ ದೈವಾಂಶ ವುಂಟೆಂಬುದನ್ನು ಖಂಡಿತ ಒಪ್ಪುವುದಿಲ್ಲ.

ದೇಹದ ಒಳಶುದ್ಧಿಗೆ ಯಾವಾಗಲೂ
ಎಂಡ್ರೂಸ್ ಲಿವರ್ ಸಾಲ್ಟನ್ನು
ಸೇವಿಸಿರಿ

ANDREWS
LIVER SALT

ಆರೋಗ್ಯದಾಯಕ ಮತ್ತು ಚೇತೋಹಾರಕ ಪಾನಕ.

ಸಣ್ಣ ಸೈಜು 11 ಆಣೆ
ದೊಡ್ಡ ಸೈಜು
ರೂ. 1-4-0

ಪುಸ್ತಕಾವಲೋಕನ

ಪುರಾತನರ ತ್ರಿವಿಧಿ*

ಹಿಂದಿನ ಕನ್ನಡ ಸಾಹಿತ್ಯದ ಪರಿಚಯ ವುಳ್ಳವರಿಗೆ ಶ್ರೀನಿಜಗುಣ ಶಿವಯೋಗಿಯ ಹೆಸರು ಹೊಸತಲ್ಲ; ಕೈವಲ್ಯ ಪದ್ಧತಿ, ವಿವೇಕ ಚಿಂತಾಮಣಿ, ಪರಮಾರ್ಥ ಪ್ರಕಾಶಿಕೆ, ಅನುಭವ ಸಾರಗಳೇ ಮೊದಲಾದ ಹಲವು ಕನ್ನಡ ಕೃತಿಗಳನ್ನು ಬರೆದು ಆತನು ಪ್ರಸಿದ್ಧಿಗೇರಿದ್ದಾನೆ; ಷಡಕ್ಷರಿ ಮೊದಲಾದ ಕವಿಗಳಿಂದ ಪ್ರಶಂಸಿಸಲ್ಪಟ್ಟಿದ್ದಾನೆ. ಈ ಕವಿಯಿಂದ ರಚಿತವಾದ 'ಪುರಾತನರ ತ್ರಿವಿಧಿ' ಎಂಬೀ ಹಾಡುಗಬ್ಬವನ್ನು ತುಮಕೂರಿನ ಕೀರ್ತನ ಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳು ಸಂಪಾದಿಸಿ, ವಿಸ್ತಾರವಾದ ಮುನ್ನುಡಿಯನ್ನೂ ಅನುಬಂಧವನ್ನೂ ಬರೆದು ತಮ್ಮ ಶರಣ ಸಾಹಿತ್ಯ ಗ್ರಂಥಮಾಲೆಯ ಪ್ರಥಮ ಗ್ರಂಥವಾಗಿ ಪ್ರಕಾಶಿಸಿದ್ದಾರೆ.

ಪುರಾತನರು, ಆರ್ಯರು, ಪ್ರಥಮರೆಂದು ಶಿವಭಕ್ತರಲ್ಲಿ ಪ್ರಸಿದ್ಧರಾದ ಅರುವತ್ತಮೂರು ಶೈವಭಕ್ತರನ್ನು ಕೊಂಡಾಡಿ ತ್ರಿಪದಿ ಛಂದಸ್ಸಿನಲ್ಲಿ ಬರೆದ ೭೭ ಪದ್ಯಗಳು ಇದರಲ್ಲಿವೆ. ಅರುವತ್ತಮೂರು ಪುರಾತನರು ಸಮಾಜ ಸುಧಾರಕರು; ಭಕ್ತಿಮಾರ್ಗಾನುಗಾಮಿಗಳಾಗಿ ಮುಕ್ತಿ ಹೊಂದಿದವರು. ಇವರ ಕುರಿತು ಬರೆದ ಕಾವ್ಯಗಳು ತಮಿಳಿನಲ್ಲಿ ಬಹಳವಾಗಿವೆ. ಕನ್ನಡದಲ್ಲಿಯೂ ಬಸವ ಪುರಾಣ ಪ್ರೌಢರಾಯನ ಕಾವ್ಯ ಮೊದಲಾದ ಗ್ರಂಥಗಳು ಇವೆ. ಆ ಮಹಿಮರ ಕುರಿತು ಹಾಡುಗಬ್ಬವಿದನ್ನು ಬರೆದು ಮನೆ ಮನೆಯಲ್ಲಿ ಶಿವಭಕ್ತರು ಹಾಡುವಂತೆ ಸರಲವೂ ಮಧುರವೂ ಆಗಿ ಕವಿ ರಚಿಸಿದ್ದಾನೆ. 'ಶ್ರೀಗುರುವೆ, ನಿಜಸುಖದ ಸಾಗರವೆ, ತೆರೆ ಮುಸಗು। ತಾಗಳುಂ ಬೆಳಗುತಿಹ ನಿನ್ನ ಕಡೆಗಣ್ಣ।ಳೀಗೆ ಸಂತಸವ ಸಖಿಳರ್ಗೆ' ಎಂಬೀ ಪ್ರಾರಂಭದ ಹಾಡೇ ಕವಿಯ ಗಂಭೀರ ಕಾವ್ಯ ರಚನಾರೀತಿಯನ್ನು ತೋರ್ಪಡಿಸಬಲ್ಲ ಕವಿತಾ ನಿದರ್ಶನವಾಗಿದೆ. ಹಿಂದೆ ಪ್ರಕಟವಾದೀ ಗ್ರಂಥದ ಲೋಪದೋಷಗಳನ್ನು ತಿದ್ದಿ ವಿದ್ವಾಂಸರಾದ ಶ್ರೀ ಶಾಸ್ತ್ರಿಗಳು ಪ್ರಕೃತ ಪುಸ್ತಕವನ್ನು ಬಹಳ ಅಂದವಾಗಿ ಪ್ರಕಟಪಡಿಸಿದ್ದಾರೆ.

ಒಟ್ಟು ೫೦ ಪುಟಗಳುಳ್ಳ ಈ ಪುಸ್ತಕದಲ್ಲಿ ಮುನ್ನುಡಿ, ಕವಿವಿಚಾರ, ಅರುವತ್ತಮೂವರು ಪುರಾತನರು, ಶಬ್ದಕೋಶಗಳೇ ೪೧ ಪುಟಗಳಷ್ಟು ತುಂಬಿದ್ದು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ. ಪ್ರಾಚೀನ ಕವಿಗಳ ಕೃತಿಗಳನ್ನು ಇಂದಿನವರು ಅರಿತು ಅನುಭವ ಪಡೆದುಕೊಳ್ಳಬೇಕಾದರೆ ಆ ಕವಿ ಕಾವ್ಯಗಳ ವಿಚಾರಗಳನ್ನು ವಿದ್ವಾಂಸರು ವಿಸ್ತಾರವಾಗಿ ತಿಳಿಸುವುದು ಅವಶ್ಯವಿರುತ್ತದೆ. ಹಾಗೆ ತಿಳಿಸುವುದರಿಂದ ಮಾತ್ರ ಪುಸ್ತಕದ ಗೌರವವು ಜನಕೆಗೆ ಅರ್ಥ ಮಾಡಿಕೊಳ್ಳಲು ಅವಕಾಶವಾಗುತ್ತದೆ. ಶ್ರೀ ಶಾಸ್ತ್ರಿಗಳು ಇಷ್ಟು ಚಿಕ್ಕದಾದ ಹಾಡುಗಬ್ಬವು, ಎಷ್ಟು ಚೊಕ್ಕವಾಗಿದೆಯೆಂದು ತಮ್ಮ ವಿದ್ವತ್ಪೂರ್ಣವಾದ ಮುನ್ನುಡಿ ಕವಿಪರಿಚಯಗಳಿಂದ ತಿಳಿಸಿದ್ದಾರೆ.

ಈ ಪುಸ್ತಕದಲ್ಲಿ ಕವಿಯ ವಿಚಾರಕ್ಕೆ ಸಂಬಂಧಿಸಿದ ಶಂಭುಲಿಂಗನ ಬೆಟ್ಟದ ಶಂಭುಲಿಂಗೇಶ್ವರ ಗುಡಿ, ಆ ಬೆಟ್ಟದ ದೃಶ್ಯ, ಆ ಬೆಟ್ಟದಲ್ಲಿ ನಿಜಗುಣ ಶಿವಯೋಗಿಯ ಗವಿ, ಎಂಬೀ ಅಂದವಾದ ಮೂರು ಚಿತ್ರಗಳನ್ನು ಕೊಟ್ಟು ವಾಚಕರ ಆನಂದವನ್ನು ಅಧಿಕಗೊಳಿಸಿದ್ದಾರೆ.

ಇಷ್ಟು ಪರಿಶ್ರಮಪೂರ್ವಕವಾಗಿ, ಪ್ರಾಚೀನ ಸಾಹಿತ್ಯವನ್ನು ಬೆಳಕಿಗೆ ತರುವ ಉದ್ದೇಶದಿಂದ ಶರಣ ಸಾಹಿತ್ಯ ಗ್ರಂಥಮಾಲೆಯನ್ನು ಹೊರಡಿಸಿ ದುಡಿಯುವ ಶ್ರೀ ಶಾಸ್ತ್ರಿಗಳ ಪ್ರಯತ್ನವು ಕನ್ನಡಿಗರೆಲ್ಲರಿಂದ ಸರ್ವತ್ರ ಆದರಣೀಯವಾಗಿ ಜನಪ್ರಿಯವಾಗಲೆಂದು ನಾವು ಆಶಿಸುತ್ತೇವೆ.

—ಕಯ್ಯಾರ.

*ಪುರಾತನರ ತ್ರಿವಿಧಿ: ಶ್ರೀ ನಿಜಗುಣ ಶಿವಯೋಗಿ ವಿರಚಿತ, ಸಂಪಾದಕ:- ಕೀರ್ತನ ಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿ, ಹುಲುಕುಂಟೆ ಮಠ ತುಮಕೂರು. ಪುಟಗಳು ೫/ ... ಆಕಾರದ ... ಬೆಲೆ ಆರಾಣೆ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 42/1941

ಕನಕತ್ತೋಡಿ ಮೂಸೆ ಬ್ಯಾರಿ ಕೂಡಾ 4 ಜನರು ... ವಾದಿರು.

ಕೊರಗ ಪೂಜಾರಿ ಕೂಡಾ 2 ಜನರು ... ಪ್ರತಿವಾದಿರು.

2ನೇ ಪ್ರತಿವಾದಿ ಗಾಣಿಗ ರಾಮು–ಗಾಣಿಗ ಮಾಲಿಂಗನ ಅಳಿಯ–ಕಾಸರಗೋಡು ತಾಲೂಕು ಕಾರಡ್ಕ ಗ್ರಾಮ.

1ನೇ ಪ್ರತಿವಾದಿಯು 1ನೇ ವಾದಿಗೆ ಬರೆಕೊಟ್ಟ ದಾವಾ ಅಡವು ದಸ್ತೈವಜು ಪ್ರಕಾರ ಬರತಕ್ಕ ಅಸ್ಲು ವ ಬಡ್ಡಿಗೆ ಕೂಡಾ ವಾದಿರು ಮೇಲಿನ ದಾವೆ ಹೂಡಿರುವದ್ರಿಂದ ಆದರ ನೋಟೀಸಿನ ತನ್ಖಿ ವ್ಯಾದೆಯು ಬರುವ ತಾರೀಕು 17–6–1941ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಪ್ರತಿವಾದಿರು ತಮ್ಮ ಅಕ್ಷೇಪವೇನಾದರೂ ಹೇಳುವದಿದ್ದರೆ ಆ ವ್ಯಾದೆಗೆ 11 ಘಂಟೆಗೆ, ತಪ್ಪದೆ, ಸ್ವತಹ, ಯಾ ವಕೀಲರ ಮುಖಾಂತರ ಕೋರ್ಟಿಗೆ ಹಾಜ್ರಾಗಿ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದ್ರೆ ಅವರನ್ನು ಶಿಪ್ಪಾ ಎಂತ ಮಾಡಿ ಈ ದಾವೆಯನ್ನು ಮುಂದಿನ ತನ್ಖಿಯಿಂದ ತೀರ್ಮಾನಿಸೋಣಾಗುತ್ತದೆ ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Puttur } B. Ramachandra Rao,
8–4–'41 } Pleader for Petr. Plaintiffs.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 178/33 · R. E. P. 90/1941.

ದಿ ಕರ್ನಾಟಕ ಬೇಂಕ್ Ltd. ... Petitioner.

1. ಭೀಡೆರಾಮಚಂದ್ರ ಭಟ್ಟ–ಸುಬ್ರಾಯ ಭಟ್ರ ಮಗ–ಹತ್ಯಡ್ಕ ಗ್ರಾಮ. 2. ಹೊಸತೋಟ ಗಣಪತಿ ಹೆಬ್ಬಾರ–ನಾರ್ಣಾಣ ಹೆಬ್ಬಾರರ ಮಗ–ಹತ್ಯಡ್ಕ ಗ್ರಾಮ ... Respondents.

ಎದ್ರಿರ ಮೇಲೆ ಅರ್ಜಿದಾರಗೆ ಬಹ ಡಿಕ್ರಿಯವಜು ವಸೂಲಿಗೆಂತ ಅಮ್ಲುಜಾರಿ ಮಾಡಿ ಎದ್ರಿರಿಗೆ ನೋಟೀಸಿನ ಬಗ್ಗೆಂತ ತಾರೀಕು 24–6–1941ಕ್ಕೆ ವ್ಯಾದೆ ನಿಶ್ಚೈಸಿರುವದ್ರಿಂದ ಆ ವ್ಯಾದೆಗೆ ಎದ್ರಿರು 11 ಘಂಟೆಗೆ ಕೋರ್ಟಿಗೆ ತಪ್ಪದೆ ಸ್ವತಹ, ಯಾ ವಕೀಲರ ಮುಖಾಂತರ ಹಾಜ್ರಾಗಿ ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಶಿಪ್ಪಾ ಎಂತ ಮಾಡಿ ಮುಂದಿನ ತನ್ಖಿಯಿಂದ ತೀರ್ಮಾನಿಸೋಣಾಗುವದು ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Puttur } B. Ramachandra Rao,
28–4–'41 } Pleader for Petitioner.

ರುಬಿ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಡೈರೆಕ್ಟರರು:
ಬಿ. ಎಮ್. ಬಿರ್ಲ್ಲಾ, ಎಸ್ಕ್ವಾಯರ್ ಚೆಯರ್‌ಮೇನ್, ಕಲ್ಕತ್ತಾ ಬೋರ್ಡ್ ಓಫ್ ರಿಸರ್ವ್ ಬೇಂಕ್ ಮೆಂಬರ್, ಸೆಂಟ್ರಲ್ ಬೋರ್ಡ್, ರಿಸರ್ವ್ ಬೇಂಕ್.
ಡಾ। ನರೇಂದ್ರನಾಥ ಲೊ, ಎಮ್. ಎ. ಬಿ. ಎಲ್., ಬಿ. ಆರ್. ಎಸ್. ಪಿ. ಎಚ್. ಡಿ., ಮೆಂಬರ್, ಕಲ್ಕತ್ತಾ ಬೋರ್ಡ್ ರಿಸರ್ವ್ ಬೇಂಕ್.
ಗುರುಪ್ರತಾಪ ಪೊದ್ದಾರ್, ಎಸ್ಕ್ವಾಯರ್ ಮರ್ಚೆಂಟ್.
ಎಮ್. ಆರ್. ಸೊಂತಾಲಿಯಾ, ಎಸ್ಕ್ವಾಯರ್, ಮೆಂಬರ್, ಲೋಕಲ್ ಎಡ್ವಾಯಸರಿ ಬೋರ್ಡ್, ಸೆಂಟ್ರಲ್ ಬೇಂಕ್ ಓಫ್ ಇಂಡಿಯಾ ಲಿಮಿಟೆಡ್.
ರಾಮೇಶ್ವರ ದಾಸ್ ಮಾಧವ, ಎಸ್ಕ್ವಾಯರ್, (ಪೊಲಿಸಿದಾರರ ಡೈರೆಕ್ಟರರು).
ಘನಶ್ಯಾಮ ದಾಸ್ ಲೊಯಲ್ಕ, ಎಸ್ಕ್ವಾಯರ್, (ಪೊಲಿಸಿದಾರರ ಡೈರೆಕ್ಟರರು).

ಮೂಲಧನ
ಅಧಿಕರಿಸಲ್ಪಟ್ಟದ್ದು: ರೂ. 1,00,00,000
ವಂತಿಗೆಯಾದದ್ದು: ರೂ. 45,00,000
ತೆತ್ತದ್ದು: ರೂ. 14,40,000
ಜುಮ್ಲಾ ಫಂಡು: ರೂ. 18,43,000

ಹೆಡ್ ಆಫೀಸು: 8 ರೊಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

ರೂ. 30 ಲಕ್ಷದ ವಹಿವಾಟು ನಾವು ಜೀವವಿಮೆಯನ್ನು ಪ್ರಾರಂಭಿಸಿದ ಮೊದಲನೇಯ ವರ್ಷದಲ್ಲಿ ನಡೆದಿದೆ. ★

ಈ ಕೆ ಅವಲೋಕನಗಳು ನಿಮ್ಮಗೆ ನಂಬಿಕೆಯನ್ನೀಯುವುವು

ಲೈಫ್, ಬೆಂಕಿ, ಮೋಟಾರು, ಮೆರಿನ್ ಮತ್ತು ಡಬ್ಲ್ಯು. ಸಿ. ಇನ್ಶೂರೆನ್ಸುಗಳು

ಮದ್ರಾಸು ಬ್ರಾಂಚ್:
12 ತಂಬು ಚೆಟ್ಟಿ ಸ್ಟ್ರೀಟ್
ಮೆನೇಜರ್: ಇ. ನಟೇಶನ್

ಪೋಸ್ಟ್ ಬೋಕ್ಸ್ 195 ಫೋನ್ 3581

ಸಬ್ ಆಫೀಸು, ಮೆನೇಜರ್: ಟಿ. ವಿ. ರಾಘವನ್, ಟವರ್ ಬಿಲ್ಡಿಂಗ್ ವರೈಟಿ ಹೋಲ್ ರೋಡ್ ಕೊಯಂಬುತ್ತೂರು.

ಚೀಫ್ ಏಜಂಟ್, ಸಿ. ಎನ್. ಕೆ. ಬಂಗೇರಾ, ಹೊಯ್ಗೆ ಬಜಾರ್ ಮಂಗಳೂರು.

ಸಿನೆಮಾ ಪುಟ

ಕಮಲಾ ಟಾಕೀಸ್

ಬೊಂಬಯಿಯ ಹೊಸ ಚಿತ್ರಕಂಪೆನಿ

ಕಮಲಾ ಟಾಕೀಸ್ ಎಂಬುದೊಂದು ಸಂಸ್ಥೆ ಸ್ಥಾಪಿತವಾಗಿದೆ. ಬೇಗನೇ ಆ ಕಂಪೆನಿಯವರು ರೋಮುಲಾ, ತ್ರಿಲೋಕ ಕಪೂರ್, ನವೀನಯಾಜ್ಞಿಕ್ ಮತ್ತು ಕಮಲಾ ಇವರಿಂದ ಕೂಡಿದ ಒಂದು ಚಿತ್ರವನ್ನು ತಯಾರಿಸಲಿರುವರಂತೆ.

ಶಿಖಾರಿ

ಅರುಣ ಪಿಕ್ಚರ್ಸಿನವರು ಶಿಖಾರಿ ಎಂಬ ಚಿತ್ರವನ್ನು ತಯಾರಿಸಲಿರುವರು. ವಿಟ್ಠಲ್ ನಾಯಕ ಪಾತ್ರವಹಿಸುವನು. ಶ್ರೀ ಬಿಡೇಕರ್ (ವಡೋಲಿ ನಿರ್ಮಾಪಕರು) ಇದನ್ನು ನಿರ್ದೇಶಿಸುವರು.

ಡಾಕ್ಟರ್

ನ್ಯೂಥಿಯೇಟರ್ಸಿನವರು ತಮ್ಮ ಪ್ರಖ್ಯಾತ ಬಂಗಾಲಿ ಚಿತ್ರ 'ಡಾಕ್ಟರ್'ನ್ನು ಹಿಂದೀ ಭಾಷೆಯಲ್ಲಿಯೂ ತಯಾರಿಸುವರೆಂದು ತಿಳಿದಿದೆ.

ಅವಿನಾಶ ಮತ್ತು ವನಮಾಲ

ಇವರು ಅತ್ರೆ ಪಿಕ್ಚರ್ಸಿನ 'ಚರಣೋಕಿ ದಾಸಿ'ಯಲ್ಲಿ ಪ್ರೇಮಪೂರ್ಣವಾದ ಪಾತ್ರ, ನಗೆಗಳಿಂದ ಕೂಡಿದ ಅಭಿನಯ ಮಾಡುವರು.

ಕಬೀರ್ ಚಿತ್ರದಲ್ಲಿ ಸರ್ಕಾರರು ಮುಖ್ಯಪಾತ್ರ ವಹಿಸುವರು?

ನಿತಿನ್ ಬೋಸರು ಸಾಧನ ಳೊಡನೆ ಅಭಿನಯಿಸುವರೆ?

ಹಿಂದೀ ಪತ್ರಿಕೆಯಲ್ಲಿ ಈ ತರದ ಹುಚ್ಚು ಸುದ್ದಿಯೊಂದು ಪ್ರಕಟವಾಗಿದೆ

ಶ್ರೀ ಬಿ. ಎನ್. ಸರ್ಕಾರರು ನ್ಯೂಥಿಯೇಟರ್ಸಿನಿಂದ ರಾಜೀನಾಮೆಕೊಟ್ಟು ಹೊರ ಬಂದಿರುವರೆಂದೂ ಅವರ ಸ್ಥಾನಕ್ಕೆ ದೇಬಕಿ ಬೋಸರನ್ನು ತೆಕ್ಕೊಳ್ಳಲಾಗಿದೆಯೆಂದೂ ಸರ್ಕಾರರು ಶರ್ಮಾ ಪ್ರೊಡಕ್ಷನ್ಸಿನವರ ಸಂತ ಕಬೀರದಲ್ಲಿ ಮುಖ್ಯಪಾತ್ರವನ್ನು ಅಭಿನಯಿಸುವರೆಂದೂ ನಾಡು ಬೋಸರು ನಿರ್ದೇಶಿಸುವ ನ್ಯೂಥಿಯೇಟರ್ಸಿನ ಹೊಸ ಚಿತ್ರದಲ್ಲಿ ಸಾಧನಾಬೋಸಳೊಡನೆ ನಿತಿನ್ ಬೋಸರು ಅಭಿನಯಿಸುವರೆಂದೂ ಅದರ ಸುದ್ದಿ.

ಸತ್ತವರೂ ಈ ಸುದ್ದಿಯನ್ನೋದಿ ನಗಾಡದೆ ಇರಲಾರರು.

ಅನ್ವೃತ

ನವಯುಗ ಚಿತ್ರ ಕಂಪೆನಿಯ ನಿರ್ದೇಶಕ ವಿನಾಯಕರು ತಮ್ಮ ಬಹಳ ಉದಯೋನ್ಮುಖ ಆಸೆಯ 'ಅನ್ವೃತ' ಚಿತ್ರವನ್ನು ಪೂರ್ಣವಾಗಿಸುತ್ತಾ ಇದ್ದಾರೆ. ಚಿತ್ರಪಟದಲ್ಲಿ ಈ ತಿಂಗಳಲ್ಲಿಯೇ ಅದು ಪ್ರದ-

ಕೋಮಲವಾದ ಚರ್ಮಕ್ಕೆ ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲಿಟ್ ಸಾಬೂನಿನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ. ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ, ಗುಣಪಡಿಸುವ ಸುಗುಣವುಳ್ಳ ಔಷಧಿಯು ಮೃದು ಚರ್ಮವನ್ನು ನಿರ್ಮಲವಾಗಿರಿಸಿ ಕೋಮಲವಾಗಿರಿಸುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನಯವಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powd) ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸೋಪ್
CUTICURA SOAP

ಪಡೆಯಿರಿ ನಿಮ್ಮ

ಸೇವಿಂಗ್ಸ್ ಕಾರ್ಡ್



ರೂ. ೩½ ಆದಾಯ ಪ್ರತಿ ೧೦ ರೂ. ಗೆ

ಯಾವ ಪೋಸ್ಟಾಫೀಸಿನಲ್ಲಾದರೂ ಮತ್ತು ಅದಕ್ಕೆ ೪ ಆಣೆ, ೮ ಆಣೆ, ಅಥವಾ ೧ ರೂಪಾಯಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟುಗಳನ್ನು ಅಂಟಿಸಿರಿ.

ನೀವು ಕೇಳಿದಾಗ ತಕ್ಕ ಬಡ್ಡಿಯೊಡನೆ ಹಿಂದಕ್ಕೆ ಕೊಡಲಾಗುವುದು.

ನಿಮ್ಮ ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆಯ ಸ್ಟಾಂಪುಗಳನ್ನು ಅಂಟಿಸಿದ ಮೇಲೆ ಅದನ್ನು ಪೋಸ್ಟಾಫೀಸಿನಲ್ಲಿ ಕೊಟ್ಟು ಅದಕ್ಕೆ ಬದಲಾಗಿ ಒಂದು ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟನ್ನು ಪಡೆಯಿರಿ. ಅದು ಹತ್ತು ವರ್ಷಗಳಲ್ಲಿ ರೂ. ೧೩½ ಬೆಲೆಯುಳ್ಳದ್ದಾಗುತ್ತದೆ.

ರಕ್ಷಣೆಗಾಗಿ ಉಳಿಸಿರಿ.

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟುಗಳನ್ನು

KN. G. I 24.

ಪತ್ರವ್ಯವಹಾರ

[ಪತ್ರಲೇಖಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಶಾಲೆಗಳ ಉನ್ನತಿಯೂ, ಉಪಾಧ್ಯಾಯರೊಳಗಿನ ಸೌಹಾರ್ದವೂ

[ಗೋಳಿನ ಶಿರೋನಾಮೆಯಿಂದ ಸ್ವದೇಶಾಭಿಮಾನಿಯೆಂಬವರು ತಾ. ೩೦-೫-೪೧ರ ಸ್ವದೇಶಾಭಿಮಾನಿಯಲ್ಲಿ ಬರೆದ ಲೇಖನಕ್ಕೆ ಉತ್ತರವಾಗಿ ಈ ಲೇಖನವಿದೆ. ಲೇಖನದಲ್ಲಿ ಹಿಂದಿನ ಲೇಖನಕ್ಕೆ ಉತ್ತರವಾಗಿರುವ ಅಂಶಗಳನ್ನಷ್ಟೇ ಇಲ್ಲಿ ಕೊಟ್ಟಿರುವೆವು. ವಿಸ್ತಾರ ಲೇಖನವನ್ನು ಕೊಡಲು ಸ್ಥಳ ಸಂಕೋಚವಾಗಿದ್ದುದಕ್ಕೆ ವಿಷಾದಿಸುತ್ತೇವೆ.]

1. ಅಲ್ಲಿ ಹೇಳಿದ ಆ ಮುಖ್ಯೋಪಾಧ್ಯಾಯರು ಬೇರೆ ಶಾಲೆಗೆ ಕಳುಹಿಸಲ್ಪಟ್ಟಿದ್ದು ಒಂದು ನಿರ್ದಿಷ್ಟ ಅವಧಿಗಲ್ಲ. ಬೋರ್ಡಿನ ಆಜ್ಞಾಪತ್ರದಲ್ಲಿ ಅವಧಿಯು ನಿರ್ದೇಶಿಸಲ್ಪಡದೆ ಅನಿಶ್ಚಿತವಾಗಿತ್ತು.

2. ಸದ್ರಿ ಮುಖ್ಯೋಪಾಧ್ಯಾಯರಿಂದ ಚಾರ್ಜು ವಹಿಸಿಕೊಂಡು ಅವರ ಸ್ಥಾನದಲ್ಲಿ ಬಂದು ನೋಡಿದವರು ಹೊಸತಾಗಿ ಬರೆದ ಬೇರೊಬ್ಬ ಉಪಾಧ್ಯಾಯರು, ಅಲ್ಲಿಯ ಸಹಾಯಕ ಉಪಾಧ್ಯಾಯರಲ್ಲ. ಈ ಹೊಸ ಉಪಾಧ್ಯಾಯರಿಂದ ಬೋರ್ಡಿನ ಸ್ಪಷ್ಟವಾದ ಮತ್ತು ಸರಿ ಚಾರ್ಜು ವಹಿಸಿಕೊಂಡವರು ಸಹಾಯಕ ಉಪಾಧ್ಯಾಯರಾಗಿರುವಾಗ ಹೊಸಬರ ಮುಖ್ಯೋಪಾಧ್ಯಾಯರು ಬಂದು ಬೋರ್ಡಿನ ಯಾವ ಹುಕುಮು ಕೂಡ ಇಲ್ಲದೆ. ಇವರಿಂದ ಚಾರ್ಜು ಕೇಳಿದ ಆ ನಿಯಮ ಜಾರಿಗೆ ಬರಬೇಕೆಂಬ ಕಾರಣದಿಂದ ಚಾರ್ಜು ಕೊಡಲು ಆಕ್ಷೇಪಿಸುವುದು ಸ್ವಾಭಾವಿಕವಾಗಿಯೇ ಇದೆ. ದ್ವೇಷಭಾವದಿಂದಾಗಲಿ ಅಥವಾ ಸ್ವೇಚ್ಛಾಚಾರದಿಂದಾಗಲಿ ನಿಯಮವನ್ನುಲ್ಲಂಘಿಸಿದರೆಂದು ಅವರ ಮೇಲೆ ಆರೋಪಿಸುವುದು ಅನ್ಯಾಯ. ಆ ಚಾರ್ಜು ಕೊಡಬೇಕಾಗಿರುವುದರಿಂದ ಉದ್ದೇಶಪೂರ್ವಕವಾಗಿ ಯಾರೂ ಹಾಗೆ ಮಾಡಿರುವುದಿಲ್ಲ.

3. ಒಂದು ಪಕ್ಷಕ್ಕೆ ಆ ಸಹಾಯಕ ಉಪಾಧ್ಯಾಯರು ಅನುಸರಿಸಿದುದು ತಪ್ಪು ಕ್ರಮವೇ ಆದರೂ ಸಂಬಂಧಪಟ್ಟ ಮೇಲಧಿಕಾರಿಗಳು ಅದನ್ನು ತಿದ್ದಿ ಸರಿಗೊಳಿಸಿ ಹಿತಸೂಚನೆಗಳನ್ನು ಕೊಡುವುದು ಕರ್ತವ್ಯವಾಗಿತ್ತಲ್ಲದೆ ಪತ್ರಿಕೆಯಲ್ಲಿ ಅವರನ್ನು ಅತಿಹೀನತರವಾಗಿ ಛಂಗಿಸಿ ಅಪಮಾನ ಮಾಡುವುದು ಅಷ್ಟೊಂದು ಸಮಂಜಸವಲ್ಲ. "ವಿದ್ಯಾಭಿಮಾನಿ"ಗಳು ಬರೆದ ಲೇಖನದ ಬಗ್ಗೆ ಶ್ರೀಯುತರು ಸ್ವಲ್ಪ ವಿಚಾರ ಮಾಡಿದರೆ ಅವರು ತಮ್ಮ ಛಲವನ್ನು ಬಿಡಲೇಬೇಕೆಂದು ಮುಂತಾಗಿ ಶ್ರೀ ನಿಜ ಸಂಗತಿಗಳನ್ನು ಮರೆಮಾಚಿಸಲು ಯತ್ನಿಸಿದ್ದಾರೆ.

"ನಿರೀಕ್ಷಕ"

[ಈ ಪತ್ರವ್ಯವಹಾರವನ್ನು ಇಲ್ಲಿಗೆ ನಾವು

ಶೀಘ್ರವಾಗಬಹುದು. ಖಾಂಡೇಕರರು ಅದರ ಕಥಾಲೇಖಕರು. ಬಾಬುರಾವ್ ಪೆಂಢಾರ್ಕರ್, ಮೀನಾಕ್ಷಿ, ವಿನಾಯಕ ಲಲಿತಪವಾರ್, ದಾಮಣ್ಣ ಮಾಳ್ವಂಕರ್, ಜೋಗ್, ವಿಟ್ಠಲ್ ಇವರು ಪಾತ್ರಗಳನ್ನು ಅಭಿನಯಿಸುತ್ತಾರೆ.

ನವಯುಗದ ಮುಂದಿನ ಚಿತ್ರ "ಸಂಗಂ" ಎಂಬುದು. ಮೀನಾಕ್ಷಿ ವಿನಾಯಕರು ನಟಿಸುವರು.

ಶಾಜಾದಿ

ಮೋಹನ್ ಪಿಕ್ಚರ್ಸಿನ 'ಶಾಜಾದಿ'ಯಲ್ಲಿ ಮಿಸ್ ರೋಮುಲಾ ನಾಯಕಿಯ ಪಾತ್ರದಲ್ಲಿ ಬಹಳ ರಸವತ್ತಾಗಿ ಅಭಿನಯಿಸಿರುವಳು.

ಪುಷ್ಪವಲ್ಲಿ

ಆಂಧ್ರ ನಟಿ ಪುಷ್ಪವಲ್ಲಿಯು ಕಲ್ಕತ್ತದ ಗಜಪತಿ ಪಿಕ್ಚರ್ಸಿನಲ್ಲಿ ಅಭಿನಯಿಸುವ

ವಿಚಿತ್ರ ಪ್ರಪಂಚ

ಗಂಡರನ್ನು ಬದಲಿಸಿಕೊಂಡರು!

ಫ್ಲೊರ್ಟೆಸ ಮತ್ತು ಶೋೀನ್ ಮೇನ ಎಂಬ ಇಬ್ಬರು ಅಮೆರಿಕನ್ ಯುವತಿಯರು ತಮ್ಮ ಇಬ್ಬರು ಮಕ್ಕಳು ಮತ್ತು ಗಂಡರೊಂದಿಗೆ ಒಂದೇ ಮನೆಯಲ್ಲಿ ಅನ್ಯೋನ್ಯರಾಗಿ ವಾಸವಾಗಿದ್ದರು. ಕೆಲವು ದಿನಗಳ ಮೇಲೆ ಇವರಿಬ್ಬರೂ ಒಬ್ಬರೊಬ್ಬರ ಗಂಡರನ್ನು ಮೆಚ್ಚಿ ಅವರನ್ನು ಮೋಹಿಸತೊಡಗಿದರು! ಒಂದು ದಿನ ಫ್ಲೊರ್ಟೆಸ ಬಂದು 'ಅಕ್ಕಾ! ನಿನ್ನ ಗಂಡ ಎಷ್ಟು ಚೆಲುವ! ಅವನನ್ನು ಕಂಡರೆ ನನಗೆ ಬಹಳ ಸಂತೋಷವಾಗುತ್ತದೆ' ಎಂದಳು. ಆಗ "ಶೋೀನ್ ಮೇನ್— 'ಅಮ್ಮಾ! ನನಗೂ ಹಾಗೆಯೇ. ನಿನ್ನ ಗಂಡನನ್ನು ಕಂಡರೆ ನನ್ನ ಎದೆ ಉಲ್ಲಾಸದಿಂದ ಉಬ್ಬುವುದು' ಎಂದಳು. ಇಬ್ಬರೊಳಗೂ ಒಡಂಬಡಿಕೆಯಾಯಿತು. ಇಬ್ಬರೂ ಕೋರ್ಟಿಗೆ ಹೋಗಿ ದಾಂಪತ್ಯ ವಿಚ್ಛೇದ ಮಾಡಿಕೊಂಡರು— ಮತ್ತೆ ಇಬ್ಬರೂ ಇಗರ್ಜಿಗೆ ಹೋಗಿ ಒಬ್ಬರೊಬ್ಬರ ಗಂಡನನ್ನು ಮದುವೆಯಾದರು.

ಈಗ ಅವರಿಬ್ಬರು ಅದೇ ಮನೆಯಲ್ಲಿ ಮನಸ್ಸು ಮೆಚ್ಚಿದ ಗಂಡನೊಂದಿಗೆ ಸುಖವನ್ನು ಅನುಭವಿಸುತ್ತಿದ್ದಾರೆ! ಯುರೋಪಿನ ಸಂಸ್ಕೃತಿಯೆಂದರೆ ಇಲ್ಲಿವರೆಗಿದೆ.

ಮಾತನಾಡುವ ಗಿಡ?

ದಕ್ಷಿಣ ಅಮೇರಿಕದ ಅಂಡಿಸ್ ಪರ್ವತದ ಬುಡದಲ್ಲಿರುವ ಪಟಗೋನಿಯದ ಕಾಡುಗಳಲ್ಲಿ ಹುಲುಸಾಗಿ ಬೆಳೆಯುವ ಹಬ್ಲಿಫ್ಲೋರ್ ಎಂಬ ವಿಚಿತ್ರ ಗಿಡಗಳು ಸೂರ್ಯೋದಯದಿಂದ ಸೂರ್ಯಾಸ್ತದ ತನಕ ಜಾತ್ರೆ ಸಂತೆಗಳಲ್ಲಿ ಜನ ಸಮೂಹ ಮಾತನಾಡುವ ವಿಚಿತ್ರ ಧ್ವನಿಯನ್ನು ಕೊಡುತ್ತವೆ. ಇವುಗಳಲ್ಲಿ ಅರಳುವ ದೊಡ್ಡ ಜಾತಿಯ ಹೂವಿನ ಎಸಳುಗಳು ಗಾಳಿಗೆ ಒಂದಕ್ಕೊಂದು ತಿಕ್ಕಿಕೊಳ್ಳುವದರಿಂದ ದೂರದಲ್ಲಿರುವವರಿಗೆ ಮನುಷ್ಯರು ಮಾತನಾಡುವಂತೆ ಭಾಸವಾಗುತ್ತದೆಂದು ಅಲ್ಲಿಯವರು ಹೇಳುವರು.

ಬಾವಿಗೆ ಬಿದ್ದೊಡನೆ ನೀರು ಹಾರಿತು!

ಲಕ್ನೋದ ಸಮೀಪದ ಒಂದು ಹಳ್ಳಿಯಲ್ಲಿ ಡಕಾಯಿತರು ಶ್ರೀಮಂತ ಲಲಿತಾಪ್ರಸಾದನ ಮನೆಯಲ್ಲಿ ಲೂಟಿಮಾಡಲಿಕ್ಕೆ ಹೋಗಿದ್ದರು. ಅವರು ಮನೆ ಒಳಗಿದ್ದ ಪ್ರಸಾದನ ಸೊಸೆ ರಾಜೇಶ್ವರಿಯನ್ನು ಕರೆದು ಅವಳ ಮೈಮೇಲಿದ್ದ ಆಭರಣಗಳನ್ನು ಕಸಕೊಂಡರು. ಹಣವೆಲ್ಲಿದೆ ಎಂದು ಕೇಳಲು ಅವಳು ಹೇಳಲಿಲ್ಲ. ಡಕಾಯಿತರು ಸಿಟ್ಟಾಗಿ ಅವಳನ್ನು ಅಂಗಳಕ್ಕೆ ದೂಡಿದರು ಮತ್ತು ತಾವು ಮನೆಯನ್ನು ನುಗ್ಗಿದರು. ರಾಜೇಶ್ವರಿ ದೈವಭಕ್ತೆ. "ದೇವಾ! ನೀನೇ ಕಾಪಾಡು" ಎಂದು ಬಾವಿಗೆ ಹಾರಿದಳು. ಆಗ ಬಾವಿಯೊಳಗಿದ್ದ ನೀರೆಲ್ಲ ಆರಿಹೋಯಿತು. ಡಕಾಯಿತರು ಹೋದ ಮೇಲೆ ಜನರು ಅವಳನ್ನು ಮೇಲಕ್ಕೆ ಎತ್ತಿ ಹಾಕಿದರು. ಬಾವಿಯ ನೀರು ಒಮ್ಮಿಂದೊಮ್ಮೆಗೆ ಆರಿ ಹೋಗಿರುವದನ್ನು ನೋಡಿ ಜನರು ರಾಜೇಶ್ವರಿಯನ್ನು ದೇವಾಂಶ ಸಂಭೂತಳೆಂದು ಪೂಜಿಸತೊಡಗಿದ್ದಾರೆ.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ವಿಜ್ಞಾನಯುಗ

ಡ್ಯಾವ ಬಾಂಬರುಗಳ ಶೋಧ

ಆಕಾಶದಿಂದ ನೆಟ್ಟಗೆ ಇಳಿದು ಬಾಂಬು ಹಾಕಿ ನೆಟ್ಟಗೆ ಏರುವ ಡ್ಯಾವ ಬಾಂಬರುಗಳೆಂಬ ವಿಮಾನಗಳನ್ನು ರಣಕ್ಷೇತ್ರಕ್ಕೆ ತಂದವರು ಜರ್ಮನರಾದರೂ ಅದನ್ನು ಮೊದಲು ಶೋಧಿಸಿದವರು ಅಮೇರಿಕನರಂತೆ! ಈ ಅಮೇರಿಕನರು ಈಗ ಹೈಲ್ ಡ್ಯಾವರ್ ಎಂಬ ಇದೇ ಜಾತಿಯ ಇನ್ನೊಂದು ವಿಮಾನವನ್ನು ರಚಿಸಿದ್ದಾರೆ. ಇದರ ವೇಗವು ಜರ್ಮನಿಯ ಬಾಂಬರುಗಳಿಗಿಂತ ತಾಸಿಗೆ ೧೦೦ ಮೈಲಿನಷ್ಟು ಹೆಚ್ಚಿಗೆಯಾಗಿರುವದು, ಮಾತ್ರವಲ್ಲದೆ ಅದು ಎರಡು ಪಾಲು ಹೆಚ್ಚಿಗೆ ಭಾರವನ್ನೂ ಹೊರುವದು.

ನೂತನ ವಿಮಾನ

ಅಮೇರಿಕದ ಈಗೋರ ಸಿಕೊರ್ಸ್ಕಿ ಎಂಬ ಸುಪ್ರಸಿದ್ಧ ವಿಮಾನ ನಿರ್ಮಾಣಕನು ೧೦೦ ಟನ್ ಭಾರದ ಹೊಸ ಜಾತಿಯ ಒಂದು ವಿಮಾನವನ್ನು ಕಟ್ಟಿ ಹಿಂದಿನ ದಾಖಲೆಗಳನ್ನು ಮುರಿದಿದ್ದಾನೆ. ಈ ವಿಮಾನವು ಸರ್ತಿಗೆ ೧೦೦ ಮಂದಿ ಪ್ರಯಾಣಿಕರನ್ನು ಒಯ್ಯಬಲ್ಲುದು. ವೇಗವು ಬಹಳ ಹೆಚ್ಚಾಗಿರುವುದು. ಪ್ರಯಾಣಿಕರ ರಕ್ಷಣೆಭದ್ರತೆಗಳಿಗೆಬೇಕಾದ ಎಲ್ಲ ವ್ಯವಸ್ಥೆಗಳೂ ಈ ವಿಮಾನದಲ್ಲಿ ಇರುತ್ತವೆ.

ಮೇಣದಿಂದ ಪೆಟ್ರೋಲು

ಮೇಣದ ಬತ್ತಿಯನ್ನು ಮಾಡುವ ಫರ್ಫ್ಯಾನ ಮೇಣದಿಂದಲೂ ಉತ್ಕೃಷ್ಟವಾದ ಪೆಟ್ರೋಲನ್ನು ತಯಾರಿಸಬಹುದು. ಈ ಮೇಣಕ್ಕೆ ರಾಸಾಯನಿಕ ವಿಧಿಗಳನ್ನು ಅನುಸರಿಸಿ ಆರಂಭದ ೧೦೦೦ದ ತನಕ ಫೆರನ್‌ಹೀಟ ಡಿಗ್ರಿ ಕಾವನ್ನು ಕೊಡುವುದರಿಂದ, ಒಂದು ತರದ ಎಣ್ಣೆಯು ಹೊರಡುತ್ತದೆ. ಈ ಎಣ್ಣೆಯನ್ನು ಬಟ್ಟಿ ಇಳಿಸಿದಾಗ ನೂರಕ್ಕೆ ಎಂಬತ್ತರಷ್ಟು ಪೆಟ್ರೋಲು ದೊರೆಯುತ್ತದೆ. ಈ ಪೆಟ್ರೋಲನ್ನು ಇನ್ನೂ ಶುದ್ಧ ಮಾಡಲಿಕ್ಕೆ ಆಗುವುದು. ಹೀಗೆ ಶುದ್ಧಮಾಡಿದ ಪೆಟ್ರೋಲು ಚಿಕ್ಕ ಸೂಕ್ಷ್ಮ ಕೆಲಸಗಳಿಗೂ ಉಪಯೋಗ ಬರುವದು.

ಗಿಡ್ಡ ಬೆಳೆದವರೂ ಉದ್ದನಾಗಬಹುದು

ಗಿಡ್ಡವಾಗಿ ಬೆಳೆದಿರುವವರಿಗೋಸ್ಕರ ಅಮೇರಿಕದವನೊಬ್ಬನು ಒಂದು ಜಾತಿಯ ಬೂಟ್ಸುಗಳನ್ನು ಮಾಡಿದ್ದಾನೆ. ಇವುಗಳ ಒಳಗೆ ಲೋಹದ ಚಿಲಕವೂ ಸ್ಪ್ರಿಂಗುಗಳೂ ಇವೆ. ಗಿಡ್ಡ ಬೆಳೆದಿರುವವರು ತಮ್ಮ ಕಾಲುಗಳಿಗೆ ಈ ಬೂಟ್ಸುಗಳನ್ನು ಹಾಕಿಕೊಂಡು ಚಿಲಕವನ್ನು ಬೇಕಾದಷ್ಟು ತಿರುಗಿಸಿದರಾಯಿತು—ಸ್ಪ್ರಿಂಗುಗಳು ಅವನ ಕಾಲುಗಳನ್ನು ಬೂಟ್ಸಿನ ಒಳಗಿನಿಂದ ಬೇಕಾದಷ್ಟು ಎತ್ತರಿಸಿ ಹಿಡಿಯುವುವು. ಹೀಗೆ ಬುಟ್ಸು ಹಾಕಿಕೊಂಡ ಗಿಡ್ಡನು ಎತ್ತರಕ್ಕೆ ಬೆಳೆದ ಹಾಗೆ ತೋರುತ್ತಾನೆ.

ಹೊಸ ಜೀವಾತುವಿನ ಶೋಧ

ದೇಹಾರೋಗ್ಯಕ್ಕೆ ಜೀವಾತುಗಳು ಅತ್ಯಗತ್ಯ. ಇವುಗಳಲ್ಲಿ ಎ.ಬಿ.ಸಿ.ಡಿ. ಬಹಳ ಮುಖ್ಯವಾದವುಗಳೆಂದು ಎಲ್ಲರಿಗೆ ತಿಳಿದಿದೆ. ಈ ಜೀವಾತುಗಳಲ್ಲದೆ ಇನ್ನೂ ಅನೇಕ ಜೀವಾತುಗಳನ್ನು ಕಂಡುಹಿಡಿದಿದ್ದರು. ಈಗ ಅರ್ಕಾನ್ಸಸ್ ಯುನಿವರ್ಸಿಟಿಯ ಡಾಕ್ಟರ್ ... ಎಂಬವರು ಒಂದು ಹೊಸ ಜೀವಾತುವನ್ನು ಕಂಡುಹಿಡಿದು ಅದಕ್ಕೆ ಎಂ. ಜೀವಾತುವೆಂದು ಹೆಸರು ಕೊಟ್ಟಿದ್ದಾರೆ. ಜೀವಾತುವು ರಕ್ತದೊಳಗಿನ ಬಿಳಿ ಮತ್ತು ಕೆಂಪು ಕಣಗಳ ಮೇಲೆ ಬಹಳ ಪರಿಣಾಮವನ್ನು ಉಂಟುಮಾಡುತ್ತದಂತೆ. ದುಬರಿಂದ ರಕ್ತದೊಳಗಿನ ಈ ಕಣಗಳ ಶಕ್ತಿಯು ಬೆಳೆಯಬೇಕಾದರೆ ಈ ಜೀವಾತುವು ಇರುವ ಆಹಾರವನ್ನು ಭುಂಜಿಸಬೇಕು. ಕಲಿಜೆಯೇ ಈ ಜೀವಾತುವಿನ ಮಾತೃಸ್ಥಾನವೆಂದು ಡಾಕ್ಟರ್ ಡೇಯರು ಹೇಳಿರುವರು.

BHUVANENDRA PRODUCTS LTD.,

Head Office and Factory:	*Depots:*
KATAPADI S. Kanara.	1. Maharatha Galli, Hubli.
	2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value.
Genuine in quality and choiced by all.
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಮತ್ತು ಕೀವು
ಬರುವುದು, ಹಲ್ಲು ಅಲ್ಲಾಡುವುದು ಮುಂತಾದ
ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಸ್ಥಳೀಯ ಸ್ವೀಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಬಿಲ್ಡಿಂಗ್ಸ್.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರಾಜಾವೈದ್ಯ ಬಾಬಾ ಗುಣೆ ಇವರ

"ಸುರಂಗಾ" ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ— ಕೂದಲುಬೀಳುವಿಕೆ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು. ಅಲದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ನಿವಾರಿಸುತ್ತದೆ.

೪-ಔನ್ಸಿನ ಬಾಟ್ಲಿಗೆ ರೂ. ೧—೦—೦.

Agents:

Anglo Oriental Pharmacy, Hampankatta.

Stocks also at:

R. V. Kamath & Co, Car-street Mangalore.

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 1½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public

Apply for particulars—

K. R. GURU, *Managing Director.*

THE BANK OF MANGALORE LIMITED.

HEAD OFFICE MANGALORE ESTD 1901

Branches—MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5½ per cent
„ 1 „	4½ per cent
„ 6 months	4½ per cent
„ 3 „	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of Rs 5 @ 3

All kinds of banking business transacted

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

DEVEGADABETTU
9—7—1940

Sri K. Shivarama Nair,
Kerikcundah Estate,
Post Devegadabettu,
KADUR DISTRICT.

To,
The Joint Managers,
C. P. C. Motor Service Ltd,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquires required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ | ವಾರ್ಷಿಕ ಚಂದಾ ರೂ. 3-0-0 | ಅಂಚೆ ವೆಚ್ಚ ಸೇರಿ ರೂ. 3—13—0 | Regd. No. M. 3460

ಸ್ವದೇಶಾಭಿಮಾನಿ

ಸಂಪುಟ 35] ತಾರೀಖು 13—6—1941 [ಸಂಚಿಕೆ 24

The Bombay Life Assurance Company, Ltd.

(ESTABLISHED 1908)

Death! is not a matter of supposition / is a matter of Certainty.

There is no "IF" in the matter.

Therefore,

A Policy now with the "BOMBAY LIFE" assures old age Security & Family Protection

BUSINESS IN FORCE EXCEEDS EIGHT CRORES.

To Insure or to represent, write to

KOCHIKAR BROTHERS, LIMITED.

MADRAS BRANCH SECRETARIES,

The Bombay Life Building,

Gandhi Nagar, UDIPI.

OR AT ANY OF THEIR OFFICES AT:—

Puthiyara, Calicut. | Car Street, Mangalore. | Central Station Road, Trivandrum.

Gautam Nivas, Charni Road, Bombay No. 4. | Post Box No. 337 Mount Road, Madras. | Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ಕುರುಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ವಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

ted Printed & Published by A. S. Kamath at the Sharada Press, Car Street, Mangalore.

ESTD. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಯುದ್ಧಕೈದಿಗಳು ಬಿಡುಗಡೆ ಹೊಂದುವುದು ಹೇಗೆ?

ಅದಕ್ಕಾಗಿ ಯಾರು ಪ್ರಯತ್ನ ಮಾಡುತ್ತಾರೆ?

ರೆಡ್‌ಕ್ರಾಸ್ ಸಂಸ್ಥೆಯ ಸೇವಾಕಾರ್ಯ

ಯುದ್ಧಾಸಕ್ತ ರಾಷ್ಟ್ರಗಳು ಕೈಸೆರೆ ಹಿಡಿದ ಸೈನಿಕರ ಮತ್ತು ಇತರರ ಅದಲುಬದಲು ಮಾಡಿಕೊಳ್ಳುವ ಕ್ರಮವು ಅನೇಕ ವರ್ಷಗಳಿಂದ ನಡೆದುಬಂದಿದೆ. ಅಂತರ್ರಾಷ್ಟ್ರೀಯ ರೆಡ್‌ಕ್ರಾಸ್ ಜನಸೇವಾ ಸಂಘದ ಪ್ರಾತಿನಿಧಿಕ ಸಮಿತಿಯು ಈ ಕೆಲಸವನ್ನು ಮಾಡಿಕೊಂಡು ಬರುತ್ತದೆ. ಜರ್ಮನರು ಕೈಸೆರೆ ಹಿಡಿದ ಯುದ್ಧದ ಬ್ರಿಟಿಷ ಕೈದಿಗಳು ಇಂಗ್ಲಾಂಡಿನಲ್ಲಿ ಪುನಃ ತಮ್ಮ ಬಂಧು ಬಾಂಧವರನ್ನು ಕಾಣಬಹುದು; ಅದೇ ರೀತಿ ಜರ್ಮನ ಕೈದಿಗಳಲ್ಲಿ ಹಲವರು ಬಂಧನದಿಂದ ಮುಕ್ತರಾಗಿ ತಮ್ಮ ಪಿತೃಭೂಮಿಗೆ ಮರಳಬಹುದು. ಈ ಕಾರ್ಯನಿರ್ವಾಹಕ್ಕಾಗಿ ಎರಡು ಸಮಿತಿಗಳು ರೆಡ್‌ಕ್ರಾಸ್ ಸಂಘದಿಂದ ನೇಮಕವಾಗಿ ಬ್ರಿಟನು ಮತ್ತು ಜರ್ಮನಿಗೆ ಹೊರಟವೆ.

ಸಮಿತಿಗಳ ರಚನೆ

ಈ ಸಮಿತಿಗಳಲ್ಲಿ ತಟಸ್ಥರಾಷ್ಟ್ರವಾದ ಸ್ವಿಜರ್ಲೆಂಡಿನ ಇಬ್ಬರಿಬ್ಬರು ನಿಷ್ಪಕ್ಷಪಾತಿ ಡಾಕ್ಟರರು ಇದ್ದಾರೆ. ಮತ್ತೆ ಜರ್ಮನಿಗೆ ಮತ್ತು ಬ್ರಿಟನಿಗೆ ಹೋದ ಸಮಿತಿಗಳಲ್ಲಿ ಆಯಾ ದೇಶಗಳ ಸರಕಾರಗಳು ನೇಮಿಸಿದ ಒಬ್ಬೊಬ್ಬ ಪ್ರತಿನಿಧಿಯು ಇದ್ದಾನೆ. ಈ ಸಮಿತಿಗಳಲ್ಲಿ ಯಾರಾದರೊಬ್ಬ ಕೈದಿಯನ್ನು ಬಂಧಮುಕ್ತನನ್ನಾಗಿ ಮಾಡುವ ಕುರಿತು ಭಿನ್ನಾಭಿಪ್ರಾಯ ಉಂಟಾದರೆ, ಬಹುಮತವಿದ್ದಂತೆ ಆ ವಿಚಾರದ ನಿರ್ಣಯವಾಗುವುದು.

ನಡೆಯುತ್ತಿರುವ ಯುದ್ಧದಲ್ಲಿ ಒಬ್ಬ ಕೈದಿಯು ಯಾವ ಕೆಲಸಕ್ಕೂ ಬರಲಾರದವನಾಗಿದ್ದಾನೆ ಎಂಬುದು ಮೊದಲು ಖಂಡಿತವಾದ ಹೊರತು ಅವನ ಬಿಡುಗಡೆಯ ಪ್ರಶ್ನೆಯೇ ಏಳುವುದಿಲ್ಲ. ಹೀಗೆ ಒಬ್ಬನು ಯುದ್ಧದಲ್ಲಿ ನಿಷ್ಪ್ರಯೋಜಕನೆಂದು ಗೊತ್ತಾದರೂ ಕೂಡ ಅವನು ಅನೇಕ ಪರೀಕ್ಷೆಗಳಲ್ಲಿ ಬಿಡುಗಡೆಗೆ ಯೋಗ್ಯನೆಂದು ತೋರಿಬರಬೇಕು. ಆಗ ಮಾತ್ರ ಅವನು ಬಿಡುಗಡೆಯಾಗುವನು.

ವಿಚಾರಣೆ ಮತ್ತು ಬಿಡುಗಡೆಯ ರೀತಿ

ಬರ್ಲಿನಿನಿಂದ ಮೂವತ್ತು ಮೈಲು ದೂರ, ಉತ್ತರದಲ್ಲಿ ಒಂದು ದೊಡ್ಡ ಆಸ್ಪತ್ರೆ ಇದೆ. ಇದರಲ್ಲಿ ಯುದ್ಧ ಕೈದಿಗಳ ಚಿಕಿತ್ಸೆ ಮಾತ್ರ ನಡೆಯುವುದು. ಇಲ್ಲಿಯು ಅನೇಕ ಬ್ರಿಟಿಷ ಕೈದಿಗಳು ತಮ್ಮ ಬಿಡುಗಡೆಗಾಗಿ ಅರ್ಜಿಗಳನ್ನು ಕಳುಹಿಸಿದ್ದಾರೆ. ರೆಡ್‌ಕ್ರಾಸ್ ಸಂಘದ ಸಮಿತಿಯವರು ಇಲ್ಲಿಗೆ ಬಂದು ಈ ಕೈದಿಗಳ ಪರೀಕ್ಷೆಯನ್ನು ಮಾಡುವರು. ಪ್ರತಿಯೊಬ್ಬ ಕೈದಿಯ ಹಿಂದಿನ ಜೀವನ, ಸ್ಥಾನ, ಉದ್ಯೋಗ ಮೊದಲಾದವುಗಳ ಮೊದಲು ವಿಚಾರಣೆಯಾಗುವುದು. ಅನಂತರ ಆ ಕೈದಿಗಳನ್ನು ಕರೆಕಳುಹಿಸಿ ಒಬ್ಬೊಬ್ಬರನ್ನಾಗಿ ಪರೀಕ್ಷಿಸುವರು. ಒಬ್ಬ ಡಾಕ್ಟರನು ಪರೀಕ್ಷೆ ಮಾಡಿ ಇತರರು ಕೈದಿಯನ್ನು ನಿರೀಕ್ಷಿಸುವುದು ಇದೆ. ಅಥವಾ ಮೂವರು ಕೂಡಿ ಆತನ ಪರೀಕ್ಷೆಯನ್ನು ಒಟ್ಟಾಗಿ ಮಾಡುವುದು ಇದೆ. ಗಾಯಗೊಂಡ ಕೈದಿಗಳ ಗಾಯಗಳು ಕೆಲವು ತಿಂಗಳುಗಳಲ್ಲಿ ಮಾಯಬಹುದು. ಅವು ಮಾಯಲಿಕ್ಕೆ ಹಲವು ವರ್ಷಗಳು [illegible]

ಮಕ್ಕಳಿಂದ ಹಿಡಿದು ಮುದುಕರ ವರೆಗೆ

ಇಡೀ ಕುಟುಂಬದವರಿಗೆಲ್ಲಾ ಇದು ಉತ್ತಮ ಪಾನೀಯವಾಗಿದೆ. ಆರೋಗ್ಯ ಶಕ್ತಿ ಮತ್ತು ಧಾತುಪುಷ್ಟಿಕರವಾಗಿದೆ!

ಓವಲ್ಟಿನನ್ನು ಪ್ರತಿಯೊಬ್ಬನೂ ಪ್ರೀತಿಸುತ್ತಾನೆ. ಅಜ್ಜ ಅಜ್ಜಿಯರು, ತಂದೆತಾಯಿಗಳಿಗೆ ಮಾತ್ರವಲ್ಲದೆ, ಮಕ್ಕಳಿಗೂ ಇದು ಹಿತಕರವಾಗಿದೆ. ಓವಲ್ಟಿನಿನಲ್ಲಿ ಪೂರ್ಣ ಆರೋಗ್ಯದ ವಸ್ತುಗಳಿರುವುದರಿಂದ ಇದು ಬಾಲಕರಿಂದ ಹಿಡಿದು ಮುದುಕರ ವರೆಗೂ ಪಾನಯೋಗ್ಯವಾಗಿಯೂ ಇರುವುದು.

ನಿಮ್ಮ ಕುಟುಂಬದಲ್ಲಿ ಓವಲ್ಟಿನನ್ನು ದಿನನಿತ್ಯ ಉಪಯೋಗಿಸಿ ನೋಡಿ. ಪ್ರತಿಯೊಬ್ಬನೂ ಹೇಗೆ ಸಂಪೂರ್ಣ ಆರೋಗ್ಯದಿಂದಿರುವನೆಂದು ಮತ್ತೆ ವಿಚಾರಿಸಿರಿ. ಅನಾರೋಗ್ಯದೆದುರು ಓವಲ್ಟಿನ್ ರಕ್ಷಾಕವಚವಾಗಿದೆ. ವ್ಯಾಧಿ ಶಕ್ತಿಯನ್ನಿತ್ತು ರೋಗಗಳನ್ನು ಅದು ತಡೆಯುತ್ತದೆ.

ಓವಲ್ಟಿನ್ನು ಸಂಪೂರ್ಣ ನೈಸರ್ಗಿಕ ಆಹಾರ. ಪಕ್ವವಾದ ಬಾರ್ಲಿಯಿಂದ ಮತ್ತು ಹೊಸ ದನದ ಹಾಲಿನಿಂದ ಈ ವಿಟಮಿನ್ ಮತ್ತು ಇನ್ನೂ ಅನೇಕ ಇತರ ಆಹಾರ ಸ್ಪರ್ಶಗಳಿಂದ ಕೂಡಿದ ಓವಲ್ಟಿನನ್ನು ಮಾಡಲಾಗಿದೆ. ಓವಲ್ಟಿನನ್ನು ಕೊಂಡುಕೊಳ್ಳಿರಿ. ಟಿನ್ನುಗಳನ್ನು ಕುರಿತು ಜಾಗ್ರತೆಯಿಂದಿರಿ.

ಓವಲ್ಟಿನ್ನು ಕುಡಿಯಲು ಹಿತಕರವಾಗಿದೆ; ಬಿಸಿಯಾಗಿಯೂ, ತಣುವಾಗಿಯೂ ಇದನ್ನು ತೆಗೆದುಕೊಳ್ಳಬಹುದು. ಇದನ್ನು ತಯಾರಿಸುವುದೂ ಬಹೂ ಸುಲಭವ ಕೆಲಸವಾಗಿದೆ. ಪ್ರತಿಯೊಂದು ಡಬ್ಬಿಯಲ್ಲಿಯೂ ತಯಾರಿಸುವ ಕ್ರಮವು ಬರೆದಿದೆ.

ಓವಲ್ಟಿನ್ ಬಿಸ್ಕುಟು
ಆರೋಗ್ಯಕರ, ಜೀರ್ಣಕರ ಮತ್ತು ಶಕ್ತಿಕರವಾದುದು. ಬಿಸ್ಕುಟುಗಳಲ್ಲಿ ಇರುವ ಉತ್ತಮವೆನಿಸಿದ್ದು ಅದೇ. ಈ ಬಿಸ್ಕುಟುಗಳಲ್ಲಿ ಓವಲ್ಟಿನ್ ಇರುವುದರಿಂದ ಬಹಳ ಹಿತವನ್ನುಂಟು ಮಾಡುತ್ತದೆ.
4 ಔನ್ಸ್ ಮತ್ತು 8 ಔನ್ಸುಗಳ ಪ್ಯಾಕೆಟುಗಳಾಗಿಯೂ 1 ರಾತ್ಲಿನ ಟಿನ್ನುಗಳಲ್ಲಿಯೂ ಮಾರಾಟವಾಗುತ್ತದೆ.

'ಓವಲ್‌ಟಿನ್'
OVALTINE [illegible]

ಎಲ್ಲಾ ವ್ಯಾಪಾರಿಗಳಲ್ಲಿಯೂ ಮಾರಾಟಕ್ಕೆ ಇದು ಸಿಗುತ್ತದೆ.
ಗ್ರೇಹಮ್ಸ್ ಟ್ರೇಡಿಂಗ್ ಕೊ. (ಇಂಡಿಯಾ) ಲಿಮಿಟೆಡ್
ಕ್ರೈಸ್ಟ್‌ಫರ್ಸ್ ಹೋಲ್, 310/311 ಲಿಂಗಿಚೆಟ್ಟಿ ಸ್ಟ್ರೀಟ್, ಮದರಾಸು, ಹಾಗೂ ಕಲ್ಕತ್ತಾ, ಬೊಂಬಾಯಿ ಕರಾಚಿ ಮತ್ತು ರಂಗೂನ್.
OV/53/40

ತಾತ್ಕಾಲಿಕ ಯುದ್ಧದಲ್ಲಿ ಕೈದಿಯು ಪುನಃ ಯಾವುದಾದರೂ ಕೆಲಸಕ್ಕೆ ಒದಗಬಂದಾನೆ ಎಂಬುದನ್ನು ಸಮಿತಿಯು ಮುಖ್ಯವಾಗಿ ಆಲೋಚಿಸಬೇಕಾಗಿದೆ. ಕೆಲಸಕ್ಕೆ ಬಾರದವರನ್ನೇ ಸಮಿತಿಯು ಬಿಡುಗಡೆ ಮಾಡಲಿಕ್ಕೆ ಶಿಫಾರಸು ಮಾಡುವುದು.

ಪ್ರಕೃತ ಯುದ್ಧದ ಕೈದಿಗಳು

ಬಿಡುಗಡೆ ಹೊಂದಲಿರುವ ಕೈದಿಗಳು ಬ್ರಿಟನಿನಲ್ಲಿಯೂ ಇದ್ದಾರೆ. ಜರ್ಮನಿಯಲ್ಲಿಯೂ ಇದ್ದಾರೆ. ಇವರ ಅದಲು ಬದಲಾಗುವ ಮಾರ್ಗವು ಯಾವುದೆಂಬುದು ಇನ್ನೂ ನಿಶ್ಚಿತವಾಗಿಲ್ಲ. ಎರಡೂ ರಾಷ್ಟ್ರಗಳ ಯುದ್ಧ ಮಂತ್ರಿ, ವಿದೇಶ ಮಂತ್ರಿ ಮತ್ತು ರೆಡ್‌ಕ್ರಾಸ್ ಸಂಘದ ಕಾರ್ಯಾಲಯದವರು ಪರಸ್ಪರ ವಿಚಾರ ವಿನಿಮಯ ಮತ್ತು ಸಲಹೆ ಪರಾಮರ್ಶೆಗಳನ್ನು ತೆಗೆದುಕೊಂಡು ಈ ಮಾರ್ಗವನ್ನು ನಿಶ್ಚಯಿಸಬೇಕಾಗಿದೆ.

ಕೈದಿಗಳ ಕ್ಷೇಮ ಸಮಾಚಾರ [illegible] ಬಿಡುಗಡೆಯಾಗದೆ ಉಳಿದವರ ಕ್ಷೇಮ ಸಮಾಚಾರಗಳನ್ನು ಬಂಧು ಮಿತ್ರರಿಗೆ ತಿಳಿಸಲು ನಡೆಯಲಿಕ್ಕೆ ರೆಡ್‌ಕ್ರಾಸ್ ಸಂಘದವರು ವ್ಯವಸ್ಥೆ ಮಾಡಿದ್ದಾರೆ. ಧರ್ಮಯುದ್ಧ ನಡೆಯುತ್ತಿರಬೇಕೆಂಬುದಕ್ಕೆ ಅನೇಕ ಅಂತರ್ರಾಷ್ಟ್ರೀಯ ಕಾಯದೆಗಳು ಆದುದಿವೆ. ಆದರೆ ಅವುಗಳಲ್ಲಿ [illegible] ನಿಯಮಗಳು ಈಗ ಮೂಲೆಗುಂಪಾಗಿವೆ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

20—6—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೦—೬—೧೯೪೧

ಜಿಲ್ಲೆಯ ನೆರೆಹಾವಳಿಯ ಕೆಲವು ವಿವರಗಳು

ಲಕ್ಷಾಂತರ ರೂಪಾಯಿಗಳ ನಷ್ಟ! ಮನೆಮಾರುಗಳು ಹೋಗಿವೆ!

ಜನ ಜಾನುವಾರುಗಳ ಪ್ರಾಣಹಾನಿಯೂ ಒದಗಿದೆ!

ಅನಾಥರಾದ ಜನರಿಗೆ ಸಹಾಯವಿತ್ತು ಸಂರಕ್ಷಿಸಿರಿ!

ದಕ್ಷಿಣ ಕನ್ನಡ ಜಿಲ್ಲೆಯ ಗುರ್ಪುರ ಹೊಳೆ, ಫಲ್ಗುಣಿ ಹೊಳೆ, ಸೀತೆ ಹೊಳೆ, ಚೆರ್ವತ್ತೂರು ಹೊಳೆ ಮೊದಲಾದವುಗಳಲ್ಲಿ ಹಾಗೂ ಅನೇಕ ಸಣ್ಣ ದೊಡ್ಡ ತೋಡುಗಳಲ್ಲಿ ಅಕಸ್ಮಾತ್ ಅಪರಿಮಿತವಾಗಿ ನೆರೆಯ ನೀರು ಉಕ್ಕಿಬಂದು ಜಿಲ್ಲೆಯಲ್ಲಿ ಸಾವಿರಾರು ಮಂದಿ ಮನೆಮಾರುಗಳಿಲ್ಲದೆ, ಕೃಷಿ ಕೈಗಾರಿಕೆಗಳಿಲ್ಲದೆ, ಅನ್ನಬಟ್ಟೆಗಳಿಲ್ಲದೆ ನಿರ್ಗತಿಕರಾಗಿ ಕಂಗೆಡುತ್ತಿದ್ದಾರೆ. ಹಳ್ಳಿಹಳ್ಳಿಗಳೇ ನೆರೆಯ ತೀವ್ರ ಪ್ರಕೋಪಕ್ಕೆ ಗುರಿಯಾಗಿ ಕೊಚ್ಚಿಹೋಗಿವೆ. ಗದ್ದೆಗಳಲ್ಲಿರುವ ನಟ್ಟಿನೇಜಿಗಳು ಧ್ವಂಸವಾಗಿ ಹೊಯ್ಗೆ ಕೆಸರುಗಳು ತುಂಬಿವೆ. ಅಡಿಕೆ ತೆಂಗು ತೋಟಗಳು ಬುಡಸಹಿತ ಕಿತ್ತುಹೋಗಿವೆ. ಸಣ್ಣ ಸಣ್ಣ ಮನೆಗಳು ಮಾತ್ರವಲ್ಲದೆ ದೊಡ್ಡ ದೊಡ್ಡ ಕಟ್ಟಡಗಳೂ ನೆರೆಯ ನೀರಿಗೆ ಆಹುತಿಯಾಗಿವೆ. ಒಕ್ಕಲಿಗರು ಮನೆಮಾರುಗಳನ್ನು, ನಟ್ಟಿನೇಜಿಗಳನ್ನು, ಎತ್ತು ಕೋಣಗಳನ್ನು, ದನ ಕೋಳಿಗಳೇ ಮೊದಲಾಗಿ ಸರ್ವಸ್ವವನ್ನು ಕಳಕೊಂಡು ಕಂಗೆಡುತ್ತಾರೆ. ಹಲವಾರು ಜನರ ಪ್ರಾಣ ಹಾನಿಯೂ ಆಗಿದೆ. ಈಗಲೂ ರೋಮಾಂಚಕ ಸುದ್ದಿಗಳು ಬರುತ್ತಾ ಇವೆ. ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ಈ ಕಂಗಾಲಾದ ಜನರಿಗೆ ಸರ್ವವಿಧದ ಸಹಾಯವನ್ನು ಕೊಡದೆ ಇದ್ದರೆ ಜಿಲ್ಲೆಯಲ್ಲಿ ಭೀಕರ ದಾರಿದ್ರ್ಯವು ತಲೆದೋರುವುದೆಂಬುವಕ್ಕೆ ಏನೇನೂ ಸಂಶಯವಿಲ್ಲ.

ಈ ನೆರೆಯು ೧೯೨೩ರ ದೊಡ್ಡ ನೆರೆಯನ್ನೂ ಮೀರಿಸಿದೆ. ನಮ್ಮ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಇದರಿಂದ ಅನರ್ಥವಾಗಿದೆ. ಉಡುಪಿ, ಕುಂದಾಪುರಗಳಲ್ಲಿ ನೆರೆಹಾವಳಿಯ ವಿಷಯ ಇದುವರೆಗೆ ಸುದ್ದಿ ಬರಲಿಲ್ಲವಲ್ಲದೆ ಮಿಕ್ಕ ಕಡೆಗಳಲ್ಲಿ ಆದ ಅವಸ್ಥೆಗಳು ಹೇಳಿ ತೀರದಂತಿವೆ. ಜಿಲ್ಲೆಯಲ್ಲಿ ಅಷ್ಟೇನೂ ವಿಪರೀತವಾಗಿ ಮಳೆ ಬಂದಿರಲಿಲ್ಲ. ಮೂರು ನಾಲ್ಕು ದಿನಗಳು ವಿಪರೀತ ಗಾಳಿ ಬೀಸುತ್ತಿತ್ತು. ಒಮ್ಮೆಗೇ ಮೋಡಗಳು ಘಟ್ಟದ ಕಡೆಗೆ ಸಾಗಿ ಅಲ್ಲಿ ಅವುಗಳು ಒಡೆದು ಮಳೆ ಬಿದ್ದು ಕೆಳಗೆ ನದಿಗಳಲ್ಲಿ ನೀರು ಉಕ್ಕಿ ಹರಿದುಬಂದು ಹೀಗೆ ಅಕಸ್ಮಾತ್ತಾಗಿ ಈ ಅನರ್ಥವು ಉಂಟಾಗಿರುತ್ತದೆ.

ಜಿಲ್ಲೆಯಲ್ಲಿ ವಿಶೇಷವಾಗಿ ನಷ್ಟ ಹೊಂದಿದ ಸ್ಥಳಗಳು ಗುರ್ಪುರ ಹೊಳೆ, ಸೀರೆಹೊಳೆ, ಚೆರ್ವತ್ತೂರು ಹೊಳೆ ಇವುಗಳ ದಡಗಳಲ್ಲಿರುವ ಹಲವಾರು ಹಳ್ಳಿಗಳು. ವೇಣೂರಲ್ಲಿ ಇಡೀ ಊರಲ್ಲಿ ಒಂದೇ ಒಂದು ಮನೆ ಮಾತ್ರ ನೆರೆಗೆ ಹೋಗದೆ ಬಾಕಿಯುಳಿದಿದೆ. ಇಲ್ಲಿ ಸಾಮಾನ್ಯ ೧½ ಲಕ್ಷ ರೂಪಾಯಿಗಳಿಗಿಂತ ಮಿಕ್ಕಿ ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಇಲ್ಲಿ ಪ್ರಾಣಹಾನಿಗಳಾಗಿರದಿದ್ದರೂ, ಬದುಕಿ ಉಳಿದಿರುವ ಸಾವಿರಾರು ಮಂದಿ ಅನ್ನಬಟ್ಟೆಗಳಿಲ್ಲದೆ ಅನಾಥರಾಗಿರುವರು. ಗುರುವಾಯನಕೆರೆ ಮೂಡಬಿದರೆ ಮಂಗಳೂರು ಕಡೆಯಿಂದ ಕೆಲವು ಸಹಾಯ ಬಂದುದರಿಂದ ಸದ್ಯ ಅವರು ಜೀವನಧಾರಣೆ ಮಾಡುತ್ತಾರೆ.

ಗುರ್ಪುರದಲ್ಲಿ ಉಳಿಯ ಚೆಟ್ಟು, ಮಲ್ಲೂರು, ಮಳೂರು, ಪೊಳಲಿ, ಕಂದಾವರ, ಕೊಳಂಬೆ, ಮುಣೇಲ್, ಅರಳ, ಅದ್ಯಪಾಡಿ ಈ ಊರುಗಳಲ್ಲೆಲ್ಲಾ ಹೇಳಿ ತೀರದಷ್ಟು ಹಾವಳಿಯೊದಗಿದೆ. ವಿವರ ಬರದಿದ್ದರೂ ತಿಳಿದುಬಂದ ಮಟ್ಟಿಗೆ ನೂರಕ್ಕೆ ಮಿಕ್ಕಿದ ಮನೆಗಳೂ, ಅನೇಕ ದೋಣಿಗಳೂ, ಜನ ಜಾನುವಾರುಗಳೂ ನಷ್ಟವಾಗಿವೆ. ಅಕ್ಕಿಮುಡಿ, ಬೀಜ, ನೇಜಿಗಳೆಷ್ಟೋ ಹೋಗಿವೆ.

ಕಾಸರಗೋಡಿನ ಸೀರೆಹೊಳೆ, ಚಂದ್ರಗಿರಿಹೊಳೆ, ಚೆರ್ವತ್ತೂರು ಹೊಳೆಗಳ ದಡದ ಹಳ್ಳಿಗಳಲ್ಲಿ ಮಾತ್ರವಲ್ಲದೆ, ಪೆರಡಾಲು, ನಾರಂಪಾಡಿ, ಮದೂರು ಮೊದಲಾದ ಸಣ್ಣ ಹೊಳೆಗಳ ದಡದ ಹಳ್ಳಿಗಳಲ್ಲಿಯೂ ವಿಪರೀತ ನಷ್ಟವಾಗಿದೆ. ಪುತ್ತಿಗೆ, ಬಂಬ್ರಾಣ, ಹೇರೂರು, ಕುಡಾಲುಮೊಗ್ರಾಲುಗಳಲ್ಲಿ ಮನೆಗಳು ಹಲವು ಕೊಚ್ಚಿಹೋದದ್ದು ಮಾತ್ರವಲ್ಲದೆ, ನಟ್ಟಿ ನೇಜಿಗಳು ಜನ ಜಾನುವಾರುಗಳೂ ನೀರ ಪಾಲಾಗಿವೆ. ಪೆರಡಾಲಿನಲ್ಲಿ ಒಂದು ಬ್ರಾಹ್ಮಣರ ಮನೆಯ ಮಂದಿಯೆಲ್ಲರೂ ನೀರಪಾಲಾಗಿರುವರು. ಸೀರೆಹೊಳೆಯಲ್ಲಿ ಒಂದು ಮಾಪಿಳ್ಳೆಯರ ಕುಟುಂಬವೂ ಹಾಗೆಯೇ ಆಗಿದೆ. ದೂರದಿಂದ ಹೊಳೆ ನೀರಿನಲ್ಲಿ ಹೆಣಗಳು (ಜನಜಾನುವಾರುಗಳ) ಮನೆ ಸಾಮಾನುಗಳು ಇತ್ಯಾದಿಗಳು ಅಗಣಿತವಾಗಿ ತೇಲಾಡಿ ಬರುತ್ತಿದ್ದವು.

ಮೇಲಿಂದ ಮೇಲೆ ನಾವು ತಿಳಿದ ವಿವರಗಳಿಂದ ಈ ವರದಿಯನ್ನು ಕೊಟ್ಟಿದ್ದೇವೆ. ಎಷ್ಟೋ ಬಯಲುಗಳು ಇನ್ನು ನಾಲ್ಕೈದು ವರ್ಷಗಳ ವರೆಗೆ ಕೃಷಿ ಮಾಡಲು ಅಸಾಧ್ಯವಾಗಿರುವಂತೆ ಕೆಸರು ಹೊಯಿಗೆಗಳಿಂದ ತುಂಬಿ ಹೋಗಿವೆ. ತೆಂಗಿನ ತೋಟಗಳನೇಕ ಕಿತ್ತು ಬಿದ್ದಿವೆ. ಜನರಿಗೆ ಹೆಚ್ಚಾಗಿ ನಮ್ಮ ಜಿಲ್ಲೆಯ ಹಳ್ಳಿಯ ಬಡ ಬೇಸಾಯಗಾರರಿಗೆ ಒದಗಿದ ಈ ಸಂಕಷ್ಟಗಳು ಅತ್ಯಂತ ಕರುಣಾಜನಕವಾಗಿದೆ; ಭೀಷಣವಾಗಿದೆ!

ನಮ್ಮ ಜಿಲ್ಲೆಯು ಹೆಚ್ಚಿನ ಸಿರಿಸಂಪತ್ತಿನಿಂದ ಕೂಡಿದುದಲ್ಲ. ದಿನದಿನದ ಕೆಲಸ ಮಾಡಿ ಉಣ್ಣುವ ಜನರೇ ಹೆಚ್ಚು. ಅದರಲ್ಲಿ ಹಳ್ಳಿಯ ಕೃಷಿಯು ನಮ್ಮ ಜಿಲ್ಲೆಯ ಜೀವನಾಧಾರ. ಇವರಿಗೆ, ಈ ರೀತಿಯಲ್ಲಿ ಬಂದ ಸಂಕಷ್ಟದಿಂದ ಭೀಷಣ ದಾರಿದ್ರ್ಯವು ತಲೆದೋರಬಹುದೆಂಬ ಅಂಜಿಕೆ ಹುಟ್ಟುತ್ತದೆ. ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಮುಂದಿನ ವರ್ಷ ಬೆಳೆ ಉತ್ಪತ್ತಿಗಳೇನೂ ಇಲ್ಲವಾದರೆ, ಮಾಡುವುದು ಅಸಾಧ್ಯವಾದರೆ, ಮಾಡಲು ಸಾಕಷ್ಟು ಸಹಾಯಗಳು ಒದಗದಿದ್ದರೆ, ಹಳ್ಳಿಯ ಬೇಸಾಯಗಾರರು ತೀರಾ ಕಂಗಾಲಾಗುವುದಲ್ಲದೆ ಅವರಿಗೆ ಬೇರೆ ಗತಿಯೇನೇನೂ ತೋರುವುದಿಲ್ಲ.

ನಮ್ಮ ಜಿಲ್ಲೆಯ ಈ ಜನರ ಸಂಕಷ್ಟವನ್ನು ಜಿಲ್ಲೆಯ ಮಹಾಜನರೆಲ್ಲರೂ ಅವಶ್ಯ ಗಮನಿಸಬೇಕು. ಜಿಲ್ಲೆಯ ಹೊರಗಡೆಯಿಂದಲೂ ನಾವು ಸಹಾಯಕ್ಕಾಗಿ ಪ್ರಾರ್ಥನೆ ಮಾಡಿಕೊಳ್ಳಬೇಕು. ಸರಕಾರದವರು ತೀವ್ರವಾಗಿ ಮುಂದೆ ಬಂದು ಸಹಾಯವನ್ನು ಒದಗಿಸಿಕೊಡಬೇಕು. ಸಾರ್ವಜನಿಕ ಕೆಲಸಗಾರರು ಈ ಅನರ್ಥದ ಸಂದರ್ಭದಲ್ಲಿ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಜರೂರಿನಿಂದ ಮಾಡಬೇಕು. ಒಂದಿಷ್ಟು ಸಮಯವನ್ನು ವಿಲಂಬ ಮಾಡಿದರೂ ಬಹಳ ಅನರ್ಥಗಳು ಆಗುವವು. ನಮ್ಮ ಜಿಲ್ಲೆಯನ್ನು ಬಂದೊದಗಿದೀ ಸಂಕಷ್ಟದಿಂದ ಪಾರು ಮಾಡುವುದು ಎಲ್ಲರ ಕರ್ತವ್ಯವಾಗಿದೆ; ಜೀವಿತ ಧರ್ಮವಾಗಿದೆ. ಎಲ್ಲರ ಪಾಲಿಗೆ ಬಿದ್ದಿರುವ ಪ್ರಬಲವಾದ ಹೊಣೆಗಾರಿಕೆಯಾಗಿದೆ. ಕಾಂಗ್ರೆಸು ಸ್ವಯಂಸೇವಕರು ಈಗಾಗಲೇ ನೆರೆಯ ಹಾವಳಿಯಿಂದ ಆರ್ತರಾದ ಜನರಿಗೆ ಸಹಾಯವನ್ನು ಕೊಡುವ ಕಾರ್ಯದಲ್ಲಿ ನಿರತರಾಗಿ ದುಡಿಯುತ್ತಿರುವುದು ಅಭಿನಂದನೀಯವಿದೆ. ಮಹಾಜನರೆಲ್ಲರೂ ಉದಾರ ಬುದ್ಧಿಯಿಂದ ಸಹಾಯಗಳನ್ನು ಒದಗಿಸುವರಾಗಿ ಪ್ರಾರ್ಥನೆಯಿದೆ.

—K. K. Rai.

ನೋಟೀಸು

ದಿ ಅತ್ತೂರು ಎಂಡ್ ಜವಾಹರ್ ಬೇಂಕ್ ಲಿಮಿಟೆಡ್, ಮಂಗಳೂರು

ವಹಿವಾಟಿನ ಕ್ಷೇತ್ರವನ್ನು ಮುಂದರಿಸಲು ನಮ್ಮ ಬೇಂಕಿನ ಶಾಖೆಯೊಂದನ್ನು ತಾ. 29—6—'41ಕ್ಕೆ ಕಂಕನಾಡಿ ಮಾರ್ಕೆಟಿನ ಎದುರಿನ ಬಿಲ್ಡಿಂಗಿನ ಮಾಳಿಗೆಯಲ್ಲಿ ತೆರೆಯೋಣಾಗುವುದೆಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಸದ್ರಿ ಆಫೀಸಿನಲ್ಲಿ ಎಲ್ಲಾ ತರದ ಬೇಂಕ್ ವಹಿವಾಟುಗಳು ನಡೆಸಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಅತೀ ಕಮ್ಮಿ ದರದಲ್ಲಿ ಸಾಲಕೊಡಲಾಗುವುದು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

(Sd.) A. VAIKUNTA PRABHU,
ಮೆನೆಜಿಂಗ್ ಡೈರೆಕ್ಟರ್.

ಸ್ವದೇಶಾಭಿಮಾನಿಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಸ್ವದೇಶಾಭಿಮಾನಿ

ತಾರೀಕು 20—6—1941

"ಜಲಪ್ರಳಯ!"

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ನದಿಗಳಲ್ಲಿ ನೀರು ಉಕ್ಕಿ ಬಂದು ಆದ ಅನಾಹುತದ ವಿಷಯವಾಗಿ ಕಳೆದ ಸಂಚಿಕೆಯಲ್ಲಿ ನಾವು ಕೆಲವು ಸಂಗತಿಗಳನ್ನು ಉಲ್ಲೇಖಿಸಿದ್ದೇವೆ. ಆದರೆ, ಇತ್ತೀಚೆಗೆ ತಿಳಿದು ಬಂದ ಹಲವು ವಿಷಯಗಳನ್ನು ಪರಿಶೀಲಿಸಿದರೆ, ನೆರೆಯ ದುರಂತದಿಂದ ಇಡೀ ದಕ್ಷಿಣ ಕನ್ನಡ ಜಿಲ್ಲೆಯೇ ಕಂಗೆಟ್ಟಿರುವುದಾಗಿ ಗೊತ್ತಾಗುತ್ತದೆ. ಒಟ್ಟು ಜಿಲ್ಲೆಯಲ್ಲಿ ಸಾವಿರಾರು ಮಂದಿ ಅನಾಥರಾಗಿರುವರೆಂದೂ, ಲಕ್ಷಾಂತರ ರೂಪಾಯಿಗಳ ನಷ್ಟವಾಗಿರುವುದೆಂದೂ, ಜನ ಜಾನುವಾರುಗಳ ಪ್ರಾಣಹಾನಿಯೊದಗಿರುವುದೆಂದೂ ಹೃದಯವಿದ್ರಾವಕ ವರದಿಗಳು ದಿನದಿಂದ ದಿನಕ್ಕೆ ಬರುತ್ತಾ ಇವೆ. ದಕ್ಷಿಣ ಕನ್ನಡದ ಬಡಬೇಸಾಯಗಾರರು ಇದರಿಂದ ಬಹಳ ಮಟ್ಟಿಗೆ ಕಂಗೆಟ್ಟಿರುವುದರಿಂದ, ಅವರನ್ನು ಬಂದೊದಗಿದೀ ಸಂಕಷ್ಟದಿಂದ ಪಾರುಮಾಡಿರೆಂದು ಜಿಲ್ಲೆಯ ಅಧಿಕಾರೀ ವರ್ಗದಲ್ಲಿ, ಸಾರ್ವಜನಿಕ ಕಾರ್ಯಕರ್ತರಲ್ಲಿ ಹಾಗೂ ಹತ್ತು ಸಮಸ್ತರಲ್ಲಿ, ಮಾತ್ರವಲ್ಲದೆ ಜಿಲ್ಲೆಯ ಹೊರಗಿನ ನಮ್ಮ ಬಾಂಧವರೆಲ್ಲರಲ್ಲಿಯೂ ನಾವು ಈ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇವೆ.

ಕಾಸರಗೋಡು, ಕಾರ್ಕಳ ಮತ್ತು ಮಂಗಳೂರು ಈ ಮೂರು ತಾಲೂಕುಗಳು ಬಹಳವಾಗಿ ನೆರೆಯ ಆಘಾತಕ್ಕೆ ನುಚ್ಚುನೂರಾಗಿವೆ. ಕಾಸರಗೋಡು ತಾಲೂಕಿನಲ್ಲಿ ಪಳ್ಳತ್ತಡ್ಕ ಮತ್ತು ಅಡ್ಕಸ್ಥಳ ಹೊಳೆಗಳಿಂದ ಕೂಡಿದ ಸೀರೆ ನದಿಯಲ್ಲಿಯೂ, ಕಾಸರಗೋಡಿನ ಹೊಸದುರ್ಗದಲ್ಲಿ ಅರಿಯಕಾವು ಮತ್ತು ಪೆರುಂಬಟ್ಟ ಹೊಳೆಗಳಿಂದ ಕೂಡಿದ ಕರಿಯಂಗೋಡು ನದಿಯಲ್ಲಿಯೂ, ಪಶ್ಚಿಮ ಘಟ್ಟದಿಂದ ಹುಟ್ಟಿ ಕಾರ್ಕಳ ಮಂಗಳೂರು ತಾಲೂಕುಗಳಲ್ಲಿ ಪ್ರಬಲವಾಗಿ ಹರಿಯುವ ಗುರ್ಪುರ ನದಿಯಲ್ಲಿಯೂ ಜೂನ್ ೧೦ರಂದು ರಾತ್ರಿಹೊತ್ತು ಮರುದಿನ ಹಗಲುಹೊತ್ತು ಅನಿರೀಕ್ಷಿತವಾದ ಅಕಸ್ಮಾತ್ ನೆರೆಯ ನೀರು ಉಕ್ಕಿಬಂದು ೧೯೨೩ರ ಇಸವಿಯಲ್ಲಿ ದಕ್ಷಿಣ ಕನ್ನಡದಲ್ಲಿ ಉಂಟಾದ ಜಲಪ್ರಳಯದ ಮೇರೆಯನ್ನೂ ಮೀರಿ ಈ ಅನರ್ಥ ಪರಂಪರೆಗಳನ್ನು ಹುಟ್ಟಿಸಿತು.

ಇತ್ತೀಚೆಗೆ ಪೋಲೀಸ್ ನೌಕರೊಬ್ಬನ ವಿಷಾದಕರ ಮರಣದಿಂದಾಗಿ, ಮಲಬಾರ್ ಸ್ಪೆಶಲ್ ಪೋಲೀಸರ ವಿಶೇಷಾಧಿಕಾರ ನಡೆದು ಬಹಳವಾಗಿ ಪ್ರಸಿದ್ಧಿ ಹೊಂದಿದ್ದ ಕರಿಯಂಗೋಡು ನದಿಬಳಿಯ ಕೈಯ್ಯೂರು ಗ್ರಾಮವೂ ಅದರ ನೆರೆಯ ಗ್ರಾಮಗಳಾದ ಕಿನಿಯೂರು, ಅಲೆರಿ, ಚಾಮೆಣಿ ಚಾತೋತ್ ಮತ್ತು ಹಲವು ಗ್ರಾಮಗಳೂ ನೆರೆಯಿಂದ ವಿಪರೀತವಾದ ಆಘಾತಕ್ಕೆ ಒಳಗಾಗಿವೆ. ಕೈಯ್ಯೂರು ಗ್ರಾಮವೊಂದರಲ್ಲಿಯೇ ೩೦ ಮನೆಗಳು ಕೊಚ್ಚಿಹೋಗಿ ಉಳಿದ ೩೦ ಮನೆಗಳೂ ಉರುಳಿಬಿದ್ದಿವೆ. ಮಾಯಿಲ್ ಎಂಬಲ್ಲಿ ೬೦ ಮನೆಗಳು, ಪಾಡಾವು ಮತ್ತು ಪೆದವೂರು ಎಂಬಲ್ಲಿ ೭೦ ಮತ್ತು ೩೦ ಮನೆಗಳು ಸಂಪೂರ್ಣ ನಿರ್ನಾಮವಾಗಿವೆ. ಚೆಮೆನಿ ಮತ್ತು ಕಿಮಲ್ಲಿ ಗ್ರಾಮಗಳಲ್ಲಿ ಸಾಧಾರಣ ೭೦ ಮನೆಗಳು ಹಾಳುಬಿದ್ದಿವೆ. ಒಟ್ಟಿನಿಂದ ೧,೫೦೦ ಜನರು ಅನಾಥರಾಗಿರುವರು. ನೆರೆಯಿಂದ ಬದುಕಿ ಉಳಿದವರಿಗೆ ಉಟ್ಟ ಬಟ್ಟೆ ಮಾತ್ರವಲ್ಲದೆ ಬೇರೇನೂ ಉಳಿದಿಲ್ಲವಾಗಿ ತಿಳಿದಿದೆ.

ಕಾಸರಗೋಡು ತಾಲೂಕಿನ ಸೀರೆ ನದಿಯ ದಡದಲ್ಲಿರುವ ಗ್ರಾಮಗಳ ಅವಸ್ಥೆಯನ್ನೂ ಹೇಳತೀರದಂತಾಗಿದೆ. ಪುತ್ತಿಗೆ, ಬಂಬ್ರಾಣ, ಪೆರಡಾಲ, ಕುಂಬಡಾಜೆ, ಹೇರೂರು, ಅಂಗಡಿಮೊಗರು, ಇಚ್ಲಂಗೋಡು, ಮುಗು, ಪಡ್ರೆ, ಕೂಡ್ಲು, ಎಣ್ಮಕಜೆ, ಮಧೂರು ಈ ಗ್ರಾಮಗಳೆಲ್ಲಾ ವಿಪರೀತ ನಷ್ಟವಾಗಿದೆ. ೫೦೦ಕ್ಕೆ ಕಡಿಮೆಯಿಲ್ಲದಷ್ಟು ಮನೆಗಳು ಕೊಚ್ಚಿಹೋಗಿ ಲಕ್ಷಾಂತರ ರೂಪಾಯಿಗಳ ನಷ್ಟವೊದಗಿ ೨ ಸಾವಿರಕ್ಕೆ ಮಿಕ್ಕಿದ ಜನರು ಅನಾಥರಾಗಿರುವರು. ಗದ್ದೆಗಳಲ್ಲಿ ಕೆಸರು ಮಣ್ಣು ಬಿದ್ದು, ಕೆಲವು ಕಡೆಗಳಲ್ಲಿ ಮಣ್ಣು ಕೊರೆದುಹೋಗಿ ಕೆಲವು ವರ್ಷಗಳ ವರೆಗೆ ಬೆಳೆಯ ಭಾಗ್ಯವನ್ನುಣ್ಣುವುದೂ ಸಂಭವವಿಲ್ಲದ ಪರಿಸ್ಥಿತಿಯೊದಗಿದೆ.

ಗುರ್ಪುರ ನದಿಯ ದಂಡೆಯಲ್ಲಿ ಅಮ್ಮುಂಜೆ, ಅರಂಬಾಡಿ, ಕುಕ್ಕುಡೆ, ನಿಟ್ಟಡೆ, ಮುಡುಕೋಡಿ, ಪರಾರಿ ಬೈಲು ಪುಚ್ಚಮೊಗರು ಮತ್ತು ಇತಿಹಾಸ ಪ್ರಸಿದ್ಧ ಕ್ಷೇತ್ರ ವೇಣೂರು ಮಾತ್ರವಲ್ಲದೆ ಮೂಲೂರು, ಕಡವಾರ್, ಬೊಂಡತ್ತಿಲ್ಲ, ಮಾಣೆಲ್, ಕರಿಯಂಗಳ, ಪೊಳಲಿ, ಅಡ್ಡೂರು, ಉಳಿಯ, ಅರ್ಲ, ತೆಂಕ ಮತ್ತು ಬಡಗಬಲ್ಲು ಇವುಗಳೂ ನೆರೆಯ ಹಾವಳಿಗೆ ಚೆನ್ನಾಗಿ ತುತ್ತಾಗಿವೆ. ೫೦೦ ಮಿಕ್ಕಿದ ಮನೆಗಳು ಹಾಳಾಗಿವೆ. ಸಾವಿರಾರು ಮಂದಿ ಅನಾಥರಾಗಿದ್ದಾರೆ. ಲಕ್ಷಾಂತರ ರೂಪಾಯಿಗಳ ನಷ್ಟವುಂಟಾಗಿ ಜನರು ಕಂಗಾಲಾಗಿದ್ದಾರೆ.

ಒಟ್ಟಿನಿಂದ ಇದುವರೆಗೆ ತಿಳಿದುಬಂದಂತೆ ೭೦ಕ್ಕೆ ಮಿಕ್ಕಿ ಗ್ರಾಮಗಳು ನೆರೆಗೆ ತುತ್ತಾಗಿರುವುದು ೪೫ಕ್ಕೆ ಮಿಕ್ಕಿದ ಗ್ರಾಮಗಳು ಅಧಿಕ ನಷ್ಟಗಳನ್ನು ಹೊಂದಿರುವುದಾಗಿ ತಿಳಿದಿದೆ.

ಸರಿಯಾಗಿ ಎಷ್ಟು ಮಂದಿ ಸತ್ತಿದ್ದಾರೆಂದು ವಿವರಗಳು ಇನ್ನೂ ತಿಳಿದು ಬಂದಿಲ್ಲ. ಕೆಲವು ಕಡೆಗಳಲ್ಲಿ ನೆರೆಯ ನೀರಿನಲ್ಲಿ ಹೆಣಗಳು ಬಹಳವಾಗಿ ತೇಲಿಬರುತ್ತಿದ್ದುವೆಂದು ನೋಡಿದವರು ಹೇಳುತ್ತಾರೆ. ಮಾತ್ರವಲ್ಲದೆ ಸಮುದ್ರ ದಂಡೆಯಲ್ಲಿ ಕೆಲವು ಹೆಣಗಳು ಸಿಕ್ಕಿವೆ. ನಾರಂಬಾಡಿಯಲ್ಲಿ ಒಂದು ಬ್ರಾಹ್ಮಣರ ಕುಟುಂಬ, ಸೀರೆ ದಂಡೆಯಲ್ಲಿ ಒಂದು ಮಾಪಿಳ್ಳೆ ಕುಟುಂಬವೂ ಕಾಸರಗೋಡು ತಾಲೂಕಿನಲ್ಲಿ ನೆರೆಯ ನೀರಿಗೆ ಆಹುತಿಯಾಗಿದೆ. ಒಂದು ಗ್ರಾಮದಲ್ಲಿ ನೆರೆಯ ನೀರು ಉಕ್ಕಿ ಬಂದಾಗ, ಮನೆಯವರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದೆ, ಮಗುವೊಂದನ್ನು ಸಮೀಪದ ತೆಂಗಿನ ಮರಕ್ಕೆ ಕಟ್ಟಿ ನೀರಿಗೆ ಆಹುತಿಯಾದರೆಂದು ಸುದ್ದಿ ಕೇಳುತ್ತೇವೆ. ಇನ್ನು ಜಾನುವಾರುಗಳು ನೆರೆಗೆ ತುತ್ತಾಗಿರುವುದಕ್ಕೆ ಲೆಕ್ಕವೇ ಇಲ್ಲದಾಗಿದೆ. ಅಕಸ್ಮಾತ್ ಬಂದ ನೆರೆಯಿಂದಾಗಿ
ಜನರು ತಮ್ಮ ಪ್ರಾಣಗಳನ್ನು ಕಾಪಾ
ಕೊಳ್ಳುವುದೇ ಕಷ್ಟವಾಗಿರಲು, ಜಾನು
ವಾರುಗಳನ್ನೂ, ಮನೆಯ ಇತರ ಸಾಮ
ಗ್ರಿಗಳನ್ನೂ ಬೇರೆ ಯಾವುದನ್ನೂ ಉಳಿ
ಕೊಳ್ಳುವುದು ಯಾರಿಂದಲೂ ಆಗದ
ಇಷ್ಟೊಂದು ಅನರ್ಥವುಂಟಾಗಿರುತ್ತದೆ.

ವರ್ಷದ ಮೊದಲನೆಯ ಬೆಳೆಯಾದ
ಎಣೆಲು ಬೆಳೆಗೆ ಈ ಆಘಾತವುಂಟಾದ
ನಿಮಿತ್ತ ಬಹಳ ನಷ್ಟವಾದಂತಾಗಿದೆ
ನೆರೆಯ ನೀರು ಉಕ್ಕಿ ಬಂದ ಹಲವು ಕಡೆ
ಗಳಲ್ಲಿ ಕೆಸರು ಮಣ್ಣುಗಳು ಬಿದ್ದು ಆ
ಸ್ಥಳಗಳನ್ನು ದುರುಸ್ತಿ ಮಾಡದ ವಿನಾ
ಕೆಲವು ಕಾಲದ ವರೆಗೆ ಬೆಳೆ ಬೆಳೆಸುವುದು
ಕಷ್ಟವೇ ಆಗಿರುವುದು. ಈ ವರ್ಷ
ಯಲ್ಲಿ ಸಾಕಷ್ಟು ಅಕ್ಕಿಯ ಸಂಗ್ರಹವಿಲ್ಲ
ವೆಂದು ಗಾಬರಿಬಿದ್ದಿರುವಲ್ಲಿ ನೆರೆಯ ಈ
ಅನರ್ಥದಿಂದ ಎಷ್ಟರಮಟ್ಟಿಗೆ ಕಷ್ಟಗಿರ
ಬಹುದೆಂದು ಊಹಿಸಿ ಕೊಳ್ಳಲು ಆಗು
ತ್ತದೆ.

ಶ್ರೀಗಳಾದ ಬಿ. ದಾಮೋದರ ಬಾಳಿ
ಗ, ಎಚ್. ಕೆ. ತಿಂಗಳಾಯ, ಡಾ.
ವಿಟ್ಠಲ್ ಶೆಟ್ಟಿ, ಬಿ. ವೈಕುಂಠ ಬಾಳಿಗ,
ಕೆ. ಜತ್ತಪ್ಪ ರೈ, ಎನ್. ಶೇಷಗಿರಿ ರಾವ್
ಎ. ದಾಮೋದರ ಕಾಮತ್, ಜಿ. ಗೋ
ಪಾಲ ಪೈ, ಕೆ. ಪಿ. ಕಾಮತ್, ಕಿಣ್ಣಣ್ಣ
ಶೆಟ್ಟಿ ಪಿ. ಸಿ. ಲೋಬೋ ಮೊದಲಾದವ
ರು ನೆರೆಯ ಹಾವಳಿಯಿಂದ ಸಂಕಷ್ಟಪಟ್ಟ
ಗ್ರಾಮಗಳನ್ನು ಸಂದರ್ಶಿಸಿ ಸಾಧ್ಯವಾದ
ಸಹಾಯಗಳನ್ನು ಮಾಡಲು ಪ್ರಯತ್ನಿ
ದ್ದಾರೆ. ಕಾಂಗ್ರೆಸು ಸ್ವಯಂಸೇವಕರು
ಬಿಡದೆ ಈ ಕಾರ್ಯದಲ್ಲಿ ನಿರತರಾಗಿ ದು
ಡಿಯುತ್ತಿದ್ದಾರೆ. ಜಿಲ್ಲಾ ಕಲೆಕ್ಟರರೂ ಕ
ಲವು ಜಿಲ್ಲೆಗಳನ್ನು ಸಂದರ್ಶಿಸಿ ಹಲ
ವು ಸಹಾಯಗಳನ್ನು ಕೊಡಲು ಪ್ರಯ
ತ್ನಿಸುತ್ತಿದ್ದಾರೆಂದು ಕೇಳುತ್ತೇವೆ. ಅನೇಕ
ಮಂದಿ ಮಂಗಳೂರಿನ ಪ್ರಮುಖರು, ಸಾ
ಹುಕಾರರು ಮಜೂರರೂ ಈಗಾಗಲೇ
ಸಾಧ್ಯವಾದ ಸಹಾಯಗಳನ್ನಿತ್ತಿರುವರು.

ನಮ್ಮ ಜಿಲ್ಲೆಯಲ್ಲಿ ಬಂದೊದಗಿದ
ಮಹಾನರ್ಥಕ್ಕೆ ಬಹಳ ಮಂದಿ ತುತ್ತಾ
ಕಂಗೆಟ್ಟಿರುವುದರಿಂದ, ಜಿಲ್ಲೆಯವರೂ
ಜಿಲ್ಲೆಯವರಾಗಿ ಹೊರಗಿನ ಸ್ಥಳಗಳಲ್ಲಿ
ರುವ ಮಹನೀಯರೂ ಮಾತ್ರವಲ್ಲದೆ
ಇತರ ಜಿಲ್ಲೆಯ ಬಾಂಧವರೂ ಉದಾರ
ಸಹಾಯವಿತ್ತು ಕಂಗೆಟ್ಟ ದಕ್ಷಿಣ ಕನ್ನಡ
ದ ಜನರಿಗೆ ಬದುಕುವ ದಾರಿ ತೋರಿ
ಸಲು ಮುಂದೆ ಬರಬೇಕಾಗಿ ನಾವು
ಪುನಃ ಕೇಳಿಕೊಳ್ಳುತ್ತೇವೆ.

THE

Canara Banking Corporation Limited

(Incorporated in British India)

ESTD. 1906.

HEAD OFFICE: **UDIPI**, South Kanara.

SEASON DEPOSITS

ARE now accepted at all our Offices at the following rates of interest :

2 & 3 months	... ...	3% p. a.
4 & 5 ,,	... ...	3½% p. a.

These deposits will not be allowed to run beyond September 1941.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ
ಬೇಕಾದರೆ ಇಂದೇ
ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

ಸತ್ಯಾಗ್ರಹಗಳ ಕೆಲವು ರೋಮಾಂಚಕ ಘಟನೆಗಳು!

ಶ್ರೀ. ಮಹಾದೇವ ದೇಸಾಯಿಗಳು ತಿಳಿಸುತ್ತಾರೆ

ದಿಲ್ಲಿ ಯಾತ್ರಿಕರ ದೃಢಪ್ರತಿಜ್ಞೆ!

"ಸತ್ಯಾಗ್ರಹ ಆಂದೋಲನವು ಮಂದಗತಿಯಿಂದಾದರೂ ಖಂಡಿತವಾಗಿ ಮುಂದೆ ಸಾಗುವುದು. ಅದಿಷ್ಟತರೂಪದಿಂದ ಸತ್ಯಾಗ್ರಹವು ನಡೆಯಬೇಕೆಂದು ಉದ್ದೇಶಪಟ್ಟಿರಲೇ ಇಲ್ಲ. ಸಣ್ಣದಾಗಿದ್ದರೂ ಇದು ಯಾವುದಕ್ಕಾಗಿ ಆರಂಭವಾಯಿತೋ ಅದಕ್ಕೆ ಇದೀ ಜನತೆಯನ್ನು ಉದ್ರೇಕಿಸುವುದು. ಇದು ಯಾವುದೇ ತರದ ತೊಂದರೆಯನ್ನುಂಟು ಮಾಡಲಾರದು. ಅಜ್ಞಾನಿಗಳಾದ, ದೋಷದರ್ಶಿಗಳಾದ ನಿಂದಕರು ದೊಂಬಿಗಳ ಕಾರಣವು ಸತ್ಯಾಗ್ರಹವೆಂದು ದೂರಿಡುತ್ತಾರೆ. ಯಾವುದೇ ಒಂದು ದೊಂಬಿಯುಲ್ಲಾದರೂ ಈ ಸಂದರ್ಭವು ಪ್ರತ್ಯಕ್ಷವಾಗಲಿ ಅಪ್ರತ್ಯಕ್ಷವಾಗಲಿ ಬಂದಿಲ್ಲ. ಸತ್ಯಾಗ್ರಹವು ಜಯಹೊಂದಿದರೆ ಕಾಂಗ್ರೆಸಿನವರಿಗೂ ಕಾಂಗ್ರೆಸ್ ಇತರರಿಗೂ ಇದರಿಂದ ಲಾಭವಾಗುವುದು. ಇದು ಅಪಜಯ ಹೊಂದಿದರೆ (ಅಪಜಯ ಹೊಂದುವುದು ಸಾಧ್ಯವಿಲ್ಲ) ಅದರಿಂದ ಕಾಂಗ್ರೆಸಿನವರಿಗಲ್ಲದೆ ಇತರರಿಗೆ ಹಾನಿಯಿಲ್ಲ." ಹೀಗೆಂದು ಮಹಾದೇವ ದೇಸಾಯಿಗಳು ಸತ್ಯಾಗ್ರಹ ಆಂದೋಲನದ ವಿಷಯ ಬರೆಯುತ್ತಾ ಹೇಳಿರುವರು.

ಅವರು ತಮ್ಮ ಲೇಖನದಲ್ಲಿ ವಿವರಿಸಿರುವ ಕೆಲವು ಸಂಗತಿಗಳು ಇಂತಿವೆ:

'ಅನೇಕ ಕಡೆಗಳಲ್ಲಿ ದಿಲ್ಲಿ ಯಾತ್ರೆಗಳಿವೆ; ಎಂದರೆ ಅನೇಕರು ಬಂಧಿತರಾಗದೆ ಇದ್ದಾರೆ. ಇಂಥವರು ಕೆಲವು ಸಾವಿರ ಮಂದಿ ಮಾತ್ರ. ಹಲವರು ಇವರಲ್ಲಿ ಉಜ್ವಲ ಕೀರ್ತಿಯ ಶಿಖರವನ್ನೇರಿದ್ದಾರೆ. ನನಗೆ, ನನ್ನ ಮನಸ್ಸಿನಲ್ಲಿ ಶ್ರೀಮತಿ ದಮಯಂತಿ ಧರ್ಮಾಧಿಕಾರಿ ಮತ್ತು ಶ್ರೀಮತಿ [illegible]ಪೂತಿಧೋತ್ರೆ ಇವರ ನೆನಪು ಆಗುತ್ತದೆ. ಅವರು ಸತ್ಯಾಗ್ರಹದ ಹಾಗೂ ರಚನಾತ್ಮಕ ಕಾರ್ಯದ ಸಂದೇಶವನ್ನು ಎಂಭತ್ತು ಹಳ್ಳಿಗಳಲ್ಲಿ ಸಾರಿದ್ದಾರೆ. ಮಾರ್ಗವನ್ನು ಶುಚಿಮಾಡುವುದು; ಹರಿಜನ ವಸಾಹತ್ತುಗಳನ್ನು ಸಂದರ್ಶಿಸುವುದು, ಜನತೆಯನ್ನು ಕೂಡಿಸಿ ನೂಲುವುದು, ಅವರ ದಿನನಿತ್ಯದ ಕಾರ್ಯಕ್ರಮವಾಗಿದೆ. ಅವರ ಯಾತ್ರೆಯು ಒಳ್ಳೆಯ ಪರಿಣಾಮಕಾರಿಯಾಗಿದೆ; ಅವರ ಯಾತ್ರೆಯಿಂದ ನಾಲ್ಕು ದೇಗುಲಗಳಲ್ಲಿ ಹರಿಜನ ಪ್ರವೇಶವಾಗಿದೆ. ಅವರು ಹೋದ ಪ್ರತಿಯೊಂದು ಕಡೆಗಳಲ್ಲಿಯೂ ನೂಲುವ ಮತ್ತು ಖಾದಿಯ ಕಾರ್ಯಕ್ರಮಗಳ ವಾತಾವರಣವು ಉಂಟಾಗಿದೆ. ವೀರ ಸತ್ಯಾಗ್ರಹಿ ಜಕಟ್‌ದಾರರ ಸೊಸೆ ಶ್ರೀಮತಿ ಪ್ರಭಾವತಿ ಜಕಟ್‌ದಾರಳು ಹಳದ ಸಲ ಬಹಳ ಭಾರವಾದ ದಂಡವನ್ನು ತೆತ್ತು ತನ್ನ ಇಟ್ಟರು ಸೋದರಿಯರನ್ನು ಹಿಂಬಾಲಿಸಿ ಈ ಸಲ ಆರು ತಿಂಗಳ ಶಿಕ್ಷೆಯ ಪುಣ್ಯವನ್ನು ಗಳಿಸಿಕೊಂಡಿದ್ದಾಳೆ. ಅವರು ಈಗ ತಮ್ಮ ಉಜ್ವಲವಾದ ವಿಶ್ರಾಂತಿಯನ್ನು ನಾಗಪುರ ಸೆರೆಮನೆಯಲ್ಲಿ ಪಡೆಯುತ್ತಿದ್ದಾರೆ.

ದಿಲ್ಲಿಯ ಯಾತ್ರೆಗೆ ಹೊರಟವರಿಗೆ ಮಾಡತಕ್ಕ ಕಾರ್ಯಗಳು ಎಷ್ಟು ಕಷ್ಟದಾಯಕವಿರುವವೋ ಅಷ್ಟೇ ಆನಂದದಾಯಕವೂ ಇವೆ. ಬಂಗಾಳದ ಹಳ್ಳಿಯೊಂದರಲ್ಲಿ ಒಬ್ಬ ಸತ್ಯಾಗ್ರಹಿಯು— ಆ ಹಳ್ಳಿಯವರು ಸತ್ಯಾಗ್ರಹಿಯೊಬ್ಬನಿಗೆ ತಂಗಿಕೊಡಲು ಅಂಜಿದ್ದರಿಂದ—ಅನ್ನವಿಲ್ಲದೆ ಸಂಚರಿಸಬೇಕಾಯಿತು. ಆದರೆ ಆ ವೀರ ಸತ್ಯಾಗ್ರಹಿಯ ಧೈರ್ಯವು ಕಡೆಗೆ ಒಬ್ಬ ಜಮೀನ್ದಾರನ ಮನಸ್ಸನ್ನು ಕರಗಿಸಿ ಬಿಟ್ಟಿತು. ಅದರಿಂದ ಆ ಸತ್ಯಾಗ್ರಹಿಯು ಯಾವ ಯಾವ ಕಡೆಗೆ ಹೋಗುವನೋ ಅಲ್ಲಿಗೆಲ್ಲಾ ಆಹಾರವೊದಗಿಸುವ ಕಾರ್ಯವನ್ನು ಆ ಜಮೀನ್ದಾರನೇ ವಹಿಸಿಕೊಂಡನು. ಆಂಧ್ರದೇಶ ತಮಿಳುನಾಡುಗಳಲ್ಲಿ ನೂರಾರು ಸತ್ಯಾಗ್ರಹಿಗಳು ತಮ್ಮ ಜೀವನದಲ್ಲಿ ಇಂತಹ ಸಂಗತಿಗಳನ್ನು ಅನುಭವಿಸುತ್ತಿದ್ದಾರೆ. ತಮಿಳುನಾಡಿನಿಂದ ಬಂದ ವರದಿಯಿಂದ ಇಲ್ಲಿ ಒಂದು ಅಂಶ ಕೊಡುತ್ತೇನೆ: 'ಈ ತರದ ಸ್ವಾಗತವು ನಮಗೆ ದೊರಕುತ್ತದೆ. ನನ್ನ ಮನೆಗೆ ಬನ್ನಿ; ನನ್ನ ಹಳ್ಳಿಗೆ ಬನ್ನಿ; ಅಲ್ಲಿ ಈ ಘೋಷಣೆ ಮಾಡಿರಿ ಎಂದು ಜನರು ಹೇಳುತ್ತಾರೆ. ಗವರ್ನಮೆಂಟ್ ತಹಶಿಲ್ದಾರರು, ಡಿಪ್ಯುಟಿ ತಹಶಿಲ್ದಾರರು, ರೆವೆನ್ಯೂ ಇನ್ಸ್‌ಪೆಕ್ಟರರು, ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರರು, ಪೋಲೀಸು ಸಬ್ ಇನ್ಸ್‌ಪೆಕ್ಟರರು, ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರು, ಸ್ಥಳೀಕ ಗ್ರಾಮ ಆಸ್ಪತ್ರೆಗಳ ಡಾಕ್ಟರರೂ ಕೂಡಾ ಹಲವು ಸಲ ಹಳ್ಳಿಗಳಿಗೆ ಬರುತ್ತಾರೆ; ಮೊದಲು ಬಂದು ಒಮ್ಮೆ ತುಂಬಾ ಹಣ ತೆಕ್ಕೊಂಡು ಹೋದರು; ಆ ಮೇಲೆ ಯುದ್ಧ ನಿಧಿಗಾಗಿ ಆಡುವ ನಾಟಕದ ತಿಕೇಟು ಮಾರಾಟವಾಯಿತು; ಆ ಮೇಲೆ ಯುದ್ಧನಿಧಿ ಸೋತ್ತಿಯಾಯಿತು, ಆ ಬಳಿಕ ಅವರು ಭೂತೆರಿಗೆಯೊಡನೆಯೂ ಯುದ್ಧನಿಧಿ ಸಂಗ್ರಹಿಸತೊಡಗಿದ್ದಾರೆ.'

ದಿಲ್ಲಿ ಯಾತ್ರಿಕರ ವಿಷಯ ಹಲವು ತರದ ವರದಿಗಳು ಬರುತ್ತವೆ. ಕೆಲವು ಯಾತ್ರಿಕರು ವಿಚಾರಶೂನ್ಯ ಭಾಷಣಗಳನ್ನು ಮಾಡುತ್ತಾರೆಂದು ಆರೋಪವಿದೆ. ಕೇಂದ್ರ ಪ್ರಾಂತದ ಸರಕಾರವು ಈ ಸತ್ಯಾಗ್ರಹಿಗಳು ಸುಳ್ಳು ಸುದ್ದಿಗಳನ್ನು ಹರಡುತ್ತಾರೆಂದು ಆರೋಪ ಹಾಕಿದೆ. ಈ ವಿಷಯ ನಾವು ವಿಚಾರ ಮಾಡುತ್ತೇವೆ. ಆರೋಪಗಳು ನಿಜವಾಗಿದ್ದರೆ ನಿಜವಾಗಿಯೂ ನಾವು ದುಃಖಿಸುತ್ತೇವೆ. ಹೆಚ್ಚು ವಿದ್ಯಾಭ್ಯಾಸವಿಲ್ಲದ ಸತ್ಯಾಗ್ರಹಿಗಳು ಭಾಷಣ ಕೊಡಲು ಹೋಗಬಾರದು. ಹಿಂದುಸ್ಥಾನಿ ಭಾಷೆ ಕಲಿಯದೆ ವಿನಾ ಯಾರೂ ತಮ್ಮ ಪ್ರಾಂತವನ್ನು ಬಿಟ್ಟು ಹೊರಗೆ ಹೋಗಬಾರದು. ಕೆಲವರು ಇವರಲ್ಲಿ ಎಷ್ಟು ಸಾಹಸ ಮಾಡಿಯಾದರೂ ತಮ್ಮ ಗುರಿಗೆ—ದಿಲ್ಲಿಗೆ—ಮುಟ್ಟಲೇಬೇಕೆಂದು ದೃಢ ಸಂಕಲ್ಪ ಮಾಡಿದವರಿದ್ದಾರೆ. ಇಂತಹ ಸಂಗತಿಗಳಲ್ಲಿ ನಾನಿಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ನಲ್ಲಪೆರುಮಾಳ್ ಪಿಳ್ಳೆಯು ಒಬ್ಬ ತರುಣ ಸತ್ಯಾಗ್ರಹಿ; ಮನೆಯಲ್ಲಿ ಬಸುರಾದ ಹೆಂಡತಿ, ಮುದುಕಿ ತಾಯಿಯರಿಬ್ಬರನ್ನು ಬಿಟ್ಟು ಸತ್ಯಾಗ್ರಹಮಾಡಿ ಹೊರಟನು. ೨೦೦ ಮೈಲುಗಳ ವರೆಗೆ ಕಾಲ್ನಡೆಯಿಂದ ಹೋಗಿ, ಮನೆಯ ಸಂಪರ್ಕವನ್ನೇ ಕಳೆಕೊಂಡನು. ಹೆಂಡತಿ ಇಷ್ಟರಲ್ಲಿ ಗಂಡು ಮಗುವನ್ನು ಹೆತ್ತಳು. ಬಾಣಂತಿ ರೋಗ ಬಂದು ಅವತ್ತು ವಿಷಮವಾಯಿತು. ಮಿತ್ರರು ಮತ್ತು ಆಪ್ತರು ಗಂಡನನ್ನು ಹಿಂದೆ ಕರೆಯಲು ಪ್ರಯತ್ನಿಸಿದರು. ಆದರೆ ಆಕೆ ದೀರ್ಘ ನಿಶ್ವಾಸ ಬಿಟ್ಟು ಹೇಳಿದಳು: "ವಿಜಯವು ಸಿಗುವ ವರೆಗೆ ಹಿಂದೆ ಬರಲಾರೆನೆಂದು ಅವರು ಪ್ರತಿಜ್ಞೆ ಮಾಡಿ ಹೊರಹೊರಟಿದ್ದಾರೆ. ಅವರ ಕರ್ತವ್ಯದಿಂದ ಅವರನ್ನು ವಿಚಲಿಸಬೇಡಿರಿ. ಅವರ ಒಳ್ಳೆಯ ಹೆಸರು ಎಲ್ಲದಕ್ಕಿಂತಲೂ ನನಗೆ ಪ್ರಿಯವಾದದ್ದು" ಹೀಗೆಂದು ಹೇಳಿ ಒಂದು ತಾಸು ದಾಟುವುದರೊಳಗೆ ಆಕೆ ಮಗುವನ್ನಗಲಿ ಪ್ರಾಣ ಬಿಟ್ಟಳು. ಮುದುಕಿ ತಾಯಿ ಈ ದುಃಖವನ್ನು ಸಹಿಸದೆ ಗಟ್ಟಿಯಾಗಿ ಅತ್ತಳು. ಬೇಗನೇ ಅವಳೂ ತೀವ್ರ ಕಾಯಿಲೆಯಲ್ಲಿ ಬಿದ್ದಳು. ತಾನು ಸಾಯುವ ಮುನ್ನ ಮಗನನ್ನೊಮ್ಮೆ ನೋಡಬೇಕೆಂದು ಆಕೆ ಬಯಸಿದಳು. ಸತ್ಯಾಗ್ರಹಿಯ ಅಣ್ಣನು, ಅವನನ್ನು ಹುಡುಕಾಡಿ ಹೊರಟು, ಅವನಿಗೆ ಹೆಂಡತಿ ಸತ್ತ ವಿಷಯವನ್ನೂ, ತಾಯಿಯ ಅಪೇಕ್ಷೆಯನ್ನೂ, ಹೆಂಡತಿ ಅಂತ್ಯಸಂಸ್ಕಾರಕ್ಕೆ ಬರಬೇಕೆಂಬ ಸಂಗತಿಯನ್ನೂ ತಿಳಿಸಿದ. ಅವರು ಅಲ್ಲಿನ ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳಲ್ಲಿ ಅಪ್ಪಣೆಗಾಗಿ ಹೋದರು; ಅಪ್ಪಣೆ ದೊರಕಿತು; ಸತ್ಯಾಗ್ರಹಿ ಒಂದು ವಾರದ ರಜೆ ಪಡೆದು ಸಾಯುವ ತಾಯನ್ನು ನೋಡಲು ಹೆಂಡತಿಯ ಅಂತ್ಯಸಂಸ್ಕಾರ ಮುಗಿಸಿ ಮುಂದೆ ಯಾತ್ರೆಮಾಡಲು ನಿಶ್ಚಯಿಸಿ ಮನೆಗೆ ಒಮ್ಮೆ ಮರಳಿ ಬಂದನು."

ಇಂತಹ ಸಂಗತಿಗಳು ಹಲವಾರು ನಡೆದಿವೆ. ದಿಲ್ಲಿಗೆ ಶಾಂತರಾಗಿ ನಡೆವ ದೃಢ ನಿಶ್ಚಯ ಮಾತ್ರ ಸಾಲದು. ಈನಾಗಲೇ ಸಾವಿರಾರು ಬಂಧಿಸದ ಸತ್ಯಾಗ್ರಹಿಗಳಿದ್ದಾರೆ. ಈಗಲೂ ಸತ್ಯಾಗ್ರಹಿಗಳಾಗಲು ಜನರು ಮುಂದೆ ಬರುತ್ತಾರೆ. ಬಂಧಿತರಾಗದ ಸತ್ಯಾಗ್ರಹಿಗಳ ಹೊರೆಯನ್ನು ಹಳ್ಳಿಯವರ ಮೇಲೆ ಹೊರಿಸುವುದು ಸರಿಯೆ? ಅದಕ್ಕಾಗಿ ಮುಂದೆ ಸತ್ಯಾಗ್ರಹಿಗಳನ್ನು ಬೇಗನೇ ಆರಿಸುವುದಿಲ್ಲ. ದೊಂಬಿಗಳಾಗುವ ಸ್ಥಳಗಳಲ್ಲಿ ಸತ್ಯಾಗ್ರಹಗಳಿಲ್ಲ. ಸತ್ಯಾಗ್ರಹಿಯು ಜನರ ಹೃದಯದಲ್ಲಿ ಧೈರ್ಯವನ್ನು ತುಂಬಿಸಬೇಕು; ಗೊಂದಲವಾಗದಂತೆ ನೋಡಬೇಕು.

ಇಂದಿನ ಸತ್ಯಾಗ್ರಹಿಗಳೂ ಮುಂದಿನ ಸತ್ಯಾಗ್ರಹಿಗಳೂ ಮಾಡತಕ್ಕ ಹಲವು ಕರ್ತವ್ಯಗಳಿವೆ; ಅಗ್ನಿ ಪರೀಕ್ಷೆಗಳಿವೆ; ಅವರು ತಮ್ಮನ್ನು ಹಳ್ಳಿಗಳಲ್ಲಿ ಹೂತು ಬಿಡಬೇಕು; ದಾರಿ ಶುದ್ಧಮಾಡುವುದು, ಹರಿಜನ ವಸತಿಯನ್ನು ಸಂದರ್ಶಿಸುವುದು, ಮಾಡಿದ ಕೆಲಸಗಳ ದಿನಚರಿ ಬರೆಯುವುದು, ಮದ್ಯಪಾನ ಮಾಡದಂತೆ ಜನರಿಗೆ ಬೋಧಿಸುವುದು, ಜನತೆಯನ್ನು ಕೂಡಿಸಿ ನೂಲುವುದು, ಹಿಂದೂ ಮುಸ್ಲಿಂ ಐಕ್ಯಯತ್ನ ಮಾಡುವುದು. ಪ್ರತಿಯೊಬ್ಬ ಭಾವೀ ಸತ್ಯಾಗ್ರಹಿಯೂ ಈ ತರದ ಕಾರ್ಯ ಮಾಡಿದರೆ, ಅವರನ್ನು ಸತ್ಯಾಗ್ರಹ ಮಾಡುವ ಮೊದಲೇ ಸರಕಾರವು ಬಂಧಿಸದೆ ಬಿಡುವುದಿಲ್ಲ. ಅನೇಕ ಕಡೆಗಳಲ್ಲಿ ರಚನಾತ್ಮಕ ಕಾರ್ಯಗಳಲ್ಲಿದ್ದವರನ್ನು—ದೇವರಿಗೇ ಗೊತ್ತು ಯಾಕೆಂದು—ಸರಕಾರದವರು ಬಂಧಿಸಿದ ಸಂದರ್ಭಗಳಿವೆ."

ನೂರಾರು ಬಣ್ಣಗಳಿಂದ ರಂಜಿತವಾದ

ತಿರುಪತಿ

ವೆಂಕಟರಮಣ

ದೇವರ ಭಾವಚಿತ್ರಗಳು!

ಭಗವದ್ಭಕ್ತರ ಮನೆಮನೆಗಳಲ್ಲಿ ಇವು ವಿರಾಜಿಸುವುದು ಅವಶ್ಯವಾಗಿದೆ.

ವೆಂಕಟರಮಣ ದೇವರ ಚಿತ್ರಗಳಿಂದ ಕೂಡಿದ ಕೆಲೆಂಡರುಗಳೂ ಸಿಗುತ್ತವೆ.

ಮಾದರಿ ಪ್ರತಿಗಳನ್ನು ಬಯಸುವವರು [illegible] ಪಾವಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯುವುದು.

ಮುಲ್ಕಿ ಗಣಪತಿ ಶ್ರೀನಿವಾಸ ಕುಡ್ವ
ಜನರಲ್ ಮರ್ಚೆಂಟ್,
ಉಡುಪಿ ದ. ಕ.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

ವಾರದ ಕತೆ

ಇಬ್ಬರು ಸಹೋದರರು

ಲೇಖಕ ಪ್ರಮೋದ ಕುಮಾರ

ಅವರಿಬ್ಬರಲ್ಲಿ ಶ್ರೀನಿವಾಸ ಹಿರಿಯವ. ಬಾಲಕೃಷ್ಣ ಕಿರಿಯವ. ಇಬ್ಬರೂ ಓದಿದವರು. ಡಿಗ್ರಿಯನ್ನು ಪಡೆದರೂ ನಿರುದ್ಯೋಗಿಗಳ ಸಂಖ್ಯೆಯಲ್ಲಿ ಇವರೂ ಸೇರಿ ಹೋಗಿ ಕಂಗಾಲಾದರು. ತಂದೆ ಸಾಯುವ ಕಾಲಕ್ಕೆ ಅವರಿಗೆ ತಮ್ಮದೆನ್ನುವುದೇನೂ ಉಳಿದಿರಲಿಲ್ಲ.

ಕಡೆಗೆ ಒಮ್ಮೆ—'ಪರವೂರಿಗೆ ಹೋಗಿ ಇದ್ದು ಬಿಡೋಣ. ಏನಾದರೂ ಕೆಲಸ ಸಿಕ್ಕಿದರೂ ಸಿಕ್ಕಬಹುದು. ನಮ್ಮ ಹುಟ್ಟೂರು ನಮ್ಮನ್ನು ಏಳಿಗೆಗೆ ಕರವಂತಿಲ್ಲ.' ಎಂದು ಸೀನಣ್ಣ ಹೇಳಿದನು. ಬಾಲಪ್ಪ ಅಹುದೆಂದು ಒಪ್ಪಿಕೊಂಡನು. ಇಬ್ಬರೂ ಊರುಬಿಟ್ಟು ದೇಶಾಂತರ ಹೊರಟರು ಹೊರಟು ಬರುವಾಗಲಾದರೂ, "ನೀವು ಹೋಗುತ್ತೀರಾ?" ಎಂದಾದರೂ ಒಮ್ಮೆ ಕೇಳುವವರು ಯಾರೂ ಇರಲಿಲ್ಲ ಅವರ ಊರೇ ಅವರಿಗೆ ಮುನಿದಂತಿತ್ತು, ಸೋದರರಿಬ್ಬರೂ ಮುಂಬಯಿಗೆ ಬಂದರು

ಮುಂಬಯಿಯಲ್ಲಿ ಈ ಕಡೆಯಿಂದ ಆ ಕಡೆಗೆ ಆ ಕಡೆಯಿಂದ ಈ ಕಡೆಗೆ ಹರಿದಾಡುವ ಮೋಟಾರು - ಬಸ್ಸುಗಳನ್ನು ನೋಡಿದರು, ವೈಭವದಿಂದ ತಿಂದುಂಡು ತೇಗಿ ತಿರುಗುವ ಜನರ ಡಂಬ ಪೌಲುಗಳನ್ನು ಕಂಡರು ಈ ವೈಭವ, ಈ ಸುಖ, ಈ ಸಂಪತ್ತಿನ ಕಾಲು ಇವರಂತೆ ಜನ್ಮಿಸಿರುವ ಸಾವಿರಾರು ಜೀವಿಗಳ ಹೊಟ್ಟೆಯ ಮೇಲಿದೆಯೆಂದೂ ತಿಳಿಕೊಂಡರು.

ಬಹಳ ಶ್ರಮ ಪಟ್ಟು ಮೂವತ್ತು ರೂಪಾಯಿಯ ಸಂಬಳದ ಮೇಲೆ ಒಂದು ಗಿರಣಿ ಸೇರಿದರು. ಇಬ್ಬರೂ ಕಷ್ಟಪಟ್ಟು ದುಡಿದು ಸರಲ ಜೀವನಸಾಗಿಸುತ್ತ ಬಂದರು.

ತೃಪ್ತಿ ಸಂತೋಷ ಇದ್ದಲ್ಲಿ ಶಾಂತಿಯುಂಟು. ಶಾಂತಿಯ ಮಡಿಲಲ್ಲಿಯೇ ಬಿರುಗಾಳಿಯೇಳುವುದು, ವಾತಾವರಣ ಕೆಟ್ಟು ಅಳಿದ ಬಿರುಗಾಳಿಗ ಮತ್ತೆ ಶಾಂತಿಯೂ ಮುಸುಕುವುದು. ಶಾಂತಿ—ಅಸಮಾಧಾನಗಳು ಜತೆಗೆ ಕೈ ಕೈ ಹಾಕಿ ಮನುಷ್ಯನ ಜೀವನದಲ್ಲಿಯೂ ಕಣ್ಣಾಟವನ್ನು ಆಡುವುವು. ಅದೇ ಗತಿ ಸೋದರಿಬ್ಬರಿಗೂ ತಟ್ಟಿತು.

ಸೋದರಿಬ್ಬರೂ ಬಳೆದು ಯೌವನ ಏರಿ, ಮೊದಲಿದ್ದ ಮೈಯುಬ್ಬಿ ಮತ್ತೂ ಬಲಿತುಕೊಂಡರು. ಸಂಜೆ ಗಿರಣಿ ಮುಗಿದು ಅಡ್ಡಾಡುವ ಕ್ರಮ ಕಾಲೇಜಿನಲ್ಲಿ ಅವರು ಕಲಿವಾಗಲಿಂದಲೂ ನಡೆದು ಬಂದ್ದ ಪಾಟ; ಮುಂಬಯಿಯ ಒಂದೊಂದು ಭಾಗವನ್ನು ಸುತ್ತಿ ಬರುವಾಗ ಒಂದೊಂದು ಚೆಲುವಿನ ಮುಖವನ್ನು ಕಂಡು ಬರುವ ಹವ್ಯಾಸವೂ ಆಯಿತು. ಇಲ್ಲದಿದ್ದರೆ ಅವರ ನೊಂದೊಡಲು ತಣಿಯುತ್ತಿರಲಿಲ್ಲ,' ಹರೆಯದ ದೋಷ ಬಿಡುತ್ತಿರಲಿಲ್ಲ.

ಇಬ್ಬರೂ ಕೂಡಿಕೊಂಡು—'ನಮ್ಮಂಥ ಗಿರಣಿ ಕೂಲಿಗಾರರಿಗೆ ಯಾರು ಹೆಣ್ಣು ಕೊಡುತ್ತಾರೆ?' ಎಂದು ತಮ್ಮತಮ್ಮೊಳಗೆ ತಮ್ಮ ಬಾಳಿನ ಹಂಬಲು ತೋಡುತ್ತಿದ್ದರು 'ಹಾಗಲ್ಲ ಇನ್ನುಬೇರೇನಾದರೂ ಕೆಲಸ ಸಿಗುತ್ತೇನೋ ನೋಡಬೇಕು ಹೀಗೆ ಇದ್ದರೆ ಹೇಗಾಗುತ್ತೆ?" ಎಂದೂ ವಿಚಾರಮಾಡುವರು, ಗಾಳಿಗೋಪುರ ಕಟ್ಟುವರು

ಗಿರಣಿಯ ಮ್ಯಾಲಿಕನ ಒಬ್ಬಳೇ ಕುಮಾರಿ ಗುಲ್ಶನ್ ಎಂಬಾಕೆ ಆಗಾಗ ತಂದೆಯ ಸಂಗಡ ಗಿರಣಿಯನ್ನು ಸಂದರ್ಶಿಸುತ್ತಿದ್ದಳು. ಸೀನಣ್ಣ । ಬಾಲಪ್ಪರಿಗೆ ಅವಳನ್ನು ಕಂಡು ಎದೆಯೂಸೆ ಉಕ್ಕೇರಿ ನಿರಾಶೆ ನೆನಸಿ ಏರಿದ ತೆರೆ ಬಂಡೆಗೆ ಬಡಿದು ಚೆಲ್ಲುವ ಅನುಭವವಾಗುತ್ತಿದ್ದಿತು ಅವರ ಹೃದಯವನ್ನು ಮುತ್ತಿದ ಹೇರಾಸೆ ಅವರನ್ನು ಹಿಂಸಿಸುತ್ತಿತ್ತು, ಹುರುಪುಗೂಡಿಸುತಿತ್ತು. "ಮನುಷ್ಯರಾಗಿರಿ" ಎಂದು ಎಚ್ಚರಿಸುತ್ತಿತ್ತು.

ಅವರು ಮನುಷ್ಯರಾಗಲು ಪ್ರಯತ್ನಿಸಿದರು.

ಅವರ ವೇಷ ಭೂಷಣಗಳಲ್ಲಿ ಸ್ವಲ್ಪ ಬದಲಾವಣೆ ತೋರುತ್ತಿದ್ದಂತೆ ಮುಖದ ಬಣ್ಣ, ತಲೆಯ ಕಂಪು ಮಗಮಗಿಸಹತ್ತಿತು 'ಗುಲ್ಶನ್ ಮುತ್ತಿನ ಹುಡುಗಿ' ಎಂದು ಸೋದರರಿಬ್ಬರೂ ತಮ್ಮೊಳಗೆ ಚರ್ಚಿಸುತ್ತ ಆಕೆಯ ರೂಪು ಗುಣ ವಿಮರ್ಶೆಮಾಡುತ್ತ ಎಷ್ಟೋ ದಿನ ಕಳೆದರು ಹೀಗೆ ಹೊತ್ತು ಕಳೆಯುವುದರಲ್ಲಿ ಅವರಿಗೆ ಆನಂದವಾಗುತಿತ್ತು. ಮನುಷ್ಯರಾಗುವ ಹಂಬಲು ಈ ಸೋದರರನ್ನುಹಿಂದೆಮುಂದೆ ತಳ್ಳುತ್ತಿತ್ತು

ಸೀನಣ್ಣ ಬಾಲಪ್ಪರನ್ನು ನೋಡಿದ ಗುಲ್ಶನ್‌ನ ಮನಸ್ಸಿನಲ್ಲಿ ಅವರಿಬ್ಬರ ನಡತೆ, ವ್ಯವಹಾರಗಳು ಬೇರೆ ವಿದ್ಯೆಯ ಬೆಡಗನ್ನು ಕಾಣಿಸದಿರಲಿಲ್ಲ ಇವರ ಗುಣನಡತೆಯ ಸರಲತೆಯೊಂದು ಬೇರೆ, ನಿಂತು ಮಾತನಾಡುವಾಗಲಿನ ಮೃದು ಭಾವ ಬೇರೆ, ಅಂಗಾಂಗಗಳ ಬೆಡಗು ಬೇರೆ—ಹೀಗೆ ಆಕೆಯ ಹೃದಯ ಆ ಸೋದರರ ಕಡೆ ಒಲಿಯಿತು.

ಆಕೆಯ ತಂದೆ ಯಾವುದೋ ಅಗತ್ಯದ ಕೆಲಸದ ನಿಮಿತ್ತ ಪೂನೆಗೆ ಹೋದವ ಒಂದು ವಾರದ ತನಕವೂ ಹಿಂದಿರುಗಿರಲಿಲ್ಲ ಆಕೆ ದಿನವೂ ಗಿರಣಿಯ ಮೂಲೆ ಮೂಲೆಗೂ ನಡೆದು ಬಂದು ತನಗೆ ಇಷ್ಟವಾಗುವ ಜನರ ಬಳಿ ನಿಂತು ಮಾತನಾಡಿ ಹೋಗುತ್ತಿದ್ದಳು.

ಒಂದು ದಿನ ಆಕೆ ಬಂದಳೆಂದು ಯಾರೋ ಸುದ್ದಿ ಹೇಳಿದರು ಕೆಲಸಗಾರರು ಮೈಯುಜ್ಜಿ ಅಂಗಿ ಕುಪ್ಪಸಗಳನ್ನು ತಿಕ್ಕಿ ತೀಡಿಕೊಂಡರು ಇಳಿದ ಬೆವರನ್ನು ಹಾರಿಸಿ ನಗುಮೊಗಗೊಂಡು ನಿಂತರು, ಒಂದು ಮೂಲೆಯಲ್ಲಿ ಸೀನಣ್ಣ ಇನ್ನೊಂದು ಮೂಲೆಯಲ್ಲಿ ಬಾಲಪ್ಪ ಆಕೆ ಬರುತ್ತಾಳೇನೋ, ಎಂದು ಉತ್ಕಂಠಿತರಾಗಿ ನೋಡಲು ಮರೆಯಲಿಲ್ಲ ಆಕೆ ಬಂದಳು

ಗುಲ್ಶನ್ ಹಲವು ಜನರೊಡನೆ ನಿಂತು ಮಾತನಾಡಿ ನಗೆಯಾಡಿ ಹೋದಳು. ದೂರದಲ್ಲಿ ಕೆಲಸ ಮಾಡುತ್ತಲಿದ್ದ ಸೀನಣ್ಣನನ್ನೂ ಬಾಲಪ್ಪನನ್ನೂ ಕಣ್ಣು ತುಂಬಾ ನೋಡುತ್ತ ಇತರರೊಡನೆ ಏನೇನೋ ಮಾತಾಡಿದಳು, ಏಕೋ ನಗುತ್ತಿದ್ದಳು. ಆಕೆಯ ಮಾತುಗಳಲ್ಲಿ ಅವಳಂತರಂಗವು ತೆರೆಯಲಾರದಾದರೂ ಅದರ ನಿಗೂಢ ಆಕಾಂಕ್ಷೆಯು ಬಾಯಿ ವರ್ತನೆಯಲ್ಲಿ ಹೊಳೆಯುತ್ತಿತ್ತು.

ಅದೇ ಸಂಜೆ ಗುಲ್ಶನ್ ಸೀನಣ್ಣನನ್ನು ತನ್ನ ಮಾಳಿಗೆಗೆ ಕರೆಸಿಕೊಂಡಳು. ಆತನೊಡನೆ ಹಲವು ಮಾತುಗಳನ್ನಾಡಿ ತನ್ನ ಸಮೀಪ ಪರಿಚಯ ಮಾಡಿಕೊಂಡಳು; ಬಾಲಪ್ಪನ ವಿಚಾರ ಕೇಳಿದಳು. ಆತನೂ B. A. ಆಗಿದ್ದಾನೆ ಎಂದು ಕೇಳಿ ಅವಳು ಕಣ್ಣು ಕಣ್ಣು ಬಿಟ್ಟಳು. "ನೀವು ಇನ್ನು ಮುಂದೆ ಈ ಕೆಲಸ ಮಾಡಬಾರದು. ನಾನು ಬೇರೆ ಕೆಲಸ ಕೊಡಿಸುತ್ತೇನೆ .. ನಿನಗೆ ಕಾರ್ ಡ್ರೈವಿಂಗ್ ಬರುತ್ತೋ?"

ಸೀನಣ್ಣ "ಇಲ್ಲ" ಎಂದನು

"ಆಗಬಹುದು ನನಗೆ ಪಾಠ ಹೇಳುತ್ತೀಯಾ? . ."

"ನನಗೆ ಗುಜರಾಥಿ ಬರುವುದಿಲ್ಲ."

"ಪರವಾ ಇಲ್ಲ. ಫಿಲಾಸಫಿ ಮತ್ತು ಪೊಯೆಟ್ರಿ ಹೇಳಿಕೊಡುತ್ತೀಯಾ?"

ಅವನು ಒಪ್ಪಿಕೊಂಡ.

ಮುಂದಿನ ದಿನ ಪಾಠಕ್ಕೆ ಮೊದಲು ಮಾಡುವುದೆಂದು ಗೊತ್ತಾಯಿತು.

ಮರುದಿನ ಸೀನಣ್ಣ ಮೊದಲಿನ ಶ್ರೀನಿವಾಸ ರಾಯನಾದನು, ಶ್ರೀನಿವಾಸ ಗುಲ್ಶನಿಗೆ ಪಾಠಹೇಳಲು ಹೋದನು

ಬಾಲಪ್ಪನಿಗೆ ಮಾತ್ರ ಹೃದಯದಲ್ಲಿ ಏನು ಏನೋ ಆಯಿತು ದಿನವು ಹಗಲು ರಾತ್ರಿ ಒಟ್ಟಿಗೆ ದುಡಿದ, ಒಟ್ಟಿಗೆ ಅಲೆದು ಒಟ್ಟಿಗೆ ಉಂಡು ಮಲಗುವವರಲ್ಲಿ ಈಗ ಸ್ವಲ್ಪ ಹೊತ್ತು ಅಗಲುವ ಸಮಯ ಬಂತು ಬಾಲಪ್ಪನಿಗೆ ಅದ ಸಹಿಸಲಾಗಲಿಲ್ಲ ಅದರೊಂದಿಗೆ ಗುಲ್ಶನಿನ ರೂಪಚಿತ್ರವು ಆತನ ಕಣ್ಣು ಕಟ್ಟಿತು.

ದಿನಗಳುರುಳಿದುವು ಬಾಲಪ್ಪನನ ತಮ್ಮ ಗಿರಣಿಯಲ್ಲಿ ಕ್ಲರಿಕಲ್ ಡಿಪಾರ್ಟ್‌ಮೆಂಟಿಗೆ ಸೇರಿಸಿದಳು ಸೀನಪ್ಪನಿಗೆ ಬೆರೆಂದು ಕೆಲಸಹತ್ತಿತು ಇಬ್ಬರು ಸೋದರರೂ ಯೋಗ್ಯ ವರಮಾನವುಳ್ಳವರಾದರು ಇಬ್ಬರೂ ಮನುಷ್ಯರಾಗುಂದರು!

ಇನ್ನೊಂದು ಕತೆನಡೆಯಿತು ಬಾಲಪ್ಪ ಅಣ್ಣನ ವಿಷಯ ಯಾಕೋ ಸಂಶಯಗ್ರಸ್ತನಾಗಿದ್ದನು ಆತನ ಮೇಲೆ ಅಲ್ಲಸಲ್ಲದ ಭೇದ ನೆನೆಸಿಕೊಂಡು ಅನ್ಯಾಯವಾಗಿ ಜಗಳವಾದಲಾರಂಭಿಸಿದನು ಸೀನಣ್ಣನ ಸರಲ ಸ್ವಭಾವಕ್ಕೆ ಇದು ಮೆಚ್ಚಲಿಲ್ಲ ಅವನು ಬೇರೆ ಬಿಡಾರಮಾಡಿ ಇರಹದನು.

ಕೆಲಸ ಮುಗಿಸಿ ಬಂದು ಸೀನಣ್ಣನಿ ಪಾಠಹೇಳುವುದಕ್ಕೆ ಸರಿಯಾದ ಸಮಯ ಸಿಗುತ್ತಿರಲಿಲ್ಲ — ಗುಲ್ಶನಿಗೆ ಇದರಿಂದ ಯಾಕೋ ಸ್ವಲ್ಪ ಬೇಸರವಾಯಿತು ಅದೇ ವೇಳೆಗೆ ಸಮಯಸಿಕ್ಕಂತೆ ಬಾಲಪ್ಪನ ಬಂದು ಹೋಗುತ್ತಲಿದ್ದನು. ಆತ ಸಹಜ ಸೌಂದರ್ಯವೂ ಮಾತಿನ ಚೆಲುವೂ ಅದಕ್ಕೆ ಮತ್ತೂ ಅವಕಾಶ ಕೊಟ್ಟಿತು ಆಕೆ ಮತ್ತೆ ಬಾಲಪ್ಪನನ್ನೇ ಆದರಿಸತೊಡಗಿದಳು.

ಸ್ನೇಹ ಪರಿಚಯವು ದಿನೇ ದಿನೇ ಬಲಿಯತೊಡಗಿತು: ಬಾಲಪ್ಪನೆಂದರೆ ಆಕೆಗೆ ಆತ್ಮಜ್ಯೋತಿಯಾದನು. ಅವನಿಲ್ಲದೆ ಹೊತ್ತು ಕಳೆಯುತ್ತಿರಲಿಲ್ಲ. ಎಲ್ಲಿ ಹೋ...

(೧೬ನೆಯ ಪುಟವನ್ನು ನೋಡಿ)

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE — ESTD. 1906 — CANARA BANK LIMITED

ಜಿಲ್ಲಾ ಸಮಾಚಾರ

ನೆರೆಯ ಹಾವಳಿಯಿಂದ ಕಂಗೆಟ್ಟ ಕೃಷಿಕರಿಗೆ ಉದಾರ ಸಹಾಯ ಮಾಡಿ

ಜಿಲ್ಲಾ ಕಾಂಗ್ರೆಸು ಅಧ್ಯಕ್ಷರ ವಿನಂತಿ.

ನಮ್ಮ ಜಿಲ್ಲೆಯ ಫಲ್ಗುಣಿ ಹೊಳೆ, ಗುರುಪುರ ಹೊಳೆ, ಸೀರೆ ಹೊಳೆ, ಚರ್ವತ್ತೂರು ನದಿ ಇವೇ ಮೊದಲಾದ ಹೊಳೆಗಳಲ್ಲಿ ಹಾಗೂ ಅನೇಕ ಸಣ್ಣ ದೊಡ್ಡ ತೋಡುಗಳಲ್ಲಿ ಅಕಸ್ಮಾತ್ ನೆರೆಯ ನೀರು ಉಕ್ಕಿ ಬಂದು ಅದರ ಉಗ್ರತೆಯಿಂದ ಹಾಳುಬಿದ್ದ ಹಳ್ಳಿಗಳ ಸಂಖ್ಯೆ ತುಂಬಾ ಇದೆ. ಮನೆಮಾರುಗಳನ್ನು ಕಳೆದುಕೊಂಡು ನಿರಾಶ್ರಿತರಾದುದಲ್ಲದೆ ಅವರ ಹೊಲ ಗದ್ದೆಗಳಲ್ಲಿರುವ ನಟ್ಟಿ ನೇಜಿಗಳೂ ನಾಶವಾಗಿವೆ. ಬಿತ್ತಲು ಬೀಜವಿಲ್ಲದೆ ಉಳುವ ನೇಗಿಲು ಇತ್ಯಾದಿ ಕೃಷಿ ಸಾಮಾಗ್ರಿಗಳೆಲ್ಲವನ್ನೂ ಕಳೆದುಕೊಂಡು ಫಲವು ತೀರಾ ಕಂಗಾಲಾಗಿರುವವರು. ಈ ನಿರಾಶ್ರಿತರಲ್ಲಿ ಈ ತನಕ ಕೊಂಗ್ರೆಸು ಕಮಿಟಿಯವರು ಮಹಾಜನರ ಬೆಂಬಲದಿಂದ ಅನ್ನಬಟ್ಟೆಗಳನ್ನು ಒದಗಿಸುವ ಕಿಂಚಿತ್ ಸೇವೆಯನ್ನು ಸಲ್ಲಿಸಿದ್ದಾರೆ. ಒಕ್ಕಲಿಗರಲ್ಲಿ ಅನೇಕರು ಮುಂದೆ ಬಿತ್ತಲು ಬೀಜಗಳಿಲ್ಲದೆ ನೆಡಲು ನೇಜಿಯಿಲ್ಲದೆ ಉಳಲು ಎತ್ತು ಕೋಣಗಳಾಗಲಿ ನೊಗನೇಗಿಲುಗಳಾಗಲಿ ಇಲ್ಲದ ಕೇವಲ ನಿರ್ಗತಿಕರಾಗಿ ನರಳುವ ಈ ದುರ್ಧರ ಪ್ರಸಂಗದಲ್ಲಿ ಜಿಲ್ಲೆಯ ಯಾವತ್ತೂ ರೈತಬಾಂಧವರು ಸಾಹುಕಾರರು ಹಾಗೂ ಮಹಾಜನರು ಈ ಬಡ ಒಕ್ಕಲಿಗರಿಗೆ ತಮ್ಮ ವೃತ್ತಿಯನ್ನು ಕೈಕೊಂಡು ತಮ್ಮ ಗಂಜಿಯನ್ನು ಸಂಪಾದಿಸಲು ಸಕಲ ಸಹಾಯವನ್ನು ಈ ಸಮಯದಲ್ಲಿ ಮಾಡದಿದ್ದರೆ, ಇಡೀ ಜಿಲ್ಲೆಯ ಆರ್ಥಿಕ ಸ್ಥಿತಿಯು ಇನ್ನಷ್ಟು ಹಾಳಾಗಿ ಗೊಂದ್ಲವಾಗಬಹುದು. ಆದುದರಿಂದ ರೈತಬಾಂಧವರೆಲ್ಲರೂ ತಮ್ಮಲ್ಲಿ ಹೆಚ್ಚಿಗೆ ಇರುವ ಬಿತ್ತಲು ಬೆಳೆಗೆ ಬೇಕಾದ ಬೀಜವನ್ನೂ ಕೃಷಿ ಸಾಮಗ್ರಿಗಳನ್ನೂ ಇತರ ಸಕಲ ಸಹಾಯಗಳನ್ನೂ ಈ ನೆರೆಯ ಹಾವಳಿಗೆ ಬಲಿಬಿದ್ದ ಹಳ್ಳಿಗಳ ಒಕ್ಕಲಿಗರಿಗೆ ಒದಗಿಸಬೇಕಾಗಿದೆ.

ಈ ಸಾಮಾಗ್ರಿಗಳನ್ನೂ ಬೀಜವನ್ನೂ ಜಿಲ್ಲೆಯ ಮೂಲೆ ಮೂಲೆಗಳಿಂದ ಒಟ್ಟುಗೂಡಿಸಿ ಬೇಕಾದ ಕಡೆಗೆ ಧರ್ಮಾರ್ಥವಾಗಿ ಸಾಗಿಸುವ ಏರ್ಪಾಡನ್ನು ಮಾಡುವುದಾಗಿ, ದಿ ಕಂಬ್ಳ್ಯಾಂಡ್ ಬುಕ್ಕಿಂಗ್ ಏಜನ್ಸಿ, ದಿ ಜ್ಯೊಂಟ್ ಬುಕ್ಕಿಂಗ್ ಏಜನ್ಸಿ ಮೊದಲಾದ ಯಾವತ್ತೂ ಬಸ್ಸು ಸರ್ವಿಸ್‌ಗಳ ಪರವಾಗಿ ಸಿ. ಪಿ. ಸಿ. ಕಂಪೆನಿಯ ಮೆನೆಜಿಂಗ್ ಡೈರೆಕ್ಟರರಾದ ಶ್ರೀ ಎ. ಯಸ್ ಕುಡ್ವರು ಉದಾರ ಬುದ್ಧಿಯಿಂದ ಭರವಸೆಯನ್ನಿತ್ತಿರುವರು. ನಿರ್ಗತಿಕರಿಗೆ ಮಹಾಜನರು ತಮ್ಮ ಧಾನ್ಯ ವಸ್ತ್ರಾದಿಗಳ ಮತ್ತು ಬೀಜ, ಕೃಷಿ ಸಾಮಗ್ರಿಗಳ ಸಹಾಯವನ್ನು ತಮ್ಮ ಹತ್ತಿರದ ಬಸ್ಸು ಏಜಂಟರ ವಶ ಕೊಟ್ಟಲ್ಲಿ ಅವರು ಅವನ್ನು ಜಿಲ್ಲಾ ಕೊಂಗ್ರೆಸ್ ಕಮಿಟಿಯ ಮುಖಾಂತರ ನಿರ್ಗತಿಕರಿಗೆ ಕಳುಹಿಸುವ ಏರ್ಪಾಡನ್ನು ತೃಪ್ತಿಪಡಿಸುವರು ಎಂದು ದ. ಕ. ಜಿಲ್ಲಾ ಕಾಂ. ಕ. ಅಧ್ಯಕ್ಷರಾದ ಶ್ರೀ ದಾಮೋದರ ಬಾಳಿಗರು ಪ್ರಕಟಿಸುತ್ತಾರೆ.

ಫುಲಾನಿ ಗುರುಪುರ ಹೊಳೆ ನೀರು ತುಂಬಿ ಜಲಪ್ರಳಯ

"೨೮ ಗ್ರಾಮ ನಷ್ಟ—೧೦ ಲಕ್ಷ ರೂಪಾಯಿ ಸೊತ್ತು—೧೨೦೦ ಮನೆಗಳು—೮ ಸಾವಿರ ಜನರು ನಿರ್ಗತಿಕರು"

ಇದೇ ತಾ. ೧೦ನೇ ರಾತ್ರಿ ೧೨ ಗಂಟೆಯ ನಂತರ ಹೊಳೆ ನೀರು ಉಕ್ಕುತ್ತ ಬಂದು ತಾ. ೧೧ನೇ ಬೆಳಗ್ಗೆ ೧೦ ಗಂಟೆಗೆ ಫೊಳಲಿಯಲ್ಲಿ ೧೯೨೩ನೇ ಇಸವಿಯ ನೆರೆಗೆ ಸರಿಯಾಗಿ ೧೧ ಗಂಟೆಗೆ ಪುನಃ ೫ ಇಂಚು ನೀರು ಜಾಸ್ತಿಯಾಗಿ ಅನಂತರ ತಡೆಯಾಗಿ ೧೨ ಗಂಟೆ ಮೇಲೆ ತಾ. ೧೨ನೇ ಸಾಯಂಕಾಲದ ವರೆಗೆ ಇಳಿಯುತ್ತಾ ಬಂದುದರಿಂದ ಈ ಹೊಳೆಯ ಎಡಬಲ ನೆರೆಬಿದ್ದ ಎಲ್ಲಾ ಭೂಮಿ, ಮನೆ, ಸಾಗುವಳಿಗೆ ಹಾಕಿದ ನೇಜಿ, ಎತ್ತು, ಕೋಣ, ಎಮ್ಮೆ, ಆಡು, ನೊಗ, ನೇಗಿಲು, ಬತ್ತ, ಅಕ್ಕಿ, ಇತರ ಚರಸೊತ್ತುಗಳು ಸಂಪೂರ್ಣ ನಾಶವಾಗಿರುತ್ತದೆ. ವೇಣೂರಿಂದ ಕೂಳೂರು ವರೆಗೆ ಸುಮಾರು ೨೮ ಗ್ರಾಮಗಳಲ್ಲಿ ಸುಮಾರು ೧೨೦೦ ಮನೆಗಳಲ್ಲಿ ೮ ಸಾವಿರ ಜನರು ೧೦ ಲಕ್ಷ ರೂಪಾಯಿ ಬೆಲೆಯ ಚರಸೊತ್ತುಗಳನ್ನು ಕಳಕೊಂಡಿರುತ್ತಾರೆ. ಒಟ್ಟಾರೆ ಸರಿಯಾದ ನಷ್ಟ ಎಷ್ಟೆಂದು ಪ್ರಕೃತ ಹೇಳಲು ಸಾಧ್ಯವಿಲ್ಲ. ಅತಿ ಸಣ್ಣದಾದ ಅಡ್ಡೂರು ಒಂದು ಗ್ರಾಮದಲ್ಲಿ ಬಿದ್ದ ಮನೆ ೬೮ ನಿರ್ಗತಿಕ ಗಂಡಸರು ೯೩—ಹೆಂಗಸರು ೧೨೮—ಮಕ್ಕಳು ೧೬೭—ಜುಮ್ಲಾ ೪೦೧ ನಷ್ಟ ೧೦ ಸಾವಿರ ರೂಪಾಯಿ. ಸೊತ್ತು ಕೂಡಾ ಆಗಿರುತ್ತದೆ. ಈ ಜನರಿಗೆ ತಾ. ೧೪ರಲ್ಲು ಕೊಂಗ್ರೆಸ್ ನೆರೆಹಾವಳಿ ಕಮಿಟಿ ಕಡೆಯಿಂದ ಪ್ರತಿಯೊಬ್ಬರಿಗೆ ಅರ್ಧ ಸೇರು ಅಕ್ಕಿ ಪ್ರಕಾರ ಕೊಟ್ಟು ಗಂಜಿ ಮಾಡಿಸಿಯದೆ. ಮಾತ್ರವಲ್ಲ ವೇಣೂರಿಂದ ಗುರುಪುರ ವರೆಗೆ ಅಲ್ಲಲ್ಲಿ ಗಂಜಿ ಮಟ್ಟಿಗೆ ಸಹಾಯ ಮಾಡಿಯದೆ.

ಆದುದರಿಂದ ದಿವಿಸ್ಟ್ರಿಕ್ಟ್ ಬೋರ್ಡ್ ನೆರೆಗೆ ಒಳಬಿದ್ದ ಕೃಷಿಕ ರೈತರಿಗೂ ಭೂಮಿಗೂ ಸರಿಯಾದ ರಸ್ತೆಯಿಂದ ತೀರ್ವೆ ಮಾಫಿ ಮಾಡುವುದಲ್ಲದೆ, ಸಾಗುವಳಿಗೆ ಬೇಕಾಗುವ ಎತ್ತು, ಬೀಜ ಕೋಣ ನೇಗಿಲು ಮೊದಲಾದ ಕಳಕೊಂಡ ಉಪಕರಣಗಳ ಬಗ್ಗೆ ಸಹಾಯ ಮಾಡಬೇಕಾಗಿಯೂ ಒಕ್ಕಲುಗಳಿಗೆ ಗೇಣಿ ರಿಯಾಯತಿ ಮಾಡುವಂತೆಯೂ ಪ್ರಯತ್ನಿಸುವುದಲ್ಲದೆ ನ್ಯಾಯವಾಗಿ ಸರ್ವಸ್ವ ಕಳಕೊಂಡವರಿಗೆ ಸಹಾಯ ಮಾಡುವುದಲ್ಲದೆ, ಮನೆ ಕಟ್ಟಲಿಕ್ಕೂ ಸಹಾಯ ಆಗತಕ್ಕದ್ದಿದೆ. ಒಟ್ಟಾರೆ ಪರಿವು ನಾರಾಯಣ ನಾಡಾರ ಹಳ್ಳಿಗಳಿಗೆ ಈ ರೀತಿ ಭಯಂಕರ ಅನಾಹುತದಿಂದ, ಮನೆ ಇಲ್ಲ—ದನ, ಎತ್ತು, ಎಮ್ಮೆ—ಕೋಣವಿಲ್ಲ. ಬಿತ್ತಲಿಕ್ಕೆ ಬೀಜವಿಲ್ಲ ನೆಡಲಿಕ್ಕೆ ನೇಜಿಯಿಲ್ಲ, ಉಡಲಿಕ್ಕೆ ವಸ್ತ್ರವಿಲ್ಲ, ಊಟಕ್ಕೆ ಅಕ್ಕಿ ಇಲ್ಲ, ಕೂಲೀ ಕೆಲಸವಿಲ್ಲ, ಊರಲ್ಲಿ ಸಹಾಯ ಮಾಡುವವರು ಯಾರೂ ಇಲ್ಲ, ದೀಪ ಹಚ್ಚಲಿಕ್ಕೆ ಚಿಮಿಣಿ ಇಲ್ಲ—ಮಾದರೀ ನಿರ್ಜೀವಿಗಳಂತ ಹಳ್ಳಿಗರು ಈಗ ಸಜೀವ ಹೆಣಗಳಂತೆಯೂ, ಮನೆ ತೋಟಗಳು ಸುಡುಗಾಡಿನಂತೆಯೂ ಕಾಣುವ ದೃಶ್ಯವನ್ನು ಪ್ರತ್ಯಕ್ಷ ನೋಡಿದರೆ ಸಮಾಧಾನವಾದೀತು.—

ಎ. ಎಸ್. ಶೀನಪ್ಪ ಹೆಗ್ಡೆ, ಪೊಳಲಿ.

ನೆರೆಹಾವಳಿಗೆ ತುತ್ತಾದ ಜನರಿಗೆ ಕಾಂಗ್ರೆಸ್ ಕಮಿಟಿಯ ಮೂಲಕ ಸಹಾಯ ಮಾಡಿದ ಮಹನೀಯರು.

ಶ್ರೀ. ಕಾಶೀಮಠಾಧೀಶ ಸುಕೃತೀಂದ್ರ ತೀರ್ಥ ಸ್ವಾಮಿಗಳು ಗುರುಪುರ ಠಾಣೆ (ಮುಲ್ಲಾರು, ಬಾಯಿಬೆಟ್ಟು, ಪೈಲುಗ್ರಾಮ)ಗಳಲ್ಲಿ ಇಡೀ ಒಂದು ದಿನದ ಅಕ್ಕಿ ಸಹಾಯ—೬ ಮುಡಿ ೧೨ ಸೇರು ನಗದಿ ರೂ. ೪—೮—೦, ವಿಠ್ಠಲ ಪುರುಷೋತ್ತಮ ಸೇಟ್—೪೦ ಮುಂಡು, ೨೦ ಶಲ್ಲಿ, ೨೬ ಬನ್ಯಾನು, ೧೦ ಸೀರೆ, ೧೮ ವಾಡು ಕೋರ, ೨೦ ವಾರು ಮಲ್ಲು, ಶ್ರೀ ದಾಮೋದರ ಬಾಳಿಗ—ರೂ. ೨೫, ಮಿಜಾರ ಕೃಷ್ಣ ಅನಂತ ಪೈ ಮತ್ತು ಕಂಪೆನಿ—ರೂ ೨೫; ಮೆ. ಪಿ. ಯಲ್. ಪೈ ಎಂಡ್ ಕೊ—ರೂ. ೨೫, ಶ್ರೀ ಪಂಡಿತ ಶಿವರಾವ್—ರೂ. ೨೫; ಶ್ರೀ ಜಿ. ಸೋಮಶೇಖರ ರಾವ್—ರೂ. ೨೫, ಮಹೇಲಿ ಅಣ್ಣಪ್ಪ ನಾಯ್ಕ—ರೂ. ೧೫ ಮತ್ತು ೨ ಲಾಟೀನು; ತಾಜಾ ಮಹಾಲ್ ರೆಸ್ಟೋರೆಂಟ್—ರೂ ೧೦, ಸಕ್ಕರೆ ಮಣ ೧, ಒಂದು ಡಬ್ಬಿ ತರಿ, ೨ ರಾತಲು ಕಾಫಿಪುಡಿ, ಮಾ. ಗಣೇಶ ಶ್ರೀನಿವಾಸ ಪೈ—ನೊಳ ೪೮ ೧೦ ಕೈತರಗಳು ಮತ್ತು ೩ ನೊಳದ ೨೫ ಪೊಲ್ಲಿಗಳು, ಸಂಚಮುಹಾಲ್ ನಾರಾಯಣ ಶೆಣೈ—ರೂ ೧೫ ಮಾ। ಕೆ ಲಿಂಗಯ್ಯ ಪ್ರಭುಭೋಗ ಎಂಡ್ ಕೊ—ರೂ ೧೦, ಪಿ ವಿಟ್ಠಲ ನರಸಿಂಹ ಪೈ ಎಂಡ್ ಸನ್ಸ್—ರೂ. ೧೧, ಕೆ. ಕೆ ಯಸ್ ಪೈ, ಯಸ್. ಆರ್. ನಾಯಕ್ ಎಂಡ್ ಕೊ—ರೂ ೧೦, ಬಿ. ಕೇಶವ ವಾಮನ ಪೈ ಎಂಡ್ ಸನ್ಸ್—ರೂ. ೧೧, ಎಮ್ ಎನ್ ಪಡಿಯಾರ—ರೂ. ೧೧, ಮೆ। ಅಬ್ದುಲ್ ಸಕ್ಕೂರ್ ತಯ್ಯಾಬ್ ಎಂಡ್ ಕೊ—ರೂ ೧೧ ಮಾರೂರು ಗಣಪತಿ ಪೈ ಎಂಡ್ ಕೊ—ರೂ. ೧೧, ಉಳ್ಳಾಲ ದೇವಪ್ಪ ಸುಬ್ರಾಯ ಬಿ ನಪ್ಪ ನಾಯ್ಕ ಎಂಡ್ ಕೊ—ರೂ ೧೧ ಸಪ್ತಗಿರಿ ರಾಮಚಂದ್ರ ಕೃಷ್ಣ ಕಾಮತ್ ಎಂಡ್ ಸನ್ಸ್—ರೂ. ೧೧, ಕೆ ತಿಮ್ಮಪ್ಪಯ್ಯ, ಗುರುಪುರ—೩ ಮುಡಿ ಅಕ್ಕಿ ಕರಿಯಂಗೇ ಮುತ್ತ ಪಣಾಂಬೂರು—೨ ಮುಡಿ ಅಕ್ಕಿ ಉಳ್ಳಾಲ ಪರಿವಾಮನ ನಾಯ್ಕ—ರೂ ೧೦ ಸುಜೀರ ನಾಗಪ್ಪ ನಾಯಕ್ ಎಂಡ್ ಸನ್ಸ್—

(೧೨ನೇ ಪುಟವನ್ನು ನೋಡಿ.)

ತಾ. 6–6 1941ರಲ್ಲು ಮಂಗಳೂರು ತಾಲೂಕು ಧಾರಣೆಗಳ ಎಡ್ವೈಸರಿ ಸಮಿತಿಯವರು ಸಭೆಸೇರಿ ತಿದ್ದುಪಡಿಮಾಡಿದ ಮುಖ್ಯ ಜೀನಸುಗಳ ಧಾರಣೆಗಳು

ಸಾಮಾನಿನ ಹೆಸರು			ನಿಶ್ಚಯಿಸಿದ ಧಾರಣೆ ರೂ.ಆ.ಪೈ
ಭತ್ತ ಅವ್ವಲ್ ಸೇ. 1ಕ್ಕೆ			— 0-1-1
,, ದುಯಂ			— 0-1 (
ಅಕ್ಕಿ ಮಸ್ಕತಿ ಅವ್ವಲ್ ಸೇ. 1ಕ್ಕೆ			— 0-2-
,, ಗುಮ್ಮ	,,	,,	— 0-2-
,, ಸುಗ್ಗಿ	,,	,,	— 0 2-
,, ರಾಶಿ	,,	,,	— 0-2-(
ರಾಗಿ	,,	,,	— 0-1-
ಉಪ್ಪು	,,	,,	— 0-1-(
ಮೆಣಸು	,,	,,	— 0-1-
,,	ದುಯಂ	,,	— 0-1-
ಸಕ್ಕರೆ		,,	— 0-1-
ಹುರುಳಿ		,,	— 0 1-
ಗೋಧಿ		,,	— 0-2-
ಬಗಡೆ		,,	— 0-2-
ಕಡಲೆ	ಅವ್ವಲ್	,,	— 0-2-
,,	ದುಯಂ	,,	— 0-2-
ತೆಂಕಿಪಟ್ಟಿಗೆ (ವಾಷ್ಯಾ 10ರ) ದ		1ಕ್ಕೆ	0-4-
,, (,, 60ರ)		,,	0-6-
,, (— 80ರ)		,,	0-8-
ಚಿಮಿಣಿ ಎಣ್ಣೆ		ಬಾಟ್ಲ 1ಕ್ಕೆ	0-2-
ಬಟ್ಟೆ ಅಗ್ಗನಮೂನೆ		ಗಜ 1ಕ್ಕೆ	0-3-
ಗಂಡಸರು ಉಡುವ ಮುಂಡು		1ಕ್ಕೆ	0-7-
ಅಗ್ಗ ನಮೂನೆಯ ಸೀರೆ 1ಕ್ಕೆ			2-0-
ತೆಂಗಿನ ಎಣ್ಣೆ ಕುತ್ತಿ 1ಕ್ಕೆ			0-7-
ಕಬ್ಬಿನ ಬೆಲ್ಲ ಅವ್ವಲ್ ಸೇರು 1ಕ್ಕೆ			0-0-
,,	ದುಯಂ	,,	0-0-
ತೆಂಗಿನ ಕಾಯಿ ನಿಪ್ಪು ಸಮೇತ 100ಕ್ಕೆ			6-0-
ಸುಲಿದದ್ದು			-8-

ಸೌಂದರ್ಯ ಮತ್ತು ಮುಖಕಾಂತಿಗೆ

ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ — ತಯಾರಿಸಿದ ಸ್ನೋ

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ — ಮುಖದ ಮೇಲಿನ ಯಾವತ್ತೂ ಕಲೆ, ಮಚ್ಚೆ ಬಿದ್ದು, ಮುಂತಾದುದನ್ನು ಗುಣಪಡಿಸುತ್ತದೆ

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು

ಮಂಗಳೂರಿನ ಡಿಸ್ಟ್ರಿಬ್ಯೂಟರರು ಕೊರನೇಷನ್ ಟ್ರೇಡಿಂಗ್ ಕೊ

ಮಹಮ್ಮದಾಲಿ ರೋಡ್, ಮಂಗಳೂರು.

ಸಿರಿಯಾದಲ್ಲಿ ಭೀಕರ ಕಾದಾಟ ನಡೆಯುತ್ತದೆ!

ಮಿತ್ರಪಕ್ಷದ ಸೈನ್ಯ ಮುನ್ನಡೆಯುತ್ತದೆ

ಸಿರಿಯಾದಲ್ಲಿ ಬ್ರಿಟಿಷ ಸೈನಿಕರ ಮುನ್ನಡೆ

ಬೇರೂಟಿನ ಆಕ್ರಮಣ

ಹೋರಾಟಕ್ಕೆ ವಿಚಿ ಸೈನ್ಯಗಳ ಅಸಮ್ಮತಿ

ಬ್ರಿಟಿಷ ಮತ್ತು ಫ್ರೀ ಫ್ರೆಂಚ್ ಸೈನ್ಯಗಳು ಸಿರಿಯ ಕರಾವಳಿಯಲ್ಲಿ ಅತಿ ವೇಗದಿಂದ ಮುನ್ನುಗ್ಗುತ್ತಿದ್ದು, ಅವು ಇನ್ನೊಂದೆರಡು ದಿನಗಳಲ್ಲಿಯೇ ಬೇರೂಟ ನಗರವನ್ನು ಆಕ್ರಮಿಸಿಕೊಳ್ಳಬಹುದು. ಬೇರೂಟಿನಲ್ಲಿ ಬ್ರಿಟಿಷರನ್ನು ಎದುರಿಸಬೇಕೆಂದು ವಿಚಿ ಸರಕಾರದವರು ನಿರ್ಧರಿಸಿದ್ದರು. ಅದು ದರಿಂದ ಅಲ್ಲಿ ಘೋರ ಕಾಳಗವಾಗುವುದೆಂದು ನಂಬಲಾಗಿತ್ತು. ಆದರೆ ಈಗ ವಿಚಿ ದಂಡಾಳುಗಳಲ್ಲಿ ಅನೇಕರು ಡಿಗಾಲೆಯನ್ನು ಕೂಡಿಕೊಳ್ಳಲು ಇಚ್ಛೆ ವ್ಯಕ್ತ ಮಾಡುತ್ತಿರುವುದರಿಂದ ವಿಚಿ ಸರ್ಕಾರದವರು ತಮ್ಮ ನಿರ್ಧಾರವನ್ನು ಬದಲಾಯಿಸಿರುವರೆಂದು ತಿಳಿದುಬರುತ್ತದೆ.

ರಶ್ಯವು ಸಿದ್ಧವಾಗಬೇಕು!

ಸೇನಾಪತಿಯ ಸಂದೇಶ

ಮಾಸ್ಕೋ ಜಿಲ್ಲೆಯಲ್ಲಿ ಸೈನ್ಯಗಳ ಚಟುವಟಿಕೆ

ಮಾಸ್ಕೋ ಜಿಲ್ಲೆಯಲ್ಲಿ ಸೈನ್ಯಗಳು ಟ್ಯಾಂಕುಗಳು ಮತ್ತು ಮೋಟರವಾಹಕಗಳ ಚಟುವಟಿಕೆ ಬಹಳ ಹೆಚ್ಚಾಗಿದೆಯೆಂದು ಮಾಸ್ಕೋದಿಂದ ಬಂದ ಸುದ್ದಿಗಳಿಂದ ತಿಳಿದುಬರುತ್ತದೆ. ಒಂದು ಸೈನಿಕ ಶಿಬಿರದ ಪ್ರಾರಂಭೋತ್ಸವ ಕಾಲಕ್ಕೆ ರಶ್ಯದ ಸೇನಾಪತಿ ಜನರಲ್ ಟಿಮೊಶೆಂಕೋ ರವರು 'ರಶ್ಯವು ಸಿದ್ಧವಾಗಬೇಕು. ಸೋವಿಯೇಟಿನ ಯುದ್ಧ ಶಕ್ತಿಯನ್ನು ಹೆಚ್ಚಿಸಲು ಇನ್ನು ತಡಮಾಡಬಾರದು' ಎಂದು ಹೇಳಿದರು.

ಜಿಬ್ರಾಲ್ಟರ ಮೇಲೆ ಬಾಂಬು

ವಿಪರೀತ ನಷ್ಟವಾಗಿಲ್ಲ

ಜಿಬ್ರಾಲ್ಟರ ಮೇಲೆ ಬಾಂಬು!

ಜಿಬ್ರಾಲ್ಟರಿನ ಮೇಲೆ ಅನೇಕ ವಿಮಾನಗಳು ಬಂದು ಬಾಂಬುಗಳ ಸುರಿಮಳೆ ಕರೆಸಿದವು. ಆದರೂ ನಷ್ಟಗಳು ವಿಪರೀತವಾಗಿ ಆಗಲಿಲ್ಲವೆಂದು ತಿಳಿದುಬರುತ್ತದೆ.

ತಪ್ಪುಗಳ ಪ್ರಾಯಶ್ಚಿತ್ತ ಇನ್ನೂ ಅನುಭವಿಸಬೇಕು

ಸಿರಿಯಾ ಬಗ್ಗೆ ಮೌನ

ಮಾರ್ಶಲ್ ಪಿಟೇನರು ತಾವು ಅಧಿಕಾರಕ್ಕೆ ಬಂದ ಮೊದಲನೆಯ ವರ್ಷದ ಸಮಾರಂಭದಲ್ಲಿ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತ, ಫ್ರೆಂಚ ಜನರು ತಮ್ಮ ತಪ್ಪುಗಳ ಪ್ರಾಯಶ್ಚಿತ್ತ ಅನುಭವಿಸುವುದು ಇನ್ನೂ ಮುಗಿದಿಲ್ಲವೆಂದೂ ದೀರ್ಘ ಕಾಲ ಇನ್ನೂ ಕಷ್ಟಕ್ಕೆ ಗುರಿಯಾಗಬೇಕಾಗುವುದೆಂದೂ ಫ್ರೆಂಚರಿಗೆ ಎಚ್ಚರಿಕೆ ಕೊಟ್ಟರು.

ಅವರು ತಮ್ಮ ಭಾಷಣದಲ್ಲಿ ಸಿರಿಯಾದ ಬಗ್ಗೆ ಏನೂ ಹೇಳಲಿಲ್ಲ.

ಭಾರತದ ರಾಜಕೀಯದ ಬಗ್ಗೆ ಬ್ರಿಟನಿನಲ್ಲಿ ಕಳವಳ

ಸೊರೆನ್ಸನರ ಸೂಚನೆ

ಅಮೆರಿ ಹೇಳಿಕೆ ಕೊಡಲು ನಿರಾಕರಿಸಿದರು

ಭಾರತದ ರಾಜಕೀಯದ ವಿಷಯ ಒಂದು ಹೇಳಿಕೆ ಕೊಡಬೇಕಾಗಿ ಕಾಮನ್ಸ ಸಭೆಯಲ್ಲಿ ಭಾರತ ಸಚಿವ ಅಮೆರಿಯವರೊಡನೆ ಸೊರೆನ್ಸನರು ಸೂಚಿಸಿದರು. 'ಭಾರತದ ರಾಜಕೀಯದ ಕುರಿತು ಇಲ್ಲಿ ಕಳವಳ ಹೆಚ್ಚಾಗಿದೆ. ಆದರಲ್ಲೂ ಲೇಬರ್ ಸಮ್ಮೇಳನದ ನಂತರ ಅದು ಪ್ರಬಲವಾಗಿದೆ; ಆದಕಾರಣ ಈಗ ಹೇಳಿಕೆ ಕೊಡುವುದು ಸೂಕ್ತವಲ್ಲ' ಎಂದು ಅಮೆರಿಯವರು ಹೇಳಿದರು. 'ಪರಿಸ್ಥಿತಿಯನ್ನು ಚೆನ್ನಾಗಿ ನಾನೇ ಪರಿಶೀಲಿಸಿರುವುದಾದರೂ ಯಾವಾಗ ಹೇಳಿಕೆ ಕೊಡುವೆನೆಂದು ನಾನು ಹೇಳಲಾರೆನೆಂದರು.

ರಶ್ಯವು ಸಿದ್ಧವಾಗಬೇಕು!

ಬ್ರಿಟನಿನಲ್ಲಿ ವಿಮಾನ ಧಾಳಿಯಿಂದ ಮರಣಗಳು

ಕಳೆದ ಸಪ್ಟಂಬರಿನಿಂದ ೩೯,೬೭೮ ಜನ ಸತ್ತಿದ್ದಾರೆ

ಮೇ ತಿಂಗಳಿನಲ್ಲಿಯೇ ೫೩೯೪ ಜನರ ಮರಣ

ಬ್ರಿಟನಿನ ಮೇಲೆ ಶತ್ರು ವಿಮಾನಗಳು ನಡೆಸಿದ ಕಾರ್ಯಾಚರಣೆಗಳಿಂದ ಕಳೆದ ಸಪ್ಟಂಬರಿನಿಂದ ಒಟ್ಟು ೩೯,೬೭೮ ಜನರು ಮರಣ ಹೊಂದಿದ್ದಾರೆ.

ಮೇ ತಿಂಗಳಿನಲ್ಲಿ ಬ್ರಿಟನಿನಲ್ಲಿ ವಿಮಾನ ಧಾಳಿಗಳ ಫಲವಾಗಿ ಒಟ್ಟು ೫೩೯೪ ಜನರು ಸತ್ತರು, ೫೧೮೧ ಜನರು ಗಾಯಗೊಂಡರು ಮತ್ತು ೭೫ ಜನರು ಪತ್ತೆಯಿಲ್ಲವಾಗಿದ್ದಾರೆ. ಇವರು ಸತ್ತಿರಬಹುದೆಂದು ನಂಬಿದೆ.

ಸತ್ತಿರುವವರಲ್ಲಿ ೨೫೧೨ ಜನರು ಗಂಡಸರು ೧೯೯೪ ಜನರು ಹೆಂಗಸರು ಮತ್ತು ೭೫೩ ಜನರು ೧೬ ವರ್ಷಗಳಿಗೆ ಮೀರದ ಮಕ್ಕಳು. ೧೩೪ ಜನರನ್ನು ವರ್ಗೀಕರಿಸಲಾಗಿದೆ.

ಗಾಯಗೊಂಡಿರುವವರಲ್ಲಿ ೨೯೩೦ ಜನ ಗಂಡಸರು, ೧೮೩೫ ಜನ ಹೆಂಗಸರು ಮತ್ತು ೪೧೬ ಜನರು ೧೬ ವರ್ಷ ವಯಸ್ಸಿಗೆ ಮೀರದ ಮಕ್ಕಳು.

ಸಿರಿಯಾ ಯುದ್ಧ

ಸಿರಿಯಾದಲ್ಲಿ ಫ್ರೆಂಚ್ ಸೈನ್ಯಕ್ಕೂ ಬ್ರಿಟಿಷ್ ಸೈನ್ಯಕ್ಕೂ ಇದಿರಾಗಿ ಕಾದಾಟವಾಗಿದೆ, ಬ್ರಿಟಿಷರು ಹಲವು ಕಡೆ ಮುಂದೊತ್ತಿರುವುದಾಗಿ ಪ್ರಕಟಿಸಲಾಗಿದೆ. ಜರ್ಮನ್ ಪ್ರಕಟಣೆಯೊಂದು ಜರ್ಮನರ ಗುರಿ ಈಜಿಪ್ತೆಂದೂ, ಸಿರಿಯಾದ ಬಗ್ಗೆ ಜರ್ಮನರು ಆಸೆಯಿಟ್ಟಿಲ್ಲವೆಂದೂ ತಿಳಿಸುತ್ತದೆ.

ಮಂಗಳೂರು

ಶ್ರೀ ಜತ್ತಪ್ಪ ರೈಗಳ ಬಿಡುಗಡೆ

೧೫ ದಿನಗಳ ವರೆಗೆ ಮಂಗಳೂರು ಸಬ್ ಜೈಲಿನಲ್ಲಿಟ್ಟ ಶ್ರೀ ಜತ್ತಪ್ಪ ರೈಗಳನ್ನು ಬಿಡುಗಡೆ ಮಾಡಿರುವರು. ನೆರೆಯ ಹಾವಳಿಯಿಂದ ಸಂಕಷ್ಟ ಹೊಂದಿದ ಕಾಸರಗೋಡು ತಾಲೂಕಿನ ಗ್ರಾಮಗಳಲ್ಲಿ ನೆರೆಯಿಂದ ಸಂಕಷ್ಟಪಟ್ಟವರಿಗೆ ಸಹಾಯನೀಡಗಿರುವ ಕಾರ್ಯದಲ್ಲಿ ಅವರು ಈಗ ನಿರತರಾಗಿರುವರೆಂದು ತಿಳಿಯುತ್ತೇವೆ.

ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಋತುಶೂಲೆ, ಮುಟ್ಟಾಗದಿರುವಿಕೆ, ಅಕಾಲ ಬಹಿಷ್ಟೆ, ಋತುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾವಾಯು, ಕೀಲುಗಳಲ್ಲಿ ನೋವು, ಅಂಗೈಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವ ಜ್ವರನಿವಾರಿಣಿ
ಆಹಾರ, ವಿಹಾರ, ಋತುಭೇದ ದೋಷಗಳಿಂದ ಆಮಾಶಯದಲ್ಲಿ ಕ್ರಿಮಿಗಳು ಸೇರಿ ನಾನಾ ವಿಧವಾದ ಜ್ವರಗಳು ಸಂಭವಿಸುತ್ತವೆ. ವಾತಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮತ್ತು ಇತರ ವಿಷಮಜ್ವರಗಳನ್ನೂ, ಹೊಟ್ಟೆಯಲ್ಲಿಯ ಜ್ವರಗತ್ತೆಯನ್ನೂ ವಾಸಿಮಾಡುತ್ತೆ.

ರಕ್ತಶುದ್ಧಿ ದ್ರಾವಕ
ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಸೋಮಾರಿತನ, ಮೇಹ ವ್ರಣಗಳು, ಸುಖ ಸಂಕಟಗಳು, ಬಲಹೀನತೆ, ಹೊಟ್ಟೆಯಲ್ಲಿ ಉರಿ ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ, ಮುಖಕ್ಕೆ ತೇಜಸ್ಸನ್ನೂ ಕೊಡುತ್ತೆ. ಈ ಔಷಧದಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್
ರಾಯಪೇಟ :: ಮದರಾಸು.

ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.



ನವ ಚೈತನ್ಯಕ್ಕೆ
'ಓಂಪೊನಾ'
ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:—
ದಿ ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು.

Stockists:—
Messrs. Dadha & Co., MADRAS.

ಸತ್ಯಾಗ್ರಹದ ಕುರಿತು ಗಾಂಧಿಜಿ ಪ್ರಕಟಣೆ ಹೊರಡಿಸಿದ್ದಾರೆ!

ರಚನಾತ್ಮಕಕಾರ್ಯ ಮಾಡುವವರನ್ನು ಆರಿಸಲಾಗುವುದು

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಗೋಸಾವಿಯವರು ಮಹಾತ್ಮಾ ಗಾಂಧಿಯವರನ್ನು ಕಂಡು ಅವರೊಡನೆ ಮಾತುಕತೆ ನಡಿಸಿದರು. ಆಗ ಮಹಾತ್ಮಾ ಗಾಂಧಿಯವರು ಅವರಿಗೆ ಸತ್ಯಾಗ್ರಹಿಗಳ ಪಟ್ಟಿಯನ್ನು ಇನ್ನು ಮುಂದೆ ಮಾನ್ಯಮಾಡುವಲ್ಲಿ ಹೊಸ ತಂತ್ರವನ್ನು ಅನುಸರಿಸಲಾಗುವುದೆಂದು ತಿಳಿಸಿ ಈ ರೀತಿ ಹೇಳಿದರು.

ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಭಾವೀ ಸತ್ಯಾಗ್ರಹಿಯ ಹೆಸರನ್ನು ನನ್ನ ಕಡೆಗೆ ಒಪ್ಪಿಸಿದ ಮೇಲೆ, ಅದು ಒಪ್ಪಿಸಲ್ಪಟ್ಟ ದಿನದಿನದ ಸಂಬಂಧಿಸಿ ಸತ್ಯಾಗ್ರಹಿಯು ತನ್ನ ಖಾಸಗಿ ಚಟುವಟಿಕೆಗಳನ್ನು ಸಲ್ಲಿಸಿ ಹದಿನಾರು ವಿಧದ ವಿಧಾಯಕ ಕಾರ್ಯಕ್ರಮದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ನಿರತನಾಗಬೇಕು. ಅವನು ತನ್ನ ಹತ್ತಿರ ಒಂದು ದಿನಚರಿ ಇಟ್ಟುಕೊಂಡು ಪ್ರತಿದಿವಸ ಮಾಡಿದ ಕಾರ್ಯವನ್ನು ಅದರಲ್ಲಿ ಬರೆಯಬೇಕು. ಮತ್ತು ಆ ದಿನಚರಿಯನ್ನು ತಮ್ಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮುಖಾಂತರ ನನಗೆ ಒಪ್ಪಿಸಬೇಕು. ಆ ದಿನಚರಿಗಳನ್ನು ಪರಿಶೀಲಿಸಿದ ಮೇಲೆ ಅರ್ಹರಾದ ಜನರಿಗೆ ನಾನು ಸತ್ಯಾಗ್ರಹಕ್ಕೆ ಅಪ್ಪಣೆ ಕೊಡುವೆನು. ಉಳಿದವರು ಅಪ್ಪಣೆ ಸಿಗುವ ವರೆಗೆ ಇದೇ ರೀತಿ ವಿಧಾಯಕ ಕಾರ್ಯಕ್ರಮ ಮಾಡುತ್ತ ಹೋಗಬೇಕು. ಸತ್ಯಾಗ್ರಹಿಯು ಕಾಂಗ್ರೆಸಿನಿಂದ ಯಾವುದೇ ತರದ ಧನಸಹಾಯ ಅಪೇಕ್ಷಿಸತಕ್ಕದ್ದಲ್ಲ. ಇದರಿಂದ ಸತ್ಯಾಗ್ರಹಿಗಳ ಸಂಖ್ಯೆಯು ಬಹಳ ಕಡಿಮೆಯಾಗುವುದೆಂಬುದು ನನಗೆ ಗೊತ್ತುಂಟು. ಆದರೆ ನನಗೆ ಸಂಖ್ಯೆಯನ್ನು ಹೆಚ್ಚಿಸುವುದು ಬೇಕಾಗಿರದೆ ಯೋಗ್ಯರಾದ ಜನರು ಬೇಕಾಗಿರುವರು.

ಬಿಡುಗಡೆಹೊಂದಿದ ಸತ್ಯಾಗ್ರಹಿಗಳಿಗೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು, ಅವರು ಬಿಡುಗಡೆಹೊಂದಿದ ಒಂದು ವಾರದೊಳಗಾಗಿ ಪುನಃ ಸತ್ಯಾಗ್ರಹ ಮಾಡಲು ಕೇಳಿಕೊಳ್ಳಬೇಕು. ನಾವು ನಮ್ಮ ಗುರಿಯನ್ನು ಮುಟ್ಟುವ ವರೆಗೆ ಈ ಕ್ರಮವು ಹಾಗೆಯೇ ಸಾಗಬೇಕು. ಹೋರಾಟವು ಈಗ ಬರಬರುತ್ತ ಉಗ್ರವಾಗಿ ಸಾಗಿದ್ದು ನಾವು ಎಲ್ಲ ಪರಿಣಾಮಗಳಿಗೂ ತಲೆಗೊಡಬೇಕಾಗುವುದು.

ಮೂಲ ತತ್ವಕ್ಕನುಸರಿಸಿ ಸತ್ಯಾಗ್ರಹ ಪಟ್ಟಿಯಲ್ಲಿ ಹೆಸರುಕೊಟ್ಟ ಯಾವನಿಗಾದರೂ ಹೊಸ ತತ್ವವನ್ನು ಅನುಸರಿಸುವುದು ಶಕ್ಯವಿರದಿದ್ದರೆ ಅವರು ತಮ್ಮ ಹೆಸರನ್ನು ಹಿಂತೆಗೆದುಕೊಳ್ಳಲು ಸ್ವತಂತ್ರರಿರುವರು. ಈ ರೀತಿ ಪ್ರಾಮಾಣಿಕವಾಗಿ ಹಿಂತೆಗೆಯುವುದರಲ್ಲಿ ಏನೂ ಕಲಂಕವಿಲ್ಲ.

ಸ್ವಯಂಸೇವಕ ಸಂಸ್ಥೆಗಳನ್ನು ಹೊರಡಿಸಿ ಅವುಗಳನ್ನು ಸಂಘಟಿಸುವುದಕ್ಕೆ ನನ್ನ ಆಕ್ಷೇಪವಿಲ್ಲ. ಆದರೆ ಅವು ಅಹಿಂಸೆಯ ತಳಹದಿ ಮೇಲೆ ಸಂಘಟಿಸಲ್ಪಡಬೇಕು.

ಸಭ್ಯವಾದ ಹಿಂಸಾತ್ಮಕ ನಿರೋಧವು ಸಹ್ಯವಾಗಿರುವುದೆಂದೂ ಹೇಡಿತನವು ನಿಷೇಧಾರ್ಹ ಮತ್ತು ಅವಿಚಾರಣೀಯವಾಗಿರುವುದೆಂದೂ ನಾನು ಇತ್ತೀಚೆಗೆ ಹೇಳಿದ್ದುದು ಕಾಂಗ್ರೆಸಿನ ಧ್ಯೇಯವನ್ನು ಮಾನ್ಯಮಾಡದೆ ಇರುವ ಉಳಿದ ಜನರಿಗಾಗಿ ಇದೆ. ಅದು ಹಿಂಸಾತ್ಮಕ ಧ್ಯೇಯದ ಮೇಲೆ ಸ್ಥಾಪಿಸಲ್ಪಟ್ಟಿರುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ.

ಸ್ಥಾನಿಕ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸಿನ ಹೆಸರಿನಿಂದ ಹೋರಾಡಕೂಡದು, ಆದರೆ ಕಾಂಗ್ರೆಸ್ ಜನರು ಚುನಾವಣೆಗಳನ್ನು ವೈಯಕ್ತಿಕವಾಗಿ ಹೋರಾಡುವುದಕ್ಕೆ ಆಕ್ಷೇಪವಿಲ್ಲ.

ಸತ್ಯಾಗ್ರಹ ಪಟ್ಟಿಯಲ್ಲಿ ತಮ್ಮ ಹೆಸರು ಕೊಟ್ಟವರು ಇಂಥ ಚುನಾವಣೆಗಳಲ್ಲಿ ವೈಯಕ್ತಿಕವಾಗಿ ಹೋರಾಡಬಹುದೋ ಎಂದ ಕೇಳಿದ್ದಕ್ಕೆ ಸತ್ಯಾಗ್ರಹಿಗಳು ಉಮೇದುವಾರರಾಗಿ ನಿಲ್ಲತಕ್ಕದ್ದಲ್ಲವೆಂದು ಅವರು ಉತ್ತರ ಕೊಟ್ಟು, ಈಗ ಯಾರಾದರೂ ಉಮೇದುವಾರರಾಗಿ ನಿಂತಿದ್ದರೆ ಅವರು ಚುನಾವಣೆಯಿಂದ ತಮ್ಮ ಹೆಸರು ಹಿಂತೆಗೆದುಕೊಳ್ಳಬೇಕೆಂದೂ ಇಲ್ಲವೆ ಸತ್ಯಾಗ್ರಹದಿಂದ ಹಿಂತೆಗೆಯಬೇಕೆಂದೂ ಹೇಳಿದರು.

ಸತ್ಯಾಗ್ರಹ ಸುದ್ದಿಗಳು

ಸಂಯುಕ್ತ ಪ್ರಾಂತದಲ್ಲಿ ಸತ್ಯಾಗ್ರಹಿಗಳ ಸಂಖ್ಯೆ ಬೆಳೆದು ಸೆರೆಮನೆಗಳಲ್ಲಿ ಸ್ಥಳವಿಲ್ಲದ ನಿಮಿತ್ತ ಸರಕಾರದವರು ಅಪ್ರಸಿದ್ಧ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಬೇಕೆಂದು ನಿರ್ಧರಿಸಿರುವರು. ಶ್ರೀ ಪ್ರಕಾಶರ ತಂದೆಯವರಿಗೆ ಅಸ್ವಸ್ಥವಾಗಿದ್ದುದರಿಂದ ಅವರನ್ನು ಪ್ರತಿನಿತ್ಯ ಹಾಜರಿಕೊಡುವ ಶರತ್ತಿನಿಂದ ಬಿಡುಗಡೆಯಾಗಿದೆ. ಮೌ। ಆಜಾದರನ್ನು ಬರೇಲಿ ಜೈಲಿನಿಂದ ಅಲ್ಮೋರಕ್ಕೆ ವರ್ಗಾಯಿಸಲಾಗಿದೆ. ಗಡಿನಾಡಿನಲ್ಲಿ ಅಬ್ದುಲ್ ಗಫರ್ ಖಾನರು ಸತ್ಯಾಗ್ರಹಿಗಳಿಗೆ ಶಿಕ್ಷಣ ಕೊಡುತ್ತಿದ್ದಾರೆ. ಶಿಬಿರಗಳನ್ನು ತೆರೆದು ಗ್ರಾಮಗಳನ್ನು ಶುಚಿಗೊಳಿಸುವುದನ್ನು ಸೋದಾಹರಣವಾಗಿ ಕಲಿಸುತ್ತಿರುವರು.

ಮಲಬಾರಿನಲ್ಲಿ ನೆರೆಹಾವಳಿ

ಮಲಬಾರಿನಲ್ಲಿಯೂ ಭೀಷಣ ನೆರೆಹಾವಳಿ

ಮಲಬಾರಿನಲ್ಲಿಯೂ ಕಳೆದ ವಾರದಲ್ಲಿ ಆದ ನೆರೆಹಾವಳಿ ಅತ್ಯಂತ ದಾರುಣವಾಗಿದೆ. ಆಸ್ತಿಪಾಸ್ತಿಗಳು ಮನೆಮಾರುಗಳೆಲ್ಲವೂ ನೀರು ಪಾಲಾಗಿ ಜನರು ಕಂಗಾಲಾಗಿರುವರು—ಕೋಟ್ಯಂತರ ರೂಪಾಯಿಗಳಷ್ಟು ನಷ್ಟವಾಗಿರುತ್ತದೆ. ಮದ್ರಾಸು ಸರಕಾರವು ೧೦ ಸಾವಿರ ರೂಪಾಯಿಗಳಷ್ಟು ಮಾತ್ರ ಸಹಾಯಮಾಡಿರುವುದೆಂದು ತಿಳಿದಿದೆ. ಕೊಚ್ಚಿನ್ ಸರಕಾರವು ಮೂರು ಲಕ್ಷ ರೂಪಾಯಿ, ತಿರುಚ್ಚೂರ್ ಮುನ್ಸಿಪಾಲಿಟಿ ೧೦ ಸಾವಿರ ರೂಪಾಯಿ ಕೊಟ್ಟಿರುವುದು ತುಂಬಾ ಸ್ತುತ್ಯವಾದುದಾಗಿದೆ.



ಮೃದುವಾದ ಶುಚಿಯಾದ ಚರ್ಮವು, ಶುಭ್ರವಾದ ಕಾಂತಿಯುಕ್ತವಾದ ಕಣ್ಣುಗಳು, ತುಂಬಿದ ಕೃಷ್ಣ ಕಾಂತಿಯ ಕೂದಲು — ಇವು ಇದೇ ಅಂತರಂಗದ ಶುಚಿತ್ವದ ಚಿಹ್ನೆಗಳು! ನಿಮ್ಮ ಶರೀರದ ಒಳಭಾಗವನ್ನು ಶುಚಿಗೊಳಿಸಿರಿ. ಹೊಟ್ಟೆಯಲ್ಲಿ ಅಶುದ್ಧ ವಸ್ತುಗಳು ಉಳಿಯದಂತೆ ನೋಡಿಕೊಳ್ಳಿರಿ. ಪ್ರತಿ ದಿನವೂ ಒಂದು ಗ್ಲಾಸು ತಂಪಾದ ಪಾನೀಯ

ಅಂಡ್ರ್ಯೂಸ್ ಲಿವರ್ ಸಾಲ್ಟನ್ನು

ತೆಗೆದುಕೊಳ್ಳುವುದರಿಂದ ಶರೀರದ ಅಂತರಂಗವು ಶುಚಿಯಾಗುತ್ತದೆ ಮಲಬದ್ಧತೆಯು ನಾಶವಾಗುತ್ತದೆ ಮತ್ತು ಅನೇಕ ತರದ ರೋಗಗಳು ಪರಿಹಾರವಾಗುತ್ತವೆ. ಇದು ಹೊಟ್ಟೆಯನ್ನು ಬಹಳ ಶುಚಿಯಾಗಿಡುತ್ತದೆ ರಕ್ತವನ್ನು ಶುದ್ಧಗೊಳಿಸುತ್ತದೆ

ನಿಮ್ಮ ಅಂತರಂಗ ಶುಚಿತ್ವಕ್ಕಾಗಿ ದಿನನಿತ್ಯ
ಅಂಡ್ರ್ಯೂಸ್ ಲಿವರ್ ಸಾಲ್ಟ್
ಈ ಆರೋಗ್ಯ ಪಾನೀಯವನ್ನು ಉಪಯೋಗಿಸಿರಿ.

ANDREWS
LIVER SALT

ಶುಚಿಗೊಳಿಸುತ್ತದೆ—ತಂಪುಗೊಡುತ್ತದೆ—ಆನಂದಪಡಿಸುತ್ತದೆ



ದೊಡ್ಡ ಸೈ ರೂ. 1-1-0

(೭ನೇ ಪುಟದಿಂದ ಮುಂದುವರಿದುದು)

೧೦; ಗ್ರೇಟ್ ದರ್ಬಾರ ಬೀಡಿ ವರ್ಕ್ಸ್—೧೦; ಸುಜೀರ ರಾಯಪ್ಪ ನಾಯ್ಕ ಮತ್ತು ...—ರೂ. ೧೦; ಅಡಿಗೆ ವಿಟ್ಠಲಪ್ಪ ಕಣ್ಣ ಮತ್ತು ...—ರೂ. ೫; ಸುಜೀರ ನಾರಾಯಣ ... ಸ್ಸ ಎಂಡ್ ಕೊ—ರೂ. ೫; ಯು. ...ಲ್ ಶ್ಯಾನುಭೋಗ—ರೂ. ೩; ಹರೀಕಳ ...ನಾಥ ನಾಯ್ಕ—ರೂ. ೨; ಪಿ. ರಾಘವೇಂದ್ರ ...ಮತ್—ರೂ. ೨; ಕಾಸರಗೋಡು ಸುಬ್ರಾಯ ...ಮತ್—ರೂ. ೧; ಯಸ್. ಆರ್. ಬಾಲ ...ಪಾಲ—ರೂ. ೧; ಡಾ। ವಿ. ಪಿ. ಕಾಮತ್—...ಥಮ ಚಿಕಿತ್ಸೆ ಮದ್ದುಗಳ ಮತ್ತು ೧೦೦ ಎಸ್ಪೆ...ನ್ ಮಾತ್ರೆಗಳು; ಯು. ಆರ್. ಕೃಷ್ಣನಾಯಕ್ ...ಂಡ್ ಸನ್ಸ್—೬ ಲಾಟೆನು; ಕೆ. ವೆಂಕಟೇಶ ...—೫ ಪಾತ್ರೆಗಳು; ಮಂಗಳೂರು ಸ್ವದೇಶಿ ...ಸ್ಟೋರ್ಸ್—೬ ಡಜನು ಮಕ್ಕಳ ಅಂಗಿ.

ಜಿಲ್ಲಾ ಹರಿಜನ ಲೇಬರ್ ಲೀಗ್

ದ. ಕ. ಹರಿಜನ ಲೇಬರ್ ಲೀಗಿನ ಒಂದು ಮಹಾಸಭೆಯು ತಾ. ೧೫ರಂದು ಶ್ರೀ ಕೆ. ಈಶ್ವ...ನವರ ವಿಶ್ರಾಂತಿ ಭವನದಲ್ಲಿ ಶ್ರೀ ಕೆ. ತುಕ್ರ...ರ ಅಧ್ಯಕ್ಷತೆಯಲ್ಲಿ ಜರುಗಿ ಹೊಸ ವರ್ಷದ ...ಧಿಕಾರೀ ವರ್ಗವಾಗಿ ಶ್ರೀ ಕಂಕನಾಡಿ ತುಕ್ರ (ಅಧ್ಯಕ್ಷ), ಶ್ರೀ ಬೆಂಗರೆ ತನಿಯ (ಉಪಾಧ್ಯಕ್ಷ) ಶ್ರೀ ಕೆ. ಈಶ್ವರ (ಕಾರ್ಯದರ್ಶಿ), ಶ್ರೀ ಕೆ. ಗುರ್ವ, ಶ್ರೀ ಕೆ. ಅತಣ್ಣ, ಶ್ರೀ ಕೆ. ಕೃಷ್ಣ ಮಾಸ್ತರ್, ಶ್ರೀ ಮುಂಡ ನೋಟ್ರಿ, ಶ್ರೀ ಕೆ. ಬಟ್ಟು, ಶ್ರೀ ಸೀನ ಇವರನ್ನು ಕಮಿಟಿ ಮೆಂಬರರಾಗಿಯೂ ಆರಿಸಲಾಯಿತು.

ಉಚ್ಚಿಲ

ಇಲ್ಲಿಯ ಬೋವಿ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ: 31-5-'41ರಂದು ಶ್ರೀ ಬಿ. ವೈಕುಂಠ ಬಂಗೇರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾರಂಭಕ್ಕೆ ಊರ ಮಹನೀಯರಲ್ಲದೆ ವರಗೃಹಸ್ಥರೂ ಆಗಮಿಸಿದ್ದರು. ದೇವರ ಪ್ರಾರ್ಥನೆ, ಅಧ್ಯಕ್ಷರ ಉಪಕ್ರಮ ಭಾಷಣ, ಶಾಲಾಭಿನಂದನ, ಮುಖ್ಯೋಪಾಧ್ಯಾಯರಿಂದ ವರದಿ ವಾಚನ, ಇನಾಮು ಹಂಚೋಣ ಇವುಗಳಾದ ಅನಂತರ ಶಾಲಾ Vನೇ ದರ್ಜೆಯ ವಿದ್ಯಾರ್ಥಿನಿ ಯು. ಮರಿಯಮ್ಮ ಇವಳೂ, ಶ್ರೀ ಯಮ್. ನಾಥವರಾಯರೂ ಮಾತಾಡಿದರು. ಬಳಿಕ ಅಧ್ಯಕ್ಷರ ಭಾಷಣವಾಗಿ ಧನ್ಯವಾದವನ್ನು ಅರ್ಪಿಸಿದ ಮೇಲೆ ಬಾಲಕರಿಂದ ವಿವಿಧ ಆಟುವಟಿಕೆಗಳು ಪ್ರದರ್ಶಿಸಲ್ಪಟ್ಟವು. 'ಅರುಣೋದಯ'ವೆಂಬ ನಾಟಕವು ಅಭಿನಯಿಸಲ್ಪಟ್ಟಿತು.

ಕಟಪಾಡಿಯಲ್ಲಿ ಸತ್ಯಾಗ್ರಹಿ ರಾಮ ಪುದುವಾಳರ ಕಾರ್ಯಕ್ರಮ

ಹರಿಜನರ ಬಗ್ಗೆ ರಾತ್ರೆ ಶಾಲೆ ತೆರೆಯಲ್ಪಟ್ಟಿತು

ಶ್ರೀ ರಾಮ ಪುದುವಾಳರು ಸತ್ಯಾಗ್ರಹವನ್ನು ಹೂಡಿ ಬಂಧಿತರಾಗದೆ ಅಲ್ಲಲ್ಲಿ ಸಾರ್ವಜನಿಕ ಭಾಷಣಗಳನ್ನು ಕೊಡುತ್ತಾ, ತಾ. ೭ರಲ್ಲು ಸಾಯಂಕಾಲ ಉದ್ಯಾವರದಿಂದ ಕಟಪಾಡಿಗೆ ಬಂದು ತಾ. ೮ರಲ್ಲು ಕಟಪಾಡಿಯ 'ಸರಸ್ವತೀ ಸಮಾಜದ ಮಂದಿರದಲ್ಲಿ ಒಂದು ಸಾರ್ವಜನಿಕ ಭಾಷಣವನ್ನು ಮಾಡಿದರು. ತಾ. ೯ರಿಂದ ೧೧ರ ವರೆಗೆ ಇಲ್ಲೇ ಉಳಕೊಂಡು ಹರಿಜನರ ವಸತಿಗಳಿಗೆ ಹೋಗಿ ಅವರಿಗೆ ಹಿತೋಪದೇಶ ಕೊಟ್ಟು ತಾ. ೧೧ರಲ್ಲು ಮಂಚಕಲ್ಲಿನಲ್ಲಿಯೂ ತಾ. ೧೩ರಲ್ಲು ಕಾಪಿನಲ್ಲಿಯೂ ಭಾಷಣಗಳನ್ನು ಮಾಡಿ ಪುನಃ ಕಟಪಾಡಿಗೆ ಬಂದು ಹರಿಜನರ ಬಗ್ಗೆ ಒಂದು ರಾತ್ರೆ ಶಾಲೆಯನ್ನು ತೆರೆದರು. ತಾ. ೧೬ರಲ್ಲು ಶ್ರೀ ಪಿ. ವೆಂಕಟ್ರಾಯ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿ ಹರಿಜನ ವಿದ್ಯಾರ್ಥಿಗಳಿಗೆ ಸುಧಾರಣೆಯ ವಿಷಯ, ವಿದ್ಯಾಭ್ಯಾಸದ ವಿಷಯ ಮತ್ತು ಅವರ ಆಚಾರಗಳ ಬಗ್ಗೆ ಬೋಧಪ್ರದವಾದ ಭಾಷಣವನ್ನಿತ್ತು ಸದರೀ ಶಾಲೆಯ ಉದ್ದೇಶವು ಸಫಲವಾಗಲೆಂದು ಹರಸಿ ಅಕ್ಷರಾಭ್ಯಾಸ ಆರಂಭವನ್ನು ತಾನೇ ಸ್ವತಃ ಮಾಡಿಸಿ ಅಂದಿನ ಸಭೆಯನ್ನು ಮುಕ್ತಾಯಗೊಳಿಸಿದರು. ಹರಿಜನರಿಗೆ ವಿದ್ಯಾಭ್ಯಾಸವನ್ನು ಕೊಡುವರೇ ಅಧ್ಯಾಪಕನನ್ನಾಗಿ ವರ್ಷಾದಿಂದ ಹಳ್ಳಿಕೈಗಾರಿಕೆಗಳನ್ನು ಕಲಿತು ಬಂದಿರುವ ಶ್ರೀ ಟಿ. ಜನಾರ್ಧನ ಕೆ... ಯವರನ್ನು ನೇಮಿಸಲಾಯಿತು.

ತಾ. ೧೬-೬-೪೧ರಲ್ಲು ಸದರಿ ಶಾಲೆಯ ...ಂಮಂದಿ ಹರಿಜನರೂ ಒಟ್ಟು ಬಿಲ್ಲವರೂ ನಾಲ್ಕು ಮಂದಿ ಕೊರಗರೂ ಒಟ್ಟು ೨೫ ಮಂದಿ ವಿದ್ಯಾರ್ಥಿಗಳು ಹಾಜರಿದ್ದರು. ಇದೇ ದಿನ ಬೆಳಿ... ನಾಲ್ಕು ಕೊರಗರ ವಿದ್ಯಾರ್ಥಿಗಳನ್ನು ಅಂಬಾ... ಎಲಿಮೆಂಟರಿ ಶಾಲೆಗೂ ಸೇರಿಸಿದ ಶ್ರೇಯಸ್ಸು ಶ್ರೀ ಪುದುವಾಳರಿಗೇ ಇರುತ್ತದೆ. ಹರಿಜನರ ಬಗ್ಗೆ ತೆರೆಯಲಾದ ಈ ರಾತ್ರಿ ಶಾಲೆಗೆ ಹರಿಜನ ಸಂಘದವರು ಸಹಾಯ ಮಾಡುವವರಾಗಿ ನಂ...ಲಾಗಿದೆ.

ಉಡುಪಿ ಬೋರ್ಡ್ ಹೈಸ್ಕೂಲಿನ ಪ್ರಥಮ ಪಾಸಾದ ಹರಿಜನ ವಿದ್ಯಾರ್ಥಿ

ಇದು ವರೆಗೆ ಉಡುಪಿಯಲ್ಲಿರುವ ಯಾ...ವೊಂದು ಹೈಸ್ಕೂಲಿನಲ್ಲಿ ಹರಿಜನ ವಿದ್ಯಾರ್ಥಿ...ಗಳು S. S. L. C. ಪಾಸಾದ್ದು ಇಲ್ಲ... ಇಲ್ಲ. ಆದರೆ ಈ ಸಲ ಹಲವು ಮಹನೀಯ...ಗಳು ಹಲವು ರೀತಿಯಲ್ಲಿ ಸಹಾಯ ಮಾಡಿ...ರಿಂದಲೂ, ಮತ್ತು ಉಡುಪಿ ಹರಿಜನ ವಿದ್ಯಾರ್ಥಿ ಭವನ ಸಂಪೂರ್ಣ ಪೋಷಣೆಯ ದೆಸೆಯಿಂದಲೂ ಶ್ರೀ. ಎ. ಗೋವಿಂದನೆಂಬ (ಹರಿಜನ ಬಾಲಕನೊಬ್ಬನು) ಈ ಸಲ ಯೋಗ್ಯ ರೀತಿಯ... ಪಾಸಾದ ಸಂಗತಿಯನ್ನು ತಿಳಿಸಲು ... ಸಂತೋಷಪಡುತ್ತೇನೆ ಎಂದು ಹರಿಜನ...ಬ್ಬರು ತಿಳಿಸುತ್ತಾರೆ.

ಮದ್ರಾಸಿನಲ್ಲಿ ಕನ್ನಡ ಪ್ರಾಥಮಿಕ ಶಾಲೆ

ಮದ್ರಾಸಿನಲ್ಲಿ ಕನ್ನಡ ಪ್ರಾಥಮಿಕ ... ಯೊಂದನ್ನು ತೆರೆಯುವ ಬಗ್ಗೆ ಒಂದು ಮ... ಹೊರಟಿದೆ. ಅದಕ್ಕೆ ಮದ್ರಾಸಿನಲ್ಲಿರುವ ಕ...ನರು ಹಾಗೂ ಹೊರಗಡೆಯವರು ಸರ್ವ ವಿ... ಸಹಾಯಗಳನ್ನು ಕೊಡುವರಾಗಿ ನಾವು ನಂ...ತ್ತೇವೆ. ಪ್ರಾಥಮಿಕ ಶಾಲೆಯನ್ನು ಪ್ರಾರಂಭಿ... ವಿಷಯದಲ್ಲಿ ಶ್ರೀ ಎಂ. ಆರ್. ಬೈಲ್, ... ಬಿ. ಬಿ. ಎಸ್., 32 ಮುಕರ್, ಸಲ್ಲ... ಚೆಟ್ಟಿ ಸ್ಟ್ರೀಟ್, ಜ. ಟ. ಮದ್ರಾಸು, ... ಒಂದು ಚಿನ್ನದವನ್ನು ಹೊರಡಿಸಿದ್ದಾರೆ.

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ

ವಿಪರೀತವಾದ ಸೆಕೆ, ಮತ್ತು ಸರಿಯಾದ ಪೋಷಣೆ ಇಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಕಿ ದೊಂದು ಸಂಜೀವಿನಿ.

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್.

K.A 2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಶಾಲಾ ಪುಸ್ತಕಗಳು

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೬, ೭ ಮತ್ತು ೮ನೆಯ ತರಗತಿಗಳಿಗೆ

ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0

ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಬೆಲೆ: ೪, ೫ನೆಯ ತರಗತಿಗೆ 0—2—0 ೬ನೆಯ 0—2—(

೭ನೆಯ 0—3—6 ೮ನೆಯ 0—3—(

ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 (

೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 (

ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 (

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ. ಸೂ: ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

'ವಂದೇ ಮಾತರಂ' ಗೀತಾಚಾರ್ಯ ಬಂಕಿಮಚಂದ್ರ ಚೆಟರ್ಜಿ

ಭಾರತದಲ್ಲಿ ವಂದೇ ಮಾತರಂ ಗೀತೆಯನ್ನು ಗಾನ ಮಾಡದವನಾರು? ಆದರೆ ದೇಶದಲ್ಲಿ ವಿಶೇಷ ಕ್ರಾಂತಿಯನ್ನೆಬ್ಬಿಸಿದ, ರಾಷ್ಟ್ರಭಕ್ತಿಯನ್ನು ಪ್ರಬೋಧಿಸಿದ, ಸ್ವಾತಂತ್ರ್ಯ ಪ್ರೀತಿಯನ್ನುಂಟು ಮಾಡಿದ ಗೀತೆಯನ್ನು ರಚಿಸಿದವನಾರೆಂದು ತಿಳಿದವರು ವಿರಳ. ಕಲ್ಕತ್ತೆಯ ಸಮೀಪದ ಕಾಂತಲಪುರವೆಂಬುದು ಬಂಕಿಮಚಂದ್ರನ ಜನ್ಮಭೂಮಿ. ಭಗವಾನ್ ಶ್ರೀ ಕೃಷ್ಣನ ವಿಹಾರಭೂಮಿ ಬೃಂದಾವನವು ಸಸ್ಯ ಸಮೃದ್ಧವಾದಂತೆ; ಗೋಕುಲವು ಗೋಪಿಕಾ ಸ್ತ್ರೀಯರ ವಿಲಾಸಮಂದಿರವಾದಂತೆ ಬಂಕಿಮನ ಜನನದಿಂದ ಕಾಂತಲಪುರವು ಸಹಸ್ರಾರು ಯಾತ್ರಿಕರ ಪುಣ್ಯ ಕ್ಷೇತ್ರವಾಯಿತು. ೧೮೩೮ನೆಯ ಇಸವಿಯಲ್ಲಿ ಆತನು ಜನಿಸಿದನು. ೧೯೩೮ನೆಯ ಇಸವಿಯಲ್ಲಿ ರಾಷ್ಟ್ರೀಯ ಕವಿಯ ಶತಮಾನೋತ್ಸವವನ್ನು ಅತ್ಯಂತ ಸಂಭ್ರಮದಿಂದ ಬಂಗಾಳದಲ್ಲಿ ಜರಗಿಸಿದರು. ಹೊರಗಣ ಪ್ರಾಂತಗಳಲ್ಲಿ ಅದರ ಪ್ರಖ್ಯಾತಿಯು ಅಷ್ಟಾಗಿರಲಿಲ್ಲ. ಮಹರ್ಷಿ ಕವಿಯನ್ನು ಹೇಗೆ ಮನ್ನಿಸಬೇಕೆಂಬ ವಿಚಾರ ಭಾರತೀಯರಿಗೆ ತಿಳಿಯದಿದ್ದುದೇ ಈ ರೀತಿಯ ಔದಾಸೀನ್ಯಕ್ಕೆ ಕಾರಣ ಹೇಳಬಹುದಲ್ಲದೆ ಬಂಕಿಮಚಂದ್ರನ ಕಾವ್ಯಸುಧೆಯಲ್ಲಿ ನ್ಯೂನತೆ ಕಂಡುಹಿಡಿಯಲಾಗದು.

ಬಂಕಿಮನು ಕಲಕತ್ತೆ ವಿಶ್ವವಿದ್ಯಾನಿಲಯದ ಮೊದಲನೆಯ ಪದವೀಧರನು. ಬಿ. ಎ. ಡಿಗ್ರಿಯನ್ನು ಪಡೆದು ಒಡನೆಯೇ ಡೆಪ್ಯುಟಿ ಮೇಜಿಸ್ಟ್ರೇಟನಾಗಿ ನೇಮಕ ಹೊಂದಿದನು. ಅನಂತರ ಬಂಗಾಳ ಸರಕಾರದ ಅಸಿಸ್ಟಾಂಟ್ ಸೆಕ್ರೆಟರಿ ಕೆಲಸವನ್ನೂ ನಿರ್ವಹಿಸಿದನು. ತನ್ನ ಕರ್ತವ್ಯ ಪಥದಲ್ಲಿ ಧೀರ ಯೋಧನಂತೆ ದುಡಿದುದಕ್ಕೆ ಜೀವಿತಾಶನವು ಆತನಿಗೆ ಸರಕಾರದಿಂದ ದೊರಕಿದರೂ ೧೮೯೪ನೇ ಇಸವಿಯೆಂದರೆ ತನ್ನ ೫೬ನೇ ವಯಸ್ಸಿನಲ್ಲಿ ದೈವಾಧೀನನಾದ್ದರಿಂದ 'ಪೆನ್ಶನು' ಬಹಳ ಸಮಯ ಪಡೆಯಲಿಲ್ಲ.

ಸರಕಾರಿ ಕೆಲಸದಿಂದಾಗಿ ಆತನಿಗೆ ವಿಶೇಷ ಬಿಡುವು ದೊರೆಯುತ್ತಿರಲಿಲ್ಲ. ಆದಿತ್ಯವಾರ, ಇತರ ರಜಾದಿನಗಳಲ್ಲದೆ ಬೇರೆ ಸಮಯವೆಲ್ಲ ತನ್ನ ಕರ್ತವ್ಯ ನಿರ್ವಹಣಕ್ಕೆ ವೆಚ್ಚವಾಗುತ್ತಿದ್ದಿತು. ಆದರೂ ಬಂಕಿಮನಲ್ಲಿ ಸಾಹಿತ್ಯ ಪ್ರೇರಣೆಯು ಬಾಲ್ಯದಿಂದಲೂ ಮನೆಮಾಡಿತ್ತು. ಬಂಗಾಳೀ ಸಾಹಿತ್ಯಕ್ಷೇತ್ರದಲ್ಲಿ ಅಂತಹ ಮೇಧಾವಿಯು ಮುನ್ನ ಜನಿಸಲಿಲ್ಲ. ಅನಂತರ 'ಸಂಗ್ರಬಾದ ಪ್ರಭಾಕರ'ವೆಂಬ ವೃತ್ತ ಪತ್ರಿಕೆಯ ಸಂಪಾದಕನೂ ಜನಪ್ರಿಯ ಕವಿಯೂ ಆದ ಈಶ್ವರ ಚಂದ್ರ ಗುಪ್ತನ ಕೈಕೆಳಗೆ ಸಾಹಿತಿಯಾಗಿ ದುಡಿದನು. ಮೊತ್ತಮೊದಲು ಬಂಕಿಮನ ಪದ್ಯಗಳು ಅಷ್ಟು ಯೋಗ್ಯತೆಯುಳ್ಳವುಗಳಾಗಿರಲಿಲ್ಲ. ವಿಶ್ವವಿದ್ಯಾನಿಲಯವನ್ನು ಬಿಟ್ಟ ತರುವಾಯ ಇಂಗ್ಲೀಷಿನಲ್ಲಿ ಅನೇಕ ಚಿಕ್ಕ ಕತೆಗಳನ್ನು ಬರೆದನು. ಅವುಗಳಲ್ಲಿ ಇತ್ತೀಚೆ ಒಂದು ಕತೆಯು ಮೋಡರ್ನ್ ರಿವ್ಯೂ ಪತ್ರಿಕೆಯಲ್ಲಿ ಪ್ರಕಟವಾಗಿದೆ. ತನ್ನ ೨೭ನೆಯ ವಯಸ್ಸಿನಲ್ಲಿ ಆತನು 'ದುರ್ಗೇಶ ನಂದಿನಿ' ಕಾದಂಬರಿಯನ್ನು ಬರೆದನು. ಅದರಿಂದ ಅವನ ಕೀರ್ತಿಯು ಮತ್ತೂ ವಿಸ್ತಾರವಾಯಿತು. ದಿನವೂ ಕೆಲಸವು ಅತ್ಯಂತ ಜವಾಬ್ದಾರಿಯಿಂದ ಕೂಡಿದ್ದರೂ ಸಾಹಿತ್ಯ ವ್ಯವಸಾಯವು ಅವ್ಯಾಹತವಾಗಿ ಸಾಗುತ್ತಿತ್ತು. ಬಂಕಿಮನ ಉದ್ಯೋಗವು ಆಗಾಗ 'ವರ್ಗಾವರ್ಗಿ' ಇದ್ದುದರಿಂದ ಸಾಹಿತ್ಯ ವ್ಯವಸಾಯಕ್ಕೆ ಎಡರು ತಪ್ಪುತ್ತಿರಲಿಲ್ಲ. ಆದರೂ ಬಂಕಿಮನ ಸಹಜ ರಸಿಕತೆಗೆ ಇದರಿಂದ ಭಂಗವುಂಟಾಗಲಿಲ್ಲ.

ಬಂಕಿಮನು ವಂಗದರ್ಶನವೆಂಬ ಮಾಸಿಕ ಪತ್ರಿಕೆಯ ಸಂಪಾದಕನಾಗಿದ್ದನು. ಆತನಿಗೆ ಸಹಾಯಕರಾಗಿ ಅನೇಕ ದಿವ್ಯದರ್ಶಿಗಳು ಆತನೊಡನೆ ಕೆಲಸ ಮಾಡುತ್ತಿದ್ದರು. ಅವನ ಉತ್ತಮ ತರದ ಕಾದಂಬರಿಗಳು ಇದರಲ್ಲಿ ಕ್ರಮವಾಗಿ ಪ್ರಕಟವಾಗುತ್ತಿದ್ದವು. ಅಲ್ಲದೆ ವಿದ್ವಾಂಸರ ಉಪನ್ಯಾಸಗಳು, ವಿಮರ್ಶೆ, ಚಾರಿತ್ರಿಕ ವಿಚಾರಗಳು, ವೈಜ್ಞಾನಿಕ ಸಂಶೋಧನೆಗಳೂ ಮೊದಲಾದ ಸಾರಸ್ವತ ಸಾಮ್ರಾಜ್ಯದ ಸಕಲ ವೈಭವಗಳೂ ಅದರಲ್ಲಡಕವಾಗಿದ್ದವು. ವಂಗದರ್ಶನ ಪತ್ರಿಕೆಯನ್ನು ಜನರು ಆದರೋತ್ಸಾಹಗಳಿಂದ ನಿರೀಕ್ಷಿಸುತ್ತಿದ್ದರು. ನಾಲ್ಕು ವರ್ಷ ಸಾಂಪ್ರದಾಯಿಕವಾಗಿ ನಡೆದುಬಂದ ಪತ್ರಿಕೆಯು ನಿಂತುಹೋಯಿತು. ಅನೇಕ ವರ್ಷಗಳ ತರುವಾಯ ಬಂಕಿಮನು ತನ್ನ ಸಹೋದರನ ಮೂಲಕ ಪತ್ರಿಕೆಯನ್ನು ಪುನರುಜ್ಜೀವನಗೊಳಿಸಿದನು. ಆದರೆ ಹಿಂದಿನ ಮಾಟಗಾರಿಕೆಯು ಅದರಲ್ಲಿ ಮತ್ತೆ ತೋರಲಿಲ್ಲ.

ಬಂಕಿಮನ ಮೊದಲು ಬಂಗಾಳೀ ಸಾಹಿತ್ಯವು ವಸ್ತುಕ ಪ್ರಬಂಧಗಳಂತೆ ಸಾಂಪ್ರದಾಯಿಕ ಶೈಲಿಯಲ್ಲಿ ಪ್ರವಹಿಸುತ್ತಿತ್ತು. ಬಂಗಾಳೀ ಕವಿತೆಯು ನೂತನ ಮಧುರವಾಗಿದ್ದರೂ ಗದ್ಯವು ಸುಲಭ ಗ್ರಾಹ್ಯವಾಗಿರಲಿಲ್ಲ. ಬಂಕಿಮನ ಶೈಲಿಯು ಆರಂಭದಲ್ಲಿ ಸಂಪ್ರದಾಯ ಶರಣವಾಗಿದ್ದರೂ ಕ್ರಮೇಣ ಲಲಿತವಾಗಿ ನೂತನ ಮಾರ್ಗದಲ್ಲಿ ಕಾಲಿಟ್ಟಿತೆನ್ನಬಹುದು. ವರ್ಷಗಳು ಕಳೆದಂತೆ ಬಂಕಿಮನ ಕಾವ್ಯವು ಪ್ರಾಸಛಂದೋನ್ವಯವಿನ್ಯಾಸದ ಜಡ ಶರೀರವನ್ನು ತೊರೆದು ಮಾನವ ಜೀವಿತ ವಿಮರ್ಶೆಯ ವಜ್ರಕಾಯವನ್ನು ಪ್ರವೇಶ ಮಾಡಿತು. ನಿರ್ದಾಕ್ಷಿಣ್ಯ ವಿಮರ್ಶೆ, ಆಸಕ್ತಿಯುಕ್ತವಾದ ವಾಗ್ವಾದ, ಇವುಗಳನ್ನು ಬಂಕಿಮನ ಶೈಲಿಯಲ್ಲಿ ನಿರೀಕ್ಷಿಸಬಹುದು. ನಾಟಕ ರಚನೆಯಲ್ಲೂ ಬಂಕಿಮನ ಕೈ ಪಳಗಿದ್ದಿತು. ಜೀವನದಲ್ಲಿ ವಿಷಮತೆ ವಿಪರೀತಗಳನ್ನು ಚಿತ್ರಿಸುವುದರಲ್ಲಂತೂ ಆತನು ಹೆಸರಾಂತ ಲೇಖಕನು. ಈತನ ಕೈಯಲ್ಲಿ ಬಂಗಾಳೀ ಗದ್ಯವೆಂಬುದು ವೀಣೆಯಂತೆ ನಾದಯುತವೂ ಆಕರ್ಷಕವೂ ಆಗಿದ್ದಿತು.

ಸಹಜ ರೀತಿಯಲ್ಲಿ ಕಲ್ಪಿತ ಕಾದಂಬರಿಗಳನ್ನು ಬರೆಯುವುದರಲ್ಲಿ ಆತನ 'ಮುಟ್ಟು' ಆಂಗ್ಲ ಸಾಹಿತ್ಯದ ಕಡೆಗೆ ಒಲಿದಿದೆ. ಆತನ ಕೆಲವು ಕಾದಂಬರಿಗಳು ಸಾಮಾಜಿಕ; ಕೆಲವು ಚಾರಿತ್ರಿಕ; ಇನ್ನು ಕೆಲವುಗಳು ಸಾಂಪ್ರದಾಯಿಕಗಳು. ಎಲ್ಲ ಬಗೆಯ ಸಾಹಿತ್ಯಕ್ಕೂ ಆತನ ಹೃದಯವು ಕ್ರೀಡಾಂಗಣ. ಒಮ್ಮೆ ಆತನ ಕಾದಂಬರಿಗಳನ್ನು ಓದಿದರೆ ಅದರ ಪರಿಣಾಮವು ಮಾಸಿಹೋಗುವುದಿಲ್ಲ. ಕಾದಂಬರಿಗಳಲ್ಲಿ ಆಯಾಯ ಪಾತ್ರಗಳ ಚಿತ್ರಣವು ಮೇಲುಸೋಟದ ತಳಿಬಣ್ಣವಲ್ಲ; ಸ್ವಾನುಭೂತಿಯಿಂದ ಕೂಡಿದ್ದು ಭಾರತ ರಾಮಾಯಣಗಳ ಪಾತ್ರ ರಚನೆಯಷ್ಟು ವೀರ್ಯವತ್ತರವೂ ಅಷ್ಟೇ. ಬಂಕಿಮನ ಪಾತ್ರ ಸೃಷ್ಟಿಯಲ್ಲೂ ಓಜಸ್ಸಿದೆ; ಕೌಶಲ್ಯವಿದೆ.

ಈತನೊಬ್ಬ ಕಟುವಿಮರ್ಶಕನೆನ್ನಬಹುದು. 'ಕಮಲಕಾಂತನ ದಫ್ತರ' ಇದು ಆತನ ಕಲುಷಿತವಲ್ಲದ ಲಲಿತ ವಿನೋದ. ಪದ್ಯಸಾಹಿತ್ಯಕ್ಕಿಂತ ಆತನ ಗದ್ಯವು ಹೆಚ್ಚಾಗಿ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಬಂಕಿಮನು ಬಿರುದುಗಳ ಕಡೆಗಾಗಲೀ ಸಾರ್ವಜನಿಕ ಕೆಲಸಗಳಲ್ಲಾಗಲೀ ಆಸಕ್ತಿ ತೋರಿಸುತ್ತಿರಲಿಲ್ಲ. ಇದರಿಂದ ಅವನಲ್ಲಿ ದೇಶಪ್ರೇಮವಿರಲಿಲ್ಲವೆಂದೂಹಿಸುವದು ತಪ್ಪು. ಸ್ವಾತ್ಮ ಸಂಗೋಪನವು ಅವನಲ್ಲಿ ಈ ಸ್ವಭಾವವನ್ನು ತಂದೊಡ್ಡಿರಬಹುದು. ಕಮಲಕಾಂತನ ಸ್ವಗತ ನುಡಿಗಳಲ್ಲಿ ಅವನ ದೇಶಪ್ರೇಮದ ಆಳವನ್ನು ಅಳೆಯಬಹುದು. 'ಆನಂದಮಠ' ಕಾದಂಬರಿಯಲ್ಲಡಕವಾದ 'ವಂದೇ ಮಾತರಂ' ಗೀತೆಯು ಆತನ ಸ್ವದೇಶ ಪ್ರೇಮದ ನಿರಾಳ ನಿದರ್ಶನವೆಂದು ಬೇರೆ ಹೇಳಬೇಕೆ? ಇದರ ಸಂದರ್ಭ ಹೀಗಿದೆ. ಭಾರತದ ಹಲವು ವೀರಯೋಧರು ಮುಸಲ್ಮಾನ ರಾಜ್ಯಕ್ಕೂ ಬ್ರಿಟಿಷ್ ಬಾದಶಾಹೀತನಕ್ಕೂ ವಿರುದ್ಧ ಬಂಡಾಯವೆಬ್ಬಿಸಿದಾಗ ಓರ್ವ ಭಾರತೀಯನು 'ವಂದೇ ಮಾತರಂ' ಗೀತೆಯನ್ನು, ಕಣ್ಣೀರು ಸುರಿಸುತ್ತ ಹಾಡಿದನು.

'ವಂದೇ ಮಾತರಂ' ಗೀತೆಯು ಛಂದೋಕ್ರಮದಿಂದ ಕೂಡಿದ ಶಬ್ದಮಾಲೆಯಲ್ಲ. ಭಾರತದ ದಾಸ್ಯಶೃಂಖಲೆಯನ್ನು ತೊಡೆದುಹಾಕಬೇಕೆಂದು ಅತುಲೋತ್ಸಾಹದಿಂದ ಕೂಡಿದ ವೀರ ಸತ್ಯಾಗ್ರಹಿಯ ಭಾವೋದ್ರೇಕದ ವಿಶಿಷ್ಟ ಪರಿಣಾಮ. ಅದರಿಂದ ವಿಶ್ವವನ್ನೇ ಒಂದುಗೂಡಿಸುವ ವಿಚಿತ್ರಶಕ್ತಿ ಅದರಲ್ಲಿದೆ. ಅದರರ್ಧಭಾಗವು ಸಂಸ್ಕೃತದಲ್ಲೂ ಉಳಿದರ್ಧಭಾಗವು ವಂಗ ಭಾಷೆಯಲ್ಲೂ ಇರುವುದು. ಅದರ ಸರಳ ಭಾಷಾಂತರ ಸಹಸ್ರಾರು ಭಾಷೆಗಳಲ್ಲಾಗಿದ್ದರೂ ಸಹಜ ಭಾಷಾಂತರ ಅಸಂಭವವೇ ಸರಿ. ಬಂಕಿಮನ 'ವಂದೇ ಮಾತರಂ' ಗೀತೆಯು ದೇಶವಾತ್ಸಲ್ಯದ ಉಕ್ಕು ತೆರೆಯಂತೆ ಹೊರಹೊಮ್ಮಿ ಭಾರತೀಯರಲ್ಲಿ ಪ್ರಚಂಡ ಪರಿಣಾಮವನ್ನುಂಟುಮಾಡಿತು.

ಈ ಗೀತೆಯು ೧೮೮೨ರಲ್ಲಿ ಆನಂದಮಠ ಕಾದಂಬರಿಯಲ್ಲಿ ಮುಹೂರ್ತಗೊಂಡಿದ್ದರೂ ಒಡನೆಯೇ ರಾಷ್ಟ್ರಗೀತವಾಗಿ ಪರಿಣಮಿಸಲಿಲ್ಲ. ೧೯೦೫ರಲ್ಲಿ ವಂಗ ವಿಭಜನೆಯ ಕಾಲದಲ್ಲಿ ಬಂಗಾಳದಲ್ಲಿ ಪ್ರಚಂಡ ಕ್ರಾಂತಿಯೆದ್ದಿತು. ಲಾರ್ಡ್ ಕರ್ಜನ್ನರ ನಿರಂಕುಶ ಪ್ರಭುತ್ವವೇ ವಂಗ ವಿಭಜನೆಗೆ ಕಾರಣ; ವಂಗದೇಶೀಯರು ಸರ್ವಥಾ ವಿಭಜನೆಯನ್ನು ಒಪ್ಪಲಿಲ್ಲ. ಆದರೆ ವಂಗ ದೇಶೀಯರ ಅಭಿಪ್ರಾಯಕ್ಕೆ ಬೆಲೆ ಸಿಗಲಿಲ್ಲ. ಲಾರ್ಡ್ ಕರ್ಜನ್ನರು ವಿಭಜನ ಕಾರ್ಯವನ್ನು ಸ್ವೇಚ್ಛಾಯುಕ್ತಿಕವಾಗಿ ಕೈಕೊಂಡರು. ಆಗಲೇ ಬಂಗಾಳದಲ್ಲಿ ತಮ್ಮ ದಾಸ್ಯತೆಯ ಅರಿವು ಜನರಿಗುಂಟಾಯಿತು. ವಿದೇಶೀಯರ ದಬ್ಬಾಳಿಕೆಯು ಮನವರಿಕೆಯಾಯಿತು. ಮಾತೃಭೂಮಿಯು ಪರದಾಸ್ಯದಲ್ಲಿರುವುದು ಪ್ರತ್ಯಕ್ಷ ಅನುಭವವಾಯಿತು. 'ವಂದೇ ಮಾತರಂ' ರಾಷ್ಟ್ರಗೀತೆಯು ಪ್ರತಿಯೊರ್ವ ವಂಗೀಯನಿಗೂ ಬಾಯ ಸೊಲ್ಲಾಯಿತು. ಸ್ವಲ್ಪ ಸಮಯದಲ್ಲೇ 'ವಂದೇ ಮಾತರಂ' ಮಂಜುಳ ನಿನಾದವು ಭಾರತ ದೇಶದಲ್ಲೆಲ್ಲ ಪ್ರತಿಧ್ವನಿಸತೊಡಗಿತು.

ಅದೊಂದು ಸುದಿನ! ಭಾರತೀಯರೆಲ್ಲ ಒಂದುಗೂಡಿ ಕಳೆದುಬಿದ್ದ ಸ್ವಾತಂತ್ರ್ಯ ಮುಕುಟವನ್ನು ಭಾರತ ಮಾತೆಯ ಶಿರದಲ್ಲೇರಿಸುವ ಶುಭ ದಿನ! ಆಗ ಮಹರ್ಷಿ ಬಂಕಿಮಚಂದ್ರನಿಂದ ರಚಿತವಾದ 'ವಂದೇ ಮಾತರಂ' ಗೀತೆಯು ಸ್ವರ್ಣಾಕ್ಷರಗಳಿಂದ ಬೆಳಬೆಳಗಿ ತನ್ನ ಸ್ವರ್ಣಮಹೋತ್ಸವವನ್ನು ನೆರವೇರಿಸಿಕೊಳ್ಳಲಿ!

ಕೆ. ಎಲ್. ಎನ್. ಉಪಾಧ್ಯಾಯ

ನನ್ನ ತಂದೆ ನನಗೊಂದು ಕೊಂಡುಕೊಡುತ್ತಾರೆ...
ಡಿಫೆನ್ಸ್
ಸೇವಿಂಗ್ಸ್
ಸರ್ಟಿಫಿಕೇಟ್
ನಿನ್ನ ತಂದೆ ನಿನಗೂ?

ಪೂರ್ತಾ ವಿವರಗಳಿಗೆ ನಿಮ್ಮ
ಹತ್ತಿರದ ಪೋಸ್ಟ್ ಆಫೀಸಿನಲ್ಲಿ ಕೇಳಿ
Kn. G.I. 40.

ಇಬ್ಬರು ಸಹೋದರರು

(೭ನೆಯ ಪುಟದಿಂದ ಮುಂದುವರಿದುದು)

ಎಲ್ಲಿ ಬರುವುದಿದ್ದರೂ ಬಾಲಪ್ಪನಿದ್ದೇ ತೀರಬೇಕು. ಅವನೇ ಅವಳಿಗೆ ಪಾಠಹೇಳಿಕೊಡಲೂ ತೊಡಗಿದನು.

ಸರಿಯಾದ ಪ್ರೇಮದ ಕುರುಹು ಹೇಗೆ ತೋರಿಸುವೆನೆಂದು ಆಕೆಗೆ ಗೊತ್ತಾಗಲಿಲ್ಲ. ತನ್ನ ತಾಯಿಯ ಕಡೆಯಿಂದ ಬಂದ ಒಂದೆರಡು ಲಕ್ಷ ರೂಪಾಯಿಗಳಲ್ಲಿ ೫೦ ಸಾವಿರ ರೂಪಾಯಿಗಳಷ್ಟನ್ನು ಆತನ ಹೆಸರಲ್ಲಿ ಮಾಡಬೇಕೆಂದು ನಿಶ್ಚಯಿಸಿ ಹಾಗೆ ಮಾಡಿದಳು. ಅದರ ಉಪಯೋಗ ಮತ್ತೆ ಬಂತು.

ಗಿರಣಿಯು ಕೆಲವೊಂದು ಕಾರಣದಿಂದ ಎಡವುತ್ತ ಬಂದು ಕಡೆಗೆ ಬಿದ್ದು ಹೋಗುವ ಪರಿಸ್ಥಿತಿಗೆ ಬಂತು. ಆಗ ಗುಲ್ಶನ್ ಬಾಲಪ್ಪನಿಗೆ ಆ ರೂಪಾಯಿಯ ಸುದ್ದಿ ಹೇಳಿದಳು. ಆತನನ್ನು ಗಿರಣಿಯ ಪಾಲುಗಾರನನ್ನಾಗಿ ಮಾಡಿ ಬಂಡವಾಳ ಏರಿಸಿದಳು. ಇದೆಲ್ಲ ತಂದೆಗೆ ತಿಳಿಯದಿರಲಿಲ್ಲ. ತಿಳಿದರೂ ಮಾತನಾಡಲು ಉಪಾಯವಿರಲಿಲ್ಲ. ತನ್ನ ಹಣವನ್ನು ತನ್ನಿಷ್ಟದಂತೆ ಮಾಡಲು ಆಕೆಗೆ ಅಧಿಕಾರವಿತ್ತು.

ಬಾಲಪ್ಪ ಅದರ ಮೆನೇಜರನಾಗಿ ತಾನೇ ಗಿರಣಿಯ ಸೂತ್ರವನ್ನು ಕೈಕೊಂಡನು. ಗಿರಣಿಯು ದಿನೇದಿನೇ ಹೆಚ್ಚುವಳಿಯ ತೊಡಗಿತು. ಈಗ ಬಾಲಪ್ಪನೊಡನೆ ಯಾವ ವಿಧದಿಂದ ನಡೆಯಲೂ ಆಕೆಗೆ ಆತಂಕವಿರಲಿಲ್ಲ. ಅವಳ ಆಸೆಗೆ ಕೊನೆ ಮೊದಲಿರಲಿಲ್ಲ.

ಒಂದು ಸಂಜೆ ಗುಲ್ಶನ್ ಬಾಲಪ್ಪನೊಂದಿಗೆ ತನ್ನ ಸ್ವಂತ ಕಾರನ್ನು ತಾನೇ ನಡೆಸುತ್ತ ಚೌಪಾಟಿಗೆ ಹೋಗಿದ್ದಳು. ಸೀನಣ್ಣ ಆ ದಿನ ಆಕೆಯನ್ನು ಕಾಣಲು ಬರುತ್ತಿದ್ದನು. ಹಲವು ದಿನಗಳಿಂದ ಆಕೆಯ ಸಂದರ್ಶನೆಯಿರಲಿಲ್ಲ. ಬರುತ್ತಿದ್ದಂತೆ ಚೌಪಾಟಿಯಲ್ಲಿ ಗುಲ್ಶನ್ ಬಾಲಪ್ಪನೊಡನೆ ಸರಸದಿಂದ ಮಾತನಾಡುವುದನ್ನು ಕಂಡನು. ಆತನಿಗೆ ತನ್ನ ಕಣ್ಣುಗಳನ್ನೇ ನಂಬಲು ಬರಲಿಲ್ಲ.

ಸೀನಣ್ಣ 'ಗುಲ್ಶನ್'! ಎಂದನು.

ಗುಲ್ಶನ್ ಆತನನ್ನು ನೋಡಿದಳು. ಅವಳಿಗೆ ಮಾತು ಬರಲಿಲ್ಲ. ಬಾಲಪ್ಪ ಆಕೆಯ ಮುಖದಲ್ಲಾದ ಬದಲಾವಣೆಯನ್ನು ಎಣಿಕೆ ಹಾಕುತಿದ್ದನು. ಆ ಸಹೋದರರ ಹೃದಯಗಳು ತುಫಾನಿಗೆ ಸಿಲುಕಿದ ಹಡಗಿನಂತೆ ತಳಮಳಗೊಂಡು ಓಲಾಡಹತ್ತಿದವು! ಸೇಡಿನ ಹಾವು ಅವರಂತರಂಗದಲ್ಲಿ ಅನ್ಯಾಯವಾಗಿ ತಲೆಯೆತ್ತಿತು. ಗುಲ್ಶನ್ ಬಾಲಪ್ಪನನ್ನು ಒಮ್ಮೆ ಅಪ್ಪಿ ಹಿಡಿದುಕೊಂಡಳು.

ಸಿಟ್ಟಿನ ಓಟದೊಡನೆ ತಿಂಗಳೊಂದು ಕತ್ತಲೆಯ ಮುಸುಕಿನಲ್ಲಿ ಅವಿತುಕೊಂಡಿತು. ಬಾಲಪ್ಪನಿಗೆ ಮಾತ್ರ ಅಂದಿನ ದಿನವೇ ಪ್ರಾತಃಕಾಲವೂ ಉದಯವಾದಂತೆ ಕಣ್ಣು ಸಿಂತು, ಆತನ ಜೀವನದ ಜ್ಯೋತಿನು ಅಪಹರಿಸಲು ಎದುರಾಡುವ ಶಾಹುವಿನಂತೆ ಅಣ್ಣನ ಕ್ರೋಧ ತುಂಬಿದ ಉಗ್ರಸ್ವರೂಪ ಮುಂದೆ ಬರುತ್ತಿತ್ತು. ಅವನು ಕೆಲವೇ ದಿನಗಳಲ್ಲಿ ಅರೆಹುಚ್ಚನಂತಾಗಿ ಹೋದನು. ಗುಲ್ಶನ್ ಅವನನ್ನು ಹೇಗೆ ಸಮಾಧಾನಪಡಿಸಿದರೂ ಆತನ ಮನಸ್ಸು ಶಾಂತಿಗೊಳ್ಳುತ್ತಿರಲಿಲ್ಲ; ಏನುಪಚಾರದಿಂದಲೂ ಸ್ತಿಮಿತಕ್ಕೆ ಬರಲಿಲ್ಲ; ಅಂದಿನ ಆ ನೆನಪು ಬಂದಾಗ ಆಕೆಯೂ ನೊಂದುಕೊಳ್ಳುವಳು.

ಅಣ್ಣನ ವಿಷಯ ತಮ್ಮನೊಡನೆ ಏನೆಂದು ಹೇಳಬೇಕೆಂದು ಆಕೆಗೆ ತೋರಲಿಲ್ಲ; ಒಮ್ಮೆ ಅಯೋಗ್ಯವೆಂದೆನ್ನಿಸಿತವಳಿಗೆ. ಆದರೂ ಒಂದು ದಿನ ಮನಸ್ಸು ಗಟ್ಟಿಮಾಡಿ ಹೇಳಿಬಿಟ್ಟಳು—'ನಿಮ್ಮಣ್ಣ ಪಾಠ ಹೇಳುವಾಗ ಪ್ರೀತಿಯಿಂದ ಒಂದು ಮುತ್ತ ಕೊಡು ಎಂದರು. ನಾನು ಅನ್ಯಥಾ ನೆನಸದೆ ಒಡನಾಡಿಯೆಂಬ ಅಭಿಮಾನದ ಮುದ್ರೆಯಾಗಿ ಆತನನ್ನು ಮುದ್ದಾಡಿದ್ದೇನೆ...ಅವರು ಏನೆಂದು ಕೊಂಡಿದ್ದಾರೋ ಯಾರಿಗೆ ಗೊತ್ತು?....'

ಬಾಲಪ್ಪ ರೇಗಿದನು. ಸೀನಣ್ಣನಿಗೆ ಬುದ್ಧಿ ಕಲಿಸಬೇಕೆಂದು ಭೊಬ್ಬೆಟವಾಡಿದನು. ಗುಲ್ಶನ್ ಸಮಾಧಾನ ಪಡಿಸಿ ಅದಕ್ಕೆ ತಾನೇ ನೋಡಿಕೊಳ್ಳುತ್ತೇನೆಂದು ಹೇಳಿದಳು. ಕೆಲವು ದಿನಗಳಲ್ಲಿಯೇ ಸೀನಣ್ಣನ ಕೆಲಸಕ್ಕೆ ಸೊನ್ನೆಯಾಯಿತು!

ಇನ್ನೂ ಬಾಲಪ್ಪನ ಸಿಟ್ಟು ಇಳಿದಿರಲಿಲ್ಲ. ಗುಲ್ಶನಿನ ಮುಖ ನೋಡಿದರೇ ಉಗ್ರ ಹುಟ್ಟುತ್ತಿತ್ತು. ಅವನ ಮನಸ್ಸು ಮುರಿದ ಕಾರಣವೇನೆಂದು ಯಾರು ಹೇಳಬೇಕು? ಒಂದು ಮುತ್ತು ಎನ್ನಲೇ? ಅಂದಿನ ಆ ದಿನದ ಚಿತ್ರವೆನ್ನಲೆ?

ಆಕೆಗೂ ಬೇಸರ ಬಂತು. ಆಕೆಯ ಜೀವನದ ಆಸೆ ಹುರುಪುಗಳು ಎದ್ದು ತರಂಗತರಂಗಗಳಾಗಿ ನೆಲಕಪ್ಪಳಿಸುತ್ತ, ಪುನಃ ಎದ್ದ ನೀರಿಗೆ ಒಡ್ಡಿಹೋಗುವಂತೆ ತೋರಿತು. ಕೊರಗಿ ಕೃಶವಾಗುತ್ತ ಬಂದಳವಳು. ಜ್ವರ ಹಿಡಿದು ಹೋದಳು. ಆಕೆಗೆ ಜೀವದಲ್ಲಿ ಮೊದಲು ತುಂಬಾ ಆಸೆಯಿತ್ತು; ಸುಖದಲ್ಲಿ ತುಂಬಾ ಪ್ರೀತಿಯಿತ್ತು. ಈಗ 'ಅವೊಂದೂ ಬೇಡ. ಹಾಳಾಗಲಿ ಎಲ್ಲ" ಎನ್ನುವಂತೆ ಅವಳ ಮಾತಾಯಿತು. ಡಬ್ಬಲ್ ನಿಮೋನಿಯಾ ಅಂಟಿ ತೀರಿಕೊಂಡಳು. ಅವಳಾತ್ಮಕ್ಕೆ ಶಾಂತಿಯಾಯಿತು.

ಬಾಲಪ್ಪ ಆಕೆಯ ಅಂತಿಮದ ಕೆಲವು ದಿನಗಳಲ್ಲಿ ಏಕೋ ಒಂದು ಬಗೆಯಾಗಿ ತನ್ನ ಹಿಂದಿನ ಕತೆಯನ್ನು ನೆನೆದು ಹಂಬಲಿಸುತಿದ್ದ. ಅವಳು ಮೃತಳಾದ ರಾತ್ರಿ ಕೋಣೆಯ ಅಗಳಿಹಾಕದೆ ಉಟ್ಟಉಡಿಗೆಯಲ್ಲಿಯೇ ಹೊರನಡೆದು ಹೆಬ್ಬಾಗಿಲು ದಾಟಿ ಬಂದನು. ಬಹುದೂರದಲ್ಲಿ ಒಂದು ಲಾಟಾನು ತೋರಿತು. ಹತ್ತಿರ ಮನುಷ್ಯನಾಗಿ ತೋರಲಿಲ್ಲ. ಹತ್ತಿರ ಹೋಗಿ ನೋಡುತ್ತಾನೆ. ಗಟ್ಟರಿ (gutter) ನೊಳಗೆ ಯಾರೋ ಬಿದ್ದಿರುವುದು ಕಂಡಿತು. ನಾಲ್ಕು ಜನರನ್ನು ಕೂಗಿಕರೆದನು. ಒಳಗಿನ ಜನವನ್ನು ಹೊರತೆಗೆದು ಪರೀಕ್ಷಿಸಿ ನೋಡುತ್ತಾನೆ: ಅವನಿಗೆ ಮಾತು ಬರಲಿಲ್ಲ; ನಾಲಗೆ ಅಲ್ಲಾಡಲಿಲ್ಲ. 'ಅಣ್ಣಾ!' ಎಂದು ಒಂದೇ ಉಸುರಿನಲ್ಲಿ ಆತನ ಮೃತದೇಹದ ಮೇಲೆ ಬಿದ್ದುಬಿಟ್ಟನು!

WANTED

A teacher for the Sri Srinivas Patashala, Mangalore; he should have the minimum qualification of having been declared eligible in the S. S. L. C. Public Examination. Applications from candidates having higher qualifications or who have successfully completed the Secondary Grade Training course, will receive better consideration. True copies of certificates should be enclosed with the application. Applications should reach the undersigned by 25-6-1941. Further particulars can be obtained from the office.

Sri Srinivas Patashala, Vithoba Temple Road, Mangalore.
Date 17—6—'41.

G. Upendra Prabhu,
Hon. Manager

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸ್ಸಾನಿಯವರ

ಜಗತ್ಪ್ರಸಿದ್ಧವಾದ ಔಷಧ.

GONO KILLER

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಶರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾನಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ ವಿಠಲ್ ಭಾಯ್ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** Vithulbhai Patel Road, BOMBAY 4

Madras Agent: **Appah & Co, China Bazar Madras.**

ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ಸಿನೆಮಾ ಸುದ್ದಿ

ರಾಮುಶುಖಲ್ ಮತ್ತು ಜಗದೀಶ್ ಶೆಟಿ

ಬೊಂಬೆ ಟಾಕೀಸಿನಲ್ಲಿದ್ದ ರಾಮುಶುಖಲ್ ಮತ್ತು ನ್ಯೂಥಿಯೇಟರ್ಸಿನಲ್ಲಿದ್ದ ಜಗದೀಶ್ ಶೆಟಿ ಇವರು ರಣಜಿತ್ ಮೂವಿಟೋನನ್ನು ಸೇರಿರುವರೆಂದು ಸುದ್ದಿ.

ಚರಣೋಕಿದಾಸಿ

ಚರಣೋಕಿದಾಸಿ ಚಿತ್ರವು ತಯಾರಾಗುತ್ತಿದೆ. ವನಮಾಲಾ, ಜಾಗೀರ್ದಾರ್ ದುರ್ಗಾಖೋಟೆ ಇವರು ಇದರಲ್ಲಿ ಅತ್ಯುತ್ತಮ ಅಭಿನಯಗಳನ್ನು ಮಾಡುತ್ತಿರುವರೆಂದು ತಿಳಿದಿದೆ.

ಪಂಚೋಲಿ ಆರ್ಟ್‌ಪಿಕ್ಚರ್ಸ್

ಇದರ 'ಚೌಧರಿ' ಎಂಬ ಚಿತ್ರ ಪೂರ್ಣವಾಗುತ್ತಾ ಬಂತು. ನೂರ್‌ಜಹಾನಳು ಇದರಲ್ಲಿ ನಾಯಕಿ ಚಾಂದಳ ಪಾತ್ರ ವಹಿಸುವಳು. ಗುಲಾಮು ಮಹಮ್ಮದನು ನಾಯಕಪಾತ್ರ ವಹಿಸುವರು.

'ಖಾನ್ ಧನ್' ಎಂಬ ಹೊಸ ಚಿತ್ರವನ್ನು ಇವರು ತಯಾರಿಸುತ್ತಿದ್ದಾರೆ.

ತುಫಾನ್ ಮೈಲ್

ವಾಡಿಯಾ ಮೂವಿ ಟೋನಿನವರು 'ತುಫಾನ್ ಮೈಲ್' ಚಿತ್ರವನ್ನು ತಯಾರಿಸುತ್ತಿದ್ದಾರೆ. ಇ. ಬಿಲ್ಲಿಮೋರಿಯ, ಶೋರಿ, ದಿಕ್ಷಿತ್, ವಸಂತಿ ಮತ್ತು ಹರಿಶಿವದಾಸಿನಿ ಇವರು ಪಾತ್ರವಹಿಸುವರು.

ರಾಜಪುತ್‌ರಿಕ್ ಮತ್ತು ಹರಿಶಿವದಾಸಿನಿ ಎಂಬಿವೆರಡು ಚಿತ್ರಗಳನ್ನು ವಾಡಿಯಾದವರು ತಯಾರಿಸಲಿರುವರೆಂದು ತಿಳಿಯುತ್ತದೆ.

ರೋಟಿ

ರೋಟಿ ಚಿತ್ರದ ಪ್ರಾರಂಭ ಕಾರ್ಯಕ್ಕೆ ನಿರ್ದೇಶಕ ಮೆಹಬೂಬರು ಕೈಹಚ್ಚಿರುವರು. ನೇಶನಲ್ ಸ್ಟುಡಿಯೋದವರು ಇದನ್ನು ತಯಾರಿಸುವರು.

ನಿರ್ದೇಶಕ ಅದ್ವಾನಿ

ನಿರ್ದೇಶಕ ಜೆ. ಪಿ. ಅದ್ವಾನಿ ಇವರು ಮೋಹನ್ ಪಿಕ್ಚರ್ಸಿನಲ್ಲಿಯೇ ಇರುವರಾಗಿಯೂ 'ರಾಜಾದ' ಚಿತ್ರವನ್ನು ತಯಾರಿಸುವರಾಗಿಯೂ ತಿಳಿದಿದೆ.

ಮಹಾಸೂವರ್.

ಮಹಾಸೂವರ್ ಎಂಬ ಚಿತ್ರವನ್ನು ನಿರ್ದೇಶಕ ಹುಸೇನರು (ಕ್ಷಿದಿ ಚಿತ್ರ ನಿರ್ಮಾಪಕರು) ತಯಾರಿಸುವರೆಂದು ತಿಳಿದಿದೆ.

ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ. ಇದಕ್ಕಾಗಿ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿಯಲ್ಲಿರಿಸಿ ನಂತರ ಯಾವ ಪೆಟ್ಟು ಗಾಯಗಳಿಗೂ ತಯಾರಾಗಿರಿ.

ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಗಾಯ, ಪೆಟ್ಟು, ಪರಚುವಿಕೆ, ಮುದ್ದಣ ಇವುಗಳಿಗೆ ಹಚ್ಚಿರಿ. ನಂಜಿನ ಯಾದೀತೆಂಬ ಬೆದರಿಕೆಯಿಲ್ಲ. ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಯಾ ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ. ಸಹಿಸಲಸದಳವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಹರಡದಂತೆ ಮಾಡುತ್ತದೆ. ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ. ಅಸಹ್ಯವಾದ ತುರಿಗಜ್ಜಿಗಳು ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ. ಇತರ ಮೊಂಡು ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗವೆ. ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ.

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ, ಕುರು, ಗಾಯ, ಪೆಟ್ಟು, ವ್ರಣ, ಮುದ್ದಣ, ಬಾತುವಿಕೆ, ತುರಿಕಜ್ಜಿ ವಿಷಪ್ರಾಯವಾದ ಗಾಯ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉಪಯೋಗಿಸಿರಿ.

ಕುಟಿಕೂರಾ ಮುಲಾಮು
Cuticura Ointment

ಶುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯ ಪಾಲನೆಯಿಲ್ಲದ್ದೆ ಎಂದೋ ಮರೆತು ಹೋಗಿರುವುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗಳ್ಲ ನಮ್ಮ ವಿನಂತಿ ಏನೆಂದರೆ "ಶುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುವೆ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ತೋರಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೀಸೆಗೆ ರೂ. 1



ಅಧ್ಯಕ್ಷ, ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್. (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ್ ಕಾಲೇಜಿನ ಮಾಜಿ ಕೆಮಿಸ್ಟರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್: ಷಾ ಕಂಪೆನಿ, ಹಂಪನಕಟ್ಟ, ಮಂಗಳೂರು

NOTICE

The Hindusthan Cinema Ltd.

(In Liquidation)

A general meeting of the Company will be held on 3-8-1941 at 8-30 A. M. at the Liquidator's office in Car Street Mangalore. When the account showing how the winding up has been conducted and the property of the Company has been disposed of will be laid before it.

Mangalore } M. Keshava Pai,
13-6-1941 } Liquidator.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 316/1936
R. E. P. No. 208/1940

1. ಮಂಜಯ್ಯ ಶೆಟ್ಟಿ, ಗುಬ್ಬಿ ಶೆಟ್ಟಿರ ಮಗ. 2. ತಿಮ್ಮಪ್ಪ ಶೆಟ್ಟಿ ಕೇ ಶೆಟ್ಟಿರ ಮಗ: ಕುಂದಾಪುರ ತಾಲೂಕು ನಾಡ ಗ್ರಾಮದ ಸೌಂಕಾಡಿಯಲ್ಲಿರುವವರು. } ವಾದಿರು

2ನೇ ಡೀಶಸ್ತ್ರಯ, ಚುಂಗಿಗುಡ್ಡೆ ರಂಗಪ್ಪಯ್ಯನವರ ದತ್ತದ ಮಗ, ನಾಡ ಗ್ರಾಮದ ಚುಂಗಿಗುಡ್ಡೆಯಲ್ಲಿರುವವ, } ಪ್ರತಿವಾದಿ

3. ವಾದಿಗಳ ಮೊಕದ್ದಮೆಯ ಡಿಕ್ರಿಯಲ್ಲಿ ಜವಾಬ್ದಾರಿಯಿರುವ ಸ್ಥಿರ ಆಸ್ತಿಗಳನ್ನು ಮೊಕದ್ದಮೆಯ ಅಮ್ಲಜಾರಿಯಲ್ಲಿ ಏಲಮ್ಮಿಗೆ ಅಪೇಕ್ಷಿಸಿ ಏಲಂ ಇಸ್ತಿಹಾರು ಹಾಜರು ಪಡಿಸಿದ್ದಾರೆ. ಸದ್ರಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿಶ್ಚಯಿಸುವರೆ ತಾ. 8-7-1941ಕ್ಕೆ ಮೊಕದ್ದಮೆ ಕೋರ್ಟಿನಲ್ಲಿ ಕಸ್ಸಿಗೆ ಇಟ್ಟಿದೆ. ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ತಾರೀಕಿಗೆ ಹಗಲು 11 ಗಂಟೆಗೆ ಮೊಕದ್ದಮೆ ಕೋರ್ಟಿನಲ್ಲಿ ಹಾಜ್ರಾಗಿ ಹೇಳತಕ್ಕದ್ದು. ಇದಕ್ಕೆ ತಪ್ಪಿದರೆ ಸದ್ರಿ ಅಮ್ಲಜಾರಿಯಲ್ಲಿ ನಿಮ್ಮ ಪ್ರತಿವಾದಿಯನ್ನು ಏಕ ಪಾರ್ಟಿಯಾಗಿ ಮಾಡಿ ಸದ್ರಿ ಅಮ್ಲಜಾರಿಯಲ್ಲಿ ಮುಂದಿನ ಹುಕುಂ ಮಾಡಲಾದೀತು.

ತಾ. 11-6-1941 } K. Raghunath Shenoy,
ಮೊಕ್ಕಾಂ

ವಿಚಿತ್ರ ಪ್ರಪಂಚ

ಸಾವಿರಾರು ವರ್ಷಗಳ ವರೆಗೆ ನಿದ್ದೆ

ಕುಂಭಕರ್ಣನು ವರ್ಷದ ಆರು ತಿಂಗಳು ಮಾತ್ರ ನಿದ್ದೆಯಲ್ಲಿರುತಿದ್ದ. ಆದರೆ ಭೂಮಿಯಲ್ಲಿರುವ ಕೆಲವು ಅಣು ಜೀವಿಗಳು ಸಾವಿರಾರು ವರ್ಷಗಳಿಂದ ನಿದ್ದೆಮಾಡುತ್ತಲಿರುವವು. ರಸ್ಯದ ಭೂ ಗರ್ಭವನ್ನು ಶೋಧಿಸುತ್ತಿದ್ದಾಗ ಅಲ್ಲಿ ಕೆಲವು ಅಣುಜೀವಿಗಳು ಮಂಜಿನಲ್ಲಿ ಹುದುಗಿಕೊಂಡು ೨೦೦೦೦ ವರ್ಷಗಳಿಂದ ನಿದ್ದೆಮಾಡುತ್ತ ಬಂದಿವೆಯೆಂದು ಗೊತ್ತಾಗಿವೆ. ಸೈಬೇರಿಯದ ಒಂದು ಪ್ರದೇಶವನ್ನು ೧೩೨ ಅಡಿಗಳ ಆಳಕ್ಕೆ ಅಗೆದಾಗ ಈ ವಿಚಿತ್ರ ಅಣುಜೀವಿಗಳು ತೋರಿಬಂದುವು. ಆ ಆಳದ ಮಣ್ಣನ್ನು ಪರೀಕ್ಷಿಸಿದಾಗ ಅಣುಜೀವಿಗಳು ನಿದ್ದೆ ಬಿಟ್ಟು ಹೊರಗೆ ಸಂಚಾರಕ್ಕೆ ಹೊರಟದ್ದು ಗೊತ್ತಾಯಿತು.

ಹುಡುಗಿಯರು ಸಿಗರೇಟು ಸೇದಬಾರದು

ಈಗ ಸಾಮಾನ್ಯವಾದ ಪುರುಷರಂತೆ ಸ್ತ್ರೀಯರೂ ಹೊಗೆ ಬತ್ತಿ ಸೇದುತ್ತಾರೆ. ಯುರೋಪಿನಲ್ಲಂತೂ ಬತ್ತಿ ಸೇದುವ ಚಟವು ಸ್ತ್ರೀಯರಲ್ಲಿ ಬಹಳ ಹರಡಿದೆ ಸಿಗರೇಟು ಸೇದುವುದನ್ನು ಅಲ್ಲಿಯ ಸ್ತ್ರೀಯರು ತಮ್ಮ ಜನ್ಮಸಿದ್ಧ ಹಕ್ಕು ಎಂದು ತಿಳಿದಿದ್ದಾರೆ ಜರ್ಮನಿಯಲ್ಲಿ ಮಾತ್ರ ಅವರ ಈ ಅಧಿಕಾರಕ್ಕೆ ಲೋಪಬರುವಂತಾಗಿರುವುದು ಯುದ್ಧಕ್ಕೆ ಹೋಗಿರುವ ಜರ್ಮನ ಸೈನಿಕರಿಗೆ ಹೆಚ್ಚು ಸಿಗರೇಟುಗಳು ಬೇಕಾಗಿರುವುದರಿಂದ, ಇನ್ನು ಮುಂದೆ ಜರ್ಮನ್ ಸ್ತ್ರೀಯರು ಯಾರೂ ಸಿಗರೇಟು ಸೇದ ಬಾರದೆಂದು ಅಲ್ಲಿಯ ಹಿಟ್ಲರ್ ಸರಕಾರವು ಆಜ್ಞೆ ಮಾಡಿದೆ ಮತ್ತು 'ಹೆಂಗಸರು ಸಿಗರೇಟು ಸೇದುವದು ಅವರ ದೇಹ ಬೆಳವಣಿಗೆಗೂ ಆರೋಗ್ಯಕ್ಕೂ ಅಪಾಯಕರವಾಗಿದೆ ಎಂದು ಅಲ್ಲಿ ಶೋಧನೆಗೆ ಆರಂಭವಾಗಿದೆ.

ಹಿಟ್ಲರನ ಮೇಲೆ ಮಾಟ

ಲೋಕ ಕಂಟಕನಾದ ಹಿಟ್ಲರನನ್ನು ಮಾಟಮಾಡಿ ಕೊಲ್ಲಬೇಕೆಂದು ಅಮೆರಿಕದ ಕೆಲವು ಮಾಟಗಾರರು ಆಲೋಚಿಸಿದ್ದಾರೆ. ಇವರು ಕಾಡಿಗೆ ಹೋಗಿ ಅಲ್ಲಿ ಹಿಟ್ಲರನ ಒಂದು ರೂಪ ಮಾಡಿ ಯಂತ್ರ ಮಂತ್ರ ತಂತ್ರಗಳ ಮೂಲಕ ಪೆಟ್ಟು ಹೊಡೆದು ವಿರೂಪ ಮಾಡುವರು. ಹಿಟ್ಲರನ ಈ ರೂಪು ಹೇಗೆ ಹೇಗೆ ಪೆಟ್ಟು ತಿಂದು ವಿರೂಪ ವಾಗುವದೋ, ಹಾಗೆ ಹಾಗೆ ನಿಜ ಹಿಟ್ಲರನ ದುರ್ಗತಿಯೂ ಆಗುವುದೆಂದು ಆ ಮಾಟಗಾರರು ನಂಬಿದ್ದಾರೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ.

ವಿಜ್ಞಾನಯುಗ

ಗರ್ಭ ನಿಂತಿರುವದರ ಪರೀಕ್ಷೆ

ಒಬ್ಬಳು ಗರ್ಭಿಣಿ ಆಗಿದ್ದಾಳೆಯೆ, ಇಲ್ಲವೆ ಎಂಬುದರ ಪರೀಕ್ಷೆ ಮಾಡಲಿಕ್ಕೆ ಅಮೆರಿಕದ ಇಲಿಯಾನಸ್, ವಿಶ್ವವಿದ್ಯಾಲಯದ ಡಾಕ್ಟರ ಹಾರ್ವರ್ಡ್ ಎಂಬವರು ತಮ್ಮ ಇಬ್ಬರು ಸಹಕಾರಿಗಳ ಸಹಾಯದಿಂದ ಕೊಲೊಸ್ಟ್ರಾನ್ ಎಂಬ ಔಷಧಿಯನ್ನು ಕಂಡುಹಿಡಿದಿದ್ದಾರೆ. ಈ ದ್ರಾವಕವನ್ನು ಒಬ್ಬಾಕೆಯ ತೋಳಿನ ರಕ್ತದೊಳಗೆ ಇಂಜೆಕ್ಟ ಮಾಡುವದರಿಂದ, ಆಕೆ ಗರ್ಭಿಣಿ ಅಲ್ಲವಾದರೆ ಸಹಜ ಚರ್ಮದಲ್ಲಿ ಒಂದು ಬಗೆಯ ಕೆಂಪು ರಸವು ಹೊರಗೆ ಬರುವುದು ಗರ್ಭಿಣಿ ಆಗಿದ್ದರೆ ಈ ರಸವು ಹೊರಗೆ ಬರುವುದಿಲ್ಲ

ಆರೋಗ್ಯ ರಕ್ಷಣೆಗೆ ಉಪ್ಪುನೀರು

ಶರೀರದ ಆರೋಗ್ಯ ಮತ್ತು ಬೆಳವಣಿಗೆಗೆ ಬೇಕಾದ ಉಪ್ಪುಗಳು ಶರೀರದಲ್ಲಿ ಸಂಗ್ರಹವಾಗಿ ಇರುವುದಿಲ್ಲ ಒಂದು ಸಮಯಕ್ಕೆ ಎಷ್ಟು ಬೇಕೋ ಅಷ್ಟರ ವಿನಿಯೋಗವಾಗಿ, ಉಳಿದ ಉಪ್ಪುಗಳು ಬೆವರು ಮೂತ್ರ ಮೊದಲಾದವುಗಳ ಮೂಲಕ ವಿಸರ್ಜಿಸಲ್ಪಡುತ್ತವೆ. ಆದರೆ ಬೇಸಿಗೆಯಲ್ಲಿ, ಅಥವಾ ಬಹಳ ಶರೀರ ಪರಿಶ್ರಮ ಪಡುವದರಿಂದ ಶರೀರಕ್ಕೆ ಬೇಕಾದ ಲವಣಗಳು ಬೆವರಿನ ಮೂಲಕ ಹೆಚ್ಚೆಚ್ಚು ಹೊರಗೆ ಹಾಕಲ್ಪಟ್ಟು, ಶರೀರಕ್ಕೆ ಉಪ್ಪುಗಳ ಕೊರತೆಯಾಗುತ್ತದೆ ಇಂಥ ಸಮಯದಲ್ಲಿ ಉಪ್ಪಿನ ಬಿಲ್ಲೆಗಳನ್ನು ತಿನ್ನುವುದರಿಂದ ಅಥವಾ ಉಪ್ಪು ಕರಗಿಸಿದ ನೀರನ್ನು ಕುಡಿಯುವುದರಿಂದ ಆರೋಗ್ಯ ರಕ್ಷಣೆಯಾಗುತ್ತದೆಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ

ತೇಲಾಡುವ ವಿದ್ಯುದ್ಯಂತ್ರ

ಯುದ್ಧ ಮೊದಲಾದ ಕಾರಣಗಳಿಂದ ಪೇಟೆ ಪಟ್ಟಣ, ಕರ್ಮಾಲಯ ಕಾರಖಾನೆಗಳಿಗೆ ಸಿಕ್ಕಬೇಕಾದ ವಿದ್ಯುಚ್ಛಕ್ತಿಯ ಪ್ರವಾಹವು ನಿಂತುಹೋದರೆ, ಅಥವಾ ಅಂಥ ಪ್ರವಾಹವನ್ನು ಕಳುಹಿಸಿಕೊಡುವ ವಿದ್ಯುತ್ ಉತ್ಪಾದಕ ಯಂತ್ರಗಳು ಕೆಟ್ಟು ಹೋದರೆ, ತೊಂದರೆಯಾಗಬಾರದೆಂಬುದಕ್ಕೋಸ್ಕರ ಅಮೆರಿಕದ ಕೆಲವು ವಿಜ್ಞಾನಿಗಳು ನೀರಿನ ಮೇಲೆ ತೇಲಾಡುವ ವಿದ್ಯುದುತ್ಪಾದಕ ಯಂತ್ರವೊಂದನ್ನು ರಚಿಸಿದ್ದಾರೆ ಈ ಯಂತ್ರವು ಹೊರಗಿನಿಂದ ನೋಡಲಿಕ್ಕೆ ಒಂದು ದೊಡ್ಡ ನಾವೆಯಂತೆ ಕಾಣುತ್ತದೆ ಪ್ರಕೃತ ಇದನ್ನು ಅಮೆರಿಕದ ಗ್ರೇಟ್‌ಲೇಕ್ ಎಂಬ ಸರೋವರದಲ್ಲಿ ಇಟ್ಟಿರುವರು.

HALFTONE & LINE
BLOCK MAKING
UNDERTAKEN
Sharada Press,
MANGALORE

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ
ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ
ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

BHUVANENDRA PRODUCTS LTD.,
Head Office and Factory:
KATAPADI S Kanara
Depots:
1 Maharatha Galli, Hubli
2 57 Big street, Triplicane, Madras
"BHUVANENDRA"
Danthadavan Choorna
Economical in use. Cheapest in value.
Genuine in quality and choiced by all
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು
ಬರುವುದು, ಹಲ್ಲು ಅಲ್ಲಾಡುವುದು ಮುಂತಾದ
ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಸ್ಥಳೀಯ ಸ್ಟಾಕಿಸ್ಟರು —
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ. ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರಾಜಾವೈದ್ಯ ಬಾಬಾ ಗುಣೆ ಇವರ

"ಸುರಂಗಾ" ಎಣ್ಣೆ

ದಿವ್ಯ ಔಷಧಿಗಳಿಂದ ಕೂಡಿ– ಕೂದಲು ಬೀಳುವಿಕ, ಅಥವಾ ಬಿಳಿದಾಗುವದನ್ನು ಸ್ವಲ್ಪ ದಿನಗಳಲ್ಲಿಯೇ ನಿಲ್ಲಿಸುವದು ಅಲ ದೆ ಮಿದುಳು ಶಾಂತ ಇಟ್ಟು ಮಾನಸಿಕ ಶ್ರಮ ನಿವಾರಿಸುತ್ತದೆ.

೪ ಔನ್ಸಿನ ಬಾಟ್ಲಿಗೆ ರೂ. ೧—೦—೦.

Agents:

Anglo Oriental Pharmacy, Hampankatta

Stocks also at:

R. V. Kamath & Co., Car-street Mangalore

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs. 5000 run regularly on systematic lines Unique Banking facilitie to Businessmen and interested Public

Apply for particulars–

K. R. GURU, *Managing Director.*

THE BANK OF MANGALORE LIMITED

HEAD OFFICE MANGALORE ESTD 1901

Branches —MOODABIDRI & PADUBIDRI

NOTICE

On and from 1st January 1941 the following are the revised rates of interest on deposits

FIXED DEPOSITS

For 2 years or over	5½ per cent
1	4½ per cent
6 months	3½ per cent
3	3 per cent

Interest payable Quarterly

SAVINGS BANK DEPOSITS

On daily balances on balances over Rs 5 in multiples of R 5 @ 3%

All kinds of banking business transacted

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡ್ಡಿಯಾಲಬೈಲು.

DEVEGADABETTU
9—3—1940

FROM

Sri K. Shivarama Nair,
Kerikcundah Estate,
Post Devegadabettu,
KADUR DISTRICT

To,

The Joint Managers,
C. P. C. Motor Service Ltd.,
MANGALORE.

Dear Sirs,

I am glad to inform you that the Someshwar agent has sent my bag yesterday, and got everything in order and hence no further enquiries required regarding this matter.

I am much glad to state that the staff of your Company is taking keen interest and no worries whatever for the passengers and conveying my best thanks to all of you.

Yours faithfully,

(Sd) K. Shivarama Nair.

ಬಿಡಿ ಸಂಚಿಕೆ ಬೆಲೆ ಒಂದಾಣೆ   ವಾರ್ಷಿಕ ಚಂದಾ ರೂ. 2-0-0   ಅಂಚೆ ವೆಚ್ಚ ಸೇರಿ ರೂ. 2-13-0   *Regd. No. M. 3460*

ಸ್ವದೇಶಾಭಿಮಾನಿ

[ಸಂಪುಟ 35]   ತಾರೀಕು 20-6-1941   [ಸಂಚಿಕೆ 25]

WANTED CLERKS

Messrs, Kochikar Brothers, Ltd., Branch Secretaries, Bombay Life Assurance Co., Ltd., Udipi, S. Kanara, will entertain clerks as probationers for one year. Those who have passed Shorthand and Typing or Accountancy examinations will be preferred. Minimum qualification should be atleast their holding S. S. L. C. Eligibility Certificates. They should be prepared, after 6 months training in Udipi Office, to go to any of their Branches at Bombay, Madras, Calicut, Trivandrum, Mangalore and Bangalore.

Applications should be in the handwriting of the applicant stating age, qualifications, marks obtained in last examination, 2 good references, past experience, if any, and whether prepared to give cash security and sent before the 30th June 1941 to their Udipi Office.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಘುಂತಾದ ಬೇನೆ, ಪಕ್ಷವಾತ, ಜೊಂಪು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ನೋಟೀಸು

ಉದುಮ ಕಪ್ಪಣಕಾಲು ಚಂದನ ಸೊಸೆ ವ ತಿರ್ಕನ್ನಾಡಲ್ಲಿರುವ ಬಿಲ್ಲ ಫಕೀರನ ಹೆಂಡತಿ ಚರಿಯಮ್ಮ ಹೆಂಗುಸು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ:—

ನನ್ನ ತರ್ವಾಡಿನ ಬಾಬ್ತು ಉದುಮ ಗ್ರಾಮದ ರಿ. ಸ. ನಂಬ್ರ 111/7 ಹ. ಸ. ನಂಬ್ರ 9/2ನೇ ರೂ. 4—1—0 ಬೇರೀಜಿನ 72 ಸೆಂಟ್ಸು ವಿಸ್ತೀರ್ಣದ ಬಡಗಂಶ ಬಾಗ್ಯಾತು ನನ್ನ ಹಕ್ಕಿನದಾಗಿದ್ದು ನನ್ನ ಸ್ವಾಧೀನವಿರುತ್ತದೆ. ಅದಕ್ಕೆ ನಾನೊಬ್ಬಳೇ ನ್ಯಾಯವಾದ ಹಕ್ಕುದಾತಿಯಾಗಿರುತ್ತೇನೆ. ಆದರೆ ನನ್ನ ದೊಡ್ಡತಾಯಿ ಮಗ ಉದುಮ ಗ್ರಾಮದ ಕಪ್ಪಣಕಾಲು ಚಂದನ ಅಳಿಯ ಫಕೀರ ಎಂಬವನು ಸದ್ರಿ ಬಾಗ್ಯಾತಿನಲ್ಲಿದ್ದ ಮಾಳಿಗೆ ಮನೆಯ ಪೋಪುಗಳು ಕಲ್ಲುಗಳು ವಗೈರೆಯನ್ನು ನನ್ನ ತಿಳುವಳಿಕೆ ವ ಸಮ್ಮತಿಯಿಲ್ಲದೆ ಮಾರಾಟ ಮಾಡಿರುವದಲ್ಲದೆ ಸದ್ರಿ ಬಾಗ್ಯಾತನ್ನೂ ಮಾರಾಟ ಮಾಡುವ ಇರಾದೆಯಲ್ಲಿರುವದಾಗಿ ತಿಳಿದು ಬರುತ್ತದೆ. ಸದ್ರಿ ಫಕೀರನು ನಿಸ್ಸಂತತಿಯವನಾಗಿರುವುದರಿಂದ ಈ ಬಾಗ್ಯಾತನ್ನು ಮಾರಾಟಮಾಡುವರೆ ಯಾ ಯಾವ ವಿಧದಿಂದಾದರೂ ಎಷ್ಟನ್ನಾದರೂ ಪರಾಧೀನ ಮಾಡುವರೆ ಹಕ್ಕಿಲ್ಲದವನಾಗಿರುತ್ತಾನೆ. ಆದ್ದರಿಂದ ನನ್ನ ಸಂಪೂರ್ಣ ಹಕ್ಕಿನದಾಗಿರುವ ಸದ್ರಿ ಬಾಗ್ಯಾತನ್ನು ಅವನು ಪರಾಧೀನ ಪಡಿಸಿದರೆ ಅದು ಸಿಂಧುವಾಗತಕ್ಕದ್ದಲ್ಲ ಎಂತ ನಾನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುತ್ತೇನೆ.

ಕಳ್ಳಿಕೆರೆ ಗ್ರಾಮದ ತಿರ್ಕನ್ನಾಡು ತಾ. 8—6—'41 | ಈ ಮೂರು ಗೆರೆ ಮತ್ತು ಎಡಕೈ ಹೆಬ್ಬೆಟ್ಟು ಗುರ್ತು ಚರಿಯಮ್ಮ ಹೆಂಗ್ಸಿನ ರುಜು.

NOTICE

By power of Attorney dated 27—5—1941 the undersigned has been empowered by Mrs. M. M. Lobo, widow of the late Rao Saheb A. J. Lobo to sell her properties known as the Hampankatta and Belgal properties. The Hampankatta property is comprised in S. F. Nos. 395/1, 398/3 and 392/1, and 5. This item which is about 2 acres in extent contains buildings formerly occupied by the Catholic Bank Ltd., by Rao Bahadur A. P. P. Saldanha & others. The Belgal property measuring over 3½ acres in extent is comprised in S. F. Nos. 779/1 (containing the Belgal House, formerly occupied by Rao Saheb A. J. Lobo and now by the Resident Engineer of the Mangalore Electric Supply Co., Ltd.) and 770/1, 769/1, 777/1, 791/E and 799/2A. Both the items of property apart from the buildings includes open spaces suitable for house sites.

For further particulars apply to the under-signed.

Kankanady, 29-6-1941.

Dr. L. P. Fernandes,
B. A., L. M. & S.,
Chief Medical Officer,
Fr. Muller's Institutions,
KANKANADY.

ಅದ್ವಿತೀಯ ಸ್ಕೌಟ್ ಆಗಬೇಕಾಗಿದ್ದರೆ, ನೀವು ಶಕ್ತಿ ಮತ್ತು ಆರೋಗ್ಯಶಾಲಿಗಳಾಗಿರಬೇಕು ಆದ್ದರಿಂದ ನಿಮ್ಮ ಶರೀರದೊಳಭಾಗವು ನಿತ್ಯ ಶುಚಿಯಾಗಿರುವುದು ಅತ್ಯಂತ ಅವಶ್ಯವೆಂದು ನೆನಪಿನಲ್ಲಿಡಿರಿ. ನಿಮ್ಮ ಶರೀರದೊಳಭಾಗವನ್ನು ನಿರ್ಮಲವಾಗಿಟ್ಟರೆ, ಅಶುದ್ಧ ವಸ್ತುಗಳು ಹೊಟ್ಟೆಯೊಳಗೆ ಸೇರಿ ನಿಮ್ಮ ಆರೋಗ್ಯವು ಹಾಳಾಗಲಾರದು. ನಿಮ್ಮ ಮೆದುಳು ಮತ್ತು ಶರೀರಗಳ ಶಕ್ತಿಗಳು ಕುಂದಲಾರವು. ದಿನನಿತ್ಯ ಒಂದು ಗ್ಲಾಸು ತಂಪುಕೊಡುವ ಆಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳುವುದರಿಂದ ಮಲಬದ್ಧತೆಯು ಬರಲಾರದು, ಹಾಗಾಗಿ ಮತ್ತೆ ದೇಹದೊಳಗಿನ ಕೊಳೆಯು ಉಳಿಯಲಾರದು. ಶರೀರವು ನಿರ್ಮಲವಾಗಿರುವುದು. ದೇಹವು ಶಕ್ತಿಗೊಳ್ಳುವುದು.

ಅಂತರಂಗ ನೈರ್ಮಲ್ಯಕ್ಕೆ ದಿನನಿತ್ಯವೂ ನೀವು
ಆಂಡ್ರೂಸ್ ಲಿವರ್ ಸಾಲ್ಟನ್ನು
ತೆಗೆದುಕೊಳ್ಳಿರಿ.

ANDREWS
LIVER SALT

ಆರೋಗ್ಯಕರ ಮತ್ತು ಶಕ್ತಿಕರ ಪಾನೀಯ ಶುದ್ಧವಾದ ತಂಪುಕರ ಮತ್ತು ಹಿತಕರ ಆನಂದಕರವಾದುದು. ಸಣ್ಣ ಸೈಜಿಗೆ ಆ. 11 ದೊಡ್ಡ ಸೈಜಿಗೆ ರೂ. 1-4-0.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಎಲ್ಲಾ ನೋವುಗಳಿಗೆ
ಅತ್ಯುತ್ತಮ ಪ್ರಥಮ
ಚಿಕಿತ್ಸೆ

ಜಾಂಬಕ್ ನೋವನ್ನು ಕಡಿಮೆಮಾಡಿ, ಗಾಯವನ್ನು ಒಣಗಿಸಿ ಗುಣಪಡಿಸುವ ವಿಷಹಾರಿ ಔಷಧವಾಗಿದೆ.

ಮಕ್ಕಳು ಯಾವಾಗಲೂ ಆಟದಲ್ಲಿಯೇ ಇರುವವುಗಳು ಬಿದ್ದು ಮೊಣಕಾಲು ಮೊಣಕೈಗಳಿಗೆ ಗಾಯವಾಗುವುವು. ಕೈಗಳು ಮುಖಕ್ಕೆ ಗಾಯಗಳಾಗುವುವು. ಆ ವಿಷಹಾರಿ ಜ್ಹಾಂಬಕ್ ಮಕ್ಕಳ ಎಲ್ಲಾ ಗಾಯಗಳನ್ನು ಗುಣಪಡಿಸುವುದು. ಜ್ಹಾಂಬಕ್‌ನಲ್ಲಿ ಶುದ್ಧ ಔಷಧಿ ಸತ್ವವು ಬೇಗನೇ ಚರ್ಮದಲ್ಲಿ ಹೀರಿಕೊಳ್ಳುತ್ತದೆ. ಹಾಗಾಗಿ ನೋವು ಕಡಿಮೆಯಾಗುತ್ತದೆ. ಬೇಗ ಗುಣವಾಗುತ್ತದೆ. ಗಾಯದ ಕಲೆ ಉಳಿಯದಂತೆ ಜ್ಹಾಂಬಕ್ ಗುಣ ಕೊಡುತ್ತದೆ. ಜ್ಹಾಂಬಕ್ ಲೇಪಕ್ಕೆ ಒಂದು ರೂಪಾಯಿ ಅಥವಾ 2—4—0, ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಏಜೆಂಟ್ಸ್:—
ಮೆಸರ್ಸ್ ದಾಥಾ ಮತ್ತು ಕಂಪೆನಿ
ಪಿ. ಟಿ. ಮದರಾಸು.

ಯಾವಾಗಲೂ ಜ್ಹಾಂಬಕನ್ನೇ ಕೊಳ್ಳಿರಿ

ZAM-BUK

ಪ್ರಾಣಿಕೊಬ್ಬಿನಿಂದ ವಿರಹಿತವಾದುದು

ಸೌಂದರ್ಯ ಮತ್ತು
ಮುಖಕಾಂತಿಗೆ
ಹಿಮಾನಿ ಸ್ನೋ

ಹಿಂದೂದೇಶದಲ್ಲಿ ಪ್ರಥಮವಾಗಿ
— ತಯಾರಿಸಿದ ಸ್ನೋ —

ಅಂದಿನಿಂದಲೂ ಶ್ರೇಷ್ಠವಾಗಿಯೇ ಇದೆ. ಮುಖದ ಮೇಲಿನ ಯಾವತ್ತೂ ಕಲೆ, ಮಚೆ ಛಿದ್ರ ಮುಂತಾದುವನ್ನು ಗುಣಪಡಿಸುತ್ತದೆ.

ಹಿಮಾನಿ ಗ್ಲಿಸರಿನ್ ಸಾಬೂನುಗಳು

ಪಾರದರ್ಶಕ—ಶುದ್ಧ

ಕೋಮಲವಾದ ಪರಿಮಳ



ಮಾನನೀಯ ವ್ಯಾಪಾರಸ್ಥರು
ಮಂಗಳೂರಿನ ಡಿಸ್ಟ್ರಿಬ್ಯೂಟರರು:— ಕೊರನೇಷನ್ ಟ್ರೇಡಿಂಗ್ ಕೊ.
ಮಹಮ್ಮದಾಲಿ ರೋಡ್, ಮಂಗಳೂರು.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ



ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

27—6—1941] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೭—೬—೧೯೪೧

ಅಹಿಂಸೆಯು ಸಲುವಾಗಿ ಜೀವಕೊಡುವವರು ಸಿಗಲಾರರೆ?

‘ಕೋಟ್ಯಂತರ ಜನರಿಗೆ ಸತ್ಯಾಗ್ರಹ ಮಾಡಲು ಶಕ್ಯವಿಲ್ಲದಿರಬಹುದು; ಆದರೆ ಕನಿಷ್ಠಪಕ್ಷ ಸಾವಿರಾರು ಜನರಾದರೂ ಸತ್ಯಾಗ್ರಹ ಮಾಡಲು ಮುಂದೆ ಬರಬೇಕೆಂದು ಮಹಾತ್ಮರ ಇಚ್ಛೆ ಇದೆ. ಸೈನ್ಯದಲ್ಲಿ ಸೇರಲು ಲಕ್ಷಾಂತರ ಜನರು ಮುಂದೆ ಬರುತ್ತಿರುವಾಗ, ಅಹಿಂಸೆಯ ಸಲುವಾಗಿ ಪ್ರಾಣ ಕೊಡಲು ಸಾವಿರಾರು ಜನರಾದರೂ ಮುಂದೆ ಬರಲಾರರೇ ಎಂದು ಮಹಾದೇವ ದೇಸಾಯಿಯವರು ಅಹಮ್ಮದಾಬಾದಿನಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಅವರು ಮತ್ತೆ ಹೀಗೆಂದರು.—

“ಸಾವಿರಾರು ವೀರರ ತರುವಾಯ ಕೋಟ್ಯಂತರ ವೀರರು ಅವರ ಹಾದಿಯನ್ನು ಹಿಡಿಯುವರು ಮತ್ತು ಹಿಟ್ಲರನ ವಿರುದ್ಧ ಅಸಹಕಾರ ಮಾಡುವರು. ಸಾವಿರಾರು ವೀರರು ಬಲಿದಾನ ಮಾಡದಿದ್ದರೆ ಕೋಟ್ಯಂತರ ಜನರು ಅಸಹಕಾರ ಮಾಡುವುದು ಶಕ್ಯವಿಲ್ಲ. ಆದುದರಿಂದ ಮೊದಲು ಸಾವಿರ ವೀರರನ್ನು ಸಿದ್ಧಪಡಿಸಬೇಕೆಂದು ಮಹಾತ್ಮರ ಆಶೆ” [illegible]ಗೆಂದು ಮಹಾದೇವ ದೇಸಾಯಿ ಹೇಳಿದರು.

‘ಬ್ರಿಟಿಷರಿಗೆ ಅಧಿಕಾರ ಬಿಟ್ಟುಕೊಡುವ ಮನಸ್ಸಿಲ್ಲ’

ರಾಜೇಂದ್ರಪ್ರಸಾದರ ಅಭಿಮತ

“ಹಿಂದೂ” ಪತ್ರಿಕೆಯ ವಾರ್ತಾಸುದ್ದಿಗಾರನು ಬಾಬೂ ರಾಜೇಂದ್ರಪ್ರಸಾದರ ಸಂದರ್ಶನ ತೆಗೆದುಕೊಂಡು, ಅಮೆರಿಯವರು ಭಾರತ ಮಂತ್ರಿ ಸ್ಥಾನದಿಂದ ವರ್ಗಾಯಿಸಲ್ಪಡುವ ಸಂಭವ ತೋರಿಬರುತ್ತದೆಂಬ ಸುದ್ದಿಯ ಕಡೆಗೆ ಅವರ ಲಕ್ಷ್ಯ ಎಳೆಯಲಾಗಿ ಅವರು ಕೆಳಗಿನಂತೆ ತಿಳಿಸಿದರು.

“ಅಮೆರಿಯವರು ಭಾರತ ಮಂತ್ರಿ ಸ್ಥಾನದಲ್ಲಿ ಇದ್ದರೂ ಅಷ್ಟೆ, ಅದರಿಂದ ಬೇರೆ ಕಡೆಗೆ ವರ್ಗವಾಗಿ ಹೋದರೂ ಅಷ್ಟೆ. ಅದಕ್ಕೆ ನಾನು ಎಳ್ಳಷ್ಟೂ ಮಹತ್ವ ಕೊಡುವುದಿಲ್ಲ. ಏಕೆಂದರೆ ಬ್ರಿಟಿಷರು ಯಾವುದೇ ರಾಜಕೀಯ ಅಭಿಪ್ರಾಯಕ್ಕೆ

ಹಿಟ್ಲರನ ವಿರುದ್ಧ ಅಸಹಕಾರ ಮಾಡುವರೆ?

ಮಹಾತ್ಮರ ಯೋಜನೆಯ ಕುರಿತು

ಮಹಾದೇವ ದೇಸಾಯಿಗಳ ಹೇಳಿಕೆ

‘ಬ್ರಿಟಿಷರಿಗೆ ಅಧಿಕಾರ ಬಿಟ್ಟುಕೊಡುವ ಮನಸ್ಸಿಲ್ಲ

ಹೊಂದಿಕೊಂಡವರಿದ್ದರೂ ಹಿಂದುಸ್ಥಾನವನ್ನು ರಾಜಕೀಯ ವಿಷಯದಲ್ಲಿಯೇ ಇರಲಿ, ಆರ್ಥಿಕ ವಿಷಯದಲ್ಲಿಯೇ ಇರಲಿ ತಮ್ಮ ಕೈಯೊಳಗಿಂದ ಬಿಡತಕ್ಕದ್ದಲ್ಲವೆಂಬ ಒಂದು ಸಂಗತಿಯಲ್ಲಿ ಮಾತ್ರ ಒಮ್ಮತದವರಿರುವರು.”

ಆ ಮೇಲೆ ಪ್ರತಿನಿಧಿಯು ಅವರಿಗೆ ಮುಂದಿನ ಹೊಸ ಜಗತ್ತಿನಲ್ಲಿ ಹಿಂದುಸ್ಥಾನದ ಬಗ್ಗೆ ಚರ್ಚಿಲ್ಲರು ಹಾಗು ಬ್ರಿಟಿಷ್ ಮಂತ್ರಿಮಂಡಳಿಯವರು ಸ್ಪಷ್ಟವಾದ ಮಾತಾಡದೆ ಬಾಯಿ ಮುಚ್ಚಿಕೊಂಡು ಕುಳಿತಿರುವುದನ್ನು ತಿಳಿಸಿ ಅವರ ಅಭಿಪ್ರಾಯ ವಿಚಾರಿಸಲಾಗಿ ಅವರು ಈ ರೀತಿ ಹೇಳಿದರು.

“ಚರ್ಚಿಲರು ಹಾಗು ಅವರ ಮಂತ್ರಿಮಂಡಲದವರು ಈಗ ಯುದ್ಧ ಸಾಗಿಸಿಕೊಂಡು ಹೋಗುವಲ್ಲಿ ತೊಡಗಿದ್ದು ಹಿಂದುಸ್ಥಾನದ ಪ್ರಶ್ನೆಯನ್ನು ಅವರು ಭಾರತ ಮಂತ್ರಿಗಳಿಗೆ ಬಿಟ್ಟಿದ್ದಾರೆ. ಅವರ ಅಭಿಪ್ರಾಯ ನೋಡಿದರೆ ನವೀನ ಭಾವೀ ಜಗತ್ತಿನಲ್ಲಿ ಹಿಂದುಸ್ಥಾನಕ್ಕೆ ಸ್ಥಾನವಿಲ್ಲವೆಂದು ತೋರುತ್ತದೆ. ಯುರೋಪಿನ ಸ್ವಾತಂತ್ರ್ಯವಿಷ್ಟೇ ಅವರಿಗೆ ಸಂಬಂಧಿಸಿದುದು. ಏಶಿಯಾ ಹಾಗು ಆಫ್ರಿಕೆಯಲ್ಲಿಯ ದುರ್ಬಲ ಜನಾಂಗಗಳನ್ನು ಅವರು ಇನ್ನೂ ಶೋಷಣ ಮಾಡಬಯಸುವರು. ಆದರೆ ಚರ್ಚಿಲ್ಲರು ಮತ್ತು ಅವರ ಮಂತ್ರಿಮಂಡಳಿಯವರ ಮನಸ್ಸಿನಲ್ಲಿ ಇದ್ದರೂ ಹೊಸ ಜಗತ್ತಿನ ವ್ಯವಸ್ಥೆಯು ಹಿಂದುಸ್ಥಾನದ ಮೇಲೆ ತನ್ನ ಪ್ರಭಾವವನ್ನು ಬೀರದೆ ಹೋಗದು. ಸರ್ವಾಧಿಕಾರಿಗಳು ತಮ್ಮ ಮನಸ್ಸಿನಲ್ಲಿ ಏನೇ ಮುಂದಿಗೆ ಮಾಡಿಕೊಂಡರೂ ಅದರಂತೆ ಫಲಿಸುವುದು ಶಕ್ಯವಿಲ್ಲ.’

ಅನಂತರ ಪ್ರತಿನಿಧಿಯು ಹಿಂದುಸ್ಥಾನದಲ್ಲಿಯ ಹೋರಾಟದ ಸಂಬಂಧವಾಗಿ ಪ್ರಶ್ನೆ ಮಾಡಲಾಗಿ ಬಾಬು ರಾಜೇಂದ್ರರು ಈ ರೀತಿ ಹೇಳಿದರು.

‘ಹೋರಾಟವು ಬರಬರುತ್ತ ಇನ್ನೂ ಕಠಿಣವಾಗುತ್ತ ಹೋಗುವುದು ಮತ್ತು ಯುದ್ಧ ಸಾಗಿದ ಮೇಲೆ ಅದು ಭಯಂಕರ ಸ್ವರೂಪ ತಾಳುವುದು. ಅದರಲ್ಲಿ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕಿಸುವ [illegible] ನಾವು ಚಳವಳಿಯ ಎಲ್ಲಾ ಭಾರ ವಹಿಸಿಕೊಟ್ಟರೆ ಅದು ಅಹಿಂಸಾತ್ಮಕ ರೀತಿಯಲ್ಲಿ ಸಾಗುವುದು. ಅದರಿಂದ ಏನಾಗುವುದೋ ಈಗಲೇ ಹೇಳಲು ಬರುವುದಿಲ್ಲ. ಅದು ಅಹಿಂಸಾತ್ಮಕ ರೀತಿಯಲ್ಲಿಯೇ ಸಾಗಿದರೆ ಹಿಂದುಸ್ಥಾನಕ್ಕೂ ಮಾನವ ಜಗತ್ತಿಗೂ ಅದರಿಂದ ಹಿತವುಂಟು. ಇಲ್ಲವಿದ್ದರೆ ಯಾವ ಯಾವ ಅನಾಹುತ ಮತ್ತು ತೊಂದರೆಗಳು ಸಂಭವಿಸುವವೋ ಕಲ್ಪಿಸಲೂ ಬಾರದಂತಿದೆ.’

Paying Your Insurance

PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE — ESTD 1906 — CANARA BANK LIMITED

ಮೂರು ಬಣ್ಣಗಳಿಂದ ರಂಜಿತವಾದ

ತಿರುಪತಿ

ವೆಂಕಟರಮಣ

ದೇವರ ಭಾವಚಿತ್ರಗಳು

ಭಗವದ್ಭಕ್ತರ ಮನೆಮನೆಗಳಲ್ಲಿ ಇವು ವಿರಾಜಿಸುವುದು ಅವಶ್ಯವಾಗಿದೆ

ವೆಂಕಟರಮಣ ದೇವರ ಚಿತ್ರಗಳಿಂದ ಕೂಡಿದ ಕೆಲೆಂಡರುಗಳೂ ಸಿಗುತ್ತವೆ

ಮಾದರಿ ಪ್ರತಿಗಳನ್ನು ಬಯಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಬರೆಯುವುದು

ಮುಲ್ಕಿ ಗಣಪತಿ ಶ್ರೀನಿವಾಸ ಕುಡ್ವ

ಜನರಲ್ ಮರ್ಚೆಂಟ್,

[illegible]

ಸ್ವದೇಶಾಭಿಮಾನಿ

ತಾರೀಕು 27—6—1941

ರಶ್ಯ ಜರ್ಮನಿ ಯುದ್ಧ

ಎರಡು ವರ್ಷಗಳ ಹಿಂದೆ ಸಖ್ಯ ಸಂಬಂಧವನ್ನು ಬೆಳೆಸಿಕೊಂಡು, ತಮ್ಮ ಸಂಯುಕ್ತ ಶಕ್ತಿಯಿಂದ ಇಡೀ ಯುರೋಪನ್ನೇ ಬೆದರಿಸುವವ್ರೋ ಎಂದು ಒಂದು ಗೂಡಿದ್ದ ರಶ್ಯ ಜರ್ಮನಿಗಳು ಇಂದು ಅನ್ಯೋನ್ಯ ಶತ್ರುಕಟ್ಟಿ ಮಸಗಿ ನಿಂತಿರುವವೆಂಬ ಆಶ್ಚರಿಯ ಸುದ್ದಿ ಅನೇಕರನ್ನು ದಿಗಿಲುಗೊಳಿಸಿದೆ. ಇಂದಿನ ಈ ಯುದ್ಧ ಕಾಲದಲ್ಲಿ ಆದ ಅನೇಕ ಆಕಸ್ಮಿಕಗಳಲ್ಲಿ ಇದು ಒಂದು ಮಹತ್ವದ ಸ್ಥಾನವನ್ನು ಪಡೆದಿದೆ. ನಿನ್ನೆ ಮಿತ್ರರಾಗಿ ಕೂಡಿದವರು ಇಂದು ಶತ್ರುಗಳಾಗಿ ಕಾದಾಡುವ ಹೃದಯಶೂನ್ಯ ದೃಶ್ಯವು ಇಂದು ಯುರೋಪಿನ ರಣಮತ್ತ ರಾಷ್ಟ್ರಗಳಲ್ಲಿ ಎಲ್ಲೆಲ್ಲಿಯೂ ಕಂಡುಬರುತ್ತಿರುವುದು ಅಲ್ಲಿನ ಸಂಸ್ಕೃತಿಯ ಅಧಃಪಾತವನ್ನು ತೋರಿಸುತ್ತದೆ.

ಒಬ್ಬರ ಮೇಲೊಬ್ಬರು ಸಂದೇಹಗ್ರಸ್ತರಾಗಿ ನಡೆಯುವುದು ಬಹುಕಾಲದಿಂದ ಇಂದಿನ ವರೆಗೆ ಯುರೋಪಿನ ರಾಜಕಾರಣದಲ್ಲಿ ಕಂಡು ಬರುವ ಒಂದು ವಿಶಿಷ್ಟ ವಿಷಯವಾಗಿದೆ ರಶ್ಯದಲ್ಲಿ ನೆಲೆಗೊಂಡ ಬೋಲ್ಶೆವಿಕ ತತ್ವದ ಕಡೆಗೆ ಅನೇಕರಿಗೆ ಬಹುಕಾಲದಿಂದ ಅಂಜಿಕೆಗಳಿದ್ದುವು. ಜರ್ಮನಿಯೂ, ಬ್ರಿಟನೂ ಇವುಗಳೆರಡೂ ರಶ್ಯದ ಧೋರಣೆಯನ್ನು ಸಂದೇಹ ದೃಷ್ಟಿಯಿಂದಲೇ ನೋಡುತ್ತಾ ಬಂದಿದ್ದವು ಅಂತೂ ಯುರೋಪಿನ ರಾಜಕಾರಣದಲ್ಲಿ, ಹಿಟ್ಲರ್ ಮುಸಲಿನಿ, ಸ್ಟಾಲಿನರ ಪ್ರಾಬಲ್ಯದ ನಿಮಿತ್ತ ಮಿಕ್ಕ ರಾಷ್ಟ್ರಗಳು ಹೆಚ್ಚಾಗಿ ಬ್ರಿಟನ್ ಫ್ರಾನ್ಸುಗಳು ಬಹಳ ತಳಮಳಗೊಂಡವೆನಬೇಕು. ಮುಸಲನಿಯು ಅಬಿಸೀನಿಯವನ್ನು ಆಕ್ರಮಿಸಿದಾಗ, ಹಿಟ್ಲರನು ಮತ್ತೆ ಸಣ್ಣ ರಾಷ್ಟ್ರಗಳ ಮೇಲೆ ಧಾಳಿ ನಡೆಸಿದಾಗ ಪ್ರಬಲರಾದ ಮಿಕ್ಕವರೂ ಸುಮ್ಮ ಸುಮ್ಮಗೆ ಕುಳಿತರು ಈ ಸಮಯದಲ್ಲಿ ಸ್ಟಾಲಿನನೂ ಯುರೋಪಿನ ರಾಜಕಾರಣದಲ್ಲಿ ತನಗೆ ತಕ್ಕ ಸ್ಥಾನವನ್ನು ಪಡೆಯ್ದುಕೊಳ್ಳಲೋಸುಗ ಹಿಟ್ಲರನ ಸಖ್ಯವನ್ನು ಬೆಳೆಸಿದನು ಮಾತ್ರವಲ್ಲದೆ ಬೆಳೆಯುತ್ತಿರುವ ಹಿಟ್ಲರನಿಗೆ ಬೆಂಬಲ ನಿಂತು ಕೆಲಸದರಾದಿವನು.

ಆದರೆ ಪ್ರಬಲನಾಗುತ್ತಾ ಬಂದ ಹಿಟ್ಲರನು ಯಾರನ್ನೂ ಸುಮ್ಮಗೆ ಬಿಡಲಿಲ್ಲ ಫ್ರಾನ್ಸನ್ನು ಪುಡಿಮಾಡದಿರಲಿಲ್ಲ; ಬ್ರಿಟನಿಗೆ ಧಾಳಿಮಾಡದಿರಲಿಲ್ಲ, ಇಂದು ಮತ್ತೆ ರಶ್ಯವನ್ನು ಸುಮ್ಮಗೆ ಇರಲು ಬಿಡುವುದಿಲ್ಲ; ಇದರಲ್ಲಿ ಯಾತರ ನ್ಯಾಯವಿದೆಯೆಂಬುದು ಹಿಟ್ಲರನಿಗೇ ಗೊತ್ತು. ಆದರೆ ರಶ್ಯವನ್ನು ಸದೆಬಡೆದು ಅಲ್ಲಿ ತನ್ನ ಅಧಿಕಾರ ಸ್ಥಾಪಿಸುವ ಮಹತ್ವಾಕಾಂಕ್ಷೆ ಹಿಟ್ಲರನದಿದೆಯೆಂಬುದಷ್ಟು ವ್ಯಕ್ತ. ಇದರ ಸಲುವಾಗಿಯೇ ರಶ್ಯದ ಧಕ್ಕೆಗೆ ಗುರಿಯಾದ ಫಿನ್‌ಲೆಂಡ್ ರುಮೇನಿಯದ ಜನರನ್ನೂ ಹುರಿದುಂಬಿಸಿ ಇಂದು ಹಿಟ್ಲರನು ರಶ್ಯದ ಕಡೆಗೆ ಧಾಳಿ ಮಾಡಲು ಹೊರಟಿದ್ದಾನೆ ರಶ್ಯದಲ್ಲಿ ಜರ್ಮನರು ಮಹೋಗ್ರವಾಗಿ ಮುತ್ತಿಗೆ ಹಾಕಿರುವರೆಂದು ಸುದ್ದಿಗಳು ಬರುತ್ತಾ ಇವೆ

ಎರಡು ರಾಷ್ಟ್ರಗಳ ಸೈನ್ಯಗಳೂ ಬಹಳ ಪ್ರಬಲವಾದುದಿವೆ. ಜರ್ಮನರಿಗಿಂತ ಏನೇನೂ ಕಡಿಮೆಯಿಲ್ಲದ ಮಹತ್ವಾಕಾಂಕ್ಷೆಯು ಸ್ಟಾಲಿನನದೂ ಆಗಿದೆ ಇದ ಕಾರಣವೇ ಅಗಣಿತವಾದ ರಶ್ಯನ್ ಸೇನೆಯು ಸುಲಭ ಭೇದ್ಯವಾಗಿರುವುದಿಲ್ಲ. ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠವಾದ ಸೈನ್ಯಶಕ್ತಿ ರಶ್ಯದಲ್ಲಿದೆ ಹಿಟ್ಲರನನ್ನು ಹದಗೊಳಿಸಬಲ್ಲ ಸಾಮರ್ಥ್ಯವು ರಶ್ಯನರಲ್ಲಿ ಏನೂ ಕಡಿಮೆಯಾಗಿಲ್ಲವೆಂದು ತಿಳಿದುಬರುತ್ತದೆ

ಇಂದು, ಸಮಾನ ಶತ್ರುವಿನ ಮೇಲೆ ಹಗೆ ತೀರಿಸಲು ರಶ್ಯದೊಡನೆ ಬ್ರಿಟನು ಅಮೇರಿಕಗಳೂ ಸೇರಬಹುದೆಂಬುದು ಖಂಡಿತ ಇಷ್ಟರಲ್ಲಿಯೇ ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರು ತಮ್ಮ ಸಹಾಯದ ಭರವಸೆಯನ್ನು ರಶ್ಯನರಿಗಿತ್ತಿರುವರು ಅಮೇರಿಕವೂ ಈಗ ಸರ್ವ ಸಹಾಯವನ್ನೊದಗಿಸಬೇಕಾಗಿ ಕೇಳಿಕೊಳ್ಳಲಾಗಿದೆ. ಇಂತಹ ಪ್ರಬಲವಾದ ವಿರೋಧವನ್ನು ಬುದ್ಧಿಪೂರ್ವಕವಾಗಿ ಆಹ್ವಾನಿಸಿದ ಹಿಟ್ಲರನು ಯುದ್ಧವನ್ನು ಯಾವ ದಾರಿಯಲ್ಲಿ ಕೊನೆಗಾಣಿಸುವನೋ ನೋಡತಕ್ಕದ್ದಿದೆ—

"The friendship of the people of Germany and Russia cemented in blood, has every reason to be lasting and firm" ಹೀಗೆಂದು ಹೇಳಿದ ಸ್ಟಾಲಿನನು ಇಂದು ಹಿಟ್ಲರನ ಗೆಳೆತನದ ಗತಿಯೇನೆಂದು ಮನವರಿಕೆ ಮಾಡಿದ್ದಾನೆ ತನ್ನ ಜೀವದ ಆಪ್ತಮಿತ್ರರಾದ, ಫ್ರಾನ್ಸಿನವರೊಡನೆ ಬ್ರಿಟಿಷರು ಇಂದು ಯುದ್ಧಮಾಡಬೇಕಾಗಿ ಬಂದಿದೆ, ಅಂತೆಯೇ ತಮ್ಮ ರಕ್ತಗತ ಆಪ್ತಸ್ವಪ ಬಂಧುಗಳಾದ ಜರ್ಮನರೊಡನೆ ರಶ್ಯನರೂ ಕತ್ತಿ ಕಟ್ಟಿ ಕಾದಾಡಬೇಕಾಗಿದೆ ಇಂದಿನ ಮಹಾಯುದ್ಧವು ಜಗತ್ತಿನ ವ್ಯವಸ್ಥೆಯಲ್ಲಿ ಮಹಾಕೋಲಾಹಲವನ್ನೇ ಹುಟ್ಟಿಸಿದೆ!

ದೊಂಬಿಯ ಕಾರಣ

ಮುಂಬಯಿ ಮೊದಲಾದ ಕಡೆಗಳಲ್ಲಿ ಜಾತೀಯ ಜಗಳವೆಂಬ ಹೆಸರಿನಲ್ಲಿ ನಡೆಯುತ್ತಿರುವ ಅರಾಜಕತೆಯ ಅತ್ಯಾಚಾರಿಗಳ ದೊಂಬಿಗಳು ದಿನದಿಂದ ದಿನಕ್ಕೆ ವಿಷಮವಾಗುತ್ತಾ ಬರುವಂತೆ ತೋರುತ್ತದೆ ನಿರಪರಾಧಿ ಜನರನ್ನು ಕೊಂದು ಸುಲಿದು ಹೊಟ್ಟೆ ತುಂಬಿಸುವ ಪುಂಡರು ಮಾಡುವ ಈ ತೆರದ ಅತ್ಯಾಚಾರಗಳನ್ನು ತಿಂಗಳುಗಟ್ಟಲೆಯಲ್ಲಿ ನಡೆಯಬಿಡುವುದು ಯಾವುದೇ ಭದ್ರವಾದ ಸರಕಾರಕ್ಕೆ ಭೂಷಣಾಸ್ಪದವಾಗಿರುವುದಿಲ್ಲ

ಇಂತಹ ದಂಗೆಗಳಿಗೆ ಜಾತೀಯ ಭಾವನೆಯು ಕಾರಣವೆಂದು ಸಾಮಾನ್ಯವಾಗಿ ಹೇಳುವುದಿದ್ದರೂ, ಸಮಾಜದಲ್ಲಿರುವ ಕೆಲವು ಅತ್ಯಾಚಾರ ಶೀಲರಾದ ದುಷ್ಟರ ದುರ್ಬುದ್ಧಿಯೇ ಈ ದೊಂಬಿಗಳ ಮೂಲಹೇತುವೆನಲು ಯಾತರ ಸಂಶಯವೂ ಇಲ್ಲ. ದಂಗೆಗಳು ಆರಂಭವಾದ ಕೂಡಲೇ ಜನತೆಯಲ್ಲಿ ಅವ್ಯವಸ್ಥೆ ಕೋಲಾಹಲಗಳುಂಟಾಗುವ ನಿಮಿತ್ತ ಸುಲಭದಿಂದ ಅಂತಹ ದುಷ್ಟರು ಆ ಮಧ್ಯೆ ಪ್ರವೇಶಿಸಿ ಸುಲಿಗೆಯನ್ನು ಮಾಡಲು ತೊಡಗುತ್ತಾರೆ ಹೆಚ್ಚಿನ ಪರಿಶ್ರಮವಿಲ್ಲದೆ ದ್ರವ್ಯವನ್ನು ಸಂಪಾದಿಸುವ ದಾರಿಯಾಗಿ ಸುಲಿಗೆಗಾರರೇ ಈ ತರದ ದಂಗೆಗಳನ್ನು ಪ್ರೋತ್ಸಾಹಿಸುವರು ಇಂತಹ ಜನರನ್ನು ಅಲ್ಲಿಗಲ್ಲಿಗೇ ಹಿಡಿದು ಶಿಕ್ಷೆ ಕೊಟ್ಟು ನಿರ್ಬಂಧಿಸುವುದರ ಮೂಲಕ ದಂಗೆಯು ಬಹಳ ಮಟ್ಟಿಗೆ ಶಾಂತವಾಗಬಹುದೆಂದು ಹೇಳಬಹುದಾಗಿದೆ.

ಹಿಂದೂ-ಮುಸ್ಲಿಮರು ಅನ್ಯೋನ್ಯ ಕಾದಾಡಿಕೊಳ್ಳಲು ಬಯಸುತ್ತಿರುವರೆಂದೂ ಅವರ ಧರ್ಮ ಭಾವನೆಯು ಈ ತರದ ದೊಂಬಿಗಳಿಗೆ ಕಾರಣವೆಂದೂ ಯಾರಾದರೂ ವಾದಿಸಿದರೆ ಅದನ್ನು ನಂಬಲಾಗುವುದಿಲ್ಲ ಯಾವುದೇ ಧರ್ಮದವನಾಗಲಿ, ವಿಚಾರವಂತನಾದ ಧರ್ಮನಿಷ್ಠನು ಅನ್ಯ ಹಿಂಸೆಗೆ ಜೀವ ಸೊತ್ತುಗಳ ಸುಲಿಗೆಗೆ ಇಳಿಯಲಾರನು. ಹೀಗಿರುವುದರಿಂದ ದುಷ್ಟ ಬುದ್ಧಿಯಿಂದ ಮುಂದೆ ಬಂದು ಸಮಾಜ ದ್ರೋಹ ಮಾಡುವ ಪುಂಡ ಜನರನ್ನು ಸರಕಾರವು ತಕ್ಕ ಶಿಕ್ಷೆ ವಿಧಿಸಿ ನಿರ್ಬಂಧಿಸುವುದರ ಮೂಲಕ ದಂಗೆಯನ್ನು ಬಹು ಮಟ್ಟಿಗೆ ಕಡಿಮೆ ಮಾಡಬಹುದೆಂದು ನಾವು ಸೂಚಿಸುತ್ತೇವೆ ಇಲ್ಲದೆ ಹೋದಲ್ಲಿ ನಗರಗಳಲ್ಲಿ ಅಶಾಂತಿಯು ನೆಲೆಗೊಂಡು ಜನರು ಕಂಗೆಡುವುದು ಮಾತ್ರವಲ್ಲದೆ, ಸರಕಾರವು, ಯೋಗ್ಯ ಕಾರ್ಯಕ್ರಮವನ್ನು ಕೈಕೊಳ್ಳಲಿಲ್ಲವೆಂಬ ಕಠಿಣ ಅಪವಾದಕ್ಕೂ ಗುರಿಯಾಗುವುದು

ಇಷ್ಟು ದೀರ್ಘಕಾಲದ ವರೆಗೆ ಮುಂಬಯಿಯಂತಹ ನಗರಗಳಲ್ಲಿ ದೊಂಬಿಗಳು ನಡೆಯುತ್ತಾ ಇರುವಾಗ, ಅದನ್ನು ಹತೋಟಿಗೆ ತರದೆ ನಗರಗಳಲ್ಲಿ ಅರಾಜಕತೆಯೇ ನೆಲಸಿರುವುದನ್ನು ನೋಡುತ್ತಿರುವುದು ಇಷ್ಟು ಪ್ರಬಲವಾದ ಬ್ರಿಟಿಷ್ ಪ್ರಭುತ್ವಕ್ಕೆ ಏನೇನೂ ಕೀರ್ತಿ ತರುವಂತಹುದಲ್ಲ

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆಗಳು			ರಿಂದ	ವರೆಗೆ
1	(a)	ಭತ್ತ ಅವ್ವಲ್ ತರದ ಗಿಡ್ಡು ಮುಡಿಗೆ	—	—
	(b)	,, ಮಯಂ ,, ,, ,,	—	—
2	(a)	ಅಕ್ಕಿ ಅವ್ವಲ್ ತರದ ಗಿಡ್ಡು ಮುಡಿಗೆ	6—0—0	6—2—0
	(b)	,, ಮಯಂ ,, ,, ,,	5—12—0	
3	(a)	,, ಅವ್ವಲ್ ,, ಸುಗ್ಗಿ ,,	5—14—0	—
	(b)	,, ಮಯಂ ,, ,, ,,	5—10—0	5—10—0
4	(a)	ತೆಂಗಿನಕಾಯಿ ಸುಲಿದದ್ದು 1000ಕ್ಕೆ	32—8—0	37—8—0
	(b)	,, ಸಿಪ್ಪೆಯಿದ್ದದ್ದು ,,	35—0—0	40—0—0
5	(a)	ಕೊಬ್ಬರಿ ಆಫೀಸು ಖಂಡಿಗೆ	39—12—0	—
	(b)	,, ದೀಪಿ ,,	—	—
	(c)	,, ದಿಲ್‌ಪಸಂದ್ ,,	—	—
6.		ತೆಂಗಿನ ಎಣ್ಣೆ ಮಣಕ್ಕೆ	8—12—0	—
7.	(a)	ಸಿಪ್ಪೆಯಿದ್ದ ಅಡಿಕೆ 1000ಕ್ಕೆ	5—4—0	5—8—0
	(b)	ಸುಲಿದ ಅಡಿಕೆ ಖಂಡಿಗೆ (ಹಳ್ತು)	—0—0	—0—0
		(ಹೊಸ್ತು)	90—0—0	100—0—0
8		ಗೇರುಬೀಜ ಮುಡಿಗೆ	4—0—0	4—12—0
9.		ಕಟ್ಟಿನ ಬೆಲ್ಲ ಖಂಡಿಗೆ	27—8—0	32—8—0
10		ಒಳ್ಳೆ ಮೆಣಸು ಹಂಡ್ರೆಡ್ ವೇಟಿಗೆ	18—0—0	13—8—0
11	(a)	ವೀಳ್ಯದೆಲೆಯ ಹೊಗೆಸೊಪ್ಪು ಮಣಕ್ಕೆ	6—0—0	7—8—0
	(b)	ಚುಟ್ಟಿನ ,, ,,	5—8—0	7—8—0
12	(a)	ಮೈಸೂರು ಏಲಕ್ಕಿ ಮಣಕ್ಕೆ	—0—0	—0—0
	(b)	ಕೊಡಗಿನ ,, ,,	60—0—0	65—0—0
13.	(a)	ಕುಮಟೆಯ ಮೆಣಸು ಖಂಡಿಗೆ	72—8—0	82—8—0
	(b)	ಕಾಸರಗೋಡಿನ ,, ಮಣಕ್ಕೆ	9—0—0	—
	(c)	ಊರಿನ ,, ,,	4—0—0	—

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 19/1941

ಸುಯಿ ವೆಂಕಟ್ರಾವ್, ವಾದಿ

ಮತ್ತು

ಅಹ್ಮದ್ ಯಾನೆ ಹಮ್ಮಬ್ಬ ಬ್ಯಾರಿ ಪ್ರತಿವಾದಿ.

ಮಂಗಳೂರು ತಾಲೂಕು ಉಳ್ಳಾಲಬೆಟ್ಟು ಗ್ರಾಮದಲ್ಲಿರುವ ಹೊಸನೆ ಬ್ಯಾರಿಗಳ ಮಗ ಅಹ್ಮದ್ ಯಾನೆ ಹಮ್ಮಬ್ಬ ಬ್ಯಾರಿಗಳಿಗೆ—

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಆಸ್ತಿ ಸ್ವಾಧೀನತೆಗೂ ಗೇಣಿ ಬಾಕಿಗೂ ದಾಕಲ್ಮಾಡಿದ ಮೇಲಿನ ವ್ಯಾಜ್ಯವು ತಾ 3—7—'41ಕ್ಕೆ ತನಿಖೆಗೆ ಇಟ್ಟಿರುತ್ತದೆ ಆ ದಿವಸ ಸದ್ರಿ ಪ್ರತಿವಾದಿಯು ಹಾಜರಾಗುವರೆ ತಪ್ಪಿದಲ್ಲಿ ಅತನ ಶಿವಾಯ್ ಮೇಲಿನ ನಂಬ್ರ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು 16—6—41 } Vyasaraya Achar, Advocate for Plaintiff.

ಸತ್ಯಾಗ್ರಹದ ಸಿಂಹಾವಲೋಕನ

ಸೆರೆಮನೆಯಲ್ಲಿ ಸತ್ಯಾಗ್ರಹಿಗಳ ಜೀವನ

ಸತ್ಯ ಅಹಿಂಸೆ ಆತ್ಮಶುದ್ಧಿಗಳ ಬೆಳವಣಿಗೆ-

ಈ ಆಂದೋಲನದ ಪೂರ್ವ ಸಿದ್ಧಿ

(ಮಹಾದೇವ ದೇಸಾಯಿಯವರ ಲೇಖನ)

ಸತ್ಯಾಗ್ರಹದ ಎರಡನೆಯ ಅಂಕವು ಮುಗಿದಂತಾಯಿತು. ನಾವು ಅದನ್ನು ಸಿಂಹಾವಲೋಕನದಿಂದ ನಿರೀಕ್ಷಿಸಬಹುದು. ಈ ಆಂದೋಲನದ ಸ್ವರೂಪದ ಮೂಲಕವೇ ಅದನ್ನು ಅಳೆಯುವುದಾಗಲಿ ಅದರ ಪ್ರತ್ಯಕ್ಷ ಪರಿಣಾಮದ ಲೆಕ್ಕ ಮಾಡುವುದಾಗಲಿ ಶಕ್ಯವಿಲ್ಲ. ಭಾಷಣ ಸ್ವಾತಂತ್ರ್ಯದ ಹಕ್ಕನ್ನು ಸಾಧಿಸುವುದೇ ಈ ಆಂದೋಲನದ ಗುರಿಯಾಗಿದೆ. ಆ ಗುರಿಯನ್ನು ನಾವು ಭಾಷಣ ಸ್ವಾತಂತ್ರ್ಯವನ್ನು ಆಚರಣೆಯಲ್ಲಿ ತಂದು ಇಲ್ಲವೆ ಹಾಗೆ ಭಾಷಣ ಸ್ವಾತಂತ್ರ್ಯವನ್ನು ಆಚರಿಸುವಾಗ ಸೆರೆಮನೆಯನ್ನು ಎದುರಿಸಿ ಸಾಧಿಸಬಲ್ಲೆವು. ವಾಯವ್ಯ ಸರಹದ್ದು ಪ್ರಾಂತ್ಯದಲ್ಲಿ ಭಾಷಣ ಸ್ವಾತಂತ್ರ್ಯವನ್ನು ಅಲ್ಲಿಯವರು ಗಳಿಸಿರುವರೆಂದು ಹೇಳುವುದುಂಟು. ಆದರೆ ಸರಕಾರದವರು ಮಾತ್ರ ಆ ಸ್ವಾತಂತ್ರ್ಯವನ್ನಾಗಲಿ, ಲೇಖ ಸ್ವಾತಂತ್ರ್ಯವನ್ನಾಗಿ ಜಾಹೀರುಪಡಿಸಿಲ್ಲ. ಸತ್ಯಾಗ್ರಹಿಗಳನ್ನು ಹಿಡಿಯುವುದರಿಂದ ಸರಕಾರಕ್ಕೆ ಲಾಭವಾಗುವುದಿಲ್ಲ, ಆದುದರಿಂದ ಅವರು ಸತ್ಯಾಗ್ರಹಿಗಳನ್ನು ಹಿಡಿಯುವುದಿಲ್ಲ, ಇಷ್ಟೆ. ನಾವು ನಮ್ಮ ಕರ್ತವ್ಯವನ್ನು ಯೋಗ್ಯರೀತಿಯಿಂದ ನೆರವೇರಿಸುತ್ತಲಿರುವೆವೋ ಇಲ್ಲವೋ ಎಂಬುದನ್ನು ಪರೀಕ್ಷಿಸಬೇಕಾಗಿದೆ. ಈ ಆಂದೋಲನವು ನಮ್ಮ ಸ್ವಾತಂತ್ರ್ಯ ಯುದ್ಧದ ಅಂತರಂಗದಲ್ಲಿ ಸತ್ಯ, ಅಹಿಂಸೆ, ಆತ್ಮಶುದ್ಧಿಗಳ ಬೆಳವಣಿಗೆಯ ಭಾಗವಾಗಿದೆ.

ಈ ಸಲದ ಸತ್ಯಾಗ್ರಹದಲ್ಲಿ ಸತ್ಯಾಗ್ರಹಿಗಳ ಮೇಲೆ ಕಡುತರ ನಿರ್ಬಂಧಗಳು ಹಾಕಲ್ಪಟ್ಟಿತ್ತು. ಆದುದರಿಂದ ಸಾಹಜಿಕವಾಗಿಯೆ ನಾವು ನಮ್ಮ ಪ್ರತಿಪಕ್ಷಿಗಳ ಆಕ್ಷೇಪಗಳಿಗೆ ಒಳಗಾಗಿರುವೆವು. ಈ ಆಂದೋಲನದಲ್ಲಿ ಎಲ್ಲವೂ ಸರಿಯಾಗಿ ನಡೆದಿದೆ ಎಂದು ತಿಳಿದುಕೊಳ್ಳುವುದು ನಿಶ್ಚಯವಾದುದು. ಸತ್ಯಾಗ್ರಹಿಗಳ ವಿಷಯಕ್ಕೆ ಅನೇಕ ದೂರುಗಳು ಬಂದಿರುವವು, ಅವುಗಳಲ್ಲಿ ಕೆಲವು ಸರಿಯಾಗಿರುವವು. ಕೆಲವು ನಿರಾಧಾರವಾಗಿರುವವು. ಸತ್ಯಾಗ್ರಹಿಗಳು ಸೆರೆಮನೆಯಲ್ಲಿ ತಮಗೆ ಬೇಕಾದ ತಿಂಡಿತಿನಸುಗಳನ್ನು ಹೊರಗಿನಿಂದ ತರಿಸಿಕೊಂಡು ಸೆರೆಮನೆಯಲ್ಲಿ ಚಕ್ಕಂದ ಮಾಡುತ್ತ ತಮಗೆ ದೊರೆತ ಸುಸಂಧಿಯ ದುರುಪಯೋಗವನ್ನು ಮಾಡುತ್ತಿರುವರೆಂದು ಕೆಲವರ ಆಕ್ಷೇಪಣೆಯಿದ್ದಿತು. ಇಂಥ ಉದಾಹರಣೆಗಳು ಕ್ವಚಿತ್ತಾಗಿಯೆ ಇರುವುದು ಸಾಧ್ಯವು, ಯಾಕಂದರೆ ಬಹುತೇಕ ರಾಜಕೀಯ ಸೆರೆಯಾಳುಗಳಿಗೆ ಈ ತರದ ಸೌಕರ್ಯ ದೊರೆಯುವುದು ಸಾಧ್ಯವಿಲ್ಲ. ಇದೂ ಅಲ್ಲದೆ ಸತ್ಯಾಗ್ರಹಿಗಳಲ್ಲಿ ಬಹಳ ಜನರು ತಮ್ಮ ವೇಳೆಯ ಸದುಪಯೋಗವನ್ನು ಮಾಡುತ್ತಿರುವ ವಿಷಯಕ್ಕೆ ಸಪ್ರಮಾಣ ವರದಿಗಳು ಇರು

ಶ್ರೀ. ವಿನೋಬಾಜಿಯವರು

ಶ್ರೀ ವಿನೋಬಾಜಿಯವರ ಮತ್ತು ಅವರ ಕಾರ್ಯದ ಪರಿಚಯವು ಪ್ರತಿಯೊಬ್ಬರಿಗೂ ಇದೆ. ಪಂಡಿತ ಜವಾಹರಲಾಲ ಮತ್ತು ರಣಜಿತ ಪಂಡಿತ ಇವರ ಕಾರ್ಯವಾದರೂ ಎಲ್ಲರಿಗೂ ಗೊತ್ತಿದ್ದದ್ದೆ. ಅವರೆಲ್ಲರು ತಮ್ಮ ವೇಳೆಯನ್ನು ನೂಲುವುದರಲ್ಲಿಯಾಗಲಿ, ಓದು ಬರಹಗಳಲ್ಲಿಯಾಗಲಿ ಕಳೆಯುತ್ತಲಿರುವರು. ಆದರೆ ಅವರ ಒಬ್ಬಂಟಿಗರಾಗಿ ಇರುವರು. ಸಾಮೂಹಿಕವಾಗಿ ಇದಲ್ಪಟ್ಟವರ ಜೀವನವನ್ನು ನೋಡಿ ... ವಿನೋಬಾರವರನ್ನು ಎರಡನೆಯ ಸಲ ಸೆರೆಹಿಡಿದಾಗ ಅವರು ಗಾಂಧಿಜಿಯವರಿಗೆ ಎರಡೇ ಸಾಲು ಬರೆದರು. ತಮ್ಮ ಆಶೀರ್ವಾದದಿಂದ ನಾನು ಅಹಿಂಸೆಯಲ್ಲಿಯೂ ಆತ್ಮಶುದ್ಧಿಯಲ್ಲಿಯೂ ಬಹಳವಾಗಿ ಮುಂದರಿದಿರುವೆನು ಎಂದು. ಅವರ ಬಿಡುಗಡೆಯ ದಿವಸ ಅವರೊಡನೆ ಇದ್ದ ಅವರ ಬಂಧುಗಳು ಅವರಿಗೆ ತಾವು ನೂತ ನೂಲಿನ ಮಾಲೆಗಳಿಂದ ದಣಿಸಿಬಿಟ್ಟರು. ಮತ್ತೆ ಎರಡು ದಿನಗಳಲ್ಲಿ ತಮ್ಮ ಮುಂದಕ್ಕೆ ಹೋಗುವ ಮೊದಲು ಆ ನೂಲನ್ನು ನೇಯಿಸಿಕೊಂಡುಬಿಟ್ಟರು. ಮೊದಲಿಗ ಹಂಚಿಹಾಕುವ ಮಾಹಿತಿ ಇಲ್ಲದಿದ್ದವರು. ಈಗ ಉತ್ತಮ ಹಂಜಿ ಹಾಕಬಲ್ಲರು ... ನೂಲು ತೆಗೆಯುವ ವೇಗದಲ್ಲಿ ಮೇಲಾಟವೆ ನಡೆದಂತಾಗಿದೆ. ಇದಲ್ಲದೆ ಗಡೆಯಾದ ಬ್ರಹ್ಮದತ್ತರು ಅರ್ಧ ಘಂಟೆಯಲ್ಲಿ ತಕಲಿಯಿಂದ ... ನೂಲು ತೆಗೆದು ಎಲ್ಲರನ್ನೂ ಮೀರಿರುವರು. ಗುರು ... ಮೊದಲಿಗಿಂತಲೂ ... ನೂಲು ತೆಗೆಯುತ್ತಿರುವರು. ... ತಮ್ಮ ಜತೆಗೆ ಕುರಾನಗಳ ಒಂದು ಗ್ರಂಥಾಲಯವನ್ನು ಒಯ್ದಿರುವರು. ಅವರು ಹೊರಗ ಬರುವಷ್ಟರಲ್ಲಿ ಅರಬೀ ಭಾಷೆಯಲ್ಲಿಯೂ ಕುರಾನಿನ ಅಭ್ಯಾಸದಲ್ಲಿಯೂ ಪಂಡಿತರಾಗಿಯೇ ಬರುವರು. ಎಲ್ಲರೂ ದಿನಾಲು ಅರ್ಧತಾಸು ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ಸೇರುವರು.

ಸರದಾರ ವಲ್ಲಭಭಾಯಿಯವರು

ಶ್ರೀ ವಿನೋಬಾ ಭಾವೆಯವರ ಕೆಲಸ ಮಂತೂ ಉತ್ಕೃಷ್ಟವಾಗಿದೆ. ಆದರೆ ಸರದಾರ ವಲ್ಲಭಭಾಯಿಯವರ ಕೆಲಸವು ಅದಕ್ಕಿಂತಲೂ ಮಿಗಿಲಾದುದು. ಹೊರಗೆ ಅವರಿಗೆ ವಿಧಾಯಕ ಕಾರ್ಯಕ್ರಮಕ್ಕೆ ವೇಳೆಯೇ ದೊರೆಯುತ್ತಿರಲಿಲ್ಲ, ಒಳಗೆ ಅವರು ತಮ್ಮ ಎಲ್ಲ ವೇಳೆಯನ್ನು ವಿಧಾಯಕ ಕಾರ್ಯಕ್ಕಾಗಿಯೇ ಮೀಸಲಾಗಿಟ್ಟಿರುವರು. ಮೊದಲು ಮಂತ್ರಿಗಳಾಗಿದ್ದ ಡಾ॥ ಗಿಲ್ಡರರೂ ಕೆಲಸದಲ್ಲಿ ಸರದಾರರ ಜೊತೆಗಾರರಾದ ... ಯವರೂ ಅವರೊಡನಿರುವರು. ಅವರಲ್ಲದೆ ತಪ್ಪದೆ ನೂಲುತ್ತಿರುವ ... ಭಾಯಿಯವರು ಮನಸಿನ ಪರೀಕ್ಷೆ (ಅವರೀಗ ಬಿಡುಗಡೆಹೊಂದಿರುವರು) ಯೋಗಸೂತ್ರಗಳನ್ನೋದಿ ತಮ್ಮ ಸಂಸ್ಕೃತ ಜ್ಞಾನವನ್ನು ಬೆಳೆಗಿಸುತಲಿರುವರು. ಸರದಾರ ವಲ್ಲಭಭಾಯಿಯವರ ಗುಜರಾಥಿ ಮತವನ್ನು ಅದರೊಳಗಿನ ರೀತಿಯೂ ಅವರ ಸಾಹಜಿಕ ಭಾಷಾಸರಣಿಯೂ ಇದ್ದ ಕೈದಿಯೊಬ್ಬ ಇರುವ ಹಾಗೆ ಇಂಗ್ಲಿಷಿನಲ್ಲಿ ಭಾಷಾಂತರಿಸಲು ನಾನು ಶಕ್ತನಾಗಿದ್ದರೆ ಅದೆಷ್ಟು ಒಳಿತಾಗುತ್ತಿತ್ತು! ಅವರು ಒಳಗಿನ ಸಭೆಯ ನಾಲ್ಕು ಗಂಟೆ ... ಗೀತಾ ಮತ್ತು ಮಂಗಲ ಪ್ರಭಾತವನ್ನು ಓದುವುದು ಆ ಮಿನಿಟು, ತಮ್ಮ ಜೊತೆಗಾರರ ಅನುಕೂಲತೆಗಳನ್ನು ನೋಡುವರು, ಅವರಲ್ಲಿ ಉಲ್ಲಾಸವನ್ನುಂಟುಮಾಡುವರು. ನೂಲುವುದೂ ಸಾಮೂಹಿಕ ಪ್ರಾರ್ಥನೆಯೂ ತಪ್ಪದೆ ನಡೆಯುವವು. ಅವರ ಭಾಷೆಯಲ್ಲಿ ಹೇಳಬೇಕಾದರೆ 'ನಾವು ಆಶ್ರಮದ ಪ್ರಾರ್ಥನೆಯನ್ನು ಮೊದಲು ಅನ್ನುವೆವು. ಅನಂತರ ಮಿಯಾಸಾಹೇಬ ನೂರಿಯವರು ಕುರಾಣ ಪಠನವನ್ನು ಮಾಡುವರು. ಅನಂತರ ಡಾ॥ ಗಿಲ್ಡರರು ತಮ್ಮ ಧರ್ಮ ಗ್ರಂಥಗಳಿಂದ ಕೆಲ ಭಾಗವನ್ನು ಓದುವರು. ಅನಂತರ ಒಂದು ಪ್ರಾರ್ಥನಾ ಪದ್ಯವನ್ನು ಅಂದು ರಾಮನಾಮ ಭಜನೆಯನ್ನು ಮಾಡುವೆವು. ರಾತ್ರಿ ೯ ಗಂಟೆಯ ವರೆಗೆ ಓದುವೆವು. ಅನಂತರ ಪ್ರತಿಯೊಬ್ಬರೂ ನಿದ್ರೆಗೆಯ್ಯುವರು. ನಾವು ಗಡಿಯಾರದಂತೆಯೇ ನಿಯಮಿತವಾಗಿರುವುದರಿಂದ ವೇಳೆಯು ಹೇಗೆ ಹೋಗುತ್ತದೆಂಬುದೇ ತಿಳಿಯುವುದಿಲ್ಲ.' ಮುನ್‌ಶಿಯವರು ಬಿಡುಗಡೆಯಾದ ನಂತರ ಬರೆದ ತಮ್ಮದೊಂದು ಬರಹದಲ್ಲಿ ಮಹಾತ್ಮರು ರಾಮಸೇವ್ಯಾಕ್ಕೊ ... ರಾಷ್ಟ್ರೀಯ ಸಿಪಾಯಿದ ಕಾಲಕ್ಕೆ ತೊಟ್ಟ ಉಪವಾಸ ವ್ರತದಿಂದ ಪುನೀತವಾದ ಸ್ಥಳವನ್ನು ಸದ್ಯಕ್ಕಿರುವ ರಾಜಕೀಯ ಕೈದಿಗಳು ಒಂದು ತಪಸ್ಯಾ ಮಂದಿರವನ್ನಾಗಿ ಮಾಡಿಬಿಟ್ಟಿರುವರು ಎಂದಿದ್ದಾರೆ.

ಅರುಣ
ಗರ್ಭಾಶಯಕ್ಕೆ ಅತ್ಯುತ್ತಮ
ಟಾನಿಕ್
ಮುಟ್ಟುದೋಷಗಳನ್ನೆಲ್ಲಾ ಸರಿಪಡಿಸುತ್ತದೆ
ಎಲ್ಲಾ ಕೆಮಿಸ್ಟರಲ್ಲಿಯೂ ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

‘ಎಲ್ಲಿಂದ ತಂದಿರಿ, ಈ ಸುಂದರವಾದ ಕಾರನ್ನು?’ ಎಂದು ರಮಣಿ ಕುತೂಹಲದಿಂದ ಕೇಳಿದಳು.

‘ಬಾಡಿಗೆಗೆ ತಂದೆನು, ಹೂಂ, ಹತ್ತು’

ಇಬ್ಬರೂ ಗಾಡಿಯನ್ನು ಹತ್ತಿದರು ಕಾರು ಪೊಂಪೊಂ, ಎಂದು ವಾಯುಗತಿಯಿಂದ ಚಲಿಸಿತು.

‘ಎಲ್ಲಿಗೆ ಹೋಗುವೆವು?’ ಅವಳು ಪ್ರಶ್ನಿಸಿದಳು

‘ಪಾಂಡವರ ಕೋಟೆಗೆ, ಆಗದೆ?’ ಅವನೆಂದ

ಕೋಟೆ ಊರಿನಿಂದ ಹತ್ತು ಮೈಲು ದೂರದಲ್ಲಿದ್ದಿತು ರಮಣಿ ಮಣಿಗಂಟಿಗಿದ್ದ ವಾಚನ್ನು ನೋಡಿದಳು. ಎರಡೂವರೆ ಗಂಟೆಯಾಗಿದ್ದಿತು ‘ಶಾಲೆಗೆ ಹೋಗುತ್ತೇನೆಂದು ಹೇಳಿಬಂದಿದ್ದೇನೆ ಐದು ಗಂಟೆಗೆ ಮನೆಗೆ ಹೋಗದಿದ್ದರೆ ದೊಡ್ಡ ಪ್ರಮಾದವೇ ಆಗಬಹುದು ತಂದೆಯವರ ಸಿಡುಕಿನ ಸ್ವಭಾವ ನಿಮಗೆ ಗೊತ್ತಿದ್ದದ್ದೆ’ ಅವಳು ಹೇಳಿದಳು

‘ಚಿಂತೆ ಇಲ್ಲ, ರಮಣಿ’ ಮನೋಹರ ಅವಳ ಕಡೆಗೆ ನೋಡುತ್ತ ಹೇಳಿದ— ‘ಇನ್ನೆರಡು ಗಂಟೆಯೊಳಗಾಗಿಯೇ ಹಿಂತಿರುಗುವೆವು’

ಅರೆತಾಸಿನಲ್ಲಿ ಕಾರು ಬಂದು ಕೋಟೆಯ ಹೆಬ್ಬಾಗಿಲಿಗೆ ತಾಗಿ ನಿಂತಿತು. ಇಬ್ಬರೂ ಕೆಳಗಿಳಿದರು. ಮನೋಹರ ಕಾರಿಗೆ ಬೀಗ ಹಾಕಿದ ಮೇಲೆ ಅವರು ಕೈ ಕೈ ಕೊಟ್ಟು ಒಳಗೆ ನಡೆದರು ದಟ್ಟವಾಗಿ ಕಾಡು ಬೆಳೆದಿದ್ದಿತು ನಾಲ್ಕು ಸುತ್ತಲೂ ನೀರವ, ನಿಶ್ಶಬ್ದ ಅಲ್ಲಿ ಆ ಏಕಾಂತದಲ್ಲಿ ಅವರಿಬ್ಬರು ಸಂಪೂರ್ಣ ಸ್ವತಂತ್ರರಿದ್ದರು ಹೆತ್ತವರ ಗದರಿಕೆಯ ಭಯವಾಗಲೀ, ಲೋಕನಿಂದೆಯ ಹೆದರಿಕೆಯಾಗಲೀ ಅವರಿಗಿರಲಿಲ್ಲ ನಡೆಯುತ್ತ ನಡೆಯುತ್ತ, ಕಲ್ಲು ಮುಳ್ಳುಗಳನ್ನು ತುಳಿಯುತ್ತ ಅವರು ಕೋಟೆಯ ಮಧ್ಯಭಾಗಕ್ಕೆ ಬಂದರು ಪ್ರೇಮೋನ್ಮತ್ತರಿಬ್ಬರೂ ಪ್ರೇಮಾಲಾಪನೆಯ ಸುಧಾರಸವನ್ನು ಸವಿಯುತ್ತಿದ್ದರು ಆ ರಸಾನುಭವದ ಮುಂದೆ ಅವರಿಗೆ ಕಂಟಕಾಕೀರ್ಣವಾದ ಆ ದಾರಿಯನ್ನು ನಡೆಯುವ ಪರಿಶ್ರಮವೂ ತಿಳಿಯಲೇ ಇಲ್ಲ! ಅಲ್ಲಿ, ಕೋಟೆಯ ಮಧ್ಯಭಾಗದಲ್ಲಿ ಪಾಂಡವರ ಒಂದು ಪುರಾತನ ಗುಹೆ ಇದ್ದಿತು ಅವರು ಅದರ ಒಳಗೆ ಕಾಲಿಟ್ಟರು

‘ರಮಣಿ, ನಾನು ಅರ್ಜುನ!’ ಅವನು ಅವಳ ಮೋರೆಯನ್ನು ನೋಡಿ ಹೇಳಿದ

ಮುಖವು ರಕ್ತವರ್ಣವಾಗಿದ್ದಿತು ದಾಳಿಂಬದ ಬೀಜಗಳಂತೆ ಹೊಳೆಯುತ್ತಿರುವ ದಂತಪಂಕ್ತಿಗಳಿಂದ ಮಿನುಗಿದ ಮಂದಹಾಸದ ದಿವ್ಯ ಪ್ರಕಾಶದಿಂದ ಸುತ್ತಲಿದ್ದ ಅಂಧಕಾರವು ದೂರವಾಯಿತು

‘ಹಾಗಾದರೆ ನಾನು ಸುಭದ್ರೆ, ಇದೇ ಅಲ್ಲವೆ ನಿಮ್ಮ ಭಾವ?’ ಎಂದಳವಳು.

‘ಹೌದು ರಮಣಿ, ಪೂರ್ವಜನ್ಮದಲ್ಲಿ ನಾನು ಅರ್ಜುನ ಮತ್ತು ನೀನು ಸುಭದ್ರೆಯರಾಗಿ ಇದೇ ದಿಣ್ಣೆಯ ಮೇಲೆ ಹೀಗೆ ಕುಳಿತಿದ್ದೆವು.’

ವಾರದ ಕತೆ:

ಆಶೆ-ನಿರಾಶೆಗಳಲ್ಲಿ!

[ಶ್ರೀ ಕತೆಗಾರ]

ಅವನು ಅವಳನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿ ಸುಂದರವೂ ಕೋಮಲವೂ ಆಗಿ, ಉಬ್ಬಿರುವ ಅವಳ ಗಲ್ಲಗಳನ್ನು ಮೆಲ್ಲಗೆ ಮುದ್ದಿಟ್ಟ. ಅವಳು ಅವನನ್ನು ತನ್ನ ಬಾಹುಪಾಶಗಳಿಂದ ಬಿಗಿದಪ್ಪಿ ಮೋರೆಯನ್ನು ಚುಂಬಿಸಿದಳು ಇಬ್ಬರ ನೇತ್ರಗಳಿಂದಲೂ ಪ್ರೇಮಾಶ್ರುಗಳು ಹರಿದುವು ಕೆಲಕಾಲದ ತನಕ ಇಬ್ಬರೂ ಸುಖಾನುಭವಪಡೆದು ಅವರು ಅಲ್ಲಿಂದ ಮರಳಿದರು

❧

ಮನೋಹರ, ರಮಣಿ ಅವರು ಪ್ರೇಮಪಾಶದಿಂದ ಬಂಧಿತರಾಗಿದ್ದರೂ ಸತಿಪತಿಯರಾಗಿ ಸುಖಜೀವನವನ್ನು ಸಾಗಿಸುವುದು ಸಾಧ್ಯವಿರಲಿಲ್ಲ ಯಾಕೆಂದರೆ ದೈವವು ಇಂಥ ಸತಿಪತಿಯ ಸುಖಜೀವನವನ್ನು ನೋಡಲಾರದು ಅದು ನೋಡಿ ಸುಮ್ಮಗಿದ್ದರೂ, ಸಮಾಜಕ್ಕೆ ಸುಮ್ಮಗಿರಲಿಕ್ಕೆ ಎಷ್ಟು ಮಾತ್ರವೂ ಸಾಧ್ಯವಿಲ್ಲ ಉಚ್ಚ ನೀಚ, ಶ್ರೀಮಂತ ಬಡವ ಭಾವನೆಗಳ ಪ್ರೇಮ ವಿವಾಹಗಳಿಗೆ ಸಮ್ಮತಿಯನ್ನು ಕೊಡಲಾರವು ಅಂತೆಯೇ ರಮಣಿಯ ವಿವಾಹವು ಈ ಘಟನೆ ನಡೆದ ಒಂದೆರಡು ತಿಂಗಳುಗಳಲ್ಲಿಯೇ ಬೇರೊಂದು ಕಡೆ ಆಗಿ ಹೋಯಿತು. ಆ ಸಂಬಂಧವನ್ನು ತಪ್ಪಿಸಲಿಕ್ಕೆ ಅವಳು ಮಾಡಿದ ಸಾಧನೆ, ವ್ರತ, ತಪಸ್ಸು ಎಲ್ಲವೂ ವ್ಯರ್ಥವಾದುವು ಅವಳು ಹೊಸ ಪತಿಯ ಮನೆಗೆ ಹೊರಟುಹೋದಳು

❧

ಎರಡು ವರ್ಷಗಳು ಕಳೆದ ಮೇಲೆ ರಮಣಿ ತನ್ನ ಪತಿಯೊಂದಿಗೆ ತಂದೆ ಮನೆಗೆ ಹಿಂತಿರುಗಿದ್ದಳು. ಒಂದು ದಿನ ಅಳಿಯ ಮಗಳ ಊಟೋಪಚಾರಗಳು ಮುಗಿದ ಮೇಲೆ ಜಮೀನ್ದಾರ ನಾಗಭೂಷಣರಾಯರು ಅವರನ್ನು ಕರಕೊಂಡು ಗಾಳಿ ಸೇವನೆಗೆ ಹೊರಟಿದ್ದರು ಕಾರು ವಾಯುಗತಿಯಿಂದ ಚಲಿಸುತ್ತಿದ್ದಿತು ಅದು ಅದೇ ಮಾರ್ಗವಾಗಿ ಹೋಗುತ್ತಿದ್ದಿತು ‘ಅಪ್ಪಾ! ಹೋಗುವುದೆಲ್ಲಿಗೆ?’ ಎಂದು ರಮಣಿ ಕಾತರಳಾಗಿ ಕೇಳಿದಳು ಕಾರು ಹೋಗುತ್ತ ಹೋಗುತ ಎರಡು ವರ್ಷಗಳ ಹಿಂದಿನ ಎಲ್ಲಾ ಘಟನೆಗಳು ಚಲಚ್ಚಿತ್ರದ ಚಿತ್ರಪಟಗಳಂತೆ ಅವಳ ಸ್ಮರಣೆಗೆ ಬರುತಲಿದ್ದವು ‘ನಮ್ಮೂರಿಗೆ ಬಂದವರು ಪಾಂಡವರ ಕೋಟೆಯನ್ನು ನೋಡಲೇ ಬೇಕು ಅಲ್ಲಿಗೇ ಹೋಗುತ್ತವೆವು’ ಎಂದು ನಾಗಭೂಷಣರಾಯರು ಹೇಳಿದರು.

‘ಅಪ್ಪಯ್ಯ, ಅಲ್ಲಿಗೆ ಬೇಡ, ಹಿಂದಿರುಗೋಣ’ ಎಂದವಳು ಕಾತರಳಾಗಿ [illegible]ದಳು.

‘ಯಾಕೆ ರಮಣಿ’ ನಿನಗೆ ಅದ[illegible] ನೋಡುವ ಆಶೆಯಾಗುವುದಿಲ್ಲ, ಅರ್ಜುನ ಸುಭದ್ರೆಯರ ದಿಣ್ಣೆಯ ಮೇ[illegible] ಕುಳಿತ ದಂಪತಿಗಳು ಚಿರಕಾಲ ದಾಂಪತ್ಯಸುಖವನ್ನು ಅನುಭವಿಸುವರು.’

ರಮಣಿ ಸಂದಿಗ್ಧದಲ್ಲಿದ್ದಳು, ಅವ[illegible] ಸಮ್ಮತಿ ಕೊಡಲಿಕ್ಕೂ ಅಲ್ಲ, ಕೊಡ[illegible]ಲಿಕ್ಕೂ ಅಲ್ಲ ಹೇಗೂ ಕಾರು ಕೋ[illegible]ಯ ಸಮೀಪವಾಯಿತು ಎಲ್ಲರೂ ಇ[illegible]ದು ಒಳಗೆ ನಡೆದರು ರಮಣಿ ಎಲ್ಲ[illegible]ಗಿಂತ ಹಿಂದಿದ್ದಳು. ಅವಳಿಗೆ ಅಂ[illegible] ಬಂದ ಸಂತೋಷವಿಲ್ಲ, ಸ್ಫೂರ್ತಿ ಇ[illegible] ಉಲ್ಲಾಸ ಉತ್ಸಾಹಗಳಿಲ್ಲ ನಡೆಯು[illegible] ನಡೆಯುತ್ತ ಕಾಲುಗಳು ನಡುಗುತ್ತಿದ್ದು[illegible] ತುಟಿಗಳು ಅದುರುತ್ತಿದ್ದವು

ಎಲ್ಲರೂ ಕೋಟೆಯ ಮಧ್ಯಭಾಗ[illegible] ಬಂದರು ‘ನೋಡಿ, ಇದೇ ಪಾಂಡ[illegible] ಗುಹೆ ಅರ್ಜುನನು ಸುಭದ್ರೆಯ[illegible] ವಿವಾಹವಾಗಿ ಮರಳಿದಾಗ ದಾರಿಯ[illegible] ಇದೇ ದಿಣ್ಣೆಯಮೇಲೆ ಕುಳಿತು ದಣ[illegible]ರಿಸಿದ್ದ’ ನಾಗಭೂಷಣರಾಯರು ಇ[illegible]ನ್ನು ಹೇಳಿ ಮುಗಿಸುವುದರೊಳಗೆ ಹೋ[illegible] ಎಂದು ಯಾರೋ ಅರಚಿಕೊಂಡು [illegible]ಕೆ ಬಿದ್ದಂತಾಯಿತು. ಅವರ ಹಿಂತಿ[illegible]ಗಿ ನೋಡಿದರು. ರಮಣಿ ಬಿದ್ದಿದ್ದ[illegible] ಕಣ್ಣಾಲಿಗಳು ಮುಚ್ಚಿದ್ದವು. ಕೈಕಾ[illegible]ಗಳು ಎಳೆದುಬರುತ್ತಿದ್ದುವು ‘ಏನಾ[illegible]ತಮ್ಮ, ಏನಾಯಿತು’ ಎಂದು ನಾಗಭೂ[illegible]ಣರಾಯರು ಅವಳನ್ನು ಎತ್ತಿಕೊಂ[illegible] ದಿಣ್ಣೆಯ ಮೇಲೆ ಕುಳಿತುಕೊಳ್ಳಿಸುತ್ತ [illegible]ಳಿದರು ರಮಣಿ ಕಣ್ಣುಗಳನ್ನು ಅ[illegible]ರೆದು ಹಾಂ, ಹಾಂ, ಅರ್ಜುನ ಸುಭ[illegible] ನಾನು ಮನೋಹರ ನಾವು..! ಏ[illegible]ನೋ ಹೇಳಿದಳು, ಯಾರಿಗೂ ಅರ್ಥ[illegible]ಗಲಿಲ್ಲ ಅವಳು ಕಣ್ಣುಗಳನ್ನು ಮು[illegible]ದಳು ಮತ್ತೆ ಅವು ತೆರೆಯಲಿಲ್ಲ ನಿ[illegible]ತನಳನ್ನಾಗಿ ಅವಳು ಬಿದ್ದುಕೊಂಡಳು.

ಮಾವ ಮತ್ತು ಅಳಿಯ ರಮಣಿ[illegible] ಮೈಯನ್ನು ತಿಕ್ಕುತ್ತಾ ಇಚೆ ಅಚೆ ನೋ[illegible]ದರು ಗವಿಯ ಒಂದು ಮೂಲೆ[illegible] ಪಕ್ಕದಲ್ಲಿ ಒಂದು ಕಂಬಳಿ ಇದ್ದಿತ[illegible] ಅವರು ಅದನ್ನು ಎತ್ತಿಕೊಂಡರು ಅದ[illegible] ಮೇಲೆ ಆಶೆ–ನಿರಾಶೆ ಎಂದು ಬರೆದಿದ್ದಿತ[illegible] ಮತ್ತೆ ನೋಡಿದಾಗ ಆ ಕಂಬಳಿಗೆ ಸಮೀ[illegible]ವಾಗಿಯೇ ಯಾರೋ ಒಬ್ಬನ ಹಿ[illegible] ಎಲುಬುಗೂಡು ಬಿದ್ದಿತ್ತು ಅದನ್ನ[illegible] ಕಂಡ ಆಶೆ ನಿರಾಶೆ, ಆಶೆ ನಿರಾಶೆ ಎನ್ನು[illegible] ಅವರು ದಿಣ್ಣೆಯ್ಯು ಬಳಿಗೆ ಬಂದರು ಚಿ[illegible]ವಾಗಿಯೂ ಅವರೆಲ್ಲರಿಗೂ ಆಶೆ ನಿ[illegible]ಶೆಯೇ ಆಗಿತ್ತು

ಪಡೆಯಿರಿ ನಿಮ್ಮ

ಸೇವಿಂಗ್ಸ್ ಕಾರ್ಡ್



ಯಾವ ಪೋಸ್ಟಾಫೀಸಿನಲ್ಲಾದರೂ ಮತ್ತು ಅದಕ್ಕೆ ೪ ಆಣೆ, ೮ ಆಣೆ, ಅಥವಾ ೧ ರೂಪಾಯಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್‌ಗಳನ್ನು ಅಂಟಿಸಿರಿ.

ರೂ. ೩|೯ ಆದಾಯ ಪ್ರತಿ ೧೦ ರೂಗೆ

ನಿಮ್ಮ ಕಾರ್ಡಿನ ಮೇಲೆ ೧೦ ರೂಪಾಯಿ ಬೆಲೆಯ ಸ್ಟಾಂಪುಗಳನ್ನು ಅಂಟಿಸಿದ ಮೇಲೆ ಅದನ್ನು ಪೋಸ್ಟಾಫೀಸಿನಲ್ಲಿ ಕೊಟ್ಟು ಅದಕ್ಕೆ ಬದಲಾಗಿ ಒಂದು ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟನ್ನು ಪಡೆಯಿರಿ ಅದು ಹತ್ತು ವರ್ಷಗಳಲ್ಲಿ ರೂ ೧೩|೯ ಬೆಲೆಯುಳ್ಳದ್ದಾಗುತ್ತದೆ

ನೀವು ಕೇಳಿದಾಗ ತಕ್ಕ ಬಡ್ಡಿಯೊಡನೆ ಹಿಂದಕ್ಕೆ ಕೊಡಲಾಗುವುದು

ರಕ್ಷಣೆಗಾಗಿ ಉಳಿಸಿರಿ

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟುಗಳನ್ನು

KN G.I 24

ಜಿಲ್ಲಾ ಸಮಾಚಾರಗಳು

ಮಂಗಳೂರು

ಎರಡನೆಯ ಮತ್ತು ಮೂರನೆಯ ಪಟ್ಟಿಯಲ್ಲಿರುವ ಸತ್ಯಾಗ್ರಹಿಗಳು ೫ನೆಯ ಜುಲೈ ಒಳಗಾಗಿ ಸತ್ಯಾಗ್ರಹ ಮಾಡಬೇಕು

೫ನೆಯ ಎಪ್ರಿಲ್‌ನೊಳಗಾಗಿ ಸತ್ಯಾಗ್ರಹಮಾಡಬೇಕಾಗಿದ್ದ ಸತ್ಯಾಗ್ರಹಿಗಳು ೫ನೆಯ ಜುಲೈ ಒಳಗಾಗಿ ಸತ್ಯಾಗ್ರಹವನ್ನು ಮಾಡಲೇಬೇಕೆಂದೂ, ವೈಯಕ್ತಿಕ ಅನಾನುಕೂಲತೆಯಿಂದಾಗಲೀ, ಅನಾರೋಗ್ಯದ ಮೂಲಕವಾಗಲೀ ಸತ್ಯಾಗ್ರಹವನ್ನು ಮಾಡಲಾಗದಿರುವವರು ತಾವಾಗಿಯೇ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಖಾಂತರವಾಗಿ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ಬರೆದುಕೊಂಡು ತಮ್ಮ ಹೆಸರುಗಳನ್ನು ಸತ್ಯಾಗ್ರಹಿಗಳ ಪಟ್ಟಿಯೊಳಗಿಂದ ತೆಗೆಯಿಸಿಕೊಳ್ಳಬೇಕೆಂದೂ ಸಂಬಂಧಿಸಿದ ಸತ್ಯಾಗ್ರಹಿಗಳಿಗೆ ತಿಳಿಸಬೇಕಾಗಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯಿಂದ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ಸೂಚನೆ ಕೊಡಲಾಗಿದೆ

ಶ್ರೀ ಬಿ. ಜಿ. ಕಾಮತರು ಎರಡನೆಯ ಸಲ ಸತ್ಯಾಗ್ರಹ ಮಾಡಿದರು

ಬಾರ್ಕೂರಿನ ಶ್ರೀ. ಗೋಪಾಲಕೃಷ್ಣ ಕಾಮತರು ಮೊದಲನೆಯ ಸಲ ಸತ್ಯಾಗ್ರಹ ಮಾಡಿ ಬಂಧಿತರಾಗಿ ಕಣ್ಣಾನೂರು ಜೈಲಿನ 'ಸಿ' ಕ್ಲಾಸಿನಲ್ಲಿ ನಾಲ್ಕು ತಿಂಗಳ ಶಿಕ್ಷೆಯನ್ನು ಅನುಭವಿಸಿ ಬಂದವರು—ತಿರಿಗಿ ತಾ. ೧೮ರಂದು ಸಂಜೆ ೪ ಗಂಟೆಗೆ ಸತ್ಯಾಗ್ರಹ ಮಾಡಿದರು. ಈ ಸಲ ಅವರು ಕೈದಾಗದೆ ಇರುವುದರಿಂದ ಯುದ್ಧ ವಿರುದ್ಧ ಪ್ರಚಾರ ಕಾರ್ಯ ಮಾಡುತ್ತಾ ಮುಂದುವರಿದಿರುವರು.

ಸತ್ಯಾಗ್ರಹಿಗಳಿಗೆ ಅಪಮಾನ ಮಾಡಿದರು

ಶ್ರೀ. ಮುಪ್ರಾಡಿ ಕೃಷ್ಣಯ್ಯ ಶೆಟ್ಟರೊಡನೆ ಪುತ್ತೂರು ತಾಲೂಕಿನ ನೂಜಿಬೈಲು ಮತ್ತು ಪಡಾರು ಎಂಬಲ್ಲಿನ ಎರಡು ಮನೆಗಳಲ್ಲಿ ಆ ಮನೆಗಳ ಅಧಿಕಾರಿಗಳು ಬಹಳ ಅಗೌರವವಾದ ಅಸಭ್ಯ ರೀತಿಯಲ್ಲಿ ವ್ಯವಹರಿಸಿ ಅಪಮಾನ ಮಾಡಿದರೆಂದೂ, ಕಾಂಗ್ರೆಸು ಮತ್ತು ಸತ್ಯಾಗ್ರಹಗಳ ವಿಚಾರದಲ್ಲಿ ಅವರಿಗೆ ಅಜ್ಞಾನ ಮೂಲಕವಾದ ದ್ವೇಷಬುದ್ಧಿಯಿರುವುದೇ ಇದಕ್ಕೆ ಕಾರಣವಿರಬೇಕೆಂದೂ ಶ್ರೀ. ಶೆಟ್ಟರು ಹೇಳಿಕೆಯಿತ್ತಿದ್ದಾರೆ. ಇದಕ್ಕೆ ಹಿಂದೆಯೂ ನೂಜಿ ಬೈಲಿನ ಮನೆಯಲ್ಲಿ ಶ್ರೀ. ಪ್ರಭಾಕರ ಶೇಟ್ ಎಂಬ ಸತ್ಯಾಗ್ರಹಿಗಳಿಗೆ ಅಪಮಾನ ಮಾಡಿದರೆಂದು ತಿಳಿದು ಬಂದಿದೆ.

ಡಾ। ಪಿ. ಎಸ್. ಶಾಸ್ತ್ರಿಗಳ ಬಿಡುಗಡೆ

ಪೆರಡಾಲಿನ ಡಾ। ಪಿ. ಎಸ್. ಶಾಸ್ತ್ರಿಗಳು ಕಳೆದ ಶನಿವಾರ ತಿರುಚಿನಾಪಳ್ಳಿ ಜೈಲಿನಿಂದ ಬಿಡುಗಡೆ ಹೊಂದಿ, ಆದಿತ್ಯವಾರ ಬಂದಿರುವರು. ಅವರು ತಮ್ಮ ನಾಲ್ಕು ತಿಂಗಳ ಸಜೆಯಲ್ಲಿ ಸಿ ಕ್ಲಾಸಿನಲ್ಲಿ ಕೆಲಕಾಲ ಕಣ್ಣನೂರು ಜೈಲಿನಲ್ಲಿಯೂ, ಕೊನೆಗೆ 'ಏ' ಕ್ಲಾಸಿನಲ್ಲಿ ತ್ರಿಚನಾಪಳ್ಳಿ ಜೈಲಿನಲ್ಲಿಯೂ ಕಳೆದಿರುವರು. ಸಿ ಕ್ಲಾಸಿನ ಕಣ್ಣನೂರು ಜೈಲಿನಿಂದ ತ್ರಿಚನಾಪಳ್ಳಿಗೆ ವರ್ಗವಾಗುವಾಗ ಶರೀರದಲ್ಲಿ ೨೦ ಪೌಂಡು ತೂಕ ಕಡಿಮೆಯಾದವರು ತ್ರಿಚನಾಪಳ್ಳಿಯಲ್ಲಿ ೬ ಪೌಂಡು ದೊರಕಿಸಿಕೊಂಡಿರುವರು. ರಾಜಾಜಿ, ಪ್ರಕಾಶಂ, ಗಿರಿ ಮೊದಲಾದ ಮಂತ್ರಿಗಳೊಡನೆ ಹಾಗೂ ಪ್ರಾಂತದ ಬಹುಮಂದಿ ಕಾಂಗ್ರೆಸು ಎಂ. ಎಲ್. ಎ.ಗಳೊಡನೆ ತಿರುಚಿನಾಪಳ್ಳಿ ಜೈಲಿನಲ್ಲಿ ಸಮೀಪ ಪರಿಚಯವಾಗುವ ಸಂದರ್ಭವು ಅವರಿಗೆ ದೊರಕಿದೆ. ನಮ್ಮ ಜಿಲ್ಲೆಯ ಶ್ರೀಗಳಾದ ಕಾರಂತ, ಶೆಟ್ಟಿ, ಮಲ್ಯ, ಬಾಳಿಗ ಮೊದಲಾದವರು ಬಹಳ ನಿಯಮ ನಿಷ್ಠೆಗಳಿಂದ ಓದುವುದರಲ್ಲಿಯೂ ನೂಲುವುದರಲ್ಲಿಯೂ ತಮ್ಮ ಸಮಯಗಳನ್ನು ಸದುಪಯೋಗಗೊಳಿಸುತ್ತಿರುವರೆಂದೂ ಬಹು ಮುಂದಿಗೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೆಚ್ಚಿನ ಕಷ್ಟವಾಗುತ್ತದೆಯೆಂದೂ ಅವರ ಅಭಿಪ್ರಾಯವಾಗಿದೆ.

ಡಾ। ಎಫ್. ಎಚ್. ಒಡೆಯರು

ಸತ್ಯಾಗ್ರಹಕ್ಕಾಗಿ ದಂಡನೆಯನ್ನು ಅನುಭವಿಸುತ್ತಿದ್ದ ಡಾ। ಒಡೆಯರು ತ್ರಿಚಿ ಜೈಲಿಂದ ಬಿಡುಗಡೆ ಹೊಂದಿ ಆದಿತ್ಯವಾರ ಮಂಗಳೂರಿಗೆ ಮೈಲಲ್ಲಿ ಬಂದು, ಸ್ಥಳೀಯ ರೈಲ್ವೆ ಸ್ಟೇಶನಿನಲ್ಲಿ ಕಾಂಗ್ರೆಸ್ ಕೆಲಸಗಾರರಿಂದಲೂ ಮಜೂರರಿಂದಲೂ ಸ್ವಾಗತವನ್ನು ಪಡೆದರು.

ಡಾ। ಒಡೆಯರನ್ನು ಅಭಿನಂದಿಸುವರೆ ಮೈದಾನಿನಲ್ಲಿ ಮರುದಿನ ಒಂದು ಸಾರ್ವಜನಿಕ ಸಭೆ ಸೇರಿತು. ಡಾ। ಒಡೆಯರು ತಮ್ಮ ಜೈಲಿನ ಅನುಭವಗಳನ್ನು ಹೇಳಿದರು. ಶ್ರೀ. ಕೃಷ್ಣರಾಯರು ಮಾತನಾಡಿದರು. ಶ್ರೀ. ಬಿ. ಡಿ. ಬೋಳಿಗರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಕೆ. ಈಶ್ವರ ಎಮ್. ಎಲ್. ಎ. ಇವರು ಕೃತಜ್ಞತಾ ಸಮರ್ಪಣೆ ಮಾಡಿದರು.

ಶ್ರೀ. ಮಾಧವ ಪ್ರಭುಗಳ ಬಿಡುಗಡೆ

ವಿಜಾಪುರದ ಹಿಂಡಲ್ಗಿ ಜೈಲಿನಿಂದ ಸ್ವದೇಶೀ ಸ್ಟೋರಿನ ಶ್ರೀ. ಮಾಧವ ಪ್ರಭುಗಳು ಬಿಡುಗಡೆ ಹೊಂದಿ ಬಂದಿರುವರು. ಅವರು ದೇಹದಲ್ಲಿ ೩೮ ಪೌಂಡು ತೂಕ ಕಡಿಮೆಯಾಗಿರುವುದರಿಂದ ಅವರ ಬಿಡುಗಡೆಯಾಗಿದೆ. ಶ್ರೀ. ಪ್ರಭುಗಳು ಈಗ ಘಟು ಸಿತ್ರಾಣದಿಂದಿರುವರು.

ಡಾ। ಕೆ. ಜಿ. ಕಾಮತರ ಬಿಡುಗಡೆ

ಕಾರ್ಕಳದ ಡಾಕ್ಟರ ಕೆ. ಜಿ. ಕಾಮತರವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿ ತಾ. ೧೫ರ ದಿನ ಇಲ್ಲಿಗೆ ಮರಳಿದ್ದಾರೆ.

ಶ್ರೀಗಳಾದ ಕೊಚ್ಚಿಕಾರ್ ನಾರಾಯಣ ಪೈ, ಮಂಜುನಾಥ ನಾಯಕ್, ವಿ. ಲಕ್ಷ್ಮೀನಾರಾಯಣ ನಾಯಕ್ ಇವರ ಬಿಡುಗಡೆ

ತ್ರಿಚನಾಪಳ್ಳಿ ಜೈಲಿನಲ್ಲಿ 'ಎ' ಕ್ಲಾಸಿನಲ್ಲಿದ್ದ ಸತ್ಯಾಗ್ರಹಿಗಳಿವರು ತಮ್ಮ ಶಿಕ್ಷೆಯ ಅವಧಿಯನ್ನು ಪೂರೈಸಿ ಬಿಡುಗಡೆ ಹೊಂದಿ ಬಂದಿರುವರು.

ಸತ್ಯಾಗ್ರಹಿಗಳ ಬಂಧನ

ಶ್ರೀ. ರಾಮ ಕುಡ್ವರು, ಸತ್ಯಾಗ್ರಹ ಮಾಡಿ, ಬಂಧಿತರಾಗದೆ, ಉತ್ತರ ಕನ್ನಡದಲ್ಲಿ ಪ್ರಚಾರ ಪ್ರವಾಸ ನಡೆಯಿಸುತ್ತಿರುವಾಗ ಶಿರಾಲಿಯಲ್ಲಿ ಬಂಧಿಸಲ್ಪಟ್ಟರು. ಅವರಿಗೆ ೬ ತಿಂಗಳು ಕಠಿನ ಸಜೆಯಾಗಿ, 'ಸಿ' ಕ್ಲಾಸಿನಲ್ಲಿ ಡಲ್ಪಟ್ಟರು.

ಸತ್ಯಾಗ್ರಹಿಗಳ ವರ್ಗ

ಕಣ್ಣಾನೂರು ಸೆಂಟ್ರಲ್ ಜೈಲಿನಿಂದ ಕೈದಿಗಳಾದ ನಮ್ಮ ಜಿಲ್ಲೆಯ ಡಾ. ಯು. ಪಿ. ಮಲ್ಯ ಮತ್ತು ಶ್ರೀ. ಬಿ. ಎಸ್. ಸೂರಪ್ಪ ಸೆಟ್ಟಿ ಇವರನ್ನು ತಿರುಚಿನಾಪಳ್ಳಿ ಸೆಂಟ್ರಲ್ ಜೈಲಿಗೆ ಕಳುಹಿಸಲಾಗಿದೆ.

ಟಿ. ಜಿ ರಜತ್ ಫೊರ್ಡ್ ರವರು

ಮಾನ್ಯ ಮದ್ರಾಸ್ ಗವರ್ನರರ ಎಡ್ವೈಜರರಾದ ಈ ಮಹನೀಯರು ಕಳೆದ ಶನಿವಾರ ಮಂಗಳೂರಿಗೆ ಬಂದು ಆದಿತ್ಯವಾರ ಸ್ಥಳೀಯ ಗೌ। ಕಾಲೇಜಿನಲ್ಲಿ ಯುದ್ಧ ಸಹಾಯ ಮಾಡಿರೆಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ, ತಾ. ೨೩ರಂದು ಸ್ಥಳೀಯ ಮುನ್ಸಿಪಲ್ ಕೌನ್ಸಿಲಿಗೆ ಭೇಟಿಕೊಟ್ಟು, ತಾ. ೨೩ರಂದು ಇಲ್ಲಿಂದ ಹಿಂದೆರಳಿರುವರು.

ಕಯ್ಯೂರು ಪೋಲೀಸು ಕಾನ್‌ಸ್ಟೇಬಲ್ ಮೊಕದ್ದಮೆ

ಕಯ್ಯೂರಿನಲ್ಲಿ ಕಾನ್‌ಸ್ಟೇಬಲ್ ಕೊಲೆಯ ಸಂಬಂಧ, ಪುನಃ ಒಬ್ಬನನ್ನು ದಸ್ತಗಿರಿ ಮಾಡಲಾಯಿತು. ಈಗ ಒಟ್ಟು ದಸ್ತಗಿರಿಯಾದ ಸಂಖ್ಯೆ ೬೦. ದಸ್ತಗಿರಿಯಾದವರನ್ನೆಲ್ಲ ಮಂಗಳೂರು ಸಬ್ ಜೈಲಿನಲ್ಲಿ ರಿಮಾಂಡಿನಲ್ಲಿರಿಸಲಾಗಿದೆ.

ಪೆರಡಾಲ

ಮುಪ್ರಾಡಿ ಕೃಷ್ಣಯ್ಯ ಶೆಟ್ಟರ ಸಂಚಾರ

ಸತ್ಯಾಗ್ರಹಿ ಶ್ರೀ. ಮುಪ್ರಾಡಿ ಕೃಷ್ಣಯ್ಯ ಶೆಟ್ಟರು ಪುತ್ತೂರು ದಾರಿಯಾಗಿ ಕಾಸರಗೋಡು ತಾಲೂಕಿನ ಗ್ರಾಮ ಗ್ರಾಮಗಳಲ್ಲಿ ಯುದ್ಧ ವಿರುದ್ಧ ಪ್ರಚಾರ ಮಾಡುತ್ತಾ ಪೆರಡಾಲಿಗೆ ಬಂದರು. ಮಳೆಗಾಲವಾಗಿರುವುದರಿಂದ ಸಾರ್ವಜನಿಕ ಸಭೆ ಸೇರಿಸಿ ಪ್ರಚಾರ ಮಾಡುವುದು ಕಷ್ಟವಾಗುತ್ತಿದ್ದರೂ ಅಲ್ಲಲ್ಲಿ ಮಂದಿಯನ್ನು ಸೇರಿಸಿ ಅವರಿಗೆ ಕಾಂಗ್ರೆಸಿನ ಕಾರ್ಯ ನೀತಿಗಳನ್ನು ವಿವರಿಸಿ ಪ್ರಚಾರ ಮಾಡುತ್ತಿದ್ದಾರೆ. ಇಲ್ಲಿಂದ ಮುಂದೆ ಅವರು ಕಾಸರಗೋಡು ಕಡೆಗೆ ತೆರಳಿರುವರು. ಶ್ರೀ. ಶೆಟ್ಟರು ಒಳ್ಳೆಯ ಹುರುಪಿನಿಂದ ಪ್ರಚಾರ ಕೆಲಸಮಾಡುತ್ತಿದ್ದಾರೆ.

ಚಾರ್ಜು ವಹಿಸಿಕೊಂಡಿರುವರು

ಇಲ್ಲಿಯ ಹೊಸ ಮುನ್ಸಿಪಲ್ ಹೆಲ್ತ್ ಆಫೀಸರರಾದ ಶ್ರೀ. ಕೆ. ಆರ್. ವೆಂಕೋಬ್ ರಾಯರು ತಮ್ಮ ಉದ್ಯೋಗವನ್ನು ನಿರ್ವಹಿಸಿಕೊಂಡಿರುವರು ತಲ್ಲೇರಿಗೆ ವರ್ಗವಾದ ನಮ್ಮ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಪಿ. ಎಸ್. ಮನ್ನಾಡಿಯರರ ಸ್ಥಾನಕ್ಕೆ ಬಂದಿರುವ ಶ್ರೀ. ಡಿ. ನರಸಿಂಹ ಶಾಸ್ತ್ರಿಗಳು ಅವರ ಉದ್ಯೋಗದ ಚಾರ್ಜು ವಹಿಸಿಕೊಂಡಿರುವರು.

ಸುರತ್ಕಲ್

ಇಡ್ಯ ವಿದ್ಯಾದಾಯಿನೀ ಶಾಲೆಯ ರಜತ ಮಹೋತ್ಸವ ಸ್ಮಾರಕ ಸಮಿತಿಯ ಪ್ರಥಮ ಸಭೆಯು ಇದೇ ಕಳೆದ ತಾ. ೧೫ರಂದು ಶಾಲಾ ಮಂದಿರದಲ್ಲಿ ಶ್ರೀ. ಬಿ. ಗೋಪಾಲಕೃಷ್ಣ ರಾವ್ ಅಡ್ವೋಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಕೂಡಿ ಶ್ರೀ. ಯಸ್. ವೆಂಕಟರಾವ್ ಅಡ್ವೋಕೇಟ್ ಮಂಗಳೂರು (ಅಧ್ಯಕ್ಷರು) ಶ್ರೀಗಳಾದ ಯಮ್. ಆರ್. ಪ್ರಾಂಜ ಮೂಲ್ಕಿ; ಕೆ. ಯಸ್. ಭಂಡಾರ್ಕರ್, ಮಂಗಳೂರು; ಯಸ್. ಬಿ. ಕೋಟ್ಯಂಕಾರ್ ಸುರತ್ಕಲ್ (ಉಪಾಧ್ಯಕ್ಷರು) ಶ್ರೀ. ಪಿ. ಶ್ರೀನಿವಾಸ ರಾವ್ ಅಡ್ವೋಕೇಟ್, ಮಂಗಳೂರು (ಟ್ರೆಜರರ್) ಶ್ರೀಗಳಾದ ಯುಟ್. ದಾಮೋದರ ರಾವ್, ಮತ್ತು ಯನ್. ವಾಸುದೇವ ರಾವ್ (ಜೊತೆ ಕಾರ್ಯದರ್ಶಿಯರು) ಇವರನ್ನು ಕಮಿಟಿಯಾಗಿ ಆರಿಸಲಾಯಿತು. ರಜತ ಮಹೋತ್ಸವದ ಸಲುವಾಗಿ ಜನತೆಯ ಸಹಾಯ-ಪ್ರೋತ್ಸಾಹಗಳು ಹಾರೈಸಲಾಗಿದೆ.

ಕುಂದಾಪುರ

ಐ. ಶಿವರಾಮಯ್ಯನರು ದಿವಂಗತರಾದರು

ಕುಂದಾಪುರ ಬೋರ್ಡು ಹ್ಯಾಸ್ಕೂಲಿನಲ್ಲಿ ಅನೇಕ ವರ್ಷಗಳ ವರೆಗೆ ಕನ್ನಡ ಪಂಡಿತರಾಗಿ ನಿವೃತ್ತಿ ಹೊಂದಿದ್ದ ಶ್ರೀ. ಐ. ಶಿವರಾಮಯ್ಯನರು ತಮ್ಮ ೬೩ನೇ ವಯಸ್ಸಿನಲ್ಲಿ ಕಳೆದ ತಾ. ೧೭ನೇ ಬೆಳಿಗ್ಗೆ ೭-೩೦ಕ್ಕೆ ತಮ್ಮ ಸ್ವಂತ ಗೃಹದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನವಾಗುತ್ತದೆ. ದಿವಂಗತರು ಬಹಳ ಹೆಸರುಗೊಂಡ ಪಂಡಿತರು. ಪದ್ಯ ಪುಸ್ತಕ, ಕತೆ, ವ್ಯಾಕರಣ ಮೊದಲಾಗಿ ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ. ತಮ್ಮ ವೃದ್ಧಾಪ್ಯದಲ್ಲಿಯೂ ಕೂಡ ಗ್ರಂಥ ರಚನೆಯಲ್ಲಿಯೇ ಕಾಲಕಳೆಯುತ್ತಿದ್ದರು. ಇಂತಹ ಕನ್ನಡ ನುಡಿಯ ಸೇವಕರ ನಿಧನದಿಂದ ನಮ್ಮ ಜಿಲ್ಲೆಗೆ ಮಾತ್ರವಲ್ಲದೆ ಕರ್ಣಾಟಕಕ್ಕೆ ಒಂದು ದೊಡ್ಡ ನಷ್ಟವೇ ಆಗಿದೆ. ದಿವಂಗತರ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ!

ಉಡುಪಿ

ಉಡುಪಿ ಕ್ಲಬ್

ಉಡುಪಿ ಕ್ಲಬ್ಬಿನ ಪ್ರಥಮ ವರ್ಧಂತಿ ಸಮಾರಂಭವು ತಾ. ೧೫ರಲ್ಲಿ ಕ್ಯಾಪ್ಟನ್. ಸಿ. ಕೆ. ಮೆನೋನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎನ್. ಕಣ್ಣನ್ ನಂಬಿಯಾರರು ವರದಿಯನ್ನೋದಿದರು. ಶ್ರೀಗಳಾದ ವಿಠಲ ಕಾಮತ್ ಮತ್ತು ಮಿಸೆಸ್ ಮನೋರಮಾ ಬ್ಯಾನರ್ಜಿಯವರು ಕ್ಲಬ್ಬಿನ ಶ್ರೆಯೋಭಿವೃದ್ಧಿಯನ್ನು ಹಾರೈಸಿ ಭಾಷಣವಿತ್ತರು.

ಮಂಗಳೂರು

ನೆರೆಹಾವಳಿಯಿಂದ ಸಂಕಷ್ಟಗೊಂಡವರಿಗೆ ಸಹಾಯ ಮಾಡಿದ

ಜಗನ್ನಿವಾಸ ರಾವ್ ಕೆಳಕರ—ರೂ. ೧೦; ಜನಾಬ್ ಹಾಜಿ ಗುಲ್ ಮುಹಮ್ಮದ್—ರೂ. ೧೧; ಮುಂಜೇಶ್ವರ ಸುಬ್ರಾಯ ಕಾಮತ—ರೂ. ೫; ವಾಲ್ಪೋರ್ಡ್ ಗನ್ನಿ ಹಾಸನ್ ಎಂಡ್ ಕೊ—ರೂ. ೨೧; ಗುರ್ಪುರ ಗುಣಿ ನರಸಿಂಹ ಪ್ರಭು ಎಂಡ್ ಬ್ರದರ್—ರೂ. ೧೧; ಮುಂಡಿ ವೆಂಕಟೇಶ ಕಮ್ತಿ—ರೂ. ೫; ಬಸ್ತಿ ರಾಮಯ್ಯ ಶ್ಯಾನುಭಾಗ—ಅಕ್ಕಿ ಮುಡಿ ೬ ಮತ್ತು ನಗದು ರೂ. ೩-೯-೦; ಬಾಸೆಲ್ ಮಿಶ್ಯನ್ ಬುಕ್ ಡಿಪೋ—ರೂ. ೨೦; ಪಿ. ನಾರಾಯಣ ಪೈ ಎಂಡ್ ಭಂಡಾರಿ ಎಂಡ್ ಸನ್ಸ್—ರೂ. ೨೧; ಹಿತಚಿಂತಕರೊಬ್ಬರು—ರೂ. ೧೦; ಹಿತಚಿಂತಕರೊಬ್ಬರು—ರೂ. ೫; ಕುಂಬಳೆ ಅನಂತನಾರಾಯಣ ಪ್ರಭು—ರೂ. ೧೧; ಶೇಟ್ ಬಿಕ್ಕು ಬಾಪು ಪ್ರಭು ದಾಸಪರೇಕ್—ರೂ. ೧೧; ಶೇಟ್ ರಂಭುಲಾಲ್ ನಾಥಾಲಾಲ್—ರೂ. ೧೧; ಹಾಜಿ ಸತಾರ್ ಹಾಜಿ ಮುಹಮ್ಮದ್—ರೂ. ೫-೮-೦; ಕೊಪ್ಪೀಕ ನರಸಿಂಹ ಪ್ರಭು—ರೂ. ೫;

ಕಾಂಗ್ರೆಸು ಕಮಿಟಿಯವರ ಮೂಲಕ ಬಂದ ವಿವರಗಳು.

ಫ್ಲಡ್ ರಿಲೀಫ್ ಕಮಿಟಿ

ಕಳೆದ ಮಂಗಳವಾರ ಗವರ್ನಮೆಂಟ್ ಕಾಲೇಜಿನಲ್ಲಿ ಫ್ಲಡ್ ರಿಲೀಫ್ ಕಮಿಟಿಯ ಸಭೆಯು ಬಿಶೋಪರ ಅಧ್ಯಕ್ಷತೆಯಲ್ಲಿ ಸೇರಿತು. ಸಭಾರಂಭದಲ್ಲಿ ಕಲೆಕ್ಟರರು ತಮಗೆ ದೊರಕಿದ ವರದಿಗಳಿಂದ ನೆರೆಯ ಹಾವಳಿಯ ವೃತ್ತಾಂತವನ್ನು ತಿಳಿಸಿದರು. ಆ ಮೇಲೆ ಶ್ರೀಗಳಾದ ಆನಂದ ರಾವ್, ವೈಕುಂಠ ಬಾಳಿಗ, ಎಂ. ಎಸ್. ಶ್ರೀಪಮೂಸಟ್ಟು ಇವರ ಭಾಷಣಗಳಾಗಿ ಸಹಾಯ ಹಣವೆತ್ತಲು ನಿಶ್ಚಯವಾಯಿತು. ಸಭೆಯಲ್ಲಿಯೇ ರೂ. ೫೦೦ರಷ್ಟು ಸಹಾಯ ನಿಧಿ ಯೇರ್ಪಟ್ಟಿತು.

ನೆರೆಹಾವಳಿಯಿಂದ ಪೀಡಿತರಾದವರಿಗೆ ರಕ್ಷಣೆ

ಮಹಾಜನ ಫ್ಲಡ್ ರಿಲೀಫ್ ಸಮಿತಿಯ ಸ್ಥಾಪನೆ ತಾ. ೨೫ನೇ ಸಾಯಂ. ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಒಂದು ಸಭೆಯು ಸಿ. ಪಿ. ಸಿ. ಗೆಸ್ಟ್‌ಹೌಸಿನಲ್ಲಿ, ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಯಂ. ಯಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರದವರ ಸಹಕಾರದಿಂದ ನಡೆಯುವ ಸಮಿತಿಯೊಡನೆ ಎಲ್ಲರೂ ಸಹಕರಿಸಿದರಾಗಬಹುದೆಂದು ಶ್ರೀ ನಾಗರಾಜಯ್ಯನವರು ಸೂಚಿಸಿದರು. ಹೆಚ್ಚಿನವರು ಕಾಂಗ್ರೆಸ್ ವತಿಯಿಂದಲೇ ಸಹಾಯ ಸಮಿತಿ (ರಿಲೀಫ್ ಸಮಿತಿ) ಯಾಗಬೇಕೆಂದು ಅಭಿಪ್ರಾಯಪಟ್ಟಿದ್ದರಿಂದ ಮಹಾಜನ ಫ್ಲಡ್ ರಿಲೀಫ್ ಕಮಿಟಿಯೆಂಬ ಸಂಸ್ಥೆಯು ಸ್ಥಾಪಿಸಲ್ಪಡಬೇಕೆಂದು ಸರ್ವಾನುಮತದ ನಿರ್ಧಾರವಾಯಿತು ಪ್ರಮುಖ ಸದಸ್ಯರಿಂದ ಕೂಡಿದ ಆಡಳಿತ ಸಮಿತಿಯೂ ಏರ್ಪಟ್ಟಿತು. ಜನರಿಗೆ ಆಹಾರವನ್ನೊದಗಿಸುವ ಏರ್ಪಾಡು ಕೂಡಲೆ ನಡೆಸಬೇಕೆಂದೂ ಆ ಬಗ್ಗೆ ಧನ ಸಂಗ್ರಹ ಮಾಡಬೇಕೆಂದೂ ನಿರ್ಧಾರವಾಯಿತು. ಸಭೆಯಲ್ಲಿ ಸುಮಾರು ೭೦೦ ರೂಗಳು ಸಂಗ್ರಹವಾಯಿತು. ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್ ಕೆನರಾ ಬ್ಯಾಂಕ್ ಲಿಮಿಟೆಡ್ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರು ಸಮಿತಿಯ ನಿಧಿಗೆ (ಕಮಿಶನ್ ಇಲ್ಲದೆ) ಹಣವನ್ನು ಸ್ವೀಕರಿಸಿ ಕೇಂದ್ರ ಸಮಿತಿಗೆ ಕಳುಹಿಸುವುದಕ್ಕೆ ಒಪ್ಪಿದ್ದಾರೆ. ನಿರಾಶ್ರಿತರಿಗೆ ಜನರು ಕಳುಹಿಸಬಹುದಾದ ವಸ್ತುಗಳನ್ನು ಧರ್ಮಾರ್ಥ

[೧೧ನೆಯ ಪುಟವನ್ನು ನೋಡಿ]

ಹಿಟ್ಲರ್ ಸ್ಟಾಲಿನರು ಹೊಡೆದಾಡಿಕೊಳ್ಳುತ್ತಿದ್ದಾರೆ!

ರಶ್ಯ ಜರ್ಮನಿಗಳೊಳಗೆ ಉಗ್ರ ಯುದ್ಧ!

ಮೊಸ್ಕೋದಿಂದ ಜಪಾನರು ಹಿಂತೆರಳುವರು

ಲಿಥುವೇನಿಯ ಸ್ವತಂತ್ರವಾಯಿತು

ರಶ್ಯ-ಜರ್ಮನಿ ಯುದ್ಧ!

ಉತ್ತರದಲ್ಲಿ ಫಿನ್ನರು, ದಕ್ಷಿಣದಲ್ಲಿ ರುಮೇನಿಯಾನರ ಬೆಂಬಲ್ಗಳಿಂದ, ಜರ್ಮನ್ ಸೈನ್ಯವು ರಶ್ಯದ ಮೇಲೆ ಧಾಳಿ ಮಾಡಲು ಪ್ರಾರಂಭಿಸಿದೆ.

ಹಿಟ್ಲರನ ಹೇಳಿಕೆ

"ಬೊಲ್ಶೆವಿಸಂತತ್ವ(ರಶ್ಯದ್ದು)ವು ನೇಶನಲ್ ಸೋಶಿಯಲಿಸಂತತ್ವ(ಜರ್ಮನಿಯದ್ದು)ಕ್ಕೆ ವಿರುದ್ಧವಿದೆ. ಅವುಗಳು ಕಡು ಹಗೆಗಳಂತಿರುವವು. ನೇಶನಲ್ ಸೋಶಿಯಲಿಸ್ಟ್ ಪಕ್ಷವು ತನ್ನ ಅಸ್ತಿತ್ವಕ್ಕಾಗಿ ಹೋರಾಡುವಾಗ, ಮೋಸ್ಕೋದ ಬೋಲ್ಶೆವಿಕ ರಾಷ್ಟ್ರವು ಹಿಂದಿನಿಂದಹೊಡೆಯಲು ಹವಣಿಸಿದೆ. ತನ್ನ ಪೂರ್ವ ಗಡಿಯಲ್ಲಿ ಈ ತೆರದ ಗಂಡಾಂತರ ಬಂದಿರುವಾಗ ಜರ್ಮನಿಯು ಸುಮ್ಮಗಿರಬಾರದು"—ಎಂದು ಹಿಟ್ಲರನು ಹೇಳಿದನು.

ರಶ್ಯವು ಬಾಲ್ಟಿಕ ರಾಷ್ಟ್ರವನ್ನು ಆಕ್ರಮಿಸಿದ್ದನ್ನು ಹಿಟ್ಲರನು ವಿರೋಧಿಸಿದನು. ರಶ್ಯದ ಈ ಆಕ್ರಮಣವು ಹಿಟ್ಲರನ ವಿರುದ್ಧವಾಗಿತ್ತೆಂದನು, ರಶ್ಯ ಮತ್ತೆ ಬ್ರಿಟನುಗಳೆರಡೂ ಜರ್ಮನಿಯ ವಿರುದ್ಧ ಹೋರಾಡಲು ಕೂಡಿರುವವೆಂದನು.

ರಶ್ಯದೊಡನೆ ಜರ್ಮನಿ ಕಲಹದ ಕಾರಣ

ಟೈಮ್ಸ್ ಸುದ್ದಿಗಾರನ ಹೇಳಿಕೆ

೧ ಯುಕ್ರೇನ್ ಸ್ವತಂತ್ರವಾಗಿರತಕ್ಕದ್ದು ೨ ಅಲ್ಲಿ ಜರ್ಮನರಿಗೆ ವ್ಯಾಪಾರ ಹಾಗೂ ಪೇಕ್ಟರಿ ಪ್ರಾರಂಭಿಸಲು ಅವಕಾಶಕೊಡಬೇಕು ೩. ಪಶ್ಚಿಮದಲ್ಲಿಯ ಕೆಂಪು ಸೈನ್ಯವನ್ನು ವಿಸರ್ಜಿಸಬೇಕು. ೪. ಬಾಲ್ಟಿಕಿನ ಸೋವಿಯಟ ನೌಕಾ ಕಾರ್ಖಾನೆಗಳ ಮೇಲೆ ಜರ್ಮನರ ನಿಯಂತ್ರಣವಿರಬೇಕು

ರಶ್ಯದೊಡನೆ ಜರ್ಮನಿಯು ಈ ಬೇಡಿಕೆಗಳನ್ನು ಬೇಡಿತೆಂದೂ, ಇವುಗಳನ್ನು ಪೂರೈಸಿದರೆ ರಶ್ಯವು ತನ್ನ ಸ್ವಾತಂತ್ರ್ಯವನ್ನೇ ಕಳಕೊಳ್ಳುವುದೆಂದೂ ಅದಕಾರಣ ಅವರೊಳಗೆ ಈ ಕಲಹವುಂಟಾಯಿತೆಂದೂ ಟೈಮ್ಸ್ ಪತ್ರಿಕೆಯ ರಾಜಕೀಯ ಸುದ್ದಿಗಾರನು ಅಭಿಪ್ರಾಯಪಡುತ್ತಾನೆ.

'ಒಪ್ಪಂದ ಮುರಿದು ರಶ್ಯವು ಜರ್ಮನಿಯ ದ್ರೋಹ ಬಗೆಯಿತು'

"ಬ್ರಿಟಿಷರಿಗೆ ರಶ್ಯವು ನೆರವಾಗುತಿತ್ತು"

ಜರ್ಮನರ ಆರೋಪಗಳು

ರಶ್ಯವು ಒಪ್ಪಂದವನ್ನು ಮುರಿಯಿತೆಂದೂ, ರಶ್ಯವು ಒಪ್ಪಂದದಂತೆ ನಡೆಯದೆ ಒಳಗಿಂದೊಳಗೆ ಕಾರಸ್ಥಾನಮಾಡಿತೆಂದೂ, ಜರ್ಮನಿಯು ಆಕ್ರಮಿಸಿದ ರಾಷ್ಟ್ರಗಳಲ್ಲಿ ಕ್ರಾಂತಿಯೆಬ್ಬಿಸುವ ಹಂಚಿಕೆಯೋಚಿಸಿತೆಂದೂ, ಬಾಲ್ಕನ್ನಲ್ಲಿ ತನ್ನ ಕೈವಾಡವನ್ನು ಸಾಗಿಸಲು ಯತ್ನಿಸಿತೆಂದೂ, ಬ್ರಿಟನಿನೊಡನೆ ಸಹಕರಿಸಿ ಜರ್ಮನಿಯನ್ನು ಮುರಿಯಬೇಕೆಂದು ಯತ್ನಿಸಿತೆಂದೂ, ಜರ್ಮನಿಯನ್ನು ಹೀಗೆ ಬೆನ್ನ ಹಿಂದೆ ನಿಂತು ಇರಿಯಲೆತ್ನಿಸಿತೆಂದೂ ಇದರಿಂದ ಯುದ್ಧ ಸಾರಬೇಕಾಯಿತೆಂದೂ ಜರ್ಮನ್ ವಿದೇಶ ಮಂತ್ರಿ ರಿಬನ್ಟ್ರಾಪನು ಬರೆದ ಪತ್ರದಲ್ಲಿದೆ

ಬಾಲ್ಟಿಕ್‌ನಿಂದ ಕಪ್ಪು ಸಮುದ್ರದ ವರೆಗೆ

ಜರ್ಮನರು ಧಾಳಿಮಾಡಿರುವರು. ಉಭಯ ಸೈನಿಕರಿಗೂ ಅತ್ಯುಗ್ರ ಕಾಳಗ ನಡೆದಿದೆ ಜರ್ಮನರು ರಶ್ಯನರ ಕೆಲವು ಟ್ಯಾಂಕುಗಳನ್ನು ವಶಪಡಿಸಿಕೊಂಡರು. ಒಂದು ತಿಂಗಳಲ್ಲಿ ಮಾಸ್ಕೋವನ್ನು ಜರ್ಮನರು ವಶಪಡಿಸುವರಂತೆ ೬೫ ಜರ್ಮನ್ ವಿಮಾನಗಳುರುಳಿದುವು. ಅನೇಕರ ಮರಣವಾಗಿರುತ್ತದೆ.

ರಶ್ಯಕ್ಕೆ ಎಲ್ಲಾ ತರದ ಸಹಾಯ ಕೊಡುವೆವು

ಚರ್ಚಿಲರು ಹೇಳುತ್ತಾರೆ

ರಶ್ಯ ಸರಕಾರ ಮತ್ತು ಜನಾಂಗಕ್ಕೆ ನಾವು ಎಲ್ಲಾ ಸಹಾಯಮಾಡುವೆವು. ಹಿಟ್ಲರ್ ಮತ್ತು ನಾಜಿ ಆಳುವಿಕೆಯನ್ನು ಕೊನೆಗೊಳಿಸುವುದೊಂದೇ ನಮ್ಮ ಉದ್ದೇಶವಾಗಿದೆ ಹಿಟ್ಲರನೊಡನೆ ಮೈತ್ರಿಯಿಂದಿರುವವರೆಲ್ಲರೂ ನಮ್ಮ ಶತ್ರುಗಳು ಹಿಟ್ಲರನು ರಶ್ಯದಲ್ಲಿ ಗೆದ್ದರೆ ರಶ್ಯದ ಸರ್ವಸ್ವ ನಾಶವಲ್ಲದೆ ೫೦ ಕೋಟಿ ಜನರಿರುವ ಚೈನದ ಹಾಗೂ ೩೫ ಕೋಟಿ ಜನರಿರುವ ಇಂಡಿಯಾದ ನಾಶವೂ ಆಗುವುದು

ನೆಪೋಲಿಯನನು ಸೋತದ್ದು ರಶ್ಯದಲ್ಲಿ

ನೆಪೋಲಿಯನನು ಸೋತದ್ದು ರಶ್ಯದಲ್ಲಿ, ಅವನಂತೆಯೇ ಹಿಟ್ಲರನ ಅವಸ್ಥೆಯೂ ಆಗುವುದು ಎಂದು ಮೊಲೊಟೋವನು ಆಕಾಶವಾಣಿಯಲ್ಲಿ ಹೇಳಿದನು.

ಕ್ರಿಪ್ಸರು ಮಾಸ್ಕೊಗೆ ತೆರಳುವರು

ಸ್ಟ್ಯಾಪರ್ಡ್ ಕ್ರಿಪ್ಸರು ಮಾಸ್ಕೊಗೆ ತೆರಳುವರೆಂದು ಲಂಡನಿನಲ್ಲಿ ವಾರ್ತೆ ಹಬ್ಬಿದೆ.

ಪ್ರಿನ್ಸ್‌ಪರ್ಡಿನಂಡನನ್ನು ಜರ್ಮನರು ಝಾರನನ್ನಾಗಿ ಮಾಡುವರಂತೆ

ರಶ್ಯದ ಸನಾತನಾಭಿಪ್ರಾಯದವರನ್ನು ಮನವೊಲಿಸುವ ಸಲುವಾಗಿ, ಜರ್ಮನರು ಪ್ರಿನ್ಸ್‌ಪರ್ಡಿನೆಂಡನನ್ನು ಮುಂದಿನ ರಶ್ಯದ ಝಾರನನ್ನಾಗಿ ಮಾಡುವ ಭರವಸೆಯಿತ್ತಿರುವರಂತೆ. ಪರ್ಡಿನಾಂಡನು ಗ್ರೇಂಡ್ ಡ್ಯೂಕ್ ಸಿರಿಲ್ಲೆ ಮೊಮ್ಮಗಳನ್ನು ವದುವೆಯಾದವನು.

ಮಾಸ್ಕೋದಿಂದ ಜಪಾನರು ಮರಳುವ ಆಜ್ಞೆ

ಟೋಕಿಯೋ ಸರಕಾರದಿಂದ

ಮಾಸ್ಕೋದಲ್ಲಿ ವಾಸಿಸುತ್ತಿರುವ ಯಾವತ್ತೂ ಜಪಾನರೂ ಮರಳಿಬರಬೇಕೆಂದು ಜಪಾನ್ ಸರಕಾರವು ಆಜ್ಞೆ ವಿಧಿಸಿದೆ.

ಜರ್ಮನಿಯನ್ನು ಅಮೇರಿಕ ಖಂಡಿಸುತ್ತದೆ

ಜರ್ಮನಿಯು ರಶ್ಯದ ಮೇಲೆ ಮಾಡಿದ ಧಾಳಿಯ ವಿಷಯದಲ್ಲಿ ಅಮೇರಿಕವು ಖಂಡಿಸಿದೆ. ರಶ್ಯದಿಂದ ಇದು ವರೆಗೆ ಸಹಾಯಕೊಡಬೇಕೆಂಬ ಬೇಡಿಕೆ ಬಂದಿಲ್ಲವಾದ ಕಾರಣ ಅಮೇರಿಕವು ರಶ್ಯಕ್ಕೆ ಸಹಾಯ ಕಳುಹಿಸುವ ವಿಚಾರ ಸ್ಪಷ್ಟವಾಗಿರುವುದಿಲ್ಲ.

ರಶ್ಯದ ಗಡಿಯಲ್ಲಿ ಜರ್ಮನ್ ಮುನ್ನಡೆ

ರಶ್ಯದ ಗಡಿಯಲ್ಲಿ ಜರ್ಮನರು ಮುಂದಡಿಯಿಡುತ್ತಾರೆ ಧಾಳಿಯು ಒಮ್ಮಿಂದಲೇ ಉಗ್ರವಾಗಿ ನಡೆದಿದೆ ಕೊಡೆ ವೈಮಾನಿಕರ ಧಾಳಿಯು ಸಂಭವವಿರುತ್ತದೆ.

ರಶ್ಯ-ಜರ್ಮನ್ ಕಲಹದಲ್ಲಿ ಟರ್ಕಿ ತಟಸ್ಥವಾಗಿರುವುದು

ಎಂದು ಅಂಕಾರಾದಿಂದ ಸರಕಾರೀ ಪ್ರಕಟಣೆಯೊಂದು ಹೊರಟಿರುವುದು

ಪೋಲೆಂಡಿನಲ್ಲಿ

ರಶ್ಯದ ವಶವಿರುವ ಪೋಲೆಂಡಿನಲ್ಲಿ ಜರ್ಮನರು ಸ್ವಲ್ಪ ವಿಜಯಿಗಳಾಗಿರುವರು.

೫೦೦೦ ಮಂದಿ ಜರ್ಮನರ ಬಂಧನ

ಜರ್ಮನ್ ಧಾಳಿಯನ್ನು ರಶ್ಯನರು ಯಶಸ್ವಿಯಾಗಿ ಇದಿರಿಸಿ ೫೦೦೦ ಜರ್ಮನರನ್ನು ಬಂಧಿಸಿರುವರೆಂದೂ ೫೧ ವಿಮಾನಗಳನ್ನು ಕೆಡಲಿರುವರೆಂದೂ ತಿಳಿದಿದೆ

ರಶ್ಯದ ಮೊಲಟೋವನ ಹೇಳಿಕೆ

ರಶ್ಯವು ಸಂಪೂರ್ಣವಿಜಯಿಯಾಗುವ ಆತ್ಮ ವಿಶ್ವಾಸವನ್ನು ಮೊಲೊಟೋವನು ಹೇಳಿದನು. ರಕ್ತ ಪಿಪಾಸುಗಳಾದ ಜರ್ಮನರನ್ನು ನುಚ್ಚುನುರಿ ಮಾಡುವೆವೆಂದನು.

ರಶ್ಯಕ್ಕೆ ರುಮೇನಿಯದ "ಅಲ್ಟಿಮೇಟಂ"

ಬೆಸ್ಸರೇಬಿಯ ಪ್ರಾಂತವನ್ನು ಹಿಂದಕ್ಕೆ ಕೊಟ್ಟು ಬಿಡಬೇಕೆಂದು ರುಮೇನಿಯವು ರಶ್ಯಕ್ಕೆ ಅಲ್ಟಿಮೇಟಂ (ಕೊನೆಯಮಾತು) ಕಳುಹಿಸಿತು. ಇದಕ್ಕೆ ಜರ್ಮನ್ ಬೆಂಬಲವಿತ್ತೆಂದು ತಿಳಿದಿದೆ

ಲಿಥುವೇನಿಯ ಸ್ವತಂತ್ರವಾಯಿತು

ಕೌನಸ್ಸದಲ್ಲಿ ಸ್ವತಂತ್ರ ಲಿಥುವೇನಿಯಾ ಸರಕಾರವು ಸ್ಥಾಪಿಸಲ್ಪಟ್ಟಿದ್ದು ಈಗಾಗಲೇ ಲಿಥುವೇನಿಯವು ರಶ್ಯದಿಂದ ಬೇರ್ಪಾಗಿ ಸ್ವತಂತ್ರ ಸರಕಾರವನ್ನು ಸ್ಥಾಪಿಸಿತು.

ಇಟಲಿ ಜರ್ಮನಿ ಮೈತ್ರ್ಯ

—ವು ಮೊದಲಿನಂತೆಯೇ ಇದೆ. ರಶ್ಯದ ವಿರುದ್ಧ ಹೋರಾಡಲು ಇಟಲಿಯು ಜರ್ಮನಿಗೆ ನೆರವಾಗುವುದೆಂದು ತಿಳಿದಿದೆ.

ಟರ್ಕಿ ಜರ್ಮನಿ ಒಪ್ಪಂದ

ಟರ್ಕಿ ಜರ್ಮನಿಗಳೊಳಗೆ ಗೆಳೆತನದ ಒಪ್ಪಂದವಾಯಿತು ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ದಾಳಿ ಮಾಡುವುದಿಲ್ಲವೆಂದು ಕರಾರು ಮಾಡಲಾಯಿತು ಬ್ರಿಟನ್ ಟರ್ಕಿ ಒಪ್ಪಂದಕ್ಕೆ ಇದರಿಂದ ಚ್ಯುತಿಯಿಲ್ಲವೆಂದು ಹೇಳಲಾಗಿದೆ

ಸ್ವೀಡನಿನಲ್ಲಿ ಗಡಿಬಿಡಿ

ರಶ್ಯಾ ಜರ್ಮನ್ ಯುದ್ಧ ಕೇಳಿದೊಡನೆ ಸ್ವೀಡನಿನಲ್ಲಿ ವಿಶೇಷ ಗಡಿಬಿಡಿಯುಂಟಾಗಿ ಎಲ್ಲಾ ತರದ ಸೈನ್ಯ ನೌಕಾ ಸಿದ್ಧತೆಗಳು ನಡೆಯತೊಡಗಿವೆ

ಸಿರಿಯಾ ಯುದ್ಧ

ಸಿರಿಯಾದಲ್ಲಿ ಎಲ್ಲಾ ಕಡೆಯಲ್ಲಿಯೂ ಯುದ್ಧ ನಡೆದಿದೆ. ಕರಾವಳಿಯಲ್ಲಿ ಬ್ರಿಟಿಷರು ಮುಂದೊತ್ತಿರುವರು. ಡೆಮಸ್ಕಸ್‌ನಲ್ಲಿ ವಿಚಿ ಸೈನ್ಯವನ್ನು ಹಿಂದಟ್ಟಿರುವರು.

ಹೆಸ್ಸನ ಪ್ರಕರಣ

ಕಾಮನ್ಸಿನಲ್ಲಿ ಚರ್ಚೆ

ಕಾಮನ್ಸ್ ಸಭೆಯಲ್ಲಿ ಹೆಸ್ ಪ್ರಕರಣದ ಕುರಿತು ಪ್ರಶ್ನೋತ್ತರವಾಯಿತು. ಹೆಸ್ಸ್ ಪ್ರಕರಣದಲ್ಲಿ ಸರಕಾರವು ಸದ್ಯಕ್ಕೇನೂ ಹೇಳುವುದಿಲ್ಲವೆಂದೂ, ಹೆಸ್ಸ ಸದ್ಯಕ್ಕೆ ಯುದ್ಧಕೈದಿಯಾಗಿದ್ದು ಅದರಂತೆ ನಡೆಸಲ್ಪಡುವನೆಂದೂ, ಹೆಸ್ಸ ವಿಷಯದಲ್ಲಿ ಗೂಢವಾದುದೂ, ವಿಸ್ಮಯವಾದುದೂ ಏನೂ ಇಲ್ಲವೆಂದೂ ಸರಕಾರ ಹೇಳಿದೆ.

ರುಮೇನಿಯಾದವರು ಬಲ್‌ಗ್ರಾಡ್ ಸ್ವಾಧೀನ ಪಡೆದರು

ರುಮೇನಿಯಾದವರು ಬೆಸರಬ್ಬಿಯಾ ಗಡಿಯಲ್ಲಿರುವ ಬಲ್‌ಗ್ರಾಡನ್ನು ಸ್ವಾಧೀನ ಪಡಿಸಿಕೊಂಡರೆಂದು ತಿಳಿದುಬಂದಿದೆ.

ರಶ್ಯದ ವಿರುದ್ಧ ಇಟಲಿ ಯುದ್ಧ ಸಾರಿತು

ರಶ್ಯವು ಇಟಲಿಯ ವೈರಿಯೆಂದು ಇಟಲಿ ಸರಕಾರವು ಪ್ರಕಟಿಸಿದೆ. ಇದನ್ನು ಸೋವಿಯಟ್ ಸರಕಾರಕ್ಕೆ ತಿಳಿಸಲಾಗಿದೆ. ಇಟಲಿಯು ಜರ್ಮನಿಗೆ ಬೆಂಬಲ ಕೊಟ್ಟು ರಶ್ಯದೊಡನೆ ಯುದ್ಧಮಾಡುವುದು.

ಭಾರತ ಮಂತ್ರಿಗಳು ಬದಲಾಗುವರೆ?

ಮುಂದಿನ ಭಾರತ ಮಂತ್ರಿಗಳು ಯಾರಾಗುವರು?

ಕ್ರಿಪ್ಸರೆ?

ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಬದಲಾವಣೆಯಾಗುವದೆಂದೂ ಡಫ್ ಕೂಪರರ ಬದಲು ಅಮೇರಿಯವರು ಸುದ್ದಿ ಖಾತೆಯ ಮಂತ್ರಿಗಳಾಗಿ ನೇಮಕ ಹೊಂದಬಹುದೆಂದೂ ಲಂಡನಿನಲ್ಲಿ ರಾಜಕಾರಣಿಗಳ ತರ್ಕವಿದೆ.

ಮಾಸ್ಕೋದಲ್ಲಿ ಬ್ರಿಟಿಷ್ ರಾಯಭಾರಿಯಾಗಿದ್ದು ಈಗ ಲಂಡನಿಗೆ ಬಂದಿರುವ ಸ್ಟಾಫರ್ಡ ಕ್ರಿಪ್ಸರು ರಶ್ಯಕ್ಕೆ ಮರಳುವದಿಲ್ಲವಂತೆ. ಅಮೇರಿಯವರ ಬದಲು ಅವರೇ ಭಾರತ ಮಂತ್ರಿಯ ಹುದ್ದೆಯನ್ನು ಅಲಂಕರಿಸಬಹುವೆಂದು ನಿರೀಕ್ಷಿಸಲಾಗಿದೆ.

ವೆಜ್‍ವುಡ್ ಬೆನ್ನರೆ?

ಭಾರತಮಂತ್ರಿ ಅಮೇರಿಯವರ ಬದಲು ಹಿಂದೆ ಭಾರತಮಂತ್ರಿಯಾಗಿದ್ದ ವೆಜ್‍ವುಡ್‍ಬೆನ್ (ಕೂಲಿಕಾರ) ಪಕ್ಷದವರನ್ನು ತಿರುಗೊಮ್ಮೆ ಭಾರತ ಮಂತ್ರಿಯಾಗಿ ನೇಮಿಸುವದು ಸಂಭವನೀಯವಿದೆಯೆಂದೂ ತರ್ಕಿಸಲಾಗಿದೆ.

ಇತರ ಸೂಚನೆಗಳು

ಪಂಜಾಬದ ಹಿಂದಿನ ಗವರ್ನರರಾದ ಸರ್ ಮೆನಾರ್ಡರವರು ಭಾರತ ಮಂತ್ರಿಸ್ಥಳಕ್ಕೆ ಸರ್ ಸಿಕಂದರ ಹಯಾತಖಾನ ಬಿಕಾನೇರ ಮಹಾರಾಜ ಮತ್ತು ಸರ್ ತೇಜಬಹದ್ದೂರ ಸಪ್ರೂರವರಲ್ಲಿ ಯಾರನ್ನಾದರೂ ನೇಮಿಸಬೇಕೆಂದು ಸೂಚಿಸಿರುವರು.

ನ್ಯಾಶನಲ್ ಪೀಸ್ ಕೌನ್ಸಿಲಿನ ವಿನಂತಿ

"ಸ್ವಾತಂತ್ರ್ಯ ಕೊಡಬೇಕು

ಲಂಡನದ ನ್ಯಾಶನಲ್ ಪೀಸ್ ಕೌನ್ಸಿಲಿನವರು ಒಂದು ಪ್ರಕಟಣೆ ಹೊರಡಿಸಿದ್ದು ಅದರಲ್ಲಿ ಹಿಂದುಸ್ತಾನದ ಸಂಬಂಧವಾಗಿ ಈ ಕೆಳಗಿನಂತೆ ಉಲ್ಲೇಖಿಸಿರುವರು.

'ಹಿಂದುಸ್ತಾನದ ಪ್ರಶ್ನೆಯು ಮಹತ್ವದ್ದಾಗಿದೆ. ಯುದ್ಧ ನಡೆದಿರುವದೆಂಬ ಕಾರಣದಿಂದ ಅದರ ಘಟನಾತ್ಮಕ ಸಮಸ್ಯೆ ಪೂರ್ಣ ಬಗೆ ಹರಿಸಲ್ಪಡದಿದ್ದರೆ ನಾವು ತಾತ್ಕಾಲಿಕ ಸರಕಾರ ರಚಿಸಲು ಹಿಂದುಸ್ತಾನದ ಮುಖಂಡರೊಡನೆ ಕೂಡಲೇ ಚರ್ಚೆ ನಡಸಿ ನಮ್ಮ ಕಳಕಳಿ ವ್ಯಕ್ತಮಾಡಬೇಕು. ಮತ್ತು ಯುದ್ಧ ಮುಗಿದ ಕೂಡಲೇ ಸ್ವಾತಂತ್ರ್ಯ ದಯಪಾಲಿಸಲ್ಪಡುವದೆಂದು ಖಂಡಿತವಾದ ಆಶ್ವಾಸನ ಕೊಡಬೇಕು.'

ಹಿಂದಿನ ಗವರ್ನರರ ಸೂಚನೆ

"ಹಿಂದಿಯರಿಗೆ ಒಪ್ಪಿಸಬೇಕು"

ಪಂಜಾಬದ ಹಿಂದಿನ ಗವರ್ನರರಾದ ಸರ್ ಜಾನ್ ಮೆನಾರ್ಡರು 'ನ್ಯೂಸ್ಟೇಟ್ಸ್‌ಮನ್' ಎಂಬ ಪತ್ರಿಕೆಯಲ್ಲಿ ಒಂದು ಲೇಖ ಬರೆದು ಅದರಲ್ಲಿ ಈ ರೀತಿ ಸೂಚನೆಗಳನ್ನು ಮಾಡಿದಾರೆ.

ಸತ್ಯಾಗ್ರಹ ಸಾಕಷ್ಟು ಪರಿಣಾಮಕಾರಿಯಾಗಿದೆ

ಇಂಗ್ಲೆಂಡಿನ ಹೋಟೆಲಿನಲ್ಲಿ ಭಾರತೀಯನಿಗೆ ಅಪಮಾನ

ಬೊಂಬಯಿ ದಂಗೆ ನಿಂತಿಲ್ಲ

'ಕೇಂದ್ರ ಸರಕಾರದ ಸದ್ಯದ ಕಾರ್ಯಕಾರಿ ಮಂಡಲವನ್ನು ಸಂಪೂರ್ಣವಾಗಿ ಹಿಂದೀಯರಿಗೇ ಒಪ್ಪಿಸಬೇಕು.

ಹಿಂದುಸ್ಥಾನದ ಸಂರಕ್ಷಣೆಯ ಬಗೆ ಈಗಿರುವ ಮುಖ್ಯ ಸೇನಾಪತಿಯಲ್ಲದೆ ಒಬ್ಬ ಹಿಂದೀಯನನ್ನು ನೇಮಿಸಬೇಕು.

ಇದೇ ಸಮಯದಲ್ಲಿ ಹಬಸಿ ಚಕ್ರವರ್ತಿಯ ನೇತೃತ್ವದಲ್ಲಿ ಹಿಂದುಸ್ಥಾನಕ್ಕೆ ಒಂದು ಸ್ನೇಹಮಂಡಳವನ್ನು ಕಳಿಸಿ ಯುದ್ಧಕ್ಕೆ ಸಹಾಯಮಾಡುವಂತೆ ಹಿಂದೀಯರಿಗೆ ವಿನಂತಿ ಮಾಡಿಕೊಳ್ಳುವಂತೆ ಮಾರ್ಶಲ್ ಚಿಯಾಂಗ್ ಕೈಶೇಕರಿಗೂ ಕೇಳಿಕೊಳ್ಳಬೇಕು.'

ಸದ್ಯದ ಸತ್ಯಾಗ್ರಹ ಸಾಕಷ್ಟು ಪರಿಣಾಮಕಾರಿಯಿದೆ

ರಾಜೇಂದ್ರ ಪ್ರಸಾದರ ಹೇಳಿಕೆ

ಕಟಕದ ಸ್ವರಾಜ್ಯ ಆಶ್ರಮದಲ್ಲಿ ನಡೆದ ಚರ್ಚೆಯಲ್ಲಿ ರಾಜೇಂದ್ರ ಪ್ರಸಾದರು ಮಾತನಾಡುತ್ತಾ ಸದ್ಯದ ಸತ್ಯಾಗ್ರಹ ಆಂದೋಲನವು ಸಾಕಷ್ಟು ಪರಿಣಾಮಕಾರಿಯಾಗಿದೆಯೆಂದು ಹೇಳಿದರು.

ಆಚಾರ್ಯ ಕೃಪಾಲನಿಯವರೂ ಇದ್ದರು. ಸತ್ಯಾಗ್ರಹವನ್ನು ಸಾಮೂಹಿಕವಾಗಿ ಮಾಡಬೇಕೆಂಬ ಸೂಚನೆಗೆ ಉತ್ತರಕೊಡುತ್ತಾ ಕೃಪಾಲನಿಯವರು, ಜನ ಸಾಮಾನ್ಯರಿಂದ ಯಾರಾದರೂ ಮುಂದೆ ಬಂದರೆ ಅವರಿಗೆ ಸಂಪೂರ್ಣ ಸ್ವಾಗತವಿದೆ. ಸೈನ್ಯದಲ್ಲಿ ಹೇಗೆ ನಿಯಮ ಪಾಲಿಸಬೇಕೋ ಹಾಗೆಯೇ ಇದರಲ್ಲಿಯೂ ಕೆಲವು ನಿಯಮಗಳನ್ನು ಪಾಲಿಸಬೇಕು. ಅಂತವರಲ್ಲಿ ಯಾರಾದರೂ ಸತ್ಯಾಗ್ರಹ ಹೂಡಬಹುದೆಂದರು.

ಜಾತೀಯ ಐಕ್ಯದಲ್ಲಿ ಉಪಯುಕ್ತನಾದವನು ಸತ್ಯಾಗ್ರಹ ಮಾಡಬೇಕಾಗಿಲ್ಲ

ಇಫ್ತಿಕರುದ್ದೀನರಿಗೆ ಮಹಾತ್ಮರ ಆದೇಶ

ಪಂಜಾಬ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಇಫ್ತಿಕರುದ್ದೀನರಿಗೆ ಮಹಾತ್ಮರು ತಮ್ಮ ಪ್ರಾಂತದಲ್ಲಿ ಜಾತೀಯ ಐಕ್ಯದ ವಿಷಯ ಪ್ರಯತ್ನ ಮಾಡುತ್ತಿರಬೇಕೆಂದೂ, ಆದದ್ದರಿಂದ ಅವರು ಈಗ ಸತ್ಯಾಗ್ರಹ ಮಾಡಬೇಕಾಗಿಲ್ಲವೆಂದೂ, ಪಂಜಾಬ್ ಪ್ರಾಂತದಲ್ಲಿ ಜಾತೀಯ ಐಕ್ಯ ಯತ್ನಕ್ಕೆ ಉಪಯುಕ್ತನಾದವನು ಸತ್ಯಾಗ್ರಹಮಾಡಲು ಸಮ್ಮತಿ ಪಡೆದಿದ್ದರೂ ಅದನ್ನು ಹಿಂತೆಗೆದುಕೊಳ್ಳುವಂತೆ ಇಫ್ತಿಕರುದ್ದೀನರಿಗೆ ಮಹಾತ್ಮರು ಅಧಿಕಾರವಿತ್ತಿರುವರೆಂದೂ ತಿಳಿದಿದೆ.

ಮುಂಬಯಿ ದಂಗೆ

ಮುಂಬಯಿಯಲಿ ಮತ್ತೂ ದಂಗೆ ಎದ್ದಿದೆ. ಅನೇಕ ಅನಾಹುತಗಳು ನಡೆದಿವೆ. ಪೋಲೀಸರು ಅನೇಕರನ್ನು ಸೆರೆ ಹಿಡಿದಿರುವರು.

ಇಂಗ್ಲೆಂಡಿನ ಹೋಟೇಲಿನಲ್ಲಿ ಭಾರತೀಯರಿಗೆ ಅಪಮಾನ

ಸರ್ ಹರಿಸಿಂಗ ಗೌರರೆಂಬವರಿಗೆ ಇಂಗ್ಲೆಂಡಿನ ಹೋಟೆಲೊಂದರಲ್ಲಿ ಭಾರತೀಯರೆಂಬ ನಿಮಿತ್ತ ಅಪಮಾನವಾಡಿದ ನಿಮಿತ್ತ ಕಾಮನ್ಸ್ ಸಭೆಯಲ್ಲಿ ಪ್ರಶ್ನೆಯಾಗಿದೆ. ಹೋಮ್ ಸೆಕ್ರೆಟರಿಗಳು ಆ ಬಗ್ಗೆ ಪಶ್ಚಾತ್ತಾಪ ಸೂಚಿಸಿರುವರು. ಹರಿಸಿಂಗ್ ಗೌರರ ಮಿತ್ರರನೇಕರು ಈ ವಿಷಯ ಬಹಳ ಸಂತಾಪಗೊಂಡಿರುವರು.

ಆಲಿಪುರಂ ಜೈಲಿನಲ್ಲಿ ಸತ್ಯಾಗ್ರಹಿಗಳಿಗೆ ಅತ್ಯಾಚಾರಗಳು

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಬಳ್ಳಾರಿ ಜಿಲ್ಲೆಯ ಆಲಿಪುರಂ ಜೈಲಿನಲ್ಲಿ ನಡೆದ ಘಟನೆಗಳನ್ನು ಪ್ರಕಟಿಸಿರುತ್ತಾರೆ. ಆ ಜೈಲಿನಲ್ಲಿ ತಾ. ೧೩–೪–೪೧ಕ್ಕೆ ಜೈಲಿನವರು ಸತ್ಯಾಗ್ರಹಿಗಳ ಮೇಲೆ ನಡಿಸಿದ ಅತ್ಯಾಚಾರಗಳನ್ನು ಬಿಡುಗಡೆ ಹೊಂದಿದ ಶ್ರೀ. ಕಾಶಿರೆಡ್ಡಿಯವರು ವರ್ಣಿಸಿದ್ದಾರೆ. ಏಪ್ರಿಲ್ ತಾ. ೧೩ಕ್ಕೆ ಸುಪರಿಂಟೆಂಡೆಂಟರೂ ಜೈಲರೂ ಡೆ. ಸುಪರಿಂಟೆಂಡೆಂಟರೂ ವಾರ್ಡರರೂ ಹೋಗಿ ಸುಮಾರು ೭೫ ಜನ ಕೈದಿಗಳಿಗೆ ಅವರ ಉಡಿಗೆ–ತೊಡಿಗೆ, ವಸ್ತ್ರ–ಹೊದಿಕೆಗಳನ್ನು ಹೊರಗೆ ಒಗೆಯ ಹೇಳಿದರು. ಆ ಮೇಲೆ ಸಾಧಾರಣ ೨–೩ ಹಾಡು ನೀರು ತುಂಬುವ ಹಂಡೆಗಳನ್ನು ಕೊಟ್ಟು ೧ ಫರ್ಲಾಂಗು ದೂರವಿದ್ದ ಕೆರೆಯೊಳಗಿಂದ ನೀರು ತರ ಹೇಳಿದರು. ನೀರು ತುಂಬಿದ ಹಂಡೆ ತರಲು ಆಗದ ಕೈದಿಗಳಿಗೆ ದೊಣ್ಣೆಯಿಂದ ನೂಕಿದರು. ಶ್ರೀ. ಶಂಕರ ನಂಬಿಯಾರ, ಶ್ರೀ. ಗಜಮೋಹನರಾವ ಇವರು ಹಂಡೆಸಹಿತ ಬಿದ್ದರು. ಅವರಿಗೆ ವಾರ್ಡರರು ದೊಣ್ಣೆಯಿಂದ ಹೊಡೆದರು. ಆ ಮೇಲೆ, ಈ ಕೈದಿಗಳಿಗೆ ಕೋಣೆಗಳಲ್ಲಿ ಹಾಕಿ ೩ ದಿನಗಳ ತನಕ ಆಹಾರ ಕೊಡಲಿಲ್ಲ. ಅನೇ ದಿನ ಸರಕಾರಿ ಡಾಕ್ಟರರು ಶಿಫಾರಸು ಮಾಡಿದಷ್ಟು ಆಹಾರ ಅವರಿಗೆ ಕೋಣೆಯೊಳಗೆ ಒಯ್ದು ಕೊಡಲಾಯಿತು. ಇದಲ್ಲದೆ ಕಸಗೂಡಿಸುತ್ತಿದ್ದ ಕೈದಿಗಳಿಗೆ ಜೈಲರರು ಒಂದಿಲ್ಲೊಂದು ನೆವಮಾಡಿ ಒದ್ದಿದ್ದಾರೆ. ಅಶ್ಲೀಲ ಬೈಗಳನ್ನು ಬಯ್ದಿದ್ದಾರೆ. ಶ್ರೀ. ನಂಬಿಯಾರರವರು ಈ ಘಟನೆಯ ಬಗ್ಗೆ ಸರಕಾರಕ್ಕೆ ಅರಿಕೆಮಾಡಿಕೊಳ್ಳಲು ಲೇಖನ ಸಾಹಿತ್ಯ ಬೇಡಿದರು. ಅವರು ... [illegible]

...ರಿಂದ ಶ್ರೀ. ನಂಬಿಯಾರರವರೂ ಇನ್ನೊಬ್ಬ ಸತ್ಯಾಗ್ರಹಿಗಳಾದ ಶ್ರೀ. ಕೃಷ್ಣರಾಯರವರೂ ಉಪವಾಸ ಮಾಡಿದರು. ಈ ಎಲ್ಲ ಸಂಗತಿಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆದಾಗ್ಯೂ ಮದ್ರಾಸ ಸರಕಾರವು ಈ ಸಂಗತಿಗಳನ್ನು ನಿರಾಕರಿಸಿದ್ದು ಪರಮಾಶ್ಚರ್ಯದ ಸಂಗತಿ!''

(ಕನ್ನಡ ವೃತ್ತ)

ಕರ್ನಾಟಕದಲ್ಲಿ ಸತ್ಯಾಗ್ರಹ

೧೦೬೧ ಜನರಿಗೆ ಶಿಕ್ಷೆ

೩೨೧೫೫ ರೂಪಾಯಿ ದಂಡ

ಸತ್ಯಾಗ್ರಹ ಸುರುವಾದಂದಿನಿಂದ ಮೇ ಕೊನೆಯ ವರೆಗೆ ೧೨೮೦ ಜನರು ಸತ್ಯಾಗ್ರಹಮಾಡಿದ್ದು ಅವರಲ್ಲಿ ೧೦೬೧ ಜನರು ಶಿಕ್ಷೆ ವಿಧಿಸಲ್ಪಟ್ಟಿರುವರು. ೨೧೯ ಜನರು ಸೆರೆಹಿಡಿಯಲ್ಪಟ್ಟಿರುವುದಿಲ್ಲ. ಮೇ ಕೊನೆಯ ವರೆಗೆ ಒಟ್ಟು ೩೨೧೫೫ ರೂಪಾಯಿ ದಂಡ ವಿಧಿಸಲ್ಪಟ್ಟಿದ್ದು ಬಳ್ಳಾರಿ ಹಾಗು ಮಂಗಳೂರು ಜಿಲ್ಲೆಯಲ್ಲಿ ಅನುಕ್ರಮವಾಗಿ ೭೦೦೦ ರೂ. ಹಾಗು ೩೬೫೦ ರೂ. ದಂಡ ವಸೂಲು ಮಾಡಲ್ಪಟ್ಟಿದೆ.

ಆ ಆ ಜಿಲ್ಲೆಗಳಿಂದ ಶಿಕ್ಷೆಗೆ ಗುರಿಯಾದವರ ಹಾಗು ದಂಡದ ಅಂಕಿಯು ಕೆಳಗಿನಂತಿರುವುದು.

ಶಿಕ್ಷೆಗೆ ಗುರಿಯಾದವರು:— ಬೆಳಗಾವಿ ೩೮೪, ಧಾರವಾಡ ೨೬೭, ವಿಜಾಪುರ ೨೦೯, ಮಂಗಳೂರು ೯೩, ಕಾರವಾರ ೪೧, ಬಳ್ಳಾರಿ ೩೩, ಕೊಡಗು ೧೫, ಬೆಂಗಳೂರು ದಂಡು ೧೫, ಸಂಸ್ಥಾನ ೪.

ಸೆರೆಹಿಡಿಯಲ್ಪಡದವರು:— ಮಂಗಳೂರು ೧೫, ಬಳ್ಳಾರಿ ೩, ಕೊಡಗು ೧,

ದಂಡ:— ಬೆಳಗಾವಿ ೭೨೫೦, ಧಾರವಾಡ ೬೬೬೫, ವಿಜಾಪುರ ೬೨೫೫, ಮಂಗಳೂರು ೩೧೫೦, ಕಾರವಾರ ೪೦೦, ಬಳ್ಳಾರಿ ೮೦೩೫, ಕೊಡಗು ೪೫೦, ಸಂಸ್ಥಾನ ೮೦.

ಸತ್ಯಾಗ್ರಹಿಯ ಲಕ್ಷಣಗಳು

ಕೃಪಾಲನಿ ಹೇಳುತ್ತಾರೆ

ಬೆಜವಾಡದಲ್ಲಿ ಸೇರಿದ ಕಾಂಗ್ರೆಸ್ ಸಭೆಯಲ್ಲಿ ಮಾತನಾಡುತ್ತ ಆಚಾರ್ಯ ಕೃಪಾಲನಿಯವರು ಒಬ್ಬ ಸತ್ಯಾಗ್ರಹಿಯಾದವರು ವೀರ ಸೈನಿಕನಂತೆ ಮರಣದ ತನಕವು ಮುಂದುವರಿಯಲು ಸಿದ್ಧನಿರಬೇಕು. ಆತನು ಬಂಧನಗಳನ್ನು, ಶಿಕ್ಷೆಗಳನ್ನು ಬಿಡುವಿಲ್ಲದೆ ಪಡೆಯಬೇಕು, ಶಿಕ್ಷೆ ಹೊಂದಲಾರದಾದರೆ ಬಿಡದೆ ರಚನಾತ್ಮಕ ಕಾರ್ಯದಲ್ಲಿ ಮಗ್ನನಾಗುತ್ತಾ ಇರಬೇಕು. ಆತನು ಬೇರೆ ವಿಷಯಗಳನ್ನು ಯೋಚಿಸಲೇ ಕೂಡದು. ಸ್ವಾತಂತ್ರ್ಯ ಸಿಗುವ ವರೆಗೆ ವಿಶ್ರಾಂತಿಪಡೆಯಕೂಡದು. ಮಹಾತ್ಮರು ಸಂಖ್ಯೆಗಿಂತ ಗುಣ (quality)ದ ಕಡೆಗೆ ಗಮನ ಕೊಡುತ್ತಾರೆ. ನಾವು ಹೋರಾಡಿ ಸ್ವಾತಂತ್ರ್ಯ ಪಡೆಯಬೇಕಾಗಿದೆ. ಸ್ಥಳೀಕ ಸಂಸ್ಥೆಗಳಲ್ಲಿ ಬಹುಸಂಖ್ಯಾಕ ಕಾಂಗ್ರೆಸ್ ಸದಸ್ಯರಿದ್ದರೆ, ಅವರು ರಚನಾತ್ಮಕ

[೬ಯ ಪುಟದಿಂದ ಮುಂದುವರಿದುದು]

ವಾಗಿ ರಿಲೀಫ್ ಸಮಿತಿಗೆ ಮುಟ್ಟಿಸುವುದಾಗಿ ಮೋಟರ್ ಕಂಪೆನಿಯವರು ವಾಗ್ದಾನ ಮಾಡಿದ್ದಾರೆ.]

ನೆರೆಹಾವಳಿಯಿಂದ ಕಷ್ಟನಷ್ಟಗಳಿಗೊಳಗಾದವರಿಗೆ ಸಹಾಯ

ನೆರೆಹಾವಳಿಯಿಂದ ಕಷ್ಟಕ್ಕೊಳಗಾದವರ ಸಹಾಯ ಜನಾಬ್ ಯಂ. ಕುಂಞಾಮ್ಮು ಸಾಹೇಬರು, ಜನಾಬ್ ಎ. ಮೂಸಬ್ಬ ಸಾಹೇಬರು, ಜನಾಬ್ ಹಾಜೀ ಗುಲ್ಮಹಮ್ಮದ್ ಸಾಹೇಬರೂ, ಜನಾಬ್ ವಲ್ಲಿ ಮುಹಮ್ಮದ್ ಸಾಹೇಬರೂ ಕೂಡ ಮುಸ್ಲಿಂಮಹನೀಯರಿಂದಲೂ ಮುಸ್ಲಿಂ ಇತರ ಮಹನೀಯರಿಂದಲೂ, ಸುಮಾರು ನೂರು ರೂಪಾಯಿಗಳ ವಸ್ತ್ರಗಳನ್ನೂ, ನಗದು ಇನ್ನೂರು ರೂಪಾಯಿಗಳನ್ನು ಸಂಗ್ರಹಿಸಿ ನಗದು ರೂಪಾಯಿಗಳಿಂದ ಸಮಾರು ನೂರ ಐವತ್ತು ರೂಪಾಯಿಗಳ ವಸ್ತ್ರಗಳನ್ನು ಕೊಂಡುಕೊಂಡು ಅಲಗ, ಮೂಲದ ಪಟ್ಟಣ, ಬಡಗ ಬೆಳ್ಳೂರು, ಪೊಳಲಿ, ಅಡ್ಡೂರು, ಉಳಿಪಾಡಿ, ಕರಿಯಂಗಳ, ಮೂಲೂರು, ಗುರುಪುರ, ಬೈಲು, ಅದ್ಯಪಾಡಿ ಮೊದಲಾದ ಸ್ಥಳಗಳಿಗೆ ಸ್ವತಃ ಹೋಗಿ, ನೆರೆಹಾವಳಿಯಿಂದ ನೊಂದವರನ್ನು ಕಂಡು, ಅವರಿಗೆ ಸುಮಾರು ಇನ್ನೂರ ಐವತ್ತು ರೂಪಾಯಿಗಳ ವಸ್ತ್ರಗಳನ್ನೂ ನಗದು ಐವತ್ತು ರೂಪಾಯಿಗಳನ್ನೂ ಜಾತಿಭೇದವಿಲ್ಲದೆ ಹಂಚಿ ಬಂದಿರುತ್ತಾರೆ.

ತಾ. ೨೧ರಲ್ಲಿ ಸಹಾಯ ಧನಗಳನ್ನು ಕೊಟ್ಟವರ ಸಭೆ ಕರೆದು, ಜಮಾ ಖರ್ಚಿನ ಲೆಕ್ಕ ಪತ್ರಗಳನ್ನು ನೆರೆಹಾವಳಿಯಿಂದ ನೊಂದವರ ಕಷ್ಟನಷ್ಟಗಳನ್ನು ಸಭೆಯ ಮುಂದೆ ವಿವರಿಸಿ, ಜಮಾ ಖರ್ಚಿನ ಲೆಕ್ಕಪತ್ರಗಳು ಮಂಜೂರಾದ ಮೇಲೆ, ಇನ್ನು ಮಾಡಬೇಕಾದ ಜರೂರು ಸಹಾಯಗಳ ಕುರಿತು ಆಲೋಚಿಸಿ ಸಭೆಯು ಅಂತ್ಯವಾಯಿತು.

ನಿರಾಶ್ರಿತರಿಗೆ ಸಹಾಯ

ಈ ಬಾರಿಯ ನೆರೆಯಿಂದ ನಿರಾಶ್ರಿತರಾದ ವೇಣೂರು ಮೊದಲಾದ ಕಡೆಗಳ ಜನರಿಗೆ ಸಹಾಯವನ್ನು ಒದಗಿಸುವದಕ್ಕೋಸ್ಕರ ತಾ. ೧೫-೬-೪೧ರ ದಿನ ಇಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫ ಶ್ರೀ. ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಕೂಡಿ ಶ್ರೀಗಳಾದ ಕೆ. ಪಿ ಶೇಷಗಿರಿ ಪ್ರಭು, ವಿ. ವಿ. ಶೆಣೈ, ಜಿ. ಗೋಪಾಲ ಪೈ, ರಿವರೆಂಡ್ ಫಾದರ್ ಗೋವಿಸ್ ಮತ್ತು ವೇಣೂರಿನ ರೆವಿನ್ಯು ಇನ್ಸ್‌ಪೆಕ್ಟರರಿಂದ ಕೂಡಿದ ಒಂದು ಸಹಾಯಸಮಿತಿಯು ರಚನೆಯಾಯಿತು. ಕೂಡಲೇ ಸಹಾಯ ದ್ರವ್ಯವನ್ನು ಸಂಗ್ರಹಿಸುವ ಕಾರ್ಯವು ಆರಂಭವಾಗಿ ತತ್ಕಾಲ ೫೦೦ ರೂಪಾಯಿಗಳ ಸಂಗ್ರಹವಾದುವು. ಶ್ರೀ. ಕೇಶವಶೆಣೈಯವರು ತಮ್ಮ ಮಗುವಿನ ನಾಮಕರಣದ ಸ್ಮೃತಿಯಾಗಿ ವೇಣೂರಿನ ನೆರೆ ನಿರಾಶ್ರಿತರಿಗೋಸ್ಕರ ಅಕ್ಕಿಯ ಧನ ಸಹಾಯ ಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಫ್ಲಡ್ ರಿಲೀಫ್ ಕಮಿಟಿ

ತಾ. ೨೧ರಲ್ಲಿ ಉಡುಪಿಯಲ್ಲಿ ಕೊಚ್ಚಿಕಾರರ ಆಫೀಸಿನಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಫ್ಲಡ್ ರಿಲೀಫ್ ಕಮಿಟಿಯು ಸೇರಿತು.

ಕಮಿಟಿಯು ಮೊದಲನೆಯ ಕಂತಾಗಿ ೧೨೦೦ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿತು. ಕಮಿಟಿಯು ೭೫ ರೂಪಾಯಿಗಳನ್ನು ಕೊಂಗ್ರೆಸ್ಸಿನ ಆಶ್ರಯದಲ್ಲಿ, ಮಲಬಾರಿನಲ್ಲಿ ರಿಲೀಫ್ ಕಮಿಟಿಗೆ ಕಳುಹಿಸಿಕೊಡುವುದಾಗಿ ನಿರ್ಣಯಮಾಡಿತು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. No. 18/1911

ಕೃಷ್ಣ ಭಟ್ಟ . . . . ವಾದಿ.

ಮತ್ತು

ಕೊರಗ ಪೂಜಾರಿ ಕೂಡಾ . ಪ್ರತಿವಾದಿರು.

ಇವರೊಳಗೆ—

29ನೇ ಪ್ರತಿವಾದಿಳು ಶೀತು ಹೆಂಗ್ಸು, 30 ನೇ ಪ್ರತಿವಾದಿಳು ಹುಕ್ರು ಹೆಂಗ್ಸು ಮಂಜಕ್ಕು ಹೆಂಗ್ಸಿನ ಮಕ್ಕಳು—ಕಾರ್ಕಳ ತಾಲೂಕು ನಲ್ಲೂರು ಗ್ರಾಮದ ಮೇಗಿನ ಅಂಬೆಬಾರು ಎಂಬಲ್ಲಿರುವವರಿಗೆ—

ಮೇಲ್ಕಂಡ ವಾದಿಯು ಕೋರಡವಿನ ಅಸಲು ಬಡ್ಡಿ ಖ್ಯವಜು ಕೇಳಿ ರೂ 1173-15-3ಕ್ಕೆ ನಿಮ್ಮ ಮೇಲೆ ಕೂಡಾ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜ್ರಾತಿಯ ಬಗ್ಗೆ ತಾರೀಕು 28—7—1941ರಲ್ಲು ತಪ್ಪಿಗೆ ಇಟ್ಟಿರುವದರಿಂದ ಸದರಿ ದಾವೆಯ ಕುರಿತು ನಿಮ್ಮ ಉದಾಹರಣೆಯು ಇರುವದಾದರೆ ಅದನ್ನು ಸದರಿ ತಾರೀಕಿನಲ್ಲು ಬೆಳಗ್ಗೆ 10 ಗಂಟೆಯ ಸಮಯಕ್ಕೆ ಸದರಿ ಕೋರ್ಟಿನ ಮುಂದೆ ಸ್ವತಹಾ ಹಾಜ್ರು ಆಗಿ ಅಥವಾ ವಕೀಲರ ಮುಖಾಂತರವಾಗಲೀ ಜ್ಯಾಹೀರು ಮಾಡಿಕೊಳ್ಳಬಹುದಾಗಿಯೂ ತಪ್ಪಿದ್ದಲ್ಲಿ ಸದರಿ ದ್ಯಾವೆಯು ನಿಮ್ಮ ಗ್ಯೆರಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದಾಗಿಯೂ ಎಂಬ ಸಂಗತಿಯನ್ನು ಈ ಮೂಲಕ ನಿಮಗೆ ತಿಳಿಯಪಡಿಸೋಣಾಗುತ್ತದೆ.

ಕಾರ್ಕಳ, 24-6-'41 } A. N. S. ACHAR, Pleader for Plaintiff.

ಸಿನೆಮಾ ಸುದ್ದಿ

ಸೈಗಲ್ ಮತ್ತು ಸಾಧನ

'ಮೀನಾಕ್ಷಿ' ಎಂಬ ನ್ಯೂ ಥಿಯೇಟರ್ಸಿನ ಹೊಸ ಚಿತ್ರವು ಮಾಧುಬೋಸರ ನಿರ್ದೇಶಕತ್ವದಲ್ಲಿ ಪ್ರಾರಂಭವಾಗಿದೆ. ಸೈಗಲ್ ಮತ್ತು ಸಾಧನಾ ಇವರು ಇದರಲ್ಲಿ ಜತೆಗೂಡಿರುವರು.

ವಿಶ್ವಮೋಹಿನಿ

ತೆಲುಗು ಚಿತ್ರವಿದು ಕಲ್ಕತ್ತೆದ ಬಿಜೋಲಿ ಥಿಯೇಟರಿನಲ್ಲಿ ಪ್ರದರ್ಶಿತವಾಗುತ್ತಲಿದೆ.

ಚಂದನ್

ವಿಷ್ಣು ಸಿನೆಟೋನಿನ ಚಂದನ್ ಎಂಬ ಚಿತ್ರದಲ್ಲಿ ಮಾಯಾದೇವಿಯು ನಾಜಿರ್, ಕಾಂತಿ, ಅಶಿಕಹುಸೆನ್ ಇವರೊಡನೆ ಅಭಿನಯಿಸುವಳು. ಬೊಂಬಾಯಿ ಮತ್ತು ಮೌಂಟ ಅಬುಗಳ ಹಿನ್ನೆಲೆಯನ್ನು ಆಕೆ ಪಡೆದಿರುವಳು. ಕುಲೀನ ಸ್ತ್ರೀಯೊಬ್ಬಳು ಮಾನವನ ಪಾಶವಿಕಶಕ್ತಿಗೆ ಬಲಿಬೀಳುವ ಪಾತ್ರವನ್ನು ಆಕೆ ಅಭಿನಯಿಸುವಳು.

ಇಂಟರ್ ನೇಶನಲ್ ಪಿಕ್ಚರ್ ಇನ್‌ಸ್ಟ್ಯೂಟ್

ಸಿನೆಮಾ ವಿಜ್ಞಾನದ ಡಾಕ್ಟರರಾದ ಪ್ರೊ। ಓ. ಜಿ. ಗಾನಿಯನ್ ಇವರು ತಿರಿಗಿ ಕಲ್ಕತ್ತಕ್ಕೆ ಬಂದಿರುವರು. ಆಕ್ಯದ ಚಲಚಿತ್ರಗಳ ಬಗ್ಗೆ ಇಂಟರ್ ನೇಶನಲ್ ಪಿಕ್ಚರ್ ಇನ್‌ಸ್ಟ್ಯೂಟ್ ಒಂದನ್ನು ತಯಾರಿಸುವುದರಲ್ಲಿ ಅವರು ನಿರತರಾಗಿದ್ದಾರೆ

ಇನ್ನೊಂದು ನಂದನಾರ್

ಪ್ರಖ್ಯಾತ ಮನುಷ್ಯರ ಜೀವನ ಚರಿತ್ರೆಗಳ ವಿಷಯ ಅನೇಕ ಸಲ ವಿವಿಧ ಚಿತ್ರಗಳು ತಯಾರಾಗುತ್ತಲಿವೆ. ಹಿಂದೆ ಎರಡು ಸಲ ತಮಿಳಿನಲ್ಲಿ ನಂದನಾರ್ ಚಿತ್ರವು ತಯಾರಾಗಿರುವುದಿದ್ದರೂ, ಈಗ ತಿರಿಗಿ ಜೆಮಿನಿ ಸ್ಟುಡಿಯೋದವರು ಅದೇ ಕಥೆಯನ್ನು ಚಿತ್ರ ತೆಗೆಯುತ್ತಿರುವರು.

ಸುಭದ್ರ

'ಕನ್ನಡ ಸುಭದ್ರ ಚಿತ್ರದಲ್ಲಿ ಮಣಿಪುರಿ ನಾಟ್ಯದ ಪ್ರಯೋಗವು ಇರುತ್ತದೆ.

ಹರಿಶ್ಚಂದ್ರ

ರಾಯಲ್ ಟಾಕೀಸಿನವರು ತ್ಯಾಗರಾಜ ಭಾಗವತರ ನಟನೆಯಿಂದ 'ಹರಿಶ್ಚಂದ್ರ' ಚಿತ್ರವನ್ನು ತಯಾರಿಸುವರೆಂದು ಸುದ್ದಿಯಿದೆ.

ಸುಬ್ಬುಲಕ್ಷ್ಮಿ

ಕೋಕಿಲ ಗಾನೆ ಸುಬ್ಬುಲಕ್ಷ್ಮಿಯು ಇದುವರೆಗೆ ಟಿ. ಕೆ ಪ್ರೊಡಕ್ಷನಿನಲ್ಲಿ ಒಪ್ಪಂದ ಮಾಡಿಕೊಳ್ಳಲಿಲ್ಲವೆಂದು ನಂಬಬಹುದಾದಂತಹ ಸುದ್ದಿ ಬಂದಿರುತ್ತದೆ.

ಶೀತಬಾಧೆಯಿಂದ ಯಾಕೆ ನರಳುತ್ತೀರಿ?

ಪೆಪ್ಸನ್ನು ತೆಗೆದುಕೊಂಡು ಆ ಗುಣ ಹೊಂದಿರಿ

ಪೆಪ್ಸನ್ನು ಸೇವಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಶಾಲಾ ಪುಸ್ತಕಗಳು

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

ಪ್ರಾಥಮಿಕ ಲಘುವಿಜ್ಞಾನ.

೬, ೭ ಮತ್ತು ೮ನೆಯ ತರಗತಿಗಳಿಗೆ

ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೆ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0

ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಬೆಲೆ: ೪, ೫ನೆಯ ತರಗತಿಗೆ 0—2—0 ೬ನೆಯ 0—2—0

೭ನೆಯ 0—2—6 ೮ನೆಯ 0—3—0

ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ. ಸೂ:— ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಸತ್ಯಾಗ್ರಹಿಗಳ ಅವಗಾಹನೆಯ ಸಲುವಾಗಿ

ಆಚಾರ್ಯ ಕೃಪಲಾನಿಯವರು ಸೂಚನೆಯಿತ್ತಿರುವರು

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಆಚಾರ್ಯ ಕೃಪಾಲಿನಿಯವರು, ಮಹಾತ್ಮಾ ಗಾಂಧಿಯವರ ಸಮ್ಮತಿಯನ್ನು ಪಡೆದು ಸತ್ಯಾಗ್ರಹಿಗಳಿಗೆ ಈ ಕೆಳಗಿನ ಸೂಚನೆಗಳನ್ನು ಕೊಟ್ಟಿರುತ್ತಾರೆ:—

ಗಾಂಧೀಜಿಯವರ ಹೊಸ ನಿಬಂಧನೆಗಳು

1. ಬಿಡುಗಡೆಯಾದ ಸತ್ಯಾಗ್ರಹಿಯು ಬೇಗನೇ ಪುನಃ ಸತ್ಯಾಗ್ರಹವನ್ನು ಆಚರಿಸಬೇಕು. ಅನಾನುಕೂಲವಿದ್ದರೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಮೂಲಕ, ಮಹಾತ್ಮಾ ಗಾಂಧಿಯವರಿಗೆ ಯೋಗ್ಯ ಕಾರಣಗಳನ್ನು ತಿಳಿಸಬೇಕು. ಮಹಾತ್ಮಾ ಗಾಂಧಿಯವರಿಂದ ಅಪ್ಪಣೆಪಡೆದು, ಸತ್ಯಾಗ್ರಹವನ್ನು ಮಾಡದೆ ಇರಬಹುದು.

2. ಮಹಾತ್ಮಾ ಗಾಂಧಿಯವರಿಗೆ ಸತ್ಯಾಗ್ರಹ ಮಾಡಲಿರುವವನ ವಿಳಾಸವು ಹಸ್ತಗತವಾದ ದಿನದಿಂದ ಅವರ ಅನುಜ್ಞೆ ಬರುವವರೆಗೆ ಸತ್ಯಾಗ್ರಹಿಯು ಈ ಕೆಳಗೆ ನಮೂದಿಸಿದ ಹದಿನೊಂದು ಸೂತ್ರಗಳಲ್ಲಿ ಒಂದನ್ನು ಇಲ್ಲವೆ ಹೆಚ್ಚು ಸೂತ್ರಗಳನ್ನು ಆಧಾರವಾಗಿಟ್ಟುಕೊಂಡು ರಚನಾತ್ಮಕ ಕಾರ್ಯಗಳಿಗೆ ತೊಡಗಬೇಕು.

(೧) ಹಿಂದೂ ಮುಸ್ಲಿಂ ಐಕ್ಯ. (೨) ಹರಿಜನೋದ್ಧಾರ. (೩) ಮದ್ಯಪಾನ ನಿಷೇಧ. (೪) ಖಾದಿಸೇವೆ. (೫) ಗ್ರಾಮೋದ್ಯೋಗಗಳ ಅಭಿವೃದ್ಧಿ. (೬) ಹಳ್ಳಿಯ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸುವುದು. (೭) ಸ್ವಾವಲಂಬಿ ಶಿಕ್ಷಣ. (೮) ಪ್ರಾಯಸ್ಥರ ಶಿಕ್ಷಣ. (೯) ರಾಷ್ಟ್ರ ಭಾಷಾ ಪ್ರಚಾರ. (೧೦) ಮಾತೃ ಭಾಷೆಯಲ್ಲಿ ಪ್ರೀತಿ ಹುಟ್ಟುವಂತೆ ಮಾಡುವುದು. (೧೧) ಆರ್ಥಿಕ ಸಮಾನತೆಗಾಗಿ ಹೆಣಗಾಡುವುದು.

೩. ಪ್ರತಿಯೊಬ್ಬ ಸತ್ಯಾಗ್ರಹಿಯು ಒಂದೊಂದು ಡೈರಿಯನ್ನು ಇಟ್ಟುಕೊಂಡು ಪ್ರತಿ ನಿತ್ಯ ಮಾಡುವ ಕಾರ್ಯಕ್ರಮವನ್ನು ಅದರಲ್ಲಿ ಬರೆದು ಪಕ್ಷಕ್ಕೆ ಒಂದು ಬಾರಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಅದನ್ನು ತೋರಿಸಬೇಕು. ಒಳ್ಳೆಯ ಶ್ರಮ ವಹಿಸಿ ಕೆಲಸಮಾಡುವವರಿಗೆ ಮಾತ್ರ ಸತ್ಯಾಗ್ರಹವನ್ನು ಹೂಡಲು ಅನುಮತಿಯು ದೊರೆಯುವುದು.

ಹೊಸ ನಿಬಂಧನೆಗಳು ಅಗತ್ಯವೇಕೆ?

4. ಭರದಿಂದ ಮುಂದೆ ಸಾಗಲಿರುವ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಈ ರೀತಿಯ ನಿಬಂಧನೆಗಳು ಅವಶ್ಯಕವೆಂದು ಕಂಡುಬಂದಿದೆ. ಕ್ಲಿಷ್ಟ ಸಮಯಕ್ಕೆ ಸರಿಯಾಗಿ ಸತ್ಯಾಗ್ರಹವನ್ನು ಮಾಡಲಿಲ್ಲವೆಂದು, ಸತ್ಯಾಗ್ರಹಿಗಳ ವಿಷಯ ದೂರುಗಳು ಆಫೀಸಿಗೆ ಪದೇ ಪದೇ ಬರುತ್ತವೆ. ಇನ್ನು ಮುಂದೆ ಅಂತಹ ದೂರುಗಳು ಬರಲು ಆಸ್ಪದವಿಲ್ಲ. ಈ ಮೊದಲು ಪಟ್ಟಿಯಲ್ಲಿ ಹೆಸರುಕೊಟ್ಟ ಸತ್ಯಾಗ್ರಹಿಗಳಿಗೆ ಹೊಸನಿಬಂಧನೆಗಳನ್ನು ಅನುಮೋದಿಸಲು ಮನಸಿಲ್ಲದಿದ್ದರೆ, ಅಂಥವರು ತಮ್ಮ ಹೆಸರುಗಳನ್ನು ಪಟ್ಟಿಯಿಂದ ತೆಗೆಯುವರೆ ಅರ್ಜಿ ಮಾಡಿಕೊಳ್ಳಬಹುದು. ಹೀಗೆ ಮಾಡಿದರೆ, ನಾಚಿಕೆಗೇಡು ಎಂದು ಅವರು ತಿಳಿಯಬಾರದು. ಬೇರೆ ರೀತಿಯಲ್ಲಿ ಕಾಂಗ್ರೆಸ್ ಸೇವೆಯನ್ನು ಸಲ್ಲಿಸಿ ಕಾಂಗ್ರೆಸ್ ಸದಸ್ಯರಾಗಿರಬಹುದು.

(೫) ಸತ್ಯಾಗ್ರಹಿಗಳಾಗಿ ಚುನಾಯಿಸಲ್ಪಟ್ಟವರು, ಇತರ ಸ್ಥಳೀಯ ಚುನಾವಣೆಗಳಿಗೆ ನಿಲ್ಲಬಾರದು. ಇಷ್ಟರ ಒಳಗೆ ಅಂತಹ ಚುನಾವಣೆಗಳಿಗೆ ತಮ್ಮ ಹೆಸರುಗಳನ್ನು ಕೊಟ್ಟವರು ಅದನ್ನು ಹಿಂದೆಗೆಯಬೇಕು. ಏಕಕಾಲದಲ್ಲಿ ಎರಡು ಕಡೆಯಲ್ಲಿ ಚುನಾಯಿಸಲ್ಪಟ್ಟು ಕೆಲಸಮಾಡುವುದು ಸರ್ವಥಾ ಕೂಡದು.

6. ಲೋಕಲ್ ಬೋರ್ಡಿನ ಮೆಂಬರನಾಗಿದ್ದು, ಜೈಲುವಾಸವನ್ನು ಅನುಭವಿಸಿ ಬಿಡಲ್ಪಟ್ಟವನು, ಇನ್ನು ಮುಂದಿನ ಲೋಕಲ್ ಬೋರ್ಡ್ ಸಭೆಗೆ ಹಾಜರಾಗಬಾರದು. ಅವನು ಹಾಗೆ ಮಾಡಿದುದು, ತಿಳಿದು ಬಂದರೆ, ಕೂಡಲೇ ಅವನ ಹೆಸರನ್ನು ಸತ್ಯಾಗ್ರಹಿ ಪಟ್ಟಿಯಿಂದ ತೆಗೆದು ಹಾಕಲಾಗುವುದು.

7. ಜೈಲಿಗೆ ಒಳಗಾಗದ, ಪ್ರಚಾರ ಕಾರ್ಯವನ್ನು ಮಾಡುತ್ತಿರುವ ಇತರ ಸತ್ಯಾಗ್ರಹಿಗಳೂ ಲೋಕಲ್ ಬೋರ್ಡ್ ಸಭೆಗಳಿಗೆ ಹೋಗಬಾರದು.

8. ಮಳೆಗಾಲದಲ್ಲಿ ಸತ್ಯಾಗ್ರಹಿಗಳು ತಮ್ಮ ಊರನ್ನು ಬಿಟ್ಟು ಹೊರಗಿರುವ ಇತರ ಹಳ್ಳಿಗಳಲ್ಲಿ ಇಲ್ಲವೇ ಒಂದೇ ಹಳ್ಳಿಯಲ್ಲಿ ನೆಲಸಿಕೊಂಡು, ಸತ್ಯಾಗ್ರಹದೊಂದಿಗೆ ಇತರ ರಚನಾತ್ಮಕ ಕಾರ್ಯಗಳನ್ನು ಮಾಡುವುದರಲ್ಲಿ ಅಡ್ಡಿ ಇರುವುದಿಲ್ಲ.

9. ಇನ್ನೂ ತನಕ ಸೆರೆಹಿಡಿಯಲ್ಪಡದೆ ಇದ್ದು, ಪ್ರಚಾರ ಕಾರ್ಯವನ್ನು ಮಾಡುತ್ತ, ದಿಲ್ಲಿಯತ್ತ ಕಡೆ ಪ್ರಯಾಣ ಬೆಳೆಸುತ್ತಿರುವ ಎಲ್ಲಾ ಸತ್ಯಾಗ್ರಹಿಗಳು, ಎರಡು ವಾರಕ್ಕೊಮ್ಮೆ ತಾವು ಮಾಡಿದ ಕಾರ್ಯಗಳ ವರದಿಯನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕಳುಹಿಸಿಕೊಡಬೇಕು. ಪ್ರಾಂತಿಕ ಕಾಂಗ್ರೆಸ್ ಸಮಿತಿಯು ತಿಂಗಳಿಗೊಮ್ಮೆ ಅವರ ವರದಿಯ ಸಾರಾಂಶವನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ಕಳುಹಿಸುವ ಏರ್ಪಾಡು ಮಾಡುವುದು.

10. ಭಾಷಣಗಳನ್ನು ಮಾಡುವಾಗ ತಾವು ನಡೆಯುವ ಶೈಲಿಯ ಕಡೆಗೆ ಸತ್ಯಾಗ್ರಹಿಗಳು ಹೆಚ್ಚಿನ ಗಮನವನ್ನು ಕೊಡುತ್ತಿರಬೇಕು. ಭಾಷೆಯು ಅಯೋಗ್ಯವಾಗಿತ್ತು ಎಂಬ ದೂರುಗಳು ಬಂದರೆ, ವ್ಯಕ್ತಿಗೆ ಮಾತ್ರವಲ್ಲ ಇಡೀ ಸತ್ಯಾಗ್ರಹಕ್ಕೆ ಕಳಂಕ ಬರುವುದೆಂದು ಸತ್ಯಾಗ್ರಹಿಗಳು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಲೋಧ್ರ — ಅರ್ಕ — ಅಮೃತ

ಗರ್ಭಾಶಯದ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಋತುಶೂಲೆ, ಮುಟ್ಟಾಗದಿರುವಿಕೆ, ಅಕಾಲ, ಬಹಿಷ್ಠೆ, ಋತುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾ ವಾಯು, ಕೀಲುಗಳಲ್ಲಿ ನೋವು, ಅಂಗೈ ಅಂಗಾಲುಗಳಲ್ಲಿ ಉರಿ ಮೊದಲಾದ ಸ್ತ್ರೀಮರ್ಮ ವ್ಯಾಧಿಗಳನ್ನು ಗುಣಪಡಿಸುತ್ತದೆ.

ಸರ್ವ ಜ್ವರನಿವಾರಿಣಿ,
ಅಜೀರ್ಣ, ವಿಷಾಕ್ತ, ಋತುಭೇದ ದೋಷಗಳಿಂದ ಅಸ್ವಾಸ್ಥ್ಯದಲ್ಲಿ ಕ್ರಿಮಿಗಳು ಸೇರಿ ನಾನಾ ವಿಧವಾದ ಜ್ವರಗಳು ಸಂಭವಿಸುತ್ತವೆ. ವಾತಜ್ವರ, ಪಿತ್ತಜ್ವರ, ಕಫಜ್ವರ, ಸನ್ನಿಪಾತ ಜ್ವರ ಮುತ್ತು ಇತರ ವಿಷಮಜ್ವರಗಳನ್ನೂ ಕೊಟ್ಟೆಯಲ್ಲಿಯ ಜ್ವರಗಡ್ಡೆಯನ್ನೂ ನಾಶಮಾಡುತ್ತೆ.

ರಕ್ತಶುದ್ಧಿ ದ್ರಾವಕ
ರಕ್ತಹೀನತೆ, ಮಲಬದ್ಧ, ಅಜೀರ್ಣ, ಕೀಲುಗಳಲ್ಲಿ ನೋವು, ಶೋಷಣ, ಮೇಹ, ವ್ರಣಗಳು, ಕುಷ್ಠ, ಸರ್ಪಗಳು, ಬಲಹೀನತೆ, ಹೊಟ್ಟೆಯಲ್ಲಿ ಉರಿ ಮೊದಲಾದ ವ್ಯಾಧಿಗಳನ್ನು ನಿವಾರಣೆ ಮಾಡಿ, ಶರೀರಕ್ಕೆ ಕಾಂತಿಯನ್ನೂ ಪುಷ್ಟಿ ತೇಜಸ್ಸನ್ನೂ ಕೊಡುತ್ತೆ. ಈ ಔಷಧಿಯಿಂದ ಎಷ್ಟೋ ಜನ ಆರೋಗ್ಯವಂತರಾಗಿದ್ದಾರೆ.

ಕೇಸರಿ ಕುಟೀರಂ ಲಿಮಿಟೆಡ್
ರಾಯಪೇಟೆ :: ಮದರಾಸು.
ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

HALFTONE & LINE
BLOCK MAKING
UNDERTAKEN
Sharada Press,
MANGALORE

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

[೭ಯ ಪುಟದಿಂದ ಮುಂದುವರಿದುದು]
ವಾಗಿ ರಿಲೀಫ್ ಸಮಿತಿಗೆ ಮುಟ್ಟಿಸುವುದಾಗಿ ಮೋಟರ್ ಕಂಪೆನಿಯವರು ವಾಗ್ದಾನ ಮಾಡಿದ್ದಾರೆ.]

ನೆರೆಹಾವಳಿಯಿಂದ ಕಷ್ಟನಷ್ಟಗಳಿಗೊಳಗಾದವರಿಗೆ ಸಹಾಯ

ನೆರೆಹಾವಳಿಯಿಂದ ಕಷ್ಟಕ್ಕೊಳಗಾದವರ ಸಹಾಯ ಜನಾಬ್ ಯಂ. ಕುಂಞಮ್ಮು ಸಾಹೇಬರು, ಜನಾಬ್ ಎ. ಮೂಸಬ್ಬ ಸಾಹೇಬರು, ಜನಾಬ್ ಹಾಜೀ ಗುಲ್ಮಹಮ್ಮದ್ ಸಾಹೇಬರೂ, ಜನಾಬ್ ವಲ್ಲಿ ಮುಹಮ್ಮದ್ ಸಾಹೇಬರೂ ಕೂಡ ಮುಸ್ಲಿಂ ಮಹನೀಯರಿಂದಲೂ ಮುಸ್ಲಿಂ ಇತರ ಮಹನೀಯರಿಂದಲೂ, ಸುಮಾರು ನೂರು ರೂಪಾಯಿಗಳ ವಸ್ತ್ರಗಳನ್ನೂ, ನಗದು ಇನ್ನೂರು ರೂಪಾಯಿಗಳನ್ನೂ ಸಂಗ್ರಹಿಸಿ ನಗದು ರೂಪಾಯಿಗಳಿಂದ ಸುಮಾರು ನೂರ ಐವತ್ತು ರೂಪಾಯಿಗಳ ವಸ್ತ್ರಗಳನ್ನು ಕೊಂಡುಕೊಂಡು ಆಲಗ, ಮೂಲರ ಪಟ್ಟಣ, ಬಡಗ ಬೆಳ್ಳೂರು, ಪೊಳಲಿ, ಅಡ್ಡೂರು, ಉಳಿಪಾಡಿ, ಕರಿಯಂಗಳ, ಮೂಲೂರು, ಗುರುಪುರ, ಬೈಲು, ಅದ್ಯಪಾಡಿ ಮೊದಲಾದ ಸ್ಥಳಗಳಿಗೆ ಸ್ವತಃ ಹೋಗಿ, ನೆರೆಹಾವಳಿಯಿಂದ ನೊಂದವರನ್ನು ಕಂಡು, ಅವರಿಗೆ ಸುಮಾರು ಇನ್ನೂರ ಐವತ್ತು ರೂಪಾಯಿಗಳ ವಸ್ತ್ರಗಳನ್ನೂ ನಗದು ಐವತ್ತು ರೂಪಾಯಿಗಳನ್ನೂ ಜಾತಿಭೇದವಿಲ್ಲದೆ ಹಂಚಿ ಬಂದಿರುತ್ತಾರೆ.

ತಾ. ೨೧ರಲ್ಲಿ ಸಹಾಯ ಧನಗಳನ್ನು ಕೊಟ್ಟವರ ಸಭೆ ಕರೆದು, ಜಮಾ ಖರ್ಚಿನ ಲೆಕ್ಕ ಪತ್ರಗಳನ್ನು ನೆರೆಹಾವಳಿಯಿಂದ ನೊಂದವರ ಕಷ್ಟನಷ್ಟಗಳನ್ನು ಸಭೆಯ ಮುಂದೆ ವಿವರಿಸಿ, ಜಮಾ ಖರ್ಚಿನ ಲೆಕ್ಕಪತ್ರಗಳು ಮಂಜೂರಾದ ಮೇಲೆ, ಇನ್ನು ಮಾಡಬೇಕಾದ ಜರೂರು ಸಹಾಯಗಳ ಕುರಿತು ಆಲೋಚಿಸಿ ಸಭೆಯು ಅಂತ್ಯವಾಯಿತು.

ನಿರಾಶ್ರಿತರಿಗೆ ಸಹಾಯ

ಈ ಬಾರಿಯ ನೆರೆಯಿಂದ ನಿರಾಶ್ರಿತರಾದ ವೇಣೂರು ಮೊದಲಾದ ಕಡೆಗಳ ಜನರಿಗೆ ಸಹಾಯವನ್ನು ಒದಗಿಸುವದಕ್ಕೋಸ್ಕರ ತಾ. ೧೫-೬-೪೧ರ ದಿನ ಇಲ್ಲಿ ಡಿಸ್ಟ್ರಿಕ್ಟ್ ಮುನ್ಸಿಪ ಶ್ರೀ. ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಕೂಡಿ ಶ್ರೀಗಳಾದ ಕೆ. ಪಿ. ಕೇಶವಗಿರಿ ಪ್ರಭು, ವಿ. ವಿ. ಶೆಣೈ, ಜಿ. ಗೋಪಾಲ ಪೈ, ರೆವರೆಂಡ್ ಫಾದರ್ ಗೋವಿಸ್ ಮತ್ತು ವೇಣೂರಿನ ರೆವಿನ್ಯೂ ಇನ್ಸಪೆಕ್ಟರರಿಂದ ಕೂಡಿದ ಒಂದು ಸಹಾಯಸಮಿತಿಯ ರಚನೆಯಾಯಿತು. ಕೂಡಲೇ ಸಹಾಯ ದ್ರವ್ಯವನ್ನು ಸಂಗ್ರಹಿಸುವ ಕಾರ್ಯವು ಆರಂಭವಾಗಿ ತತ್ಕಾಲ ೫೦೦ ರೂಪಾಯಿಗಳ ಸಂಗ್ರಹವಾದುವು. ಶ್ರೀ. ಕೇಶವಶೆಣೈಯವರು ತಮ್ಮ ಮಗುವಿನ ನಾಮಕರಣದ ಸ್ಮೃತಿಯಾಗಿ ವೇಣೂರಿನ ನೆರೆ ನಿರಾಶ್ರಿತರಿಗೋಸ್ಕರ ಅರವತ್ತು ಧನ ಸಹಾಯಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಫ್ಲಡ್ ರಿಲೀಫ್ ಕಮಿಟಿ

ತಾ. ೨೧ರಲ್ಲಿ ಉಡುಪಿಯಲ್ಲಿ ಕೊಟ್ಟಿಕಾರರ ಆಫೀಸಿನಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಫ್ಲಡ್ ರಿಲೀಫ್ ಕಮಿಟಿಯು ಸೇರಿತು.

ಕಮಿಟಿಯು ಮೊದಲನೆಯ ಕಂತಾಗಿ ೧,೨೦೦ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿತು. ಕಮಿಟಿಯು ೭೫ ರೂಪಾಯಿಗಳನ್ನು ಕೊಂಗ್ರೆಸ್ಸಿನ ಆಶ್ರಯದಲ್ಲಿ, ಮಲಬಾರಿನಲ್ಲಿ ರಿಲೀಫ್ ಕಮಿಟಿಗೆ ಕಳುಹಿಸಿಕೊಡುವುದಾಗಿ ನಿರ್ಣಯಮಾಡಿತು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. No. 18/1941

ಕೃಷ್ಣ ಭಟ್ಟ . . . . ವಾದಿ.

ಮತ್ತು

ಕೊರಗ ಪೂಜಾರಿ ಕೂಡಾ . ಪ್ರತಿವಾದಿರು.

ಇವರೊಳಗೆ—

29ನೇ ಪ್ರತಿವಾದಿಳು ಶೀತು ಹೆಂಗ್ಸು, 30ನೇ ಪ್ರತಿವಾದಿಳು ಪುಕ್ರು ಹೆಂಗ್ಸು ಮಂಜಕ್ಕು ಹೆಂಗ್ಸಿನ ಮಕ್ಕಳು—ಕಾರ್ಕಳ ತಾಲೂಕು ನಲ್ಲೂರು ಗ್ರಾಮದ ಮೇಗಿನ ಅಂಬೆಟ್ಟಾರು ಎಂಬಲ್ಲಿರುವವರಿಗೆ—

ಮೇಲ್ಕಂಡ ವಾದಿಯು, ತೋರಿಸಲ್ಪಟ್ಟ ಅಸಲು ಬಡ್ಡಿ ಖ್ಯವಜು ಕೇಳಿ ರೂ. 1173-15-8ಕ್ಕೆ ನಿಮ್ಮ ಮೇಲೆ ಕೂಡ್ಲಾ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜ್ರಾತಿಯ ಬಗ್ಗೆ ತಾರೀಕು 28—7—1941ರಲ್ಲು ತನ್ನಿಗೆ ಇಟ್ಟಿರುವುದರಿಂದ ಸದರಿ ದಾವೆಯ ಕುರಿತು ನಿಮ್ಮ ಉದಾಹರಣೆಯು ಇರುವದಾದರೆ ಅದನ್ನು ಸದರಿ ತಾರೀಕಿನಲ್ಲು ಬೆಳಗ್ಗೆ 10 ಗಂಟೆಯ ಸಮಯಕ್ಕೆ ಸದರಿ ಕೋರ್ಟಿನ ಮುಂದೆ ಸ್ವತಹಾ ಹಾಜ್ರು ಆಗಿ ಅಥವಾ ವಕೀಲರ ಮುಖಾಂತರವಾಗಲೀ ಜ್ಯಾಹೀರು ಮಾಡಿಕೊಳ್ಳಬಹುದಾಗಿಯೂ ತಪ್ಪಿದ್ದಲ್ಲಿ ಸದರಿ ದಾವೆಯು ನಿಮ್ಮ ಗೈರಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದಾಗಿಯೂ ಎಂಬ ಸಂಗತಿಯನ್ನು ಈ ಮೂಲಕ ನಿಮಗೆ ತಿಳಿಯಪಡಿಸೋಣಾಗುತ್ತದೆ.

ಕಾರ್ಕಳ }
24-6-'41 } A. N. S. ACHAR
Pleader for Plaintiff.

ಸಿನೇಮಾ ಸುದ್ದಿ

ಸೈಗಲ್ ಮತ್ತು ಸಾಧನ

'ಮೀನಾಕ್ಷಿ' ಎಂಬ ನ್ಯೂ ಥಿಯೇಟರ್ಸಿನ ಹೊಸ ಚಿತ್ರವು ಮಾಧುಬೋಸರ ನಿರ್ದೇಶಕತ್ವದಲ್ಲಿ ಪ್ರಾರಂಭವಾಗಿದೆ. ಸೈಗಲ್ ಮತ್ತು ಸಾಧನಾ ಇವರು ಇದರಲ್ಲಿ ಜತೆಗೂಡಿರುವರು.

ವಿಶ್ವಮೋಹಿನಿ

ತೆಲುಗು ಚಿತ್ರವಿದು ಕಲ್ಕತ್ತೆಯ ಬಿಜೋಲಿ ಥಿಯೇಟರಿನಲ್ಲಿ ಪ್ರದರ್ಶಿತವಾಗುತ್ತಲಿದೆ.

ಚಂದನ್

ವಿಷ್ಣು ಸಿನೆಟೋನಿನ ಚಂದನ್ ಎಂಬ ಚಿತ್ರದಲ್ಲಿ ಮಾಯಾದೇವಿಯು ನಾಜೆರ್, ಕಾಂತಾ, ಆಶಿಕಹುಸೇನ್ ಇವರೊಡನೆ ಅಭಿನಯಿಸುವಳು. ಬೊಂಬಾಯಿ ಮತ್ತು ಪೂನಾ ಟಾಕಿಗಳ ಹೆಸರನ್ನು ಆಕೆ ಪಡೆದಿರುವಳು. ಕುಲೀನ ಸ್ತ್ರೀಯೊಬ್ಬಳು ಮಾನವನ ಪಾಶವಿಕಶಕ್ತಿಗೆ ಬಲಿಬೀಳುವ ಪಾತ್ರವನ್ನು ಆಕೆ ಅಭಿನಯಿಸುವಳು.

ಇಂಟರ್ ನೇಶನಲ್ ಪಿಕ್ಚರ್ ಇನ್‌ಸ್ಟ್ಯೂಟ್

ಸಿನೇಮಾ ವಿಜ್ಞಾನದ ಡಾಕ್ಟರರಾದ ಪ್ರೊ. ಓ. ಜಿ. ಗಾನಿಯನ್ ಇವರು ತಿರಿಗಿ ಕಲ್ಕತ್ತೆಕ್ಕೆ ಬಂದಿರುವರು. ಆಶ್ಯದ ಚಲಚಿತ್ರಗಳ ಬಗ್ಗೆ ಇಂಟರ್ ನೇಶನಲ್ ಪಿಕ್ಚರ್ ಇನ್‌ಸ್ಟ್ಯೂಟ್ ಒಂದನ್ನು ತಯಾರಿಸುವುದರಲ್ಲಿ ಅವರು ನಿರತರಾಗಿದ್ದಾರೆ.

ಇನ್ನೊಂದು ನಂದನಾರ್

ಪ್ರಖ್ಯಾತ ಮನುಷ್ಯರ ಜೀವನ ಚರಿತ್ರೆಗಳ ವಿಷಯ ಅನೇಕ ಸಲ ವಿವಿಧ ಚಿತ್ರಗಳು ತಯಾರಾಗುತ್ತಲಿವೆ. ಹಿಂದೆ ಎರಡು ಸಲ ತಮಿಳಿನಲ್ಲಿ ನಂದನಾರ್ ಚಿತ್ರವು ತಯಾರಾಗಿರುವುದಿದ್ದರೂ, ಈಗ ತಿರಿಗಿ ಜೆಮಿನಿ ಸ್ಟುಡಿಯೋದವರು ಅದೇ ಕಥೆಯನ್ನು ಚಿತ್ರ ತೆಗೆಯುತ್ತಿರುವರು.

ಸುಭದ್ರ

'ಕನ್ನಡ ಸುಭದ್ರ' ಚಿತ್ರದಲ್ಲಿ ಮಣಿಪುರಿ ನಾಟ್ಯದ ಪ್ರಯೋಗವು ಇರುತ್ತದೆ.

ಹರಿಶ್ಚಂದ್ರ

ರಾಯಲಾ ಟಾಕೀಸಿನವರು ತ್ಯಾಗರಾಜ ಭಾಗವತರ ನಟನೆಯಿಂದ 'ಹರಿಶ್ಚಂದ್ರ' ಚಿತ್ರವನ್ನು ತಯಾರಿಸುವರೆಂದು ಸುದ್ದಿಯಿದೆ.

ಸುಬ್ಬುಲಕ್ಷ್ಮಿ

ಕೋಕಿಲ ಗಾನೆ ಸುಬ್ಬುಲಕ್ಷ್ಮಿಯು ಇದುವರೆಗೆ ಟಿ. ಕೆ. ಪ್ರೊಡಕ್ಸನಿನಲ್ಲಿ ಒಪ್ಪಂದ ಮಾಡಿಕೊಳ್ಳಲಿಲ್ಲವೆಂದು ನಂಬಬಹುದಾದಂತಹ ಸುದ್ದಿ ಬಂದಿರುತ್ತದೆ.

ಶೀತಬಾಧೆಯಿಂದ ಯಾಕೆ ನರಳುತ್ತೀರಿ?

ಪೆಪ್ಸನ್ನು ತೆಗೆದುಕೊಂಡು ಆ ಗುಣ ಹೊಂದಿರಿ

ಪೆಪ್ಸನ್ನು ಸೇವಿಸಿರಿ



PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಶಾಲಾ ಪುಸ್ತಕಗಳು

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಮಂಜೂರಾಗಿವೆ

[ಎಲಿಮೆಂಟರಿ ಶಾಲಾ ಪಾಠಪಟ್ಟಿಗೆ ಸರಿಯಾಗಿ ಬರೆದುದು]

ಶ್ರೀ. ಎಸ್. ರಾಮಕೃಷ್ಣಾಚಾರ್ ಬಿ. ಎ., ಎಲ್. ಟಿ. ಇವರಿಂದ ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೬, ೭ಮತ್ತು ೮ನೆಯ ತರಗತಿಗಳಿಗೆ

ಬೆಲೆ: ಒಂದೊಂದು ತರಗತಿಗೆ 0 6 0

ಶ್ರೀ. ಕೆ. ಕೃ. ರೈ ವಿದ್ವಾನ್ ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗಾಗಿ ಬೆಲೆ 0-2-0

ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗಾಗಿ ಬೆಲೆ 0-2-6

ಪ್ರಕೃತಿಶಾಸ್ತ್ರ ಮತ್ತು ತೋಟದ ಕೆಲಸ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6

ಶ್ರೀ. ಕೆ. ಕೆ. ರೈ, ವಿದ್ವಾನ್ ಇವರಿಂದ ರಚಿತವಾದ

ವ್ಯಾಕರಣ ಮತ್ತು ಪ್ರಬಂಧ

೪, ೫, ೬, ೭, ಮತ್ತು ೮ನೆಯ ತರಗತಿಗಳಿಗೆ

ಬೆಲೆ: ೪, ೫ನೆಯ ತರಗತಿಗೆ 0—2—0 ೬ನೆಯ 0—2—0
೭ನೆಯ 0—2—6 ೮ನೆಯ 0—3—0

ಸಿವಿಕ್ಸ್ ಅಥವಾ ಪ್ರಜಾಧರ್ಮ

೩ನೆಯ ತರಗತಿಗೆ 0 1 6 ೪ನೆಯ ತರಗತಿಗೆ 0 2 0 ೫ನೆಯ ತರಗತಿಗೆ 0 2 6
೬ನೆಯ ತರಗತಿಗೆ 0 3 0 ೭ನೆಯ ತರಗತಿಗೆ 0 3 0 ೮ನೆಯ ತರಗತಿಗೆ 0 3 0

ಚರಿತ್ರೆ ಮತ್ತು ಕಥೆಗಳು

೩ನೆಯ ತರಗತಿಗೆ 0 2 6 ೪ನೆಯ ತರಗತಿಗೆ 0 3 0 ೫ನೆಯ ತರಗತಿಗೆ 0 3 0

ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಿರಿ.

ವಿ. ಸೂ:— ಮಾದರಿ ಪ್ರತಿಗಳನ್ನು ಇಚ್ಛಿಸುವವರು, ಬೇಕಾದ ಪುಸ್ತಕಗಳ ಮೌಲ್ಯದಷ್ಟು ಸ್ಟಾಂಪುಗಳನ್ನು ಕಳುಹಿಸಿಕೊಡುವುದು.

ಶಾರದಾ ಛಾಪಖಾನೆ, ರಥಬೀದಿ ಮಂಗಳೂರು.

ಸತ್ಯಾಗ್ರಹಿಗಳ ಅವಗಾಹನೆಯ ಸಲುವಾಗಿ
ಆಚಾರ್ಯ ಕೃಪಲಾನಿಯವರು ಸೂಚನೆಯಿತ್ತಿರುವರು

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಆಚಾರ್ಯ ಕೃಪಾಲನಿಯವರು, ಮಹಾತ್ಮಾ ಗಾಂಧಿಯವರ ಸಮ್ಮತಿಯನ್ನು ಪಡೆದು ಸತ್ಯಾಗ್ರಹಿಗಳಿಗೆ ಈ ಕೆಳಗಿನ ಸೂಚನೆಗಳನ್ನು ಕೊಟ್ಟಿರುತ್ತಾರೆ —

1. ಬಿಡುಗಡೆಯಾದ ಸತ್ಯಾಗ್ರಹಿಯು ಬೇಗನೇ ಪುನಃ ಸತ್ಯಾಗ್ರಹವನ್ನು ಆಚರಿಸಬೇಕು. ಅನಾನುಕೂಲವಿದ್ದರೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಮೂಲಕ, ಮಹಾತ್ಮಾ ಗಾಂಧಿಯವರಿಗೆ ಯೋಗ್ಯ ಕಾರಣಗಳನ್ನು ತಿಳಿಸಬೇಕು. ಮಹಾತ್ಮಾ ಗಾಂಧಿಯವರಿಂದ ಅನುಮತಿ ಪಡೆದು, ಸತ್ಯಾಗ್ರಹವನ್ನು ಮಾಡದೆ ಇರಬಹುದು.

2. ಮಹಾತ್ಮಾ ಗಾಂಧಿಯವರಿಗೆ ಸತ್ಯಾಗ್ರಹ ಮಾಡಲಿರುವವನ ವಿಳಾಸವು ಹಸ್ತಗತವಾದ ದಿನದಿಂದ ಅವರ ಅನುಜ್ಞೆ ಬರುವವರೆಗೆ ಸತ್ಯಾಗ್ರಹಿಯು ಈ ಕೆಳಗೆ ನಮೂದಿಸಿದ ಹದಿನಾರು ಸೂತ್ರಗಳಲ್ಲಿ ಒಂದನ್ನು ಇಲ್ಲವೆ ಹೆಚ್ಚು ಸೂತ್ರಗಳನ್ನು ಆಧಾರವಾಗಿಟ್ಟುಕೊಂಡು ರಚನಾತ್ಮಕ ಕಾರ್ಯಗಳಿಗೆ ತೊಡಗಬೇಕು.

ಗಾಂಧಿಜಿಯವರ ಹೊಸ ನಿಬಂಧನೆಗಳು

(೧) ಹಿಂದೂ ಮುಸ್ಲಿಂ ಐಕ್ಯ (೨) ಹರಿಜನೋದ್ಧಾರ (೩) ಮದ್ಯಪಾನ ನಿಷೇಧ (೪) ಖಾದಿಸೇವೆ (೫) ಗ್ರಾಮೋದ್ಯೋಗಗಳ ಅಭಿವೃದ್ಧಿ. (೬) ಹಳ್ಳಿಯ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸುವುದು (೭) ಸ್ವಾವಲಂಬಿ ಶಿಕ್ಷಣ (೮) ಪ್ರಾಯಸ್ಥರ ಶಿಕ್ಷಣ. (೯) ರಾಷ್ಟ್ರ ಭಾಷಾ ಪ್ರಚಾರ (೧೦) ಮಾತೃ ಭಾಷೆಯಲ್ಲಿ ಪ್ರೀತಿ ಹುಟ್ಟುವಂತೆ ಮಾಡುವುದು (೧೧) ಆರ್ಥಿಕ ಸಮಾನತೆಗಾಗಿ ಹೆಣಗಾಡುವುದು

3. ಪ್ರತಿಯೊಬ್ಬ ಸತ್ಯಾಗ್ರಹಿಯು ಒಂದೊಂದು ದೈನಿಕವನ್ನು ಇಟ್ಟುಕೊಂಡು ಪ್ರತಿ ನಿತ್ಯ ನಡೆಸುವ ಕಾರ್ಯಕ್ರಮವನ್ನು ಅದರಲ್ಲಿ ಬರೆದು ಪಕ್ಷಕ್ಕೆ ಒಂದು ಬಾರಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಅದನ್ನು ತೋರಿಸಬೇಕು ... ಕ್ರಮ ವಹಿಸಿ ... ಮಾತ್ರ ಸತ್ಯಾಗ್ರಹವನ್ನು ಹೂಡಲು ಅನುಮತಿಯು ದೊರೆಯುವುದು.

ಹೊಸ ನಿಬಂಧನೆಗಳು ಅಗತ್ಯವೇಕೆ?

4. ಭರದಿಂದ ಮುಂದೆ ಸಾಗಲಿರುವ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಈ ರೀತಿಯ ನಿಬಂಧನೆಗಳು ಅತ್ಯಗತ್ಯವೆಂದು ಕಂಡುಬಂದಿದೆ. ಕ್ಲಪ್ತ ಸಮಯಕ್ಕೆ ಸರಿಯಾಗಿ, ಸತ್ಯಾಗ್ರಹವನ್ನು ಮಾಡಲಿಲ್ಲವೆಂದು, ಸತ್ಯಾಗ್ರಹಿಗಳ ವಿಷಯ ದೂರುಗಳು ಆಫೀಸಿಗೆ ಪದೇ ಪದೇ ಬರುತ್ತವೆ. ಇನ್ನು ಮುಂದೆ ಅಂತಹ ದೂರುಗಳು ಬರಲು ಆಸ್ಪದವಿಲ್ಲ. ಈ ಮೊದಲು ಪಟ್ಟಿಯಲ್ಲಿ ಹೆಸರುಕೊಟ್ಟ ಸತ್ಯಾಗ್ರಹಿಗಳಿಗೆ ಹೊಸನಿಬಂಧನೆಗಳನ್ನು ಅನುಮೋದಿಸಲು ಮನಸಿಲ್ಲದಿದ್ದರೆ, ಅಂತಹರು ತಮ್ಮ ಹೆಸರುಗಳನ್ನು ಪಟ್ಟಿಯಿಂದ ತೆಗೆಯುವರೆ ಅರ್ಜಿ ಮಾಡಿಕೊಳ್ಳಬಹುದು. ಹೀಗೆ ಮಾಡಿದರೆ ನಾಚಿಕೆಗೇಡು ಎಂದು ಅವರು ತಿಳಿಯಬಾರದು. ಬೇರೆ ರೀತಿಯಲ್ಲಿ ಕಾಂಗ್ರೆಸ್ ಸೇವೆಯನ್ನು ಸಲ್ಲಿಸಿ ಕಾಂಗ್ರೆಸ್ ಸದಸ್ಯರಾಗಿರಬಹುದು.

(೫) ಸತ್ಯಾಗ್ರಹಿಗಳಾಗಿ ಚುನಾಯಿಸಲ್ಪಟ್ಟವರು, ಇತರ ಸ್ಥಳೀಯ ಚುನಾವಣೆಗಳಿಗೆ ನಿಲ್ಲಬಾರದು. ಇಷ್ಟರ ವರೆಗೆ ಅಂತಹ ಚುನಾವಣೆಗಳಿಗೆ ತಮ್ಮ ಹೆಸರುಗಳನ್ನು ಕೊಟ್ಟವರು ಅದನ್ನು ಹಿಂತೆಗೆಯಬೇಕು. ಏಕಕಾಲದಲ್ಲಿ ಎರಡು ಕಡೆಯಲ್ಲಿ ಚುನಾಯಿಸಲ್ಪಟ್ಟು ಕೆಲಸಮಾಡುವುದು ಸರ್ವಥಾ ಕೂಡದು.

6. ಲೋಕಲ್ ಬೋರ್ಡಿನ ಮೆಂಬರನಾಗಿದ್ದು, ಒಮ್ಮೆ ಜೈಲುವಾಸವನ್ನು ಅನುಭವಿಸಿ ಬಿಡಲ್ಪಟ್ಟವನು, ಇನ್ನು ಮುಂದಿನ ಲೋಕಲ್ ಬೋರ್ಡ್ ಸಭೆಗೆ ಹಾಜರಾಗಬಾರದು. ಅವನು ಹಾಗೆ ಮಾಡಿದ್ದೇ ಆದರೆ, ತಿಳಿದು ಬಂದರೆ, ಕೂಡಲೇ ಅವನ ಹೆಸರನ್ನು ಸತ್ಯಾಗ್ರಹಿ ಪಟ್ಟಿಯಿಂದ ತೆಗೆದು ಹಾಕಲಾಗುವುದು.

7. ಕೈದಿಗೆ ಒಳಗಾಗದ, ಪ್ರಚಾರ ಕಾರ್ಯವನ್ನು ನಡೆಸುತ್ತಿರುವ ಇತರ ಸತ್ಯಾಗ್ರಹಿಗಳೂ ಲೋಕಲ್ ಬೋರ್ಡ್ ಸಭೆಗಳಿಗೆ ಹೋಗಬಾರದು.

8. ಮಳೆಗಾಲದಲ್ಲಿ ಸತ್ಯಾಗ್ರಹಿಗಳು ತಮ್ಮ ಊರನ್ನು ಬಿಟ್ಟು ಹೊರಗಿರುವ ಇತರ ಹಳ್ಳಿಗಳಲ್ಲಿ ಇಲ್ಲವೇ ಒಂದೇ ಹಳ್ಳಿಯಲ್ಲಿ ನೆಲಸಿಕೊಂಡು, ಸತ್ಯಾಗ್ರಹದೊಂದಿಗೆ ಇತರ ರಚನಾತ್ಮಕ ಕಾರ್ಯಗಳನ್ನು ಮಾಡುವುದರಲ್ಲಿ ಅಡ್ಡಿ ಇರುವುದಿಲ್ಲ.

9. ಇದುವರೆಗೆ ಸೆರೆಮನೆಯ ಹೊರಗಿದ್ದು, ಪ್ರಚಾರ ಕಾರ್ಯವನ್ನು ಮಾಡುತ್ತ, ದಿಲ್ಲಿ ಕಡೆ ಪ್ರಯಾಣ ಬೆಳೆಸುತ್ತಿರುವ ಎಲ್ಲಾ ಸತ್ಯಾಗ್ರಹಿಗಳು, ಎರಡು ವಾರಕ್ಕೊಮ್ಮೆ ತಾವು ಮಾಡಿದ ಕಾರ್ಯಗಳ ವರದಿಯನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕಳುಹಿಸಿಕೊಡಬೇಕು. ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ತಿಂಗಳಿಗೊಮ್ಮೆ ಅವರ ವರದಿಯ ಸಾರಾಂಶವನ್ನು ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ಕಳುಹಿಸುವ ಏರ್ಪಾಡನ್ನು ಮಾಡುವುದು.

10. ... ನೋಡುವಾಗ ನಾವು ನಡಿಯುವ ರೀತಿಯು ... ಸತ್ಯಾಗ್ರಹಿಗಳು ಹೆಚ್ಚಿನ ಗಮನವನ್ನು ಕೊಡುತ್ತಿರುವುದು ... ಅದೇ ... ಎಂದು ದೂರುಗಳು ಬಂದರೆ, ವ್ಯಕ್ತಿಗೆ ಮಾತ್ರವಲ್ಲ ಇದೇ ಸತ್ಯಾಗ್ರಹಕ್ಕೆ ಕಳಂಕ ಬರುವುದೆಂದು ಸತ್ಯಾಗ್ರಹಿಗಳು ... ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ನಲವತ್ತು ವರ್ಷಗಳ ಪ್ರಖ್ಯಾತಿ

ಲೋಧ್ರ — ಅರ್ಕ — ಅಮೃತ

ಗರ್ಭಾಶಯ ರೋಗ ನಿವಾರಿಣಿ
ಸ್ತ್ರೀಯರಿಗುಂಟಾಗುವ ಋತುಶೂಲೆ, ಮುಟ್ಟಾಗದಿರುವಿಕೆ, ಅಕಾಲ ಬಿಳಿಸೆರಗು ಋತುಸ್ರಾವ ಹೆಚ್ಚಾಗಿ ಅಥವಾ ಕಡಿಮೆಯಾಗಿ ಹೋಗುವಿಕೆ, ಕುಸುಮರೋಗ, ಸಂತಾನ ಹೀನತೆ, ರಕ್ತಹೀನತೆ, ಮಲಬದ್ಧ, ಸೂತಿಕಾ ... ಮೊದಲಾದ ಸ್ತ್ರೀಯರ ವ್ಯಾಧಿಗಳನ್ನು ಗುಣಪಡಿಸುತ್ತದೆ

ಸರ್ವ ಜ್ವರನಿವಾರಿಣಿ
... ಮಲೇರಿಯಾ ಜ್ವರ, ಪಿತ್ತಜ್ವರ, ... ಸನ್ನಿಪಾತ ಜ್ವರ ಮತ್ತು ಇತರ ... ಗುಣಪಡಿಸುತ್ತದೆ.

ರಕ್ತಶುದ್ಧಿ ದ್ರಾವಕ
... ಗರ್ಮಿ, ... ಹುಣ್ಣು, ... ವೃಣಗಳು, ಸಂಧಿವಾತ, ... ಕೊಡುತ್ತದೆ ...

ಕೇಸರಿ ಕುಟೀರಂ, ಲಿಮಿಟೆಡ್.
ರಾಯಪೇಟೆ :: ಮದರಾಸು

ಎಲ್ಲಾ ಔಷಧದ ಅಂಗಡಿಗಳಲ್ಲಿಯೂ ಸಿಕ್ಕುತ್ತೆ.

HALFTONE & LINE
BLOCK MAKING
UNDERTAKEN
Sharada Press,
MANGALORE

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸೂಯೇಜಿಗೆ
ಹಿಟ್ಲರನು ಧಾಳಿಮಾಡುವನೆ?
ಭೂಮಧ್ಯಸಾಗರದಲ್ಲಿ ಬ್ರಿಟಿಷರ ನೌಕಾಬಲ ಕುಂದಲಾರದು

ಜರ್ಮನರು ಸೂಯೇಜಿನ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸುವ ಕನಸು ಕಾಣುತ್ತಿರುವುದು ನಿಜವಾದರೂ, ಈ ಕನಸಿಗೂ ವಾಸ್ತವಿಕತೆಗೂ ಉತ್ತರ ದಕ್ಷಿಣ ಧ್ರುವಗಳ ಮಹದಂತರವು ಇರುತ್ತದೆ. ಬಾಲ್ಕನಿನಲ್ಲಿ ಜರ್ಮನರು ಸಂಪೂರ್ಣ ವಿಜಯಗಳಾಗಿ ನಾಜಿಗಳು ಟರ್ಕಿಯ ಮೇಲೆ ತಮ್ಮ ಅಧಿಕಾರವನ್ನು ಮಾಡಿಕೊಂಡುದಾದರೂ ಭೂಮಧ್ಯ ಸಾಗರದಲ್ಲಿ ಬ್ರಿಟಿಷರ ನೌಕಾ ಬಲವನ್ನು ಮುರಿದ ಹೊರತು ಅವರು ಸುಯೇಜನ್ನು ತಮ್ಮ ಸ್ವಾಧೀನ ಮಾಡಿಕೊಳ್ಳುವುದು ಸಾಧ್ಯವಲ್ಲ ಎಂದು ಡೇವಿಡ್ ವ್ಯಾಟ್ ಎಂಬವರು ಒಂದು ಲೇಖನದಲ್ಲಿ ಬರೆಯುತ್ತಾರೆ.

ಸುಯೇಜು ಬ್ರಿಟಿಷರ ಜೀವನಾಡಿಗಳಲ್ಲಿ ಒಂದಾಗಿದೆ. ಅದರ ಮೇಲೆ ಬಹಳ ದಿನಗಳಿಂದ ಹಿಟ್ಲರ್ ಮುಸಲೋನಿಯರ ಕಣ್ಣಿದೆ. ಮುಸಲೋನಿಯ ಮುಖಭಂಗವಾಗಿರುವುದರಿಂದ, ಅವನಿನ್ನು ಸುಯೇಜನ್ನು ಆಕ್ರಮಿಸಲಿಕ್ಕೆ ಬರಲಾರನು. ಆದರೆ ಹಿಟ್ಲರನ ಮಾತು ಬೇರೆ. ನೆಪೋಲಿಯನನಂತೆ ಅವನೂ ಸುಯೇಜಿನ ಕಡೆಗೆ ದಂಡಯಾತ್ರೆ ಮಾಡಬಹುದು. ಆದರೆ ಭೂಮಧ್ಯ ಸಾಗರದಲ್ಲಿ ಬ್ರಿಟಿಷ ನೌಕಾ ಪಡೆಯ ಪ್ರಾಬಲ್ಯವಿರುವಷ್ಟು ಕಾಲ, ಲಿಬಿಯದ ಮಾರ್ಗದಿಂದ ಅವನು ದಂಡಯಾತ್ರೆಗೆ ಹೊರಡನು. ಈಗ ತನ್ನ ಉದ್ದೇಶ ಸಾಧನೆಗೆ ಅವನಿಗೆ ಟರ್ಕಿ, ಸಿರಿಯಗಳ ಮೂಲಕ ಒಂದೇ ದಾರಿ ಉಳಿದಿದೆ. ಅದು ಅಸಾಧ್ಯ ದಾರಿ ಎಂದು ಹೇಳುವವರು ಇದ್ದಾರೆ.

ಪೂರ್ವ ಸಿದ್ಧತೆಬೇಕು.

ಹಿಟ್ಲರನು ಟರ್ಕಿ ಸಿರಿಯಗಳಮೂಲಕ ಹೊರಡಬೇಕಾದರೆ, ಅದಕ್ಕೆ ಬಹಳ ಸಿದ್ಧತೆ ಮಾಡಬೇಕಾಗಬಹುದು. ಮಾತ್ರವಲ್ಲ ಅವನು ಕಾರ್ಯಸಾಧನೆಯ ಮೊದಲು ಬ್ರಿಟಿಷರ ನೌಕಾ ಬಲವನ್ನಷ್ಟೇ ಅಲ್ಲ, ವಿಮಾನ ಬಲವನ್ನು ಕೂಡ ಮುರಿಯಬೇಕಾಗಿರುವುದು. ಈ ಬಲಗಳನ್ನು ಮುರಿದುದಾದರೂ ಕೂಡ ಅವನು ತನ್ನ ಈ ದಾರಿಯಲ್ಲಿ ಇನ್ನೂ ಅನೇಕ ವಿಘ್ನ ವಿಡ್ಡೂರಗಳಿಗೆ ಎದೆ ಕೊಡಬೇಕಾಗಿದೆ. ಮೊದಲನೆಯದಾಗಿ ಹಿಟ್ಲರನು ಈ ದಾರಿಯ ಮೇಲಿರುವ ಚಟಾಲ್ಜದ ಕೋಟೆ ಕೊತ್ತಳಗಳ ಸಾಲನ್ನು ಮುರಿಯಬೇಕು. ಇವು ಅಭೇದ್ಯವಾಗಿವೆ, ಮತ್ತು ಇವನ್ನು ಭೇದಿಸಲಿಕ್ಕೆ ನೌಕಾ ಬಲ ಬೇಕೇಬೇಕು. ಅದು ಹಿಟ್ಲರನ ಹತ್ತಿರ ಇಲ್ಲ. ಆ ಮೇಲೆ ದಾರ್ಡೆನೆಲ್ಲಿಸ್ ಮತ್ತು ಬೋಸ್ಫರಸಿನ ದುರ್ಗಗಳಿವೆ. ಇಲ್ಲಿ ಬ್ರಿಟಿಷರ ಅತ್ಯಾಧುನಿಕ ಸಂರಕ್ಷಣೋಪಾಯಗಳಿವೆ. ಆ ಮೇಲೆ ಹಿಟ್ಲರನು ಅನಟೋಲಿಯಕ್ಕೆ ಬರಬೇಕು. ಸಮುದ್ರದ ಮೇಲೆ ಅಧಿಕಾರ ಮಾಡಿಕೊಂಡಲ್ಲದೆ, ಅನಟೋಲಿಯದಲ್ಲಿ ಕಾಲೂರುವುದು ಹಿಟ್ಲರನಿಗೆ ಸಾಧ್ಯವಲ್ಲ. ಮತ್ತೆ ಈ ಅನಟೋಲಿಯ ಹಾದಿಯು ನೂರಾರು ಪರ್ವತ, ಕಾಡು ಗುಡ್ಡಗಳ ದುರ್ಗಮ ದಾರಿಯಾಗಿರುವುದು. ಇಲ್ಲಿಯ ಜನರು ಕೂಡ ಕಲಹಪ್ರಿಯರಾಗಿರುವುದರಿಂದ ಹಿಟ್ಲರನು ಈ ದಾರಿಯಿಂದ ಹೋಗಲಿಕ್ಕೆ ಬಹಳ ತ್ರಾಸ ಪಡಬೇಕು. ಟೌರಸ ಮತ್ತು ಅಮಾನಸ ಪರ್ವತಗಳನ್ನು ಹತ್ತಿಹೋಗಲಿಕ್ಕೆ ಭಗೀರಥ ಪ್ರಯತ್ನಗಳೇ ಆಗಬೇಕಾಗಿರುವುವು.

ಸಿರಿಯ ಸಮಾಧಿ ಸ್ಥಳ

ಸಿರಿಯದಲ್ಲಿಯಂತೂ ಹಿಟ್ಲರನ ಸೇನೆಗಳ ಸಮಾಧಿಯಾಗುವುದು ಖಂಡಿತ. ಸಿರಿಯದ ಹೆಚ್ಚಿನ ಭಾಗವೆಲ್ಲ ಮರುಭೂಮಿ ಆಗಿದೆ. ಮತ್ತೆ ಭೂಮಧ್ಯ ಸಾಗರದ ಇದರ ಕರಾವಳಿ ಕೂಡ ಗುಡ್ಡ ಬೆಟ್ಟಗಳಿಂದ ಕೂಡಿದ ಕಾಡುಭೂಮಿ ಆಗಿದೆ. ಈಗ ಸಿರಿಯದ ಪರಿಸ್ಥಿತಿಯು ಬ್ರಿಟಿಷರಿಗೆ ಅಷ್ಟು ಅನುಕೂಲವಾಗಿಲ್ಲದೆ ಇರಬಹುದು. ಸಿರಿಯದ ಸರಕಾರವು ಹೇಗಿದ್ದರೂ ಅಲ್ಲಿಯ ಅರಬ ನಿವಾಸಿಗಳು ಮಾತ್ರ ಬ್ರಿಟಿಷರ ಸಹಾಯಕರಾಗಿರುವರು. ನಾಜಿ ಆಕ್ರಮಣವಾದಾಗ ಈ ಜನರು ಹಿಟ್ಲರನ ವಿರುದ್ಧ ಬಂಡಾಯವೇಳುವರು. ಅಗ ಸ್ವಾತಂತ್ರ್ಯ ಪ್ರಿಯರಾದ ಇವರು ಹಿಟ್ಲರನ ಯಾತ್ರೆಯ ವೇಗವನ್ನು ತಡೆಯುವುದು ಸುಲಭ. ಅನೇಕ ಇತಿಹಾಸ ಪ್ರಸಿದ್ಧ ಆಕ್ರಮಣಕಾರಿಗಳ ಸಮಾಧಿಯು ಸಿರಿಯದಲ್ಲೇ ಆಯಿತು. ಕ್ರೈಮೂರ, ನೆಪೋಲಿಯನ ಮೊದಲಾದವರ ತೇಜೋಭಂಗ ಇಲ್ಲೇ ಆಯಿತು. ಹಿಟ್ಲರನು ಇದಕ್ಕೆ ಅಪವಾದವಾಗಬಹುದೆ? ಮತ್ತು ಈಗ ಮುಸಲ್ಮಾನ ರಾಷ್ಟ್ರಗಳು ಹಿಟ್ಲರನ ರಾಜನೀತಿಯೊಡನೆ ಸಹಾನುಭೂತಿ ಇಟ್ಟಿರುವುದಿಲ್ಲ. ಹಿಟ್ಲರನು ಸಿರಿಯವನ್ನು ಪ್ರವೇಶಿಸಿದಾಗ, ಅದರ ಸುತ್ತಮುತ್ತಲಿನ ಮುಸಲ್ಮಾನ ರಾಷ್ಟ್ರಗಳು ಅವನನ್ನು ವಿರೋಧಿಸುವುವು.

ಪೆಲೆಸ್ತೀನಿನ ತಡೆ

ಸಿರಿಯದ ಅನಂತರ ಪೆಲೆಸ್ತೀನ ಮತ್ತು ಸುಯೇಜಿನ ಮರುಭೂಮಿಗಳೂ ಪೀತಭೂಮಿಗಳೂ, ಇಕ್ಕಟ್ಟಾದ ಕಣಿವೆಗಳೂ, ಕಿರು ತಗ್ಗುಗಳ ದಾರಿಗಳೂ ಇವೆ. ಪೆಲೆಸ್ತೀನ ಹವಾಗುಣವಂತೂ ದೀರ್ಘಕಾಲದ ದಂಡಯಾತ್ರೆಗೆ ಅತ್ಯಂತ ಪ್ರತಿಕೂಲವಾಗಿರುತ್ತದೆ. ಪೆಲೆಸ್ತೀನಿನ ದಂಡಯಾತ್ರೆಯು ಕರಾವಳಿಯಲ್ಲಿ ಆಗಬೇಕು. ಇಲ್ಲಿಯೂ ನಾಜಿಗಳು ಬ್ರಿಟಿಷರ ಪ್ರಬಲ ನೌಕಾ ಬಲವನ್ನು ಎದುರಿಸಬೇಕಾಗುವುದು. ಆದುದರಿಂದಲೇ ನಾಜಿಗಳ ಕನಸಿಗೂ ವಾಸ್ತವಿಕತೆಗೂ ಉತ್ತರದಕ್ಷಿಣ ಧ್ರುವಗಳ ಮಹದಂತರವಿದೆ. ಜಡ ಆಕ್ರಮಣದ ಕುರಿತು ಹಿಟ್ಲರನು ರೋಮಾಂಚನಗೊಳಿಸುವ ಪ್ರಚಾರ ಕಾರ್ಯ ಮಾಡಬಹುದು! ಮತೆ ವರಿ ... ನಾವದ ಕುರಿತು ಪ್ರಪಂಚವನ್ನು ಹೆ... ಸುಯೇಜಿನ ಬೆದರಿಸಬಹುದು. ಆದರೆ ವಾಸ್ತ... ಕತೆಯನ್ನು ತಿಳಿದವರು ಹಿಟ್ಲರನ ಈ ಬೆ... ರಿಕೆಗೆ ಬೆಪ್ಪು ಹಾಕಲಾರರು.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ.
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರಿನ ಏಜೆಂಟ್ ಷಾ ಕಂಪನಿ, ಹಂಪನಕಟ್ಟಾ, ಮಂಗಳೂರು

THE
Canara Banking Corporation Limited
(Incorporated in British India)
ESTD: 1906.

HEAD OFFICE: **UDIPI**, *South Kanara.*

SEASON DEPOSITS

ARE now accepted at all our Offices at the following rates of interest:

2 & 3 months	...	3% p. a.
4 & 5 ,,	...	3½% p. a.

These deposits will not be allowed to run beyond September 1941.

ಈ ವಾರದಲ್ಲಿ

ನಿಮ್ಮ ಗ್ರಹಗತಿ ಹೇಗಿದೆ?

27-6-41ರಿಂದ 3-7-41ರ ವರೆಗೆ

★

ಲೇಖಕ:— ಕೆ. ನಾರಾಯಣ ನಂಬಿಯಾರ್, ಜ್ಯೋತಿಷಿ, ಕರ್ನಾಟಕ ಗ್ರಂಥಾಲಯ ಭವಂತಿಕೇರಿ

ಮೇಷ

ನಿಮಗೆ ಈ ವಾರದಲ್ಲಿ ಅಧಿಕ ಧನವ್ಯಯ, ಭಯ, ಮನೋದುಃಖ, ವಿಚಾರ ಕಾರ್ಯಭಂಗ, ರಾಜಶತ್ರು ಭಯ ಸ್ವಲ್ಪಸ್ವಲ್ಪವಾಗಿ ದೇಹಾರೋಗ್ಯ ಹಾನಿಗಳಿವೆ. ಈ ರಾಶಿಯವರಿಗೆ ದ್ವಿತೀಯದಲ್ಲಿ ಗುರುವು ತೃತೀಯದಲ್ಲಿ ಸೂರ್ಯನೂ ಇರುವ ಕಾರಣ ವಾರಾಂತ್ಯದಲ್ಲಿ ಮನೋಲ್ಲಾಸ, ಧನಲಾಭ, ಕಾರ್ಯ ಜಯಾದಿಗುಣ ಫಲವೂ ಉಂಟಾಗುತ್ತದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರದಲ್ಲಿ ಹೆಚ್ಚಿನ ದೋಷವಿಲ್ಲ, ವ್ಯಾಪಾರಸ್ಥರಿಗೆ ಮಧ್ಯಮ.

ವೃಷಭ

ಈ ರಾಶಿಯವರಿಗೆ ಈಗ ಜನ್ಮ ಶನಿಯೂ ಜನ್ಮದಲ್ಲಿ ಗುರುವೂ ಇರುವುದರಿಂದ ನಾನಾ ತರದಲ್ಲಿದ್ದ ಸುಖಪ್ರವಾಸ, ಉದ್ಯೋಗಾದಿಗಳಲ್ಲಿ ಮನಶ್ಚಾಂಚಲ್ಯ, ಇಷ್ಟ ಮಿತ್ರ ಜನ ವಿರೋಧ ಕಲಹ, ಧನನಷ್ಟ, ಶಿರೋನೇತ್ರ ತಾಪ, ಮತ್ತು ಅಂಗಾರಕನೂ ನಿಮ್ಮ ೧೧ನೇ ಭಾವಕ್ಕೆ ಬಂದಕಾರಣ ಅಲ್ಪಸ್ವಲ್ಪವಾದ ಸುಖಲಾಭ ಕಾರ್ಯ ಜಯ, ಉದ್ಯೋಗಾದಿ ಸುಖ, ಕಳತ್ರ ಪುತ್ರಾದಿ ಸುಖಫಲವುಂಟಾದೀತು.

ಮಿಥುನ

ನಿಮ್ಮ ರಾಶಿಯಲ್ಲಿ ಸೂರ್ಯನೂ ದ್ವಾದಶದಲ್ಲಿ ಗುರು ಮತ್ತು ಶನಿಯೂ ಇರುವ ಕಾರಣ ಈ ವಾರದಲ್ಲಿ ಆಯಾಸ, ಗುರು ಜನಾದಿಕ್ಲೇಶ, ಅಪವಾದ, ದೇವತಾ ಕೆಲಸಾದಿಗಳಲ್ಲಿ ವಿಘ್ನ, ನೀವು ಮಾಡುವ ಉದ್ಯೋಗಾದಿಗಳಲ್ಲಿ ಉದಾಸೀನತೆ, ವ್ಯಂಗಳ ಕಾಟ. ನೀವು ಈ ವಾರದಲ್ಲಿ ಚನ್ನಾಗಿ ದೈವಭಕ್ತರಾಗಿರಬೇಕು. ದೇವತಾ ಭಕ್ತಿಯಿದ್ದಲ್ಲಿ ಶುಭಫಲವಾದೀತು.

ಕರ್ಕಾಟಕ

ನಿಮಗೆ ೧೧ನೇ ಭಾವದಲ್ಲಿ ಶನಿ ಮತ್ತು ಗುರು ಇರುವುದರಿಂದ ಉದ್ಯೋಗಸುಖ, ಲಾಭ, ಮನಸ್ಸಂತೋಷ, ಗುರುಜನತೃಪ್ತಿ, ಮುಂತಾದ ಗುಣ ಫಲವಾದಾಗ್ಯೂ ಈಗ ಪ್ರಕೃತಕ್ಕೆ ನವಮದಲ್ಲಿ ಅಂಗಾರಕನು ದ್ವಾದಶದಲ್ಲಿ ಸೂರ್ಯನೂ ಇರುವುದರಿಂದ ಧನಹಾನಿ, ಕಾರ್ಯಾಪಜಯ, ಮನೋದುಃಖ, ರಾಜಕಾರ್ಯಾದಿಗಳಲ್ಲಿ ತೊಂದರೆ, ಉದ್ಯೋಗಾದಿಗಳಲ್ಲಿ ಹಾನಿ ಇತ್ಯಾದಿ ಫಲವಾಗುವುದು.

ಸಿಂಹ

ಈ ರಾಶಿಯವರಿಗೆ ಈ ವಾರದಲ್ಲಿ ಉತ್ತಮ ಜನಸ್ನೇಹ, ರಾಜಜನಪ್ರೀತಿ, ಅಧಿಕ ಧನಲಾಭ, ಮನಸ್ಸಂತೋಷ ಮತ್ತು ಈ ರಾಶಿಯವರಿಗೆ ಅಷ್ಟಮಕ್ಕೆ ಮಂಗಳನಿರುವುದರಿಂದ ಸದ್ಯ ನಿಮಗೆ ದೇಹಾಲಸ್ಯ, ಆಯುಧಾಗ್ನಿ ಭಯ, ಮಾನಭಂಗ, ಗುರು ಜನಾರಿಷ್ಟ ಗೃಹಾಲಸ್ಯಾದಿ ಫಲ.

ಕನ್ಯಾ

ನಿಮಗೆ ಈ ವಾರದಲ್ಲಿ ಉದ್ಯೋಗಾದಿಗಳಲ್ಲಿ ಅಧಿಕ ಸುಖ, ಧನಪ್ರಾಪ್ತಿ, ರಾಜಕಾರ್ಯಾದಿಗಳಲ್ಲಿ ಜಯ, ಉತ್ತಮ ಜನರ ಸ್ನೇಹ; ಮೃಷ್ಟಾನ್ನ ಭೋಜನ, ಕಳತ್ರಪೀಡೆ, ಕುಕ್ಷ್ಯಕ್ಷಿರೋಗ, ಪ್ರವಾಸಾದಿಗಳಲ್ಲಿ ತೊಂದರೆ, ಅಧಿಕ ಧನವ್ಯಯಾದಿ ಫಲ.

ತುಲಾ

ಈ ರಾಶಿಯವರಿಗೆ ಅಷ್ಟಮದಲ್ಲಿ ಶನಿ ಮತ್ತು ಗುರು ಇರುವುದರಿಂದ ಧನನಷ್ಟ, ದೇಹಾಲಸ್ಯ, ಕಾರ್ಯಾಪಜಯ, ದುಷ್ಟನ ವಿಷಯದಲ್ಲಿ ನಾನಾ ವಿಧ ತೊಂದರೆ, ವಿಚಾರಕಾರ್ಯಭಂಗ, ಮನೋದುಃಖ, ಕುಟುಂಬ ಜನಾರಿಷ್ಟ. ಪ್ರಕೃತ ೬ನೇ ಸ್ಥಾನದಲ್ಲಿ ಮಂಗಳನಿರುವುದರಿಂದ ಅಲ್ಪಸ್ವಲ್ಪ ಗುಣ ಫಲವುಂಟಾದೀತು.

ವೃಶ್ಚಿಕ

ನಿಮಗೆ ಪಂಚಮದಲ್ಲಿ ಮಂಗಳನು ಅಷ್ಟಮದಲ್ಲಿ ಸೂರ್ಯನೂ ಇರುವುದರಿಂದ ಈ ವಾರದಲ್ಲಿ ಮನಕ್ಲೇಶ, ಪುತ್ರಪೀಡೆ, ರಾಜಕೀಯ ವಿಷಯ ತೊಂದರೆ, ವೈರಿಪೀಡೆ, ಧನಹಾನಿ, ಉದ್ಯೋಗಾದಿಗಳ ಚಿಂತೆ. ಮತ್ತು ಸಪ್ತಮಕ್ಕೆ ಗುರು ಇರುವುದರಿಂದ ದೇವತಾನುಗ್ರಹದಿಂದ ಉದ್ಯೋಗಸುಖ, ಕಾರ್ಯ ಜಯಾದಿಗುಣ ಫಲವಾದೀತು.

ಧನು

ಈ ರಾಶಿಯವರಿಗೆ ಈ ವಾರದಲ್ಲಿ ದುರ್ಜನರ ಸಂಗದಿಂದ ತೊಂದರೆ, ಬಂಧುಮಿತ್ರರಲ್ಲಿ ಕಲಹ, ಗೃಹಾಲಸ್ಯ, ಪ್ರವಾಸ, ದೇಹಪೀಡೆ, ಗುರು ಜನಾದಿಕ್ಲೇಶ, ಕಾರ್ಯಾಪಜಯ, ಮನೋಚಿಂತಾ ಮತ್ತು ನಿಮಗೆ ಷಷ್ಠಾ ಭಾವದಲ್ಲಿ ಶನಿಯಿರುವುದರಿಂದ ದೇಹ ಸುಖ, ವಿಚಾರಕಾರ್ಯ ಸಾಧ್ಯ, ಉದ್ಯೋಗಾದಿ ಸುಖಪ್ರಾಪ್ತಿ, ಶತ್ರು ಜಯಾದಿ ಫಲ.

ಮಕರ

ನಿಮಗೆ ಈ ವಾರದಲ್ಲಿ ತೃತೀಯದಲ್ಲಿ ಮಂಗಳನೂ ೬ನೇ ಸ್ಥಾನದಲ್ಲಿ ಸೂರ್ಯನೂ ಇರುವ ಕಾರಣ ಕಾರ್ಯಾದಿಗಳಲ್ಲಿ ಜಯ, ಅಧಿಕ ಲಾಭ, ಉದ್ಯೋಗಾದಿಗಳಲ್ಲಿ ಸುಖ, ಸಜ್ಜನರಿಂದ ಬಹುಮಾನ ಪ್ರಾಪ್ತಿ, ರಾಜ ಜನಾದಿ ಸಂತೋಷಪ್ರಾಪ್ತಿ, ದೇಹಸುಖ, ಮನೋದುಃಖ ನಿವೃತ್ತಿ. ಪಂಚಮದಲ್ಲಿ ಶನಿಯಿರುವ ಕಾರಣ ಮನಸ್ಸಿನಲ್ಲಿ ಅಪಜಯ ಕಂಡಾಗ್ಯೂ ಕೊನೆಗೆ ಜಯವುಂಟಾದೀತು.

ಕುಂಭ

ಈ ರಾಶಿಯವರಿಗೆ ೪ನೇ ಸ್ಥಾನದಲ್ಲಿ ಮಂಗಳನು ಪಂಚಮ ಭಾವದಲ್ಲಿ ಸೂರ್ಯನೂ ಇರುವುದರಿಂದ ಈ ವಾರದಲ್ಲಿ ಚೋರ ಭಯ, ರಾಜಕಾರ್ಯಾದಿ ಚಿಂತಾ, ಅಗ್ನಿಭಯ, ಶತ್ರುಪೀಡೆ, ದೇಹಕ್ಷೀಣತೆ, ಮನೋಚಿಂತಾ, ಇಷ್ಟ ಜನರಲ್ಲಿ ಕಲಹ ಮತ್ತು ನಿಮ್ಮ ಪಂಚಮಸ್ಥಾನದಲ್ಲಿ ಶುಭಗ್ರಹವು ಇರುವುದರಿಂದ ಮನಸ್ಸಮಾಧಾನವು ಉಂಟಾದೀತು.

ಮೀನ

ನಿಮಗೆ ಈ ವಾರದಲ್ಲಿ ಜನ್ಮದಲ್ಲಿ ಮಂಗಳನೂ ಚತುರ್ಥದಲ್ಲಿ ಸೂರ್ಯನೂ ಇರುವ ಕಾರಣ ದೇಹಾಲಸ್ಯ, ಉದ್ಯೋಗ ಕಾರ್ಯಾದಿಗಳಲ್ಲಿ ಚಿಂತೆ, ಮಿತ್ರಜನ ಕ್ಲೇಶ, ಗುರು ಜನಾದಿವಿಯೋಗ ಮತ್ತು ನಿಮ್ಮ ತೃತೀಯ ಭಾವದಲ್ಲಿ ಶನಿ, ಮನಸ್ಥಾನವಾದ ಪಂಚಮ ಭಾವದಲ್ಲಿ ಶುಕ್ರನೂ ಬಂದದ್ದರಿಂದ ಕಾರ್ಯ ಜಯ ಮನಸ್ಸಂತೋಷ, ಧನಲಾಭ ಭಾರ್ಯಾಪುತ್ರಾದಿ ಸುಖಫಲವುಂಟಾದೀತು.

ಎಳೆ ಮಕ್ಕಳ ಕೋಮಲ ಚರ್ಮಕ್ಕೆ ಉತ್ತಮವಾದ ಪೌಡರು

ನಿಮ್ಮ ಮಗುವಿನ ಸ್ವಚರ್ಮವು ನಿಷ್ಕಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೀಕರಾ ಸೂರರನ್ನು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟಿದ್ದು. ಮಗುವಿನ ಕೋಮಲವಾದ ಸ್ವಚರ್ಮವನ್ನು ಬಹಳ ಸ್ವಚ್ಛವಾಗಿಯೂ ಸುಖವಾಗಿಯೂ ಇರಿಸುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (Cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ತಂಪಾಗಿಯೂ ಇಡುವುದು. ಇಂದು ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು
CUTICURA TALCUM

ನೋಟೀಸು

ದಿ ಅತ್ತೂರ್ ಎಂಡ್ ಜವಾಹರ್ ಬೇಂಕ್ ಲಿಮಿಟೆಡ್,
ಮಂಗಳೂರು.

ವಹಿವಾಟಿನ ಕ್ಷೇತ್ರವನ್ನು ಮುಂದರಿಸಲು ನಮ್ಮ ಬೇಂಕಿನ ಶಾಖೆಯೊಂದನ್ನು ತಾ. 29—6—'41ಕ್ಕೆ ಕಂಕನಾಡಿ ಮಾರ್ಕೆಟಿನ ಎದುರಿನ ಬಿಲ್ಡಿಂಗಿನ ಮಾಳಿಗೆಯಲ್ಲಿ ತೆರೆಯಲಾಗುವುದೆಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಸದ್ರಿ ಆಫೀಸಿನಲ್ಲಿ ಎಲ್ಲಾ ತರದ ಬೇಂಕ್ ವಹಿವಾಟುಗಳು ನಡೆಸಲ್ಪಡುವವು. ಚಿನ್ನಾಭರಣಗಳ ಅಡವಿನ ಮೇಲೆ ಅತೀ ಕಮ್ಮಿ ದರದಲ್ಲಿ ಸಾಲಕೊಡಲಾಗುವುದು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

(Sd.) A. VAIKUNTA PRABHU,
ಮೆನೆಜಿಂಗ್ ಡೈರೆಕ್ಟರ್.

ವಿಚಿತ್ರ ಪ್ರಪಂಚ

ಶಯನಾಗಾರದಲ್ಲಿ ಸಿನೇಮಾ ನಟಿ

ವಿವಾಹ ವಿಚ್ಛೇದವಾಗಬೇಕೆಂದು ಹೆಲೆನ್ ಟಫಾನಿ ಎಂಬ ಅಮೆರಿಕದ ಮಹಿಳೆಯು ಜಾರ್ಜ ಟಫಾನಿ ಎಂಬ ಶ್ರೀಮಂತನ ಮೇಲೆ ಹೂಡಿದ ದಾವೆಯಿಂದ ತಿಳಿದು ಬಂದ ಸಂಗತಿಗಳಿವು. ಮೂರು ವರ್ಷಗಳ ಹಿಂದೆ ಜಾರ್ಜ ಟಫಾನಿ ಬಾಲ್ಟಿಮೋರಿಗೆ ಹೋಗಿದ್ದ. ಅಲ್ಲಿ ಹೆಲೆನ ಅವನನ್ನು ನೋಡಿ ಮೋಹಿತಳಾದಳು. ಪುರೋಹಿತರಿಲ್ಲದೆ ಅವರ ಮದುವೆಯೂ ಆಯಿತು. ಆದರೆ ಜಾರ್ಜನೊಂದಿಗೆ ಯಾವಾಗಲೂ ಒಬ್ಬ ಸಿನೇಮಾನಟಿ ಇರುತ್ತಾಳೆ. ಅವಳು ಯಾವಾಸಮಯಕ್ಕೂ ಜಾರ್ಜನನ್ನು ಬಿಟ್ಟು ಇರುವದಿಲ್ಲ. ರಾತ್ರಿ ಹೆಲೆನಳು ಜಾರ್ಜನೊಂದಿಗೆ ಮಲಗಿದ್ದಾಗಲೂ ಆ ಸಿನೇಮಾನಟಿ ಅವನ ಖಟ್ಟಿಗೆ ಇರುತ್ತಾಳೆ. ಮತ್ತೆ ಅವಳ ಕಣ್ಣು ತಪ್ಪಿಸಿ ಜಾರ್ಜ ಮತ್ತು ಹೆಲೆನ ಬಹಳ ಪ್ರಯಾಸದಿಂದ ಏಕಾಂತ ಪಡೆದರೂ, ಆ ಸಿನೇಮಾ ನಟಿ ಹೇಗೋ ಮಾಡಿ ಎಲ್ಲಿಂದಲೋ ಬಂದು ಅವರ ಮುಂದೆ ನಿಲ್ಲುತ್ತಾಳೆ. ಆದ್ದರಿಂದ ತನಗೆ ದಾಂಪತ್ಯ ಸುಖವೇ ದೊರೆಯಲಿಲ್ಲ ಎಂಬುದು ಹೆಲೆನಳ ವಾದ. ಜಾರ್ಜನು ಹೇಳುವದು ಮತ್ತು ಸ್ವಾರಸ್ಯವಾಗಿದೆ. ತಾನು ಅವಳನ್ನು ಬಾಲ್ಟಿಮೋರದ ನಾಯಿಗಳ ಪ್ರದರ್ಶನದಲ್ಲಿ ಕಂಡುದು ನಿಜ. ಆದರೆ ಅವಳಿಗೂ ತನಗೂ ಮದುವೆಯೇ ಆಗಿಲ್ಲ ಎಂಬುದು ಅವನ ಹೇಳಿಕೆ!

ನಾಯಿಮರಿಗಳಿಗೂ ರೇಡಿಯೋ

ಅಮೆರಿಕದಲ್ಲಿ ನಾಯಿಮರಿ—ಹಂದಿಮರಿಗಳಿಗೂ ಒಂದೊಂದು ರೇಡಿಯೋ …ಗಿ ಬಿಟ್ಟಿದೆ. ಪಾಲಕರು ಇವುಗಳ ಕುತ್ತಿಗೆಗಳ ಪಟ್ಟಿಗಳಿಗೆ ರೇಡಿಯೋ ಸೆಟ್ಟುಗಳನ್ನು ಕಟ್ಟುವರು. ಮತ್ತೆ ಪಾಲಕರು ಕೆಲವು ಮೈಲುಗಳ ದೂರದಲ್ಲಿದ್ದರೂ ಅವರು ಅವುಗಳೊಂದಿಗೆ ರೇಡಿಯೋ ಮೂಲಕ ಮಾತನಾಡುವರು. ಅವು ಪಾಲಕರ ಆಜ್ಞೆ ಅಪ್ಪಣೆಗಳನ್ನು ರೇಡಿಯೋಗಳಲ್ಲಿ ಕೇಳಿ ತಿಳಿದು, ಆ ಪ್ರಕಾರ ನಡೆಯುವವು. ಹೀಗೆ ನಾಯಿ ಹಂದಿ ಮರಿಗಳಿಗೆ ರೇಡಿಯೋ ಶಿಕ್ಷಣ ಕೊಡುವ ಶಾಲೆಗಳೂ ಅಮೇರಿಕದಲ್ಲಾಗಿವೆ.

ಸೌಂದರ್ಯದ ಹುಚ್ಚು?

ಸೌಂದರ್ಯದ ಹುಚ್ಚು ಎಲ್ಲ ದೇಶಗಳಲ್ಲಿ ಎಲ್ಲರಿಗೂ ಇದೆ. ಆದರೆ ಅದು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಪ್ರಕಾರವಾಗಿರುವುದು. ಮಧ್ಯ ಆಫ್ರಿಕದಲ್ಲಿ ವಾಸವಾಗಿರುವ ಒಂದು ಜಾತಿಯ ಮೂಲನಿವಾಸಿಗಳ ಹುಚ್ಚು ವಿಚಿತ್ರ ಪ್ರಕಾರದ್ದಾಗಿರುವುದು. ಅಲ್ಲಿಯ ಹೆಂಗಸರ ತುಟಿಗಳು ಎಷ್ಟು ಉದ್ದವೂ ಅಗಲವೂ ಆಗಿರುವವೋ, ಅಷ್ಟಕ್ಕೆ ಆ ಹೆಂಗಸರು ಹೆಚ್ಚು ಸೌಂದರ್ಯವತಿಯರೆಂದು ಅಲ್ಲಿಯ ಪುರುಷರು ಭಾವಿಸಿದ್ದಾರೆ. ಆದಕ್ಕೋಸ್ಕರ ಆ ಜಾತಿಯ ತರುಣನು ಬಾಲಿಕೆಯಾಗಿದ್ದಾಗಲೇ ಒಬ್ಬಳನ್ನು ತನ್ನ ಹೆಂಡತಿಯನ್ನಾಗಿ ಆರಿಸಿಕೊಂಡು, ಆ ಬಾಲ್ಯದಲ್ಲಿಯೇ ಆಕೆಯ ತುಟಿಗಳಲ್ಲಿ ಚೂರಿಯಿಂದ ತೂತು ಮಾಡುತ್ತಾನೆ. ಮತ್ತೆ ಅವುಗಳಲ್ಲಿ ಕ್ರಮಶಃ ದೊಡ್ಡ ದೊಡ್ಡ ಕಟ್ಟಿಗೆ ಚೂರುಗಳನ್ನು ಸಿಕ್ಕಿಸಿ ಆ ತೂತುಗಳು ಗ್ರಾಮೋಫೋನು ಪ್ಲೇಟುಗಳ ಆಕಾರಕ್ಕೆ ಬೆಳೆಯುವಂತೆ ಮಾಡುತ್ತಾನೆ. ಇಂಥ ತುಟಿಗಳಿರುವ ಹೆಂಗಸಿಗೆ ಗಟ್ಟಿಯಾದ ಆಹಾರವನ್ನು ತಿನ್ನಲಿಕ್ಕಾಗಲೀ, ಸರಿಯಾದ ಶಬ್ದಗಳನ್ನು ಉಚ್ಚರಿಸಲಿಕ್ಕಾಗಲೀ ಆಗದಿದ್ದರೂ ಅವಳ ಗಂಡನಿಗೆ ಒಂದು ಸಮಾಧಾನವುಂಟು. ಅದೇನೆಂದರೆ ರಾತ್ರಿ ಅವಳು ಅವನ ಖಟ್ಟಿಗೆ ಮಲಗಿದ್ದಾಗ ಆಕೆಯ ಬೆಳೆದ ತುಟಿ, ಯಾವಾಗಲೂ ಅವನ ಎದೆಯ ಮೇಲೆ ಜೋತಾಡಿ ಇರುತ್ತದೆ. ಆದ್ದರಿಂದ ಅವನ ಮೇಲೆ ಕೈಯಿಟ್ಟು ನಿದ್ರಿಸುವ ಅವನಿಗೆ ಅವಳು ಪರಪುರುಷನೊಂದಿಗೆ ರಮಿಸಲಿಕ್ಕೆ ಹೋಗುವ ಭಯವಿಲ್ಲ!

ವಿಜ್ಞಾನಯುಗ

ರಕ್ತಸ್ರಾವವನ್ನು ತಡೆಯಲಿಕ್ಕೆ

ರಕ್ತಸ್ರಾವವನ್ನು ತಡೆಯಲಿಕ್ಕೆ ವಿಜ್ಞಾನಿಗಳು ಹೊಸತಾದೊಂದು ಮೂಲಿಕೆಯನ್ನು ಹುಡುಕಿ ತೆಗೆದಿದ್ದಾರೆ. ಅದು ಯಾವ ಮೂಲಿಕೆ, ಎಂಥ ಗುಣ ಸ್ವಭಾವದ್ದು ಎಂಬುದನ್ನು ಅವರು ಗುಪ್ತವಾಗಿರಿಸಿರುವರು. ಆದರೆ ಈ ಮೂಲಿಕೆಯ ಪ್ರಯೋಗಮಾಡಿ, ಅದು ರಕ್ತಸ್ರಾವವನ್ನು ತಡೆಯಲಿಕ್ಕೆ ಅತ್ಯುಪಯುಕ್ತವಾಗಿರುವುದೆಂಬುದನ್ನು ಕಂಡುಕೊಂಡಿರುವರು. ಈ ಮೂಲಿಕೆಯನ್ನು ಹುಡಿಮಾಡಿ ಬಿಲ್ಲೆಗಳ ರೂಪದಲ್ಲಿ ಮಾರಾಟಕ್ಕೆ ಕಳುಹಿಸುವ ವಿಚಾರ ನಡೆದಿದೆ. ಈ ಔಷಧಿಯ ಕಾರಣದಿಂದ ಸಾವಿರಾರು ರೋಗಿಗಳು ಅಕಾಲ ಮೃತ್ಯುವಿನಿಂದ ಬದುಕಿಕೊಳ್ಳಬಹುದು. ಮತ್ತು ರಕ್ತಸ್ರಾವವನ್ನು ತಡೆಯಲಿಕ್ಕೆ ಶಸ್ತ್ರ ಚಿಕಿತ್ಸೆಯನ್ನು ಮಾಡುವ ಇನ್ನು ಆವಶ್ಯಕತೆಯೂ ಉಳಿಯಲಾರದು. ಯುದ್ಧ ಕಾಲದಲ್ಲಿ ಈ ಔಷಧಿಯು ಸಂಜೀವನವಾಗಿ ತೋರಿಬಂದೀತು.

ಅದ್ಭುತ ಶಸ್ತ್ರ ಚಿಕಿತ್ಸೆ

ಪ್ರಪಂಚವನ್ನೇ ರೋಮಾಂಚನಗೊಳಿಸುವ ಒಂದು ಅದ್ಭುತ ಶಸ್ತ್ರ ಚಿಕಿತ್ಸೆಯು ಸಂಯುಕ್ತ ಸಂಸ್ಥಾನಗಳ ಮಿಸ್ಸೂರಿ ಎಂಬಲ್ಲಿ ನಡೆದಿದೆ. ಒಬ್ಬ ಹದಿನಾಲ್ಕು ವರ್ಷ ಪ್ರಾಯದ ಹುಡುಗನಿಗೆ ನ್ಯೂಮೋನಿಯಾವಾಗಿರಲು ಅವನ ಶ್ವಾಸಕೋಶಗಳ ಕೆಲವು ಭಾಗಗಳನ್ನು ಕಡಿದು ತೆಗೆಯುವುದು ಅಗತ್ಯವೆಂದು ಕಂಡಿತು. ಚಿಕಿತ್ಸಕರು ಎರಡು ಬಾರಿ ಶಸ್ತ್ರ ಪ್ರಯೋಗ ಮಾಡಿ ಅವನ ಶ್ವಾಸಕೋಶಗಳ ನಾಲ್ಕು ದೊಡ್ಡ ತುಂಡುಗಳನ್ನು ಕತ್ತರಿಸಿ ತೆಗೆದರು. ಈಗ ಹುಡುಗನಲ್ಲಿ ಇತರರಲ್ಲಿರುವುದಕ್ಕಿಂತ ಕೇವಲ ಮೂರರಲ್ಲಿ ಒಂದು ಪಾಲಷ್ಟು ಕೋಶ ಭಾಗವು ಮಾತ್ರ ಇರುತ್ತದೆ. ಆದರೂ ಕೂಡ ಅವನು ಸ್ವಸ್ಥನಾಗಿ ತನ್ನ ಪ್ರಾಯದ ಇತರ ಮಕ್ಕಳ ಹಾಗೆ ಆಡುತ್ತ ಬರುತ್ತ ನಲಿಯುತ್ತ ಇದ್ದಾನೆ. ಮತ್ತು ಆಶ್ಚರ್ಯವೇನೆಂದರೆ ಅವನ ಶ್ವಾಸಕೋಶವು ಈಗ ಪುನಃ ಪೂರ್ವಾವಸ್ಥೆಗೆ ಬೆಳೆಯಲಾರಂಭವಾಗಿದೆ.

ವಿಷಮ ಜ್ವರ (Typhoid) ರಕ್ಷಣೋಪಾಯ!

ವಿಷಮಜ್ವರವು ಬಾರದ ಹಾಗೆ ವರುಷಂಪ್ರತಿ ಅದರ ಕ್ರಿಮಿಗಳಿಂದಲೇ ತಯಾರಿಸಿದ ಟಿ. ಎ. ಬಿ. ಇಂಜಕ್ಷನ್ ತೆಗೆದುಕೊಳ್ಳುವ ವಾಡಿಕೆಯುಂಟಷ್ಟೆ. ಹೀಗೆ ಮಾಡಿದ್ದರಿಂದ ಪ್ರಯೋಜನ ಉಂಟೆಂಬುದು ನಮಗೆ ಗೊತ್ತಿದ್ದರೂ ಕೆಲವೆಡೆಗಳಲ್ಲಿ ಅಂತವರಿಗೆನೇ ವಿಷಮಜ್ವರವು ತಗಲಿ ಮರಣಗಳುಂಟಾದ ಸಂಗತಿಯು ಬಹಳ ಆಶ್ಚರ್ಯ ಉಂಟುಮಾಡಿರುತ್ತದೆ. ಲಂಡನ್ ಡಿಸ್ಟರ್ ಇನ್ಸ್ಟಿಟ್ಯೂಟಿನ (London Dister Institute) ವೈದ್ಯ ವಿಜ್ಞಾನಿಗಳು ಇತ್ತಲಾಗೆ ಮಾಡಿದ ಸಂಶೋಧನೆಗಳಿಂದ ಇದರ ಕಾರಣಗಳನ್ನು ತಿಳಿಯಬಹುದಾಗಿದೆ. ಅವರ ಅಭಿಪ್ರಾಯದ ಮೇರೆಗೆ ಕಳೆದ ನಾಲ್ವತ್ತು ವರ್ಷಗಳಿಂದ ನಾವು ಉಪಯೋಗಿಸುವ ಇಂಜಕ್ಷನ್ ಮದ್ದು, ಕ್ರಿಮಿಗಳನ್ನು ಉಷ್ಣತೆಯಿಂದ ನಾಶಗೊಳಿಸಿದ್ದರಿಂದ ಅಂತಹ ಕ್ರಿಮಿಗಳು ನಮ್ಮ ದೇಹಕ್ಕೆ ಹೆಚ್ಚು ಶಕ್ತಿ ಬರುವ ಹಾಗೆ ಮಾಡುವುದಿಲ್ಲವೆಂತಲೂ, ಆ ಕ್ರಿಮಿಗಳನ್ನು Alcoholನಿಂದ ನಾಶಗೊಳಿಸಿದರೆ ಅವುಗಳ ಇಂಜಕ್ಷನ್ ಮಾತ್ರ ಸಂಪೂರ್ಣವಾಗಿ ಮನುಷ್ಯನನ್ನು ಬಲಗೊಳಿಸುವುದೆಂತಲೂ ಕಂಡುಹಿಡಿದಿರುತ್ತಾರೆ.

Dr. K. M. Shen…

BHUVANENDRA PRODUCTS LTD.,

Head Office and Factory: ATAPADI S. Kanara.

Depots: 1. Maharatha Galli, Hubli. 2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀ… ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, ದ. ಕನ್ನಡ.

ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ಮರ್ಚಂಟ್, ರಥಬೀದಿ.
ಡಾ। ಎಮ್. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ನವ ಚೈತನ್ಯಕ್ಕೆ

'ಒಂಪೊನಾ'

ದೇಹದ ರಕ್ತ, ಗ್ರಂಥಿ, ನರನಾಡಿಗಳನ್ನು ಬಲಪಡಿಸಿ ಶಕ್ತಿಯನ್ನೀವ ಯುವ ದಿವ್ಯೌಷಧಿ.

ಸ್ಥಳೀಯ ಸ್ಟಾಕಿಸ್ಟರು:–
ದಿ ಪೊಪ್ಯುಲರ ಸ್ಟೋರ್ಸ್,
ಮಂಗಳೂರು.

Stockists:–
Messrs. Dadha & Co., MADRAS.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Re. 5000 run regularly on systematic lines. Unique Banking facilitie to Businessmen and interested Public.

Apply for particulars–

K. R. GURU, *Managing Director*

THE BANK OF MANGALORE LIMITED.

HEAD OFFICE MANGALORE. ESTD. 1901.

Branches:—MOODABIDRI & PADUBIDRI.

NOTICE

On and from 1st January 1941 the following are the revised rates of interest on deposits.

FIXED DEPOSITS:

For 3 years or over	5½ per cent
„ 1 „	4½ per cent
„ 6 months	3½ per cent
„ 3 „	3 per cent

Interest payable Quarterly

SAVINGS BANK DEPOSITS:

On daily balances on balances over Rs. 5 in multiples of Rs. 5 @ 3%

All kinds of banking business transacted.

THE

Combined Booking Agency, Mangalore.

South Kanara Traveller's Guides

ARE

Available for sale in all our Booking Offices

Price **0–2–6** per Copy

Your next advertisement in the South Kanara Travellers Guide will pay many times its value.

Will be published in December 1941.

Please book your space early to avoid disappointment.

For Particulars Apply to:— **THE JOINT MANAGERS,**

The Combined Booking Agency, Mangalore.

ಬಿಡಿ ಸಂಚಿಕೆ ಬೆಲೆ ಒಂದಾಣೆ — ವಾರ್ಷಿಕ ಚಂದಾ ರೂ. 2-0-0 — ಅಂಚೆ ವೆಚ್ಚ ಸೇರಿ ರೂ. 2—13—0 — Regd. No. M. 2480

ಸ್ವದೇಶಾಭಿಮಾನಿ

[ಸಂಪುಟ 35] ತಾರೀಕು 27—6—1941 [ಸಂಚಿಕೆ 26]

WANTED CLERKS

Messrs. Kochikar Brothers, Ltd., Branch Secretaries, Bombay Life Assurance Co., Ltd., Udipi, S. Kanara, will entertain clerks as probationers for one year. Those who have passed Shorthand and Typing or Accountancy examinations will be preferred. Minimum qualification should be atleast their holding S. S. L. C. Eligibility Certificates. They should be prepared, after 6 months training in Udipi Office, to go to any of their Branches at Bombay, Madras, Calicnt, Trivandrum, Mangalore and Bangalore.

Applications should be in the handwriting of the applicant stating age, qualifications, marks obtained in last examination, 2 good references, past experience, if any, and whether prepared to give cash security and sent before the 30th June 1941 to their Udipi Office.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ, ಮುಂಕಾಡ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOT MADRAS CALCUTTA

ಇಂದು ವಿಟಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.